ಸಂಸ್ಕೃತಕೋಶಿಯಲ್ಲಿರುವ ಈ ಗ್ರಂಥವು ಕನ್ನಡ ವ್ಯಾಖ್ಯಾನ ಸಹಿತವಾಗಿ ಅಂಗಿ ಉಪಯುಕ್ತವಾಗಿರುವ ಶ್ರೀ ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಚಿಂತಾಮಣಿ ವೆಂಕಟ್ರಾಮಾಚಾರ್ಯರಿಂದ ಕರ್ನಾಟಕಭಾಷೆಯಲ್ಲಿ ಬರೆಯಲ್ಪಟ್ಟು ಬೆಂಗಳೂರು ಟಾರ್ ಪ್ರಿಸ್ ಸೊಸೈಟಿ ರಿಂದಪ್ರಕಟಿಸಿದ ಮುದ್ರಾಕ್ಷರಶಾಲೆಯಲ್ಲಿ ಛಾಪಿಸಿ ಪ್ರಕಟ ಮಾಡಲ್ಪಡುತಿದೆ.

ಇದು ರಾಯಲ್ ಸೈಜಿನ ೧೧೦ ಫಾರಂಗಳಿಗೆ ಕಡಿಮೆ ಇರಲಾರದು. ಪ್ರತಿ ಮಾಸಕ್ಕೆ ಪ್ರತಿಕೆಂಗಳಲ್ಲೂ ೧ ಫಾರಂಗಳಿಗೆ ಕಡಿಮೆಯಿಲ್ಲದೆ ಒಂದೊಂದು ಸಂಚಿಕೆಪ್ರಕಾರ ಸುಮಾರು ೧೨ ಕಂತುಗಳಲ್ಲಿ ಪೂರೈಸಲ್ಪಡುವದು.

ಚಂದಾ ವಿವರ. ರೂ. ಆ.

೧ ಮೊದಲನೆ ಸಾರಿ ಮುಂಗಡ ಕಳುಹಿಸುವವರಿಗೆ ಅಂಚೆಕೂಲಿ ಸಹಿತ ಒಟ್ಟಕ್ಕೆ ... ೪ ೦
೨. ಕಂತು ಕಂತಾಗಿ ಕೊಡುವವರಿಗೆ ಒಟ್ಟಕ್ಕೆ ೫ ೦
೩. ಪ್ರತಿ ಕಂತಿನಲ್ಲಿಯೂ ಚಂದಾ ಕಳುಹಿಸುವವರಿಗೆ ಪ್ರತ್ಯೇಕ ಸಂಚಿಕೆ ೧ಕ್ಕೆ ... ೦ ೪

ಗ್ರಂಥ ಪೂರೈಸುವವರೆಗೆ ಕಳುಹಿಸುವವರು ಈ ಹಣ ೧ಕ್ಕೆ ೧ ಆಣೆ ಹೆಚ್ಚಾಗಿ ಕೊಡಬೇಕಾಗುತ್ತದೆ.

ಹೀಳಿದ ದರಗಳಲ್ಲಿ ಅಂಚೆಹಾಸಲ್ ಸೇರಿದೆ

೧——ನೇ ನೆಂಬರಿನವರು ಒಪ್ಪಿಕೊಂಡಿರುವ ೮ ಆಣೆ (ಕ ಬ್ಬ ಪ್ರ) ಪ್ರಾಯಶ್ಚಿತ್ತ ವಿವರಣವೆಂಬ ಸಂಸ್ಕೃತ ವಾದ ಕಳೆದ ಪುಸ್ತಕ, ಮಹಿಮೂರು ದಸರಾ ವರ್ಣನಾ ಕಥಾ ಕನ್ನಡ ಪುಸ್ತಕ, ಬ್ರಹ್ಮಾಂಡಪುರಾಣ ಸಂಬಂಧಗೂಡು ಮಹಾತ್ಮ್ಯೆ ಸಂಸ್ಕೃತ ಕನ್ನಡ ಪುಸ್ತಕ, ಇವುಗಳಲ್ಲಿ ಯಾವದಾದರೂ ಒಂದನ್ನು ಬಹುಮಾನವಾಗಿ ಅಂಚೆಹಾಸಲ್ ೧ ಆಣೆಯಿಂದ ಸ್ಮರಣಾರ್ಥ ಕಳುಹಿಸಿ ತರಿಸಿಕೊಳ್ಳಬಹುದು

೩ನೇ ತರಗತಿಯವರು ೮ ಆಣೆ ಅಡ್ವಾನ್ಸನ್ನು ಕಳುಹಿಸಿಕೊಳ್ಳದಿ ಸಂಚಿಕೆ ೫ ಪಿಪರ್ ಮೆಂಟ್ ಮಾಹೀ ಚಂದಾ ಹಣ್ಣು ಕಳಾನಿಸಬೇಕು.

ಒಂದೇ ಪಿತಾಸಕ್ಕೆ ಗಿಂತಪ್ರತಿಗಳನ್ನು ತರಿಸಿಕೊಳ್ಳತಕ್ಕವರಿಗೆ ಒಂದು ಪ್ರತಿ ಹೆಚ್ಚಾಗಿ ಕೊಡಲಾಗುವದು. ಸ್ಟಾಂಪ್ ಕಳುಹಿಸುವವರು ರೂ॥ ೧ಕ್ಕೆ ೧ ಆಣೆ ಮೇರಿಗೆ ಹೆಚ್ಚಾಗಿ ಕಳುಹಿಸಬೇಕು. ಮ್ಯಾನೇಜರ್ ಮಿಸ್ಸರ್,
ಬೆಂಗಳೂರು ಟಾರ್ ಪ್ರಿಸ್ ಸೊಸೈಟಿ.

ನೋಟೀಸ್.

ಇದರಿಂದ ಸರ್ವರಿಗೂ ಶ್ರುತಪಡಿಸುವದೇನಂದರೆ, ಈಚೆಗೆ ಹೊಸದಾಗಿ ಕನ್ನಡ ಭಾಷೆಯಲ್ಲಿ ತಯಾರ್ಮಾಡಿ ಛಾಪಿಸಿ ಬಿಕರೀ ಮಾಡುತಲಿರುವ ಪಾಕಶಾಸ್ತ್ರ ಗ್ರಂಥವು ಪ್ರಾಯಶಃ ಯೆಲ್ಲವೂ ಖರ್ಚಾಗಿ ಹೋಗಿ, ಇನ್ನು ಕೆಲವು ಪ್ರತಿಗಳೇ ಇರುತವೆ. ಸದರೀ ಗ್ರಂಥದ ಅಪೇಕ್ಷೆಯುಳ್ಳವರು ಕೂಡಲೇ ಮೊಬಲಗು ಕಳುಹಿಸಿ ತರಿಸಿಕೊಳ್ಳಬೇಕು. ಆಲಸ್ಯಮಾಡಿದರೆ ತರುವಾಯ ಸಿಕ್ಕಲಾರದು.

ಪ್ರತಿ ೧ಕ್ಕೆ ಕ್ರಯ	...	ಆಣೆ ೧೦
ಟಪಾಲ್ ಹಾಸಲ್	...	„ ೧
ಇಂಪೀರಿಯಲ್ ಪೋಸ್ಟಾಫೀಸ್ ಮೂಲಕ ತರಿಸಿಕೊಳ್ಳತಕ್ಕವರು ರಿಜಿಸ್ಟರು ಚಾರ್ಜು		„ ೨

ಈ ಗ್ರಂಥ ಬೆಂಗಳೂರು ಕರ್ನಾಟಕಪ್ರೆಸ್ ಆಫೀಸಿನಲ್ಲೂ, ಬೆಂಗಳೂರು ಬುಕ್‌ಡಿಪೋ ಪ್ರೆಸ್ಸಿನಲ್ಲೂ ಮತ್ತು ಇದರಡಿ ರುಜು ಮಾಡಿರತಕ್ಕವರಲ್ಲೂ ದೊರೆಯುವದು. ಟಪ್ಪಾಲ್ ಚೀಟಿಗಳ್ನ ಕಳುಹಿಸತಕ್ಕವರು ರೂ॥ ೧ಕ್ಕೆ ೧ ಆಣೆ ಮೇರೆ ಡಿಸ್ಕೌಂಟ ಸೇರಿಸಿ ಕಳುಹಿಸಬೇಕು.

ಸಿ. ಸುಬ್ಬರಾವ್, ಮನೇ ನಂ॥೨೦.
ಬೆಂಗಳೂರು ಕಲಾಸಿಪಾಳ್ಯ

ಪ್ರಕಟನೆ.

ಬೆಂಗಳೂರು ಚಿಕ್ಕಪೇಟೆ ಬಳೇಪೇಟೆ ಬೀದಿ ೩೩ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಪಗಡೆ ನಂಜುಂಡಯ್ಯನವರು ಇದರಿಂದ ಸರ್ವರಿಗೂ ತಿಳಿಸುವದೇನಂದರೆ—

ಇದರ ಕೆಳಗೆ ಸೂಚಿಸಲ್ಪಡುವ ಔಷಧಿಗಳು ಜನೋಪಕಾರಾರ್ಥವಾಗಿ ತಯಾರಾಗಿರುವವು. ಅವುಗಳ ಉಪಯೋಗವು ಅವಶ್ಯಕವುಳ್ಳವರು ಅದಕ್ಕೆ ಬೇಕಾದ ಕ್ರಯವನ್ನು ಟಪಾಲ್ ಹಾಸಲ್ ಸೇರಿಸಿ ಕಳುಹಿಸಿ ತರಿಸಿಕೊಳ್ಳಬಹುದು

೧ ಮಹಾ ಚಿಂತಾಮಣಿಲೇಹ್ಯ.

ಇದರ ಪ್ರಯೋಗ—ಪುರುಷರಿಗೆ ಬರತಕ್ಕ ಮೇಹ ರೋಗಗಳು, ಅಂಗಚಾಂಚಲ್ಯ, ಶುಕ್ಲನಷ್ಟ, ಸ್ವಪ್ನದೋಷ, ತಲೆಕಾಯಿಲೆ ಮುಂತಾದವುಗಳಲ್ಲಿ, ಅಸ್ತಿಸ್ರಾವ, ರಕ್ತಪಿತ್ತ, ಉಷ್ಣವ್ಯಾಧಿ, ಇವುಗಳಿಗೆಲ್ಲ ಸಾಧಕವಾದದ್ದು. ೨೦ ಅಥವಾ ೪೦ ದಿವಸಗಳ ಕಾಲ, ದಿನಪ್ರತಿ ಬೆಳಿಗ್ಗೆ ಹಸುವಿನ ಹಾಲಿನಲ್ಲಿ ಒಂದೊಂದು ಗುಳಿಗೆ ಸೇವಿಸಬೇಕು. ಪಥ್ಯ: ಹಾಲು, ತುಪ್ಪ, ಸಕ್ಕರೆ, ಗೋಧಿ ಸೇರಿಸಿಕೊಳ್ಳಬಹುದು. ಕೆಂಪು ಮೆಣಸಿನಕಾಯಿ, ಹುಣಿಸೇಹಣ್ಣು, ಹೀರೇಕಾಯಿ, ಮುಳ್ಳಂಗಿ, ಹಾಗಲಕಾಯಿ ಸೊಪ್ಪು, ಇವುಗಳು ಸ್ವಲ್ಪ ಸೇರಿಸಿಕೊಳ್ಳಬಹುದು. ಅರ್ಧಕಾಸು ಸೇರಿಸಿಕೊಳ್ಳಬಹುದು. ಮಾಂಸ ಮತ್ಸ್ಯಾದಿಗಳನ್ನು ವರ್ಜಿಸಬೇಕು. ಹುಳಿ ಖಾರ ಹೆಚ್ಚಾಗಿ ಸೇವಿಸಬಾರದು.

ಇದರ ಕ್ರಯ—೪೦ ರೂ॥ ತೂಕದ ಸೇರು ೧ಕ್ಕೆ ರೂ॥ ೧—೧೦—೦ ಟಪಾಲ್ ಹಾಸಲ್ ಆ ೪.

೨ ಸಿದ್ಧಸ್ನುಹಿ

ಇದರ ಪ್ರಯೋಗ—ಅಂಗೈ ಅಂಗಾಲುಗಳು ಮೊದಲಾದವುಗಳಲ್ಲಿ ಉಂಟಾಗುವ ಕಪ್ಪುಮಚ್ಚೆಗಳು, ಬಿಳಿ ತೊನ್ನು, ಕುಷ್ಠ ಮುಂತಾದ ಚರ್ಮ ಸಂಬಂಧವಾದ ರೋಗಗಳು, ಅಸಾಧ್ಯವಾದ ಧಾತು ಮೇಹ ವ್ಯಾಧಿಯಿಂದ ದೇಹದ ಒಳಗೂ ಹೊರಗೂ ಉಂಟಾಗುವ ಗಿಡ್ಡೆ ಕುರು, ಇವೆಲ್ಲಕ್ಕೂ ಪರಿಹಾರವಾಗುವುದು.

ಪ್ರಯೋಗ—ರೋಗಕ್ಕನುಸರಿಸಿ ೨ ಅಥವಾ ೩ ಗುಳಿಗೆಗಳಂತೆ ೨೦ ಅಥವಾ ೪೦ ದಿವಸಗಳು ಸೇವಿಸಬೇಕು. ಪಥ್ಯ: ಹುಳಿ, ಉಪ್ಪು ಖಾರಗಳನ್ನು ಬಹಳ ಅಲ್ಪವಾಗಿ ಸೇರಿಸಿಕೊಳ್ಳಬೇಕು. ಹಾಲು, ತುಪ್ಪ, ಸಕ್ಕರೆ ಹೆಚ್ಚು ಸೇರಿಸಿಕೊಳ್ಳಬಹುದು. ಬದನೆಕಾಯಿ, ಮೆಂತ್ಯೇಸೊಪ್ಪು, ಮುಳ್ಳಂಗಿ, ಹೀರೇಕಾಯಿ, ಹರಿವೇಸೊಪ್ಪು, ಹೊನಗನ್ನೆ ಸೊಪ್ಪು ಇವು ಸ್ವಲ್ಪ ಸೇರಿಸಿಕೊಳ್ಳಬಹುದು. ಬೆಲ್ಲ ಬೇಳೆ ಬಹುದು. ಹಾಗಲಕಾಯಿ ವರ್ಜ್ಯ-ಪಾಕಿಸ್ತಾನಕ್ಕೆ. ಇದರ ಕ್ರಯ ಸೇರು ೧ಕ್ಕೆ ೧—೧೦—೦ ಟಪಾಲ್ ಹಾಸಲ್ ಅಲಾಹಿದ

ಮುಖವಿಕೇಶನ ಚೂರ್ಣ.

ಈ ಚೂರ್ಣದಲ್ಲಿ ಒಂದುಕೆಕ್ಕೆ ೧ ತುಳಕಿಯ ಸೊಪ್ಪಿನ ರಸದಲ್ಲಿ ಸೇರಿಸಿ, ಬಲ್ಲಾಳಿಕಿತ್ತಿಯಿಂದ ದುಕ್ಕ್ಯ ಬೀಗ ನೀರಲ್ಲಿ ಹಾಕಿ ಕದಸಿ ಕುಡಿದರೆ ಒಂದು ಗಂಟೆಯಲ್ಲಿ ಗುಣವಾಗುವದು. ಮತ್ತು ಹೊಟ್ಟೆಯುಬ್ಬರ ಮಾಡಿದ್ದಕ್ಕೆ ಈ ಚೂರ್ಣ ಉಪಯೋಗವಾಗುತಿರುವದು. ಅದಕ್ಕನುಸಾರಿಯಾಗಿ ಹೊಟ್ಟೆಗೆ ಊಟಮಾಡಬಹುದು. ನೀರಡಿಕೆಗೆ ಇಂದು ಹೋಗುವದು ಗಾಳಿ ಊಟದ ಹಿಂತೆ ಹೊಗೆ ಕಮ್ಮಿ ಸಾಯಬಹುದು. ಇದರಿಂದ ವಾತ, ಪಿತ್ತ, ಜ್ವರ, ಕಫ, ಹೊಟ್ಟೆನೋವು ಮೊದಲಾದವು ಪರಿಹಾರವಾಗುವದು. ಇದರ ಕ್ರಯ—ತೊಲೆ ೧ಕ್ಕೆ ೧ ಆಣೆ ೬ ಪೈ. ಟಪಾಲ್ ಹಾಸಲ್ ಅಲಾಹಿದಾ.

ಇವುಗಳಲ್ಲಿ, ಸಾಧಾರಣವಾಗಿ ಇನ್ನಾರಾದರೂ ಮಾಡಿದ್ದು ಪ್ರಯೋಗಿಸಿದ್ದು, ಅದನ್ನು ರುಚಿಕರ ಶೀಘ್ರಕೊಳ್ಳಬೇಕಾದ ಅಂಶ ಮೇಲ್ಪಟ್ಟು ಹೊಂದಿರುವ ಹಣಕ್ಕೆ ಬೆಲೆಕೊಂಡರೆ ಅವಕ್ಕೆ ಔಷಧಗಳನ್ನು ರವಾನ್ಮಾಡಿ ಕಳುಹಿಸುವದಕ್ಕೆ ತಗಲುವ ಖರ್ಚನ್ನು ಸಹ ಅವರೇ ಕಳುಹಿಸಿಕೊಳ್ಳಬಹುದು.

NOTICE.

THE CANTONMENT PHOTOGRAPHIC STUDIO
12, *SOUTH PARADE,*
BANGALORE.

ಬೆಂಗಳೂರು ಕಂಟೋನ್ಮೆಂಟ ಸೌತ್‌ಪೆರೇಡ್ ರೋಡ್ ೧೨ನೇ ನಂಬರ್ ಕಟ್ಟಡದಲ್ಲಿ ಮಿ. ಎಂ. ಅಪ್ಪಾಸಾಮಿ ಶೆಟ್ಟಿಯವರಿಂದ ಹೊಸದಾಗಿ ಯೊಂದು ಫೋಟೊಗ್ರಾಫಿಕ್ ಸ್ಟುಡಿಯೋ ಎಂಬ ಛಾಯಾ ಯಂತ್ರವು ಸ್ಥಾಪಿಸಲ್ಪಟ್ಟಿರುತಿದೆ.

ಇದರಲ್ಲಿ ಇಂಗ್ಲಿಷಜನಗಳ ಮತ್ತು ನೇಟಿವ್ ಜನಗಳ ಛಾಯಚಿತ್ರಗಳು ಬೇರೇ ಬೇರೇ ಸ್ಥಳಗಳಲ್ಲಿ ಈ ಕೆಲಸದಲ್ಲಿ ಬಹುಕಾಲ ಅನುಭವಶಾಲಿಗಳಾದ ಮಿ. ಡಬ್ಳ್ಯೂ. ಎ. ಮ್ಯಾಕೆ ಯೆಂಬವರಿಂದಲೂ ಮಿ. ವೇದನಾಯಕಂ ಎಂಬವರಿಂದಲೂ ತೆಗೆಯಲ್ಪಡುವವು.

ಈಬಗ್ಗೆ ತೆಗೆದುಕೊಳ್ಳಲ್ಪಡುವ ಚಾರ್ಜ್ ಅಂದರೆ, ರುಸುಂ ಬಹಳ ಸುಲಭವಾಗಿರುವದು. ಅಪೇಕ್ಷೆಯುಳ್ಳವರೆಲ್ಲರೂ ದಾರಾಳವಾಗಿ ಸದರೀ ಸ್ಥಳಕ್ಕೆ ಬಂದು ತಮ್ಮ ತಮ್ಮ ಛಾಯಚಿತ್ರಗಳನ್ನು ತೆಗೆಸಿಕೊಳ್ಳಬಹುದು.

ಇದಕ್ಕೆ ಕಾಲ—ಬೆಳಗ್ಗೆ ೮ ಘಂಟೆಯುಮೊದಲು ಸಾಯಂಕಾಲ ೫ ಘಂಟೆಯವರಿವಿಗೆ.

ಪ್ರೊಪ್ರೈಟರ್,
ಎಂ. ಅಪ್ಪಾಸಾಮಿಶೆಟ್ಟಿ,
ಫೋಟೊಗ್ರಾಫರ್.

NOTICE.

VAIDYASARASANGRAHA

☞ *Price including Postage, Rs.* 5–6–0

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗನ್ನೂ ಸಹ ಕಳುಹಿಸಿ ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಪುಸ್ತಕ ಕೂಡಲೇ ರವಾನಿಸಲ್ಪಡುವದು. ಮೊಬಲಗು ಇಲ್ಲದ ಅರ್ಜಿಗಳಿಗೆ ಉತ್ತರ ಕೊಡಲ್ಪಡಲಾರದು.

ಗ್ರಂಥ ದೊರೆಯುವ ಸ್ಥಳ ಕರ್ನಾಟಕ ಪ್ರಕಾಶಿಕಾ ಆಫೀಸು

ಇದರ ಕ್ರಯ	ರೂ॥ ೫—೦—೦	
ಪ್ಯಾಕಿಂಗ್ ಮತ್ತು ಅಂಚೆಹಾಸಲ್	೦—೬—೦	

ಟಿ. ಬಿ. ವೆಂಕಟರಾವ್, ಅಸಿಸ್ಟೆಂಟ್, ಬೆಂಗಳೂರು

ಪ್ರಕಟನೆ.

ಕರ್ನಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಬೇಕಾದ ಕಾಗದ ಕೆಲಸಗಳೂ ಮುದ್ರಿಸಿ ಜಾಗ್ರತೆಯಾಗಿಯೂ ಸುಲಭವಾಗಿಯೂ ಮಾಡಿಕೊಡಲ್ಪಡುತ್ತೆ. ಯಾವಕೆಲಸವಾದರೂ ಮಾಡಿಸಬೇಕಾದವರು ಸದರೀ ಕಾರ್ಖಾನೆ ಸೂಪರಿಂಟೆಂಡೆಂಟರಿಗೆ ಬರೆಯಬೇಕು. ಅವರು ಬಳೇಪೇಟೆ ಬೀದಿ ನಲ್ಲಿ ೫೫ನೇ ನಂಬರ್ ಮನೆಯಲ್ಲಿ ಇರುತ್ತಾರೆ.

ಪ್ರಕಟನೆ

ಇದರ ಕೆಳಗೆ ಬರೆಯಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತವೆ,—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ.	...	೧—೪—೦
ಮುಹೂರ್ತದರ್ಪಣ.	...	೦—೧೨—೦
ಛಪ್ಪನ್ನ (ಷಟ್ಪಂಚಾಶಿಕ್)	...	೦—೩—೦
ಬ್ರಾಹ್ಮಣರಿಕೆಯೆಂಬ ಮಹಾಕಾವ್ಯ.		೦—೫—೦
ಬಾಲರಾಮಾಯಣ	...	೦—೪—೦
ಇವತ್ಸ್ರೀ	.. ...	೦—೧೪—೦
ಶಿವಾನಂದಲಹರಿ.	...	೦—೬—೦
ಬಾಲಗ್ರಹ.	...	೦—೨—೦
ವೈದ್ಯಸಾರಸಂಗ್ರಹ		೫—೦—೦

ಕನ್ನಡಗ್ರಂಥಗಳು.

ಹನುಮದ್ವಿಲಾಸ.	...	೦—೬—೦
ಕಕಿಲೇಯಾವತಿನಾಟಕ.	...	೦—೪—೦
ಸುಶ್ರೀಗಾರಕಲಾಪ	...	೦—೩—೬
ಸುಧಾಮಚರಿತ್ರೆ.	... ...	೦—೨—೬
ಬಭ್ರುವಾಹನನನಾಟಕ.	...	೦—೪—೦
ಅಶಿಸುಸ್ಮರನಾಟಕ.	...	೦—೨—೬
ಯಜ್ಞಗಾನನರಚರಿತ್ರೆ	...	೦—೬—೦
ಶ್ರೀಕೃಷ್ಣವಂಶಾವಳಿಕತೆ.	...	೦—೨—೬
ಬಂಟ ಶೌನಕಬಾಲರೀತಿ.	...	೦—೬—೦
ಕಾವೇರೀಯ ಮಹಾತ್ಮ.	...	೦—೩—೦
ಪಾಂಚಾರ.	.. ...	೦—೨—೦
ಹರಿಶ್ಚಂದ್ರಕಾರ.	...	೦—೦—೯
ಇಂಗ್ಲೀಷುಕನ್ನಡನಿಘಂಟು ಪುಸ್ತಕ ದರ್ಜಾ		೧—೦—೦
ಜ್ಞಾನಸಿಂಧು,	... ...	೨—೦—೦
ಶ್ರೀರಾಂಕೆವಿಲಾಸ.	...	೦—೧೨—೦
ಕೌತಪ್ತಕ	...	೩—೪—೬
ಕೃಷ್ಣರಾಜೇಂದ್ರವಿಜಯ.	...	೩—೪—೬
ಆರೇಬಿಯನ್ ನೈಟ್ಸ್ ಎಂಬಕಥೆ.		
೧ನೇ ಸಂಚಿಕೆ.	...	೦—೮—೦
ಬಿಡೋ ೨ನೇ ಸಂಚಿಕೆ.		೧—೮—೦
ಶಬರಶಂಕರವಿಲಾಸ.	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ಭಗವದ್ಗೀತೆ	... ...	೦—೩—೦
ವಿಷ್ಣುಸಹಸ್ರನಾಮ.	...	೦—೫—೦
ಸೂರ್ಯಸಹಸ್ರನಾಮ.	...	೦—೨—೨
ಕೃಷ್ಣಕರ್ಣಾಮೃತ.	...	೦—೨—೬
ಬಾಲರಾಮಾಯಣ	...	೦—೦—೬
ಶ್ರೀಕಾಂಡಪ್ರಹರ.	...	೦—೩—೬
೧ ಕಾಂಡ ಅಮರ.	...	೦—೧—೦

ಮೇಲೆ ಹೇಳಿದ ದರಗಳಲ್ಲಿ ಅಂಚೆ ಹಾಸಲ್ ಸೇರಿರುವದಿಲ್ಲವು ರೂ ೧—ಮೇಲ್‌ಪಟ್ಟು ಕಳುಹಿಸಲ್ಪಟ್ಟಿರುವ ಪುಸ್ತಕದ ಕ್ರಯವಾದರೂ ಬೇಕಾದ್ದು ಅದನ್ನು ಮೊಬಲಗು ಕಳುಹಿಸತಕ್ಕವರು ಬೇರಾಗಿ ಹಾಸಲ್ ಸಹ ಸೇರಿಸಿ ಕಳುಹಿಸಬೇಕು. ಇಲ್ಲದಿದ್ದರೆ ನಾವು ಕಳುಹಿಸುವ ಬುಕ್ ಹಾಸಲ್ ಚಿಟ್ಟಿಗೆ ಬೇಕಾದ ಹಣ ಕೊಡಬೇಕಾಗುವದು.

"ಕರ್ನಾಟಕ ಪ್ರಕಾಶಿಕಾ"

ಪತ್ರಿಕೆಯ ಚಂದಾ ವಿವರ.

ಇಂಗ್ಲೀಷು ಮತ್ತು ಕನ್ನಡಸಹಿತ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ೧೨—೦—೦

ಇಂಗ್ಲೀಷು ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ೬—೦—೦

ಕನ್ನಡಮಾತ್ರ ತೆಗೆದುಕೊಳ್ಳತಕ್ಕವರಿಗೆ ಟಪಾಲ್ ಹೊರತು ವರುಷಕ್ಕೆ. ೬—೦—೦

ತಿಂಗಳು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
ಹಿಂದಿನ ಸಂಚಿಕೆ	೧ಕ್ಕೆ	೦—೫—೦

ಷರಾ.—ಚಂದಾದಾರರು ಇಂಗ್ಲೀಷು ಕಾಗದಗಳನ್ನಾಗಲಿ, ಕನ್ನಡಕಾಗದಗಳನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಮೊದಲನೇದಫಾಕ್ಕೆ	೧ಕ್ಕೆ	೦—೨—೦
ಎರಡನೇದಫಾದಲ್ಲಿ	೧ಕ್ಕೆ	೦—೧—೦

NOTICE TO SUBSCRIBERS

ಇದರ ಕೆಳಗೆ ಸೂಚಿಸಿರುವ ಅಂಶಗಳಿಗೆ ನಮ್ಮ ಚಂದಾದಾರರು ಲಕ್ಷ್ಯ ನಿರೀಕ್ಷಿಸಬೇಕೆಂದು ಕೋರುತ್ತೇವೆ ಅದೇನಂದರೆ:—

೧. ಕರ್ನಾಟಕ ಪ್ರಕಾಶಿಕೆಯ ಚಂದಾದಾರರಿಗೆ ಯಾವುದೇ ಕೆಲಸವಿದ್ದಲ್ಲಿ ಮೊಬಲಗು ರವಾನಿಸತಕ್ಕವರು ಮನಿಆರ್ಡರ್ ಮೂಲಕ ಕಳುಹಿಸಿದಲ್ಲಿ ಅಂಥಾ ಮನಿಆರ್ಡರ್ ಫಾರಮ್ ಕೂಪನ್ನಿನಲ್ಲಿ ಯಾರಿಗೆ ಮೊಬಲಗು ಬಾಕೀ ಬಾರದು ವರಿಗೆ ಅದರಲ್ಲಿ ನಮೂದಾಗುತ್ತದೊ ಅದನ್ನು ಸೀಲ್ ಕಾಗದದಲ್ಲಿ ನಮಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು. ಹಾಗೆ ಮಾಡದಿದ್ದರೆ ಹೋಗುವದರಿಂದ ಹೆಸರುಗಳು ಕಲ್ಪಿತ ಆಗಿ ಮನಿಆರ್ಡರ್ ಯಾವುದೆಯವರಿಂದ ತಿಳಿಯ್ಪಡಿಸಲ್ಪಡುತಿತೆ.

೨. ನೋಟುಗಳ ರವಾನಿಸತಕ್ಕವರು ಅರ್ಧನೋಟನ್ನು ರವಾನಿಸಿಬಿಟ್ಟು ಉಳಿದ ಅರ್ಧನೋಟಿನ ವಿಷಯದಲ್ಲಿ ತಿಂಗಳಕ್ಕೆ ಉತ್ತರವನ್ನು ಕಾಯುತ್ತಿರುತ್ತಾರೆ. ಹಾಗೆ ಮಾಡದೆ ಹಿಂದೆ ಕಳುಹಿಸುವ ಅರ್ಧನೋಟು ಸೇರಿದಕ್ಕೆ ನಮ್ಮ ಕಾಗದವನ್ನು ನೋಡಿದ ಕೂಡಲೆ ಬಾಕೀ ಅರ್ಧನೋಟನ್ನು ರವಾನಿಸತಕ್ಕದ್ದು.

೩ ಸ್ಟೇಂಪ್‌ಗಳು ಕಳುಹಿಸತಕ್ಕವರು, ರೂ॥ ೧ಕ್ಕೆ ೧ಆಣೆಮೇರಿ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧ ಆಣೆಯಂಥ ಪ್ರಾಸ್ಟಿನ್ಟ ರೆಯಾಯ್ತಿ ಸ್ಟೇಂಪ್‌ಗಳನ್ನು ಕಳುಹಿಸಕೂಡದು.

೪. ಪತ್ರಿಕೆಯ ಸಾಲ್ ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಅಖೈರಿಗೆ ಪೂರೈಸಿ ಬರುವದರಿಂದ ಈ ಮಧ್ಯೆ ಯಾವತಿಂಗಳಲ್ಲಿ ಪತ್ರಿಕೆಗೆ ಚಂದಾದಾರರಾದಾಗ್ಯೂ ಆತಿಂಗಳ ಮೊದಲು ಡಿಸೆಂಬರ್ ಅಖೈರ್ ವರಿಗೆ ಅನುಸರಣ ಕ್ಕೆ ತಿಂಗಳೊಂದಕ್ಕೆ ೮ಆಣೆಮೇರೆ ಚಂದಾ ಕಳುಹಿಸಿ ಕೊಡಬೇಕೇ ಹೊರತು ವಾರ್ಷಿಕವಾಗಿ ಕಳುಹಿಸಲು ಅವಶ್ಯಕವಿಲ್ಲವು.

BANGALORE:—Printed and published for the Proprietor, at the KARNATIC PRESS —1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರವೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಸುವೃತ್ತ್ಯುಪಗಮಾರ್ದ್ರಕರ್ಣಾಟಕಾಪ್ರಕಾಶನಪರಾಭಿಧಾದ್ಯುತಸಾಹಿತಿಕೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದ್ರಾಕ್ಷಾಸುಪರಿಶೋಭಿತಾದಿಕಶಿವಮಾನಸಂಸಮಂದಂ॥

Vol. XII]	BANGALORE—MONDAY, MARCH 30, 1885	[No. 13.
ಸಂಪುಟ ೧೨.]	ಬೆಂಗಳೂರು —ಸನ್ ೧೮೮೫ನೇ ಇಸವಿ ಮಾರ್ಚಿ ೩೦ನೇ ತಾರೀಖ್ ಸೋಮವಾರ.	[ಸಂಖ್ಯೆ ೧೩.

THE KARNATAKA PRAKASIKA
ಕರ್ಣಾಟಕಪ್ರಕಾಶಿಕಾ.

— — —

MONDAY, MARCH 30, 1885

THE MAHARAJ'S COLLEGE, MYSORE.

ಮಾರ್ಚಿ ತಿಂಗಳು ೨೩ನೇ ತಾ ಸೋಮವಾರದಲ್ಲಿ ಮೈಸೂರಿನ ಮಹಾರಾಜರವರ ಕಾಲೇಜ್ ವಿದ್ಯಾರ್ಥಿಗಳಿಗೆ ಬಹುಮಾನಗಳು ಕೊಡತಕ್ಕಬಗ್ಗೆ ಕಾಲೇಜ್ ಸೌಧದಲ್ಲಿ ಸೇರಿದ್ದ ಸಭೆಯೊಳು ಶ್ರೀಮನ್ಮಹಾರಾಜರವರು ಅಗ್ರಾಸನವಲಂಕರಿಸಿದ್ದರು. ಆ ಕಾಲದಲ್ಲಿ ಐರೋಪ್ಯರು ಮತ್ತು ನೇಟಿವ್ ದೊಡ್ಡಮನುಷ್ಯರ ಸಮೂಹ ಕೂಡನೆ ವಿವಿಧಾಲಂಕಾರ ಶೋಭಿತವಾಗಿದ್ದ ಕಾಲೇಜ್ ಸೌಧವು ವಿರಾಜಮಾನವಾಗಿತ್ತು. ಕಾಲೇಜ್ ಪ್ರಿನ್ಸಿಪಾಲ್ ರವರಾದ ಮಿ॥ ಬಾಬಾ ರವರು ಸಂವತ್ಸರದ ರಿಪೋರ್ಟನ್ನು ಓದಿದ ನಂತರ ಶ್ರೀಮನ್ಮಹಾರಾಜರವರು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ದಯಪಾಲಿಸಿದರು. ಅನಂತರ ಈ ಸಂಸ್ಥಾನದ ದಿವಾನರಾದ ಮಿ॥ ಶೇಷಾದ್ರಿ ಅಯ್ಯರವರು, ಮಹಾರಾಜಾಜ್ಞೆಯ ಮೇರೆಗೆ ಸಭಿಕರನ್ನುದ್ದೇಶಿಸಿ ಪ್ರತ್ಯುತ್ತರ ನೇರಕೊಟ್ಟರು. ಅವರುಪದೇಶಿಸಿದ ಅಂಶಗಳಲ್ಲಿ ಪ್ರಾಧಾನ್ಯೇನ ಮೂರುವಿಷಯಗಳು ಇಲ್ಲಿ ಎತ್ತಿ ಹೇಳತಕ್ಕವಾಗಿವೆ. ಯಾವವೆಂದರೆ, ಮೊದಲನೆಯದು—ಇಲ್ಲಿ ಸೇರತಕ್ಕ ಬಹುಮಂದಿ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ನೆರವೇರಿಸಿಕೊಂಡು ಕಾಲೇಜ್ ಬಿಟ್ಟು ಬಂದಕೂಡಲೆ ಸರ್ಕಾರ್ ನೌಕರಿಯನ್ನೇ ನಿರೀಕ್ಷಿಸತಕ್ಕ, ಪರಂತು ಹೋಗುತ್ತದೆ. ಕಾಲೇಜ್‌ಗಳಿಂದ ಪ್ರತಿ ಸಂವತ್ಸರದಲ್ಲಿಯೂ ಹೊರಕ್ಕೆ ಬರತಕ್ಕವರಿಗೆಲ್ಲಾ ಸರಿಯಾದ ಕೆಲಸಗಳು ಸರ್ಕಾರ್ ನೌಕರಿಯಲ್ಲಿ ದೊರೆಯುವುದೇನೋ ಅದು ಇಲ್ಲವಾಗುತ್ತ ಬರುತ್ತದೆಂದು ಯೋಚಿಸಬೇಕಾದದ್ದು. ಈ ಸಂವತ್ಸರದಲ್ಲಿ ಮೈಸೂರು ದೇಶೀಯರಾದ ಬಾಲಕರು ೧೬ ಮಂದಿ ಬಿ. ಎ. ಡಿಗ್ರಿಪಡೆಯುತ್ತಾರೆ. ಅವರ್ಕೆಲ್ಲರಿಗೂ ಈ ವರ್ಷದಲ್ಲಿ ಕೆಲಸಕ್ಕೆ ಸಂಭವಿಸಲು ಮುಕ್ಕಾಲುಪಾಲಿ ಇಲ್ಲಿನ ಸರ್ಕಾರ್ ನೌಕರಿಯಲ್ಲಿ ಕಷ್ಟವಾಗಿದ್ದಾರೆ. ಪರಂತು ಮುಖ್ಯವಾದ ಕೆಲಸ ಇಲಾಖೆಗಳಿಗೆ ಆವಶ್ಯಕಗಳಾದ ಯೋಗ್ಯತೆಯನ್ನು ಪಡೆದಿರತಕ್ಕವರು ಅವರೆಲ್ಲರಿಗೂ ಕೆಲಸಗಳು ದೊರೆಯುವದು ಬಹುಪ್ರಯಾಸವಾಗಿದೆ. ಇಂಜನಿಯರಿಂಗ್, ಮೆಡಿಸಿನ್, ಫಾರೆಸ್ಟು ಮುಂತಾದ ಇಲಾಖೆಗಳಲ್ಲಿ ಸಮರ್ಥರಾದವರಿಗೆ ಇನ್ನೂ ಅವಕಾಶವಿರುವದರಿಂದ ಅಂತಾದ್ದಕ್ಕೆ ಇಲ್ಲಿನವರು ಸಮರ್ಥರಾಗಬೇಕೆ ಸರ್ಕಾರದವರು ಯಾವತ್ತು ಸಹಾಯವನ್ನೂ ಮಾಡುತ್ತಿದ್ದಾರೆ. ಮದರಾಸಿನಲ್ಲಿ ಪುನಾ ಕಾಲೇಜ್‌ಗಳಿಗೆ ಹೋಗಿ ಇಂಜನಿಯರಿಂಗ್ ಮತ್ತು ಮೆಡಿಕಲ್ ಪರೀಕ್ಷೆಗೆ ಓದತಕ್ಕ ಮೈಸೂರು ದೇಶದ ವಿದ್ಯಾರ್ಥಿಗಳು ಆಸ್ಥಾನದ ಸಹಾಯದಿಂದ ಯಾತನೆಯಿಲ್ಲದೆ ವಿದ್ಯಾರ್ಥಿ ವೇತನಗಳು ಹೊಂದುತ್ತಿರುವುದು ನಿಮ್ಮ ತಿಳಿದಿದ್ದಾರೆ. ಇದುವರೆಗೂ ಓಬ್ಬ ಲೋಕಲ್ ದೇಶೀಯನಾಗಿರುವವರಿಗೆಲ್ಲ ಇಲ್ಲಿ ನೌಕರಿಗಳು ದೊರೆತಿಲ್ಲ ಕೊಡಲ್ಪಟ್ಟವು.

ಎರಡನೇದು—ಇದುವರೆಗೆ ನೌಕರಿಗಳಿಗೆ ಸರ್ಕಾರದವರಿಗೆ ಬೇಕಾಗಿದ್ದು ಮುಂದೆ ಸ್ವಲ್ಪ ದೊರೆಯದೆ ಹೋದದರಿಂದ ಅವರು ಇಲ್ಲಿನ ಮೆಡಿಕಲ್ ಮತ್ತು ಇಂಜನಿಯರಿಂಗ್ ಕೆಲಸಗಳಿಗೆ ಅನ್ಯದೇಶದವರನ್ನು ಕರೆಸಬೇಕಾಯಿತು. ಈಗ ಕಾಡೂರ್ ಮುಂಬಯಿ ದೇಶಕ್ಕೆ ಹೋಗಿ ಫಾರೆಸ್ಟ್ ಇಲಾಖೆ ಕೆಲಸವನ್ನು ಕಲಿಯುವುದಕ್ಕೆ ಮೂವರಿಗೆ ವಿದ್ಯಾರ್ಥಿವೇತನ ಕೊಡುವಂತೆ ನಿಮ್ಮ ಹಿತಸಿರುವದರಿಂದ ಕೆಮ್ಮಲ ಕನಶ್ರಾಸ್ತ್ರದೊಳಗಿಲಾದ ಈ ದೇಶಕ್ಕೆ ಬೇಕಾದಷ್ಟು ಫಾರೆಸ್ಟ್ ಆಫೀಸರ್ ಗಳು ಸರ್ಕಾರದವರಿಗೆ ದೊರೆಯುವಿಕೆಗೆ ಸಾಧಕವಾಯಿತು. ಸಾಮಾನ್ಯ ಮತ್ತು ವ್ಯಾವಹಾರಿಕ ಜ್ಞಾನದಿಂದ ಯಾವಾಗಲೂ ಸರ್ಕಾರ್ ನೌಕರಿಯು ದೊರೆಯಲಾರದೆಂಬ ಅಂಶವನ್ನು ಸ್ವೀಕರಿಸಿದ್ದಾಗ, ಮೇಲೆಕಂಡ ಮುಖ್ಯ ಇಲಾಖೆಗಳಿಗೆ ಉಪಯೋಗಿಸುವಂತೆ ನೀವೆಲ್ಲರೂ ಓದಿ ಸಮರ್ಥರಾದರೆ, ನಿಮ್ಮ ದೇಶದಲ್ಲೇ ನೀವು ನೌಕರಿಮಾಡುವದರೊಂದಿಗೆ ಸ್ವದೇಶ ಅಭಿವೃದ್ಧಿಯನ್ನುಂಟುಮಾಡಿದವರೂ ಹೌದು ಎಂದು ಧರ್ಮವಾಗಿ ನೀವು ಮರೆಯಬಾರದು.

ಮೂರನೇದು—ನಿಮಗೆ ಆಗಕ್ಕೆ ಸರ್ಕಾರ್ ಸಹಾಯವು ಅಲ್ಪವಾಗಿರುವದೆಂದು ನೀವು ಸಂಕೋಚಪಡಬಾರದು. ನಿಮ್ಮ ಪುರೋಭಿವೃದ್ಧಿಗೆ ಕಾರಣಗಳಾದ ವಿಷಯಗಳನ್ನೆಲ್ಲ ಈಗ ಲಭಿಸುವ ಇಂಗ್ಲಿಷ್ ವಿದ್ಯಾಬಲದಿಂದ ಸ್ವಪ್ರಯತ್ನಪೂರ್ವಕ ನೀವೇ ಲಭಿಸಿಕೊಳ್ಳಬೇಕೆಂಬುದನ್ನು ಮನಸ್ಸಿನಲ್ಲಿ ದೃಢವಾಗಿ ಧರಿಸಬೇಕೆಂದು ತಿಳಿಸಿ ಪ್ರಸಂಗವನ್ನು ಮುಗಿಸಿದರು.

ಶ್ರೀಮನ್ಮಹಾರಾಜರವರು ಇಂತಾ ಸಂದರ್ಭಗಳಲ್ಲೆಲ್ಲ ತಮ್ಮ ಪ್ರೈವೇಟ್ ಸೆಕ್ರೆಟರಿಯವರಿಂದಾಗಲಿ ದಿವಾನರಿಂದಾಗಲಿ ಅಜ್ಞಾಪಿಸುವದೂ, ಅವರು ಮಹಾರಾಜಪ್ರತಿನಿಧಿತ್ವೇನ ಸಭೆಯಲ್ಲಿ ಮಾತನಾಡುವದೂ, ತಮ್ಮತಮ್ಮ ಮನೋಗತಗಳಾದ ಭಾವಗಳನ್ನೆಲ್ಲ ಪ್ರಕಾಶಾಂತರೇಣ ವ್ಯಕ್ತಪಡಿಸಲಿಕ್ಕೆ ಅಂತಾ ಸಮಯಗಳನ್ನ ಉಪಯೋಗಿಸಿಕೊಳ್ಳುವುದೂ ಪ್ರಸಿದ್ಧವಾಗಿಯೇ ಇರುವದರಿಂದ ಪ್ರಕೃತ ಸಂದರ್ಭದೊಳಗೂ ಉಪದೇಶಿಸಿದಂಶವು ಮಹಾರಾಜರಿಂದಾಜ್ಞಪ್ತವಾದ ದಿವಾನರದೆಂಬುದೇ ಭಾವಿಸಬೇಕು. ಆದಾಗ್ಯೂ ಅದನ್ನು ಮಹಾರಾಜರಮೂಲಕ ಕೇಳುವದರಿಂದ ಪುಂಟಾಗುವಷ್ಟು ಸಂತೋಷವು, ಇಲ್ಲಿನ ಸಭಿಕರಿಗೆ, ಕಿತಾಬ್ಪ್ರಯೋಜನಾಭಿಲಾಷಿಗಳಾದ ವಿದ್ಯಾರ್ಥಿಗಳಿಗೆ, ಇತರರಿಗೂ ಲಕ್ಷ ಈಗ ಪುಂಟಾಗುವದೆಂದು ಹೇಳತಕ್ಕದ್ದು ಇದಲ್ಲದೆ ಈ ವಾಕ್ಯಾರ್ಥವು ಸ್ಪಷ್ಟವಾಗಿ ವ್ಯವಸ್ಥೆಯಾಗಿ ನಿಮ್ಮ ಕಿವಿ ತಾಗಿದ್ದೆಂದು ಬಲ್ಲೆವು. ವಿದ್ಯಾಭ್ಯಾಸ ಮಾಡಿದವರೆಲ್ಲಾ ಸರ್ಕಾರ್ ನೌಕರಿ ದೊರೆಯುವದಕ್ಕಾಗಿ ಶ್ರಮಿಸಬೇಕೆಂಬ ಅಂಶವನ್ನು ನಾವು ನಿಷೇಧಿಸುತ್ತಿಲ್ಲವು. ಪರಂತು ದಿವಾನರವರು ಬಹಿರಂಗವಾದ ಈ ಉಪದೇಶವನ್ನು ಮಾಡಲಿಕ್ಕೆ ಸಿದ್ಧರಿಕ್ಕೆ ಪ್ರಾಕ್ಕಾಲದಲ್ಲಿ ಸರ್ಕಾರ್ ನೌಕರಿಗಳನ್ನು ಪರೀಕ್ಷಿಸಿದರೆ ಹೊಸ್ಸಿಲೇಖನಗಳನ್ನು ಪರಿಶೋಧಿಸಿದ ನಿಷ್ಪಕ್ಷಪಾತವಾದ ಕಾರಣವಾಗಿ ಇಲ್ಲಿನ ವಿಷಯದಲ್ಲಿ ಅವರಿಗೆ ಈಗ ಪುಂಟಾಗಿರುವಷ್ಟು ಅಪಪ್ರಥೆ ಅವಕಾಶವಿರಲಾರದು. ಮತ್ತು ಈಗ ನೌಕರಿಯಲ್ಲಿ ದೊರಕದಿರುವವರಿಂದಲೂ ಅಧಿಕಸಂಖ್ಯೆಯು ಕ್ಯವರಿಗೆ ಮುಂದೆಯೂ ಕೆಲಸಗಳು ಕೊಡುವದಕ್ಕೆ, ಕಲ್ತಾಗಿರುವರು ಸಮರ್ಥರಾದ ಇಲ್ಲಿನ ವಿದ್ಯಾರ್ಥಿಗಳು ಬಹಳವಾಗಿರುವಾಗ್ಯೂ ಕೆಲಸಗಳಿಲ್ಲದೆಯೂ, ಅವರ ಸಂಖ್ಯೆ ಕಡಿಮೆಯಾಗಿದ್ದಾಗ ಕೆಲಸಗಳ ಆವಶ್ಯಕತೆ ಅಧಿಕವಾಗಿ ಅದಕ್ಕೆ ಬೇಕಾದವರನ್ನು ಹೊರಗಿನಿಂದ ತರಿಸತಕ್ಕದ್ದರಿಂದ ಮುಂದೆ ಹಾಗೆ ಹೋಗಳನ್ನು ಕೊಟ್ಟು ಸಮರ್ಥರಾಗಲಿಕ್ಕೆ ಅವಕಾಶವಿಲ್ಲದೆಯೂ ಹೋಗುತ್ತಿದೆ.

ವಿಶೇಷವಾದ ಯೋಗ್ಯತೆ ಅಂದರೆ—ಇಂಜನಿಯರಿಂಗ್ ಮುಂತಾದ ಭಾಗಗಳಿಗೆ ಸಮರ್ಥರಾದವರು, ಇಲ್ಲಿ ಕೆಲಸ ದೊರೆಯಲಾರದೆಂಬ ಅಂಶ ಪರಪ್ರಚಾರಣವಾದದ್ದೇ ಹೊರತು ಬೇರಲ್ಲವು. ಹ್ಯಾಗಂದರೆ—ಸ್ರೈಪಾಲೇಟಿ ಅಗ್ರಿಕಲ್ಚರಲ್ ಕಾಲೇಜ್‌ನಲ್ಲಿ ಓದಿ ಶೀಕ್ಷಿತರಾಗಿ ಅಗ್ರಿಕಲ್ಚರಲ್, ವೆಟರ್‌ನರಿ ಮೊದಲಾದ ಭಾಗಗಳನ್ನೆಲ್ಲ ಅರಿತು ಸಮರ್ಥರೆನ್ನಿಸಿಕೊಂಡವರ ಸ್ಕೈರಿಯವರಿಗೆ ಇಂತಾ ಪಾಯಿಗಳು ದೊರೆಯದು ಅಸಾಧ್ಯವಾಯಿತು. ಪದರೀ ಮೂಡಲು ನಾ ಮಿಕ್ಕವರೆಲ್ಲರೂ ನಿರ್ವಾಹಕರಾಗಿ ಈ ದಕ್ಷಿಣಪಾದವನ್ನು ಕಾಣಲಾರದವರಾಗ ಅವರಿಗೆ ಒಂದುಮಾರ್ಗವು ತಪ್ಪಿಸಿದೆ. ಯಾಕತ್ಯಾಗದಿರೆಯೂ, ಸ್ಕೂಲ್‌ಕಾಲೇಜ್‌ನಲ್ಲಿ ಓದಿ ಕೊಂಡವರಾಗ್ರೆದಿಂದ ಕೇ ಇತರ ದೇಶೀಯರಾಗಿದ್ದ ಅಧಿಕಾರಿಗಳು ತೋಪಿಸಿದ್ದಷ್ಟು ಮಾತ್ರವಲ್ಲದೆ ಹುಡುಗರಾಯಿಗಳ ಕಲಿತಿನಲ್ಲಿ ಫಾರೆಸ್ಟ್ ಪ್ರೊಬೇಷನರಾಗಿ ಮಿ. ಬಾಬೂರಾಯರೆಂಬವರು ಹೊರಡ್ಯಾಕಲ್ಪಟ್ಟನ್ನು ನೋಡಿದರೆ ಅಂತಾ ಪರೀಕ್ಷೆಗೆ ಯೋಗ್ಯವಾದ ನಿರ್ಣಯವೂ ವಿಶ್ವಾಸವೆಂದೇ ಹೇಳಬೇಕು. ಶ್ರೀಮನ್ಮಹಾರಾಜರವರಿಗೆ ಈ ರಾಜ್ಯ ಒಪ್ಪಿಸಲ್ಪಡುವಾಗಲೂ ಸರ್ಕಾರಪ್ರಕಾರದಿಂದಲೂ ಸ್ವಸ್ಥಾನಾದಲ್ಲಿನ ಇಲ್ಲಿನ ಆಡಳಿತವನ್ನು ನೇಟಿವ್ ಅರಸರ ಅಳ್ವಿಕೆಗೆ ಅನುಸಾರವಾಗಿ ಮಾಡುವ ಪುದ್ದೇಶದಿಂದ ಸ್ವದೇಶೀಯರಾದ ನೇಟಿವ್‌ಗಳನ್ನು ಸರ್ಕಾರನ್ನಾಗಿ ಮಾಡುವದಕ್ಕೂ ಆದರೆ ಇಂಜನಿಯರಿಂಗ್ ಮೊದಲಾದ ಸ್ಕೂಲ್‌ಗಳನ್ನು ಹಾಕಿ ಬೀಫ್ ತಮ್ಮವರನ್ನು ಪತ್ತೆಮಾಡುತ್ತಿದ್ದರು. ಕರ್ನಲ್ ಮೀಡ್ ಅವರ ಆಗ್ಯವರ್ತೆಯಲ್ಲಿ ಅವುಗಳು ಮಾಡಲ್ಪಟ್ಟು ಅವುಗಳಿಗೆ ಬದಲಾಗಿ ಅನ್ಯದೇಶಗಳಿಗೆ ಹೋಗಿ ಓದುವರಿಗೆ ವೇತನಕೊಡತಕ್ಕದ್ದರಿಯ ನೆಲಕೊಳಿಸಲ್ಪಟ್ಟಿತು ಅಮಾ ಸ್ಥಾನವು ಮತ್ತು ಅಭಿಮಾನಮಾರ ಲಭಿಸತಕ್ಕದ್ದೇ ಹೊರತು ಸಾಮಾನ್ಯ ಲಭ್ಯವಲ್ಲದೆ ಹೋಯಿತು ಯಾಕೋ ಸಿಸ್ಟರ ಆಡಳಿತದಲ್ಲಿಯಿದ್ದ ನೌಕರರನ್ನೆಲ್ಲ ಕಾಯಂ ಗೊಳಿಸಿಕೊಳ್ಳುವದರಿಂದ ದುಬಾರಿಯಾಗುವೆಂದು ಹೇಳುವದು ಯುಕ್ತವಲ್ಲವು, ಹ್ಯಾಗಂದರೆ—ಯಾರೊ ಪೆನ್ಶನ್ ಆಫೀಸರ್ ಗಳು ಕವಾಯಿದ್ ಯಿದ್ದರಾ ಈ ಪರು ಬಹುಕಾಲ ಇರಲಾರರು. ಇಲ್ಲಿನವರು ಸಮರ್ಥರಾಗಿ ತಮ್ಮ ಕೆಲಸಗಳನ್ನು ನಿರ್ವಹಿಸುವದಕ್ಕೆ ಶಕ್ತರಾದರೆಂದು ತಿಳಿಯುವುದರೊಳಗೆ ಅವರ ಪ್ರಯೋಜನಾರ್ಥ ಅವರು ತಮ್ಮ ಕೆಲಸವನ್ನು ಬಿಟ್ಟುಹೋಗುವರು. ಅನ್ಯದೇಶೀಯರಾದ ನೇಟಿವ್‌ಗಳನ್ನು ಹೊರಗಿನಿಂದ ತರಿಸುವದರಿಂದ ಇಲ್ಲಿನವರಿಗೆ ಪ್ರಯೋಜನವಿಲ್ಲದೆ ಹೋಗುತ್ತಿದೆ. ಮೊದಲು ದೇಶ ನಡೆಸುವರ ಹೊರಗಿನಿಂದ ಬಂದ ಮಾಮಲೆದಾರರು ಪುನಃ ಯಂದ ಬಂದವರಾಗಿ ಸದ್ಯ ಕೆಲಸ ಖಾಲೀಯಿಲ್ಲವೆಂದು ತಿಳಿಸುತ್ತಿದ್ದರು. ಅವರು ಶೀಘ್ರವಾಗಿ ಬರುತ್ತಾರೆಂದು ಹೊಂದುವಾರಕ್ಕೆ ಮುಂಚಿತವಾಗಿ ತಿಳಿದದ್ದರಿಂದ ಮಿ॥ ನ ದೇಶಯವರ ಹೊರಗಿನಿಂದಲೂ ಕೇವಲ ಬರಲಾರಂಭವಾಯಿತು. ಈ ಕಾರಣದಿಂದ ಇಲ್ಲಿನವರು ಅಭಿವೃದ್ಧಿಯನ್ನೈದಲೇಕೆಂದು ಹೋರಿದ ಇದು ಅಂತ ತಿಳಿಸಲ್ಪಟ್ಟದ್ದು ಮಾತ್ರವಲ್ಲದೆ ಅರ್ಥವನ್ನು ಬುದ್ಧ್ಯಸ್ಥವಾಗಲಿಲ್ಲವು. ಇಲ್ಲದೆ ಮೇಲೆಕಂಡ ಪ್ರಸಂಗದಿಂದ ಶ್ರೀಮನ್ಮಹಾರಾಜರವರಿಗೆ ಸ್ವಾಧೀನವಿಲ್ಲವೆಂದು ಜನಗಳು ಹೇಳಿಕೊಳ್ಳುವದು ತಪ್ಪೆಂದು ತೋರುತ್ತದೆ. ಹಾಗೆ ಜನಗಳು ಹೇಳಲಿಕ್ಕೆ ಕಾರಣವಿಲ್ಲವೆಂದು ನಾವು ಹೇಳಲಾರೆವು. ಕಸಬ್ ಡಾಕ್ಟರ್ ಮತ್ತು ಕಾಲೇಜ್ ಪ್ರೊಫೆಸರ್ ಕೆಲಸಗಳಿಗೆ ಒಳಪಟ್ಟ ಮನುಷ್ಯರ್ ಫಾರೆಸ್ಟ್ ಇಲಾಖೆ ಮುಂತಾದ ನೌಕರಿಗಳು ಅನ್ಯರಿಗೆ ಕೊಡಲ್ಪಟ್ಟಿತ್ತಲ್ಲದೆ, ಸರ್ ಮೌಂಟ್‌ಸ್ಟ್ಯುವರ್ಟ್ ಗ್ರಾಂಟ್‌ಡಫ್ ರವರು ಮತ್ತು ಪೊಲಿಟಿಕಲ್ ಅಧಿಕಾರಿಗಳಿಗೆ ತೋರಿಸಿದ ಅಭಿಪ್ರಾಯಗಳಲ್ಲಿ ಅಧಿಕಾರದ ಸರ್ಕಾರ್ ಹುದ್ದೆ ಗಳಿಗೆ ಇದ್ದಾಗ್ಯೂ, ಅವರು ಅಂತಾ ಅಧಿಕಾರಗಳನ್ನು ಹೊಂದುವದಕ್ಕೂ ಅವಶ್ಯವಾಗಿ ಅಂತಾ ಕೆಲಸಗಳಿಗೂ ಅನ್ಯದೇಶದವರನ್ನು ತರಿಸಿದ್ದರಿಂದಲೂ, ಈ ದೇಶದಲ್ಲಿ ಮತ್ತು ಪ್ರಮುಖರಿಂದಲೇ ಕೆಲಸಮಾಡುವದಾಗಿರಲಿಕ್ಕೆ ಅನ್ಯದೇಶೀಯರಿಗೆ ಈ ದೇಶಸ್ಥರೆಂಬ ನೆಪದಮೇಲೆ ಅಧಿಕಾರ ಕೊಟ್ಟದ್ದರಿಂದಲೂ, ಏಕಪಕ್ಷೀಯ ಸ್ವದೇಶಸ್ಥರನ್ನು ನೌಕರಿಗಳಿಂದ ತಪ್ಪಿಸುತ್ತ ಬಂದದರಿಂದಲೂ ಅಂತಾ ಅಪಪ್ರಥೆಯುಂಟಾಗಲಿಕ್ಕೆ ಕಾರಣವಾಯಿತು.

ಮತ್ತು ಸರ್ಕಾರದವರು, ಜಿಲ್ಲಾ ಕೆಲಸಗಳನ್ನು ದೊಡ್ಡ ಉದ್ಯೋಗಗಳನ್ನು ಪರ ಅನ್ಯದೇಶೀಯರಾಗೇ ಕೊಡಲಿಕ್ಕೆ ಉಪಕ್ರಮಿಸಿದ್ದರಿಂದ ಮೈಸೂರು ದೇಶೀಯರಿಗೆ ಫಲಾಪೇಕ್ಷವಾದ ಕೆಲಸಗಳಾದರೂ ಖಂಡಿತವಾಗಿ ಉಳಿಸಲ್ಪಟ್ಟಿವೆಯೆಂದು ಯೋಚಿಸಲಿಕ್ಕಿಲ್ಲದೆಯಿದೆ. ಏತಾವತ್ತಿನಲ್ಲಿ ೨೫ ಸಂವತ್ಸರಗಳಿಗೆ ಮೇಲ್ಪಟ್ಟ ನೌಕರನೇಕರಿದ್ದಾಗ್ಯೂ ಅವರ ಹೋಗಿಕೆ ಬೇಗ ಈ ದೇಶಸ್ಥರಾದ ಒಬ್ಬರನ್ನು ಮಾತ್ರ ನೌಕರಿಯಂದಕೆಗೆ ಲವಾವಿಮಾ ಅದಲಾಗಿ ಮುಂ ಪ್ರಾಕ್ತಿಸಿದರು. ಇಂತಾ ವಿಷಯಗಳು ಮಹಾರಾಜರವರ ಅವಧಾನಕ್ಕೆ ಇದುವರಿಗೆ ಬರಲಿಲ್ಲವೆಂದು ತೋರುತ್ತದೆ. ಮಹಾರಾಜರವರ ಅವಧಾನಕ್ಕೆ ಇಂತಾ ವಿಷಯಗಳು ಅಲ್ಪವಾದವೆಂದು ಭಾವಿಸಲ್ಪಟ್ಟಾಗ್ಯೂ ವಿವಾದಾಸ್ಪದಗಳಾಗಿರುವವುಕ್ಕೆ

ಅಲ್ಲಿ ಮಹಾ ರಾಜರವರ ಅರಥಾನದಕ್ಕಾಕಸ್ಮಿ ಘಟಿಸುವದಕ್ಕೆ ನ್ಯಾಯವಿಲ್ಲವು. ಈಕಾಲದಲ್ಲಿ ಮೈಸೂರು ರಾಜ್ಯವು ಬ್ರಿಟಿಷ್ ಕಮ್ಮಿಷನರವರ ಸ್ವಾಧೀನಕ್ಕೆ ಹೊಂದಲ್ಪಟ್ಟಕಾಲದಲ್ಲಿ ಮುಂಚಿತ ಇಲಾಖಾ ಅಧಿಕಾರಿಗಳನ್ನು ಇಲ್ಲಿನ ನೌಕರಿಗಳಲ್ಲಿ ಹೊಕರರ್ನ್ಯಾಕ ಅದು ಇಂಡ್ಯಾ ಗವರ್ನಮೆಂಟಿನ ವರಿಗೆ ಫಿರ್ಯಾದಾಗಿ ಅದರಮೇಲೆ ಅವರು ದೊಡ್ಡ ಅಧಿಕಾರಿಗಳಿಂದ ದಾಕ್ಷಿಣ್ಯವನ್ನು ಸಹ ಪರಿಗಣಿಸತಕ್ಕ ಅಂತಃಕರಣವಿಲ್ಲ. ಗಜೀಟ್ ಮಾಡಿದರೆಂತು ತಿಳಿ ಬಂದಿರುತ್ತದೆ. ಹೀಗೆ ಯೂರೋಪಿಯನ್ ಆಫೀಸರ್‌ಗಳು ಹಾನಿಗೀಡಾದ ಮಿನಿಸ್ಟೀರಿಯಲ್ ಕೆಲಸಗಳಿಗೆ ಇಲ್ಬರ್ಟ್ಬಿಲ್ಲನ್ನು ಕರೆಯಿಸಿದಾಗ್ಯೂ ಅವರು ಸ್ವದೇಶೀಯರನ್ನು ತಿಂಬಿಸಲಿಕ್ಕೆ ವಶ್ರ ತ್ಯಪಡಲಿಲ್ಲವಾದದರಿಂದ ಯಾತರ ಫಲಗಳೂ ಆಕಾಂಕ್ಷಿಲ್ಲದಿರಿವುದು. ಮುಖ್ಯವಾಗಿ, ಇನ್ನು ಮೇಲಾದರೂ ಶ್ರೀಮನ್ಮಹಾ ರಾಜರವರು ಇಂತಾ ವಿಷಯಗಳಿಗೆ ನಜರ್ ಹೊಡಬೇಕಾದ್ದು ಆವಶ್ಯಕ ಕರ್ತವ್ಯಕ್ಕೆನ ಭಾವಿಸುತ್ತೇವೆಂದು ನಂಬುತ್ತೇವೆ.

A LECTURE ON VIRGIN WIDOW MARRIAGE.

ಪೂರ್ವದೊಳು ಈದೇಶದಲ್ಲಿ ದಿವಾನಗಿರಿಮಾಡಿ ಪ್ರಸಿದ್ಧರಾಗಿದ್ದ ರಾಯಿರಾಯಿ ಬಹದೂರ್ ಕೊಲ್ಲಂ ವೆಂಕಟ್ರಾಯರವರ ಮಕ್ಕಳಾದ ದಿವಾನಬಹದೂರ್ ರಘುನಾಥರಾಯರವರ ಪರಿಚಯವು ವಿಶೇಷತಃ ಇಲ್ಲಿನವರಿಗೆ ಇಲ್ಲದಿದ್ದಾಗ್ಯೂ ಬಹುದೇಶವ್ಯಾಪ್ತವಾದ ಅವರ ಕೀರ್ತಿಪ್ರಾಶಸ್ತ್ಯಗಳನ್ನು ಪ್ರಾಯೇಣ ಬಹುಮಂದಿಕೇಳಿಯಾದರೂ ಇರಬಹುದಷ್ಟೆ. ಸದರೀ ದೊಡ್ಡ ಮನುಷ್ಯರು ಗತ ಶನಿವಾರದದಿನ ಪ್ರಾತಃಕಾಲ ಮದರಾಸಿನಿಂದ ಈವೂರಿಗೆ ದಯಮಾಡಿದರು. ಅವರನ್ನು ಗೌರವದೊಡನೆ ಬರಮಾಡಿಕ್ಕೊಳ್ಳತಕ್ಕಬಗ್ಗೆ ಇಲ್ಲಿನ ಅಮಲ್ದಾರ್ ಮುಂತಾದ ಕೆಲವರುನೇಟಿವ್‌ದೊಡ್ಡಮನುಷ್ಯರು ಸ್ಟೇಷನಿಗೆಹೋಗಿದ್ದರು. ಅದೇದಿನ ಸಾಯಂಕಾಲ ಮೆ॥ರಘುನಾಥರಾಯರವರು ಈಗ ವಿಚಾರಾರ್ಹವಾಗಿರುವ ಅಕ್ಷತಯೋನಿಯರಾದ ಬಾಲವಿತಂತುಗಳಿಗೆ ಪುನರ್ವಿವಾಹ ಮಾಡಿಸತಕ್ಕ ವಿಷಯವಾಗಿ, ಈವೂರು ಯಲಹಂಕದಬಾಗಿಲಬಳಿ ಇರುವ ಲಂಡನ್ ಮಿಷನ್‌ಸ್ಕೂಲ್ ಹಾಲಿನಲ್ಲಿ ಉಪನ್ಯಾಸಮಾಡಿದರು. ಅದಂ ಕೇಳಬೇಕೆಂಬ ತಾತ್ಪರ್ಯದೊಡನೆ ಅಪ್ರೀತಿತ ಕುತೂಹಲವುಳ್ಳ ನೇಟಿವ್ ದೊಡ್ಡಮ ನುಷ್ಯರು ಬಹುಮಂದಿ ಬಂದಿದ್ದರು. ಇದ್ದಲದೆ ಸ್ಥಲಸಂಕೋಚದಿಂದ ಅನೇಕರು ಹಿಂದಿರಿಗಿಹೋಗುವಂತೆಯಾಯಿತು. ಇದಕ್ಕೆ ಅಲ್ಲಿ ಪೂರ್ವಭಾವಿಯಾಗಿ ಮಾಡಲ್ಪಟ್ಟದ್ದ ಏರ್ಪಾಡುಗಳ ನ್ಯೂನತೆಯೇ ಕಾರಣವಾಗಿರುತ್ತದೆ. ಸಾಯಂಕಾಲ ಏಳುಘಂಟೆಗೆ ಸರಿಯಾಗಿ ಮೆ॥ರಘುನಾಥರಾಯರವರು ಪ್ರಸಕ್ತ ವಿಷಯವಂಕುರಿತು ಉಪನ್ಯಾಸ ಮಾಡಲಾರಂಭಿಸಿದರು. ಅವರ ಉಪನ್ಯಾಸವು ಈ ಪತ್ರಿಕೆಯ ಇಂಗ್ಲಿಷ್‌ಭಾಗದಲ್ಲಿ ಆಮೂಲಾಗ್ರವಾಗಿ ಪ್ರಕಟಿಸಿರುವದರಿಂದ ಅದರ ಸಾರಾಂಶವನ್ನು ಮಾತ್ರ ಇಲ್ಲಿ ತಿಳಿಸುವೆವು. ಪ್ರಾಸಂಗಿಕರು ಪ್ರಥಮತಃ ಆರ್ಯಮತಸ್ವರೂಪ ಸಿದ್ಧಾಂತಗಳನ್ನುತಿಳಿಸಿ,ಅದಕ್ಕೆಸೇರಿದ ನಾವು ಪ್ರಮಾಣೈಕಶರಣ್ಯರೆಂಬದಂ ನಿರೂಪಿಸಿ, ಶ್ರುತಿಸ್ಮೃತಿಪುರಾಣಗಳೆಂಬ ತ್ರಿವಿಧಪ್ರಮಾಣಗಳೊಳು ಪರಸ್ಪರ ಇರತಕ್ಕ ವ್ಯಾಪ್ಯವ್ಯಾಪಕ ಸಂಬಂಧವನ್ನು ಉದಹರಿಸಿ, ಪ್ರಮಾಣಾಭಾವದೊಳುಳಆಚಾರವು ಆದರಣೀಯವಲ್ಲವೆಂಬದಂ ದೃಢಪಡಿಸಿ, ಪುರುಷ ಸಂಪರ್ಕಶೂನ್ಯರಾದ ವಿತಂತುಗಳಿಗೆ ವಿವಾಹಮಾಡಬಹುದೆಂಬದಕ್ಕೆ ಸಾಧಕಗಳಾದ ಆಧಾರಗಳು ಬಹಳವಾಗಿರುವಂತೆ ಅಗ ಮೋಪಮಾನಗಳಮೂಲಕ ವ್ಯಕ್ತವಾಗುವಂತೆ ಉದಹರಿಸಿ, ಕಡೆಗೆ ಮಾನುಷಕೋಟಿಗ ಸೇರಿದವರೆಲ್ಲರೂ ಇದಂ ಅಗತ್ಯ ಪರ್ಯಾಲೋಚಿಸಬೇಕೆಂತಲೂ, ತಿಳಿಸಿದರು. ಪ್ರಾಸಂಗಿಕರ ಉಪನ್ಯಾಸವು ಸಯುಕ್ತಿಕವಾಗಿಯೂ, ಸಪ್ರಮಾಣವಾಗಿಯೂ, ಮೃದುಮಧುರಗಂಭೀರಯುಕ್ತವಾಗಿಯೂ ಇತ್ತು. ದಿವಾನಬಹದೂರವರು ನಿನ್ನೆಯದಿನ ಸಾಯಂಕಾಲ ಮದರಾಸಿಗೆ ವಾಪಸ್ ದಯಮಾಡಿದರು. ಮೆ. ರಘುನಾಥರಾಯರವರ ಪಕ್ಷವು ವೇದಶಾಸ್ತ್ರ ವಿರುದ್ಧವಲ್ಲದೆಯೂ, ಸನಾತನವಾದ ಬ್ರಾಹ್ಮಣ್ಯಕ್ಕೆ ನ್ಯೂನತೆಯಿಲ್ಲದೆಯೂ ಯಿರುವಪಕ್ಷಕ್ಕೆ ಅದನ್ನಂಗೀಕರಿಸುವದರಿಂದ ವಿಶೇಷ ಬಾಧಕ ನಮಗೆಷ್ಟು ಮಾತ್ರವೂ ತೋರಲಿಲ್ಲವು. ಕನ್ಯಾಪಿತೃತ್ವವು ದುಃಖಕಾರಿ ಯೆಂಬದು ಹೆಣ್ಣುಮಕ್ಕಳುಳ್ಳವರೆಲ್ಲರಿಗೂ ಅನುಭವಸಿದ್ಧವಾದ ವಿಷಯವಾಗಿದೆ. ಕರುಣಾಶೂನ್ಯರಾದ ಶ್ರದ್ಧಾಜಡರೊಂದುವೇಳೆ ಪ್ರಾರಂಭದಲ್ಲಿ ಪ್ರತಿಭಟಿಸಿದರೂ, ಕ್ರಮೇಣ ಅವರು ಅಭ್ಯೂಪಗಮಪರರಾಗಿ ಪ್ರಸಕ್ತ ಪ್ರಯತ್ನಕ್ಕೆ ಸಹಾಯಕ ರಾಗುವರಾದ್ದರಿಂದ ಪ್ರಥಮತಃ ಈ ವಿಷಯದಲ್ಲಿ ವಿದ್ಯಾವಂತರಾಗಿಯೂ ಉಪಪನ್ನರಾಗಿಯೂ, ಆಸ್ತಿಕರಾಗಿಯೂ ಯಿರತಕ್ಕವರೆಲ್ಲರೂ ಪ್ರವರ್ತಿಸಿ ಯಾವದಾದರೊಂದುವಿಧ ಏರ್ಪಾಡುಮಾಡುವದು ಯೋಗ್ಯವೆಂದು ತೋರುತ್ತದೆ.

ಮೆ. ರಘುನಾಥರಾಯರವರು ಸ್ವಂತ ಕೆಲಸ ಪ್ರಯುಕ್ತ ಇಲ್ಲಿಗೆ ಬಂದು ಮಾರನೇದಿನವೇ ವಾಪಸ್ ಹೊರಟುಹೋದದರಿಂದ ವಿತಂತುವಿಷಯಕವಾದ ಅವರ ಉಪನ್ಯಾಸವನ್ನು ಮತ್ತೊಂದಾವರ್ತಿ ಕೇಳಬೇಕೆಂಬ ಅನೇಕರ ಅಪೇಕ್ಷೆಗೆ ಅವಕಾಶವಿಲ್ಲದೆ ಹೋಯಿತು.

DISPOSAL OF OFFICIAL PATRONAGE.

ಇಲ್ಲಿನ ಅಡಳಿತಕ್ರಮವು ಬರುತಬರುತ ಅನ್ಯದೇಶವೃತ್ತಾಂತಪತ್ರಿಕೆಗಳ ವಿಚಾರಕ್ಕೆ ಸಹ ವಿಷಯವಾದದಕ್ಕಾಗಿ ಸಂತೋಷಿಸುವೆವು. ಇಲ್ಲಿನ ಸರ್ಕಾರಿ ನೌಕರೀ ವಿಲೇವಾರೀ ವಿಷಯದೊಳು ಆಂಧ್ರಪ್ರಕಾಶಿಕಾಯೆಂಬ ಮದರಾಸಿನಪತ್ರಿಕೆಯೊಂದು ತಿಳಿಸುತಿದೇನಂದರೆ—ಮೈಸೂರು ಮಹಾರಾಜರವರ ದಿವಾನರಾದ ಮೆ॥ ಶೇಷಾದ್ರಿ ಅಯ್ಯರೆಂಬವರು ಸಕಲಕಲಾಪರೀಕ್ಷೆಗಳಂಕೊಟ್ಟ ಮೈಸೂರು ನಿವಾಸಿಗಳಿಗೆ ದೊಡ್ಡ ಉದ್ಯೋಗಗಳನ್ನುಕೊಡದೆ ದಕ್ಷಿಣಾದಿ ಬ್ರಾಹ್ಮಣರಿಗೇ ಕೊಡುತ್ತಾರೆಂಬದಾಗಿ ತಿಳಿಯಬರುತ್ತದೆ. ದಿವಾನರವರು ಈರೀತಿ ಮಾಡುವದು ಬಹಳ ಅಕ್ರಮವೆಂದೆಣಿಸುವೆವು. ತಮ್ಮ ರಾಜ್ಯದಲ್ಲಿಯೇ ಓದಿಕೊಂಡವರಿರುವಲ್ಲಿ ಇತರದೇಶಸ್ಥರಂ ಕರೆಯಿಸಿ ದೊಡ್ಡ ಉದ್ಯೋಗಗಳನ್ನು ಕೊಡುವದು ತುಂಬಾ ಆಶ್ಚರ್ಯಕರವಾಗಿದೆ. ಬಹುಶಃ ದಿವಾನರವರ ಜನ್ಮಭೂಮಿ ದಕ್ಷಿಣದೇಶವಾಗಿರಬಹುದು. ಆದದರಿಂದಲೇ ದಾಕ್ಷಿಣಾತ್ಯರಲ್ಲಿ ಅವರಿಗೆ ಅಭಿಮಾನವುಂಟಾಗಿರುವಂತೆ ತೋರುತ್ತದೆ. ಬ್ರಿಟಿಷ್ ಗವರ್ನಮೆಂಟಿನವರು ತಮ್ಮ ಸ್ವಜಾತೀಯರಾದ ಆಂಗ್ಲೇಯರಿಗೆ ಉದ್ಯೋಗಗಳನ್ನು ಕೊಡುತ್ತಾರೆಂಬದಾಗಿ ಇಂಡ್ಯಾದೇಶದೊಳು ನೇಟಿವ್‌ಗಳೆಲ್ಲರೂ ಮೊರೆಯಿಡುವದು ಕೇಳುತಲಿಹೆವಯಲ್ಲವೆ? ಹೀಗಿರುವಲ್ಲಿ ನಮ್ಮ ಸ್ವದೇಶೀಯರೊಳೊಬ್ಬರಾದ ದಿವಾನರವರು ತಮ್ಮ ಸ್ವಜಾತಿಯವರಲ್ಲೇ ಅಭಿಮಾನವುಳ್ಳವರಾಗಿ, ತಮ್ಮ ಅರಸರ ಪ್ರಜೆಗಳಿಗೆ ಒಳಪಟ್ಟಿರುವವರು ತ್ಯಜಿಸಿ ಸ್ವೀಯರಿಗೇ ದೊಡ್ಡ ಉದ್ಯೋಗಗಳನ್ನು ಕೊಡುತಬರುವಾಗ್ಯೂ ಇಂಗ್ಲಿಷಿನವರು ಮೇಲೆಕಂಡಂತೆ ಮಾಡುವದನ್ನು ಕೇಳಲ್ಯಾತಕ್ಕೆ? ದಿವಾನರವರು ಈಪ್ರಕಾರ ಸ್ವಜಾತೀಯರಿಗೆ ಸಹಾಯಮಾಡಬೇಕೆಂಬ ಇಷ್ಟವುಳ್ಳವರಾದರೆ ತಮ್ಮ ಸ್ವಂತ ಆಸ್ತಿಯಿಂದಕೊಟ್ಟು ಸಹಾಯ ಮಾಡಬಹುದೇ ಹೊರ್ತು ಈರೀತಿ ಮಾಡುವದು ಬಹಳ ನಿಂದ್ಯವಾಗಿರುತ್ತದೆ, ಎಂಬದು.

BUDDHA AND HIS DOCTRINES,—No. 7.

ಇದಕ್ಕೆ ಕಾರಣಗಳಾಗಿ ಇರತಕ್ಕ ವಿಷಯಗಳ ಸ್ವರೂಪವನ್ನು ತಿಳಿಸತಕ್ಕ ಶಬ್ದ ಸ್ಪರ್ಶರೂಪ ರಸಗಂಧಗಳೆಂಬ ಐದು ವಿಷಯಗಳು, ಸುಖಾದಿಗಳು ಅಂತೂ ಆರು ಪ್ರತ್ಯಯಗಳು ನಾಲ್ಕು (ಪ್ರತ್ಯಯಗಳನ್ನು ಹುಟ್ಟಿಸುತ್ತವೆ. ಆ ನಾಲ್ಕು ಯಾವವೆಂದರೆ—ಆಲಂಬನ, ಸಮನಂತರ, ಸಹಕಾರಿ ಅಧಿಪತಿಗಳೆಂಬವು ಇವುಗಳೊಳು ಆಲಂಬನವೆಂಬದು, ಜ್ಞಾನದಲ್ಲಿ ಪದಾರ್ಥಗಳು ತೋರುವಾಗ ಅವರ ಆಕಾರವನ್ನು ಚಿತ್ತಕ್ಕೆ ತೋರಮಾಡಿಸುತ್ತದೆ. ಸಮನಂತರ ಪ್ರತ್ಯಯದಿಂದ ಜ್ಞಾನರೂಪವಾಗುತ್ತದೆ. ಸಹಕಾರಿಯಿಂದ ಸಹಕಾರಿ ಪ್ರತ್ಯಯವುಂಟಾಗುತ್ತದೆ, ಇವುಗಳಲ್ಲಿ ಅಧಿಪತಿ (ಪ್ರತ್ಯಯ) ವು ಪುಂಟಾಗುತ್ತದೆ. ಯಾಕೆಂದರೆ ಹೋತಹೊಂದು ನಿಯಾಮಕವಾಗದು ಅಧಿಪತಿಯೆನಿಸಿಕೊಳ್ಳುವದರಿಂದ ಕಣ್ಣು ಇವೇ ಇಂದ್ರಿಯಗಳಿಗೂ ಮುಖ್ಯವಾಗಿಯೂ, ಅನೇಕ ನಿಯಾಮಕವಾಗಿಯೂ ಇರುವದರಿಂದ ಅಧಿಪತಿ ಪ್ರತ್ಯಯಕ್ಕೆ ವಿಷಯವಾಗುದು ಪರಂದ ಚಿತ್ತಸಂಬಂಧಿಗಳಾದ ಸುಖ ದೊಡ್ಡದವುಗಳಿಗೆ ಇಲ್ಲಿ ಹೇಳಲ್ಪಟ್ಟ ಆಲಂಬನ ಮೊದಲಾದ ನಾಲ್ಕು ಕಾರಣಗಳುಂಟಾಗುತ್ತವೆಂದು ತಿಳಿ ಇದಕ್ಕೂ ಚಿತ್ತ ಚೈತ್ತಗಳೆಂಬದು ರೂಪಸ್ಕಂಧ, ವಿಜ್ಞಾನಸ್ಕಂಧ ವೇದನಾಸ್ಕಂಧ, ಸಂಜ್ಞಾಸ್ಕಂಧ ಸಂಸ್ಕಾರಸ್ಕಂಧಗಳೆಂಬ ಐದುಸ್ಕಂಧಗಳಿಗೂ ಅಂದರೆ ಕೆಂಟಿಗಳಿಗೂ ಪರವಾಗಿರುತ್ತದೆ. ಇಮ್ಮಡಿಸಿದ್ದ ವಿಷಯಗಳನ್ನು ಗ್ರಹಿಸುವ ಇಂದ್ರಿಯಗಳು (ರೂಪಸ್ಕಂಧ ಕೆಪ್ರತಿರೂಪಗಳು) ಎಂಬ ವ್ಯಕ್ತಿಗಳೇ ಇಂದ್ರಿಯಗಳಿಂದ ಬರುವಗಳು ತಿಳಿದಾಗಲ್ಪಡುವದರಿಂದ ರೂಪಸ್ಕಂಧವೆನಿಸುತ್ತವೆ. ಆಲಯ ವಿಜ್ಞಾನವು ಪ್ರವೃತ್ತಿ ವಿಜ್ಞಾನ ಇವುಗಳ ಪ್ರವಾಹವು (ಅಂದರೆ ಪರಂಪರೆಯು) ವಿಜ್ಞಾನಸ್ಕಂಧವೆನಿಸುತ್ತದೆ. ಈ ಹೊರತು ಸ್ಕಂಧಗಳ ಸಂಬಂಧದಿಂದುಂಟಾದ ಸುಖದುಃಖಾದಿ ಜ್ಞಾನ ಪರಂಪರೆಯು ವೇದನಾಸ್ಕಂಧವೆಂದು ಕರೆಯಲ್ಪಡುತ್ತದೆ. ಆಕರ ಕುದರೆ ಮುಂಬು ಮೊದಲಾದ ಶಬ್ದಗಳಿಂದ ತಿಳಿಯಲ್ಪಡುವ ಪದಾರ್ಥಗಳ ಜ್ಞಾನ ಪರಂಪರೆಯು ಸಂಜ್ಞಾಸ್ಕಂಧವೆನಿಸುವುದು. ವೇದನಾಸ್ಕಂಧದಿಂದುಂಟಾದ, ರಾಗ ದ್ವೇಷ ಮದಮತ್ಸರ್ಯಾದಿಗಳು, ಕ್ಲೇಶಗಳು, ಅವುಗಳಿಂದ ಏರ್ಪಡುವ ಉಪಕ್ಲೇಶಗಳು, ಧರ್ಮಾಧರ್ಮಗಳು ಇವು ಸಂಸ್ಕಾರಸ್ಕಂಧವೆಂದು ಹೇಳಿಸಿಕೊಳ್ಳುತ್ತವೆ. ಇಂತಾ ಐದುಸ್ಕಂಧಗಳುವಿನಾ ಶರೀರದಲ್ಲಿ ಬೇರೆ ಆತ್ಮವೆಂಬ ದಿರುವದಿಲ್ಲವು. ಇವೆಲ್ಲವೂ ದುಃಖರೂಪ, ದುಃಖಸ್ಥಾನ,ದುಃಖಸಾಧನಗಳೆಂದು ಭಾವಿಸಿ ಇವುಗಳನ್ನು ನಿರೋಧಿಸಿಕೊಳ್ಳುವದಕ್ಕೆ ಉಪಾಯವಾಗಿರುವ ತತ್ವಜ್ಞಾನವನ್ನು ಪಡೆಯಬೇಕು. ಇದಕ್ಕೆ ಪೂರ್ವಿಕರು ಹೇಳಿದ್ದೇನಂದರೆ:—

ದುಃಖಗಳ ಸಮುದಾಯವನ್ನು ನಿವೃತ್ತಿ ಮಾಡಿಕೊಳ್ಳುವ ನಾಲ್ಕುಬಗೆ ಮಾರ್ಗಗಳಿರುವವೆಂದು ತಿಳಿಯತಕ್ಕದ್ದೆಂದರೆ. ದುಃಖ ಸಮುದಾಯವುಂಟಾಗುವದಕ್ಕೆ ಕಾರಣವಾದುದೆಂದು ತಿಳಿಯತಕ್ಕದ್ದು. ಅದು ಪ್ರತೀತ್ಯೋತ್ಪಾದ ನಿಬಂಧನೆ, ನೇರೂಪವಂಬಂಧನೆಯೆಂಬಾಗಿ ಎರಡುವಿಧ. ಇವುಗಳೊಳು ಪ್ರತ್ಯಯೋತ್ಪಾದ ನಿಬಂಧನವೆಂದರೆ, ಕಾರಣವು ಕಾರ್ಯದೊಡನೆ ಕೂಡಿದೆಂದು ಕಾಣ್ಬವುದು. ಅಂಕುರವು ಬೀಜದಿಂದ ಹುಟ್ಟಿದ ಹಾಗೆ ಫಲವು ಬೀಜಕಾರಣವಿಲ್ಲದೆ ಇಲ್ಲ, ಹ್ಯಾಗಂದರೆ—ಬೀಜದಲ್ಲಿ ಮೊಳಕೆಯು ಅಂಕುರದಿಂದ ಪತ್ರವೂ ಯಿಂದ ಹುಟ್ಟುತ್ತದೆ. ಅದರೊಳು ವೃಕ್ಷವು ಹಾಗೆ, ಹರಿತಾಕ್ಷಿ, ಕಾಂಡ, ಇವುಗಳಿಲ್ಲದ ಪುಷ್ಪವನು ಅಲ್ಲದಾಗುವು. ಅದಕ್ಕೆ ಅಂತವನ್ನು ರಸಕನ್ನಾ ಹುಟ್ಟಿಸುತ್ತದೆ. ತೇಜೋಧಾತುವು ಪಾಕವನ್ನು ವಿಕಾಸವನ್ನೂ ಹುಟ್ಟಿಸುತ್ತದೆ. ವಾಯುಧಾತುವು ವ್ಯಕಾಶವನ್ನು ಬೆಳವಣಿಗೆಯನ್ನೂ ಹುಟ್ಟಿಸುತ್ತದೆ. ಆಕಾಶಧಾತುವು ಅವಕಾಶವನ್ನು ಕೃತವನ್ನಾ ಹುಟ್ಟಿಸುತ್ತವೆ. ಋತುಧಾತುವು ಅಂತಾ ಐದು ಧಾತುಗಳ ಸೇರ್ಪಿಕೆಯನ್ನು ಹುಟ್ಟಿಸುತ್ತದೆ. (ಋತುಧಾತುವಂದರೆ ಯಾವದೇಹದ ಅಂಕುರವು ಯಾವ ಋತುವಿನಲ್ಲಿ ಹುಟ್ಟತಕ್ಕದೋ ಅದು ಋತುಧಾತುವು) ಅಂದರೆ ಅಂಬೆಂದು ಭಾವವು. ಹೇತೂಪನಿಬಂಧನವನ್ನು ತಿಳಿಸುವ ಸೂತ್ರಗಳು ಏನಂದರೆ—(ಉತ್ಪಾದಾದ್ವಾ ತೋದ್ಗತಸ್ತಥಾಗತೇ ಏಕದಾದ ಉತ್ಪಾದಕರ ಭದಲ್ಲಿ (ಅನುತ್ಪಾದಾದ್ವಾ) ಅಂದರೆ ಒಂದರಿಂದೊಂದು ಹುಟ್ಟಿದರೂ, ಹುಟ್ಟದೆ ಯಿದ್ದರೂ ಆಗಾರ್ಯಕ್ಕೆ ಆದ ಕಾರಣವಾಗುತ್ತಿಂದರೂ ಫಲವು. ಹ್ಯಾಗಂದರೆ—ಯಾವದು ಯಾರುಗಳ ಯಾವ ಕಾರ್ಯವು ಹುಟ್ಟುತ್ತದೋ ಅದು ಆಗಾರ್ಯವನ್ನು ಕೂಡ ಹುಟ್ಟಿಸದಿದ್ದಾಗ್ಯೂ ಕಾರಣವಾಗುತ್ತದೆ. ಇವ್ವೆಲ್ಲೊರು ಇಂತಾ ಅಧಿಷ್ಠಾನಕ್ಕೆ ನಿಯಾಮಕರಿಲ್ಲವೆಂದು ಸೂತ್ರಾರ್ಥವು. ಹ್ಯಾಗೆ ಬೀಜದಿಂದ ಮೊಳಕೆ, ಮೊಳಕೆಯಿಂದ ದಂಟು, ಅಂದಿಂದ ಪ್ರಕ, ಅದರದೆಸೆಯಿಂದ ಗರ್ಭ, ಕೆಸ್ವಾಲಕ ಕದಿರು, ಅದರಿಂದ ಪೊಟ್ಟು, ಅದುಂ ಎಂಬಪುಷ್ಪ, ಅದರಿಂದ ಹಣ್ಣು, ಈಮೇರೆ ಬಾಹ್ಯರಾದ ಕಾರ್ಯಗರು ಹುಟ್ಟುವಾಗ ಮೊದಲಿನವು ಚೇತನವುಗಳಿಗೆ ಹ್ಯಾಗೆ ಕಾರಣವೆಂದು ತಿಳಿಯಬೇಕಾದದಿಲ್ಲವೋ ಹಾಗೆಯೇ ಆಧ್ಯಾತ್ಮಿಕಕರ ವಿಷಯಗಳಲ್ಲಿಯೂ, ಮೇಲೆಕಂಡ ಪ್ರತ್ಯಯೋಪನಿಬಂಧ ಹೇತೂಪನಿಬಂಧನಗಳಿಂದ ದೊರದುಃಖಗಳನ್ನು ಕಲ್ಪಿಸಬೇಕಾದುದರಿಂದ ಹೇಳಿರಿ ತಿಳಿಸಲ್ಪಟ್ಟ ಸ್ಕಂಧಗಳಿಂದ ಸಮುದಾಯವನ್ನು ನಿವರ್ತಿಸಿಕೊಂಡರೆ, ಪರಿಶುದ್ಧವಾದ ಆನನವನ ಸ್ವರೂಪವನ್ನು ಅನುಭವಿಸತಕ್ಕ ಸುಖದುಃಖಗಳಿಂದ ಬಿಡುಗಡೆ ಹೊಂದಿಸುತ್ತವೆ. ಈನ ಮರಣಾದಿಗಳಿಂದ ವಿಮುಕ್ತರಾಗಿ, ಬುದ್ಧನ ದ್ರವ್ಯಪಟ್ಟವಾದ ಅಷ್ಟಾಂಗಗಳನ್ನುಸರಿಸುವದರಿಂದ ನಿರ್ಮಲಜ್ಞಾನಹುಟ್ಟುತ್ತದೆ. ಇದೇಬುದ್ಧಮುಕ್ತಿಯು. ಸಮುದಾಯನಿವೃತ್ತಿಗೆ ಕಾರಣವು ತತ್ವಜ್ಞಾನವು. ಅದು ಕ್ಷಣಿಕವಾದ ಭಾವಗಳಿಂದುಂಟಾಗುವ ತತ್ವವೆಂಬದೇ ಪರಮ ರಹಸ್ಯಾರ್ಥವು. ಅಷ್ಟಾಂಗವೆಂದರೆ, ಪಂಚಸ್ಕಂಧ ಶರೀರದಲ್ಲಿ ಸಮ್ಯಗ್ದರ್ಶನ, ಸಂಕಲ್ಪ, ಸಮ್ಯಗ್ವಾಕ್, ಸಮ್ಯಕ್ಕರ್ಮ, ಸಮ್ಯಗಾಜೀವ, ಸಮ್ಯಗ್ವ್ಯಾಯಾಮ, ಸಮ್ಯಕ್ಸ್ಮೃತಿ, ಸಮ್ಯಕ್ಸಮಾಧಿ ಧ್ಯಾನಗಳಿಂದ ಮನದೊಳು ಧರಿಸಿ ತಿಳಿಯತಕ್ಕದಾಗಿ ಹಿಡಿಸಿದರೆ ತತ್ವಜ್ಞಾನವುಂಟಾಗುವದು.

ಈ ತತ್ವಜ್ಞಾನ ವುಂಟಾಗುವಮೇಲೆ ಪುನರ್ಜನ್ಮರಹಿತವಾದನಿರ್ವಾಣವೆಂಬ ಪರಮಪದವು ಪ್ರಾಪ್ತವಾಗುತ್ತದೆ. ನಿರ್ವಾಣಕ್ಕೆ ಒಳಗಾದವರು ಅತೀಂದ್ರಿಯನಾಗುವರು. ಆ ದೊಂದವಸ್ಥಾ ವಿಶೇಷವಾಗಿ ಇರುತ್ತದೆಯೇ ಹೊರ್ತು ಸ್ಥಾನವಿಶೇಷವಲ್ಲವು. ಅದು ಪಂಚಭೂತಾತ್ಮಕವಾದ ಶರೀರಸಂಬಂಧರಹಿತವಾದ್ದಾಗಿಯೂ, ಧರ್ಮಾದಿ ಪ್ರತ್ಯಯಗಳರಿಕ್ತವಾದ್ದಾಗಿಯೂ, ಉಪಶಾಂತವಾದದ್ದಾಗಿಯೂ, ಇಂತಿ ದೇಹವಿಲ್ಲದ, ಅದರಿಂದ ಪ್ರೀತಿಗೆ ಪುನರ್ಜನ್ಮ ಪ್ರಾಪ್ತಿಯಾಗಲಾರದು. ಇದಕ್ಕೆ ಆಕಲ್ಪಾ ಇತರಸುಖವೊ ಮಾ ಅದಕೊಲ್ಲಿಲ್ಲ. ಇವನ್ನು ನಿವಾಸಿಸಲಾಗಿ, ಅದು ನಿರುಪಾಧಿಕವಾದದ್ದಾಗಿಯೂ, ಪ್ರೀತಿಂದ ಕಳಿಸ್ಪಕಸ್ವೆಲ್ಲ ಮೂಲಕ ಧ್ವಂಸಮಾಡತಕ್ಕದ್ದಾಗಿಯೂ, ಅಂದರೆ ಶೂನ್ಯಜ್ಞಾನವನ್ನುಂಟು ಮಾಡತಕ್ಕದ್ದಾಗಿಯೂ, ಜನನಕ್ಕೆ ಪುನಃ ಪ್ರತಿಬಂಧಕಸ್ಥಾನವಾಗಿಯೂ, ಪ್ರಾಕೃತಿಕಕ್ಕೆ ಮುಕ್ತರಾದದಾಗಿಯೂ, ಶಾಶ್ವತವಲ್ಲದ್ದಾಗಿಯೂ, ಪಾಪನಶರಮವಾದದ್ದಾಗಿಯೂ, ದುಃಖಾತಿರಿಕ್ತವಾದದ್ದಾಗಿಯೂ, ಇತರ ಸಂಪರ್ಕಶೂನ್ಯವಾದದ್ದಾಗಿಯೂ, ಆನಂದಪೂರ್ಣವಾದದ್ದಾಗಿಯೂ ಇರುತ್ತದೆ. ವಾಯುವು ಗತಿಯಕ್ಕೆ ಅಭಾವವಾಗಿ ಸ್ವರೂಪ, ಅದರವರ್ಣವು ಹೇಳಕೂಡದ್ದಾಗಿದ್ದರಾ.

ಅದೊಂದು ಪದಾರ್ಥರೂಪವಾಗಿರುವಂತೆ ನಿರ್ವಾಣವೆಂಬುದೊಂದಿದ್ದಾಗ್ಯೂ ಕಿರಣಗಳನ್ನು ಹಾಕಿ ಬೆಳಕು ಕೊಡುವದಿಲ್ಲವು. ಅದು ಆಕಾಶದಂತೆ ನಿರವಯವಾದದ್ದಾಗಿಯೂ, ಸ್ಥಿತಿಲಯವಿಲ್ಲದ್ದಾಗಿಯೂ ಸ್ಥಾನಶೂನ್ಯವಾದದ್ದಾಗಿಯೂ ಇರುತದೆ. ನಿರ್ವಾಣಪದ ಪ್ರಾಪ್ತಿಯುಳ್ಳವರಿಗೆ ಮಾತ್ರವೇ ಅದು ಲಭಿಸುವದಲ್ಲದೆ ಇತರರದಂ ಪಡೆಯಲಸಾಧ್ಯವು. ಹೂ ರ್ವಾಸ್ತ್ರವು ಯವಾಗುವಾಗಲೂ, ಅಗ್ನಿಯ ಪ್ರಜ್ವಲನವು ನಿಂತುಹೋಗುವಾಗಲೂ, ದೀಪವು ಆರಿಹೋಗುವಾಗಲೂ, ಜ್ವಾಲೆಯು ಅದೃಶ್ಯವಾದಾಗ್ಯೂ, ತದಾಧಾರಭೂತವಾದ ವಸ್ತು ಮಾತ್ರವಲ್ಲದೇ ನಶಿಸಿಹೋಗುವದಿಲ್ಲವು. ಪೂರ್ವದೊಳು ದೃಶ್ಯವಾನವಿದ್ದ ರೂಪವೀಗ ಹೋಯಿತೇ ಹೊರತು ಭಿನ್ನಾವಸ್ಥೆಯಲ್ಲಿ ರೂಪಾಂತರದೊಡನೆ ಅದು ಇಲ್ಲದೇ ಹೋಗಲಿಲ್ಲವು. ದೀಪಜ್ವಾಲೆಯನ್ನು ಮನುಷ್ಯನ ಮರಣವನ್ನು ನಿರೂಪಿಸಿ ಹೋಲುವದಾದರೆ ಅದು ಸಂಪೂರ್ಣ ನಾಶವಾಗಲಾರದಾಗಿ ರೂಪಾಂತರವನ್ನೈದುವ ದೀಪಜ್ವಾಲೆಯಂತೆ ಜೀವನ ಅವಸ್ಥಾಭೇದವೇ ನಿರ್ವಾಣವೆನ್ನಿಸಿಕೊಳ್ಳುವದು.

LOCAL AND PROVINCIAL NEWS.

ಊರ ದೇಶ ಮತ್ತು ತಾಲ್ಲೂಕುಜಾತ್ ವೃತ್ತಾಂತಗಳು

Night train.—ಈಗ್ಗೆ ವಾರಕೊಂದು ಸಲ ರಾತ್ರಿಕಾಲದಲ್ಲಿ ಬಿಡಲ್ಪಡುವ ರೈಲ್ ಗಾಡಿಯ ಪ್ರಯೋಜನವನ್ನು ಜನಗಳು ವಿಶೇಷವಾಗಿ ಹೊಂದುವಂತೆ ಕಾಣುತದೆ. ಪ್ರತಿವಾರದಲ್ಲಿಯೂ ಜನಗಳ ತುಂಬಿದ್ದ ಗಾಡಿಯಲ್ಲಿ ಸ್ವಲ್ಪವೂ ಅವಕಾಶವಿಲ್ಲದೆ ಭರ್ತಿಯಾಗಿ ಬರುತಲಿದೆ.

Town police.—ಇಲ್ಲಿನ ಟೌನ್ ಪೋಲೀಸ್ ಖಾತೆಯಲ್ಲಿ ಗತಕ್ಕೆ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಕೃಷ್ಣಯ್ಯಂಗಾರ್ರವರು ಶೀಘ್ರದಲ್ಲಿ ಅನ್ಯತ್ರ ಹೋಗಲ್ಪಡುವರೆಂತಲೂ ಅವರ ಕೆಲಸಕ್ಕೆ ಮೆ॥ ನಾರ್ಣಯ್ಯನವರು ಬರುವರೆಂಬದಾಗಿಯೂ ಪ್ರವಾದವುಂಟಾಗಿದೆ. ಇದು ಎಷ್ಟುಮಟ್ಟಿಗೆ ನಿಜವೋ ಕಾಣಬರದು.

Vacation of courts.—ಬರುವ ಬುಧವಾರ ಲಾಗಾಯತು ಮೇತಿಂಗಳ ೧ನೇ ತಾ॥ ವರೆಗೆ ಇಲ್ಲಿನ ಚೀಫ್ ಕೋರ್ಟು ಮೊದಲಾದ ಸಿವಿಲ್ ಕೋರ್ಟುಗಳೂ ಬಿಸಿಲು ಕಾಲಪ್ರಯುಕ್ತ ಮುಚ್ಚಲ್ಪಡುವವು. ಮಧ್ಯಕಾಲದಲ್ಲಿ ಚೀಫ್ ಜಡ್ಜಿಯವರಾದ ಮೆ॥ ಫ್ರ್ಯಾಮರ್‌ಯವರು ಜರೂರಿಯಾತ್ ಸಂದರ್ಭಗಳಲ್ಲಿ ಕೋರ್ಟು ನಡೆಸುವರು.

The 43 O. L. I.—ರಷ್ಯಾದವರಿಗೂ ಇಂಗ್ಲಿಷಿನವರಿಗೂ ಒಂದುವೇಳೆ ಯುದ್ಧಪ್ರಾಪ್ತವಾದ ಪಕ್ಷದಲ್ಲಿ ಶೀಘ್ರವಾಗಿಯೇ ಪರದೇಶಕ್ಕೆ ಹೋಗುವದಕ್ಕೆ ಸಿದ್ಧವಾಗಿರಬೇಕೆಂದು ಇಲ್ಲಿರುವ ೪೩ನೇ ರೆಜಿಮೆಂಟ್ ಆಕ್ಸ್‌ಫರ್ಡ್ ಲೈಟ್ ಇನ್‌ಫಂಟ್ರಿ ಫೌಜ್ ಕಮಾಂಡಿಂಗ್ ಆಫೀಸರರಿಗೆ ತಂತಿ ಮೂಲಕ ಆರ್ಡರ್ ದುರುಂ ಬಂದಿರುವಂತೆ ಗತ ಶನಿವಾರದ ಊರ ದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತದೆ.

The adultary case.—ಕಳೆದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ರೈಲ್ ಮಾರ್ಗವಾಗಿ ಮೈಸೂರಿಂದ ಇಲ್ಲಿಗೆ ಬಂದ ಕೃಷ್ಣಾಭಾಯಿ ಯೆಂಬೊಬ್ಬ ಠಕಪುತ್ರಿಯಾದುದಾಗಿಯುನ್ನ ಇಲ್ಲಿನ ಪೋಲೀಸ್ ಸಿಬ್ಬಂದಿಗೆ ಸೇರಿದ ಕೃಷ್ಣನಾಕ್ ಯೆಂಬ ಕಾನ್‌ಸ್ಟೇಬಲ್ ಮರೆಮಾಡಿದನೆಂದು ಮೊದಲು ತರಲ್ಪಟ್ಟ ಮೊಕದ್ದಮೆಯ ಸ್ವರೂಪವನ್ನು ಆ ತರುವಾಯ ಬದಲಾಯಿಸಿ ಹರಾಸೀಯಾಗಿದ್ದ ಅಂಶವನ್ನು ಅವಳನ್ನು ಪತ್ತೆಮಾಡತಕ್ಕವರಿಗೆ ಇನಾಂ ಕೊಡುವಂತೆ ಸರ್ಕಾರದವರು ಪ್ರಕಟಿಸಿದ್ದದನ್ನು ಬಳಿಕ ಅವಳು ದೊರೆತು, ಮೇಲ್ಕಂಡ ಕಾನ್‌ಸ್ಟೆಬಲ್ ಮೇಲೆ ಅಕ್ರಮ ಸ್ತ್ರೀಸಂಗ ಮಾಡಿದ ಕಂಪ್ಲೇಂಟ್ ಬಸ್ತ್ಯಪಾದನೆಯಾಗಿ ಸೆಷನ್ಸ್ ವಿಚಾರಣೆಗೆ ಕಮ್ಮಿಟ್ ಮಾಡಲ್ಪಟ್ಟಿದ್ದ ಅಂಶವನ್ನು ಈ ಪತ್ರಿಕಾ ಮೂಲಕ ಈ ಮುಂಚೆಯೇ ತಿಳಿಸಿಯಿರುತ್ತೇವೆಯಷ್ಟೆ. ನಾವೀಗ ಹೇಳುವದೇನೆಂದರೆ ೨೬ನೇ ತಾರೀಖಿನಲ್ಲಿ ಪ್ರತ್ಯೇಕವಾಗಿ ಈ ಮೊಕದ್ದಮೆ ಹೋಸ್ಟರ ಪರ್ಯಾಪ್ತಿಸಿದ್ದ ಸೆಷನ್ನಲ್ಲಿ ಚೀಫ್ ಜಡ್ಜಿಯವರಾದ ಮೆ॥ ಫ್ರ್ಯಾಮರ್‌ಯವರು ದರ್ಯಾಪ್ತಿಮಾಡಿ ಅಸೆಸರ್‌ಗಳ ಅಭಿಪ್ರಾಯವನ್ನು ಅಂಗೀಕರಿಸಿ, ಅಪರಾಧಿಯನ್ನು ಗತ ಶುಕ್ರವಾರದದಿನ ೧೩ನೇ ತಾ॥ ಖುಲಾಸೆ ಮಾಡಿದರು. ಫಿರ್ಯಾದ್ ತರಫ್, ಗವರ್ನಮೆಂಟ್ ಪ್ರಾಸಿಕ್ಯೂಟರ್ ಮೆ॥ ಶಂಕರರಾಯರೂ, ಮೆ॥ ಟಿ. ಭೀಮರಾಯರೂ, ಹಾಜರಾಗಿದ್ದರು. ಅಪರಾಧಿಯ ತರಫ್ ಅಡ್ವೋಕೇಟ್ ಮೆ॥ ಸ್ಮಿತ್‌ಯವರೂ, ಮೆ. ಶೇಷಗಿರಿರಾಯರೂ, ಹಾಜರಾಗಿದ್ದರು. ಉಭಯ ಪಕ್ಷವಾದಗಳೂ ಪೂರೈಸಿದ ಬಳಿಕ ಜಡ್ಜಿಯವರು, ಫೈದಿಯನ್ನು ಖುಲಾಸೆ ಮಾಡುವದಕ್ಕುಂಟಾದ ಅನೇಕ ಕಾರಣಗಳನ್ನು ಕಮ್ಮೀಲಾಗಿ ಕೋರ್ಟು ಇಂಟರ್‌ಪ್ರಿಟರ್ ಮೂಲಕ ಅಸೆಸರ್‌ಗಳಿಗೆ ತಿಳಿಯಪಡಿಸಿದರು. ಜಡ್ಜಿಯವರು ನಮೂದಿಸಿದ ಕಾರಣಗಳಲ್ಲಿ ಮುಖ್ಯವಾದವನ್ನು ಮಾತ್ರ ಇಲ್ಲಿ ತಿಳಿಸುವೆವು: ಈ ಮೊಕದ್ದಮೆಗೆ ಪ್ರಾಧಾನ್ಯವಾಗಿರುವ, ಕೃಷ್ಣಾಭಾಯಿಯೆಂಬವರು ಪೂರ್ವದಿಂದಲೂ, ಪರಪುರುಷರಲ್ಲಿ ವೆಂಬ ಅಂಶ ಪರಸ್ಪರವಿರುದ್ಧವಾದ ಅವಳ ಕೈಫಿಯತ್ತಿನಿಂದಲೂ, ನಿಸ್ಸಹಾಯಳಾಗಿ ಗಂಡನ ಮನೆಯಿಂದ ಅಪಹರಿತಳಾದ ಮೊದಲನೆ ವ ರಾತ್ರಿಯಾಗಿ ಬಂದು ಬಿಟ್ಟದ್ದರಿಂದಲೂ, ಇವುಗಳ ವಿಸ್ತಾರವೇನೆಂದು(?) ಗಿದ್ದನಂತರಿಂದಲೂ ಸ್ಪಷ್ಟವಾಗುತದೆ. ಅವಳನ್ನು ರೈಲ್ವೆ ಸ್ಟೇಷನಿಂದ ಅಪರಾಧಿಯು ಕರೆದುಕೊಂಡು ಹೋದದ್ದು ಮಾತ್ರ ಸಾಕ್ಷಿಗಳಿಂದ ರುಜುವಾತಾ ಯಿತೇ ಹೊರತು ಅಪರಾಧಿಯು ಸಂಭೋಗಮಾಡಿದನೆಂಬದನ್ನು ನೋಡಿದವರೊಬ್ಬರೂ ಇಲ್ಲವಾಗಿ ಆ ಅಂಶ ಸಾಬೀತಾಗಲಿಲ್ಲವು. ಅವರು ಬಾವಿಕೆರೆಯೆಂಬದಕ್ಕೆ ಅವಳ, ಮತ್ತು ತನ್ನ ಹೆಂಡತಿಯೆಂದು ಹೇಳುವ ಫಿರ್ಯಾದಿಯ ಕೈಫಿಯತ್ತಿನ ಹೊರತು ಅವರ ದಾಂಪತ್ಯವು ಇತರರ ಮೂಲಕ ರುಜುವಾತಾಗಲಿಲ್ಲವು. ಏನಮಾಡಿ ಇನ್ನೂ ಕೆಲವು ಕಾರಣಗಳನ್ನು ಹೇಳಿದನಾಗಿ ಈ ಮೊಕದ್ದಮೆಯು, ಯಾಕೋ ಕೆಲವರ ಪ್ರೇರಣೆಯಿಂದ ತರಲ್ಪಟ್ಟದ್ದಾಗಿ ತೋರುವದರಿಂದ ಇದರಲ್ಲಿ ಒಬ್ಬ ಪೋಲೀಸ್ ಆಫೀಸರರ ಹೆಸರು ವ್ಯರ್ಥವಾಗಿ ನಮೂದಿಸಲ್ಪಟ್ಟದ್ದಾಗಿ ತೋರುವದರಿಂದ ಪ್ರಕೃತ ಅಪರಾಧಿಯಾಗಿರುವ ಫೈದಿಯ ಮೇಲೆ ಯಾವದಾಗಲಿಯೂ ತಪ್ಪು ರುಜುವಾತಾಗದ ಕಾರಣ ಖುಲಾಸೆ ಮಾಡಿದೇನೆಂಬದು. ಈ ಮೊಕದ್ದಮೆಯು ವ್ಯಭಿಚಾರಕ್ಕೆ ಸಂಬಂಧಪಟ್ಟದ್ದರಿಂದಲೂ ಇದರಲ್ಲಿ ಒಬ್ಬ ಪೋಲೀಸ್ ಸಂಬಂಧಿಸಿರುವದರಿಂದಲೂ ಇದನ್ನು ನೋಡುವದಕ್ಕೋಸ್ಕರ ವಿಚಾರಣೆ ಮಾಡಿದ ಎರಡು ದಿನದಲ್ಲಿಯೂ, ಕೋರ್ಟಿನಲ್ಲಿ ಸ್ಥಳವಿಲ್ಲದಂತೆ ಜನಗಳು ಬಂದು ಜಮಾಯಿಸಿದ್ದರು. ಈ ಮೊಕದ್ದಮೆಯ ವ್ಯಾಪ್ತಾಂಶವು ಹ್ಯಾಗಿದ್ದಾಗ್ಯೂ ಅದು ಬಿಡುಗಡೆ ಮೂಲಕ ಪರಿಣಾಮವನ್ನು ಹೊಂದಿದ್ದರಿಂದ ಇದರ ಕೊನೆ ಮುಕ್ತಾಯವಾದಂತೆ ಹೇಳಬಹುದಾಗಿರುತದೆ.

TELEGRAPHIC SUMMARY.

ತಂತಿವೃತ್ತಾಂತ.

ಸುವಾಕಿಂ, ೨೧ನೇ ಮಾರ್ಚಿ.—ಈ ತಿಂಗಳ ೨೦ನೇ ತಾ॥ನಲ್ಲಿ ಹಷೀನ್ ಬೆಟ್ಟದ ಹತ್ತಿರ ನಡೆದ ಯುದ್ಧವನ್ನು ಕುರಿತು ಮತ್ತಷ್ಟು ತಿಳಿಯಬರುವದೇನೆಂದರೆ—ಜನರಲ್ ಗ್ರಾಹಾಂ ಯವರ ಸೇನೆಯು ಶತ್ರುಗಳ ಮೇಲೆ ಬಿದ್ದು ಹೊಡೆಯಬೇಕೆನ್ನಲು ಅವರು ಟಾಮಾಯ್ ಮೇಲಿನ ಪ್ರದೇಶದ ಬಳಿ ಬಲಗುಂಪು ಸೇರಿದರು. ಈ ಯುದ್ಧದಲ್ಲಿ ಬ್ರಿಟಿಷರವರ ಕಡೆ, ಇಂಡ್ಯದೇಶದಿಂದ ಬಂದ ಸೇನೆಯವರಿಗೆ ೧೭ ಜನ ಸೇನೆ, ೩೦ ಮಂದಿ ವೃಕ್ಷ ಹಟ್ಟರು. ಸರದಾರರವರಿಗೆ ೧೨ ಮಂದಿ ಸೇನೆ ೮೮ ಮಂದಿಗೆ ಗಾಯಗಳು ತಗಲಿದವು. ಬಂಗಾಳದೇಶದ ಕ್ಯಾವಲ್ರಿ ಸೇನೆಗೆ ಸೇರಿದ ಮೇಜರ್ ರಾಬರ್ಟ್‌ಸನ್ ಯವರಿಗೆ ಹೊಡೆಯಲ್ಲಿ ಗಾಯಗಳಾದವು. ಈ ಯುದ್ಧಕ್ಕೆ ಸೇರಿದ್ದ ಇಂಡ್ಯದೇಶದ ಸಹಾಯ ಸೇನೆಯು ಬಹಳ ಧೈರ್ಯಸಾಹಸಗಳೊಡನೆ ಮರುಭೂಮಿಯಲ್ಲಿ ಶತ್ರುಗಳ ಮೇಲೆ ಬಿದ್ದು ಹೊಡೆದು ಅವರಲ್ಲಿ ಪ್ರಬಲವಾಸಿಯನ್ನುಂಟುಮಾಡಿತು.

ಸುವಾಕಿಂ, ಅರ್ಧರಾತ್ರಿ.—ಸೇನೆಯು ಈದಿನ ಬೆಳಿಗ್ಗೆ ಹೊರಟು ಹೋಗಿ ಟಾಮಾಯ್ ಮಾರ್ಗದಲ್ಲಿ ಹೋಗುವ ದಾರಿಯಲ್ಲಿ ಆರು ಮೈಲ್‌ಗಳ ಫಾಸಲೆಯೊಳು ಒಂದು ಅಡ್ಡಕಟ್ಟೆಯನ್ನು ಕಟ್ಟಲು ನಾಲ್ಕುಸಾವಿರ ಮಂದಿ ಕೆಲಸಗಳು ಮೇಲಿರಿಸಲು ಇವರ್ತ್ರುನಿಯುಗಳ ಕಾಲ ಯುದ್ಧನಡೆದು ಶತ್ರುಗಳಲ್ಲಿ ೧೦೦೦ ಮಂದಿ ಕೊಲ್ಲಲ್ಪಟ್ಟರು. ಬ್ರಿಟಿಷರವರ ಕಡೆ ಏಳುಮಂದಿ ಆಫೀಸರ್‌ಗಳೂ ೫೧ ಮಂದಿ ಸೈನಿಕರೂ ಕೊಲ್ಲಲ್ಪಟ್ಟರು. ೧೨೦ ಮಂದಿಗೆ ಗಾಯಗಳಾದವು.

೧೩ನೇ ಬಂಗಾಳ ಸವಾರ್ ಸೇನೆಯೂ ೮ನೇ ಬಿಲ್ಡರ್ ಸ್ಕ್ವಾಡ್ರನ್ ಸೇನೆಯೂ, ಗ್ಯಾರಿಸನ್ ನಾಗರಿಕರು ಹಾದಿಗೆ ಹೋಗುವಂತೆ ಹುಕುಂ ಆಯಿತು. ರಾವಲ್‌ಪಿಂಡಿಯಲ್ಲಿರುವ ಸೈನ್ಯವು ಅಮೀರರ ಸಂಗಡ ಕಾಬೂಲಿಗೆ ಹೋಗುವದಕ್ಕಲೂ ಅಲ್ಲಿ ಅಮೀರರವರ ಸೈನ್ಯದೊಡನೆಯಲ್ಲಿ ಕೆಲವು ಟಾಗುಬಹುದೆಂತಲೂ ನೇಟಿವ್‌ಗಳು ನಂಬಿರುತ್ತಾರೆ.

ಲಂಡನ್, ೨೧ನೇ ಮಾರ್ಚಿ.—ಜನರಲ್ ಗ್ರಾಹಾಂ ಯವರು ತಂತಿ ಮೂಲಕ ತಿಳಿಸುವದೇನೆಂದರೆ—ತಮ್ಮ ಸೇನೆಯು ನಿನ್ನೆಯ ದಿನ ಪ್ರಾತಃಕಾಲ ಹೊರಟುಹೋಗಿ ಶತ್ರುಗಳೊಡನೆ ಘೋರಯುದ್ಧ ನಡೆದು ಶತ್ರುಗಳು ಹಷೀನ್ ಯೆಂಬ ಸ್ಥಳಕ್ಕೆ ಆಸ್ ಪಾಸ್‌ನಲ್ಲಿರುವ ಬೆಟ್ಟಗಳ ಮೇಲಿದ್ದ ಶತ್ರುಸಮೂಹವನ್ನು ಓಡಿಸಿಬಿಟ್ಟಿತು. ಆವರ ಕಡೆ ೮೦೦ ಮಂದಿ ಇದ್ದರು. ತರುವಾಯ ನಾವು ತಮ್ಮ ಸೇನೆಯೊಡನೆ ಟಾಮಾಯ್‌ ಯೆಂಬ ದಿಕ್ಕಿಗೆ ಹೊರಟು ಹೋದರು. ಈ ಯುದ್ಧದಲ್ಲಿ ಲೆಫ್ಟಿನೆಂಟ್ ಡಾಲಿಸನ್ ಯವರೂ ಒಂಬತ್ತು ಮಂದಿ ಸೈನಿಕರೂ ಕೊಲ್ಲಲ್ಪಟ್ಟರು.

ಡಾರ್ಲಿ ಮತ್ತು ಮೇಜರ್ ರಾಬರ್ಟ್‌ಸನ್ ಯವರಿಗೆ ಜಖಂ ಆಯಿತು. ಡಾಕ್ಟರ್ ಲೇನ್ ಮತ್ತು ೩೩ ಮಂದಿಗೆ ಬಲವಾದ ಘಾಯಗಳು ತಗಲಿದವು. ಶತ್ರುಗಳಲ್ಲಿ ಪ್ರಾಣಹಾನಿ ಬಲವಾಗಿ ಆಯಿತು, ಎಂಬದು.

ಈ ಯುದ್ಧವನ್ನು ಕುರಿತು ಲಾರ್ಡ್ ವೂಲ್ಸ್ಲೀಯವರಿಗೆ ತಂತಿಮೂಲಕ ತಿಳಿಸುವಲ್ಲಿ ಜನರಲ್ ಗ್ರಾಹಾಂಯವರು ಇಂಡ್ಯದೇಶದ ಸೇನೆಯನ್ನು ಬಹಳ ಹೊಗಳುತ್ತಾರೆ.

ಲಂಡನ್, ೨೪ನೇ ಮಾರ್ಚಿ.—ಆದಿತ್ಯವಾರದದಿನ ಟಾಮಾಯ್‌ಯೆಂಬ ಪ್ರದೇಶದ ಬಳಿ ನಡೆದ ಯುದ್ಧದಲ್ಲಿ ಲೆಫ್ಟಿನೆಂಟ್ ಸ್ವಿಂಟನ್ ಮತ್ತು ನೀಬೋರ್ ಈ ಇಬ್ಬರು ಆಫೀಸರ್‌ಗಳು ಕೊಲ್ಲಲ್ಪಟ್ಟರು. ಮೃತಪಟ್ಟವರಲ್ಲಿ ಯಿನ್ನು ಕೆಲವರ ಹೆಸರು ಗೊತ್ತಾಗಲಿಲ್ಲವಾಗಿ ತಪ್ಪಿಲ್ಲದೆ ತಿಳಿಸುವದಕ್ಕೆ ಈಗ ಸಾಧ್ಯವಾಗುವದಿಲ್ಲವು.

ಮುಂಬೈ, ೨೩ನೇ ಮಾರ್ಚಿ.—ರಾವಲ್‌ಪಿಂಡಿಗೆ ಸೈನ್ಯಗಳೂ ಸರಂಜಾಮುಗಳೂ ಬಹಳವಾಗಿ ಬಂದು ಸೇರುತಲಿರುವಂತೆ ವರ್ತಮಾನ ಬಂದಿರುತದೆ.

ಹಿಲ್ಲಗಡಿಯ ಪ್ರಬಲಸನ್ನಾಹಗಳು ನಡೆಯುತಲಿರುವದರಿಂದ ಡಿಸ್ಟ್ರಿಕ್ಟ್ ಸಿಯಾಲ್‌ಕೋಟ್ ಸ್ವಲ್ಪ ಕಳುಹಿಸಲ್ಪಡಬಹುದಾಗಿ ಕಾಣುತಿದೆಯೆಂದು ಲಾಹೂರ್‌ನಿಂದ ಇಂಡ್ಯ ಟ್ರಿಬ್ಯೂನ್ ಪತ್ರಿಕೆಗೆ ವರ್ತಮಾನ ಬಂದಿರುತದೆ.

ಕಾಬೂಲ್ ಅಮೀರರವರು ಪೇಷಾವರ್‌ನಿಂದ ರಾವಲ್‌ಪಿಂಡಿಗೆ ರೈಲ್ ಗಾಡಿಯ ಮೇಲೆ ಬರುವದಕ್ಕೆ ಸಮ್ಮತಿಸಲಿಲ್ಲ ವೆಂತಲೂ ವೈಸ್‌ರಾಯರವರ ಗಾಡಿಯಲ್ಲಿ ಹೋಗಬೇಕೆಂದು ನಿರೀಕ್ಷಿಸುವಂತೆಯೂ, ತಿಳಿಯಬರುತದೆ. ಅಮೀರರವರು ಬ್ರಿಟಿಷ್ ರಾಜ್ಯದೊಳಗೆ ಬರುವ ವಿಷಯದಲ್ಲಿ ನೇಟಿವ್ ಜನರು ಸಂಶಯಿಸುತ್ತಾರೆ.

ಲಂಡನ್, ೨೬ನೇ ಮಾರ್ಚಿ.—ಯುದ್ಧಕ್ಕೆ ಸಾಧ್ಯವಾದಮಟ್ಟಿಗೆ ನಾವಗಳನ್ನೆಲ್ಲ ಸಿದ್ಧಪಡಿಸುವಂತೆ ನಾವಿಯಲಾರ್ಡುಗಳಿಂದ ಹುಕುಂ ಆಗಿರುತದೆ.

ಇಂಗ್ಲಿಷಿನವರೂ ರುಶ್ಯದವರೂ ಬಂದಾಗುವ ವಿಷಯದಲ್ಲಿ ಉಭಯಸಂಸ್ಥಾನದವರಿಗೂ ಸಂಧಿಗಳು ನಡೆಯುತಲಿರುವದರಿಂದ ಸಮಾಧಾನವುಂಟಾಗಿದೆ.

ಲಂಡನ್‌ಪಟ್ಟಣದ ವ್ಯಾಪಾರಸಂಘದವರಿಗೆ ಬಂದಿರುವ ಸ್ಮರಣಪತ್ರ ಅಫಘಾನ್ ಹೋಗುವಲ್ಲಿ ಬಹ್ಮಗಾದವನ್ನು ಬ್ರಿಟಿಷ್ ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಗವರ್ನ್‌ಮೆಂಟಿನವರು ನಿರ್ಣಯಿಸಿರುವಂತೆ ಲಾರ್ಡ್ ಡಫರಿನ್‌ಯವರು ಕೇಳಿದರು. ಬಹ್ಮಸಂಸ್ಥಾನದವರೊಡನೆ ಸ್ನೇಹವನ್ನು ಬೆಳೆಸುವದಕ್ಕೆ ಲಾರ್ಡ್ ಡಫರಿನ್‌ಯವರು ಒಳ್ಳೆಯ ಉಪಾಯವನ್ನು ಆಲೋಚಿಸುತಲಿರುವದಾಗಿ ಮತ್ತು ತಿಳಿಸಿದರು.

ಮುಂಬೈ, ೨೫ನೇ ಮಾರ್ಚಿ—ಕೆಲಸದಿಂದ ನಿವೃತ್ತರಾಗಿ ಇಂಡ್ಯದೇಶದಲ್ಲಿ ವಾಸವಾಗಿರುವ ಮಿಲಿಟರಿ ಆಫೀಸರ್‌ಗಳು, ಜರೂರು ಕಾಲದಲ್ಲಿ ಸರ್ಕಾರದ ಕೆಲಸಗಳಿಗೆ ಉಪಯುಕ್ತರನ್ನಾಗಿ ಮಾಡಲ್ಪಡಬಹುದೆಂದು ಇಂಡ್ಯ ಗವರ್ನ್‌ಮೆಂಟಿನವರು ನಿರ್ಣಯಿಸಿರುತ್ತಾರೆ.

ರಷ್ಯಾದೇಶದವರೊಡನೆ ಯುದ್ಧನಡೆಯುವಪಕ್ಷಕ್ಕೆ ಕೌಂಟ್ ಇಂಡ್ಯದೇಶದಲ್ಲಿರಬೇಕೆಂದು ಡ್ಯೂಕ್ ಆಫ್ ಕಾನಾಟ್‌ಯವರು ಕೋರಿಕೊಂಡಿರುತ್ತಾರೆ. ಆದರಿಂದ ಅವರ ಪ್ರಯಾಣಕಾಲ ನಿರ್ಣಯವಿಲ್ಲದೆ ಸದ್ಯ ಮನ್ನಾಮಾಡಲ್ಪಟ್ಟಿದೆ.

ಸರ್ ಡಾನಾಲ್ಡ್ ಸ್ಟುವರ್ಟ್‌ಯವರು ಕ್ವೆಟಾಗೆ ಯುದ್ಧಕ್ಕಾಗಿ ಹೋಗುವ ಸೇನೆಯ ಕಮಾಂಡರಾಗಿ ಹೋಗುವರು.

ಮುಂಬೈಯಲ್ಲಿ ಟ್ಯೂಟರ್ ಎಟಿ ಟಿಕೆಟ್‌ಗಳು ಮೂರು ಮಾರಹೋದರೆಲೂ ಹಾಗೆ ಯಾವಾಗಲೂ ಇಷ್ಟು ಮಾಡಿದರೆ ಅವರ ಮೇಲೆ ಲಾರ್ಡ್ ಕರ್ತವ್ಯ ದುಃಖಕರೆಂದಲೂ ಮುಂಬೈ ಗವರ್ನ್‌ಮೆಂಟಿನವರು ಒಂದು ನಿರ್ಣಯಮಾಡಿ ಪ್ರಚುರಮಾಡಿರುತ್ತಾರೆ.

ಮುಂಬೈ ಗವರ್ನರಾಗಿ ನೇಮಿಸಲ್ಪಟ್ಟ ಲಾರ್ಡ್ ರೇ ಯೆಂಬವರು ಸೋಮವಾರದದಿನ ಬಂದು ಸೇರುವದಾಗಿ ನಿರೀಕ್ಷಿಸಲ್ಪಟ್ಟಿದಾರೆ.

ಹೆರಾತ್ ಪ್ರಾಂತದಲ್ಲಿ ರಷಿಯಾದವರೆಲ್ಲರು ಒಂದುಕಡೆ ಗುಂಪುಕೂಡುತಲಿರುವಂತೆ ತಿಳಿಯಬರುತದೆ. ಹೆರಾತ್ ಪಟ್ಟಣದ ರಕ್ಷಣೆಯಬಗ್ಗೆ ಪ್ರಯತ್ನಗಳು ನಡೆಯುತಲಿವೆ, ೧೦ ಸಾವಿರ ಕೋರ್‌ಲ್ ಸೇನೆಯೊಡನೆ ಕುಶಕಿ ಬಂದಕ್ಕೆ ೨೫ ಸಾವಿರ ಹೋಗಿ ಮರವು ಕುಶಕಿ ಸೈನ್ಯವನ್ನು ಯುದ್ಧಸನ್ನಾಹದೊಡನೆ ಇಟ್ಟರಬೇಕೆಂದು ಯೋಚಿಸಲ್ಪಟ್ಟಿದೆ. ಡ್ಯೂಕ್ ಆಫ್ ಕಾನಾಟ್‌ಯವರು ಒಂದು ಡಿವಿಜನಿಗೆ ಕಮಾಂಡರಾಗುವರು ಮುಂಬೈ ಶೇಖಿನಲ್ಲಿರುವ ದೊರೆಯು ಯುದ್ಧ ಜಹಾಜಗಳೂ ಯುದ್ಧಕ್ಕೆ ಸನ್ನದ್ಧವಾಗಿ ಮಾಡಲ್ಪಟ್ಟಿವೆ.

ಹಾಂಗ್‌ಕಾಂಗ್, ೨೮ನೇ ಮಾರ್ಚಿ.—ಫ್ರಾನ್ಸಿನವರ ಸೇನೆಯು ಮೂರುದಿನಗಳಕಾಲ ಚೀನಾದೇಶೀಯರೊಡನೆ ಯುದ್ಧಮಾಡಿದ ತರುವಾಯ ಅವರಿಂದ ಹಿಂದಕ್ಕೆ ಹೊಡೆಯಲ್ಪಟ್ಟು ಹೊರಟುಹೋದರು. ಮೃತಪಟ್ಟವರೂ ಘಾಯಗಳಿದವರೂ ಸೇರಿ ಫ್ರೆಂಚಿನವರ ಕಡೆ ೨೦೦ ಮಂದಿಯಷ್ಟಾದರು.

ಮುಂಬೈ, ೨೮ನೇ ಮಾರ್ಚಿ.—ಮಧ್ಯ ಏಷ್ಯಾರಾಜ್ಯದಲ್ಲಿ ಮೆಲ್ಲಗೂ ಅನುಕ್ರಮವಾಗಿ ಇಂಗ್ಲಾಂಡಿನವರಿಗೂ ರಷ್ಯಾದೇಶೀಯರಿಗೂ ಸಮಾಧಾನ ಮಾತುಗಳು ಒಂದು ನಿರ್ಣಯಕ್ಕೆ ಬರಲಿಲ್ಲವು. ಕಲಹಕ್ಕೆ ಕಾರಣಭೂತಗಳಾದ ಅಂಶಗಳೆಲ್ಲವು ದಿನೇದಿನೇ ವೃದ್ಧಿಯಾಗುತ ಬರುತಿವೆ. ಈಗ ಇಂಗ್ಲಾಂಡಿನಲ್ಲಿರುವ ಇಂಡ್ಯದೇಶದ ಆಫೀಸರ್‌ಗಳೆಲ್ಲರು ಯುದ್ಧವು ಆಸನ್ನವಾಗಿರುವಂತೆ ಅಭಿಪ್ರಾಯಪಡುತ್ತಾರೆ, ಯೆಂದು ಪತ್ರಿಕೆ ಲಂಡನ್ ಪಟ್ಟಣದಿಂದ ಮುಂಬೈ ಗೆಜೆಟ್ ಪತ್ರಿಕೆಗೆ ವರ್ತಮಾನಬಂದಿರುತದೆ.

ಆವಶ್ಯಕ ಬಂದಪಕ್ಷದಲ್ಲಿ ಸೈನ್ಯ ಸೈನ್ಯಗಳೊಡನೆ ಕೆಲಸಗಳನ್ನು ನೆರವೇರಿಸಬೇಕೆಂದು ಮಹಾರಾಜ್ಞೀಯವರ ಮುದ್ರೆಯೊಡನೆ ಪ್ರಕಟಿಸುವರು ನಿರ್ಣಯಿಸಿರುತ್ತಾರೆ.

ಕಾಕೇಸಸ್ ಪ್ರಾಂತದಿಂದ ೨೦ ಸಾವಿರ ಮಂದಿ ರಷಿಯಾ ದೇಶದವರು, ಯುದ್ಧಕ್ಕೆ ಬೇಕಾದ ಮದ್ದು ಗುಂಡು ಹತ್ಯಾರ ಸಾಮಾನುಗಳೊಡನೆ ಹೆರಾತ್ ದೇಶಕ್ಕೆ ಹೋಗುತಲಿದಾರೆ.

ಪರದೇಶದಲ್ಲಿರುವ ಇಂಡ್ಯದೇಶದ ಆಫೀಸರ್‌ಗಳು ಜರೂರು ವಾಪಸ್ ಬರುತಲಿದಾರೆ, ಅವರಕ್ಕೈಗೆ ೫ ಸಾವಿರ ನಿಶ್ಚಯಿಸಿದ ಪ್ಯಾಸ್‌ಗಳು ಹಡೆದರು.

ಕಾಶ್ಮೀರದ ಮಹಾರಾಜರವರು ರಷಿಯಾ ಸರ್ಕಾರದವರೊಡನೆ ರಾಜದ್ರೋಹಕರವಾದ ಕಾಗದಪತ್ರಗಳು ನಡೆಸಿದಂತೆಯೂ ಅದಕ್ಕಾಗಿ ದಸ್ತಗಿರಿಯಿಂದ ಸಿಂಹಾಸನಭ್ರಷ್ಟರಾಗಿ ಮಾಡಲ್ಪಟ್ಟಂತೆಯೂ ಸಿಂಲಾನಲ್ಲಿ ಪ್ರವಾದವುಂಟಾಗಿದೆ.

ರಾವಲ್‌ಪಿಂಡಿ ಸಂಗತಿಗಳು ಪರಿಹಾರವಾಗಿ ಅಮೀರರವರು ರೈಲ್ ಮಾರ್ಗವಾಗಿ ಬರುತ್ತಾರೆ.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಹೊರಡಿಸಲಾದ ಇಷ್ತಿಹಾರ್ ನಾಮೆಗಳು.

ನಂ ೨೪೪, ತಾ॥ ೨೮ನೇ ಮಾರ್ಚಿ.—ಬರುವ ಏಪ್ರಿಲ್ ೧ನೇ ತಾರೀಖು ಬೃಹಸ್ಪತಿವಾರ ಮೊದಲು ೩ನೇ ತಾರೀಖು ಶನಿವಾರವರೆಗೆ ಉಗಾದಿ ರಜಾ ಸೇರಿ, ಈಸ್ಟರ್ ಹಬ್ಬದಬಗ್ಗೆ ಮೈಸೂರುದೇಶದ ಎಲ್ಲಾ ಸರ್ಕಾರ್ ಆಫೀಸುಗಳೂ ಬಂದುಮಾಡಲ್ಪಡುವವು. ಈ ರಜಾಕಾಲದಲ್ಲಿ ಜರೂರಾದ ಕೆಲಸಗಳನ್ನು ನಡೆಸಬೇಕಾದ ವಿಷಯದಲ್ಲಿ ಆಯಾಯ ಇಲಾಖಾ ಮೇಲ್ತನಿಖೆದಾರರಿಂದ ಏರ್ಪಾಡುಗಳು ಮಾಡಲ್ಪಡಬೇಕು. ಈ ಹುಕುಂ ಕಾಲ್ನಡ ಕಚೇರಿಗಳೂ ಜಮಾಬಂದೀ ಕೆಲಸ ಪೂರೈಸಿರದ ಡಿಸ್ಟ್ರಿಕ್ಟುಗಳಿಗೂ ಅನ್ವಯಿಸುವದಿಲ್ಲವು.

ಹುಕುಂ ನಂ. ೩೦೭, ತಾ॥ ೨೧ನೇ ಮಾರ್ಚಿ.—ಚಿಕ್ಕಬಳ್ಳಾಪುರದ ಮುನಸಫ್ ಮಿ. ಜಿ. ಟಿ. ಚಾಂಡರ್‌ಲೋರ್ ಯವರು ಚಿಕ್ಕಮಗಳೂರಿಗೆ ವರ್ಗಮಾಡಲ್ಪಟ್ಟಿದಾರೆ.

ಹುಕುಂ ನಂ. ೩೧೧.—ಮೈಸೂರು ಫರ್ಸ್ಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ. ಎಚ್. ಬಿ. ಕ್ರೆಗ್ ಯವರು ೧೯ನೇ ಮಾರ್ಚಿ ೨೦ನೇ ತಾರೀಖು ಲಾಗಾಯತು ಅಥವಾ ಅವರು ಹೊರಡುವದಿನದ ಮೊದಲು ಮೆಡಿಕಲ್ ಸರ್ಟಿಫಿಕೇಟಿನಮೇಲೆ ೩ ತಿಂಗಳ ರಜೆ ಕೊಡಲ್ಪಟ್ಟಿದಾರೆ.

ಹುಕುಂ ನಂ ೩೧೯, ತಾರೀಖು ೨೩ನೇ ಮಾರ್ಚಿ.—ಸಾಗರದ ಮುನಸಫ್ ಮತ್ತು ಫರ್ಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ. ನರಸಿಂಹಯ್ಯಂಗಾರ್ರವರು ಕ್ರಿಮಿನಲ್ ಪ್ರೊಸೀಜರ್ ಕೋಡ್ ೩೩೫ನೇ ಸೆಕ್ಷನಿಗೆ ಸೇರಿದ ಸಂಬಂಧಗಳನ್ನನುಸರಿಸಿ ಫಿರ್ಯಾದುಗಳ ವಿಚಾರಣೆ ನಡೆಸಿ ಸ್ವಂತ ಆಧಿಕಾರದಲ್ಲಿ ತೀರ್ಮಾನಿಸಲು ಅಧಿಕಾರ ಕೊಡಲ್ಪಟ್ಟಿದಾರೆ

ನೋಟೀಸ್.

ಬೆಂಗಳೂರು ಕಮ್ಮರ್ಷಿಯಲ್ ಬ್ಯಾಂಕ್ (ಲಿಮಿಟೆಡ್) ಆಫೀಸಿನಿಂದ

ಈಬ್ಯಾಂಕಿನ ಪಾರ್ಟಿಗಳು, ಅಂದರೆ ಸಮಸ್ತ ಬಾಕೀದಾರರಿಗೂ ಇದರಿಂದ ತಿಳಿಯಪಡಿಸುವ ದೇನೆಂದರೆ—

ಈ ಬ್ಯಾಂಕಿನ ಏಜಂಟ ಸುಬ್ಬರಾಯರು ಪಾರ್ಟಿಗಳಿಂದ ವಸೂಲಾದ ಹಣ ಮತ್ತು ಕೋರ್ಟುಗಳಿಂದ ಅಟ್ಯಾಚಾಗಿಬಂದದ್ದು ವಗೈರೇ ಹಣಗಳನ್ನು ಬ್ಯಾಂಕಿಗೆ ಜಮೆಕಟ್ಟದೆಯೂ, ಕೆಲವು ಮೊಬಲಗು ಬ್ಯಾಂಕಿನಲ್ಲಿ ಸುಳ್ಳುಖರ್ಚುಹಾಕಿ ಫೋರ್ಜರಿ ವಗೈರೇಯಿಂದ ಮುಚಿಸಿಯೂ, ಈ ಮುಂತಾದ ತಪ್ಪಿತಗಳು ನಡೆಸಿರುವದು ಲೆಕ್ಕದತನಿಖೀಯಿಂದ ಷೇರ್‌ದಾರರ ಮೀಟಿಂಗ್‌ನಲ್ಲಿ ರುಜುವಾಗಿ, ಸದರೀ ಸುಬ್ಬರಾಯರನ್ನು ಸಸ್ಪೆಂಡ್‌ಮಾಡಿ ಅವರಿಗೆಬದಲಾಗಿ ಬನಾಜೀ ಗೋವಿಂದರಾಯರನ್ನು ನಿಯಮಿಸಿ ಮಿನಿಟ್ಸ್ ಬುಕ್ಕಿನಲ್ಲಿ ಡೈರೆಕ್ಟರ್‌ಗಳು ಆರ್ಡರ್ ಮಾಡಿರುತ್ತಾರೆ. ಐಯಿಂದ ಸದರೀಬ್ಯಾಂಕಿನ ವಿಶಿಷ್ಟ ಕೆಲಸಗಳೂ ಸದರೀ ಗೋವಿಂದರಾಯರ ಮಾರ್ಫತ್ತು ನಡೆಯುವದರಿಂದ ಬಾಕೀದಾರರು ಕೊಡತಕ್ಕ ಹಣಗಳನ್ನು ಗೋವಿಂದರಾಯರ ವಶಕ್ಕೆ ಕೊಟ್ಟು ಕ್ರಮವಾಗಿ ರಸೀದಿ ಪಡೆಯಬೇಕು. ಲೇಟ್ ಏಜಂಟ ಸುಬ್ಬರಾಯರವಶಕ್ಕೆ ಕೊಡಕೂಡದು. ಒಂದುವೇಳೆ ಹಾಗೆಕೊಟ್ಟರೆ ಅದರ ಲುಕ್ಸಾನು ಕೊಟ್ಟವರನ್ನೇ ಹೊಂದಿರುತಿದೆ. ಈ ಮಜ್ಕೂರನ್ನು ಸರ್ವರೂ ಖಂಡಿತವಾಗಿ ತಿಳಿಯತಕ್ಕದ್ದು.

ಡೈರೆಕ್ಟರ್‌ಗಳು.

ತಾ॥೧೮ನೇಮಾರ್ಚಿ ೧೮೮೫ನೇ ಇಸವಿ. } ಕೃಷ್ಣರಾವ್.
ಕೆಂಚೆಹನುಮಮೇಸ್ತ್ರಿ.
ಬೊಮ್ಮಲಿಂಗಣ್ಣ.
ತಿಪ್ಪಣ್ಣ.
ಮುತ್ತುಸಾಮಿಮುದಲಿಯಾರ್.
ರಾಮದಾಸ್‌ಬಾವಾಜಿ.

ಪರಾಶರಮಾಧವೀಯ

ಧರ್ಮಶಾಸ್ತ್ರ.

ಸಂಸ್ಕೃತಭಾಷೆಯಲ್ಲಿರುವ ಈ ಗ್ರಂಥವು ಕನ್ನಡ ವ್ಯಾಖ್ಯಾನ ಸಹ ಉಪಯುಕ್ತವಾಗಿರುವ ರೀತಿ ಬೆಂಗಳೂರು [illegible] ಯಲ್ಲಿರುವ [illegible] ವೆಂಕಟಾಚಾರ್ಯರಿಂದ ಕರ್ಣಾಟಕಭಾಷೆಯಲ್ಲಿ ರಚಿಸಲ್ಪಟ್ಟು ಬೆಂಗಳೂರು [illegible] ಪ್ರೆಸ್ [illegible] ರಿಂದ [illegible] ಛಾಪಿಸಿ [illegible] ಮಾಡಲ್ಪಡುತಿದೆ.

[illegible]

ಚಂದಾ ವಿವರ. ರೂ. ಆ.

[illegible]

ನೋಟಿಸು.

ಇದರಿಂದ ಸರ್ವರಿಗೂ ಶ್ರುತಪಡಿಸುವದೇನೆಂದರೆ, ಈಚೆಗೆ ಹೊಸದಾಗಿ ಕನ್ನಡ ಭಾಷೆಯಲ್ಲಿ ತಯ್ಯಾರ್ಮಾಡಿ ಛಾಪಿಸಿ ವಿಕರೀ ಮಾಡುತಲಿರುವ ಪಾಕಶಾಸ್ತ್ರ ಗ್ರಂಥವು ಪ್ರಾಯಶಃ ಯೆಲ್ಲವೂ ಖರ್ಚಾಗಿ ಹೋಗಿ, ಇನ್ನು ಕೆಲವು ಪ್ರತಿಗಳೇ ಇರುತವೆ. ಸದರೀ ಗ್ರಂಥದ ಅಪೇಕ್ಷೆಯುಳ್ಳವರು ಕೂಡಲೇ ಮೊಬಲಗು ಕಳುಹಿಸಿ ತರಿಸಿಕೊಳ್ಳಬೇಕು. ಆಲಸ್ಯಮಾಡಿದರೆ ತರುವಾಯ ಸಿಕ್ಕಲಾರದು.

ಪ್ರತಿ ೧ಕ್ಕೆ ಕ್ರಯ	...	ಆಣೆ ೧೦
ಟಪಾಲ್ ಖರ್ಚು	...	„ ೧
ಇಂಪೀರಿಯಲ್ ಫೋಟೋಗ್ರಾಫಿಸ್ [illegible] ರಿಜಿಸ್ಟರ್ [illegible]		„ ೨

ಈ ಗ್ರಂಥ ಬೆಂಗಳೂರು ಕರ್ಣಾಟಕಪ್ರೆಸ್ ಆಫೀಸಿನಲ್ಲೂ, ಬೆಂಗಳೂರು ಮುಕಿಡಿಸೋ ಪ್ರೆಸ್ಸಿನಲ್ಲೂ ಮತ್ತು ಇದರಡಿ ರುಜು ಮಾಡಿರತಕ್ಕವರಲ್ಲೂ ದೊರೆಯುವದು. ಟಪ್ಪಾಲ್ ಚೀಟಿಗಳ್ಳ ಕಳುಹಿಸತಕ್ಕವರು ರೂ॥ ೧ಕ್ಕೆ ೧ ಆಣೆ ಮೇಲೆ ಡಿಸ್ಕೌಂಟ್ ಸೇರಿಸಿ ಕಳುಹಿಸಬೇಕು.

ಸಿ. ಸುಬ್ಬರಾವ್, ಮನೇ ನಂ॥೨೨.
ಬೆಂಗಳೂರು [illegible]

ಪ್ರಕಟನೆ.

ಬೆಂಗಳೂರು [illegible] ಸೋಮವಾರ [illegible] ನಂಬರ್ [illegible]

[illegible]

ಎ ಸಿದ್ಧಪ್ಪಶೆ

[illegible]

ಮುಖ್ಯವಾದ ಸೂಚನ

[illegible]

NOTICE.

THE CANTONMENT PHOTOGRAPHIC STUDIO
12, SOUTH PARADE,
BANGALORE.

ಬೆಂಗಳೂರು ಕಂಟೋನ್ಮೆಂಟ ಸೌತ್‌ಪರೇಡ್ ರೋಡ್ ೧೨ನೇ ನಂಬರ್ ಕಟ್ಟಡದಲ್ಲಿ ಮೆ. ಎಂ. ಅಪ್ಪಾಸಾಮಿ ಶೆಟ್ಟಿಯವರಿಂದ ಹೊಸದಾಗಿ ಯೊಂದು ಫೋಟೋಗ್ರಾಫಿಕ್ ಸ್ಟೂಡಿಯೋ ಎಂಬ ಛಾಯಾ ಯಂತ್ರವು ಸ್ಥಾಪಿಸಲ್ಪಟ್ಟಿರುತಿದೆ.

ಇದರಲ್ಲಿ ಇಂಗ್ಲೀಷಜನಗಳ ಮತ್ತು ನೇಟಿವ್ ಜನಗಳ ಭಾವಚಿತ್ರಗಳು ಬೇರೇ ಬೇರೇ ಸ್ಥಳಗಳಲ್ಲಿ ಈ ಕೆಲಸದಲ್ಲಿ ಬಹುಕಾಲ ಅನುಭವಶಾಲಿಗಳಾದ ಮೆ. ಡಬ್ಲ್ಯೂ ಎ. ಮ್ಯಾಕೆ ಯೆಂಬವರಿಂದಲೂ ಮೆ. ನೀದನಾಯಕಂ ಎಂಬವರಿಂದಲೂ ತೆಗಿಯಲ್ಪಡುವವು.

ಈಬಗ್ಗೆ ತೆಗದುಕೊಳ್ಳಲ್ಪಡುವ ಚಾರ್ಜ ಬಂದರೆ, ದುಸ್ತಂ ಬಹಳ ಸುಲಭವಾಗಿರುವದು. ಅಪೇಕ್ಷೆಯುಳ್ಳವರೆಲ್ಲರೂ ಧಾರಾಳವಾಗಿ ಸದರೀ ಸ್ಥಳಕ್ಕೆ ಬಂದು ತಮ್ಮ ತಮ್ಮ ಭಾವಚಿತ್ರಗಳನ್ನು ತೆಗದುಕೊಳ್ಳಬಹುದು.

ಇದಕ್ಕೆ ಕಾಲ—ಬೆಳಗ್ಗೆ ೮ ಘಂಟೆಯಮೊದಲು ಸಾಯಂಕಾಲ ೪ ಘಂಟೆಯವರಿವಿಗೆ.

ಫೋಟೋಗ್ರಾಫ್,
ಎಂ. ಅಪ್ಪಾಸಾಮಿಶೆಟ್ಟಿ,
ಪ್ರೊಪ್ರೈಟರ್.

NOTICE.

VAIDYASARASANGRAHA.

☞ *Price including Postage, Rs 5-6-0*

ಈ ಗ್ರಂಥಾಂತ [illegible] ಈ [illegible] ಮುದ್ರಿತ [illegible] ಮೊಬಲಗು [illegible]

[illegible]

ಇದರ ಕ್ರಯ	... ...	ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಖರ್ಚು		೦—೬—೦

ಟಿ. ವಿ. ವೆಂಕಟಾಚಾರಿ, ಅಸ್ಸಿಸ್ಟೆಂಟ್, ಬೆಂಗಳೂರು

ಪ್ರಕಟನೆ.

[illegible]

ಪ್ರಕಟನೆ

[illegible]

ಕನ್ನಡ ಟೀಕೆ ಸಹಿತವಾದ ಸಂಸ್ಕೃತಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ಪಟ್ಟಣಗ್ರಂಥ)	...	೦—೩—೦
[illegible]	...	೦—೫—೦
[illegible]	...	೦—೪—೦
[illegible]	...	೦—೧೪—೦
[illegible]	...	೦—೭—೦
[illegible]	...	೦—೨—೦
[illegible]	...	೫—೧—೦

ಕನ್ನಡ ಗ್ರಂಥಗಳು.

[illegible]	...	೦—೭—೦
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible]	...	೦—೪—೦
[illegible]	...	೦—೨—೬
[illegible]	...	೦—೬—೦
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	...	೦—೨—೦

ಹರಿಕ್ಷೇತ್ರಸಾರ.	...	೦—೦—೯
ಇಂಗ್ಲೀಷುಕನ್ನಡ [illegible]		೧—೦—೮
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ಎಂಬತ್ತೆ ೧ನೇ ಸಂಚಿಕೆ.	...	೦—೮—೦
ಡಿಟ್ಟೋ ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	... ...	೦—೩—೦
ವಿಷ್ಣುಸಹಸ್ರನಾಮ	...	೦—೫—೦
[illegible] ಸಹಸ್ರನಾಮ.	...	೦—೨—೯
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
[illegible]	...	೦—೧—೦

[illegible]

" ಕರ್ಣಾಟಕ ಪ್ರಕಾಶಿಕಾ

[illegible]

[illegible] ವರುಷ ೧ಕ್ಕೆ	...	೧೨—೮—೦
[illegible] ೧ಕ್ಕೆ	...	೬—೦—೦
[illegible]	...	೬—೦—೦
[illegible]	೧ಕ್ಕೆ	[illegible]
[illegible]	೧ಕ್ಕೆ	೮—೪—೦
[illegible]	೧ಕ್ಕೆ	೦—೫—೦

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

BANGALORE:—Printed and published for the Proprietor, at the KARNATIC PRESS—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರವೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿದಸುವೃತ್ತ್ಯುಪಗವರ್ನ್ಣಕರ್ನ್ನಾಟಕಪ್ರಕಾಶನಪರಾಭವಾಪ್ರತಿಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿಮುಪ್ರಣಾಸಜ್ಜನ್ಯೈರ್ದ್ದಿಹಾಸುಪರಿಶೋಭಿತಾವಿಶತಿಮಾನಸಂಸಮುಂದಂ॥

Vol. XII | BANGALORE—MONDAY APRIL 6, 1885 | No. 14.

ಸಂಪುಟ ೧೨. | ಬೆಂಗಳೂರು—ಸನ್ ೧೮೮೫ನೇ ಇಸವಿ ಏಪ್ರಿಲ್ ೬ನೇ ತಾರೀಖ್ ಸೋಮವಾರ. | ಸಂಚಿಕೆ ೧೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ಕ್ರಮವು.

ಇಂಗ್ಲಿಷ ಮತ್ತು ಕನ್ನಡ [illegible] ವರುಷ ೧ಕ್ಕೆ		೧—[illegible]—೦
ಇಂಗ್ಲಿಷಮಾತ್ರ [illegible] ವರುಷ ೧ಕ್ಕೆ		೬—೦—೦
ಕನ್ನಡಮಾತ್ರ [illegible] ವರುಷಕ್ಕೆ		೬—೦—[illegible]
ಶಿಂಗಳು	೧ಕ್ಕೆ	[illegible]
ಸಂಚಿಕೆ	೧ಕ್ಕೆ	[illegible]
ಹಿಂದಿನ ಸಂಚಿಕೆ	೧ಕ್ಕೆ	೦—೫—[illegible]

[illegible]

ಪ್ರಕಟನೆಯ ಕ್ರಮ

ಮೊದಲನೇದಫಾಕ್ಕೆ	೧ಕ್ಕೆ	[illegible]
ಮರದನೇದಫಾಕ್ಕೆ	೧ಕ್ಕೆ	[illegible]

NOTICE TO SUBSCRIBERS

ಇದರಕೆ [illegible] ಚಂದಾದಾರರು ಮುಖ್ಯ ನಿಗೇಕೊಂಡಿರಬೇಕು [illegible] ಸಂದರೆ:—

೧. [illegible]

೨. [illegible]

೩. [illegible]

೪. [illegible]

ಪ್ರಕಟನೆ.

[illegible]

ಪ್ರಕಟನೆ.

[illegible]

[illegible]	[illegible]

NOTICE.

VAIDYASARASANGRAHA.

Price including Postage, Rs 5 0 0

[illegible]

NOTICE.

THE CANTONMENT PHOTOGRAPHIC STUDIO

12, SOUTH PARADE,

BANGALORE.

ಬೆಂಗಳೂರು ಕಂಟೋನ್ಮೆಂಟಿ ಸೌತಪೆರೇಡ ರೋಡಿ ೧೨ನೇ ನಂಬರು ಕಟ್ಟಡದಲ್ಲಿ ಮೆ. ಎಂ. ಅಪ್ಪಾಸಾಮಿ ಶೆಟ್ಟಿಯವರಿಂದ ಹೊಸದಾಗಿ ಯೊಂದು ಪೋಟೊಗ್ರಾಫಿ ಸ್ಟುಡಿಯೊ ಎಂಬ ಛಾಯಾ ಯಂತ್ರವು ಸ್ಥಾಪಿಸಲ್ಪಟ್ಟಿರುತ್ತದೆ.

ಇದರಲ್ಲಿ ಇಂಗ್ಲಿಷಜನಗಳ ಮತ್ತು ನೇಟಿವ್ ಜನಗಳ [illegible] ಈ ಕೆಲಸದಲ್ಲಿ [illegible] ಮೆ. ಡಬ್ಲ್ಯುಯೂ. ಎ. ನ್ಯೂಕೆ ಯೆಂಬವರಿಂದಲೂ ಮೆ. [illegible] ಎಂಬವರಿಂದಲೂ ತೆಗೆಯಲ್ಪಡುವವು.

ಛಾಯೆಗಳನ್ನು ತೆಗೆದುಕೊಳ್ಳಲ್ಪಡುವ [illegible] ದರ, ರಸುಂ ಬಹಳ ಸುಲಭವಾಗಿರುವವು. ಅಪೇಕ್ಷೆಯುಳ್ಳವರೆಲ್ಲರೂ ದಾರಾಳವಾಗಿ ಸದರೀ ಸ್ಥಳಕ್ಕೆ [illegible] ಗಳನ್ನು ತೆಗೆದುಕೊಳ್ಳಬಹುದು.

ಬೆಳಿಗ್ಗೆ [illegible] ಘಂಟೆಯಿಂದ ಸಾಯಂಕಾಲ ೪ ಘಂಟೆಯವರಿವಿಗೆ.

ಪ್ರೋಪ್ರೈಟರ್,
ಎಂ. ಅಪ್ಪಾಸಾಮಿಶೆಟ್ಟಿ,
ಪ್ರೊ. ಸ್ಟುಡಿಯೊ.

ನೋಟಿಸ್.

ಇದರಿಂದ ಸರ್ವರಿಗೂ ಶ್ರುತಪಡಿಸುವದೇನೆಂದರೆ,

ಈಚೆಗೆ ಹೊಸದಾಗಿ ಕನ್ನಡ ಭಾಷೆಯಲ್ಲಿ ರಯಾರ್ತಾದಿ ಛಾಪಿಸಿ ಬಿಕರೀ ಮಾಡುತಲಿರುವ ಪಾಕಶಾಸ್ತ್ರ ಗ್ರಂಥವು ಪ್ರಾಯಶಃ ಯೆಲ್ಲವೂ ಬಿಕರಿಯಾಗಿ ಹೋಗಿ, ಇನ್ನು ಕೆಲವು ಪ್ರತಿಗಳೇ ಉಳಿದಿವೆ. ಸದರೀ ಗ್ರಂಥವ ಅಪೇಕ್ಷೆಯುಳ್ಳವರು ಕೂಡಲೇ ಹಣಕಳುಹಿಸಿ ತರಿಸಿಕೊಳ್ಳಬೇಕು. ಆಲಸ್ಯಮಾಡಿದರೆ ತರುವಾಯ ಸಿಕ್ಕಲಾರದು.

ಪ್ರತಿ ೧ಕ್ಕೆ ಕ್ರಯ	...	ಆಣೆ ೧೦
ಟಪಾಲ್ ಹಾಸಲ್	...	„ ೧
[illegible]		„ ೩

ಈ ಗ್ರಂಥ ಬೆಂಗಳೂರು ಕರ್ಣಾಟಕಪ್ರಕಾಶಿಕಾ ಆಫೀಸಿನಲ್ಲಿಯೂ, ಬೆಂಗಳೂರು [illegible] ನಲ್ಲಿಯೂ ಮತ್ತು ಇದರಲ್ಲಿ [illegible] ದವರಲ್ಲಿಯೂ ದೊರೆಯುವದು. [illegible] ಕಳುಹಿಸತಕ್ಕವರು ರೂ॥ ೧ಕ್ಕೆ ೧ ಆಣೆ ಮೇರೆ [illegible] ಸೇರಿಸಿ ಕಳುಹಿಸಬೇಕು.

ಸಿ. ಸುಬ್ಬರಾಯ, ಮನೇ ನಂ॥ ೨೨.
[illegible]

ನೋಟೀಸ್

ಪರಾಶರಮಾಧವೀಯ

ಧರ್ಮಶಾಸ್ತ್ರ.

[illegible]

[illegible] ಅಂಚೆ ಮೂಲಕ [illegible] ಖಾಲಿ ಸ್ಟಾಂಪ ಕಳುಹಿಸುವವರು ರೂ॥ ೧ಕ್ಕೆ ೧ ಆಣೆ ಮೇರೆಗೆ [illegible] ಕಳುಹಿಸಬೇಕು.

[illegible]
ಬೆಂಗಳೂರು [illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 6, 1885.
೧೮೮೫ನೇ ಏಪ್ರಿಲ್ ೬ನೇ ತಾ॥ ಸೋಮವಾರ.

LOYALTY OF NATIVE PRINCES.

ಈಗ ರಷ್ಯಾಸರ್ಕಾರಕ್ಕೂ ಬ್ರಿಟಿಷ ಸರ್ಕಾರಕ್ಕೂ ಉಂಟಾಗಿರತಕ್ಕ ವೈಮನಸ್ಯವು ಹಿಂದು ವಿಷಯದಲ್ಲಿ ಇಂಗ್ಲಿಷನವರಿಗೆ ಬಹಳ ಪ್ರಯೋಜನಕರ ವೆಂತಲೇ ಹೇಳಬೇಕಾಗಿದೆ, ಯಾತಕ್ಕೆಂದರೆ,—ಶ್ರೀಮನ್ಮಹಾರಾಜ್ಞೀ ಸರ್ಕಾರದವರ ವಿಷಯದಲ್ಲಿ ಅವರ ಪ್ರಜೆಗಳಾದ ಇಂಡ್ಯದೇಶೀಯರಿಗೂ ಅವರಿಂದ ಸ್ವಾಧೀನರಾದ ನೇಟಿವ ಸಂಸ್ಥಾನಾಧಿಪತಿಗಳಿಗೂ ಅಂತರವಾಗಿರತಕ್ಕ ರಾಜಭಕ್ತಿ ವಿಶ್ವಾಸಗಳನ್ನು ತೋರಪಡಿಸುವಿಕ್ಕೆ ಪ್ರಕೃತ ಸಂದರ್ಭಕ್ಕಿಂತಲೂ ಶ್ಲಾಘ್ಯವಾದುದು ಇವರಿಗೆ ಇದುವರಿವಿಗೂ ದೊರೆಯದೆ ಇತ್ತು. ಹಿಂದೆ ಅನೇಕ ಸಂದರ್ಭಗಳಲ್ಲಿ ನೇಟಿವ್‌ಗಳು ನಾನಾವಿಧ ದಿಂ ಸಹಾಯಮಾಡಿದರೂ ಅವುಗಳೊಂದೂ ಅಷ್ಟು ಪರಿಗಣನೀಯವಾಗಲಿಲ್ಲದ್ದ ಈಗ್ಗೆ ಇಂಗ್ಲಿಷನವರಪ್ರಭುತ್ವಕ್ಕೆ ಕುಂದಕವನ್ನುಂಟುಮಾಡ ಬೇಕೆಂಬ ತಾತ್ಪರ್ಯದೊಡನೆ ಪರರಾದರು ಸಕಲ ಸನ್ನಾಹಗಳನ್ನೂ ಮಾಡುತಲಿರುವಾಗ್ಯೆ, ಇಂಗ್ಲಿಷನವರಿಗೆ ಸಕಲ ಸಹಾಯವನ್ನೂ ಮಾಡಬೇಕಾದಂತಹ ಪ್ರಕೃತ ಸಂದರ್ಭದಲ್ಲಿ ಪ್ರಜೆಗಳೂ

ನೇಟಿವ್ ಅರಸರೂ ಸ್ವಸ್ಥರಾಗಿದ್ದಿರುವರಾದರೆ ನೇಟಿವ್‌ಗಳು ವಂಚಕರೆಂತಲೂ ನಿರುಪಕಾರಿಗಳೆಂತಲೂ ಅನ್ಯರು ದೂಷಿಸಲಾರಂಭಿಸುವರು. ಹಾಗಿಲ್ಲದೆ ಇಂಡ್ಯದೇಶದ ನೇಟಿವ್‌ಸಂಸ್ಥಾನಾಧಿಪತಿಗಳೆಲ್ಲರೂ ತಮ್ಮತಮ್ಮ ಯೋಗ್ಯತಾನುಸಾರ ಧನ ಬಲಗಳಮೂಲಕ ಸಹಾಯ ಮಾಡುವಂತೆ ಅಪ್ರೇರಿತರಾಗಿ ಕೇಳಿಕೊಂಡದರಮೇಲೆ ಗವರ್ನ್‌ಮೆಂಟಿನವರು ಅವರ ಪ್ರಾರ್ಥನೆಗಳನ್ನು ಕೃತಜ್ಞತೆಯೊಡನೆ ಗೌರವಿಸಿ ಅಂಗೀಕರಿಸಿದರೆಂತಲೂ, ಇಂಗ್ಲೀಷಿನವರು ಫೌಜ್ ಮತ್ತು ಜಂಗೀ ಸರಂಜಾಂಗಳನ್ನು ರಾವಲ್‌ಪಿಂಡಿಯೆಂಬ ಪ್ರದೇಶದಲ್ಲಿ ಬಹಳವಾಗಿ ಜಮಾಯಿಸುತಲಿದಾರೆಂತಲೂ, ಪ್ರಸಿದ್ಧರಾದ ರಷ್ಯಾಚಕ್ರವರ್ತಿಯವರೊಡನೆ ಯುದ್ಧ ಸನ್ನದ್ಧರಾಗಿದಾರೆಂತಲೂ, ಸಕಲ ಪ್ರಜೆಗಳಿಗೂ ತಿಳಿವೇಯಿದೆಯಷ್ಟೆ. ಈಗದ್ದಲವು ಸರ್ವತ್ರೀಯಾಗಿ ಇಲ್ಲಿಗೂ ವ್ಯಾಪಿಸಿದಂತೆ ತೋರುತಿದೆ. ಈ ಯುದ್ಧಕಾರಣವು ಯೂರೋಪಿಯರ್ನರಿಗೂ ಮುಸಲ್ಮಾನರಿಗೂ ಸಂಬಂಧಿಸಿದ್ದಾಗಿದ್ದರೂ ಇಂಗ್ಲೀಷಿನವರ ಪ್ರಭುತ್ವಕ್ಕೆ ಬಾಧಾರೂಪವಾಗಿದೆ. ಪೂರ್ವದಲ್ಲಿ ಕ್ರಿಶ್ಚಿಯರ್ನ ರಾಜ್ಯಗಳನೇಕ ಮಹಮ್ಮದೀಯರ್ನಗಳ ಪ್ರಾಬಲ್ಯದಿಂದ ಅವರ ಸ್ವಾಧೀನವಾದವು. ಕಾಲಗತಿಯನ್ನನುಸರಿಸಿ ಮುಸಲ್ಮಾನರ ಪ್ರಾಬಲ್ಯವು ತಗ್ಗಿ ಮರಳಿ ಯೂರೋಪಿಯರ್ನಗಳೇ ಪ್ರಬಲಿಸಿ, ತಾವು ಹಿಂದೆ ಕಳೆದುಕೊಂಡ ರಾಜ್ಯಗಳನ್ನೆಲ್ಲ ಸ್ವಾಧೀನಮಾಡಿಕೊಳ್ಳಲಿಕ್ಕೆ ತ್ವರಿಸಿದರು. ಯೂರೋಪಿಯರ್ನ ಸಂಸ್ಥಾನಾಧಿಪತಿಗಳಪೈಕಿ ರಷ್ಯಾಚಕ್ರವರ್ತಿಯವರ , ಮುಸಲ್ಮಾನರಲ್ಲಿ ರೂಂ ಸರ್ಕಾರಸಹಾಯವರೂ ಪ್ರತ್ಯರ್ಥಿಗಳಾದರು. ರಷ್ಯಾಚಕ್ರವರ್ತಿಯವರ ಕೋರಿಕೆಯು ಬಹುದಿವಸಗಳ ಹಿಂದೆಯೇ ಸಫಲವಾಗತಕ್ಕದ್ದಾಗಿದ್ದರೂ ಇಂಗ್ಲೀಷ್ ಮತ್ತು ಫ್ರೆಂಚ್‌ಸರ್ಕಾರದವರ ಸಹಾಯವು ತುರ್ಕೀಯವರಿಗೆ ಬಲವಾಗಿರುವದರಿಂದ ಇನ್ನೂ ಸಾವಕಾಶವೊಳಿದೆ. ಯೂರೋಪಿಯರ್ನರಪೈಕಿ ಇಂಗ್ಲೀಷಿನವರಿಗೆ ಈ ಇಂಡ್ಯರಾಜ್ಯವೆಂಬ ಒಂದು ದೊಡ್ಡ ನಿಧಿ ದೊರೆತಿರುವದ [illegible] ಹುಚದಿರುವದಕ್ಕೂ, ಅನ್ಯಾಕ್ರಾಂತವಾಗದಂತೆ ಕಾಪಾಡಿಕೊಳ್ಳಲಿಕ್ಕೂ, ತುರ್ಕೀ, ಈಜಿಪ್ಟ ಸಂಸ್ಥಾನದವರ ಸಹಾಯವು ಅತ್ಯಂತಾಪೇಕ್ಷಿತವಾಗಿದೆ. ಅವರ ಸಹಾಯವಿಲ್ಲದಿದ್ದರೆ ಯೂರೋಪಖಂಡದ ಇತರ ಸಂಸ್ಥಾನಾಧಿಪತಿಗಳು ಸಹ ಇಲ್ಲಿ ಪ್ರವೇಶಿಸಲಿಕ್ಕೆ ಕಾರಣವಾಗುವದು. ಈಗ ಉಂಟಾಗಿರುವ ಪ್ರತಿಬಂಧಕವೇನೆಂದರೆ, ಈಜಿಪ್ಟ್‌ರಾಜ್ಯದ ಖೆಡೈವ್‌ಯವರಿಗೂ ಅಲ್ಲಿನಪ್ರಜೆಗಳಲ್ಲಿ ಪ್ರಮುಖನಾದ ಮಹದೀಯೆಂಬವನಿಗೂ ಕಲಹ ಪ್ರಾಪ್ತವಾಗಿದೆ. ಮಹದೀಗೆ ಜಯವಾದರೆ ಇಂಗ್ಲಾಂಡಿನಿಂದ ಇಲ್ಲಿಗೆ ಬರಬೇಕಾದ ಸುಲಭಮಾರ್ಗವು ತಪ್ಪಲಿಕ್ಕೆ ಕಾರಣವಾಗುತಿದೆ. ಆದದರಿಂದ ಖೈದೀವ್ ಯವರಿಗೆ ಸಹಾಯಾರ್ಥ ಸೈನ್ಯಗಳನ್ನು ಕಳುಹಿಸಬೇಕಾದ ಆವಶ್ಯಕತೆ ಗವರ್ನ್‌ಮೆಂಟನವರಿಗೆ ಉಂಟಾಯಿತು.

ರಷ್ಯಾಚಕ್ರವರ್ತಿಯವರಿಗೆ ಏಷ್ಯಾಖಂಡದಲ್ಲಿ ಮುಸಲ್ಮಾನ್ ರಾಜ್ಯಗಳಿಗೆ ಆಚೆ ಕೆಲವು ದೇಶಗಳು ಇರುತಿವೆ. ಅವುಗಳಿಗೂ ಇಂಡ್ಯರಾಜ್ಯಕ್ಕೂ ಭೂಮಾರ್ಗ ಉಂಟು. ಚಕ್ರವರ್ತಿಯವರು ಏಷ್ಯಾಖಂಡದಲ್ಲಿ ಕೆಲವು ದೇಶಗಳಿಗೆ ಅಧಿಪತಿಯಾಗಿ ಏರ್ಪಟ್ಟದರಿಂದ ತಮ್ಮ ಸರಹದ್ದನ್ನು ಕಾಬೂಲ್ ರಾಜ್ಯದತನಕ ಬೆಳಸುವಕ್ರಮಿಸಿ ಈಗ ಕಾಬೂಲಿಗೆ ಸನ್ನಿಹಿತರಾಗಿದಾರೆ. ಈಗ ಅಮೀರರವರಿಗೆ ಸಹಾಯಮಾಡಿ ಅವರನ್ನು ತಡೆಯದಿದ್ದರೆ ಅವರ ಪ್ರವೇಶವು ಇಂದುಸ್ಥಾನದವರಿವಿಗೂ ವ್ಯಾಪಿಸಲಿಕ್ಕೆ ಕಾರಣವಾಗುತಿದೆ. ಆದದರಿಂದ ಅಮೀರರವರಿಗೆ ಖಿಲಾನೇ ಕೊಡುವದಕ್ಕೂ, ಸಹಾಯಮಾಡಲಿಕ್ಕೂ ರಾವಲ್‌ಪಿಂಡಿಯೆಂಬ ಪ್ರದೇಶದಲ್ಲಿ ವೈಸ್‌ರಾಯ್‌ಯವರು ವ್ಯೂಹರಚನಾ ಪ್ರಯತ್ನದೊಳಿದಾರೆ. ಅಲ್ಲಿಗೆ, ವೈಸ್‌ರಾಯ್‌ಯವರ ವಿಚಾರಣಾಧಿಕಾರಗಳಿಗೊಳಪಟ್ಟ ನೇಟಿವ್ ಅರಸರ ಸೈನ್ಯಗಳು ಸಹ ಕಳುಹಿಸಲ್ಪಡುತಲಿವೆ. ಹೈದರಾಬಾದ್ ನಿಜಾಮರವರು ರಾಜಭಕ್ತಿ ಗೌರವದಿಂದಲೂ ರಷ್ಯಾದವರಮೇಲೆ ತಮಗಿರುವ ಜಾತಿಪ್ರಯುಕ್ತವಾದ ದ್ವೇಷವನ್ನು ತೋರಿಸಬೇಕೆಂಬ ಕುತೂಹಲದಿಂದಲೂ ತಮ್ಮ ಸೈನ್ಯವನ್ನು ಕಳುಹಿಸುತ್ತಾರೆ. ನಮ್ಮ ಮಹಾರಾಜರು ಸಹ ತಮ್ಮಲ್ಲಿರುವ ಸವಾರ್ ಫೌಜನ್ನು ಕಳುಹಿಸಲಿಕ್ಕೆ ಏತದುಟ್ಟು ಪ್ರಯತ್ನ ಪಡುತಲಿದಾರೆ.

ಈ ಸಂದರ್ಭದಲ್ಲಿ ನೇಟಿವ್ ಅರಸರ ರಾಜಭಕ್ತಿಯನ್ನು ಬಹಳವಾಗಿ ಕೊಂಡಾಡಬೇಕಾಗಿರುತ್ತದೆ. ಯಾತಕ್ಕೆಂದರೆ—ಪ್ರಸಕ್ತ ಯುದ್ಧದಲ್ಲಿ ಜಯವನ್ನು ಹೊಂದತಕ್ಕವರು ಮುಸಲ್ಮಾನರಾಗಿರುತ್ತಾರೆ. ಅವರಲ್ಲಿ ಕಾಬೂಲ್ ಅಮೀರರವರು ನೇಟಿವ್‌ಗಳಿಗೆ ಪ್ರತ್ಯಕ್ಷ ವಿರೋಧಿಯಾಗಿಯೂ ಹಿಂದೆ ಇಂಡ್ಯದೇಶವನ್ನು ಅಪಹರಿಸುವವರಾಗಿಯೂ ಮತದ್ವೇಷಿಯಾಗಿಯೂ ಇರುತ್ತಾರೆ. ಇವರನ್ನು ಇಂಗ್ಲೀಷಿನವರು ಜಯಿಸಿದ ಸರ್ನ ೧೮೪೧—೪೨ನೇ ಇಸವಿಯಲ್ಲಿ ಸರ್ ಮಾರ್ಕ್ ಕಬ್ಬನ್‌ಸಾಹೇಬರವರು ಮೇಲೆಕಂಡ ಅಂಶವನ್ನು ಇಸ್ತಿಹಾರ್ ಮೂಲಕ ಇಲ್ಲಿನ ಪ್ರಜೆಗಳಿಗೆ ಪ್ರಸಿದ್ಧಪಡಿಸಿರುತ್ತಾರೆ. ಅಂತಾ ದ್ವೇಷಿಗಳಿಗೆ ಈಗ ಜಯವನ್ನುಂಟುಮಾಡತಕ್ಕ ವಿಷಯದಲ್ಲಿ ನೇಟಿವ್‌ಗಳಿಗೆ ತಾತ್ಪರ್ಯವಿಲ್ಲದಿದ್ದರೂ ಇಂಗ್ಲೀಷ್ ಸರ್ಕಾರದವರ ಪೋಷಕತೆಯನ್ನು ಪರಿಭಾವಿಸಿ ಸಂಪೂರ್ಣ ಕೃತಜ್ಞರೆನ್ನಿಸಿಕೊಳ್ಳುವಬಗ್ಗೆ ತಾವಾಗಿ ಮುಂದೆ ಬೀಳುತಲಿದಾರೆ.

ಮೈಸೂರುದೇಶದ ಸೈನ್ಯವು ಪೂನೆ, ಇಂದೂರ್ ಮೊದಲಾದ ಅನೇಕ ಮಹಾರಾಷ್ಟ್ರ ದೇಶಗಳನ್ನು ಜೈಯಿಸಿದಕಾಲದಲ್ಲಿ ಬ್ರಿಟಿಷಿನವರಿಗೆ ವಿಶೇಷ ಸಹಾಯ ಮಾಡಿತು. ಇಂಡ್ಯದೇಶದೊಳು ೧೮೫೭ನೇ ಇಸವಿಯಲ್ಲಿ ಉಂಟಾದ ಕಲಹಕ್ಕಾಗಿ ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಇಲ್ಲಿನ ಪರೋಬಸ್ತು ಸವಾರ್ ಫೌಜನ್ನು ಕಳುಹಿಸಲಿಕ್ಕೆ ಸನ್ನದ್ಧರಾಗಿದ್ದರು. ಪರಂತು ಕೆಲವು ಮಟ್ಟಿಗೆ ಇಂಗ್ಲೀಷಿನವರು ಅಪೇಕ್ಷಿಸಿದ ಪ್ರಕಾರ ೩ ರಿಜಿಮೆಂಟ್ ಸವಾರರನ್ನು ಮಾತ್ರ ಕಳುಹಿಸಿದರು. ಆ ಪೈಕಿ ಒಂದು ರಿಜಿಮೆಂಟಿನವರು ಸುರಪುರವನ್ನು ಸ್ವಾಧೀನಪಡಿಸಿಕೊಂಡರು. ಈಗ ಫೌಜ್ ಇಲ್ಲಿ ಬಹಳ ಕಡಮೆಯಾಗಿದೆ. ಆದಾಗ್ಯೂ ಮಹಾರಾಜರವರು ಕಳುಹಿಸುವದಕ್ಕೆ ಯತ್ನಿಸಿದ್ದು ಬಹಳ ಪ್ರಶಂಸಿಸತಕ್ಕದ್ದಾಗಿರುತಿದೆ. ರಾಜ ಬಂಧುಗಳಲ್ಲೊಬ್ಬರಾದ ಮ॥ ಕೆಂಪರಾ [illegible] ನ್ನಾಗಿಮಾಡಿ ಅವರೊಡನೆ ಕಳುಹಿಸುವದುಚಿತವೆಂದು ಒಳದೇಶದ ಇಂಗ್ಲೀಷ್‌ಪತ್ರಿಕೆಯೊಂದು ತಿಳಸುತಿದೆ. ರಾಜಬಂಧುವು ಸೇನಾಧಿಪತ್ಯವನ್ನು ವಹಿಸಿ ಯುದ್ಧಯಾತ್ರೆಗೆ ತೆರಳುವದು ಬಹಳ ಗೌರವವಾದಾಗ್ಯೂ ಇಲ್ಲಿನ ರಾಜಬಂಧುಗಳು ಇನ್ನೂ ಅಷ್ಟರ ಪ್ರಾಶಸ್ತ್ಯಕ್ಕೆ ಪಾತ್ರರನ್ನಾಗಿ ಮಾಡಲ್ಪಡಲಿಲ್ಲವೆಂದು ಕಾಣುತಿದೆ. ಮುಖ್ಯವಾಗಿ ಶ್ರೀಮನ್ಮಹಾರಾಜರವರು ಧೈರ್ಯ ಸ್ಥೈರ್ಯಗಳೊಡನೆ ಯಾವಕಾರ್ಯವನ್ನು ಮಾಡುವದಕ್ಕೂ ಇದು ಒಳ್ಳೆಯ ಸಂದರ್ಭವಾಗಿದೆ.

BUDDHA AND HIS DOCTRINES,—No ೪.

ಬೌದ್ಧಮತ ಸಿದ್ಧಾಂತಗಳನ್ನು ವಿವರವಾಗಿ ಕಳೆದಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಇಮ್ಮತದ ಮತ ರೀತ್ಯಾ ಆತ್ಮಸ್ವರೂಪವೆಂದು ಹೇಳುವ ಭಾವಿಸಿಕೊಳ್ಳದ ಹೊರತು, ಅದು ಅಜ್ಞಾತವಾದ ವಸ್ತುವೆಂದು ತಿಳಿಸಲು ಯುಕ್ತವಾದ ಕಾರ್ಯವ್ಯಾಪ್ತವಾದ [illegible] ಶಬ್ದವಾಗಿರುತಿದೆ. ಸರ್ವಶೂನ್ಯತ್ವವನ್ನು ನಾವು ಅಂಗೀಕರಿಸಿದಮೇಲೆ ಅದಕ್ಕೆ ಮನುಷ್ಯನ ಉತ್ಪತ್ತಿಗಾದಿ ಕಾರಣ ಅನಂತರಕಾಲವಾದ ಪ್ರಧಾನವಸ್ತು ಸಹ ಶೂನ್ಯವಾಗಬೇಕಾಯಿತಷ್ಟೆ. ಶೂನ್ಯವಸ್ತುವೆಂದಿಗೂ ಸ್ಥಿರವಾಗಲಾರದಾದ್ದರಿಂದ ಸ್ಥೂಲಶರೀರವೂ ಸ್ಥಿರವಾದದ್ದಲ್ಲ. ಹೊಂದುಂಬೆಂಬ [illegible] ಹೇಳುವದು ಕೇವಲ ಅಸಂಬದ್ಧಪ್ರಲಾಪವಾಗಿರುತಿದೆ. ಆತ ಕಾರಣ ಸೂಕ್ಷ್ಮಶರೀರವನ್ನೇ ಆತ್ಮವೆನ್ನಬೇಕಾಗಿದೆ. ಅದು ಹಿಂದೆ ತಿಳಿಸಿದ ಪಂಚಸ್ಕಂಧಗಳು ವಿನಾ ಬೇರಲ್ಲವು. ಅವು ಜ್ಞಾನೇಂದ್ರಿಯ ಕರ್ಮೇಂದ್ರಿಯಪಂಚಕ, ಮನೋಬುದ್ಧಿಗಳೆಂಬವ್ಯಾದಶಾವಸ್ಥೆಗಳಿಂದುಂಟಾಗುತಿವೆ. ಸೂಕ್ಷ್ಮಶರೀರದಂತಹದು,

> ಶ್ಲೋ॥ ಪಂಚಪ್ರಾಣಮನೋಬುದ್ಧಿದಶೇಂದ್ರಿ
> ಯಾಸಮನ್ವಿತಂ । ಅಪಂಚೀಕೃತಭೂತೋ
> ತ್ಥಂಸೂಕ್ಷ್ಮಾಂಗಂಭೋಗಸಾಧನಂ॥

ಎಂಬದಾಗಿ ಶ್ರೀ ಶಂಕರಾಚಾರ್ಯರವರು ಆತ್ಮಬೋಧೆಯೆಂಬ ಪ್ರಕರಣದಲ್ಲಿ ತಿಳಿಸಿರುವದರಿಂದ ಅದನ್ನೇ ನಾವೂ ಸೂಕ್ಷ್ಮಶರೀರವೆನ್ನಬಹುದು. ಪರಂತು ಬೌದ್ಧರು ಕಾರಣಶರೀರವೆಂಬದಾದ ಆತ್ಮವನ್ನು ಮಾತ್ರ ಅಂಗೀಕರಿಸುವದಿಲ್ಲವು. ಅದರೆ ಅನಾದ್ಯ ವಿದ್ಯಾಬಲದಿಂದ ಸೂಕ್ಷ್ಮಶರೀರವೆಂಬದು ಕರ್ಮವಶಾತ್ ಹುಟ್ಟುತದೆ. ಪೂರ್ವಜನ್ಮಕೃತ ಫಲವೇ ಉತ್ತರ ಜನ್ಮಕ್ಕೆ ಕಾರಣವಾಗುವದು. [illegible] ಸ್ಕಂಧಗಳು ನಾಶವಾದಾಗ್ಗೆ ಬಾದರೂ ಅವುಗಳಿಗೆ ಆತ್ಯಂತಿಕ ನಾಶವುಂಟಾಗುವದಿಲ್ಲ ಅವು ಕರ್ಮಾನುಸಾರವಾಗಿ ಹುಟ್ಟುತಲೂ ಕೆಡುತಲೂ ನಾಶರಹಿತವುಂಟಾಗುತಲೂ [illegible] ಸ್ವಾನುಭವವೂ ಸಂದೇಹವಿಲ್ಲವು. ಪರಂತು ನಿರ್ವಾಣಪದವುಂಟಾಗುವತನಕ ಪ್ರತ್ಯೇಕ ಮನುಷ್ಯನಿಗೆ ಅನೇಕ ಜನ್ಮಗಳು ಉಂಟಾಗುತಲಿರುವವು. ಪೂರ್ವಜನ್ಮಸಂಬಂಧವು ಉತ್ತರಜನ್ಮಕ್ಕೆ ಉಂಟಾಗುವ ಬಗೆಯು [illegible] ಸಿದರೆ, ಅಪರಜನ್ಮವನ್ನು ಮಾತಾಪಿತೃ ಜನ್ಮವೆಂತಲೇ ಹೇಳಬಹುದು. ಒಂದು ದೀಪದಿಂದ ಮತ್ತೊಂದು ದೀಪವನ್ನು ಹಚ್ಚಿದರೆ, ಅದು ಪೂರ್ವಜನ್ಮ ಸಂಬಂಧದಂತಲೂ ಉಂಟಾದಂತೆ ಹೇಳಬಹುದು. ಇದುಜನ್ಮದಲ್ಲಿಯೇ ಸ್ಕಂಧಗಳು ಅನವರತಬದಲಾಯಿಸುತಲಿರುವದರಿಂದ, ಮನುಷ್ಯನು ಬಾಲ್ಯ [illegible] ಸ್ಥಿರವಲ್ಲ, [illegible] ವ್ಯಕ್ತಿಭೇದವಲ್ಲದೆ ಒಬ್ಬನೇಮನುಷ್ಯನೆಂದು ಹೇಳಬಹುದು. ಶರೀರ [illegible] ವೃದ್ಧಿಕ್ಷಯಗಳಿಂದ ಅದೇ ಮನುಷ್ಯನು ಭಿನ್ನನೆನ್ನಿಸಿಕೊಳ್ಳುವಂತೆಯೂ, ವೃದ್ಧನಾದವನು ತನ್ನ ಪೂರ್ವಾವಸ್ಥೆಯಲ್ಲಿ ಅಂದರೆ ಬಾಲ್ಯ ಯೌವನ [illegible] ಮಾಡಿದ ಕರ್ಮಫಲವನ್ನು ಅವಸಾನದಲ್ಲಿ ಅನುಭವಿಸುವಂತೆಯೂ, ಪುನರ್ಜನ್ಮವನ್ನೈದಿದ ಪ್ರಾಣಿಯು ಈಜನ್ಮದ ವ್ಯಕ್ತಿ ಮಾರಿದವಾಗಿ ಕಂಡರೂ, ಅದು ಗತಜನ್ಮಸಂಬಂಧದಿಂದ ದೂಷಿತವಾಗಿ ಸಂಚಿತಕರ್ಮವಾದ ಸ್ಕಂಧಗಳ ಸಮ್ಮೇಳನದಿಂದ ಪೂರ್ವಕರ್ಮಾನುಸಾರವಾದ ಫಲವನ್ನು ಹೊಂದುತಿದೆ.

ಬಾಲರಾಮಾಯಣ	...	೦—೦—೬
ಶ್ರೀಕಾಂಡತ್ರಯ.	...	೦—೩—೬
೧ ಕಾಂಡ ಅಮರ	...	೦—೧—೦

ಮೇಲ್ಬರಿಸಿದ ಪುಸ್ತಕಗಳು ಬೇಕಾದವರು [illegible] ಮುಂತಾದವರಿಗೆ [illegible] ಪುಸ್ತಕದ ಕ್ರಯದ [illegible] ಕಳುಹಿಸಲ್ಪಡುವದು. [illegible]

NOTICE.

VAIDYASARASANGRAHA

Price including Postage, Rs 5-6-0

ಈ ಗ್ರಂಥವು ಶೀಘ್ರದಲ್ಲಿ [illegible] ಕೇಳಿಗೆ [illegible] ಹೊಸರಿಗೆ ಬರೆದು ಕೊಳ್ಳಬೇಕು [illegible] ಕಳುಹಿಸಲ್ಪಡುವುದು. [illegible]

ಗ್ರಂಥಕೊಂಡವರಿಗೆ [illegible] ಕ್ರಯ	...	ರೂ|| ೫—೦—೦
ಪ್ಯಾಕಿಂಗ್ ಮತ್ತು ಅಂಚೆ ವೆಚ್ಚ		೦—೬—೦

ಟಿ. ವಿ. ವೆಂಕಟಾಚಾರ್, ಅಸಿಸ್ಟೆಂಟ್ ಸರ್ಜನ್, ಬೆಂಗಳೂರು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸಗ್ರಂಥವಾಗಿ ಸುಬೋಧ್ಯವಾದದ್ದಾಗಿಯೂ ನವರಸ ಪರಿಪೂರ್ಣಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧—೮—೦ ರೂ||, ಟಪಾಲು ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ|| ಲಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಹೆಚ್ಚುಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸಫ್, ಎಡೆಪಳ್ಳಿ,
ಕಡೂರು ಡಿಸ್ಟ್ರಿಕ್ಟ್.

NOTICE

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು.

ಇವಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನಮೇರೆ ವಳ್ಯಾಳ ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 25, 1885

೧೮೮೫ನೇ ಮೇ ೨೫ನೇ ತಾ|| ಸೋಮವಾರ.

REDUCTION OF EXPENDITURE IN HER MAJESTY'S TERRITORIES AND ITS EFFECT ON THE MYSORE STATE

ರುಷಿಯಾ ಗವರ್ನಮೆಂಟಿನವರು ದುರಾಶೆಯಿಂದ ತಮ್ಮ ಆಫ್ಗಾನ್ ದೇಶಗಳನ್ನು ಜುಲುಂನಿಂದ ಸ್ವಾಧೀನಪಡಿಸಿಕೊಳ್ಳಬೇಕೆಂಬ ಮನೋರೋಚನೆಯಿಂದ, ಈಗ ಅಲ್ಲಿಯಲ್ಲಿ ಕಲಹ ನಡೆಸುತ್ತಲಿರುವಂತೆಯೂ, ಕ್ರಮೇಣ ಅವರಿಂದ ಇಂಡ್ಯದೇಶಕ್ಕೆ ಬಾಧೆ ಯುಂಟಾಗುವದೆಂಬ ದೂರದೃಷ್ಟಿಯೊಡನೆ ಬ್ರಿಟಿಷಗವರ್ನಮೆಂಟಿನವರು ತಾವಾಗಿ ಪ್ರವೇಶಿಸಿ, ಕಾಬೂಲ್ ಅಮೀರರವರಿಗೂ ರುಷಿಯಾ ಸರ್ಕಾರಕ್ಕೂ ಸಮಾಧಾನ ಮಾಡುತಲಿದ್ದಾರೆಂತಲೂ ಹಿಂದಿನ ಪತ್ರಿಕೆಗಳ ಮೂಲಕ ತಿಳಿಸಿದ್ದೇವೆಯಷ್ಟೆ. ಈಗ ಅಂತಾ ಸಮಾಧಾನ ಮಾತುಗಳು ಕ್ರಮವಾಗಿ ನಡೆಯಲಿಲ್ಲವೆಂದು ತಿಳಿಯ ಬರುತಲಿದೆ. ಈ ಪ್ರಬಲ ಸಂದರ್ಭದಲ್ಲಿ ಯುದ್ಧಯಾತ್ರೆಯ ಬಗ್ಗೆ ಬ್ರಿಟಿಷ ಸೇನೆಗಳನ್ನು ಜಮಾಯಿಸುವಣ, ಮತ್ತು ಯುದ್ಧರಂಗಕ್ಕೆ ಸಾಗಿಸುವಣ, ರಸ್ತೆ ಕೋಟೆ ರಿಪೇರಿ ಮಾಡುವಣ, ಈ ಬಗ್ಗೆ ಇದುವರಿವಿಗೆ ಸುಮಾರು ಮೂರುವರೆ ಕೋಟಿ ರೂಪಾಯಿಗಳತನಕ ಖರ್ಚಾಗಿರುವಂತೆಯೂ, ಅದರಿಂದ ಬ್ರಿಟಿಷ ಸರಹದ್ದು ಬಂದೋಬಸ್ತಿಯ ಬಗ್ಗೆ ಅದಿಮ ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿರುವಂತೆಯೂ, ಈ ಮೊಬಲಗು ಭರ್ತಿಗೋಸ್ಕರ ಹರ್ ಮ್ಯಾಜೆಸ್ಟಿ ಗವರ್ನಮೆಂಟಿನಲ್ಲಿ ಬಹಳಮಟ್ಟಿಗೆ ಖರ್ಚು ಕಮ್ಮಿ ಮಾಡಿ ಮಿತಕ್ಕೆ ಉಳಿಸಬೇಕೆಂತಲೂ, ಯಾವದೊಂದು ಮುಖ್ಯ ಖರ್ಚಿಗೂ, ತುರ್ತು ಅನಾವಶ್ಯಕವಾಗಿ ಕಂಡುಬರುವ ಜಾಸ್ತಿ ಖರ್ಚಿಗೂ ಅವಕಾಶ ಕೊಡಕೂಡದೆಂತಲೂ ಖಂಡಿತವಾದ ಹುಕುಂ ಕೊಡಲ್ಪಟ್ಟಿರುವದಲ್ಲದೆ ಹುಟ್ಟುವಳಿಯನ್ನು ಹೆಚ್ಚಿಸಬೇಕೆಂದು ಸಹ ಹುಕುಂ ಆಗಿರುವಂತೆ ಇಂಡ್ಯ ಟೈಂಸ್ ಪತ್ರಿಕೆಯಮೂಲಕ ತಿಳಿಯಬರುತಿದೆ. ನಾವು ಸದರೀ ಹುಕುಮನ್ನು ಚನ್ನಾಗಿ ನೋಡಿ ದೂರದೃಷ್ಟಿಯೊಡನೆ ಆಲೋಚಿಸುವಲ್ಲಿ ಅದು ಪರಂಪರೆಯಾ ಮೈಸೂರು ದೇಶಕ್ಕೂ ವ್ಯಾಪಿಸಿ ಈ ದೇಶೀಯರನ್ನು ಸಹ ಮತ್ತಷ್ಟು ಕಷ್ಟಕ್ಕೆ ಗುರಿಮಾಡುವದೆಂದು ಊಹಿಸುವದಕ್ಕೆ ತಕ್ಕ ಕಾರಣಗಳು ಕಂಡುಬರುತಿವೆ. ಇದರ ಪರಿಹಾರದ ಬಗ್ಗೆ ಮೈಸೂರು ಸರ್ಕಾರದವರು ಮುಂಜಾಗ್ರತೆ ಪಡದೆ ಹೋಗುವರಾದರೆ, ತಾವೇ ತಮ್ಮ ಪ್ರಜೆಗಳನ್ನು ಕಷ್ಟಕ್ಕೆ ಗುರಿಮಾಡಿದರೆಂಬ ಅಪವಾದಕ್ಕೆ ವಿಷಯರಾಗುವರೆಂದು ಹೇಳಬೇಕಾಗಿದೆ.

ಬ್ರಿಟಿಷ ಗವರ್ನಮೆಂಟಿನವರು ಜಮಾ ಬಾಬೆಗಳನ್ನೆಲ್ಲ ಹೆಚ್ಚಿಸಿ, ಖರ್ಚು ಬಾಬೆಗಳನ್ನೆಲ್ಲ ಕಮ್ಮಿ ಮಾಡಿಕೊಂಡು ಹಣ ಜಮಾಯಿಸಿಕೊಂಡರೆ ಅದರಿಂದಾಗುವ ಲಾಭ ನಷ್ಟಗಳನ್ನು ಅವರಪ್ರಜೆಗಳು ಅನುಭವಿಸತಕ್ಕವರಾಗಿದ್ದಾರೆಯೇ ಹೊರತು ಅನ್ಯ ರಾಜ್ಯದಲ್ಲಿರತಕ್ಕವರಿಗೆ ಸಂಬಂಧವೇನೆಂದು ಯಾರಾದರು ಕೇಳುವ ಪಕ್ಷಕ್ಕೆ, ಈ ಮೈಸೂರು ದೇಶವು ಅನ್ಯರಾಜ್ಯವೆನಿಸಿ ಕೊಂಡಾಗ್ಯೂ ಸ್ವಾಧೀನಾಲೋಚನ ಸಂಬಂಧದಿಂದಲೂ, ಸಮಾನಾಂತರದಿಂದಲೂ ಬ್ರಿಟಿಷ ಸರ್ಕಾರದ ಪದ್ಧತಿಯನ್ನನುಸರಿಸತಕ್ಕದ್ದಾಗಿರುವದರಿಂದಲೂ, ಸ್ವದೇಶ ರಾಜರಿಂದ ಕೇವಲ ತಾಟಸ್ಥ್ಯದೊಡನೆ ಆಳಲ್ಪಡತಕ್ಕದ್ದಾಗಿರುವದರಿಂದಲೂ, ಈ ದೇಶೀಯರು ಮೇಲಿನ ಹುಕುಮಿನ ದೆಸೆಯಿಂದ ಪೀಡಿತರಾಗುವದಕ್ಕೆ ಸಾಕಷ್ಟು ಕಾರಣವಿಲ್ಲದೆ ಹೋಗಲಿಲ್ಲವು. ಬ್ರಿಟಿಷ ಗವರ್ನಮೆಂಟಿನವರು ಜಮಾ ಬಾಬೆಗಳನ್ನು ವೃದ್ಧಿಪಡಿಸುವಪಕ್ಷಕ್ಕೆ ಈಗಿನ ಯುದ್ಧಸಂದರ್ಭರೀತ್ಯಾ, ನೇಟಿವ್ ಅರಸರನ್ನು ಶತ್ರುಗಳ ಬಾಧೆಯಿಂದ ಕಾಪಾಡುವದಕ್ಕಾಗಿ ತೆಗೆದುಕೊಳ್ಳುತ ಬರುವ ಪೇಷಕಷ್ ಮೊಬಲಗನ್ನು ಹೆಚ್ಚಿಸಬಹುದು ಅಥವಾ ತೆರಬೇಕಾದ ಸೈನ್ಯದಹಾಜರೀ

ಯನ್ನಾದರೂ ಕೇಳಬಹುದು. ಮೈಸೂರು ದೇಶದ ಪ್ರಕೃತಿಸ್ಥಿತಿಯು ಈ ಎರಡು ಬಾಬುಗಳಲ್ಲೂ ಬ್ರಿಟಿಷಿನವರಿಗೆ ಸಹಾಯ ಮಾಡುವದಕ್ಕೆ ಶಕ್ತವಾಗಿಲ್ಲವು. ಈಗಿನ ಮಹಾರಾಜರವರು ರಾಜ್ಯಧುರವು ಕೈಗೊಳ್ಳುವ ಕಾಲದಲ್ಲಿ ಸಬ್‌ಸಿಡಿಯ ಬಗ್ಗೆ ಯಾವ ಮೊತ್ತವನ್ನು ಕೊಡುವದಕ್ಕೆ ಒಪ್ಪಿದ್ದರಾಗಿ ಕರಾರ್ಮಾಡಿಕೊಂಡು ರಾಜ್ಯವು ಪದವಿ ಕೊಂಡರೋ, ಆ ಮೊಬಲಗನ್ನು ಕೊಡತಕ್ಕದ್ದು, ಆ ಕಾಲದ ಸ್ಥಿತಿಯನ್ನಾಲೋಚಿಸಿ, ಬ್ರಿಟಿಷ್ ಗವರ್ನಮೆಂಟಿನಿಂದ ಏನುಪಕರಿವಿಗೋ ಏಮುವ ಋಣಗಳಕಾಲ ವಾಯಿದೆ ಪಡಕ್ಕೊಂಡಿರುವದಲ್ಲದೆ ಮುಂದೆ ಅದನ್ನು ಮಾಪಮಾಡಬೇಕು, ಅಥವಾ ಮರಳಿ ದೀರ್ಘಕಾಲ ವಾಯಿದೆ ಕೊಡಬೇಕೆಂದು ಕೇಳಿಕೊಂಡಿರುತ್ತಾರೆ. ಪಾಜು ಹೆಚ್ಚಿಸುವ ನಿಮಿತ್ತದಲ್ಲಿ, ಪೀಟರ್ ಮಹಾರಾಜರವರು ನಮಗಿ ಕೊಂಡಿದ್ದ ಕರಾರ್ ಅನುಸರಿಸಿ, ನಾಲ್ಕುಸಾವಿರ ಸರಾಸ್ ಫೌಜು ಏನುವ ಉದ್ದೇಶವು ತಿಳಿದೇ ಅದನ್ನು ಏಂದು ಪರಿಗಣಿಸಿ ಇದಾರೆ. ಅಂತಾ ವಾಯಿದೆಯೂ ಇನ್ನು ಕೆಲವು ದಿವಸಗಳೂ ಲಗಾಗಿಯೇ ಪ್ರಸ್ತಾಪವಾಗುತ ಬರುವದರಿಂದ, ಪ್ರಕೃತ ಸುಂದರ್ಭವನ್ನಾಲೋಚಿಸಿ, ಆ ರಾಜ್ಯದ ಕಳೆದ ಕೂಡಲೆ ಬ್ರಿಟಿಷ ಗವರ್ನಮೆಂಟವರು ಜಾಸ್ತೀ ಸಬ್‌ಸಿಡಿಯನ್ನು ಕೇಳದೆ ಮರಳಿ ವಾಯಿದೆ ಕೊಡುವರೆಂದು ನಂಬುವದಕ್ಕೆ ಸುದೈವಾತ್ ಅವಕಾಶ ದೊರೆಯಲಿಲ್ಲವು.

ಇಲ್ಲಿನ ಪ್ರಕೃತ ಅವಸ್ಥೆಯನ್ನು ನೋಡಲಾಗಿ, ಜಾಸ್ತೀ ಸಬ್‌ಸಿಡಿಯ ರೂಪ ಮಾಡಿದಂತೆ ತೀವ್ರ ದಾರಾಳವಾಗಿ ಸರಿಸುತ ಬರುತ್ತಿರುವ ಕಾಣುತಿದೆ ಯೇ ಜೊರತು ಆಮೂಂದು ಭಾರವನ್ನು ಮುಂದೆ ಹೊರಬೇಕಾದವನೆಂಬ ಯೋಚನೆಯುಳ್ಳೇ ಮುದ್ದಾಂಗ ಮರೆತಿರುವಂತೆ ತೋರುತಿದೆ. ಇಂತಾ ಯಿಕ ಜಾಸ್ತೀ ಸಬ್‌ಸಿಡಿ ಮೊಬಲಗನ್ನು ಕೊಡಬೇಕಾದ ನಿರ್ಬಂಧ ಉಂಟಾಗುವ ಪಕ್ಷಕ್ಕೆ ಲವನಾಪತ್ ಖಜಾನೆಯಿಂದಲಾಗಲಿ ಸಾಲ ಮಾಡಿಯಾಗಲಿ ಕೊಟ್ಟು ಸುದಾರಿಸಿಕೊಳ್ಳಬಹುದೆಂದು ಯೋಚಿಸುವದಕ್ಕೆ ಅವನಾಪತ್ ಖಜಾನೇ ಖಾಲೀಯಾಗಿಯೂ, ಇದುವರಿವಿಗೇನೇ ಮುನ್ನೂರು ಐಂದು ಕೋಟಿ ರೂಪಾಯಿಗಳು ಸಾಲವಾಗಿಯೂ ಇರುತಿದೆ. ಇಂತಾಸ್ಥಿತಿಯು ದಿನಸೊಂದ ಜಾಸ್ತೀ ಸಬ್‌ಸಿಡಿ ಮೊಬಲಗಿಗಾಗಿ ಪ್ರಜೆಗಳಿಗೆ ಜಾಸ್ತೀ ಕಂದಾಯಗಳು ಮೊಕರರ್ಮಾಡಿಯೇ ತೀರಬೇಕಾಗುತ್ತದೆ. ನಮ್ಮ ರಾಜ್ಯಭಾರಕ್ರಮವನ್ನು ಕುದ್ದಾಂಗ ಬದಲಾಯಿಸಬೇಕಾಗಿಯೂ ಬರುವದು.

ಬ್ರಿಟಿಷ ಗವರ್ನಮೆಂಟವರು ಋಣ್ಣಗಳನ್ನು ಕಮ್ಮಿಮಾಡುವದರ ಮೂಲಕ ಮೈಸೂರುದೇಶಸ್ಥರಿಗೆ ಬಾಧಕವೇನೆಂದು ಯಾರಾದರು ಕೇಳಬಹುದಷ್ಟೆ, ಯಾವ ರಾಜ್ಯದಲ್ಲಿ ಋಣ್ಣಗಳನ್ನು ಕಮ್ಮಿ ಮಾಡಬೇಕಾದಗ್ಯೂ ಪ್ರಾಯಶಃ ಲವಾಜಮಾ ಕಮ್ಮಿ ಮಾಡುವಣವೇ. ನೇಟಿವ್ ರಾಜ್ಯಗಳಪೈಕಿ ಮೈಸೂರೊಂದು ವಿನಾ ಇತರವಾದವುಗಳಲ್ಲಿ ಸಂಬಳಗಳು ಕಮ್ಮಿಯಾಗಿಯೂ, ಪಬ್ ಮ್ಯಾಜಸ್ಟೀ ದೇಶದಲ್ಲಿ ಜಾಸ್ತೀಯಾಗಿಯೂ ಇರುತಿವೆ. ೨೪ ಲೀ ಸಬ್‌ಸಿಡಿ ಕೊಡುತ ನೌಕರರಿಗೆ ಜಾಸ್ತೀ ಸಂಬಳಗಳು ಕೊಡುವದು ಯಾವ ಲಗನರಿಗೇ ಆಗಲಿ ಸಾಧ್ಯವಾದ ಕೆಲಸವಲ್ಲವು, ಮತ್ತು ಉಚಿತವಲ್ಲವು. ಈದೇಶದಲ್ಲಿ ನೇಟಿವ್ ಆಫಿಸರಗಳಿಗೆ ಪಬ್ ಮ್ಯಾಜಸ್ಟೀ ದೇಶದ ಆಫಿಸರಗಳಿಗೆ ಸ್ವಲ್ಪ ಹೆಚ್ಚುಕಮ್ಮಿ ಸಮವಾದ ಸಂಬಳಕೊಡುತ್ತಾರಾಗಿ ಆ ಆಶೆಯಿಂದ ಲೇ ಅನ್ಯದೇಶದವರನೇಕರು ಮೇಲ್ಬಿದ್ದು ಇಲ್ಲಿಗೆ ಬರುವರಿದಾರೆ. ಪಬ್ ಮ್ಯಾಜಸ್ಟೀ ದೇಶದಲ್ಲಿ ಜಾಸ್ತೀ ಸಂಬಳ ಕೊಡಲ್ಪಡುತ ಕೆಲಸ ಸುಲಭವಾಗಿರುವ ಈಗಿನ ಕಾಲದಲ್ಲೇ ಇಲ್ಲಿಂದ ಅನೇಕರು ಇಲ್ಲಿನ ನೌಕರಿಗಳಿಗೆ ಬರುತಲಿರುವರು, ಅಲ್ಲಿ ಸಂಬಳ ಕಮ್ಮಿಯಾ ಅಥವಾ ಬಾಬೀ ಸಂಬಳಗ ಕಮ್ಮಿ ಜಾಸ್ತೀಯಾಗುವದಕ್ಕೆ ಅಂತಾ ಜನಗಳು

ಈದೇಶದ ನೌಕರಿಯಮೇಲೆ ಮತ್ತಷ್ಟು ಆಶೆ ಇರುವದೇನಾಶ್ಚರ್ಯ. ಈ ಸಂಸ್ಥಾನದ ಉನ್ನತಾಧಿಕಾರಿಗಳ ಉದ್ದೇಶವು ನೋಡಲಾಗಿ, ಅನ್ಯದೇಶೀಯರನ್ನು ಕಡಿಮೆಮಾಡಿ ಅವರಿಗೆ ದೊಡ್ಡ ದೊಡ್ಡ ಅಧಿಕಾರಗಳು ಕೊಟ್ಟರೇನೇ ಸ್ವದೇಶಾಧಿಕಾರಕ್ಕೆ ಚಿಂಬಲವುತಲೂ, ಅನ್ಯದೇಶದಲ್ಲಿ ಇಂಗ್ಲಿಷ್ ಭಾಷೆಯೊಳು ಪರೀಕ್ಷೆ ಕೊಟ್ಟವರಿಗೆ ನೌಕರಿಗಳು ಸರಬರಾಯಿಮಾಡಿದರೇನೇ ತಾವು ಸ್ವಯಂ ವಿದ್ಯಾಸಂಪನ್ನರೆನ್ನಿಸಿಕೊಳ್ಳುವದಕ್ಕೂ ನಿವ್ವತ್ತೃಷ್ಣಶಾತಿಗಳೆಂಬ ಪ್ರತಿಷ್ಠೆಯು ಪಡೆಯುವದಕ್ಕೂ ಅವಕಾಶ ದೊರೆಯುವು ಯೋಚಿಸಿರುವಂತೆ ಕಾಣುತಿದೆ.

ಇದು ಶಿವಾಯಿ, ಕೆಲ ತಲಬಗಳಮೇಲೆ ಲಾಯದಾದ ನೇಟಿವ್‌ಗಳನ್ನು ಮೊಕರರ್ಮಾಡಿ ಅವರ ಮೂಲಕ ನಿರ್ವಹಿಸಬಹುದಾದ ಕೆಲಸಗಳೆಲ್ಲ, ಸಂಸ್ಥಾನದ ತಾತ್ಕಾಲಿಕ ಉಪ್ಪಾನುಪಪತ್ತಿಯನ್ನು ಸಹ ಚಿಂತಿಸದೆ, ಯೂರೋಪಿಯರ್ಗಳನ್ನು ಬಾರೀ ಸಂಬಳಗಳಮೇಲೆ ಮೊಕರರ್ಮಾಡಿಯೂ ಮುಂದೆ ಮಾಡತಕ್ಕವರಾಗಿಯೂ ಇದಾರೆ. ಈ ರೀತಿ ಅವರ ನಡಸುತಬಂದರೆ ಸಂಸ್ಥಾನವನ್ನು ಉತ್ತೇಜಿಸುವವು ಹ್ಯಾಗೂ, ಬ್ರಿಟಿಷ ಗವರ್ನಮೆಂಟಿಗೆ ಕೊಡತಕ್ಕ ಸಾಲೀಯಾನಾ ಸಬ್‌ಸಿಡಿಯನ್ನು ಸಲ್ಲಿಸುವ ಮಾರ್ಗ ಯಾವದೋ, ನಾವರಿಯೆವು. ಮುಖ್ಯವಾಗಿ ಈ ಸಂಸ್ಥಾನದ ಆದರ್ಶವು ಕ್ಷೀಣಿಸತಕ್ಕ ಸ್ಥಿತಿಯಲ್ಲಿಲ್ಲದ ಇರುವದಕ್ಕಾಗಿ ಯಿನ್ನು ಚಿಂತಿಸಿದಾಗ್ಯೂ ಸಾಲದೆ.

THE INVESTITURE OF THE MAHARAJAH OF MYSORE, G.C.S.I.

ಶ್ರೀಮದಭಂಗುರ ಮಂಗಳ ಪರಂಪರಾ ಮಹಿತವಾದ ಮೈಸೂರು ರಾಜಧಾನಿಯಲ್ಲಿ ಈತಿಂಗಳ ೨೧ನೇ ತಾರೀಖು ಬುಧವಾರದದಿನ ಸಾಯಂಕಾಲ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರವರಿಗೆ "ಗ್ರ್ಯಾಂಡ್ ಕಮಾಂಡರ್ ಆಫ್ ದಿ ಮೋಸ್ಟ್ ಎಕ್ಸಾಲ್ಟೆಡ್ ಆರ್ಡರ್ ಆಫ್ ದಿ ಸ್ಟಾರ್ ಆಫ್ ಇಂಡ್ಯ" ಎಂಬ ಮಹಾ ಗೌರವಾಸ್ಪದವಾದ ಅಲ್ಪಾಬನ್ನು ಮಹಾರಾಜ್ಞೀಯವರ ಏದ್ಯಾಜ್ಞಾ ಪ್ರೇರಿತರಾದ ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟ ಮಿಸ್ಟರ್‌ಲೈಯಲ್‌ರವರು ಒಪ್ಪಿಸಿದರೆಂಬ ಶುಭ ವೃತ್ತಾಂತವು ಅವರ ಪ್ರಜೆಗಳೆಲ್ಲರಿಗೂ ಅತ್ಯಾನಂದ ಸುದಾಯಕವಾದದ್ದಲ್ಲದೆ ದನ್ಮೂಲಕ ಹಿಂದೂ ಅರಸರ ಗೌರವ ಪ್ರಾತಸ್ಥ್ಯಗಳೆಂ ಕುರಿತು ಮನಃಪೂರ್ವಕವಾಗಿ ಸಂತೋಷಿಸತಕ್ಕವರು ಸಹ ನಿಶ್ಚಯತಃ ತೃಪ್ತರಾದವರು. ಅಸಾಧಾರಣವಾದ ಈ ಪ್ರಾಶಸ್ತ್ಯವು ಶ್ರೀಮನ್ಮಹಾರಾಜರವರಿಗೆ ಕಲ್ಪಿಸಲ್ಪಡುವ ಅಂಶವು ಮೊದಲೇ ವ್ಯವಸ್ಥಿತವಾಗಿದ್ದದರಿಂದ, ತದಂಗವಾಗಿ ನಡೆಯಬೇಕಾದ ಸ್ಥಳಾಲಂಕಾರಾದಿಗಳೆಲ್ಲವು ನಡೆದಿದ್ದವು. ಆದಿನಸಾಯಂಕಾಲ ಮಹಾರಾಜರವರಿಂದಾಜ್ಞಾಪ್ತರಾದ ಪ್ರಧಾನಾಧಿಕಾರಿಗಳಿಂದಲೂ, ಪ್ರಸಿದ್ಧರಾದ ಆಸ್ಥಾನ ವಿದ್ವಾಂಸರಿಂದಲೂ ರಾಜಾಸ್ಥಾನ ಪ್ರವೇಶಯೋಗ್ಯರಾದ ಪ್ರಮುಖರಿಂದಲೂ, ರಾಜಬಂಧುಗಳಿಂದಲೂ, ದರ್ಬಾರ್ ಸಾದವು ನಿಬಿಡವಾಗಿರಲು, ಸುಂದರ ಸುಲಕ್ಷಣ ಗಂಭೀರಗಾತ್ರರಾಗಿಯೂ, ಅನವರತ ವಿಹಿತ ನಿಜಜನ ಪ್ರಾರ್ಥನಾ ಪ್ರಸನ್ನರಾಗಿಯೂ ಇರುವ ಶ್ರೀಮನ್ಮಹಾರಾಜರವರ ಸವಾರಿಯು ಸಭಾಮಂಟಪಕ್ಕೆ ಚಿತ್ತೈಸಿದಕೂಡಲೇ ಉನ್ನತಸ್ತಕ ಹರ್ಷ ಭರ ಸಂಭ್ರಮ ದೃಢ ಮುಕುಲಿತಾಂಜಲಿ ಪುಟರಾದ ಸಭಾಜನಗಳ ಕೋಲಾಹಲವು ನಿಯಂದಲೂ, ರಾಜ ಮರ್ಯಾದಾರ್ಥವಾಗಿಯೂ, ಶುಭಸೂಚಕವಾಗಿಯೂ ಹಾಕಲ್ಪಟ್ಟ ೨೧ ತೋಪುಗಳ ಉದ್ಘೋಷದಿಂದಲೂ ಸದರೀ ಸಾದವು ಮುಹೂರ್ತಕಾಲ ಶಬ್ದಮಯವಾಗಿರಲು. ತರುವಾಯ ಬ್ರಿಟಿಷ ರೆಸಿಡೆಂಟವರುಚಿತಮರ್ಯಾದೆಗಳೊಡನೆ ದರ್ಬಾರ್ ಪ್ರವೇಶವು ಮಾಡಿದನಂತರ ಶ್ರೀಮನ್ಮಹಾರಾಜರವರು

ಕೇವಲ ಭಕ್ತಿ ಗೌರವ ಪುರಸ್ಸರವಾಗಿ ಅವರು ಬರಮಾಡಿಕೊಳ್ಳಲ್ಪಟ್ಟರು. ಬಳಿಕ ಮಿ|| ಲೈಯಲ್‌ಯವರು ಮೃದು ಮಧುರ ಗಂಭೀರಯುಕ್ತವಾದ ಪ್ರಸಂಗದಮೂಲಕ ಶ್ರೀಮನ್ಮಹಾರಾಜರಿಗೆ ಪ್ರಾಪ್ತವಾದ ಘನತರ ಪ್ರಶಸ್ತಿಗಾಗಿ ತಮಗುಂಟಾದ ಆನಂದಾತಿಶಯವನ್ನು ವ್ಯಕ್ತಪಡಿಸಿ ಶುಭವಾದನಂಗೈದು ಶ್ರೀಮನ್ಮಹಾರಾಜ್ಞೀ ಪ್ರೇಷಿತಗಳಾದ ನವರತ್ನ ಪಚ್ಚಮುದ್ರೆಯನ್ನೂ ಅನರ್ಘ್ಯಾಭರಣವನ್ನೂ ರಾಜಾರ್ಹಗಳಾದ ಇತರ ಪದಾರ್ಥಗಳನ್ನೂ ಅರ್ಪಿಸಿದರು. ಆಗ ಶ್ರೀಮನ್ಮಹಾರಾಜರವರು ಅವುಗಳನ್ನು ಸಾಕ್ಷಾತ್ ಮಹಾರಾಜ್ಞೀಯವರಿಂದ ಪಡಕ್ಕೊಂಡಂತೆ ಭಾವಿಸಿ ಭಕ್ತಿ ಗೌರವಗಳೊಡನೆ ಸ್ವೀಕರಿಸಿ ತಮ್ಮಹೃದಯಂಗಮವಾದ ಪ್ರೀತಿ ಗೌರವ ಕೃತಜ್ಞತಾದಿ ಭಾವಗಳನ್ನು ತಿಳಿಯಪಡಿಸಿದರು. ಕೂಡಲೇ ಸಭೆಬರಖಾಸ್ತಾಯಿತು. ಅನಂತರ ರಾತ್ರಿ ಮುಂಜಿಗೆ ವಿಶೇಷ ಸಂಭ್ರಮದೊಡನೆ ಅಲ್ಲಿಗ ಯೋಗ್ಯದ್ದವರೆಲ್ಲ ದಿವ್ಯ [illegible]

ಈಸುಂದರ್ಭದಲ್ಲಿ ಬಂದ 'ತಮ್ಮ ತಿಳಿದ ಮಟ್ಟಿಗೆ [illegible] ಗಿದೆ ಏನೆಂದರೆ— ಈ ಬಿನ್ನವತ್ತಳೆ ಮಹಾರಾಜ್ಞೀಯವರ [illegible] ಮೇಲೆ ಈ ದೇಶಕ್ಕೆ ಉಂಟುಮಾಡಲ್ಪಟ್ಟ ಪ್ರಯೋಜನಗಳು [illegible]. ಅಂತಾ ಪ್ರಯೋಜನವನ್ನು [illegible] ಒಟ್ಟಿಗೆ ಉಂಟಾದದರಿಂದ [illegible] ಪಕ್ಷ್ಯೇನ [illegible] ಗಳಾದಿ [illegible] ಕೃಷ್ಣರಾಜ ಒಡೆಯರವರಿಗ [illegible] ಮರಳಿ ಒಪ್ಪಿಸುವಂತೆ [illegible]: ಬ್ರಿಟಿಷ [illegible] ಮಹಾರಾಜರವರ ಸ್ವಂತಕ್ಕೇ ಕೊಟ್ಟುಬಿಟ್ಟರು, ಮಹಾರಾಜರವರು ತಮ್ಮ ವಂಶಕ್ಕೆ ಒಬ್ಬ ಪುತ್ರನಿಲ್ಲದೆ ಹೋಗುವಂತೆ ದತ್ತುಮಾಡಿಕೊಂಡು ಸ್ವೀಕಾರವನ್ನಾಗೀಕರಿಸಿ ಬಳಿಕ ಸ್ವೀಕೃತಪುತ್ರನ್ನು ರಾಜ್ಯಕ್ಕೆ ಒಬ್ಬ ಹಕ್ಕುದಾರರನ್ನಾಗಿ ಮಂಜೂರ್ಮಾಡಿದರು. ಪ್ರಕೃತ ಮಹಾರಾಜರವರ ಬಾಲ್ಯಾವಸ್ಥೆಯಲ್ಲಿಯೇ ಅವರಿಗೆ [illegible] ಗಪ್ರಂಬಾವದರಿಂದ ಅವರಿಗೆ ತಾವೇ ಸಾಕರು ಗದ್ದು [illegible] ವಿದ್ಯಾ ಬುದ್ಧಿ ವಿವೇಕಗಳನ್ನೆಲ್ಲ [illegible] ವಿವಾಹಮಾಡಿ ಪ್ರಾಪ್ತವಯಸ್ಕರಾದ ಕೂಡಲೇ ತಮ್ಮ ಪೈತೃಕ ರಾಜ್ಯವನ್ನೊಪ್ಪಿಸಿ ಅವರ ನಿರ್ವಹಣೆಯ ಬಗ್ಗೆ ಬೇಕಾದ ಅನುಕೂಲ್ಯಗಳನ್ನೆಲ್ಲ ಕಲ್ಪಿಸಿದರು. ಮಹಾರಾಜರವರ ಮುಕ ಗೌರವಕ್ಕಾಗಿ ಪ್ರಸಕ್ತ ಅಸಾಧಾರಣವಾದ ಬಿರುದು ದಯಪಾಲಿಸಿದರು. ಈ ದೇಶೀಯರೆಲ್ಲರೂ ಬಹುಕಾಲದಿಂದ ನಿರೀಕ್ಷಿಸುತಲಿದ್ದ ಶುಭಪರಂಪರೆಯು, ಇರ್ಮ್ಮ ತ್ವರೆಯೊಳು ಕೈಗೂಡಿದ್ದಕ್ಕಾಗಿ ಯೆಲ್ಲರೂ ಬಹಳ ಸಂತೋಷಿಸುತಲಿದಾರೆ. ಶ್ರೀಮನ್ಮಹಾರಾಜರವರು, ಸ್ವೀಕಾರ ಕಾಲದಲ್ಲಿ ತಮ್ಮ ತಂದೆಗಳಾದ ಸೌಭಾಗ್ಯ ಮಹಾರಾಜಾ ಕೃಷ್ಣರಾಜ ಒಡೆಯರವರು ಈ ದೇಶೀಯರಿಗೆ ಕೊಟ್ಟ ಅಭಯ [illegible] ಗೌರವಿಸಿ ಅದರಂತೆ ನಡಸುತ ಪ್ರಜಾ ರಂಜಕರಾಗಬೇಕೆಂಬದೇ ಅಂತರವಾದ ನಮ್ಮ ಕೋರಿಕೆಯಾಗಿರುತಿದೆ—

"[illegible] ಕಾರ್ಯ ಸಿರೀಟವನ್ನು ಧರಿಸತಕ್ಕದ್ದನ್ನು, [illegible] ಕೆಂಬ [illegible] ಸಂತೋಷದಿಂದ ಶ್ರೀಕಿ [illegible] ವಿಶ್ವ [illegible] ನಮ್ಮ ವಿಷಯವಾಗಿ [illegible] ಹೂ, [illegible] ನಮ್ಮ ಪತ್ತಿದ ನಿಷ್ಕರ್ಷೆಯು [illegible] ಸ್ವಲ್ಪ ನಿಪುಣ [illegible] ಸಾಕ್ಷಿ [illegible] ಸಮಸ್ತ [illegible] ಭಾಗದ ನಮ್ಮ ವಿಷ್ಣುವರ್ಧನೆಯನ್ನು ಕೇಳಿ [illegible] ವರಾಜ [illegible] ನಮ್ಮ [illegible] ದೃಢ ನಿಶ್ಚಯದಿಂದ ಪ್ರಜಾನುರಂಜನ [illegible] ಗವರ್ನಮೆಂಟಿನ ದಕ್ಷತೆ [illegible] ನಮ್ಮ [illegible]

[illegible] ವಿಶ್ವಾಸವನ್ನು [illegible] ನಮ್ಮ ಸ್ವಲ್ಪ ಕಾಲದಲ್ಲಿ [illegible] ಈ [illegible] ಸಂತೋಷ [illegible] ಕರ್ತವ್ಯವೆಂದು [illegible] ನಮ್ಮ ಪ್ರಜೆಗಳ [illegible] ಸಂತೋಷಪಡುತ್ತೇವೆ [illegible] ಕೀರ್ತಿ [illegible] ಶ್ರೇಯಸ್ಸು [illegible]

THE ARHAT SYSTEM No. 15
ಜೈನ್ಯ ಅಥವಾ ಆರ್ಹತಸಿದ್ಧಾಂತವು.

ಬೌದ್ಧರಯುಕ್ತಿ ವಾದಗಳಮೇಲೆ ಆರ್ಹತರು ಹೇಳತಕ್ಕ ದೋಷಸಿದ್ಧಾಂತಗಳನ್ನು ಗತವಾರದಲ್ಲಿ ತಿಳಿಸಿ ಪ್ರಕೃತಿವಾರ್ಥವಿಲಾಸಗಳಾದವರೆಲ್ಲರೂ, ಆತ್ಮನ್ಮತಾನಬಂಧಿಗಳಾಗತಕ್ಕದ್ದು ಯೋಗ್ಯವಾಗಿರುತಿದೆಂದು ಸೂಚಿಸಿದೆವಷ್ಟೆ. ಆ ವಿಚಾರವು ಕೇವಲ ಶಾಸ್ತ್ರೀಯವಾದ್ದಾಗಿಯೂ ಬಹಳಗಹನವಾದ್ದಾಗಿಯೂ ಇದ್ದದರಿಂದ ಅದರ ತಾತ್ಪರ್ಯವು ಸರ್ವಸಾಧಾರಣ್ಯೇನ ಯೆಲ್ಲರಿಗೂ ತಿಳಿದಿರಲಾರದೆಂದೆಣಿಸಿ ಇದುವರಿಗೆ ತಿಳಿಸಿದ ಅಂಶವನ್ನು ಪರಿಮಿತ ಶಬ್ದಗಳಿಂದ ಸಂಗ್ರಹವಾಗಿದರದಿ ಮರಳಿ ತಿಳಿಸುವೆವು, ಹ್ಯಾಗೆಂದರೆ —

ಬೌದ್ಧರು, ಆತ್ಮವನ್ನೊಪ್ಪಿಕೊಳ್ಳದೆ ಪುನರ್ಜನ್ಮಗಳನ್ನುಮಾತ್ರ ಅಂಗೀಕರಿಸುತ್ತಾರೆ, ಕರ್ತೃವಿಲ್ಲದೆ, ಕರ್ಮಮಾತ್ರ ವುಂಟೆಂದು ಹೇಳುತ್ತಾರೆ. ಮುಮುಕ್ಷುವಿಲ್ಲದೆ ಮೋಕ್ಷವುಂಟೆಂದು ತಾತ್ಪರ್ಯವದುತ್ತಾರೆ, ಅನಿರ್ವಚನೀಯವಾದ ಸಮಸ್ತ ಪದಾರ್ಥಗಳೂ ಕ್ಷಣಿಕಗಳೆಂಬದಾಗಿ ಭಾವಗೊಳ್ಳುತ್ತಾರೆಂಬದೇ ಆರ್ಹತರ ಪೂರ್ವಪಕ್ಷವು. ಅರ್ಹತ್‌ಸ್ವರೂಪವನ್ನುಕುರಿತು ಚಂದ್ರಸೂರಿ ಯೆಂಬವರು ಆಪ್ತನಿಶ್ಚಯಾಲಂಕಾರವೆಂಬ ಗ್ರಂಥದಲ್ಲಿದರದಿ ಕಂಡಂತೆ ವಿವರಿಸಿರುತ್ತಾರೇ ನೆಂದರೆ —

ಶ್ಲೋ|| ಸರ್ವಜ್ಞೋಜಿತರಾಗಾದಿದೋಷಸ್ತ್ರೈಲೋಕ್ಯಪೂಜಿತಃ| ಯಥಾಸ್ಥಿತಾರ್ಥವಾದೀಚದೇವೋರ್ಹನ್‌ಪರಮೇಶ್ವರಃ||

ಕೌತಾತಿತರು ಅಥವಾ ಭಾಟ್ಟಕುಮಾರಿಲರೆಂಬವರಿಂದ ಅಂಗೀಕರಿಸಲ್ಪಟ್ಟ ಐದುವಿಧ ಪ್ರಮಾಣಗಳಪೈಕಿ ಒಂದರಿಂದಲಾದರೂ ಸರ್ವಜ್ಞನು ನಿರೂಪಿಸಲ್ಪಡದಮೇಲೆ ಸರ್ವಜ್ಞವದನೇದನೀಯನಾದ ಪುರುಷನೊಬ್ಬನುಂಟೆಂಬದು ಹ್ಯಾಗೆಸಿದ್ಧಿಸುವದೆಂದು ಆಕ್ಷೇಪಿಸಬಹುದಲ್ಲವೆ?

ಶ್ಲೋ|| ಸರ್ವಜ್ಞೋದೃಶ್ಯತೇತಾವನ್ನೇದಾನೀಮಸ್ಮದಾದಿಭಿಃ| ದೃಷ್ಟೋನಚೈಕದೇಶೋ

ಸ್ತ್ರಲಿಂಗುವಾಯೊನುವಾವಯೆತ ॥೧॥ ನ ಚಾಗಮವಿಧಿಃಶಕ್ಚಿನ್ನಿತ್ಯಸ್ಸರ್ವಜ್ಞಬೋಧಕಃ । ನಚತತ್ರಾರ್ಥವಾದೀನಾಂತಾತ್ಪರ್ಯ ಮಪಿಕಲ್ಪ್ಯತೆ ॥೨॥ ನಚಾನ್ಯಾರ್ಥಪ್ರಧಾನೈಸ್ತೈಸ್ತದಸ್ತಿತ್ವಂವಿಧೀಯತೆ ॥ ನಚಾನುವಾದಿತುಂಶಕ್ಯಃಪೂರ್ವಮನ್ಯೈರಬೋಧಿತಃ ॥೩॥ ಅನಾದೇರಾಗಮಸ್ಯಾರ್ಥೋನಚಸರ್ವಜ್ಞಆದಿಮಾನ್ ॥ ಕೃತ್ರಿಮೇಣತ್ವಸತ್ಯೆನಸಕಥಂಪ್ರತಿಪಾದ್ಯತೆ ॥೪॥ ಅಥತದ್ವಚನೆನೈವಸರ್ವಜ್ಞೋನ್ಯೈಃಪ್ರತೀಯತೆ॥ ಪ್ರಕಲ್ಪ್ಯೇತಕಥಂಸಿದ್ಧಿರನ್ಯೋನ್ಯಾಶ್ರಯಯೋಸ್ತಯೊಃ॥೫॥ಸರ್ವಜ್ಞೋಕ್ತತಯಾವಾಕ್ಯಂಸತ್ಯಂತೆನತದಸ್ತಿತಾ॥ಕಥಂತದುಭಯಂಸಿದ್ಧ್ಯೆತ್ಸಿದ್ಧಮೂಲಾಂತರಾದೃತೆ॥೬॥ ಅಸರ್ವಜ್ಞಪ್ರಣೀತಾತುವಚನಾನ್ಮೂಲವರ್ಜಿತಾತ್ ॥ ಸರ್ವಜ್ಞಮವಗಚ್ಛಂತಸ್ಸ್ವವಾಕ್ಯಾತ್ಕಿಂನಜಾನತೆ ॥ ಸರ್ವಜ್ಞಸದೃಶಂಕಂಚಿದ್ಯದಿಪಶ್ಯೇಮಸಂಪ್ರತಿ ॥ ಉಪಮಾನೆನಸರ್ವಜ್ಞಂ ಜಾನೀಯಾಮತತೋವಯಂ ॥೮॥ ಉಪದೇಶೋಹಿಬುದ್ಧಸ್ಯ ಧರ್ಮಾಧರ್ಮಾದಿಗೋಚರಃ ॥ ಅನ್ಯಥಾನೋಪಪದ್ಯೆತಸಾರ್ವಜ್ಞ್ಯಂಯದಿನಾಭವತ ॥೯॥

ಮೇಲಿನ ಶ್ಲೋಕಾರ್ಥವೇನೆಂದರೆ ಸರ್ವಜ್ಞನಾದ ಪುರುಷನು ನಮ್ಮ ದೃಷ್ಟಿಗೆ ಗೋಚರನಾಗಲಾರನು. ಆತನ ಸಿದ್ಧಿಯು ಪ್ರತ್ಯಕ್ಷಪ್ರಮಾಣದಿಂ ಗ್ರಾಹ್ಯವಲ್ಲವು. ಮತ್ತು ಅವನಿಗೆ ಅನುಮಾಪಕವಾದ ಚಿಹ್ನೆಯಿಲ್ಲವು. ಸರ್ವಜ್ಞಕರ್ತೃವಾಕ್ಯವಾದ ಪುರುಷನ ಸಿದ್ಧಿಯನ್ನು ಬೋಧಿಸುವಂತಾ ವಿಧಾಯಕಗಳಾದ ಯಾವವಿಧ ಆಗಮಗಳೂ ಇಲ್ಲವು ಅರ್ಥವಾದ ವಾಕ್ಯಗಳಿಗೆ ಆತನ ಪರವಾಗಿ ತಾತ್ಪರ್ಯ ಕಲ್ಪಿಸಲ್ಪಡತಕ್ಕದ್ದಲ್ಲವು. ಪ್ರಾಧಾನ್ಯೇನ ಅನ್ಯಾರ್ಥಬೋಧಕಗಳಾದ ಅರ್ಥಗಳಿಂದ ಅಸ್ತಿತ್ವವನ್ನು ವಿಧಿಸಲಾಗದು. ಪೂರ್ವದಲ್ಲಿಯ ಅನ್ಯರಿಂದಬೋಧಿತವಾದಕಾರಣ ಅನುವಾದಿಸಲಿಕ್ಕೆ ಶಕ್ಯವಾದ್ದಲ್ಲವು. ಆದಿಪುರುಷನಾಗಿಯೂ ಸರ್ವಜ್ಞನಾಗಿಯೂ ಇರತಕ್ಕವನು, ನಿತ್ಯವಾದವೇದಾರ್ಥಪ್ರತಿಪಾದ್ಯನಾಗಲಾರನು, ಮತ್ತು ಪೌರುಷೇಯವಾದ ಕೃತ್ರಿಮವೇದದಿಂದವನುನಿರ್ಧರಿಸಲ್ಪಡಲಾರನು. ಸರ್ವಜ್ಞತ್ವವನ್ನು ಆತನವಾಕ್ಯಪ್ರಮಾಣದಿಂದಲೇ ಅಂಗೀಕರಿಸುವುದಾದರೆ ಅನ್ಯೋನ್ಯಾಶ್ರಿತಗಳಾದ ಆತ್ಮ ಅಂದರೆ ಸರ್ವಜ್ಞತ್ವ ಮತ್ತು ಆತನವಾಕ್ಯಗಳು ಈ ಎರಡೂ ಹ್ಯಾಗೆಸಿದ್ಧಿಸುವವು? ಸರ್ವಜ್ಞನಾದೊಬ್ಬನವಾಕ್ಯವನ್ನು ಆತನಸ್ಥಿತಿಯಿಂದ ಸತ್ಯವೆಂದು ಭಾವಿಸುವಂತೆ ಹೇಳಿ ಇದರಿಂದಲೇ ಆತ್ಮನಸ್ಥಿತಿ ನಿರೂಪಿಸಲ್ಪಡುತ್ತದೆಂದು ನುಡಿದರೆ ಪ್ರಾಥಮಿಕವಾದ ಪ್ರಮಾಣಾಂತರಾಭಾವದೊಳು ಅನ್ಯೋನ್ಯಾಶ್ರಿತಗಳಾದ ಯೆರಡೂ ಹ್ಯಾಗೆಸಿದ್ಧಿಸುವವು! ಅಸರ್ವಜ್ಞಪ್ರಣೀತವಾದ ಮೂಲರಹಿತ ವಾಕ್ಯದಿಂದ ಸರ್ವಜ್ಞತ್ವವನ್ನು ತಿಳಿಯತಕ್ಕವರು ತಿಳಿಯಲಿ ಶಕ್ತರಾಗಲಾರರು. ಸರ್ವಜ್ಞಸದೃಶವಾದ ಯತ್ಕಿಂಚಿತ್ಪದಾರ್ಥವನ್ನು ನೋಡಿದಲ್ಲಿ ಉಪಮಾನಪ್ರಮಾಣದಿಂದ ಅವನನ್ನರಿಯಬಹುದೆಂಬದೇ ನಮ್ಮ ಮತವಾಗಿರುತ್ತದೆ. ... ಸರ್ವಜ್ಞನಾಗದಿದ್ದರೆ, ಧರ್ಮಾಧರ್ಮ ವಿಷಯಗಳಾದ ಆತನ ಉಪದೇಶಗಳು ಸಹ ಪ್ರಮಾಣವಾಗಲಾರವೆಂಬದು.

THE CENTRAL ASIAN CRISIS.

ಮಧ್ಯ ಏಷ್ಯಾಖಂಡದೊಳಗಣ ರಾಜಕೀಯ ಸ್ಥಿತಿಯು ಮರಳಿ ವ್ಯಪರೀತ್ಯವನ್ನು ಹೊಂದುವಹಾಗೆ ಕಾಣುತ್ತಿದೆ. ಯುದ್ಧ ಸನ್ನಾಹಗಳೆಲ್ಲ ನಿಂತು ರಷ್ಯಾದವರೊಡನೆ ಸಮಾಧಾನವಾಗುವ ಪ್ರಸ್ತಾವ ಈಚೆಗೆ ಪ್ರಚುರವಾಗಿ, ಅದರಂತೆ ನಡೆಯುವದೆಂದು ಯೆಲ್ಲರೂ ನಂಬಿದ್ದರು. ಆದರೆ ಈಚೆಗೆ ಬಂದ ತಂತಿವೃತ್ತಾಂತಗಳ ಮೂಲಕ ಅಂತಾ ನಂಬಿಕೆಯು ನಿವೃತ್ತಿಯಾಗಿ ಈಗ ಮರಳಿ ಚಿಂತೆಗೆ ಕಾರಣವಾಗಿದೆ. ಲಂಡನ್ ಪಟ್ಟಣದಲ್ಲಿರುವ ರಷ್ಯಾ ರಾಯಭಾರಿಗಳಿಂದ ಸೂಚಿಸಿ ಅಂಗೀಕರಿಸಲ್ಪಟ್ಟ ವ್ಯವಸ್ಥೆಯಾದ ಷರತ್ತುಗಳನ್ನು ರಷ್ಯಾ ಚಕ್ರವರ್ತಿಯವರು ಅಂಗೀಕರಿಸದೆ ನಿರಾಕರಿಸಿದರೆಂದು ಸ್ಟ್ಯಾಂಡಾರ್ಡ್ ಪತ್ರಿಕೆಯಿಂದ ತಿಳಿಯಬರುತ್ತದೆ. ಇಂತಾ ಅಕಸ್ಮಾತ್ತಾದ ಸ್ಥಿತಿ ವಿಪರ್ಯಯಕ್ಕೆ ಒಂದೆರಡು ಅಲ್ಪ ಕಾರಣಗಳು ವಿನಾ ಮಹತ್ತರವಾದವೊಂದೂ ಇರುವಂತೆ ತೋರಲಿಲ್ಲವು. ಮಾಹೇ ಮಜಕೂರು ೧೭ನೇ ತಾರೀಖಿನ ೮ ಪ್ರಿ ಹೌಸಾಫ್ ಕಾಮನ್ಸ್ ಸಮಾಜದೊಳು ಮಿ॥ ಗ್ಲ್ಯಾಡ್‍ಸ್ಟನ್‍ರವರು ತಿಳಿಸಿದ ಮಾತಿನಪ್ರಕಾರ ಈಗಿನ ತಕರಾರು ಸರಹದ್ದು ವಿಷಯಕವಾದ್ದಾಗಿಯೇ ಇರುತ್ತದೆ. ಅದರಿಂದೀಚೆಗೆ ಬರತಕ್ಕ ವೃತ್ತಾಂತಗಳು ಸಹ ಹಿಂದಿನ ಅಂಶವನ್ನೇ ಬಲಪಡಿಸತಕ್ಕದ್ದಾಗಿರುತ್ತದೆ. ಯಾವನಿಧದಿಂದಲಾದರೂ ಯುದ್ಧ ಪ್ರಸ್ತಾವಕ್ಕೆ ಹೋಗದೆ ತಂಟೆ ಪರಿಸಿಕೊಳ್ಳಬೇಕೆಂದು ಇಂಗ್ಲಿಷ್ ಸರ್ಕಾರದವರೆಷ್ಟು ವಿಧದಿಂ ಪ್ರಯತ್ನಿಸಿದಾಗ್ಯೂ ರಷ್ಯಾದವರು ಅವಕಾಶ ಕೊಡುವದಿಲ್ಲವು. ರಷ್ಯಾದವರ ದೃಷ್ಟಿ ತತ್ಕಾಲದಲ್ಲಿ ಹಿರಾತ್ ಪಟ್ಟಣದ ತನಕ ಬಿದ್ದಿರುವಂತೆ ತೋರುತ್ತದೆ. ಮುಂದಿನ ಸ್ಥಿತಿಯು ಬಹಳ ಆಲೋಚನೀಯವಾಗಿದೆ. ಹಿಂದೂ ಪರ್ಯಾಲೋಚಕರು ಈಗ ಮಾಡತಕ್ಕ ಯುದ್ಧಪ್ರಯತ್ನ ಪ್ರಯೋಜನಕರವಾದ್ದಲ್ಲವೆಂತಲೂ, ಇಂತಾ ಸ್ಥಿತಿಯಲ್ಲಿ ಯುದ್ಧಮಾಡುವದರಿಂದ ಸರ್ಕಾರಕ್ಕೆ ಕೇವಲ ಮಾನಹಾನಿಕರವೆಂತಲೂ ಸೂಚಿಸುತ್ತಾರೆ. ರಷ್ಯಾದವರು ಯುದ್ಧವಕಾಶವನ್ನು ಇಂಗ್ಲಿಷರವರು ತಪ್ಪಿಸಿಕೊಳ್ಳುವದನ್ನು ಅಪೇಕ್ಷಿಸುತ್ತಲಿರುವದರಿಂದ ಇದು ಹ್ಯಾಗೆ ಪರ್ಯವಸಾನವಾಗುವದೋ ತಿಳಿಯಲಿಲ್ಲವು. ಪರಂತು “ವಿಷಸ್ಯವಿಷಮೌಷಧಮ್” ಎಂಬದಾಗಿ ನಮಗೆ ತೋರಿಸುವದಾಗಿರುವ ಅಪಾಯವನ್ನು ಆತ್ಮರಕ್ಷಣಾರ್ಥ ಚತುರ್ವಿಧೋಪಾಯಗಳಲ್ಲಿ ಯಾವದರಿಂದಲಾದರೂ ತೊಲಗಿಸಿಕೊಳ್ಳಬೇಕಾದ್ದು ಮುಖ್ಯಕರ್ತವ್ಯವಾಗಿರುತ್ತದೆ.

Occasional Notes
ನೈಮಿತ್ತಿಕ ವಿಷಯ.

Mandalay news.—ಬ್ರಹ್ಮದೇಶದ ಹಿಂದಿನ ರಾಜಧಾನಿಯಾದ ಮಂಡಲೆ ಪಟ್ಟಣಕ್ಕೆ ಆಗ್ಗಿಂದಾಗ್ಗೆ ಬೆಂಕಿ ಬಿದ್ದು ಅನೇಕ ಮನೆಗಳು ಸುಟ್ಟುಹೋಗಿ ... ಅನೇಕ ಕಳ್ಳತನಗಳು ಆಗುತ್ತಿರುವದರಿಂದ ... ರಾಜ್ಯಭಾರವನ್ನು ನಡಿಸತಕ್ಕವರಿಗೆ ... ಅಲ್ಲಿಗೆ ಹೋಗುವದಕ್ಕೆ ... ದಾರಿ ... ಇಲ್ಲವು ... ಎಂಬದು.

An appointment.—ರಾಜಕೀಯ ... ಕರ್ನಲ್ ... ಬಹದೂರ್ ... ಸೀ. ಐ. ಇ. ... ಗವರ್ನಮೆಂಟ್ ... ಆಗಿ ನೇಮಿಸಲ್ಪಟ್ಟರು. ... ಅಲ್ಲಿರುವ ... ಸರಕಾರದವರ ... ಹೊಂದಿದವರು ಎಂತಲೂ ... ಪತ್ರಿಕೆಯೊಳು ತಿಳಿಸಿದೆ.

News from Kandahar.—ಕಂದಹಾರ್ ಪಟ್ಟಣದ ... ದೇಶದವರೆಲ್ಲರೂ ... ಸೈನ್ಯಗಳನ್ನು ಕಳುಹಿಸಿಕೊಡುವ ... ಆದರೆ ... ಸೈನ್ಯವಿಲ್ಲದ ... ಶತ್ರುಗಳಿಂದ ಕಟ್ಟಿ ಕೊಟ್ಟಿರುವ ಭಾರೀ ತೋಪ್‍ಗಳನ್ನು ಅಲ್ಲಿಗೆ ಹಾಕಿಸುವದಕ್ಕೆ ಅವಶ್ಯಕಗಳಾದ ಪದಾರ್ಥಗಳ ವಿಷಯದಲ್ಲೂ ಕೇವಲ ಅಡಚಣೆ ಕೆಲವರು ಪಡೆಯುತ್ತಿದೆ. ಈ ಸನ್ನಾಹಗಳ ವಿಷಯದಲ್ಲಿ ಅಮೀರರವರು ವಿಶೇಷ ಆಸಕ್ತಿಯಿಂ ವಹಿಸುತ್ತಾರೆ. ಅಬ್ದುರ್ಹಮಾನ್ ಖಾನರ ಸಮೀಪದವರಾದ ಅಫ್ಘಾನ್ ಕುಟುಂಬಸ್ಥರಾದ ಸರದಾರರನ್ನೆಲ್ಲ ಬಲಾತ್ಕಾರದಿಂದ ಕರೆಯಿಸಿ ಅಮೀರರವರು ಕಾಬೂಲಿಗೆ ಹೋಗಬೇಕೆಂದು ಯೋಚಿಸುತ್ತಿದ್ದಾರೆ ಕಾಬೂಲ್‍ನಲ್ಲಿ ಜಾಸ್ತಿ ರಿಜಿಮೆಂಟ್‍ಗಳು ಕಟ್ಟಿ ಅವುಗಳಿಗೆ ಸ್ಟೈಫಿಲ್ ಬಂದೂಕ್‍ಗಳು ಕೊಡಲ್ಪಡುತ್ತಿವೆ, ಎಂಬದು.

Defence of Hoogly.—ಶಿವ ಸೋಮನಾಥನ ಬಂಗಾಳೆ ಲೆಪ್ಟಿನೆಂಟ್ ಗವರ್ನರವರು, ಜನರಲ್ ... ಕೆಲವರು ಇಂಜಿನಿಯರ್ ... ಹೂಗ್ಲಿ ... ಪುಟ್ಟಾಣಿ ... ಅಲ್ಲಿ ... ಗವರ್ನಮೆಂಟಿನ ... ಅಂದರೆ, ... ಬಂಗಾಳೆ ಸಮುದ್ರ ... ಉಂಟಾಗುವ ... ಶಾಶ್ವತವಾಗಿ ... ಎಂಬದು.

LOCAL AND PROVINCIAL NEWS.
ಒಳ ಕೇರಿ ಮತ್ತು ಪ್ರಾಂತ್ಯಗಳ ವೃತ್ತಾಂತಗಳು

Travellers' Bungalows.—ಡಿಸ್ಟ್ರಿಕ್ಟ್ ಚಾರ್ಜ್ ಪ್ರೋಗ್ರೆಸ್ ಅಸಿಸ್ಟೆಂಟ್ ಕಮ್ಮಿಷನರ್ ಸರ್ಕಾರ್ ಡೋಂಗರೆ ... ದಲ್ಲಿ ... ಇರುವ ಮುಸಾಫರ್ ಖಾನೆಗಳನ್ನು ... ಕೊಳ್ಳಬೇಕೆಂದು ಮೈಸೂರು ಸರ್ಕಾರದವರು ... ಬಂದುಕೊಟ್ಟಿರುವರೆಂದು ಒಳ ... ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತ್ತದೆ

Mr. C. E. R. Girdlestone.—ಮಿ॥ ಗರ್ಡಲ್‍ಸ್ಟನ್‍ರವರು ಫರ್ಲೋ ರಜಾಮೇಲೆ ಇಂಗ್ಲೆಂಡಿಗೆ ಹೋಗುವ ಕಾಲದಲ್ಲಿ ಅಥವಾ ... ನೇಪಾಲ್ ಸಂಸ್ಥಾನದ ... ರೆಸಿಡೆಂಟರಾಗಿದ್ದ ಮೇ. ಪಿ. ಡಿ. ಹೆಂಡರ್ಸನ್‍ರವರು ಮೈಸೂರು ಸಂಸ್ಥಾನದ ... ಬ್ರಿಟಿಷ್ ರೆಸಿಡೆಂಟರಾಗಿ ... ಇಂಡಿಯಾ ಗೆಜೆಟ್‍ನಲ್ಲಿ ... ಪ್ರಕಟಿಸಲ್ಪಟ್ಟಿದೆ.

Mr. J. B. Lyall, C. S.—ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆಸ್ಟರ್ ಜೆ. ಬಿ. ಲೈಲ್‍ರವರಿಗೆ ... ಮೇ ೨೬ನೇ ತಾರೀಖಿನಿಂದ ... ಫರ್ಲೋ ರಜಾ ... ಹೋಗುವ ... ಸ್ವದೇಶಕ್ಕೆ ಹೊರಟುಹೋದರು. ರೆಸಿಡೆಂಟ ... ಅನೇಕರು ... ರೈಲ್ ಸ್ಟೇಷನಿಗೆ ಹೋಗಿದ್ದರು.

The sessions.—ಶಿವ ... ರವರ ... ಸೆಷನ್ಸ್ ... ದೊಂಬರ ... ಕೊಲೆ ...

ಆದೇಶ ತಮ್ಮ ... ಪ್ರಾಂತ್ಯಕ್ಕೆ ... ಅದು ಪೂರ್ವ ಪರಿಶೀಲನೆ ... ದೇಶ ... ಎಂದು ತೋರುತ್ತದೆ. ... ಬಂಧಪಟ್ಟವು ಸಹ ಇರುವಂತೆ ತಿಳಿಯಬರುತ್ತದೆ.

The weather.—ಈ ತಿಂಗಳ ೧೧ನೇ ತಾರೀಖ್ ಶನಿವಾರ ಮೊದಲು ೨೩ನೇ ತಾ॥ ಕೃತ್ತಿಕಾ ನಕ್ಷತ್ರದ ... ವರೆಗೆ ... ಅಲ್ಲಿ ... ವೃಷ್ಟಿ ... ಹುಬ್ಬಳ್ಳಿ ... ತಿಂಗಳ ... ತಿಳಿಸಿದ್ದಾರೆ, ಆದರಂತೆ ಅಲ್ಲಿ ಅಲ್ಲಿ ಅಲ್ಪವೃಷ್ಟಿಯಾದಂತೆ ಕೇಳಿಬರುತ್ತದೆ. ... ಜೋಯಿಸರು ... ತಿಳಿಸಿದ್ದಾರೆ—

ಈ ಮೇ ೨೩ನೇ ತಾರೀಖು ಶನಿವಾರ ... ಸ್ತ್ರೀಪುರುಷ ... ನಕ್ಷತ್ರಗಳು, ಮತ್ತು ... ದಲ್ಲಿ ... ಪ್ರಾರಂಭವಾಗುವದರಿಂದ ಸವರೀ ... ಜೂನ್ ತಿಂಗಳ ೩ನೇ ತಾರೀಖು ... ವಾರದೊಳಗಾಗಿ, ಕೃತ್ತಿಕಾ ... ಖಂಡವೃಷ್ಟಿಯಾಗುವನು ಅದೇ ತಿಂಗಳ ೩ನೇ ತಾರೀಖು ಬುಧವಾರದಿಂದ ೧೧ನೇ ತಾರೀಖ್ ಶನಿವಾರದ ಒಳಗಾಗಿ, ... ಅಂಗಾರಕ ... ದ ... ವಾದದೊಳು ... ೩ನೇ ... ಪ್ರಾರಂಭವಾಗಿ ... ವೃಷ್ಟಿಯಾಗಿ ... ಅನುಕೂಲವಾಗುವದು, ಎಂಬದು.

Dead and gone.—ಈ ಪ್ರಾಂತದವರಿಗೆಲ್ಲ ಶೇಕ್ಸ್‌ಪಿಯರನ ... ರತ್ನಾವಳೀ ನಾಟಕ ... ಕೆಲ ... ನಾಟಕವನ್ನು ... ಪುನಃ ... ನಾಟಕವನ್ನು ನೋಡತಕ್ಕವರು ... ನಾಟಕ ... ಸಂಬಂಧವುಳ್ಳ ... ತಿಳಿಸುವದೇನೆಂದರೆ—“ನಮ್ಮ ... ಅಭಿಮಾನದಿಂದ ... ರತ್ನಾವಳೀ ನಾಟಕ ... ರತ್ನಾವಳಿಯ ... ಕೇವಲ ... ಎಂದು ... ಪದಾರ್ಥ ... ಕೊಡುವುದು, ... ಇನ್ನ ... ಅನ್ಯಾಯ ... ಸಂಬಂಧವಾದ ಪದಾರ್ಥಗಳು ಸಹ ಅನ್ಯಾಕ್ರಾಂತವಾದವು. ಇಷ್ಟು ದಿವಸದಲ್ಲಿ ರತ್ನಾವಳೀಯು ಪುನಃ ... ಅನ್ಯರವಶಿ ... ನಾನೇನೂ ... ನೋಡುವದಕ್ಕೆ ... ಸ್ವದೇಶ ... ಅನುಷ್ಠಾನ ... ಇದರ ... ಅಭಿಪ್ರಾಯವನ್ನು ... ತಿಳಿಸುವೆವು.

NEWS LETTER

ಹಾಸನ, ತಾರೀಖ್ ೨೦ನೇ ಮೆ, ೧೮೬೫— ಈ ಗ್ರಾಮವು ಮಲೆನಾಡು ಸೆರಹದ್ದಿಗೊಳಪಟ್ಟದ್ದಾಗಿದ್ದಾಗ್ಯೂ ಇಲ್ಲಿ ಸ್ವಲ್ಪವೂ ಮಳೆ ಇಲ್ಲದೆ ಇದೆ ಬಿಸಲಿನ ಝಳ ತಡೆಯಲಸಾಧ್ಯವಾಗಿದೆ ಜಿನಿಸಿಗಳ ದಾರಣೆಗಳು ಬಹಳ ಚಡಾವಾಗಿವೆ, ರೈತರು ಬಹಳ ಜೇದಿಲ್ಲಾಗಿದಾರೆ.

ನಮ್ಮ ಸಬ್‌ಡಿವಿಜನ್ ಆಫಿಸರವರು ಮೊಳ್ಯದ ಕಡೆಗೆ ಜಮಾಬಂದಿಗೆ ದಯಮಾಡಿದ್ದವರು ಈ ವಾರದ ಆದಿಭಾಗದಲ್ಲಿ ಕಸಬೆಗೆ ವಾಪಸ್ ಬಂದು ಈಗ ಕಸಬಾ ಹೋಬಳಿ ಜಮಾಬಂದಿಗೆ ಪ್ರಾರಂಭಮಾಡಿದಾರೆ ಇವರು ಈ ತಾಲ್ಲೂಕು ಜಮಾಬಂದಿಯನ್ನು ಪೂರೈಸಿಕೊಂಡು ಬೆಂಗಳೂರಿಗೆ ಅಂಡರ್‌ಸೆಕ್ರೆಟರಿ ಕೆಲಸಕ್ಕೆ ಹೋಗುವರೆಂದು ಇಲ್ಲಿ ವರ್ತಮಾನವಿದೆ ಇವರಿಲ್ಲಿದ್ದದರಿಂದ ರೈತರಿಗೆ ಬಹಳ ರಿಯಾಯತಿ ನಡೆಯುತಲಿತ್ತು

ಈ ಗ್ರಾಮಸ್ಥರಿಗೆ ಪಾನಮಾಡಲು ಪೇರು ಮುಂದೆ ಇರುವ ದೇವಿಗೆರೆ ನೀರನ್ನು ಬಿಟ್ಟರೆ ಬೇರೆ ಗತಿಯಿಲ್ಲವು ವೃಷ್ಟಿಯಿಲ್ಲದೆ ಹೋದದ್ದರಿಂದ ನೀರು ಕಡಮೆಯಾಗಿರುವದಲ್ಲದೆ ಬಹಳ ಗಲೀಜಾಗಿಯೂ ಇದೆ ಮ್ಯೂನಿಸಿಪಲ್‌ನವರು ಮತ್ತು ಟೌನ್ ಪೋಲೀಸನವರು ಸ್ವಲ್ಪವೂ ಗಮನ ಕೊಡುವದೇ ಇಲ್ಲವು ಮುಸರೆ ತಿಕ್ಕುವದು, ಗಲೀಜ್ ಬಟ್ಟೆಗಳು ವೊಗೆಯುವದು, ರಾತ್ರಿವೇಳೆ ಜನಗಳು ಕೈಕಾಲುಗಳು ತೊಳೆಯುವದು, ಇವುಗಳನ್ನು ತಪ್ಪಿಸಿದರೆ ಇಷ್ಟರಮಟ್ಟಿಗೆ ನೀರು ಕೆಡಲು ಅವಕಾಶವಿರಲಾರದು ಮುಂದಾದರೂ ಸರ್ಕಾರದವರು ನಿಗೇ ಕೊಟ್ಟಾರೆಂದು ನಂಬುತ್ತೇವೆ

ಈಗ್ಗೆ ಕೆಲವು ದಿವಸಗಳ ಹಿಂದೆ ಈ ಕಸಬಾ ಹಾಸನದ ಹೊಸ ಅಗ್ರಹಾರದಲ್ಲಿರುವ ಪ್ಲೀಡರ್ ಅತ್ತಿಕುಪ್ಪೆ ಪಂಡಿತ ನರಸಿಂಹಯ್ಯನವರ ಮನೆಯ ಸೂರು ಕಟ್ಟನ್ನು ಕುಯಿದು ಕಳ್ಳರು ಒಳಗೆ ಪ್ರವೇಶಮಾಡಿ ಸುಮಾರು ಸಾವಿರ ರೂಪಾಯಿನ ವರಿಗಿನ ಮಾಲ್‌ಗಳನ್ನು ಕಳವು ಮಾಡಿಕೊಂಡು ಹೋಗಿದ್ದರು ಅದನ್ನು ಈ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರು ೯೦ ದಿನದಿಂದ ಪತ್ತೇಮಾಡಿ ದರ್ಸಿನ್ ಕರ್ತರಿಗೆ ಶಿಕ್ಷೆ ಮಾಡಿಸಿದರು ಫಿರ್ಯಾದಿಗೆ ಕಳ್ಳರ ಬಳಿ ಸಿಕ್ಕಿದ ಸುಮಾರು ೩೦೦ ರೂಪಾಯಿಗಳ ಮಾಲ್‌ಗಳನ್ನು ವಾಪಸ್ ಕೊಡಿಸಿದ್ದಲ್ಲದೆ ಖೈದಿಗಳಿಂದ ವಸೂಲಾದ ಜರೀಮಾನಾ ಮೊಬಲಗಿನಿಂದ ೫೦ ರೂಪಾಯಿ ಕಾರ್ಪಿನ್ ಸೇಷನ್ ಸಹ ಕೋರ್ಟನವರು ಕೊಡಿಸಿದರು. ಈ ರೀತಿ ಫಲವಂ ಹೊಂದಿದ ಫಿರ್ಯಾದಿಯು ಈ ಮೊಕದ್ದಮೆಯಲ್ಲಿ ಮೆಹನತ್ ಮಾಡಿದಂತಾ ಪೋಲೀಸ್ ನೌಕರರಿಗೆ ೧೦೦ ರೂಪಾಯಿ ಇನಾಂ ಕೊಡಬೇಕೆಂದು ಇಷ್ಟಪಟ್ಟಿರುವದಾಗಿಯೂ, ಆ ರೀತಿ ಕೊಡುವದಕ್ಕೆ ಸಾಂಗ್ಷನ್ ಬಗ್ಗೆ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ಅರ್ಜಿ ಗುಜರಾಯಿಸಿಕೊಂಡಿರುವದಾಗಿಯೂ ವರ್ತಮಾನ ಕೇಳುತ್ತೇವೆ. ಇವರು ಪ್ಲೀಡರಾದದರಿಂದ ಮೊಕದ್ದಮೆಗಳಲ್ಲಿ ಪ್ರಾಸಿಕ್ಯೂಷನ್ ಮುಂತಾದ ಕೆಲಸಗಳನ್ನು ನಡಿಸಲು ಪ್ರಾಪ್ತವಾಗುವ ತೊಂದರೆ ಮುಂತಾದ್ದನ್ನು ಚನ್ನಾಗಿ ತಿಳದವರಾಗಿ ಪೋಲೀಸಿನವರು ಪಟ್ಟ ಶ್ರಮವನ್ನರಿತು ತಾವು ಹೊಂದಿದ ಉಪಕಾರಕ್ಕೆ ಪ್ರತ್ಯುಪಕಾರವಂ ಮಾಡಬೇಕೆಂಬ ಇರಾದೆಯಿಂದ ಈ ರೀತಿ ಏರ್ಪಾಡು ಮಾಡಿರುವಂತೆ ತೋರುತ್ತದೆ. ಪೋಲೀಸಿನವರು ಮೆಹನತ್ ಮಾಡಿದ್ದು ನಿಜವೇ ಸರಿ, ಆದರೆ ಅದಕ್ಕೆ ಅವರು ಸರ್ಕಾರದಿಂದ ತಲಬ್ ತೆಗದುಕೊಳ್ಳತಕ್ಕವರಾಗಿದಾರೆ ಈ ಮೊಬಲಗನ್ನು ಧರ್ಮೋಪಕಾರ ಕೆಲಸಗಳಿಗೆ ಇವರು ಉಪಯೋಗಿಸಿದ್ದರೆ ಇವರಿಗೆ ಯಶಸ್ಸು ಬರಲಾರದೆ?

CORRESPONDENCE

ಶ್ರೀ|| ಕರ್ನಾಟಕ ಪ್ರಕಾಶಿಕಾ ಎಡಿಟರವರಿಗೆ—

ಅಯ್ಯಾ—ಶ್ರೀಮತ್ [illegible] ಪ್ರಜಾಪಾಲನ ಕಾಲದಲ್ಲಿ ಕಾರುಣ್ಯ [illegible] ವಾರದ ಪತ್ರಿಕೆಗಳಲ್ಲಿ ಪ್ರಕಟಿಸಿದ ಸಮಾಚಾರವು ಶ್ಲಾಘನೀಯವಾಗಿ ಸಂತೋಷಕರವಾಗಿದೆ ಆದರೆ, ಹಿಂದೆ [illegible] ೬ನೇ ೧೮೬೫ನೇ [illegible] ಕೆಯುಕ್ತಿಪರೀಕ್ಷೆ ನಡದ ಕಾರ್ಯಾಲಯದಲ್ಲಿ [illegible] ಸ್ಥಾಪಿಸಲ್ಪಟ್ಟ ಪಾಠಶಾಲೆಗಳಲ್ಲಿ ಒಂದಾದ [illegible] ಯನ್ನುಂಟುಮಾಡುವದಕ್ಕೆ ಯೋಗ್ಯವಾದ ಸ್ಥಿತಿಯೊಳಿಲ್ಲವೆಂಬದೂ, ಅಧ್ಯಾಪಕರಿಗೆ ಉಪಾಧ್ಯಾಯರ ಜೀವನಾರ್ಥವಾಗಿ ಕಲ್ಪಿಸಲ್ಪಟ್ಟ [illegible] ಸಮುದಾಯ [illegible] ಅದರಲ್ಲಿ ಶಾಲೆಯನ್ನ ನೋಡತಕ್ಕ [illegible] ಪರೀಕ್ಷೆಯಲ್ಲಿ ಅಸಮರ್ಥರಾಗಿ ಕಡ್ಮೆಯಿಂದಲೇ ಪ್ರಕಟವಾಗಿ [illegible] ವಿದ್ಯಾರ್ಥಿಗಳಿಂದ ವಿದ್ಯಾವೃದ್ಧಿ [illegible] ಪಾಠಶಾಲೆಯಲ್ಲಿ ವಿದ್ಯಾಭ್ಯಾಸವು ಸರಿಯಾಗಿ ನಡಿಸಲ್ಪಡುವದಿಲ್ಲವೋ? ಅಥವಾ [illegible] ಜೀವನಸಂಪಾದನೆಯ ಉಪಾಧ್ಯಾಯರು ಕಟಸ್ಥರಾಗಿರುತ್ತಾರೋ? ಸರಿಯಾಗಿ ನಡೆಯುತ್ತಿಲ್ಲವೆ ದರೆ ಆ [illegible] ಆಫೀಸರವರು ಕ್ಷುದ್ರಕಾಲಕ್ಕೆ ಪ್ರಮಾಣ [illegible] ವಿದ್ಯಾಭಿವೃದ್ಧಿ ಮಾಡಿಸುವದರಲ್ಲಿ ಜಿಲ್ಲೆಯ [illegible] ಅಧಿಕಾರಿಗಳು, ಅಂದರೆ ಡೆಪ್ಯುಟಿ ಕಮಿಷನರವರೂ ತಾಲ್ಲೂಕು ಆಫೀಸರರೂ ದೊಡ್ಡ ಮನುಷ್ಯರು ಸಹ [illegible] ಪ್ರಯತ್ನಪಡಿಸುತ್ತಾ ಇರುವದರಿಂದ ಶ್ರಮವಾಗಿ [illegible] ಅವಕಾಶವೇ ಇಲ್ಲ ಉಪಾಧ್ಯಾಯರು ಹೋಗುವದಿಲ್ಲ ಎಂದರೆ, ಯಾವ ಯಾವ ಕರಣರ ಮುಷ್ಟಿಯಲ್ಲಿ [illegible] ಅದಕ್ಕೆ ಲೆಕ್ಕಂತೆ ಹೋಗಿನ ಮಿಡಲ್ ಸ್ಕೂಲ್ [illegible] ಪರೀಕ್ಷೆಗೆ ಕಳುಹಿಸಲ್ಪಟ್ಟ ವಿದ್ಯಾರ್ಥಿಗಳನ್ನ [illegible]

ಇದಕ್ಕೆ ಅನ್ಯದೇಶ ಶಾಸ್ತ್ರವಾದ ಇಂಗ್ಲಿಷಿಗೆ ಸ್ವದೇಶ ಶಾಸ್ತ್ರಕ್ಕೂ ಗೌರವದಿಂದ ಪರೀಕ್ಷೆ [illegible] ವಿದ್ಯಾರ್ಥಿಗಳ ವಿದ್ಯಾ [illegible] ಉಪಾಧ್ಯಾಯರ ಬೋಧನಾಕೌಶಲ್ಯ [illegible] ಕಾರಣವೇ [illegible] ಪ್ರಾಚೀನ [illegible] ನೋಡಿದರೆ [illegible] ಉಪಾಧ್ಯಾಯರು ಹೇಳಿಕೊಡುವದಕ್ಕೆ ಅಪ್ಪಣೆ [illegible] ಸ್ಕೂಲ್ ಸ್ಥಾಪಿಸಲ್ಪಟ್ಟಿರುವದರಿಂದ ಅದಕ್ಕೆ [illegible] ವಿದ್ಯಾಭ್ಯಾಸ [illegible] ವಿಧವಿಧವಾಗಿ ಹೇಳುತ್ತಾ [illegible] ವಿದ್ಯಾಶಾಲೆಗೆ ಕಳುಹಿಸಲು ಉದಾಸೀನರಾಗಿ [illegible] ಸಮರ್ಪಕ ಪ್ರಯೋಜನ [illegible] ಉಪಾಧ್ಯಾಯರು ಅಂಥಾ ಜನ [illegible] ಬಾಲಕರು [illegible] ಬರುತ್ತಿದ್ದರೆ ಮಾಡಿಕೊಂಡು ವಿದ್ಯಾಭ್ಯಾಸ ಮಾಡಿಸುತ್ತಾ [illegible] ಸ್ಕೂಲ್ [illegible] ಉಪಾಧ್ಯಾಯರ ಜೀವನಾರ್ಥವಾಗಿ [illegible] ದೇಶಭಾಷೆಗೆ ಇಂಗ್ಲಿಷಿನಂತೆ ಯೂನಿವರ್ಸಿಟಿ ಪರೀಕ್ಷೆ [illegible] ಅಭಿವೃದ್ಧಿ [illegible] ಸರ್ಕಾರ [illegible] ಉತ್ತೇಜನವನ್ನು [illegible] ಉಪಾಧ್ಯಾಯರು [illegible] ಕ್ರಮದಿಂದ [illegible] ಕನ್ನಡ ಶಾಸ್ತ್ರದಲ್ಲಿ ಉಪಾಧ್ಯಾಯರು [illegible] ಕಾರ್ಯ [illegible]

ತಾ|| ೧೮ ನೇ ೧೮೬೫, ಯಡೆಹಳ್ಳಿ } ತಮ್ಮ ವಿಧೇಯ ಸಾದ, [illegible]

[illegible] ನಮ್ಮ [illegible] ಆ [illegible] ಓದಿನೋಡಿದರೆ ಅದರ ಕಡೆ [illegible] ವಿಷಯದಿಂದ ಆದಂ ಬರೆಯಲಿಕ್ಕೆ [illegible] ಅವರಿಗೆ [illegible] ಕನ್ನಡ ಶಾಸ್ತ್ರದಲ್ಲಿ ಉಪಾಧ್ಯಾಯರು [illegible] ಪಾಠಗಳನ್ನು [illegible] ಒಂದುವೇಳೆ [illegible] ಪ್ರತ್ಯಕ್ಷಸ್ಥಿತಿಯಲ್ಲಿ ಅದರಂತೆ ನಡೆಸುತ್ತಕ್ಕವರು [illegible] —ಎಡಿಟರ್ ಕ ಪ್ರ

TELEGRAPHIC SUMMARY

ಸಂಕ್ಷಿಪ್ತ ಸಮಾಚಾರ

ಲಂಡನ್, ೧೦ ನೇ ಮೇ —ಅಫ್‌ಘಾನಿಸ್ಥಾನದ [illegible] ವಿಷಯದಲ್ಲಿ ಇಂಗ್ಲಿಷಿನವರ ಸಲಹೆಗಳನ್ನು ರಷಿಯಾ [illegible] ಸರ್ಕಾರದವರು ಸ್ವೀಕರಿಸಿ [illegible] ಮಾಡಿದ್ದಾಗಿ [illegible] ನಡೆಯುವ ಪ್ರಸ್ತಾಪಗಳು ಆಶಾಜನಕವಾಗಿದ್ದರೂ [illegible] ನಾದಗಳು ಮಂತ್ರಿಸಮಾಜದಿಂದ [illegible]

ಅಫ್‌ಘಾನ್ ರಾಜ್ಯದ ಸರಹದ್ದು ವಿಷಯದಲ್ಲಿ ಇಂಗ್ಲೆಂಡ್ ಮತ್ತು ರಷಿಯಾ ಸರ್ಕಾರದವರಿಗೆ ಉಂಟಾಗಿರುವ [illegible] ಮಧ್ಯಆಸಿಯಾ [illegible] ನಡೆದಿರುವ ಮುಖ್ಯ ವಿಷಯಗಳಿಗೆ ಸಂಬಂಧಪಡುವದಿಲ್ಲವು

ಲಂಡನ್, ೧೧ ನೇ ಮೇ —ರಷಿಯಾ [illegible] ಜನರಲ್ ಕೊಮರಾಫ್‌ಯವರಿಗೆ ಒಂದು [illegible] ಅದರಲ್ಲಿ [illegible] ಸಂಕಟ [illegible] ಪತ್ರಿಕೆಗಳು [illegible]

[illegible] ಪತ್ರಿಕೆಗಳನ್ನು ಪಡೆಯುವ ವಿಷಯದಲ್ಲಿ [illegible] ಗವರ್ನ್‌ಮೆಂಟಿನವರು [illegible] ನಿರ್ಬಂಧನೆ [illegible] ಗವರ್ನ್‌ಮೆಂಟ್ [illegible] ಆಫೀಸರ್‌ಗಳು [illegible] ಅಂಗೀಕರಿಸ [illegible] ಪಬ್ಲಿಕ್ ಮೀಟಿಂಗ್‌ಗಳಿಗೆ ಹೋಗಕೂಡದು, [illegible] ಸಭೆಗಳಿಗೆ [illegible] ಸಾಹೇಬರು [illegible]

[illegible]

[illegible] ಪ್ರಜೆಗಳು [illegible] ಸ್ವತಂತ್ರ [illegible] ಹೋಗುವದಕ್ಕೆ [illegible] ಅನುಮತಿ [illegible] ಬೇಕು, ಎಂದು

ಲಂಡನ್ ೧೧ ನೇ ಮೇ —ಮಿ|| ಗ್ಲಾಡ್‌ಸ್ಟನ್‌ಯವರು [illegible] ಜವಾಬ್ ಹೇಳುವಾಗ ಅಫ್‌ಘಾನಿಸ್ಥಾನ ಸರಹದ್ದು ವಿಷಯವನ್ನು ಕುರಿತು ಮತ್ತೇನು ಹೇಳುವದಕ್ಕೆ ಸಮಯ ಸಾಧ್ಯವಾಗುವದಿಲ್ಲವೆ [illegible]

[illegible] ಅವರು [illegible] ಲಂಡನ್ [illegible] ಬೆಂಕಿ [illegible] ಗ್ಲ್ಯಾಡ್‌ಸ್ಟನ್ [illegible] ಕಾರಿಯರ್ [illegible]

ಸುವಾಕಿಂ ೧೧ನೇ ಮೆ —ಲಾರ್ಡ್ ವೂಲ್ಸಲೆಯವರು [illegible] ದಂಡನ್ನು [illegible] ಯುದ್ಧದಲ್ಲಿ [illegible] ಕಾರ್ಯ ಮಾಡಿದರು

ರೋಂ ೧೧ನೇ ಮೇ —ಇಟಲೀ ದೇಶದ ಸೇನೆಯು ಸುವಾಕಿಂ [illegible] ಸ್ವಾಧೀನ ಮಾಡಿಕೊಳ್ಳುವ ವಿಷಯದಲ್ಲಿ [illegible] ಸರ್ಕಾರದವರೂ [illegible] ಸರ್ಕಾರದವರೂ [illegible] ನಡೆಯಲಿರುವಂತೆ ಇಟಲೀ ದೇಶದ [illegible] ಸೇನೆಗಳು ಸುವಾಕಿಂ [illegible] ಕುರುಂ ಆಗಿದೆ

ಮುಂಬೈ, ೧೮ನೇ ಮೇ —ಸೌದರ್ನ್ ದೇಶ [illegible] ಪ್ರತಿಕೂಲವಾಗಿ [illegible] ಪತ್ರಿಕೆಯಿಂದ [illegible] ಗೆಜೆಟ್ ಪತ್ರಿಕೆ [illegible]

ಲಂಡನ್ ೧೮ನೇ ಮೇ —[illegible]

[illegible] ಕೊಟ್ಟಿರುವುದಾಗಿ ಹೇಳಿಯಲ್ಲವೆ [illegible]

ಲಂಡನ್ ೨೦ನೇ ಮೇ —ರಷಿಯಾ ಸರ್ಕಾರದವರು ಕೊಡುವ ನಡೆಯುತ್ತಿರುವ ಸಂಧಾನ [illegible] ಗೆಜೆಟ್ ಪತ್ರಿಕೆ ಹೇಳುತ್ತದೆ

ಬರ್ಲಿನ್, ೧೯ನೇ ಮೆ — ಜರ್ಮನೀ ದೇಶದ [illegible] ಕೌಂಟ್ [illegible]

ಲಂಡನ್, ೨೦ನೇ ಮೆ —ಇಂಗ್ಲಾಂಡ್ ಸರ್ಕಾರ ದವರೂ ರಷಿಯಾ ಸರ್ಕಾರದವರೂ ನಡೆಯುತ್ತಿರುವ ಸಂಧಾನಕ್ಕೆ ಸ್ವಲ್ಪ [illegible] ಯುಂಟಾಗುವಂತೆ [illegible] ಪತ್ರಿಕೆ ಹೇಳುತ್ತದೆ

ಲಂಡನ್, ೨೧ನೇ ಮೆ —ಮೆರ್ವ್ [illegible] ಸೇನೆಗಳು [illegible] ದಿಂದ ಕ್ರೈಮಿಯಾ [illegible] ಕುರುಂ ಆಗಿದೆ

ಲಂಡನ್, ೨೧ನೇ ಮೆ —ಅಫ್‌ಘಾನ್ ರಾಜ್ಯದ ಸರಹದ್ದು ವಿಷಯದಲ್ಲಿ ರಷಿಯಾ ಸರ್ಕಾರದವರು [illegible] ಆವರಿಗೆ [illegible] ಸ್ಟಾಂಡರ್ಡ್ ಪತ್ರಿಕೆ [illegible]

ಮುಂಬೈ, ೨೨ನೇ ಮೆ —ಸರಹದ್ದು [illegible]

[illegible] ಲಂಡನ್ [illegible] ಸ್ಟಾಂಡರ್ಡ್ ಪತ್ರಿಕೆಯಲ್ಲಿ [illegible] ಆಗಿದೆ

[illegible] ಬಂದೋಬಸ್ತು ಮಾಡಕೂಡದು [illegible] ಸಂರಕ್ಷಣೆಗೆ [illegible] ವಿಷಯದಲ್ಲಿ ಅಫ್‌ಗಾನ್ [illegible] ಬ್ರಿಟಿಷ್ ಆಫೀಸರುಗಳು [illegible] ಸರ್ಕಾರದವರು [illegible] ಅಫ್‌ಗಾನಿಸ್ಥಾನ ರಾಜ್ಯದ ವಾಯವ್ಯ [illegible] ಅಫ್‌ಗಾನ್ [illegible]

[illegible]

SUMMARY OF NEWS

ವೃತ್ತಾಂತಸಂಗ್ರಹವು

[illegible] —[illegible] ಪತ್ರಿಕೆ [illegible]

[illegible]

BANGALORE —Printed and published for the Proprietor, at the KARNATIC PRESS —1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯುಪಗಮಾರ್ಥಕರ್ನಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಶಾಸುಪರಿಪೋಷಿತಾದಿಶತಿಮಾನಸಂಸಮ್ಮದಂ ॥

Vol. XII.] BANGALORE—MONDAY, JUNE 1, 1885 [No. 22.

ಸಂಪುಟ ೧೨.] ಬೆಂಗಳೂರು—ಸರ್ ೧೮೮೫ನೇ ಇಸವಿ ಜೂನ್ ೧ನೇ ತಾರೀಖ್ ಸೋಮವಾರ. [ಸಂಚಿಕೆ ೨೨.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.
ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ
ಪ್ರಣೀತರಾದ,
ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಪಾಠ್ಯವಾದದ್ದಾಗಿಯೂ ನವರಸ ಪರಿಪೂರ್ಣಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೨೦ ಪುಟವುಳ್ಳದ್ದು.

ಕ್ರಯ ೧-೮-೦ ರೂ॥, ಪಾಸಲ್ ೧ ಅಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ ಲಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಹೆಚ್ಚುಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 1, 1885
೧೮೮೫ನೇ ಜೂನ್ ೧ನೇ ತಾ॥ ಸೋಮವಾರ.

THE MAHOMEDAN ASPIRATION

ಮುಂಬೈಯಲ್ಲಿ ವ್ಯವಸ್ಥಾಪಿತವಾಗಿರುವ ಅಂಜುಮಾನಿ ಇಸ್ಲಾಂ ಯೆಂಬ ಸಮಾಜಕ್ಕೆ ಸೇರಿದ ಮಹಮ್ಮದೀಯರು ಕೆಲವರು ಗವರ್ನಮೆಂಟಿಗೆ ಒಂದು ಅರ್ಜಿ ಬರೆದುಕೊಂಡಂತೆಯೂ ಅದರಲ್ಲಿ ಮಹಮ್ಮದೀಯರ ವಿದ್ಯಾಭ್ಯಾಸಕ್ರಮವನ್ನು ಅಭಿವೃದ್ಧಿಪಡಿಸತಕ್ಕ ವಿಷಯದಲ್ಲಿ, ಕೆಲವು ಕಾಲಕ್ಕೆ ಹಿಂದೆ ಯೇರ್ಪಟ್ಟಿದ್ದ ಯೆಡ್ಯುಕೇಷನ್ ಕಮಿಷನರವರು ಸೂಚಿಸಿದ್ದ ಕೆಲವು ಯೇರ್ಪಾಡುಗಳನ್ನು ಜಾರೀಯಲ್ಲಿತರಬೇಕೆಂದು ನಮೂದಿಸಿರುತ್ತಲೆಯೂ, ಸರ್ಕಾರ್ ನೌಕರಿಗಳಂ ಪಡೆಯತಕ್ಕ ವಿಷಯದಲ್ಲಿ ವಿಶೇಷಸಂಬಂಧವನ್ನು ತಮ್ಮವರಿಗೆ ಕಲ್ಪಿಸಿಕೊಡಬೇಕೆಂತಲೂ, ಹಿಂದುಗಳ ಪ್ರಜಾಸಂಖ್ಯೆಯನ್ನನುಸರಿಸಿ ಅವರಿಗೆ ಸರ್ಕಾರ್ ನೌಕರಿಗಳು ಕೊಡಲ್ಪಡುವಂತೆ ಮುಸಲ್ಮಾನರ ಸಂಖ್ಯೆಗೆ ತಕ್ಕಂತೆ ಅವರಿಗೆ ಕೆಲಸಗಳು ದೊರೆಯುವದಿಲ್ಲವೆಂತಲೂ, ಈಗ ಗವರ್ನಮೆಂಟ್ ನೌಕರರಲ್ಲಿ ಮುಸಲ್ಮಾನರ ಸಂಖ್ಯೆಯು ಕೇವಲ ಅಲ್ಪವಾಗಿರುತಿದೆಯಲ್ಲದೆ ಅವರಿಗೆ ಗೌರವಪ್ರಾಶಸ್ತ್ಯಗಳೂ ಜವಾಬ್ದಾರಿಯೂ ಪ್ರಸ್ತ ಕೆಲಸಗಳು ಕೊಡಲ್ಪಡುವದಿಲ್ಲವೆಂದೆಯೂ, ಅದದರಿಂದ ಇತರರಂತೆ ತಮ್ಮ ಜಾತಿಯವರಿಗೂ ಸರ್ಕಾರ್ ಮೂಲಕವಾದ ಸಂಬಂಧವನ್ನು ವಿಶೇಷತಃ ಉಂಟುಮಾಡಿದ ಹೊರ್ತು ಅವರು ಅಭಿವೃದ್ಧಿಗೆ ಬರಲಾರರೆಂತಲೂ ಸಹ ತಿಳಿಸಿರುವಂತೆ ಕೇಳುತ್ತೇವೆ.

ಗವರ್ನಮೆಂಟಿನವರ ಸಹಾಯವನ್ನಪೇಕ್ಷಿಸಿ ಅವರು ಸೂಚಿಸಿರುವ ಐದು ಬಾಬುಗಳಲ್ಲಿ ಮೂರು ನಾಲ್ಕು ಕೇವಲ ಆಶ್ಚರ್ಯಕರವಾಗಿರುತಿವೆ. ಅವು ಯಾವವೆಂದರೆ,—ಸರ್ಕಾರ್ ನೌಕರಿಯಲ್ಲಿರುವ ಇತರ ಜಾತೀಯವರ ಸಂಖ್ಯೆಗೆ ಸಮನಾಗುವತನಕ ಸರ್ಕಾರ್ ಇಲಾಖೆಗಳಲ್ಲಿ ಖಾಲೀಯಾಗುವ ನೌಕರಿಗಳನ್ನೆಲ್ಲ ಮುಸಲ್ಮಾನರಿಗೆ ವಿನಾ ಅನ್ಯರಿಗೆ ಕೊಡಲಾಗದೆಂದು ಇಲಾಖಾಧಿಕಾರಿಗಳಿಗೆ ಖಂಡಿತವಾದ ಹುಕುಂ ಕೊಡಬೇಕು; ಮತ್ತು ಅಂತಾ ಕೆಲಸಗಳಿಗೆ ಬೇಕಾದಷ್ಟುಮಂದಿ ಮುಸಲ್ಮಾನ್ ಉಮೇದ್ವಾರರು ದೊರೆಯತಕ್ಕಬಗ್ಯೆ ಸರ್ಕಾರ್ ನೌಕರರ ವಿಷಯದಲ್ಲಿ ಕಲ್ಪಿಸಲ್ಪಟ್ಟಿರುವ ವಯಃಪರಿಮಿತಿ, ವಿಶೇಷಯೋಗ್ಯತೆ, ಯೂನಿವರ್ಸಿಟೀ ಪರೀಕ್ಷೆಗಳು ಮುಂತಾದ ನಿಬಂಧನೆಗಳನ್ನೆಲ್ಲ ಮುಸಲ್ಮಾನರ ವಿಷಯದಲ್ಲಿ ಕಡಮಮಾಡತಕ್ಕದ್ದು, ಅಥವಾ ಈಗಿರುವ ಅತಿ ಖಂಡಿತವಾಗಿ ಅವು ಜಾರೀಯೊಳು ತರಕೂಡದೆಂಬದು.

ಇಂತಾ ಸಲಹೆಗಳು ಶ್ರಮಸಹಿಷ್ಣುಗಳಲ್ಲದ ಮುಸಲ್ಮಾನರಿಗೆ ವಿನಾ ಅನ್ಯರಿಗೆ ಯುಕ್ತವಾಗಿ ತೋರಲಾರವು. ಲೋಕದಲ್ಲಿ ಪ್ರತಿಮನುಷ್ಯನಿಗೂ ಸ್ವಮತಾಭಿಮಾನವೂ, ಅದರ ಪ್ರಾಬಲ್ಯಾಭಿಲಾಷೆಯೂ, ಅದರ ಪ್ರವರ್ಧನಾಭಿವೃದ್ಧಿ ನಿಮಿತ್ತಕವಾದ ಪ್ರಯತ್ನಗಳೂ ಪ್ರಚುರವಾಗದೆ ಹೋಗಲಾರವು. ಆದರೆ ಈ ಸಲಹೆಯು ವಿದ್ಯಾಸಂಗ್ರಹಣಾರ್ಥ ಶರೀರ ಮಾನಸಿಕ ಕ್ಲೇಶಗಳನ್ನನುಭವಿಸತಕ್ಕ ಇತರವಿದ್ಯಾರ್ಥಿಗಳ ಪ್ರಯೋಜನಕ್ಕೆ ಭಂಗವನ್ನುಂಟುಮಾಡಿ, ಹಾಗೆ ಶ್ರಮಪಡದೆ ರಾಜಭೋಗಗಳನ್ನೇ ಅನವರತ ಕೋರತಕ್ಕ ಮತ್ತು ಬುದ್ಧಿಪ್ರಯೋಗ ಮಾಡಲಾರದ ಮುಸಲ್ಮಾನರಿಗೆ ಒಂದು ಪ್ರಯೋಜನವನ್ನುಂಟುಮಾಡತಕ್ಕಬಗ್ಯೆ ಸೂಚಿಸಿದ್ದಾಗಿ ತೋರುತಿದೆಯೇ ಹೊರತು ಬೇರಲ್ಲವು. ಯಾವ ಗವರ್ನಮೆಂಟಿನವರೂ ಇಂತಾ ಸಲಹೆಯನ್ನಂಗೀಕರಿಸಲಾರರು. ಸರ್ಕಾರ್ ನೌಕರರ ಪೈಕಿ ಇತರಾಪೇಕ್ಷೆಯಾ ಮುಸಲ್ಮಾನರ ಸಂಖ್ಯೆ ಕಡಮೆಯಾಗಲಿಕ್ಕೇನುಕಾರಣ? ಅನ್ಯರಂತೆಯೇ ಅವರ್ಯಾತಕ್ಕೆ ಅರ್ಹರಾಗದೆ ಹೋದರು? ಹಾಗೆ ಸ್ವತಃ ಅರ್ಹರಾಗಲಿಕ್ಕೆ ಅವರು ಯಾತಕ್ಕೆ ಪ್ರಯತ್ನಪಡಲಿಲ್ಲವು? ಈ ಮೂರು ಪ್ರಶ್ನೆಗಳಿಗೆ ತಕ್ಕ ಉತ್ತರಗಳು ವಿಚಾರಪರರಾದವರಿಗೆಲ್ಲ ತೋರದಿರಲಾರವು. ಮತ್ತು ಮೇಲೆಕಂಡಂತೆ ಸೂಚಿಸಿದ ಸಾಮಾಜಿಕರು ತಮ್ಮ ವ್ಯಾಪ್ಯಸ್ಥಿತಿಗೆ ಪ್ರಂಟಾದ ಕಾರಣವನ್ನು ಕ್ಷಣಕಾಲ ಪರ್ಯಾಲೋಚಿಸಿ ತತ್ಪ್ರತಿಕ್ರಿಯೆಯಂ ಮಾಡಲಾರಂಭಿಸಿದವರಾದರೆ ಈರೀತಿ ಪ್ರಯತ್ನಪಡಲಾರರು. ಈಗ ಸರ್ಕಾರ್‌ಕೆಲಸವು ಮಾತ್ರ ಗೌರವವೇಲೂ ದಕ್ಕದಾರಿಯೇಮೇಲೂ ಲಭಿಸತಕ್ಕದ್ದಲ್ಲವೆಂಬದನ್ನು ಪ್ರಾಯೇಣ ಅಂಜುಮಾನಿ ಸಭೆಯವರು ಆಲೋಚಿಸಿದಂತೆ ತೋರಲಿಲ್ಲವು. ಅಂತಾ ಕಾಲವಲ್ಲ ಕಳೆದು ಈಗ ಸರ್ಕಾರ್ ನೌಕರಿಗೆ ವಿದ್ಯಾಪ್ರಯುಕ್ತವಾದ ಆಯಾವರಯೋಗ್ಯತೆ ವಿನಾ ಬೇರೊಂದೂ ಕಾರ್ಯಕಾರಿಯಾಗದೆ ಹೋಗಿದೆ. ಪೂರ್ವಕಾಲದಲ್ಲಿ ಒಬ್ಬನು ದೊಡ್ಡವಂಶಕ್ಕೆ ಸೇರಿದವನಾಗಿದ್ದರೆ ಅವನ ವಂಶ ಗೌರವವನ್ನು ಕಾಪಾಡತಕ್ಕಬಗ್ಯೆ ಅವನು ಅನರ್ಹನಾಗಿದ್ದರೂ ಗವರ್ನಮೆಂಟಿನವರು ದೊಡ್ಡ ಕೆಲಸಗಳನ್ನು ಕೊಡುತಲಿದ್ದರು. ಈಗಲಾದರೋ ಸದರೀ ಗೌರವವೆಂಬದು ಅನಾದರಣೀಯವಾಯಿತು. ಅರ್ಹತೆಯೆಂಬದು ಸಾರ್ವಜನೀನವಾದ್ದಾಯಿತು. ಅದು ಬೇಕಾದ್ದಕ್ಕಿಂತ ಅಧಿಕವಾಗಿ ದೊರೆಯಲುಪಕ್ರಮವಾದದರಿಂದ ಅದರಲ್ಲಿ ಗೌರವವು ತಪ್ಪುತಬಂತು, ಅದುಪುರಸ್ಕರಿಸಲ್ಪಡದ ಮೇರೆ ಅದರಪ್ರಯೋಜನವು ನ್ಯೂನ್ಯವಾಯಿತು. ಹೀಗೆ ವಿದ್ಯಾಭ್ಯಾಸಮೂಲಕ ಲಾಯಖಾಗಿರತಕ್ಕವರಿಗೆ ಸಹ ಮೇಲೆಕಂಡ ಕಾರಣಗಳಿಂದ ನೌಕರಿದೊರೆಯುವದು ಪ್ರಯಾಸವಾಗಿರುತಿದೆ. ಮುಸಲ್ಮಾನರಿಗೆ ಕ್ಷಾತ್ರವೃತ್ತಿಯೊಳಗೂ, ಉಪಭೋಗಗಳಲ್ಲಿಯೂ ಯಿರುವ ಇಷ್ಟ ದೃಷ್ಟಿಯು ವಿದ್ಯಾಸಂಗ್ರಹಣದಲ್ಲಿ ಯಿಲ್ಲವೆಂಬದು ಪ್ರಸಿದ್ಧವಾಗಿಯೇ ಯಿರುತಿದೆ. ಇದಕ್ಕೆ ಅವರ ಅನಾದರಣೆವಿನಾ ಬೇರೊಂದೂ ಕಾರಣವಲ್ಲವು. ಪ್ರತಿಸಂವತ್ಸರದಲ್ಲೂ ಯೂನಿವರ್ಸಿಟೀಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕ ಉಮೇದ್ವಾರರ ಸಂಖ್ಯೆಯನ್ನು ನೋಡಿದರೆ ನೇಕಡಾ ೯೫ ಮಂದಿ ಹಿಂದೂವಾಗಿಯೂ, ಮೂವರು ಕ್ರಿಸ್ಟಿಯನ್ನರಾಗಿಯೂ, ಮಿಕ್ಕ ಯಿಬ್ಬರು ಮುಸಲ್ಮಾನರಾಗಿಯೂ ಯಿರುತ್ತಾರೆ. ಬಿ. ಎ. ಬಿ. ಎಲ್ ಮುಂತಾದ ಉನ್ನತಪರೀಕ್ಷೆಗಳಲ್ಲಿ ಮುಸಲ್ಮಾನ್ ಉಮೇದ್ವಾರನು ನೇಕಡಾ ಒಬ್ಬನು ದೊರೆಯುವದು ಪ್ರಯಾಸವಾಗಿರುತಿದೆ. ಇದಕ್ಕೆ ಕಾರಣವೇನು? ಇತರಾಪೇಕ್ಷೆಯಿನಾ, ವಿದ್ಯೆಯ ಪ್ರಯೋಜನವನ್ನು ಹಿಂದೂಗಳು ತಿಳಿದುಕೊಂಡು ಅದು ಸಂಪಾದಿಸಲಿಕ್ಕಾಗಿ ವಿಶೇಷತಃ ಶ್ರಮಪಡುತ್ತಾರೆಂಬದುವಿನಾ ಬೇರೇನಿದೆ? ಮುಸಲ್ಮಾನರು ವಿದ್ಯಾಪ್ರಯುಕ್ತವಾದ ಜ್ಞಾನವನ್ನು ಸಂಪಾದಿಸಿ ಸಮರ್ಥರೆನ್ನಿಸಿಕೊಂಡು ಉನ್ನತಾಧಿಕಾರವನ್ನು ಮಾಡುವಾಗ್ಯೆ ನೇಟಿವ್‌ಗಳು ಯಾರಾದರು ತಡದರೆ? ಈಚೆಗೆ ಹಿಂದೂಗಳನ್ನು ನೋಡಿ ಅವರಂತೆ ಶ್ರಮಪಟ್ಟು ವ್ಯಾಸಂಗಮಾಡಿ ಕೀರ್ತಿಪ್ರತಿಷ್ಠೆಯನ್ನೈದಬೇಕೆಂಬ ಕೋರಿಕೆಯೊಡನೆ ಸ್ವಪ್ರಯತ್ನದಿಂದ ಪ್ರಸಿದ್ಧಿಗೆಬಂದ ಒಬ್ಬರಿಬ್ಬರು ಮುಸಲ್ಮಾನ್ ದೊಡ್ಡಮನುಷ್ಯರಿಗೆ ಹೈಕೋರ್ಟು ಜಡ್ಜೀವಗೈರೆ ಗೌರವಾಸ್ಪದವಾದ ಕೆಲಸಗಳು ಕೊಡಲ್ಪಟ್ಟಾಗ ಯಾರಾದರೂ ಆಕ್ಷೇಪಿಸಿದರೆ? ಮುಸಲ್ಮಾನರ ಪ್ರಾಭವಕ್ಕೆ ಕೊರತೆಯನ್ನುಂಟುಮಾಡತಕ್ಕ ಮೂರು ನಾಲ್ಕು ಗುಣಗಳು ಅವರಲ್ಲಿ ನೆಲಗೊಂಡಿರುತಿವೆ. ಅವು ಯಾವವಂದರೆ—ಸ್ವಮತದೊಳತ್ಯಭಿಮಾನ, ಅನ್ಯಮತದೊಳು ವಿದ್ವೇಷ, ವಾಕ್ಪಾರುಷ್ಯ, ಆಲಸ್ಯತೆ, ಈನಾಲ್ಕು ಗುಣಗಳಿಂದ ಅವರಿಗೆ ಪರೋಪಸರ್ಪಣೆಯೂ ಶ್ರಮಸಹಿಷ್ಣುತೆಯೂ ಮನೋದಾರ್ಢ್ಯವೂ, ಉಂಟಾಗುವದಿಲ್ಲವು. ಮೇಲೆಕಂಡ ಗುಣಗಳು ವಿದ್ಯಾಭ್ಯಾಸದಿಂದ ನಿವಾರಣವಾಗುತಿದೆಂಬದಕ್ಕೆ ಈಗ ವಿದ್ಯಾವಂತರಾದ ಮುಸಲ್ಮಾನರಸ್ಥಿತಿಯೇ ನಿದರ್ಶನವಾಗಿರುತಿದೆ. ಅಂತಾವಿದ್ಯಾಭ್ಯಾಸವು ಸಾಮಾನ್ಯವಾಗಿ ಇವರಪಾಲಿಗೆ ಶೂನ್ಯವಾದದರಿಂದಲೇ ಅವರಸ್ಥಿತಿ ಹಿಂದೇವಿಧವಾಗಿರಲಿಕ್ಕೆ ಕಾರಣವಾಗುತಿದೆ. ಮಸೀದಿಗಳಮುಂದೆ ಅನ್ಯಮತದವರು ಬಾಜಾ ಬಜಂತ್ರಿಗಳೊಡನೆ ಹೋಗುವಾಗ್ಯೆ ಅವರು ಖೂನ್‌ಮಾಡಬೇಕೆಂಬದಾಗಿ ಉಂಟಾಗುವಂತಾ ಆಕ್ರೋಶದಲ್ಲಿಯೂ, ದೃಢತರವಾದ ಪ್ರಯತ್ನದಲ್ಲಿಯೂ ನೂರರೊಳಗೊಂದುಭಾಗವನ್ನು ವಿದ್ಯಾವಿಷಯದಲ್ಲಿ ಮುಸಲ್ಮಾನರು ಉಪಯೋಗಿಸಿರುವರಾದರೆ ಅವರೀಗ ತಿಳಿಸುವಂತಾ ವ್ಯಾಪ್ಯಸ್ಥಿತಿ ಯೆಂದಿಗೂ ಬಂದಿರಲಾರದು.

ಮುಖ್ಯವಾಗಿ ದೀನಸ್ಥಿತಿಗೆ ಬಿದ್ದಿರುವ ಮುಸಲ್ಮಾನರನ್ನು ಮುಂದಕ್ಕೆ ತರುವ ತಾತ್ಪರ್ಯದೊಡನೆ ಸರ್ಕಾರದವರು ದೊಡ್ಡ ಅಧಿಕಾರಗಳನ್ನು ಬಂದುವೇಳೆ ಅವರಿಗೆ ಕೊಟ್ಟಾಗ್ಯೂ ನಾಗರಿಕಾಪೇಕ್ಷಿತವಾದ ಪ್ರಕೃತಸ್ಥಿತಿಯಲ್ಲಿ ಅವರು ಅವನ್ನು ನಿರ್ವಹಿಸುವ ಸ್ಥಿತಿಯೊಳಿಲ್ಲವು. ಈಗ ಅಂಜುಮಾನಿ ಇಸ್ಲಾಂ ಸಮಾಜದವರು ಗವರ್ನಮೆಂಟಿನವರಿಗೆ ಈರೀತಿಯಾದ ಅರ್ಜಿ ಬರೆಯುವದಕ್ಕಿಂತಲೂ ಈ ವಿಷಯದಲ್ಲಿ ಪ್ರಂಟಾಗಿರುವ ಐಕಮತ್ಯವನ್ನೇ ವಿನಿಯೋಗಿಸಿ ತಮ್ಮ ಮತದವರನ್ನೆಲ್ಲ ವಿದ್ಯಾವಂತರಾಗಲಿಕ್ಕೆ ಯತ್ನಪಡುವಂತೆ ಪ್ರೇರಿಸಿದರೆ ಅವರು ಸ್ವಲ್ಪಕಾಲದಲ್ಲಿಯೇ ಇತರರಂತೆ ವಿದ್ಯಾವಂತರಾಗಿ ಸಮರ್ಥರೆನ್ನಿಸಿಕೊಂಡು ಜವಾಬ್ದಾರೀಯುಳ್ಳ ಉನ್ನತಾಧಿಕಾರಗಳನ್ನು ಪಡೆಯಲಿಕ್ಕೆ ಶಕ್ತರಾಗುವರು. ಅದಿಲ್ಲದೆ ಮಾಡಲ್ಪಡುವ ಪ್ರಯತ್ನಗಳೂ ತಿಳಿಸತಕ್ಕ ಸಲಹೆಗಳೂ, ಕೇಳತಕ್ಕ ಸಹಾಯಗಳೂ, ವರ್ತಿಸತಕ್ಕ ಕ್ರಮಗಳೂ ಪ್ರಯೋಜನಕರಗಳಾಗಲಾರವು. ಮುಸಲ್ಮಾನರು ಹಿಂದೂಗಳಂತೆ ಪ್ರವರ್ಧಮಾನರಾಗದಿರುವದಕ್ಕಾಗಿ ಗವರ್ನಮೆಂಟಿನವರು, ತಾವು ಚಿಂತಿಸುವುತೆ ಅನೇಕ ಸಂದರ್ಭಗಳಲ್ಲಿ ತಿಳಿಯಪಡಿಸಿರುತ್ತಾರೆ. ಈಚೆಗೆ ಮಹಮ್ಮದೀಯಜನಗಳ ವಿದ್ಯಾಭಿವೃದ್ಧಿಗಾಗಿ ಅಲ್ಲಿಯಲ್ಲಿ ಬೇಕಾದ ಪ್ರಯತ್ನಗಳೆಲ್ಲವೂ ನಡಿಸಲ್ಪಡುತಿವೆ. ಇನ್ನುಮೇಲಾದರೂ ಮುಸಲ್ಮಾನರು ಜಾಗರೂಕತೆಯಂ ವಹಿಸಿ, ವಿದ್ಯಾಮೂಲಕವಾದ ಪ್ರಾಶಸ್ತ್ಯವನ್ನೈದಿ ಇತರರಂತೆ ಉನ್ನತಸ್ಥಿತಿಗೆ ಬರಬೇಕೆಂದು ಕೋರುವೆವು.

VERNACULAR EDUCATION

ಕಳೆದತಿಂಗಳ ನಾಲ್ಕನೇ ತಾರೀಖಿನ ಈಪತ್ರಿಕೆಯಲ್ಲಿ, ಈ ಸೀಮೆಯೊಳು ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳೊಳು ಒಂದಾದರೂ ಅಪೇಕ್ಷಿತಾಂತವನ್ನುಂಟುಮಾಡುವದಕ್ಕೆ ಯೋಗ್ಯವಾದ ಸ್ಥಿತಿಯೊಳಿಲ್ಲವೆಂತಲೂ, ಅವುಗಳೊಳಿರತಕ್ಕ ಉಪಾಧ್ಯಾಯರ ಜೀವನಾರ್ಥವೇ ಅವು ಕಲ್ಪಿಸಲ್ಪಟ್ಟವಾಗಿರುತವೆಂತಲೂ ನಮೂದಿಸಿದ್ದೆವಷ್ಟೆ. ಅದರಮೇಲೆ ಯೆಡೆಹಳ್ಳಿ ವಾಸಸ್ಥನಾದ ದೇಶಭಾಷಾಭಿಮಾನಿಯೊಬ್ಬಾತನು ನಮ್ಮ ತಾತ್ಪರ್ಯವನ್ನರಿಯದೆ ಕೇಳಿದ ಯೆರಡು ಪ್ರಶ್ನೆಗಳಿಗೂ ಸನಿದರ್ಶನವಾಗೀಗ ಪ್ರತ್ಯುತ್ತರಹೇಳುವೆವಾದದರಿಂದ ತನ್ಮೂಲಕ ಆತನ ಸಂಶಯ ನಿವೃತ್ತಿಯಾಗಿ, ಮೇಲೆ ತಿಳಿಸಿದ ನಮ್ಮ ವಾಕ್ಯಗಳ ಯಾಥಾರ್ಥ್ಯವು ಸ್ಪಷ್ಟವಾಗಬಹುದು.

ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸವು ಸರಿಯಾಗಿ ನಡಿಸಲ್ಪಡುವದಿಲ್ಲವೋ? ಅಥವಾ ತನ್ಮೂಲಕ ಜೀವನ ಸಂಪಾದಿಸಿದ ಉಪಾಧ್ಯಾಯರು ತಪಸ್ಥರಾಗಿರುತ್ತಾರೋ?

ಮೊದಲನೇ ಪ್ರಶ್ನೆಗೆ—ದೇಶಭಾಷಾಭಿಮಾನಿ ತಿಳಿಸುಮತೆ, ವಿದ್ಯಾಭ್ಯಾಸದ ಇಲಾಖಾ ಆಫೀಸರುಗಳು ಕ್ಲುಪ್ತಕಾಲದಲ್ಲಿ ಹೋಗಿ ಅವುಗಳನ್ನು ತನಿಖೀ ಮಾಡುತ್ತಾರಲ್ಲದೆ ರೆವಿನ್ಯೂ ಅಧಿಕಾರಿಗಳು, ಅಂದರೆ ಡಿಸ್ಟ್ರಿಕ್ಟ ಡೆಪ್ಯುಟೀಕಮಿಶನರುಗಳೂ ತಾಲ್ಲೂಕ ಅಮಲ್ದಾರುಗಳೂ ಇತರರು ಸಹ ಅವುಗಳನ್ನು ತನಿಖೀಮಾಡುತ್ತಾರೆಂಬ ಅಂಶದೊಳೆಷ್ಟು ಮಾತ್ರವೂ ಸಂದೇಹವಿಲ್ಲವು. ಪರಂತು ಅಂತಾ ಪಾಠಶಾಲೆಗಳಿಂದ ಉಂಟಾಗತಕ್ಕ ಪ್ರಯೋಜನಮಾತ್ರ ಕೇವಲ ಅಲ್ಪವಾಗಿರುತಿದೆಂದು ಹೇಳುವದಕ್ಕೆ ಅನೇಕ ಹೋಬಳೀಸ್ಕೂಲುಗಳ ಪ್ರಕೃತಸ್ಥಿತಿಯೇ ಧೈರ್ಯವನ್ನುಂಟುಮಾಡತಕ್ಕದ್ದಾಗಿರುತಿದೆ. ಅಂತಾ ಪಾಠಶಾಲೆಗಳನ್ನು ಅನವರತ ಪರೀಕ್ಷಿಸತಕ್ಕ ಸಬಡೆಪ್ಯುಟೀ ಇನ್ಸ್ಪೆಕ್ಟರುಗಳಿಗೂ ಡೆಪ್ಯುಟೀ ಇನ್ಸ್ಪೆಕ್ಟರುಗಳಿಗೂ ಅವುಗಳ ಸಂಬಂಧವನ್ನು ಅತ್ಯಂತಿಕವಾಗಿ ತಪ್ಪಿಸಿ ಬಳಿಕ ಅವರ ತಾತ್ಪರ್ಯವನ್ನು ಕೇಳಿದರೆ ಅವರ ಅಭಿಪ್ರಾಯವು ನಮ್ಮ ನುಡಿಯನ್ನು ದೃಢಪಡಿಸತಕ್ಕದ್ದಾಗಿಯೇ ಇರುವದು. ಏತೀನ ಸದರೀ ಪಾಠಶಾಲೆಗಳು ಯಾರಿಗಾಗಿ ಉದ್ದಿಷ್ಟವಾಗಿರುತವೋ ಅವರಲ್ಲಿ ಏಕ ದೇಶೀಯರು ಸಹ ತನ್ಮೂಲಕ ಪ್ರಯೋಜನವನ್ನೈದಿ ಸುಶಿಕ್ಷಿತರಾಗಿದಾರೆಂಬದಕ್ಕೆ ಇದುವರೆವಿಗೆ ನಮಗೆ ಯಾವ ದೃಷ್ಟಾಂತರೂ ಕಂಡುಬರಲಿಲ್ಲವು. ಈ ಪಾಠಶಾಲೆಗಳನ್ನು ಗ್ರಾಮಾಂತರದಲ್ಲಿ ಸ್ಥಾಪಿಸುವಾಗ್ಯೆ ರೈತರಮಕ್ಕಳನ್ನು ವಿದ್ಯಾವಂತರಾಗಿ ಮಾಡಬೇಕು, ರೈತರಿಂದ ವಸೂಲ್ಮಾಡತಕ್ಕ ರುಸುಮಿಗೆ ಯಾವವಿಧದಲ್ಲಾದರೂ ಅವರಿಗೆ ಒಂದು ಪ್ರತ್ಯುಪಕಾರವ ಮಾಡಬೇಕು, ಎಂಬ ಈಯೆರಡು ಉದ್ದೇಶಗಳು ವಿನಾಗವರ್ನ್ಮೆಂಟಿನವರಿಗೆ ಬೇರೊಂದೂ ಇರಲಿಲ್ಲವು. ಈ ಪೈಕಿ ಮೊದಲನೆಯದು ಸಿದ್ಧಿಸದೆ ಹೋದದರಿಂದ ಯೆರಡನೆಯದು ನೆರವೇರದೆಹೋಯಿತು. ಒಂದುವೇಳೆ ದೇಶ ಭಾಷಾಭಿಮಾನಿ ತಿಳಿಸಿದಂತೆ ಬಾಲಕರು ಕೇಳಿದ್ದಕ್ಕೆ ತಕ್ಕಮಟ್ಟಿಗೆ ಪ್ರತ್ಯುತ್ತರವನ್ನಿಯ್ಯುವಂತೆ ತಯಾರ್ಮಾಡಲ್ಪಟ್ಟಿರಬಹುದು. ಅವರ ಜ್ಞಾನವಾದರೋ ಪದ್ಯಸಾರ ವಾಗ್ವಿಧಾಯಿನಿಯಲ್ಲಿ ಮೊದಲು ಹತ್ತು ಪುಟಗಳೊಳಪಟ್ಟದ್ದಾಗಿರುವದೇಹೊರ್ತು ಬೇರೊಂದನ್ನೂ ಅರಿತದ್ದಾಗಿರಲಾರದು. ಕದಾಚಿತ್ ಬಾಲಕರಿಗೆ ಭೂಗೋಳವೂ ಗಣಿತವೂ ದೇಶಚರಿತ್ರೆಯೂ ಕಲಿಸಲ್ಪಡಲಿಲ್ಲವೆಯೆಂದು ಕೇಳಬಹುದು. ಅದರಿಂದವರಿಗೆ ಉಂಟಾಗುವ ಪ್ರಯೋಜನವಷ್ಟರಲ್ಲೇ ಇದೆ. ಮತ್ತು ವ್ಯವಧಾನ ಮಾಡಿಕೊಂಡು ಅಕ್ಕರೆಯೊಡನೆ ಓದತಕ್ಕ ಬಾಲಕನು ನೇಕತಾ ಒಬ್ಬನು ಸಿಕ್ಕುವದು ಪ್ರಯಾಸವಾಗಿರುತಿದೆ. ಇಂತಾ ಜ್ಞಾನವು ಕೃಷಿಜೀವಿಗಳಾದ ರೈತರ ಮಕ್ಕಳಿಗೆ ಉತ್ತರೋತ್ತರ ಜೀವನಕ್ಕೆ ಯೆಷ್ಟು ಸಹಾಯಕವಾಗುವದೋ ಅದನ್ನು ದೇಶಭಾಷಾಭಿಮಾನಿಯೇ ಆಲೋಚಿಸಬಹುದು.

ಇವರೆಲ್ಲರಿಗೂ ಸರ್ಕಾರ ನೌಕರಿಯು ದೊರೆಯುವದೆಂತಲೂ ತನ್ಮೂಲಕ ಅವರು ಜೀವಿಸುವರೆಂತಲೂ ಹೇಳಲಾಗದು, ಯಾತಕ್ಕೆಂದರೆ— ಉನ್ನತ ವಿದ್ಯಾಭ್ಯಾಸವುಳ್ಳ ಯೂನಿವರ್ಸಿಟೀ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದತಕ್ಕವರಿಗೇ ನೌಕರಿದೊರೆಯದೆ ಶ್ರಮಪಡುತಲಿದಾರೆ. ಅದಕಾರಣ ರೈತರಮಕ್ಕಳಿಗೆ ವ್ಯವಸಾಯವಿನಾ ಬೇರೆ ಜೀವನೋಪಾಯವಿಲ್ಲವು. ಅಂತಾಜೀವನಕ್ಕೆ ಸಾಧಕವಾದ ವಿದ್ಯೆಯನ್ನು ಕಲಿಸದಮೇಲೆ ಅಪೇಕ್ಷಿತಾಂತವನ್ನುಂಟುಮಾಡುವದಕ್ಕೆ ಯೋಗ್ಯವಾಗಿಲ್ಲವೆಂತಲೇ ಧಾರಾಳವಾಗಿ ಹೇಳಬಹುದು. ಪ್ರಸಕ್ತವಿಚಾರಕ್ಕೆ ಆಧಾರವಾಗಿ ಇದೇವಿಷಯದೊಳು ದೃಷ್ಟಾಂತಸ್ವೇನ ಮುಂಬೈ ಕನ್ನಡಸುವಾರ್ತೆ ಯೆಂಬ ಪತ್ರಿಕೆಯು ಪ್ರಕಟಿಸಿರುವ ಒಂದುಕತೆಯನ್ನು ಇದರಡಿ ಉದಹರಿಸುವೆವು.

“ಕೆನರಾಜಿಲ್ಲಾ ಕುಮಟಾತಾಲ್ಲೂಕಿಗೆಸೇರಿದ ಗೋಕರ್ಣದಬಳಿಯಿರುವ ಬಿಜ್ಜೂರೆಂಬ ಒಂದು ಹಳ್ಳಿಯಲ್ಲಿ ವಾಸವಾಗಿರತಕ್ಕ ಒಬ್ಬ ಒಕ್ಕಲಿಗ ಹುಡುಗನು ಅಲ್ಲಿಗೆ ಒಂದೆರಡು ಮೈಲುಗಳಷ್ಟು ಸಲೆಯೊಳಗಿರುವ ಒಂದು ಸರ್ಕಾರ ಪಾಠಶಾಲೆಗೆ ತನ್ನ ಗ್ರಾಮದ ಶಾನುಭೋಗನ ಮಕ್ಕಳೊಡನೆ ಹೋಗುತಲಿದ್ದನು. ದೊಡ್ಡ ಮನುಷ್ಯರ ಮಕ್ಕಳು ಪಾಠಶಾಲೆಗೆ ಬರುವದೇ ಅಪೂರ್ವವಾಗಿರುವಾಗ ಒಕ್ಕಲಿಗನ ಮಗನು ಪಾಠಶಾಲೆಗೆ ಹೋಗಿ ಬಹಳ ಅಕ್ಕರೆಯೊಡನೆ ವಿದ್ಯಾಭ್ಯಾಸ ಮಾಡುತಲಿರುವದನ್ನು ಕಂಡು ಉಪಾಧ್ಯಾಯರೂ ಇನ್ಸ್ಪೆಕ್ಟರೂ ಕಲೆಕ್ಟರು ಸಹ ಅವನನ್ನು ಬಹಳ ಪ್ರೋತ್ಸಾಹಗೊಳಿಸುತ ಬೇಕಾದ ವಾಗ್ದಾನಗಳನ್ನೆಲ್ಲ ಮಾಡುತಬಂದರು. ಕಡೆಗೆ ಅವನನ್ನು ಕಬ್ಬತಿ ನಾಮ್ಲೇದಾರನನ್ನಾಗಿಯೂ ಮುನ್ಸಫನನ್ನಾಗಿಯೂ ಮಾಡುವಂತೆ ಸಹ ಹೇಳಿದರು. ಸ್ವತಃ ಜಾಗರೂಕನಾದ ಸದರೀ ಹುಡುಗನು ಮೇಲೆ ಕಂಡ ಪ್ರತ್ಯಾಶೆಗಳಿಂದ ಮತ್ತಷ್ಟು ವ್ಯಾಸಂಗಮಾಡಲಾರಂಭಿಸಿ ಸ್ವಲ್ಪಕಾಲದಲ್ಲಿಯೇ ಒಳ್ಳೇವಿದ್ಯಾವಂತನಾದನು. ಇಷ್ಟಾದಾಗ್ಯೂ ಅವನು ಮೂರುನಾಲ್ಕಾವರ್ತಿ ಪರೀಕ್ಷೆಗೆ ಹೋಗಿ ದುರ್ಭಾಗ್ಯದುರ್ವಿಧಿಯಿಂದ ತೇರ್ಗಡೆಯಾಗದೆಹೋದದರಿಂದ ಭಗ್ನೋತ್ಸಾಹಿಯಾಗಿ ತನ್ನವಿದ್ಯಾಭ್ಯಾಸವನ್ನು ನಿಲ್ಲಿಸಿದನು. ಇದಲ್ಲದೆ ಅತನಿಗೆ ವಯಸ್ಸೂ ಮೀರುತಬಂದು. ಸಾಂಸಾರಿಕ ಚಿಂತೆ ತಲೆಗೆ ಹತ್ತಿತು. ಬಳಿಕ ಒಂದು ಜೀವನವ ಕಲ್ಪಿಸಿಕೊಳ್ಳಬೇಕೆಂಬ ಅಭಿಲಾಷೆ ಅಧಿಕವಾಗಿ ತನಗೆ ಪ್ರಥಮತಃ ವಾಗ್ದಾನ ಮಾಡಿದ್ದವರಪೈಕಿ ಅಗ್ರಿಮರಾದ ಕಲೆಕ್ಟರಬಳಿಗೆ ಹೋಗಿ ತನಗೆ ಒಂದು ಕೆಲಸ ಕೊಡಬೇಕೆಂದು ಕೇಳಿದನು. ಅದಕ್ಕೆ ಕಲೆಕ್ಟರು ನೀನು ಪ್ಯಾಸ್ ಮಾಡಲಿಲ್ಲವಾದ್ದರಿಂದ ನಿನಗೆ ಸರ್ಕಾರ ನೌಕರಿ ದೊರೆಯಲಾರದೆಂದು ಜವಾಬುಕೊಟ್ಟರು. ಮನೆಯೊಳಗೆ ಸುಮ್ಮನಿರಲು ಅಣ್ಣತಮ್ಮಂದಿರು ತಮ್ಮೊಳುತಾವು ಗೊಣಗುಟ್ಟಲಿಕ್ಕೆ ಉಪಕ್ರಮಿಸಿದರು. ಅವರಸಂಗಡ ಸಾಗುವಳೀ ಕೆಲಸ ಮಾಡುವದಕ್ಕೂ, ಸಗಣೀಗೊಬ್ಬರ ಹೊರಲಿಕ್ಕೂ, ನೇಗಿಲು ಹಿಡಿದು ಉಳುವದಕ್ಕೂ ಬಿಸಿಲಿನಲ್ಲಿ ಕೆತ್ತಿ ಕಡಿಯಲಿಕ್ಕೂ ಲಜ್ಜೆಯಿಂದ ಮನ ಒಪ್ಪದೆ ಹೋಯಿತಲ್ಲದೆ ಹುಟ್ಟುವಾರಭ್ಯ ಮಾಡದೆಯಿದ್ದ ರೈತಾಬೀಕೆಲಸಗಳೊಂದೂ ಅವನಿಂದ ಸಾಧ್ಯವಾಗದೆ ಹೋಯಿತು. ಒಂದೊಂದುವೇಳೆ ತಾನಿಷ್ಟು ಕಷ್ಟಪಟ್ಟು ವಿದ್ಯೆಯನ್ನು ಕಲಿತಾಗ್ಯೂ ಕಡೆಗೆ ಮೂಢರಾದ ಒಡಹುಟ್ಟಿದವರೊಡನೆ ತಾನೂ ನೇಗಿಲು ಹಿಡಿದು ಯೆತ್ತಿನ ಬಾಲವ ತಿರಿಗಿಸಬೇಕಾದಗತಿ ಪ್ರಾಪ್ತವಾಯಿತೇ ಯೆಂದು ಬಹಳ ವಿಷಾದಿಸುತಿದ್ದನು, ಕಡೆಗೆ ತನ್ನ ಪೂರ್ವಿಕರ ವೃತ್ತಿಯನ್ನು ಬಿಟ್ಟು ಈ ವಿದ್ಯೆಯನ್ನು ಯಾತಕ್ಕೆ ಕಲಿತೆನಕಟಾ ಯೆಂದು ದುಃಖಿಸುವಂತೆ ಯೇರ್ಪಟ್ಟಿತು. ಆಸ್ಥಿತಿಯಲ್ಲಿ ಅವನು ವಿದ್ಯಾಶಾಲೆಯಲ್ಲಿ ಓದಿದ್ದ ಜೈಮಿನಿ, ರಾಜಶೇಖರ ಮುಂತಾದ ಗ್ರಂಥಗಳೊಂದೂ ಅವನಿಗೊಂದು ಜೀವನೋಪಾಯವನ್ನುಂಟುಮಾಡದೆ ಹೋಯಿತು. ಭೂಗೋಳ ದೇಶಚರಿತ್ರೆ ಅಂಕಗಣಿತ ಮುಂತಾದವುಗಳೊಂದೂ ಅವನ ಅನುಪಪತ್ತಿಯನ್ನು ನಿವಾರಣೆ ಮಾಡಲಾರದೆ ಹೋಯಿತು. ಇವನಿಗೆ ತನ್ನಹೊಲವನ್ನು ಊರನೇಗಿಲಿನಿಂದ ಉಳುವದಕ್ಕಿಂತ ಅನ್ಯದೇಶದ ನೇಗಿಲಿನಿಂದ ಉತ್ತರೇ ಲಾಭವೇನು? ತನ್ನ ಹಿರಿಯರಕಾಲದಮೊದಲು ನಡೆದುಬಂತುತೆ ತನ್ನ ಹೊಲದಲ್ಲಿ ಒಂದೇಬೆಳೆಯನ್ನು ಇಡುವದಕ್ಕಿಂತಲೂ ಭಿನ್ನಭಿನ್ನಗಳಾದ ಬೆಳೆಗಳನ್ನು ಇಡುವಬಗೆ ಹ್ಯಾಗೆ? ಹಾಗಾದರೆ ಯಾವದು ಬೆಳೆಗಳು ತನ್ನಹೊಲದ ಸ್ಥಿತಿಗೆ ಯೋಗ್ಯವಾದವು, ಮತ್ತು ಯಾವಯಾವ ಬೆಳೆಗಳಿಗೆ ಯಾವ ಯಾವತರದ ಗೊಬ್ಬರಹಾಕಬೇಕು? ಮತ್ತು ತನ್ನ ದನಗಳನ್ನು ಒಳ್ಳೇಸ್ಥಿತಿಯಲ್ಲಿಡುವದಕ್ಕೆ ಅವುಗಳಿಗೆ ಯಾವತರದ ಆಹಾರ ಹಾಕಬೇಕು; ಅವುಗಳಿಗುಂಟಾಗುವ ರೋಗಗಳ ಚಿಕಿತ್ಸೆಗೇನುಪಾಯವು ಈ ಮುಂತಾದ ವಿಷಯಗಳನ್ನು ಕಲಿಸಿದರೆ ಅವನಿಗೆ ಯೆಷ್ಟುಪ್ರಯೋಜನವಾಗಿರುವದು. ಈಗ ಯಿವನವಿದ್ಯೆಯಿಂದಲೂ ಯಿವನ ಪರಿಶ್ರಮದಿಂದಲೂ ಏನುಪ್ರಯೋಜನವಾಯಿತು. ಆದ್ದರಿಂದ ಸಾಧಾರಣ ವಿದ್ಯಾಭ್ಯಾಸ ನಡಸಿದಮೇಲೆ ಕಸಬಿಗೆ ಸಂಬಂಧಪಟ್ಟ ವಿದ್ಯೆಯನ್ನು ಬಿಯಾ ತರಸ್ ಮಾಡತಕ್ಕ ಹುಡುಗರಿಗೆ ಕಲಿಸಿದರೆ ದೇಶಕ್ಕೆ ಬಹಳ ಲಾಭಕರವಾಗುವದು. ಈಗ ಒಕ್ಕಲುಮಕ್ಕಳಿಂದ ರಾಜಪುತ್ರನವರೆಗೆ ಯೆಲ್ಲರೂ “ಗ್ರಾಜ್ಯುಯೆಟ್” ಗಳಾಗಲಿಕ್ಕೆ ಪ್ರಯತ್ನಪಟ್ಟು ಅಂತಾ ಶಿಕ್ಷೆಯನ್ನೇ ಹೊಂದುತಬಂದರೆ ಮುಂದಿನ ಪರಿಣಾಮವು ಮೇಲೆಕಂಡಂತೆ ಆದೀತು, ಎಂಬದು.

ಮೇಲೆಕಂಡವಿಷಯವು ಅತಿಶಯೋಕ್ತಿಯಾದ್ದಲ್ಲವು. ಹೋಬಳೀ ಸ್ಕೂಲುಗಳದೆಸೆಯಿಂದ ರೈತರ ಮಕ್ಕಳಿಗೆ ಉಂಟಾಗುವಪ್ರಯೋಜನವು ಕಡೆಗೆ ಮೇಲೆಕಂಡದ್ದಕ್ಕಿಂತ ಅನ್ಯಥಾ ಇರಲಾರದು. ಈ ಪಾಠಶಾಲೆಗಳ ಮೂಲಕ ಜೀವಿಸತಕ್ಕ ಉಪಾಧ್ಯಾಯರು ತಪಸ್ಥರಾಗಿರುತ್ತಾರೆಯೇ ಯೆಂಬ ಎರಡನೆಯಪ್ರಶ್ನೆಗೆ ಪ್ರತ್ಯುತ್ತರವು ಪ್ರಸಿದ್ಧವಾಗಿಯೇ ಇದೆ. ಪ್ರಯೋಜನವಿಲ್ಲದಕೆಲಸಕ್ಕಾಗಿ ಧನವ್ಯಯವು ಪರಿಗಣನೀಯವಾಗಲಾರದಾಗಿ ಮೇಲೆಕಂಡ ನಮ್ಮ ಆಕ್ಷೇಪಣೆಯೇ ಸಿದ್ಧಿಸುತಿದೆ. ಏತೀನ ಹೋಬಳೀಸ್ಕೂಲುಗಳು ಪ್ರಕೃತಸ್ಥಿತಿಯಲ್ಲಿ ಸ್ವಲ್ಪಮಟ್ಟಿಗೂ ಪ್ರಯೋಜನಕಾರಿಯಲ್ಲವೆಂದು ದೃಢವಾಗಿ ಹೇಳುವೆವು. ಈ ಹೋಬಳೀ ಸ್ಕೂಲುಗಳಲ್ಲಿ ರೈತರಮಕ್ಕಳುವಿನಾ ಅನ್ಯರೊಬ್ಬರೂ ಓದುವದಿಲ್ಲವು. ಅವರಿಗೆ ಪ್ರಕೃತ ವಿದ್ಯಾಭ್ಯಾಸ ಕ್ರಮದಿಂದ ಯಾವಭಾಗದಲ್ಲಿಯೂ ಪ್ರಯೋಜನ ಉಂಟಾಗಲಾರದಾದ್ದರಿಂದ ಅವುಗಳನ್ನು ಕ್ರಮಪಡಿಸುವತನಕ ಅವು ಸರ್ಕಾರಕ್ಕೆ ವ್ಯರ್ಥವ್ಯಯಕಾರಿಯೆಂದು ಮತ್ತೊಂದುಸಲ ಉದ್ಘೋಷಿಸಿ ಹೇಳುವೆವು.

THE ARHAT SYSTEM.—No.—16

ಜೈನ್ಯ ಅಥವಾ ಆರ್ಹತಸಿದ್ಧಾಂತವು.

ಈಗ್ಯೆ ಮೂರುನಾಲ್ಕು ವಾರಗಳಿಂದಲೂ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವ ಆರ್ಹತಮತಪ್ರಕ್ರಿಯೆಯು ಬಹಳ ಗಹನವಾಗಿರುವಂತೆಯೂ ಅರ್ಥವಾಗುವದಿಲ್ಲವೆಂತಲೂ ಕೆಲವರು ಹೇಳುವದಾಗಿ ನಮ್ಮಕೇಳ್ವಿಕೆಗೆ ಬಂದಿರುತಿದೆ. ಆದರೆ ಅವರಅಭಿಪ್ರಾಯವು ತಪ್ಪಾದ್ದಲ್ಲವು. ಇದು ಶುದ್ಧ ಶಾಸ್ತ್ರೀಯವಾದದರಿಂದ ಪ್ರಥಮತಃ ಗಹನವಾಗಿ ತೋರಿದಾಗ್ಯೂ ಹಿಂದೆರಡಾವರ್ತಿ ಅವಧಾನದೊಡನೆ ಓದಿದಲ್ಲಿ ಬಹಳ ತೃಪ್ತಿಕರವಾದ ಅರ್ಥವು ವ್ಯಕ್ತವಾಗದೆ ಹೋಗಲಾರದು. ನಾವು ಪೂರ್ವದಲ್ಲಿ ತಿಳಿಸಿದಂತೆ ಇದರೊಳಗಣ ಪರಿಭಾಷೆಯನ್ನೂ ಅದರ ಅರ್ಥವನ್ನೂ ಜ್ಞಾಪಕದೊಳಿಟ್ಟುಕೊಂಡರೆ ಅದುತ್ತರೋತ್ತರ ಬರುವ ವಿಚಾರಕ್ಕೆ ಬಹಳ ಸಾಧಕವಾಗುವದು. ಇದಲ್ಲದೆ ಇದು ಕೇವಲ ಅನ್ಯಮತವಾಗಿಯೂ ಅದರ ಸಿದ್ಧಾಂತಾಚಾರ ವ್ಯವಹಾರಗಳು ನಮಗೆ ಅನನುಭೂತವಾದವಾಗಿಯೂ ಇರುತಿವೆ. ಪರಂತು ವಿರಳವಾಗುತಬರುವ ಈ ಮತ ಸ್ವರೂಪವನ್ನು ಜನಗಳಿಗೆ ತಿಳಿಯಪಡಿಸಬೇಕೆಂಬ ಒಂದುವಿಧ ಉತ್ಸಾಹಾತಿಶಯದಿಂ ಪ್ರೇರಿತರಾಗಿ ಇದಂಕುರಿತು ಬರಿಯಲುದ್ಯಮಿಸಿದೆವು. ಈ ಮತವು ಈ ಮೈಸೂರು ರಾಜ್ಯದಲ್ಲಿ ಹಿಂದೆ ಬಹಳ ಪ್ರಚಾರದೊಳಿದ್ದ ಅಂಶ ಪ್ರಸಿದ್ಧವಾಗಿಯೇ ಇರುತಿದೆ. ಕಾಲವಿಶೇಷದಿಂದದು ದೀನಸ್ಥಿತಿಗೆ ಬಂದಾಗ್ಯೂ ತನ್ಮತಾವಲಂಬಿಗಳಾದ ಪಂಡಿತರುಮಾತ್ರ ಕೆಲವರು ಶ್ರವಣಬೆಳಗುಳ ಚಾಮರಾಜನಗರ ಮುಂತಾದಪ್ರಾಂತಗಳಲ್ಲಿ ಅದ್ಯಾಪಿಇರುತ್ತಾರೆಯಾಗಿ, ಅಂತಾಪಂಡಿತರು ತಮ್ಮ ಮತ ಪ್ರಚಾರಾರ್ಥವಾಗಿಯೂ, ಸ್ವಪಾಂಡಿತ್ಯ ಪ್ರದರ್ಶನಾರ್ಥವಾಗಿಯೂ ಲೋಕೋಪಕಾರಾರ್ಥವಾಗಿಯೂ ತಮ್ಮ ಮತಸಂಬಂಧವಾದ ಆಚಾರಾದಿ ಧರ್ಮಗಳನ್ನು ನಮಗೆ ತಿಳಿಯಪಡಿಸಬೇಕೆಂದು ಕೋರುವೆವಲ್ಲದೆ, ಅನುಸೃತವಾದ ನಮ್ಮ ಲೇಖನದೊಳು ಆಕ್ಷೇಪಣೀಯವಾದ ಭಾಗವೇನಾದರೂ ಅವರಿಗೆ ಕಂಡುಬಂದರೆ ದಯಮಾಡಿ ಅಂತಾ ಭಾಗವನ್ನು ಅನುಕ್ರಮವಾಗಿ ಬರೆದು ಕಳುಹಿಸಿದಲ್ಲಿ ನಾವು ಬಹಳ ಕೃತಜ್ಞತೆಯೊಡನೆ ಅದನ್ನೀಪತ್ರಿಕೆಯಲ್ಲಿ ಪ್ರಕಟಿಸಿ ತನ್ಮೂಲಕ ಏತದ್ವಿಷಯಕವಾದ ನಮ್ಮ ಜ್ಞಾನವನ್ನು ಸುಪಕ್ವಪಡಿಸಿಕೊಳ್ಳುವೆವು.

ಗತವಾರದಲ್ಲಿ ಪ್ರಕಟಿಸಿದ್ದ ಬೌದ್ಧರ ಆಕ್ಷೇಪಣೆಯಮೇಲೆ ಆರ್ಹತರು ತಿಳಿಸುವದೇನಂದರೆ— ಸರ್ವಾರ್ಥ ಗ್ರಾಹಕವಾದ ಪ್ರಮಾಣ ಪಂಚಕವು ಕಾಣಲ್ಪಡದಿರುವದರಿಂದ ಸರ್ವಜ್ಞನಾದಪುರುಷನೊಬ್ಬನುಂಟೆಂಬುವದಕ್ಕೆ ಆಗುವದಿಲ್ಲವೆಂದು ಹೇಳಿದ್ದು ಯುಕ್ತವಲ್ಲವು, ಅನುಮಾನಾದಿ ಪ್ರಮಾಣವೇ ಈ ವಿಷಯದಲ್ಲಿ ಸಂಭಾವಿತವಾಗಿರುತದೆ. ಹ್ಯಾಗಂದರೆ—ಆತ್ಮನು ಗ್ರಹಣಸ್ವಭಾವವುಳ್ಳವನಾಗಿರುವದಲ್ಲದೆ ಪ್ರಕ್ಷೀಣಪ್ರತಿಬಂಧಪ್ರತ್ಯಯ ಸ್ವಭಾವವುಳ್ಳವನಾದ್ದರಿಂದ ಸಕಲಪದಾರ್ಥ ಸಾಕ್ಷಾತ್ಕಾರಿಯಾಗುತ್ತಾನೆ. ಯಾವದು ಯಾವವಸ್ತು ಗ್ರಹಣ ಸ್ವಭಾವವುಳ್ಳದ್ದಾಗಿ ಪ್ರಕ್ಷೀಣಪ್ರತಿಬಂಧ ಪ್ರತ್ಯಯವುಳ್ಳದ್ದಾಗಿರುತಿದೆಯೋ ಅದು ತತ್ಸಾಕ್ಷಾತ್ಕಾರಿಯಾದ್ದೆಂದುಹೇಳಬೇಕಾಗಿದೆ. ಹ್ಯಾಗಂದರೆ—ಅಂಧಕಾರಾದಿ ಪ್ರತಿಬಂಧವಿಲ್ಲದಲೋಚನವಿಜ್ಞಾನವು ಹ್ಯಾಗೆ ರೂಪಸಾಕ್ಷಾತ್ಕಾರಿಯಾಗುವದೋ ಅದರಂತೆ ಅದು ತತ್ಸಾಕ್ಷಾತ್ಕಾರಿಯಾಗುವದು. ಆದ್ದರಿಂದ ತದ್ಗ್ರಹಣಸ್ವಭಾವವುಳ್ಳವನಾಗಿಯೂ ಪ್ರಕ್ಷೀಣಪ್ರತಿಬಂಧ ಪ್ರತ್ಯಯವುಳ್ಳವನಾಗಿಯೂ ಸಕಲಪದಾರ್ಥ ಸಾಕ್ಷಾತ್ಕಾರಿಯಾಗಿಯೂಯಿರುವ ಆತ್ಮನೊಬ್ಬನಿದ್ದಾನೆಂದು ಹೇಳಬೇಕಾಗಿದೆ. ಅಖಿಲಪದಾರ್ಥಗ್ರಹಣ ಸ್ವಭಾವವುಳ್ಳದ್ದಾಗಿರುವಿಕೆಯು ಆತ್ಮನಿಗೆ ಅಸಿದ್ಧವೆಂದು ಹೇಳಲಾಗದು. ಚೋದನಾ (ಅಂದರೆವಿಧಿ) ಬಲದಿಂದ ನಿಖಿಲಾರ್ಥಜ್ಞಾನವು ಆತ್ಮನಿಗೆಉಂಟೆಂಬದು ಸಿದ್ಧಿಸುತಿದೆ. ಆವಿಧಿ ಯೆಂತಾದ್ದಂದರೆ,—ಭೂತ ಭವಿಷ್ಯದ್ವರ್ತಮಾನ ಕಾಲಿಕವಾದ ಮತ್ತು ಸೂಕ್ಷ್ಮವ್ಯವಹಿತ ವಿಪ್ರಕೃಷ್ಟವಾದ ಪದಾರ್ಥಗಳನ್ನು ಅವನು ತಿಳಿಯತಕ್ಕವನೆಂಬದನ್ನು ಬೋಧಿಸತಕ್ಕದ್ದಾಗಿರುತಿದೆ. ಈ ಕಾರಣದಿಂದ ವಿಧಿ ನಿಷೇಧ ವಿಚಾರಣ ನಿಮಿತ್ತಕವಾದ ಸರ್ವಾರ್ಥವಿಷಯಕ ಜ್ಞಾನವನ್ನುಅಂಗೀಕರಿಸುವ ಅಧ್ವರಮೀಮಾಂಸಾ ಗುರುಗಳು ಆತ್ಮನು ಸಕಲಾರ್ಥ ಗ್ರಹಣ ಸ್ವಭಾವವುಳ್ಳವನೆಂಬದಾಗಿ ಅಂಗೀಕರಿಸಿರುತ್ತಾರೆ. ಅಖಿಲಾರ್ಥ ಪ್ರತಿಬಂಧಕಕ್ಷಯಕ್ಕೆ ಅನುಪಪತ್ತಿಯುಂಟಾಗುತಿದೆಂದು ಹೇಳಲಾಗದು. ಯಾತಕ್ಕಂದರೆ—ಆವರಣ

ಕ್ಷಯಕ್ಕೆ ನಿಮಿತ್ತಭೂತವಾದ ಸಮ್ಯಗ್ದರ್ಶನಾದಿ ತ್ರಿತಯ ಸ್ವರೂಪವಾದ ಸಾಮಗ್ರೀ ವಿಶೇಷವು ಪ್ರಸಿದ್ಧವಾದ್ದಾಗಿರುತಿದೆ. ಈರೀತಿ ಮರಾಕ್ಷೇಪಣೆಗಳೆಲ್ಲ ನಿವಾರಿಸಲ್ಪಡತಕ್ಕವಾಗಿರುತಿವೆ.

'ಸರ್ವಜ್ಞನು ಅನಾದಿ ಮುಕ್ತನಾದ್ದರಿಂದ ಅವನಿಗೆ ಆವರಣವೇ ಸಂಭವಿಸುವದಿಲ್ಲವಾಗಿ ಅಂತಾ ಆವರಣ ಪ್ರಕ್ಷಯ ಬಲದಿಂದ ಸರ್ವಪದಾರ್ಥ ವಿಷಯಕವಾದ ಮತ್ತು ನಿರ್ಮಲವಾದ ಮುಖ್ಯ ಪ್ರತ್ಯಕ್ಷವುಂಟಾಗುವದು ಯುಕ್ತವೆಂದು ಹೇಳಲಾಗದು. ಯಾತಕ್ಕಂದರೆ,—ಅವನಿಗೆ ಅನಾದಿ ಮುಕ್ತತ್ವವೇ ಸಿದ್ಧಿಸುವದಿಲ್ಲವು ಸರ್ವಜ್ಞನೂ ಇತರ ಮುಕ್ತರಂತೆ ಒಬ್ಬನಾದ್ದರಿಂದ ಅವನು ಅನಾದಿ ಮುಕ್ತನಲ್ಲವು. ಅವತಾರಣ ಬದ್ಧಾಪೇಕ್ಷಯಾ ಅವನಿಗೆ ಮುಕ್ತತ್ವ ವ್ಯವಹಾರವುಂಟಾಯಿತು. ಒಬ್ಬ ಬದ್ಧನಿಲ್ಲದಪಕ್ಷಕ್ಕೆ ಆಕಾಶವಂತೆ ಮುಕ್ತನೊಬ್ಬನಿಲ್ಲದೆಹೋಗುತಿದೆ. ಅನಾದಿಯಾದ ಭೂವ್ಯಾಪವಾರ್ಯ ಪರಂಪರೆಗೆ ಕರ್ತೃಒಬ್ಬನು ಬೇಕಾಗಿರುವದರಿಂದ ಅಂತಾ ಮುಕ್ತನೊಬ್ಬನುಸಿದ್ಧಿಸಬೇಕಾಗುತಿದೆ ; ಹ್ಯಾಗಂದರೆ,—ಕ್ಷಿತ್ಯಾದಿಕಾರ್ಯವು ಜನ್ಯನಾಗಿರುವದರಿಂದ ಘಟಾದಿಗಳಂತೆ ಅದೂ ಸಕರ್ತೃಕವಾಗಿರಬೇಕೆಂಬದು ಯುಕ್ತವಲ್ಲವು. ಮತ್ತು ಕ್ಷಿತ್ಯಾದಿಗಳಿಗೆ ಕಾರ್ಯತ್ವವೇ ಸಿದ್ಧಿಸುವದಿಲ್ಲವಾಗಿ ಅವು ಅವಯವ್ಯಳವಾಗಿರುವದರಿಂದ ಅವುಗಳಲ್ಲಿ ಕಾರ್ಯತ್ವವು ಸಿದ್ಧಿಸುತಿದೆಯೆಂದು ಹೇಳಲಾಗದು. ಹಾಗೆ ಹೇಳಿದರೆ ಅನೇಕ ವಿಕಲ್ಪಗಳುಂಟಾಗಲಿಕ್ಕೆ ಕಾರಣವಾಗುತಿದೆ. ಅವು ಯಾವವೆಂದರೆ—ಸಾವಯವತ್ವವೆಂಬದು, ಅವಯವ ಸಂಯೋಗಿತ್ವವೆ,ಅವಯವ ಸಮವಾಯಿತ್ವವೆ, ಅವಯವ ಜನ್ಯತ್ವವೆ, ಸಮವೇತದ್ರವ್ಯತ್ವವೆ,ಸಾವಯವ ಬುದ್ಧಿವಿಷಯತ್ವವೆ ಎಂಬವು. ಆಕಾಶಾದಿಗಳಲ್ಲಿ ಅನೈಕಾಂತ್ಯದೋಷವುಂಟಾಗುವದರಿಂದ ಮೊದಲನೆಯ ವಿಕಲ್ಪವೂ, ಸಾಮಾನ್ಯಾದಿಗಳಲ್ಲಿ ವ್ಯಭಿಚಾರದೋಷವುಂಟಾಗುವದರಿಂದ ಯೆರಡನೆಯದೂ, ಹೇತುಸಾಧ್ಯಗಳಿಗೆ ಭೇದವುಂಟಾಗುವದರಿಂದ ಮೂರನೆಯದೂ, ವಿಕಲ್ಪಯುಗಳ ಗ್ರಸ್ತವಾಗಿರುವದರಿಂದ ನಾಲ್ಕನೆಯದೂ (ವಿಕಲ್ಪಯುಗಳವೆಂದರೆ ಸಮವೇತದ್ರವ್ಯತ್ವವೆಂಬದು ಸಮವಾಯ ಸಂಬಂಧಮಾತ್ರವುಳ್ಳ ದ್ರವ್ಯವಾಗಿರುತಿದೆಯೋ, ಅನ್ಯತ್ರ ಸಮವಾಯ ಸಂಬಂಧದಿಂದ ವರ್ತಿಸುವ ದ್ರವ್ಯವಾಗಿರುತಿದೆಯೋ ಯೆಂದು ಕೇಳಿದರೆ, ಈಯೆರಡು ವಿಕಲ್ಪಗಳೂ ಸಿದ್ಧಿಸತಕ್ಕವಲ್ಲವು. ಹ್ಯಾಗಂದರೆ,—ಆಕಾಶಾದಿಗಳಲ್ಲಿ ಗುಣಾದಿಸಮವಾಯವು ವ್ಯತ್ಯೆಗಳು ಇರುವದರಿಂದ ವ್ಯಭಿಚಾರದೋಷ ಸಂಭವಿಸುತಿದೆಯಾಗಿ ಪ್ರಥಮವಿಕಲ್ಪವು ವುಂಟಾಗುವದಿಲ್ಲವು. ಸಾಧ್ಯಾಪೇಕ್ಷೆಗಳಿಗೆ ಭೇದವುಂಟಾಗಿರುವದರಿಂದ ಇತರಶಬ್ದಾರ್ಥಗಳಲ್ಲಿ ಸಮವಾಯಕಾರಣಭೂತವಾದ ಅವಯವಗಳೊಳು ಸಮವಾಯವನ್ನೇ ಸಾಧಿಸಬೇಕಾಗಿರುವದರಿಂದ ಯೆರಡನೆಯ ವಿಕಲ್ಪಕ್ಕೂ ಅವಕಾಶವಿಲ್ಲವು. ಇದು ಸಮವಾಯವನ್ನಂಗೀಕರಿಸಿ ಹೇಳಲ್ಪಟ್ಟದ್ದಾದಾಗ್ಯೂ ವಸ್ತುತಃ ಪ್ರಮಾಣವಿಲ್ಲದ್ದರಿಂದ ಸಮವಾಯವೇ ಸಿದ್ಧಿಸುವದಿಲ್ಲವು.) ಆತ್ಮಾದಿಗಳೊಡನೆ ಅನೈಕಾಂತ್ಯ ಉಂಟಾಗುವದರಿಂದ ಸಾವಯವ ಬುದ್ಧಿ ವಿಷಯತ್ವ ವುಂಟಾದಾಗ್ಯೂ ಕಾರ್ಯತಃ ಸಂಭವಿಸುವದಿಲ್ಲವಾಗಿ ಐದನೆಯದೂ ಸಿದ್ಧಿಸುವದಿಲ್ಲವು. ಅವಯವಗಳಿಲ್ಲದಿದ್ದರೂ ಸಾವಯವ ಪದಾರ್ಥಸಂಬಂಧದಿಂದ ಸಾವಯವ ಬುದ್ಧಿ ವಿಷಯತ್ವವು ಔಪಚಾರಿಕವಾಗಿರುವದೆಂದು ಹೇಳಲಾಗದು. ಯಾತಕ್ಕಂದರೆ—ಸಾವಯವತ್ವವನ್ನಂಗೀಕರಿಸದೆ ಇದ್ದಲ್ಲಿ ಪರಮಾಣುಗಳಂತೆ ವ್ಯಾಪಕತ್ವ ವುಂಟಾಗಲರಿಯದು. ಕರ್ತನಾದವನೊಬ್ಬನೆ ಸಾಧಿಸಲ್ಪಡುತ್ತಾನೆಯೋ ಮತ್ತು ಅವನು ಸ್ವತಂತ್ರನೋ ಯೆಂದುಕೇಳಿದರೆ, ಮೊದಲನೆಯ ಪಕ್ಷದೊಳು ಪ್ರಾಸಾದಾದಿಗಳಲ್ಲಿ (ಅಂದರೆ ರಾಜದೇವಗೃಹಾದಿಗಳಲ್ಲಿ)ಬಡಿಗೆಯವರು ಮೊದಲಾದ ಅನೇಕ ಕರ್ತೃಗಳು ತೋರಬರುವದರಿಂದ ವ್ಯಭಿಚಾರದೋಷ ವುಂಟಾಗುತಿದೆ.ಒಬ್ಬನೇ ಸಕಲಜಗದುತ್ಪತ್ತಿಗೂ ಕಾರಣನೆಂದು ಹೇಳುವದರಿಂದ ಇತರರಿಗೆ ವೈಯರ್ಥ್ಯ ವುಂಟಾಗುತಿದೆ. ಈ ವಿಷಯವು ವೀತರಾಗಸ್ತುತಿಯೆಂಬ ಗ್ರಂಥದಲ್ಲಿ ವಿವರವಾಗಿ ತಿಳಿಸಲ್ಪಟ್ಟಿರುತಿದೇನಂದರೆ—

ಶ್ಲೋ ॥ ಕರ್ತಾಸ್ತಿ ನಿತ್ಯೋಜಗತಸ್ಸಚೈಕಸ್ಸಸರ್ವಗಸ್ಸ್ವವಶಸ್ಸನಿತ್ಯಃ ॥ ಇಮಾಃಕುಹೇವಾಕವಿಡಂಬನಾಸ್ಸ್ಯುಃ ತೇಷಾಂನಯೇಷಾಮನುಶಾಸಕಸ್ತ್ವಂ॥

ಮತ್ತು ಗ್ರಂಥಾಂತರದಲ್ಲಿ ತಿಳಿಸಲ್ಪಟ್ಟಿರುವದೇನಂದರೆ:—

ಕರ್ತಾನಪಾದಿಪಕೊಬುದ್ಧೇಚ್ಛಯಾ ವಾದ್ಯಷ್ಟೋಸ್ಯಥಾಕೃತಾವಪಿತತ್ಪ್ರಸಂಗಃ ॥ ಕಾರ್ಯಂಕಿಮತ್ರಭವತಾಪಿಚತಕ್ಷಕಾದ್ಯೈರ್ತ್ರಾಹತ್ಯಚತ್ರಿಭುವನಂಪುರುಷಃ ಕರೋತಿ॥

ಅಂದರೆ —ಸ್ವೇಚ್ಛೆಯಿಂದ ಮಾಡತಕ್ಕ ಕರ್ತನೊಬ್ಬನಿಲ್ಲವು. ಹಾಗಿಲ್ಲವಾದರೆ ಆತನ ಶಕ್ತಿಯು ಕುಲನಿರ್ಮಾಣಾದಿಗಳಲ್ಲಿಸಹ(ಅಂದರೆ ಜಾಡೆ ಎಣಿಯುವದರಲ್ಲಿಕೂಡ) ಪ್ರಸರಿಸುವದು. ಈ ಮೂರು ಲೋಕವನ್ನೂ ಈಶ್ವರನೊಬ್ಬನೇ ಸೃಷ್ಟಿಸಿದನೆಂದು ನಿಮ್ಮಿಂದಲಾದರೂ ತಕ್ಷಕರಿಂದ ಬಡಿಗೆಯವರಿಂದಲಾದರೂ ಪ್ರಯೋಜನವೇನೆಂದು ಅರ್ಥವು.

ಅವತಾರಣ ಮೇಲೆ ತಿಳಿಸಲ್ಪಟ್ಟ ಕಾರಣತಯಬಲದಿಂದ ಆವರಣ ಪ್ರಕ್ಷಯದಲ್ಲಿ ಸರ್ವಜ್ಞತ್ವವು ಯುಕ್ತವಾದದ್ದು. ಇಂತಾ ಕಾರಣತ್ರಯವನ್ನು ವಿವರಿಸುವನವರು ಬೇರೆ ಇಲ್ಲದ್ದರಿಂದ ಸಮ್ಯಗ್ದರ್ಶನಾದಿ ಕಾರಣತ್ರಯವು ಸಂಭವಿಸುವದಿಲ್ಲವೆಂದು ಹೇಳಲಾಗದು ಪೂರ್ವ ಸರ್ವಜ್ಞಪ್ರಣೀತಗಳಾದ ಆಗಮಗಳೇ ಇವುಗಳಂ ಬೋಧಿಸುತಿವೆ. ಆಗಮ ಸರ್ವಜ್ಞ ಪರಂಪರೆಗೆ ಬೀಜಾಂಕುರಗಳಂತೆ ಅನಾದಿತ್ವವನ್ನಂಗೀಕರಿಸುವದರಿಂದ ಅನ್ಯೋನ್ಯಾಶ್ರಯತ್ವಾದಿ ದೋಷಗಳಿಗೆ ಅವಕಾಶವಿಲ್ಲವು.

ಪ್ರಸಿದ್ಧವಾಗಿ ರತ್ನತ್ರಯವೆಂದು ವ್ಯವಹರಿಸಲ್ಪಡುವ ಸಮ್ಯಗ್ದರ್ಶನಾದಿತ್ರಿತಯವು ಸಂಕ್ಷೇಪದಿಂ ಆರ್ಹತಸಿದ್ಧಾಂತ ಪ್ರತಿಪಾದಕವಾದ ಪರಮಾಗಮ ಸಾರದಲ್ಲಿ (“ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ” ಎಂಬದಾಗಿ ನಿರೂಪಿಸಲ್ಪಟ್ಟಿರುತಿದೆ. ಇದಕ್ಕೆ ಯೋಗದೇವರೆಂಬುವರು ವ್ಯಾಖ್ಯಾನಮಾಡಿರುತ್ತಾರೇನಂದರೆ, ಯಾವರೂಪದಿಂದ ಜೀವಾದಿ ಪದಾರ್ಥವು ವ್ಯವಸ್ಥಿತವಾಗಿರುವದೋ ಆ ರೂಪದಿಂದ ಆರ್ಹತ ಪ್ರತಿಪಾದಕವಾದ ತತ್ವಾರ್ಥದಲ್ಲಿ ವಿಪರೀತಾಭಿನಿವೇಶ ರಾಹಿತ್ಯವೆಂಬುವ ಶ್ರದ್ಧಾನವೇ ಸಮ್ಯಗ್ದರ್ಶನವು. ಮತ್ತು ಈ ವಿಷಯದಲ್ಲಿ “ತತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ” ಎಂಬ ತತ್ವಾರ್ಥಸೂತ್ರವೇ ಪ್ರಮಾಣವಾಗಿರುತಿದೆಂಬದು.

ರುಚಿರ್ಜಿನೋಕ್ತತತ್ವೇಷುಸಮ್ಯಕ್ಶ್ರದ್ಧಾನಮುಚ್ಯತೆ ।ಜಾಯತೆತನ್ನಿಸರ್ಗೇಣ ಗುರೋರಧಿಗಮೇನವಾ॥

ಅಂದರೆ ಜಿನೋಕ್ತ ತತ್ವಗಳಲ್ಲಿ ಅತಿಶಯಿತವಾದಬರುಚಿಯೇ “ಶ್ರದ್ಧಾನ” ವೆಂದು ಹೇಳಲ್ಪಡುತಿದೆ. ಇಂತಾ ಶ್ರದ್ಧಾನವೆಂಬದು ಕೆಲವರಿಗೆ ಸ್ವಾಭಾವಿಕವಾಗಿಯೂ ಮತ್ತು ಕೆಲವರಿಗೆ ಗುರೂಪದೇಶದಿಂದಲೂ ವುಂಟಾಗುತಿದೆ. “ನಿಸರ್ಗ” ವೆಂಬದು ಪರೋಪದೇಶವನ್ನು ಅಪೇಕ್ಷಿಸದೆ ವುಂಟಾಗುವಜ್ಞಾನವು, ವ್ಯಾಖ್ಯಾನಾದಿರೂಪವಾದ ಪರೋಪದೇಶದಿಂದುಂಟಾಗುವ ಜ್ಞಾನವು “ಅಧಿಗಮ” ವೆನ್ನಿಸಿಕೊಳ್ಳುವದು. ಜೀವಾದಿ ಪದಾರ್ಥಗಳು ಯಾವ ಸ್ವಭಾವದಿಂದ ವ್ಯವಸ್ಥಿತವಾಗಿರುತಿದೆಯೋ ಅದೇ ಸ್ವಭಾವದಿಂದ ಮೋಹಸಂಶಯವಿಲ್ಲದ ತಿಳುವಳಿಕೆಯೇ “ಸಮ್ಯಗ್ದರ್ಶನವು.” ಇದಕ್ಕೆ ಪ್ರಮಾಣವೇನಂದರೆ.—

ಯಥಾವಸ್ಥಿತ ತತ್ವಾನಾಂಸಂಕ್ಷೇಪಾದ್ವಿಸ್ತರೇಣವಾ ॥ ಯೋವಬೋಧಸ್ತಮತ್ರಾಹುಸ್ಸಮ್ಯಗ್ಜ್ಞಾನಂಮನೀಷಿಣಃ॥

ಅಂದರೆ ಸಂಕ್ಷೇಪದಿಂದಲಾಗಲಿ, ವಿಸ್ತಾರದಿಂದಲಾಗಲಿ, ಯಥಾವಸ್ಥಿತವಾದ ಪದಾರ್ಥಗಳ ತಿಳುವಳಿಕೆಯನ್ನೇ ವಿದ್ವಾಂಸರು ಸಮ್ಯಗ್ ಜ್ಞಾನವೆಂಬದಾಗಿ ನುಡಿಯುವರು. ಈ ಸಮ್ಯಗ್ಜ್ಞಾನವು ಮತಿ, ಶ್ರುತಿ, ಅವಧಿ, ಮನಃಪರ್ಯಾಯ, ಕೇವಲ, ವೆಂದು ಐದು ಪ್ರಭೇದಗಳುಳ್ಳದ್ದಾಗಿರುತಿದೆಯಲ್ಲದೆ ಐದೂ ಜ್ಞಾನವೆನ್ನಿಸಿಕೊಳ್ಳುವವು. ಇವುಗಳ ಅರ್ಥವನ್ನು ವಿವರವಾಗಿ ಮುಂದಿನ ವಾರದಲ್ಲಿ ತಿಳಿಸುವೆವು.

Occasional Notes
ನೈಮಿತ್ತಿಕವಿಷಯ ವ್ಯಾಪ.

The heat at Calcutta.—ಕಲ್ಕತ್ತೆಯೊಳು ಬಿಸಲಿನಝಳ ಕೇವಲ ದುಸ್ಸಹವಾಗಿರುವಂತೆಯೂ, ಪರಂತು ಪಹರಿನ ಪ್ರಜೆಗಳು ಬಹಳ ಆರೋಗ್ಯಸ್ಥಿತಿಯಲ್ಲಿರುವಂತೆಯೂ ತಿಳಿಯಬರುತಿದೆ.

Cholera.—ರಂಗೂನಿಗೆ ಅಯಿವತ್ತು ಮೈಲಿಗಳ ಫಾಸಲೆಯೊಳಿರುವ ಪಗೂ ಯೆಂಬ ಪಟನ್ನಲ್ಲಿ ವಾಂತಿಭೇದಿರೋಗ ತಲೆದೋರಿ, ಯೆರಡು ವಾರದೊಳಗಾಗಿ ಇನ್ನೂರು ಮುಂದಿಗೆ ತಗಲಿ ಅವರಪೈಕಿ ನೂರುಮಂದಿ ಮೃತಪಟ್ಟಂತೆ ಅಲ್ಲಿನ ಬಾತ್ಮಿದಾರನೊಬ್ಬನು ಒಂದಾನೊಂದು ಮದರಾಸ ಪತ್ರಿಕೆಗೆ ಬರೆಯುತ್ತಾನೆ.

The new loan—ಸರಹದ್ದು ಪ್ರಾಂತದ ಬಂದೋಬಸ್ತು ವಗೈರೇ ಖರ್ಚುಗಳಬಗ್ಯೆ ಹೊಸದಾಗಿ ಮಾಡಲಾಲೋಚಿಸಿರುವ ಸಾಲದ ವಿಷಯವು ಇದುವರಿವಿಗೆ ಇಂಡ್ಯ ಗವರ್ನಮೆಂಟಿಗೆ ಪದ್ದಾಂಗ ತಿಳಿಯದೆಂದು ಕಾಣುತಿದೆ. ಸದರೀ ಸಾಲವು ಯಾವಾಗ ಯೆಷ್ಟು ತೆಗಿಯಲ್ಪಡುವದೋ ಅದರಪೈಕಿ ಇಂಡ್ಯದೇಶದಲ್ಲಿ ಯೇನಾದರೂ ತೆಗೆಯಲ್ಪಡುವದೋ ಯೆಂಬ ಅಂಶ ತಿಳಿಯಬರಲಿಲ್ಲವು.

A new designation.—ಬಂಗಾಳೆ, ವಾಯವ್ಯದೇಶ, ಅಯೋಧ್ಯೆ, ಪಂಜಾಬ, ಇವುಗಳಲ್ಲಿನ ಮೆಡಿಕಲ್ ಇಲಾಖೆಗಳ ಕಾರ್ಬಾರೀ ಅಧಿಕಾರಿಗಳು, ಇದು ಮೊದಲು ಮುಂದೆ ಸಿವಿಲ್ ಆಸ್ಪಿಟಲ್‌ಗಳ ಇನ್ಸ್ಪೆಕ್ಟರ್ಸ್ ಜನರಲ್‌ಗಳೆಂಬ ಹೆಸರಿನಿಂದ ಕರೆಯಲ್ಪಡಬೇಕೆಂದು ಮಂತ್ರಾಲೋಚಕ ಸಮಾಜದೊಳಗಣ ಇಂಡ್ಯ ಸ್ಟೇಟ ಸೆಕ್ರೆಟರಿಯವರು ನಿರ್ಣಯಿಸಿರುತ್ತಾರೆ.

A patriotic offer.—ವಿಶಾಖಪಟ್ಟಣದ ಬಂದೋಬಸ್ತಿಯಬಗ್ಯೆ ಅಲ್ಲಿನ ಸಮುದ್ರತೀರದಲ್ಲಿ ತೋಫಗಳಿಡುವದಕ್ಕಾಗಿ ಒಂದು ಮೋರ್ಚಾ ಕಟ್ಟುವದಕ್ಕೆ ಹಿಡಿಯಬಹುದಾದ ಖರ್ಚುಗಳಬಗ್ಯೆ ಒಂದುಲಕ್ಷರೂಪಾಯಿಗಳು ಗವರ್ನಮೆಂಟನವರವಶಕ್ಕೆ ಕೊಡುವದಾಗಿ ರಾಜಾ ಗಜಪತಿರಾಯರವರು ಮದರಾಸ ಗವರ್ನಮೆಂಟಿಗೆ ತಿಳಿಸಿರುವಂತೆ ಅಲ್ಲಿನ ಮೆಯಿಲ್‌ಪತ್ರಿಕೆ ಹೇಳುತಿದೆ.

The Regent of Kholapore.—ಕೊಲ್ಲಾಪುರ ಸಂಸ್ಥಾನದ ರಾಜ ಪ್ರತಿನಿಧಿಯವರು ಈಗ ಇಂಗ್ಲಾಂಡಿನಲ್ಲಿರುವದು ಸರಿಯಷ್ಟೆ, ಸದರೀಯವರು ಕಳೆದತಿಂಗಳ ೮ನೇ ತಾರೀಖಿನಲ್ಲಿ ವಿಂಡ್‌ಸರ ಕ್ಯಾಸಿಲ್ ಯೆಂಬ ರಾಜಭವನದಲ್ಲಿ ಅರ್ಲ ಆಫ್ ಕಿಂಬರ್ಲೀಯವರ ಮೂಲಕ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಸಂದರ್ಶನವು ಪಡೆದರೆಂದು ತಿಳಿಯಬರುತಿದೆ.

The siege guns of the Ameer.—ರಾವಲ್‌ಪಿಂಡಿಯಲ್ಲಿ ಇಂಡ್ಯ ಗವರ್ನಮೆಂಟಿನವರು ಕಾಬೂಲ್ ಅಮೀರರವರಿಗೆ ಕೊಟ್ಟ ಮುತ್ತಿಗೆಯ ಕಾಲದಲ್ಲಿ ಉಪಯೋಗಿಸಲ್ಪಡತಕ್ಕ ತೋಫಗಳನ್ನು ಕಾಬೂಲಿಗೆ ಸಾಗಿಸಿಕೊಂಡು ಹೋಗುವದಕ್ಕೆ ನೇಟಿವ್ ಯೆತ್ತಿನವರು ಖೈಬರ್‌ಘಾಟೀ ಮಾರ್ಗವಲ್ಲಿ ತಾವು ಕಾಬೂಲಿಗೆ ಬರುವದಿಲ್ಲವೆಂದು ನಿರಾಕರಿಸಿದ್ದರಿಂದ, ಗಾಡಿ ಹೊಡೆಯುವದಕ್ಕೆ ಜನಗಳಿಲ್ಲದೆ ಸದರೀ ತೋಫಗಳೆಲ್ಲವೂ ಪೆಷಾವರ್‌ನಲ್ಲೇ ನಿಂತುಹೋದವು.

The Indian Arms Act of 1878.—ಸನ್ ೧೮೭೮ನೇ ಇಸವಿಯ ಇಂಡಿಯನ್ ಆರಂಸ್ ಆಕ್ಟೆಂಬ ಆಯುಧಗಳ ಉಪಯೋಗವನ್ನು ಕುರಿತ ಕಾನೂನಿ ನಿಬಂಧನೆಯ ದೆಸೆಯಿಂದ ಮುಂಬೈಪ್ರೆಸಿಡೆನ್ಸಿ, ಮಧ್ಯ ಇಂಡಿಯಾ, ಕೊಡಗು, ಈ ದೇಶಗಳೊಳು ಬಿಲ್ಲುಗಳು ಶಿಕಾರೀ ಮಚ್ಚುಕತ್ತಿಗಳು ವಿನಾಯಿಸಲ್ಪಟ್ಟಿರುತವೆ, ಅಂದರೆ ಸದರೀ ಆಯುಧಗಳನ್ನು ಉಪಯೋಗಿಸಿಕೊಳ್ಳುವದಕ್ಕೆ ಬಾಧಕವಿಲ್ಲವೆಂದರ್ಥವು. ಈ ವಿನಾಯತಿಯು ಇಂಡ್ಯದೇಶದ ಮೂರು ಪ್ರೆಸಿಡೆನ್ಸಿಗಳಿಗೂ ವ್ಯಾಪಿಸದೆ ಹೋದದಕ್ಕೆ ಕಾರಣ ಮಾತ್ರ ಕಂಡುಬರಲಿಲ್ಲವು.

Increase of trade.—ಕಳೆದಸಂವತ್ಸರದೊಳು, ಬಂಗಾಳೇಗಿಂತಲೂ ಮುಂಬೈಯಲ್ಲಿ ಸರಕುಗಳ ಆಮದ್ ಜಾಸ್ತಿಯಾಗಿರುತದೆ, ಅಂದರೆ ೨೦ ಕೋಟಿ ೫೦ ಲಕ್ಷ ರೂಪಾಯಿಗಳ ಕ್ರಯಬಾಳುವಷ್ಟು ಸರಕುಗಳು ಮುಂಬೈಗೂ, ೨೦ ಕೋಟಿ ೩೩ ಲಕ್ಷ ರೂಪಾಯಿಗಳ ಕ್ರಯವುಳ್ಳ ಸರಕುಗಳು ಬಂಗಾಳೆಗೂ ಆಮದ್‌ಆಗಿರುತಿವೆ. ಸರಕುಗಳ ರಫ್ತು ಸಹ ಇದೇರೀತಿಯಾಗಿದೆ. ಕಳೆದಸಂವತ್ಸರದೊಳು ೩೨ಕೋಟಿ ೮೩ಲಕ್ಷರೂಪಾಯಿಗಳಸರಕು ಬಂಗಾಳೆಯಿಂದಲೂ, ೩೨ಕೋಟಿ ೭೩ ಲಕ್ಷರೂಪಾಯಿಗಳಸರಕು ಮುಂಬೈಯಿಂದಲೂ ರಫ್ತಾಗಿರುತಿದೆ. ಎರಡುಸಂವತ್ಸರಗಳ ಗೋಡೀವ್ಯಾಪಾರವಿಷಾ ಕಲ್ಕತ್ತೆಯಲ್ಲಿ ಜಹಜುಮೂಲಕವಾದ ವ್ಯಾಪಾರ ವೃದ್ಧಿಯಾಗದೆ ಹೋಗಿ, ಮುಂಬೈಯಲ್ಲಿ ಜಹಜುಮೂಲಕವಾದ ವ್ಯಾಪಾರ ಪ್ರತಿಸಂವತ್ಸರದಲ್ಲೂ ಹೆಚ್ಚುತ್ತಲಿದ್ದು ಅಲ್ಲಿನ ಐಶ್ವರ್ಯ ದಿನೇದಿನೇ ವೃದ್ಧಿಯಾಗುತಬರುತಲಿದೆ.

The late Maharani of Baroda—ಈಚೆಗೆ ಬರೋಡೇಸಂಸ್ಥಾನದ ಮಹಾರಾಣೀಯವರಿಗೆ ಪ್ರಾಪ್ತವಾದ ಅಕಾಲಮರಣವನ್ನು ಹಿಂದಿನವಾರದ ಪತ್ರಿಕೆಯಮೂಲಕ ತಿಳಿಸಿಯಿರುತ್ತೇವೆಯಷ್ಟೆ, ಸದರೀಯವರವಿಷಯದಲ್ಲಿ ಸಾಮಾನ್ಯವಾಗಿ ಅವರ ಪ್ರಜೆಗಳಿಗುಂಟಾಗಿದ್ದ ಪ್ರೀತಿ ಗೌರವಗಳಿಗೆ ನಿದರ್ಶನರೂಪವಾಗಿ, ಅವರ ಹೆಸರಿನಲ್ಲಿ ಯಾವದಾದರೊಂದು ಶಾಶ್ವತವಾದ ಕಾರ್ಯವು ಮಾಡಬೇಕೆಂದು ಯೋಚಿಸಿ ಅಲ್ಲಿನ ಮ್ಯುನಿಸಿಪಲ್ ಕಮ್ಮಿಶನರ್‌ಗಳು ಸ್ಥಳ ನಿವಾಸಿಗಳಾದ ದೊಡ್ಡಮನುಷ್ಯರಿಗೆ ತಿಳಿಸಿದ ಯೆರಡುದಿನಗಳೊಳಗಾಗಿ ಯೆಲ್ಲಬಗೆಯವರಲ್ಲೂ ಸುಮಾರ್ ನಾಲ್ವತ್ತುಮಂದಿ ದೊಡ್ಡಮನುಷ್ಯರು ಯೇಳುಸಾವಿರರೂಪಾಯಿಗಳು ಚಂದಾಮಾಡಿದರು. ಈಮೊಬಲಗು ಸ್ತ್ರೀವಿದ್ಯಾಭ್ಯಾಸಕ್ಕಾಗಲಿ, ಅಸಕ್ತ ರೋಗಪೀಡಿತರಾದವರ ಚಿಕಿತ್ಸೆಗೆ ಬರೋಡೇ ಶಹರ್‌ನೊಳು ವೈದ್ಯಶಾಲೆಯಿಲ್ಲವಾಗಿ ಆಬಗ್ಯೆ ಏರ್ಪಡಿಸುವ ಕಾರ್ಯಕ್ಕಾಗಲಿ, ಮೃತಪಟ್ಟವರಂತೆ ಒಂದು ಪ್ರತಿಮೆಯಂಮಾಡಿಸಿ ಸರ್ಕಾರ ತೋಟದೊಳು ಸ್ಥಾಪಿಸುವದಕ್ಕಾಗಲಿ ಪ್ರಯೋಗಿಸಲ್ಪಡಬೇಕೆಂದು ಸದ್ಯಃ ಯೋಚಿಸಲ್ಪಟ್ಟಿದೆ, ಪರಂತು ಯಾವದೂ ಯಿದುವರಿವಿಗೆ ವ್ಯವಸ್ಥೆಯಾಗಲಿಲ್ಲವು.

LOCAL AND PROVINCIAL NEWS.
ಒಳಸೀಮೆ ಮತ್ತು ತಾಲ್ಲೂಕುಜಾತ್ ವೃತ್ತಾಂತಗಳು.

Last Saturday.—ಮೊನ್ನೆಯದಿನ ತಿಂಗಳ ಆಖೈರ್ ಶನಿವಾರವಾದ್ದರಿಂದ, ಇಲ್ಲಿನ ಸರ್ಕಾರ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಡತಕ್ಕದ್ದು ವಾಡಿಕೆಯಾದಾಗ್ಯೂ ಈಸಲ ಕೆಲವು ಇಲಾಖೆಗಳು ಜರೂರಿಯಾತ್ ಕೆಲಸನಿಮಿತ್ತ ಅಂತಾಸು ಪ್ರವಾಯುಕ್ಕೆ ಬಾಧ್ಯವಾದಂತೆ ತಿಳಿಯಬರುತಿದೆ.

Cheetahs.—ನಂದೀದುರ್ಗದಬಳಿ ಈಚೆಗೆ ಎರಡು ಚಿರತೇಹುಲಿಗಳು ಪ್ರಬಲಿಸಿ ಅಲ್ಲಿನವರಿಗೆಲ್ಲ ಬಹಳ ಸಂಕಟಕಾರಿಗಳಾಗಿರುವಂತೆಯೂ ಬೇಟೆಯೊಳದಕ್ಷೆಯುಳ್ಳವರಿದ್ದರೆ ನಿಗ್ರಹಿಸಬೇಕೆಂತಲೂ ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆ ತಿಳಿಸುತಿದೆ.

Criminal Sessions.—ಈಸಲ ಸೆಷನ್ ವಿಚಾರಣೆಯು ಒಂದುವಾರದಮೊದಲು ನಡೆಯುತಲಿದ್ದಾಗ್ಯೂ ಅದು ಇದ್ಯಾಪಿ ಪೂರೈಸಲಿಲ್ಲವು ಕಷ್ಟಕರವಾದ ಅರುವೊಕದ್ದಮೆಗಳಲ್ಲಿ ಒಬ್ಬನೀಕೊಕದ್ದಮೆಯಿಂತಲೂ, ಆಪೈಕಿ ಒಂದು ಮರಣದಂಡನೆ ಮೂಲಕವಾಗಿಯೂ, ಮತ್ತೊಂದು ಜುಲಾನೇ ಮೂಲಕವಾಗಿಯೂ ಫೈಸಲಾದವೆಂತಲೂ ಕೇಳುತ್ತೇವೆ

The weather—ಗತವಾರದಲ್ಲಿ ನಾವು ಪ್ರಕಟಿಸಿದ್ದ ದೈವಜ್ಞರ ವಾಕ್ಯವು ಸಟೆಯಾಗದೆ ಫಲಿಸಿದ್ದಕ್ಕಾಗಿ ನಾವು ಬಹಳ ಸಂತೋಷಿಸುವೆವು. ಗತವಾರದಿಂದೀಚೆಗೆ ಯೆರಡು ಮೂರಾವರ್ತಿ ಒಳ್ಳೇ ಮಳೆಯಾಗಿ ಕೆರೆ ಕುಂಟೆಗಳಿಗೆ ಒಂದೆರಡು ಮೂರುತಿಂಗಳ ನೀರು ಬಾದಿರುವದಲ್ಲದೆ ಇನ್ನೂ ವರ್ಷಸೂಚನೆಗಳು ಕಂಡುಬರುತಲಿವೆ. ಸದ್ಯಃ ಜಲದೌರ್ಲಭ್ಯ ನಿವಾರಣವಾಗುವ ಕಾಲವನ್ನು ಮುಂದರಿತು ತಿಳಿಸಿದ ಸದರೀ ಜ್ಯೋತಿಷ್ಕರ ವಾಕ್ಯವು ಕೊಂಡಾಡಲ್ಪಡತಕ್ಕದ್ದಾಗಿರುತಿದೆ

Murder.—ಗತೆ ಶನಿವಾರದದಿನದಿಳಗಿನಝಾವದಲ್ಲಿ ಬೆಂಗಳೂರು ತಾಲ್ಲೂಕು ಕೆಂಗೇರಿಹೋಬಳಿಗೆಸೇರಿದ ಒಂದುಗ್ರಾಮದಲ್ಲಿರುವ ಒಕ್ಕಲಿಗನೊಬ್ಬನು ತಾನು ರಸಾಬ್‌ಮಾಡಿಕೊಂಡಿದ್ದವಳು ಮತ್ತೊಬ್ಬನಸಂಗಡ ಸಹವಾಸಮಾಡುತಲಿದ್ದ ದೆಂಕೆಂದು ಅತ್ಯಾಗ್ರಹದೊಡನೆ ಅವಳನ್ನು ಖೂನ್ ಮಾಡಿ ಪೇಟೆಗೆ ಸಮೀಪದಲ್ಲಿರುವ ಒಂದು ಬಾವಿಯಲ್ಲಿ ಯೆಸೆದುಬಿಟ್ಟಂತೆ ಪೋಲೀಸಿನವರಿಗೆ ತಿಳಿಯಬಂದಮೇಲೆ ಅವರು ಖೂನ್‌ಮಾಡಿದವನನ್ನು ದಸ್ತಗಿರಿಮಾಡಿ ಮೃತಪಟ್ಟವಳ ಮುದೆಯನ್ನು ಡಾಕ್ಟರ್‌ಬಳಿಗೆ ಅಜಮಾಯಿಷಿಬಗ್ಯೆ ಕಳುಹಿಸಿರುವಂತೆಯೂ ಅಪರಾಧಿಯು ತನ್ನತಪ್ಪವನ್ನೊಪ್ಪಿಕೊಳ್ಳುವಂತೆಯೂ ತಿಳಿಯಬರುತಿದೆ

Night trains.—ನಾವು ಹಿಂದೆತಿಳಿಸಿದ್ದಪ್ರಕಾರ ವಾರಕ್ಕೊಂದಾವರ್ತಿ ರಾತ್ರಿಕಾಲದಲ್ಲಿ ಮೈಸೂರಿಗೆ ಬಿಡಲ್ಪಡುತಲಿದ್ದ ರೆಯಿಲ್ ಗಾಡಿಯನ್ನು ಕಳೆದತಿಂಗಳ ೨೩ನೇ ತಾರೀಖ್ ಮೊದಲು ಸ್ಟೇಟ್ ರೆಯಿಲ್ವೇ ಇಲಾಖೆಯವರು ಮಹಾರಾಜಾ ಸರ್ಕಾರದವರ ಅಪ್ಪಣೆಯಮೇಲೆ ನಿಲ್ಲಿಸಿಬಿಟ್ಟಿದ್ದಾಗಿ ತಿಳಿಯಲಾದೆವು. ಇದರ ಪ್ರಯೋಜನವನ್ನು ಜನಗಳು ಈಚೆಗೆಬಹಳವಾಗಿ ಪಡುಕೊಂಡರು. ಆದರೆ ಖರ್ಚು ಜಾಸ್ತಿಯಾಗುತಿದೆಂತಲೂ ಆ ಪೈಕಿ ಅರ್ಧಸಹ ಹುಟ್ಟುವಳಿಯಾಗುವದಿಲ್ಲವೆಂತಲೂ ಜನಗಳು ಹೇಳಿಕೊಳ್ಳುತ್ತಾರೆ

Exposure of a new born child—ನೆಲಮಂಗಲ ತಾಲ್ಲೂಕಿಗೆಸೇರಿದ ಒಂದು ಗ್ರಾಮದಲ್ಲಿರುವ ಒಬ್ಬ ಹೆಂಗಸು ಮತ್ತೊಂದುಗ್ರಾಮಕ್ಕೆ ಹೋಗುತಲಿರುವಾಗ್ಯೆ ಮಾರ್ಗದಲ್ಲಿ ಪ್ರಸವಿಸಿ ಮಗುವನ್ನು ಅಲ್ಲಿಯೇ ಒಂದುಕಡೆ ಮಲಗಿಸಿ ಮರಳಿಂದ ಮುಚ್ಚಿಬಿಟ್ಟು ಮುಂದಕ್ಕೆ ಹೊರಟುಹೋದಂತೆಯೂ, ಮಗುವಿನ ರೋದನಧ್ವನಿಯಂಕೇಳಿ ದಾರಿಯಲ್ಲಿ ಹೋಗುತಲಿದ್ದವರು ಅದನ್ನುನೋಡಿ ಸಮೀಪದಲ್ಲಿದ್ದ ಗ್ರಾಮಸ್ಥರಿಗೆ ತಿಳಿಸಿದಂತೆಯೂ, ಅದರಮೇಲೆ ಅವರು ಆ ಮಗುವನ್ನು ತೆಗೆದುಕೊಂಡುಹೋಗಿಸಾಕುತಲಿದ್ದಂತೆಯೂ, ಅದು ಮೂರುನಾಲ್ಕು ದಿನಗಳಮೇಲೆ ಮೃತಪಟ್ಟದ್ದಾಗಿಯೂ ಸದರೀ ಹೆಂಗಸಿನಮೇಲೆ ಪೋಲೀಸಿನವರು ಚಾರ್ಜುಮಾಡಿರುವದಾಗಿಯೂ ತಿಳಿಯಬರುತಿದೆ.

ನೋಟೀಸು.

ಇದರಿಂದ ನಮ್ಮ ಚಂದಾದಾರ್ರಿಗೆ ಪ್ರಾರ್ಥಿಸುವದೇನಂದರೆ—ಈಸಾಲಿನ ಆದಿಬಾಗದಲ್ಲಿ, ಚಂದಾ ಮೊಬಲಗನ್ನು ಅಡ್ವಾನ್ಸಿಕಳುಹಿಸಿಕೊಡತಕ್ಕವರಿಗೆ ಮಾತ್ರ ಈ ಪತ್ರಿಕೆ ರವಾನಿಸಲ್ಪಡುವದೆಂದು ಖಂಡಿತವಾಗಿ ತಿಳಿಸಿ, ಹಾಗೆ ಕಳುಹಿಸಿಕೊಟ್ಟವರಿಗೂ, ಹಿಂದಿನಸಾಲ್‌ಗಳಲ್ಲಿ ಕ್ರಮವಾಗಿ ಚಂದಾಗಳನ್ನು ಕೊಡುತಬಂದವರಿಗೂ ಪತ್ರಿಕೆಯನ್ನು ರವಾನಿಸುತಬಂದೆವು ಹಾಗಿದ್ದಾಗ್ಯೂ, ಚಂದಾ ವಿಷಯವನ್ನು ಕುರಿತು ನಾವು ಆಗಿಂದಾಗ್ಯೆ ಕೊಡುವ ನೋಟೀಸುಗಳಿಗೆ ನಿಗೇ ಕೊಡದೆಯೂ, ಬಾಕೀಗಳನ್ನು ಕಳುಹಿಸಿಕೊಡದೇಲೂ ಇರತಕ್ಕವರೆಲ್ಲರೂ ಈ ತಿಂಗಳ ೭ನೇ ತಾರೀಖಿನೊಳಗಾಗಿ ಹಿಂದಿನ ಸಾಲ್‌ಗಳ ಬಾಕೀಯನ್ನು ಈಸಾಲಿಗೆ ಅಡ್ವಾನ್ಸಿನೊಡನೆ ಕಳುಹಿಸಿಕೊಡಬೇಕೆಂದು ಮರಳಿ ಪ್ರಾರ್ಥಿಸುತ್ತೇವೆ. ಈ ಬಾಗದಲ್ಲಿ ಉದಾಸೀನರಾಗಿದ್ದವರೆಲ್ಲರಿಗೂ ಮುಂದಿನವಾರದ ಪತ್ರಿಕೆ ರವಾನಿಸಲ್ಪಡದೆಂದು, ಖಂಡಿತವಾಗಿ ತಿಳಿಯಬೇಕು.

SUMMARY OF NEWS.

ವೃತ್ತಾಂತಸಂಗ್ರಹವು

Rain and crops in the Punjab ಪಂಜಾಬ್ ದೇಶದೊಳು ಅತಿವೃಷ್ಟಿಯಾದ ಸೇಲುಂದ ಗೋದಿಫಸಲಿಗೆ ಎಷ್ಟೋ ಹಾನಿಯುಂಟಾಗಿದೆ ಸಿಂಧುಸಾಮ್ಯಂದ ಹೋಗುವ ಓಷೆಲ್ ಮಾರ್ಗದಲೂ ಹೊಲಾನ್ ಪೂರಚೇತ್ರ ದಲ್ಲೂ ನಾಂತಿಶೀದಿರೋಗ ವ್ಯಾಪಿಯಕಲಿತಿ—ಇಂಡ್ ಟೈಮ್ಸ್

Raja G. N. Gajapathi Rau—ಗಾಲೂಕ ಪದಕೆಂದಯರವರು, ಪದ್ವಾರ ಸಂಸ್ಥಾನದ ಸಚಿವ ಫಾಸಿಗಾರ್ ದಿವಾನ ಕಾರ್ಯದಲ್ಲಿ ದ್ವೇಷದೊಳ ರನ್ನು ರಚಿಯ ಕೊಂಡು ಬಗವದ್ಕಾಗಿ ಸುಮ್ಮ ಇಬ್ಬರುಕೋರ್ಟ್ ಸರಿಯನ ಗತಿಸಿಂಗ ೨೭ನೇ ತಾರೀಖು ಲಾರ್ಡ್ ವಾಸದಲ ಹಾದಾಂಶಾ ಪುದಗಾಂಶನೆಡ ಪ್ರಯಾಣ ನಂಬಿರು

Hindu Re marriage—ಜಿಲ್ಲೆನೇಶೀಕದ ಕಂಪಿನೀ ಬಾದ ಬ್ರಾಹ್ಮಣರೊಂಬರು ಪುನರ್ವಿವಾಹ ಹಿಂದೂಧರ್ಮ ಶಾಸ್ತ್ರದಿಂದ, ವಿವಾಹವು ಅಂಗೀಕರಿಸಲ್ಪಟ್ಟು ಅದರಂತೆ ನಡೆಯುವುದಕಿದ್ದಾಗ ನಿರೂಪಿಸುವದಕ್ಕೆ ಆಧಾರಗಳನ್ನು, ಮನು, ಪರಾಶರ ಮತ್ತು ನಾರದ ಸ್ಮೃತಿಗಳನ್ನು ಅನೇಕ ವಾಗಿ ಉದಾಹರಿಸಿ, ಇಂಡ್ಯದೇಶದ ಪ್ರಯಾಣ ಶಲಿಗವ್ ರಿಪೋರ್ಟು ಪತ್ರಿಕೆಗೆ ಒಂದು ಉಪನ್ಯಾಸವಂಬಿ ಕಳುಹಿಸಿದ್ದಾರೆ

A substitute for coffee—ಪುಷ್ಪೋದಯ ಸ್ಥ ಕಾಫೀಬೀಜಕ್ಕೆ ಬದಲಾಗಿ ನೆಲಗಡಲೇಕಾಯಿಯನ್ನು ಉಪಯೋಗಿಸುತಲಿದ್ದಾರೆ ಕಾಫೀಬೀಜವನ್ನು ಮಾಡುವಂತೆಯೇ ನೆಲಗಡಲೇ ಬೀಜವನ್ನು ಉರಿದು ಪುಡಿಮಾಡಿ ಪ್ರಕಾರ ಉಪಯೋಗಿಸಿಕೊಂಡರೆ ಆ ಪಾನಿಯವು ಆರೋಗ್ಯಕರವಾಗಿಯೂ ಇರುವದು. ಇದನ್ನು ಆಪಿ ಕಾರಿಕಾದಲ್ಲಿ ಅನೇಕ ಸಂವತ್ಸರಗಳಿಂದಲೂ ಕಾಫೀಗೆ ಬದಲಾಗಿ ಉಪಯೋಗಿಸಿಕೊಳ್ಳುತಲಿದ್ದಾರೆ

Temporary appointment—ಇಂಡ್ಯದೇಶದ ಸರ್ಕಾರ್ ನೌಕರಿಯಲ್ಲಿ ಮಾಜೀದಾನಾ ೨೫೦ ರೂಪಾಯಿಗಳಿಗೆ ಮೇಲ್ಪಟ್ಟ ಸಂಬಳದಮೇಲೆ ಹಂಗಾಮೀಯಾಗಿ ಇರುವವರನ್ನು ನೇಮಕಮಾಡಿದರೆ ಆ ಸಂಗತಿ ಯನ್ನು ಇಂಡ್ಯ ಸ್ಟೇಟ್ ಸೆಕ್ರೆಟರಿಯವರಿಗೆ ರಿಪೋರ್ಟ್ ಮಾಡತಕ್ಕದ್ದೆಂತಲೂ, ಇದರ ಮುಂದೆ ಸಾಧ್ಯವಾದ ಮಟ್ಟಿಗೆ ಹಂಗಾಮಿ ನೇಮಕ ಮಾಡಬೇಕೆಂದು ಆಜ್ಞಾಪಿಸಲ್ಪಟ್ಟಿದೆಂತಲೂ ತಿಳಿಯಬಂದಿರುತಿದೆ.—ಇಂಡ್ಯನ್ ಡೈಲಿ

Arrest of an Editor—ಹೈದರಾಬಾದಿನಲ್ಲಿ ಪ್ರಚುರಪಡಿಸಲ್ಪಡುವ ಡೆಕನ್ ಟೈಂ ಪತ್ರಿಕೆಯ ಎಡಿಟರವರು ನಿಜಾಂ ಸರ್ಕಾರದ ಫೈನೆನ್ಸ್ ಇಲಾಖೆಯ ಮಂತ್ರಿಯವರ ಮೇಲೆ ಒಬ್ಬ ಆಕ್ಷೇಪಕಾರನು ಬರೆದ ಕಾಗದವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿದ ಬಗ್ಗೆ ಸರ್ಕಾರಿ ವಕೀಲ್ ರ ವ್ಯಾಜ್ಯದ ಮೇಲೆ ಕೋರ್ಟಿನಲ್ಲಿ ವಿಚಾರಣೆಯಾಗಿ ಅಪರಾಧಿಯೆಂದು ನಿರ್ಣಯಿಸಲ್ಪಟ್ಟು ಶಿಕ್ಷೆಗೆ ಕಳೆದತಿಂಗಳ ೨೬ನೇ ತಾರೀಖಿನಲ್ಲಿ ಸದರೀ ಎಡಿಟರು ಕಾಗದಬರೆದವರು ದಸ್ತಗಿರ್ ಮಾಡಲ್ಪಟ್ಟು ಜಾಮೀನ ಮೇಲೆ ಬಿಡಲ್ಪಟ್ಟಿದ್ದಾರೆ—ಇಂಡ್ಯ ಟೈಮ್ಸ್.

Fire in a Spinning Mill—ಮುಂಬೈಗೆ ಸೇರಿದ ಕೊಲಾಬಾದಲ್ಲಿರುವ ಸ್ಪಿನ್ನಿಂಗ್ ಮಿಲ್‌ನಲ್ಲಿ ಕಳೆದತಿಂಗಳ ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್ ಯೆಂಬ ಹತ್ತಿಯ ಗಿರಣಿಯಲ್ಲಿ ಬೆಂಕಿ ಹತ್ತಿಕೊಂಡು ಒಳಗಿದ್ದ ಹತ್ತಿ ಮುಂತಾದ ಸಾಮಾನುಗಳೆಲ್ಲ ಸುಟ್ಟುಹೋಗಿ ಅಧಿಕ ನಷ್ಟವುಂಟಾಗಿ ಇದರ ಕಾರಣದ ಪತ್ತೆಯಿಲ್ಲವೆಂದು ಆದಾಗ್ಯೂ ರೂಪಾಯಿ ಕಿಮ್ಮತ್ತಿನ ಸಾಮಾನು ನಷ್ಟವಾಗಿರುವದಾಗಿ ತಿಳಿಯಬರುತಿದೆ, ಕಂಪನಿಯವರಿಗೆ ಇನ್ಶೂರೆನ್ಸ್ ಇದ್ದ ಕಾರಣ ಆ ನಷ್ಟವನ್ನು ಪರಿಹರಿಸಲ್ಪಡುವದು, ಕಟ್ಟಡ ಹಳೇದಾಗಿದ್ದ ರೂಪಾಯಿ ಇವೆ

ಕ ಪದಾರ್ಥಗಳು ನಷ್ಟವಾದವು. ಈ ಬೆಂಕಿಯನ್ನು ಆರಿಸುವದಕ್ಕೆ ಪಂಪುಗಳು ಮೊದಲಾದ ಸಾಧನಗಳು ತರಿಸಲ್ಪಟ್ಟವು, ಆದರೆ ಅವುಗಳು ಉಪಯೋಗವಿಲ್ಲದೇ ಹೋಗಿ ಅಗ್ನಿ ಶಾಮಕಕಾರ್ಯ ನೆರವೇರಲಿಲ್ಲ—ಗೆಜಟ್

Native Volunteers—ನೇಟಿವ್‌ಗಳನ್ನು ವಾಲಂಟಿಯರ್ ಸೇನೆಗೆ ಸೇರಿಸಿಕೊಳ್ಳುವ ವಿಷಯವು ನಿಂಬಾನಲ್ಲಿ ವೈಸ್‌ರಾಯರವರ ಎಕ್ಸಿಕ್ಯೂಟಿವ್ ಕೌನ್ಸಿಲ್‌ನವರ ಆಲೋಚನೆಗೆ ಹೊಡಬೇಕೆಂಬ ವಿಷಯವಾಗುವದೆಂದು ಅಲಹಾಬಾದ್ ಪತ್ರಿಕೆಯಿಂದ ತಿಳಿಯಬರುತಿದೆ ಈ ಪ್ರಯತ್ನಕ್ಕೆ ಲಾರ್ಡ್ ಡಫರಿನ್‌ಯವರು ಅನುಕೂಲವಾಗಿರುವರೆ ನಮ್ಮ ಕೋರ್ಟಿಕೆಗೆ ಬರುತಲಿದೆ. ವಾಲಂಟಿಯರ್ ಆಕ್ಟ್ ಅಸ್ಥಾಪನೆ ರಚಿಸಲ್ಪಡುವದಕ್ಕೆ ಕಾರಣವಾಗಿ ಮೋಟಾ ವಾಲಂಟಿಯರ್‌ಗಳನ್ನು ಕುರಿತ ಪ್ರಶ್ನೆ ಪ್ರಯತ್ನದಮೇಲೆ ಲಾರ್ಡ್ ಕ್ಯಾನಿಂಗ್ ಸಾಹೇಬರವರು ಬರೆದಿಟ್ಟ ಅಭಿಪ್ರಾಯವನ್ನು ಇಂಡ್ಯ ಗವರ್ನ್‌ಮೆಂಟಿನವರು ಚಾಚೂತಪ್ಪದೆ ಅದನ್ನು ಅನುಸರಿಸುವದರಿಂದ ಕಾರಣವೆಂದು ಹೇಳುತ್ತೇವೆ, ಸದರೀ ಆಕ್ಟಿನ ರಾಜ್ಯದ ವಾಲಂಟಿಯರ್ ಫೌಜು ಕಟ್ಟಲ್ಪಡುವ ರಾತ್ರಿ ಅದರಲ್ಲಿ ಇಂಡ್ಯದ ಜನರು ಸೇರಿಸಲ್ಪಡಲಾರದೆಂದು ನಮೂದಾಗಿದ್ದಲ್ಲವು ಮೇಲೆ ಸೇರಿಸಲ್ಪಟ್ಟ ವಾಲಂಟಿಯರ್ ಇಷ್ಟು ಮಾತ್ರವೆಂದ ಹೊಸ ದಸ್ತೆ ಜೆಟಗಾಂಗ್‌ನಲ್ಲಿ ಒಂದು ವಾಲಂಟಿಯರ್ ಸೇನೆ ಕಟ್ಟಲ್ಪಟ್ಟಿದ್ದು ಅದಕ್ಕೆ ಪ್ರೋತ್ಸಾಹವನ್ನು ಕೊಟ್ಟು, ಆದರೆ ಇದು ಗೊತ್ತುಪಡಿಸಲ್ಪಟ್ಟಿದೆ ಅದು ಒಡೆದು ಹೋಯಿತು, ನೇಟಿವ್ ವಾಲಂಟಿಯರ್‌ಗಳು ಬಾಲಗಿರಿ ರೈಫಲ್ ಬರ್ಮಾ, ಮತ್ತು ಬೆಲೂಚಿಸ್ತಾನ ದೇಶಗಳಿಗೆ ಸೈನ್ಯದಲ್ಲಿ ಸೇರಿಸಲು ಹೊರಟಿದ್ದು ಒಬ್ಬನೊಬ್ಬ ವಾಲಂಟಿಯರ್ ಸೇನೆಯೊಳು ನೇಟಿವ್ ದೊಡ್ಡ ಮನುಷ್ಯರು ಅಧಿಪತಿಗಳಾಗಿ ಸಹ ಕೆಲಸಮಾಡುತಲಿದ್ದಾರೆ ನೇಟಿವ್‌ಗಳನ್ನು ವಾಲಂಟಿಯರ್ ಫೌಜಿಗೆ ಸೇರಿಸಿಕೊಳ್ಳುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಮುಂಬಾಯಿ ಮದ್ರಾಸ್ ಮೊದಲಾದ ಪಟ್ಟಣಗಳ ನೇಟಿವ್ ಜನಗಳ ಅಭಿಪ್ರಾಯವನ್ನು ಕೇಳುವದು ಯುಕ್ತವೆಂದು ಇಂಡ್ಯನ್ ಮಿರರ್.

THE MYSORE GAZETTE

ಮೈಸೂರು ಗೆಜೆಟ್.

ಸನ್ ೧೮೮೫ನೇ ಇಸವಿ ಮೇ ೧೬ನೇ ತಾರೀಖಿನ ವಾರ

ಶ್ರೀಮನ್ಮಹಾರಾಜ ಗವರ್ನರ್ ಜನರಲ್ ರವರ ದಿವಾನರವರ ದ ಕೊಡೋದಾದ ಇಷ್ತಿಹಾರ್ ನಾಮೆಗಳು ಜನರಲ್ ಇಷ್ತಿಹಾರ್ ನಾಮೆಗಳು

ಕಾರೀಖು ೨೨ನೇ ಮೇ ೧೮೮೫ ನಂ ೧೯೨—ಡಿ ಚೆ ಯಶ್ ಹ್ಯಾರಿಸ್ ಬಾಲ್ ಯವರು ಸಿವಿಲ್ ಸರ್ಜನ್ ಆಫೀಸ್ ನ ಜಾಬನಿ ಚಾರ್ಜನ್ನು ಹುಬ್ಬಳ್ಳಿಗೆ ಗಂಗನೇ ಮಧ್ಯಾಹ್ನ ಪ್ರಾಕ್ಟೀಸ್ ಕಿರ್ಟ ಎ ಬ್ಲಿಕ್ ಜಿಕ್ಟೆಟರಿ ಯವರಿಗೆ ಒಪ್ಪಿಸಿರುತ್ತಾರೆ

ಮೇ ೨೫ನೇ ೧೮೮೫ ಮೈಸೂರು ೨೨ನೇ ಮೇ ಗಂಗಾವರಿ ಶಂಭು ಬ ನಂ ಗಾ—ಬೆಂಗಳೂರು ರೆಸಿಡೆನ್ಸಿ ರಿಪೋರ್ಟ್ ಅಫೀಸಿನ ಹೆಡ್ ಕ್ಲಾರ್ಕ್ ರಾದ ವಿ ಚೆನ್ನಪ್ಪನವರು ಮಾಡಲ್ಪಟ್ಟ ರಿಪೋರ್ಟನ್ನು ವಾಯಿದೆಗೆ ಎಸ್ ರಾ ಥರ್ಡ ಕ್ಲಾಸ್ ರಿಜಿಸ್ಟ್ರಾರಾಗಿ ನೇಮಕ

ಮೇ ೨೫ನೇ ಮೈಸೂರು, ೨೨ನೇ ಮೇ ಗಂಗಾವರಿ ಕ್ಯಾಂಪ್ ನಂ ೧೯೨—ಅಡ್ವೊಕೇಟ್ ಮಿ|| ಎಂ ರಾಮರಾಯರು, ಮೈಸೂರಿಗೆ ಪರ್ಮನೆಂಟ್ ಆಗಿ ಮಿ|| ಸಿ ಸ ಪ ನಾಂಜುಂಡಯ್ಯನವರಿಗೆ ಜನರಲ್ ಪವರ್ ಆಫ್ ಅಟಾರ್ನಿ ಕೊಡಲ್ಪಟ್ಟಿರುತ್ತಾರೆ

ಮೇ ೨೫ನೇ ಆಯಾ ಎಸ್ ಟ್ರೇಜರಿ ಯವರಿಗೆ ಚಾರ್ಜ್ ತೊರೆದಿರುವವರಿಗೆ ಮಿ|| ಎಂ. ರಾಮರಾಯರು ಮೈಸೂರು ಪಬ್ಲಿಕ್ ಪ್ರಾಸಿಕ್ಯೂಟರ್ ರಾಗಿ ಕೆಲಸನೋಡತಕ್ಕದ್ದು

ಕ್ಯಾಂಪ್ ನಂ ೧೯೨—ಸರ್ಜನ್ ಮೇಜರ್ ಜೆ ಹಿಗ್ ಡರ್ ಸನ್ ಎಂ ಡಿ ಯವರು ಗಂಗಾವರಿನೇ ಇಸವಿ ಮೇ ೧೯ನೇ ಮಧ್ಯಾಹ್ನ ಮೈಸೂರು ಡಿವಿಷನ್ ಸಿವಿಲ್ ಸರ್ಜನ್ ಕೆಲಸದ ಚಾರ್ಜನ್ನು ಸ್ಪೆಷಲ್ ಮೆಡಿಕಲ್ ಆಫೀಸರಿಗೆ ಒಪ್ಪಿಸಿರುತ್ತಾರೆ.

ಕ್ಯಾಂಪ್ ನಂ ೧೯೨—ಸರ್ಜನ್—ಮೇಜರ್ ಟಿ ಜಿ. ಹಿಗ್ ಸನ್ ಯವರು ಗಂಗಾವರಿನೇ ಇಸವಿ ಮೇ ೨೦ನೇ ಮಧ್ಯಾಹ್ನ ಮೈಸೂರು ಡಿವಿಷನ್ ಸಿವಿಲ್ ಸರ್ಜನ್ ಆಫೀಸ್ ಚಾರ್ಜನ್ನು ಸ್ಪೆಷಲ್ ಮೆಡಿಕಲ್ ಆಫೀಸರ್ ರವರಿಗೆ ಒಪ್ಪಿಸಿರುತ್ತಾರೆ

ನಂ ೧೯೨—ತಾರೀಖು ೨೯ನೇ ಮೇ ಗಂಗಾವರಿ ಚಾರ್ಜ್ ಬಹದ್ದೂರ್ ಮಿ|| ಮಹಮದ ಸಾಹೇಬರವರು ಗಂಗಾವರಿನೇ ಇಸವಿ ಮೇ ೨೨ನೇ ಮಧ್ಯಾಹ್ನ ಮಧ್ಯಾಹ್ನ ಅಫೀಸ್ ಚಾರ್ಜನ್ನು ಕರ್ನಲ್ ರವರ ಡಿಪ್ಯುಟಿ ಕಮಿಷನರ್ ಆಫೀಸ್ ಮತ್ತು ಟ್ರೆಜರೀ ಚಾರ್ಜನ್ನು ಮಿ|| ಜನರಲ್ ಅವರಿಗೆ ಒಪ್ಪಿಸಿರುತ್ತಾರೆ

ಮೇ ೨೫ನೇ ನಂ ೨೯೨—ತಾರೀಖು ೨೩ನೇ ಮೇ ಗಂಗಾವರಿ—ಶಿವಮೊಗ್ಗ ತಾಲ್ಲೂಕು ಅಮಲ್ದಾರ್ ಮಿಯರ್ ಕೋನಪ್ಪನವರಿಗೆ ಅಸ್ಸಿಸ್ಟೆಂಟ್ ಅವರ ಅಮಲ್ದಾರಿಗೆ ಸಿವಿಲ್ ಕಾರ್ಟಿನ ಅಧಿಕಾರ ಇಲಾಖೆಗೆ ಮೊದಲಿಗೆ ಹಸ್ತಾಂತರ ಅಧಿಕಾರವು ಕೊಡಲ್ಪಟ್ಟಿರುತ್ತದೆ

ಚಿತ್ರದುರ್ಗ ಡೆಪ್ಯೂಟಿ ಕಮಿಷನರ್ ಆಫೀಸ್ ಶಿರಸ್ತೇದಾರ್ ರಾದ ಯಸ್ ಸಿನರು, ಚಿಕ್ಕ ಗಣಪತಿ ಕೆಲಸದಲ್ಲಿ ಅಮಲ್ದಾರ ಸ್ಟೈಟ್ ಹಾಲೀಯಲ್ಲಿ ಅಥವಾ ಮತ್ತೊಂದು ಹುಕುಂ ಹೊರಡುವವರೆಗೆ ಒಂದುತಾರು ಶಾನಬೋಗ್ ನಾಯಕ್ ಕಾಲ್ ಆ ಹೊರನೇ ಸೇರಿಸಲ್ಪಟ್ಟಿರುತ್ತಾರೆ—

ಮೇ ೨೫ನೇ ನಂ ೧೯೨, ತಾರೀಖು ೨೨ನೇ ಮೇ ಗಂಗಾವರಿ—ಹೋಬಳಿ ಕಾರ್ಲ್ ಹೆಚ್ ಲಾರ್ಜ್ ಗೆ ಚಾರ್ಜ್‌ನಲ್ಲಿ ಯ ಮೂರು ಜನ ಡೆಪ್ಯೂಟಿ ಅಮಲ್ದಾರ್ ಕೆಲಸ ಕೊಡಲ್ಪಡಬೇಕಾದರೆ ಇರುವ ಎರಡನೇ ಕ್ಲಾಸಿನ ಕೆಲಸಗಾರಿಕೆ ತಾಲ್ಲೂಕು ಶಿರಸ್ತೇದಾರ್ ನಾಗಿ ರಾಯರವರು ಸದರೀ ತಾಲ್ಲೂಕು ಅಮಲ್ದಾರರ ಪರಿಶೀಲನೆಯ ದಿವಾನ ಸ್ಟೈನ್ ಪಾಶಾನಿಗಳು ಕಾಲದಲ್ಲಿ ಹಂಗಾಮು ಚಾರ್ಜ್, ಹುದಸ್ತೇದಾರ್ ಕ್ಲಾರ್ಕ್ ಅಧಿಕಾರವು ಕೊಡಲ್ಪಟ್ಟಿರುತ್ತದೆ

ಮೇ ೨೫ನೇ ನಂ ೨೯೨—ತಾರೀಖು ೨೩ನೇ ಮೇ ಗಂಗಾವರಿ ಅರಸಿಕೆರೆ ಅಮಲ್ದಾರ್ ಡಿಸೆಂಬರ್ ಗಂ ಸನೇ ಪಕ್ಷಕ್ಕೆ ಗಂಗಾವರಿ ನೇ ಸಂವತ್ಸರದ ಸ್ವಂತ ಪಾಸ್ ಸಿಂಹಾಸನ ಪ್ರಕಟಿಸಲ್ಪಟ್ಟ ನಿಬಂಧನೆಗೆ ಸಿರಾದ ನಂಬರ್ ಗಂಗಾವರಿ ಸಂತ ಪತ್ರದಿಂದ ಗಾವಿ ಶ್ರೀರಂಗಪಟ್ಟಣದ ರಾಜೀಜಿ ಗೆ ಸೇರಿದ ಚಲನ ವಾರ ರುಕಿಯಿಂತಲೂ ಹುಕುಂ ಕೊಡಲ್ಪಟ್ಟಿರುತಿದೆ

V (c) ಎರಡನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ಹಾಜರಾಗತಕ್ಕ ಯಾವ ಉಮೇದ್ ವಾರರಾಗಲಿ ಒಂದನೇ ಗ್ರೇಡ್ ಪ್ಲೀಡರಾಗುವದಕ್ಕೆ ಬಾರದ ಹುಸಿಯಾಗಿ ದಾಖಲಾಯಿತು ಒಂದು ಗಂಗಾವರಿಸ್ಸು ವಿಧಿ ಗಂಗನೇ ಸಾಲ್‌ನಲ್ಲಿ ವಿಧಿಸಲ್ಪಟ್ಟಿರುವಂತೆ ಪರೀಕ್ಷೆಗೆ ಫೀ ಕೊಟ್ಟು ಪಾಸಾದರೆ ಅಂತಹವನಿಗೆ ಒಂದನೇ ಗ್ರೇಡ್ ಸರ್ಟಿಫಿಕೇಟ್ ಕೊಡಲ್ಪಡುವದು

(d) ಒಂದನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ಹಾಜರಾಗತಕ್ಕ ಯಾವ ಉಮೇದ್‌ವಾರರಾಗಲಿ ಮೊದಲನೇ ಗ್ರೇಡಿಗೆ ಬೇಕಾದ ಲಾಯಖಾಗಿದ್ದರೆ ಅಂತಹವನಿಗೆ ಮೊದಲನೇ ಗ್ರೇಡ್ ಸರ್ಟಿಫಿಕೇಟ್ ಕೊಡಲ್ಪಡುವದು

ಸಂ|| ೨೩ನೇ ಮೇ ಗಂಗಾವರಿ

ಅಸಿಸ್ಟೆಂಟ್ ಕಮಿಷನರ್‌ಗಳು, ಮುನ್ಸಫ್‌ಗಳು, ಅಮಲ್ದಾರ್‌ಗಳು, ಡೆಪ್ಯುಟೀ ಅಮಲ್ದಾರ್‌ಗಳು, ಮತ್ತು ಪ್ಲೀಡರ್‌ಗಳು, ಇವರುಗಳ ಕೆಲಸಗಳಿಗೆ ವಿಧಿಸಲ್ಪಟ್ಟಿರುವ ಪರೀಕ್ಷೆಗಳು ಗಂಗಾವರಿನೇ ಇಸವಿ ಜೂನ್ ಗಂಗನೇ ತಾರೀಖು ಮೊದಲು, ಆ ವಾರದ ದಿನಗಳಲ್ಲಿಯೂ ಪ್ರತಿದಿನ ಗಂ ಗಂಟೆಗೆ ಪ್ರಾರಂಭವಾಗಿ ಬೆಂಗಳೂರಿನಲ್ಲಿರುವ ಪಬ್ಲಿಕ್ ಆಫೀಸಿನ ಮಧ್ಯ ಹಾಲ್‌ನಲ್ಲಿ ನಡೆಯುವವು

ಪರೀಕ್ಷೆಗಳು ಅಕ್ಷರಸಂಜ್ಞಾರೂಪಕ ಗುರುತಿಸಲ್ಪಡುವವು ಪ್ರತಿಯೊಂದು ಗ್ರಂಥದ ಮೇಲೆಯೂ ಪ್ರಶ್ನಪತ್ರಿಕೆಗಳು ಕೊಡಲ್ಪಡತಕ್ಕ ಕಾಲೇಜುಗಳನ್ನು, ಇದರದಿನದ ಕಚೇರಿಯ ಕೋಣೆಯಲ್ಲಿ ಆಯಾ ಪರೀಕ್ಷೆಗಳಿಗೆ ಹೋಗತಕ್ಕ ಪತ್ರಿ ಬಪ್ಪಲು ಮೇಲ್‌ನಾರದ ಆಯಾಕಚೇರಿಗಳಲ್ಲಿ ಹಾಜರಾಗತಕ್ಕದ್ದು.

ಅಸಿಸ್ಟೆಂಟ್ ಕಮ್ಮಿಷನರ್‌ಗಳು	ಹೋಗರಾಕಿ	—A.
ಮುನ್ಸಫ್‌ಗಳು	ಡಿಟ್ಟೋ.	ಡಿಟ್ಟೋ—B
ಅಮಲ್‌ದಾರ್‌ಗಳು ಡಿಪ್ಯುಟೀ ಅಮಲ್ ದಾರ್‌ಗಳು		—C.
ಪ್ಲೀಡರ್‌ಗಳು	ಡಿಟ್ಟೋ.	ಡಿಟ್ಟೋ—D

ಗ್ರಂಥಗಳು.	ಪರೀಕ್ಷೆ
ಜೂನ್ ೧೫ನೇ ಸೋಮವಾರ	
ಲ್ಯಾಂಡ್ ಅಕ್ವಿಜಿಷನ್ ಆಕ್ಟು	A C.
ಕಾಂಟ್ರಾಕ್ಟ್ ಟ್ರಾನ್ಸ್‌ಫರ್ ಆಕ್ಟು	A C.
ಎಕ್ಸೈಸ್ ಆಕ್ಟು	A. C
ಅಫೀಂ ಆಕ್ಟು	A C.
ರಜಿಸ್ಟ್ರೇಷನ್ ಆಕ್ಟು	A. C D.
ಸ್ಟ್ಯಾಂಪ್ ವ ಕೋರ್ಟ್‌ಫೀಸ್ ಆಕ್ಟು	A C, D
ಜೂನ್ ೧೬ನೇ ಮಂಗಳವಾರ	
ಇಂಡಿಯನ್ ಪೀನಲ್ ಕೋಡ್	A B C D
ಕ್ರಿಮಿನಲ್ ಪ್ರೊಸೀಜರ್ ಕೋಡ್	A B C D
ಪೋಲೀಸ್ ರೂಲ್ಸ್	A B C
ಜೂನ್ ೧೭ನೇ ಬುಧವಾರ.	
ಎವಿಡೆನ್ಸ್ ಆಕ್ಟು	A B C D
ಲಾ ಆಫ್ ಟಾರ್ಟ್ಸ್	A B D.
ಮಾರ್ಟ್‌ಗೇಜ್	A B. D
ಜೂನ್ ೧೮ನೇ ಗುರುವಾರ	
ಹಿಂದೂಲಾ	A B D.
ಮಹಮ್ಮದೀಯನ್ ಲಾ	A B D
ಲಿಮಿಟೇಶನ್ ಆಕ್ಟು	A. B D
ಜೂನ್ ೧೯ನೇ ಶುಕ್ರವಾರ	
ಸಿವಿಲ್ ಪ್ರೊಸೀಜರ್ ಕೋಡ್	A B D.
ರಿಲೀಫ್ ಆಕ್ಟು	A B D
ಸ್ಪೆಸಿಫಿಕ್ ರಿಲೀಫ್ ಆಕ್ಟು	A B D
ಜೂನ್ ೨೦ನೇ ಶನಿವಾರ	
ಪ್ಲೀಡರ್ ಪರೀಕ್ಷೆ	D

BANGALORE.—Printed and published for the Proprietor, at the KARNATIC PRESS.—1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿದಿದಪ್ರವೃತ್ತ್ಯುಪಗವಾರ್ಥಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಮಿಷಮುದ್ರಣಾಸಜ್ಜಸ್ಸ್ವರ್ಗ್ರಾಸುಪರಿಪೂರ್ಣತಾದರಶಿವಾಸಸಂಸುಮಂದು

Vol. XII.] BANGALORE—MONDAY, JUNE 8, 1885 [No. 23.

ಸಂಪುಟ ೧೨.] ಬೆಂಗಳೂರು:—ಸನ್ ೧೮೮೫ನೇ ಇಸವಿ ಜೂನ್ ೮ನೇ ತಾರೀಖ್ ಸೋಮವಾರ. [ಸಂಚಿಕೆ ೨೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡಸಹಿತ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ...		೧೨—೮—೦
ಇಂಗ್ಲಿಷ್ ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ		೬—೦—೦
ಕನ್ನಡ ಮಾತ್ರ ತೆಗೆದುಕೊಳ್ಳತಕ್ಕವರಿಗೆ [illegible] ವರುಷಕ್ಕೆ .		೬—೦—೦
ತಿಂಗಳು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	[illegible]
ಹಿಂದಿನ ಸಂಚಿಕೆ	೧ಕ್ಕೆ	[illegible]

[illegible]

ಪ್ರಕಟನೆಯ ವಿವಾಹ.

[illegible]	೧ಕ್ಕೆ	[illegible]
[illegible]	೧ಕ್ಕೆ	[illegible]

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

ಪ್ರಕಟನೆ.

[illegible]

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುವವು.—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

[illegible] ...	[illegible]
[illegible] ...	[illegible]
[illegible] (ಷಟ್ಪದೀ ಟೀಕೆ) ...	೦—೩—೦
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
ಇಂಗ್ಲಿಷ್ ಕನ್ನಡ [illegible]	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]

ಸಂಸ್ಕೃತ ಮೂಲಗ್ರಂಥಗಳು

[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]
[illegible] ...	[illegible]

[illegible]

NOTICE.

VAIDYASARASANGRAHA.

Price including Postage, Rs. 5-6-0

[illegible]

ಇದರ ಕ್ರಯ	ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇ ಹಾಸಲ್	೦—೬—೦

ಟಿ. ಬಿ. ವೆಂಕಟಾಚಾರ್, ಅಪ್ರೆಕೋಟ್, ಬೆಂಗಳೂರು

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೊ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ದರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಬೋಧ್ಯವಾದದ್ದಾಗಿಯೂ ನವರಸ ಪರಿಪೂರ್ಣ ಚಿತ್ತರಂಜಕಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೬೦ ಪುಟವುಳ್ಳದ್ದು.

ಕ್ರಯ ೧—೮—೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತನಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮ॥ ತಿಂಗಮ್ಯ ಅಂಡ್ ಕೊ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳತಕ್ಕದ್ದು.

ಬಿ. ವೆಂಕಟಾಚಾರ್,
ಮುನಸೀಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ತನ್ಮತಾಭಿಮಾನ[illegible]ವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಕಾವ್ಯವು, [illegible] ಮೈಸೂರು ವಿದ್ಯಾಶಿರೋಮಣಿ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ರೂರಲ್ ಅಸಿಸ್ಟೆಂಟ್ ಇಂಜನಿಯರ್ ಮ॥ ಎ. ಗೋವಿಂದಾಚಾರ್ಯರವರಿಗೆ ಮೊಬಲಗುಸಹಿತ ಬರೆದುಕೊಂಡರೆ ಪುಸ್ತಕಗಳು ಕಳುಹಿಸಲ್ಪಡುವದು.

ಅಪ್ವಲ್ ತರಹಾ ಪುಸ್ತಕ		೦—೧೪—೦
ದುಯ್ಯಂ ತರಹಾ	,,	೦—೧೨—೦
ಅಂಚೇ ಹಾಸಲ್	,,	೦—೨—೦

ಬೆಂಗಳೂರು ತಾ॥ ೭ನೇ ಜೂನ್ ೧೮೮೫

ಪ್ರಕಟನೆ.

ಬೆಂಗಳೂರು ಬಳೇಪಾಗಿಲಬಳಿ ಇರುವ ಮನೋರಮಾವೀದಿ ೩೩ನೇ ನಂಬರ್ ಮನೆಯೊಳು ವಾಸವಾಗಿರುವ ಪರಮಹಂಸರೆಂಬವರು ಇದರಿಂದ ಸರ್ವರಿಗೂ ತಿಳಿಸುವದೇನೆಂದರೆ—

[illegible]

೧ ಮಹಾ ಬಿಲ್ವಾದಿಲೇಹ್ಯ.

[illegible]

೨. ಸಿದ್ಧಘೃತ.

[illegible]

ಸುಖವಿರೇಚನ ಚೂರ್ಣ.

[illegible]

[illegible]

ಬೆಂಗಳೂರು. ತಾ॥ [illegible] ಜೂನ್ ೧೮೮೫ನೇ ಇಸವಿ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 8, 1886

೧೮೮೬ನೇ ಜೂನ್ ೮ನೇ ತಾ॥ ಸೋಮವಾರ.

OVER LIBERALITY.

ಈ ಮೈಸೂರುದೇಶದಲ್ಲಿ ಮುಂಬೈ ರೆವಿನ್ಯೂ ಸಿಸ್ಟಂ ಯೇರ್ಪಾಟಾಗಿ ಅದನ್ನು ಜಾರಿಯಲ್ಲಿ ತರತಕ್ಕಬಗ್ಯೆ ಸಾಬಕ್ ಚೀಫ್ ಕಮ್ಮಿಶನರವರ ಕಾಲದೊಳು ಮುಂಬೈ ರಿವಿನ್ಯೂ ಆಫೀಸರ್‌ಗಳೂ ಅವರಿಂದ ತರಬೇಯಿತಾದ ಇಲ್ಲಿನ ನೇಟಿವ್ ಅಧಿಕಾರಿಗಳೂ ಮೊಕರರ್ ಮಾಡಲ್ಪಡುತಲಿದ್ದರು. ದೈವಯೋಗದಿಂದ ಕಾಲಗತಿಯು ಭಿನ್ನಿಸಲು, ಮಹಾರಾಜರವರ ಸಾಕ್ಷಾತ್ಪಾಲನೆ ಇಲ್ಲಿ ನೆಲಗೊಂಡದರಿಂದ ಮದರಾಸಿನ ಸಾಬಕ್ ರೆವಿನ್ಯೂ ಸಿಸ್ಟಂನಲ್ಲಿ ಅನುಭವವುಳ್ಳವರು, ದಿವಾನರಾಗಿ ಏರ್ಪಟ್ಟರು. ಮೆ॥ ರಂಗಾಚಾರ್ಯರವರು, ಶೆಲಾಪ್ ಆಸರಾ, ಬಗರ್‌ಕಸೂರೀ ರವೀಬುಜನ್ ಜಮೀನಗಳಿಗೆ ಅರ್ಧಕಂದಾಯ ರಿಮಿಷನ್ ಮಾಡತಕ್ಕದ್ದೆಂದು ಹುಕುಂಕೊಟ್ಟರು ಅವರ ಉತ್ತರ ಕಾಲೀನರಾದ ಮೆ॥ ಶೇಷಾದ್ರಿಅಯ್ಯರವರು ಇಂತಾ ಭೂಮಿಗಳಲ್ಲಿ ಬಗತಕ್ಕ ಪೀಕಸುಕ್ಕಿಗೂ ಅರ್ಧ ಕಂದಾಯ ಮುಜರೆ ಕೊಡುವಂತೆ ಹುಕುಂಮಾಡಿದರು. ಇದರಮೇಲೆ ಈಚೆಗೆ ಒಬ್ಬ ಸಬ್‌ಡಿವಿಜನ್ ಆಫಿಸರರು ಮದರಾಸ್‌ಪದ್ಧತಿಯಂತೆ ಯೇರ್ಪಟ್ಟಿತೆಂದು ಭ್ರಾಂತಿಗೊಂಡು ರೋಕಲ್‌ಫಂಡು ಪೂರಾ ಕಂದಾಯದಮೇಲೆ ವಸೂಲ್ಮಾಡಲ್ಪಡತಕ್ಕದ್ದೇ ಅಲ್ಲದೆ ಮುಜರೆಕೊಟ್ಟ ಮೊಬಲಗ ಜಾತಾ ಬಾಕೀಮೊಬಲಗಿನಮೇಲೆ ವಸೂಲ್ಮಾಡಲ್ಪಡತಕ್ಕದ್ದೇ ಯೆಂದು ದಿವಾನರವರನ್ನು ಕೇಳಲು ಅವರು, ಮುಂಬೈ ಮತ್ತು ಮದರಾಸ್ ಪದ್ಧತಿಗಳನ್ನು ಸ್ವಲ್ಪವೂ ಚಿಂತಿಸದೆ ಕೇವಲ ರೈತ ಪರವರ್ಣಯಮೇಲೆ ನಿಗೇಯಿಟ್ಟು ವಸೂಲಾದ ಕಂದಾಯಕ್ಕೆಮಾತ್ರ ರೋಕಲ್‌ಫಂಡ ತೆಗದುಕೊಳ್ಳಬೇಕೆಂದು ಹುಕುಂಕೊಟ್ಟದ್ದಾಗಿ ತಿಳಿಯಬರುತಿದೆ. ದಾತನಿಗೆ ಔಚಿತ್ಯಾನೌಚಿತ್ಯವೆತ್ತಣದು? ಇದೊಂದೇವಿಷಯವಲ್ಲವು ಅಜೀರ್ಣವು ಪರಿಗಣಿಸದೆ ಆಹಾರವನ್ನೀಯುವ ಅತ್ಯುದಾರಿಯಂತೆ, ಅಸಿಸ್ಟಂಟ್ ಕಮ್ಮಿಶನರ್‌ಗಳಿಗೆ ತಲಬ್ ಅಧಿಕವಾಗಿ ಸಲ್ಲುತಲಿದ್ದರೂ ಮರಳಿ ಇಜಾಫೇಕೊಡುವದಕ್ಕೆ ಹಿಂಜರಿದವರಲ್ಲವು. ಗ್ರಾಮಾಂತರ ಸಂಚಾರವು ತಾಲ್ಲೂಕು ಅಧಿಕಾರಿಗೆ ಕರ್ತವ್ಯವಾದರೂ, ಅದು ಚಿಂತಿಸದೆ ಅವರಿಗೆ ಅಲೋವೆನ್ಸ್ ಕೊಡುವಂತೆ ಯೇರ್ಪಾಡುಮಾಡಿದರು. ಇದಕ್ಕಿಂತಲೂ ಔದಾರ್ಯವುಂಟೆ ? ಅನೇಕರಿಗೆ ಸರ್ವಿಸ್ಸಾಗಿದ್ದರೂ, ಅವರು ಮಾಡತಕ್ಕ ಕೆಲಸ ಅನಾವಶ್ಯಕವೆಂದು ತೋರಿದರೂ ಅಭಿಮಾನದಿಂದ ಅವರಗೋಜಿಗೆ ಹೋಗದಿರುತ್ತಾರೆ ಇದು ಅತಿಶಯೋಕ್ತಿಯಾದದ್ದಲ್ಲವು. ಸರ್ವಿಸುವುಳ್ಳವನೊಬ್ಬನು ತನಗಿಂತಲೂ ಕಮ್ಮಿಸರ್ವಿಸುವುಳ್ಳವನಿಗೆ ಇಜಾಫೆಕೊಟ್ಟಂತೆ ತನಿಗೂ ಕೊಡಬೇಕೆಂದು ಕೇಳಲಾಗಿ ಮೇಲೆಕಂಡತೆ ದಿವಾನರವರು ಉತ್ತರವಂಕೊಟ್ಟಂತೆ ಕೇಳುತ್ತೇವೆ. ಹೀಗಿರುವದರಿಂದ ಸದಸದ್ವಿವೇಚನವನಾವಶ್ಯಕವಾದರೂ ಅತ್ಯೌದಾರ್ಯದಲ್ಲಿಯೇ ದಿವಾನರಿಗೆ ದೃಷ್ಟಿ ಯಿರುವಂತೆ ಹೇಳಬೇಕಾಗಿದೆ. ಪ್ರಕೃತದಿವಾನರವರು ಸಾಬಕ್ ದಿವಾನರವರ ಮಾರ್ಗಾನುವರ್ತಿಗಳೆಂಬದಕ್ಕೆ ಸ್ವಲ್ಪವೂ ಸಂದೇಹವಿಲ್ಲದಿದ್ದರೂ ಅವರಿಗಿಂತಲೂ ಇವರು ಉದಾರಿಯೆಂದು ಹೇಳಬಹುದು ಸಾಬಕ್ ದಿವಾನರವರು ವಿವೇಚನಪರರಾಗಿಯೂ ಪೂರ್ವ ಕ್ರಮವನ್ನರಿತವರಾಗಿಯೂ ಯಿದ್ದದರಿಂದಏಕಾಏಕಿ ಈಗಿನವರಿಗೆ ವುಂಟಾಗಿರುವ ಔದಾರ್ಯವು ಅವರಿಗೆ ಉಂಟಾಗದೆಹೋಯಿತು ಆದರೆ ಅಂತಾಗುಣವು ಪ್ರಕೃತ ದಿವಾನರವ್ರಾಸ್ತ್ಯಕ್ಕೆ ಕಾರಣವಾಯಿತು ಹ್ಯಾಗೆಂದರೆ— ಈಗಿನ ದಿವಾನರವರು ಔಚಿತ್ಯಾನೌಚಿತ್ಯವನ್ನೂ ಆವಶ್ಯಕತಾನಾವಶ್ಯಕತೆಯನ್ನೂ ಪರಿಗಣಿಸದೆ, ಯಾವದುಯೆತ್ತ ಹೋದರೆ ಆಗಬೇಕಾದ್ದೇನೆಂದು ಬೇಕಾದವರಿಗೆಲ್ಲ ಯಿಜಾಫೇ ಕೊಡುವ ಸ್ವಭಾವವುಳ್ಳವರಾದ್ದರಿಂದಲೇ ಅತ್ಯೌದಾರ್ಯಶಬ್ದರಿ ಅದರಿಂದ ಹಿಂದಿನವರಿಗಿಂತಲೂ ಇವರು ವಿಶೇಷತಃ ಕೊಂಡಾಡಲ್ಪಡಲಿಕ್ಕೆ ಕಾರಣವಾಯಿತು.

THE NEW BRITISH RESIDENT

ನೇಪಾಳ ಸಂಸ್ಥಾನದ ಕಾಯಂ ಬ್ರಿಟಿಷ್ ರೆಸಿಡೆಂಟರಾಗಿದ್ದು ಇಲ್ಲಿನ ಆಫಿಶಿಯೇಟಿಂಗ್ ಬ್ರಿಟಿಷ್ ರೆಸಿಡೆಂಟರಾಗಿ ಮೊಕರರ್ ಮಾಡಲ್ಪಟ್ಟಿರುವ ಮೆ॥ ಸಿ. ಇ. ಆರ್. ಗರ್ಡಿಲೆಸ್ಟೋನ್‌ಯವರು ಗತ ಮಂಗಳವಾರದದಿನ ಬೆಳಗ್ಯೆ ಮೆಯಿಲ್ ಟ್ರೇನ್‌ನಲ್ಲಿ ಇಲ್ಲಿಗೆ ಬಂದು ತಮ್ಮ ಕೆಲಸದ ಚಾರ್ಜನ್ನು ಅಧೀನ ವಹಿಸಿದರು. ಈ ರೆಸಿಡೆಂಟರವರನ್ನು ಬರಮಾಡಿಕೊಳ್ಳತಕ್ಕಬಗ್ಯೆ ಕೆಲವು ಮಂದಿ ನೇಟಿವ್ ಮತ್ತು ಯೂರೋಪಿಯನ್ ಆಫಿಸರ್‌ಗಳು ರೆಯಿಲ್ವೆ ಸ್ಟೇಷನಿಗೆ ಹೋಗಿದ್ದರಲ್ಲದೆ ಗೌರವಾರ್ಥ ಸಿಲ್ಲೇದಾರ್ ಕುದುರೆಗಳು ಸ್ಟೇಷನ್ ಬಾಹ್ಯಾಂಗಣದಲ್ಲಿ ಕಾದಿದ್ದು ರೆಸಿಡೆಂಟರವರಿಗೆ ಮುಜರೇ ಮಾಡಿದವು. ಅವರ ಆಗಮನ ಸೂಚನೀಯಗಳಾದ ಹದಿಮೂರು ತೋಫ್‌ಗಳು ಮಾಮೂಲ್ಪ್ರಕಾರ ಹಾಕಲ್ಪಟ್ಟವು ಮೆ॥ಗರ್ಡಿಲೆಸ್ಟೋನ್‌ಯವರು ಇದರಂತೆ ಹಿಂದು ನೇಟಿವ್ ಸಂಸ್ಥಾನದಲ್ಲಿ ಸಮಾನಾಧಿಕಾರದೊಳಿದ್ದವರಾದಾಗ್ಯೂ, ಇಲ್ಲಿನ ಆಡಳಿತಕ್ಕೆ ಅವರು ಹೊಸಬರಾದದರಿಂದಲೂ, ಸ್ವತಂತ್ರವಾದ ಬಂದು ನೇಟಿವ್‌ಸಂಸ್ಥಾನದಲ್ಲಿದ್ದು ವಿಶೇಷ ಗಲಾಟೆಗಳಿಗೊಳಗಾಗದೆ ರೆಸಿಡೆಂಟರಾಗಿರುತಲಿದ್ದ ಅಭ್ಯಾಸಾನುಭವಗಳು ಅವರಿಗೆ ನಿರೂಢವಾಗಿರಬಹುದಾದದರಿಂದಲೂ, ಕಟ್ಟುಬಿಡಿ ಸಂಸ್ಥಾನವಾದ ಈ ರಾಜ್ಯದ ವಿಷಯದಲ್ಲಿ ಅಂತಾ ಅಭ್ಯಾಸಾನುಭವಗಳು ಪ್ರಯೋಜನಕರವಲ್ಲವಾದದರಿಂದಲೂ, ಪ್ರಕೃತ ಸಂದರ್ಭದಲ್ಲಿ ಬ್ರಿಟಿಷ್ ರೆಸಿಡೆಂಟರವರ ಕರ್ತವ್ಯವು ಪರ್ಯಾಲೋಚಿಸಿ ಕೆಲವುಅಂಶಗಳನ್ನು ಅವರ ಅವಧಾನಕ್ಕೆ ತರಲೆತ್ನಿಸುವೆವು, ಯೇನುದರೆ —

ಈ ಮೈಸೂರು ದೇಶದ ಪ್ರಜೆಗಳೆಲ್ಲರೂ ಈ ರಾಜ್ಯದ ವಿಷಯವಾಗಿ ಬಹುದಿವಸಗಳಿಂದ ಪಡೆಯಿದ್ದ ಅಪೇಕ್ಷೆ ಅನರಿಗೆಕ್ಕೆ ಗೂಡಿದಮೇಲೆ, ಅಂದರೆ, ಶ್ರೀಮನ್ಮಹಾರಾಜರವರಿಗೆ ಈ ರಾಜ್ಯ ಒಪ್ಪಿಸಲ್ಪಟ್ಟಬಳಿಕ ಇದುವರಿವಿಗೂ ಇದುಮಂದಿ ಬ್ರಿಟಿಷ್ ರೆಸಿಡೆಂಟರುಗಳು ಮೊಕರರಾದಂತೆಯಾಯಿತು. ಇವರಪೈಕಿ ಮೊದಲನೆಯವರಾದ ಸರ್ ಜೇಂಸ್ ಗಾರ್ಡನ್‌ಯವರು ಬ್ರಿಟಿಷ ಆಳ್ವಿಕೆಯಲ್ಲಿ ಆಖೈರ್ ಚೀಫ್ ಕಮ್ಮಿಶನರಾಗಿಯೂ, ಬಾಲ್ಯದಶೆಯೊಳಿದ್ದ ಮಹಾರಾಜರಿಗೆ ಪಾಲಕರಾಗಿಯೂ, ಬಳಿಕ ನೇಟಿವ್ ಆಧಿಪತ್ಯ ನೆಲಗೊಂಡಮೇಲೆ ಮೊದಲನೆಯ ಬ್ರಿಟಿಷರೆಸಿಡೆಂಟರಾಗಿಯೂ ಇದ್ದು ಅವರು ಈದೇಶದಲ್ಲಿ ನಡೆಸಿದ ದಾಂಧಳೆಗಳ ಪರ್ಯವಸಾನರೂಪವಾದ ಫಲವನ್ನು ಅದ್ಯಾಪಿ ಇಲ್ಲಿನಪ್ರಜೆಗಳು ಅನುಭವಿಸುತಲಿರುವದರಿಂದ ಅವರ ಆಡಳಿತವನ್ನು ಇಷ್ಟು ಕ್ಷಿಪ್ರದೊಳು ಒಬ್ಬರೂ ಮರೆಯಲಾರರು. ಸರ್‌ಜೇಂಸ್ ಗಾರ್ಡನ್‌ಯವರು ಅನವ್ಯಾಪ್ತವಾದ ಅಸಮಾನ ಸ್ವಾತಂತ್ರ್ಯವುಳ್ಳವರಾಗಿದ್ದದರಿಂದ ಅವರನ್ನು ಮತ್ತೊಬ್ಬರೊಡನೆ ನಿದರ್ಶನತ್ವೇನ ಸಹ ಹೇಳುವದಕ್ಕೆ ಸಾಧ್ಯವಲ್ಲವು ಅಂದರೆ ಆಖೈರೊಳು ಈ ದೇಶಕ್ಕಾಗಿಯೇ ಅವರೇನ್ನಷ್ಟು ಇದರೊದನೆ ತಮ್ಮ ಲೌಕಿಕವ್ಯಾಪಾರವನ್ನು ನಿವೃತ್ತಿಮಾಡಿಕೊಂಡದರಿಂದ ಈಮಧ್ಯೆ ಅವರ ವರ್ತನವು ಅನ್ಯರಿಗೆ ಒಸಾಧ್ಯವೆಂದು ದಾವವು. ಏತೇನ ತಾವು ಪ್ರಥಮ ಬ್ರಿಟಿಷ್ ರೆಸಿಡೆಂಟರೆಂಬ ಪ್ರಶಸ್ತಿಯುಳ್ಳವರಾಗಬೇಕೆಂಬ ಮತ್ತು ತಮ್ಮನ್ನಾಶ್ರಯಿಸಿದವರನ್ನು ಮುಂದಕ್ಕೆ ತರಬೇಕೆಂಬ ಈ ಯೆರಡುವಿಧ ಸುಕೃತದೊಡನೆ ಸರ್ ಜೇಂಸ್ ಗಾರ್ಡನ್‌ಯವರು ಇಲ್ಲಿ ಕಾಲಹರಣ ಮಾಡುತಲಿದ್ದರಾಗಿ ಅಂತಾ ಕಾಲವನ್ನು ತ್ವರೆಗೊಳಿಸುತ ತಮ್ಮ ಉದ್ದೇಶ್ಯವನ್ನು ಸಫಲ ಗೊಳಿಸಿಕೊಂಡು ಹೋದರಾಗಿ ಅವರಿಲ್ಲಿ ಮಾಡಿದ ಉಪಕಾರವು ಸ್ಮರಿಸಲಿಕ್ಕೆ ಕೂಡ ವಿಷಯವಲ್ಲದೆ ಹೋಯಿತು.

ಇವರತರುವಾಯ ಮೆ॥ ಲೈಲೆಯವರು ಇಲ್ಲಿಗೆ ರೆಸಿಡೆಂಟ್ ಕೆಲಸಕ್ಕೆ ಬಂದು ಈಗ್ಯೆ ಹುಮಾರು ಯೆರಡುವರುಷಗಳಾದವು. ಏತನ್ಮಧ್ಯೆ ಇವರು ರೆಸಿಡೆಂಟಿಕಚ್ಚೇರಿಯವನ್ನು ಸಭಗೊಳಿಸುತ ಇಲ್ಲಿನ ಆಳ್ವಿಕೆಯ ಕ್ರಮವನ್ನೆಲ್ಲ ತಮ್ಮ ಅಂಪಾಂಗ ವೀಕ್ಷಣದಿಂದ ಗ್ರಹಿಸಿಕೊಂಡು ನೋಡತಕ್ಕವರಿಗೆ ತಟಸ್ಥರಂತೆಯಿರುತಲಿದ್ದರು ಪರಂತು ಯೆರಡು ಸಂವತ್ಸರಗಳ ಆವಾಸದಿಂದ ಇಲ್ಲಿನವಿದ್ಯಮಾನಗಳು ಬಹಳಮಟ್ಟಿಗೆ ಅವರಿಗೆತಿಳಿಯದಿರಲಾರದು ಆದರೆ ತಮ್ಮಕರ್ತವ್ಯವನ್ನು ಸಹ ಉಪೇಕ್ಷಿಸಿ ನಿರ್ಭರರಾಗಿದ್ದದು ನೋಡಿದರೆ ಇಲ್ಲಿನ ಆಡಳಿತದಲ್ಲಿ ತಾವು ಪ್ರವರ್ತಿಸಬೇಕಾದ ಕಾಲವು ಅದ್ಯಾಪಿ ಬರಲಿಲ್ಲವೆಂದು ಭಾವಿಸಿ ಮೌನವಹಿಸುತಾಳ್ದದ್ದಂತೆ ತೋರುತಿದೆ ಏತೇನ ಈವಿದವಾದಅನುನಯದಿಂದಲೋ ಅಥವಾ ತಮಗೆ ಸಮಾನವಾದ ಒಬ್ಬ ಬ್ರಿಟಿಷ್ ಆಫಸರರಿಂದ ನಲಗೊಳಿಸಲ್ಪಟ್ಟ ಆಡಳಿತದ ವಿಷಯದಲ್ಲಿ ತಾವುಪ್ರವೇಶಿಸುವದು ರಾಜ್ಯತಂತ್ರಕ್ರಮಕ್ಕೆ ಯೋಗ್ಯವಲ್ಲವೆಂಬಭಾವನೆ ಯಿಂದಲೋ ಗತ ಯೆರಡುವರುಷಗಳೆಲ್ಲ ಸ್ಮರಣೀಯವಾದ ಅಂಶವೊಂದೂ ಅವರಿಂದ ಮಾಡಲ್ಪಟ್ಟಂತೆ ವ್ಯಕ್ತವಾಗುವದಿಲ್ಲವು. ಅದಾಗ್ಯೂ ಜಾಸ್ತೀ ಸಬ್‌ಸಿಡಿಯ ಮಾಫೀ ವಿಷಯದಲ್ಲಿ ಶ್ರೀಮನ್ಮಹಾರಾಜರವರು ವೈಸರಾಯಿಯವರಿಗೆ ಬರೆದಕರೀತಾವನ್ನು ಪ್ರೋತ್ಸಹಿಸಿ ರವಾನೆ ಮಾಡಿದರಲ್ಲದೆ, ಶ್ರೀಮನ್ಮಹಾರಾಜ್ಞೀ ಪ್ರೀತವಾದ ಜ. ಸಿ. ಎಸ್. ಐ. ಯಂಬ ಹುನವಾದ ಪ್ರಶಸ್ತಿಯನ್ನು ವೈಸರಾಯಿಯವರ ಆಜ್ಞಾನುಸಾರ ಮಹಾರಾಜರವರಿಗೆ ಸ್ವತಃ ಒಪ್ಪಿಸಿದರು. ಗತ ಯೆರಡುಸಂವತ್ಸರಗಳಲ್ಲಿ ನಡೆದ ಈ ಯೆರಡು ಅಂಶಗಳಿಂದಲೇ ಇಲ್ಲಿ ಬ್ರಿಟಿಷ್ ರೆಸಿಡೆಂಟರೊಬ್ಬರಿದ್ದರೆಂಬ ಅಂಶವನ್ನು ತಿಳಿಯಬೇಕಾಯಿತು. ನೇಟಿವ್ ಸಂಸ್ಥಾನಗಳ ಆಳ್ವಿಕೆಯ ಕ್ರಮದಿಂದ ಬ್ರಿಟಿಷರವರ ಪ್ರಯೋಜನಕ್ಕೆ ನ್ಯೂನತೆಯುಂಟಾಗದಂತೆ ಅದನ್ನು ಕಾಪಾಡಿಕೊಳ್ಳುವದೇ ಬ್ರಿಟಿಷ ರೆಸಿಡೆಂಟರುಗಳಿಗೆ ಮುಖ್ಯ ಕರ್ತವ್ಯವಾಗಿರುತಿದೆ, ಆಯಾ ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಸರ್ಕಾರಕ್ಕೂ ನಡವಿರತಕ್ಕ ತಹನಾಮೆ ಯೊಂದುವೇಳೆ ಸಬ್‌ಸಿಡಿಯರಿಯಾದ್ದಾಗಿರುವಪಕ್ಷಕ್ಕೆ ರೆಸಿಡೆಂಟರ ಅಧಿಕಾರವು ಮತ್ತಷ್ಟು ಅಧಿಕವಾದದ್ದಾಗಿರುವದು, ತಥಾಪಿ ಅಂತಾ ಅಧಿಕಾರವು, ನವೀನ ಕಲ್ಪಿತನವಾದದ್ದಾಗಿದ್ದರೆ ಅದು ಕಾಲಾನುಗುಣವಾಗಿ ಮತ್ತಷ್ಟು ಪ್ರಬಲವಾಗುವದು ಆದರೆ ಶ್ರೀಮನ್ಮಹಾರಾಜ್ಞೀಯವರ ಪಾಲನೆಗೆ ಯೆಲ್ಲರೂ ಒಳಪಟ್ಟಿರುವದರಿಂದ ಅವರ ಪ್ರತಿನಿಧಿಯಾದ ರೆಸಿಡೆಂಟರಿಗೂ ಪ್ರಜೆಗಳ ಯೋಗಕ್ಷೇಮವಿಷಯದಲ್ಲಿ ಸಂಬಂಧವಿರುತದೆಯಾಗಿ ಪ್ರಜಾಪಾಲನಾವ್ಯಾಜದಿಂದ ನೇಟಿವ್ ಸಂಸ್ಥಾನಗಳ ಆಡಳಿತಗಳಂ ಕ್ರಮಪಡಿಸುವವಿಷಯದಲ್ಲಿ ಅವರು ಬೇಕಾದಮಟ್ಟಿಗೆ ಪ್ರವೇಶಿಸಲಿಕ್ಕೆ ಅವಕಾಶ ವುಂಟಾಗುತಿದೆ ಈ ನಿಯಮವನ್ನನುಸರಿಸಿ ರೆಸಿಡೆಂಟರನೇಕರು ತಮ್ಮ ಸ್ವಾತಂತ್ರ್ಯವನ್ನು ಅತ್ಯಧಿಕವಾಗಿ ವಿನಿಯೋಗಿಸಲಾರಂಭಿಸಲು ಇಂಡ್ಯಗವರ್ನ್‌ಮೆಂಟನವರು ಅವರ ಪ್ರವೇಶವನ್ನು ಮಿತಪಡಿಸಬೇಕಾಗಿಬಂದು ಈ ಸಂದರ್ಭವನ್ನು ಪಯೋಗಿಸಿಕೊಂಡು, ನೇಟಿವ್ ಸಂಸ್ಥಾನದ ದರ್ಬಾರ್‌ಗಳಲ್ಲಿ ಕೆಲವರು ಮನ್ಮಾನವರ್ತಿಸಲಿಕ್ಕೆ ಉಪಕ್ರಮಿಸಿರುತ್ತಾರೆ. ಇವರವರ್ತನವುಕುರಿತು ವಿಚಾರಿಸಲಿಕ್ಕೆ ಅವರೊಳೈಕ್ಯವಾಗಿ ಹೋಗಿರತಕ್ಕ ಅರಸರಿಗೆ ಅಕ್ಕರೆಯಿರುವದಿಲ್ಲವು. ಬ್ರಿಟಿಷ ರೆಸಿಡೆಂಟರ ಅಧಿಕಾರವು ಪರಿಮಿತವಾದದರಿಂದ ತಮ್ಮ ಇಷ್ಟಬಂದಂತೆ ನಡೆಸಲಿಕ್ಕೆ ಅವಕಾಶವಿಲ್ಲದೆಯೋಯಿತೆಂಬ ಒಸಮಾದಾನದಿಂದ ಅವರು ತಮ್ಮ ಕರ್ತವ್ಯವನ್ನು ಸಹ ಉಪೇಕ್ಷಿಸಿ ತಟಸ್ಥರಾಗಿರುತ್ತಾರೆ.

ಮೆ॥ ಗರ್ಡಿಲೆಸ್ಟೋನ್‌ಯವರು ತಾವು ಹೊಸಬರಾದವರಿಂದಲೂ, ಹಂಗಾಮಿಯಾಗಿ ಬಂದಿರುವದರಿಂದ ತಾವಿಲ್ಲಿರತಕ್ಕಕಾಲ ಪತ್ಯಲ್ಪವೆಂತಲೂ ಅಹಿಚಪಶಾಚಗ್ರಸ್ತರೆಂದು ಯಾವದೊಂದು ಹವ್ಯಾಸಕ್ಕೂ ಹೋಗದೆಯಿದ್ದಂತಾ ಸಾಬಕ್ ರೆಸಿಡೆಂಟರನ್ನೇ ಪಾಪಸ್ ಕಳುಹಿಸಲಿಕ್ಕೆ ಈಸಂಸ್ಥಾನದವರು ಪ್ರಯತ್ನಪಟ್ಟರೆಂಬಪ್ರವಾದ ಹಿಂದೆ ನಂಗಕಂಡಿದ್ದದರಿಂದ, ತಾವೇನು ಮಾಡಿದರೆ ಹ್ಯಾಗಾಗುವದೋ ಯೆಂತಲೂ ಚಾನಿಸಿ ಅನುಭವಿಸಿದ್ದವಾದ ತಾಟಸ್ಥ್ಯವನ್ನೇ ಯಿಲ್ಲಿಯೂ ಪ್ರಯೋಗಿಸವರೇನೊ, ಆದರೆ ನೇಪಾಳದಂತೆ ಈ ಸಂಸ್ಥಾನವನ್ನು ಭಾವಿಸಲಾಗದು. ಅದು ಅನುಸ್ಯೂತವಾಗಿ ವಿನೇಕಶಾಲಿಗಳಾದ ಅರಸರಿಂದ ಸ್ವತಂತ್ರವಾಗಿ ಪಾಲಿಸಲ್ಪಡುತಬರುವದರಿಂದ ಅಲ್ಲಿನ ಆಡಳಿತದೊಳು ಅನ್ಯರ ಪ್ರವೇಶಕ್ಕೆ ಅದ್ಯಾಪಿ ಅವಕಾಶವಿಲ್ಲದಿರುತಿದೆ ಈಮೈಸೂರುರಾಜ್ಯವು ಗತ ಐವತ್ತುಸಂವತ್ಸರಗಳಿಗಿಂತ ಅಧಿಕವಾಗಿ ಬ್ರಿಟಿಷರವರ ಆಳ್ವಿಕೆಗೆ ಒಳಪಟ್ಟದ್ದು ಆ ಕಾಲದಲ್ಲಿ ಇತರಪ್ರಭುತ್ವದೊಳು ಲಭ್ಯವಾದ ವ್ಯಜನಪ್ರಜನ ಸ್ವಾತಂತ್ರ್ಯಗಳನ್ನೆಲ್ಲ ಸುಪೂರ್ಣವಾಗಿ ಅನುಭವಿಸಿದಅಭ್ಯಾಸವು ಇಲ್ಲಿನವರಿಗೆ ಬಲವತ್ತರವಾಗಲು ಈಗ ಅವುಗಳಿಗೆ ಯಾವಭಾಗದಲ್ಲಾದರೂ ಕೊರತೆಯುಂಟಾದರೆ ಅದು ಮಹಾನಷ್ಟವೆಂದು ಅವರು ಯೆಣಿಸುವದರಿಂದಲೂ, ಇಲ್ಲಿನ ಪ್ರಜಾಪಾಲಕರಾದ ಅರಸರಿಗೆ ತಮ್ಮಲ್ಲಿ ಇರಬೇಕಾದಷ್ಟು ಅನುರಾಗವಿಲ್ಲದೆ ಅವರು ನಿರ್ಭರರಾಗಿರುವಂತೆ ಜನಗಳು ನಂಬಿರುವದರಿಂದಲೂ, ಮಹಾರಾಜ ಪ್ರತಿನಿಧಿಗಳಾದ ಅಧಿಕಾರಿಗಳ ವರ್ತನಕ್ರಮದಿಂದ, ನೇಟಿವ್ ಆಳ್ವಿಕೆಯನ್ನು, ವಿಶೇಷತಃ ಅಪೇಕ್ಷಿಸಿದ ಪ್ರಜೆಗಳಸಂಬಕ್ಕೂ ಅನಾದಿಯಾದ ಈರಾಜವಂಶವು ಅವಿಚ್ಛಿನ್ನವಾಗಿ ನೆಲಗೊಂಡಿರಬೇಕೆಂಬ ತಾತ್ಪರ್ಯದೊದನೆ ಈ ರಾಜ್ಯವು ಮರಳಿಕೊಟ್ಟ ಬ್ರಿಟಿಷರವರ ಉದ್ದೇಶಕ್ಕೂ ಭಂಗವುಂಟಾಗುವದಾಗಿರುವದರಿಂದಲೂ, ನೇಟಿವ್ ಅರಸರಿಗೆ ಇಂಗ್ಲಿಷರವರು ಮಾರ್ಗದರ್ಶಕರಾಗಿ ಅವರ ವರ್ತನವನ್ನು ಅನವರತ ನಿಗೇಯೊಳಿಡತಕ್ಕವರಾಗಿರುವದರಿಂದಲೂ, ಅವರಿಗೆ ಸಲ್ಲಬೇಕಾದ ಪಗಡೀ ಪೆಂಬಲಗಿನ ದಾವತಿಗೆ ತಕ್ಕಬಂದೋಬಸ್ತನ್ನು ಕಲ್ಪಿಸಿಕೊಳ್ಳಬೇಕಾದದ್ದು ಅವರ ಕಾರ್ಯವಾಗಿರುವದರಿಂದಲೂ, ಪ್ರಕೃತಸಂದರ್ಭದಲ್ಲಿ ಮೆ॥ಗರ್ಡಿಲೆಸ್ಟೋನ್‌ಯವರು ಸ್ವಲ್ಪಕಾಲ ವಿಲ್ಲಿದ್ದರೂ ಅವರು ಇಲ್ಲಿನ ಆಡಳಿತದಲ್ಲಿ ಪ್ರವೇಶಿಸಿ ನ್ಯಾಯತಃ ಮಾಡಬೇಕಾದ ಕಾರ್ಯಗಳು ಬಹಳವಾಗಿರುತಿವೆ, ಅವು ಯಾವವೆಂದರೆ,

ದುರ್ಭರವಾದ ಪ್ರಕೃತ ಋಣದಲ್ಲಿ ಈಗ ಕೊಡುತಲಿರುವದಕ್ಕಿಂತಲೂ ಅಧಿಕವಾದ ಪಗಡೀ ಹಣವನ್ನು ಕೊಡಲು ಈ ಸಂಸ್ಥಾನಕ್ಕೆ ಸಧ್ಯಃ ಉಪಾಯವೇನಾದರು ಇದೆಯೇ, ಅದು ಯಾವ ವಿಧದಿಂದ ಕೊಡಲ್ಪಡಬಹುದು, ಅಂತಾ ಜಾಸ್ತೀ ಭಾರವನ್ನು ವಹಿಸಲಿಕ್ಕೆ ಪ್ರಜೆಗಳು ಯೆಷ್ಟುಮಟ್ಟಿಗೆ ಅರ್ಹರಾಗಿದಾರೆ, ಇಂಗ್ಲಿಷರವರ ಆಳ್ವಿಕೆಗೂ, ನೇಟಿವ್ ಅರಸರ ಪ್ರಭುತ್ವಕ್ಕೂ ಇರುವ ವ್ಯತ್ಯಾಸವನ್ನು ಜನಗಳು ಯೆಷ್ಟುಮಟ್ಟಿಗೆ ತಿಳಿದುಕೊಂಡು ಯೆಂತಾ ತಾತ್ಪರ್ಯವುಳ್ಳವರಾಗಿದಾರೆ, ಆಗಾಗ್ಯೆ ಪ್ರಾಮಪೀಡಿತವಾಗುವ ಈ ರಾಜ್ಯಕ್ಕೆ ಜಾಸ್ತೀ ತಗಾದೆಯಿಂದ ವುಂಟಾಗುವ ಮುಂದಿನ ಪರ್ಯವಸಾನವೆಂತಾದ್ದು, ಯಾವರೀತಿಯಿಂದ ಅಂತಾ ತಗಾದೆಯನ್ನು ಸಾಧ್ಯವಾದಮಟ್ಟಿಗೆ ತಗ್ಗಿಸಬಹುದು, ಎಂಬ ಅಂಶಗಳು ರೆಸಿಡೆಂಟರವರ ಪರ್ಯಾಲೋಚನಗೆ ಪ್ರಥಮತಃ ವಿಷಯವಾಗಬೇಕಾಗಿವೆ.

ಈ ರಾಜ್ಯವು ಶ್ರೀಮನ್ಮಹಾರಾಜರಿಗೆ ಒಪ್ಪಿಸಲ್ಪಡುವಕಾಲದಲ್ಲಿ ನೇಟಿವ್ ಆಳ್ವಿಕೆಗೆ ಅನುಗುಣವಾಗಿ ಇಲ್ಲಿನ ಆಡಳಿತಗಳನ್ನೆಲ್ಲ ಕ್ರಮಪಡಿಸಿ

ಮಹಾರಾಜರವರ ಸಹಾಯಾರ್ಥ ಮಾಡಲ್ಪಟ್ಟ ಏರ್ಪಾಡುಗಳೆಲ್ಲವು ಇಂಡ್ಯ ಗವರ್ನಮೆಂಟಿನವರ ತಾತ್ಪರ್ಯಾನುಗುಣವಾಗಿ ನಡೆಯುತಿವೆಯೇ, ಇಂಡ್ಯ ಗವರ್ನಮೆಂಟಿನವರಿಂದ ಮೊಕರರಾದ ಕೌಂಸಿಲರುಗಳು ಯೆಷ್ಟುಮಟ್ಟಿಗೆ ತಮ್ಮ ಕರ್ತವ್ಯವನ್ನು ನಿರ್ಜಯನಾಗಿ ನೆರವೇರಿಸುವದರ ಮೂಲಕ ಮಹಾರಾಜಾ ಸರ್ಕಾರಕ್ಕೆ ಸಹಾಯಕರಾಗಿದಾರೆ, ಮತ್ತು ಇದುವರಿವಿಗೂ ರಾಜಕೀಯಗಳಾದ ಮತ್ತು ಪ್ರಜಾಸಂಬಂಧವಾದ ವಿಷಯಗಳಲ್ಲಿ ಅವರು ಕೊಟ್ಟಿರುವ ಅಭಿಪ್ರಾಯಗಳೆಂತಾವು, ಇವು ಮುಂತಾದ ವಿಷಯಗಳು ರೆಸಿಡೆಂಟರಿಗೆ ಸಾಕ್ಷಾತ್ ಸಂಬಂಧಪಟ್ಟವಲ್ಲದಿದ್ದರೂ ಪ್ರಜೆಗಳಿಗೆ ಕ್ಷೇಮಚಿಂತಕರಾಗಿ ಅವರು ಅವಂ ಪರ್ಯಾಲೋಚಿಸಬೇಕಾದವರಾಗಿದಾರೆ.

ಶ್ರೀಮನ್ಮಹಾರಾಜರವರು ಈ ರಾಜ್ಯಧುರವಂ ಸ್ವತಾ ವಹಿಸಿದಮೇಲೆ ಪ್ರಜೆಗಳ ಯೋಗಕ್ಷೇಮ ವಿಷಯದಲ್ಲಿ ಅನತಿಷ್ಟು ಆಸ್ಥೆಯುಳ್ಳವರಾಗಿದಾರೆಯೋ, ಅವರ ಪ್ರಜಾ ಸಂಬಂಧಕಗಳಾದ ವಿಷಯಗಳಿಗೆ ಅನತಿಷ್ಟು ನಿಗೆ ಕೊಡುತಲಿದಾರೆಯೋ, ಪ್ರಜೆಗಳಿಗೆ ಮಹಾರಾಜರಲ್ಲಿ ಯೆಷ್ಟುಮಟ್ಟಿಗೆ ಪ್ರೀತಕ್ಕೆ ಅವಕಾಶವುಂಟೋ, ಜನಗಳ ಸುಖದುಃಖಗಳು ಯೆಷ್ಟರಮಟ್ಟಿಗೆ ಗೌರವಿಸಲ್ಪಡುತಿವೆಯೋ, ಇಲ್ಲಿನ ರಾಜ್ಯಾಡಳಿತಕ್ಕೆ ಕ್ರಮವಾಗಿ ನಡೆಯುತಾವೆಯೋ, ಈ ವಿಷಯಗಳು ಕೇವಲ ರೆಸಿಡೆಂಟರವರ ಪರಾಮರ್ಶೆಗೆ ಯೋಗ್ಯವಾದವಾಗಿವೆ. ಸರ್ವಿಸ್ ಗಿರ್ವಾಣವವರ ರಾಜ್ಯಾಂತ್ರಕ್ರಮದಿಂದ ಈ ದೇಶವನ್ನು ಯಾರು ಹೆಚ್ಚಿಗೆ ತಿಳಿದಿದ್ದರುವರು, ಅಷ್ಟಕೆ ಸುಧಾರಿಸಲ್ಪಡದವರು ಇಲ್ಲಿ ಗ್ರಾಮಾದಿ ವಿಷಯಗಳ ಸ್ವಾದೀನತೆಯರಿಗೆ ಲ್ಲ ಕ್ರಮೇಣ ಬರಬೇಕಾಗಿರುವುದರಿಂದ ಅವರು ಕೇವಲ ಅವ್ಯಸ್ತರಾಗಿರುವದೂ ಪ್ರಸಿದ್ಧವಾದ ವಿಷಯವಾಗಿರುತಿವೆ. ಇಲ್ಲಿನವರ ಪಕ್ಷಪಾತಿಯ ಸ್ಥಳ ಇದುವರ್ಯೆಂಬ ಉಪೇಕ್ಷಿಸಿ ಇಲ್ಲಿನ ಉನ್ನತಾಧಿಕಾರಗಳೆಲ್ಲ ಅನ್ಯದೇಶದಿಂದ ಜನಗಳನ್ನು ಕರೆಸುವ ವಾಡಿಕೆಯು ಪ್ರಕೃತ ದಿವಾನರ ಕಾಲದಲ್ಲಿ ಅಧಿಕವಾಗುತಲಿದೆ. ಇದರ ದೆಸೆಯಿಂದ ಅಧಿಕಾರಿಗಳಲ್ಲಿ ಪರಸ್ಪರ ಅನ್ಯೋನ್ಯ ಕಮತ್ಯಗಳು ಇಲ್ಲದೆಯೂ, ಪ್ರಜೆಗಳ ಯೋಗಕ್ಷೇಮ ಚಿಂತೆಯು ಇಬ್ಬರಿಗೂ ಬೇಡವಾಗಿದೆ. ಇಲ್ಲಿ ಇವೆಲ್ಲವೂ ಮೊತ್ತ ಬಾದಕ ಸಾಮಗ್ರಿಯಾಗಿ ಏರ್ಪಟ್ಟಿರುವದರಿಂದ ಇಲ್ಲಿನ ಆಡಳಿತವು ಕ್ರಮವಾದದಕ್ಕೆ ಅವಕಾಶವಿಲ್ಲವೆ ಇದೆ. ಹೊಸರೆಸಿಡೆಂಟರು ತಕ್ಷಣವಾದ್ದರಿಂ, ಈ ಸ್ಥಿತಿಯ ಕಾಲದಿಂದ ಅನುಸರಿಸಲ್ಪಡುವ ಆಡಳಿತದ ಈ ಪದ್ಧತಿಯನ್ನು ನಿಲ್ಲಿಸಿ, ವಿದ್ಯಾವಂತರಾದ ಸ್ವದೇಶೀಯರ ಹಕ್ಕುದಾರಿಯು ಉಪೇಕ್ಷಿಸಲ್ಪಡದಕ್ಕೆ ವ್ವಲ್ಲಿದೆ. ಮುಂದೆ ಈ ರಾಜ್ಯಕ್ಷೇಮಕ್ಕೆ ಅವರೇ ಆಧಾರವಾದ ತಿಲೂ, ಮಹಾರಾಜರಿಗೆ ತಿಳಿಸಿ ಕ್ರಮಪಡಿಸಬೇಕಾದ್ದು ಅತ್ಯ ಕರ್ತವ್ಯವಾಗಿರುತಿವೆ. ಇವುಗಳನ್ನೆಲ್ಲ ಮೆ॥ ಗರ್ಡನ್ ಸ್ಟರವರು ವಿಚಾರಪೂರ್ವಕ ತಿಳಿದು ಉಚಿತವಾಗಿ ನಡಿಸಬೇಕೆಂಬದೇ ರಿತ್ಯಂದೊಳು ಅವರಿಗೆ ತಿಳಿಸಬೇಕಾದ ಮುಖ್ಯ ವಿಷಯವಾಗಿರುತಿವೆ.

VILLAGE ESTABLISHMENTS

ಈ ಇತ್ಯ ದೇಶದ ಹಳ್ಳಿಯಾಗದಲ್ಲಿಯೂ ಗ್ರಾಮನೌಕರಿ ಪದ್ಧತಿಯು ಒಂದೇ ವಿಧವಾಗಿರುವದರಿಂದ ಅದು ಪೂರ್ವದ ಮನು ಮಾನಾವಿತರ ಕಾಲದಿಂದಲು ಸಾಗುತಿದ್ದಾಗಿರುವುತ ತಿಳಿಯಬರುತಿದೆ. ಕೆಲವು ಹಳ್ಳಿಗಳ ಕೆಲಸವವರು ಹೊಲೂ, ಮತ್ತು ಕೆಲವು ಗ್ರಾಮನೌಕರರೂಗಳೂ, ಅವರಲ್ಲಿ ಸಾನಭೋಗ ಪಟೇಲರು ಗ್ರಾಮಾಧಿಕಾರಿಗಳೆಂತ ಲೂಮಿಗಡಿಸಲ್ಪಟ್ಟಿರುತ್ತಾರೆ. ಮುನ್ನಿನ ಹಳ್ಳಿ ಪದ್ಧತಿಯಿಂದ ಗ್ರಾಮನೌಕರರಿಗೆ ಸಲ್ಲುತಿದ್ದ ಮಾನ್ಯ, ಮೇರೆ, ಆಯಾ ಮಿರಾಸಿ, ಇವುಗಳನ್ನು ತಪ್ಪಿಸಿ ಒಂದು ಬಗೆಯಾದ ನಗದ್ ಸಂಬಳ ಸಿದ್ಧಪಡಿಸಬೇಕಾಯಿತು. ತೋಟಿ ತಳವಾರ್ ನೀರುಗಂಟಿ ಯೆಂಬ ಗ್ರಾಮ ನೌಕರರ ವಿಷಯದಲ್ಲಿ ಪೂರ್ವ ಪದ್ಧತಿಯಂತೆ ಈ ದೇಶದಲ್ಲಿ ಅವರಿಗೆ ರೈತರಿಂದ ಧಾನ್ಯ ಕೊಡಿಸುವಂತೆ ಸಾಬಕ್ ಚೀಫ್ ಕಮ್ಮಿಷನರವರ ಕಾಲದಲ್ಲಿ ಇಂಡ್ಯ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ. ಗ್ರಾಮಾಧಿಕಾರಿಗಳ ವಿಷಯದಲ್ಲಿ ಕಚ್ಚಾ ಪ್ಯಾಟ್ಗ್ಲ, ಪಕ್ಕಾ ಪ್ಯಾಟ್ಗ್ಲ ಯೆಂದು ಯೆರಡುವಿದ ಯೇರ್ಪಾಡಾಗಿರುತಿದೆ. ಕಚ್ಚಾ ಪ್ಯಾಟ್ಗ್ಲ ಯೆಂಬದು ಲೆಕ್ಕಗಳಾಗಿ ಜಮಾಬಂದಿ ಪ್ರಾಸ್ಯೆಸಿದವೇಲೆ ಏರ್ಪಡುವ ಇನಸ್ಪ್ ವಾರ್ ಮೊಬಲಗು ಗವರ್ನಮೆಂಟಿನವರಿಂದ ಮಂಜೂರಾಗುವತನಕ ಕೊಡಲ್ಪಡುವ ಹಂಗಾಮಿ ಮೊಬಲಗಾಗಿರುತಿದೆ. ಬಳಿಕ ಕೊಡಲ್ಪಡತಕ್ಕದ್ದು ಪಕ್ಕಾ ಪ್ಯಾಟ್ಗ್ಲ ಯೆನಿಸಿಕೊಳ್ಳುವದು.

ಈ ರಾಜ್ಯವು ಶ್ರೀಮನ್ಮಹಾರಾಜರಿಗೊಪ್ಪಿಸಲ್ಪಟ್ಟ ಬಳಿಕ ಅದು ದಿವಾನರವರ ಆಡಳಿತಕ್ಕೆ ಪಾತ್ರವಾದದರಿಂದಲೂ ಇಂಗ್ಲಿಷ್ ವಿದ್ಯಾ ನಿಪುಣರಾದವರನ್ನೇ ಚುನಾಯಿಸಿ ಹಾಸ್ಟ್ರೇಟಿವ ಕೊಡಬೇಕಾಗಿ ಬಂದದರಿಂದಲೂ ಈ ಬಡ ನೌಕರರಿಗೆ ಸಲ್ಲಬೇಕಾದ ತಲಬ್ ದುಬಾರೇ ಖರ್ಚುಂದು ಬಾನಿಸಲ್ಪಟ್ಟು ಯಾವವಿಧವಾದ ಪ್ಯಾಟ್ಗ್ಲಯೂ ಅವರಿಗೆ ಇಲ್ಲದೆಹೋಯಿತು. ಬುಜರಿ ಜನಿಗೆ ಕೊಟ್ಟು ಬಗೆ ಹರಿಸಿಕೊಳ್ಳಬೇಕೆಂದು ಈಗಿನ ದಿವಾನರವರು ಆಲೋಚಿಸುತಲಿದಾರೆ. ಆ ಜಮೀನುಗಳನ್ನು ವಿಂಗಡಿಸುವಿಕೆ ಸ್ವಂತ ಲ ಗಾವಡಿಯಿಂದ ಅಬಾಪ್ ಮಾಡುವವಕ್ಕೂ ಯೆಷ್ಟಕಾಲ ಬೇಕಾಗುವದೋ ಅದನ್ನೂ ಹಿಸ ಸಾ ವ್ಯವಲ್ಲವು. ಜನ್ಮಾಂತರಗಳನ್ನೂ ಮಹಜರು ಪರಾಗತವಾದ ಪಕ್ಕಾ ವಾರಿಯನ್ನು ಅಂಗೀಕರಿಸುವ ಹಿಂತ ಅವಸರ ಆಕ್ಷೇಪಿಸಿಯೊಳು ಈ ಜನ್ಮ ವ್ಯಪೇಕ್ಷಗಾಗ ನೌಕರೀವಾದುತಲಿರತಕ್ಕವರೇ ಫಲವನ್ನನುಭವಿಸಬೇಕೆಂಬ ನಿಯಮವಿರುವಂತೆ ತೋರುವದಿಲ್ಲವು. ಗ್ರಾಮ ನೌಕರರು ಜೀವಿಲ್ಲದ ಕೆಲಸ ಹ್ಯಾಗೆ ಜರಗಬೇಕೋ ಅವರ ಕ್ರಮವನ್ನು ಈಗ ಸರ್ಕಾರದವರು ತಮ್ಮಾಳು ನಿದರ್ಶಿಸಿಕೊಂಡಿರಬಹುದು. ಈ ಬಡಜನಗಳು ಪಿತ್ರಾರ್ಜಿತ ಮಾಡುವದಕ್ಕೆ ಸಹ ಅವಕಾಶವಿಲ್ಲದೆ ತಾಲ್ಲೂಕು ಕಛೇರಿಯಲ್ಲಿ ಹಾಜರಿದ್ದು ನೌಕರೀ ಮಾಡಬೇಕಾಗಿದೆ. ಈ ಸುಸ್ಥಾನದ ನೌಕರರ ಪ್ರತಾಪ ಬಹಳವಾಗಿದೆ ಯೆಂಬದಕ್ಕೆ ಗ್ರಾಮ ನೌಕರರೇ ಮೊದಲಿನವರಾಗಿದಾರೆ. ಅದೋಗದಂತ್ತಿ ಕದಮುಯಾಗಿದೆ ಯೆಂಬದಕ್ಕೆ ಇಂತಾ ಜಾಡೀನೆ ದಲಿತವಾರರಿಗೆ ಮಾತ್ರ ತಲಬ್ ಸಲ್ಲದೆ ಇರುವದೇ ಮುಖ್ಯ ನಿದರ್ಶನವಾಗಿರುತಿವೆ. ಸರ್ಕಾರಕ್ಕೆ ಜಾಸ್ತಿ ಖರ್ಚಾಗುವದೆಂದೆ ಬಾಬದನ್ನು ಯೆಲ್ಲರೂ ಒಪ್ಪಿಕೊಂಡಾಗ್ಯೂ ಸುಸ್ಥಾನಕ್ಕೆ ಉಂಟಾಗಿರುವ ಅನುಭವತ್ತಿಗೆ ಈ ಬಡ ನೌಕರರನ್ನು ಮಾತ್ರ ಗುರಿಮಾಡುವದು ಉಚಿತವಲ್ಲವು.

Occasional Notes
ಸಮಯೋಚಿತ ಟಿಪ್ಪಣಿಗಳು.

Reduction of establishments in the Bellary Railway.—ಯುದ್ಧ ಸನ್ನಾಹಗಳ ಮೂಲಕ ದ್ರವ್ಯಾನುಪಪತ್ತಿ ಯುಂಟಾಗಲು, ಈಗ ಬಳ್ಳಾರಿಯಿಂದ ಹಾಕಲ್ಪಡುತಲಿರುವ ರೈಲ್ವೆ ಮಾರ್ಗದ ಲವಾಜಮೆಯು ಕಡಮೆ ಮಾಡಲ್ಪಡುವದಲ್ಲದೆ ಕಾಮಗಾರಿಯೂ ಸುಸ್ತಿಯಿಂದ ನಡೆಸಲ್ಪಡುವದು.

Purchase of jewels—ಈಚಿಗೆ ಕೆಲವು ದಿವಸಗಳ ಹಿಂದೆ ಕಲ್ಕತ್ತೆಯಲ್ಲಿ ರತ್ನವ್ಯಾಪಾರದೊಳು ಕೇವಲ ಪ್ರಸಿದ್ಧರಾದ ಮೆಸ್ಸರ್ಸ್ ಹಾಮಿಲ್ಟನ್ ಕಂಪೆನಿಯವರಿಂದ ಹರಾಜು ಹಾಕಲ್ಪಟ್ಟ ಜವಾಹಿರ್ ನಗಗಳಲ್ಲಿಕೆ, ಪರ್ಬಂಗಾ ಮಹಾರಾಜರವರಿಗಾಗಿ, ಅವರ ಪರ್ಸನಲ್ ಆಸಿಸ್ಟೆಂಟರವರಿಂದ ೯೩,೦೦೦ ರೂಪಾಯಿಗಳಿಗೆ ಜವಾಹಿರನಗಗಳು ಕೊಂಡುಕೊಳ್ಳಲ್ಪಟ್ಟವು.

A liberal contribution.—ಮದರಾಸಿನಲ್ಲಿ ಈಚಿಗೆ ಮೃತಪಟ್ಟ ಮೆ॥ ಜಾರ್ಜ್ ದರ್ಕ್ ಯೆಂಬವರ ಜ್ಞಾಪಕಾರ್ಥ ಯಾವದಾದರೊಂದು ಶಾಶ್ವತವಾದ ಕಾರ್ಯವಂ ಮಾಡಬೇಕೆಂದು ಅಲ್ಲಿನವರು ಯೋಚಿಸಿ, ಅವರ ಖರ್ಚಿನಬಗ್ಗೆ ಏರ್ಪಡಿಸಿದ ಫಂಡಿಗೆ ಘನವಂ ಹೊಂದಿದ ವಿಜಯನಗರದ ಮಹಾರಾಜಗವರು ೫೦೦ ರೂಪಾಯಿಗಳು ಕೊಟ್ಟಂತೆ ತಿಳಿದಿವು.

An appointment disallowed—ಪುನೇ ಸ್ಮಾಲ್ ಕಾಜ್ ಕೋರ್ಟ್ ಜೆಡ್ಜಿಯಾದ ಹಾನರೆಬಲ್ ಎಂ. ಜಿ. ರಾನೇಡ್ ಯೆಂಬವರು ಡಖನ್ ಕಾಲೇಜ್‌ನಲ್ಲಿ ನ್ಯಾಯನಿಬಂಧನೆಗಳ ಪ್ರಾಸಂಗಿಕರಾಗಿ ಮೊಕರರ್ರ್ಮಾಡಲ್ಪಟ್ಟ ವಿಷಯದಲ್ಲಿ, ಒಬ್ಬ ಜೆಡ್ಜಿಯು ತನ್ನ ನ್ಯಾಯಸ್ಥಾನವಿನಾ ಬೇರೆ ಯಾವ ಸ್ಥಾನದಿಂದಲೂ ನ್ಯಾಯವನ್ನು ವಿವಿಸುವದು ಅನುಚಿತವೆಂಬ ಕಾರಣದಮೇಲೆ, ಇಂಡ್ಯ ಗವರ್ನಮೆಂಟಿನವರು ಅವರ ಮೊಕರರಾತಿಯಂ ಒಪ್ಪಿರಿಲ್ಲವು.

The Afghan losses at Panjde—ಈಚಿಗೆ ಆಫ್ಘಾನ್‌ದೇಶೀಯರಿಗೂ ರಷ್ಯಯಾಜನಗಳಗೂ ನಡೆದ ಕಲಹದಲ್ಲಿ ಆಫ್ಘಾನ್‌ದೇಶೀಯರಕಡೆ ಮೃತಪಟ್ಟವರ ಮತ್ತು ಘಾಯತಗಿದವರ ಸಂಖ್ಯೆಯು ಕರಾರ್ವಾಕಾ ತಿಳಿಯಬರುತಿದೆ. ಅದರಲ್ಲಿ ೨೩೩ ಮಂದಿ ಕೊಲ್ಲಲ್ಪಟ್ಟರು, ೧೦೮ ಮಂದಿಗೆ ಜಖಂಗಳಾದವು, ೭೩ ಮಂದಿ ಪತ್ತೇಯಿಲ್ಲವು. ೫೦ ಮಂದಿ ಬಹಿರಂಗವಾಗಿ ನೌಕರಿಯಬಿಟ್ಟುಹೊರಟುಹೋದರು, ೧೭೬ ಮಂದಿ ಚದರಿಹೋಗಿ ಕ್ರಮೇಣ ಹಿಂದಾತಿಸೇರಿದರು.

Delay in the publication of Birth day Gazette.—ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ವರ್ಷವರ್ಧಂತಿ ಉತ್ಸವವು ಇಂಡ್ಯದೇಶದಲ್ಲಿ ನಡಸಲ್ಪಟ್ಟದಕ್ಕಿಂತಲೂ ಸ್ವಲ್ಪ ಕಾಲಾತೀತವಾಗಿ ಇಂಗ್ಲಾಂಡಿನಲ್ಲಿ ಆಚರಿಸಲ್ಪಡುವದರ ಮೂಲಕ ಮಹಾರಾಜ್ಞೀಯವರ ಮಂದಿರಾತಿಯು ಇದುವರಿವಿಗೆ ಬಾರದೆ ಸದರೀ ದಿನದೊಳು ಇಲ್ಲಿಯಾನಲ್ಲಿ ಸಾಧಿಷ ಆಗಬೇಕಾದ ಗೆಜೆಟ್ ಪತ್ರಿಕೆಯು ಅಚ್ಚಿಸಲ್ಪಟ್ಟಿರುತಿವೆ. ಸದರೀ ವಿಶೇಷ ದಿನದೊಳು ಪ್ರತಿಸಾಲವಸ್ತ್ರರದಲ್ಲೂ ಅವರವರಿಗೆ ಉಂಟುಮಾಡಲ್ಪಡುವ ಗೌರವಾ ಬಿರುದಾದ ಪ್ರಕಟನೆಗಳು ಪ್ರಕಟಿಸಲ್ಪಡುವವು.

Peace between France and China—ಫ್ರೆಂಚರವರಿಗೂ ಚೇನಾದೇಶೀಯರಿಗೂ ಸಮಾಧಾನವನ್ನು ಕುರಿತ ಮಾತುಗಳು ಸುಸ್ತಿಯಿಂದ ನಡೆಯುತಲಿವೆ. ಇದು ಹೀಗಿರುವಲ್ಲಿ ಫ್ರೆಂಚ್ ನಾವಿಕಸೇನಾಧಿಪತಿಯವರಾದ ಕಾರ್ಬೆಯವರು, ಎಲ್ಲರೂ ಐಕ್ಯವಾಗಿಯೂ, ತೃಪ್ತಿಕರವಾಗಿಯೂ ವ್ಯವಸ್ಥೆಯಾಗಿ, ಹಾಗೆ ನಿಷ್ಕಪಟವಾದ ತಹನಾಮೆಗೆ ಫ್ರೆಂಚ್‌ರಾಜ್ಯದಮಂತ್ರಿಸಮಾಜಿಕರು ಕೈಬರಹಮಿರುವತನಕ, ನಾವಿಕಸೇನೆಯನ್ನು ಚೇನಾಸಮುದ್ರದಲ್ಲೇ ಇಟ್ಟುಕೊಂಡಿರಬೇಕೆಂದು ತಮ್ಮ ಗವರ್ನಮೆಂಟಿನವರು ಕೊಟ್ಟ ಹುಕುಂ ಅನುಸರಿಸಿ ತಮ್ಮನಾವಗಳನ್ನು ಸದರೀ ಸಮುದ್ರದಲ್ಲೇ ಇಟ್ಟುಕೊಂಡಿರುತ್ತಾರೆ.

Earthquake—ಕಳೆದತಿಂಗಳ ೩೦ನೇ ತಾರೀಖಿನಲ್ಲಿ ಕಾಶ್ಮೀರದೇಶದೊಳಗಣ ಶ್ರೀನಗರದಲ್ಲಿ ಬಲವಾದ ಭೂಕಂಪ ವುಂಟಾಗಿ, ಮಹಾರಾಜರವರ ಸೇನೆಯ ಬ್ಯಾರೆಕ್ಸ್ ಬಿದ್ದು ಅದರೊಳಿದ್ದ ನೂರುಮಂದಿ ಶಿಪಾಯಿಗಳೂ ನೂರ ಐವತ್ತು ಕುದುರೆಗಳೂ ಕೆಳಗೆ ಸಿಕ್ಕಿಕೊಂಡು ನಾಲ್ವತ್ತಾರುಮಂದಿ ಮೃತಪಟ್ಟರು, ಯೆಪ್ಪತ್ತನಾಲ್ಕು ಕುದುರೆಗಳು ಸತ್ತುಹೋದವು, ಐವತ್ತುಮಂದಿ ಶಿಪಾಯಿಗಳಿಗೆ ಬಲವಾದ ಘಾಯಗಳು ತಗಲಿದವು. ಪಟ್ಟಣದೊಳು ನಾಲ್ವತ್ತೊಂದುಮಂದಿ ಸತ್ತುಹೋದರು, ಘಾಯಗಳು ಆದಕ್ಕೆ ಯೆಣ ದರಷ್ಟು ಮಂದಿಗೆ ಜಖಂಗಳಾದವು. ಯೂರೋಪಿಯರ್ ಜನಗಳಲ್ಲಿಕೆ ಯಾರಿಗೂ ಹಾನಿಯಿಲ್ಲವು. ಅರಮನೆಯಲ್ಲಿಕೆ ಅರ್ಧಕ್ಕಿಂತಲೂ ಅಧಿಕವಾಗಿ ಬಿದ್ದುಹೋಯಿತು. ರೆಸಿಡೆಂಟರವರ ಆವಾಸವು ರಿಪೇರಿಗೆ ಸಹ ಅವಕಾಶವಿಲ್ಲದೇ ಪೂರಾ ಬಿದ್ದುಹೋಯಿತು. ಮೂವತ್ತು ದಫಾ ಕಂಪ ವುಂಟಾದಂತೆ ಲೆಕ್ಕ ಮಾಡಲ್ಪಟ್ಟಿತು.

A graceful act—ಈಚಿಗೆ ಯೊಂದುದಿನ ಮುಂಬೈಯಲ್ಲಿ ಒಬ್ಬ ಹುಡುಗಿಯು ಮೈಮೇಲೆ ಒಡವೆಗಳು ಹಾಕಿಕೊಂಡಿದ್ದದು ನೋಡಿ ಒಬ್ಬ ಮುಸಲ್ಮಾನನು ಸದರೀ ಹುಡುಗಿಯಂ ಅಪಹರಿಸಿಕೊಂಡು ಹೋಗುವದಕ್ಕೆ ಪ್ರಯತ್ನಪಡಲು ಅದಂನೋಡುತಲಿದ್ದ ಮೆ॥ ಪಟೇಲ್‌ಯೆಂಬವರ ಭಾರ್ಯೆಯವರಿಗೆ ಸುಳಿಯ ವುಂಟಾಗಿ ಕೂಡಲೇ ಪೋಲೀಸ್‌ನವರಿಗೆ ವರ್ತಮಾನಕೊಟ್ಟು ಸದರೀ ಮುಸಲ್ಮಾನನನ್ನು ದಸ್ತಗಿರಿಮಾಡಿಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಚಾರ್ಜ್ ಮಾಡಿಸಿದ್ದಲ್ಲದೆ ಕೃತಿಯಂ ವರಿಗಳಿಸಿ, ಪಾರ್ಸೀ ದೊಡ್ಡ ಮನುಷ್ಯರು ಕೆಲವರು ಸೇರಿ ಚಂದಾಮೂಲಕ ದ್ರವ್ಯದಮಾಡಿಸಿ ಸದರೀ ಹೆಂಗಸಿಗೆ ಒಂದು ಆಭರಣವಂ ಮಾಡಿಕೊಡಬೇಕೆಂದು ಪ್ರಯತ್ನಪಡುತಲಿದಾರೆ.

Postal bags lost or stolen.—ಕಳೆದತಿಂಗಳ ೨೬ನೇ ತಾರೀಖ್ ರಾತ್ರಿ ಗುಡಿಯಾತಂ ರೈಲ್ ಸ್ಟೇಷನಲ್ಲಿ ಪೋಸ್ಟಾಫೀಸ್ ಜವಾನನು, ರಿಜಿಸ್ಟರಾದ ಮತ್ತು ರಿಜಿಸ್ಟರಿಲ್ಲದ ಲಕೋಟೆಗಳು, ಬಸ್ತುಗಳು ಇವುಗಳ ಅತಕವುಳ್ಳ ಯೆರಡು ಚೀಲಗಳು ತಂದು ಪ್ಲಾಟ್‌ಫಾರಂನಲ್ಲಿ ಇಟ್ಟು ನಾಲ್ಕು ಹೆಜ್ಜೆ ಆಚೆ ಹೋಗಿ ಬರುವದರೊಳಗಾಗಿ ಸದರೀ ಚೀಲಗಳನ್ನು ಯಾರೊ ಕದ್ದುಕೊಂಡು ಹೋಗಿರಲು ಸದರೀ ಜವಾನನು ಕೂಡಲೇ ಪೋಲೀಸ್‌ನವರಿಗೆ ವರ್ತಮಾನಕೊಟ್ಟನು, ಪರಂತು ಇದುವರಿವಿಗೆ ಕಳವಾದ ಚೀಲಗಳು ಪತ್ತೇಯಾಗಲಿಲ್ಲವು.

Two officers struck by lightning.—ಈಚಿಗೆ ಯೊಂದುದಿನ ಸಾಯಂಕಾಲ ನಾಲ್ಕುಘಂಟೆಗೆ ಸಿಕಂದರಾಬಾದ್‌ನಲ್ಲಿ ೧೮ನೇ ಹುಜಾರ್ಸ್ ಸೇನೆಗೆ ಸೇರಿದ ಇಬ್ಬರು ಆಫೀಸರ್‌ಗಳು, ಸಿಡಿಲು ಮಿಂಚುಗಳೊಡನೆ ಕೂಡಿ ಬಲವಾಗಿ ಮಳೆ ಬೀಳುತ್ತಿರುವಲ್ಲಿ, ಒಂದು ಮನೆಯೊಳು ಬಿಲ್ಲಿಯಾರ್ಡ್ಸ್ ಯೆಂಬ ಆಟ ಆಡುತ್ತಿರುವಾಗ ಸಿಡಿಲು ಹೊಡದು ಲ್ಯುಟನೆಂಟ್ ಜೆಂಟ್ಲಿಯೆಂಬವರ ತಲೆಯಮೇಲೆ ಬಿದ್ದು ಆತನು ಕೂಡಲೇ ಮೃತಪಟ್ಟನು. ಲ್ಯುಟನೆಂಟ್ ಸೀಮೋರ್ ಯೆಂಬಾತನಿಗೆ ಬೆನ್ನಿಗೆ ತಗಲಿ ಆತನು ಒಂದು ಘಂಟೆಯಮೇಲೆ ಮೃತಪಟ್ಟನು. ಸದರೀ ಇಬ್ಬರು ಆಫೀಸರ್‌ಗಳೂ ಸಣ್ಣ ವಯಸ್ಸಿನವರಾಗಿಯೂ ವರ್ಷ್ಷಗಳಾಗಿಯೂ ಇದ್ದರು. ಇಂತವರಿಗೆ ಈರೀತಿಯಾಗಿ ಅಕಾಲಮರಣ ಪ್ರಾಪ್ತವಾದಬಗ್ಗೆ ವಿಷಾದಿಸುತ್ತೇವೆ.

The Acting Resident of Nepal—ಕಳೆದತಿಂಗಳ ೨೦ನೇ ತಾ॥ನಲ್ಲಿ ಕಾಟಮಾಂಡೂಯಿಂದ ಬಂದ ದೇಶದಿಂದ ಒಬ್ಬ ಬಾತಮೀದಾರನು ಅಲಹಾಬಾದ್ ಪತ್ರಿಕೆಗೆ ಬರೆದಿರುತ್ತಾನೇನೆಂದರೆ—ಮಾಹೇಮ ಜಕೂನು ೨೦ನೇ ತಾರೀಖಿನದಿನ ಕರ್ನಲ್ ಬೆರಿಕ್‌ರೇ ಯೆಂಬವರು ಇಲ್ಲಿಗೆ ಬಂದು ಆ ಮಾರನೆಯ ದಿನ ರೆಸಿಡೆಂಟ್ ಕೆಲಸದ ಛಾರ್ಜನ್ನು ಮೇಗಸ್ಸೆಲ್ ಸ್ಟರ್‌ಯವರಿಂದ ವಹಿಸಿದರು. ಮೇಗಸ್ಸೆಲ್‌ಸ್ಟರ್‌ಯವರು ಈದಿನ ಪೆಳಗ್ಗೆ ಮೈಸೂರಿಗೆ ಪ್ರಯಾಣವಾದರು. ಹೊಸ ರೆಸಿಡೆಂಟರವರು ಆಗಮನಾರ್ಥ ಇಲ್ಲಿ ನಡೆಸಲ್ಪಟ್ಟ ವಿಧಾಯಿಗಳು ಕೇವಲ ಶ್ಲಾಘ್ಯವಾಗಿತ್ತು. ಕಾಟಮಾಂಡುವಿಗೆ ಒಂದುದಿನ ಪ್ರಯಾಣ ಫಾಸಲೆಯುಳ್ಳಿರುವ ಶೀಶಗಿರಿಯೆಂಬ ಪರ್ವತದ ಮೇಲ್‌ಭಾಗದಲ್ಲಿ ಇಬ್ಬರು ಮಿಲಿಟರಿ ಆಫೀಸರಗಳು ರೆಸಿಡೆಂಟರನ್ನು ಸಂಧಿಸಿ ಶಿಬಿರದ ಆವರನ್ನು ಉಚಿತ ಮರ್ಯಾದೆಗಳೊಡನೆ

ರಾಜಧಾನಿಗೆ ೪ ಮೈಲಿ ದೂರದೊಳಿರುವ ಘಾಂಕೋಟೆ ಯೆಂಬ ಗ್ರಾಮಕ್ಕೆ ಕರೆದುಕೊಂಡುಬಂದರು. ವಸುಮತೀ ನದಿಯುಬಳಿ ವಿಸ್ತಾರ ರಮಣೀಯವಾದ ಚಪ್ಪರದಲ್ಲಿ ಪ್ರಧಾನ ಮಂತ್ರಿಯವರೂ ಸಂಸ್ಥಾನಕ್ಕೆ ಸೇರಿದ ಮುಖ್ಯಾಧಿಕಾರಿಗಳೂ ಕಾದಿದ್ದು ರೆಸಿಡೆಂಟರನ್ನು ಬರಮಾಡಿಕೊಂಡರು. ಕರ್ನಲ್ ಬರ್ಕ್ಲೀಯವರು ಗಾಡಿಯಿಂದಿಳಿದು ಪ್ರಧಾನಮಂತ್ರಿಯವರಿಗೆ ಅಭಿವಂದಿಸಲು ಅವರು ಸ್ವಾಗತ ಪೂರ್ವಕವಾದ ಕುಶಲ ಪ್ರಶ್ನೆಗಳಂಗೈದು, ತಮ್ಮ ಸನ್ನಿಹಿತವರ್ತಿಗಳಾಗಿದ್ದ ಅಧಿಕಾರಿಗಳಿಗೆಲ್ಲ ಅವರ ಭೇಟೀ ಮಾಡಿಸಿದರು ತರುವಾಯ ಯೆಲ್ಲರಿಗೂ ಪುಷ್ಪತಾಂಬೂಲ ಕೊಡಲ್ಪಟ್ಟಬಳಿಕ ರೆಸಿಡೆಂಟರು ರೆಸಿಡೆನ್ಸಿ ಬಂಗ್ಲೆಯಬಳಿ ಮ॥ ಗವರ್ನರ್ಜನ್ರಲ್‌ಯವರಿಂದ ಬರಮಾಡಿಕೊಳ್ಳಲ್ಪಟ್ಟ ಪ್ರತಿಯೊಂದು ಸುದಬಾದಲ್ಲಿಯೂ ಗೌರವಾರ್ಥ ಅಲ್ಲಿಯಲ್ಲಿ ಫಿರಂಗಿಗಳು ಕಾದಿದ್ದು ರೆಸಿಡೆಂಟರಿಗೆ ಸಾಲ್ಯೂಟ್ ಮಾಡಿದವು ಈಗ್ಗೆ ಹದಿಮೂರು ಸಂವತ್ಸರಗಳ ಕಾಲವಾಗಿ ಮ॥ ಗವರ್ನರ್ಜನ್ರಲ್‌ಯವರು ನೇಪಾಳದಲ್ಲಿ ಬ್ರಿಟಿಷ ರೆಸಿಡೆಂಟ ಕೆಲಸದೊಳಿದ್ದುದರಿ ದೆಲ್ಲೂ ಯೆಲ್ಲರ ಪ್ರೀತಿ ವಿಶ್ವಾಸಗಳಿಗೂ ಅವರು ಪಾತ್ರರಾಗಿದ್ದದರಿಂದಲೂ ಈದೇಶವನ್ನವರು ಬಿಟ್ಟಗಲುವದಕ್ಕಾಗಿ ಅನೇಕರು ವಿಷಾದಿಸಿದರು, ಎಂಬದು

— —

Distress in Burdwan — ಭರದ್ವಾನ್ ಮತ್ತು ಭೀರ್‌ಭೂಮ್ ಯೆಂಬ ಪಟ್ಟಣಗಳೊಳು ದಿನೇದಿನೇ ದುರ್ಭಿಕ್ಷವು ಬಲವಾಗುತ ಆಹಾರಾಭಾವದಿಂದಲೂ ಆತ್ಮಹತ್ಯೆಯಿಂದಲೂ ಅನೇಕರು ಪ್ರಾಣಗಳಂ ಹೋಗಲಾಡಿಸಿಕೊಳ್ಳುವಂತೆ ತಿಳಿಯಬರುತಿದೆ

— —

Recognition of liberality — ಮದರಾಸ್‌ನಲ್ಲಿನ ಅರ್ಬತ್‌ನಾಟ್ ಕಂಪೆನಿಯ ದುಬಾಷ್ ಮ॥ ರಾಮಸ್ವಾಮಿಮೊದಲಿಯಾರ್ರವರು, ಕಳೆದ ಕ್ಷಾಮಕಾಲದಲ್ಲೂ ಅವರವರುವಾಯಿಯೂ ಮಾಡಿದ ಬಹುವಿದ ಧರ್ಮಕಾರ್ಯಗಳನ್ನುಕೇಳಿ ಅನುಮೋದಿಸಿ, ಇಂಡ್ಯಗವರ್ನಮೆಂಟನವರು ನವರೀಬೊತ್ತ ಮನುಷ್ಯರಿಗೆ ಕಂಪಾನಿಯನ್‌ಆಫ್‌ದಿ ಇಂಡಿಯನ್ ಯಂಪೈರ್‌ಯೆಂಬ ಪ್ರಶಸ್ತಿಯಂ ದಯಪಾಲಿಸಿದರೆಂದು ಕೇಳುವದಕ್ಕೆ ಬಹಳಸಂತೋಷಿಸುತ್ತೇವೆ

A KANARESE NOVEL

"ಮುಗ್ಧೇಕ ಸುದಿನೀ"*

[illegible]

* [illegible]

[illegible]

LOCAL AND PROVINCIAL NEWS

[illegible]

Cholera — [illegible]

Death by trampling — [illegible]

The weather — [illegible]

Acquittal — [illegible]

[illegible]

Mur[illegible] — [illegible]

TELEGRAPHIC SUMMARY

[illegible]

[illegible]

ನೋ[illegible]

ಇದರಕೆಳಗೆ [illegible] ಸಾಕಿರುವವರು ಸಮಸ್ತ ಜನರಿಗೆ [illegible] ತಿಳಿಸುವದೇನೆಂದರೆ — ಬಂಗಳೂರು [illegible] ಯಲ್ಲಿರುವ ಕುರುಬರ [illegible] ಮಲ್ಲಣ್ಣ [illegible] ನ ತಿಮ್ಮಪ್ಪನೆಂಬ [illegible] ತನ್ನ [illegible] ನ್ನೀಸಾ [illegible] ಗಳು ಮುಂತಾದ್ದು ಇರುವಹಾಗೆ ತಿಳಿಯುತ್ತೆ. ಈ ಹುಡುಗ ಇನ್ನು ಮೈನರ್ [illegible] ವರುಷ [illegible] ವಯಸ್ಸುಳ್ಳವನು [illegible] ಈ [illegible] ಯಾರು [illegible] ವಾದೀನಿ ಮಾಡಿದಾಗ್ಯೂ ಅದು ಲಸಿದ್ದವಾದ್ದೆಂಬ ಸಂಗತಿ ತಿಳಿಯಪಡಿಸಿರುತ್ತೆ. ಈತನ ತಂದೆ ನೀರಿ ಮಲ್ಲಣ್ಣ ಈ ಹುಡುಗನಿಗೆ ಕೆಲವು ಆಸ್ತಿ ಕೊಟ್ಟು ಅವನ ತಾಯಿ ಪೋಷಿಗಂಬಮ್ಮನ ಸ್ವಾಧೀನ ಪಡಿಸಿ ಕಾಲವಾದನು. ಆಕೆಯು ನೆಮ್ಮಗಳಮೂಲಕ ಆ ಹುಡುಗನ ಆಸ್ತಿಯನ್ನ ಅವನ ಅಣ್ಣ ಮುನಿಮಲ್ಲಪ್ಪನ ಸ್ವಾಧೀನಪಡಿಸಿ ಈಗ್ಗೆ [illegible] ವರುಷಗಳ ಕೆಳಗೆ ಕಾಲವಾದಳು. ಆ ಹುಡುಗನಿಗೆ ನಾವುಗಳು ಗಾರ್ಡಿಯನ್ ಗಳಾಗಿರುವದರಿಂದ ಈ ನೋಟೀಸ ಕೊಟ್ಟವೆ.

ತಾ॥ [illegible] ನೇ ಮೇ ೧೮೮೫.

೧ ಕುರುಬರ [illegible]
೧ × [illegible]
೧ [illegible]
೧ × [illegible]
೧ × [illegible]

BANGALORE — Printed and published for the Proprietor, at the KARNATIC PRESS — 1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible] ॥ [illegible]

Vol. XII] BANGALORE—MONDAY, JUNE 15, 1865. [No. 24.

ಸಂಪುಟ ೧೨.] ಬೆಂಗಳೂರು—ಸರ್ ೧೮೬೫ನೇ ಇಸವಿ ಜೂನ್ ೧೫ನೇ ತಾರೀಖ್ ಸೋಮವಾರ. [ಸಂಚಿಕೆ ೨೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ೧೨—೦—೦

[illegible] ೬—೦—೦

[illegible] ೬—೦—೦

[illegible] ೧ಕ್ಕೆ ೦—೮—೦

ಸಂಚಿಕೆ ೧ಕ್ಕೆ ೦—೪—೦

[illegible] ೧ಕ್ಕೆ ೦—೫—೦

[illegible]

[illegible]

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೦

NOTICE TO SUBSCRIBERS

[illegible]

ಪ್ರಕಟನೆ.

[illegible]

ನೋಟೀಸ್.

[illegible] ಕರ್ಣಾಟಕ ಪ್ರಕಾಶಿಕಾ [illegible]

ಕನ್ನಡ [illegible] ಗ್ರಂಥಗಳು.

[illegible]	೧—೪—೦
[illegible]	೦—೧೨—೦
[illegible]	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೬—೦
[illegible]	೦—೨—೦
[illegible]	೫—೦—೦

ಕನ್ನಡ [illegible]

[illegible]	೦—೬—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೬—೬
[illegible]	೦—೨—೬
[illegible]	೦—೬—೦
[illegible]	೦—೩—೦
[illegible]	೦—೨—೦
[illegible]	೦—೦—೯
[illegible]	೧—೦—೬
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible] ೧೩ ಸಂಚಿಕೆ.	೦—೦—೦
[illegible] ಸಂಚಿಕೆ.	೦—೮—೦
[illegible]	೦—೮—೦

ಸಂಸ್ಕೃತ [illegible] ಗ್ರಂಥಗಳು

[illegible]	೦—೩—೦
[illegible]	೦—೫—೦
[illegible]	೦—೨—೯
[illegible]	೦—೨—೬
[illegible]	೦—೦—೬
[illegible]	೦—೩—೬
[illegible]	೦—೧—೦

[illegible]

NOTICE.

VAIDYASARASANGRAHA.

Price including Postage, Rs 5 6–0

[illegible]

[illegible] ರೂ॥ ೫—೬—೦

[illegible]

[illegible] ವೆಂಕಟಾಚಾರ್, [illegible] ಬೆಂಗಳೂರು

NOTICE

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೊ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಬೋಧ್ಯವಾದದ್ದಾಗಿಯೂ ನವರಸ ಪರಿಪೂರ್ಣ ಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧—೮—೦ ರೂ॥, ಪಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ ಲಿಂಗಯ್ಯ ಅಂಡ್ ಕೊ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸಿಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ತನ್ಮತಾಭಿಮಾನವುಳ್ಳವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಕಾವ್ಯವನ್ನು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಕುಣಿಗಲ್ ಅಸಿಸ್ಟೆಂಟ್ ಇಂಜಿನಿಯರ್ ಮೆ॥ ಬಿ. ಗೋವಿಂದಾಚಾರ್ಯರವರಿಗೆ ಮೊಬಲಗುಸಹಿತ ಬರೆದುಕೊಂಡರೆ ಪುಸ್ತಕಗಳು ಕಳುಹಿಸಲ್ಪಡುವವು.

ಅವ್ಯಾರೆತವಹಾ ಪುಸ್ತಕ		೦—೧೪—೦
ಮಯ್ಯಾರೆತವಹಾ	,,	೦—೧೨—೦
ಅಂಚೆಹಾಸಲ್	,,	೦—೨—೦

ಬೆಂಗಳೂರ್ ತಾ॥ ೭ನೇ ಜೂನ್ ೧೮೬೫

ಪ್ರಕಟನೆ.

ಬೆಂಗಳೂರು ಬಳೇಬಾಗಿಲಬಳಿ ಇರುವ ಮನೋಹರಮಾಬೀದಿ ೩೩ನೇ ನಂಬರ್ ಮನೆಯೊಳು ವಾಸವಾಗಿರುವ ಪರಮಹಂಸರೆಂಬವರು ಇದರಿಂದ ಸರ್ವರಿಗೂ ತಿಳಿಸುವದೇನೆಂದರೆ—

[illegible]

೧ ಮಹಾ ಬಿಲ್ವಾದಿಲೇಹ್ಯ.

[illegible]

[illegible] ರೂ॥ [illegible] ೧ಕ್ಕೆ ರೂ॥ ೧—೧೦—೦ [illegible]

೨. ಸಿದ್ಧಘೃತ.

[illegible]

[illegible] ೧ಕ್ಕೆ ೧—೧೦—೦ [illegible]

ಸುಖವಿರೇಚನ ಚೂರ್ಣ.

[illegible]

[illegible] ೧ಕ್ಕೆ [illegible]

[illegible]

ಬೆಂಗಳೂರು. ತಾ॥ ೭ ನೇ ಜೂನ್ ೧೮೬೫ನೇ ಇಸವಿ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 15, 1885.
೧೮೮೫ನೇ ಜೂನ್ ೧೫ನೇ ತಾ॥ ಸೋಮವಾರ.

Mr. DESEARS.

ಮೈಸೂರು ರಾಜವಂಶಕ್ಕೆ ಸೇರಿದವರೊಳೊಬ್ಬರಾದ ಮ॥ ದೇಶೀಅರಸಿನವರು ಮಾಹೇಮಜಕೂರು ೧೦ನೇ ತಾರೀಖಿನ ಪ್ರಾತಃಕಾಲ ಪ್ಯಾಸಂಜರ್ ಟ್ರೈನ್‍ನಲ್ಲಿ ಸಿಕಂದರಾಬಾದಿಗೆ ಪ್ರಯಾಣವಾದರು. ಇವರನ್ನು ಸಾಗಕಳುಹಿಸತಕ್ಕಬಗ್ಯೆ ಅನೇಕ ನೇಟಿವ್ ದೊಡ್ಡಮನುಷ್ಯರು ಪೇಟೆಸ್ಟೇಷನಿಗೆ ಬಂದಿದ್ದರು. ಇವರಿಗೆ ಸಿಕಂದರಾಬಾದಿನಲ್ಲಿರತಕ್ಕ ೩ನೇ ಲೈಟ್ ಕ್ಯಾವಲ್ರಿ ರಿಜಿಮೆಂಟಿನ ಲೆಫ್ಟಿನೆಂಟ್ ಕೆಲಸವಾದಂತೆ ಕೇಳುವದಕ್ಕೆ ನಾವುಬಹಳ ಸಂತೋಷಿಸುತ್ತೇವೆ. ಈದೊಡ್ಡಮನುಷ್ಯರು ರಾಜವಂಶದಲ್ಲಿ ಗೌರವ್ಯರಾದಪಡೇಶೀಅರಸಿನವರ ಸ್ವೀಕೃತಪುತ್ರರಾ ಗಿರುತ್ತಾರೆ. ಇವರೂ ದಳವಾಯಿಸ್ವಾಮಿಗಳಾದ ಮ॥ ದೇವರಾಜೇಅರಸಿನವರೂ, ಮೈಸೂರು ಸಂಸ್ಥಾನದ ಮಿಲಿಟರಿ ಡಿಪಾರ್ಟ್‍ಮೆಂಟಿನಲ್ಲೀಗ ಕೆಲಸಮಾಡುತ್ತಿರುವ ಮ॥ ಕೆಂಪರಾಜೇಅರಸಿನವರೂ ಏಕೋದರರಾಗಿರುತ್ತಾರೆ. ಇವರ ಜನಕರುದೇಗಳು, ಸಾಬಕ್ ಮಹಾರಾಜರವರ ಮಿಲಿಟರಿ ಡಿಪಾರ್ಟ್‍ಮೆಂಟಿನಲ್ಲಿ ಬಕ್ಷಿಯರಾಗಿದ್ದರು. ರಾಜಕುಟುಂಬದವೈಕಿ ಈ ಮೂವರು ಬಹಳ ವಿದ್ಯಾವಂತರಾಗಿಯೂ ಆಯುಧಸಾಧಕರಾಗಿಯೂ, ಗೌರವ್ಯರಾಗಿಯೂ ಇರುತ್ತಾರೆ. ದಳವಾಯಿಯವರು ತಮ್ಮ ವಿದ್ಯಾಕೌಶಲ್ಯದಿಂದ ಪ್ರವರ್ಧಮಾನರಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ಟ್ರೆಜರೀ ಛಾರ್ಜಿನೊಳಿರುತ್ತಾರೆ. ಮಿಸ್ಟರ್ ಕೆಂಪರಾಜೇ ಅರಸಿನವರು ಬಹಳ ಮಿಲಿಟರಿ ಆಫಿಸರರಾಗಿರುವದಲ್ಲದೆ ಈಗ ಹೊಸದನ್ನಿಸಿಕೊಂಡಿರುವ ಮದರಾಸ್ ಕಮಾಂಡರ್ ಇನ್ ಚೀಫರವರಾದ ಸರ್ ಫ್ರೆಡರಿಕ್ ರಾಬರ್ಟ್ಸ್‍ರವರ ಸ್ಥಾನಕ್ಕೆ ಪಾತ್ರರಾದವರಾಗಿರುತ್ತಾರೆ. ಈಗ ಇವರು ಮೈಸೂರು ಸವಾರ್ ಫೌಜಿಗೆ ಬ್ರಿಗೇಡ್ ಆಫಿಸರರಾಗಿ ಸಹ ಇರುತ್ತಾರೆ. ಪ್ರಸಕ್ತ ವಿಚಾರಕ್ಕೆ ವಿಷಯರಾದ ಮ॥ ದೇಶೀಅರಸಿನವರು, ದೇಶಭಾಷೆಯಾದ ಕನ್ನಡ ಮತ್ತು ಅನ್ಯದೇಶಭಾಷೆಯಾದ ಇಂಗ್ಲಿಷ್ ಈ ಎರಡರಲ್ಲಿಯೂ ಸಮಾನವಾದ ಒಳ್ಳೇಜ್ಞಾನವುಳ್ಳವರಾಗಿರುತ್ತಾರೆ. ಇವರು ಪ್ರಥಮತಃ ಇಲ್ಲಿನದಕ್ಕ ಹರ್ ಮೆಜಸ್ಟೀಯವರ ಕ್ಯಾವಲ್ರೀ ರಿಜಿಮೆಂಟಿನಲ್ಲಿ ಕವಾಯತಿಮುಂತಾದ ಸೈನಿಕ ವಿದ್ಯೆಯನ್ನು ಕಲಿತುಕೊಂಡರು. ಶ್ರೀಮನ್ಮಹಾರಾಜರವರ ಬಾಡೀಗಾರ್ಡ್ ಅಂದರೆ ಅಂಗರಕ್ಷಕಸೈನ್ಯವನ್ನು ತಮ್ಮ ಅಧಿಕಾರದೊಳಿಟ್ಟುಕೊಂಡಿದ್ದಬಗ್ಯೆ ಈ ಸರ್ಕಾರದಿಂದ ಮಾಹೇಯಾನಾ ನೂರುರೂಪಾಯಿಗಳ ಸಂಬಳ ಪಡೆಯುತಲಿದ್ದರು. ಇದಲ್ಲದೆ ಮಹಾರಾಜರವರ ಅರಮನೆಯಿಂದ ಇವರಿಗೆ ಭಾರೀಯಾಗಿಜಾತಿಸುಬಳ ಸಲ್ಲುತಿರುವದಲ್ಲದೆ ಇವರು ಸಾಬಕ್ ಮಹಾರಾಜರವರಿಂದ ಕೊಡಲ್ಪಟ್ಟಜಹಗೀರನ್ನು ಸಹ ಅನುಭವಿಸುತಲಿದ್ದಾರೆ. ಈಗ ಇವರು ಹರ್ ಮೆಜಸ್ಟೀಯವರ ಮಿಲಿಟರಿ ಸರ್ವಿಸ್ಸಿನಲ್ಲಿ ದಾಖಲಾದದ್ದು ಮೈಸೂರು ಅರಸರಿಗೆ ವಿಶೇಷ ಗೌರವವನ್ನುಂಟುಮಾಡುವದಕ್ಕೂ, ಸ್ವಸಾಮರ್ಥ್ಯ ಪ್ರದರ್ಶನಕ್ಕೂ, ಕಾರಣವಾಯಿತಲ್ಲದೆ ಬೇರೊಂದಲ್ಲವು. ಶ್ರೀಮನ್ಮಹಾರಾಜರವರು ಸ್ವಜನಗಳ ಪ್ರಾಬಲ್ಯವಿಷಯದಲ್ಲಿ ಪ್ರೋತ್ಸಾಹ ಪುಂಟುಮಾಡಿದಹಾಗೆಲ್ಲ ಅವರಿಗೆ ಕೀರ್ತಿಯೂ ಪ್ರಭುತ್ವಕ್ಕೆ ದಾರ್ಢ್ಯವೂ ಉಂಟಾಗುವದು. ಪೂರ್ವದಲ್ಲಿ ಮೈಸೂರು ಅರಸರು ಕೆಲವರು ವಿದ್ಯಾವಂತರಾಗಿಯೂ ಶೂರರಾಗಿಯೂಯಿದ್ದರು, ಪರಂತು ಅನ್ಯರಾಜರಲ್ಲಿ ನೌಕರಿಯಬಗ್ಯೆ ಒಬ್ಬರೂ ಹೋದವರಲ್ಲವು. ಈಗ ಚಕ್ರವರ್ತಿನೀಯವರು ಇಂಡ್ಯದೇಶದ ನೇಟಿವ್ ಸಂಸ್ಥಾನಾಧಿಪತಿಗಳಿಗೆಲ್ಲ, ತತ್ರಾಪಿ ಮೈಸೂರು ಅರಸರವರಿಗೆ ಮುಖ್ಯಪೋಷಕರಾಗಿರುವದರಿಂದ ಅವರಲ್ಲಿ ಮಾಡಲ್ಪಡುವ ನೌಕರಿಯು ಮೈಸೂರು ಅರಸರಿಗೆ ಗೌರವಾವಹವಾಗಬಹುದು. ಪೂರ್ವದಲ್ಲಿ ದೆಹಲೀ ಬಾಧಷಾಯವರಿಂದ ಗೌರವಿಸಲ್ಪಡುತಲಿದ್ದ ಈ ಸಂಸ್ಥಾನದವರು ಈಗ ಚಕ್ರವರ್ತಿನೀಯವರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಮುಖ್ಯವಾಗಿ ಮ॥ ದೇಶೀ ಅರಸಿನವರು ಬಿರುದ್ರಾಂಕಿತ ಪ್ರೌಢ ದಲ್ಲಿ ಗೌರವ ಸ್ಥಾನಸ್ತ್ರಗಳುಂ ಇನ್ನೂ ವಿಶೇಷತಃ ಪಡೆದು ಪ್ರವರ್ಧಮಾನರಾಗಬೇಕೆಂದು ಕೋರುವದಲ್ಲದೆ ಇತರ ರಾಜಬಂಧುಗಳು ಅವರನ್ನು ನುಕರಿಸುವರಲಿಯರೆಂದು ನಂಬುತ್ತೇವೆ.

MYSORE STATE.

ಇಲ್ಲಿನ ತಾತ್ಕಾಲಿಕಸ್ಥಿತಿಯನ್ನುಕುರಿತುಮಾಹೇಮಜಕೂರ್ ೩ನೇತಾರೀಖಿನಲ್ಲಿ "ಸತ್ಯವಾದಿ" ಎಂಬ ಒಬ್ಬಾತನು ಮದರಾಸ್ ಹಿಂದೂಪತ್ರಿಕೆಗೆ ಬರೆದಿರುವದೇನಂದರೆ:— "ಮೈಸೂರುದೇಶದ ಸ್ಥಿತಿಯು ಕೇವಲ ಶೋಚನೀಯವಾಗಿದೆ. ಈಸಂವತ್ಸರದಲ್ಲಿ ಕಾಲಾವರ್ಷವು ಮಳೆಯು ತಪ್ಪಿಹೋದದರಿಂದ ಸರ್ವತ್ರ ಬೆಳೆಯಿಲ್ಲದೆಹೋದದ್ದುಮಾತ್ರವಲ್ಲದೆ ಪ್ರಾಯೇಣ ಅನೇಕಸ್ಥಳಗಳಲ್ಲಿ ಜಲದೌರ್ಲಭ್ಯವುಂಟಾಗಿ ತನ್ಮೂಲಕ ಜನಗಳು ವಿಶೇಷ ಸಂಕಟಕ್ಕೆ ಪಾತ್ರರಾಗಿದ್ದಾರೆ. ಪ್ರಾಣುವೆಂಬ ನಮಗೆ ಅತ್ಯಂತ ಸನ್ನಿಹಿತವಾದದ್ದಾಗಿದೆ. ಇಷ್ಟುಮಾತ್ರವಲ್ಲದೆ ಕಾಲಸ್ಥಿತಿಯು ಸರ್ವಲಕ್ಷಣಯುಕ್ತವಾದದ್ದಾಗುವದಿಲ್ಲವು. ಅದು ಸುತ್ತಮುತ್ತಿನಯನ್ನೆ್ದವಕ್ಕೆಬಗ್ಯೆ ಇದಾದಕಿಕಾರ ಅಂಶಪ ವ ಸೇರಿರುತಲೇನಂದರೆ, ಪಶೋಪಾಯವರು ಪ್ರಬಲಿಸಿ ಸದರಪ್ಪು ಡಿಸ್ಟ್ರಿಕ್ಟುಗಳಲ್ಲಿ ಸೇರಿಸೋ ದು ಕೊಳ್ಳೆಹೊಡೆಯುತ ವಿಶೇಷಸಂಕಟವನ್ನುಂಟುಮಾಡುತಲಿದ್ದಾರೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸರ್ಕಾರ್ ಖಜಾನೆಯು ಆಗ್ಯೆ ಸ್ವಪ್ಪ ದಿನಗಳಿಂದೆ ಕೇವಲ ಅಪಾಯಸ್ಥಿತಿಯೊಳಿತ್ತು. ದುರುವಕ್ ಮೊದಲಾದ ಅಕ್ರಮಗಳು ಸರ್ಕಾರ್ ನೌಕರರಲ್ಲಿ ಮರಳಿ ಸಂಪೂರ್ಣವಾಗಿ ತಲೆದೋರಿವೆ," ಎಂಬದು. ಹಿಂದೂಪತ್ರಿಕೆಯು ಬಾತನಿಗಾದಾರನು ತಿಳಿಸಿದ ಅಂಶಗಳಲ್ಲಿ ನಿಷೇಧಿಸತಕ್ಕಾದಭಾಗ ಪೂರಾ ನಮ್ಮ ದೃಷ್ಟಿಗೆ ಗೋಚರವಾಗದೆಯಿರುವದರಿಂದ ಅತನ ಸ್ವಭಾವೋಕ್ತಿಯನ್ನು ನಾವು ಅಂಗೀಕರಿಸಬೇಕಾದವರಾಗಿದ್ದೇವೆ. ಸದರೀ ಬಾತವಿದಾರನ ಲೇಖನದಲ್ಲಿ ನಮೂದಾಗದಿರುವ ಕೆಲವುಅಂಶಗಳನ್ನು ಉಪವೃತ್ತಿರೂಪವಾಗಿಲ್ಲಿ ತಿಳಿಸುವೆವೇನೆಂದರೆ, ಈರಾಜ್ಯವು ಬ್ರಿಟಿಷ್ ಕಮಿಷನರವರ ವಿಚಾರಣಾಧಿಕಾರದಿಂದ ನೇಟಿವ್ ದಿವಾನರ ಆಧಿಪತ್ಯಕ್ಕೆ ಒಪ್ಪಿಸಲ್ಪಟ್ಟಬಳಿಕ, ಹ್ಯಾಗೆ ಸಕಲಾಂಶವೂ ಘನಿಸಿದವೋ ಅದಕ್ಕೆ ತಕ್ಕಂತೆ ಜನಗಳಲ್ಲಿ ಸಹ ಈಗ ಒಂದು ವೈಚಿತ್ರ್ಯವುಂಟಾಗಿದೆ, ಏನಂದರೆ— ಈಚೆಗೆ ಯಾರೇನು ಮಾಡಿದಾಗ್ಯೂ ಕೇಳತಕ್ಕವರಿಲ್ಲವೆಂಬ ನಂಬಿಕೆ ಜನಗಳಿಗೆ ಅಧಿಕವಾಗುತಬರಲು, ತಮ್ಮತಕ್ಸೀರನ್ನು ತಾವಾಗಿ ಬಂದು ಬಹಿರಂಗವಾಗಿ ಹೇಳುವಂತೆ ಪರಿಣಮಿಸಿತು. ಇದಕ್ಕೆ ನಿದರ್ಶನವಾಗಿ ಈಚೆಗೆ ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ನಡೆದ ಒಂದು ಘೋರವಾದ ಖೂನೀಮೊಕದ್ದಮೆಯ ತಪಸೀಲನ್ನು ಇದರಡಿ ತಿಳಿಸುವೆವೆಂತೆಂದರೆ:—

ಗತ ಗುರುವಾರದದಿನಬೆಳಗ್ಯೆ ಮುನಿರಾಮನೆಂಬವನೊಬ್ಬನು, ರೆಸಿಡೆನ್ಸೀರೋಡಿನಲ್ಲಿರುವ, ಸಿವಿಲ್ ವ ಮಿಲಿಟರಿ ಸ್ಟೇಷನಿನ ಸೆಕೆಂಡ್ ಮ್ಯಾಜಿಸ್ಟ್ರೇಟರಾದ ಮಿಸ್ಟರ್ ಪಕ್ಕಿರಾಯರವರಮನೆಗೆ ತಾನಾಗಿಹೋಗಿ ಒಳಗಿದ್ದವರನ್ನು ಹೊರಗೆಕರೆಯಲು, ಅವರು ಕೂಡಲೇ ಬಂದು ಬೇಧಾದ್ಯಂತವೂ ರಕ್ತದೊಡನೆ ಕೈಯಲ್ಲಿ ಕತ್ತಿಯುಂಪಿಡಿದಿದ್ದ ಸದರೀ ಮನುಷ್ಯನನ್ನು ಕಂಡರು. ತತ್ಕಾಲದೊಳು ಅವನಸ್ಥಿತಿಯು ಅವರಿಗೆ ಸಹ ಭಯಂಕರವಾದ್ದಾಗಿತ್ತು. ತರುವಾಯ ಆ ಘೋರಪುರುಷನು ತಾನಿಬ್ಬರನ್ನು ಖೂನಿಮಾಡಿರುವದಾಗಿಯೂ, ದೂರನೆಗೆ ಬದ್ಧನಾಗಿ ಸ್ವತಃ ಬಂದಿರುವಂತೆಯೂ, ತನ್ನವಿಷಯದೊಳು ಬೇಕಾದನ್ಯಾಯವನ್ನು ನಡಿಸಬಹುದೆಂತಲೂ ತಿಳಿಸಿದನು. ಇಂತಾ ಮಹಾಕ್ರೂರಕೃತ್ಯವನ್ನು ಮಾಡುವದಕ್ಕೇನುಕಾರಣವೆಂದು ಅವರುವಿಚಾರಿಸುವಲ್ಲಿ, ತಾನುವಧಿಸಿದಂತಾ ಇಬ್ಬರೂ ತನಗೆ ಅನವರತ ತೊಂದರೆ ಕೊಡುತಲಿದ್ದಂತೆಯೂ, ಈ ಅಂಶವನ್ನು ತಾನು ಪೊಲೀಸಿನವರಿಗೆ ತಿಳಿಸಿದಾಗ್ಯೂ ಅವರು ಪ್ರಸಕ್ತಿಸಿ ಯೇನೂ ಮಾಡದೆಹೋದರೆಂತಲೂ, ಅದರಿಂದ, ಪ್ರತ್ಯಪಕಾರರೂಪವಾಗಿ ಈರೀತಿನಾ ಬಿಡಂತೆಯೂ ತಿಳಿಸಿದನು. ತರುವಾಯ ಅವನನ್ನು ಮ್ಯಾಜಿಸ್ಟ್ರೇಟರು ಪೊಲೀಸಿನವರವಶಕ್ಕೆ ಒಪ್ಪಿಸಿ ಲಾಕಪ್‍ನೊಳಿಡಿಸಿದರು. ಬೌರಿಂಗ್ ಆಸ್ಪತ್ರೆಯಲ್ಲಿ ವಿಶೇಷ ಜಖಮಾಗಿ ಕೇವಲ ಮರಣದೆಶೆಯೊಳಿದ್ದ ದಾಸಪ್ಪನೆಂಬವನ ಕೈಫೀಯತ್ತನ್ನು ಅಪರಾಧಿಯ ರೂಬರೂ ಮ॥ ಪಕ್ಕಿರಾಯರು ತೆಗೆದುಕೊಂಡರು. ಆಗ ಸದರೀದಾಸಪ್ಪನೆಂಬವನು, ಈರೀತಿನಡಿಸತಕ್ಕೇನೂ ಕಾರಣವಿಲ್ಲವೆಂತಲೂ, ಅಪರಾಧ ಯಾತಕ್ಕಾಗಿ ನನ್ನ ತನ್ನನ್ನು ಜಖಮಾಡಿದನೋ ಅದು ತನಗೆ ತಿಳಿಯದೆಂತಲೂ ಕೈಫೀಯತ್ತುಕೊಟ್ಟನು. ಈ ಅಪರಾಧಿಯು ಆಗ್ಯೆ ಸ್ವಲ್ಪದಿನಗಳಿಂದೆ ಮೇಲ್ಕಂಡ ದಾಸಪ್ಪನೆಂಬವನಿಗೂ, ಮತ್ತೊಬ್ಬನಿಗೂ ಅಂಗಚ್ಛೇದಮಾಡುವಂತೆ ಭಯಪಡಿಸಿದ್ದರಿಂದ ಅವರಿಬ್ಬರೂ ಈ ಅಂಶವನ್ನು ಪೊಲೀಸಿನವರಿಗೆ ವಿಜ್ಞಾಪನೆಮಾಡಿದರು. ಬಳಿಕ ಅವರಿಬ್ಬರೂ ಜೀನ್ಯಾಜಿಸ್ಟ್ರೇಟರಿಗೆ ಅರ್ಜಿಕೊಡಲು ಅವರು, ಇನ್ಸ್‍ಪೆಕ್ಟರ್ ಕೋರ್ಟ್ ಇಂಟೆನೇ ಸಕರ್ಷಣೀಯತ್ಯಾ ಅಕ್ರಮವಾಗಿ ಬೆದರಿಸಿದಬಗ್ಯೆ ಅಪರಾಧಿಗೆಸಮ್ಮನ್ಸ್ ಮಾಡಿದರು. ಪರಂತು ಅಪರಾಧಿಯು ತನ್ನ ವಿಚಾರಣೆಗೆ ಪೂರ್ವದಿನದಲ್ಲಿಯೇ ಈಕೃತ್ಯವನ್ನು ಮಾಡಿರುತ್ತಾನೆ. ಇಷ್ಟುಮಟ್ಟಿಗೆ ಈ ಮೊಕದ್ದಮೆಯ ವಿಷಯವಾಗಿ ನಮಗೀಗ ತಿಳಿಯಬಂದಿರುತ್ತದೆ. ಆದರೆ ಪರಸ್ಪರವ್ಯಸನ್ಯವುಂಟಾಗಿರುವ ಅಂಶವನ್ನೂ ಅಪರಾಧಿಯು ಹಿಂಸಿಸುವಂತೆ ಬೆದರಿಸಿದನೆಂಬ ಅಂಶವನ್ನೂ ಪೊಲೀಸಿನವರಿಗೆ ರಿಪೋರ್ಟ್ ಮಾಡಿದ್ದಾಗ್ಯೂ ನ್ಯಾಯವಾಗಿ ಈರೀತಿಯಾಯಿತು. ಇದಲ್ಲದೆ ಅಪರಾಧಿಯು ಅಲಸೂರಲ್ಲಿ ಕೃತ್ಯವನ್ನು ನಡಿಸಿ ಅದರ ಗುರುತಾಗ ಳೊಡನೆ ಸಿದ್ಧಯವಾಗಿ ಕತ್ತಿಯುಂ ಹಿಡಿದು ಹಗಲುಹೊತ್ತು ಕುಮಾರ್ ೩ ಮೈಲಿಗಳ ದೂರ ಪಾದಚಾರಿಯಾಗಿ ಸೂಳೇ ಮಾರ್ಗವಾಗಿ ಬರುತಲಿರುವಾಗ್ಯೆ ಅವನನ್ನು ದಸ್ತಗಿರಿ ಮಾಡತಕ್ಕವರೊಬ್ಬರೂ ಇಲ್ಲದಾಗ ಪೊಲೀಸಿನವರೆಲ್ಲ ಏನು ಮಾಡುತಲಿದ್ದರೊ ಅದು ಅವಶ್ಯ ತಿಳಿಯಬೇಕಾದದ್ದಾಗಿರುತ್ತದೆ. ಪೊಲೀಸ್ ಇನ್ಸ್‍ಪೆಕ್ಟರು ಇದ್ದರ ಉತ್ಪಾತಗಳು ನಡೆಯುವತನಕ ಎಲ್ಲಿ ನಿದ್ರೆ ಹೋಗುತಲಿದ್ದರೋ ತಿಳಿಯಲಿಲ್ಲವು. ಸಿವಿಲ್ ವ ಮಿಲಿಟರಿ ಸ್ಟೇಷನ್‍ಎಂಬಬ ರೆಸಿಡೆಂಟರವರ ವಾಲನೆಗೂ ಯುರೋಪಿಯನ್ ಅಧಿಕಾರಿಗಳ ವಿಚಾರಣೆಗೂ ಇಂಥ್ಯಗವರ್ನಮೆಂಟಿನವರನಿಗೇವಾನಿಗೂ ವಿಷಯವಾಗಿರುತ್ತದೆ. ಇಂತಾಸ್ಥಳದಲ್ಲಿಸಹ ಪದೇಪದೇ ಖೂನಿಗಳು ನಡೆಯುವಣವೂ, ಕಳವುಕಿತ ಸಂವತ್ಸರಗಟ್ಟಲೆ ಅವು ಪತ್ತೆಯಾಗದಿರುವಣವೂ ಇಲ್ಲಿನವಿಚಾರಣಾ ಕ್ರಮಕ್ಕೆ ಬಹಳ ನ್ಯೂನತೆಯನ್ನುಂಟುಮಾಡತಕ್ಕದ್ದಾಗಿರುತ್ತದೆ.

ಬೆಂಗಳೂರು ತಾಲ್ಲೂಕು ತಲಗಟ್ಟಪುರದ ಸ್ಟೇಷನ್ ಸರಹದ್ದು ಕುಪ್ಪರದ್ದಿ, ಕೆರೇಬಳಿ, ಇಲ್ಲಿಂದ ರಾಗೀ ಬಿಕರೀಮಾಡಿಕೊಂಡು ಮಾಹೇಮಜಕೂರ್ ೧೦ನೇ ತಾರೀಖಿನರಾತ್ರಿ ಕುಮಾರ್ ೧೦ಘಂಟೆಯ ವೇಳೆಯಲ್ಲಿ ಕಗ್ಗಲಿಪುರ ತಾ॥ ಸೋಮನಹಳ್ಳಿಗ್ರಾಮಕ್ಕೆ ಹೋಗುತಲಿದ್ದ ಭುವಯವರನ್ನು ಹತ್ತು ಹನ್ನೆರಡುಜನ ದರೋಡೆ ಕಳ್ಳರು ಹೊಡೆದು ಅವರಬಳಿ ಇದ್ದವನ್ನೆಲ್ಲ ದೋಚಿಕೊಂಡು ಹೋದರೆಂತಲೂ, ಕುಮಾರ್ ನಗದು ೧೫೦ ರೂಪಾಯಿಗಳೂ, ಜವಳಿ, ಒಡವೆ ವಗೈರೆ ಇತರಸಾಮಾನುಗಳೂ ನಷ್ಟವಾದಂತೆಯೂ, ಅವರಪೈಕಿ ಕೆಲವರಿಗೆ ಪೂರಾ ಜಖಮಾಗಿರುವಂತೆಯೂ ತಿಳಿಯಬರುತ್ತದೆ.

ಮುಖ್ಯವಾಗಿ ಈ ರಾಜ್ಯದಲ್ಲೀಗ ದರೋಡೆಗಳೂ ಖೂನಿಗಳೂ ವೃದ್ಧಿಯನ್ನೈದುತ ಕಡೆಗೆ ತಮ್ಮ ಅಪರಾಧಗಳನ್ನು ತಾವಾಗ ಹೊರಗೆಬಂದು ಹೇಳುವಷ್ಟು ಧೈರ್ಯವು ಜನಗಳಿಗೆ ವುಂಟಾಗಿದೆ. ಇಂತಾ ಬೇಬಂದಿಗೆ ಬಳಕಾರಣವೇನಾಗಿರಬಹುದೋ ಅವನ್ನು ಸೂಕ್ಷ್ಮದರ್ಶಿಗಳು ಪರ್ಯಾಲೋಚಿಸಬಹುದು. ತಮ್ಮ ಧರ್ಮ್ಯಾದಿಗಳನ್ನು ವಿಚಾರಿಸಿ ತೀರ್ಮಾನಿಸತಕ್ಕವರಿಲ್ಲವೆಂದು ರೈತರು ಖಂಡಿತವ ಮಾರೆಯಿಡುತಲಿದ್ದಾರೆ. ಏತನ್ನ ರಾಜ್ಯಕ್ಕೆ ಈಗ ನಾನಾವಿಧವಾದ ಸಕಲ ಸೌಭಾಗ್ಯಗಳೂ ಏಕಕಾಲದಲ್ಲಿ ಪ್ರಾಪ್ತವಾಗಿದೆ.

THE ARHAT SYSTEM.—No.—17
ಜೈನ್ಯ ಅಥವಾ ಆರ್ಹತದರ್ಶನವು.

ಜ್ಞಾನಾವರಣವು ಕ್ಷಯಿಸಿದೊಡೆ ಇಂದ್ರಿಯ ಮನಸ್ಸುಗಳನ್ನು ಪುರಸ್ಕರಿಸಿ ವ್ಯಾಪರಿಸುವ ಮತ ಮೂಲಕ ಪದಾರ್ಥಗಳ ಯಥಾರ್ಥ್ಯವನ್ನು ತಿಳಿಯುತಾನೇ ಮತಿಯೆನ್ನಿಸಿಕೊಳ್ಳುವದು. ಜ್ಞಾನಾವರಣವು ಕ್ಷಯಿಸಿದಬಳಿಕ ಮತಿಯಿಂದ ವುಂಟಾಗತಕ್ಕ ಸ್ಪಷ್ಟಜ್ಞಾನವೇ ಶ್ರುತವು. ಸಮ್ಯಗ್ದರ್ಶನಾದಿ ಗುಣಜನಿತ ಜ್ಞಾನಾವರಣ ಕ್ಷಯಶಿಮಿತ್ತಕವಾದ ಅನಿಷ್ಟನ್ನವಿಷಯಕಜ್ಞಾನವೇ ಅವಧಿಯು. ಈರ್ಷ್ಯಾಂತರಜ್ಞಾನಾವರಣ ಕ್ಷಯಿಸಿದಲ್ಲಿ ಅನ್ಯರ ಮನೋಗತವಾದ ಭಾವಾರ್ಥವನ್ನು ಸ್ಫುಟವಾಗಿ ತಿಳಿಸುವದ್ದೋ ಅದೇ ಮನಃಪರ್ಯಾಯವು. ಮಹರ್ಷಿಗಳು ಯದರ್ಥಕತಪಸ್ಸುಮುಂತಾದಕರ್ಮಗಳನ್ನುಮಾಡುವರೋ ಜ್ಞಾನಾಂತರಾನುಪ್ರವಿಷ್ಟವಾದಅಂತಾ ಶುದ್ಧಜ್ಞಾನವನ್ನೇ ಕೇವಲಜ್ಞಾನವೆನ್ನುತಕ್ಕದ್ದು. ಇವುಗಳಪೈಕಿ ಮೊದಲನೆಯದು ಪರೋಕ್ಷವೆಂತ ಉಳಿದವು ಪ್ರತ್ಯಕ್ಷವೆಂತಲೂ ತಿಳಿಯುವದು.

ಶ್ಲೋ॥ ವಿಜ್ಞಾನಂಸ್ವಪರಾಭಾಸಿಪ್ರಮಾಣಂಬಾಧವರ್ಜಿತಂ । ಪ್ರತ್ಯಕ್ಷಂಚಪರೋಕ್ಷಂಚದ್ವಿಧಾಮೇಯವಿನಿಶ್ಚಯಾತ್ ॥

ಅಂದರೆ, ವಿಜ್ಞಾನವೆಂಬದುಅಬಾಧಿತವಾದದ್ದು ಪ್ರಮಾಣವಾಗಿಯೂ, ಸ್ವಪರ ಪ್ರಕಾಶಕವಾಗಿಯೂ, ಪ್ರತ್ಯಕ್ಷ ಪರೋಕ್ಷಗಳೆಂಬ ಭೇದ ದ್ವಯದಿಂದ ನಿಶ್ಚಯಿಸಲ್ಪಡತಕ್ಕದ್ದಾಗಿಯೂಯಿರುತ್ತದೆ. ಪರಂತು ಇವುಗಳ ಉತ್ತರಾಳಕಪ್ರಭೇದಗಳನ್ನು ವಿಸ್ತರವಾಗಿ ತಿಳಿಸುವ ಪೂರ್ವಾಚಾರ್ಯರುಗಳಾದ ಆಗಮ ಗ್ರಂಥಗಳಮೂಲಕ ತಿಳಿಯತಕ್ಕದ್ದು. ಶಾಸ್ತ್ರಗಳನ್ನೂ, ದೇವರನ್ನೂ, ತಪಸ್ಸನ್ನೂ, ಧರ್ಮವನ್ನೂ ಪರೀಕ್ಷಿಸುವಾಗ ಪೂರ್ವಾಪರ ವಿರೋಧವಿಲ್ಲದಿರುವದೇ ಶಾಸ್ತ್ರವು, ನಿರ್ದೋಷಿಯಾದವನೇ ದೇವರು, ನಿರ್ಗ್ರಂಥವೇ ತಪವು, ದಯಾಮೂಲವೇ ಧರ್ಮವೆಂಬ ತತ್ವಾರ್ಥ ನಿಶ್ಚಯ ವುಂಟಾಗುವದೇ ಸಮ್ಯಗ್ದರ್ಶನ; ಅಂತಾ ತತ್ವವು ವಿಚಾರಿಸಿ ಪ್ರೀತಿಯಿಂದದರ ನಿರ್ಣಯ ಹೊಂದಿದ್ದು ಸಮ್ಯಜ್ಞಾನ; ಸಂಸಾರವೆಂಬ ಬಂಧ ನಿಮಿತ್ತಕವಾದ ಕರ್ಮಚ್ಛೇದನ ವಿಷಯದಲ್ಲಿ ಉದ್ಯಮಿಸುವ ಶ್ರದ್ಧಾಳುವಾದ ಜ್ಞಾನಿಯಿಂದ ಮಾಡಲ್ಪಡುವ ಪಾಪಘಟನಕಾರಣಕ್ರಿಯಾನಿವೃತ್ತಿಯೇ ಸಮ್ಯಕ್ಚಾರಿತ್ರವು. ಇವು ಜನೇಂದ್ರ [illegible]ದ ರತ್ನತ್ರಯಗಳೆಂದೆನಿಸುವು. ಇವುಗಳೆಲ್ಲ ಅರ್ಹತರಿಂದ ವಿಶೇಷತಃ ಉಪಪಾದಿಸಲ್ಪಟ್ಟಿರುತ್ತವೆ. ಪೂರ್ವೋಕ್ತ ಸಮ್ಯಗ್ದರ್ಶನ ಜ್ಞಾನ ಚಾರಿತ್ರವು, ರಸಾಯನದಂತೆ ಏಕತ್ರ ಸೇರಿದಲ್ಲಿಮೋಕ್ಷ ವುಂಟಾಗುವದೇಹೊರ್ತು ವ್ಯತ್ಯೇಕವಾಗಿದ್ದರೆಉಂಟಾಗಲರಿಯದು.

ಈಮತಸಂಬಂಧವಾದ ಧರ್ಮಗಳನ್ನಿದರಡಿ ತಿಳಿಸುವೆವು, ಹ್ಯಾಗಂದರೆ:—

ಶ್ಲೋ॥ ಸರ್ವಥಾವದ್ಯಯೋಗಾನಾಂತ್ಯಾಗಶ್ಚಾರಿತ್ರಮುಚ್ಯತೆ । ಕೀರ್ತಿತಂತದಹಿಂಸಾದಿವ್ರತಭೇದೇನಪಂಚಧಾ॥ ಅಹಿಂಸಾಸೂನೃತಾಸ್ತೇಯಬ್ರಹ್ಮಚರ್ಯಾಪರಿಗ್ರಹಾಃ । ನಯ

ತ್ಪ್ರಮಾದಯೋಗೇನಜೀವಿತವ್ಯಪರೋಪಣಂ॥ ಚರಾಣಾಂಸ್ಥಾವರಾಣಾಂಚತದಹಿಂಸಾವ್ರತಂಮತಂ। ಪ್ರಿಯಂಪಥ್ಯಂವಚಸ್ತಥ್ಯಂ ಸೂನೃತಂವ್ರತಮುಚ್ಯತೇ॥ ತತ್ತಥ್ಯಮಪಿ ನೋಪಥ್ಯಮಪ್ರಿಯಂಚಾಹಿತಂಚಯತ್। ಅನಾದಾನಮದತ್ತಸ್ಯಾಸ್ತೇಯವ್ರತಮುದೀರಿತಂ॥ ಬಾಹ್ಯಾಃಪ್ರಾಣಾನೃಣಾಮರ್ಥೋಹರತಾತಂಹತಾಹಿತೇ। ದಿವ್ಯೌದಾರಿಕಕಾಮಾನಾಂಕೃತಾನುಮತಕಾರಿತೈಃ॥ ಮನೋವಾಕ್ಕಾಯತಸ್ತ್ಯಾಗೋಬ್ರಹ್ಮಾಷ್ಟಾದಶಧಾಮತಂ। ಸರ್ವಭಾವೇಷುಮೂರ್ಛಾಯಾಸ್ತ್ಯಾಗಸ್ಸ್ಯಾದಪರಿಗ್ರಹಃ॥ ಯದಸತ್ಸ್ವಪಿಜಾಯೇತಮೂರ್ಛಯಾ [illegible] ವಿಪ್ಲವಃ। ಭಾವನಾಭಿರ್ಭಾವಿತಾನಿ ಪಂಚಭಿಃಪಂಚಶಃಕ್ರಮಾತ್। ಮಹಾವ್ರತಾನಿಲೋಕಸ್ಯ [illegible] ಪದಂ। ಭಾವನಾಪಂಚಕ ಪ್ರಸಂಚನಂತ [illegible] ತಂ [illegible] ಯಃಕೊಪ್ರತಿ [illegible] ವ್ರತಂ। ಆಲೋಚ್ಯಪಾನಭೋಜನಾನ್ಯಪಂಚಕಂ ಪ್ರಥಮವ್ರತಂ॥

ಮೊದಲಾದ [illegible] ಗ್ರಂಥಾ ದಲ್ಲಿ ಪ್ರಕಾರ [illegible] ಹೇಳಲ್ಪಟ್ಟಿರು [illegible] ದರೆ

[illegible] ಪ್ರಕಾರಂ [illegible] ವ್ರತತ್ರಯ ಪ್ರಕಾರಂ ಗುಣವ್ರತಂ। [illegible] ವ್ರತ ಶಿಕ್ಷಾವ್ರತ [illegible] ॥

ಅ ವರೆ, ಅ [illegible] ವ್ರತಗಳೈದು, ಗುಣವ್ರತಗಳು ಮೂರು, ಶಿಕ್ಷಾವ್ರತಗಳು ನಾಲ್ಕು, ಈ ರೀತಿ ಹನ್ನೆರಡುವ್ರತಗಳು ಈ ಮರದಲ್ಲಿ ಉಪದೇಶಿಸಲ್ಪಟ್ಟಿದ್ದಾಗಿದೆ

[illegible] ಶ್ರಾವಕನು [illegible] ಪ್ರತಿ ದಿನ [illegible] ಪ್ರಾಣ [illegible] ಮಂತ್ರ, ದುವ್ವ, ಮಾಂಸ, ಜನಿ [illegible] ತ್ಯಾಗಿ, ಈ ಮುಂತಾದ [illegible] ರಗಳ ಪರಿತ್ಯಾಗ [illegible] ಗರ್ವ, ಲೋಭ, ಭಯ, ಕ್ರೋಧ [illegible] ನೆಸದಿಂದ ಸದ [illegible] ನಡೆಯುವ [illegible] ಗಳು, [illegible] ಹಾಳು [illegible] ಲಿ, ಬಿದ್ದಿರುವ ಅಥವಾ [illegible] ದಿಂದ [illegible] ವಾದ ಅನ್ಯರ ಪದಾರ್ಥಗಳನ್ನು [illegible] ಸದಿರುವ [illegible] ಯ [illegible] ನ [illegible] ರು ತಾ [illegible] ಕೆ ಲವಲ [illegible] ಕಲಂಗಳಲ್ಲಿ [illegible] ಕೆಯು, [illegible] ಗೃಹ [illegible] ಧನ, ಧಾನ್ಯ, ದ್ರವ್ಯ, [illegible] ನವರತ್ನಗಳು, ವಸನ, [illegible] ದಾನ್ಯವೆಂಬ [illegible] ವರಿಮಿತ [illegible] ಪರಿಗ್ರಹ [illegible]

[illegible] ಗುಣವ್ರತಗಳು [illegible] ಯಾವದಿಕ್ಕಿನಲ್ಲಿದರೂ ಪರಿಮಿತ ಸಂಚಾರವ [illegible] ಮಾಡಿಕೊಳ್ಳುವುದು ಒಗ್ಗ [illegible] ದೇಶ [illegible] ವಿರುಯೆಂದೂ, [illegible] ಸಕಗಳಂಥ ನಾನಾವಿಧ ಆಯುಧಂಗಳನು [illegible] ಅನರ್ಥದಾವ ವಿರತಿಯೆಂದೂ, ಮೂರುನಿದಗಳುಳ್ಳದ್ದಾಗಿರುತಿದೆ

೩ ಶಿಕ್ಷಾವ್ರತಗಳ್ಯಾವುವೆಂದರೆ,—ತ್ರಿಸಂಧ್ಯಾಸಮಯದೊಳು, ಸರ್ವಾರ್ಥ ರೌದ್ರಮನ್ನಗಲಿ, ಭಾವಶುದ್ಧಿಯೊಳನೆ ಸರ್ವ [illegible] ಗುರುವಂ ನಮಸ್ಕಾರ ಮಾಳ್ಪುದೇ ಸಾಮಾಯಿಕ, ಅಥವಾ ದೇಶಾವಕಾಶಿಕವೆಂಬ ಮೊದಲನೆಯ ವ್ರತವು ಅಷ್ಟಮಿ, ಚತುರ್ದಶೀ ಪರ್ವದಿನಗಳಲ್ಲಿ ಕ್ರಿಯಾಸಮೇತನಾಗಿ ಏಕಭುಕ್ತ ಮಾಳ್ಪುದು [illegible] ಮುಪವಾಸವೆಂಬ ಯೆರಡನೆಯ ವ್ರತವು ಸಕಲಗುಣಸಂಪನ್ನರಾದ ಮುನೀಶ್ವರರು ಮೊದಲು ಸತ್ಕರಿಸಿ ಬಳಿಕ ತಾನು ಭುಜಿಸುವಣವು ಅತಿಥಿ ವಿಭಾಗವೆನಿಪ ಮೂರನೆಯ ವ್ರತಮಕ್ಕುಂ ಸಕಲ ಪರಿಗ್ರಹಮಂ ತೊರೆದು ಅಕಲಂಕವ್ರತಮನಾಂತು ತನುವಂ ಬಿಡುವಣವು ಸಲ್ಲೇಖನವೆಂಬ ನಾಲ್ಕನೆಯ ವ್ರತವೆನಿಸಿಪ್ಪುದು ಮೇಲೆ ಕಂಡ ಹನ್ನೆರಡು ವ್ರತಗಳಲ್ಲಿ ಅಣುವ್ರತಗಳೆಂಬವು ಮಹಾವ್ರತಗಳೆನ್ನಿಸಿಕೊಳ್ಳುವವು ಇವು ಬುದ್ಧಿಯಿಂದಲೂ, ಪರಿಗ್ರಹಿಸತಕ್ಕವಾಗಿವೆ

ತ್ರಿವಾನಾಂ [illegible] ನಾಮಾಪ್ತಾಗಮ [illegible] ತಾಂ। ತ್ರಿಮೂಢಾ [illegible] ದಕಂ ಮಷ್ಟಾಂಗಂಸಮ್ಯಗ್ದರ್ಶನಮಸ್ಮಯಂ॥

ಅಂದರೆ, ನಿಶ್ಚಯ ಸ್ವರೂಪವಾದ ಆಪ್ತಾಗಮ ಪದಾರ್ಥಂಗಳ ಶ್ರದ್ಧೆಯೇ ಸಮ್ಯಗ್ದರ್ಶನವೆನ್ನಿಸಿಕೊಳ್ಳುತಿದೆ ಇದು ಮೂರುವಿಧ ಮೂಢತ್ವಗಳಿಂದ ತಿರಸ್ಕೃತವಾದ್ದಾಗಿಯೂ ನಿಶ್ಶಂಕತೆ ಮೊದಲಾದ ಸುಗುಣಗಳುಳ್ಳದ್ದಾಗಿಯೂ ಅಷ್ಟವಿಧ ಮದರಹಿತವಾದದ್ದಾಗಿಯೂ ಇರುತಿದೆ

ಆಪ್ತನೆಂತಾವನೆಂದರೆ,—

ಆಪ್ತೇನೋತ್ಸನ್ನದೋಷೇಣಸರ್ವಜ್ಞೇನಾಗಮೇಶಿನಾ। ಭವಿತವ್ಯಂನಿಯೋಗೇನನಾನ್ಯಥಾ ಹ್ಯಾಪ್ತತಾಭವೇತ್।

ಅಂದರೆ,—ಕ್ಷುಧಾದ್ಯಷ್ಟಾದಶ ದೋಷರಹಿತನಾಗಿಯೂ, ಸಮಸ್ತ ಪದಾರ್ಥಗಳನ್ನೂ ಕ್ರಮಕರಣ ವ್ಯವಧಾನವಿಲ್ಲದೆ ತಿಳಿದುಕೊಳ್ಳತಕ್ಕವನಾಗಿಯೂ ಭವ್ಯಜನಗಳಿಗೆ ಮೋಕ್ಷೋಪಾಯ ತತ್ತ್ವಸ್ವರೂಪವನ್ನು ಬೋಧಿಸತಕ್ಕವನಾಗಿಯೂ ಇರುವವನು ಆಪ್ತನೆನ್ನಿಸಿಕೊಳ್ಳುವನು. ಮತ್ತು ಅವನೆಂತೆನುವದೆ—

ಶ್ಲೋ॥ ಪರಮೇಷ್ಠೀಪರಂಜ್ಯೋತಿರ್ವಿರಾಗೋ ವಿಮಲಃಕೃತೀ। ಸರ್ವಜ್ಞೋನಾದಿಮಧ್ಯಾಂತಸ್ಸಾರ್ವಃ ಶಾಸ್ತೋಪಲಾಲ್ಯತೇ।

ಅಂದರೆ, ಇಂದ್ರಾದಿವಂದ್ಯವಾದ ಪರಮಪದದಲ್ಲಿ ರತನಾದ್ದರಿಂದ ಪರಮೇಷ್ಠಿಯಾಗಿಯೂ ಕೇವಲಜ್ಞಾನಸ್ವರೂಪನಾದ್ದರಿಂದ ಪರಂಜ್ಯೋತಿಯಾಗಿಯೂ, ರಾಗಾದ್ಯಭಾವ ಕಾರಣನಾದ್ದರಿಂದ ವಿರಾಗಿಯಾಗಿಯೂ, ಜ್ಞಾನಾವರಣಾದಿ ಕರ್ಮರಹಿತನಾದ್ದರಿಂದ ವಿಮಲನಾಗಿಯೂ, [illegible] ಯೆಂಬ ವಸ್ತುಸ್ವರೂಪವನ್ನು ತಿಳಿಯುವ [illegible] ಜ್ಞಾನಸಂಪನ್ನನಾದ್ದರಿಂದ ಕೃತಿಯಾಗಿಯೂ, ಸಮಸ್ತಪದಾರ್ಥಗಳನ್ನು ಅತ್ಯಂತವಾಗಿ ತಿಳಿದವನಾದ್ದರಿಂದ ಸರ್ವಜ್ಞನಾಗಿಯೂ, ಆಪ್ತಸಂತಾನಾಪೇಕ್ಷೆಯಿಲ್ಲದ ಆದಿಮಧ್ಯಾಂತರಹಿತನಾದ್ದರಿಂದ ಅನಾದಿಮಧ್ಯಾಂತನಾಗಿಯೂ, ಜೀವರಿಗೆ ಇಹಪರ ಸಾಧಕನಾದ ಸನ್ಮಾರ್ಗೋಪದೇಶಕನಾದ್ದರಿಂದ ಸಾರ್ವನಾಗಿಯೂ, ಪೂರ್ವಾಪರ ವಿರೋಧ ದೋಷವಿಲ್ಲದ ಜೀವಾಜೀವಾದಿ ಪದಾರ್ಥಗಳನ್ನು ಯಥಾವಸ್ಥಿತವಾಗಿ ತಿಳಿಸುವನಾದ್ದರಿಂದ ಶಾಸ್ತೃವಾಗಿಯೂ, ಸರ್ವಲೋಕವಂದ್ಯನಾಗಿಯೂ, ನಿರುಪಮ ಮಹಿಮಯುಕ್ತನಾಗಿಯೂ, ಕೇವಲ ನಿರ್ಮಲನಾಗಿಯೂ, ಪಾಪಾನುರಹಿತರ ಜ್ಯೋತಿಷ್ಕ ಕಲ್ಪವಾಸಿಗಳೆಂಬ ಚತುಃಪ್ರಕೃತ ಪ್ರಜಾಪೂಜ್ಯನಾಗಿಯೂ, ನಿರವಯವಿಭವನಾಗಿಯೂ, ಯಿರುವನು. ಇಂತಾ ಆಪ್ತನಿಂದಾಗತಕ್ಕ ಕಾರ್ಯವು ಉನ್ನತಿಯಾಗುವಿಯದು

ಅಷ್ಟಾದಶದೋಷಗಳ್ಯಾವವೆಂದರೆ —

ಶ್ಲೋ॥ ಕ್ಷುತ್ಪಿಪಾಸಾಜರಾತಂಕಜನ್ಮಾಂತಕಭಯಸ್ಮಯಾಃ। ನರಾಗದ್ವೇಷಮೋಹಾಶ್ಚಯಸ್ಯಾಪ್ತಸ್ಸಪ್ರಕೀರ್ತ್ಯತೇ॥

ಅಂದರೆ—ಕ್ಷುಧೆ ೧, ಬಾಯಾರಿಕೆ ೨, ವಾರ್ಧಕ ೩, ತೀವ್ರರೋಗ ೪, ಜನ್ಮ ೫, (ಅಂದರೆ, ಚತುರ್ಗತಿ ಭ್ರಮಣರೂಪವಾದ ಸಂಸಾರದೊಳು ಜನಿಸುವಿಕೆ) ಮರಣ ೬, ಭಯ ೭, (ಅಂದರೆ, ಇಹಲೋಕ ೧, ಪರಲೋಕ ೨, ಅತ್ರಾಣ ೩, ಅಗುಪ್ತಿ ೪, ಮರಣ ೫, ವೇದನಾ ೬, ಆಕಸ್ಮಿಕ ೭, ಇವೇ ಸಪ್ತವಿಧಭಯಗಳು,) ಸ್ಮಯ, (ಅಂದರೆ, ಜಾತಿಕುಲಮದಗಳು) ರಾಗ ೯, ದ್ವೇಷ ೧೦, ಮೋಹ ೧೧, ಚಿಂತಾ ೧೨, ರತಿ ೧೩, ನಿದ್ರಾ ೧೪, ವಿಸ್ಮಯ ೧೫, ವಿಷಾದ ೧೬, ಸಂತೋಷ ೧೭, ದುಃಖ ೧೮, ಇವೇ ಅಷ್ಟಾದಶ ದೋಷಗಳು ಇಂತಾ ದೋಷಗಳೊಂದೂ ಆಪ್ತನಲ್ಲಿರಲಾರವು

BREACH OF TRUST

ಲೋಕದಲ್ಲಿ ಪ್ರಯೋಜನಾಪೇಕ್ಷೆಯುಳ್ಳ ಮನುಷ್ಯನು ಬಾಹ್ಯಸ್ವಭಾವದ ಕೆಲವು ಸಂಗತಿ ಪರವಾಗಿ ಪ್ರಯೋಜನ [illegible] ವ್ಯಾಪಕನಾದ [illegible] ನಂಬಿ ಆಶ್ರಯಿಸುತ್ತಾನೆ ಅನ್ಯನ ಪ್ರಯೋಜನಾಪೇಕ್ಷೆಯೊಂದು, ತನ್ನ ನಂಬಿಕೆಗೆ [illegible] ನಾದವನ ಗುಣದೋಷ ವಿಚಾರವನ್ನು ಅವನಾಗಿ ಹೊಂದದಿಲ್ಲವು [illegible] ಗಳೆ, [illegible] ಅಂತರಂಗದಲ್ಲಿ ಇಂತೆಂದು ತೋರುವ ಪರ [illegible] ಲಕ್ಷಣ [illegible] ಗಳೂ, [illegible] ವಿಶ್ವಾಸವೂ ಅನ್ಯನಿಗೊಂದು [illegible] ನಂಬಿಕೆಯನ್ನು ಹುಟ್ಟಿಸುತ್ತವೆ, ಅವನು ಮಾಡುವ ಅಧಿಕ [illegible] ಪ್ರಯೋಜನಾಪೇಕ್ಷೆ [illegible] ನಂಬಿಕೆಯನ್ನು [illegible] ಪ್ರಯೋಜನಾಪೇಕ್ಷೆಯೆಂಬ [illegible] ನಂಬಿಕೆ [illegible] ಮನುಷ್ಯಬುದ್ಧಿಯು ಪರವಸ್ತುಗಳ [illegible] ಅವನು ಅವಿವೇಕಿಯಾಗುತ್ತಾನೆ [illegible] ಅವಿವೇಕವನ್ನುಂಟುಮಾಡುವ [illegible] ನಂಬಿ ಅವನನ್ನಾಶ್ರಯಿಸುವವರಿಗೂ [illegible] ರಕ್ಷಿಸುವವನ್ನು, ಅವನು ಆಲಂಬನಾಸ್ಥ [illegible] ವಿಶ್ವಾಸಘಾತ ಮಾಡಿದರೆ [illegible] ಮೂಲಕ ಮನೋ [illegible] ಯನ್ನು, [illegible] ಅವನ ಕೃತ್ಯಕ್ಕೆ [illegible] ಮಾಡುತ, ಅಂತಾ [illegible] ನಂಬಿ [illegible] ತನ್ನ [illegible] ಲಕ್ಷ್ಯಗೊಳಿಸದೆ [illegible] ಅವನ [illegible] ಪ್ರಯೋಜನಕ್ಕೆ [illegible] ನಂಬಿದಂತಾದ [illegible] ಸಂತಾ [illegible] ಕಾರಣನಾಗುವದೆ ಮತ್ತು [illegible] ಅವಕಾಶವನ್ನು ಅವನಿಗೆ ಮುಖ್ಯ ಕಾರ [illegible] ತನ್ನನು [illegible] ಲೋಕದೊಳು ಮನುಷ್ಯನಿಗೆ [illegible] ಅಂತಾ [illegible] ಗಳೂ, [illegible] ಗಳೂ, ದೋಷ [illegible] ಗಳೂ, ಕೇವಲ ಅವನ [illegible] ದಯಪಾಲಿಸುತ್ತಾ [illegible] ಅವನಿಗೆ ಬೇಕಾದ [illegible] ಪ್ರಯೋಜನ [illegible] ಈಶ್ವರನು [illegible] ಆರೋಪಿಸುವ [illegible] ಅನ್ಯನ [illegible] ಪ್ರಯೋ [illegible] ಅವನಿಂದ [illegible] ಅನ್ಯನೊ [illegible] ಅವನಿಂದ [illegible] ಸ್ಥಿತಿಯನ್ನು [illegible] ಅಧಿಕ [illegible] ಉತ್ಕರ್ಷ [illegible] ಪಡುತ್ತಾರೆ ಅವರವರಿಗೆ ತಕ್ಕಂತಾ ಪ್ರಯೋಜನ [illegible] ಉಂಟಾಗದೆ ಹೋಗುವದಿಲ್ಲವು [illegible] ಮನುಷ್ಯನ ಸ್ಥಿತಿ [illegible] ದೋಷ [illegible]

[illegible] ಪ್ರಯೋಜನವೂ, [illegible] ಒಂದಕ್ಕೊಂದು [illegible] ಪ್ರಯೋಜನಾಪೇಕ್ಷೆ [illegible] ಸಾಧಾರಣವಾದದ್ದಾಗಿರುತ್ತದೆ [illegible] ಕಾಪೂ [illegible] ತಾವು [illegible] ಪ್ರಯೋಜನಕ್ಕಾಗಿ [illegible] ಕರ್ತವ್ಯವನ್ನು [illegible] ತಾವು [illegible] ಮನಸ್ಸನ್ನು [illegible] ಅವನ [illegible] ಅನ್ಯಮತ [illegible] ತಮಗೆ [illegible] ಅವರ [illegible] ಅಧಿಕಾರ [illegible] ಈಶ್ವರನು [illegible] ಮನುಷ್ಯನು [illegible] ದೇವರಿಂದ [illegible] ಸ್ಥಿತಿಗಳಲ್ಲಿ [illegible] ಕಾರ್ಯದಿಂದ, ಅಂತಾ ಮನುಷ್ಯನು ತನ್ನ ಕರ್ಮಫಲವನ್ನು [illegible] ಅವನ [illegible] ಪ್ರಯೋಜನವನ್ನು [illegible] ತನ್ನ [illegible] ಲೋಕ [illegible] ಆತನ [illegible] ತನ್ನ [illegible] ಸಂತೋಷ [illegible] ಅಂತಾ [illegible] ಧರಿಸಿದ್ದರೂ ಅವರ [illegible] ಅನವರತ [illegible] ಪ್ರಯೋಜನಕ್ಕಾಗಿ [illegible] ಅವರ [illegible] ಮುಖ್ಯವಾಗಿ [illegible] ಪ್ರಯೋಜನಕ್ಕೆ [illegible] ಉತ್ತಮ ಧರ್ಮ [illegible] ಕಾಲವಾಗಿರುತಿದೆ. ಆದಕ್ಕೆ [illegible] ದೋಷ [illegible] ಈಶ್ವರನು [illegible] ಫಲವನ್ನು [illegible] ಅವರ [illegible]

LOCAL AND PROVINCIAL NEWS

ಒಳದೇಶಮತ್ತು ತಾಲ್ಲೂಕಿನ ವೃತ್ತಾಂತಗಳು

The Mysore State Railway —ಮಾಹೇ ಮಜಕೂರ ೬ನೇ ತಾರೀಖಿಗೆ ಪೈದಾದವಾರದಲ್ಲಿ ಮೈಸೂರು ಸ್ಟೇಟ್‌ರೈಲ್ವೆಯಮೂಲಕ ಒಟ್ಟು ೭,೩೭೮—೮—೦ ರೂಪಾಯಿಗಳು ಉತ್ಪನ್ನವಾಗಿರುತದೆ

Mysore Examinations —ಅಸಿಸ್ಟೆಂಟ ಕಮ್ಮಿಶನರ, ಅಮಲ್ದಾರ, ಮುನ್ಸಫ ವಗೈರೇರ ಪರೀಕ್ಷೆಯು ಈದಿನ ಉಪಕ್ರಮವಾಗಿ ಬರುವ ಶನಿವಾರದವರಿಗೆ ಇಲ್ಲಿನ ಪಬ್ಲಿಕ ಆಫೀಸ ಕಟ್ಟಡದ ಮಧ್ಯಹಾಲಿನಲ್ಲಿ ನಡೆಯುವದು.

Privilege leave —ಬೆಂಗಳೂರು ಟೌನ ಮ್ಯಾಜಿಸ್ಟ್ರೇಟರಾದ ಬಾಬನದೂರ ಮ॥ ಮ ಹನುಮಪ್ಪನವರಿಗೆ ಮಾಹೇಮಜಕೂರ ೬ನೇ ತಾರೀಖುಮೊದಲು ..ದಿನಗಳ ಪ್ರಿವಿಲೇಜರಜಾ ಕೊಡಲ್ಪಟ್ಟಿರುವಂತೆ ತಿಳಿಯಬರುತದೆ

Joint Stock Companies in Mysore —ಸನ್ ೧೮೮೪—೮೫ನೇ ಇಸವಿಯಲ್ಲಿ ಮೈಸೂರು ದೇಶದೊಳು ಈಗ ಒಟ್ಟು ೬೮ ಜಾಯಿಂಟ ಸ್ಟಾಕ ಕಂಪೆನಿಗಳು ಯಿರುವಂತೆಯೂ, ಅವುಗಳಮೂಲಕ ಸರ್ಕಾರಕ್ಕೆ ಜುಮಾನ ೧,೨೦೧ ರೂಪಾಯಿಗಳವರೆಗೆ ರಿಜಿಸ್ಟ್ರೇಶನ ಫೀ ವಸೂಲಾದುದೆಯೂ, ಪರಾದ ಖರ್ಚುಜಾತಾ ೪೦೦ ರೂಪಾಯಿಗಳುಮಾತ್ರ ಖರ್ಚಾಗಿರುವಂತೆಯೂ ತಿಳಿಯಬರುತದೆ.

Transfer —ಈ ಡಿಸ್ಟ್ರಿಕ್ಟ ಪೋಲೀಸ ಅಸಿಸ್ಟೆಂಟ ಕಮ್ಮಿಶನರ ಮಾ। ಕೃಷ್ಣಯ್ಯಂಗಾರ್ಯರವರು, ಗತ ಶನಿವಾರದದಿನ ತಮ್ಮ ಕೆಲಸದ ಚಾರ್ಜನ್ನು ಇಲ್ಲಿನ ಟೌನ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿದರಂತೆಯೂ ಅವರು ಕೋಲಾರ ಚಿಕ್ಕನಾಗಲೂರಿಗೆ ಹೋಗಿ ಅಲ್ಲಿನ ಪ್ರೊಬೆಶನ ಅಸಿಸ್ಟೆಂಟ ಕೆಲಸದ ಚಾರ್ಜನ್ನು ವಹಿಸುವರೆಂದೆಯೂ ತಿಳಿಯಬರುತದೆ

The Resident —ಇಲ್ಲಿನ ಆಫಿಶಿಯೇಟಿಂಗ ಬ್ರಿಟಿಷ ರೆಸಿಡೆಂಟರಾದ ಮಾ॥ ಗಾರ್ಡನ್‌ರವರು ಗತ ಶುಕ್ರವಾರದ ದಿನ ಪೇಟೆಗೆ ದಯಮಾಡಿ ಇಲ್ಲಿನ ಜೋಡು ವಗೈರೆ ಕೈಗಾರಿಕೆಗಳನ್ನೆಲ್ಲ ನೋಡಿಕೊಂಡು ಹೋದರು ಇವೆಲ್ಲವ ತಾವು ನೋಡಬೇಕೆಂದ ಅಂಗಡಿಗಳನ್ನೆಲ್ಲ ನೋಡಿದರಲ್ಲದೆ, ತಮ್ಮ ದರ್ಶನ ಸುಮುಹೂರ್ತಗಳಿಗೆ ಯೋಗ್ಯರಾದವರಿಗೆಲ್ಲ ಚೀಟಿಯನ್ನಿತ್ತು ಅವರೊಡನೆ ಸಂಭಾಷಣೆ ಮಾಡಿದಲ್ಲದೆ, ತಮ್ಮ ಸೌಜನ್ಯವನ್ನು ವ್ಯಕ್ತಪಡಿಸಿದರೆಂದು ಕೇಳುವದಕ್ಕೆ ಸಂತೋಷಿಸುವೆವು.

Investiture of powers — ತುಮಕೂರು ತಾಲ್ಲೂಕು ಎಕ್ಟಿಂಗ ಅಮಲ್ದಾರ ವ ಮೂರನೇಕ್ಲಾಸ ಮ್ಯಾಜಿಸ್ಟ್ರೇಟರಾದ ಮೆಸ್ಟರ ಸುಬ್ಬಯ್ಯನವರಿಗೆ ಕ್ರಿಮಿನಲ ಪ್ರೊಸಿಜರ ಕೋಡಿನ ೩೩೫ನೇ ಸೆಕ್ಷನಿನ ನಿಯಮವನ್ನನುಸರಿಸಿ, ಫಿರ್ಯಾದಿಗಳ ವ ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ ಕನ್ನಡಭಾಷೆಯಲ್ಲಿ ತೆಗೆದುಕೊಳ್ಳುವದಕ್ಕೆ ಅಧಿಕಾರ ಕೊಡಲ್ಪಟ್ಟಿರುವಂತೆ ತಿಳಿಯಬರುತಿದೆ. ಬಸವಾಪಟ್ಟಣದ ಡೆಪ್ಯೂಟಿ ಅಮಲ್ದಾರ ವ ಮೂರನೇಕ್ಲಾಸ ಮ್ಯಾಜಿಸ್ಟ್ರೇಟರಾದ ಮ॥ ರಾಘುವೇಂದ್ರರಾಯರವರಿಗೆ ಸಹ ಸದರೀ ಅಧಿಕಾರ ಕೊಡಲ್ಪಟ್ಟಿರುತಿದೆ.

Remission of stamp duty —ಸನ್ ೧೮೭೬ನೇ ಇಸವಿ ೩ನೇ ನಂಬರ ಕೋರ್ಟುಫೀಸ ಆಕ್ಟಿನ ೩೫ನೇ ಸೆಕ್ಷನ್ನಿಂದ ವಿಧಿಸೋಣಾದ ಅಧಿಕಾರಗಳನ್ನು ಚಲಾಯಿಸುವದರಮೂಲಕ ಶ್ರೀಮನ್ಮಹಾರಾಜಾ ಸರ್ಕಾರದವರು, ಸದರೀ ಆಕ್ಟನ್ನನುಸರಿಸಿ ಖೂನೀ ದಸ್ತೈರ ಆಪಾದನೆಯಾದ ಮನುಷ್ಯನ ದರಪ ವಾದಿಸರಕ್ಕೆಬಗ್ಗೆ ಕೊರ್ಟನವರಿಂದ ನೇಮಕವಾಗಲ್ಪಡತಕ್ಕ ಪ್ಲೀಡರಿಗೆ, ಸೆಷನ ಕೋರ್ಟನವರಿಂದಾಗಲಿ ಅಥವಾ ಚೀಫ ಕೋರ್ಟಿನವರಿಂದಾಗಲಿ, ಕೊಡಲ್ಪಡತಕ್ಕ ವಕಾಲತ್ತು ಪತ್ರಗಳಮೇಲಿನ ಸೂಲ್ಕಾದ ಪಡತಕ್ಕ ರುಸುಂಗಳನ್ನು ಮಾಫ ಮಾಡಿರುವದಾಗಿ ತಿಳಿಯಬರುತಿದೆ

TELEGRAPHIC SUMMARY

ತಂತಿ ವೃತ್ತಾಂತವು

[illegible]

SUMMARY OF NEWS.

ವೃತ್ತಾಂತ ಸಂಗ್ರಹವು

The late Mr. G. Moothoosamy Chetty [illegible]

Joint stock companies —[illegible]

Government Printing —[illegible]

Death of a great Sanskrit Scholar [illegible]

A public spirited gift to Bellary —[illegible]

Court Vacations —[illegible]

BANGALORE —Printed and published for the Proprietor, at the KARNATIC PRESS —1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XII.] BANGALORE.—MONDAY, JUNE 22, 1885. [No. 25.

ಸಂಪುಟ ೧೨.] ಬೆಂಗಳೂರು.—ಸನ್ ೧೮೮೫ನೇ ಇಸವಿ ಜೂನ್ ೨೨ನೇ ತಾರೀಖು ಸೋಮವಾರ. [ಸಂಚಿಕೆ ೨೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜು.

[illegible]

NOTICE TO SUBSCRIBERS

[illegible]

ಪ್ರಕಟನೆ.

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೊ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗುಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ಏಜಂಸಿ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲೀಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸಗ್ರಂಥವಾಗಿ ಸುದೃಢವಾದದ್ದಾಗಿಯೂ ನವರಸಪರಿಪೂರ್ಣವಾಗಿ ಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧-೮-೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ ತಿಂಗಯ್ಯ ಅಂಡ್ ಕೊ ಯವರಲ್ಲಾಗಲಿ ದೊರೆಯುವದು.

ಬಹಳ ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,

ಮುನಸಫ್, ಎಡೆಹಳ್ಳಿ,

ಕಡೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ನಿಷ್ಠಾವ್ಯಕ್ತಿಗಳಿಗೂ, ತನ್ಮತಾಭಿಮಾನವುಳ್ಳವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತ್ರೆಯೆಂಬ ಕಾವ್ಯರತ್ನವು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಕುಣಿಗಲ್ ಅಸಿಸ್ಟೆಂಟ್ ಇಂಜನಿಯರ್ ಮೆ॥ ಪಿ. ಗೋವಿಂದಾಚಾರ್ಯರವರಿಗೆ ಮೊಬಲಗು ಸಹಿತ ಬರೆದುಕೊಂಡರೆ ಪುಸ್ತಕಗಳು ಕಳುಹಿಸಲ್ಪಡುವವು.

ಅಪ್ಪಟ ತರಹಾ ಪುಸ್ತಕ	೦—೧೪—೨
ಮಧ್ಯಂತರಹಾ ,,	೦—೧೨—೨
ಅಂಚೆಹಾಸಲ್ ,,	೦—೨—೨

ಬೆಂಗಳೂರ್ ತಾ॥ ೩ನೇ ಜೂನ್ ೧೮೮೫

NOTICE.

VAIDYASARASANGRAHA.

Price including Postage, Rs 5 6 0

[illegible]

[illegible] ... ರೂ॥ ೫—೦—೬

[illegible] ೦—೬—೦

ಟಿ. ಬಿ. ವೆಂಕಟಾಚಾರ್, ಅಸ್ಸಿಸ್ಟೆಂಟ್ [illegible], ಬೆಂಗಳೂರು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 22, 1885

೧೮೮೫ನೇ ಜೂನ್ ೨೨ನೇ ತಾ॥ ಸೋಮವಾರ.

HIGH HANDED INSOLENCE

ಔದ್ಧತ್ಯಯುಕ್ತವಾದ ಅಹಂಕಾರವು.

ಈಸಂಸ್ಥಾನದಿಂದ ಭಾರೀ ಸಂಬಳ ಪಡೆಯುತ್ತ, ಒಂದು ಸಬ್ ಡಿವಿಜನಿಗೆ ಜವಾಬ್ದಾರಿಯುಳ್ಳ ಆಫೀಸರರಾಗಿದ್ದುಕೊಂಡು, ತಾವಿಲ್ಲಿ ಮಾಡಿದ ಶ್ಲಾಘ್ಯವಾದ ನೌಕರಿಯ ಬಗ್ಗೆ ಗಣನೀಯವಾದ ಸನ್ಮಾನವನ್ನು ಪಡೆದು ಗೌರವ್ಯರೆನಿಸಿಕೊಂಡಿರುವ ಒಬ್ಬ ದೊಡ್ಡಮನುಷ್ಯರು, ಗೌರವ್ಯನಾಗಿಯೂ ಮಾನಿಯಾಗಿಯೂ ಇರುವ ಒಂದು ಗ್ರಾಮದ ಪಟೇಲನ ವಿಷಯದೊಳು ಈಚೆಗೆ ನಡೆಸಿದ ಕ್ರಮವನ್ನು ಕೇಳುವದಕ್ಕೂ, ಅದನ್ನು ಈ ಪತ್ರಿಕಾಮೂಲಕ ತಿಳಿಸುವದಕ್ಕೂ ನಾವು ಬಹಳ ವಿಷಾದಿಸುವೆವು, ಅದೇನಂದರೆ —

ಸದರೀ ಸಬ್ ಡಿವಿಜನ್ ಆಫೀಸರರು ಜಮಾಬಂದಿಗೆ ಹೋಗಬೇಕಾಗಿದ್ದು ತಮ್ಮಗಾಡಿಗೆ ಎತ್ತುಗಳು ಬೇಕಾಗಿ ರೆವಿನ್ಯೂ ಜವಾನನಮೂಲಕ ಮುಂದಿನ ಮಜಲಿನ ಗ್ರಾಮಪಟೇಲನಿಗೆ ಹೇಳಿ ಕಳುಹಿಸಿದರಂತೆ. ಈಬಂದವು ಸ್ವಲ್ಪ ಮುಂಚಿತವಾಗಿ ತಿಳಿಸಲ್ಪಡದೆ ಹೋದದರಿಂದ ಪಟೇಲನು ಮಾರ್ಗದಲ್ಲಿ ಮೇಯುತಲಿದ್ದ ಎತ್ತುಗಳನ್ನು ತರುವದಕ್ಕೆ ಸಾವಕಾಶವಾಯಿತು. ಇದಲ್ಲದೆ ರಸ್ತೆಯಲ್ಲಿ ಒಳ್ಳೇ ಜೋಡಿ ಸಿಕ್ಕದೆ ಹೋಗಿ ಅಸಮರ್ಪಕ ಎತ್ತುಗಳನ್ನು ಗಾಡಿಗೆ ಕಟ್ಟಲು ಅವು ಜಗಳ ಹೂಡಿ ತಪ್ಪಿಸಿಕೊಂಡು ಓಡಿಹೋದವು. ಸಬ್ ಡಿವಿಜನ್ ಆಫೀಸರು ಬಹಳ ಕೋಪ ಪರವಶರಾದುದರಿಂದ ತಮ್ಮ ಕರ್ತವ್ಯ ಸ್ವರೂಪವನ್ನು ಮರೆತು, ಸರ್ಕಾರ್ ನೌಕರನಾದ ಪಟೇಲನ ಗೌರವವನ್ನು ಬಿಡಿಸಿದೆ, ಅವನನ್ನು ಜೋಡಿನಿಂದ ಹೊಡೆದುದೆಯೂ, ಅದರಮೇಲೆ ಅವನು ಈ ಅಂಶವನ್ನು ದಿವಾನರವರಿಗೂ ತಿಳಿಸಿ ಕಡೆಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಅಕ್ರಮವಾಗಿ ತನ್ನನ್ನು ಹೊಡೆದದಕ್ಕೋಸ್ಕರ ಇಂಡಿಯನ್ ಪೀನಲ್ ಕೋಡ್ ೩೨೩ ಮತ್ತು ೩೫೫ ನೇ ಸೆಕ್ಷನ್ ಗಳನ್ನನುಸರಿಸಿ ಸಬ್ ಡಿವಿಜನ್ ಆಫೀಸರಮೇಲೆ ಫಿರ್ಯಾದಿ ಮಾಡಿದನೆಂತಲೂ, ಬಳಿಕ ವಿಚಾರಣೆಯಲ್ಲಿ ಬೇರೆ ಚಿತ್ರವಾಗಿ ಪರಿಣಮಿಸಿ ಕಡೆಗೆ ಕಕ್ಷಿಗಾರರ ಪರಸ್ಪರ ರಾಜೀನಾಮೆಯ ಮೂಲಕ ಫೈಸಲಾದುದೆಯೂ ತಿಳಿಯಬರುತಿದೆ. ಯದ್ಯಪಿ ಸಬ್ ಡಿವಿಜನ್ ಆಫೀಸರು ಜೋಡಿನಿಂದ ಹೊಡೆದರೆಂಬ ಅಂಶ ಸಂದಿಗ್ಧವಾಗಿದ್ದಾಗ್ಯೂ ಅವರು ಜುಲುಂ ಮಾಡಿದವಿಷಯವೂ ಅದಕ್ಕಾಗಿ ಪಟೇಲನ ಮನ್ನಣೆಯಿಂ ಕೇಳಿಕೊಂಡ ವಿಷಯವೂ ಒಂದು ಪಬ್ಲಿಕ್ ಕೋರ್ಟಿನ ಮೂಲಕ ನಿರ್ಧಾರಿಸಲ್ಪಟ್ಟವಾಗಿರುತಿವೆ. ಮುಖ್ಯವಾಗಿ ಸದರೀ ಸಬ್ ಡಿವಿಜನ್ ಆಫೀಸರರು ಸ್ವತಃ ಮ್ಯಾಜಿಸ್ಟ್ರೇಟರಾಗಿದ್ದುಕೊಂಡು ತಪ್ಪಿತಗಳನ್ನು ಮಾಡತಕ್ಕ ಅನ್ಯರನ್ನು ದಂಡಿಸುವ ಅಧಿಕಾರವುಳ್ಳವರಾಗಿ, ತಾವೇ ಈರೀತಿ ನಡೆಸಿದ್ದು ಕೇವಲ ವಿಷಾದಕರವಾಗಿದೆ. ಪಟೇಲನೊಂದುವೇಳೆ ತಮ್ಮ ಆಜ್ಞೆಯಂತೆ ನಡೆಯದಿದ್ದರೆ ಅವನನ್ನು ದಂಡಿಸುವುಕ್ಕೆ ಇದಕ್ಕಿಂತಲೂ ಯೋಗ್ಯವಾದ ಮಾರ್ಗಗಳು ಅನೇಕ ಇಲ್ಲದೆ ಹೋಗಲಿಲ್ಲವು. ಅದ್ಯೋ ಹಾಗೋ ಇರದೆ ಕೇವಲ ಅಸಹಜವಾದ ಮಾರ್ಗವು ಅವರಬುದ್ಧಿಸ್ಥವಾದದಕ್ಕಾಗಿ ಆಶ್ಚರ್ಯಪಡಬೇಕಾಗಿದೆ. ಇಂತಾ ತಪ್ಪಿತವು ಅನ್ಯನೊಬ್ಬನು ಮಾಡಿದ್ದಲ್ಲಿ ಅವನ ವಿಷಯದೊಳು ಕಾನೂನು ಮತ್ತೆಷ್ಟು ಕಠಿಣವಾದದ್ದಾಗಿರುವದು. ನ್ಯಾಯ ಪರಿಪಾಲನಾರ್ಥವಾಗಿಯೂ, ಪ್ರಜೆಗಳ ನೆಮ್ಮದಿಯ ಕಾಪಾಡತಕ್ಕಬಗ್ಯೂ ಮೊಕದರಾಗಿರತಕ್ಕ ಅಧಿಕಾರಿಗಳವರ್ತನವು ಈರೀತಿಯಾದರೆ ಅದು ಗವರ್ನಮೆಂಟಿನವರ ಕೀರ್ತಿಗೆ ನ್ಯೂನತೆಯನ್ನುಂಟುಮಾಡದಿರಲಾರದು. ಇಲ್ಲಿ ನ್ಯಾಯವು ಪ್ರತಿವಾದಿಯ ಬಲವನ್ನನುಸರಿಸಿದ್ದಾಗಿರುವದೆಂದು ತಿಳಿಯದೆ ಸದರೀ ಪಟೇಲನು ಇಷ್ಟರ ಪ್ರಯತ್ನವನ್ನು ಮಾಡಿದಂತೆ ತೋರುತಿದೆ. ಇಂತವುಗಳೆಲ್ಲ ಮಹಾರಾಜಾ ಸರ್ಕಾರದವರು ಅವಕಾಶ ಕೊಡುವದು ಯೆಷ್ಟುಮಾತ್ರವೂ ಕೀರ್ತಿಕರವಲ್ಲವು. ಅಧಿಕಾರಿಯಾದವನಿಗೆ ಯಾವಾಗಲೂ ಮರ್ಯಾದೆಯೂ, ಬರವಾಸ್ತೂ, ಮೃದುವಾಕ್ಯೂ, ಅನ್ಯರ ಯೋಗಕ್ಷೇಮಾಸಕ್ತಿಯೂ, ಸೌಲಭ್ಯವೂ, ಮುಖ್ಯಾಪೇಕ್ಷಿತವಾಗಿರುತಿವೆ. ಇವು ಕೇವಲ ಯೂನಿವರ್ಸಿಟಿಪ್ರಾಶಸ್ತ್ಯಗಳಿಂದಲಾಗಲಿ ವಾಲ್ಲಭ್ಯ ಬಲದಿಂದಲಾಗಲಿ ಯೆಷ್ಟುಮಾತ್ರವೂ ಉಂಟಾಗಲಾರದು. ಪರಂತು ಇವುಗಳಿಗೆ ವಯಸ್ಸೂ ದೇಶಕಾಲಗಳ ದೀರ್ಘಾನುಭವವೂ ಗೌರವ್ಯರಾದವರ ಪರಿಚಯಸಾಹಚರ್ಯವೂ, ಪ್ರಜಾನುರಾಗವೂ ಕಾರಣಗಳಾಗಿರುತಿವೆ. ಇವುಗಳೊಂದೂಯಿಲ್ಲದೆ ಯಾವದೋ ಒಂದುವಿಧ ಉದ್ವೇಗದೊಡನೆ ಮೊಕದಮ್ಮೆ ಹಲ್ಪಡತಕ್ಕವರ ಮೂಲಕ ಪ್ರಜೆಗಳಿಗೆ ಲಭಿಸುವ ಪ್ರಯೋಜನಗಳು ತಾವಿನ ಮರ್ದನಗಳಿಗಿಂತಲೂ ಬೇರೆ ಯಾವರೂಪವಾಗಿರುವದು ? ಏನಂಬ ನಾವು ತಿಳಿಸುವದೇನಂದರೆ, ಮೈಸೂರು ಸಂಸ್ಥಾನದ ಅಧಿಕಾರಿಗಳದೆಸೆಯಿಂದ ಜನಗಳ ಸುಖ ಸಮಾಧಾನಗಳಿಗೆ ನ್ಯೂನತೆ ಉಂಟಾಗಲಾರದೆಂಬ ಭಾವವನ್ನೂ, ಅವರ ಅಧಿಕಾರ ಪ್ರಾಬಲ್ಯವು ನ್ಯಾಯನಿಬಂಧನೆಗಳಿಗೆ ಒಳಪಟ್ಟದೆಂಬ ನಂಬಿಕೆಯನ್ನೂ ಜನಗಳಿಗೆ ಉಂಟುಮಾಡಿಕೊಡುವದು ಮಹಾರಾಜಾ ಸರ್ಕಾರದವರಿಗೆ ಪ್ರಥಮಕರ್ತವ್ಯವಾಗಿರುತಿದೆ.

THE ADMINISTRATION OF THE BARODA STATE

ನಾವು ಯಾವಾಗಲೂ ನೇಟಿವ ಸಂಸ್ಥಾನಾಧಿಪತಿಗಳ ಪ್ರಜೆಗಳ ವೈಭವಾಭಿವೃದ್ಧಿಯಲ್ಲಿ ವಿಶೇಷ ಆಸಕ್ತಿಯುಳ್ಳವರೆಂಬ ಅಂಶ ನಮ್ಮ ವರ್ತನದಿಂದಲೂ, ಮನೋಭಾವದಿಂದಲೂ, ಯೆಂತವರಿಗೂ ವ್ಯಕ್ತವಾಗದಿರಲಾರದು. ಕದಾಚಿತ್ ಅಂತಾ ಸಂಸ್ಥಾನಾಧಿಪತಿಗಳಿಗೂ, ಅವರ ಪ್ರಜೆಗಳಿಗೂ ಯಾವ ವಿಷಯದೊಳಾದರೂ ಒಂದು ನ್ಯೂನತೆ ಉಂಟಾದರೆ ಅದು ನಮಗೆ ಕೇವಲ ದುಸ್ಸಹವಾಗಿರುತಿದೆ. ಅದರಿಂದ ನೇಟಿವ ಸಂಸ್ಥಾನಗಳವಿಷಯದಲ್ಲಿಯೇ ನಮ್ಮ ಲಕ್ಷ್ಯವು ಬಹಳವಾಗಿ ಆಕರ್ಷಿಸಲ್ಪಡುತಿದೆ. ಅದರಲ್ಲಿಯೂ, ವಿವೇಕಪೂರ್ವಕವಾದ ಪ್ರಭುತ್ವಕ್ಕೊಳಗಾದ ದೇಶದವಿಷಯವಾಗಿ ಯಾವದಾದರೊಂದಂಶ ತಿಳಿಯಬಂದರೆ ಅದು ಹೊರಪಡಿಸುವವರಲ್ಲಿ ನೈಸರ್ಗಿಕವಾದ ನಮ್ಮ ಉತ್ಸಾಹವು ಇಮ್ಮಡಿಸುತಿದೆ.

ಬರೋಡೇ ಸಂಸ್ಥಾನದ ಗಾಯಕವಾಡಿಯವರೂ, ಇಂದೂರ ಸಂಸ್ಥಾನದ ಹೋಳ್ಕರರವರೂ, ಗ್ವಾಲಿಯರ ಸಂಸ್ಥಾನದ ಸಿಂಧಿಯಾಯವರೂ, ಈಗ ಮಧ್ಯ ಅಥವಾ ಪಶ್ಚಿಮ ಇಂಡ್ಯದೇಶದೊಳಿಲ್ಲ ಪ್ರಸಿದ್ಧವಾದ ಮೂರು ಮಹಾರಾಷ್ಟ್ರ ಸಂಸ್ಥಾನಾಧಿಪತಿಗಳಾಗಿರುತ್ತಾರೆ. ಈ ಮೂರರಲ್ಲಿಕೆ ಗ್ವಾಲಿಯರ ರಾಜ್ಯವು ಕೇವಲ ವಿಸ್ತಾರವಾದದ್ದಾಗಿರುತಿದೆ. ಪರಂತು ಗಾಯಕವಾಡಿಯವರ ದೇಶವು ವಿಶೇಷ ಸಂಪದ್ಭರಿತವಾದದ್ದಾಗಿಯೂ, ಅಧಿಕ ಹುಟ್ಟುವಳಿಯಾಗತಕ್ಕದ್ದಾಗಿಯೂ ಇರುವದರಿಂದ ಈಗ ಅದು [illegible] ಯಾ ಪ್ರಸಿದ್ಧಿಯನ್ನೈದುತಲಿದೆ. ಪುರಾತನವಾದ ಘೂರ್ಜರ ದೇಶಕ್ಕೆ ಸೇರಿದ ಈ ಬರೋಡಾರಾಜ್ಯವು ೮,೫೭೦ ಚದುರು ಮೈಲುಗಳ ವಿಸ್ತೀರ್ಣವುಳ್ಳದ್ದಾಗಿಯೂ, ೨೨,೦೦,೦೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇರುತಿದೆ. ಚದುರು ಮೈಲಿಗೊಂದು ಸರಾಸರಿ ೨೫೦ ಮಂದಿಯ ಪ್ರಕಾರ ಅಲ್ಲಿ ವಾಸವಾಗಿದ್ದಾರೆ. ಮುಖ್ಯವಾಗಿ ಗುಜರಾತಿಭಾಷೆಯೇ ಅಲ್ಲಿ ಪ್ರಚಾರದೊಳದೆ. ಸನ್ ೧೮೭೫ನೇ ಇಸವಿಯವೊಳು ೧೮೮೦ನೇ ಇಸವಿಯವರೆಗೆ ಈ ರಾಜ್ಯದ ಆಡಳಿತ ವಿಷಯದೊಳು ಉಂಟಾದ ಅನೇಕ ವಿನಿಯಮಗಳು ಪ್ರಸಿದ್ಧವಾಗಿರುವದರಿಂದಲೂ, ಅನೇಕಸಂದರ್ಭಗಳಲ್ಲಿ ಅವು ಈ ಪತ್ರಿಕೆಯ ಮೂಲಕ ತಿಳಿಸಲ್ಪಟ್ಟವಾಗಿರುವದರಿಂದಲೂ, ಅವುಗಳವಿವರಣೆಯಿಲ್ಲಿ ಅನಾವಶ್ಯಕವು. ದೇಶವಿಸ್ತೀರ್ಣವನ್ನೂ ಅದರ ಪ್ರಜಾಸಂಖ್ಯೆಯನ್ನೂ ನೋಡಲಾಗಿ ಅಲ್ಲಿ ಸಾಲೀಯಾನಾ ಹುಟ್ಟುವಳೀಯಾಗತಕ್ಕ ೧೫೮೪ ಲಕ್ಷ ರೂಪಾಯಿಗಳು ಸಾಧಾರಣವಾದ ಆಯತಿಯೆಂದು ಹೇಳಬಹುದು. ಸಂಸ್ಥಾನಕ್ಕೆ ಸಾಲೀಯಾನಾ ಪೇಷಕಷರೂಪವಾಗಿ ಬರತಕ್ಕ ೬ ಲಕ್ಷರೂಪಾಯಿಗಳು ಜಾತಾ ಉಳಿದ ಮೊಬಲಗನ್ನು ಪ್ರಜಾಸಂಖ್ಯೆಗೂ ಹಂಚಲಾಗಿ [illegible] ಇಸಮಿಗೆ ಆರು ರೂಪಾಯಿಗಳಂತೆ ಜವಾಬುದಾರಿ ಬಗೆತಲಿದೆ. ಇಂಡ್ಯದೇಶದಲ್ಲಿ [illegible] ಇಸಮಿಗೆ ೧೪ ಅಥವಾ ೨ ರೂಪಾಯಿಗಳಪ್ರಕಾರವಸೂಲಾಗಬಹುದುಮಂತೆ ಡಾಕ್ಟರ್ ಹಂಟರಯವರು ತಿಳಿಸುತ್ತಾರೆ. ಇದರಿಂದ ಬ್ರಿಟಿಷ ಇಂಡ್ಯದೇಶಕ್ಕಿಂತಲೂ ನೇಟಿವ ಸಂಸ್ಥಾನಗಳಲ್ಲಿ ಪ್ರಜೆಗಳಿಗೆ ಕಂದಾಯ ಭಾರವು ಬಹಳ ಅಧಿಕವೆಂದು ತೋರುತಿದೆ. ಯಾವ ಪ್ರದೇಶದಲ್ಲಿ ಖುಷಬಾಷಜನಗಳು ಕಮ್ಮಿಯಾಗಿಯೂ ಸಾಗುವಳೀದಾರರು ಅಧಿಕವಾಗಿಯೂ ಇರುತ್ತಾರೆಯೊ, ಯಾವಸ್ಥಳದಲ್ಲಿ ಜಂಗ್ಲೀ ಕಡಮೆಯಾಗಿಯೂ, ಸಾಗುವಳೀ ಲಾಯಖ ಜಮೀನುಗಳು ಅಧಿಕವಾಗಿಯೂ ಇರುತಿವೆಯೋ ಅಲ್ಲಿ ಮೇಲೆ ಕಂದಾಯ ಲೆಕ್ಕವಾಗುತಿದೆ. ಒಟ್ಟು ಹುಟ್ಟುವಳಿಯಲ್ಲಿ ಸೇಕಡಾ ೬೮ ರೂಪಾಯಿಗಳಿಗಿಂತ ಅಧಿಕವಾಗಿ ಅರ್ಥಾತ ಜಮೀನಾಬಾಬಿನಲ್ಲಿ ಉತ್ಪತ್ತಿಯಾಗುತ ೧೫ ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಸಾಲೀಯಾನಾಜಮೆಬರುತಿದೆ. ಇದಲ್ಲದೆ ಸೇಕಡಾ ೧೦೪ ಪ್ರಕಾರ ಅಫೀಮು ಮೂಲಕವಾಗಿಯೂ, ಸೇಕಡಾ ೭ರಂತೆ ಸಾಯರ್‌ನಲ್ಲಿಯೂ, ೨ರ ರೂಪಾಯಿಯಂತೆ ಆಬಕಾರಿಯಲ್ಲಿಯೂ, ೧೪ ರೂಪಾಯಿಯಂತೆ ಸ್ಟ್ಯಾಂಪಿನಲ್ಲೂ ವಸೂಲಾಗುತಿವೆ. ನಿಂತವೆ ಇತರಗೆಲ್ಲವೂ ಪಗಡೀ ಮತ್ತು ಬಡ್ಡೀಮೂಲಕವಾಗಿಯೂ ಚಿಲ್ಲರೆಬಾಬುಗಳಿಂದಲೂ ಜಮೆಯಾಗುತಿದೆ. ಸಾಲೀಯಾನಾ ಭಾರೀಮೊಬಲಗು ವಸೂಲಾಗದೆ ಬಾಕೀ ನಿಂತುಹೋಗುತಿವೆ. ಈಗ ಸುಮಾರು ೫೮ ಲಕ್ಷ ರೂಪಾಯಿಗಳ ತನಕ ವಸೂಲಾಗದೆ ಹೊರಗೆ ಬಾಕೀ ನಿಂತಿರುತಿದೆ. ಇದಕ್ಕೆ ಅಲ್ಲಿ ಜಾರೀಯೊಳಿರುವ ರೆವಿನ್ಯೂ ಕಾನೂನು ಕಾರಣವೆಂದು ತಿಳಿಯಬರುತಿದೆ, ಹ್ಯಾಗಂದರೆ, ಸರ್ಕಾರದವರು, ತಮಗೆ ಬರಬೇಕಾದ ಬಾಕೀಬಾಬ್ತಿಗೆ ರೈತರ ಚರಸ್ವತ್ತನ್ನು ದರಾಜಮಾಡಬೇಕೇಹೊರತು ಅವರ ಜಮೀನುಗಳು ವಿಕ್ರಯಾರ್ಹಗಳಾಗುವದಿಲ್ಲವು. ಇದರಿಂದ ಅವರಿಗೆ ಜಮೀನು ಸ್ವಾತಂತ್ರ್ಯವಾಗಲೂ ತಪ್ಪಲಿಲ್ಲವು.

ಅಲ್ಲಿನ ರಾಜ್ಯದ ಆಡಳಿತವು ವ್ಯವಸ್ಥೆಯ ದ ಇಂಗ್ಲೀಷ ಪ್ರಭುತ್ವಕ್ರಮವನ್ನನುಸರಿಸಿ ನಡೆಸಲ್ಪಡುತಿದೆ. ಪ್ರಜಾಸಂಖ್ಯೆಯನ್ನೈಕೆ ೪೦೮ ಮಂದಿಗೆ ಒಬ್ಬ ಪೊಲೀಸಿನವನಂತೆ, ೫,೦೦೦ ಮಂದಿ ಪೊಲೀಸಿನವರು ಅಲ್ಲಿರುತ್ತಾರೆ. ಈ ಸಂವತ್ಸರದಲ್ಲಿ ರೆವಿನ್ಯೂಗಳು [illegible] ಕ್ಕಿಂತಲೂ ಕಡಮೆಯಾಗಿವೆ. ಪ್ರಶಸ್ತ ಸ್ಥಿತಿ ನದಲ್ಲಿ ಒಂದು ಸುಪ್ರೀಂ ಕೋರ್ಟು, ೩ ಡಿಸ್ಟ್ರಿಕ್ಟ ಜಡ್ಜಿಗಳೂ ಇರುತ್ತವೆ. ಅವುಗಳೆಲ್ಲವೂ ಸಮರ್ಥರಾದವರ ನಿಗಾದಲ್ಲಿರುವಂತೆ ತಿಳಿಯಬರುತಿದೆ. ಒಬ್ಬ ಪ್ರಜೆಗೆ ಸಾಲೀಯಾನಾ ಸರಾಸರಿ ೨೬ ರೂಪಾಯಿಗಳು ಸರ್ಕಾರಕ್ಕೆ ಖರ್ಚಾಗುತಿವೆ. ಅಲ್ಲಿನ ಮರಮ್ಮತ್ತಿ ಇಲಾಖೆಯು ಸಮರ್ಥರಾದ ಇಂಜನಿಯರ್‌ಗಳ ವಿಚಾರಣಾಧಿಕಾರಕ್ಕೊಳಪಟ್ಟು ಸೌಕರ್ಯಕರ ತೆ ಉಪಯುಕ್ತವಾದ ಕಾಮಗಾರಿಗಳಿಗಾಗಿ ವಿನಿಯೋಗಿಸಲ್ಪಡುತಿದೆ. ಅಲ್ಲಿನ ಮೆಡಿಕಲ್ ಇಲಾಖೆಗೆ ದಮ್ಮ ಆಸ್ಪತ್ರೆಗಳೂ, ಮೂವತ್ತು ದಿಸ್ಪೇನ್ಸರಿಗಳೂ ಇರುತಿವೆ. ಮಲ್ಲವೆ ಕರ್ನಲ್ ವಾಟ್ಸ ಅಂದರೆ ಶಿಕ್ಷಣಾಧಿಕಾರಿಗಳ ವಿಷಯದಲ್ಲಿ ವಿಶೇಷ ನಿಗಕೊಡಲ್ಪಡುತಿದೆ. ಸನ್ ೧೮೭೧ನೇ ಇಸವಿಯಲ್ಲಿ ಬರೋಡೆಯೊಳು ೫ ದೇಶಭಾಷಾಪಾಠಶಾಲೆಗಳಿದ್ದವು. ಅವುಗಳಲ್ಲಿ ೧೮೦ ವಿದ್ಯಾರ್ಥಿಗಳು ಓದುತಲಿದ್ದರು. ಈ ಸಂವತ್ಸರದಲ್ಲಿ ೨೦೮ ಪಾಠಶಾಲೆಗಳವರೆಗೆ ವೃದ್ಧಿಯನ್ನೈದಿ ಅವುಗಳಲ್ಲಿ ೨೩,೭೮೬ ಮಂದಿಯವರೆಗೆ ಬಾಲಕರು ಓದುತಲಿದ್ದಾರೆ. ವಿದ್ಯಾಭ್ಯಾಸದ ವಿಷಯದಲ್ಲಿ ಗಾಯಕವಾಡ ಮಹಾರಾಜರವರು, ವಿಶೇಷ ಆಸಕ್ತಿಯುಳ್ಳವರಾದದರಿಂದ ಅಲ್ಲಿನ ಸರದಾರರ ಮಕ್ಕಳನ್ನು ಸಾಧಾರಣವಾದ ಪಾಠಶಾಲೆಗಳಿಗೆ ಕಳುಹಿಸಕೂಡದೆಂದು ಬಾವಿಸಿ ಅವರಿಗಾಗಿ ಪ್ರತ್ಯೇಕ ಒಂದು ಪಾಠಶಾಲೆಯನ್ನು ಸ್ಥಾಪಿಸಿದರೆಂದು ಹಿಂದೆಯೇ ತಿಳಿಸಿದ್ದೆವಷ್ಟೆ, ಈಗ ಸದರೀ ಪಾಠಶಾಲೆಯು ಬಹಳ ಅಭಿವೃದ್ಧಿಯನ್ನೈದಿ ಅದರ ಪ್ರಯೋಜನವನ್ನು ಸರದಾರರ ಮಕ್ಕಳು ವಿಶೇಷವಾಗಿ ಅನುಭವಿಸುತಲಿದ್ದಾರೆ. ಇದಲ್ಲದೆ ಬರೋಡೆಯಲ್ಲಿ ಒಂದು ಕಾಲೇಜ್, ಒಂದು ಹೈಸ್ಕೂಲ ಸಹ ಇರುತಿವೆ. ಇವುಗಳೆಲ್ಲ ಮಹಾರಾಜರವರ ಶ್ಲಾಘ್ಯತೆಯಾದ ಪಾಲನಾಕ್ರಮವನ್ನು ಸೂಚಿಸತಕ್ಕವಾಗಿರುತಿವೆ.

ಗಾಯಕವಾಡಿಯವರ ಸೈನ್ಯಗಳ ಖರ್ಚುಬಗ್ಗೆ ಸಾಲೀಯಾನಾ ಇಪ್ಪತ್ತಾರುಲಕ್ಷ ರೂಪಾಯಿಗಳು ವ್ಯಯವಾಗುತಿವೆ. ತಯಾರೀ ಫೌಜಿನವರಿಗೆ ಕೊಡತಕ್ಕ ಖರ್ಚುಗಿಂತಲೂ ಬೇರೆ ತರಬೇಯತಿ ಸೈನಿಕರಿಗಾಗಿ ಜಾಸ್ತೀವ್ಯಯ ವಾಗುತಿದೆ. ಅನೇಕ ಸರದಾರರುವಗೈರೇರಿಗೆ ಪದ ಸನದ ಅಲೋವೆನ್ಸಿಯಾನೆ ರುಸುಂ ಸಲ್ಲುತಲಿರುವದರಿಂದಲೇ ಸಂಸ್ಥಾನಕ್ಕೆ ಈ ಬಾಬಿನಲ್ಲಿ ಇಷ್ಟು ಖರ್ಚುಗಳಿಕ್ಕೆ ಕಾರಣವಾಯಿತು. ಮುಖ್ಯವಾಗಿ ಬರೋಡೇರಾಜ್ಯದಲ್ಲಿ ಪ್ರಸ್ತುತ ಮಹಾರಾಜರವರ ವಿಲಕ್ಷಣವಾದ ರಾಜ್ಯತಂತ್ರಕ್ರಮದಿಂದ ಸಕಲಾಂಶವೂ ಅಭಿವೃದ್ಧಿಯನ್ನೈದುತ ತೃಪ್ತಿಕರವಾಗಿದೆಯೆಂದು ಕೇಳುವದಕ್ಕೆ ನಾವು ಬಹಳ ಸಂತೋಷಿಸುವೆವು. ಮಧ್ಯ ಇಂಡ್ಯದೇಶದಲ್ಲಿರತಕ್ಕ ಇತರ ಮಹಾರಾಷ್ಟ್ರಸಂಸ್ಥಾನಾಧಿಪತಿಗಳೂ, ದಕ್ಷಿಣ ಇಂಡ್ಯದೇಶದೊಳಿರತಕ್ಕ ಕೆಲವು ನೇಟಿವ ಸಂಸ್ಥಾನಾಧಿಪತಿಗಳೂ, ಅನುಕರಿಸಬೇಕಾದ ಅಂಶಗಳು ಬರೋಡೇ ರಾಜ್ಯದ ಆಡಳಿತಕ್ರಮದಲ್ಲಿ ಬಹಳವಾಗಿರುವಂತೆ ತಿಳಿಯಬರುತಿದೆ. ಗಾಯಕವಾಡಿಯವರು ಇಷ್ಟು ವ್ಯವಸ್ಥೆಯಲ್ಲಿ ಸನಾತನರೊಳಸನಾತನವಾದ ಕೀರ್ತಿಪ್ರಶಸ್ತ್ಯತೆ ಪಡೆದು ವಿವೇಕಪೂರ್ವಕವಾದ ತಮ್ಮ ಪ್ರಭುತ್ವವನ್ನು ಅನ್ಯರಿಗೊಂದು ದೃಷ್ಟಾಂತರೂಪವಾಗಿ ನಡೆಸುತಲಿದ್ದಾರೆಂಬದು ಕೇಳುವವರ ಮೂಲಕ ನಮಗುಂಟಾದ ಸಂತೋಷಕ್ಕೆ ಪಾರವಿಲ್ಲದೆಯಿದೆ.

A CONFIDENTIAL ORDER

[illegible]

[illegible] ಮ್ಯಾಜಿಸ್ಟ್ರೇಟರಿಂದ ಕಲೆಕ್ಟರರು [illegible] ಕಾರ್ಯಕಾರಿಗಳಾಯಿತಲ್ಲಪ್ಪಿ. [illegible]

[illegible]

ಮಾಡುಕೊಟ್ಟ ಕಲೆಕ್ಟರ್ ಮೆ॥ ಪಿನ್ನಿಂಗ್‌ಟನ್ನವರಂತಾ ವಿಪ್ಪತ್ತುಶಾಲಿಯಾದ ನ್ಯಾಯಾಧಿಪರಿಗೆ ಸೇಲ್ಲನ ಕಲಹ ಕಾಲದಲ್ಲಿ ಅಲ್ಲಿ ಕಲೆಕ್ಟರಾಗಿದ್ದರೆ ಅಲ್ಲಿನವರ (ಘಾನಾನ ಧನಗರಿಗೆ ಫಂಟಾನ ಜಾ ವಿಗರಿಗೆ ಯೆಷ್ಟು ಗೌರವವು ಅನ್ಯದ ಫಂಟಾಗು ತ್ತಿರಲಿಲ್ಲವೆಂದೆಲಾ ಮದ ಗಾನ್ ಅಂಥ ವಿ)ಕಾ ಗಿಕೆಯೆಂಬ ಪತ್ರಿಕೆ ಹೇಳುತಿದೆ.

ಇಂತಾ ವಿಷಯಗಳಲ್ಲಿ ನ್ಯಾಯವಾಗಿಯೇಲಾ (ಪ ಕ್ಷ ಪಾತವಿಲ್ಲದೆಯೇಲಾ ದೃಷ್ಟಿ ಇಡಬೇಕೇನೋ ದೇಶ ಕಾಧಿಪಾಗಳೂ. ತಮ್ಮ ಅಧಿಕಾರ ವಿಷ ಯೋಗಗಳೂ. ಅವರಿಗೆ ತೋರುವದರಿಂದ ಕಾ ರ್ಯಕಾರವೇ ಬದಲಾಯಿಸಿ ಕೊಳ್ಳುವದಕ್ಕೆ ಸಂ ಬಂಧವಿಲ್ಲವು. ಅಧಿಕಾರಿಗಳು ಇಂತಾ ಸಂದರ್ಭ ಗಳಲ್ಲಿ ಬಹಳ ಜಾಗರೂಕರಾಗಿ, ಉಚಿತಜ್ಞತೆ ಯೂ ಉಳ್ಳವರಾಗಬೇಕು.

FEMALE EDUCATION.

ಮಾರ್ಚಿ ೩೧ನೇ ತಾರೀಖಿನ ಸಾಯಂಕಾಲ ಅನಂತಪುರದ ಮ್ಯೂನಿಸಿಪಲ್ ಸ್ಕೂಲ್ ಸೌಧದಲ್ಲಿ ಸೇರಿದ್ದ ಸಭೆಯೊಳು, ಮಹಾರಾಜಶ್ರೀ ಕೇಶಯ್ಯ ಶೆಟ್ಟರವರು ಅಗ್ರಾಸನವನ್ನು ವಹಿಸಿದ್ದರೆಂತಲೂ, ಅಲ್ಲಿನ ಸ್ಕೂಲ್ ಡೆಪ್ಯುಟೀ ಇನ್ಸ್‌ಪೆಕ್ಟರ್ ಮ॥ ರಾ॥ ಅಬ್ಬಾಜಿರಾಯರವರು ಹಿಂದೂ ಸ್ತ್ರೀಯರ ಸ್ಥಿತಿಯು ಕ್ರಮವಾಗಿ ಸುಧಾರಿಸತಕ್ಕ ವಿಧವು ಕುರಿತು ಉಪನ್ಯಾಸ ಮಾಡಿದರೆಂ ದಲೂ ತಿಳಿಯಬರುತದೆ. ಇವರ ಉಪನ್ಯಾಸದಲ್ಲಿ ಮೂರು ಅಂಶಗಳು ಕೇವಲ ಮುಖ್ಯವಾದವಾಗಿವೆ. ಅವು ಯಾವವೆಂದರೆ ನಮ್ಮ ದೇಶದ ಸಂಪತ್ತುಗಳ ಲೇಶ ಬಾಲಿಕೆಯರನ್ನು ಶಾಲೆಗೆ ಕಳುಹಿಸಬೇಕಾದರೆ ಸ್ತ್ರೀ ಶಾಲೆಗಳಿಗೆ ಹೋಗುವದಕ್ಕೆ ಪ್ರೋತ್ಸಾಹಿಸಿ ಸ್ತ್ರೀ ಬುದ್ಧಿಗೆ ಯುಕ್ತವಾದ ಒಂದು ಸ್ವಲ್ಪ ಪಠನ, ಜ್ಞಾನ (ಅಂದರೆ ಅಂಕಗಣಿತ) ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸುವಂತೆ ಉಪಾಧ್ಯಾಯಿನಿಯರನ್ನು ಏರ್ಪಡಿಸಿ ಅವರಿಗೆ ವಿಧವೆಯರುಗಳ ವೇತನವಿತ್ತು ಕಲಿಸತಕ್ಕೆಂಬುದು ಮೊದಲನೆಯದು, ವಿಧವೆಯರುಗಳ ವಯಸ್ಸಿಗೆ ಮೀರ್ಪಟ್ಟವರು ತಮಗೆ ವಿರಾಮವಾಗಿ ಪುರಾಣ ಮುಂತಾದ ಗ್ರಂಥಾವಲೋಕನ ಮೂಲಕ ತಮ್ಮ ಕಾಲವು ಕಳಿಯಬೇಕೆಂಬುದು ಮೂರನೆಯದು. ಪ್ರಸಂಗಿಗಳು ತಿಳಿಸಿದ ಈ ಮೂರು ಅಂಶಗಳನ್ನೂ ಅಗ್ರಾಸನಾಧಿಪತಿಯವರು ಬಹಳ ಶ್ಲಾಘಿಸಿ ಅವರ ಅಭಿಪ್ರಾಯವು ನೆರವೇರುವಂತೆ ಮತ್ತೊಂದು ಸಲ ವಿದ್ಯಾರ್ಥಿಗಳಾದಿ ಮೇಲೆ ತಿಳಿಸಿದಂತೆ ನಡೆಸತಕ್ಕ ವಿಧಿ ಯದಲ್ಲಿ ಮರಳಿ ವಿಚಾರ ಮಾಡಬೇಕೆಂತಲೂ, ಐಕಮತ್ಯವೂ ಶ್ರದ್ಧೆಯೂ ಇರುವದಾದರೆ ಈ ಪ್ರಯತ್ನವು ಸಫಲವಾಗಬಹುದೆಂತಲೂ ತಿಳಿಸಿದರು. ಜಾತಿಮತ ಪ್ರಯುಕ್ತಗಳಾದ ಉತ್ತಮಾಧಮ ಭಾವದಿಂದ ಸಂಕಟಪಡುತ್ತ, ಶುಭಾಶುಭಪ್ರಯೋಜನಗಳಿಗೆ ಸಹ ಅನ್ಯರಮನೆಗಳಿಗೆ ನಮ್ಮ ಹೆಂಗಸರುಗಳು ಹೋಗಿಕೊಡುವದಕ್ಕೆ ಅಸಮಾಧಾನವುಂಟಾಗತಕ್ಕ ನಾವೇ ಈ ಮಹತ್ಕಾರ್ಯವನ್ನು ಮಾಡುವೆವು. ಅನ್ಯರ ಕಷ್ಟವನ್ನು ಸ್ವಂತವಾಗಿ ಭಾವಿಸಿ ನಮ್ಮ ಶಕ್ತ್ಯನುಸಾರ ಸಹಾಯ ಮಾಡಬೇಕೆಂಬ ತಾತ್ಪರ್ಯ ನಮ್ಮವರಿಗೆ ಪ್ರುಟಾಗುವವರಿವಿಗೂ, ಎಲ್ಲರನ್ನು ಸಮಾನತ್ವೇನ ಭಾವಿಸುವ ತನಕಲೂ ನಮಗೆ ಐಕಮತ್ಯವೆಂಬದೊಂದು ಕಾಲಕ್ಕೂ ಪ್ರುಟಾಗಲರಿಯದು. ಅದೊಂದು ಪ್ರುಟಾಗುವತನಕ ಏತದ್ವಿಷಯವಾದ ಪ್ರಯತ್ನಗಳೆಲ್ಲವೂ ವಿಫಲಗಳಾಗುವವೇ ಹೊರ್ತು ಅವು ನೆರವೇರಲಾರವೆಂದು ಅಗ್ರಾಸನಾಧಿಪತಿಯವರು ಅಭಿಪ್ರಾಯಪಟ್ಟರು. ಸದ್ಯಕ್ಕೆ ಅಸಾಧ್ಯವಾದ ಇಷ್ಟು ದೊಡ್ಡ ಪ್ರಯತ್ನವನ್ನು ಮಾಡುವದಕ್ಕಿಂತಲೂ ತಿಳಿದವರು ತಮ್ಮ ಕುಮಾರಿಯರನ್ನೂ ಸೊಸೆಯರನ್ನೂ ಹತ್ತು ಅಥವಾ ಎಂಟು ವರುಷಗಳ ತನಕ ತಪ್ಪದೆ ಪಾಠಶಾಲೆಗಳಿಗೆ ಕಳುಹಿಸುವ ಅವರಿಗೆ ಯೋಗ್ಯವಾದ ರೀತಿಯಿಂದ ವಿದ್ಯಾಮೂಲಕವಾದ ಜ್ಞಾನವನ್ನುಂಟುಮಾಡಿದರೆ ಯೋಗ್ಯವಾಗಿರುವದು. ವಿದ್ಯಾವತಿಯರಾದ ವಧೂಗಳಿಗೆ ದೊರೆಯತಕ್ಕವರೂ ವಿದ್ಯಾವಂತರಾಗಿದ್ದರೆ ಅವರು ತಮ್ಮ ಭಾರ್ಯೆಯ ಮುಂದಿನ ವಿದ್ಯಾಭ್ಯಾಸದ ವಿಷಯದಲ್ಲಿ ಪ್ರವೇಶಿತ ಸಿಕ್ಕ ವಿದ್ಯಾದು ಮಾಡಲಿಕ್ಕೆ ಕಾರಣವಾಗುವದು. ಆದರೆ ಅಸಹಿಷ್ಣುಗಳಾದ ಅತ್ತೆಯರು, ಗುರುಜನಶಿಕ್ಷೆಗೆ ಒಳಗಾಗತಕ್ಕ ಸೊಸೆಯರನ್ನು ನೋಡಿ ನಿಟ್ಟುಸುರುಬಿಡುತ ಈ ಗಂಡೆಯರಿಗಿಷ್ಟು ಸುಖವೇಕೆಂದು ಅವರಿಂದ ಮತ್ತಷ್ಟು ಕೆಲಸಮಾಡಿಸಲಾರಂಭಿಸುವರು. ಬೆಳಗ್ಗೆ ಆರುಘಂಟೆಯು ಮೊದಲು ರಾತ್ರಿ ಹನ್ನೊಂದುಘಂಟೆಯತನಕ ನಡು ಮುರಿಯುವಂತೆ ಕೆಲಸಮಾಡಿಸುತಬಂದರೆ ಇತರ ವಿಷಯದಲ್ಲವರಿಗೆಷ್ಟು ಆಸಕ್ತಿಯುಂಟಾಗುವದೋ ಅದು ತಿಳಿಸಬೇಕಾದ್ದಿಲ್ಲವು. ಅಂತಾ ಅತ್ತೆಯರಿಗೆ ಅವರ ಮಕ್ಕಳು ಮೊದಲು ವಿವೇಕವನ್ನು ಹೇಳಬೇಕು. ತಾಯಿಯೊಂದುವೇಳೆ ಪಾತಕಿಯಾಗಿದ್ದರೂ ಅಂತಾ ಪ್ರಾಣ್ಯನತಿಯ ಸಾಕ್ಷ್ಯ ಪರಿಪಾಲನ ಮಾಡದಿರಕೂಡದೆನ್ನತಕ್ಕ ಪುಣ್ಯಾತ್ಮರು ಕೆಲವರಿರುತ್ತಾರೆ. ಹಾಗಿಲ್ಲದೆ ತಾಯಿತಂದೆಗಳನ್ನೂ ಒಡಹುಟ್ಟಿದವರನ್ನೂ ಬಂಧುಮಿತ್ರರನ್ನೂ ಸ್ವದೇಶವನ್ನೂ ಬಿಟ್ಟು ಪತಿಗೋಸ್ಕರ ನಿರ್ಲಕ್ಷ್ಯವಾಗಿ ತೊರೆದು ಬರುವಂತಾ ಹೆಣ್ಣುಮಕ್ಕಳನ್ನು ನಾನಾ ವಿಧದಿಂದ ಹಿಂಸಿಸುವದಕ್ಕಿಂತಲೂ, ಅವರ ಗುಣಂಗಳು, ಅಭಿಮಾನ ಮೊದಲಾದ ಪ್ರವೃತ್ತಿಯೂ ಅರ್ಥಸಂಬಂಧಿಯಾದ ಕಾರ್ಯಗಳೂ, ಸ್ವಾತಂತ್ರ್ಯವು ಪ ಎದುರಿಸತಕ್ಕ ತಮ್ಮ ಮನೆಯವರಿಗೆ ನಿಶ್ಚಯ ಮಾಡಲಿಕ್ಕೆ ಸಾಧ್ಯವಿದ್ದರೂ, ಉಭಯರಿಗೂ ಮನೋಹರವಾಗಿರುವ ದೇವತಾಸ್ವರೂಪ ಸಂತೋಷದೊಳಗೆ ಹೊಂದುವ ಒಂದು ವಿನೋದವು ಹೆಚ್ಚುತ್ತ ಅವರೊಡನೆ ವಿಚಾರಿಸುತ್ತ ಬರುತ್ತಾದರೆ ಅವರಿಗೆ ಪುಸ್ತಕಮೂಲಕವಾದ ಜ್ಞಾನಕ್ಕಿಂತಲೂ, ವಿಶೇಷವು ಸಾಧನಸ್ಯವಾದ ವ್ಯಾವಹಾರಿಕಜ್ಞಾನ ಪ್ರುಟಾಗಿ ಅವರ ಹೃದಯವು ವಿಕಸಿತವಾಗಿ ಶಾಸ್ತ್ರಜ್ಞರಾದ ಹೆಂಗಸರಂತೆ ತಮ್ಮ ಪುರುಷರಿಗೆ ಮಾನಸಿಕೋಲ್ಲಾಸವನ್ನುಂಟುಮಾಡುವದಕ್ಕೆ ಶಕ್ತರಾಗುವರು. ಜ್ಞಾನಾಭಿವೃದ್ಧಿಗೆ ಅನೇಕ ಮಾರ್ಗಗಳಿರುವದರಿಂದ ಅವುಗಳಲ್ಲಿ ಕೆಲವನ್ನು ಈ ಕಾಲದೊಳು ದೇಶಜನಗಳ ಸ್ಥಿತಿಗೆ ಅನುಗುಣವಾದವನ್ನು ಆಚರಣೆಯೊಳು ತರುವದು ಯೋಗ್ಯವಾಗಿದೆ.

THE ARHAT SYSTEM.—No.—18

ಜೈನ್ಯ ಅಥವಾ ಅರ್ಹತದರ್ಶನವು.

ಈ ಮತದೀಕ್ಷಾ ಆಪ್ತಲಕ್ಷಣವನ್ನೂ ಅಷ್ಟಾದಶ ದೋಷಗಳನ್ನೂ ಗತವಾರದಲ್ಲಿ ಸಾಧ್ಯವಾದಮಟ್ಟಿಗೆ ವಿವರಿಸಿದೆವಷ್ಟೆ. ಮುಂದೆ ಮೌಢ್ಯತ್ರಯವನ್ನರುಹುವೆವು. ಇವು ಲೋಕಮೂಢತ್ವವೆಂತಲೂ, ದೇವತಾ ಮೂಢತ್ವವೆಂತಲೂ ಪಾಷಂಡ ಮೂಢತ್ವವೆಂತಲೂ ತ್ರಿವಿಧವಾಗಿರುವವು. ಅವುಗಳ್ಯಾವವೆಂದರೆ—

ಶ್ಲೋ॥ ದೇವತಾಲೋಕಪಾಷಂಡಿಮೂಢ
ಸ್ತ್ರ್ಯವ್ಯಸ್ಸುದರ್ಶನಃ। ಕ್ಷುಧಾದಿದೋ
ಷಸಂಭ್ಯಾವಿನಾಸುಗಸಮನ್ವಿತಾಃ॥ ಸೂ
ರ್ಯಾರ್ಘ್ಯ ಗ್ರಹಣಸ್ನಾನಸಂಕ್ರಾಂತೌ
ದ್ರವಿಣವ್ಯಯಃ। ಸಂಧ್ಯಾಸೇವಾಗ್ನಿಸತ್ಕಾ
ರೋದೇಹಗೇಹಾರ್ಚನಾವಿಧಿಃ ॥ ಗೋಪೃ
ಷ್ಠಾಂತನಮಸ್ಕಾರಸ್ತನ್ಮೂತ್ರಸ್ಯನಿಷೇವ
ಣಂ। ರತ್ನವಾಹನಭೂವೃಕ್ಷಶಸ್ತ್ರಶೈ
ಲಾದಿಸೇವನು॥ ಆಪಗಾಸಾಗರಸ್ನಾನಮು
ಚ್ಚಯಸ್ಸಿಕತಾತ್ಮನಾಂ। ಗಿರಿಪಾತೋಗ್ನಿ
ಪಾತಶ್ಚ ಲೋಕಮೂಢೋನಿಗದ್ಯತೇ॥ ವರೋಪ
ಲಿಪ್ಸಯಾಶಾವಾನ್ ರಾಗದ್ವೇಷ ಮಲೀಮ
ಸಃ। ದೇವತಾಯದುಪಾಸೀತದೇವತಾಮೂಢ
ಮುಚ್ಯತೇ ಸಂಗ್ರಂಥಾರಂಭಹಿಂಸಾನಾಂಸಂ
ಸಾರಾವರ್ತವರ್ತಿನಾಂ। ಪಾಷಂಡಿನಾಂಪು
ರಸ್ಕಾರೋಜ್ಞೇಯಂಪಾಷಂಡಿಮೋಹನಂ॥

ಸೂರ್ಯನಿಗೆ ಅರ್ಘ್ಯಪ್ರದಾನ, ಗ್ರಹಣ ಸ್ನಾನ, ಸಂಕ್ರಾಂತಿ ಮುಂತಾದ ಕಾಲದಲ್ಲಿ ಹಿರಣ್ಯದಾನ, ಸಂಧ್ಯಾಕಾಲದೊಳು ಅಗ್ನಿಸತ್ಕಾರ, ಗೋಪೂಜೆ, ಗೋಮೂತ್ರ ಸಿಷೇವಣ, ರತ್ನ, ವಾಹನ, ಭೂಮಿ, ವೃಕ್ಷ, ಶಸ್ತ್ರ, ಪರ್ವತ, ಇವುಗಳ ಆರಾಧನೆ, ಶರಧಿ, ನದಿ, ತಟಾಕ ಮುಂತಾದವುಗಳಲ್ಲಿ ಸ್ನಾನ, ಶೈಲಪತನ, ಅಗ್ನಿಪ್ರವೇಶ, ಯಜ್ಞಾರ್ಥವಾದ ಜೀವಹಿಂಸೆಯು, ಸದ್ಧರ್ಮವೆಂಬ ಭಾವನೆ, ಭೂಜಲ ಖೇಚರಗಳಾದ ಜೀವಜಂತುಗಳ ಮಾಂಸಗಳಿಂದಲೂ, ಮಧು ಮುಂತಾದ ಕುತ್ಸಿತಾಹಾರಗಳಿಂದಲೂ ಮಾಳ್ಪ ಭೋಜನವು ಪಿತೃಋಣವನ್ನುದ್ದೇಶಿಸುವಣ, ಇವೆಲ್ಲವು ಲೋಕಮೂಢತ್ವವೆಂದರಿಯುವದು. ರಾಗ ದ್ವೇಷಾದಿಗಳಿಂ ಕೂಡಿಯದೆ, ಆಶಾಬದ್ಧನಾಗಿ ವಿವಿಧಾಯುಧಗಳಂ ಧರಿಸಿ ರೌದ್ರರೂಪಗಳಂ ತಾಳ್ದು, ಕೆಲವರಂ ವಂಚಿಸಿ, ಪಲವರಂ ಜಿವರಿಸಿ, ಹಲವರಂ ಬೆದರಿಸಿ ಕೆಲವರೊಳ್ ಸೋತು ಕೆಲವರನ್ನೊರಿದು, ಪಲವರು ಯಾಚಿಸುವವರನ್ನು ದೇವತೆಯೆಂದು ಆದರಿಸಿ ಪೂಜಿಸಿ ಯೆರಗುವದು ದೇವತಾ ಮೂಢತ್ವಮಕ್ಕುಂ. ಭಸ್ಮೋದ್ಧೂಳನ, ವಿವಿಧಗಳಾದ ಮಣಿಗಳಂ ಸರ್ವಾಂಗದಲ್ಲಿಯೂ ಧರಿಸುವಣ, ತೊಗಲು ಪೊದೆಯುವಣ, ಇನ್ನೂ ಅನೇಕ ದುರ್ವೇಷದಿಂ ತಿರುಗುವವರು ತಪಸ್ವಿಗಳೆಂದು ಸಂತೋಷದಿಂ ಕಂಡು ಸತ್ಕರಿಸುವದೇ ಪಾಷಂಡಮೋಹನವು. ಇಂತು ವಿಷಮುಕ್ತ ಮೌಢ್ಯಗಳಿಲ್ಲದಾದವರೂ ಆಪ್ತನಲ್ಲವಾಗಿ ಅವನು,

ಶ್ಲೋ॥ ಜಿನಾಷ್ಟಪ್ರತಿಮೋಪದಶ್ಯ
ದಳನೋಮುಕ್ತಾ ಸ್ತ್ವಕರ್ಮಾತಿಗಃ। ದೇವಾ
ಸುರೇಗುಣಾನ್ವಿತೋನಿರುಪಮಾಷ್ಟಾದ್ಯಂತ
ಹೀನೋಕ್ಷಯಃ। ಯೋವಿಶ್ವಂಯುಗಪಚ್ಚ
ಪದಸತತಂ ಸೋರ್ಹನ್ನಿವಿಶ್ವಂಕರಃ॥

ಯೆಂಬದಾಗಿ ಅಷ್ಟಾದಶ ದೋಷಗಳಿಂದಲೂ, ಅಷ್ಟಕರ್ಮಗಳಿಂದಲೂ ಅತಿರಿಕ್ತನಾದವನೇ ದೇವನಾಗಿಯೂ, ಅನಂತ ಗುಣಾನ್ವಿತನಾಗಿಯೂ, ನಿರುಪಮನಾಗಿಯೂ, ಅದ್ಯಂತರಹಿತನಾಗಿಯೂ ಇರತಕ್ಕ ಅರ್ಹತನೇ ಶಂಕರನು, ಅಂದರೆ ಶುಭಕರನು. ಅಂತಾ ಆಪ್ತಪ್ರೋಕ್ತವಾದ ಆಗಮವೆಂತಾದ್ದೆಂದರೆ:—

ಶ್ಲೋ॥ ಪೂರ್ವಾಪರವಿರೋಧಾದಿದೂರ
ಹಿಂಸಾದ್ಯಪಾಸನು। ಪ್ರಮಾಣದ್ವಯಸಂ
ವಾದಿಶಾಸ್ತ್ರಂ ಸರ್ವಜ್ಞಭಾಷಿತಂ॥ ಶ್ರುತಿ
ಸೂನೃತವಾಜ್ಞಾಪ್ತಂ ವಚೋವೇದಾಂಗ
ಮಾಗಮಃ। ಆಮ್ನಾಯಶ್ಚೇತಿಪರ್ಯಾಯೈ
ಸ್ಸೋಭಿಧೀಯತೇ ಮುನೀಶ್ವರೈಃ॥

ಪೂರ್ವಾಪರ ವಿರೋಧಗಳಿಲ್ಲದೆ ಪ್ರತ್ಯಕ್ಷ ಪರೋಕ್ಷಗಳೆಂಬ ಪ್ರಮಾಣದ್ವಯದಿಂದ ಜೀವಾದಿ ಪದಾರ್ಥಗಳಂ ತಿಳಿಸತಕ್ಕದ್ದಾಗಿಯೂ, ಅಹಿಂಸಾದಿ ಧರ್ಮಗಳನ್ನು ಬೋಧಿಸತಕ್ಕದ್ದಾಗಿಯೂ ಇರುವ ಸರ್ವಜ್ಞಭಾಷಿತವಾದ ಶಾಸ್ತ್ರವೇ ವಚನಮೆನಿಸಿಕುಂ. ಅದು, ಶ್ರುತಿ, ಸೂನೃತ, ಆಜ್ಞಾಪ್ತವಚಸ್ಸು, ವೇದ, ಅಂಗ ಆಗಮ ಆಮ್ನಾಯಗಳೆಂಬ ಪರ್ಯಾಯ ಶಬ್ದಗಳುಳ್ಳದ್ದೆಂದು ಮುನಿವರರು ಪೇಳ್ವರು. ಇಂತಾ ಆಗಮ ಪ್ರತಿಪಾದ್ಯನಾದ ಗುರುಯೆಂತವನೆಂದರೆ:—

ಶ್ಲೋ॥ ವಿಷಯಾಶಾವಶಾತೀತೋನಿರಾಲಂ
ಬೋಪರಿಗ್ರಹಃ। ಜ್ಞಾನಧ್ಯಾನತಪೋರ
ಕ್ತಸ್ತಪಸ್ವೀಸಪ್ರಶಸ್ಯತೇ॥

ವಿಷಯಾ ಶಾತೀತನಾಗಿಯೂ, ನಿರಾಲಂಬನಾಗಿಯೂ, ಉಭಯವಿಧ ಪರಿಗ್ರಹ ರಹಿತನಾಗಿಯೂ, ನಿರವದ್ಯ ಚರಿತನಾಗಿಯೂ, ಅಕಳಂಕಾಕೃತಿಯುಳ್ಳವನಾಗಿಯೂ, ಜ್ಞಾನಧ್ಯಾನ ತಪೋನಿರತನಾಗಿಯೂ ಇರುವವನೇ ಗುರುವು. ಕೋಪ, ಅನೃತ, ಕಳವು, ಅನ್ಯಾಂಗನಾಸಕ್ತಿ, ಅತಿಕಾಂಕ್ಷೆಗಳೆನ್ನುವ ಐದು ದೋಷ ಸಮೂಹವಂ ತ್ಯಜಿಸಿ, ಜೀವದಯಾಪರವಾದ ಜಿನಧರ್ಮವೇ ಅವರ ಸಮಯ. ಸಕಲ ಚರಾಚರ ವಸ್ತುಗಳನ್ನೂ ಅವುಗಳ ಗುಣ ಪರ್ಯಾಯಗಳನ್ನೂ, ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ತಿಳಿಯುವಂತಾ ಸರ್ವಜ್ಞನಾಗಿಯೂ, ಜನನಮರಣ ರಹಿತನಾಗಿಯೂ, ಸಕಲ ವಿಮಲ ಕೇವಲ ಜ್ಞಾನಸ್ವರೂಪನಾಗಿಯೂ, ನಾಗನರಾಮರೇಂದ್ರ ಮುನೀಂದ್ರಾದಿ ವಂದಿತನಾಗಿಯೂ, ಸಕಲಜಗಜ್ಜ್ಯೇಷ್ಠನಾಗಿಯೂ, ಸಕಲದೋಷ ರಹಿತನಾಗಿಯೂ, ಪರಂಜ್ಯೋತಿಸ್ಸ್ವರೂಪನಾಗಿಯೂ ಇರುವವನನ್ನು ಅಂತಾ ಗುರುವು ಆಪ್ತನೆಂದು ತಿಳಿದು ಅವನಂ ಪತಿರ್ಗಿಸಿ ಸಿದ್ಧನಾಗುವನು. ಅಂತವನಿಂದಾಚರಿಸಲ್ಪಡತಕ್ಕ ತಪೋಫಲವೆಂತೆನೆ—ತಪಸ್ಸಿನಿಂದ ಪಾಪನಿವೃತ್ತಿಯೂ ಪುಣ್ಯ ಸಂಪಾದನವೂ ಪ್ರುಟಾಗುತಿದೆ. ಸಕಲ ಜೀವದಯೆಯಂ ಮಾಳ್ಪುದು; ಮಾಯಾ, ಮೋಹ, ರಾಗ, ದ್ವೇಷ ಮದ, ಮಾತ್ಸರ್ಯವೆಂಬ ಅರಿಷಡ್ವರ್ಗವನ್ನುಂಟುಮಾಡುವಂತೆ ಅಂತರಂಗ ಬಹಿರಂಗ ಪರಿಗ್ರಹವಂ ತೊರೆದು, ಜಾತರೂಪಂ ಕೈಗೊಂಡು, ಮಹಾವ್ರತಗಳಂ ಮಾಡುವಣ; ಈರ್ಯಾಭಾಷಣ, ಆದಾನ, ನಿಕ್ಷೇಪಣ, ಸ್ಥಾಪನ, ಪ್ರತಿಷ್ಠಾಪನವೆಂಬೈದು ಸಮಿತಿಗಳನ್ನೂ, ವಚನಕಾಯಮೆಂಬೀ ತ್ರಿಗುಪ್ತಿಗಳನ್ನೂ, ಉತ್ತಮಕ್ಷಮಾ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪಸ್ಸು, ತ್ಯಾಗ, ಕಿಂಚನ್ಯ, ಬ್ರಹ್ಮಚರ್ಯವೆಂಬ ಪತ ಧರ್ಮಗಳನ್ನೂ, ಅನಶನ ಅವಮೋದವೃತ್ತಿ, ಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯನಾಸನ, ಕಾಯಕ್ಲೇಶವೆಂಬಾರು ಬಾಹ್ಯತಪಗಳನ್ನೂ, ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ಧ್ಯಾನ, ಉತ್ಸರ್ಗಗಳೆಂಬಾರು ಅಂತರಂಗ ತಪಸ್ಸುಗಳನ್ನೂ ಲೋಪವಿಲ್ಲದೆ ಮಾಳ್ಪುದೇ ತಪವೆಂಬುದು.

Occasional Notes.

ನೈಮಿತ್ತಿಕ ವಿಷಯನ್ಯಾಸ.

The Madras High Court.—ಮದರಾಸ್ ಹೈಕೋರ್ಟ್ ಜಡ್ಜಿಗಳಲ್ಲಿ ಯೊಬ್ಬರಾದ ಆನರೆಬಲ್ ಮಿ. ಬ್ರಾಂಡಿಯವರು ರಜಾಮೇಲೆ ಹೊರಟುಹೋಗುತ್ತಾರಾಗಿ ಅವರ ಕೆಲಸಕ್ಕೆ ತಂಜಾವೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಮಿ. ಜಾರ್ಜ್ ಎ. ಪಾರ್ಕರ್ ಯೆಂಬವರು ನಿಯಮಿಸಲ್ಪಟ್ಟಿರುತ್ತಾರೆ.

Suspension of military preparation.—ಈಚೆಗೆ ಯುದ್ಧಸನ್ನಾಹಗಳು ಸ್ವಲ್ಪಮಟ್ಟಿಗೆ ನಿಲ್ಲಿಸಲ್ಪಟ್ಟದರಿಂದ ಅದರ ಬಗ್ಗೆ ಅಂದಾಜಾಗಿದ್ದ ಖರ್ಚು ಮೊಬಲಗಿನಲ್ಲಿ ಒಂದುಕೋಟಿ ರೂಪಾಯಿಗಳು ಉಳಿಯಬಹುದೆಂಬ ನಂಬಿಕೆಯುಂಟಾಗಿದೆ. ಹಿಂದೆ ಯೋಚಿಸಲ್ಪಟ್ಟಿದ್ದಂತೆ ಸದರೀ ಸನ್ನಾಹಗಳು ಆಗಸ್ಟ್ ತಿಂಗಳತನಕ ನಡೆಯುವವಾದರೆ ಮೂರುಕೋಟಿ ರೂಪಾಯಿಗಳು ವ್ಯಯವಾಗುವದೆಂದು ಯೆಣಿಸಲ್ಪಟ್ಟಿತು.

The India Council.—ಇಂಡ್ಯಾ ಸೆಕ್ರೆಟರಿಯವರ ಮಂತ್ರಾಲೋಚಕ ಸಮಾಜದಲ್ಲಿ ಮೆಂಬರಾಗಿದ್ದ ಸರ್ ವಿಲ್ಲಿಯಂ ಮೂರ್‌ಯವರು, ಎಡಿಂಬರೋ ಯೂನಿವರ್ಸಿಟಿ ಯೆಂಬ ಶಾಸ್ತ್ರ ಪಾಠಶಾಲೆಯ ಪ್ರಥಮೋಪಾಧ್ಯಾಯರಾಗಿ ನಿಯಮಿಸಲ್ಪಟ್ಟದರಿಂದ ಅವರ ಕೆಲಸವನ್ನು ಅಂಗೀಕರಿಸುವಂತೆ ಇಂಡ್ಯ ಕಮಾಂಡರ್ ಇನ್ ಚೀಫರವರಾದ ಸರ್ ಡೊನಾಲ್ಡ್ ಸ್ಟ್ಯೂವರ್ಟ್‌ಯವರು ಅಪೇಕ್ಷಿಸಲ್ಪಟ್ಟರೆಂದು ಪಯೋನಿಯರ್ ಪತ್ರಿಕೆ ಹೇಳುತಿದೆ.

Postal arrangement.—ಬರುವ ಜುಲೈ ಗುರುವಾರ ತಾರೀಖು ಮೊದಲು, ಏಳು ಪೌಂಡುಗಳ ತೂಕಕ್ಕೆ ಜಾಸ್ತಿಯಿಲ್ಲದ ವಸ್ತುಗಳು ಇಂಗ್ಲಾಂಡ್ ದೇಶಕ್ಕೆ ರವಾನೆಬಗ್ಗೆ ಇಂಡ್ಯದೇಶದ ಯಾವ

ಪ್ರೋಟೆಸ್ಟ್ಯಂಟಿಸನಲ್ಲಿ ಕೊಟ್ಟಾಗ್ಯೂ, ಬ್ರಿಟಿಷ್‌ಪ್ರೋಟೆಸ್ಟ್ಯಂಟಿಸಗಳೊಡನೆ ಮಾಡಿಕೊಂಡಿರುವ ಮುಖ್ಯವಾದ ಯೇರ್ಪಾಡುಗಳನ್ನನುಸರಿಸಿ, ಬ್ರಿಟಿಷ್ ಪ್ರೋಟೆಸ್ಟ್ಯಂಟಿಸ್ ಮಾರೀಷಸ್ ವಿಲಾಸದಾರನಿಗೆ, ದರ್ಖ್ಯಾಸ್ತೇನಾದರೂ ಇದ್ದರೆ ಅದುವಿನಾ, ಯಾವಖರ್ಚೂ ಇಲ್ಲದೆ ಪಾವತೀ ಮಾಡಲ್ಪಡುವದು.

A proposal.—ಹೊಸದಾಗಿ ಯೊಂದು ನೇಟಿವ್ ರಿಜಿಮೆಂಟನ್ನು ಕಟ್ಟಿ, ಅದರ ಆಫಿಸರ್‌ಕೆಲಸಗಳಿಗೆಲ್ಲ ನೇಟಿವ ಪ್ರಮುಖರು ಮತ್ತು ಘುರಾಣೀಗೆಸೇರಿದವರನ್ನು ಮೊಕರರ್‌ಮಾಡಿ, ಅದು ಉಪಯುಕ್ತವಾಗಿ ಕಂಡುಬಂದರೆ ಅದೇರೀತಿ ರಿಜಿಮೆಂಟುಗಳನ್ನು ಏರ್ಪಾಡು ಮಾಡಬಹುದೆಂದು. ಇಂಡ್ಯ ಗವರ್ನಮೆಂಟಿನವರು ಇಂಡ್ಯ ಸ್ಟೇಟ್ ಸೆಕ್ರೆಟರಿಯವರ ಮಂಜೂರಾತಿಯಬಗ್ಯೆ ಬರೆದಿರುವಂತೆ ಟೈಂಸ್‌ಪತ್ರಿಕೆಯ ಕಲ್ಕತ್ತಾ ಬಾತಮೀದಾರನು ಹೇಳುವದಾಗಿ ವಿಲಾಯತಿಪತ್ರಿಕೆಯೊಂದು ತಿಳಿಸುತದೆ.

The Ripon Reception and Memorial Fund.—ಇಂಡ್ಯರಾಜ್ಯದ ಸಾಬಕ್ ವೈಸರಾಯ್ ಯವರಾದ ಲಾರ್ಡ್‌ರಿಪನ್ ಸಾಹೇಬರವರು ಸ್ವದೇಶ ಗಮನೋದ್ಯುಕ್ತರಾಗಿ ಮುಂಬೈಗೆ ಬರುವಲ್ಲಿ ಅವರನ್ನು ಉಚಿತರೀತಿಯಿಂದ ಬರಮಾಡಿಕೊಂಡು ಸತ್ಕರಿಸುವದಕ್ಕಾಗಿಯೂ, ಅವರ ಜ್ಞಾಪಕ ಜನಗಳ ಹೃದಯದಲ್ಲಿ ಶಾಶ್ವತವಾಗಿ ನೆಲಗೊಂಡಿರುವಂತೆ ಯಾವದಾದರೊಂದು ಕಾರ್ಯವು ಮಾಡುವದಕ್ಕೂ ಹಿಡಿಯಬಹುದಾದ ಖರ್ಚುಗಳಬಗ್ಯೆ ಯೇರ್ಪಡಿಸಲ್ಪಟ್ಟ ಚಂದಾಪಟ್ಟಿಯಲ್ಲಿ ಯೆಲ್ಲಬಗೆಯವರೂ ಅವರವರ ಶಕ್ತ್ಯನುಗುಣವಾಗಿ ಚಂದಾಮಾಡಿರುವದು ಕೇವಲ ಸಂತೋಷಕರವಾಗಿದೆಯೆಂತಲೂ, ಲಾರ್ಡ್‌ರಿಪನ್ ಸಾಹೇಬರವರು ಅವರ ಉದಾರ ಸ್ವಭಾವದಿಂದಲೂ, ನ್ಯಾಯೈಕ ಪರತೆಯಿಂದಲೂ, ದೈವಭಕ್ತಿಯಿಂದಲೂ ಈ ದೇಶೀಯರ ಪ್ರೀತಿ ಗೌರವಗಳಿಗೆ ಅತ್ಯಂತ ಪಾತ್ರರಾಗಿದ್ದದರಿಂದ ಅವರ ವಿಷಯವಾಗಿ ಮಾಡಲ್ಪಡುವ ಕಾರ್ಯದಲ್ಲಿ ಯಾರು ಪ್ರವರ್ತಿಸಿದಾಗ್ಯೂ ಅದು ಅವರಿಗೆ ಗೌರವಪಾದಕವಾಗಿರುವದೆಂತಲೂ ತಿಳಿಸಿ ಬರೋಡೇ ಮಹಾರಾಜರವರು ಸದರೀ ಫಂಡಿಗಾಗಿ ತಮ್ಮ ಚಂದಾಬಗ್ಯೆ ಮಿ. ದಾದಾಬಾಯಿ ನೌರೋಜಿಯವರಬಳಿಗೆ ೧೦,೫೦೦ ರೂಪಾಯಿಗಳು ಕಳುಹಿಸಿಕೊಟ್ಟರೆಂದು ತಿಳಿಯಬರುತದೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

The weather.—[illegible]

Robbery.—[illegible]

Cholera.—[illegible]

[illegible]

Prince's Birthday.—[illegible]

The Special Train Engine disabled.—[illegible]

A police constable in trouble.—[illegible]

CORRESPONDENCE
ನಗರ ಅನ್ಯೋನ್ಯ ಸಭಾ.

ಮೈಸೂರು ಕರ್ಣಾಟಕಪ್ರಕಾಶಿಕಾ ಎಡಿಟರವರಿಗೆ.

ಅಯ್ಯಾ,—ಈ ನಗರದಲ್ಲಿ ಈ ಅನ್ಯೋನ್ಯಸಭೆಯು ಇಲ್ಲಿನ ಸ್ಥಳಿಕ ದೊಡ್ಡಮನುಷ್ಯರ ಅಭಿಪ್ರಾಯಾನುಸಾರವಾಗಿ ಯೇರ್ಪಟ್ಟು ಅದರ ಕೆಲಸವು ಕೆಲವು ದಿವಸಗಳಿಂದ ಜಾರೀಯಲ್ಲಿ ತರಲ್ಪಟ್ಟಿರುತದೆ. ಸ್ಥಳಿಕರ ಅಭಿಪ್ರಾಯಾನುಸಾರವಾಗಿ ಚರ್ಚಿಸಿದ ಈ ಕೆಳಗೆ ಕಂಡ ಮೊದಲು ಪ್ರೊಸೀಡಿಂಗ್ಸಿನ ಮುಖ್ಯಸಾರಾಂಶವೇನೆಂದರೆ -

ಈ ತಾಲ್ಲೂಕು ಅಮಲ್ದಾರ್ ಮ. ರಾಜಶ್ರೀ [illegible] ದುಮಿಂಗೋಯವರು ಈ ತಾಲ್ಲೂಕಿಗೆ ಬಂದಲಾಗಾಯತು ತಮ್ಮ ರಾಜಕಾರ್ಯವನ್ನು ನಡೆಸುತಬಂದದಲ್ಲದೆ, ನಮ್ಮಗಳ ವಿಷಯವಾಗಿ, ಕೇವಲ ಅಂತಃಕರಣ ವಹಿಸಿ, ಗ್ರಾಮರಸ್ತೆಗಳನ್ನೂ ಮ್ಯುನಿಸಿಪಲ್ ರಸ್ತೆಗಳನ್ನೂ ಸರ್ಕಾರಕ್ಕೆ ಖರ್ಚು ಹಿಡಿಯಲ್ಲದೆ ಜನಗಳಿಗೆ ತಿಳುವಳಿಕೆಯನ್ನು ಕೊಟ್ಟು ನೆರವೇರಿಸಿ ತನ್ಮೂಲಕ ರಹಿತರಿಗೂ ಮಾರ್ಗಸ್ಥರಿಗೂ ಇತರರಿಗೂ ಬಹು ಅನುಕೂಲವನ್ನೂ ಲಾಭವನ್ನೂ ಉಂಟುಮಾಡಿದರು. ಇಲ್ಲಿನ ಜನರ ತಾತ್ಪರ್ಯದಂತೆ ಹೆಣ್ಣುಮಕ್ಕಳ ಸ್ಕೂಲ್ ಮುಂತಾದ್ದು ಮಾಡಿಸಿ ವಿದ್ಯಾಭಿವೃದ್ಧಿ ಪ್ರಯತ್ನಮಾಡುತಲಿರುವದಲ್ಲದೆ ಬಹು ಪಾರಮಾರ್ಥಿಕತೆಯಿಂದ ಇತರ ಯೆಲ್ಲ ಕೆಲಸಗಳೂ ನಡೆಸುವದು ಗರೀಬರು ಮೊದಲಾದ ಪ್ರಜೆಗಳಿಗೆ ಸುಖಪ್ರದವಾಗಿರುತದೆ. ಇಂತಾ ಅನೇಕ ಇವರ ಸದ್ಗುಣಗಳನ್ನು ಕುರಿತು ನಾವು ಮಾಡಬಹುದಾದ ಒಂದು ಸ್ತೋತ್ರಪತ್ರಿಕೆ ಅವರಿಗೆ ನಮ್ಮ ಅಂತಃಕರಣ ಪೂರ್ವಕವಾಗಿ ಬರೆದು ಒಪ್ಪಿಸಬೇಕೆಂದು ನಿಶ್ಚಯಿಸಿ ಇದು ಈಗಲೇ ಮಾಡುವದಕ್ಕಿಂತಲೂ ಇದನ್ನು ಸಿದ್ಧಪಡಿಸಿಕೊಂಡಿದ್ದು ಅವರು ಇಲ್ಲಿಂದ ಪ್ರಯಾಣಮಾಡುವ ಸಮಯದಲ್ಲಿ ಆಗ್ಯೆಯೇರ್ಪಡಿಸುವ ಕ್ರಮಾನುಗುಣವಾಗಿ ಕೊಡುವದು ಗೌರವ ವ ನಮ್ಮ ವಿಶ್ವಾಸ ಮತ್ತು ನಿರಾಕ್ಷೇಪವೆಂದು ಸಹ ಇಲ್ಲಿನ ಪ್ರಜೆಗಳು ಆಲೋಚಿಸಿಕೊಂಡಿರುವ ಸಂಗತಿ ಅವರ ಅಭಿಪ್ರಾಯಾನುಸಾರವಾಗಿ ತಮ್ಮ ಪತ್ರಿಕೆಯಲ್ಲಿ ಇದನ್ನು ಪ್ರಕಟಪಡಿಸೋಣಾಗಬೇಕೆಂದು ಕೋರುವ,

ನಗರ, ೧೦—೬—೮೫.	ತಮ್ಮ ಅತ್ಯಂತವಿಧೇಯ, ಮುಂಶ್ಯೀಯ ಪ್ರಭುವನ್ನು, ವೃತ್ತಿ ಪ್ರಸಿದಂಪ್ರ,

[illegible]

TELEGRAPHIC SUMMARY.
ತಂತಿ ವೃತ್ತಾಂತವು.

[illegible]

BANGALORE:—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮನಿವಿದಪ್ರವೃದ್ಧ್ಯವಗಮಾರ್ಣ್ಕರ್ಣ್ಣಾಟಕಪ್ರಕಾಶನವರಾಭಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ಧಿಶಾನುಪರಿಪೂರ್ಣಿತಾದಿಕಶಿಮಾನಸಂಸುಮುದಂ ॥

Vol. XII.] BANGALORE—MONDAY, JUNE 29, 1885. [No. 26.

ಸಂಪುಟ ೧೨.] ಬೆಂಗಳೂರು:—ಸರ್ ೧೮೮೫ನೇ ಇಸವಿ ಜೂನ್ ೨೯ನೇ ತಾರೀಖ್ ಸೋಮವಾರ. [ಸಂಚಿಕೆ ೨೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡದಸಹಿತ ತೆಗೆದುಕೊಳ್ಳತಕ್ಕ [illegible] ವರುಷ ೧ಕ್ಕೆ. .. ೧೨—೦—೦

ಇಂಗ್ಲಿಷುಮಾತ್ರ ತೆಗೆದುಕೊಳ್ಳತಕ್ಕ [illegible] ವರುಷ ೧ಕ್ಕೆ .. ... ೬—೦—೦

ಕನ್ನಡಮಾತ್ರ ತೆಗೆದುಕೊಳ್ಳ ತಕ್ಕ [illegible] ವರುಷಕ್ಕೆ. ೬—೦—೦

[illegible] ೧ಕ್ಕೆ ೦—೮—೦

[illegible] ೧ಕ್ಕೆ ೮—೪—೦

[illegible] ೧ಕ್ಕೆ ೦—೫—೦

[illegible]

ಪ್ರಕಟನೆಯ ರಿವಾಜ್.

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

ಪ್ರಕಟನೆ.

[illegible]

ನೋಟೀಸ್.

[illegible]

[illegible]	೧—೪—೦
[illegible]	೦—೧೨—೦
[illegible] (ಪಟ್ಟಂಬಾಕ್)	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೬—೦
[illegible]	೦—೨—೦
ವೈದ್ಯಸಾರಸಂಗ್ರಹ	೫—೦—೦

ಕನ್ನಡಗ್ರಂಥಗಳು.

[illegible]	೦—೬—೮
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೬—೬
[illegible]	೦—೨—೬
[illegible]	೦—೬—೦
[illegible]	೦—೩—೦
[illegible]	೦—೨—೦
[illegible]	೦—೦—೯
ಇಂಗ್ಲಿಷುಕನ್ನಡ [illegible]	೧—೦—೮
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible] ಸ್ಟೇಟ್ [illegible] ೧ನೇ ಸಂಚಿಕೆ.	೦—೯—೦
[illegible] ೨ನೇ ಸಂಚಿಕೆ.	೧—೯—೦
[illegible]	೦—೯—೦

ಸಂಸ್ಕೃತ ಮೂಲಗ್ರಂಥಗಳು.

[illegible]	೦—೧—೦
[illegible]	೦—೫—೦
[illegible]	೦—೨—೬
[illegible]	೦—೨—೬
[illegible]	೦—೦—೬
[illegible]	೦—೧—೬
[illegible]	೦—೧—೦

[illegible]

NOTICE.
VAIDYASARASANGRAHA.

Price including Postage, Rs 5-6-0

[illegible]

[illegible] ರೂ॥ ೫—೦—೮

[illegible] ಮತ್ತು ಅಂಚೇಹಾಸಲ್ ೦—೬—೦

ಬಿ. ವೆಂಕಟಾಚಾರ್, [illegible], ಬೆಂಗಳೂರು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸಗ್ರಂಥವಾಗಿ ಸುಪಾಠ್ಯವಾದದ್ದಾಗಿಯೂ ನವರಸ ಪರಿಪೂರ್ಣ್ಣಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧—೮—೦ ರೂ॥, ಹಾಸಲ್ ೧ ಆ॥.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮ॥ ಲಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಬಹು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳತಕ್ಕದು.

ಬಿ. ವೆಂಕಟಾಚಾರ್,

ಮುನಸಫ್, ಎಡೆಯಳ್ಳಿ,

ಕಡೂರು ಡಿಸ್ಟ್ರಿಕ್ಟ್.

DIVYASURICHARITAM.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ತನ್ಮತಾಭಿಮಾನವುಳ್ಳವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಸಂಸ್ಕೃತ ಮಹಾ ಕಾವ್ಯರತ್ನವು ಮೈಸೂರು ವಿದ್ಯಾತರಙ್ಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಹುಣಿಗಲ್ ಅಸಿಸ್ಟೆಂಟ್ ಇಂಜನಿಯರ್ ಮ॥ ಬಿ. ಗೋವಿಂದಾಚಾರ್ಯರವರಿಗೆ ಮೊಬಲಗು ಸಹಿತ ಬರೆದುಕೊಂಡರೆ ಪುಸ್ತಕ ಕಳುಹಿಸಲ್ಪಡುವದು.

ಅವ್ವಲ್ ತರಹಾ ಪುಸ್ತಕ		೦—೧೪—೦
ದುಯ್ಯಂ ತರಹಾ	,,	೦—೧೨—೦
ಅಂಚೇಹಾಸಲ್	,,	೦—೨—೦

ಬೆಂಗಳೂರ್ ತಾ॥ ೩ನೇ ಜೂನ್ ೧೮೮೫

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 29, 1885.

೧೮೮೫ನೇ ಜೂನ್ ೨೯ನೇ ತಾ॥ ಸೋಮವಾರ.

BIRTHDAY ANNIVERSARY OF THE FIRST PRINCE OF MYSORE

ಈ ತಿಂಗಳ ೨೩ನೇ ತಾರೀಖು ಮಂಗಳವಾರದದಿನ ಮೈಸೂರು ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ಜ್ಯೇಷ್ಠಪುತ್ರರಾಗಿಯೂ, ಪಟ್ಟಾಭಿರಾಜ್ಯ ಭಾಜನರಾಗಿಯೂ ಇರುವ ಶ್ರೀಕೃಷ್ಣರಾಜ ಒಡೆಯರವರಿಗೆ ಮೊದಲನೆಯ ವರ್ಷವರ್ಧಂತಿಯಾದದರಿಂದ ತತ್ಪ್ರಯುಕ್ತಗಳಾದ ಉತ್ಸವ ವಿಶೇಷಗಳು ಅತ್ಯಂತ ವಿಭವದೊಡನೆ ಜರಿಗಿದವೆಂದು ತಿಳಿಯುವದಕ್ಕೆ ಬಹಳ ಸಂತೋಷಿಸುತ್ತೇವೆ. ನಮ್ಮ ಸ್ನೇಹಿತರೊಬ್ಬರಿಂದ ತಿಳಿಸಲ್ಪಟ್ಟ ಸದರೀ ಉತ್ಸವ ವಿವರಣವನ್ನು ಈ ಕೆಳಗೆ ತಿಳಿಸುವೆವಾಗಿ ಇದು ಈ ಪತ್ರಿಕೆಯನ್ನೋದತಕ್ಕವರಿಗೂ, ಕರ್ಣಾಟ ರಾಜಮುಕುಟ ಪ್ರಭವ ವೈಭವಗಳನ್ನು ಕೇಳಿ ಸಂತೋಷಿಸತಕ್ಕವರಿಗೂ ಹೃದಯೋಲ್ಲಾಸ ಕರವಾಗಿರುವದೆಂದು ನಂಬುವೆವು.

೨೩ನೇ ಮಂಗಳವಾರದ ... ೨೩ನೇ ತಾ॥ ಮಂಗಳವಾರದದಿನ ಶ್ರೀಮನ್ಮಹಾರಾಜ ಪುತ್ರರಾದ ಕೃಷ್ಣರಾಜ ಒಡೆಯರವರ ವರ್ಷವರ್ಧಂತೀಮಹೋತ್ಸವವು ಅತ್ಯಂತ ವಿಭವದೊಡನೆ ನಡೆಯಿತು. ಅಂತಾ ಶುಭದಿನದ ಪ್ರಾತಃಕಾಲದಲ್ಲಿ ಮಂಗಳಾರತಿ ಮಧುರಾನನೆಯಾದ ನಗರಾಧಿದೇವತೆಯ ಕೋಲಾಹಲ ಧ್ವನಿಯಭಿವ್ಯಕ್ತವಾಗುವಂತೆ ರಾಜಮರ್ಯಾದಾರ್ಥವಾಗಿಯೂ ಶುಭಸೂಚಕವಾಗಿಯೂ ೨೧ ತೋಪುಗಳು ಹಾಕಲ್ಪಟ್ಟವು. ಅನಂತರ ಮಹಾರಾಜ ಕುಮಾರರಿಗೆ ಮಂಗಳಸ್ನಾನಾದ್ಯುಪಚಾರಗಳೆಲ್ಲ ಜರುಗಿದವು. ಬಳಿಕ ಬೆಳಿಗ್ಗೆ ೯ ಘಂಟೆಗೆ ದರ್ಬಾರ್ ನಡೆಯಿತು. ಅದಕ್ಕೆ ಮಹಾರಾಜರಿಂದಾಜ್ಞಾಪ್ತರಾದ ವಿದ್ವಾಂಸರೂ, ಅಧಿಕಾರಿಗಳೂ, ರಾಜಬಂಧುಗಳೂ ಪ್ರಮುಖರಾದ ವರ್ತಕರೂ, ಅಂತಾ ಉತ್ಸವಕಾಲದಲ್ಲಿ ರಾಜಾಸ್ಥಾನ ಪ್ರವೇಶ ಯೋಗ್ಯಗಳಾದ ವಸ್ತ್ರಭೂಷಣಗಳಿಂದಲಂಕೃತರಾಗಿ ಹೋಗಿದ್ದರು. ೯ ಘಂಟೆಗೆ ಸರಿಯಾಗಿ ರಾಜಗುರುಗಳಾದ ಶ್ರೀ ಪರಕಾಲಯತಿವರರು ತಮ್ಮ ಶಿಷ್ಯವರ್ಗದೊಡನೆ ದಯಮಾಡಿದರು. ತರುವಾಯ ಮಹಾರಾಜರವರ ಸವಾರಿ ಚಿತ್ತೈಸಿದಕೂಡಲೇ ಅವರು ಗುರುಗಳಿಂದನುಗೃಹೀತರಾಗಿ ತಮ್ಮ ಭದ್ರಾಸನವನ್ನಲಂಕರಿಸಿದರು. ಆಗ ಋತ್ವಿಕ್ಪುರೋಹಿತರು ಅಂತಾ ಮಹೋತ್ಸವಕ್ಕೆ ಅಂಗಗಳಾದ್ದಂತಾ ವಿಧಿವತ್ತಾದ ಕರ್ಮಗಳನ್ನು ಪೂರ್ವಸಂಪ್ರದಾಯವನ್ನನುಸರಿಸಿ ತಾತ್ಕಾಲಿಕಾಭಿರುಚಿಗೆ ತಕ್ಕಂತೆ ನೆರವೇರಿಸಿದರು. ಶ್ರೀಮನ್ಮಹಾರಾಜರವರ ಎಡಪಾರ್ಶ್ವದೊಳು ಕನಕ ಪಾಂಚಾಲಿಕೆಗಳಂತಿರ್ಪ ಇಬ್ಬರು ರಾಜಪುತ್ರಿಗಳೂ, ಅವರ ಮಧ್ಯದಲ್ಲಿ ಬಹುವಿಧ ದಿವ್ಯ ಭೂಷಣ ವಸನ ವಿಶೇಷ ವಿರಾಜಿ

ಹಾನ ಸುಕುಮಾರ ಸುಂದರ ಸುಲಕ್ಷಣರಾದ ಮಹಾರಾಜಕುಮಾರರೂ ಕುಳಿತಿದ್ದುದುಕಂಡು ಪುರಜನಾನೀಕವೆಲ್ಲವೂ ಅಪರಿಮಿತಾನಂದವನ್ನೈದಿದವರು ಸರ್ವಾತಿಶಾಯಿ ಗಾಂಭೀರ್ಯಸೌಂದರ್ಯ ಮಹಿತರಾದ ಪಿತೃಪುತ್ರರಿಬ್ಬರಿಗೂ ರಾಜದರ್ಶನ ಕುತೂಹಲಿಗಳಾದ ಪ್ರಜೆಗಳ ದೃಷ್ಟಿದೋಷವು ಯೆಲ್ಲಿ ಸೋಕುವದೋ ಎಂಬ ಭೀತಿಯೊಂದುದೆಸೆಯೊಳು ಅನೇಕರು ಬೆಚ್ಚಗಿರಲಿಲ್ಲವು. ಅನಾದಿಯಾದ ಕರ್ಣಾಟಕಸಂಸ್ಥಾನದ ಗೌರವ ಪ್ರಾಶಸ್ತ್ಯಗಳಿಗೆ ಸ್ವಲ್ಪವೂ ಲೋಪವಿಲ್ಲದಂತೆ ನಡೆಯಬೇಕಾದ ಕ್ರಮಗಳೆಲ್ಲವೂ ಜರಗಿದವು. ನಜರ್‌ಮುಜರೆಗಳೆಲ್ಲ ಪೂರೈಸಿದಮೇಲೆ ಯೆಲ್ಲರಿಗೂ ದಕ್ಷಿಣೆಪುಷ್ಪತಾಂಬೂಲಾದಿಗಳು ಕೊಡಲ್ಪಟ್ಟವು. ಅದೇದಿನ ಸಾಯಂಕಾಲ ಆರು ಘಂಟೆಗೆ ಮಹಾರಾಜಕುಮಾರರು ಇಷ್ಟದೇವತಾ ಸಂದರ್ಶನಕ್ಕೋಸ್ಕರ ರಾಜಾರ್ಹವಾದ ಅಂದೋಳಿಕಾರೂಢರಾಗಿ ಪರಿಮಿತ ಪರಿವಾರದೊಡನೆ ರಾಜಮಂದಿರದಿಂ ಶ್ರೀರಮಣ ಕೃಷ್ಣದೇವರ ದೇವಸ್ಥಾನಕ್ಕೆ ಹೋಗಿ ದೇವತಾದರ್ಶನಮಾಡಿಕೊಂಡು ಪ್ರದಕ್ಷಿಣಕ್ರಮದಿಂ ಜಾಗ್ರತೆಯಾಗಿಯೇ ಅರಮನೆಗೆ ದಯಮಾಡಿದರು. ಅನಂತರ ರಾಜಕುಮಾರರಿಗೆ ಆರತಿಅಕ್ಷತೆಗಳು ನಡೆದವು. ಏತದರ್ಥ ಮಾಡಲ್ಪಟ್ಟ ಅಲಂಕಾರಾದಿಗಳೂ, ಬಾಣಬಿರುಸು ಮೊದಲಾದ ವಿನೋದಾದಿಗಳೂ ಕೇವಲ ಶ್ಲಾಘ್ಯವಾಗಿದ್ದವು.

ಪುರಜನಗಳಿಗೆ ತಮ್ಮ ಮಹಾರಾಜ ಪುತ್ರರಲ್ಲಿರುವ ನಿರತಿಶಯ ಪ್ರೇಮ ವಿಶ್ವಾಸ ಗೌರವಗಳಿಂದ ಅವರನ್ನು ಅನೇಕ ಪ್ರಕಾರದಿಂ ನೋಡಬೇಕೆಂಬ ಕುತೂಹಲದೊಡನೆ ಮಹಾರಾಜಪುತ್ರರ ಸವಾರಿಯನ್ನು ನಿರೀಕ್ಷಿಸುತಲಿದ್ದರು. ಯಾವ ಕಾರಣದಿಂದಲೋ ಮೆರವಣಿಗೆ ಕೋಟೆಯಲ್ಲೇ ನಡೆಸಲ್ಪಟ್ಟದರಿಂದ ಅನೇಕರಿಗೆ ಅದೊಂದು ಅಸಮಾಧಾನಕರವಾಗಿತ್ತು. ಮುಖ್ಯವಾಗಿ ಮಹಾರಾಜ ಕುಮಾರಸಂದರ್ಶನದೊಳು ಇಲ್ಲಿನ ಪ್ರಜೆಗಳು ಪಡೆದಿರುವ ಉತ್ಸಾಹವನ್ನು ನೋಡಿದರೆ ಇವರು ನಿರೂಢವಾದ ರಾಜಭಕ್ತಿ ವಿಶ್ವಾಸಾದಿ ಭಾವವುಳ್ಳವರಾಗಿದಾರೆಂಬ ಅಂಶ ಸ್ಪಷ್ಟವಾಗುತಿದೆ. ಇದು ಇವರಿಗೆ ಸಹಜವೆಂತಲೇ ಹೇಳಬೇಕು. ಯಾತಕ್ಕೆಂದರೆ, ಈ ದೇಶೀಯರು ತಮ್ಮ ಜಾತಿ ಕುಲಸಂಪ್ರದಾಯ ಮುಂತಾದವು ವಿವೇಕ ಸಂಪನ್ನರಾದ ಸ್ವರಾಜರಿಂದಲೇ ಪ್ರೋತ್ಸಹಿಸಲ್ಪಟ್ಟು ತಾವು ಸಕಲ ವಿಷಯಗಳಲ್ಲಿಯೂ ಸುರಕ್ಷಿತರಾಗಿರಬೇಕೆಂಬ ಅಪೇಕ್ಷೆಯುಳ್ಳವರಾಗಿರುವದರಿಂದ ಅಂತಾ ವಿಶೇಷವಾದ ಅಪೇಕ್ಷಾ ಪೂರ್ತಿಗೆ ಇವರಾದರೂ ಕಾರಣರಾಗುವರೇನೋ ಎಂಬ ನಿರೀಕ್ಷಣೆಯೇ ಅಂತಾ ಭಕ್ತಿ ವಿಶ್ವಾಸಾದಿ ಭಾವಗಳನ್ನು ಅವರಿಗೆ ಹುಟ್ಟಿಸುತಿದೆ. ಇನ್ನೂ ಕೆಲವು ಇತರ ವಿಷಯಗಳಿಂದ ಸದರೀದಿನವು ಸ್ಮರಣೀಯವಾಗಿಯೂ ಉತ್ಸವತತ್ಕದ್ದಾಗಿಯೂ ವಿಶೇಷ ಆನಂದ ಸಂದಾಯಕವಾದ್ದಾಗಿಯೂ ಇತ್ತು.

ಚಿರಪ್ರಾರ್ಥಿತವಾದ ಇಂತಾ ಶುಭೋದಂತವನ್ನು ಅನವರತ ಕೇಳಲಪೇಕ್ಷೆಯುಳ್ಳವರಾಗಿದೇವೆ. ಜಗದ್ವಿಖ್ಯಾತವಾದ ಈ ಮಹಿಸೂರು ರಾಜವಂಶವು ಶಾಶ್ವತವಾಗಿ ಆಯುರಾರೋಗ್ಯಬಲ ವಿಕ್ರಮ ಸುಪುತ್ರಸಂತತಿ ವಿನಯಗಾಂಭೀರ್ಯೌದಾರ್ಯಾದಿ ಸುಗುಣ ಪ್ರಾಶಸ್ತ್ಯಗಳುಳ್ಳ ಅರಸರಿಂದ ವೃದ್ಧಿಯನ್ನೈದುತ ಬರಬೇಕೆಂಬದೇ ನಮ್ಮ ಅನವರತ ಪ್ರಾರ್ಥನೆಯಾಗಿರುವದರಿಂದ ಅಂತಾ ನಮ್ಮ ಪ್ರಾರ್ಥನೆಗೆ ಕಾರಣಭೂತರಾದ ಪ್ರಕೃತ ಮಹಾರಾಜಪುತ್ರರ ವಿಷಯಕವಾದ ವೃತ್ತಾಂತಗಳಿಗಿಂತಲೂ ನಮಗೆ ಆನಂದವನ್ನುಂಟುಮಾಡತಕ್ಕದ್ದು ಬೇರೊಂದೂ ಇರುವದಿಲ್ಲವು.

THE RUNGACHARLU MEMORIAL HALL

ಶ್ರೀಮನ್ಮಹಾರಾಜ ಪುತ್ರರ ವರ್ಷವರ್ಧಂತೀ ಪ್ರಯುಕ್ತವಾದ ಉತ್ಸವ ವಿಶೇಷದಿಂ ನನ್ನಲೇಖನದ ಪ್ರಥಮಭಾಗವು ಪರಿಸಮಾಪ್ತವಾಯಿತಷ್ಟೆ. ಮೇಲೆ ಕಂಡ ಉತ್ಸವಾಂಗವಾಗಿ ನಡೆದ ಮತ್ತೊಂದಂಶವನ್ನು ವಿವರಿಸುವದರ ಮೂಲಕ ನನ್ನ ಪತ್ರಿಕೆಯು ಕೊನೆಮುಟ್ಟಿಸುವೆನು.

ಈಗ ಈ ಮಹಿಸೂರು ರಾಜಧಾನಿಗೊಂದು ಅಲಂಕಾರರೂಪವಾಗಿ ಯೇರ್ಪಟ್ಟಿರುವ ಶಿಲ್ಪವಿದ್ಯಾ ಕೌಶಲ್ಯ ಸೂಚಕವಾದ ಒಂದು ದಿವ್ಯಭವನವು ನಿನ್ನೆಯರಾತ್ರಿ ಶ್ರೀಮನ್ಮಹಾರಾಜರವರಿಂದ ಖುಲ್ಲಾ ಮಾಡಲ್ಪಟ್ಟಿತು. ಈ ಸೌಧವು ವಿಶಾಲ ರಮಣೀಯವಾದದ್ದಾಗಿದೆ ಮಲ್ಲದೆ ಅದರ ಒಂದು ಪಾರ್ಶ್ವದಲ್ಲಿ ನಾಟ್ಯರಂಗ ವೇರ್ಪಡಿಸಲ್ಪಟ್ಟಿದೆ. ಸಾಬಕ್ ದಿವಾನರವರಾದ ಮ॥ ರಂಗಾಚಾರ್ಯರವರ ಜ್ಞಾಪಕಾರ್ಥ ಪರಿಕಲ್ಪಿತವಾದ ಪ್ರಸಕ್ತ ಕಟ್ಟಡವನ್ನು ಖುಲ್ಲಾ ಮಾಡಲಿಕ್ಕೆ ಪ್ರಶಸ್ತವಾದೊಂದು ಶುಭಸಮಯವು ಇದುವರಿವಿಗೂ ನಿರೀಕ್ಷಿಸಲ್ಪಡುತಲಿತ್ತು. ಹೀಗಿರುವಲ್ಲಿ ಶ್ರೀಮನ್ಮಹಾರಾಜಪುತ್ರರ ವರ್ಷವರ್ಧಂತಿಯು ಪ್ರಾಪ್ತವಾದದರಿಂದ ಸ್ಮರಣೀಯವಾದ ಅಂತಾ ದಿವಸವು ಅನುಕೂಲಸಮಯವೆಂದು ಭಾವಿಸಿ ಆದಿನ ಸವರೀ ಕಟ್ಟಡವು ಬಹಳ ಮನೋಜ್ಞವಾಗಿರುವಂತೆ, ತೋರಣ ಕದಳೀಸ್ತಂಭಾದಿಗಳಿಂದಲೂ, ದೀಪಕಂಗಿಗಳಿಂದಲೂ, ಅಲಂಕರಿಸಲ್ಪಟ್ಟಿತು. ಆದಿನರಾತ್ರಿ ಶ್ರೀಮನ್ಮಹಾರಾಜರವರು ಸವಾರಿ ಅಲ್ಲಿಗೆ ಚಿತ್ತೈಸುವದಕ್ಕೆ ಪೂರ್ವಭಾವಿಯಾಗಿ ಅನೇಕ ದೊಡ್ಡಮನುಷ್ಯರು ಅಲ್ಲಿಗೆ ಬಂದು ಜಮಾಯಿಸಿದ್ದರು. ಮಹಾರಾಜರವರು ದಯಮಾಡಿ, ಆಸನವ ಪರಿಗ್ರಹಿಸಿದ ಕೂಡಲೇ ಕಮ್ಮಿಟಿಯವರು ತಮ್ಮ ರಿಪೋರ್ಟನ್ನು ಓದಲಾರಂಭಿಸಿದರು. ಅದರಲ್ಲಿ ತಿಳಿಸಲ್ಪಟ್ಟ ಮುಖ್ಯಾಂಶವೇನೆಂದರೆ —

[illegible]

ಮೇಲೆ ಕಂಡ ರಿಪೋರ್ಟು ಓದಲ್ಪಟ್ಟ ಬಳಿಕ ದಿವಾನರವರು ಮಹಾರಾಜಾಜ್ಞಾಪರಿಪಾಲಕರಾಗಿ ಯೆದ್ದು ನಿಂತುಕೊಂಡು ಕಮ್ಮಿಟಿಯವರನ್ನು ದಿಕರಿಸಿ ಕೆಲವಾಕ್ಯಗಳನ್ನು ತಿಳಿಸಿದರು. ಅದು ಅವರ ಸಮೀಪದೊಳಿದ್ದವರಿಗಾದರೂ ಕೇಳಿಸಿತೋ ಇಲ್ಲವೋ ನಾನರಿಯೆನು. ಯದ್ಯಪಿ ಸಮೀಪದೊಳಿದ್ದವರನ್ನು ಕೇಳಿ ಅವರ ಅಭಿಪ್ರಾಯವನ್ನು ತಿಳಿದುಕೊಂಡೆನು. ಅದರ ಸಾರಾಂಶವೇನೆಂದರೆ.

[illegible]

ಅನಂತರ ಮ॥ ಶೇಷಾದ್ರಿ ಅಯ್ಯರವರು ಮಹಾರಾಜರವರ ಆಜ್ಞಾನುಸಾರ ಮ॥ ರಂಗಾಚಾರ್ಯರವರ ತಸ್ವೀರ್ ಇಡಲ್ಪಟ್ಟದ್ದ ಸ್ಥಳಕ್ಕೆ ಹೋಗಿ ಭಕ್ತಿ ಗೌರವಗಳೊಡನೆ ಅದರ ಬುರಕಾವನ್ನು ತೆಗಿಯಲು, ಅಲ್ಲಿದ್ದವರಿಗೆಲ್ಲ ಅದೊಂದು ಕೃತಕವಾದ ಪ್ರತಿಮೆಯಂತೆ ತೋರದೆ, ಪ್ರತ್ಯಕ್ಷ ಪ್ರಭುತ್ವಕ್ರಮವ ನೋಡುವಬಗ್ಗೆ ಮ॥ ರಂಗಾಚಾರ್ಯರವರು ಭೌತಿಕಶರೀರದೊಡನೆ ಸಕ್ಷಾತ್ತಾಗಿ ಬಂದಂತೆ ಇದ್ದದರಿಂದ ಜನಗಳ ಸಂತೋಷಕ್ಕೆ ಪಾರವಿಲ್ಲದೆ ಇತ್ತು. ತರುವಾಯ ಕಮ್ಮಿಟಿಯವರು ಕಂಟ್ರಾಕ್ಟುದಾರರಿಗೆ ಶಾಲುಜೋಡಿ ಮುಂತಾದ ವಸ್ತ್ರಗಳು ಬಹುಮಾನ ಮಾಡಲು ಅವರು ತಮಗೆ ಮಾಡಲ್ಪಟ್ಟ ಸನ್ಮಾನದಿಂದಲೂ, ತೋರಿಸಲ್ಪಟ್ಟ ಗೌರವದಿಂದಲೂ ವ್ಯಕ್ತಪಡಿಸಲ್ಪಟ್ಟ ಅಭಿಮಾನದಿಂದಲೂ, ಸಂತುಷ್ಟರಾಗಿ ಅದಂ ಸೂಚಿಸುವಂತೆ ಮಹಾ ರಾಜಸನ್ನಿಧಿಯಲ್ಲಿ ಸಾಷ್ಟಾಂಗವಾಗಿ ನಮಸ್ಕಾರ ಮಾಡಿದರು. ಅನಂತರ ಶ್ರೀಮನ್ಮಹಾರಾಜರವರಿಂದ ಪ್ರೋತ್ಸಹಿತರಾದ ನಾಟಕ ಕಂಪೆನಿಯವರು ದ್ರೌಪದೀ ಸ್ವಯಂವರವೆಂಬ ನಾಟಕವನ್ನು ಗೌರವಾರ್ಥ ಸದರೀ ಕಟ್ಟಡದಲ್ಲೇ ಆಡುವಂತೆ ನಿಶ್ಚಯಿಸಿಕೊಂಡು ಸಕಲಸನ್ನಾಹಗಳಂ ಮಾಡಿಕೊಂಡಿದ್ದದರಿಂದ ಅದಂ ಕಟಾಕ್ಷಿಸುವಬಗ್ಗೆ ಮಹಾರಾಜರವರು ತಮ್ಮ ಸ್ಥಾನವನ್ನಗಲಿ ಪರಿಕಲ್ಪಿತವಾದ ಬೇರೊಂದು ಪ್ರದೇಶಕ್ಕೆ ದಯಮಾಡಿದರು. ಕೂಡಲೇ ನಾಟಕ ಉಪಕ್ರಮಿಸಲ್ಪಟ್ಟಿತು. ಸದರೀ ನಾಟಕವನ್ನು ಈ ಕಂಪೆನಿಯವರು ಅನೇಕಾವರ್ತಿ ಆಡಿರುವದರಿಂದ ಅದರ ಕಥಾಭಾಗವನ್ನು ಅರಿಯದವರಿಲ್ಲವು. ಯದ್ಯಪಿ ನೂತನ ನಿರ್ಮಿತವಾದ ಸ್ಥಳ ಸನ್ನಿವೇಶದಿಂದಲೂ, ಮಹಾರಾಜರವರ ಸಾಕ್ಷಾತ್ಕಾರದಿಂದಲೂ, ಆಗಿಂದಾಗ್ಯೆ ಪ್ರವೇಶವಾಗತಕ್ಕ ಪಾತ್ರಗಳ ಸೌಷ್ಟವದಿಂದಲೂ, ಶ್ರಾವ್ಯವಾದ ಅವರ ಗಾನದಿಂದಲೂ, ಮನೋಜ್ಞಗಳಾದ ಅವರ ಉತ್ತರ ಪ್ರತ್ಯುತ್ತರಗಳಿಂದಲೂ ವಿಶೇಷ ನುಡಿಯಲ್ಯಾಕೆ, ಆರಾತ್ರಿಯೊಳು ಸಾಧುವು ಸಕಲಾಂಶದಿಂದಲೂ ದೇವೇಂದ್ರ ಸಭೆಯಂತೆ ಹೃದಯಾಕರ್ಷಕವಾದ್ದಾಗಿತ್ತು.

ಆಮಾರನೆಯದಿನವಾದ ೩ನೇ ತಾ॥ ಬುಧವಾರದದಿನ ಬೆಳಗ್ಯೆ ಮಹಾರಾಜರವರ ಸವಾರಿಯು ನೂತನವಾಗಿ ಕಟ್ಟಲ್ಪಟ್ಟ ಬಾಲಿಕಾಪಾಠಶಾಲೆಗೆ ಚಿತ್ತೈಸಿತು. ಅದು ಪೂರ್ವಭಾವಿಯಾಗಿ ತೋರಣಾದಿಗಳಿಂದ ಅಲಂಕೃತವಾಗಿ ಗೌರವ್ಯರಾದ ಅನೇಕಮಂದಿ ಅಧಿಕಾರಿಗಳಿಂದಲೂ, ವರ್ತಕರಿಂದಲೂ, ನಾರೀ ಸಮೂಹದಿಂದಲೂ ನಿಬಿಡತವಾಗಿತ್ತು. ಮಹಾರಾಜರವರು ನಿಜಾಸನವ ಪರಿಗ್ರಹಿಸಿದ ಕೂಡಲೇ ವಿದ್ಯಾರ್ಥಿನಿಗಳು ತಮ್ಮ ಗಾನವಿದ್ಯಾ ಕೌಶಲ್ಯವನ್ನು ವ್ಯಕ್ತಪಡಿಸಿದಮೇಲೆ ಮಹಾರಾಜರಿಂದಾಜ್ಞಪ್ತರಾಗಿ ದಿವಾನರವರು ಸಂದರ್ಭೋಚಿತವಾದ ಕೆಲವು ಅಂಶಗಳನ್ನು ಪ್ರಪಾದಿಸಿ ನವೀನವಾದ ಈ ಭವನವನ್ನು ಮಹಾರಾಣಿಯವರ ಬಾಲಿಕಾಪಾಠಶಾಲೆಯ ವಿಚಾರಣೆಕರ್ತರ ಅಧೀನಕ್ಕೊಪ್ಪಿಸಿರುವಂತೆಯೂ, ಅದನ್ನವರು ಯುಕ್ತವಾಗಿ ವಿನಿಯೋಗಿಸಿಕೊಳ್ಳುವರೆಂದು ತಾ ನಂಬುವಂತೆಯೂ ಹೇಳಿದರು. ಕೂಡಲೇ ಕೌನ್ಸಿಲರಾದ ರಾಯಬಹದೂರ್ ಕೃಷ್ಣರಾಯರವರು ಗಂಭೀರವಾದ ಧ್ವನಿಯೊಡನೆ ಈ ದಿವ್ಯಭವನವನ್ನು ಮಹಾರಾಜರವರು ಕೃಪೆಗೈದದಕ್ಕಾಗಿ ಪ್ರಬಲವಾದ ಕೃತಜ್ಞತಾ ಭಾವವನ್ನು ಸೂಚಿಸಲಿಕ್ಕೆ ತಕ್ಕ ಶಬ್ದವು ತಮಗೆ ದುರ್ಲಭವಾಗಿರುವಂತೆಯೂ, ಆದಾಗ್ಯೂ ಪ್ರಜೆಗಳ ಮತ್ತು ಪಾಠಶಾಲಾ ವಿಚಾರಣೆಕರ್ತರ ತರಫೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವಂತೆಯೂ ಹೇಳಿದರು. ಬಳಿಕ ಸಭೆ ಬರಖಾ

ಪ್ತಾಗಿಯಿತು. ಈರೀತಿಯಾದ ಯೆರಡು ದಿವಸಗಳ ವಿಶೇಷಗಳಿಂದ ಈ ನಗರವು ದರ್ಶನೀಯವಾಗಿತ್ತು. ವಿಸ್ತರಪ್ರತೆ ತಿಳಿಸಲ್ಪಟ್ಟ ಈವಿಚಾರದಿಂದಲೇ ತಮ್ಮ ಅವಕಾಶವು ಬಹಳಮಟ್ಟಿಗೆ ಆಕ್ರಮಿಸಲ್ಪಟ್ಟಕಾಗಿ ಇತರ ವಿಶೇಷಾಂಶಗಳನ್ನು ಸಾಧ್ಯವಾದಷ್ಟು ಮುಂದೆವಿವರಿಸುವೆವು.

THE PRESENT STATE OF MYSORE

ಮೈಸೂರುದೇಶದ ಆಡಳಿತ ಕ್ರಮವನ್ನು ಕುರಿತು, ಇದುವರಿವಿಗೂ ನಾವು ಅನೇಕಸಂದರ್ಭಗಳಲ್ಲಿ ನಮ್ಮ ಅಭಿಪ್ರಾಯವನ್ನು ಅರತಿ ವಿಶೇಷವಾಗಿ ತಿಳಿಸಿದ್ದೇವೆಯಷ್ಟೆ. ಇದೇ ವಿಷಯವನ್ನು ಕುರಿತು ಒಬ್ಬ ದೊಡ್ಡಮನುಷ್ಯರು ಇದರ ಕುಡುತೆ ಬರೆದು ಕಳುಹಿಸಿರುತ್ತಾರಾಗಿ ಅದನ್ನಿದರಡಿಉತ್ಸಾಹದಿಂ ಪ್ರಕಟಿಸುವೆವು

"ಈದೇಶದ ಆಡಳಿತವನ್ನು ಕುರಿತು ಪರದೇಶ ಸ್ವದೇಶಾನ್ಯ ದೇಶವೃತ್ತಾಂತ ಪತ್ರಿಕಾಲೇಖಕರೂ,ಇತರರು ಸಹ ನಾನಾವಿಧವಾಗಿ ಅಭಿಪ್ರಾಯಪಡುತ ಆಕ್ಷೇಪಿಸುತಲಿರುತ್ತಾರೆ ಇದಕ್ಕೆ ಕಾರಣವನ್ನಾಲೋಚಿಸಲಾಗಿ ಇಲ್ಲಿನ ಪ್ರಭುತ್ವ ಕ್ರಮದೊಳು ಅನಿವಾರ್ಯಗಳಾಗಿ ಯೇರ್ಪಟ್ಟಿರುವ ಅನೇಕ ಅಂಶಗಳಿಂದ ಇಲ್ಲಿನಸ್ಥಿತಿಯು ಕ್ರಮಪಡದೆ ಅನ್ಯರ ಆಕ್ಷೇಪಣೆಗೆ ಅದು ವಿಷಯವಾಗುತಲಿದೆ. ಅವುಗಳ್ಯಾವುವುವೆ —

೧. ಈರಾಜ್ಯವು ಬಹುಕಾಲದಿಂದ ಬ್ರಿಟಿಷ್ ನವರ ಸಾಕ್ಷಾತ್ಪಾಲನೆಯೊಳಿದ್ದು ಬಳಿಕ ನೇಟಿವ್ ಅರಸರಿಗೆ ಒಪ್ಪಿಸಲ್ಪಟ್ಟಿರುವದು.

೨. ಈದೇಶಕ್ಕೆ ಖಜಾನೆಯಿಲ್ಲದಿರುವದುಮಾತ್ರವಲ್ಲದೆ ದುರ್ಭರವಾದಸಾಲ ಯೇರ್ಪಟ್ಟಿರುವದು

೩. ಇಲ್ಲಿಗೆ ಒಂದುಸ್ಥಿರಸಪೇಣಭಾವಿಸಿ ಹಾಕಲ್ಪಟ್ಟ ರೆಮಿಷ್ಟೆಯು ಪಲಕಾರಿಯಾಗದಿರುವದು.

೪. ದೇಶದ ಹುಟ್ಟುವಳಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಅವಕಾಶವಿಲ್ಲದಿರುವದು, ಮತ್ತು ಅದಕ್ಕೆತಕ್ಕಂತೆ ದ್ರವ್ಯವನ್ನು ವಿನಿಯೋಗಿಸಿಕೊಳ್ಳಲಾಗದಿರುವದು.

೫. ಪ್ರಜೆಗಳು ಅನೇಕವಿಧವಾದ ತೆರಿಗೆಗಳಮೂಲಕ ಸಂಕಟಪಡುತಲಿರುವದು

೬. ಪ್ರತಿಸಂವತ್ಸರವಲ್ಲಿಯೂ ಕಾಲವೃಷ್ಟಿಯು ತಪ್ಪುತ ಕ್ಷಾಮಸೂಚನೆಗಳು ತೋರುಬರುವದು.

೭. ಗವರ್ನಮೆಂಟಿನವರಿಗೆ, ಆದಾಯವಿಲ್ಲದಿದ್ದಾಗ್ಯೂ ಅನೇಕ ಚಿಲ್ಲರೇ ಉದ್ಯೋಗಸ್ಥರಿಗೆ ಜೀವನಹಾನಿಯುಂಟಾಗಿ ತನ್ಮೂಲಕ ಅವರು ಅಸಮಾಧಾನ ಪಡುತಲಿರುವದು.

೮. ಸರ್ಕಾರಿನೌಕರಿಯು ದೊರೆಯುವದೆಂಬ ನಂಬಿಕೆಯೊಡನೆ ಶಾರೀರಮಾನಸಿಕ ಕ್ರಮಗಳನ್ನನಭವಿಸುತ ಮಾಡತಕ್ಕ ವಿದ್ಯಾಭ್ಯಾಸಕ್ಕೆ ತಕ್ಕಪ್ರಯೋಜನವಿಲ್ಲದೇಹೋಗುವದು, ಅಥವಾ ಅಲ್ಪಪ್ರಯೋಜನ ವುಂಟಾಗುವದು

೯. ಇಲ್ಲಿನ ಭಾರೀ ಉದ್ಯೋಗಗಳೆಲ್ಲವೂ ಅನ್ಯದೇಶೀಯರ ಪಾಲಾಗುತಿವೆಯೆಂದು ಜನಗಳು ತಿಳಿದು ಅದಕ್ಕಾಗಿ ಅವರು ಅಸಮಾಧಾನ ಪಡುತಲಿರುವದು

೧೦. ಯೂರೋಪಿಯರ್ಗಳಿಗೆ ಬದಲಾಗಿ ನೇಟಿವಿಗಳನ್ನು ನೌಕರರ್ನ್ನಾಗಿಮಡುವದರಿಂದ ಅವರ ಪ್ರಿವಿಲೇಜ್‌ವೃದ್ಧಿಯಾಗುತಬರುವದು

೧೧. ಪ್ರಜೆಗಳು, ನೇಟಿವ್‌ಅರಸರ ಪ್ರಭುತ್ವದಮೂಲಕ ನಿರೀಕ್ಷಿಸುತಲಿದ್ದ ಪ್ರಯೋಜನಾಂಶವು ಅವರಿಗೆ ಲಭಿಸದೆಹೋಗುವದು.

೧೨. ಕಾಲಾನುಗುಣವಾದ ನ್ಯಾಯನಿಬಂಧನೆಗಳೇರ್ಪಡದೆಹೋಗುವದು.

ಇವುಗಳು ಅಪರಿಹಾರ್ಯಗಳಾಗಿರುವದರಿಂದ ಈ ವಿಷಯವಾಗಿ ಆಗಿಂದಾಗ್ಯೆ ದಿವಾನರವರೂ ಮಹಾರಾಜರವರೂ ಬ್ರಿಟಿಷ್ ರೆಸಿಡೆಂಟರೂ ಕಡೆಗೆ ವೈಸರಾಯಿಯವರು ಸಹ ನಾನಾವಿಧವಾದ ಅಪವಾದಕ್ಕೆ ಗುರಿಯಾಗದಿರುವದಿಲ್ಲವು.

ಸರ್ ೧೮೮೧ನೇ ಇಸವಿಯಲ್ಲಿ ಹೊಸದಾಗಿ ಏರ್ಪಟ್ಟ ಕರಾರಿನೊಳು ಜಾಸ್ತೀ ಸಬ್‌ಸಿಡೀವಿಷಯ ನಮೂದಿಸಲ್ಪಟ್ಟಿರುವದೂ, ಹಿಂದೆ ಇಲ್ಲಿ ಬ್ರಿಟಿಷಕಮ್ಮಿಷನರಿಂದ ನಡೆಸಲ್ಪಟ್ಟಿರುವ ಕ್ರಮಗಳು ಮುಂದೆಯೂ ಅನುಸರಿಸಲ್ಪಡತಕ್ಕದ್ದೆಂಬದೂ ಪ್ರಬಲ ನಿರ್ಬಂಧಗಳಾಗಿಏರ್ಪಟ್ಟವೆ. ನೇಟಿವ್ ಸಂಸ್ಥಾನಗಳ ಪದ್ಧತಿಯನ್ನನುಸರಿಸಿ ಜಾಸ್ತೀಪೇಷ್‌ಕಷ ಠರಾವಾಗಿರುವದೂ, ಬ್ರಿಟಿಷ ಪ್ರಭುತ್ವಕ್ರಮವನ್ನುಲ್ಲಂಘಿಸದೇ ಆಡಳಿತವನ್ನು ನಡಿಸಬೇಕೆಂಬ ನಿಯಮವುಳಕವಾಗಿರುವದೂ, ಮತ್ತಿಷ್ಟುನಿರ್ಭಂದಕ್ಕೆ ಕಾರಣಗಳಾಗಿವೆ ಈ ಗಬ್ರಿಟಿಷ್ ಇಂಡ್ಯದೇಶದಲ್ಲಿ ಬಿರ್ರುಸಕಡಮೆಯಾಗಬೇಕಾದ ಆವಶ್ಯಕತೆ ವುಂಟಾಗಿರುವದರಿಂದ ಶಾರೆಸ್ಟುಇಲಾಖೆಯನ್ನು ಮೌಕೂಫಿಮಾಡಿ ರೆವಿನ್ಯೂ ಇಲಾಖೆಗೆ ಸೇರಿಸಬೇಕೆಂತಲೂ, ಮರಮ್ಮತಿಇಲಾಖೆಯಲ್ಲಿ ನೀಚಕಳಾ ಕಾಮಗಾರಿಗಳನ್ನು ಸಹ ಪ್ರೈವೇಟಕಾರನದಿಂದಲೂ ಗವರ್ನಮೆಂಟಿನವರು ಹುಕುಂಮಾಡಿರುವದಾಗಿ ತಿಳಿಯಬರುತಿದೆ ಇಂತಾ ಏರ್ಪಾಡುಗಳು ಬ್ರಿಟಿಷ ಗವರ್ನಮೆಂಟಿನವರಿಂದ ಮಾಡಲ್ಪಟ್ಟವಾದ್ದರಿಂದ ಜನಗಳು ಪ್ರಕಾಶಿಸುವದಕ್ಕೆ ಧೈರ್ಯವಿಲ್ಲದವರಾಗಿದ್ದಾರೆ. ಇವುಗಳೇ ಒಂದು ನೇಟಿವ್ ಸಂಸ್ಥಾನದಲ್ಲಿ ನಡಿಸಲ್ಪಟ್ಟಿದ್ದರೆ ಸಾಕ್ಷಾತ್ತಾಗಿ ಪ್ರಜೆಗಳೂ, ಪರಂಪರೆ ಯಾ ಬ್ರಿಟಿಷ್ ಗವರ್ನಮೆಂಟಿನವರೂ ಅಲ್ಲಿನ ಅರಸರು ಅನನುಭವಿಗಳೆಂಬದಾಗಿ ನಾನಾವಿಧವ ದೂಷಿಸ ಲಾರಂಭಿಸುವರು.

ಮಸಲಾ ಸ್ಟಾಂಪಾಕ್ಟು ರಿಜಿಷ್ಟ್ರೇಷನ್ ಆಕ್ಟು ಯಕ್ಸೈಜ್‌ಆಕ್ಟು ಇವುಗಳಿಂದಲೂ, ಕೋರ್ಟು ಸುಂಕ ಪಸೂರೀ ಮೂಲಕವಾಗಿಯೂ ಪ್ರಜೆಗಳಿಗೆ ಉಂಟಾಗತಕ್ಕ ನಷ್ಟವು ಅನಿರ್ವಚನೀಯವಾದವಾದ್ದರಿಂದ, ಅವುಗಳಿಗೆ ಪ್ರಜೆಗಳೂ ಅರಸರೂಸಹ ಬದ್ಧರಾಗಿರಬೇಕಾಗಿದೆ. ಫ್ರಾಂಟಿಯರ್‌ಯಾನೆ ಸರಹದ್ದು ಕಟ್ಟೇಸುಂಕವು ಪ್ರಜೆಗಳಿಗೆ ತೊಂದರೆಯಲ್ಲದೆ ಪಸೂಲಾಗತಕ್ಕದ್ದಾಗಿಯೂ ಅರಸರಿಗೆ ಲಾಭಕರವಾದ್ದಾಗಿಯೂ ಇದ್ದರೂ, ಬ್ರಿಟಿಷ್ ಇಂಡ್ಯದೇಶದಲ್ಲಿ ಅದು ಮೌಕೂಫಾಗಿರುವದ್ದರಿಂದ ನೇಟಿವ್ ಸಂಸ್ಥಾನಗಳಲ್ಲಿ ಅದರ ಹೆಸರನ್ನುಸಹ ಉಚ್ಚರಿಸಲಿಕ್ಕೆ ಅವಕಾಶವಿಲ್ಲದಿದೆ. ಇಂತಾ ನಿರ್ಬಂದಸ್ಥಿತಿಯಲ್ಲಿ ಯಾರುತಾನೇ ಏದ್ದು ಮಾಡತಕ್ಕದ್ದೇನು.

ಮುಖ್ಯವಾಗಿ ಇಲ್ಲಿನ ಆಡಳಿತ ವಿಷಯದೊಳು ದಿವಾನರನ್ನೇ ಉದ್ದೇಶಿಸಿ ಅನೇಕ ಪತ್ರಿಕೆಗಳು ಆಕ್ಷೇಪಿಸುತಿವೆ ಬ್ರಿಟಿಷ್ ರೆಸಿಡೆಂಟರವರ ಅಭಿಪ್ರಾಯಕ್ಕೂ ಮಹಾರಾಜರವರ ಅನುಮತಿಗೂ ಅನಾದಿಯಾದ ಆದೇಶವಪದ್ಧತಿಗೂ,ಕೌನ್ಸಲರ್‌ಗಳ ತಾತ್ಪರ್ಯಗಳಿಗೂ ಮೀರಿ ನಡೆಯುವದಕ್ಕೆ ಏಕಾಏಕಿ ಅವರಿಗೆ ಹ್ಯಾಗೆ ಸಾಧ್ಯವಾಗುವದು? ಆದದರಿಂದಲೇ ಈ ಸಂಸ್ಥಾನದಲ್ಲಿ ಒಂದು ಕೆಲಸವಾದರೂ ಪರಿಣಾಮವನ್ನು ಹೊಂದಲಿಲ್ಲವು ಪ್ರಜೆಗಳ ಯೋಗ್ಯತೆಯನ್ನು ನಿರ್ವಹಿಸಿ ತಿಳಿದುಕೊಳ್ಳದೆ ಅವರಿಗೆ ಪ್ರಜಾಪ್ರತಿನಿಧಿತ್ವವನ್ನು ಕಲ್ಪಿಸಿ ಅವರಿಗಾಗಿ ಏಂದು ಸಮಾಜವೇರ್ಪಡಿಸಲ್ಪಟ್ಟದೆ ಅವರ ಸಂಗತಿ ಯೆಂತಾದ್ದೆಂದರೆ— ರೈತರು, ತಮ್ಮ ಸ್ವಂತ ಕಂದಾಯವನ್ನು ಮಾಫ್ ಮಾಡಬೇಕೆಂತಲೂ, ವರ್ತಕರು, ತಮ್ಮ ಅಂಗಡಿ ಕಂದಾಯವನ್ನು ವಜಾಮಾಡಬೇಕೆಂತಲೂ, ಖುಷ್‌ಬಾಷ್‌ಜನಗಳು ತಮಗೆ ಜೀವನಾಧಾರವಾಗಿರುವಂತೆ ಹಿಂದಿನ ಪಂಚಾಯತೀ ಪದ್ಧತಿಯನ್ನು ನೆಲಗೊಳಿಸಬೇಕೆಂತಲೂ ಕೇಳತಕ್ಕವರಾಗಿದ್ದಾರೆ. ಇಂತಾ ಸಂಗತಿಗಳನ್ನು ಹ್ಯಾಗೆ ಅಂಗೀಕರಿಸಬಹುದು ಅದು ಉಪೇಕ್ಷಿಸಿದರೆ ತಮ್ಮನ್ನು ವ್ಯರ್ಥವಾಗಿ ಕರೆಯಿಸಿದರೆಂದು ಪ್ರಕಾಶಮಾಡುತ್ತಾರೆ. ಹೀಗೆಲ್ಲ ಇರುವದರಿಂದ ಮೈಸೂರುದೇಶದ ಪ್ರಕೃತಸ್ಥಿತಿಯು ತಪ್ಪು ಕ್ರಮವಡಬೇಕಾಗಿದ್ದರೆ ಮೇಲೆ ತಿಳಿಸಿದ ಕಾರಣಗಳೆಲ್ಲವೂ ಅತ್ಯಂತಿಕವಾಗಿ ನಿವಾರಣವಾಗಬೇಕು ಅದಕ್ಕೆ ಪ್ರಥಮತಃ ಇಂಡ್ಯ ಗವರ್ನಮೆಂಟಿನವರು ತಾವೇರ್ಪಡಿಸಿರುವ ಸನ್ನದಿ ಕರಾರನ್ನು ಮರಳಿ ಪರ್ಯಾಲೋಚಿಸಿ ತಕ್ಕರೀತಿಯಿಂದ ಏರ್ಪಾಡು ಮಾಡಿದರೆ ಆಗ ಒಂದುವೇಳೆ ಸ್ವಲ್ಪಮಟ್ಟಿಗೆ ಕ್ರಮಪಡಬಹುದು.

THE ARHAT SYSTEM—No —19

ಜೈನ್ಯ ಅಥವಾ ಅರ್ಹತದರ್ಶನವು.

ಗತವಾರದಲ್ಲಿ ತತ್ವೋಲಕ್ಷಣವನ್ನು ವಿವರವಾಗಿ ತಿಳಿಸಿದ್ದೆವಷ್ಟೆ. ಇನ್ನೂ ಯತಿಲಕ್ಷಣವನ್ನು ವಿವರಿಸುವೆವು.

ಶ್ಲೋ|| ಪ್ರಾಣಿಜಾತಮಹಿಂಸನ್ಮೋಮ
ನೋವಾಕ್ಕಾಯಕರ್ಮಭಿಃ|ದಿಗಂಬರಾಶ್ಚರಂ
ತ್ಯೇವಯೋಗಿನೋಬ್ರಹ್ಮಚಾರಿಣಃ|| ಮಯೂ
ರಪಿಂಛಹಸ್ತಾಸ್ತೈಕ್ರತವೀರಾಸನಾದಿಕಾಃ|
ಪಾಣಿಪಾತ್ರೇಣಭುಂಜಾನಾ ಲೂನಕೇಶಾ
ಶ್ಚಮೌನಿನಃ || ಸದಾಕ್ಷಪಣಕಾಚಾರ್ಯಕ್ತ
ಶಮನ್ಯ್ರಮುರಾಸದಾಃ || (ಗ್ರಂಥಾಂತರೇ)||
ಸರಜೋಹರಣಾಭೈಕ್ಷಭುಜೋಲುಂಚಿತಮೂ
ರ್ಧಜಾ | ಶ್ವೇತಾಂಬರಾಃಕ್ಷಮಾಶೀಲಾನಿ
ಸ್ಸಂಗಾಜ್ಜೈನಸಾಧವಃ || ಲುಂಛಿತಾಪಿಂಛಿ
ಕಾಹಸ್ತಾಃಪಾಣಿಪಾತ್ರಾದಿಗಂಬರಾಃ|ಊ
ರ್ಧ್ವಾಶಿನೋಗೃಹೆದಾತುರ್ದ್ವಿತೀಯಾಸ್ಯು
ಜಿನರ್ಷಯಃ||

ಜೈನ್ಯಸನ್ಯಾಸಿಯು, ಮನೋವಾಕ್ಕಾಯ ಕರ್ಮಗಳಿಂದ ಅಹಿಂಸೆಯನ್ನು ಮಾಡದವನಾಗಿಯೂ, ದಿಗಂಬರನಾಗಿಯೂ, ಜಿತೇಂದ್ರಿಯನಾಗಿಯೂ, ಮಯೂರ ಪಿಂಛವೃಸ್ತನನಾಗಿಯೂ, ವೀರಾಸನವೇಮೊದಲಾದ ಆಸನಸಿದ್ಧಿಯುಳ್ಳವನಾಗಿಯೂ, ಪಾಣಿಪಾತ್ರೆ ಅಂದರೆ ಹಸ್ತವೇಪಾತ್ರವಾಗಿ ಯುಳ್ಳವನಾಗಿಯೂ, ಊರ್ಧ್ವಾಶನವುಳ್ಳವನಾಗಿಯೂ, ನಿಸ್ಸಂಗಿಯಾಗಿಯೂ ಇರುವನು.

ತತ್ವಸ್ವರೂಪವೆಂತೆಂದರೆ—

ಚಿದಚಿದ್ದ್ವೇಪರೇತತ್ತ್ವೇ ವಿವೇಕಸ್ತದ್ವಿವೇಚನಮ್|ಉಪಾದೇಯಮುಪಾದೇಯಂಹೇಯಂಹೇ
ಯಂಚಕುರ್ವತಃ||

ಅವರ ಚಿದಚಿತ್‌ಗಳೆಂದು ತತ್ವಗಳೆರಡು ವಿಧಗಳಾಗಿರುತಿವೆ. ಬೋಧಾತ್ಮಕವಾದದ್ದು ಜೀವನೆಂತಲೂ ಅಬೋಧಾತ್ಮಕವಾದದ್ದು ನಿರ್ಜೀವವೆಂತಲೂ ತಿಳಿಯತಕ್ಕದ್ದು. ಚೈತನ್ಯವೆಂಬದು ಸಕಲಜೀವ ಸಾಧಾರಣವಾದ್ದಾಗಿರುತಿದೆ. ಕತಕರೇಣುವು ನೀರಿನ ಬುರುದೆಯನ್ನು ಆಕರ್ಷಿಸಿ ಹ್ಯಾಗೆ ತನ್ನ ರೂಪವನ್ನು ಹೊರಪಡಿಸದೆ ನಶಿಸಿಹೋಗುತಿದೆಯೋ ಅದರಂತೆ ಕರ್ಮವು ಆತ್ಮನನ್ನು ನಿರ್ಲಿಪ್ತನನ್ನಾಗಿಮಾಡಿ ತಾನೂ ಕ್ಷಯಿಸಿ ಹೋಗುತಿದೆ ಆತ್ಮಸ್ವರೂಪವೆಂತೆನೆ.

ಜ್ಞಾನಾದ್ಭಿನ್ನೋನಚಾಭಿನ್ನೋ ಭಿನ್ನಾಭಿ
ನ್ನಃಕಥಂಚನ | ಜ್ಞಾನಂಪೂರ್ವಾಪರೀ
ಭೂತಃಸೋಯಮಾತ್ಮೇತಿಕೀರ್ತಿತಃ||

ಜ್ಞಾನದಂತೆಯೂ, ಕಥಂಚಿತ್ ಅಲ್ಲದಂತೆಯೂ ಭಿನ್ನಾಭಿನ್ನರೂಪವಾಗಿಯೂ ಇರುವ ಪೂರ್ವಾಪರೀ ಭೂತವಾದ ಜ್ಞಾನವೇ ಆತ್ಮನೆನ್ನಿಸಿಕೊಳ್ಳುವದು. ಅಂತಾ ಆತ್ಮನು.

ಸಾಕಾರಂಚನಿರಾಕಾರಂ ಶುದ್ಧಸ್ಫಟಿಕಬಿಂ
ಬವತ್ ಸಿದ್ಧಮಷ್ಟಗುಣೋಪೇತಮಷ್ಟಕ
ರ್ಮಹರಂಭವೇತ್||

ಸಾಕಾರ ನಿರಾಕಾರಗಳಿಲ್ಲದೆ ಶುದ್ಧಸ್ಫಟಿಕಬಿಂಬದಂತೆ ಅಷ್ಟಕರ್ಮ ರಹಿತವಾದ್ದಾಗಿ ಇರುವದೆಂದು ಭಾವವು.

OUR WOMEN
(Communicated)

ಈ ಇಂಡ್ಯದೇಶದಲ್ಲಿ ಇಂಗ್ಲಿಷರವರ ಪ್ರಭುತ್ವದಿಂದ ಸಾಮಾನ್ಯವಾಗಿ ಸ್ತ್ರೀಪುರುಷರಿಗೆ ನಾಗರಿಕತೆ ಉಂಟಾಯಿತೆಂಬದನ್ನಿಲ್ಲ. ಅದಕ್ಕೇ ಇಂತಾದ್ದೇ ಸ್ತ್ರೀ ವಿದ್ಯಾಭ್ಯಾಸವು [illegible] ದಲ್ಲಿ ಪುರುಷ ಪಕ್ಷದವರು [illegible] ರನ್ನೇ ಹೇಳಬೇಕಾಗಿದೆ. ಪುರುಷರಿಗೆ ಸ್ತ್ರೀ [illegible] ಸ್ವತಂತ್ರ [illegible] ವಾಗಿ [illegible] ಅವರಿಗೆ ಉಂಟಾಗಿರುವ ವಿದ್ಯಾ [illegible] ಅನೇಕರು ಹಂಬಿರ್ತಾರೆ. ಪರಂತು ಅಂತಾ ವಿದ್ಯೆಯಿಂ [illegible] [illegible] ಕೆಲವು [illegible] ಲಕ್ಷಣಗಳನ್ನು [illegible] ಲೇಖನದ ಸಾಧನಗಳು [illegible] ಉತ್ತರ ಸ್ಥಿತಿಯಲ್ಲಿರುವ ಇಂಡ್ಯದೇಶದ [illegible] [illegible] [illegible] ಇದು [illegible] [illegible] ಅನೇಕ [illegible] [illegible] ಕೆಲವು [illegible] ಇವರುಗಳೆಲ್ಲ ಕೇವಲ ಬಾಧಕ ಸಾಮಗ್ರಿಗಳಾಗಿವೆ. ಇವನ್ನು ಸ್ಪಷ್ಟವಾಗಿ ತಿಳಿಸಬೇಕೆಂದರೆ,—ವಿದ್ಯಾಭ್ಯಾಸಕ್ಕೆ [illegible] [illegible] [illegible] [illegible] ಸ್ತ್ರೀಯರಿಗೆ [illegible] [illegible] [illegible] [illegible] [illegible] [illegible] ಪರರ [illegible] [illegible] [illegible] [illegible] ಸ್ತ್ರೀ [illegible] [illegible] [illegible] [illegible] [illegible] [illegible] [illegible] [illegible] ಸ್ತ್ರೀಯ [illegible] [illegible] [illegible] ಸ್ವತಃ [illegible] [illegible] [illegible] ಮಾಡುತಿದ್ದಾರೆ. ಇಲ್ಲಿನ [illegible] [illegible] [illegible] ಇಂಡ್ಯ [illegible] [illegible] [illegible] [illegible] ನೇಟಿವ್ [illegible] [illegible] [illegible] [illegible] [illegible] [illegible] [illegible] [illegible] ಒಂದು [illegible] [illegible] [illegible] [illegible] ೧೮೮೦ ರಿಂದ [illegible] [illegible] [illegible] [illegible] ದಕೆ ೧೮೮೦,೧೮೮೧ರಲ್ಲಿ [illegible]

[illegible] ಕೋಟೆವು ಪಡಿತು.

Occasional Notes
ನೈಮಿತ್ತಿಕ ವಿಷಯನ್ಯಾಸ.

Consent of the Ameer—ಅಫ್ಘಾನಿಸ್ತಾನ್ ರಾಜ್ಯದಮೂಲಗವಾಗಿ ಬ್ರಿಟಿಷ್‌ಸೈನ್ಯಗಳು ಹೋಗಿಬರುವದಕ್ಕೆ ಅಲ್ಲಿನ ಅಮೀರರವರು ಸಮ್ಮತಿಸಿದಂತೆ ಈಚೆಗೆ ಕಲ್ಕತ್ತೆಯಲ್ಲಿ ಒಂದು ಪ್ರವಾದವುಂಟಾಗಿರುವಂತೆ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

Governor of Madras—ಮದರಾಸ್ ಗವರ್ನರರಾದ ಗ್ರಾಂಟ್ ಡಫ್‌ರವರಿಗೆ ಸದ್ಯಃ ತಾವು ಕಲ್ಕತ್ತೆಗೆ ಹೋಗುವ ಆಲೋಚನೆ ಯಿಲ್ಲವೆಂತಲೂ, ಹಾಗೆ ಹೋಗುವಕಾಲದಲ್ಲಿ ಕೌಂಸಿಲಿನ ಸೀನಿಯರ್‌ಮೆಂಬರಾದ ಮಿಸ್ಟರ್‌ಕಾರ್ಮೈಕೇಲ್ ಯೆಂಬವರು ಹಂಗಾಮಿಯಾಗಿ ಗವರ್ನರ್‌ಕೆಲಸವನ್ನು ನಿರ್ವಹಿಸುತಿರುವರೆಂತಲೂ ತಿಳಿಯಬರುತಿದೆ.

Earthquake in Cashmere—ಕಾಶ್ಮೀರಸಂಸ್ಥಾನದಿಂದ ಈಚೆಗೆ ತಿಳಿಯಬರುವದರೊಳು, ಅಲ್ಲಿ ಭೂಕಂಪವಿನ್ನೂ ನಿಲ್ಲಲಿಲ್ಲವೆಂತಲೂ, ಸರ್ಕಾರೀಬಿಲ್ಡಿಂಗುಗಳಲ್ಲಿ ತಿಳಿಸಲ್ಪಟ್ಟದ್ದಕಿಂತಲೂ ಪ್ರಾಣಿಗಳ ಮತ್ತು ಪದಾರ್ಥಗಳನಷ್ಟವು ಅತ್ಯಧಿಕವೆಂತಲೂ, ಭೂಕಂಪದಿಂದ ಬರುಮಲ್ಲಾಯೆಂಬ ಪಟ್ಟಣ ಅನಾಮತ್ತು ನಾಶವಾದಂತೆಯೂ, ಸುಮಾರ್ ೩೦೦ ಮಂದಿಯತನಕ ಮೃತಪಟ್ಟಿರುವಂತೆಯೂ, ಅದಕ್ಕೆ ಎರಡರಷ್ಟುಮಂದಿಗೆ ಬಹುಂಗಳಾದಂತೆಯೂ ಕೇಳುತ್ತೇವೆ.

Despatch of guns—ಕಾಬೂಲ್‌ಅಮೀರರವರಿಗೆ ವೈಸರಾಯಿಯವರು ಕೊಟ್ಟ ಫಿರಂಗಿಗಳನ್ನು ಚಾಮನ್‌ಯೆಂಬ ಪ್ರದೇಶದಿಂದ ಹಿರಾತಿಗೆ ಸಾಗಿಸತಕ್ಕಬಗ್ಗೆ ಕಂದಹಾರ್‌ನಲ್ಲಿರುವ ಅಮೀರರವರ ಅಧಿಕಾರಿಗಳು ಗಾಡಿಗಳಂಕೊಟ್ಟು ಬರಿಸುವದಕ್ಕಾಗಿ ಸಕಲ ಪ್ರಯತ್ನಗಳನ್ನು ಮಾಡುತಲಿರುವಂತೆಯೂ, ಸದರೀ ಫಿರಂಗಿಗಳು ಬೋಲಾನ್ ಘಾಟೀ ಮಾರ್ಗವಾಗಿ ಕಳುಹಿಸಲ್ಪಡುವಂತೆಯೂ ತಿಳಿಯಬರುತಿದೆ.

Lord Randolph Churchill—ಲಂಡನಿನ ಟೈಮ್ಸ್‌ಯೆಂಬ ವರ್ತಮಾನಪತ್ರಿಕೆಗೆ ಬಂದ ತಂತಿವರ್ತಮಾನದಮೂಲಕ ತಿಳಿಯಬರುವದೇನೆಂದರೆ—ಲಾರ್ಡ್‌ರಂಡಾಲ್ಫ್ ಚರ್ಚಿಲ್‌ಯವರ ಮೊಕರರಾತಿಯು ಕೇವಲ ಪ್ರತಿಕೂಲವಾದ ವಿಚಾರಕ್ಕೆ ವಿಷಯವಾಗಿದೆಯಲ್ಲದೆ, ಮಂತ್ರಿಸಮಾಜ ನಿರ್ಮಾಣವಿಷಯದಲ್ಲಿ ಲಾರ್ಡ್ ಚರ್ಚಿಲ್‌ಯವರ ಸಲಹೆಯನ್ನು ಲಾರ್ಡ್ ಸಾಲಿಸ್‌ಬರಿಯವರು ಕೇಳಿದ್ದಕ್ಕಾಗಿ ವೃತ್ತಾಂತಪತ್ರಿಕೆಗಳು ಅವರನ್ನು ದೂಷಿಸುತಿವೆ. ಲಾರ್ಡ್‌ಚರ್ಚಿಲ್‌ಯವರ ಮೊಕರರಾತಿಯ ವಿಷಯದೊಳು ಇಂಡ್ಯ ದೇಶದಲ್ಲಿ ಅಭಿಪ್ರಾಯವು ಭಿನ್ನಿಸಿದಂತೆ ತೋರುತಿದೆ ಕೆಲವುನೇಟಿವ್‌ವೃತ್ತಾಂತಪತ್ರಿಕೆಗಳು ಇದಂಳುರಿತು ಆಕ್ಷೇಪಿಸುವದಿಲ್ಲವು.

Reorganisation—ಇಂಡ್ಯದೇಶದಮೂರು ಪ್ರೆಸಿಡೆನ್ಸಿಗಳ ಸಬಾರ್ಡಿನೇಟ್ ಮೆಡಿಕಲ್ ಇಲಾಖೆಯಲ್ಲಿರತಕ್ಕ ಆಸ್ಪಿಟಲ್ ಅಸಿಸ್ಟೆಂಟುಗಳ ತರಗತಿಯನ್ನು ಪುನರ್ವ್ಯವಸ್ಥೆ ಮಾಡತಕ್ಕಅಂಶ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ಲವರ ವಿಚಾರಕ್ಕೆ ವಿಷಯವಾಗುವದಾಗಿರುವಂತೆ ತಿಳಿಯಬರುತಿದೆ ವೈಸರಾಯಿಯವರು ಈ ವಿಷಯವನ್ನು ಪರ್ಯಾಲೋಚಿಸಿ ಮಂಜೂರ್ ಮಾಡುವರಾದರೆ ತನ್ಮೂಲಕ ತಲಬ್, ರುಸುಂ, ಫರ್ಲೋ ಮತ್ತು ರಜಾ ಇವುಗಳಮೂಲಕಆಸ್ಪಿಟಲ್‌ಅಸಿಸ್ಟೆಂಟುಗಳಸ್ಥಿತಿ ಅಭಿವೃದ್ಧಿಯನ್ನೈದಲಿಕ್ಕೆ ಸಾಧಕವಾಗುತಿದೆ

Suicide—ಕಲ್ಕತ್ತಾ ಡಿಸ್ಟ್ರಿಕ್ಟ್ ಚಾರಿಟೆಬಲ್ ಸೊಸೈಟಿಯೆಂಬ ಒಂದು ಸಂಘದಲ್ಲಿ ಖಜಾಂಚಿಯಾಗಿದ್ದ ತುಲಸಿದಾಸ್ ನುದೀ ಯೆಂಬಾತನು ನುಬಿಕೆ ದ್ರೋಹಮಾಡಿ ಸುಮಾರ್ ೩೯ ಸಾವಿರ ರೂಪಾಯಿಗಳತನಕ ಸ್ವಂತಕ್ಕೆ ಬಳಸಿಕೊಂಡ ತಕ್ಸೀರಿಗಾಗಿ ಅವನಿಗೆ ವಾರಂಟ್ ಕೊಡಲ್ಪಡಲು, ಅವನು ಅದನ್ನರಿತು ಕೂಡಲೇ ಪರಾರಿಯಾದನು ಇದುವರಿವಿಗೂ ಅವನ ಪತ್ತೇವಿಷಯದಲ್ಲಿ ತಲಾಷ್ ನಡಿಸಲ್ಪಡುತಲೇ ಇತ್ತು ಈಚೆಗೆ ತಿಳಿಯಬರುವದರಲ್ಲಿ ಅವನು ವಿಷತೆಗದುಕೊಂಡು ಪ್ರಾಣಬಿಟ್ಟಂತೆ ತಿಳಿಯಬರುತಿದೆ. ಹ್ಯಾಗುಂದರೆ, ಈಗ್ಯೆ ಕೆಲವು ದಿನಗಳಹಿಂದೆ ಅವನು ಮಧ್ಯ ಇಂಡ್ಯದೇಶದಲ್ಲಿರುವ ರೀವಾ ಸಂಸ್ಥಾನಕ್ಕೆ ಸಮೀಪದೊಳೊಂದು ಜಿಲ್ಲೆಯಲ್ಲಿ ಕೆಲವರು ಸಾಧುಗಳೊಡನೆ ಸೇರಿಕೊಂಡುಬೈರಾಗಿ ವೇಷವ ಧರಿಸಿಕ್ಕೊಂಡಿದಾನೆಂದು ಪ್ರೋಲೀಸಿನವರಿಗೆ ವೃತ್ತಾಂತಬರಲು ಇನ್ಸ್‌ಪೆಕ್ಟರ್‌ಫಡೆರಿಕೆಯೊಬ್ಬರೂ ಮತ್ತೊಬ್ಬ ನೇಟಿವ್ ಇನ್ಸ್‌ಪೆಕ್ಟರೂ ಅಷ್ಟರಲ್ಲಿ ತ್ವರಾಗಿ ಅಲ್ಲಿಗೆ ಹೋದರು ಪ್ರೋಲೀಸಿನವರು ಪತ್ತೆಗಿರೀಬಗ್ಯೆ ಬಂದಿರುವ ಅಂಶ ಹ್ಯಾಗೋ ಆತನಿಗೆತಿಳಿಯಬಂದು ಕೂಡಲೇ ವಿಷತೆಗೆದುಕ್ಕೊಂಡು ಪ್ರಾಣಬಿಟ್ಟನು. ಪ್ರೋಲೀಸಿನವರು ಅಲ್ಲಿಗೆಹೋಗಿ ಸೇರಿದ ನಾಲ್ಕುಘಂಟೆಗಳಮೇಲೆ ತಲಾಷ್‌ಮಾಡುವಾಗ್ಯೆ ಅವನ ಮುರ್ದೆಯು ಸಿಕ್ಕಲು ಅವನು ಅದನ್ನು ಮೆಡಿಕಲ್ ಪರೀಕ್ಷೆಗಾಗಿ ಕಳುಹಿಸಿದರು ತರುವಾಯಅಜಮಾಯಿಷಿಯಲ್ಲಿ ಅವನು ವಿಷತೆಗೆದುಕ್ಕೊಂಡು ಮೃತಪಟ್ಟಾತೆ ಏರ್ಪಟ್ಟಿತು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತೃವೃತ್ತಾಂತಗಳು.

The Chief Court—ಇಲ್ಲಿನ ಚೀಫ್‌ಕೋರ್ಟು ಗತವಾರವೆಲ್ಲಮುಚ್ಚಲ್ಪಟ್ಟಿದ್ದಂತೆಯೂ, ಅವರ ಎರಡುಮೂರನೇಜಡ್ಜಿಗಳೂ, ರಿಜಿಸ್ಟ್ರಾರವರೂ ದಿವಾನರುನೆಯಲ್ಲಿ ನಡೆದ ವಿವಾಹಾರ್ಥ ಮೈಸೂರಿಗೆ ಹೋಗಿದ್ದು ಮೊನ್ನೆಯದಿನ ವಾಪಸ್‌ಬಂದರೆಂತಲೂ ತಿಳಿಯಬರುತಿದೆ.

Marriage invitations—ಇಲ್ಲಿನ ಮ್ಯೂನಿಸಿಪಲ್ ವೈಸ್‌ಪ್ರೆಸಿಡೆಂಟರವರಿಗೂ ಬೋರ್ಡಿನ ಕಮ್ಮಿಷನರಗಳಿಗೂ, ಪ್ರಮುಖರಾದ ಇತರ ಕಟ್ಟಿವರ್ತಕರಿಗೂ, ಆಯಾ ಇಲಾಖೆಗಳ ಮುಖ್ಯಾಧಿಕಾರಿಗಳಿಗೂ ದಿವಾನರವರು ವಿವಾಹಕ್ಕೆ ಬರಬೇಕೆಂಬದಾಗಿ ಲಗ್ನಪತ್ರಿಕೆಗಳನ್ನು ಕಳುಹಿಸಿದ್ದರಮೇಲೆ ಅದಕ್ಕೆ ಬಹುಮಂದಿ ಇಲ್ಲಿಂದ ಹೋಗಿರುವಂತೆಯೂ ಅವರಲ್ಯೆಕ ಕೆಲವರು ವಾಪಸ್ ಬಂದಂತೆಯೂ ಮಿಕ್ಕವರೆಲ್ಲರೂ ಅದ್ಯಾಪಿ ಅಲ್ಲೇ ಯಿದ್ದಾರೆಂತಲೂ ತಿಳಿಯಬರುತಿದೆ.

Departure of Mr Krishnaiengar.—ಈ ಡಿಸ್ಟ್ರಿಕ್ಟ್ ಪ್ರೋಲೀಸ್ ಅಸಿಸ್ಟೆಂಟರಾಗಿದ್ದ ಮ॥ ಕೃಷ್ಣಯ್ಯಂಗಾರ್ರವರು ಕಡೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟರೆಂದು ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಸದರೀ ದೊಡ್ಡಮನುಷ್ಯರು ಗತ ಶುಕ್ರವಾರದದಿನ ಬೆಳಗ್ಯೆ ಯಿಲ್ಲಿಂದ ತಮ್ಮ ಸಂಸಾರದೊಡನೆ ತುಮಕೂರು ಮಾರ್ಗವಾಗಿ ಚಿಕ್ಕಮಗಳೂರಿಗೆ ಪ್ರಯಾಣವಾದರು. ಪ್ರಕೃತ ವರ್ಗದದೆಸೆಯಿಂದ ಅನೇಕವಿಧ ಅನಾನುಕೂಲಗಳಿಗೆ ಮ॥ ಕೃಷ್ಣಯ್ಯಂಗಾರ್ರು ಗುರಿಯಾಗಬೇಕಾಗಿಬಂತು.

Cholera—ಈ ಪ್ರಾಂತ್ಯದಲ್ಲಿ ಶಾಂತಿಭೇದಿರೋಗದ ಪ್ರಾಬಲ್ಯವು ಗತವಾರದೊಳದ್ದಂತೆಯೇಯಿದೆ ನಗರ್ತಪೇಟೆ, ಕಬ್ಬನ್‌ಪೇಟೆವಗೈರೆ ಸ್ಥಳಗಳಲ್ಲಿ ಪ್ರತಿದಿನವೂ ಇಬ್ಬರು ಮೂವರು ಸದರಿ ರೋಗದಿಂದ ಮೃತರಾಗುತಲಿರುವಂತೆ ತಿಳಿಯಬರುತಿದೆ. ಏತದರ್ಥವಾಗ್ಯೆ ದೇವತೆಗೆ ಬಲಿಮುಂತಾದ ಶಾಂತಿಗಳು ಬಹಳವಾಗಿ ನಡೆಯುತಲಿವೆ ಆದಾಗ್ಯೂ ಆದರ ವ್ಯಾಪಕತೆ ಕಡಮೆಯಾಗಲಿಲ್ಲವು. ಗವರ್ನಮೆಂಟಿನವರಾಗಲಿ, ಮ್ಯೂನಿಸಿಪಾಲಿಟಿಯವರಾಗಲಿ ಈವಿಷಯವೊ ಧ್ಯಾನವುಯತ್ನವನ್ನೂ ಮಾಡುವಂತೆ ಕಾಣಿಸಲಿಲ್ಲವು. ಸರ್ಕಾರು ಗವರ್ನಮೆಂಟಿನವರು, ಜನಗಳು ಬೆದರಿಗದಿರುವಂತೆ ಮೃತರಾದವರತಕ್ಕವರ ಸಂಖ್ಯೆಯನ್ನು ಸ್ವಲ್ಪವಾಗಿ ತಿಳಿಸುತಲೂ, ಮ್ಯೂನಿಸಿಪಾಲಿಟಿಯವರು,ಹಲಸಿನಹಣ್ಣು,ಮಾವಿನಹಣ್ಣು ಮುಂತಾದವನ್ನು ಮಾರಕೂಡದೆಂದು ನಿಬಂಧನೆಪಡಿಸುತಲೂಯಿದಾರೆ. ಇದಕ್ಕಿಂತಲೂ ಅವರುಮಾಡಬೇಕಾದ ಸಹಾಯ ಬೇರೇನಿದೆ?

CORRESPONDENTS

[illegible]

ಕನ್ನಡ ಕಾರ್ಯನಿರ್ವಾಹಕ ಸಂಪಾದಕರು [illegible]

TELEGRAPHIC SUMMARY.
ತಂತಿ ವೃತ್ತಾಂತವು.

ಲಂಡನ್, ೧೯ನೇ ಜೂನ್.—[illegible]

[illegible]

ಲಂಡನ್, ೨೦ನೇ ಜೂನ್.—[illegible]

[illegible]

ಲಂಡನ್, ೨೧ನೇ ಜೂನ್—[illegible]

BANGALORE—Printed and published for the Proprietor, at the KARNATAKA PRESS—1885

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ || ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಜಾಸುವರಿಪೋಷಿತಾದಿಶತಿಮಾನಸಂಮುದಂ ||

Vol. XII.] BANGALORE—MONDAY, JULY 6, 1885. [No. 27.

ಸಂಪುಟ ೧೨.] ಬೆಂಗಳೂರು:—ಸರ್ ೧೮೮೫ನೇ ಇಸವಿ ಜುಲೈ ೬ನೇ ತಾರೀಖ್ ಸೋಮವಾರ. [ಸಂಖ್ಯೆ ೨೭.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡಪತ್ರಿಕೆ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ...		೧೦—೦—೦
ಇಂಗ್ಲಿಷ್ ಪತ್ರಿಕೆ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ		೬—೦—೦
ಕನ್ನಡಪತ್ರಿಕೆ ತೆಗೆದುಕೊಳ್ಳತಕ್ಕವರಿಗೆ ಪೋಸ್ಟ್ ಹೊರತು ವರುಷಕ್ಕೆ.		೬—೦—೦
ತಿಂಗಳು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
ಹಿಂದಿನ ಸಂಚಿಕೆ	೧ಕ್ಕೆ	೦—೫—೦

ಷರಾ.—ಚಂದಾದಾರರು ಇಂಗ್ಲಿಷ್ ನೋಟುಗಳನ್ನಾಗಲಿ, ಸ್ಟಾಂಪುಗಳನ್ನಾಗಲಿ ಅಥವಾ, ಮನಿಆರ್ಡರುಗಳನ್ನಾಗಲಿ ಕಳುಹಿಸಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ.

ಮೊದಲನೇಸಾರಿ ಪಂಕ್ತಿ	೧ಕ್ಕೆ	೦—೨—೦
ಮರಳಿ ಹಾಕಿದರೆ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS.

ಇದರ ಕೆಳಗೆ ಬರೆದಿರುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯವಾಗಿ ಲಕ್ಷ್ಯ ಕೊಡಬೇಕೆಂದು ಕೋರುತ್ತೇವೆ ಏನೆಂದರೆ:—

೧. ಕರ್ನಾಟಕ ಪ್ರಕಾಶಿಕೆಯ ಚಂದಾದಾರರಾಗಲಿ ಅಥವ ಕೆಲಸದವರಾಗಲಿ ಹಣವನ್ನು ರವಾನಿಸತಕ್ಕವರು ಮನಿಆರ್ಡರ್ ಮೂಲಕ ಕಳುಹಿಸಿದಲ್ಲಿ ಆಯಾ ಮನಿಆರ್ಡರ್ ನಮೂನೆ ಫಾರಂನ ಕೂಪನ್ ಭಾಗದಲ್ಲಿ ಹಣವು ಯಾವ ಬಾಬತ್ತು ಎಂಬುದನ್ನು ತಪ್ಪದೆ ಬರೆದು ಕಳುಹಿಸತಕ್ಕದ್ದು. ಹಾಗೆ ಮಾಡದೆ ಹೋಗುವದರಿಂದ ಹೆಸರುಗಳ ಲೆಕ್ಕದಲ್ಲಿ ಮನಿಆರ್ಡರ್ ಆಫೀಸಿನವರಿಂದ ತೊಂದರೆಯುಂಟಾಗುತ್ತದೆ.

೨. ನೋಟುಗಳ ರವಾನಿಸತಕ್ಕವರು ಅರ್ಧನೋಟುಗಳನ್ನು ರವಾನಿಸಿದ್ದು ಉಳಿದ ಅರ್ಧನೋಟಿನ ವಿಷಯದಲ್ಲಿ ಮಾಹಿತಿಗಳು ಉದಾಸೀನರಾಗಿರುತ್ತಾರೆ. ಹಾಗೆ ಮಾಡದೆ ಮೊದಲು ಕಳುಹಿಸುವ ಅರ್ಧನೋಟು ಸೇರಿದುದಕ್ಕೆ ನಮ್ಮ ಕಾಗದವನ್ನು ನೋಡಿದ ಕೂಡಲೆ ಬಾಕೀ ಅರ್ಧನೋಟನ್ನು ರವಾನಿಸತಕ್ಕದ್ದು.

೩. ಬೇರಿಂಗ್ ಕಾಗದಗಳನ್ನು ಕಳುಹಿಸತಕ್ಕವರು, ರೂ|| ೧ಕ್ಕೆ ೧ ಆಣೆ ಮೇಲೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧ ಆಣೆ ಸ್ಟಾಂಪುಗಳನ್ನು ಬೇರಿಂಗ್ ಆಗಿ ಸ್ವೀಕರಿಸಲಾಗುವದಿಲ್ಲ.

೪. ಈ ಪತ್ರಿಕೆಯ ಸಾಲ್ ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಅಖೈರಿಗೆ ಪೂರೈಸಿ ಬರುವದರಿಂದ ಈ ಮಧ್ಯೆ ಯಾವ ತಿಂಗಳಲ್ಲಿ ಪತ್ರಿಕೆಗೆ ಚಂದಾದಾರರಾದಾಗ್ಯೂ ಅಂದಿನಿಂದ ಮೊದಲು ಡಿಸೆಂಬರ್ ಅಖೈರವರೆಗೆ ಆಗುವ ಕಾಲಕ್ಕೆ ತಿಂಗಳೊಂದಕ್ಕೆ ಯಾವತ್ತೂ ಚಂದಾ ಕಳುಹಿಸಿಕೊಡಬೇಕು, ಮುಂದಿನ ಚಂದಾಹಣ ಕಳುಹಿಸಲು ಅವಶ್ಯಕವಿಲ್ಲ.

ಪ್ರಕಟನೆ.

ಕರ್ನಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಬೇಕಾದ ತರಹ ಕೆಲಸಗಳು ಮುಳ್ಳಾಗಿ ಚೊಕ್ಕಟವಾಗಿಯೂ ಮಾಡಿಕೊಡಲ್ಪಡುತ್ತೆ. ಯಾವ ಕೆಲಸಗಳನ್ನು ಮಾಡಿಸುವ ಅಪೇಕ್ಷೆಯುಳ್ಳವರು ಪ್ರಕಾಶಿಕಾ ಆಫೀಸಿನ ಮ್ಯಾನೇಜರಿಗೆ ಬರೆಯತಕ್ಕದ್ದು ಅವರು ಅಲ್ಲಿಯಾಗಿ ಹಿಂದಿನ ಮಾರ್ಕೆಟ್ ಮಾದರಿಯ ಧರದಂತೆ ಒಪ್ಪಿಕೊಳ್ಳುತ್ತಾರೆ.

ನೋಟೀಸ್.

ಇದರ ಕೆಳಗೆ ಬರೆದಿರುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ. ...	೧—೪—೦
ಮುಹೂರ್ತದರ್ಪಣ. ...	೦—೧೨—೦
ಛಂದಸ್ಸು (ವೃತ್ತರತ್ನಾಕರ) ...	೦—೩—೦
ವಾಕ್ಯವೃತ್ತಿಯೊಂದಿಗೆ ಸುಬೋಧಿನಿ.	೦—೫—೦
ಬಾಲರಾಮಾಯಣ ...	೦—೪—೦
ತರ್ಕಸಂಗ್ರಹ	೦—೧೪—೦
ತತ್ವಸಂಗ್ರಹ. ...	೦—೭—೦
ಬಾಲಗ್ರಹ.	೦—೨—೦
ವೈದ್ಯಸಾರಸಂಗ್ರಹ ..	೫—೦—೦

ಕನ್ನಡಗ್ರಂಥಗಳು.

ಹರಿಹರವಿಲಾಸ. ...	೦—೭—೦
ಶಕುಂತಲಾನಾಟಕ. ...	೦—೪—೦
ಸುಭಾಷಿತರತ್ನ ...	೦—೩—೬
ಸುಧಾಮಚರಿತ್ರೆ.	೦—೨—೬
ಬಾಲಬೋಧಕನಕಥೆಗಳು. ...	೦—೪—೦
ಅಕ್ಷರಮಾಲಿಕ. ...	೦—೨—೦
ಯಕ್ಷಗಾನಚರಿತ್ರೆ ...	೦—೬—೬
ಶೀಲವತೀಚರಿತ್ರೆ. ...	೦—೨—೬
ಬಂಜಾರ ಬಾಲಕೀರ್ತನೆ. ...	೦—೭—೦
ಕಾಳೀದಾಸ ಚರಿತ್ರೆ. ...	೦—೩—೦
ರಾಮಾಯಣ.	೦—೨—೦
ಹರಿಕಥಾಸಾರ ...	೦—೦—೯
ಇಂಗ್ಲಿಷ್ ಕನ್ನಡ ಸೇರಿದ ವ್ಯಾಕರಣ	೧—೦—೦
ಜ್ಞಾನಸಿಂಧು, ...	೨—೦—೦
ಪ್ರಾಂತಿವಿಲಾಸ. ...	೦—೧೨—೦
ಭಗವದ್ಗೀತೆ ...	೩—೪—೬
ವೃಷಭೇಂದ್ರವಿಜಯ. ...	೩—೪—೬
ಅರೇಬಿಯನ್ ನೈಟ್ ಎಂಬುದರ	
೧ನೇ ಸಂಚಿಕೆ. ...	೦—೯—೦
೩ನೇ ಮತ್ತು ೪ನೇ ಸಂಚಿಕೆ.	೦—೯—೦
ಕುಮಾರರಾಮನ ಕಥಾವಿಲಾಸ. ...	೦—೯—೦

ಸಂಸ್ಕೃತ ಮೂಲಗ್ರಂಥಗಳು.

ಶಾಕುಂತಲ	೦—೩—೦
ವಿಷ್ಣುಸಹಸ್ರನಾಮ. ...	೦—೫—೦
ಸೂರ್ಯಸಹಸ್ರನಾಮ. ...	೦—೨—೬
ಕೃಷ್ಣಕರ್ಣಾಮೃತ. ...	೦—೨—೬
ಬಾಲರಾಮಾಯಣ ...	೦—೦—೬
ಶ್ರೀರಾಮಾಷ್ಟಕ. ...	೦—೩—೬
೧ ಕಾಂಡ ಅಮರ. ...	೦—೧—೦

ಮೇಲೆ ಬರೆದಿರುವ ಕ್ರಯದಲ್ಲಿ ಅಂಚೆ ಹಾಸಲ್ ಸೇರಿರುವದಿಲ್ಲ. ೫ ರೂ—ಮೇಲ್ಪಟ್ಟ ಕ್ರಯದ ಪುಸ್ತಕಗಳನ್ನು ತೆಗೆದುಕೊಳ್ಳುವವರು ಕ್ರಯದ ಹಣವನ್ನು ಮೊದಲು ಕಳುಹಿಸತಕ್ಕದ್ದು. ಇಲ್ಲವಾದರೆ ಹಾಸಲು ಸಹ ಸೇರಿಸಿ ಕಳುಹಿಸಬೇಕು. ಇಲ್ಲವಾದರೆ ವ್ಯಾಲ್ಯೂಪೇಯಬಲ್ ಹಾಸಲ್ ಬಟ್ಟಿಗೆ ಹಾಕಿ ಕಳುಹಿಸಿಕೊಡಲಾಗುವದು.

NOTICE.

VAIDYASARASANGRAHA

Price including Postage, Rs. 5–6–0

ಈ ಗ್ರಂಥಕ್ಕೆ ಮೊದಲು ಹಣವನ್ನು ಕೊಡತಕ್ಕ ಚಂದಾದಾರರಿಗೆ ಹೆಸರಿಗೆ ಬರೆದು ಕೊಟ್ಟರೆ ಪುಸ್ತಕ ಕೂಡಲೇ ಕಳುಹಿಸಲ್ಪಡುತ್ತದೆ. ಮೊಬಲಗುಇಲ್ಲದ ಬರೆವಣಿಗೆಗಳಿಗೆ ಉತ್ತರ ಕೊಡಲಾಗುವದಿಲ್ಲ.

ಗ್ರಂಥ ಕೊಂಡುಕೊಳ್ಳುವವರು ಕ್ರಯವನ್ನು ಈ ಕೆಳಗೆ ಕಳುಹಿಸಬೇಕು,

ಇದರ ಕ್ರಯ	ರೂ|| ೫—೦—೦
ಪಾಕಿಂಗ್ ಮತ್ತು ಅಂಚೆಹಾಸಲ್	೦—೬—೦

ಬಿ. ವೆಂಕಟಾಚಾರ್, ಅಸಿಸ್ಟೆಂಟ್ ಸರ್ಜನ್, ಬೆಂಗಳೂರು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.

ಜನರಲ್ ಕಮ್ಮಿಷನ್ ಮರ್ಚೆಂಟರು.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತರವಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಗನುಸಾರವಾಗಿ ರಚಿಸಲ್ಪಟ್ಟದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಬೋಧ್ಯವಾದದ್ದಾಗಿಯೂ ನವರಸ ಪರಿಪೂರ್ಣ ಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧—೮—೦ ರೂ||, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೊ|| ತಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸೀಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

DIVYASURICHARITAM.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ತನ್ಮತಾಭಿಮಾನಪೂರ್ಣರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಸುಸ್ಕೃತ ಮಹಾ ಕಾವ್ಯರತ್ನವು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟು ವಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಕುಣಿಗಲ್ ಅಸಿಸ್ಟೆಂಟ್ ಇಂಜನಿಯರ್ ಮೊ|| ಗೋವಿಂದಾಚಾರ್ಯರವರಿಗೆ ಮೊಬಲಗು ಸಹಿತ ಬರೆದುಕೊಂಡರೆ ಪುಸ್ತಕಗಳು ಕಳುಹಿಸಲ್ಪಡುವದು.

ಅಪ್ಪಶಿತರಹಾ ಪುಸ್ತಕ		೦—೧೪—೦
ದುಯ್ಯಂತೆರಹಾ	„	೦—೧೨—೦
ಅಂಚೇಹಾಸಲ್	„	೦—೨—೦

ಬೆಂಗಳೂರ್ ತಾ|| ೭ನೇ ಜೂನ್ ೧೮೮೫.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 6, 1865.

೧೮೮೫ನೇ ಜುಲೈ ೬ನೇ ತಾ|| ಸೋಮವಾರ.

A NOBLE PRECEPT.

ಕಳೆದ ತಿಂಗಳ ೩೦ನೇ ತಾರೀಖಿನ ಒಂದು ದೇಶದ ಸ್ಪೆಕ್ಟೇಟರ್ ಪತ್ರಿಕೆಯು ಸಾಮಾನ್ಯವಾಗಿ ಇಲ್ಲಿನ ಸರ್ಕಾರ್ ನೌಕರರೆಲ್ಲ ಒಂದು ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದೇನಂದರೆ—"ಮೈಸೂರು ಸಂಸ್ಥಾನದ ದಿವಾನರಾದ ಮೊ|| ರಂಗಾಚಾರ್ಯರವರು ಪ್ರತಿಗೆ ಅನುಸರಿಸಿದ ಶ್ರೇಷ್ಠವಾದ ಒಂದು ಉದಾಹರಣೆಯಾಗಿರುವದರಿಂದ ಅದನ್ನು ಅಧಿಕಾರಿಗಳೆಲ್ಲರೂ ಅನುಸರಿಸಬೇಕೆಂದು ಹಾರೈಸುತ್ತೇವೆ. ದಿವಾನರವರ ಸ್ವಂತದಲ್ಲಿ ಅವರ ಮಕ್ಕಳಿಗೆ ಪರೀಕ್ಷೆಗಳಲ್ಲಿ ಜಯಶೀಲರಾಗಿ ಪದವಿಗಳಿಂದ ಬೇರೆ ಸಂಬಂಧಿಗಳು ಕೂಡ ಹಕ್ಕುದಾರರಾಗಿರುವುದಿಲ್ಲ. ಈ ಸಂದರ್ಭ ಉದ್ಯೋಗಸ್ಥರೆಲ್ಲರೂ ಪೂರ್ವದ ಸಂಪ್ರದಾಯವನ್ನನುಸರಿಸಿ ಸರ್ಕಾರದ ಅಧಿಕಾರಿಗಳ ಅನುಮಾನಗಳನ್ನು ಮಾಡಬೇಕಾದ ಸನ್ನಿವೇಶ. ಇವರ ಸ್ಥಾನದಲ್ಲಿ ಅಧಿಕಾರಿಗಳು ಅನೇಕರು. ಪರಂತು ಮೊ|| ರಂಗಾಚಾರ್ಯರವರು, ಪರೀಕ್ಷೆಗಳ ಶಿಕ್ಷಣಾಧಿಕಾರದಿಂದ ಹೊರಟ್ಟು ಅನುಮಾನ ಶ್ರೇಣಿಯನ್ನು ಅವರು ಮುಂದೆ ಎಲ್ಲ ಪ್ರಕಟಿಸಿಬಿಟ್ಟರು. ಅವರನ್ನು ಅವರು ಅರ್ಜಿ ಮಾಡಿದರೂ ಇಂದರೆ ಅವರ ಅನುಭವಕ್ಕೆ ಬಂತು. ಸರ್ಕಾರೀ ಉದ್ಯೋಗ ದೇಶದ ಸ್ವದೇಶೀಯರ ಅಭಿವೃದ್ಧಿಯಲ್ಲಿ ಪ್ರಶಸ್ತವಾದ ಮೊ|| ರಂಗಾಚಾರ್ಯರು ಅನ್ಯಾಯದ ಪರಿಣಾಮದ ಮೂಲಕ ಅನುಸರಿಸಲ್ಪಡಬೇಕೆಂದು ನಂಬುತ್ತೇವೆ" ಎಂದಿದೆ.

ಸ್ಪೆಕ್ಟೇಟರ್ ಪತ್ರಿಕೆ ಹೇಳಿದ ಬುದ್ಧಿವಾದಕ್ಕೆ, ದಿವಾನರವರು ನಮ್ಮ ದೇಶದ ಆಡಳಿತದಲ್ಲಿ ಉತ್ತಮವಾದ ಒಂದು ನಿದರ್ಶನವಾಗಿ ಪ್ರಕಟಿಸಿ ಸರ್ಕಾರದ ನೌಕರರೆಲ್ಲರೂ ಅದನ್ನು ಪ್ರಶ್ನೆ ಮಾಡದೇ ಅನುಸರಿಸಬೇಕು. ಆದರೆ ಸ್ಪೆಕ್ಟೇಟರ್ ಪತ್ರಿಕೆಯು ಹೇಳಿದ ಹಾಗೆ ಸಂಸ್ಥಾನದ ವಿಷಯದಲ್ಲಿ ಪರೀಕ್ಷೆಗಳಲ್ಲಿ ದಿವಾನರವರ ನೆಂಟರು ಯಾರೂ ತೇರ್ಗಡೆಯಾಗಿ ಪದವಿಗಳನ್ನು ಪಡೆಯಲಿಲ್ಲ ಎಂದು ಹೇಳಲಾಗದು. ವಿಶೇಷ ಕಾಲದಲ್ಲಿ ಅಧಿಕಾರಿಗಳು ಮಾಡತಕ್ಕ ಕರ್ತವ್ಯವು. ಕೆಲವರ ಮನಸ್ಸು ಯಾರ ಮೇಲಾಗಲಿ ಹೋಗುವ ಪ್ರಸಂಗದಲ್ಲಿ ಮಾಡತಕ್ಕ ನ್ಯಾಯಗಳನ್ನು ತಿಳಿಸಿದೆ. ಅದು ಹ್ಯಾಗಂದರೆ,—ಅಧಿಕಾರಿಗಳು ತಮ್ಮ ಕಾಲದಲ್ಲಿ ಪಕ್ಷಪಾತವಿಲ್ಲದೆ, ಯಾರಿಗೂ ಅನ್ಯಾಯವಾಗದಂತೆ, ಸರ್ಕಾರದ ಅಧಿಕಾರಿಗಳ ಪ್ರಮಾಣದ ನಿಯಮದಲ್ಲಿ ಪ್ರಜೆಗಳಿಗೆ ಸಮರ್ಪಕವಾದ ನ್ಯಾಯವನ್ನು ಒದಗಿಸಿ ಫಲವನ್ನು ಹೊಂದುತ್ತಾರೆ.

ಆದಾಬಿತ್ ವಧೂವರರಿಗಿಂತಲೂ, ವಯೋವೃದ್ಧರಾಗಿಯೂ ಸಜಾತೀಯರಾಗಿಯೂ ಇದ್ದರೆ ಅವರುಗಳಿಗೆ ಸಕಲ ಮಂಗಳವೂ ಉಂಟಾಗಲೆಂಬ ಆಶೀರ್ವಚನಪೂರ್ವಕ ಮಾಡುವ ಸನ್ಮಾನ ಫಲಾನೇ ಎಂದು ಹೇಳಿಕೊಳ್ಳುತ್ತಾರೆ. ಯದ್ಯಪಿ ಯಾರೇನು ಕೊಟ್ಟಾಗ್ಯೂ ವಧೂವರರ ಶ್ರೇಯಃಪ್ರಾರ್ಥನಾರೂಪವಾದ್ದಾಗಿರುವದೇ ಹೊರ್ತು ಪ್ರತಿಕೃತಿಯಾದ ಪಣಪದಾರ್ಥವಾಗುವದಿಲ್ಲವು. ಕೊಡತಕ್ಕವರಿಗಾಗಲಿ, ತೆಗೆದುಕೊಳ್ಳತಕ್ಕವರಿಗಾಗಲಿ, ಹೀಗೆ ಅಂದುಕೊಂಡಲ್ಲದೆ ಬೇರೆ ವಿಧವಾದ ಉದ್ದೇಶವಿರಲಾರದು. ಇದಲ್ಲದೆ ನಮ್ಮಲ್ಲಿ ಪೂರ್ವದಿಂದಲೂ ಶಾಸ್ತ್ರಸಮ್ಮತವಾದ ಒಂದು ಶಿಷ್ಟಾಚಾರ ನೆಲೆಗೊಂಡು ಅದು ಅದ್ಯಾಪಿ ಅನುಸರಿಸಲ್ಪಡುತ್ತಿದೆ ಏನಂದರೆ, ಪ್ರತಿದಿನ ರಾಜದರ್ಶನಕ್ಕಾಗಲಿ, ಗೌರವ್ಯರಾದ ದೊಡ್ಡಮನುಷ್ಯರ ಭೇಟಿಗಾಗಲಿ, ಗುರುಸನ್ನಿಧಿಗಾಗಲಿ, ದೇವಾಲಯಕ್ಕಾಗಲಿ ವಿವಾಹ ಮಂಟಪಕ್ಕಾಗಲಿ ಹೋಗುವಲ್ಲಿ ತಮಗೆ ಲಭ್ಯವಾದ ಪದಾರ್ಥವನ್ನು ತೆಗೆದುಕೊಂಡುಹೋಗಿ ಅರ್ಪಿಸುವದೂ, ಹೀಗೆಯೇ ರಾಜಸಭೆಗಳಲ್ಲಿಯೂ, ಬ್ರಾಹ್ಮಣ ಸಭೆಗಳಲ್ಲಿಯೂ, ದರ್ಬಾರು ಮುಂತಾದ ಸಮಾಜಗಳಲ್ಲಿಯೂ, ವಿವಾಹಾದಿ ವಿಶೇಷ ಸಮಯಗಳಲ್ಲಿಯೂ ಸಭಿಕರಿಗೆ ಗೌರವಾರ್ಥ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಗೌರವಿಸುವದೂ, ಕಡೆಗೆ ಸಾಮಾನ್ಯವಾಗಿ ದೊಡ್ಡಮನುಷ್ಯರು ಚಿಕ್ಕವರನ್ನು ನೋಡುವದಕ್ಕೆ ಬಂದಾಗ ತಾಂಬೂಲಾದಿಗಳಿಂದ ಸನ್ಮಾನಿಸುವದೂ ನಮ್ಮ ದೇಶಗಳಲ್ಲಿ ಅನಾದಿಸಿದ್ಧಗಳಾದ ಸಂಪ್ರದಾಯಗಳಾಗಿವೆ. ಇವುಗಳ ವಿಷಯದಲ್ಲಿ ಆದಾಬಿತ್ ಸಂಭವಿಸುವ ನ್ಯೂನತೆಯು ಜನಗಳಿಗೆ ಪರಸ್ಪರ ವಿಶೇಷ ಮನಸ್ತಾಪವುಂಟಾಗುವದಕ್ಕೂ ಪಕ್ಷದ್ವೇಷ ಕಾರ್ಯಹಾನಿಯುಂಟಾಗಲಿಕ್ಕೂ ಕಾರಣವಾಗುತ್ತಿದೆ. ಇವುಗಳು ಸರ್ವೋಪಯೋಗಗಳಿಗೂ ಪ್ರಮಾಣಗಳಿರುವಂತೆ ಮೇಲ್ಕಂಡ ಮರ್ಯಾದೆಗಳಿಗೂ ಅನೇಕ ಪ್ರಮಾಣಗಳಿರುತ್ತವೆ. ಅವುಗಳಲ್ಲಿ,

ಶ್ಲೋ॥ ರಿಕ್ತಹಸ್ತೇನ ನೋಪೇಯಾದ್ರಾಜಾನಂ ದೈವತಂ ಗುರುಂ । ಅಗ್ನಿಹೋತ್ರಂ ದರಿದ್ರಂ ಚ ಗರ್ಭಸ್ಥಭಾರ್ಯಾಂ ಬಾಲಕಮೇವ ಚ॥

ಎಂಬದಾಗಿ ಒಂದು ಪುರಾಣವಾಕ್ಯವು ಸರ್ವರಿಂದಲೂ ಅಂಗೀಕರಿಸಲ್ಪಟ್ಟಿರುತ್ತದೆ, ಇದರ ತಾತ್ಪರ್ಯವೇನಂದರೆ—ಅರಸರನ್ನೂ, ದೇವರನ್ನೂ, ಗುರುಗಳನ್ನೂ, ಅಗ್ನಿಹೋತ್ರವನ್ನೂ, ಬಡವರನ್ನೂ, ಭಾರ್ಯೆಯನ್ನೂ, ಮಕ್ಕಳನ್ನೂ ನೋಡುವದಕ್ಕೆ ಹೋಗುವಲ್ಲಿ ಬರೀಕೈಯಿಂದ ಹೋಗಿ ನೋಡಕೂಡದು, ಅಂದರೆ ತಮ್ಮ ಯೋಗ್ಯತೆಗೆ ತಕ್ಕದ್ದಾಗಿಯೂ, ಗೌರವಾನುಗುಣವಾದದ್ದಾಗಿಯೂ ಇರುವ ಪದಾರ್ಥಗಳನ್ನು ತೆಗೆದುಕೊಂಡುಹೋಗಬೇಕೆಂದು ತಿಳಿಸಲ್ಪಟ್ಟಿರುವದರಿಂದ ಇದನ್ನು ಅನುಸರಿಸಿ ಹಿಂದೂಗಳು ರತ್ನಕನಕರಜತಾಭರಣ ವಾಹನ ವಸ್ತ್ರ ಫಲ ಪುಷ್ಪ ತಾಂಬೂಲಾದಿ ಪದಾರ್ಥಗಳ ಉಪಚಾರದೊಡನೆ ಅರಸರನ್ನು ಕಾಣುವ ಸಂಪ್ರದಾಯವು ಬಹುಕಾಲದಿಂದ ನಡೆಯುತ್ತಿದೆ. ಅದ್ಯಾಪಿ ನಮ್ಮ ದೇಶದ ಠಾಕುರರೂ ಜಮೀನ್ದಾರರೂ ಇತರರು ಸಹ ಅರಸರ ಪ್ರಥಮದರ್ಶನದಲ್ಲಿ ಅಂತಾ ಭಾರೀ ಬೆಲೆಯುಳ್ಳ ಪದಾರ್ಥಗಳನ್ನು ನಜರೊಪ್ಪಿಸುತ್ತಾರೆ. ಇದಕ್ಕೆ ಉಂಟಾದ ನ್ಯಾಯವನ್ನೂ ಕಾರಣವನ್ನೂ ವಿಚಾರಿಸಿದರೆ ತಿಳಿಯಬರುವದೇನಂದರೆ—ಅರಸರೆಂಬವರ ಐಶ್ವರ್ಯ ಪ್ರಾಭವ ವೈಭವ ಸಂತೋಷ ಸಂತೃಪ್ತಿ ಯೆಂಬವು ಪ್ರಜೆಗಳಿಂದಲೇ ಲಭಿಸತಕ್ಕವುಗಳಾಗಿರುವದರಿಂದ ಅವರನ್ನು ಪೂಜಿಸತಕ್ಕವರೂ ಪ್ರಜೆಗಳಾಗಿಯೇ ಇರುತ್ತಾರೆ. ಮತ್ತು ಅರಸರು ಪ್ರಜೆಗಳ ಕೈಯಿಂದ ಇಂತಾ ಬೆಲೆಯ ಪದಾರ್ಥಗಳನ್ನು ಅಪೇಕ್ಷಿಸುವ ಸ್ಥಿತಿಯೊಳಿಲ್ಲದವರಾದಾಗ್ಯೂ ಮನುಷ್ಯರ ಪ್ರವೃತ್ತಿ ಪ್ರಾಯಶಃ ಪ್ರಯೋಜನಾಪೇಕ್ಷಿತವಾದದ್ದಾಗಿ ಇರುತ್ತದೆಯೇ ಹೊರ್ತು ಅನ್ಯಥಾ ಇರುವದು ದುರ್ಲಭವಾದದರಿಂದ ಅರಸುಗಳು ತಮ್ಮ ದರ್ಶನಕ್ಕಾಗಿ ಬರುವ ಪ್ರಜೆಗಳಿಂದ ಯಾವ ವಸ್ತುವನ್ನಾಗಲಿ ಏನುಗುಣ ನೋಡುವದು ಅವರಿಗೆ ಸಹಜವಾಗಿಯೂ, ಪಾಲ್ಯರಾದವರು ಪಾಲಕರಾದವರಿಗೆ ತಮ್ಮಲ್ಲಿರುವ ವಸ್ತುವನ್ನು ಸಮರ್ಪಿಸುವದು ಅವರಿಗೆ ಯೋಗ್ಯವಾಗಿಯೂ ಇರುತ್ತದೆ. ಈ ನಿಮಿತ್ತಗಳಿಂದಲೇ ಈ ಸಂಪ್ರದಾಯವು ಸರ್ವದೇಶಗಳಲ್ಲಿಯೂ ಒಂದೇ ಬಗೆಯಾಗಿ ಚಿರನಿರೂಢವಾಗಿದೆ. ಹೀಗೆಯೇ ದೇವತೆಗಳ ಯೋಗಕ್ಷೇಮಗಳು ಮನುಷ್ಯರನ್ನೂ, ಗುರುಜನರು, ಆಪ್ತರು, ಬಡವರು ಭಾರ್ಯೆಯರು, ಮಕ್ಕಳು ಇವರ ಯೋಗಕ್ಷೇಮಗಳು ಕ್ರಮವಾಗಿ ಶಿಷ್ಯರು, ಮಿತ್ರರು, ಧನಿಕರು, ಪತಿಗಳು, ತಾಯಿತಂದೆಗಳು ಮುಂತಾದಬಾಂಧವರು, ಇವರುಗಳನ್ನು ಹೊಂದಿರುತ್ತವೆಯಾಗಿ ಇವುಗಳಿಗೆ ಉಪಚಾರ ಪಾರಿತೋಷಿಕ ಜೇಸಗು ಯುಕ್ತಗಳಾಗಿಯೇ ಇರುತ್ತವೆ. ಈಗಿನ ಕಾಲಕ್ಕೆ ಇವುಗಳೆಲ್ಲಾ ವ್ಯಾಕೃತಿ ಬಿಟ್ಟು ಪಕ್ ರೂಪವಾಗಿಯೂ ಅಗೌರವರೂಪವಾಗಿಯೂ ಭಾವಿಸಲ್ಪಟ್ಟಾಗ್ಯೂ ಪೂರ್ವಪದ್ಧತಿಯ ವಾಸನೆಯುಳ್ಳ ಜನಗಳಲ್ಲಿ ಸಾತ್ರಿ ಪ್ರಭುಸ್ಥಾನಕ್ಕೆ ಫಲಪುಷ್ಪಗಳ, ದೇವತಾ ಗುರುಸ್ಥಾನಗಳಿಗೆ ತೆಂಗಿನಕಾಯಿ, ಅಗ್ನಿಹೋತ್ರಿಸ್ಥಾನಕ್ಕೆ ಸಮಿತ್ತು, ಮುತ್ತೈದೆಯರಿಗೆ ಅರಿಶಿನ ಕುಂಕುಮ, ಬಾಲಕರಿಗೆ ತಿನ್ನುವವಸ್ತುಗಳು, ಇವುಗಳಂ ಕೊಡತಕ್ಕ ವಾಡಿಕೆ ಅದ್ಯಾಪಿ ಅನುಸರಿಸಲ್ಪಡುತ್ತಿದೆ. ಇಲ್ಲದೆ ಸನ್ಮಾನವೆಂಬದು ಗಂಧ ಪುಷ್ಪ ತಾಂಬೂಲ ಫಲ ಮುಂತಾದವುಗಳ ರೂಪವಾಗಿಯೂ, ವಸ್ತ್ರರೂಪವಾಗಿಯೂ ದಕ್ಷಿಣಾರೂಪವಾಗಿಯೂ ಪಾತ್ರಪ್ರತಿಗ್ರಹೀತೃಗಳ ಯೋಗ್ಯತಾನುಗುಣವಾಗಿಯೂ ವರ್ತಿಸುತ್ತಿದೆ. ಇವುಗಳನ್ನೊಪ್ಪಿಸುವವರ ಇಷ್ಟಾನುಸಾರ ನಡೆಯಬೇಕಾದದ್ದೇ ಹೊರ್ತು ತೆಗೆದುಕೊಳ್ಳುವವರ ಪ್ರಾಭವ ವೈಭವಗಳಾಗಲಿ, ಉಪಪತ್ತ್ಯನುಪಪತ್ತಿಗಳಾಗಲಿ ಪರಿಗಣನೀಯವಲ್ಲವು. ಇಂತಾ ವಾಡಿಕೆಯು ತುರ್ಕಿಸ್ತಾನ ಪರ್ಷಿಯಾ ಮುಂತಾದ ಮಹಮ್ಮದೀಯರ ದೇಶಗಳಲ್ಲಿಯೂ ನೆಲಗೊಂಡಿರುತ್ತದೆ. ಇಂಗ್ಲಿಷರವರಲ್ಲಿ ಇಂತಾ ರೀತಿಗಳಿರುವಂತೆ ತೋರಲಿಲ್ಲವು. ಆದದರಿಂದಲೇ ಇಂಗ್ಲಿಷ್ ನಾಗರಿಕತೆಯ ಪ್ರಾಬಲ್ಯವುಳ್ಳ ಈಗಿನ ಕಾಲದಲ್ಲಿವುಗಳೆಲ್ಲ ಅಗೌರವಸ್ವರೂಪ ತೋರಬರುತ್ತಿದೆ. ತನ್ನ ದಾರಿದ್ರ್ಯ ಲೋಕ ದಾರಿದ್ರ್ಯವೆಂಬಂತೆ ತಮ್ಮಲ್ಲಿ ಇಲ್ಲದ ಪದ್ಧತಿ ಉಪೇಕ್ಷಿಸಲ್ಪಟ್ಟದಕ್ಕಾಗಿ ಸ್ಪೆಕ್ಟೇಟರ್ ಪತ್ರಿಕೆಯು ದಿವಾನರನ್ನು ಪ್ರಶಂಸಿಸಲಾರಂಭಿಸಿದಂತೆ ತೋರುತ್ತದೆ. ಆದಾಬಿತ್ ಸನ್ಮಾನವೇ ಅನರ್ಥವಾದ್ದೆಂದು ಹೇಳುವದಕ್ಕೆ ಕೊಡತಕ್ಕ ಪದಾರ್ಥದ ಮೌಲ್ಯಸಂಖ್ಯೆಯಿನಾ ಮೀರಕೂಡದೆಂಬಲ್ಲಾ ಸನ್ಮಾನ ಯಾವದಾಗಿಯೇ ಇರುತ್ತದೆ. ವ್ಯಕ್ತಿಭೇದದಿಂದ ಮಾಡಲ್ಪಡತಕ್ಕ ಸನ್ಮಾನಗಳಿಗೆ ಬೇರೆಬೇರೆ ಪರಿಮಿತಿಯುಂಟಾಗಲಾರದು. ಆದಪ್ರ ಒಂದು ರೂಪಾಯಿಯಾದರೂ ಒಂದು ಸಾವಿರರೂಪಾಯಿಗಳಾದರೂ ಸನ್ಮಾನವೆನ್ನಿಸಿಕೊಳ್ಳದೆ ಹೋಗಲಾರದು. ಮುಖ್ಯವಾಗಿ ನಮ್ಮ ತಾತ್ಪರ್ಯವೇನಂದರೆ, ದಿವಾಣಕ್ಕೆ ಹೋಗಿದ್ದವರು ತಮ್ಮ ಗೌರವಕ್ಕಾಗಿಯೂ, ದಿವಾನರವರ ಶ್ರೇಯಃಪ್ರಾರ್ಥನಾರೂಪವಾಗಿಯೂ ಸಭಾಮುಖದಲ್ಲಿ ಅವರಿಗೆ ತಮ್ಮ ಯೋಗ್ಯತಾನುಸಾರ ಸನ್ಮಾನ ಮಾಡಬೇಕೆಂದು ಉಂಟಾಗಿದ್ದ ಕೋರಿಕೆಯನ್ನೂ ಪ್ರಯತ್ನವನ್ನೂ ವಿಫಲಗೊಳಿಸಿದ್ದು ಅವರಿಗೆ ಅಸಮಾಧಾನಕರವಾಗಿರದಿರಲಾರದು. ಇಷ್ಟರಲ್ಲಿ ಉದ್ದಿಷ್ಟ ಪದಾರ್ಥಗಳು ದಿವಾನರವರನ್ನು ನಿರ್ದೇಶಿಸಿ ಕೊಡಲ್ಪಡತಕ್ಕದಲ್ಲವು. ಈ ವಿಷಯದಲ್ಲಿ ಅವರಿಗಿಂತ ಕಾದ ಕಾಟಷ್ಟವು ಕಿಪ್ಪಿ, ಅನ್ಯಥಾ ಪ್ರವೃತ್ತಿಯುಂಟಾದದಕ್ಕೂ, ಅತಿರಿಗಾದ ಬಹುಮಂದಿ ದೊಡ್ಡಮನುಷ್ಯರ ಕೋರಿಕೆಯನ್ನು ಸಫಲಗೊಳಿಸದೆಹೋಗಿ, ಸ್ಪೆಕ್ಟೇಟರ್ ಪತ್ರಿಕೆ ತಿಳಿಸುವಂತೆ ಮಹಾರಾಜಕೃಪಾಲಬ್ಧವಾದ ಸನ್ಮಾನವನ್ನು ನಾಗರಿಕರಾಗಿದ್ದರೆ ಅಂಗೀಕರಿಸಿದರೆಂಬದಕ್ಕೂ ತಕ್ಕ ಕಾರಣವನ್ನು ಅಭಿಜ್ಞರೇ ಅರಿಯಬಲ್ಲರು.

DIFFERENT RACES OF TRIBES IN MYSORE

ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುವ ಭಾಗದಲ್ಲಿ ಬಿಡಿಟಾಗ ನಿವಾಸಿಯು ಈ ದೇಶದಲ್ಲಿ ನೆಲಗೊಂಡಿರುವ ೧೮ ಮತ್ತು ಇದರ ಮೇಲ್ಪಟ್ಟು ಪಣಗಳ ಪ್ರಭೇದಗಳನ್ನು ತಿಳಿಯಬೇಕೆಂದು ಬಹುಮಂದಿ ಅಪೇಕ್ಷಿಸುವಂತೆಯೂ ಅವುಗಳನ್ನು ವಿವರವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂತಲೂ ತಿಳಿಸುತ್ತಾನೆ. ಈ ವಿಷಯವನ್ನು ಕುರಿತು ಹಿಂದೆ ಸನ್ ೧೮೭೭ನೇ ಇಸವಿ ಏಪ್ರಿಲ್ ೨೬ನೇ ತಾರೀಖಿನ ಈ ಪತ್ರಿಕೆಯಲ್ಲಿ ವಿಶೇಷವಾಗಿ ವಿಚಾರ ಮಾಡಿದ್ದೆವಾದಾಗ್ಯೂ ನಾವು ಉದ್ಧರಿಸುವಗಳಿಂದ ತಿಳಿಸಿದ ಅಂಶವು ಅನೇಕರ ಜ್ಞಾಪಕದೊಳಿರಲಾರದಾಗಿ ಅಂತವರ ತಿಳುವಳಿಕೆಯ ಬಗ್ಗೆ ಸದರೀ ಕಾಗದಲ್ಲಿ ಹೇಳಲ್ಪಟ್ಟ ಅಂಶಕ್ಕೆ ಪ್ರತ್ಯುತ್ತರರೂಪವಾಗಿಯೂ ಹಿಂದಿನ ನಮ್ಮ ಉಪನ್ಯಾಸವನ್ನೇ ಮರಳಿ ಇಲ್ಲಿ ಪ್ರಕಟಿಸುವೆವು ಹ್ಯಾಗಂದರೆ —

ಈ ಹಿಂದುಸ್ಥಾನ ಸೀಮೆ ಪ್ರವರೆಲ್ಲರೂ ಅನಾದಿಯಾಗಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ಜಾತಿಪ್ರಭೇದ ಪೂರ್ವಕವೆಂತಲೂ, ಶೈವವೈಷ್ಣವರೆಂಬ ಎರಡು ಮತದವರೆಂತಲೂ, ಜನ್ಮಾಂತರವೂ ಸ್ವರ್ಗ ನರಕಗಳೂ ಉಂಟೆಂದು ನಂಬಿ ವೇದಶಾಸ್ತ್ರಗಳ ಪ್ರಕಾರ ನಡೆಯತಕ್ಕ ಪಂಗಡದಾಗಿಯೂ ಪ್ರಸಿದ್ಧರಾಗಿದ್ದರಷ್ಟೆ. ಇಂತಾ ಸ್ಥೂಲಾಕಾರವಾದ ಕ್ರಮವನ್ನು ಅವಲಂಬಿಸಿ ಪರಂಪರೆ ಆಂತರಂಗಿಕಗಳಾಗಿ ಬಹು ಪ್ರಭೇದಗಳುಳ್ಳ ಜಾತಿಕುಲ ಸಂಪ್ರದಾಯಗಳು ಹೇಳಲ್ಪಡುತ್ತವೆ. ಅವುಗಳೂ ಬಹಳವಾಗಿ ದ್ವೇಷಾಸೂಯೆಗಳುತ್ಪತ್ತಿ ಕೇವಲ ಹೆಡಿಕೆಗೆ ಕಾರಣವಾಯಿತು. ಭಾರತಗಾದ ಉತ್ತಮ ಕ್ಷತ್ರಿಯ ರಾಜ್ಯಭಾರವು ಕಳಿಸಿ, ಸಾಮಾನ್ಯರಾದ ಹಿಂದೂ ಅರಸರು ಪ್ರಬಲಿಸಿದಾಗ ಕಾಲದೇಶ ವರ್ತನವನ್ನು ಅನುಸರಿಸಿ ಈ ಜಾತಿಗಳ ಪರಸ್ಪರ ವಿದ್ವೇಷಗಳು ಪ್ರಬಲಿಸಲು, ಇವುಗಳನ್ನು ಪ್ರಶಮನಿಸಲಿಕ್ಕೂ, ಆಸ್ತಿ ಮಹಾನಾಡುಸಭೆ ಮಂತ್ರಿಸಭೆ (ಅಥವಾ ಬಲಗೈಯವರ ಎಡಗೈಯವರು) ಎಂದು ವಿಂಗಡಿಸಲ್ಪಟ್ಟವು. ಇವುಗಳ್ಯಾಗಂದರೆ,—

ಬಲಗೈ ಪಣದವರು.

೧. ಬಣಜಿಗರು	೧೦ ಕುಂಬಾರರು
೨ ವಕ್ಕಲಿಗರು	೧೧. ಅಗಸರು
೩. ಒಂಟೆತ್ತುಗಾಣಿಗರು	೧೨ ಬೆಸ್ತರು
೪ ರಂಗಾರಿಯವರು	೧೩ ಪನ್ನಶಾಲೆಯರು
೫. ಲಾಡರು	೧೪ ನಾಯಿಂದರು
೬. ಗುಜರಾತಿ	೧೫. ಉಪ್ಪಾರರು
೭. ಕಾಮಾಟಿ	೧೬. ಚಿತ್ರಗಾರರು
೮ ಹೂಗಾರು	೧೭ ಗೊಲ್ಲರು
೯. ಕುರುಬರು	೧೮. ಮೋಚಿಗರು

ಎಡಗೈ ಪಣದವರು.

೧ ಪಂಚಾಳರು, ಬಡಿಗೆಯವರು, ಕಂಚುಗಾರರು, ಕಮ್ಮಾರರು, ಕಲ್ಲುಕೆಲಸದವರು ಅಕ್ಕಸಾಲಿಗರು.

೨ ನಗರದಪಣಕ್ಕೆ ಸೇರಿದ ಭೇರೀಗರು ಮುಂತಾದವರು.

೩ ದೇವಾಂಗದವರು (ನೇಯಿಗೆಯವರು)

೪ ಪೆದ್ದಾಣಿಗರು ಅಂದರೆ ಎರಡೆತ್ತಿನ ಗಾಣ ಕಟ್ಟುವವರು

೫ ಗೊಲ್ಲರು ಯಾನೆ ಧನಪಾಲರು

೬ ಬೇಡರು ಯಾನೆ ಬೇಟೆಗಾರರು.

೭ ಯಾಕಿ ಜನಗಳು ಯಾನೆ ಚಿರಾಯತ್ದಾರರು.

೮ ಪಳ್ಳಿ ಯಾನೆ ತಿಗಳರು.

೯ ಮಾದಿಗರು ಯಾನೆ ಚರ್ಮಕಾರರು.

ಮೇಲ್ಕಂಡ ಪ್ರಭೇದಗಳಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಸೇರಿಸಲ್ಪಡಲಿಲ್ಲವು. ಆದರೆ ಬಲಗೈಯವರಿಗೆ ಸೇರಿದ ಹಾಗೆ ಇರುವ ಕೋಮಟಿಗರೂ, ಎಡಗೈಯಂಪಿಗೆ ಸೇರಿದ ಭೇರೀಯವರೂ ವೈಶ್ಯರೆಂದು ಪರಸ್ಪರ ವಿವಾದಪಡುವರು. ಸದರೀ ಪಣಗಳಲ್ಲಿ ಫಲಾನೇಯವರು ಫಲಾನೇ ವಿಧವುಳ್ಳ ಕಬ್ ಮಾಡತಕ್ಕವರೆಂತಲೂ, ಫಲಾನೇ ವಾಹನ ಉತ್ತರಕ್ಕೆ ಹತ್ತೆಂತಲೂ, ಫಲಾನೇ ಪೋಷಾಕ್ ಧರಿಸಿಕೊಳ್ಳತಕ್ಕದ್ದೆಂತಲೂ, ಫಲಾನೇ ಮರ್ಯಾದೆಯುಳ್ಳವರಾಗಿರತಕ್ಕದ್ದೆಂತಲೂ ನಿಬಂಧನೆಯಾಗಿ, ಈ ಬಗ್ಗೆ ವಿಜಯನಗರ, ಕಂಚಿ ಮುಂತಾದ ಸ್ಥಳಗಳಲ್ಲಿ ಶಿಲಾತಾಮ್ರ ಶಾಸನಗಳು ಸ್ಥಾಪಿಸಲ್ಪಟ್ಟಿರುತ್ತವೆ. ಈ ಪಣಸ್ಥರೊಳು ಪರಸ್ಪರ ಇರುವ ದ್ವೇಷಾಸೂಯೆಗಳು ಕಾಲಕ್ರಮದಿಂದ ಬಹಳ ಪ್ರಬಲಿಸಿ ಕಡೆಗೆ ಅವರು ಮಾಡುವದೇನಂದರೆ,—ಬಲಗೈ ಪಣದವರಲ್ಲಿ ಮೊದಲನೆಯವರಾದ ಬಣಜಿಗರು ತಮ್ಮ ಪಣಸ್ಥನಾದ ಹೊಲೆಯನಿಗೆ ಕೆಂಪು ಬನಾತ್ ಸುತ್ತಿಸಿ ಕಾಲಿಗೆ ಮೆಟ್ಟು ಹಾಕಿಸಿ ಹೊಗಳಿಸಿಕೊಳ್ಳುತ ಎದುರುಕಕ್ಷಿಯವರ ಬೀದಿಯಲ್ಲಿ ಹೋಗಲಿಕ್ಕೆ ಬಿಡಿಸುತ್ತಾರೆ. ಅವರುಗಳು ಬಹಳ ಪರ್ಹಾಕ್ ಮಾಡುವರು. ಸದರೀ ಮರ್ಯಾದೆಯನ್ನು ಅನುಸರಿಸಿ ಅಯಾ ಪಣಸ್ಥರಿಗೆ ಪ್ರತ್ಯೇಕ ಪ್ರತ್ಯೇಕ ಬೀದಿಗಳೂ, ಬಾಜಾಬಜಂತ್ರಿಯವರೂ, ಕೆಲಸದವರೂ, ಪುರೋಹಿತರು ಮುಂತಾದವರೂ ಸ್ಥಳವಂತ್ರಿಂದ ಯೋಜಿಸಲ್ಪಟ್ಟಿರುತ್ತಾರೆ. ಈ ನಿಬಂಧನೆಗಳಿಗೆ ವಿರುದ್ಧವಾಗಿ ಹುಟ್ಟುವ ಕಲಹಗಳೆಲ್ಲವೂ ಪಣಕಟ್ಟಿನ ವ್ಯಾಜ್ಯಗಳೆಂದು ಹೇಳುತ್ತಾರೆ. ಇವುಗಳಿಗಾಯಿ ಈ ಪಣಕಟ್ಟಿನವರಿಗೆ ಬಂಗಾರು ಸಾಹುಕಾರರು, ಅಕ್ಕಸಾಲಿಗರು, ದೇವಾಂಗದವರು, ಇವರುಗಳು ವೈದಿಕಪ್ರವೃತ್ತಿಯನ್ನು ಅವಲಂಬಿಸಿ ಬ್ರಾಹ್ಮಣರಿಗೆ ಎದುರುಬೀಳುತ್ತಾರೆ. ಹೀಗೆ ತಮಗೆ ಕೇಳ್ಪಟ್ಟವರಾದ ಆ ನಾಲ್ಕು ಬಗೆಯವರೂ ತಮ್ಮ ದೇವರುಗಳ ಅಥವಾ ಗುರುಗಳ ಮೆರವಣಿಗೆ ಮಾಡುವಲ್ಲಿ ಬ್ರಾಹ್ಮಣರ ಕೆಲಸಕ್ಕೆ ಆ ಮರ್ಯಾದೆ ಮಾಡಿದಂತೆ ಎಣಿಸಿ ಕಲಹಿಸುವರು. ಬ್ರಾಹ್ಮಣರಲ್ಲಾದರೋ ಪರಿ ದೇವಸ್ಥಾನಗಳ ವಿಷಯದಲ್ಲಿಯೂ, ಅತ್ತಪಿ ವೈಷ್ಣವರಲ್ಲಿ ತೆಂಗಲೆ ವಡಗಲೆ ಪ್ರಭೇದಗಳಾಗಿಯೂ ಉಂಟಾಗುವ ವಿದ್ವೇಷವು ಎಲ್ಲಕ್ಕೂ, ಅತಿ ಪ್ರಬಲವಾದದ್ದು ಮಾಧ್ವರಲ್ಲಿ ಈ ವಿಧಗಳಾಗ ಕಲಹಗಳು ಇಲ್ಲದಿದ್ದಾಗ್ಯೂ ಒಂದೊಂದು ಸಮಯದಲ್ಲಿ ಉಂಟಾಗುವ ನೈವೇದ್ಯ ಸಮರ್ಪಣೆ ವ್ಯಾಜ್ಯವೊಂದೇ ಸಾಕಾಗಿರುತ್ತೆ. ಇನ್ನೂ ಕೆಲವು ಸ್ಥಳಗಳಲ್ಲಿಯೂ ಕಂಟ್ರಿ ಮುಂತಾದ ಇಲ್ಲದಷ್ಟು ಪ್ರಭೇದಗಳಿಂದ ಪ್ರಯೋಜನ ಲೇಶವೂ ಕಾಣದಿದ್ದಾಗ್ಯೂ ಪರಸ್ಪರ ಪ್ರಬಲಗಳಾದ ದ್ವೇಷಾಸೂಯೆಗಳಿಗೆ ಕಾರಣಗಳಾಗಿ ಐಕಮತ್ಯವನ್ನೂ ಶ್ರೇಯಸ್ಕರಗಳಾದ ಲೌಕಿಕ ಪ್ರಯೋಜನಗಳನ್ನೂ ಸಂಪೂರ್ಣ ಭಂಗಗೊಳಿಸತಕ್ಕ ಸಾಧಕಗಳಾಗಿ ಪರಿಣಮಿಸಿಯವೆ.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಕೃತಜ್ಞತೆಯ ಪೂರ್ವಕ ತಿಳಿಸುವದೇನಂದರೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರು ತಾವು ಕೊಡಬೇಕಾದ ಚಂದಾ ಬಾಕೀಗಳನ್ನು ಕಳುಹಿಸಿಕೊಡದೆಯೂ ಅಬಗ್ಯೆ ಅಗಿಂದಾಗ್ಯೆ ನಾವು ಬರೆಯುವ ತಗಾದೇ ಕಾಗದಗಳಿಗೆ ಜವಾಬ್ ಕೊಡದೆಯೂ ಇರುತ್ತಾರಾಗಿ ಅಂತವರೆಲ್ಲರಿಗೂ ನಾವು ಆಖೈರಾಗಿ ತಿಳಿಸುವದೇನಂದರೆ, ಬಾಕೀದಾರರೆಲ್ಲರಿಗೂ ಅವರವರ ಬಾಕೀತಪ್ಸೀಲ್ ನಮೂದಿನಿಂದ ಮರಳಿ ಯೊಂದುದಫಾ ಕಾಗದಗಳು ಬರೆಯುವೆವು, ಅದು ತಲಪಿದ ಮೂರು ದಿನಗಳೊಳಗಾಗಿ ಅವರವರು ತಮ್ಮ ಬಾಕೀಗಳನ್ನು ಝೂಡೇಯಾಗಿ ಕಳುಹಿಸಿಕೊಡಬೇಕು, ಹಾಗೆ ಮಾಡದೆ ಉಪೇಕ್ಷಿಸುವಂತಾವರಿಗೆ ಪತ್ರಿಕೆಗಳು ನಿಲ್ಲಿಸಲ್ಪಟ್ಟು ಬಾಕೀ ವಸೂಲೀ ವಿಷಯದಲ್ಲಿ ನಾವು ನಡೆಸುವ ಪ್ರಯತ್ನವು ಕೇವಲಖುದಿತವಾಗಿರುವದು.

Occasional Notes
ನೈಮಿತ್ತಿಕ ವಿಷಯನ್ಯಾಸ.

Reports from Cabul — ಸರ್ದಾರ್ ಅಬ್ದುಲ್ ರಹಿಮಾರ್ ಯೆಂಬಾತನಮೇಲೆ ನಡೆಸಲ್ಪಟ್ಟ ಕೆಲಸಕ್ಕೆ, ಐಜಾಖಾನ್ ಯೆಂಬವನೂ ಅವನಿಗೆ ಸಹಾಯಕರಾದ ರಬಿಯಾ ಜನಗಳೂ ಪ್ರೇರಕರೆಂತಲೂ, ಐಜಾಖಾನ್ ಯೆಂಬವನ ಮಗನು ಖನಾಬಾದ್ ಯೆಂಬ ಷಹರಿಗೆ ಹೋಗಿ, ಅಮೀರ್ ಅಬ್ದುಲ್ ರಹಮಾನ್‌ಯವರಿಗೆ ಸಂಬಂಧಪಟ್ಟ ಒಂದುಕೋಟಿ ರೂಪಾಯಿಗಳನ್ನು ಸ್ವಾಧೀನಪಡಿಸಿಕೊಂಡು ರೆಯೂ ಕಾಬೂಲಿನಿಂದ [illegible] ವರ್ತಮಾನ ಬಂದಿರುತಿದೆ.

Affairs of the Tikari Raj — ತಿಕಾರಿ ಸಂಸ್ಥಾನದ ಆಡಳಿತಗಳು ಮರಳಿ ಗಲಾಟೆಗೆ ಗುರಿಯಾದಂತೆ ಕಾಣುತಿದೆ ಸದರೀ ಸಂಸ್ಥಾನದ ಮಹಾರಾಣೀಯವರು ತಮ್ಮ ದಿವಾನರನ್ನೂ ನಾಯಬ್ ದಿವಾನರನ್ನೂ ಕೆಲಸದಿಂದ ವಜಾಮಾಡಿ ಅವರಿಬ್ಬರಿಗೂ ಬದಲಾಗಿ ಬೇರೇ ಇಬ್ಬರನ್ನು ನೌಕರರನ್ನಾಗಿ ಮಾಡುವಂತೆ ಗಯಾ ಡಿಸ್ಟ್ರಿಕ್ಟ್ ಕಲೆಕ್ಟರವರನ್ನು ಕೇಳಿಕೊಂಡಿರುತ್ತಾರೆ. ಸಂಸ್ಥಾನದ ಖಜಾನೇ [illegible] ನಾಲ್ಕು ಲಕ್ಷ ರೂಪಾಯಿಗಳು [illegible] ಹೇಳಿಕೊಳ್ಳುತ್ತಾರೆ [illegible] ಅವರಿಬ್ಬರ ಮೇಲೂ ಕ್ರಿಮಿನಲ್ ಚಾರ್ಜ್ [illegible] ಕಾಣುತಿದೆ, ಯೆಂದು [illegible] ಪತ್ರಿಕೆ ಹೇಳುತಿದೆ.

Reports from Herat — ಈಚೆಗೆ ಹಿರಾತಿನಿಂದ ತಿಳಿಯಬರುವದೇನೆಂದರೆ — ಕೋಟೆಗಳ ಕಟ್ಟಡಗಳು [illegible] ನಡೆಯುತಲಿವೆ, [illegible] ರವರು ತಮ್ಮ [illegible] ಕಾರ್ಯತೆ ಅಕ್ಕರ [illegible] ನಿಂದ ಸೇನೆಗಳು ಬಂದು ಸೇರಿದ್ದಾವೆ [illegible] ದೇಶದ ಮಾರ್ಗವಾಗಿ [illegible] ಸಹಾಯ ಸೇನೆಗಳು ಬರುತಲಿರುವಂತೆ ವರ್ತಮಾನ ಬಂದಿರುತಿದೆ [illegible] ಗವರ್ನರ್ ಮೊದಲಾದವರು ಕೊಟ್ಟ [illegible] ಯುದ್ಧಸಾಮಾನುಗಳು ಸದರೀ ಮಾರ್ಗವಾಗಿ ರವಾನೆ [illegible] ಸಾಧಾರಣ ತೋಟಾಗಳೂ [illegible] ರವಾನೆಯಾಗಿರುತಿವೆ, ಎಂದು

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕುಪಾತಿವೃತ್ತಾಂತಗಳು

Judicial — ಇಲ್ಲಿಸಿವಿಲ್ ಮತ್ತು ಸೆಷನ್ಸ್ ಕೋರ್ಟಿನಲ್ಲಿ ಈಗಿನ [illegible] ಮೂರು ತಿಂಗಳ ೩ನೇ ತಾರೀಖಿನವರ ಕರ್ನಲ್ ಡಿವ್ರಿಯು ಹಿರ್ನಾಬಿಯರವರು ಕುಟೋನ್ಮೆಂಟ್ ಸಿವಿಲ್ ಮತ್ತು ಸೆಷನ್ ಕೋರ್ಟಿ ಚಾರ್ಜನ್ನು ವಹಿಸಲು ಮೋಂದರ್ [illegible] ಪಿ. ಮಾಲ್ಟಿಬಿಯವರು ತಮ್ಮ [illegible] ವಾದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿ ಚಾರ್ಜ್ ವಹಿಸುವರು

A police constable convicted — ಈವೂರು ಬಳೇಪೇಟೆ ಪೋಲೀಸ್ ಸ್ಟೇಷನಿಗೆ ಸೇರಿದ ಜವಾನನೊಬ್ಬನು ರಾತ್ರಿಕಾಲದಲ್ಲಿ ಇಲ್ಲಿನ ಶ್ರೀನಿವಾಸಯ್ಯನವರ ಸತ್ರದೊಳು ಪ್ರವೇಶಿಸಿ ಕಳವುಮಾಡಲು ಪ್ರಯತ್ನಪಟ್ಟನೆಂದು ಹಿಂದೆ ಆಚೇವಾರದ ಈಪತ್ರಿಕೆಯಮೂಲಕ ತಿಳಿಸಿಯಿರುತ್ತೇವೆಯಷ್ಟೆ. ಸದರೀಯವನು ತಾಲೂಕು ಮ್ಯಾಜಿಸ್ಟ್ರೇಟರಿಂದ ಮೂರುದಿನಗಳಕಠಿಣಶಿಕ್ಷೆ ಮತ್ತು ೧೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟನು.

Official — ಇಲ್ಲಿನ ಕುಟೋನ್ಮೆಂಟ್ ಸಿವಿಲ್ ಮತ್ತು ಸೆಷನ್ ಕೋರ್ಟಿ ಚೀಫ್ ಕ್ಲರ್ಕ್ ಮ॥ ಅಬ್ದುಲ್ ರಹಿಮಾನ್‌ಯವರು, ಮೂರುತಿಂಗಳ ರಜಾಮೇಲೆ ಹೊರಟುಹೋಗುವ ಮ॥ ಅನುಪಸ್ಥಿತಿಯವರಿಗೆ ಬದಲಾಗಿ ರೆಸಿಡೆಂಟರಕೋರ್ಟಿ ರಿಜಿಸ್ಟ್ರಾರ್ ಕೆಲಸಕ್ಕೆ ನೌಕರರನ್ನಾಗಿ ಮಾಡಲ್ಪಟ್ಟರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿ ಹೆಡ್ ಕ್ಲಾರ್ಕ್ ಮ॥ ವರದಣ್ಣನವರು ಮ॥ ಅಬ್ದುರ್ ರಹಿಮಾನ್ ಯವರಿಗೆ ಬದಲಾಗಿ ಸಿವಿಲ್ ಮತ್ತು ಸೆಷನ್ ಕೋರ್ಟಿ ಚೀಫ್ ಕ್ಲಾರ್ಕ್ ಕೆಲಸವನ್ನು ಬದಲೀನೋಡುವಂತೆ ನಿಯಮಿಸಲ್ಪಟ್ಟರೆಂದು ತಿಳಿಯಬರುತದೆ.

A dismissed constable convicted — ಈವೂರು ಟೌನ್ ಪೋಲೀಸಿಗೆ ಸೇರಿದ ಒಬ್ಬ ಕಾನ್ಸ್ಟೇಬಲ್ ಒಬ್ಬ ಚಾರಿನವನೆಂಬ ಕಾರಣದ ಮೇಲೆ ಈಗ್ಯೆ ಯೆರಡುವಾರಗಳಹಿಂದೆ ನೌಕರಿಯಿಂದ ವಜಾಮಾಡಲ್ಪಟ್ಟನು ಸದರೀಯವನು ಇಲ್ಲಿಂದ ಕೋಲಾರಿಗೆಹೋಗಿ, ಅಲ್ಲಿಯೊಬ್ಬರ ಮನೆಯಲ್ಲಿ ಒಡವೆಗಳನ್ನು ಕಳವುಮಾಡಿ ಅದು ಪತ್ತೆಯಾಗಿ, ಅಲ್ಲಿನ ಮುನಸಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ಮೂರುತಿಂಗಳ ಕಠಿಣ ಶಿಕ್ಷೆ ಸಜಾ ವಿಧಿಸಲ್ಪಟ್ಟು [illegible] ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಟ್ಟನೆಂದು ತಿಳಿಯಬರುತಿದೆ ಇಂತಾ ಜನಗಳನೇಕರು ಪೋಲೀಸ್ ಸೇನೆಗೆ ಸೇರಿರುತ್ತಾರೆಂದು ಗತವಾರದಲ್ಲಿ ನಾವು ತಿಳಿಸಿದ್ದಕ್ಕೆ ಇದೊಂದು ನಿದರ್ಶನವೆಂದು ಹೇಳಬಹುದಾಗಿದೆ

A suspected murder — ಕೋಲಾರ ಡಿಸ್ಟ್ರಿಕ್ಟ್ [illegible] ತಾಲ್ಲೂಕಿಗೆಸೇರಿದ [illegible] ಗ್ರಾಮದ [illegible] ನಾವು [illegible] ಸತ್ತುಹೋದಳೆಂದು ಸದರೀ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರಿಂದ ಮಹಜರ್ ಮಾಡಿಸಿಬಿಟ್ಟು ಮುದೆಯನ್ನು ದಹನಮಾಡಿಬಿಟ್ಟನು ಈಸಂಗತಿಯನ್ನು ತಿಳಿದವನ್ಯಾವನೊಬ್ಬನು ವಾಸ್ತವಾಂಶವನ್ನು ಹೆಸರಿಲ್ಲದ ಅರ್ಜೀಮೂಲಕ [illegible] ಅಮಲ್ದಾರರಿಗೆ ತಿಳಿಸಲು ಅವರು [illegible] ಅವರು [illegible] ಅಸಿಸ್ಟೆಂಟ್ [illegible] ಗ್ರಾಮಕ್ಕೆಹೋಗಿ ಮುದೆಯನ್ನು ಹೊರಗೆತೆಗೆಸಿ [illegible] ಈ ಮೊಕದ್ದಮೆಗೆ ಸಂಬಂಧಪಟ್ಟ [illegible] ಇನ್ಸ್‌ಪೆಕ್ಟರ್ ಮೊದಲಾದವರೆಲ್ಲರ [illegible] ನಮ್ಮ ಕೋಲಾರ [illegible] ತಿಳಿಸುತ್ತಾನೆ

Obituary — ಮೈಸೂರು ಡಿಸ್ಟ್ರಿಕ್ಟ್ ಸಬ್ ಡಿವಿಜನ್ ಆಫೀಸರ್ [illegible] ಮ॥ ರಾಮಸ್ವಾಮಿಯ್ಯಂಗಾರ್ಯರವರು ಈಗ್ಯೆ ಕೆಲವು ಕಾಲದಿಂದ [illegible] ಗತಶುಕ್ರವಾರದ ಹಿಂದಿನ [illegible] ದಿವಂಗತರಾದರೆಂದು ಕೇಳಲಿಕ್ಕೆ ನಾವು ವಿಷಾದಿಸುವೆವು ಈ ದೊಡ್ಡಮನುಷ್ಯರು ಅನೇಕ ತಾಲ್ಲೂಕುಗಳಲ್ಲಿ ಅಮಲ್ದಾರಿ ಕೆಲಸ ಮಾಡಿ [illegible] ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ತೆಗೆದುಕೊಂಡು ಇದುವರೆವಿಗೂ ಸುಖವಾಗಿರುತಲಿದ್ದರು ಅವರು ಮುಖ್ಯವಾದ [illegible] ಯಾವತರಹದ [illegible] ಅವರಿಗೆ ಈಗ [illegible] ವಾಯಿತು ಮುಖ್ಯವಾಗಿ ಅವರ ಪುತ್ರರಿಗೆ [illegible] ಯೋಗ್ಯವಾದ ತಾರುಣ್ಯದೊಳು ಅವರ ಕುಟುಂಬಕ್ಕೆ ಪ್ರಾಪ್ತವಾದ ವೈಧವ್ಯಕ್ಕಾಗಿ ನಾವು ಬಹಳ ವಿಷಾದಿಸುವೆವು

Cholera — ಉಷ್ಣಾಲ್ ಜಲಾವರೋಧ ಗದ ವ್ಯಾಪಕತೆಯು ಗತವಾರದೊಳು ಇದ್ದಂತೆಯೇ ಇದೆಯಲ್ಲದೆ ಇನ್ನೂ ಶಮನವಾಗಲಿಲ್ಲವು ಕಬ್ಬನ್‌ಪೇಟೆ ಬಾಸೆಲ್ಮನ್ ಮೊದಲಾದಕಡೆಗಳಲ್ಲಿ ಪ್ರತಿನಿತ್ಯವೂ ಒಬ್ಬರಿಬ್ಬರಂತೆ ಹೋಗ ತಲಿದಾರೆ ಪ್ಲೇಗ್ ರೋಗವನ್ನು [illegible] ಸದರೀ ರೋಗದ ವ್ಯಾಪಕತೆ ಹ್ಯಾಗಿದೆಯೆಂದು ಕೇಳಿದರೆ ಅದಕ್ಕೆ ಅವರು "ಕುಜಬಿ ನೈ ಪಾವಿಂದ್" ಯೆಂಬದಾಗಿ" ಹೇಳುತ್ತಾರೆಯೆಹೊರ್ತು ವಸ್ತುಸ್ಥಿತಿಯನ್ನು ತಿಳಿಸೋ ಅಥವಾ ತಿಳಿಯದೆಯೋ ಒಬ್ಬರಿಗೂ ಹೇಳುವದಿಲ್ಲವು, ವರದು ಇದು ಆ [illegible] ಮಣಿದಕೆಯೊಳದುವವನು ಜೀವಿಸುವದಕ್ಕಾಗಲಿ, ಸತ್ತವನು ಬದುಕುವದಕ್ಕಾಗಲಿ ಸಾಧಕವಲ್ಲವು. ಮೃತಪಡದವರ ಸಂಖ್ಯೆಯು ಅಧಿಕವಾಗುವುತೆಲ್ಲ ಇಲ್ಲಿನವರಿಗೆ ದೈವಶಕ್ತಿಯೂ ಜಾಸ್ತಿಯಾಗುತಲಿರುವಂತೆ ತೋರುತದೆ ಯಾಕೆಂದರೆ ಇಲ್ಲಿನ ಪ್ರತಿಯೊಂದು ಪೇಟೆಯವರೂ ಸರ್ದಿ ಯೇರ್ಪಡಿಸಿಕೊಂಡು ಒಂದೊಂದುದಿನ ಒಬ್ಬೊಬ್ಬರು ಅಣ್ಣಯಮ್ಮನಿಗೆ ಪುಷ್ಪ ರಥೋತ್ಸವ ಮಾಡಿಸುತಲಿದಾರೆ ಇಷ್ಟಾದಾಗ್ಯೂ ಆಕಾಳಿಕಾದೇವಿಗೆ ಇನ್ನೂ ಕೃಪೆಹುಟ್ಟದುದತೆತೋರಲಿಲ್ಲವು. ಈಗ ಸದ್ಯ ಹೂವಿನಗಿಡಾಕಿ ಅಧಿಕವಾಗಲಿಕ್ಕೆ ಕಾರಣವಾಗಿದೆ ಈರೋಗೋಪಶಮನಾರ್ಥ ಮ್ಯುನಿಸಿಪಾಲಿಟಿಯವರು ಅದ್ಯಾಪಿ ಯಾವವಿಧ ಏರ್ಪಾಡನ್ನೂ ಮಾಡಿದಂತೆ ತೋರಲಿಲ್ಲವು ಕಾಲಸ್ಥಿತಿಯು ಬಹಳ ಮನೋಹರವಾಗಿದೆ. ಚಳಿಯು ದಿನೇದಿನೇ ಅಧಿಕವಾಗುತಲಿದೆ ಸೂಳಿಯ ದೆಸೆಯಿಂದ ಕೆರೆಕುಂಟೆಗಳಲ್ಲಿರುವ ಅಲ್ಪಸ್ವಲ್ಪನೀರು ಸಹ ಬತ್ತಿಹೋಗುವದಕ್ಕೆ ಕಾರಣವಾಗಿದೆಯಲ್ಲದೆ ಮಳೆಯಪ್ರಸ್ತಾವವೇ ಇಲ್ಲವು ನಿರಖ್ ಜಾಸ್ತಿಯಾಗುತಬರುತಿದೆ. ಇನ್ನೂ ಕೆಲವುಕಡೆಗಳಲ್ಲಿ ದನಗಳಿಗೆಸಾಕಾದಷ್ಟು ಮೇವೂ ನೀರೂ ದೊರೆಯುವದಿಲ್ಲವು.

The Mysore State Railway. — ಮೈಸೂರು ಸ್ಟೇಟರೆಯಿಲ್ವೆಯನ್ನು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪೆನಿಯವರಿಗೆ ಕೊಡುವ ವಿಷಯದಲ್ಲಿ ಈಗ್ಯೆ ಕೆಲವುಕಾಲದಮೊದಲು ಮಹಾರಾಜಾ ಸರ್ಕಾರದವರಿಗೂ ಸದರೀ ರೆಯಿಲ್ವೇ ಕಂಪೆನಿಯವರಿಗೂ ನಡೆಯುತಲಿದ್ದ ಕರಾರ್‌ನಾಮೆಗಳು ಪೂರೈಸಿದಂತೆಯೂ, ಬರುವ ತಿಂಗಳ ಗುರು [illegible] ತಾರೀಖುಮೊದಲು ರೆಯಿಲ್ವೆ ಕಂಪೆನಿಯವರು ಇಲ್ಲಿನ ರೆಯಿಲ್ವೆಯನ್ನು ತಮ್ಮಸ್ವಾಧೀನಕ್ಕೆ ತೆಗೆದುಕೊಂಡುಬಿಡುವರೆಂತಲೂ, ಪ್ರವಾದವುಂಟಾಗಿರುವಂತೆ ಕಳೆದತಿಂಗಳ ೩೦ನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆಯು ತಿಳಿಸುತಿದೆ ಪರಂತು ಈಗ ಯಾವತರತ್ನನ ಮೇಲೆ ರೆಯಿಲ್ವೆಯು ಸದರೀ ಕಂಪೆನಿಯವರಿಗೆ ಕೊಡುವಂತೆ ವ್ಯವಸ್ಥೆಯಾಗಿರುತಿದೆಯೋ ಅದು ಗೊತ್ತಾಗಲಿಲ್ಲವು ಈ ಮೈಸೂರು ರೈಲ್ವೆಯಲ್ಲಿ ಇತರ ಸಣ್ಣ ರೆಯಿಲ್ವೆಗಳಿಗಿಂತಲೂ ಜಾಸ್ತಿಯು ಮೊಬಲಗು ಆದಾಗ್ಯೂ, ಇಲ್ಲಿನ ರೆಯಿಲ್ವೆ ಇಲಾಖಾನೌಕರರಿಗೆ ಇತರಾಪೇಕ್ಷೆಯಾ ಬಹಳ ಜಾಜಿನೀರಲವ ಕೊಡಲ್ಪಟ್ಟಾಗ್ಯೂ, ರೈಲ್ವೆಯು ಇಲ್ಲಿಗೆ ಲಾಭಕರವಲ್ಲದೆ ಅದು ಭರಿಸುವದೇ ಪ್ರಯಾಸಸಾಧ್ಯವಾಗಿ, ಕಡೆಗೆ ಅದರಸಂಬಂಧವನ್ನೇ ನಿವಾರಿಸಿಕೊಳ್ಳುವ [illegible] ಒಂದುವೇಳೆ ಇದನ್ನು ಶುದ್ಧಕ್ರಯಕ್ಕೆ ಕೊಟ್ಟದ್ದರೆ ಈರಾಜ್ಯಕ್ಕೆ ಇದೊಂದು [illegible] ಒಂದುಭಾಗವು ಅತ್ಯಾತಿಕವಾಗಿ ನಿವೃತ್ತಿಯಾದಂತೆ ಆಯಿತು.

Breach of courtesy — ಗತವಾರದ ತುಪತ್ರಿಕೆ [illegible] ವಲ್ಲಿ [illegible] ಇದನ್ನು [illegible] —

[illegible]

ಮುಂಭಾಗದಲ್ಲಿ [illegible] ಅಲಂಕರಿಸಿ [illegible] ಅರಮನೆಯಿಂದ [illegible] ಕೆಲವರಿಂದ [illegible] ಅಮರ್ಯಾದೆಯು [illegible] ಕೆಸ್ಸು [illegible] ಅಲಂ [illegible]ಗವನ್ನು ಮಾಡಲಿಕ್ಕೆ ಕಾವು ಸನ್ನದ್ಧರಾಗಿ [illegible] ಅದಕ್ಕೆ ಮಹಾರಾಜರವರೇನೂ [illegible] ಅದನ್ನು ಮುಂಭಾಗದ [illegible] ಕದಲಿ ಸ್ತಂಭ ತೋರಣಾದಿಗಳಿಂದ [illegible] ಆಲಂಕರಿಸಲ್ಪಟ್ಟಿತ್ತು ಅದಿನ ಸಾಯಂಕಾಲ, [illegible] ಅರಮನೆಯಿಂದ ಕೊಡಲ್ಪಟ್ಟಿದ್ದ [illegible] ಮುಂದಿನ [illegible] ಬಿಡಲ್ಪಟ್ಟವು ಇದಕ್ಕೆ ಕಾರಣವನ್ನು [illegible] ಅದ್ಯಾಪಿ ಪ್ರಕ್ಯ [illegible] ತಿಳಿಯಬರಲಿಲ್ಲ. [illegible] ನಮ್ಮ ಅಭಿಪ್ರಾಯವನ್ನು ಮುಂದೆ ತಿಳಿಸುವೆವು.

NEWS LETTER.

ಮೈಸೂರು, ತಾ॥ ೩ನೇ ಜೂಲೈ— ಇಲ್ಲಿನ ಕಾಲಸ್ಥಿತಿಯು ಬಹಳಮನೋಹರವಾಗಿ, ಪಶ್ಚಿಮದಿಕ್ಕಿನ ಗಾಳಿಯು ಬಲವಾಗಿ ಬೀಸುತ ಮೋಡಮುಸುಕುತಲಿದೆ ಈಚೆಗೆ ಸ್ವಲ್ಪಮಟ್ಟಿಗೆ ಮಳೆಯಾಯಿತು. ಕೆಲವು ವೇಳೆಯಲ್ಲಿ ಬಂತು ರುಮನಿಗಳಿಂದಲೇ ಪರಿಸಮಾಪ್ತವಾಗುತಿದೆ.

ಮಧ್ಯೆ ಸ್ವಲ್ಪ ಉಪಶಮಿಸಿದ್ದ ಉಷ್ಣಜ್ವಾಲಾವ ರೋಗವು ಮರಳಿ ಕಳೆದತಿಂಗಳ ೨೫ನೇ ತಾರೀಖು ನೋಡಲು ತಲೆದೋರಿ ಪ್ರತಿ ನಿತ್ಯವೂ ಇಬ್ಬರು ಮೂವರು ಪ್ರಕಾರ ತನ್ಮೂಲಕ ಮೃತಪಡುತಲಿದಾರೆ

ದಿವಾನರವರ ಮನೆಯಲ್ಲಿ ನಡೆದ ವಿವಾಹೋತ್ಸವವು, ಪ್ರಾರಂಭದಂತೆ ಮುಕ್ತಾಯವಾಗುವದಕ್ಕಿಲ್ಲವೆ ಮಧ್ಯೆ ಸ್ವಲ್ಪ ವಿಘಾತವುಂಟಾಯಿತೇನೆಂದರೆ, ಶಾಂಘಾಯಿನಿಂದ ವಿವಾಹಾರ್ಥಬಂದಿದ್ದ ಮ॥ ಶೇಷಾದ್ರಿಅಯ್ಯರವರ ಸನ್ನಿಹಿತ ಬಂದುಒಬ್ಬರು ಮೇಲಕಂಡ ರೋಗದಿಂದ ಗತ ಸೋಮವಾರದದಿನ ಬೆಳಿಗ್ಯೆ ಮೃತಪಟ್ಟರು. ಆದರೆ ಇವರು ಮನೋರೋಗದಿಂದ ಗತಿಸಿದಂತೆ ಕೆಲವರು ಹೇಳುತ್ತಾರೆ. ಅದರ ಕಾರಣವೇನಾದರೂ ಇರಲಿ, ಒಬ್ಬರ ಉತ್ಸಾಹದ ಭಂಗಕ್ಕೆ ಅದು ಸಾಕಾದದ್ದಾಗಿ ಯೇರ್ಪಟ್ಟಿತು

ಗತ ಸೋಮವಾರದದಿನಬೆಳಿಗ್ಯ ವಿವಾಹಕ್ಕಾಗಿಬಂದಿದ್ದವರು ನೂರುಮಂದಿಯತನಕ ವಾಪಸ್ ಹೊರಟುಹೋದರು.

ವಿವಾಹವಾದ ಮೂರನೆಯದಿನ ನಲುಗು ನೋಡುವದಕ್ಕಾಗಿ ಶ್ರೀಮನ್ಮಹಾರಾಜರವರು ದಿವಾನರ ಮನೆಗೆ ದಯಮಾಡಿದ್ದರಲ್ಲದೆ, ಆದಿನರಾತ್ರಿ ಅವರು, ಪ್ರಾಪ್ತವಾದ ಆತಿಥ್ಯವನ್ನಂಗೀಕರಿಸಿ ತನ್ಮೂಲಕ ದಿವಾನರವರ ಮನಸ್ಸಂತೋಷಪಡಿಸಿದರೆಂದು ಸಹ ಕೇಳುತ್ತೇನೆ. ಅದೇದಿನ ಮಧ್ಯಾಹ್ನ ಸಹರ ೧ ಘಂಟೆಗೆ ಮಹಾರಾಜರವರು ಸುಬ್ರಹ್ಮಣ್ಯರಾಜೇ ಅರಸಿನವರೊಡನೆ ದಿವಾನರ ಮನೆಗೆ ದಯಮಾಡಿದ್ದರು. ಆಗ ಅವರನ್ನು ದಿವಾನರವರೂ, ಅವರ ಸೆಕ್ರೆಟರಿಯವರೂ, ಕಾದಿದ್ದು ಬರಮಾಡಿಕೊಂಡರು. ದಿವಾನರಬಂಗ್ಲೆಗೆ ದಕ್ಷಿಣದಿಗ್ಭಾಗದಲ್ಲಿ ಹಾಕಲ್ಪಟ್ಟಿದ್ದ ದಿವ್ಯಾಲಂಕೃತವಾದ ವಿವಾಹಮಂಟಪದಲ್ಲಿ ಮಹಾರಾಜರವರು ನಿಜಾಸನಾಸೀನರಾದಮೇಲೆ ಯೆಲ್ಲರೂ ತಮ್ಮತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ಬಳಿಕ ತಂಜಾವೂರಿಂದ ಬಂದಿದ್ದ ಗಾನವಿದ್ಯಾಕುಶಲರಾದ ಪರಮೇಶ್ವರ ಭಾಗವತರ ಕುಮಾರರ ಪಿಡಿಲೂ, ಮಹಾವೈದ್ಯನಾಥಯ್ಯರ ಗಾನವೂ ಜರಿಗಿತು. ಮ॥ ನರಸಿಂಹಯ್ಯಂಗಾರ್ರವರು, ಸದರೀ ಇಬ್ಬರ ಪಾಂಡಿತ್ಯಕ್ಕಾಗಿ ಮಹಾರಾಜರವರು ಬಹಳ ಸಂತೋಷಿಸಿದಂತೆ ಅವರಿಗೆ ತಿಳಿಸಿದರು.

ರಾಜಸಭೆಯೊಳು ಪಮ್ಮಸ್‌ಬಂದ್ ಕಟ್ಟಬೇಕೆಂಬ ನಿಯಮವು ಸರ್ವಸಾಮಾನ್ಯವಾದ್ದೆಂದು ಇದುವರಿವಿಗೂ ನಾನು ತಿಳಿದಿದ್ದೆನು. ಆದರೆ ಈಚೆಗೆ ತಿಳಿಯಬರುವದರಲ್ಲಿ ಅಂತಾನಿಯಮವು ಪರದ್ದೇಶೀಯರಿಗೆಮಾತ್ರ ಯೇರ್ಪಟ್ಟದ್ದೆಂದು ಕಾಣುತಿದೆ. ಯಾತಕ್ಕೆಂದರೆ, ಮದರಾಸ್ ಪ್ರೆಸಿ

ರ್ಡೆಸೀ ಕಾಲೀಜಿನ ಪ್ರೊಫೆಸರಗಳ ರ್ಲ್ಲೊಬ್ಬರಾದ ರಾಯಬಹದೂರ್ ಗೋಪಾಲರಾಯರವರು ಇನ್ಸ್ಪೆಕ್ಟರ್‌ಬುದ್ದಿಲ್ಲದೆ ಸಾಧಾರಣವಾದ ಪೋಷಕನೊಡನೆ ಮಹಾರಾಜರ ಸಮೀಪದಲ್ಲಿ ಕುಳಿತಿದ್ದರು. ಇದರ ಸಂಕೇತವೇನೊ ನಮಿಗೆಗೊತ್ತಾಗಲಿಲ್ಲವು. ಅದೇದಿನ ರಾತ್ರಿ ಭೋಜನಾನಂತರ ಮಹಡಿಯ ಮೇಲೆ ತಾಫೆ ಮೊದಲಾದವು ನಡೆದವು. ಆಕಾಲದಲ್ಲಿ ಮಹಾರಾಜರವರು ದಯಮಾಡಿದ್ದರು. ಮಹಾರಾಜರೂ ಮೆ॥ ನಂಜುಂಡರಾಜೇ ಅರಸಿನವರೂ, ಲಿಂಗಪ್ಪಾಜೀಅರಸಿನವರೂ ದಿವಾನರ ಮನೆಯಲ್ಲೇ ಭೋಜನಾದಿಗಳನ್ನು ನೆರವೇರಿಸಿಕ್ಕೊಂಡು ರಾತ್ರಿ ಹನ್ನೊಂದುಘಂಟೆಗೆ ಅರಮನೆಗೆ ದಯಮಾಡಿದರು. ಭಾನುವಾರದದಿನರಾತ್ರಿ ವಿವಾಹಿತರಾದ ವಧೂವರರಿಗೆ ವಿಶೇಷ ವಿಭವದೊಡನೆ ಮೆರವಣಿಗೆನಡೆಯಿತು. ಈ ಮೆರವಣಿಗೆಗಾಗಿ ಅಂಬಾರಿಯುಕ್ತವಾದ ಯೆರಡುಆನೆಗಳೂ ಪಾಲಖಿಯೂ ಇತರ ರಾಜಕೀಯಬಿರುದುಗಳೂ ಅರಮನೆಯಿಂದ ಬಂದವು. ಮೆರವಣಿಗೆಯು ಅರಮನೆಯ ಮುಂಭಾಗದೊಳು ಹೊರಟು ಕೋಟೆಯ ದಕ್ಷಿಣಬಾಗಿಲಮಾರ್ಗವಾಗಿ ಸುತೇಪೇಟೆಗೆ ಹೋಗಿ ಅಲ್ಲಿಂದ ದೊಡ್ಡಪೇಟೆಗೆಯೋಗುವದರೊಳಗಾಗಿ ಮಳೆಬಂದದರಿಂದ ವಾಪಸುಬರಬೇಕಾಯಿತು. ವಧೂವರರನ್ನು ಮಹಾರಾಜ್ಞೀಯವರ ಸಂದರ್ಶನಾರ್ಥ ಅರಮನೆಗೆ ಕರೆದುಕ್ಕೊಂಡುಹೋಗಿದ್ದಂತೆ ತಿಳಿಯಲಾದೆನು. ಇಷ್ಟು ವಿಭವದೊಡನೆ ಹಿಂದೆ ಯಾವವಿವಾಹವೂ ನಡೆಯಲಿಲ್ಲವೆಂದು ಜನಗಳು ಹೇಳಿಕೊಳ್ಳುತ್ತಾರೆ. ಐವಕ್ಕೆ ಸೇರಿದಂತೆ ದಿವಾನರ ಮನೆಯಲ್ಲಿ ಅವರ ಭಾವಮೈದನಿಗೆ ನಿನ್ನೆಯದಿನ ರಾತ್ರಿ ೧೧ಘಂಟೆಯಲ್ಲಿ ದ್ವಿತೀಯ ವಿವಾಹ ಕೇವಲ ಅಂತರಂಗವಾಗಿ ನಡೆಯಿತು.

ದೇವಪಾರ್ಥಿವರಾಜಾಬಹದೂರವರ ವಿಷಯಕವಾದ ವೃತ್ತಾಂತವು ಕತೆಗೆ ಜೀರೊಂದು ನಿಜರೂಪವನ್ನೈದಿತು. ಅದೇನೆಂದರೆ, ಮಹಾರಾಜ ಪುತ್ರಿಯಾದ ಜಯ ಕೃಷ್ಣಮ್ಮಣ್ಣಿಯವರ ವರ್ಷ ವರ್ಧಂತಿಯದಿನ, ಸಾಯಂಕಾಲ ರಾಜಾ ಬಹದೂರವರ ಮನೆಯ ಮುಂಭಾಗದಲ್ಲಿ ಮೆರವಣಿಗೆ ಹೋಗುತಲಿರುವಾಗ್ಯೆ ಅವರು ರಾಜಪುತ್ರಿಗೆ ಪುಷ್ಪಹುರಾಯಿ ಮುಂತಾದವು ಕೊಟ್ಟು ಅಷ್ಟಕ್ಕೆ ಸುಮ್ಮನಿರದೆ ಪ್ರೀತಿ ಸುತೋಷ ಪಾರವಶ್ಯತೆಯೊಡನೆ ಪಾಲಖಿಯೊಳಿದ್ದ ಮಗುವನ್ನು ಮುದ್ದಿಟ್ಟುಕೊಳ್ಳಲು ಆಗ ಸಮೀಪದಲ್ಲಿದ್ದ ಮೆ॥ನರಸಿಮ್ಹಯ್ಯಂಗಾರ್‍ರವರು ಆಕ್ಷೇಪಿಸಿದುದೆಯೂ, ಈಗ ವುಂಟಾಗಿರುವ ವೈಮನಸ್ಯಕ್ಕೆ ಇದೇಕಾರಣವೆಂತಲೂ ತಿಳಿಯಬರುತಿದೆ. ಈ ವಿಷಯವಾಗಿ ರಾಜಾ ಬಹದೂರನವರು ಬ್ರಿಟಿಷ್ ರೆಸಿಡೆಂಟರಿಗೆ ಈಚೆಗೆ ಒಂದು ಅರ್ಜೀ ಸಹ ಬರೆದುಕೊಂಡಿರುವಂತೆ ಇಲ್ಲಿ ಪ್ರವಾದ ವುಂಟಾಗಿದೆ.

ದಿವಾನ್ ಸೆಕ್ರೆಟರಿಯವರಾದ ಮೆ॥ ವಿಜಯರಂಗರಾಯರವರು ೨೦ ದಿನಗಳ ರಜಾ ಪಡೆದು ಸ್ವದೇಶಕ್ಕೆ ಹೊರಟುಹೋದರಾಗಿ ಅವರಿಗೆ ಬದಲು ಪ್ರೊಬೇಷನರ್ ಸಬ್‌ಡಿವಿಷನ್ ಆಫೀಸರ್ ಮೆ. ವಿ. ಪಿ. ಮಾಧವರಾಯರವರು ಮೊಕರರ್ರುಮಾಡಲ್ಪಟ್ಟರುತ್ತಾರೆ. ಅವರಕೆಲಸವನ್ನು ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆ॥ ಬಿ. ತಿರುಮಲಾಚಾರ್ಯರವರು ನೋಡುವಂತೆ ವ್ಯವಸ್ಥೆಯಾಗಿರುತಿದೆ.

ಶ್ರೀಮನ್ಮಹಾರಾಜರವರು ಸಕುಟುಂಬವಾಗಿ ಈಗ ಚಾಮುಂಡೀ ಬೆಟ್ಟಕ್ಕೆ ದಯಮಾಡಿದಾರೆ. ಕರ್ಣಾಟರಾಜಕುಲದ ಪೂರ್ವಪದ್ಧತಿಯನ್ನನುಸರಿಸಿ ರಾಜಪುತ್ರರಿಗೆ ಕುಲದೇವತೆಯ ಸನ್ನಿಧಿಯಲ್ಲಿ ನಾಮಕರಣೋತ್ಸವ ನಡೆಸಲ್ಪಡುವುದು. ಮಹಾರಾಜರವರು ಸಕುಟುಂಬವಾಗಿ ಇಷ್ಟದೇವತಾ ಸಂದರ್ಶನಾರ್ಥ ಹೋದದ್ದಿದೇ ಪ್ರಥಮವಾರ್ತಿಯಾಗಿರುತಿದೆ.

ರಾಯಬಹದೂರ್ ಗೋಪಾಲರಾಯರವರ ಕುಮಾರರು ಈಚ್ಗೆ ಕೆಲವು ದಿನಗಳಿಂದ ದಿವಾನರವರ ಮನೆಯಲ್ಲಿರುತಲಿದಾರೆ. ಒಂದು ನೌಕರಿಯು ಪಡೆಯುವ ಉದ್ದೇಶದೊಡನೆ ಅವರಿಲ್ಲಿರುತಲಿರುವಂತೆ ಪ್ರವಾದ ವುಂಟಾಗಿದೆ. ಹಾಗೆ ನಡೆಯುವದು ಅಸಾಧ್ಯವೂ ಅಲ್ಲವು. ವತ್ತು ಅಸಂಭಾವಿತವೂ ಅಲ್ಲವು. ಸಕಲಾಂತದಿಂದಲೂ ಮದರಾಸ್‌ಪ್ರಾಂತದವರ ಇಷ್ಟಾರ್ಥವೀಡೇರುವಕಾಲ ಈಗ ಪ್ರಾಪ್ತವಾಗಿರುವಾಗ್ಯೆ ಯಾವಮತಾನೇ ಲಭ್ಯವಾಗದೆ ಹೋಗುವದು ?

ಈವೂರಲ್ಲಿ ಅಡ್ಮಿನಿಸ್ಟ್ರೇಟರ್‌ಸಫೆಕೋರ್ಟ್ಟಿಂದ ಮೊಕರರ್ರಾಮಾಡಲ್ಪಡುವದು. ಈಚ್ಗೆ ಈಗ ಬೆಂಗಳೂರಲ್ಲಿರುವ ಮೆ॥ ನೈಬೆಯವರ ಕೋರ್ಟು ಇಲ್ಲಿಗೆ ವರ್ಗ ಮಾಡಲ್ಪಡುವದೆಂದು ತಿಳಿಯಬರುತಿದೆ. ಮೊದಲು ಕೋರ್ಟುಗಳನ್ನು ಮುನ್‌ತಾಖೆ ಮಾಡಿ ಮರಳಿ ನೆಲೆಗೊಳಿಸುವದರಿಂದ ಗವರ್ನ್‌ಮೆಂಟಿನವರ ಉದ್ದೇಶವೇನೋ ಗೊತ್ತಾಗುವದಿಲ್ಲವು. ಪರಂತು ಕಕ್ಷಿಗಾರರ ಶ್ರಮವು ತಪ್ಪದಲ್ಲವು.

ಮಾಹೆ ಮಜಕೂರ್ ೧೭ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರು ಇಲ್ಲಿಂದ ಬೆಂಗಳೂರಿಗೆ ದಯಮಾಡುವರೆಂದು ತಿಳಿಯಬರುತಿದೆ. ಅದಾಗ್ಯೂ ಅವರು ಈಸಲ ಮೂರುವಾರಗಳಿಗಿಂತ ಅಧಿಕವಾಗಿ ಅಲ್ಲಿರಲಾರರೆಂದು ತೋರುತಿದೆ.

ಮಾಹೆಮಜಕೂರ್ ೨ನೇ ತಾರೀಖಿನರಾತ್ರಿ ಮೆ॥ ದಳವಾಯಿ ದೇವರಾಜೇಅರಸಿನವರಿಗೆ ಪುತ್ರೋತ್ಸವವಾಗಿ ಬಾಣಂತಿ ಮತ್ತು ಮಗುವು ಸುರಕ್ಷಿತವಾಗಿದಾರೆ. ಮೈಸೂರುದೇಶಚರಿತ್ರೆಯೊಳು ವಿಶೇಷತಃ ಸಮೂಹಿಗೆಬಿದ್ದಿರುವ ದಳವಾಯಿಯವರವಂಶವು ಅಭಿವೃದ್ಧಿಯನ್ನೈದಬೇಕೆಂಬುದೇ ಪ್ರಜೆಗಳ ಅಂತರವಾದಕೋರಿಕೆಯಾಗಿರುತಿದೆ.

CORRESPONDENTS

ಮ॥ರಾ॥ ಕರ್ಣಾಟಕ ಪ್ರಕಾಶಿಕಾ ಎಡಿಟರಿಂ ಪ್ರತಿ — [illegible]

[illegible]

ಡಲ್ಲಿ, ಅವರು ಕಟನೀಲ್ ವಾರ ಜವಾಬನ್ನು ಬರೆಸಲಿಲ್ಲ. [illegible] ಕೇವಲ ನಿಮಗೆ ಅರಿಕೆ ಮಾಡಿದೇನೆ.

ತಾ॥ ೩೦—೬—೬೫. [illegible]

SUMMARY OF NEWS.

ವೃತ್ತಾಂತಸಂಗ್ರಹವು.

Reduction—ಬಂಗಾಳಿ, ಮುಂಬೈ, ಮದರಾಸ್ [illegible] —ಪ್ಲೇಟ್ಸ್‌ಮ್ಯಾನ್.

Four at a birth—[illegible]

Fatal accident—[illegible]

Portrait of the late Kristodass Pal—[illegible]

The fifty-five years order.—[illegible] —ಹಿಂದೂ.

Vaccination certificates—[illegible] —ಸ್ಟಾಂಡರ್ಡ್.

Public servant as landowners—[illegible]

The Nizam's return to Hyderabad—[illegible] —ಅಥೀನಿಯಂ.

A cobra killed by a dog—[illegible]

THE MYSORE GAZETTE

ಮೈಸೂರು ಗೆಜೆಟ್.

[illegible]

BANGALORE:—Printed and published for the Proprietor, at the KARNATIC PRESS—1865

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿನಿವಪ್ರವೃತ್ತ್ಯಪಗಮಾರ್ಪ್ಪಕರ್ಣಾಟಕಪ್ರಕಾಶನದರಾಧಿದಾಪ್ರತಿಪರಾಹಿತೀಪೊಪಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನ್ಮೈರ್ದ್ದಿತಾಸುವರಿಪೂಜಿತಾವಿಕತಿಮಾನಸಂಸು॥

Vol. XII] BANGALORE—MONDAY, JULY 13, 1885. [No. 28.

ಸಂಪುಟ ೧೨] ಬೆಂಗಳೂರು—ಸನ್ ೧೮೮೫ನೇ ಇಸವಿ ಜೂಲೈ ೧೩ನೇ ತಾರೀಖ್ ಸೋಮವಾರ. [ಸಂಚಿಕೆ ೨೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ ಮತ್ತು ಕನ್ನಡಸಹಿತ ತೆಗೆದುಕೊಳ್ಳುವವರಿಗೆ ವರುಷ ೧ಕ್ಕೆ	..	೧೨—೦—೦
ಇಂಗ್ಲಿಷ ಮಾತ್ರ ತೆಗೆದುಕೊಳ್ಳುವವರಿಗೆ ವರುಷ ೧ಕ್ಕೆ	... ..	೬—೦—೦
ಕನ್ನಡ ಮಾತ್ರ ತೆಗೆದುಕೊಳ್ಳುವವರಿಗೆ ಮಾಮೂಲ್ ಮೀರಿ ವರುಷ ೧ಕ್ಕೆ	.	೬—೦—೦
ತಿಂಗಳು	೧ಕ್ಕೆ	೧—೮—೦
ಸಂಚಿಕೆ	೧ಕ್ಕೆ	೦—೪—೦
ಹಿಂದಿನ ಸಂಚಿಕೆ	೧ಕ್ಕೆ	೦—೫—

ಷರಾ.—ಚಂದಾದಾರರು ಇಂಗ್ಲಿಷ ಭಾಗವನ್ನಾಗಲಿ, ಕನ್ನಡ ಭಾಗವನ್ನಾಗಲಿ [illegible] ತೆಗೆದುಕೊಳ್ಳಬಹುದು. [illegible]

ಪ್ರಕಟನೆಯ ವಿವಾಜ.

ಮೊದಲನೇದಫಾವಶ್ತಿ	೧ಕ್ಕೆ	೦—೨—೦
ಎರಡನೇದಫಾವಶ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇವರಕೆ ತಿಳಿಸ [illegible] ನಮ್ಮ ಚಂದಾದಾರರೆಲ್ಲರು ಮುಖ್ಯ [illegible] ಕೋರುತ್ತೇವೆ [illegible] —

೧. ಕರ್ಣಾಟಕ ಪ್ರಕಾಶಿಕೆಯ ಚಂದಾ [illegible]

೨. ನೋಟುಗಳ [illegible] ಅರ್ಧ ನೋಟು [illegible]

೩. [illegible]

೪. ಪ್ರಕಾಶಿಕೆಯ [illegible] ಡಿಸೆಂಬರ್ [illegible]

ಪ್ರಕಟನೆ.

ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲಿಷ [illegible] ಕನ್ನಡ [illegible] ಕೆಲಸಗಳು [illegible] ಮಾಡಿಕೊಡಲ್ಪಡುತ್ತೆ. [illegible] ಕ್ರೋಟ್ಟಿಯವರಿಗೆ [illegible] ಅವರು [illegible] ಮನೆಯೊಳ ಇರುತ್ತಾರೆ.

ನೋಟೀಸ್.

ಇವರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕೆ ತಾತ್ಪರ್ಯ ಸಹಿತವಾದ ಸಂಸ್ಕೃತ ಗ್ರಂಥಗಳು.

[illegible]	...	೧—೮—೦
[illegible]	...	೦—೧೨—೦
[illegible] (ಪಟ್ಟಾಂಭಿಷೇಕ)	...	೬—೩—೦
[illegible]		೦—೫—೦
[illegible]	..	೬—೪—
[illegible]	.. ...	೬—೧೨—೦
[illegible]	.	೦—೭—೦
[illegible]	... . .	೦—೨—೦
ವೈದ್ಯಸಾರಸಂಗ್ರಹ	.	೫—೬—೦

ಕನ್ನಡ ಗ್ರಂಥಗಳು

[illegible]	...	೦—೭—೧
[illegible]	.	೦—೪—೦
[illegible]	..	೦—೩—೬
[illegible]	... ...	೦—೨—೬
[illegible]	...	೦—೪—೧
[illegible]	..	೦—೨—೦
[illegible]	...	೦—೬—೬
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	... ...	೦—೨—೧
[illegible]	...	೦—೦—೯
ಇಂಗ್ಲಿಷ ಕನ್ನಡ [illegible]		೧—೧—
[illegible]	... .	೨—೦—೦
[illegible]	...	೦—೧೨—೦
[illegible]	..	೩—೪—೬
[illegible]	...	೩—೪—೬
[illegible] ಎಂಬ [illegible] ೧ನೇ ಸಂಚಿಕೆ.	...	೧—೮—೦
[illegible] ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	.. ...	೦—೩—೦
[illegible]	. .	೬—೯—೬
[illegible]	...	೦—೨—೬
[illegible]	...	೦—೨—೬
[illegible]	.	೦—೦—೯
[illegible]	...	೦—೩—೬
[illegible]	...	೦—೧—೦

[illegible]

NOTICE.

VAIDYASARASANGRAHA

☞ *Price including Postage, Rs 5 6 0*

[illegible]

[illegible]	..	ರೂ॥ ೫—೦—೬
ಪಾಕಿಂಗ್ ಮತ್ತು ಅಂಚೇಹಾಸಲ್		೦—೬—೦

ಟಿ ವಿ ವೆಂಕಟಾಚಾರ್, ಅಸ್ಸಿಸ್ಟೆಂಟ್ ಡಾಕ್ಟರ್, ಬೆಂಗಳೂರು

NOTICE

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೊ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇವಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷನಲ್ಲಿ ಪ್ರಚಾರಗೊಂಡಿರುವ ನಾವಿಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಪಾಠ್ಯವಾದದ್ದಾಗಿಯೂ ನವರಸ ಪರಿಪೂರ್ಣಚಿತ್ತರಂಜಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧—೮—೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ ತಿಂಗಯ್ಯ ಅಂಡ್ ಕೊ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

DIVYASURICHARITAM

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ದನ್ಮತಾಭಿಮಾನವುಳ್ಳವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಸಂಸ್ಕೃತ ಮಹಾ ಕಾವ್ಯರತ್ನವು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟು ವಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಹುಣಸೂರು ಅಸಿಸ್ಟೆಂಟ್ ಇಂಜನಿಯರ್ ಮೆ॥ ಎ. ಗೋವಿಂದಾಚಾರ್ಯರವರಿಗ ನೊಬ್ಬರಿಗು ಸಹಿತ ಬರೆದುಕೊಂಡರೆ ಪುಸ್ತಕ ಕಳುಹಿಸಲ್ಪಡುವದು.

ಅಪ್ಪಟಿಪದರದಾ ಪುಸ್ತಕ		೦—೧೪—೦
ದುಯ್ಯಂಪೇಪರದಾ	,,	೦—೧೨—೦
ಅಂಚೇಹಾಸಲ್	,,	೦—೨—೦

ಬೆಂಗಳೂರು ತಾ॥ ೭ನೇ ಜೂನ್ ೧೮೮೫

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 13, 1885.

೧೮೮೫ನೇ ಜೂಲೈ ೧೩ನೇ ತಾ॥ ಸೋಮವಾರ.

THE COPY RIGHT BILL.

ಈ ಇಂಡ್ಯದೇಶದ ಮೂರು ಪ್ರೆಸಿಡೆನ್ಸೀಗವರ್ನರಗಳಿಗೆ ಪ್ರತ್ಯೇಕವಾಗಿ ಮೂರು ನ್ಯಾಯವಿಧಾಯಕ ಸಭೆಗಳು ಏರ್ಪಟ್ಟಿರುವಂತೆ ಇಂಡ್ಯ ವೈಸ್‌ರಾಯಿಯವರಿಗೆಸಿದಪ್ರತ್ಯೇಕನ್ಯಾಯವಿಧಾಯಕಸಭೆಯೊಂದು ಇರುವ ಅಂಶ ಪ್ರಸಿದ್ಧವಾಗಿದೆಯಷ್ಟೆ. ಆಯಾ ಪ್ರೆಸಿಡೆನ್ಸೀ ಕೌನ್ಸಿಲರಿಗಳು ತಮ್ಮ ಆಧಿಪತ್ಯಕ್ಕೊಳಪಟ್ಟ ಪ್ರದೇಶಗಳಲ್ಲಿ ಮಾತ್ರ ಸ್ಥಳ ಅಮಲ್‌ಬಗ್ಗೆ ಬೇಕಾದ ನ್ಯಾಯ ನಿಬಂಧನೆಗಳನ್ನೇರ್ಪಡಿಸಿಕೊಂತಾಗ್ಯೂ ವೈಸ್‌ರಾಯಿಯವರ ಆಧಿಪತ್ಯವು ಸರ್ವತ್ರ ನೆಲಗೊಂಡಿರತಕ್ಕದಾಗಿಯೂ, ಅವರ ನ್ಯಾಯವಿಧಾಯಕ ಸಭೆಯವರಿಂದ ಮಾಡಲ್ಪಡತಕ್ಕ ನ್ಯಾಯನಿಬಂಧನೆಗಳು, ಸಾರ್ವಜನೀನವಾದ ಕ್ಷೇಮಾನುಕೂಲ್ಯಗಳಿಗಾಗಿಯೆಲ್ಲಪಡತಕ್ಕವಾಗಿಯೂ ಇರುತಿವೆ. ಹೀಗಿದ್ದಾಗ್ಯೂ ಸವರೀ ನ್ಯಾಯವಿಧಾಯಕ ಸಭೆಯವರುದ್ದೇಶಪ್ರಯತ್ನಗಳು ಕದಾಚಿತ್ ಪ್ರಜೆಗಳಿಗೆ ಸಾಕ್ಷಾತ್ತಾಗಿಯೂ, ಪರಂಪರೆಯಾಗಿಯೂ, ಸಾಮುದಾಯಕವಾಗಿಯೂ, ಏಕದೇಶಿಕವಾಗಿಯೂ ಯಿರುವ ಸಂಕಟಗಳನ್ನು ಹುಟ್ಟುಮಾಡತಕ್ಕವಾಗಿರುತಿವೆ. ಇದರದೆಸೆಯಿಂದ ನ್ಯಾಯವಿಧಾಯಕ ಸಭೆಯವರು ಪ್ರಜೆಗಳ ಯೋಗಕ್ಷೇಮಕ್ಕಿಂತಲೂ ಅವರ ಅನಾನುಕೂಲತೆಯೊಳು ವಿಶೇಷ ದೃಷ್ಟಿಯುಳ್ಳವರಾಗಿರುತ್ತಾರೆಂದುಹೇಳಬೇಕಾಗಿದೆ. ಈಗ ಸವರೀ ಸಭೆಯವರ ವಿಚಾರಕ್ಕೆ ಎರಡಂಶಗಳು ವಿಷಯಗಳಾಗಿವೆ, ಅವುಗಳ್ಯಾವವೆಂದರೆ,—ತಂತಿ ವೃತ್ತಾಂತಗಳ ಸ್ವಾತಂತ್ರ್ಯಸಂರಕ್ಷಕ ವಾದವೊಂದು, ಸಾಲದಬಗ್ಗೆ ಸಿವಿಲ್ ಜೈಲ್‌ನಲ್ಲಿಡುವದನ್ನು ಮೌಕೂಫ್ ಮಾಡಬೇಕೆಂಬದೊಂದು. ಇವುಗಳಪೈಕಿ ಮೊದಲನೆಯದು ಕೆಲವರಿಗೆಮಾತ್ರ ಸಂಬಂಧಪಟ್ಟದ್ದಾಗಿಯೂ ಎರಡನೆಯದು ಸಾಮುದಾಯಕವಾದದಾಗಿಯೂ ಇರುತಿದೆ. ಆದರೆ ನಾವೀಗ ಮೊದಲನೆಯ ಅಂಶವನ್ನು ಕುರಿತಿಲ್ಲಿ ಸ್ವಲ್ಪ ವಿಚಾರಮಾಡುವೆವು.

ನೇಟಿವ್‌ಗಳಿಗೆ ವಿಶೇಷಾಧಿಕಾರವನ್ನು ಕಲ್ಪಿಸುವ ವಿಷಯದಲ್ಲಿ ಹಿಂದೆ ಪ್ರಯತ್ನಪಟ್ಟಬಗ್ಗೆ ಶ್ವೇತದ್ವೀಪಿಗಳಾದವರ ಆಕ್ಷೇಪಣೆಗಳಿಗೆ ಪಾತ್ರರಾದ ಮೆ॥ ಇಲ್‌ಬರ್ಟಯವರಿಂದ ಈಚೆಗೆ ತಯಾರ್ಮಾಡಲ್ಪಟ್ಟ ಕಾಪೀರೈಟ ಮಸವಿದಾವಿಗೆ ಸಂಬಂಧಿಸಿದ ನ್ಯೂಸ್‌ಪೇಪರ್ ಟೆಲಿಗ್ರಾಂಗಳನ್ನು ಕುರಿತು ಇಂಡ್ಯ ಗವರ್ನಮೆಂಟನವರು ಪ್ರಜಾಭಿಪ್ರಾಯಗಳನ್ನಪೇಕ್ಷಿಸಲು, ಆವಿಷಯವಾಗಿ ಇಂಡ್ಯದೇಶದವೃತ್ತಾಂತಪತ್ರಿಕೆಗಳೆಲ್ಲ ಸಾಮಾನ್ಯೇನ ವಿಚಾರಮಾಡುತಲಿವೆ. ಪ್ರಸಕ್ತವಿರ್ಪ್ಪಾಗುಅಂಗ್ಲೋಇಂಡ್ಯನ್ ನ್ಯೂಸ್‌ಪೇಪರಗಳಿಗೆ, ತತ್ರಾಪಿ ಪ್ರತಿ ನಿತ್ಯವೂ ಪ್ರಾಯಿಷಾಗತಕ್ಕ ಇಂಗ್ಲಿಷ್‌ಪೇಪರಗಳಿಗೆಕೇವಲ ಅಭಿಮತವಾದದಾಗಿರುವದರಿಂದ ಅವುಗಳೆಲ್ಲವೂ

ಅದು ಪ್ರೋತ್ಸಾಹಿಸಿ ಮಾಡಿಸದಿರಲಿಲ್ಲವು. ಇತ್ತಲಾಗಿ ಸದರೀ ಯೇರ್ಪಾಡಿನಿಂದ ನಾನಾವಿಧ ನಿರ್ಬಂಧಗಳಿಗೆ ಒಳಪಡಬೇಕಾಗಿರುವ ನೇಟಿವ್ ವೃತ್ತಾಂತ ಪತ್ರಿಕೆಗಳು ಸದರೀ ಉದ್ದೇಶವನ್ನು ಬಹುವಿಧವಾಗಿ ಖಂಡಿಸಿ ಅನಾವಶ್ಯಕವಾದದ್ದಾಗಿಯೂ ಹಾನಿಕರವಾದದ್ದಾಗಿಯೂ ಇರುವ ಯೇರ್ಪಾಡೆಂದು ಅಭಿಪ್ರಾಯಪಡುತವೆ. ಇದು ಇಂಗ್ಲಿಷ್ ಡಯಿಲೀಪೇಪರ್‌ಗಳ ಪ್ರಚಾರವನ್ನು ವೃದ್ಧಿಪಡಿಸಲಿಕ್ಕೆ ಕಲ್ಪಿಸಲ್ಪಟ್ಟ ಉಪಾಯವೆಂದು ಬೆಂಗಾಲೀ ಎಂಬ ಪತ್ರಿಕೆಯು ತಾತ್ಪರ್ಯಪಡುತಿವೆ. ಹಿಂದೂ ಪೇಟ್ರಿಯಾಟ್‌ಪತ್ರಿಕೆಯು, ಪ್ರಸಕ್ತ ಏರ್ಪಾಡನ್ನು ಪ್ರೋತ್ಸಹಿಸತಕ್ಕವರ ವಾದವು ದುರ್ಬಲವಾದ್ದೆಂದು ಭಾವಿಸುತಿವೆ ಇಂಡ್ಯನ್ ನೇಷನ್ ಯೆಂಬ ಪತ್ರಿಕೆಯು, ನೂತನಕ್ರಮವನ್ನು ಜಾರೀಯೊಳು ತರುವದರಮೂಲಕ ಕೇವಲ ಸಂಕಟಕರವಾದ ಸಲ ಪುಂಟಾಗಲಿಕ್ಕೆ ಕಾರಣವಾಗುತವೆ ಯೆಂದು ಬೆಂತಿಸುತಿವೆ. ಇತರ ಪತ್ರಿಕೆಗಳು ಸಹ ಇದೇರೀತಿಯಾದ ಧ್ವನಿಯೊಡನೆ ಸ್ವಲ್ಪ ಹೆಚ್ಚು ಕಡಮೆಯಾಗಿ ತಮ್ಮತಮ್ಮ ತಾತ್ಪರ್ಯಗಳನ್ನು ವ್ಯಕ್ತಪಡಿಸಿರುತಿವೆ. ಇಂಡ್ಯಾನೇಷನ ವೃತ್ತಾಂತಪತ್ರಿಕಾಲೇಖಕರಲ್ಲಿಕೆ ಯರಡು ಕಕ್ಷಿಯವರಿಗೂ ಈ ವಿಷಯದೊಳು ಪುಂಟಾಗಿರುವ ತಾತ್ಪರ್ಯಭೇದವು ಪ್ರಬಲವಾದ್ದಾಗಿದೆ. ಯದ್ಯಪಿ ಈ ವಿಷಯದಲ್ಲಿ ಒಂದುಕಡೆ ಇಂಗ್ಲಿಷ್ ವೃತ್ತಾಂತಪತ್ರಿಕಾಭಿಪ್ರಾಯವೂ ಮತ್ತೊಂದುಕಡೆ ನೇಟಿವ್ ವೃತ್ತಾಂತಪತ್ರಿಕಾಭಿಪ್ರಾಯವೂ, ಬಿನ್ನಹಿಸಿರುವದರಿಂದ ಬಹುಸಂಖ್ಯೆಯುಳ್ಳವರ ತಾತ್ಪರ್ಯದಂತೆ ಗವರ್ನಮೆಂಟಿನವರು ನಡೆಯುವದು ಯೋಗ್ಯವೆಂದು ತೋರುತಿದೆ

ಇಂಗ್ಲಿಷ್ ಡೆಯಿಲೀಪೇಪರ್‌ಗಳೇ ನೇಟಿವ್ ವೃತ್ತಾಂತಪತ್ರಿಕೆಗಳಿಗೆ ಮುಖ್ಯಾಧಾರವೆಂದು ಹೇಳತಕ್ಕವರಮಾತನ್ನು ನಾವು ನಿರಾಕರಿಸುವದಿಲ್ಲವು. ಇಂಗ್ಲಿಷ್‌ಪತ್ರಿಕೆಗಳು ಸ್ವಂತ ಲಾಗವದಿನಿಂದಅನ್ಯದೇಶಗಳಿಂದ ತರಿಸತಕ್ಕ ತಂತಿವರ್ತಮಾನಗಳನ್ನು ಬೇಕಾದವರೆಲ್ಲ ಮನಸ್ವೀ ಪ್ರಕಟಿಸುವದರಮೂಲಕ ಅವುಗಳ ಪ್ರಯೋಜನಕ್ಕೂ ಪ್ರಚಾರಕ್ಕೂ, ನ್ಯೂನತೆ ಯುಂಟುಮಾಡುತ್ತಾರಾದ್ದರಿಂದಲೇ ಏತನ್ನಿಮಿತ್ತವಾದ ನಿಬಂಧವು ಆವಶ್ಯಕವೆಂಬದಾಗಿ ವಾದಿಸಲ್ಪಡಬಹುದು. ಈಗ ಒಬ್ಬನು ಚಂದಾಮಾಡಿ ಒಂದುಪತ್ರಿಕೆಯನ್ನು ತರಿಸಿಕೊಂಡರೆ ಅದನ್ನೋದತಕ್ಕವರು ಮೂವತ್ತು ನಾಲ್ವತ್ತುಮಂದಿ ಕೂಡುರುತ್ತಾರೆ. ಇದರಮೇರೆಯಿಂದ ಪತ್ರಿಕೆಯ ಪ್ರಯೋಜನವು ಭಂಗವನ್ನೈದುವದಕ್ಕೂ, ಅದರೊಳಗಣ ಸಾರವತ್ತಾದ ಭಾಗಗಳೆಲ್ಲವೂ ಪ್ರಸಿದ್ಧವಾಗಲಿಕ್ಕೂ ಕಾರಣವಾಗುತಿದೆಯೆಂಬ ಅಂಶವನ್ನು ಯಾರೊಬ್ಬರೂ ನಿಷೇಧಿಸಲಾರರು. ಇಂಥಾಸಂಕಟವು ನೇಟಿವ್ ವೃತ್ತಾಂತಪತ್ರಿಕೆಗಳಿಗೆ ಸಹವಿಪ್ಪಿದ್ದಲ್ಲವು. ಯೂರೋಪಿಯರ್ನಗಳು ಮಸಲಾ ಒಂದು ಪತ್ರಿಕೆ ತಮ್ಮ ಜಾತಿಯವರ ತಾತ್ಪರ್ಯಪ್ರಯೋಜನಗಳನ್ನು ಕುರಿತು ವಾದಿಸುತಿದೆಯೆಂದು ತಿಳಿದರೆ ಅದು ಪ್ರೋತ್ಸಹಿಸಬೇಕಾದ್ದು ತಮ್ಮ ಮುಖ್ಯಕರ್ತವ್ಯವೆಂದು ಭಾವಿಸುತ್ತಾರೆ. ನೇಟಿವ್‌ಗಳಂತವರಲ್ಲವು. ಯೂರೋಪಿಯರ್ನಗಳು ಸಾರ್ವಜನೀನವಾದ ಕ್ಷೇಮ ಮತ್ತು ಪ್ರಯೋಜನಾಪೇಕ್ಷೆಯೊಡನೆ ಅಂತಾಪತ್ರಿಕೆಯನ್ನು ಅಭಿವೃದ್ಧಿಗೆ ತರಬೇಕೆಂದೆತ್ನಿಸುತ್ತಾರೆ ನೇಟಿವ್‌ಗಳು ತಮತಮಗೆ ಸಂಬಂಧವಿಲ್ಲದ ವಿಷಯಗಳು ಪತ್ರಿಕೆಯಲ್ಲಿ ಕಾಣದೆಹೋದರೂ ಅದರಿಂದ ತಮ್ಮಮಟ್ಟಿಗೊಂದು ಪ್ರಯೋಜನ ಪುಂಟಾಗದಿದ್ದರೂ, ಅದು ನಿಷ್ಪ್ರಯೋಜನವಾದದ್ದೆಂತಲೂ ನೀರಸವಾದದ್ದೆಂತಲೂ ದೂಷಿಸಿ ಪತ್ರಿಕೆಯನ್ನು ನಿಲ್ಲಿಸಿಕೊಳ್ಳತಕ್ಕವರಾಗಿರುತ್ತಾರೆ.

ಇಂಗ್ಲಿಷಿನವರು ತಾವು ತರಿಸುವ ಪತ್ರಿಕೆಗಳ ಸಂಖ್ಯೆಗಿಂತಲೂ ಅಧಿಕವಾಗಿ ದ್ರವ್ಯಸಹಾಯವಮಾಡುತ್ತಾರೆ. ನೇಟಿವ್‌ಗಳು ತಾವು ಮಾಡತಕ್ಕದ್ರವ್ಯಸಹಾಯಕ್ಕಿಂತಲೂ ಶತಾಂಶ ಅಧಿಕಪ್ರಯೋಜನವನ್ನು ಅದರಿಂದ ನಿರೀಕ್ಷಿಸುತ್ತಾರೆ. ಯೂರೋಪಿಯರ್ನಗಳು ತಮ್ಮ ವಿದ್ಯಾಬುದ್ಧಿ ಪ್ರಾಗಲ್ಭ್ಯಗಳನ್ನು ವಿನಿಯೋಗಿಸುವದರಮೂಲಕ, ತಮ್ಮ ಕಕ್ಷಿಯನ್ನು ಹಿಡಿದು ವಾದಿಸತಕ್ಕ ಪತ್ರಿಕೆಗಳ ಸ್ವಾತಂತ್ರ್ಯವನ್ನೂ ಸ್ಥಿತಿಯನ್ನೂ ಅಭಿವೃದ್ಧಿಪಡಿಸತಕ್ಕವರಾಗಿರುತ್ತಾರೆ ನೇಟಿವ್‌ಗಳು ಅಂತವರುಗಳೇನಾದರೂ ಸ್ವಲ್ಪ ಪುಂಟಾದರೆ ತನ್ಮೂಲಕ ಪತ್ರಿಕೆಗಳ ವಾಗ್ಬಂಧನಮಾಡಿಸಿ ಆಜಿಸನ್ನು ಯಾವರೀತಿಯಿಂದಮುಚ್ಚಿಸಿ ಪತ್ರಿಕಾಧಿಪರನ್ನು ಒಂದು ಕ್ರಮಕ್ಕೊಳಪಡಿಸಬಹುದೆಂದಾಲೋಚಿಸತಕ್ಕವರಾಗಿರುತ್ತಾರೆ ಹೀಗೆಯೇ ಅನೇಕ ವೇದಗಳಿಂದ ನೇಟಿವ್ ವೃತ್ತಾಂತಪತ್ರಿಕೆಗಳ ಸ್ಥಿತಿಯು ಸಾಮಾನ್ಯವಾಗಿರುತಿದೆ, ಅಥವಾ ನಶಿಸಿಯಾದರೂ ಹೋಗುತಿದೆ ಇದರಿಂದರೇ ಅವುಗಳ ಆಯುಃಪರಿಮಿತಿಯು ಬಹಳ ಅಲ್ಪವಾಗಿ ಗರ್ಭದೊಳು ನಾಶವಾಗತಕ್ಕವು ಕೆಲವು, ಹುಟ್ಟಿದಕೂಡಲೇ ಹತ್ತರೊಡಬೇಕಾದವುಕೆಲವು, ತಲೆಯೆತ್ತುವಾಗ್ಯೆ ಸಾಯತಕ್ಕವುಕೆಲವು, ಹೀಗೆ ನಾಶವಾಗುವದಲ್ಲದೆ ಅಕಾಂಡವಾಗಿ ಮೃತ್ಯುಪ್ರಾಪ್ತವಾಗತಕ್ಕ ಉಪಾದಿವಶಾತ್ ಅನೇಕವಿದ್ದವಾಗುತಿವೆ

ಇಂತಾ ಪ್ರತಿಬಂಧಕಗಳೆಲ್ಲವೂ ತಪ್ಪಿ ಜೀವಿಸಿರತಕ್ಕ ಪತ್ರಿಕೆಗಳನ್ನು ಮೂಲೆಗಡಗಿಸಲಿಕ್ಕೆ ಪ್ರಸ್ತುತಪ್ರಯತ್ನವು ಸುಲಭೋಪಾಯವೆಂದು ಹೇಳಬಹುದಾಗಿದೆ. ನೇಟಿವ್‌ವೃತ್ತಾಂತಪತ್ರಿಕೆಗಳು ಬಹಳ ಪ್ರಾಚೀನ ವೃತ್ತವಾಗಿವೆಯೆಂದು ಇಂಗ್ಲಿಷ್‌ಪತ್ರಿಕೆಗಳು ತಿಳಿಸುತಿವೆ ಅಂತಾಪ್ರಾಚೀನವೇನಾದ್ದೆಂದರೆ, ಅನೇಕರಿಂದವು ಸುಲಭಸಾಧ್ಯವಾಗಿಪಡಲ್ಪಡುತಿವೆಯೆಂಬದುವಿನಾ ದ್ರವ್ಯಸಹಾಯ ಮಾಡಲ್ಪಡುತಿವೆಂಬದರೊಳ್ಳಲ್ಲವು ನೇಟಿವ್‌ಗಳಲ್ಲಿಯೂ, ಉತ್ಪನ್ನರಾದವರನೇಕರು ತಮ್ಮ ಪ್ರಾಶಸ್ತ್ಯಕ್ಕಾಗಿಯಾದರೂ ಇಂಗ್ಲಿಷ್‌ಪತ್ರಿಕೆಗಳನ್ನು ಪ್ರೋತ್ಸಾಹಗೊಳಿಸುತ ಅವು ಪರಿಗ್ರಹಿಸುತ್ತಾರೆ. ನೇಟಿವ್‌ವೃತ್ತಾಂತಪತ್ರಿಕೆಗಳ ಪ್ರಾಚೀನವನ್ನು ಅರ್ಥಸಹಾಯಮೂಲಕ ವೃದ್ಧಿಗೊಳಿಸಬೇಕಲ್ಲದೆ ಕಾಪೀರೈಟ್ ಆಕ್ಟಿನ ಮೂಲಕವಾದ ನಿರ್ಬಂಧದಿಂದಲ್ಲವು. ಮುಖ್ಯವಾಗಿ ಈಗೀಗ ತಲೆಯೆತ್ತುತಲಿರುವ ನೇಟಿವ್ ಪತ್ರಿಕೆಗಳ ಅಭಿವೃದ್ಧಿಯನ್ನು ತಡೆಯುವದರಮೂಲಕ ಅವರು ತಮ್ಮ ತಾತ್ಪರ್ಯವನ್ನೂ ಸುಖದುಃಖಗಳನ್ನೂ ಹೊರಪಡಿಸುವಷ್ಟು ಸ್ವಾತಂತ್ರ್ಯಯುಕ್ತರಾಗಿರಲಾಗದೆಂಬದೇ ನ್ಯಾಯವಿದಾಯಕ ಸರಕಾರದೊಳಗಣ ವೈಸರಾಯಿ ವಗರ್ನರ್ಜನರಲ್ಲವರ ಪರಂಪರೆ ಪ್ರಾಯವಾಗಿರಬಹುದೆಂದು ಪ್ರಜೆಗಳು ಏತನ್ಮೂಲಕ ಊಹಿಸಲಿಕ್ಕೆ ಅವಕಾಶ ಪುಂಟಾದದಕ್ಕೋಸ್ಕರ ಚಿಂತಿಸುವೆವು.

THE TRAGIC END OF A WEDDING

ಈಗ ಹಿಂದೂಗಳಲ್ಲಿ ನೆಲಗೊಂಡಿರುವ ಅನೇಕ ಪೂರ್ವಸಂಪ್ರದಾಯಗಳು ಹಿಂದೆ ಸಕಾರಣವಾಗಿ ಏರ್ಪಡಿಸಲ್ಪಟ್ಟವನಾಗಿದ್ದಾಗ್ಯೂ ತತ್ಕಾಲದಲ್ಲಿ ಅವು ಕೇವಲ ಅಸಂಬದ್ಧವೆಂದು ಜನಗಳಿಗೆ ತೋರದಿರುವದಿಲ್ಲವು ಮನುಷ್ಯನು ಪ್ರ್ಯಾಗಕಾಲಾನುಗುಣವಾಗಿ ಬದಲಾಯಿಸಲ್ಪಡತಕ್ಕವನಾಗಿದಾನೆಯೋ ಹಾಗೆಯೇ ಅವನಿಗೆ ಸಂಬಂಧಿಸಿದ ಸಕಲ ವ್ಯಾಪಾರಗಳೂ ಬದಲಾಯಿಸಲ್ಪಡತಕ್ಕವಾಗಿವೆ. ವಿವಾಹವೆಂಬದು ಕನ್ಯಾದಾನವೆಂತಲೂ, ಸಂತಾನಾಭಿವೃದ್ಧಿಗಾಗಿ ಮಾಡಿಕೊಳ್ಳತಕ್ಕ ಒಂದು ಕ್ರಿಯೆಯೆಂತಲೂ ನಾವು ಹೇಳದಾಗ್ಯೂ ಅದು ದಂಪತಿಗಳು ಪರಸ್ಪರ ಮಾಡಿಕೊಳ್ಳತಕ್ಕ ಪ್ರತಿಜ್ಞಾರೂಪವಾದದ್ದೆಂತಲೂ ಅನ್ಯೋನ್ಯವಿಂದುಂಟಾಗುವಸಂಬಂಧವೆಂತಲೂ ದಾರಾಳವಾಗಿ ಯೆಣಿಸಬಹುದಾಗಿದೆ. ಹೀಗಿರುವಲ್ಲಿ ಅನ್ಯಥಾ ಗ್ರಹಣವೂ ದುರ್ಮಾರ್ಗವರ್ತನವೂ ದುಷ್ಫಲಪ್ರದಗಳೆಂದು ಹೇಳಬೇಕಾದ್ದಿಲ್ಲವು. ಇದಕ್ಕೆ ನಿದರ್ಶನವಾಗಿ, ಮದರಾಸ್ ಆಂಧ್ರಪ್ರಕಾಶಿಕೆ ಯೆಂಬ ತೆನುಗುಪತ್ರಿಕೆ ತಿಳಿಸುವ ಇದರಡಿ ಕಂಡ ಅಂಶವನ್ನು ಯಾರು ಕೇಳದಾಗ್ಯೂ ಅವರು ಏತದ್ವಿದವಾದ ಮೌಢ್ಯಕ್ಕಾಗಿ ಅನುತಪಿಸದಿರಲಾರರು. ಅದೇನಂದರೆ,—ಗೋದಾವರೀ ಡಿಸ್ಟ್ರಿಕ್ಟಿಗೆ ಸೇರಿದ ನರಸಾಪುರಕ್ಕೆ ೭ ಮೈಲುಗಳ ಫಾಸಲೆಯಲ್ಲಿರುವ ಅಂತರ್ವೇದಿಯೆಂಬ ಗ್ರಾಮದಲ್ಲಿ ವಾಸವಾಗಿರುವ ಒಕ್ಕಲಿಗ ಜಾತಿಯವಳೊಬ್ಬಳು ತನ್ನಮಗಳಿಗೆ ವಿವಾಹಮಾಡಿ ಕಳೆದ ತಿಂಗಳ ೨೮ ಅಥವಾ ೨೯ನೇ ತಾರೀಖಿನಲ್ಲಿ ನಿಷೇಕಸಹ ಮಾಡಿಸಿದಳು. ಸದರೀ ಹುಡಿಗಿಯವಯಸ್ಸು ೧೨ ವರುಷಗಳಿಗಿಂತಲೂ ಅಧಿಕವಿಲ್ಲವು ಅವಳಗಂಡನಾದರೋ ಮೂವತ್ತು ವರುಷಗಳಗೊಳಪಟ್ಟವನಾಗಿದ್ದರೂ ಅವನು ಕ್ಷಯಜೀವಿಯಾದದರಿಂದ ಬಹಳ ಬಲಿಷ್ಠನಾಗಿಯೂ ದಾಸತಿ ಪೃಷ್ಟವನಾಗಿಯೂ ಇದ್ದನು. ಇವನು ತನಗೆ ನಿಷೇಕಮಾಡಿಸುವಂತೆ ಅತ್ತೆಯನ್ನು ಬಲಾತ್ಕರಿಸಿದ್ದರಿಂದ ಆಮುಗ್ದೆಯು ತನ್ನಮಗಳು ಅಪ್ರಾಪ್ತವಯಸ್ಕಳಾಗಿರುವದನ್ನು ಸಹ ಸ್ವಲ್ಪವೂ ಯೋಚಿಸದೆ ಅಳಿಯನ ದೌರಾತ್ಮ್ಯಕ್ಕೆ ಬದ್ಧಳಾಗಿ ಅವನ ಇಷ್ಟಾನುಸಾರ ನಡಿಸಲಿಕ್ಕೆ ಸಮ್ಮತಿಸಿ ಸದರೀಕಾರ್ಯವನ್ನು ಜರಿಗಿಸಿದಳು. ಬಳಿಕ ಸದರೀ ಹುಡಿಗಿಯು ಚಕಿತಳಾಗಿ ಅದುವೊದಲು ಯೆರಡು ದಿನಗಳು ರಾತ್ರಿಕಾಲದಲ್ಲಿ ಗಲಿಬಿಲಿ ಮಾಡುತಲಿದ್ದಳು ಹೀಗಿರುವಲ್ಲಿ, ಕಳೆದತಿಂಗಳ ೩೦ನೇ ತಾರೀಖಿನವಿನ ಆಹುಡಿಗಿಯನ್ನು ನೆರೆಹೊರೆಯವರು ಕರೆದುಕೊಂಡುಹೋಗಿ ಆದರಿಸಿ ತಮ್ಮಮನೆಯೊಳಿಟ್ಟುಕೊಂಡಿದ್ದರು ಆರಾತ್ರಿ ಸದರೀ ಹುಡಿಗಿಯತಾಯಿಯು ಅವರಮನೆಗೆಹೋಗಿ ಅವಳನ್ನು ಒಲಾತ್ಕಾರದಿಂದ ಕರೆದುಕೊಂಡುಬಂದು ಅವಳಿಗೆ ಭೋಜನಮಾಡಿಸಿ ಬಳಿಕ ಅವಳಂ ಶಯನಗೃಹಕ್ಕೆ ಯಥಾಪ್ರಕಾರ ಕಳುಹಿಸಲಿಕ್ಕೆತ್ನಿಸಲು ಆಹುಡಿಗಿಯು ತಾಯಿಯಕಾಟವ ತಡಿಯಲಾರದೆ ತಪ್ಪಿಸಿಕೊಳ್ಳಹೋದಳು. ಕೂಡಲೇ ತಾಯಿಯು ಅವಳನ್ನು ಹುಡುಕಿ ಅಳಿಯನವಶಕ್ಕೆ ಒಪ್ಪಿಸಿದಳು ಹಾ! ಅವಳನ್ನೆಷ್ಟು ಕಠಿಣಹೃದಯಳೆನ್ನಬೇಕು ಪೀತಳಾದಮಗಳನ್ನು ಸಾಂತ್ವಮಿಸದೆ ಕ್ರೂರಳಾಗಿ ರಾಕ್ಷಸಾಕೃತಿಯುಳ್ಳ ಪತಿಯನ್ನು ನೋಡಿಹೆದರುತಲಿದ್ದ ಮಗಳನ್ನು ಅವನವಶಕ್ಕೆ ಒಪ್ಪಿಸಿದಳಂತೆ ಕೂಡಲೇ ಆಕಿರಾತಕನು ತನ್ನಯುವತಿಯನ್ನು ಸಂಗಡಕರೆದುಕೊಂಡು ಶಯನಗೃಹಕ್ಕೆ ಹೋಗಿ ಬಾಗಿಲುಹಾಕಿಕೊಂಡನು ಆಗಹುಡಿಗಿಯಸ್ಥಿತಿ ಯಾವರೀತಿಯಾಗಿದ್ದಿರುವದೋ ಅದು ಈ ಪತ್ರಿಕೆಯನ್ನೋದತಕ್ಕವರೇ ಆಲೋಚಿಸಬಹುದು. ತರುವಾಯ ಕೆಲಹೊತ್ತಿನಮೇಲೆ ಹುಡಿಗಿಯು ಒಳಗಿನಿಂದಲೇ "ಸತ್ತೆನು, ಸತ್ತೆನು" ಎಂದು ಎರಡುಸಲ ಘಟ್ಟಿಯಾಗಿಕೂಗಿದಳು ಮನೆಯೊಳಗಿದ್ದವರಾಗಲಿ, ನೆರಹೊರೆಯವರಾಗಲಿ ಅದಕ್ಕೆ ಕಿವಿಕೊಡದೆಹೋದರು ಆರಾತ್ರಿ ಒಳಗೇನುನಡೆಯಿತೋ ಅದು ಶ್ರೀಹರಿಯೇಬಲ್ಲನು ಮಾರನೆಯದಿನಬೆಳಗ್ಗೆ ಸೂರ್ಯೋದಯವಾಗಿ ಬಹಳಹೊತ್ತಾದರೂ ಸದರೀಕೊಠಡೀಬಾಗಿಲು ತೆಗೆಯಲ್ಪಡದೆಯಿತ್ತು. ಬಳಿಕಮನೆಯವರೂ ಆಸಪಾಸಿನವರೂ ಸೇರಿ ಬಾಗಿಲುತೆಗೆದುನೋಡಲಾಗಿ ಪೂರ್ವದಿನ ರಾತ್ರಿ ಯೆಷ್ಟೋ ಅಸಮಾಧಾನದೊಡನೆ ಗೃಹಪ್ರವೇಶಮಾಡಿದನವದಂಪತಿಗಳಿಬ್ಬರೂ ಈಗ ಬಹಳ ಅನ್ಯೋನ್ಯದೊಡನೆ ಚಲಿಸದೆ ದೀರ್ಘನಿದ್ರೆಗೈಯುತಲಿದ್ದಂತೆ ತಿಳಿಯಬಂತು. ಬಳಿಕ ಸಮೀಪಕ್ಕೆಹೋಗಿ ನೋಡುವಲ್ಲಿ ಗಂಡನಕೊರಳಲ್ಲಿ ಒಂದುದಾರವಾದ್ದು ಕಂಡುಬಂದು ಅವರಶರೀರಗಳು ರಕ್ತದಿಂತೊಯಿದಿದ್ದವು ಇದಕ್ಕೆ ಕಾರಣವೇನಿರಬಹುದೆಂದೂಹಿಸಿ ನೋಡುವಲ್ಲಿ ಕ್ರೂರನಾದ ಪತಿಯ ಜುಲುಮನ್ನು ಸದರೀ ಹುಡಿಗಿಯು ತಡೆಯಲಾರದೆ ಮೃತಪಟ್ಟಿರಬಹುದೆಂತಲೂ ಅದುಕಂಡು ಅವನು ಸಹ ತನ್ನಪ್ರಾಣ ಪುಳಿಯಲಾರದೆಂದೇಣಿಸಿ ಸ್ವತಃ ನೇಣುಹಾಕಿಕೊಂಡು ಸತ್ತಿರಬಹುದೆಂತಲೂ ತೋರಬರುತಿದೆ. ಈ ಸಂದರ್ಭದಲ್ಲಿ ತಾಯಿಯ ಅವಿವೇಕವೂ ಗಂಡನ ವಿಷಯಾಸಕ್ತಿಯೂ ಸದರೀಹುಡಿಗಿಯ ಪ್ರಾಣಹಾನಿಗೆ ಕಾರಣವಾದಾಗ್ಯೂ ಅವಳಿಗಿಂತಾ ದುರ್ಗತಿ ಯುಂಟಾಗಲಿಕ್ಕೆ ಬಾಲ್ಯವಿವಾಹವೇ ಕಾರಣವೆಂದು ಈಗಿನವರು ಹೇಳದಿರಲಾರರು ಮುಖ್ಯವಾಗಿ ಕಾಲದೇಶಪ್ರಕೃತಿಗಳನ್ನನುಸರಿಸಿ ಜನಗಳು ವರ್ತಿಸಿದಾಗ್ಯೂ ಅನೇಕಪ್ರಮಾದಗಳು ಅವಕಾತ್ತಾಗಿ ಪ್ರಾಪ್ತವಾಗುತಿವೆ ಅಂತವುಗಳಿಗೆ ಸಹ ಪ್ರತಿಕ್ರಿಯೆಯು ಮಾಡಬೇಕಾದ್ದು ಸಹಜವಾಗಿದ್ದರೂ ಬುದ್ಧಿಮಾಂದ್ಯದಿಂದ ಮಾಡಿಕೊಳ್ಳತಕ್ಕ ಸ್ವಯಂಕೃತಾನರ್ಥಗಳು ಹ್ಯಾಗೆ ಅನಿಮಪಂಥಾಯಿಕಗಳಲ್ಲದೆಹೋಗುವವು

THE ARHAT SYSTEM No.—20

ಜೈನ್ಯ ಅಥವಾ ಆರ್ಹತದರ್ಶನವು

ಜೀವವು ಔಪಶಮಿಕ, ಕ್ಷಾಯಿಕ, ಮಿಶ್ರವೆಂಬ ಮೂರುವಿಧ ಸ್ಥಿತಿಗಳುಳ್ಳದ್ದಾಗಿರುತಿದೆ ಕೆಲವರು ಜೀವ ಆಕಾಶ ಧರ್ಮ, ಅಧರ್ಮ, ಪುದ್ಗಲವೆಂಬ ಐದು ಅಸ್ತಿಕಾಯಗಳನ್ನೂ ಇತರರು ಕೆಲವರು, ಜೀವ ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷವೆಂಬ ಸಪ್ತತತ್ವಗಳನ್ನೂ, ಅನ್ಯರು ಕೆಲವರು, ಪುಣ್ಯ ಪಾಪ ಕೂಡಿದ ಒಂಭತ್ತು ತತ್ವಗಳನ್ನು ಅಂಗೀಕರಿಸುತ್ತಾರೆ ಬಂಧವೆಂಬದು, ಪ್ರಕೃತಿ, ಸ್ಥಿತಿ, ಅನುಭಾವ ಪ್ರದೇಶವೆಂಬದಾಗಿ ನಾಲ್ಕುವಿಧವಾಗಿರುವದು ಪ್ರಕೃತಿಯು ಅಷ್ಟವಿಧವಾಗಿ ವಿಭಜಿಸಲ್ಪಟ್ಟು ಅವುಗಳಿಗೆ ಮೂಲ ಪ್ರಕೃತಿಯೆಂಬ ವ್ಯವಹಾರ ಪುಂಟಾಗಿರುತಿದೆ ಅವುಗಳ್ಯಾವವೆಂದರೆ, ೧ ಜ್ಞಾನಾವರಣ, ೨ ದರ್ಶನಾವರಣ, ೩ ವೇದನೀಯ ೪ ಮೋಹನೀಯ, ೫ ಆಯುಷ್ಯ, ೬ ನಾಮ, ೭ ಗೋತ್ರ, ೮ ಅಂತರಾಯ. ಇವು ಕ್ರಮವಾಗಿ ೫, ೯, ೨೮, ೪ ೨ ೯೩, ೨ ೧೫ ಪ್ರಭೇದಗಳುಳ್ಳವೆಂದು ವಾಚಕಾಚಾರ್ಯರೆಂಬವರು ನಿರ್ಧರಿಸುತ್ತಾರೆ ಗೋವಿಂದಾನಂದರೆಂಬವರಿಂದ ವಿರಚಿತವಾದ ಸೂತ್ರಭಾಷ್ಯದಲ್ಲಿ ಮೇಲೆಕಂಡ ಯೆಂಟು ಮೂಲಪ್ರಕೃತಿಗಳೂ ಅಷ್ಟಕರ್ಮಗಳೆಂಬದಾಗಿ ಕರೆಯಲ್ಪಟ್ಟಿವೆ. ಇವುಗಳೆಲ್ಲ ವಿದ್ಯಾನಂದ ಮೊದಲಾದ ಗ್ರಂಥಗಳಲ್ಲಿ ವಿಸ್ತಾರವಾಗಿ ತಿಳಿಸಲ್ಪಟ್ಟಿರುತಿವೆ ಪರಂತು ಗ್ರಂಥವಿಸ್ತಾರ ಭೀತಿಯಿಂದ ಅವುಗಳನ್ನಿಲ್ಲಿ ಬಿಟ್ಟಿರುವೆವು ಅಸಂಗವಾಗಿರುವ ಸಂವರವು ಗುಪ್ತಿಸಮಿತಿಯೆಂಬ ಯರಡುವಿಧವಾಗಿರುತಿದೆ. ಕಾಯವಾಙ್ಮನೋನಿಗ್ರಹ ಭೇದದಿಂ ಗುಪ್ತಿಯು ಮೂರುವಿಧಗಳುಳ್ಳದ್ದಾಗಿಯೂ ಈರ್ಯಾಭಾಷಾ ಭೇದಗಳಿಂದ ಸಮಿತಿ ಐದು ವಿಧಗಳುಳ್ಳದ್ದಾಗಿಯೂ ಇರುತಿವೆ. ಈವಿಷಯದಲ್ಲಿ ಹೇಮಚಂದ್ರಾಚಾರ್ಯರು ತಿಳಿಸಿರುತ್ತಾರೆ. ಏನಂದರೆ.

ಶ್ಲೋ॥ ಲೋಕಾತಿವಾಹಿತೇ ಮಾರ್ಗೇ ಚುಂಬಿ
ತೇ ಭಾಸ್ವದಂಶುಭಿಃ। ಜಂತುರಕ್ಷಾರ್ಥಮಾ
ಲೋಕ್ಯ ಗತಿರೀರ್ಯಾ ಮತಾ ಸತಾಂ ॥ ಅ
ವದ್ಯತ್ಯಾಗತಸ್ಸರ್ವಜನೀನಂ ಮಿತಭಾಷಣಂ।
ಪ್ರಿಯಾ ವಾಚಂಯಮಾನಾಂ ಸಾ ಭಾಷಾಸ
ಮಿತಿರುಚ್ಯತೇ। ದ್ವಿಚತ್ವಾರಿಂಶತಾ ಭಿಕ್ಷಾ
ದೋಷೈರ್ನಿತ್ಯಮದೂಷಿತಂ। ಮುನಿರ್ಯ
ದನ್ನಮಾದತ್ತೇ ಸೈಷಣಾಸಮಿತಿರ್ಮತಾ।
ಆಸನಾದೀನಿ ಸಂವೀಕ್ಷ್ಯ ಪ್ರತಿಲಿಖ್ಯ ಚ ಯ
ತ್ನತಃ। ಗೃಹ್ಣೀಯಾನ್ನಿಕ್ಷಿಪೇದ್ಧ್ಯಾಯೇತ್ಸಾ
ದಾನಸಮಿತಿಸ್ಮೃತಾ॥ ಕಫಮೂತ್ರಮಲ
ಪ್ರಾಯೈರ್ನಿರ್ಜಂತುಜಗತೀತಲೇ। ಯ
ತ್ನಾದ್ಯದುತ್ಸೃಜೇತ್ಸಾಧುಃ ಸೋತ್ಸರ್ಗಸ
ಮಿತಿರ್ಭವೇತ್॥

ಮೋಕ್ಷಶಬ್ದಾರ್ಥವೇಂಠೆನೆ—ಜನ್ಮ ಮತ್ತು ಬಂಧ ನಿಮಿತ್ತಕಗಳಾದ, ಸಮಸ್ತ ಕ್ಲೇಶಗಳೂ, ಅವುಗಳ ವಾಸನೆಯು ಸಹ ಜ್ಞಾನಾವರಣಗಳೊಡನೆ ಬಿಟ್ಟು ಹೋಗುವಣವೇ ಮೋಕ್ಷ ವೆಂಗರಿಯುವದು. ಬಂಧ ವಿಮೋಚನ ವಾದವೇಲೆ ಜೀವನಿಗೆ ಊರ್ಧ್ವಗ ತಿಯುಂಟಾಗುವರಿಕೆ. ಹ್ಯಾಗಂದರೆ,—ಕುಲಾಲಚಕ್ರ ಭ್ರಮಣಕ್ಕೆ ಸಹಕಾರಿಗಳಾದ ಪದಾರ್ಥಗಳ ವ್ಯಾಪಾರವು ನಿಂತುಹೋದ ಕಲವಾಯ, ಚ ಕ್ರವು ಸ್ವತಾಃ ವೇಗವು ನಿಂಗಿಹೋಗುವರನ ಇತರ ಸಹಾಯಗಳಿಂತಿಯುಲ್ಲದೆ ಅದು(ಕವು) ಹ್ಯಾ ಗೆ ಸ್ವತಃ ತಿರುಗುತ್ತಿ ನಿಲವದೋ ಅದರಂತೆ ಮೊದಲು ಜೀವನಿಂ ಮೋಕ್ಷಾರ್ಥ ಪಡೇಪದೇ ಮಾಡಲ್ಪಡತಕ್ಕ ಧ್ಯಾನವು ನಿಂತಮೇಲೆ ಸಹ ಅ ದರ ಬಲದಿಂದ ಊರ್ಧ್ವ ಗತಿಸಂಭವಿಸುವದು ಜಲದ ಕೂಡ ಸೇರಿದ ಮಣ್ಣಿನ ಲೇಪವು ಸೋಲರೆ, ಹಾಳವಂತೆ ಯು, ಬೀಪಜ್ವಾಲೆ ಉಂಟಾಗಲು ಊರ್ಧ್ವಗತಿ ಯಿಲ್ಲಾಗುವಂತೆ ಯೂ, ಜೀವನ ಬಂಧ ವಿಮೋಚನವಾದ ಕೂಡಲೇ ಸಂಕಬೋ ಧ್ವಗನ ವುಂಟಾಬವನು ಹ್ಯಾಗಂದರೆ.

ಶ್ಲೋ ॥ ಗತ್ವಾಗತ್ವಾನಿವರ್ತಂತೇಚಂದ್ರ ಸೂರ್ಯಾದಯೋಗ್ರಹಾಃ । ಅದ್ಯಾಪಿ ನ ನಿವರ್ತಂತೇ ತ್ವಲೋಕಾಕಾಶಮಾಗತಾಃ ॥

ಅರ್ಹತರೆಂಬ ಈ ಸ್ಯಾದ್ವಾದನ ಸಪ್ತಭಂ ಗಿ ನ್ಯಾಯವನ್ನು ಇದರಡಿ ತಿಳಿಯುವೆವು ಹ್ಯಾಗಂ ದರೆ—

೧ ಸತ್ತು
೨ ಅಸತ್ತು
೩ ಸದಸತ್ತು
೪ ಸದಸದ್ವಾಚ್ಯಂ ಉಂ ತಾ
೫ ಅಸದ್ವಾಚ್ಯಂ ಎಂ ಉತಾ
೬ ಸದಸದನಿರ್ವಚನೀಯ ತಾ
೭ ಅನಿರ್ವಚನೀಯ ತಾ

ಈ ಯೇಳೂ ಇವಾದಿಕ್ರಮ ಕ್ರಿಯಿಂದ ನಿರ್ ಪಿಸಲ್ಪಟ್ಟ ಗುರಿವೆ.

೧ ಸ್ಯಾದಸ್ತಿ
೨ ಸ್ಯಾನ್ನಾಸ್ತಿ
೩ ಸ್ಯಾದಸ್ತಿಚ ನಾಸ್ತಿಚ
೪ ಸ್ಯಾದಸ್ತಿಚಾವಕ್ತವ್ಯಃ
೫ ಸ್ಯಾನ್ನಾಸ್ತಿಚಾವಕ್ತವ್ಯಃ
೬ ಸ್ಯಾದಸ್ತಿಚ ನಾಸ್ತಿಚಾವಕ್ತವ್ಯಃ
೭ ಸ್ಯಾದವಕ್ತವ್ಯಃ

ಈ ಪಕರಣವು ಸ್ಯಾದ್ವಾದದ ಸಂಗ್ರಹ ಮುಂ ಚಿದ ಗ್ರಂಥಗಳಲ್ಲಿ ವಿವರವಾಗಿ ತಿಳಿಸಲ್ಪಟ್ಟಿದೆ. ಯಾರು ಅವುಗಳಿಂ ನೋಡಿದರೆ ಸ್ಪಷ್ಟವಾಗುವದು

ಇತರ ಸೌಗತ ದರ್ಶನಗಳೂ ನಾಸ್ತಿಕ ದಿಕ್ಕವಾಗಿಯೂ ಪರಸ್ಪರ ಆಕ್ಷೇಪ ಸಮಾಧಾನ ಗಳುಳ್ಳವಾಗಿ ಯೂ ಇರುವ ವ್ಯಕ್ತ ಕುವರಿಂಗೂ ಶಾವು ಗಿಸಿದ ಅರ್ಹತ ಮತವು ನಿಸ್ಪೃಹನೊಳಿ ಸಾಧ್ವೀಯ ಯೂ ನಿರ್ದ್ವಂದ್ವ ದಿಗ್ ಸವಾದ್ವಾದ ಯೂ ಯುಕ್ತಿ ದೆಯ ಗಿ ಇತರ ಸಿದ್ಧಾಂತನವನ್ನು ಪ್ರತಿ ಮನುಷ್ಯನಾಗಿ ಗಿಯು ಪಠೀಯಿಸುವ ಯೋಗ್ಯವಾಗಿ ಇವರೆಂದ ರೆ ಗಳು ಇವರಡಿ ಕಂಡ ಶ್ಲೋಕಾರ್ಥವನ್ನು ಜ್ಞಾ ಪಕಮಾಡಿಕೊಳ್ಳುವರಂದರೆ ಇತರ ಕಷ್ಟಕ್ಕೆ ಸುಲಭವಾಗಿ ವ್ಯಕ್ತನಾಗುವದು, ಜೀವದ ಕಿಯಾ ಶಮೆಂಬವರಿಂದ ಶ್ಲೋಕ ರೂಪವಾಗಿ ತಿಳಿಸಲ್ಪಟ್ಟಿ ರುವ ಈ ಸಿದ್ಧಾಂತ ಸಂಗ್ರಹವನ್ನದರಡಿ ತಿಳಿಯು ವೆನೆಂತೆನೆ;—

ಶ್ಲೋ ॥ ಅನೇಕಾಂತಾತ್ಮಕಂ ವಸ್ತುಗೋಚರ ಸ್ಸರ್ವಸಂವಿದಾಂ ।ಏಕದೇಶವಿಶಿಷ್ಟೋರ್ಥೋ ನಯಸ್ಯಃ ಪಯೋಮತಃ ॥ ನ್ಯಾಯಾನಾಮೇ ಕನಿಷ್ಠಾನಾಂ ಪ್ರವೃತ್ತೌ ಶ್ರುತವರ್ತ್ಮನಿ ಸಂ ಪೂರ್ಣಾರ್ಥವಿನಿಶ್ಚಾಯಿ ಸ್ಯಾದ್ವಸ್ತುಶ್ರುತ ಕಿಮುಚ್ಯತೇ ॥ ಅನ್ಯೋನ್ಯಪಕ್ಷಪ್ರತಿಪಕ್ಷ ಭಾವಾದ್ಯಥಾಪರೇಮತ್ಸರಿಣಃಪ್ರವಾದಾಃ । ನಯಾನಶೇಷಾನ ವಿಶೇಷಮಿಚ್ಛನ್ನಪಕ್ಷಪಾ

ತೀಸಮಯಸ್ತಥಾರ್ಹತಃ ॥ ಬಲಶೋ ಗೋಪ ಶೋಗಾನಾಮುಭಯೋಸ್ತಾನಲಾಭ ಯೋಃ । ಅಂತರಾಯಸ್ಥಾನಿದಾಶ್ಚೀ ರಜ್ಞಾನಂಜುಗುಪ್ಸಿತಂ ॥ ಹಿಂಸಾರತ್ಯರತೀ ಗಾಗ ದ್ವೇಷಾವಿರತಿಸ್ಮರಃ । ಶೋಕೋ ಮಿಥ್ಯಾತ್ವಮೇತೇಷ್ಟಾದಶ ದೋಷಾನಯ ಸ್ಯಸಃ ॥ ಜಿನೋದೇವೋಗುರುಸ್ಸಮ್ಯಕ್ತತ್ವ ಜ್ಞಾನೋಪದೇಶಕಃ । ಜ್ಞಾನದರ್ಶನಚಾರಿ ತ್ರಾಣ್ಯಪವರ್ಗಸ್ಯವರ್ತನಿ ॥ ಸ್ಯಾದ್ವಾದಸ್ಯ ಪ್ರಮಾಣೇ ದ್ವೇಪ್ರತ್ಯಕ್ಷಮನುಮಾಪಿ ಚ ನಿ ತ್ಯಾನಿತ್ಯಾತ್ಮಕಂ ಸರ್ವಂ ನವತತ್ತ್ವಾನಿ ಸ ಪ್ತವಾ ॥ ಜೀವಾ ಜೀವೌ ಪುಣ್ಯಪಾಪೇಚಾಸ ವ ಸ್ಸಂವರೋಪಿಚ । ಬಂಧೋನಿರ್ಜರಣಂ ಮು ಕ್ತಿರೇಷಾಂ ವ್ಯಾಖ್ಯಾಧುನೋಚ್ಯತೇ ಚೇತನಾ ಲಕ್ಷಣೋಜೀವಸ್ಸ್ಯಾದಜೀವಸ್ತದನ್ಯಕಃ ॥ ಸ ತ್ಕರ್ಮಪುದ್ಗಲಾಃ ಪುಣ್ಯಂ ಪಾಪಂತಸ್ಯವಿ ಪರ್ಯಯಃ ॥ ಆಸ್ರವಃ ಶ್ರೋತ್ರಬಂಧೋ ಸ್ಯಾನ್ನಿರ್ಜರಾ ಸಂವರೋ ಭವತಿ ॥ ಆಪ್ರವನಿರೋಧಸ್ತು ಸಂವರಸ್ಸಪ್ರಮಾಣಿತಃ ॥ ಪ್ರವೇಶಃ ಕರ್ಮಣಾಂ ಜೀವಾತ್ ಸಂಸರಾಪೇಕ್ಷಣಃ । ಸ್ಥಿತಿಬದ್ಧ ಸ್ಯ ಕರ್ಮಣಾ ನಿರ್ಜರಾ ಸಾ ತಪೋಭಿಃ ॥ [illegible] ನಿರ್ಜರಾ ತ್ಪುನಃ । ಸುಕರ್ಮಾ ಬಂಧತಃ ॥ ಬಂಧಃ ಜೀವಸ್ಯ ಕರ್ಮಯೋಗ್ಯ ಪುದ್ಗಲಾದಾನಂ ಬಂಧಃ ಸ ಉಚ್ಯತೇ । ಮಿಥ್ಯಾದರ್ಶನಾವಿರತಿ ಪ್ರಮಾದ ಕಷಾಯ ಯೋಗಾ ಬಂಧಹೇತವಃ । ಬಂಧಹೇತ್ವಭಾವ ನಿರ್ಜರಾಭ್ಯಾಂ ಕೃತ್ಸ್ನಕರ್ಮ ವಿಪ್ರಮೋಕ್ಷೋ ಮೋಕ್ಷ ಇತಿ ॥ [illegible] ಊರ್ಧ್ವಂ ಗಚ್ಛತ್ಯಾಲೋಕಾಂತಾತ್ ॥ ತದನಂತರಮೂರ್ಧ್ವಂ ಗಚ್ಛತ್ಯಾಲೋಕಾಂತಾತ್ ಪೂರ್ವಪ್ರಯೋಗಾದಸಂಗತ್ವಾದ್ಬಂಧಚ್ಛೇದಾತ್ತಥಾಗತಿಪರಿಣಾಮಾಚ್ಚ । [illegible] ತಥಾ ಗತಿಪರಿಣಾಮಾಚ್ಚೇತಿ

ನ ವು ಮೋಕ್ಷಲಕ್ಷಣ ಬೌದ್ಧಮತವೂ ಪ್ರಸಕ್ತ, ಜೈಮಿನೀಯ ಕೇವಲ ಸನ್ನಿಧಿಕ ಸಂಬಂಧಪ ಇವಂತೆ ಯೂ, ಬುದ್ಧ ಶಿಷ್ಯರಿಂದೊಂದಾದ ಮ ತಾ ದೇಶದಿಂದ ಸನ್ನಿಹಿತ ಪರ್ವಮಾನ ತೀರ್ಥಂಕರರಿಂ ಬಧಿದಾಸದೊಡನೆ ಅರ್ಹತ ಪರಪ್ರತಿರ್ಥಕರ ನಾ ಕೇವಲಟ್ಟು ಅದರ ಪ್ರತಿಪಾದಕ್ಕೆ ಕಂದರಂತೆ ಯೂ ಪರ್ವವೇ ಸೂಚಿಸಿದ್ದೇವೆ. ಪವೇಶ ಸಂವರಂ ಗ್ರಂಥದಲ್ಲಿ ಇಂಗಡಿಕಂಡ ಶ್ಲೋಕಗ ಳಮೂಲಕ ಬೌದ್ಧರ ತತ್ವಾರ್ಥವು ಸಂಗ್ರಹ ವಾಗಿ ತಿಳಿಸಲ್ಪಟ್ಟಿರುವದರಿಂದ ಇದನ್ನೂ ಅರ್ಹ ತ ದರ್ಶನವೂ ಯುಕ್ತ ರಾಜಕೀಯವನ್ನು ಸುಲ ಭವಾಗಿ ತಿಳಿಯುವಂತೆ ಸಂಕ್ಷೇಪಿಸಲಡುವು

ಶ್ಲೋ॥ ಬೌದ್ಧಾನಾಂಸುಗತೋದೇವೋ ವಿಶ್ವಂ ಚಕ್ಷಣಭಂಗುರಂ । ಆರ್ಯಸತ್ಯಾಖ್ಯಯಾ ತತ್ವ ಚತುಷ್ಟಯಮಿದಂ ಕ್ರಮಾತ್ ॥ ದುಃಖ ಮಾಯತನಂ ಚೈವ ತತಸ್ಸಮುದಯೋ ಮತಃ । ಮಾರ್ಗಶ್ಚೇತ್ಯಸ್ಯ ಚ ವ್ಯಾಖ್ಯಾ ಕ್ರಮೇಣ ಶ್ರೂಯತಾಮತಃ ॥ ದುಃಖಸಂಸಾರಿಣಃ ಸ್ಕಂಧಾಸ್ತೇಚ ಪಂಚಪ್ರಕೀರ್ತಿತಾಃ । ವಿ ಜ್ಞಾನಂ ವೇದನಾ ಸಂಜ್ಞಾ ಸಂಸ್ಕಾರೋ ರೂಪ ಮೇವಚ ॥ ಪಂಚೇಂದ್ರಿಯಾಣಿ ಶಬ್ದಾದ್ಯಾ ವಿಷಯಾಃ ಪಂಚ ಮಾನಸಂ । ಧರ್ಮಾಯತ ನಮೇತಾನಿ ದ್ವಾದಶಾಯತನಾನಿ ತು ॥ ರಾ ಗಾದೀನಾಂ ಗಣೋ ಯಸ್ಮಾತ್ ಸಮುದೇ ತಿ ನೃಣಾಂ ಹೃದಿ । ಆತ್ಮಾತ್ಮೀಯ ಸ್ವಭಾವಾ ಖ್ಯಃ ಸ ಸ್ಯಾತ್ಸಮುದಯಃ ಪುನಃ ॥ ಕ್ಷಣಿಕಾಃ ಸರ್ವ ಸಂಸ್ಕಾರಾ ಇತಿ ಯಾ ವಾಸನಾ ಸ್ಥಿ ರಾ । ಸ ಮಾರ್ಗ ಇತಿ ವಿಜ್ಞೇಯಃ ಸ ಚ ಮೋ ಕ್ಷೋಭಿಧೀಯತೇ ॥ ಪ್ರತ್ಯಕ್ಷಮನುಮಾನಂ ಚ ಪ್ರಮಾಣದ್ವಿತಯಂ ತಥಾ । ಚತುಃ ಪ್ರಸ್ಥಾನಿಕಾ ಬೌದ್ಧಾಃ ಖ್ಯಾತಾ ವೈಭಾಷಿ ಕಾದಯಃ ॥ ಅರ್ಥೋ ಜ್ಞಾನಾನ್ವಿತೋ ವೈ

ಭಾಷಿಕೇಣ ಬಹುಮನ್ಯತೇ । ಸೌತ್ರಾಂತಿ ಕೇನ ಪ್ರತ್ಯಕ್ಷಗ್ರಾಹ್ಯೋರ್ಥೋ ನ ಬಹಿರ್ಮ ತಃ ॥ ಆಕಾರಸಹಿತಾ ಬುದ್ಧಿರ್ಯೋಗಾಚಾ ರಸ್ಯ ಸಂಮತಾ । ಕೇವಲಾಂ ಸಂವಿದಂ ಸ್ವ ಸ್ಥಾಂ ಮನ್ಯಂತೇ ಮಧ್ಯಮಾಃ ಪುನಃ ॥ ರಾಗಾ ದಿಜ್ಞಾನ ಸಂತಾನ ವಾಸನಾಚ್ಛೇದ ಸಂಭವಾ । ಚತುರ್ಣಾಮಪಿ ಬೌದ್ಧಾನಾಂ ಮುಕ್ತಿರೇಷಾ ಪ್ರಕೀರ್ತಿತಾ ॥ ಕೃತ್ತಿಃ ಕಮಂಡಲುರ್ಮೌಂ ಡ್ಯಂ ಚೀರಂ ಪೂರ್ವಾಹ್ಣಭೋಜನಂ । ಸಂ ಘೋ ರಕ್ತಾಂಬರತ್ವಂ ಚ ಶಿಶ್ರಿಯೇ ಬೌದ್ಧಭಿಕ್ಷುಭಿಃ ॥ ಶ್ಲೋ ॥ "ನಮೋಜಿತಾಯತ್ರಿಜಗಾರ್ಚಿತಾ ಯವಿನಷ್ಟದೋಷಾಯ ಗುಣಾರ್ಣವಾಯ ವಿಮುಕ್ತಿಮಾರ್ಗಪ್ರತಿಬೋಧನಾಯದೇವಾ ಧಿದೇವಾಯನಮಸ್ಸ್ವಯಂಭುವೇ॥" * *

ಆರ್ಹತದರ್ಶನ ಸಮಾಪ್ತವು.

Occasional Notes
ನೈಮಿತ್ತಿಕ ವಿಷಯನ್ಯಾಸ.

Reinforcements from Cabul —ಹಿರಾತ್ ಶಹರಿನ ಬಂದೋಬಸ್ತಿಯಬಗ್ಗೆ ಕಂ ದಹರಿನಿಂದ ಅಲ್ಲಿಗೆ ಕಳುಹಿಸಲ್ಪಟ್ಟ ಸೈನ್ಯಕ್ಕೆ ಜ ದಲು ಕಾಬೂಲ್‌ನಿಂದ ಕಳುಹಿಸಿವರೇನಾದು ಹು ರಾತಿಗೆ ಕ ರ ಸಮೀಪದಲ್ಲಿ ಹೋಗುತಲಿರು ವುದೆ ಅಲ್ಲಿಗೆ ವರ್ತಮಾನ ತಲಿಪಿಪಿರುತದೆ.

A degree conferred —ಮೈಸೂರಾಯಿಯವ ರ ಮುಂಚ್ರಾಜೂಚಕ ಸರಾಜದ ಸಾಬಕ್ ಮುಂ ಬರಾದ ಮಿ। ಸ್ಟ್ರಿಟ್ಲಕೊಹೆಡ್, ಸಿ. ಎಸ್. ಐ., ಸಿ. ಐ. ಇ. ಅವರಿಗೆ ಎಡಿನ್ ಬ್ರೊ ವರ್ಸಿಟಿ ಯೂನಿ ವರ್ಸಿಟಿ ಪಾಠಶಾಲಾಧಿಕಾರಿಗಳು ಗೌರವಾ ರ್ಥ ಎಲ್. ಎಲ್. ಡಿ. ಯೆಂಬ ಪ್ರಶಸ್ತಿಯಂ ಕೊ ಟ್ಟಿದ್ದಾರೆ.

News from Herat —ಈಚೆಗೆ ಅವಾದು ಕರವಾದ ರೋಗೂಪದ್ರವಗಳು ವೃದ್ಧಿಯಾಗ ಲು ಕುಷ್ಕಯೆಂಬ ಪ್ರದೇಶದಿಂದ ರಷಿಯಾಸೇನೆ ಯಸ್ಸೈಕೆ ಒಂದುಭಾಗವು ಅದರಿಂದ ಮೇಲ್ಗಡೆಗೆ ಕರೆಯಿಸಿಕೊಳ್ಳಲ್ಪಟ್ಟದ್ದಾಗಿ ಹಿರಾತ್‌ಪ್ರಾಂತದಿಂ ದ ಮರಳಿ ತಿಳಿಯುತಿದೆ.

Want of rain —ಈಸಲ ಮುಂಬೈ ಪ್ರಸಿ ಡೆನ್ಸಿಯಸ್ಸೈತಿ ಅನೇಕ ದಿಸ್ಟ್ರಿಕ್ಟುಗಳಲ್ಲಿ ಅ ಲ್ಪವೃಷ್ಟಿಯದೆಸೆಯಿಂದ ವ್ಯವಸಾಯಕಲಸಗಳಿ ಗೆ ಅತಂಕವುಂಟಾಗಿರುವದಲ್ಲದೆ ಕೆಲವು ಡಿಸ್ಟ್ರಿ ಕ್ಟುಗಳಲ್ಲ ಕುಡಿಯುವನೀರೂ ಮೇವೂ ಇದುವ ರಿಪಗೇಶಃ ದುರ್ಲಭವಾಗಿರುತಿದೆ

A meeting —ಈಚಗೆ ಕಲ್ಕತ್ತೆಯ ಟವ್ ನ್‌ಹಾಲ್‌ದಲ್ಲಿ ಪ್ರಜೆಗಳು ಸಮಾಜಸೇರಿ, ಕ ಲ್ಕತ್ತಾ ಮತ್ತು ಅದಕ್ಕೆಸೇರಿದ ಉಪನಗರ ಮಗಳ ಮ್ಯುನಿಸಿಪಲ್ ಕಲಾವೆಗಳನ್ನು ಒಂದಾ ಗಿ ಸೇರಿಸತಕ್ಕವದೆಂದು ಆಕ್ಷೇಪಿಸಿ ಬಂಗಾಳೇ ಗ ವರ್ನಮೆಂಟಿಗೆ ಅರ್ಜೀ ಬರೆದುಕೊಳ್ಳತಕ್ಕದ್ದೆಂ ದು ನಿರ್ಣಯಿಸಿದರು .

An expenditure sanctioned.—ಕಳೆದ ಡಿಸಂಬರ್ ತಿಂಗಳೊಳು ಪುದುಚ್ಚೇರಿ ಪ್ರಾಂತದ ಲ್ಲಿ ಆದ ಅತಿವೃಷ್ಟಿಯ ದೆಸೆಯಿಂದ ಪ್ರಜೆಗಳಿಗೆ ವುಂಟಾದ ನಷ್ಟಗಳಿಗೆ ಈಡುಮಾಡುವದಕ್ಕಾಗಿ ಯೂ ಇತರ ರಿಪೇರಿಗಳಬಗ್ಗ್ಯೂ ಖರ್ಚುಮಾಡು ವಂತೆ ಫ್ರಾಂಚ್‌ರಾಜ್ಯದ ಮಂತ್ರಿಸಾಮಾಜಿಕರು ಮ ರಳಿ ಐದುಲಕ್ಷ ಫ್ರಾಂಕ್ (ಫ್ರಾಂಕು ೧ಕ್ಕೆ ೭ಆಣೆ ೧ಪೈ) ಮಂಜೂರ್‌ಮಾಡಿರುವಂತೆ ಪುದುಚ್ಚೇರಿ ಯಿಂದ ತಿಳಿಯಬರುತಿದೆ.

News from Meshed —ಮೆಷೆದ್‌ಯೆಂಬ ಶಹರ್‌ನಿಂದ ಈತಿಂಗಳ ಗುರ್ನೇತಾರೀಖಿನಲ್ಲಿ ತಂ ತಿಮೂಲಕ ತಿಳಿಯಬರುವದೇನೆಂದರೆ,—ಪಂಜ್ ಡೇಯೆಂಬ ಶಹರ್‌ನಲ್ಲಿರುವ ರಷಿಯಾಜನಗಳಲ್ಲಿ ಕ್ರಿ ಅನೇಕರು ಸತ್ತುಹೋದರು. ಅಲ್ಲಿನ ಗವ ರ್ನರಾದ ಅಲಿಖಾನ್‌ಯೆಂಬಾತನು ಮೃತಪ ಟ್ಟನು. ಇನ್ನು ಮೂರುನಾಲ್ಕು ತಿಂಗಳೊಳ ಗಾಗಿ ರಷಿಯಾದೇಶೀಯರು ಹಿರಾತ್‌ನಲ್ಲಿ ಪ್ರವೇ ಶಿಸುವರೆಂದು ಜನಗಳು ಹೇಳಿಕೊಳ್ಳುತ್ತಾರೆ.

Liberality of a native prince. ಕಾಶ್ಮೀರದ ಮಹಾರಾಜರವರು ಈಚೆಗೆ ಕೆಲವು ಕಾಲದವರೆಗೂ ಅನಾರೋಗ್ಯಸ್ಥಿತಿಯಲ್ಲಿದ್ದವರ ಪ್ಟು, ಸವರೀಯವರಿಗೆ ಆರೋಗ್ಯಭಾಗ್ಯವುಂಟಾ ದಮೇಲೆ ಪರ್ವೋತ್ಸಾಹಕವಾಗಿ ಸೆರೆಯಿಂದ ೧೦೦ಜನ ಖೈದೀರನ್ನುಬಿಡುಗಡೆಮಾಡಿದ್ದಲ್ಲದೆ, ಆನೆಗಳು, ಕುದುರೆಗಳು, ಒಂಟೆಗಳು, ಹಸುಗಳು,ಕೋ ಣಗಳು ಮೊದಲಾದವು ದಾನಗಳು ಕೊಟ್ಟರೆಂದು ಅಲ್ಲಿನ ಬಾತಮೀದಾರನೊಬ್ಬನು ತಂತಿಮೂ ಲಕ ಒಂದಾನೊಂದುಪತ್ರಿಕೆಗೆ ತಿಳಿಸುತ್ತಾನೆ.

War preparations of Russia —ರಷಿಯಾ ಗವರ್ನಮೆಂಟಿನವರು ಯುದ್ಧಸಾಮ ಗ್ರಿಗಳನ್ನೊದಗಿಸಿಕೊಳ್ಳುವದಕ್ಕಾಗಿ ಯೆರಡು ಕೋಟಿ ರಬ್ಬಲ್,ಅಂದರೆ ಸುಮಾರು ಮೂರುವ ರೆಕೋಟಿ ರೂಪಾಯಿಗಳು ಖರ್ಚುಮಾಡುವದಾ ಗಿಯೂ ಮೂವತ್ತು ಸಾವಿರ ಸೈನ್ಯವನ್ನು ಅಫ್ ಘಾನಿಸ್ತಾನ್ ರಾಜ್ಯದಮೇಲೆ ಕಳುಹಿಸಬೇಕೆಂತ ಲೂನಿಶ್ಚಯಿಸಿರುವಂತೆ ಕಳೆದ ಏಪ್ರಿಲ್ ೨೬ನೇ ತಾರೀಖಿನಲ್ಲಿ ಸೆಂಟಪೀಟರ್‌ಸ್‌ಬರ್ಗ್ ಯೆಂಬ ರಷಿ ಯಾ ರಾಜಧಾನಿಯಿಂದ ತಂತಿವೃತ್ತಾಂತ ಬಂದಿ ರುವದಾಗಿ ಹಿಂದುಪ್ರಕಾಶಪತ್ರಿಕೆ ಹೇಳುತಿದೆ.

The Dewanship of Baroda.—ಬರೋಡೇ ಸಂಸ್ಥಾನದದಿವಾನರಾದ ಖಾನ್‌ಬಹದೂರ್ ಕಾಜೀ ಶಹಬುದ್ದೀನ್‌ಯವರು ತಮ್ಮ ಕೆಲಸಕ್ಕೆ ರಾಜೀನಾ ಮೆಕೊಡಲು ಅದನ್ನು ಮಹಾರಾಜರವರು ಅಂಗೀ ಕರಿಸಿ ಅವರಕೆಲಸಕ್ಕೆ ಕಚ್‌ರಾಜ್ಯದ ದಿವಾನರಾದ ದಿವಾನ್‌ಬಹದೂರ್ ಮಣಿಭಾಯಿಜಸ್ಭಾಯಿ ಯೆಂ ಬವರನ್ನು ನಿಯಮಿಸಿದರು. ಸದರೀ ಮಣಿಭಾ ಯಿಯವರ ಕೆಲಸಕ್ಕೆ ಅಲ್ಲಿನ ಸಬಾರ್ಡಿನೇಟ್ ಜ ಡ್ಜಿಯರಾದ ರಾವ್ ಬಹದೂರ್ ಮೋತೀಲಾಲ್ ಲಾ ಲಾಭಾಯಿಯೆಂಬವರು ಮೊಕರರ್ಮಾಡಲ್ಪಟ್ಟರು. ಯೆಂದು ರಾಸ್ತಗುಫ್ತಾರ್ ಯೆಂಬ ಪತ್ರಿಕೆಯ ಮೂಲಕ ತಿಳಿಯಬರುತಿದೆ. ಈ ಪತ್ರಿಕೆಯ ನಾಮದೇಯದಿಂದಲೇ ಮೇಲಿನ ಹೊಸಯೇರ್ಪಾ ಡುಗಳು ಯಥಾರ್ಥವೆಂದು ನಂಬತಕ್ಕವಾಗಿವೆ.

The national defence.—ಇಂಡ್ಯ ರಾಜ್ಯ ದ ಸಂರಕ್ಷಣೆಯ ವಿಷಯದೊಳು ಪ್ರಜೆಗಳನ್ನು ದ್ದೇಶಿಸಿ ಗುಜರಾತ್ ಮಿತ್ರಯೆಂಬ ಪತ್ರಿಕೆ ಹೇ ಳುವದೇನಂದರೆ—"ಪ್ರಜೆಗಳೆ, ಸ್ವದೇಶಾಭಿಮಾ ನಿಗಳೆನ್ನಿಸಿಕೊಳ್ಳುವದು, ಪರಂತು ಸಾತ್ವಿಕಸ್ವಭಾ ವದಿಂದ ಮೈಮರೆತಿರುತ್ತೀರಲ್ಲಾ! ಪ್ರತಿಯೊಂ ದು ಪಟ್ಟಣ, ರಾಜ್ಯ, ಸಂಸ್ಥಾನ, ಇಂಡ್ಯರಾ ಜ್ಯದಲ್ಲಿನ ಪ್ರತಿಯೊಂದು ಜಾತಿಯವರು ಸಹ ಪ್ರತಿನಿಧಿಸಿ, ಇಂಡ್ಯರಾಜ್ಯದ ನಾವಿಕ ಮತ್ತು ಭೂಸೈನ್ಯವನ್ನು ಅಧಿಕಪಕ್ಷ ಈಗ ಇರು ವದಕ್ಕಿಂತಲೂ ಮೂರರಷ್ಟು ಜಾಸ್ತೀಮಾಡಿದ ಹೊರತು, ದೇಶವು ಕೆಲವು ಸಂವತ್ಸರಗಳೊಳ ಗಾಗಿ, ಅನಾಯಕತ್ವ ಮತ್ತು ಅವಿವೇಕಪೂರ್ವರಾ ದವರ ಪ್ರಭುತ್ವಕ್ಕೆ ಒಳಗಾಗಲಾರದೆಂದು ಹೇಳ ಬಲ್ಲಿರಾ? "ಎಂಬದು.

Military preparations of Russia.—ರಷಿಯಾ ಸರ್ಕಾರದವರು ನೀಲಸಮುದ್ರತೀರದಲ್ಲಿ ರುವ ಸಿಬಾಸ್ಟೋಪೂಲ್‌ಯೆಂಬ ತಮ್ಮ ಕೋಟೆಯ ನ್ನು ಆತುರದೊಡನೆ ರಿಪೇರೀಮಾಡುತಲಿದಾರೆ. ಮತ್ತು ಸಮುದ್ರಮುಖವಾಗಿ ಭಾರೀ ಮಣ್ಣಿ ಕೋಟೆಗಳು ಕಟ್ಟುತ ಅಥವಾ ರಿಪೇರೀಮಾಡು ತ ಅದರ ಮೇಲ್ಗಡೆ ಭಾರೀ ತೋಫೆಗಳು ಹತ್ತಿ ಸುತಲೂ ಇದಾರೆ. ಈ ಕೆಲಸದಲ್ಲಿ ಪ್ರವೇಶಿಸಿ ರುವ ಮಿಲಿಟರಿ ಜನಗಳು ಯೆಲ್ಲಕಾಲದಲ್ಲೂ ಆ ತುರದೊಡನೆ ಕೆಲಸಮಾಡುತಲಿದಾರೆ. ಭಾರೀ ಯಾಗಿ ಯೆರಡು ಯುದ್ಧಜಹಜುಗಳು ಕಟ್ಟಲ್ಪ ಡುತಲಿವೆ. ಇಂತಾ ಸನ್ನಾಹಗಳನ್ನು ಯೋಚಿ ಸಲಾಗಿ ಸನ್ ೧೮೫೪ನೇ ಇಸಿವಿಯಲ್ಲಿ ರಷಿಯಾ ದೇಶದವರಿಗೂ ಇಂಗ್ಲಿಷ್, ಫ್ರೆಂಚ್ ಮತ್ತು ತು ರ್ಕಿಸ್ಥಾನ ಜನಗಳಿಗೂ ನಡೆದ ಘೋರಯುದ್ಧ ನ ಮ್ಮ ಜ್ಞಾಪಕಕ್ಕೆಬಾರದೆ ಹೋಗಲಿಲ್ಲವು. ದೈ ವಾತ್ ಅಂತಾ ಅನರ್ಥಗಳುಮರಳ ಪ್ರಾಪ್ತವಾ ಗದಿರಬೇಕೆಂದು ಕೋರುತೇವೆ.

A reward for Valour.—ರಷ್ಯಾಚಕ್ರವರ್ತಿಯವರು ಜನರಲ್ ಕೋಮರಾಫೆಯೆಂಬವರಿಗೆ ಬಹುಮಾನವಾಗಿಕೊಟ್ಟ ಚಿನ್ನದಕತ್ತಿಯು ಕೇವಲ ಶ್ಲಾಘ್ಯವಾದದ್ದು. ಅದರ ಆಕೃತಿಯು ಪೂರ್ವಕಾಲದ ಫ್ರೆಂಚ್‌ದೇಶದ ಕತ್ತಿಯಂತಿದೆ. ಅದರ ಅಲಗು ಶ್ರೇಷ್ಠವಾದ ಉಕ್ಕಿನಲ್ಲಿ ಮಾಡಲ್ಪಟ್ಟದ್ದು. ಅದರ ಒರೆ ಮತ್ತು ಹಿಡಿ ಚಿನ್ನದಲ್ಲಿ ಮಾಡಲ್ಪಟ್ಟು ಅವರ ಮೇಲೆಯುಕದಯಲ್ಲೂ ಸಾಲ್‌ಸಾಲಾಗಿ ರತ್ನಗಳು ಕೆತ್ತಲ್ಪಟ್ಟಿರುತವೆ. ಕತ್ತಿಯಕೊನೆಯಲ್ಲಿ ಆರೇಳು ಬಾರೀವಜ್ರಗಳು ಗುಂಪಾಗಿ ಕೆತ್ತಲ್ಪಟ್ಟಿರುತವೆ. ಒರೆಯ ಕೆಳಭಾಗದಲ್ಲಿ, "ಪರಾಕ್ರಮಕ್ಕಾಗಿ" ಎಂಬ ಮಾರು ಕೆತ್ತಲ್ಪಟ್ಟು ಅದರಸುತ್ತಲೂ ಕೂಡ ರತ್ನಗಳ ಹಲ್ಪಟ್ಟಿವೆ. ಇದುಅಲ್ಲದೆ, ಒರೆಯಮೇಲೆ ಅಲ್ಲಿಯಲ್ಲಿ ರೋಜಾಹುವ್ವಿನಂತೆ ರನ್ನಗಳು ಕೆತ್ತಲ್ಪಟ್ಟಿವೆ. ಈಕತ್ತಿಯ ಬೆಲೆಯು ಸೂರಪವತ್ತು ಥೌ ಅಥವಾ ೧೫೦೦೦ ರೂಪಾಯಿಗಳು ಅಂದಾಜಾಗಿರುತವೆ. ಇಷ್ಟು ಸುಲಬಕ್ರಯಕ್ಕೆ ಇಂತಾ ಬಾರೀರತ್ನಗಳು ಚಕ್ರವರ್ತಿಯವರಿಗೆ ದೊರೆತದ್ದಕ್ಕಾಗಿ ಅವರ ಭಾಗ್ಯವಿಶೇಷವನ್ನು ಕೇಳು ಪ್ರಶಂಸಾರ್ಹವಾದದ್ದು. ಮತ್ತು ಇಂತಾ ಕತ್ತಿಯನ್ನು ಬಹುಮಾನರೂಪವಾಗಿ ಚಕ್ರವರ್ತಿಯವರಿಂದಪಡೆದ ಜನರಲ್ ಕೊಮರಾಫೆಯವರ ಪರಾಕ್ರಮವು ಮತ್ತು ಪ್ರಶಂಸಾರ್ಹವಾದದ್ದು.

LOCAL AND PROVINCIAL NEWS
ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

Birth of a son—ಈ ಸಂಸ್ಥಾನದ ದಿವಾನರುದ ಮೊಕ್ಷಿಶಾಸ್ತ್ರಿ ಅಯ್ಯರ್,ಬಿ. ಎ. ಬಿ. ಎಲ್ ಯವರಿಗೆ ಕಳೆದವಾರದಲ್ಲಿ ಪುತ್ರೋತ್ಸವವಾದಂತೆ ನಮ್ಮಮೈಸೂರು ಬಾತಮಿದಾರರ ಕಾಗದದ ಮೂಲಕ ತಿಳಿದು ಸಂತೋಷಿಸುತ್ತೇವೆ. ಈ ದೊಡ್ಡ ಮನುಷ್ಯರಿಗೆ ಸಂತಾನಾಭಿವೃದ್ಧಿ ಆದ ಹಾಗೆಲ್ಲ ಕೀರ್ತಿ ಸುಖಾನವೃದ್ಧಿ ಅಕ್ಷರೆಯಂಟಾಗುವವೆಂದು ನಂಬುತ್ತೇವೆ.

Sri Sringeri Swamy—ಶ್ರೀ ಶೃಂಗೇರಿ ಸ್ವಾಮಿಗಳಾದ ಶಿವಾಜಿನವ ಸಚ್ಚಿದಾನಂದ ನೃಸಿಂಹಭಾರತಿ ಸ್ವಾಮಿಗಳವರು ಗೋಕರ್ಣ ಮೊದಲಾದ ಸ್ಥಳಗಳಿಗೆ ಯಾತ್ರೆ ಹೋಗಿ ಚಾತುರ್ಮಾಸ್ಯ ದೀಕ್ಷೆಯನ್ನು ಶಿವಮೊಗ್ಗೆಯಲ್ಲಿ ನಡೆವೇರಿಸುವರೆಂದು ತಿಳಿಯಬರುತಿದೆ. ಮಾಮೂಲ್ಕೆರೀತಿ ಮೈಸೂರು ಸರ್ಕಾರದಿಂದ ಸವಾರ್‌ಬಾಬ್ ಪದರಿ ಕೊಡಲ್ಪಟ್ಟದ್ದಲ್ಲದೆ ಸ್ವಾಮಿಗಳವರು ಸಂಚಾರಮಾಡುವ ಸ್ಥಳಗಳಲ್ಲ ಲೆಸಿಡೆಂಟ್ ಮೂಲಕ ರಹದಾರಿಗಳು ಕಳುಹಿಸಲ್ಪಟ್ಟವೆ.

A meeting—ಸೆಪ್ಟಂಬರನೇ ಯಿಸಿವಿಯ ೧ನೇ ನಂಬರ್ ಮದರಾಸ್ ಮ್ಯುನಿಸಿಪಲ್ ಆಕ್ಟನ್ನು ಕುರಿತು ಚರ್ಚಿಸಿ ಅದನ್ನು ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಜಾರಿಯೊಳು ತರಬೇಕೆಂದು ಆಲೋಚಿಸುವದಕ್ಕಾಗಿ, ಸದರಿಸ್ಟೇಷನ್ ಮ್ಯೂನಿಸಿಪಲ್ ಕಮ್ಮಿಷನರ್‌ಗಳು, ಈತಿಂಗಳ ೧೯ನೇ ತಾರೀಖು ಶನಿವಾರದಿವಸ ಪ್ರಾತಃಕಾಲ ಯೇಳೂವರೆ ಘಂಟೆಗೆ ಮೇಯೋ ಹಾಲ್ ಎಂಬ ಕಟ್ಟಡದಲ್ಲಿ ವಿಶೇಷ ಸಭೆ ಸೇರುವರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿಯ ಬರುತಿದೆ.

The weather.—ಇಲ್ಲಿ ಪ್ರತಿದಿನವೂ ಸದಾ ಮೋಡಮುಸುಕುತ್ತ, ಕೆಲವು ವೇಳೆಯಲ್ಲ ಬಲವಾಗಿ ಮಳೆಬೀಳುತಲಿದ್ದಾಗ್ಯೂ ಕೆರೆಗಳಿಗೆ ನೀರುಬರಲಿಲ್ಲವು. ವಾಂತಿ ಬೇದಿ ರೋಗ ತಪ್ಪಲಿಲ್ಲವು, ಪ್ರಜೆಗಳಿಗೆ ನೆಗಡಿ ಜ್ವರಾದಿ ಉಮ್ಮೇದ್ ಉಂಟಾಗಿ ಜನರ್ಲ್ ದರಖಾಸ್ತುಗಳು ವಿಶೇಷವಾಗಿ ಬರುತಲಿರುವಂತೆ ಸರ್ಕಾರ್ ಕಾಗದ ಪತ್ರಗಳ ಮೂಲಕ ತಿಳಿಯಬಂದಾಗ್ಯೂ ಜನಿಸಿಗಳನಿರಬ್ ತಗ್ಗಲಿಲ್ಲವು. ಅದಗೆಟ್ಟು ಕೇವಲದುರ್ಲಭವಾಗಿದೆ. ಇದಕ್ಕೆ ಕಾರಣವನ್ನು ತಿಳಿಯಲಸಾಧ್ಯವಾಗಿದೆ.

The Maharaja's visit to Bangalore—ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್, ಜಿ. ಸಿ. ಎಸ್. ಐ. ಯವರು ನಾಳೆಯದಿನ ಸಾಯಂಕಾಲ ಆರುಘಂಟೆಗೆ ತಮ್ಮ ದಿವಾನರು ಮೊದಲಾದ ಅದಿಕಾರಿಗಳೊ ದನೆಯೂ ಇತರಪರಿಜನಗಳೊಡನೆಯೂ ಇಲ್ಲಿಗೆ ದಯಮಾಡುತ್ತಾರೆಂದು ತಿಳಿಯಬರುತಿದೆ ಶ್ರೀಮನ್ಮಹಾರಾಜರವರು, ಮಹಾರಾಜ್ಞೀ ಸರ್ಕಾರದವರಿಂದ ಈಚೆಗೆ ಅವರಿಗೆ ಉಂಟುಮಾಡಲ್ಪಟ್ಟಿರುವ ಘನತರವಾದ ಜಿ. ಸಿ. ಎಸ್. ಐ. ಎಂಬ ಪ್ರಸಸ್ತಿಯೊಡನೆ ಜಾಜ್ ಬಂಗ್ಲೆಯಮೇಲೆ ಕೆಹ್ಲೋಗುಸುವದಂ ನೋಡುವದಕ್ಕಾಗಿ ಈಸಲ ವಿಶೇಷತಃ ಪ್ರಜೆಗಳು ಗುಂಪು ಗೂಡುವರೆಂದು ನಂಬುತ್ತೇವೆ.

Mr Knight.—ಇಲ್ಲಿನ ಅಡ್ಮಿಷನರಿ ಮುನಸಫ್ ಮೆ ನೈಟ್ ಯವರು ಮೈಸೂರಿಗೂ ಮೆ. ಸುಬ್ಬರಾಯರು ಬೆಂಗಳೂರಿಗೂ ವರ್ಗಾವರ್ಗಿ ಮಾಡಲ್ಪಟ್ಟಿರುವದಾಗಿ ಹಿಂದೆ ಮೈಸೂರು ಗೆಜೆಟಿನಲ್ಲಿ ಪಾಯಿಷ್ ಮಾಡಲ್ಪಟ್ಟದ್ದು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದೇಯಿದೆಯಷ್ಟೆ, ಈಚೆಗೆ ಮತ್ತೊಂದು ಹುಕುಂ ಹೊರಡುವ ತನಕ ಮೆ. ನೈಟಿಯವರು ಬೆಂಗಳೂರಲ್ಲೂ, ಮೆ ಸುಬ್ಬರಾಯರು ಈಗ ಇರುವಸ್ಥಳದಲ್ಲೂ ಕೆಲಸ ನೋಡುತಲಿರತಕ್ಕದ್ದೆಂದು ಹುಕುಂ ಆಗಿರುವಂತೆ ಕೇಳುತ್ತೇವೆ. ಮೆ. ನೈಟಿಯವರ ಇತರ ಯೋಗ್ಯತೆಗಿಂತಲೂ ಅವರ ಶಾಂತ ಸ್ವಭಾವಕ್ಕಾಗಿಯೇ ಅವರು ಇಲ್ಲೇ ಕಾಯಮಾಗಿರಬೇಕೆಂದು ಸಾಮಾನ್ಯವಾಗಿ ಯೆಲ್ಲರೂ ಅಪೇಕ್ಷಿಸುತ್ತಾರೆ.

THE JAGHIRE OF YELANDOOR

ಮೈಸೂರುದೇಶದ ಪೂರ್ವಚರಿತ್ರೆಯೊಳು ಕೇವಲ ಪ್ರಸಿದ್ಧರಾದ ದಿವಾನ್ ಪೂರ್ಣಯ್ಯನವರು ಸಾಬಿಕ್ ಮಹಾರಾಜಾ ಕೃಷ್ಣರಾಜ ಒಡೆಯರ ಬಹದೂರವರಿಗೆ ಪ್ರಥಮ ದಿವಾನರವರಾಗಿಯೂ, ತತ್ಪೂರ್ವ ಈ ದೇಶವನ್ನಾಳುತಲಿದ್ದ ನವಾಬ್ ಹೈದರಲ್ಲಿಖಾನರಿಗೂ ಟೀಪ್ಪು ಸುಲ್ತಾನರಿಗೂ ಮುಖ್ಯಾಧಿಕಾರಿಗಳಲ್ಲೊಬ್ಬರಾಗಿಯೂಇದ್ದರು. ಸ್ಟ೧೮೦೭ನೇ ಯಿಸಿವಿಯಲ್ಲಿ ಬ್ರಿಟಿಷ್ ಸರ್ಕಾರದವರ ಮುಂಜೂರಾತಿಯಮೇಲೆ ದಿವಾನ್ ಪೂರ್ಣಯ್ಯನವರಿಗೆ ಯೆಳಂದೂರ್ ತಾಲ್ಲೂಕು ಜಹಗೀರಾಗಿ ಕೊಡಲ್ಪಟ್ಟಿತು. ಇವರ ಸಂತತಿಯವರ ವಿಭಾಗದಲ್ಲಿ ಈ ಜಹಗಿರ್ ಪ್ರಯಾಗಿ ನಾಲ್ಗರಿಗೆ ಮನಸ್ವೀ ಭೋಗ್ಯಾದಿಗಳು ಮಾಡಲ್ಪಟ್ಟರು. ಕಡೆಗೆ ಚಿರಸ ಸಂತತಿಯವರ ಮಧ್ಯಾನುಸಾರ ಅವರಿಗೆ ಸಲ್ಲಬೇಕಾದ ಆಯತಿ ಸಹ ಅದರಲ್ಲಿ ಹುಟ್ಟುವಳಿಯಾಗದೆ ಹೋಯಿತು

ಇಲ್ಲಿನ ರಾಜ್ಯದ ಆದಲತಿದೊಳು ಕೇವಲ ಖ್ಯಾತಸ್ಥ್ಯರನ್ನೆನಿಸಿದ್ದ ಸಾಬಿಕ್ ಸರಿಮಾರ್ಕ್ ಕಬ್ಬನ್‌ಯವರು ಇಂಡ್ಯ ಗವರ್ನ್‌ಮೆಂಟಿನವರಮೂಲಕ ಕೋರ್ಟಾಫ್ ಡೈರೆಕ್ಟರ್‌ಗಳಿಗೆ ಈ ಅಂಶವನ್ನು ತಿಳಿಸುತ್ತ ಅವರ ಹುಕುಂಪ್ರಕಾರ ಜಹಗೀರನ್ನು ಸರ್ಕಾರ್ ವಿಚಾರಣೆಗೊಳಪಡಿಸಿ ಕ್ರಮಪಡಿಸಿದರು. ಮೆ॥ ಬೌರಿಂಗ್ ಸಾಹೇಬರವರು ಕ್ರಮವಾದ ವಾರಸುದಾರರಾದ ಪ್ರಕೃತ ಜಹಗೀರ್‌ದಾರ್ ಮೆಸ್ಟರ್ ಕೃಷ್ಣಮೂರ್ತಿಗಳವರಿಗೆ ಜಹಗೀರನ್ನೂ ಖಜಾನೆಯನ್ನೂ ಸಹ ಒಪ್ಪಿಸಿದರು. ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ ಯವರು ಸ್ಟ೧೮೬೩ನೇ ಇಸವಿ ಮೇ ೨೭ನೇ ಮರ್ಚ್ಯಂನಲ್ಲಿ ೧ನೇ ನಂಬರ್ ರೆಗ್ಯುಲೇಷನನ್ನು ಮಾಡಿ ಪ್ರಸಿದ್ಧಪಡಿಸಿದಕ್ಕೆ ಸದರೀ ಜಹಗೀರ್ ಈಗ ವಿಶದಯವಾಯಿತು ಈ ರೆಗ್ಯುಲೇಷನಿನ ದೆಸೆಯಿಂದ ಸದರೀ ಜಹಗೀರಿನ ಹುಟ್ಟುವಳಿಯ ಸೈಕಿ ಸಾಲೀಯಾನಾ ೨೩,೦೦೦ ರೂಪಾಯಿಗಳು ಇದರದಿ ಕುಂದ ಪ ಸಂತತಿಯವರಿಗೆ ವಿಭಾಗಿಸಲ್ಪಟ್ಟವೆ ಹ್ಯಾಗಂದರೆ—

೧ನೇ ಶಾಖೆ	—ನರಸಿಂಗರಾಯರಸಂತತಿಯವರಿಗೆ	ಸಾ	೧೦೦೦
೨ನೇ ,,	—ಶಿಶುಮೂರ್ತಿರಾಯರ	,,	೧,೨೦೦
೩ನೇ ,,	—ಅನಂತರಾಮಯ್ಯನವರ	,,	೧,೨೦೦
೪ನೇ ,,	—ಸುಬ್ಬರಾಯರವ	,,	೧,೨೦೦
೫ನೇ ,,	—ದತ್ತಾತ್ರೇಯರಾಯರವ	,,	೩,೬೦೦
		ಜುಮಾ	೨೩,೦೦೦

ಈ ದೊಡ್ಡ ಪುರಾಣಿಯವರು ದಿವಾನ್‌ಪೂರ್ಣಯ್ಯನವರ ಗೌರವಕ್ಕೆ ತಕ್ಕಂತೆ ಬ್ರಿಟಿಷ್‌ಗವರ್ನ್‌ಮೆಂಟಿನವರಿಂದಲೂ, ಮಹಾರಾಜಾ ಸರ್ಕಾರದಿಂದಲೂ ವಿಶೇಷತಃ ಗೌರವಿಸಲ್ಪಡುತಲಿದ್ದಾರೆ. ಅವರ ಸಂತತಿಯವರಲ್ಲೊಬ್ಬರು॥ಈ ಸರ್ಕಾರದೊಳು ಒಂದು ಡಿಸ್ಟ್ರಿಕ್ಟಿನ ದಪ್ಯುಟಿ ಕಮಿಷ್ನರಾಗಿರುವದಲ್ಲದೆ ಮುಂದೆ ಅವರ ಪ್ರಾಬಲ್ಯವೈಭವಗಳನ್ನು ಜನಗಳು ವಿಶೇಷವಾಗಿ ಕೊಂಡಾಡುವ ಸ್ಥಿತಿಯೊಳಿರುವದಕ್ಕಾಗಿ ಸಂತೋಷಿಸುವೆವು.

TELEGRAPHIC SUMMARY
ತಂತಿ ವೃತ್ತಾಂತವು.

ಮಿ. ವಿಲ್ಯಂ ಟಿ ಮ್ಯಾರಿಯಾಟ್ ಸ್ಕ್ವೈ ಸಿ ಎಸ್ ಐ ಯವರು ಜಿಡಿಷ್ ಅಡ್ವೋಕೇಟ್ ಜನರಲಾಗಿ ನೇಮಿಸಲ್ಪಟ್ಟರು

ಮಾಡ್ರಿಡ್ ೮ನೇ ಜೂಲೈ—ಈವಾರದಲಿ ೪೧,೯೧೮ ಮಂದಿಗೆ ವಾಂತಿಬೇದಿರೋಗ ತಗುಲಿ ಅದರಲ್ಲಿ ೮,೨೦೦ ಮಂದಿ ಮೃತಪಟ್ಟರು

ಪೀರಿಸ್, ೬ನೇ ಜೂಲೈ—ಮ್ಯಾಕ್ಸಿಕೋ ಸೀಮೆಯಲ್ಲಿರುವ ಅಮೇರಿಕಾದ ಗ್ವಾರಿಸನ್ ಸೇನೆಯು ಜನರಲ್ ಡಿಗ್ರ್ಯೂಯವರ ಕೈಕೆಳಗಿನ ಸೇನೆಯಮೇಲೆ ಜಾಲುಗಿನ ಬಳಿ ನಡೆದ ಯುದ್ಧದಲಿ ಗ್ವಾರಿಸನ್ ಸೇನೆಯು ಸೋತುಹೋಯಿತೆಂದು [illegible] ತಿಳಿಯಬರಲಿಲ್ಲವು

ನ್ಯೂಯಾರ್ಕ್, ೬ನೇ ಜೂಲೈ—ಮ್ಯಾಕ್ಸಿಕೋ ಸ್ಥಳದೊಳು ನಡೆದ ಕಲಹದ ರಿಪೋರ್ಟ್ ತಿಳಿಯುವಂತೆ [illegible] ಅಮೇರಿಕದ ಜನರು ೩೨,೦೦೦ ಮಂದಿ [illegible] ಯುದ್ಧದಲ್ಲಿ ೧,೨೦೦ ಮಂದಿ [illegible] ಅಮೇರಿಕದವರು [illegible] ೬೦ ಮಂದಿ ಮೃತಪಟ್ಟರು ಜನರಲ್ ಡಿಗ್ರ್ಯೂ [illegible] ಸೇನೆಗೆ [illegible]

ಲಂಡನ್, ೯ನೇ ಜೂಲೈ—[illegible] ಹಾಸ್ ಆಫ್ ಕಾಮನ್ಸ್ ಸಭೆಯವರು [illegible] [illegible] [illegible] [illegible] [illegible]

[illegible]

ಲಂಡನ್, ೮ನೇ ಜೂಲೈ—[illegible] [illegible] [illegible]

ಲಂಡನ್, ೮ನೇ ಜೂಲೈ—[illegible] ಹೌಸ್ ಆಫ್ ಕಾಮನ್ಸ್ [illegible] ಪಾರ್ಲಿಮೆಂಟ್ [illegible] [illegible]

[illegible] ಪಾರ್ಲಿಮೆಂಟ್ [illegible] [illegible]

SUMMARY OF NEWS
ವೃತ್ತಾಂತಸಂಗ್ರಹವು

A bonus—[illegible] [illegible] [illegible] [illegible] [illegible]

[illegible] ಕೊಟ್ಟರು [illegible] ಬಂದಕಾಲದಲ್ಲಿ ಸಹ [illegible] ಕೊಟ್ಟಂತೆ ತಿಳಿಯಬರುತಿದೆ.

Widow marriage—ಅಹಮದನಗರದಿಂದ [illegible] ತಿಳಿಸುತ್ತಾನೆಂದರೆ—[illegible] ವಿವಾಹವು ನಡೆಯಿತು ಈ ಶುಭಕಾರ್ಯವು [illegible] ಯೂರೋಪಿಯನ್ ಮತ್ತು ನೇಟಿವ್ [illegible] ಬಂದಿದ್ದರು [illegible] ಎಂಬದು—ಇಂಡ್ಯ ಟೈಮ್ಸ್

A rumour—ಮದರಾಸ್ ಹೈಕೋರ್ಟ್ [illegible] ಗುರುಸ್ವಾಮಿಅಯ್ಯರವರು [illegible] [illegible] [illegible]

Recognition of meritorious service. [illegible] [illegible] [illegible]

Death of a Russian spy—[illegible] [illegible] [illegible]

Cholera—[illegible] [illegible] [illegible] ವಿವರಗಳು ಕೆಳಗೆ ಕಾಣಿಸಿದೆ.

ಹೋಬಳಿ	ರೋಗ ಸಂಭವಿಸಿದವರು.	ಮೃತಪಟ್ಟವರು.
[illegible]	೪೮೮	೨೪೩
[illegible]	೧೩೪	೩೩
[illegible]	೭೩	೨೮
[illegible]	೧೩೮	೭೩
[illegible]	೩೬೫	೧೧೧
[illegible]	೧೭೩	೯೪
[illegible]	೯೯೦	೫೫೦
[illegible]	೩೬೧	೨೮೬
ಜುಮ್ಲಾ	೨೭೩೭	೧೫೮೪

New public institutions—ಮದರಾಸ್ [illegible] [illegible] [illegible]

BANGALORE.—Printed and published for the Proprietor, at the KARNATAKA PRESS—1865

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿದಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನಪರಾಬಿದಾಪ್ರಥಿತಸಾಹಿತೀಶೋಭಿತಾ ॥ ವ್ಯಗಾಂಕಿತವಾಸರನಿಹಿತಮುದ್ರಣಾಸಜ್ಜನೈರ್ಬ್ರಿತಾಸುಪರಿಪೂಜಿತಾದಿಶತಿಮಾನಸಂಸುಮುದಂ ॥

Vol XII] | BANGALORE—MONDAY JULY 20, 1885 | [No. 29.

ಸಂಪುಟ ೧೨.] | ಬೆಂಗಳೂರು.—ಸನ್ ೧೮೮೫ನೇ ಇಸವಿ ಜುಲೈ ೨೦ನೇ ತಾರೀಖ್ ಸೋಮವಾರ. | [ಸಂಚಿಕೆ ೨೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

[illegible]	೧ಕ್ಕೆ	[illegible]
[illegible]	೧ಕ್ಕೆ	[illegible]
[illegible]	೧ಕ್ಕೆ	[illegible]
ಸಂಚಿಕೆ	೧ಕ್ಕೆ	[illegible]
[illegible]	೧ಕ್ಕೆ	[illegible]

[illegible]

ಪ್ರಕಟನೆಯ ದರ

ಮೊದಲನೇದಫಾ ಪಂಕ್ತಿ	೧ಕ್ಕೆ	[illegible]
ಎರಡನೇದಫಾ ಪಂಕ್ತಿ	೧ಕ್ಕೆ	[illegible]

NOTICE TO SUBSCRIBERS

[illegible]

ಪ್ರಕಟನೆ.

[illegible]

ನೋಟೀಸ್.

[illegible]

[illegible]

NOTICE.

VAIDYASARASANGRAHA

Price including Postage, Rs 5-6-0

[illegible]

NOTICE

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವಿಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಬೋಧ್ಯವಾದದ್ದಾಗಿಯೂ ನವರಸಪರಿಪೂರ್ಣಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧-೮-೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮ॥ಲಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳತಕ್ಕದ್ದು.

ಬಿ ವೆಂಕಟಾಚಾರ್,
ಮುನಸಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

DIVYASURICHARITAM.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ತನ್ಮತಾಭಿಮಾನವುಳ್ಳವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಸಂಸ್ಕೃತ ಮಹಾ ಕಾವ್ಯರತ್ನವು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಹುಣಗಲ್ ಅಸಿಸ್ಟೆಂಟ್ ಇಂಜನಿಯರ್ ಮ॥ಪ. ಗೋವಿಂದಾಚಾರ್ಯರವರಿಗೆ ಹಣ ಬೆಲೆ ಸಹಿತ ಬರೆದುಕೊಂಡರೆ ಪುಸ್ತಕ ಕಳುಹಿಸಲ್ಪಡುವದು.

ಅಪ್ಪರ್‌ಪತ್ರದ ಪುಸ್ತಕ		೦—೧೪—೬
ದುಪ್ಪಂತೆರಪು	,,	೦—೧೨—೬
ಅಂಜೇಹಾಸರ್	,,	೦—೨—೬

ಬೆಂಗಳೂರ್ ತಾ॥ ೨ನೇ ಜೂನ್ ೧೮೮೫

ನೋಟಿಸ್.

ಚಿಕ್ಕಬಳ್ಳಾಪುರ ಸಬ್‌ಡಿವಿಜನ್ ಮುನಸಫ್ ಕೋರ್ಟು.
ಸನ್ 1883ನೇ ಇಸವಿ ಅಸಲ್ ನಂಬರ್ 130—32.

ವಾದಿ. ಪ್ರತಿವಾದಿ.
ಮೆಸ್ಟರ್‌ಕಾಲಿದೆಸಾಹೆ ಹಾಲಗಾರ್ ಶ್ರೀನಿವಾ
ಬರಕತೆ ಮೆ॥ಮಾರ್ಗ್ಯರ್. ಸಯ್ಯ.

ಕೋರ್ಟಿನ ಅಪ್ಪಣೆ ಮೇರಿಗೆ ಈ ಮೊಕದ್ದಮಾ ಪ್ರತಿವಾದಿ ಬಾಬತು ಕೆಳಗೆ ನಮೂದಾಗುವ ಸ್ಥಿರಸ್ವತ್ತುಗಳು 1885ನೇ ಇಸವಿ ಆಗಸ್ಟು 15ನೇ ಹಗಲು 11 ಘಂಟೆಗೆ ಕೋರ್ಟಿನಲ್ಲಿ ಹರಾಜ್ ಮಾಡಲ್ಪಡುತವೆ. ಹೆಚ್ಚು ತಪಸೀಲ್ ಕೋರ್ಟ್ ನಾಜರ್‌ಮೂಲಕ ತಿಳಿದುಕೊಳ್ಳಬಹುದು.

	ಸರ್ವೆನಂಬರ್.	ಎಕ್ರೆ. ಗುಂಟೆ.	ಆಕಾರ.
[illegible]	202	4—11	68—0—0
ಜಿರೋ.	203	1— 9	7—8—0
ಕಂ.	209	9— 5	28—0—0

ಜಿ.ಶಾ.—ಸದರೀ ಸ್ವತ್ತುಗಳು [illegible] ಗ್ರಾಮದಲ್ಲಿವೆ.

B VENCATACHAR,
ಮುನಸಫ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 20, 1885.

೧೮೮೫ನೇ ಜುಲೈ ೨೦ನೇ ತಾ॥ ಸೋಮವಾರ.

"THE PARASARA MADHAVIYA."

ಈಪ್ರೂರು ಕೋಟೆಯಬಳಿ ಇರುವ ಬ್ರಹ್ಮಶ್ರೀ ಚೆಂಬೋಳಿ ವೆಂಕಣ್ಣಾಚಾರ್ಯರೆಂಬವರಿಂದ "ಪರಾಶರ ಮಾಧವೀಯವೆಂಬ ಧರ್ಮಶಾಸ್ತ್ರವು ಭಾಷಾಂತರ ಮಾಡಲ್ಪಟ್ಟು, ಬೆಂಗಳೂರು [illegible] ಮುದ್ರಾಕ್ಷರಶಾಲೆಯ ಪ್ರೊಪ್ರೈಟರಾದ ಮ॥ ರಾ॥ ಹರಿರಾಂಮಿಸ್ಸರ್ ಯೆಂಬವರಿಂದ ಮುದ್ರಿಸಿ ಪ್ರಕಟಸಲ್ಪಡುತಲಿದೆಯಾಗಿ ಸದರೀ ಗ್ರಂಥದ ಪ್ರಥಮಸಂಚಿಕೆಯ ಪ್ರತಿಯೊಂದು ಪರಿಶೀಲನಾರ್ಥ ಸದರೀ ಆಚಾರ್ಯರಿಂದ ನಮಗೆ ಕಳುಹಿಸಲ್ಪಡಲು ಅದಂ ಕೇವಲ ಕೃತಜ್ಞತೆಯೊಡನೆ ಪರಿಗ್ರಹಿಸಿದೆವು. ಈಗ್ಯೆ ನಾಲ್ಕೈದುತಿಂಗಳಹಿಂದೆ ಪ್ರಕಟಸಲ್ಪಟ್ಟ ಏತದ್ವಿಷಯಕವಾದ ಪ್ರಕಟನೆಯಂ ನಾವು ಪ್ರಥಮತಃ ನೋಡಿದಕಾಲದಲ್ಲಿ ಇದು ಕೇವಲ ಶ್ರಮಸಾಧ್ಯವೆಂತಲೂ, ಅನೇಕ ಪಂಡಿತಜನ ಸಹಾಯಾಪೇಕ್ಷಿತವಾದ್ದೆಂತಲೂ, ಬಹ್ವರ್ಥ ವ್ಯಯಸಾಧ್ಯವಾದ್ದೆಂತಲೂ ಭಾವಿಸಿ ಗ್ರಂಥಾವಲೋಕನದೊಳತ್ಯಂತಾ ಕಾಂಕ್ಷೆಯುಳ್ಳವರಾಗಿದ್ದೆವು. ಈಗ ಸದರೀ ಗ್ರಂಥದ ಒಂದುಭಾಗವು ಮುದ್ರಿಸಿ ಪ್ರಕಟಸಲ್ಪಟ್ಟದುಕಂಡು ನಾವು ಬಹಳ ಸಂತೋಷಿಸಿದೆವು. ಏತದ್ಗ್ರಂಥಲೇಖಕರು ಈ ಕೆಳಿಯುಗದಲ್ಲಿ ಪರಾಶರ ಸ್ಮೃತಿಗೆ ಪ್ರಬಲವಾಗಿರುವ ಪ್ರಾಮಾಣ್ಯ ಸಮರ್ಥನವಂಮಾಡಿ ಮುಖ್ಯವಾಗಿ ಅದಂ ಭಾಷಾಂತರ ಮಾಡುವದಕ್ಕೆ ತಮಗಿರುವ ಉದ್ದೇಶವನ್ನು ಪೀಠಿಕಾ ಭಾಗದಲ್ಲಿ ತಿಳಿಸಿರುತ್ತಾರೇನಂದರೆ—"ಇದಕ್ಕೆ ಭಾರದ್ವಾಜಗೋತ್ರೋತ್ಪನ್ನರಾಗಿಯೂ, ಮಾಯಣಾಚಾರ್ಯರ

ಕುಮಾರರಾಗಿಯೂ, ಅಸ್ವೈತ ಮತಸ್ಥರಾಗಿಯೂ ಬುಕ್ಕಣ ಭೂಪಾಲನ ಮಂತ್ರಿಗಳಾ ಗಿಯೂ ಇರುವ ಮಾಧವಾಚಾರ್ಯರಿಂದ ಅತಿ ಗಂಭೀರವಾಗಿಯೂ ವಿಸ್ತಾರವಾಗಿಯೂ ಮಾಧವೀಯವೆಂಬ ವ್ಯಾಖ್ಯಾನವು ಮಾಡಲ್ಪಟ್ಟದ್ದಾಗ್ಯೂ ಅದು ಸಂಸ್ಕೃತ ಭಾಷಾಜ್ಞಾನ ವಿಲ್ಲದಿರುವ ಜನಗಳಿಗೆ ಉಪಯೋಗಿಸಲ್ಪಡುವದಿಲ್ಲ ವಾದ್ದರಿಂದ ಅಂಥಾಪರುಗಳು ಧರ್ಮಾಚರಣೆಯಲ್ಲಿ ಅಪೇಕ್ಷೆಯುಳ್ಳವರಾಗಿ ಕೇವಲ ಸ್ವಬುದ್ಧ್ಯನುಸಾರ, ನೂತನಗಳಾದ ಧರ್ಮಗಳನ್ನು ಕಲ್ಪಿಸಲು, ಇತರರು ತಮ್ಮತಮ್ಮ ಬುದ್ಧ್ಯನುಸಾರ ದೂಷಿಸುತ್ತಲೂ, ಭೂಷಿಸುತ್ತಲೂ ಇರಲು ಪರಸ್ಪರವಿರೋಧ ವುಂಟಾಗಿ ಧರ್ಮನಿರ್ಣಯವೇ ಇಲ್ಲವೆ ಹೋಗುವದಾದದರಿಂದ ಸಂಸ್ಕೃತ ಭಾಷಾಜ್ಞಾನ ವಿಲ್ಲದಿರುವಜನಗಳಿಗೂ, ಈ ಪರಾಶರಮಾಧವೀಯ ವೆಂಬ ಧರ್ಮಶಾಸ್ತ್ರವು ಉಪಯೋಗಿಸುವಂತೆ ಕನ್ನಡದಲ್ಲಿ ಭಾಷಾಂತರ ಮಾಡಬೇಕೆಂದು ಅಸಿಸ್ಟೆಂಟ್ ಎಂಜನಿಯರ್‌ಗಳಾದ ಮಹಾರಾಜಮಾನ್ಯ ರಾಜಶ್ರೀಯಾ ವಿರಾಜಿತ ಬಿ. ವೆಂಕಟಾಚಾರ್ಯರೂ, ಮಹಾರಾಜಮಾನ್ಯ ರಾಜಶ್ರೀಯಾ ವಿರಾಜಿತ ವಿ. ಬಾಲಕೃಷ್ಣಶಿವಾರಿಯವರೂ ಸಹ ನನ್ನನ್ನು ಅಪೇಕ್ಷಿಸಿದ್ದರಿಂದಲೂ ಪುಣ್ಯಕೀರ್ತಿಗಳೆಂಬ ರತ್ನಗಳನ್ನು ಸಂಗ್ರಹಿಸಬೇಕೆಂಬ ಇಚ್ಛೆಯಿಂದಲೂ, ಭಾಷಾಂತರ ಕರಣವೆಂಬ ಮಹಾಕಾರ್ಯ ಸಮುದ್ರದಲ್ಲಿ ಮಗ್ನನಾದೆ" ನೆಂಬದು. ಪುಣ್ಯಪರಿಪಾಕದಿಂದ ಲಭಿಸಬೇಕಾದ ಮೇಲೆ ಕಂಡ ಅನರ್ಘಗಳಾದ ಪದಾರ್ಥಗಳೆರಡೂ ಆಚಾರ್ಯರವರಿಗೆ ಯೆಷ್ಟು ಸುಲಭವಾಗಿದೊರೆಯುವವೋ, ಮಗ್ನರಾದವರು ಯಾವ ರೂಪದಿಂ ತಟವನ್ನೈದುವರೋ ಅದಂ ನೋಡಬೇಕೆಂಬ ಉತ್ಸಾಹದೊಡನೆ ಅವರನ್ನನುವರ್ತಿಸಲಿಕ್ಕೆ ಎತ್ನಿಸಿ ಅಗಾಧವಾದ ಶಬ್ದಾರ್ಣವದೊಳು ಸಾಧನ ಸಂಪತ್ತಿಗಳಿಲ್ಲದೆ ಸಂಚರಿಸಲು ಸಾಧ್ಯವಹುದೇ ಯೆಂದು ಆಲೋಚಿಸುತ ದಡದಮೇಲೆ ನಿಂತು ನೋಡುವಾಗ್ಯೆ ಬಹ್ವಂಶಗಳು ನಮ್ಮದೃಷ್ಟಿಗೆ ಗೋಚರವಾದವು. ತಾವನ್ಮಾತ್ರದಿಂದಲೇ ನಾವು ಭಯಪೀಡಿತರಾಗಿ ಹಿಂದಿರುಗಬೇಕಾದವರಾದೆವು. ಶ್ರೀಮದಾಚಾರ್ಯರವರು ತಮ್ಮ ಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿಯನ್ನೈದುವದಕ್ಕೆ ಬಗ್ಯೆ ಇಷ್ಟದೇವತಾ ಪ್ರಾರ್ಥನಾಪೂರ್ವಕ ಮಂಗಳಾಚರಣೆಯಂಗೈದು ತಮ್ಮ ಮತ ಪರಂಪರೆಯಂ ಪ್ರಶಂಸಿಸುತ್ತಾರೆ. ಪಂಡಿತರ ಪಾಂಡಿತ್ಯ ಪ್ರದರ್ಶನಕ್ಕೆ ಅವರಿಂದ ವಿರಚಿತವಾದ ಗ್ರಂಥಾರಂಭದೊಳಗಣ ಮಂಗಳಶ್ಲೋಕವೊಂದೇ ಸಾಕಾದ್ದಾಗಿರುತದೆಂದು ಹೇಳುತಲಿದ್ದ ಪೂರ್ವಿಕರ ವಚನ ಒಂದು ನಮ್ಮ ಸ್ಮರಣೆಗೆ ಬರಲು ಅದರಂತೆ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ಸದರೀ ಆಚಾರ್ಯರಿಂದ ವಿರಚಿತವಾದ ಮೊದಲನೆಯ ಶ್ಲೋಕವನ್ನು ಓದಿನೋಡಲಾಗಿ, ಅದರ ತೃತೀಯ ತುರೀಯಪಾದಗಳಲ್ಲಿ ತೃನ್ನಂತವಾದ ಜೇತೃಛೇತ್ತೃಶಬ್ದಗಳು ಪ್ರಯೋಗಿಸಲ್ಪಟ್ಟಿರುವದರಿಂದ ಇವು ಕೃತ್ಪ್ರತ್ಯಯಾಂತಗಳಾದ ಕಾರಣ ಕರ್ತೃಕರ್ಮಣೋಃಕೃತಿಯೆಂಬ ಸೂತ್ರಬಲದಿಂ ನಿಕರಂ ಹೃದಯಂ ಎಂಬವುಗಳಿಗೆ ಬದಲಾಗಿ ನಿಕರಸ್ಯಹೃದಯಸ್ಯಯೆಂದು ಷಷ್ಟ್ಯಂತಪ್ರಯೋಗವೇ ಇರಬೇಕಾಗಿರುತಿದೆ. ಇದಕ್ಕೆ ಆಚಾರ್ಯರು ಏನು ಉಪಪತ್ತಿ ಕಲ್ಪಿಸುವರೋ ತಿಳಿಯದು. ಅದೇಶ್ಲೋಕದ ನಾಲ್ಕನೆಯಪಾದದೊಳಿರುವ "ಛೇತ್ತಾರಂದಶಕಾಯ ಘೋರಹೃದಯಂ" ಎಂಬುವ ಸ್ಥಳದಲ್ಲಿ ದಶಕಾಯಶಬ್ದವು ಯಾರಿಗೆ ಅನ್ವಯಿಸುವದೋ ಅದಂ ಆಚಾರ್ಯರ ಮೂಲಕವಾಗಿಯೇ ಅರಿಯಬೇಕಾಗಿದೆ. ದಶಕಾಯಶಬ್ದವು ದೇವಾವತಾರ ಪರವೆಂದು ಹೇಳಿದರೆ ಅದು ಅನ್ವಯಿಸುವದಿಲ್ಲವು. ಮತ್ತು ಪ್ರಕರಣ ವಿರುದ್ಧವಾಗಿರುತಿದೆ. ರಾವಣನಪರವೆಂದು ಹೇಳುವಪಕ್ಷಕ್ಕೆ ದಶಕಶಬ್ದಕ್ಕೆ, ದಶ-ಕಾನಿ-ಶಿರಾಂಸಿ-ಯಸ್ಯ ದಶಕಃ ಎಂದು ಳಗುವದಲ್ಲದೆ ದಶಕಾಯವೆಂದಾಗಲಾರದು. ಮತ್ತೆ ಕಾಯಶಬ್ದವು ನಮ್ಮ ಆಚಾರ್ಯರೊಬ್ಬರ ನಿಘಂಟುವಿನಲ್ಲಿವಿನಾ ಮತ್ಯಾವದರಲ್ಲಿಯೂ ಶಿರಃಪರವಾಗಿ ಅರ್ಥವಿರುವಂತೆ ದೃಷ್ಟವಾಗಲಿಲ್ಲವು. "ಅಥಕಳೇಬರು। ಗಾತ್ರಂವಪುಸ್ಸಂಹನನಂಶರೀರಂವರ್ಷ್ಮವಿಗ್ರಹಃ॥ ಕಾಯೋದೇಹಃಕ್ಲೀಬಪುಂಸೋಃಸ್ತ್ರಿಯಾಂಮೂರ್ತಿಸ್ತನುಸ್ತನೂಃ॥" ಮೇಲೆ ಕಂಡ ಶರೀರವಾಚಕ ಪರ್ಯಾಯಪದಗಳಲ್ಲಿ ಕಾಯಶಬ್ದ ಸಹ ಸೇರಿಸಲ್ಪಟ್ಟಿರುವದರಿಂದ ಅದಕ್ಕೆ ಶರೀರಾರ್ಥವಲ್ಲದೆ ಶಿರೋವಾಚಕತ್ವವು ಯಾವ ಆಧಾರದಿಂದ ವುಂಟಾಯಿತೋ ನಾವರಿಯೆವು. ಎರಡನೆಯ ಶ್ಲೋಕದೊಳಗಣ "ವರಸುತಶ್ಶ್ರೀಕೃಷ್ಣ" ಎಂಬ ಸ್ಥಳದಲ್ಲಿ ಗುಣಸಂಧಿಗೆ ಅವಕಾಶವಿಲ್ಲವು. ಅತಏವ ಇಲ್ಲಿ ವಿಸಂಧಿದೋಷ ಪ್ರಾಪ್ತವಾಗುತಿದೆ. (ವಿಸಂಹಿತೊವಿರಃಪ್ರೋಸಾಯತ್ರಸಂಧಿರ್ವಿಸಂಧಿಕಶ್ಚ॥ ಇತಿಲಕ್ಷಣಂ) ಅದೇ ಶ್ಲೋಕದ ಮೂರನೆಯಪಾದದಲ್ಲಿ "ಸತ್ಯೋದ್ಧಾರರತಃ" ಎಂಬುವ ಸಮಸ್ತಪದವು ಯಾವ ಅರ್ಥ ಉದ್ದೇಶದೊಡನೆ ಪ್ರಯೋಗಿಸಲ್ಪಟ್ಟಿರುತಿದೆಯೋ ಅದು ಸ್ವಲ್ಪವೂ ವ್ಯಕ್ತವಾಗುವದಿಲ್ಲವು. ಮೂರನೆಯಶ್ಲೋಕದಲ್ಲಿ, ತು, ಖಲು, ಹಿ, ದ್ವೈ, ಚ, ಏವಮಾದಿ ನಿರರ್ಥಕಶಬ್ದಗಳಿಂದ ಪಾದಗಳು ಪೂರಿತಗಳಾಗಿವೆ (ಪಾದಪೂರಣಮಾತ್ರಾಯತ್ವನ್ನಿರರ್ಥಕಮುಚ್ಯತೇ) ನಾಲ್ಕನೆಯಶ್ಲೋಕದಲ್ಲಿ (ಅಕ್ಷಯಜಸ್ಯಾಸ್ತ) ವೆಂಬದಾಗಿ ಪ್ರಯೋಗಿಸಲ್ಪಟ್ಟಿರುವದರಿಂದ ಅಕ್ಷಯ ಎಂಬ ವಿಶೇಷಣವು ಸಂವತ್ಸರಪರವೋಅಥವಾಕ್ಷಯರಹಿತವೆಂದರ್ಥವೋ ಅದು ಸಂದಿಗ್ಧವಾಗಿದೆ. ನಾಲ್ಕನೆಯಶ್ಲೋಕದ ಒಂದೆರಡನೇಪಾದಗಳಲ್ಲಿ ಏಳನೇವರ್ಣ ಗುರುವಾಗಿರುವದರಿಂದಲೂ, ಆರನೇವರ್ಣ ಲಘುವಾಗಿರುವದರಿಂದಲೂ, ಪಂಚಮಂಲಘುಸರ್ವತ್ರೇತ್ಯಾದಿ ಲಕ್ಷಣ ಸಮನ್ವಯವಾಗುವದಿಲ್ಲವಾದದರಿಂದ ಛಂದೋಭಂಗವುಂಟಾಗುತಿದೆ. ಶ್ರೀಚಾಮೇಂದ್ರನೃಪೇಂದ್ರಪೂರ್ಣಹಿಮಗುಃ" ಎಂಬಸ್ಥಳದಲ್ಲಿ ಉದ್ದಿಷ್ಟವಾದ ರೂಪಕಾಲಂಕಾರಕ್ಕೆ ವಿದ್ಯಾಸಿಂಧ್ವಭಿವರ್ಧನಃ ಇತ್ಯಾದಿ ರೂಪಕಾಲಂಕಾರಘಟಿತ ವಿಶೇಷಣಗಳೇಪಾದಿಯಲ್ಲಿ ಶ್ರೀಮದ್ರಾಜಶಿವಾಮನೇಶ್ವರಸುತಃ ಶ್ರೀಕೃಷ್ಣನಾಮ್ನಸ್ಸುಯಃ ಯೆಂಬುವದೂ, ಸತ್ಯೋದ್ಧಾರರತಃ ಎಂಬುವದೂ ಅನನುರೂಪಗಳಾದ ಶೇಷಣ ಪದಗಳಾಗಿರುವದರಿಂದ ರೂಪಕಾಲಂಕಾರಕ್ಕೆ ಉಪಷ್ಟಂಭಕಗಳಾಗುವದಿಲ್ಲವು. ಆದದರಿಂದ ಇವು ಸಹೃದಯಹೃದಯಸಮ್ಮತಗಳಲ್ಲವು. ಐದನೆಯಶ್ಲೋಕದಲ್ಲಿ ಪಾರಾಶರಾಖ್ಯಾಯೆಂದು ಬರೆಯಲ್ಪಟ್ಟದೆ, ಇಲ್ಲಿ ಪಾರಾಶರ್ಯವೆಂದು ಇರಬೇಕೆಂತ ತೋರುತ್ತಿದೆ. ತಸ್ಮಿಂ ತಿಷ್ಠತೀತಿ ತತ್ರಸ್ಥಂ ಯೆಂದಿರಬೇಕು. ತಸ್ಥಂಯೆಂಬದು ಯತ್ಪ್ರಯುಕ್ತವಾದದೋಷವೋ ತಿಳಿಯಲಿಲ್ಲವು. ಶ್ರೀಮದಾಚಾರ್ಯರವರು, ದೋಷಮಖಿಳಂತ್ಯಕ್ತ್ವಾ ಗುಣಗ್ರಾಹಿಣೋ ಭೂತ್ವಾ ಯೆಂಬದಾಗಿ ತಮ್ಮ ಲೇಖನದೊಳು ಯಿರುವ ದೋಷಗಳನ್ನು ಬಿಡಬೇಕೆಂತ ಪ್ರಾರ್ಥಿಸುತ ಕೇಳಿಕೊಳ್ಳುವದರಿಂದ, ಅವುಗಳನ್ನು ವಿಚಾರಪೂರ್ವಕ ಹೊರಪಡಿಸಲಾಗದೆಬದೇ ಅವರ ಮನೋಗತವಾದ ಅಭಿಪ್ರಾಯವಾಗಿರಬಹುದಾದಕಾರಣ ನಾವೂ ಉಪೇಕ್ಷ್ಯಾತದೊಡನೆವಿರಮಿಸುವೆವು. ಇನ್ನು ಇವರಿಗೆ ಕರ್ಣಾಟ ಭಾಷೆಯಲ್ಲಿರುವ ಜ್ಞಾನ ವೈಶಿದ್ಯವನ್ನು ಅವರ ಲೇಖನವೇ ವ್ಯಕ್ತಪಡಿಸುವದಾಗಿರುವದರಿಂದಲೂ, ಅದನ್ನು ನಿರ್ಧರಿಸಿ ತಿಳಿದುಕೊಳ್ಳುವದಕ್ಕೆ ಈಗಿನಕಾಲದಲ್ಲಿ ಎಲ್ಲರೂ ಸಮರ್ಥರಾಗಿರುವದರಿಂದಲೂ ಆಭಾರವನ್ನು ಅವರಿಗೇ ಒಪ್ಪಿಸಿರುವೆವು. ನಮಗೆ ಕಳುಹಿಸಲ್ಪಟ್ಟಿರುವ ಸಂಚಿಕೆಯನ್ನು ನೋಡಲಾಗಿ ವರ್ಣಸ್ಖಾಲಿತ್ಯಗಳೂ ಅಪಭ್ರಂಶಪ್ರಯೋಗಗಳೂ, ಕ್ವಚಿದನನ್ವಯಗಳೂ ವಿಶೇಷತಃ ಕಂಡುಬರುತಿವೆ. (ರಾಜಪಾಪಂಪುರೋಹಿತಃ) ಎಂಬಂತೆ ಸಂಸ್ಕೃತ ಭಾಷಾನಭಿಜ್ಞರಾದ ವರ್ಣಸಂಯೋಜಕರ ದೋಷಕ್ಕೆ ಸಹನಮ ಆಚಾರ್ಯರವರು ಪಾತ್ರರಾಗಬೇಕಾಗಿ ಬಂದದಕ್ಕೋಸ್ಕರ ನಾವು ಬಹಳ ವಿಷಾದಿಸುವೆವು. ಇನ್ನು ವಿಷಯ ಸಂವಿಭಾಗವನ್ನೂ ಮುದ್ರಾಂಕನ ಸಾಷ್ಠವನನ್ನೂ ನೋಡಲಾಗಿ ಅವು ನಮ್ಮ ಪ್ರಶಂಸೆಗೆ ವಿಷಯಗಳಾಗಲಿಲ್ಲವು. ಯದ್ಯಪಿ ಪ್ರಕೃತ ಪ್ರಯತ್ನವು ಬ್ರಹ್ಮಶ್ರೀ ವೆಂಕಣ್ಣಾಚಾರ್ಯರ ಸಾಮರ್ಥ್ಯವನ್ನು ಮೀರಿದ್ದಾಗಿ ಇರುವದರಿಂದ ಅವರು ಸಮರ್ಥರಾದ ಪಂಡಿತರ ಸಹಾಯದೊಡನೆ ಈ ಕಾರ್ಯವು ಕೊನೆಮುಟ್ಟಿಸುವರಾದರೆ ಅವರ ಕೋರಿಕೆಯು ಸಫಲವಾಗಬಹುದು. ಇಲ್ಲವಾದರೆ ಈ ಕೆಲಸವು ಅವ್ಯವಸ್ಥಿತವಾಗಿ ಪರಿಣಮಿಸಿ ಹಾಸ್ಯಾಸ್ಪದವಾಗುವದು. ಈ ಗ್ರಂಥದ ತಾತ್ಕಾಲಿಕಸ್ಥಿತಿಯನ್ನು ನೋಡಲಾಗಿ

ಶ್ಲೋ॥ ಅನಧೀತಮಹಾಭಾಷ್ಯೈರ್ವ್ಯರ್ಥಾಸಾಪದಮಂಜರೀ। ಅಧೀತೇಪಿಮಹಾಭಾಷ್ಯೇ ವ್ಯರ್ಥಾಸಾಪದಮಂಜರೀ॥

ಎಂಬ ಪೂರ್ವಶ್ಲೋಕ ಒಂದು ಅನವರತ ನಮ್ಮ ಜ್ಞಾಪಕದೊಳು ಬರುತಲಿದೆ. ಈಶ್ಲೋಕಾನ್ವಯಕ್ಕೆ ಆಚಾರ್ಯರವರು ಮುಂದೆಯಾದರೂ ಅವಕಾಶ ಕೊಡದಿರುವರೆಂದು ನಂಬುತ್ತೇವಲ್ಲದೆ ಅವರ ಪ್ರಯತ್ನವು ನಿರ್ವಿಘ್ನವಾಗಿ ಪರಿಸಮಾಪ್ತವಾಗಬೇಕೆಂದು ಕೋರುವೆವು.

A REPLY.

ಹುಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಪಡಿಸಲ್ಪಟ್ಟಿರುವ ಜೆಂಜಾಲಕ್ಷ್ಮಿ ಸುಬ್ರಹ್ಮಣ್ಯ ರೆಂಬವರು ಬರೆದ ಕಾಗದದ ಮೂಲಕ ಅವರ ಅಭಿಪ್ರಾಯವು ಮೆಲ್ಲಗೂ ವ್ಯಕ್ತವಾಗಬಹುದು. ಅವರ ಪ್ರಶ್ನೆಗಳಿಗೆಲ್ಲ ಇವರಡಿ ಕ್ರಮವಾಗಿ ಪ್ರತ್ಯುತ್ತರ ಹೇಳುವೆವು,

೧ ಪಾಂಚಾಲರೆಂಬ ಹೆಸರು ಬ್ರಾಹ್ಮಣಾದಿಗೆ ಸೇರಿದವರೇ ಅಲ್ಲವೇ ಯೆಂಬದಕ್ಕೆ —ಜಾತಿಯೆಂಬದು ಕೇವಲ ಅನಾದಿಯೇ ಹೊರತು ಹುಟ್ಟಿನಿಂದ ಕೆಲವರು ಭಾವಿಸುತ್ತಾರೆ. ಅನ್ನೇ ನಾವು ಅಂಗೀಕರಿಸುವೆವು. ಬ್ರಾಹ್ಮಣತ್ವವು ಬ್ರಹ್ಮಜ್ಞಾನದಿಂದ ವುಂಟಾಗಬೇಕಾದ್ದಾಗಿರುವದರಿಂದಲೂ, ಅದಕ್ಕೆ ಜಾತಿನಿಯಮ ವಿಲ್ಲದ್ದರಿಂದಲೂ, ಬ್ರಹ್ಮಜ್ಞಾನ ನಷ್ಟವಾದ ಅರ್ಹರಾಗಿರುವ ಬ್ರಾಹ್ಮಣರೆನ್ನಿಸಿಕೊಳ್ಳಬಹುದು. ಅಥವಾ ಕ್ರಮವಿಲ್ಲದೆ ಜಿಯೂ ಕೊಟ್ಟ ಡಿಕ್ರಿಪತ್ರಿಕಾರವಾದರೂ ಆಗಬಹುದು. ಪರಂತು ಈಗ ಯಾವ ವಂಶಜರಿಗೆ ಅನಾದಿಯಾಗಿ ಬ್ರಾಹ್ಮಣರೆಂಬ ವ್ಯವಹಾರ ವುಂಟಾಗಿದೆಯೋ ಅವರೊಡನೆ ಇವರಂ ಸೇರಿಸಲಿಕ್ಕೆ ಅಸಾಧ್ಯ ವಾಗಿರುತಿದೆ.

೨ ಇವರು ನಾಲ್ಕು ವರ್ಣಗಳಲ್ಲಿ ಯಾವ ವರ್ಣಕ್ಕೆ ಸೇರಿದವರೆಂಬದಕ್ಕೆ —ಯಾಜ್ಞಿಕರೂ ಪೂರ್ವಪಕ್ಷಿ ಸಿದ್ಧಾಂತಿಗಳ ವಾದಗಳಿಗಿಂತಲೂ ಮಧ್ಯಸ್ಥರಾಗಿರುವವರ ಅಭಿಪ್ರಾಯವು ಪರಮಪ್ರಮಾಣವಾಗಿಯೂ ಅಂಗೀಕಾರವಾಗಿಯೂ ಇರುವದರಿಂದ ಅನ್ಯರ ವಾಕ್ಯವನ್ನೇ ಅಂಗೀಕರಿಸಬೇಕಾಗಿದೆ. ಅನ್ಯರೆಂಬವರು ಈ ಇಂಗ್ಲಿಷ್ ಸರ್ಕಾರದವರಾಗಿರುತ್ತಾರೆ ಇವರು ಬಹಳ ಶೋಧನೆಯಿಂದ ಪ್ರಕಟಿಸಿರುವ ಸೆನ್ಸಸ್ ರಿಪೋರ್ಟ್ ಮೊದಲಾದಗ್ರಂಥಗಳಲ್ಲಿ ಇವರನ್ನು ಶೂದ್ರಜಾತಿಯಲ್ಲಿ ಸೇರಿಸುತ್ತಾರೆ. ಹಾಗೆ ಸೇರಿಸಲಿಕ್ಕೆ ಪ್ರಾಚೀನವಾದ ಸಂಪ್ರದಾಯವನ್ನು ಅವರು ಅರಿತಿರಲಾರರೆಂದು ಯೋಚಿಸುವ ಪಕ್ಷಕ್ಕೆ. (ಬ್ರಹ್ಮ ಕ್ಷತ್ರಿಯರಿಬ್ಬರು ಮಾತ್ರ) ಅನ್ಯ ವಂಶಜರೆಂತಲೂ ಅನ್ಯವೇಶೀಯರೆಂತಲೂ ಅನಾದಿಯಾಗಿ ಭಾವಿಸಲ್ಪಟ್ಟಿರುವದರಿಂದ, ಇವರನ್ನು ಶೂದ್ರರಲ್ಲಿ ಸೇರಿಸಿದ್ದು ನ್ಯಾಯಾನ್ಯಾಯವಲ್ಲವು? ಇದು ಹಾಗಿರಲಿ, ಕ್ರಿಸ್ತಶಕಕ್ಕೆ ಬಹುಕಾಲದ ಹಿಂದೆ ನೆಲಸೊಂಡಿದ್ದ ಬೌದ್ಧರುಅವು ಅರ್ಹ ವಂಶಜರಾದ ಉತ್ತಮ ಕ್ಷತ್ರಿಯರಿಂದ ಅಂಗೀಕರಿಸಲ್ಪಟ್ಟದ್ದಾಗಿರುತಿದೆಯಾಗಿ ತಿನ್ನುತ ಪ್ರತ್ಯುತ್ತರವಾದ ಅಮರಸಿಂಹನೆಂಬ ಬೌದ್ಧ ಪಂಡಿತರಿಂದ ವಿರಚಿತವಾದ ನಾಮಲಿಂಗಾನುಶಾಸನವೆಂಬ ಗ್ರಂಥದಲ್ಲಿ ಸಂಕರ ಜಾತಿ ನಿರೂಪಣ ಪ್ರಮದೊಳು,

ಶ್ಲೋ॥ ಶೂದ್ರಾವಿಶೋಸ್ತುಕರಣೋಂಬಷ್ಠೋವೈಶ್ಯಾದ್ವಿಜನ್ಮನೋಃ। ಶೂದ್ರಾಕ್ಷತ್ರಿಯಯೋರುಗ್ರೋಮಾಗಧಃಕ್ಷತ್ರಿಯಾವಿಶೋಃ॥ ಮಾಹಿಷ್ಯೋರ್ಯಾಕ್ಷತ್ರಿಯಯೋಃಕ್ಷತ್ತಾರ್ಯಾಶೂದ್ರಯೋಃಸುತಃ। ಬ್ರಾಹ್ಮಣ್ಯಾಂಕ್ಷತ್ರಿಯಾತ್ಸೂತಸ್ತಸ್ಯಾಂವೈದೇಹಕೋವಿಶಃ॥ ರಥಕಾರಸ್ತು ಮಾಹಿಷ್ಯಾತ್ಕರಣ್ಯಾಂಯಸ್ಯಸಂಭವಃ। ಸ್ಯಾಚ್ಚಂಡಾಲಸ್ತುಜನಿತೋಬ್ರಾಹ್ಮಣ್ಯಾಂವೃಷಲೇನಯಃ ॥

ಎಂಬದಾಗಿ ತಿಳಿಸಲ್ಪಟ್ಟಿರುವದರಿಂದ ಬೇರೇ ಸಾಧನ ಬೇಕಾದ್ದಿಲ್ಲವು.

೩ ನಾಲ್ಕು ವರ್ಣದವರ್ಯಾರು ಎಂಬದಕ್ಕೆ, —ಬ್ರಾಹ್ಮಣ ಕ್ಷತ್ರಿಯ ರೆಂಬವರು ಪ್ರಸಿದ್ಧರಾಗಿರುವದರಿಂದಲೂ, ಇದಿನೆಂಟು ಪಣಕ್ಕೆ ಸೇರಿದ ಕೋಮಟಿಗಳೂ, ಎಡಪಣಕ್ಕೆ ಸೇರಿದ ಛೇರೀ, ನಗರ್ತರೂ ವೈಶ್ಯಶಬ್ದಕ್ಕೆ ವಿಷಯರಾಗಿರುವದರಿಂದ ಸದರೀ ಯಿಬ್ಬರನ್ನೂ ವೈಶ್ಯರೆಂದು ಒಪ್ಪಿಕೊಳ್ಳಬಹುದಾಗಿ ಇರುವದರಿಂದಲೂ, ಪಂಚಮರು ಪ್ರತ್ಯೇಕವಾಗಿ ಏರ್ಪಟ್ಟು ಅವರಿಗೆ ವಾಸ ಪಟ್ಟಣ ಊರಿನ ಕೊರು ಕಪ್ಪಿ ತೋರಿರುವದರಿಂದ, ಮೇಲೆ ಕಂಡ ಮೂರು ವರ್ಣದವರಲ್ಲದೆಯೂ ಪಂಚಮರಲ್ಲಿ ಸಂಬಂಧಿಸದೆಯೂ ಯಿರುವವರೆಲ್ಲರೂ ಶೂದ್ರರಾದ್ದರಿಂದಲೂ ಈ ಪ್ರಶ್ನೆಗೆ ಇದೇ ಸಾಕಾದ ಉತ್ತರವಾಗುತಿದೆ.

ನಮ್ಮ ದಾತೆನಾದಾಗ ಈಗ ವ್ಯವಹಾರದೊಳಿಟ್ಟ, ಪಾಂಚಾಲನ ಶಬ್ದವು ಕೆಲಗೆ ಯಾಕೆ ವ್ಯವಹಾರಕ್ಕೆ ವಿಷಯ ವಾಯಿತೆಂದು ಕೇಳಬಹುದು. ಪ್ರತಿಜಾತಿಯವರೂ ತಮ್ಮತಮ್ಮ ಔತ್ಪತ್ತಿಕವಾದ ಒಂದು ಗೌರವಾತಿಶಯವಾದ ನಾಮಧೇಯವನ್ನು ಪಡೆಯಲಿಕ್ಕೆ ಬಯಸುವುದುಂಟಾಗಿದೆ. ಹ್ಯಾಗೆಂದರೆ ಅಕ್ಕಸಾಲಿಗರು ಪಾಂಚಾಲರೆಂತಲೂ, ಚೆಲುಗು ಬಣಜಿಗರು ನಾಯಕರೆಂತಲೂ, ಲಿಂಗಬಣಜಿಗರು ಶೆಟ್ಟಿಗಳೆಂತಲೂ ಗೊಲ್ಲರು ಪಿಳ್ಳೆಗಳೆಂತಲೂ, ಬೇಹಾರಗಾರರು ಮೊದಲ್ಯಾರೆಂತಲೂ, ಇವರಲ್ಲಿ ಸದಾಚಾರ ಸಂಪನ್ನರಾದವರು ಪೆಳ್ಳಾಳರೆಂತಲೂ ಈರೀತಿ ನಾನಾವಿಧ ಹೆಸರುಗಳು ಯಾದಿಯೊಳು ಬಂದಿರುತಿವೆ. ಪಾಂಚಾಲನ ಶಬ್ದಕ್ಕೆ ಬ್ರಹ್ಮನ ಐದು ಮುಖಗಳಿಂದ ಹುಟ್ಟಿದವರೆಂದು ವಾದಿಗಳೂ, ಪಂಚಕಮ್ಮಾರರು ಅಂದರೆ ಐದು ವಿಧವಾದ ಕೆಲಸ ಮಾಡತಕ್ಕ ಒಂದೆ ಜಾತಿಯವರೆಂದು ಪ್ರತಿವಾದಿಗಳೂ ಹೇಳುತ್ತಾರೆ. ಅನ್ಯರಿಂದ ಪ್ರಕಟಪಡಿಸಲ್ಪಟ್ಟಿರುವ ಲೇಖನಕ್ಕೆ ಇದು ಸಾಕಾದ ಪ್ರತ್ಯುತ್ತರವಾದದರಿಂದ ಇಷ್ಟಕ್ಕೆ ಸದರೀ ಸುಬ್ರಹ್ಮಣ್ಯನವರು ತೃಪ್ತರಾಗಬಹುದೆಂದೆಣಿಸುತ್ತೇವೆ.

AN ORDER FOR RETRIAL.

ಆಗಸ್ಟಿಂಗ ೨೬ನೇ ತಾರೀಖಿನ ಈ ಪತ್ರಿಕೆಯಲ್ಲಿ ಈ ಸಂಸ್ಥಾನದ ಕೆಲರು ಅಧಿಕಾರಿಗಳ ಔದ್ಧತ್ಯಯುಕ್ತವಾದ ಅಹಂಕಾರ ಕೊಬ್ಬಿನ ನಡವಳಿಕೆಗಳ, ಗೌರವ್ಯನಾದ ಒಬ್ಬ ನಬೇಲನ ವಿಷಯದಲ್ಲಿ, ಇಲ್ಲಿನ ಸಬ್‌ಡಿವಿಜನ್ ಅಧಿಕಾರಿಗಳೊಬ್ಬರು, ಅಮಗ್ಯಾದೆಯಾಗಿ ನಡೆಸಿದರೆಂತಲೂ, ಅವರು ಆ ಪರಿಸ್ಥಿತಿಗೆ ಕೊಟ್ಟು ಕಿಸಲ ಬಂದು, ಸಬ್ ಡಿವಿಜನ್ ಆಫಿಸರರವರಲ್ಲ್ಯವರಂ ಪರಿಭಾವಿಸಿ ಪಟೇಲನು ಠಾಣೇಯಾಗುವದು ಕಸನೆ ಹೇಮವೆಂದಾರೋಪಿಸಿ ಆರೀತಿ ಮಾಡಿದನೆಂತಲೂ ತಿಳಿಸಿದ್ದೇವಷ್ಟೆ. ಈಚೆಗೆ ಚೀಫ್‌ಜಡ್ಜಿಯವರು ಸದರೀ ಮೊಕದ್ದಮೆಯ ಯಾದಾಸ್ತೆಯನ್ನು ಪರಂಪರೆಯಾ ತಿಳಿದು ಕೊಂಡು ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಕಾಗದವನ್ನು ತರಿಸಿ ನೋಡಿ ಅದರಮೇಲೆ ಮೊಕದ್ದಮೆಯು ನಡಿಸಲ್ಪಟ್ಟ ಕ್ರಮವು ಸಾಕರಾಂ ತೃಪ್ತಿಕರವಲ್ಲವೆಂ

ಕಲೂ, ಸಬ್ ಡಿವಿಜನ್ ಆಫೀಸರರಿಗೆ ಬಂಧನವನ್ನು ಕಲ್ಪಿಸಿದ್ದು ಶಾಮಾನಿಗೆ [illegible] ಗ್ರವಾದ್ದರಿಂದಲೂ, ಈ ಸಮಯದಲ್ಲಿ ಯಿರುವ [illegible] ನಮೂಲಕ ಮೊಕದ್ದಮೆಯು ರುಜುವಾತಾಗಿದ್ದರೂ, ನಡಿಸಬೇಕಾದ ಕ್ರಮ ಪ್ರೊಂದೂ ನಡೆಸಲ್ಪಟ್ಟಂತೆ ಗಾಣಲಿಲ್ಲವಾದ್ದರಿಂದಲೂ, ಈ ಮೊಕದ್ದಮೆಯು ಪುನರ್ವಿಮರ್ಶೆ ಯಾಗಬೇಕಾಗುವದರಿಂದ ಅದಕ್ಕೆ ಸಂಬಂಧ ಪಟ್ಟವರನ್ನು ಕರೆಯಿಸಿ ಕ್ರಮವಾಗಿ ವಿಚಾರಣೆಮಾಡಿ ಅದರ ಫಲಿತಾಂಶವನ್ನು ಕಮಿಷನರಿಗೆ ಯಥಾವತ್ತಿತವಾಗಿ ತಿಳಿಸಬೇಕೆಂದಲೂ ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮೀಷನರವರಿಗೆ ಹುಕುಂ ಮಾಡಿರುವಂತೆ ಈಚೆಗೆ ನಮ್ಮ ಕೇಳ್ವಿಕೆಗೆ ಬಂದಿರುತಿದೆ. [illegible] ನಿಜವಾಗಿದ್ದರೂ ಕೇಳಲೇ ಎನಿಸುತ್ತೇವೆ. ಒಂದು ವೇಳೆ [illegible] ವಕ್ಕೆ, [illegible] ಬಂದ ಬರ್ಗ ಉವೃ [illegible] ಕೃತ ಮೊಕದ್ದಮೆಗೆ [illegible] ನಬುದ್ಧ್ಯೇವೆ ಕೊ ಕದಲ್ಲಿ [illegible] ತಿಳಿಂತಿಲೂ [illegible] ಕಷ್ಟಕರವಾದದ್ದು. [illegible] ಅನುಷ್ಠಿಕ ಬಂತೆ [illegible] ನಿಗೆ ನಷ್ಟವು [illegible] ಧರಗ [illegible] ಮಾಡುವರು.

THE MYSORE STATE RAILWAY

ನಾವು ಮೊದಲೆ ಸೂಚಿಸಿದಂತೆ ಮೈಸೂರು ಸ್ಟೇಟ್ ರೈಲ್ವೆ [illegible] ರಿಲ್ಲ ಪ್ರಾಪ್ತಿಸಿದಂತೆಯೂ, ಇಂಡ್ಯ ಗವರ್ನಮೆಂಟಿನವರ [illegible] ದಕ್ಷಿಣ [illegible] ಶಾಟಾ ರೈಲ್ ವೆ ಕಂಪಿ [illegible] ರೂಪಾಯಿಗಳ [illegible] ಬೆಂಗಳೂರು [illegible] ರೈಲ್ವೆ [illegible] ಕೊಡಲ್ಪಟ್ಟಂತೆ [illegible] ಮೊದಲು [illegible] ಉದ್ದ್ಯೋಗ [illegible] ಮೈಸೂರು ಸ್ಟೇಟ್ [illegible] ಈ ಸಂಸ್ಥಾನಕ್ಕೆ [illegible] ಬಂದು ಹೋಟ [illegible] ಯಿಗಳ ಸಾಲವನ್ನಿತ್ತಿ [illegible] ಸುಲಭವಾಗಿ [illegible] ದಿನ ದೆಸೆಯಿಂದ ಮೈಸೂರು [illegible] ಶ್ರೀ ಮನ್ಮಹಾರಾಜರವರಿಗೆ [illegible] ಲಾಭವುಂಟಾಯಿತೆ [illegible] ರ್ಯಾಗಿಂದ—ಮೆ ಸೂರಿಂದ [illegible] ಬೆಂಗಳೂರಿಂದ ಗೋರೀಬಿದನೂರು [illegible] ವಾಗಿ [illegible] ರಕೂ, ರೈಲ್ [illegible] ಈ ಮೈಸೂರು ದೇಶ ಮೊದಲ್ಲಿ ಸುಲಭವಾಗಿ ಜನಗಳು ಸಂಚಾರ ಮಾಡುವದಕೂ, ವ್ಯಾಪಾರಾಭಿವೃದ್ಧಿಯಾಗಿ ಅದರಿಂದ [illegible] ವಿಶೇಷ ಲಾಭವುಂಟಾಗುವದಕೂ, [illegible] ಕಾರಣವಾಯಿತು. ಶ್ರೀಮನ್ಮಹಾರಾಜರವರಿಗೆ ರಾಜ್ಯ [illegible] ಪಟ್ಟಕಟ್ಟ ಕಾಗಿನಲ್ಲಿ ರೈಲ್ವೆಗೆ ಬೇಕಾದ [illegible] ಗಳನ್ನೂ [illegible] ಅದರ [illegible] ಇಂಗ್ಲಿಷ್ [illegible] ನಿರ್ಭಯವಾಗಿ ಕೊಡಬೇಕೆಂದು [illegible] ದಿಸಲ್ಪಟ್ಟಿರುವದರಿಂದಲೂ, ಈಗ ಮೊದಲ್ಪಟ್ಟ ರೈಲ್ ಗಸ್ತಿಗಳು ಪ್ರಾಪ್ತಿಸದೆ, [illegible] ಲಾಭವು ಉತ್ಪತ್ತಿಯಾಗದೆ, [illegible] ಅಸಾಧ್ಯವಾಗುವದರಿಂದಲೂ, [illegible] ಗಸ್ತಿಗಳನ್ನು ಉದ್ದಿಷ್ಟ ಸ್ಥಳಗಳವರೆಗೆ [illegible] ಕ್ಕೆ ವಿಶ್ವತಿ ಸ್ಥಿತಿಗಳಲ್ಲಿ [illegible] ರಿಂದಲೂ, [illegible] ಮೂಲಕ ಈ ಮೈಸೂರು ದೇಶದಲ್ಲಿ ಸರ್ವತ್ರ ರೈಲ್ ಗಸ್ತೆ ನೆಲಗೊಂಡಿದೆ ಯೆಂಬ [illegible] ಮುಂದೆ ಮಹಾರಾಜರವರು [illegible] ಅವರು [illegible] ನಿರ್ಭಯ [illegible] ಕೂ ಕಾರಣವಾಗುವದೇ ಮಂ(ಕ್ಕೆ ಮೊದಲು)

MORALITY OF DRAMAS.

ಈಗ ನಮ್ಮ ಜನಗಳಿಗೆ ನಾಟಕಗಳಲ್ಲಿ ಅಭಿರುಚಿಯು ಹೆಚ್ಚಾಯಿತು. ಹೀಗಿರುವದರಿಂದ ಜನರ ಸ ನಡಿಗಳಲ್ಲಿ ಆಗಕಕ [illegible] ವ್ಯತ್ಯಾಸಗಳನ್ನೂ ಮುಂದೆ ಆಗಬಹುದಾದ ಕೇಡುಗಳನ್ನೂ ಆಲೋಚಿಸಿದರೆ ಭಯವಾಗುತ್ತದೆ. ಈ ಕೇಡುಗಳಿಗೆಲ್ಲಾ ದಿವ್ಯಾರ್ಜನೆಗಾಗಿ ಪ್ರಯೋಗ ಮಾಡುವ ನಾಟಕಶಾಲೆಯವರೂ ಅವರನ್ನು ಪ್ರೋತ್ಸಾಹ ಪಡಿಸುವ ದೊಡ್ಡ ಮನುಷ್ಯರೂ ಸಭಾಗಳಿಗರಾಗಿದ್ದಾರೆ. ನಾಟಕಗಳು ಎಷ್ಟು ಬೀಭತ್ಸವಾದ [illegible] ಗಿದ್ದರೂ, ಜನಗಳಿಗೆ ಅಸಹ್ಯವಾಗಿರಲೆಂದು ಮುಚ್ಚಿ [illegible] ಜನಗಳನ್ನು ದುರ್ಮಾರ್ಗದಲ್ಲಿ ಪ್ರವರ್ತಿಸುವ [illegible] ಸಹಾಯಕರಾಗಳಾದ ಪಾತ್ರ ಪ್ರವೇಶವನ್ನು ಸಾಧಿಸುತ್ತಾರೆ. ನಾಟಕಗಳೆಲ್ಲಾ ಸಮಗ್ರವಾಗಿ ತಿಳಿದುಕೊಂಡು ಅವುಗಳಿಂದ ಹುಟ್ಟುವ ನೀತಿಯನ್ನು ಅಭ್ಯಾಸ ಮಾಡುವರು ಸ್ವಲ್ಪ. ಆಯಾ ಪಾತ್ರ ಪ್ರವೇಶ [illegible] ಅನೇಕರ ಮನಸ್ಸಿನಲ್ಲಿ ನೆಟ್ಟು [illegible] ಅಭಿಪ್ರಾಯವು ಅವರಿಗೆ ಹುಟ್ಟುತ್ತದೆ ಎಲ್ಲಾ ನಾಟಕಗಳನ್ನೂ [illegible] ನೋಡಿದರೆ, ಅದರಿಂದ ಧರ್ಮವು ವೃದ್ಧಿಯಾಗುವದಕ್ಕೆ [illegible] ಪಾಪವು ವೃದ್ಧಿಯಾಗುತ್ತದೆ. [illegible] ದೇಶಗಳಲ್ಲಿ [illegible] ಇವುಗಳನ್ನು [illegible] ಪ್ರೋತ್ಸಾಹ [illegible] ಬಾಲಕರು [illegible] ಟಗಾಯಿಕರು ಕೆಟ್ಟು ಹೋಗುತ್ತಾರೆ [illegible] ಧರ್ಮವೃದ್ಧಿ [illegible] ಕಷ್ಟ [illegible] ಹೋಗಾ [illegible] ಕೆಡುವದಕ್ಕೆ [illegible] ತರ್ಕ ಉಪಶಿಕ್ಷೆಯು [illegible] ಮೇಲ್ಕಂಡ ಅಭಿಪ್ರಾಯವನ್ನು ನಾವು [illegible] ಪಾರಿಜಾತನಾಟಕವು ಶ್ರೀಕೃಷ್ಣ [illegible] ಭಾಮೆ [illegible] ಗೌರವವೊಡನೆ ಅಡಲ್ಪಟ್ಟಿದ್ದ್ಯ ಅದರಂತೆ [illegible] ಕುರೂ [illegible] ಅನೇಕ ಪುರುಷರು ಜಾರತ್ವದಲ್ಲಿ [illegible] ಪ್ರವೃತ್ತಿಯುಳ್ಳವರಾಗಿ [illegible] ಪುರುಷರಿಗೆ [illegible] ಪತಿವ್ರತ್ವಜ್ಞಾನ ಹುಂಟಾಯಿತೋ [illegible] ಜ್ಞಾನವು ಈಗಿನ ನಾಟಕಗಳಿಂದ ಸ್ತ್ರೀಯರಿಗೆ ಹುಂಟಾಗಲಾರದು. ಈ ಪ್ರಾಲ್ಲಿ [illegible] ನಾಯಕಿಯಾದ [illegible] ಯೊಬ್ಬಳು, ಒಂದು ಸಂಸ್ಥಾನದಲ್ಲಿ ಟಿಳಿಸಿದವನಿಂದಲೇ—ಆ ನಾಯಿಕಿಯಾದ [illegible] ವೃತ್ತಿಯು ಈಗಿನ ನಾಟಕಕ್ಕಿಂತ [illegible] ಅಪಹರಿಸಲ್ಪಟ್ಟವೆನೂ ಅನ್ನುಗಳಿಲ್ಲವು. [illegible] ನಾಯಿಕಸಾರಿಗೆ [illegible] ವೃತ್ತಿ [illegible] ಉಪಕ್ರಮಿಸುವಂತೆಯೂ, ಇನ್ನು ಅನೇಕರು ನಾಟಕಗಳನ್ನು ನೋಡುವದರಲ್ಲಿ [illegible] ದ್ರವ್ಯ ಸಂಪಾದಿಸಿದ್ದು [illegible] ನಾಟಕಗಳಿಗೋಸ್ಕರ ವ್ಯಯ ಮಾಡಿದರೆ [illegible] 'ಬಂಧದಲ್ಲಿ [illegible] ಕಳೆದುಕೊಂಡರು. [illegible] ಲಜ್ಜೆಯು [illegible] ನಮ್ಮನ್ನು [illegible] ಸ್ತ್ರೀ [illegible] ಹಿರಿ [illegible] ದುರ್ವ್ಯಾಪಾರವಾಗ್ತದೆ. [illegible] ಅಂತು ಅವುಗಳ ನಿಮಿತ್ತವಾಗದಿರಲಾರದು.

Occasional Notes
ನೈಮಿತ್ತಿಕ ವಿಷಯನ್ಯಾಸ.

Cholera.—ರಂಗೂನ್ ಸೆಂಟ್ರಲ್ ಜೈಲಿನಲ್ಲಿ ವಾಂತಿಭೇದಿರೋಗ ವ್ಯಾಪಿಸಿ ಅಲ್ಲಿರುವ ಖೈದಿಗಳೊಳು ಪ್ರಾಣಹಾನಿಗಳುಂಟಾಗುತಲಿದೆ.

Arrest of priests.—ಬರ್ಮಾದೇಶದಲ್ಲಿ ಗುರುಜನರಪೈಕಿ ನೂರರು ಯೇನೋ ದುಷ್ಕೃತ್ಯ ನಡೆಸಿದರೆಂಬ ಕಾರಣದಮೇಲೆ ಅವರೆಲ್ಲರನ್ನೂ ಬಂಧಿಸಗಿರಿಮಾದುವಂತೆ ರಾಜಾಜ್ಞೆ ಹುಟ್ಟಿ ಅದರಿಂದ ಬಹಳ ಗದ್ದಲ ಹುಂಟಾಗಿದೆ ಯೆಂದು ತಿಳಿಯಬರುತಿದೆ.

The Russian officers.—ರಷ್ಯಾ ಜನಗಳಲ್ಲಿ ಒಂದು ಪ್ರವಾದ ಹುಂಟಾಗಿರುವಂತೆ ಇಂದು ಪ್ರಕಾಶ ಪತ್ರಿಕೆ ತಿಳಿಸುತಿದೇನೆಂದರೆ, ರಷ್ಯಾ ಆಫಿಸರ್‌ಗಳು ಪೂರ್ವದೇಶ ಸಂಬಂಧವಾದ ಭಾಷೆಗಳನ್ನು, ತತ್ರಾಪಿ ಹಿಂದುಸ್ತಾನಿಯನ್ನು ಸಮಗ್ರವಾಗಿ ಕಲಿತುಕೊಳ್ಳಬೇಕೆಂದು ಅವರಿಗೆ ರಷ್ಯಾ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆಂಬದು.

Major Tuckkar.—ಮೇಜರ್ ಟಕರ್ ಯೆಂಬವರು ಈಚಿಗೆ ಕೇವಲ ತಾಪಸವೃತ್ತಿಯನ್ನು ಕೈಗೊಂಡಿರುವಂತೆ ತಿಳಿಯಬರುತಿದೆ. ಅದು ಹ್ಯಾಗೆಂದರೆ—ರಮ್ಮ ಜಾತಿ ಪ್ರಯುಕ್ತವಾದ ಹಸ್ತ್ರವ್ಯಾಪಾರಗಳನ್ನೆಲ್ಲ ತೊರೆದು ಸಾತ್ವಿಕಾಹಾರವನು ಪರಿಗ್ರಹಿಸುತ ಯೋಗ ನಿರತರಾಗಿ ಕೆಲವರು ಶಿಷ್ಯರೊಡನೆ ಇರುತಲಿರುವಂತೆ ಕೇಳುತ್ತೇವೆ.

Newspaper copyright.—ನ್ಯೂಸಪೇಪರ್ ಕಾಪಿರೈಟ ವಿಷಯದಲ್ಲಿ ಜೆರ್ಮಾದೇಶದ ಅಧಿಕಾರಿಗಳಿಗೆ ಅಕ್ಕರೆ ಹುಂಟಾಗಿರುವಂತೆ ಕಾಣುತಿದೆ. ಒಂದು ಪತ್ರಿಕೆಯಲ್ಲಿ ಒಂದು ವಿಷಯವನ್ನು ಕುರಿತು ಬರೆಯಲ್ಪಡುವ ಲೀಡಿಂಗ್ ಆರ್ಟಿಕಲ್‌ಎಂಬ ಉಪನ್ಯಾಸವನ್ನು ಲೇಖಕರ ಅನುಮತಿಯಿಲ್ಲದೆ ಅದು ಪ್ರಕಟಿಸಿದ ಹತ್ತುದಿನಗಳೊಳಗಾಗಿ, ಬೇರೆಯೊಂದು ಪತ್ರಿಕೆಯಲ್ಲಿ ಸಂಗ್ರಹಿಸಿ ಪ್ರಕಟಿಸಕೂಡದೆಂಬ ನಿರ್ಬಂಧಪೂರ್ವಕವಾದ ಇಸ್ತಿಹಾರ್ ಕೂಡಲ್ಪಟ್ಟಿರುತದೆ.

Offer of an honour declined.—ಮಿ. ಗ್ಲಾಡ್‌ಸ್ಟನ್‌ಯವರು ಪ್ರಧಾನ ಮಂತ್ರಿಯವರಾಗಿ ರಮ್ಮಲರಸರಿಗೂ ದೇಶಕ್ಕೂ ಮಾಡಿದ ನೌಕರಿಯನ್ನು ಪುರಸ್ಕರಿಸಿ ಅವರಿಗೆ ಅರಲ್‌ದೆಯೆಂಬ ಪ್ರಶಸ್ತಿಯಂ ಕೊಡಬೇಕೆಂದು ರಮಗೆ ಹುಂಟಾಗಿರುವ ಅಭಿಪ್ರಾಯವನ್ನು ಮಹಾರಾಜ್ಞೀಯವರು ಮಿ. ಗ್ಲಾಡ್‌ಸ್ಟನ್‌ಯವರಿಗೆ ತಿಳಿಸಲಾಗಿ, ಮಿ. ಗ್ಲಾಡ್‌ಸ್ಟನ್‌ಯವರು ಮಹಾರಾಜ್ಞೀಯವರ ದಯಾಪೂರ್ವಕವಾದ ಅಭಿಪ್ರಾಯವನ್ನು ಕೃತಜ್ಞತೆಯೊಡನೆ ತಿಳಿದು, ಪರಂತು ಅಂತಾ ಘನತರವಾದ ಪ್ರಶಸ್ತಿಯಂ ಕಳೆದುಕೊಳ್ಳುವ ಸ್ವಾತಂತ್ರ್ಯವು ತಮಗೆ ಉಂಟುಮಾಡಬೇಕೆಂದು ಕೇಳಿಕೊಂಡರೆಂದು ಟೈಂಸ್‌ಪತ್ರಿಕೆ ಹೇಳುತಿದೆ.

The Bombay Municipal loan.—ಮುಂಬೈ ಮ್ಯುನಿಸಿಪಲ್ ಆರಾಧೆಯವರು ಸಾಲೀಯಾನಾ ಸೇಕಡ ಐದುರೂಪಾಯಿಗಳ ಬಡ್ಡಿಗೆ ಮೂವತ್ತೈದುಲಕ್ಷ ರೂಪಾಯಿಗಳ ಸಾಲಬೇಕೆಂತಲೂ ಆಬಗ್ಗೆ ಪರವಾನ್ನಿಗಳು ಕೊಡಬಹುದೆಂತಲೂ ಫಾಯಿಷ್ ಮಾಡಿದುತ್ತಾರೆ. ಈಚೆಗೆ ಮರಮ್ಮತ್ ಇಲಾಖಾ ಖರ್ಚುಗಳಬಗ್ಗೆ ನಾಲ್ವತ್ತುನಾಲ್ಕು ಲಕ್ಷ ರೂಪಾಯಿಗಳು ಸಾಲಮಾಡುವಂತೆ ಗವರ್ನಮೆಂಟಿನವರು ಮ್ಯುನಿಸಿಪಲ್ ಅಧಿಕಾರಿಗಳಿಗೆ ಅಪ್ಪಣೆ ಕೊಟ್ಟಿದ್ದರು, ಪರಂತು ಹಾಜರಿಯಲ್ಲಿ ಶಿಲ್ಕು ಇರುವಂತೆ ಕಂಡುಬಂದದರಿಂದ ಚಾಲತೀ ರೆವಿನ್ಯೂಪೈಕಿ ಅತ್ಯಾವಶ್ಯಕ ಕೊಡುವವರ ಮೂಲಕ ಪ್ರಸಕ್ತ ಕಾಮಗಾರಿಗಳಪೈಕಿ ಇಪ್ಪತ್ತುಲಕ್ಷ ರೂಪಾಯಿಗಳು ತೆಗಲುವಷ್ಟು ಕೆಲಸವನ್ನು ನಡೆಸುವದಕ್ಕೆ ಸಾಧ್ಯವಾಗಿ ಕಂಡುಬಂತು. ಇವರ ಬೇಡುವಳಿ ಸಾಲೀಯಾನಾ ನಾಲ್ವತ್ತೈದುಲಕ್ಷ ರೂಪಾಯಿಗಳು.

Poisonous combination.—ಈಶ್ವರನಿರ್ಮಿತವಾದ ಪದಾರ್ಥಗಳಲ್ಲಿ ಸ್ವಾಭಾವಿಕ ಗುಣಗಳಿರುತಿವೆಯಲ್ಲದೆ ಅವುಗಳ ಪರಸ್ಪರ ಸಮ್ಮೇಳನದಿಂದ ವಿಪರೀತ ಗುಣಗಳುಂಟಾಗುತಿವೆ ಯೆಂಬದನ್ನು ಪದಾರ್ಥ ತತ್ವವಿವೇಚಕ ಪ್ರಾಜ್ಞರು ಅಂಗೀಕರಿಸದಿರಲಾರರು. ನಿಂಬೇಹಣ್ಣಿನರಸವೂ, ಶರ್ಕರೆಯೂ, ಕ್ಷೀರವು ಸಹ ಖಾದ್ಯವಸ್ತುಗಳಾಗಿ ಜನಗಳಿಗೆ ಯಾವಾಗ್ಯೂ ಸುಖಸಂತೋಷಗಳನ್ನುಂಟುಮಾಡತಕ್ಕವಾದರೂ ಅವುಗಳನ್ನು ಒಂದಾಗಿಕೇರಿಸಿದರೆ ಕೂಡಲೇ ಅದು ವಿಷರೂಪೇಣ ಪರಿಣಮಿಸಿ ಪ್ರಾಣಹಾನಿಯನ್ನುಂಟುಮಾಡುತಿದೆಂದು ಮಹಾರಾಷ್ಟ್ರಪತ್ರಿಕೆಯೊಂದು ತಿಳಿಸುತಿದೆ. ಆದರೆ ಈ ಅಂಶವನ್ನು ಇತರ ವಿಷಯಗಳಂತೆ ಪರೀಕ್ಷಿಸಿ ನೋಡುವದಕ್ಕೆ ಸಾಧ್ಯವಲ್ಲವಾಗಿ ಸದರೀ ಪದಾರ್ಥಗಳನ್ನು ಏಕಕಾಲದಲ್ಲಿ ನಾವು ಸೇವಿಸದಿದ್ದರೂ ಭಿನ್ನಕಾಲದಲ್ಲಿ ಪ್ರತ್ಯೇಕ ರೂಪವಾಗಿ ಸೇವಿಸುತ್ತೇವೆ. ಪರಂತು ಅವುಗಳ ಸಮ್ಮೇಳನದಿಂದವುಂಟಾಗತಕ್ಕ ವಿಪರೀತಗುಣವು ಯಾವಮೂಲಕ ನಿವೃತ್ತಿಯಾಗುತಿದೆಯೋ ತಿಳಿಯಲಿಲ್ಲವು.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

—:o:—

The Commander-in-Chief.—ಮದರಾಸ್ ಕಮಾಂದರ್ ಇನ್ ಚೀಫ್‌ರವರಾದ ಘನವನ್ನು ಹೊಂದಿದ ಸರ್. ಫ್ರೆಡರಿಕ್ ರಾಬರ್ಟ್‌ಸಿಯವರು, ಬರುವತಿಂಗಳ ಆದಿಭಾಗದಲ್ಲಿ ಈ ಊರಿಗೆ ಬರುವರೆಂದು ನಿರೀಕ್ಷಿಸಲ್ಪಟ್ಟದೆ.

The Races.—ಈಸಲದ ಕುದುರೇಪಂದತ್ತು ಬರುವತಿಂಗಳ ೬ನೇ ತಾರೀಖಿನಲ್ಲಿ ಪ್ರಾರಂಭವಾಗುವದೆಂದು ಕೇಳುತ್ತೇವೆ. ಪ್ರತಿ ವರುಷದಲ್ಲಿಯೂ ಇದು ಜೂಲೈ ತಿಂಗಳಲ್ಲಿ ನಡೆಯಬೇಕಾದದ್ದಾದರೂ ಕೆಲವು ಕಾರಣಗಳಿಂದ ಒಂದುತಿಂಗಳ ಸಾವಕಾಶವಾಯಿತು. ಪರಂತು ಈಸಲ ಪೂರ್ವಕ್ಕಿಂತಲೂ ವಿಶೇಷವಾಗಿರುವದೆಂದು ತಿಳಿಯಬರುತಿದೆ.

Virgin widow marriage.—ಮದ್ದಗಿರಿ ತಾಲ್ಲೂಕಿಗೆಸೇರಿದ ಒಂದುಗ್ರಾಮದಲ್ಲಿರುವ ಮಧ್ವಮತದವಳಾದ ದೇಶಸ್ಥಮುದಿಗಿಗೆ, ಬಾಲ್ಯದಲ್ಲಿಯೇ ಪತಿವಿಯೋಗವುಂಟಾದದರಿಂದ ಆಕೆಯನ್ನು ದೊಡ್ಡಬಳ್ಳಾಪುರತಾಲ್ಲೂಕು ರಾಜಘಟ್ಟದಲ್ಲಿರುವ ಸಜಾತೀಯನೊಬ್ಬನು ವಿಧ್ಯನುಸಾರ ಪುನರ್ವಿವಾಹಮಾಡಿಕೊಂಡಂತೆ ತಿಳಿಯಬರುತಿದೆ. ಈ ಅಂಶವು ಶಾಸ್ತ್ರಸಮ್ಮತವಾದ್ದೆಂತಲೂ ಪ್ರಜೆಗಳ ತಾತ್ಕಾಲಿಕಸ್ಥಿತಿಯನ್ನನುಸರಿಸಿ ಅವಶ್ಯಕರಣೀಯವೆಂತಲೂ ಜನಗಳಿಗೆತೊರುವರೆಲ್ಲ ಈಕಾರ್ಯವು ಅಪ್ರೇರಿತವಾಗಿ ನಡೆಯುತಬರುವದು. ಇದಕ್ಕಾಗಿವಾದಲ್ಪಡತಕ್ಕದು ಆಕ್ಷೇಪಣೆಗಳೂ, ವ್ಯಕ್ತಪಡಿಸತಕ್ಕ ದುರಭಿಮಾನಗಳೂ ತೋರಿಸತಕ್ಕ ಈರ್ಷ್ಯಾಸೂಯೆಗಳೂ ವ್ಯರ್ಥವಾದ ವಾಗ್ವ್ಯಯಗಳೂ ಕಾರ್ಯಕಾರಿಗಳಾಗಲಾರವು.

Maharaja's arrival.—ಗತವಾರದಲ್ಲಿ ನಾವು ತಿಳಿಸಿದ್ದಪ್ರಕಾರ ಶ್ರೀಮನ್ಮಹಾರಾಜರವರು ತಮ್ಮಪರಿವಾರದೊಡನೆ ಗತ ಮಂಗಳವಾರದದಿನ ಸಾಯಂಕಾಲ ಸ್ಪೆಷಲ್ ಟ್ರೈಯಿನ್‌ನಲ್ಲಿ ಇಲ್ಲಿಗೆ ದಯಮಾಡಿದರು. ಮಹಾರಾಜರವರನ್ನು ಗೌರವಪುರಸ್ಸರವಾಗಿ ಬರಮಾಡಿಕೊಳ್ಳತಕ್ಕಬಗ್ಗೆ ಈ ಸಂಸ್ಥಾನದ ಬಹುಮುಖ್ಯ ನೇಟಿವ್ ಮೊದಮನುಷ್ಯರೂ ಪ್ರಸಿದ್ಧರಾದ ರಾಜಾ ಸರ್. ಟಿ ಮಾಧವರಾಯರವರೂ ಬ್ರಿಟಿಷ್ ರೆಸಿಡೆಂಟರು ಮತ್ತು ಕಂಟೋನ್ಮೆಂಟ ಮಿಲಿಟರಿ ಆಫೀಸರ್‌ಗಳು ವಗೈರೆ ಅನೇಕ ಯೂರೋಪಿಯರ್‌ಗಳೂ ಸ್ಟೇಷನಿಗೆ ಬಂದಿದ್ದರು. ಗೌರವಾರ್ಥ ಬಾರ್ ಸವಾರ್ ಫೌಜ್‌ಗಳು ಬಂದುಸ್ಟೇಷನ್ ಚಾಪ್ಯಾಂಗಣದಲ್ಲಿ ಕಾದಿದ್ದವು. ಮಾಮೂಲ್‌ಪ್ರಕಾರ ಪೊಲೀಸ್‌ನವರ ಪರಿಭ್ರಮಣದೊಳಗೂ ಕೊರತೆಯಾಗಿರಲಿಲ್ಲವು. ಮಹಾರಾಜ ಸುದರ್ಶನದೊಳು ಪ್ರಜೆಗಳು ಆದರಾತಿಶಯದೊಡನೆ ಮಳೆಯನ್ನುಸಹ ಲಕ್ಷ್ಯವಿಡದೆ ಬಂದು ಕಾದಿದ್ದರು. ಮಹಾರಾಜರವರೂ ದಿವಾನರವರುಸಹ ಒಂದೇಗಾಡಿಯಲ್ಲಿ ಅರಮನೆಗೆ ದಯಮಾಡಿದರು.

CORRESPONDENCE

[illegible]

ತಮ್ಮ ಪ್ರಿಯ ...

Opinion of a Patriotic Graduate on the Vernacular of the Country

[illegible]

(Mutual Improvement Society of Young Men) [illegible]

[illegible]

... B. A. ... (Lecture) ...

[illegible]

... (Civilized World) ...

[illegible]

... (Carlyle) ... (Pall Mall) ...

[illegible]

... (Wesley) ...

[illegible]

TELEGRAPHIC SUMMARY

ತಂತಿ ವೃತ್ತಾಂತವು.

[illegible]

Bangalore—Printed and published for the Proprietor, at the Karnatic Press —1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮನಿವಿದಪ್ರವೃತ್ತ್ಯವಗಮಾರ್ಗಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಪಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿನಾಸುಪರಿಶೋಭತಾದಿಶತಿಮಾನಸಸಂಮುದಂ॥

Vol. XII.] BANGALORE—MONDAY, JULY 27, 1885. [No. 30.

ಸಂಪುಟ ೧೨.] ಬೆಂಗಳೂರು.—ಸನ್ ೧೮೮೫ನೇ ಇಸವಿ ಜೂಲೈ ೨೭ನೇ ತಾರೀಖ್ ಸೋಮವಾರ. [ಸಂಚಿಕೆ ೩೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡಸಹಿತ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ...		೧೦—೦—೦
ಇಂಗ್ಲಿಷ್ ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ...		೬—೦—೦
ಕನ್ನಡಮಾತ್ರ ತೆಗೆದುಕೊಳ್ಳತಕ್ಕವರಿಗೆ ಪೋಸ್ಟೇಜ್ ಸಹಿತ ವರುಷ ೧ಕ್ಕೆ.		೬—೦—೦
ತಿಂಗಳು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
ಬಿಡಿನ ಸಂಚಿಕೆ	೧ಕ್ಕೆ	೦—೫—೦

ಷರಾ—ಚಂದಾದಾರರು ಇಂಗ್ಲಿಷ್ [illegible] ಕನ್ನಡ [illegible] ತೆಗೆದುಕೊಳ್ಳಬಹುದು. [illegible]

ಪ್ರಕಟನೆಯ ವಿವರ.

ಮೊದಲನೇದಕ್ಕೆ ಪಂಕ್ತಿ	೧ಕ್ಕೆ	೦—೨—೦
ಎರಡನೇದಕ್ಕೆ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇದರ [illegible] ನಮ್ಮ ಚಂದಾದಾರ [illegible] ಮುಖ್ಯ [illegible] ಕೋರುತ್ತೇವೆ. [illegible]

೧. ಕರ್ಣಾಟಕ ಪ್ರಕಾಶಿಕೆಯ ಚಂದಾದಾರರಲ್ಲಿ [illegible]

೨. ನೋಟು [illegible]

೩. [illegible]

೪. ಈ ಪತ್ರಿಕೆಯ [illegible]

ಪ್ರಕಟನೆ.

ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲೀಷು ಮತ್ತು ಕನ್ನಡದಲ್ಲಿಯೂ [illegible] ಮಾಡಿಕೊಡಲ್ಪಡುತ್ತೆ. [illegible]

ನೋಟೀಸ್.

ಇದರ ಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.	
ಶಾಲಿಹೋತ್ರ ...	೧—೪—೦
ಮುಹೂರ್ತದರ್ಪಣ ...	೦—೧೨—೦
ಭಗವದ್ಗೀತೆ (ಷಟ್ಯಂಟಾಕ) ...	೦—೩—೦
ಚಾಣಕ್ಯನೀತಿ ಮೊದಲಾದ ಸುಭಾಷಿತ.	೦—೫—೦
ಬಾಲರಾಮಾಯಣ ...	೦—೪—೦
ಶಬ್ದಮಂಜರೀ ..	೦—೧೦—೦
ಶಿವಾನಂದಲಹರಿ. ..	೦—೭—೦
ಬಾಲಬೋಧ	೦—೨—೦
ವೈದ್ಯಸಾರಸಂಗ್ರಹ .	೫—೦—೦
ಕನ್ನಡ ಗ್ರಂಥಗಳು.	
ಹನುಮದ್ವಿಲಾಸ. ...	೦—೭—೦
ಶತದೇವಿ ಪುರಾಣ. .	೦—೪—೦
ಸುಗ್ರೀವಕಲ್ಯಾಣ .	೦—೩—೬
ಸಾರಾವಳೀ ರತ್ನತ್ರೇ.	೦—೨—೬
ಬಬ್ರುವಾಹನನ ಕಾಳಗ ...	೦—೪—೦
ಲವಕುಶರ ಕಾಳಗ. ...	೦—೨—೦
ಯಕ್ಷಗಾನ ನಳಚರಿತ್ರೆ ...	೦—೬—೬
ಶ್ರೀ ಕೃಷ್ಣ ಪಾರಿಜಾತ. ...	೦—೨—೬
ಪಂಚ ತಂತ್ರ ...	೦—೭—೦
ಕನಕ ಶತಕ. ...	೦—೩—೦
ವಿರಾಟಪರ್ವ.	೦—೨—೦
ಕವಿಜನ ...	೦—೦—೯
ಇಂಗ್ಲಿಷ್ ಕನ್ನಡ ನಿಘಂಟು ಟ್ರಾ	೧—೦—೬
ಸ್ವಾತಂತ್ರ್ಯ, ...	೨—೦—೦
ಕಲ್ಯಾಣ ಕಾಂಡ ...	೦—೧೨—೦
ಕುಸುಮಾವತಿ ..	೩—೪—೬
ರಾಮಾಶ್ವಮೇಧ ...	೩—೪—೬
ಅರೇಬಿಯನ್ ನೈಟ್ಸ್ ಕಥೆಗಳು	
೧ನೇ ಸಂಚಿಕೆ. ..	೦—೦—೬
೨ನೇ ಸಂಚಿಕೆ.	೧—೮—೦
[illegible] ...	೦—೮—೦
ಸಂಸ್ಕೃತ ಮೂಲಗ್ರಂಥಗಳು.	
[illegible]	೦—೩—೦
ವಿಷ್ಣುಸಹಸ್ರನಾಮ.	೦—೫—೬
ಸೂರ್ಯಸಹಸ್ರನಾಮ. ...	೦—೨—೬
ಕೃಷ್ಣಕರ್ಣಾಮೃತ. ...	೦—೨—೬
ಬಾಲರಾಮಾಯಣ ...	೦—೦—೬
ಕಿರಾತಾರ್ಜುನೀಯ. ...	೦—೩—೬
೧ ಕಾಂಡ ಅಮರ. ...	೦—೧—೦

ಮೇಲೆ ಬರೆದಿರುವ ಪುಸ್ತಕಗಳಿಗೆ ಅಂಚೆ ಹಾಸಲ್ ಸೇರಿರುವದಿಲ್ಲವು. [illegible] ಹಾಸಲ್ ಸಹ ಸೇರಿಸಿ ಕಳುಹಿಸಬೇಕು. [illegible]

NOTICE.
VAIDYASARASANGRAHA

Price including Postage, Rs 5-6-0

ಈ ಗ್ರಂಥಕ್ಕೆ [illegible] ಪುಸ್ತಕ [illegible]

ಗ್ರಂಥ [illegible]

ಸ್ವದರ್ಶಯ	ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆ ಹಾಸಲ್	೦—೬—೦

ಟಿ. ಬಿ. ವೆಂಕಟಾಚಾರ್, ಅಸ್ಸಿಸ್ಟೆಂಟ್ ಸರ್ಜನ್, ಬೆಂಗಳೂರು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.
ಜನರಲ್ ಕಮ್ಮಿಷನ್ ಮರ್ಚೆಂಟ್ಸ್

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ವಳ್ಳಾಳ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,
ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲೀಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಪಾಠ್ಯವಾದದ್ದಾಗಿಯೂ ನವರಸ ಪರಿಪೂರ್ಣ ಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧-೮-೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ ಶಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

DIVYASURICHARITAM.

ಶ್ರೀಮದ್ರಾಮಾನುಜ ಗುರುವರ ಚರಣಾಶ್ರಿತರಾದ ವಿಶಿಷ್ಟಾದ್ವೈತಿಗಳಿಗೂ, ತನ್ಮತಾಭಿಮಾನವುಳ್ಳವರಿಗೂ ವಿದ್ಯಾರ್ಥಿಗಳಿಗೂ ಅತ್ಯಂತೋಪಯುಕ್ತವಾದ, ದಿವ್ಯಸೂರಿಚರಿತವೆಂಬ ಸಂಸ್ಕೃತ ಮಹಾ ಕಾವ್ಯರತ್ನವು ಮೈಸೂರು ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿರುವದರಿಂದ, ಅಪೇಕ್ಷೆಯುಳ್ಳವರೆಲ್ಲರೂ ಕುಣಿಗಲ್ ಅಸಿಸ್ಟೆಂಟ್ ಇಂಜನಿಯರ್ ಮೆ॥ ಸಿ. ಗೋವಿಂದಾಚಾರ್ಯರವರಿಗೆ ಮೊಬಲಗು ಸಹಿತ ಬರೆದುಕೊಂಡರೆ ಪುಸ್ತಕ ಕಳುಹಿಸಲ್ಪಡುವದು.

ಅಪ್ಪರ್‌ತರಹಾ ಪುಸ್ತಕ		೦—೧೪—೦
ಮಿಡ್ಲ್‌ತರಹಾ	,,	೦—೧೨—೦
ಅಂಚೆಹಾಸಲ್	,,	೦—೨—೦

ಬೆಂಗಳೂರ್ ತಾ॥ ೩ನೇ ಜೂನ್ ೧೮೮೫

ನೋಟಿಸ್.

ಮಿಡಿಗೇಶಿ ಸಬ್‌ಡಿವಿಜನ್ ಮುನಸಫ್ ಕೋರ್ಟು.
ಸನ್ 1883ನೇ ಇಸವಿ ಅಸಲ್ ನಂಬರ್ 130—32.

ವಾದಿ.	ಪ್ರತಿವಾದಿ.
ಮೆಸ್ಸರ್ ಕಾಲಿಬ್ ಸಾಹೆಬ್ ಬರಕಡೆ ಮೆ॥ ಮಾರ್ಗ್ಯಸ್.	ಹಾಲಗಾರ ಶ್ರೀನಿವಾಸಯ್ಯ.

ಕೋರ್ಟು ಅಪ್ಪಣೆ ಮೇರಿಗೆ ಈ ಮೊಕದ್ದಮಾ ಪ್ರತಿವಾದಿ ಬಾಬತು ಕೆಳಗೆ ನಮೂದಾಗುವ ಸ್ಥಿರಸ್ವತ್ತುಗಳು 1885ನೇ ಇಸವಿ ಆಗಸ್ಟ್ 15ನೇ ಹಗಲು 11 ಘಂಟೆಗೆ ಕೊಪ್ಪದಲ್ಲಿ ಹರಾಜ್ ಮಾಡಲ್ಪಡುತವೆ. ಹೆಚ್ಚು ತಪಸೀಲ್ ಕೋರ್ಟು ನಾಜರ್‌ಮೂಲಕ ತಿಳದುಕೊಳ್ಳಬಹುದು.

	ಸರ್ವೆನಂಬರ್.	ಎಕ್ರೆ, ಗುಂಟೆ.	ಅಕಾರ.
ಬಾಗಾಯತು	202	4—11	68—0—0
ಖುಷ್ಕಿ.	203	1— 9	7—8—0
ಕಂ.	209	9— 5	28—0—0

ಷರಾ—ಸದರೀ ಸ್ವತ್ತುಗಳು ಕೊಪ್ಪಗ್ರಾಮದ [illegible] ಗ್ರಾಮದಲ್ಲಿವೆ.

B. VENCATACHAR,
ಮುನಸಫ್.

ನೋಟಿಸ್.

ಈಗ ಸಕಲರಿಗೂ ಸ್ವೀಯ ಕರ್ಮಾನುಷ್ಠಾನೋಪಯೋಗಾರ್ಥವಾಗಿ ರಚಿಸಲ್ಪಟ್ಟ ಅನೇಕ ಧರ್ಮಶಾಸ್ತ್ರಗಳಲ್ಲಿ ಅತ್ಯಂತ ವಿಲಕ್ಷಣವಾದ ಆಪಸ್ತಂಬ ಸೂತ್ರವೆಂಬ ನಾಮಾಂತರವುಳ್ಳ ಆಪಸ್ತಂಬ ಧರ್ಮವೆಂಬುವ ಧರ್ಮಶಾಸ್ತ್ರ ಗ್ರಂಥವು ಬ್ರಾಹ್ಮಣ ಸಾಮಾನ್ಯತಸ್ಸರ್ವರಿಗೂ, ತತ್ರಾಪಿ ಆಪಸ್ತಂಬ ಸೂತ್ರಾನ್ವಿತರಿಗೆ ಅತ್ಯಂತೋಪಯೋಗವಾಗಿ ಇರುವದರಿಂದ ಈ ಗ್ರಂಥವು ಹರಿದತ್ತಮಿಶ್ರ ಪ್ರಣೀತ (ಉಜ್ವಲಾ) ಯೆಂಬುವವ್ಯಾಖ್ಯಾನದೊಡನೆ ಪರಿಷ್ಕರಿಸಿ ಮುದ್ರಿಸಲ್ಪಡುತ್ತೆಯಾದ್ದರಿಂದ ಪರಮಾಸ್ತಿಕ ಜನರೆಲ್ಲರೂ ಚಂದಾ ಪ್ರವ್ಯಪ್ರದಾನ ರೂಪದಿಂದ ಮುದ್ರಣಾತ್ಪೂರ್ವವೇ ದ್ರವ್ಯಸಹಾಯವನ್ನು ಮಾಡಿ ಸುಮಾರು ೩ ಸಾವಿರ ಗ್ರಂಥಗಳುಳ್ಳ ದ್ರವ್ಯವ್ಯಯ ಸಹಿತವಾದ ಈ ಗ್ರಂಥವನ್ನು ಪುಸ್ತಕ ೧ಕ್ಕೆ ೧ರೂಪಾಯಿ ಮೇರಿಗೆ ಸ್ವೀಕರಿಸಿ ಬಹಳ ಜಾಗ್ರತೆಯಿಂದ ಮುದ್ರಣ ಪೂರ್ತಿ ಸನ್ನಿಹಿತವಾಗುವಂತೆ ಸ್ವಸ್ವಮಿತ್ರ ಬಂಧು ಮುಖಗಳಿಂದ ಪುಸ್ತಕ ಪರಿಗ್ರಹರೂಪವಾದ ಸಹಾಯವನ್ನು ಮಾಡಿಸುವಂತೆ ಪ್ರಾರ್ಥಿಸುತ್ತೇನೆ. ಪರಸ್ಥಳದವರು ಅಂಚೇಹಾಸಲ್ ೪ ಆಣೆಗಳನ್ನು ಸೇರಿಸಿ ಮೊಬಲಗು ಕಳುಹಿಸಬೇಕು. ೧೦ ಪುಸ್ತಕಗಳನ್ನು ಪರಿಗ್ರಹಿಸಿದವರಿಗೆ ಒಂದು ಪುಸ್ತಕ ಅಧಿಕವಾಗಿ ಕೊಡಲ್ಪಡುತ್ತೆ. ೧೦೦ ಪುಸ್ತಕಗಳಿಗೆ ಚಂದಾದಾರ್ರು ನಿರ್ಣಯವಾದಮೇಲೆ ಗ್ರಂಥಮುದ್ರಣಾರಂಭವಾಗುತ್ತೆ, ಆದ್ದರಿಂದ ಈ ಪ್ರಕಟನ ಪತ್ರಿಕೆಯನ್ನು ನೋಡಿದ ತತ್‌ಕ್ಷಣದಲ್ಲಿ ಸ್ವಾಭಿಪ್ರಾಯನಿವೇದನ ಪತ್ರಿಕೆಗಳನ್ನು ಬರೆಯುವಂತೆ ಪ್ರಾರ್ಥಿಸುತ್ತೇನೆ. ಈಗ ೬೦ ಜನ ಚಂದಾದಾರರು ಪತ್ರಿಕೆಗಳನ್ನು ಬರೆದಿರುತ್ತಾರೆ.

ತೊಪ್ಪೂರ್ ವೆಂಕಟಾಚಾರ್ಯ,
ಬೆಂಗಳೂರು ತುಳಸೀತೋಟ ನಿವಾಸಿ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 27, 1885.

೧೮೮೫ನೇ ಜೂಲೈ ೨೭ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂ ಸದಸಿ ವಾಕ್ಪಟುತಾಂ ಪ್ರಸೂತೇ ವಾಣಿತ್ವದಂಘ್ರಿಸರಸೀರುಹ ಯೋಃ ಪ್ರಣಾಮಃ । ತ್ವಾಮೇವ ದೇವಿ ಮನಸಾಹಮನುಸ್ಮರಾಮಿ ತ್ವಾಮೇವ ನೌಮಿ ಶರಣಂ ಜನನಿ ತ್ವಮೇವ ॥

THE JAHAGHIRDAR OF SIVANASAMUDRA.

ಶಿವನಸಮುದ್ರದ ಜಹಗೀರ್ ದಾರರವರು ಈ ಸ್ವಲ್ಪ ಮೂರು ನಾಲ್ಕು ದಿನಗಳಿಂದೆ ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನು ಕೇಳಿ ಸದರಿ ನಾವು ಬಹಳ ವಿಷಾದಿಸುತ್ತೇವೆ. ಈ ಜಹಗೀರ್ ದಾರರ ಮೂಲ ಪುರುಷರಾದ ರಾಮಸ್ವಾಮಿ ಮೊದಲಿಯಾರ್ ಎಂಬವರು, ಈ ದೇಶದಲ್ಲಿ ರೆಸಿಡೆಂಟರಾಗಿದ್ದ ಕೋಲ್ ಸಾಹೇಬರವರ ಖಾಸಗೀ ನೌಕರರಾಗಿದ್ದರು. ಇವರು ಮೈಸೂರು ದೇಶದಲ್ಲಿ ಬ್ರಿಟಿಷ್ ರೆಸಿಡೆಂಟರೊಡನೆ ವಸಿಸಲಿಕ್ಕೆ ಪ್ರಾರಂಭಿಸಿದಮೇಲೆ ಶಿವನಸಮುದ್ರಕ್ಕೆ ಪಶ್ಚಿಮ ಭಾಗದಲ್ಲಿ ಕಾವೇರೀನದಿಗೆ ಒಂದು ಮರದ ಸೇತುವೆಯನ್ನು ಕಟ್ಟಿಸಿದರಲ್ಲದೆ ದೇವಸ್ಥಾನ, ಅಗ್ರಹಾರ, ಮುಸಾಫರ್ ಖಾನೆ ಮುಂತಾದ ಧರ್ಮಕಾರ್ಯಗಳನ್ನು ಮಾಡಿದರು, ಅದಕ್ಕಾಗಿ ಹೈನೆಸ್ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರರವರು ನಾಲ್ಕು ಕಲ್ಲಿನ ಸವರ್ಣಾನ್ಯಗಳನ್ನು ಇವರ ಮೊಮ್ಮಕ್ಕಳಾದ ಶೇಷಾಚಲಂ ಮೊದಲಿಯಾರ್ರವರಿಗೆ ದಯಪಾಲಿಸಿದರು. ಇವರಿಂದ ಬೆಳಕುವಾಡಿ ವಸ್ತಿಕೆ ಗ್ರಾಮಗಳು ಇವರ ವಶವಾದವು. ಅಲ್ಲಿಗೆ ೧೦೦೦ ಸೇತುವೆ ಯೊಂಬದನ್ನು ಕಟ್ಟಿಸಿದರು. ಇದಕ್ಕಾಗಿ ಇಂಡ್ಯ ಗವರ್ನಮೆಂಟಿನವರು ಪಾಲೀಯಾನ ೨೦೦೦ ಫೌಲೀ ವರಹಾಗಳ ಉತ್ಪತ್ತಿಯುಳ್ಳ ಜಹಗೀರನ್ನು ಮದರಾಸ್ ಮತ್ತು ಮೈಸೂರು ಸರ್ಕಾರದವರು ಇವರಿಗೆ ಕೊಡುವಂತೆ ಹುಕುಂಮಾಡಿದರು. ಇದನ್ನನುಸರಿಸಿ ಒಂದು ಸಾವಿರ ಫೌಲೀ ವರಹಾಗಳ ಜಹಗೀರ್ ಕೊಡುವಂತೆ ೧೮೩೯ನೇ ಇಸವಿ ನವಂಬರ್ ೧೯ನೇ ತಾರೀಖಿನಲ್ಲಿ ರೆಸಿಡೆಂಟರಾದ ಕಾಸಮೇಜರ್ ಎಂಬವರು ಮಹಾರಾಜರವರಿಗೆ ಬರೆದು ದಾಸ್ತು ಬರೆದರು, ಅವರು ಹಿಂದೆ ಕಾವಲು ಕೊಟ್ಟಿದ್ದ ಜಹಗೀರನ್ನೇ ಸದರೀ ಸೇತುವೆಯ ರಿಪೇರಿಗಾಗಿ ರಾಮಸ್ವಾಮಿ ಮೊದಲ್ಯಾರ್ರವರಿಗೆ ಕೊಟ್ಟು ೧೮೩೯ನೇ ಡಿಸಂಬರ್ ೨೮ನೇ ತಾರೀಖಿನಲ್ಲಿ ಸನ್ನದ್ ಬರೆದುಕೊಟ್ಟರಲ್ಲದೆ ಹಿಂದೆ ಇವರ ಮೊಮ್ಮಕ್ಕಳಿಗೆ ಕೊಡಲ್ಪಟ್ಟಿದ್ದ ಜಹಗೀರ್ಗೆ ಬದಲಾಗಿ ಬೇರೆ ಜಹಗೀರನ್ನು ಕೊಟ್ಟರು. ಈಗ ಇಪ್ಪತ್ತಾರು ಗ್ರಾಮಗಳಲ್ಲಿ ೯,೦೪೦-೧೦-೧೦ಯ ಜಹಗೀರ್ ನಡೆಯುತಲಿದೆ. ಇವರಿಗೆ ಮೈಸೂರು ರಾಜ್ಯವು ಬ್ರಿಟಿಷರವಶವಾದಮೇಲೆ ಜನೋಪಕಾರಕರೆಂಬ ಬಿರುದನ್ನು ಇಂಡ್ಯ ಗವರ್ನಮೆಂಟಿನವರು ಕೊಟ್ಟರು. ಮೈಸೂರು ದೇಶದಲ್ಲಿ ಯಾರಿಗೂ ಜಹಗೀರದಾರರಾದ ಇವರನ್ನೇ ಯಾರೂ ಸರಿಸಮಾನರಿಲ್ಲವೆಂದು ಹೇಳಬೇಕಾಗಿದೆ. ಸರ್ ಮಾರ್ಕ್ ಕಬ್ಬನ್ ಸಾಹೇಬರವರೂ, ಮಿ॥ ಬೌರಿಂಗ್ ಎಂಬವರೂ ಸದರೀ ಜಹಗೀರ್ದಾರರ ಕುಟುಂಬವನ್ನು ವಿಶೇಷ ಗೌರವಿಸುತಲಿದ್ದರು. ವಿದ್ಯಾಪ್ರಯೋಜಕವಾದ ಜ್ಞಾನ ಸಂಪಾದನೆಗೆ ಅವಕಾಶವು ಪ್ರಯೋಜನಕವಾಗದ ಬೋಧದಿಂದ ಇವರು ಸರ್ಕಾರ್ ನೌಕರಿಯಮೂಲಕ ಪ್ರಸಿದ್ಧಿಗೆ ಬರಲಿಲ್ಲವು. ಮುಂದೆಯಾದರೂ ಇವರು ಶ್ರೀಮಂತರಾಗಿ ವಿದ್ಯಾಭ್ಯಾಸಮಾಡಿ ಕೀರ್ತಿ ಪ್ರಶಸ್ತಿಗಳನ್ನು ಪಡೆಯಬೇಕೆಂದು ಕೋರುತ್ತೇವೆ.

COLONEL OLCOTT.

ಮಾರ್ಚಿ ತಿಂಗಳು ೧೧ನೇ ತಾರೀಖು ಶುಕ್ರವಾರದ ದಿನ ಬೆಂಗಳೂರು ದಂಡಿನಲ್ಲಿ ಕರ್ನಲ್ ಸೊಸೈಟಿಯಲ್ಲಿ ನಡೆದ ಸಭಾಮುಖದೊಳು ಕರ್ನಲ್ ಅಲ್‌ಕಾಟ್ ಎಂಬವರು ಸಂದರ್ಭೋಚಿತವಾಗಿ ವಕ್ತೃತ್ವರನ್ನಧರಿಸಿ ಪ್ರಸಂಗಿಸಿದಾಗ, ಮನುಷ್ಯನು ತನ್ನ ಮುಕ್ತಿಗೋಸ್ಕರ ತಾನೇ ಕೃಷಿಮಾಡಬೇಕೆಂಬ ವಿಷಯವಂಕುರಿಸು ಬಹಳವಟ್ಟಿಗೆ ಉಪನ್ಯಾಸ ಮಾಡಿದರು. ಅವಶ್ಯ ಶೇಧನೀಯವಾದ ಈ ಮುಖ್ಯ ವಿಷಯವನ್ನು ಪ್ರಾಸಂಗಿಕರ ಮೂಲಕ ತಿಳಿಯಕೊಳ್ಳಬೇಕೆಂಬ ಕೋರಿಕೆಯೊಡನೆ ಬಹುಮಂದಿ ನೇಟಿವ್ ಮತ್ತು ಯೂರೋಪಿಯನ್ ದೊಡ್ಡಮನುಷ್ಯರು ಸದರೀ ಸೊಸೈಟಿಗೆ ಹೋಗಿದ್ದರು. ಅಲ್ಲಿನ ಹೆರ್ಲ್ಡ್ ಜಡ್ಜಿ ಯವರಾದ ಮಿ॥ ಡಿ. ಎಲ್. ಸುಬ್ಬಯ್ಯನವರು ಆ ಕಾಲದಲ್ಲಿ ಅಧ್ಯಕ್ಷರಾಗಿದ್ದರು. ಸತ್ಕರ್ಮವು ಮೋಕ್ಷ ಸಾಧಕವೆಂಬದನ್ನು ಪ್ರಾಸಂಗಿಕರು ಬಹಳ ಪ್ರಯಾಸದೊಡನೆ ವಿವರಿಸಿ ತಿಳಿಸಿದರು. ನಿತ್ಯಾನಂದ ಮಯವಾದ ಮುಕ್ತಿಪದವಿಯನ್ನೈದಲಿಕ್ಕೆ ಋಷಿಗಳು ರಚಿಸಿಯಿರುವ ಮೂರು ಭಿನ್ನಮಾರ್ಗಗಳು ಪ್ರಸ್ತುತವಾಗಿವೆ. ಇವುಗಳಿಗೆ ಭಕ್ತಿಮಾರ್ಗವೆಂತಲೂ, ಜ್ಞಾನಮಾರ್ಗವೆಂತಲೂ ಹೆಸರುಂಟು. ಮೇಲೆ ಕಂಡ ಮೂರರಲ್ಲಿಯೂ ಯಾವದಾದರೊಂದು ಮಾರ್ಗ ಪ್ರವರ್ತಕವಾದ ಮನುಷ್ಯನಿಗೆ ಅದರಲ್ಲಿ ಯಾವ ವ್ಯತ್ಯಾಸವೂ ತೋರಬರಲಾರದು. ಅಂದರೆ ಸದರೀ ಮೂರು ಮಾರ್ಗಗಳು ಒಂದಾಗಿ ಸೇರಿ ಕೈವಲ್ಯಪದವಿಗೆ ಕರೆದೊಯ್ಯುವವೆಂದು ತಿಳಿದುಕೊಳ್ಳಬಹುದು. ಭಗವದ್ಗೀತೆಯ ಸಿದ್ಧಾಂತದಂತೆ ನಡೆಯುವ ಜ್ಞಾನಮಾರ್ಗವನ್ನನುಸರಿಸಿ ತನ್ನ ಮೋಕ್ಷಕ್ಕಾಗಿ ಶ್ರಮಪಡಬಹುದಾದ್ದನ್ನು ಪ್ರಾಸಂಗಿಕರು ನಾನಾವಿಧದಿಂದ ಬಿಂಬಿಸಿದರು. ನ್ಯಾಯವೆಂಬ ಶಬ್ದವು ಈಶ್ವರತತ್ವವನ್ನು ಬೋಧಿಸತಕ್ಕದ್ದಾಗಿರುತ್ತದೆ ಯಲ್ಲದೆ ನಿಯತವಾದ ಕಾರ್ಯಕಾರಣ ನಿಯಮಕ್ಕೆ ಯಲ್ಲಿಯೂ ಒಳಪಟ್ಟದ್ದಾಗಿರುತ್ತದೆಂತಲೂ, ಮನುಷ್ಯನ ವಿಧಿಯೊಂಬದು ಅವನ ಹಸ್ತಗಳ ವಶದಲ್ಲಿರುವದರಿಂದ ಅದುತನ್ನನ್ನು ಅವರಿಸಿಕೊಳ್ಳುವಂತೆ ಮಾಡಿಕೊಳ್ಳುತ್ತಾನೆಂತ ಪಾಪೇಲಿ ಅನರ್ಥವಾದ ಕರ್ಮಗಳಿಂದ ನಿರ್ಭಯಾನಾದ ಕೋಶದಂತಿರುವ ಪುರಾತನ ಪದ್ಧತಿಗಳಲ್ಲಿ ಹಿಂದೂ ಬಾಲಕರು ತಮ್ಮ ಮನಸ್ಸನ್ನು ಪ್ರವೇಶಪಡಿಸಬೇಕಾದ್ದು ಕರ್ತವ್ಯವೆಂದು ಅದರ ಪ್ರಾಶಸ್ತ್ಯ ವ್ಯಕ್ತಪಡಿಸಿದರು. ಐತಿಹಾಸಿಕ ಭಾವ ಅಂಶಗಳಲ್ಲಿಯೇ ವಿಚಾರಣೀಯವಾದ ಮುಕ್ತಿವಿಷಯವು ಕೇವಲ ಮುಖ್ಯವಾದ್ದಾಗಿರುವದರಿಂದ ಅದನ್ನು ಸಫಲಿಸಿ ತಿಳಿದುಕೊಳ್ಳತಕ್ಕ ಬಯ್ಯಪಾಶ್ಚಿಮಾತ್ಯರಾದ ಶಾಸ್ತ್ರಜ್ಞರು ಅದ್ಯಾಪಿ ಅಂಧಕಾರದೊಳು ತತ್ವಾನ್ವೇಷಣ ಪರರಾಗಿ ಹುಡುಕುತಲಿದ್ದಾರ್ಯ್ನೂ ನಮ್ಮ ಪೂರ್ವಿಕರು ಬಹುಕಾಲಕ್ಕೆ ಹಿಂದೆಯೇ ಅದನ್ನು ಕಂಡು ಹಿಡಿದಿರುತ್ತಾರೆ. ಪಾಶ್ಚಿಮಾತ್ಯರು ಪೂರ್ವದೇಶೀಯರಿಗೆ ಭೌತಿಕ ಶಾಸ್ತ್ರವನ್ನು ಬೋಧಿಸಲಿಕ್ಕೆ ಸಮರ್ಥರಾಗಿರಬಹುದು, ಪರಂತು ತತ್ವವಿವೇಚಕ ಶಾಸ್ತ್ರ ವಿಷಯದಲ್ಲಿ ನಮ್ರನಾದ ಶಿಷ್ಯನು ತನ್ನ ಗುರುವಂ ಅಭಿವಂದಿಸುವಂದದಿ ಪಾಶ್ಚಿಮಾತ್ಯರು ಪೂರ್ವದೇಶದವರನ್ನು ವಂದಿಸಿ ಕಲಿಯಬೇಕಾದವರಾಗಿರುತ್ತಾರೆ. ಪಾಶ್ಚಿಮಾತ್ಯರಿಂದ ಬೋಧಿಸಲ್ಪಡತಕ್ಕ ಭೌತಿಕಶಾಸ್ತ್ರವನ್ನು ಹಿಂದೂ ಬಾಲಕರು ಕಲಿತುಕೊಂಡದ್ದಾಗ್ಯೂ ಗೀರ್ವಾಣ ಭಾಷೆಯಿಂದ ಆಹ್ಲಾದಿತರಾಗಿರುವ ತಮ್ಮ ಪೂರ್ವಿಕರ ಅಮೂಲ್ಯವಾದ ನಿಧಿಯನ್ನು ಉಪೇಕ್ಷಿಸಲಾಗದೆಂದು ಸಭಿಕರಿಗೆ ಬೋಧಿಸಿ ಪ್ರವೇಶ ಮಾಡಿದರು.

THE RUSSIAN BARA.

“ ಕಾಲಕ್ಕೆ ತಕ್ಕ ಜ್ಞಾನ, ವೇಷಕ್ಕೆ ತಕ್ಕ ಭಾಷೆ” ಯೆಂಬ ಲೋಕೋಕ್ತಿಯು ಎಲ್ಲಾ ಕಡೆಯಲ್ಲಿಯೂ ಅನ್ವಯಿಸತಕ್ಕದ್ದಾಗಿರುತ್ತದೆ. ಹಿಂದಿನ ಕಾಲದಲ್ಲಿ ವಿದ್ಯಾ ನಾಗರಿಕತೆಯುಳ್ಳವರು ನಡೆಸುವ ಧರ್ಮಕ್ಕೆ ವಿರುದ್ಧವಾದವಿಷಯಗಳೊಂದನ್ನೂ ಸುಲಭವಾಗಿ ನಂಬತಕ್ಕವರಲ್ಲವೆಂಬ ಅಂಶ ಜಗತ್ಪ್ರಸಿದ್ಧವಾಗಿದೆ. ಇದರಿಂದ ದೈವಶಕ್ತಿಯು ಅನಾವಶ್ಯಕವಂದೇವರ್ತಿಸುತ್ತಿದೆ. ಮಂತ್ರಶಕ್ತಿಯು ರಾಜ್ಯಾಡಂಬರ ಅಥವಾ ಅಲಭ್ದವೆಂದು ತೋರುವದಕ್ಕೆ ಕಾರಣವಾಯಿತು ಅದಾಗ್ಯೂ ವೇದಶಾಸ್ತ್ರಗಳನ್ನೂ, ದೇವತೆಗಳನ್ನೂ, ಪ್ರಾಚೀನ ಋಷಿಗಳನ್ನೂ, ಆವ ಅಮಾನುಷ ಕೃತ್ಯಗಳನ್ನೂ ಪರಾರ್ಥ ಸ್ವಲ್ಪವಟ್ಟಿಗೆ ಈಗಿನವರು ಒಪ್ಪಿಕೊಂಡರೂ, ಆದಾಗ್ಯೂ ನಮ್ಮಂತೆ ಸಾಮಾನ್ಯರಾದ ಮನುಷ್ಯರೆಂತಲೂ, ಅವರಿಗೆ ಅವೂ ಒಬ್ಬರು ಹಾಕ್ಕೆಲೆಂಬನಂಬಿಕೆ ಕೋರುವಂತೆ ನಟಿಸಲಿಕ್ಕೆ ಬೇರೆ ಕಾರಣಗಳುಂಟು ಎಂತಲೂ ಹೇಳಿ, ಅಮಾನುಷ ಶಕ್ತಿಯೆಂದು ತೋರುವ ಅಂಶಗಳನ್ನೆಲ್ಲ ಮಾನುಷ ಧರ್ಮಕ್ಕೆ ಅನ್ವಯಿಸಿ, ಅದಕ್ಕೆ ಅಂತಲೂ ಅನ್ಯತರವಾದ ಶಕ್ತಿಯೊಂದು ಇರುವಂತೆ ತೋರಲಿಲ್ಲವೆಂದು ಹೇಳುತ್ತಾರೆ. ಇದರಮೇಲೆ ನಾವು ತಿಳಿಸತಕ್ಕ ಆಕ್ಷೇಪವನಾರ್ಥಾನಕ್ಕೊಂದೂ ಅವರಿಗೆ ಅಂಗೀಕಾರಾರ್ಹ ನಾಮವಿಲ್ಲವು. ಅವರನ್ನೊಡಂಬಡಿಸಲಿಕ್ಕೆ ಬೇರೇವಿಧ ಸಾಧನಗಳು ನಮ್ಮಲ್ಲಿ ದುರ್ಲಭಗಳಾಗಿವೆ ಅಂತರ ಅರಿವಾದಕ್ಕೆ ಕರ್ತೃ ಪ್ರಕೃತಿಗಳನ್ನು ನಾವು ನಾನಾವಾಗ ಕೊಡದೇ ಹೋಗಲಿ, ಅಥವಾ ಉಳಿದಿರುವ ಮಾರ್ಗವನ್ನು ಮನ್ನಿಸುವೆವೋ ಅಥ ನಾವು ಜಯಿಸದಂತೆಯೂ ನಾಲ್ಕು ತಮ್ಮ ಪಾರದಿಂದ ಪರಾಜಿತರಾದಂತೆ ಭಾವಿಸಿ, ಆಕ್ಷೇಪಿಸುತ್ತಾರೆ. ಇಂತಾ ಅಪಾರಗಣವಾದ ಜ್ಞಾನವು ಸುಲಭವಾಗಿ ಲಭಿಸತಕ್ಕದ್ದಲ್ಲವು ಜನ್ಮಾಂತರ ಪುಣ್ಯ ವಿಶೇಷದಿಂತಲೂ ಬಲ ಪ್ರತರವಾದ ಶಾಸ್ತ್ರಿಮಾರ್ಗರ ಪ್ರಾಬಲ್ಯ ಸಾಧಿತ ಗ್ಯದಿಂದಲೂ, ಅವರ ವೇಷ ಭಾಷಾಚಾರಗಳಿಂದಲೂ, ವಿಶೇಷ ಪ್ರಯಿಮಾನ್ಯವಾದ ಅವರ ನಾಗರಿಕತೆಯಿಂದಲೂ ಉಂಟಾಗತಕ್ಕದ್ದಾಗಿರುತ್ತದೆ. ಇದರಿಂದ ಅನ್ಯದೇಶ ವಿಷಯಗಳನ್ನು ತಿಳಿದುಕೊಳ್ಳುವದರಲ್ಲಿ ನಮ್ಮವರಿಗೆ ಈಗ ಉಂಟಾಗಿರುವಷ್ಟು ಅಪೇಕ್ಷೆಯು ಸ್ವದೇಶ ವಿಷಯಗಳನ್ನು ತಿಳಿದುಕೊಳ್ಳುವದಕ್ಕಿಲ್ಲವು. ಈಗ ಹುಟ್ಟತಕ್ಕ ಮಕ್ಕಳಿಗೆ ಬಹೋಪಕಾರಾರ್ಥ ಯೂರೋಪ್ ದೇಶ ಚರಿತ್ರೆ ಸಂಬಂಧವಾದ ಯಾವದಾದರೊಂದು ಪ್ರಾಚೀನರ ವೃತ್ತಾಂತವನ್ನು ಹೇಳುತ (ಗ್ರಾಮ್ಯಡ್ಸ್) ಜನಕರ ಭಕ್ತಿಯು ಓಕ್‌ನ ಯೆಂಬ ವೃಕ್ಷವನ್ನಾರಾಧಿಸತಕ್ಕದ್ದಾಗಿತ್ತೆಂತಲೂ, ಜೂಲಿಯಸ್ ಸೀಜರ್ ಎಂಬವನ ಶಕ್ತಿಯು ಅಜೇಯವಾದ್ದಾಗಿತ್ತೆಂತಲೂ, ಮಿಲ್ಟನ್ ಷೇಕ್‌ಸ್ಪಿಯರ್ ಮುಂತಾದವರ ಕಾಂಡಿತ್ಯ ಕೊಂಡಾಡತಕ್ಕದ್ದಾಗಿತ್ತೆಂತಲೂ ಹೇಳಿದಾಗ ಅವರ ಕೊಟ್ಟಂಥ ಉತ್ತರ ಮಕ್ಕಳು ಅತಿ ಬೇಗ ಮುಟ್ಟಿಕೊಳ್ಳುವವರಾಗಿರುವರು, ಅವುಗಳಿಗೆ ಬದಲಾಗಿ ಆರ್ಯವಂಶಜರು ವಿಶೇಷ ವೈಭವ ಶಕ್ತಿಯುಳ್ಳವರೆಂತಲೂ, ಶ್ರೀರಾಮನು ಅಸಮಾನವಾದ ವೀರ್ಯಸ್ಥೈರ್ಯಗಳುಳ್ಳವನೆಂತಲೂ, ಭವಭೂತಿ ಕಾಳಿದಾಸಾದಿಗಳ ಯೋಗ್ಯತೆಯೂ ಭಗವತ್ಕಟಾಕ್ಷಲಬ್ಧವಾದವೆಂತಲೂ ಹೇಳಿದರೆ ಅವರು ಬಾಯಿಮುಚ್ಚತಕ್ಕ ಸ್ಥಿತಿಯೊಳಿಲ್ಲವು. ಆದರೆ ಇದು ನಮ್ಮ ಉದ್ದೇಶವೆಯೊಂದು ಯಿಷ್ಟು ಮಾತ್ರವೂ ಭಾವಿಸಲಾಗದು ಯೂರೋಪ್ ಖಂಡ ನಿವಾಸಿಗಳಲ್ಲೊಬ್ಬರಾದ ರಷ್ಯಾದವರ ಕಥೆಯ ಉತ್ಪತ್ತಿ ಕ್ರಮವನ್ನು ತಿಳಿಸಿದರೆ ತಮ್ಮಾಲಕ ಜನಗಳಿಗೆ ಉಂಟಾಗುತ್ತಿಷ್ಟು ನಂಬೋಣವು. ಪರಿತ್ರಾರ್ಥ ಶಾಲೀದಾಯನ ಮುಂದಿನವರ ಶಕಗಳಿಷಯವಾಗಿ ಬರೆಯುವ ಲೇಖನದಿಂದ ಉಂಟಾಗುವಿದೆಂಬನಂ ನಾವು ಹೇಳಬೇಕಾಗಿ ಒಳ್ಳೇವಾದ ಕಾರಣ, ರಷ್ಯಾದವರ ಶಕದ ಉತ್ಪತ್ತಿ ಕ್ರಮವಂಕುರಿತು ಅಲ್ಲಿನ ಒಂದು ಸೊಂದು ವೃತ್ತಾಂತ ಪತ್ರಿಕೆಯಲ್ಲಿ ಪ್ರಚುರಿಸಲ್ಪಟ್ಟಿದ್ದ ಉಪನ್ಯಾಸವನ್ನು ಮುಪ್ಪ್ರಿ ಟೈಂಸ್ ಆಫ್ ಇಂಡ್ಯಾ ಪತ್ರಿಕೆಯ ಅನುವಾದ ಮಾಡುತಿದೆಯಾಗಿ ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಗೋಸ್ಕರ ಅದನ್ನು ಭಾಷಾಂತರದಿಂ ಇದರಡಿಪ್ರಕಟಿಸುವೆವು.

ಪೂರ್ವಕಾಲದಲ್ಲಿ ಒಬ್ಬನಿಗೆ ವಿರಕ್ತಿಯುಂಟಾಗಲು, ಆತನು ತನ್ನ ಯಾವದಾಯಸ್ವನ್ನೂ ಭಗವದ್ಧ್ಯಾನದಿಂದಲೇ ಕಳೆಯಬೇಕೆಂಬ ಆಸಕ್ತಿಯೊಡನೆ ಪುರವಾಸವಂಬಿಟ್ಟು ಅರಣ್ಯಕ್ಕೆ ಹೋಗಿ ಅಲ್ಲಿ ತಪಸ್ವಿವೃತ್ತಿಯೊಡನೆ ಒಂದು ಗಿರಿಗಹ್ವರದಲ್ಲಿ ಇರುತಲಿದ್ದರು. ಸದರೀ ಪ್ರದೇಶವು ಪಶುಪಕ್ಷಿಗಳ ಸಂಚಾರಕ್ಕೆ ಸಹ ಅವಕಾಶವಿಲ್ಲದ್ದಾಗಿದ್ದು ಹೀಗಿರುವಾಗ್ಯೆ, ಒಂದುದಿನ ಸೋಮವಂಶದವನೊಬ್ಬರು ತನ್ನ ಗಾಯಿಯನಂಗಡ ಆ ಗ್ರಾಮಗಳಲ್ಲಿ ದನಕರಗಳನ್ನು ಮೇಯುಸುತಲಿರಲು, ಸದರೀ ತಪಸ್ವಿಯಿದ್ದ ಗುಹೆ ಯಬಳಿಗೆ ದನಗಳು ಓಡಲಿಕ್ಕೆ ಪ್ರಾರಂಭಿಸಿದವು. ಅವುಗಳನ್ನು ಪುನಃ ಸೇರಿಸುವದಕ್ಕಾಗಿ ಆ ಗುಹೆಯಬಳಿಗೆ ಹೋಗಿ ಅವರ ಧ್ಯಾನವು ಭಂಗಪಡಿಸಲ್ಪಟ್ಟಿತ್ತದಂತಂದು. ಇದಕ್ಕೋಸ್ಕರ ಋಷೀಶ್ವರನೋ ಆದಂ ಸೋದರಿಕೆಂಬ ಕುರಾನಲವೆಂದೊಡನೆ ಅವನು ಹೆದರಿಯು ತನ್ನ ರಾಯಿಯೊಡನೆ ಅದರಲ್ಲಿ ಪ್ರವೇಶಿಸಿದನು ಆ ಕಾಲದಲ್ಲಿ ಆ ಋಷಿಯ ಶರೀರಸ್ಥಿತಿಯು ಸರಿಯಾಗಿಲ್ಲದೇ ಯಿದ್ದದರಿಂದ ದಯಾಶಾಲಿನೀಯಾದ ಆ ಹುಡುಗಿಯು ಆತನಂ ಉಪಚರಿಸಿ ಸಾವಧಾನ ಸ್ವಲ್ಪ ಗುಣವಾಗುವಂತೆ ಮಾಡಿದಳು, ಅದು ಅವನಿಗೆ ಬೇಡವಿದ್ದರೂ ಆಕೆಯ ಮೇಲಣ ಗೌರವದಿಂದ ಅವಳ ಮಾತನ್ನು ನಿರಾಕರಿಸದೆ ಪ್ರತಿನಿತ್ಯವೂ ಅವರು ಕಳುಹಿಸುತಲಿದ್ದ ಹೋಜನವನ್ನು ಸೇವಿಸುತಲಿದ್ದನು. ಕೆಲವು ದಿನಗಳಲ್ಲಿಯೇ ಆತನಿಗೆ ಸಂಪೂರ್ಣ ಆರೋಗ್ಯವುಂಟಾಯಿತು. ಬಳಿಕ ಆ ಸನ್ಯಾಸಿಯಾದ ಬ್ರಹ್ಮಚಾರಿಯು ತನ್ನ ಹುಡುಗಿಯು ತನಗೆ ಮಾಡಿದ ಉಪಕಾರವಂ ಸ್ಮರಿಸಿ ಅದಕ್ಕೆ ಪ್ರತಿಯಾಗಿ ಅವಳನ್ನು ತಾನೇ ವಿವಾಹ ಮಾಡಿಕೊಂಡನು. ಈ ವೃತ್ತಾಂತವು ಕ್ರಮೇಣ ಆ ದೇಶದ ದೊರೆಯವರಾದ ಜಾರ್ ಎಂಬವರಿಗೆ ತಿಳಿಯಬಂದದರಿಂದ ಅವರು, ಋಷಿಧರ್ಮಕ್ಕೆ ವಿರುದ್ಧವಾಗಿ ನಡೆದ ಆತನ ಶಿರವಂ ಛೇದಿಸಿ ಬಿಡುವಂತೆ ಆಜ್ಞಾಪಿಸಿ ಆಯುಧ ಪಾಣಿಗಳಾದ ಶೀಘ್ರಭಟರಂ ಅವನ ಬಳಿಗೆ ಕಳುಹಿಸಿದರು. ರಾಜಭಟರು ತನ್ನನ್ನು ಕೊಲ್ಲುವದಕ್ಕಾಗಿ ಸಮೀಪದೊಳು ಬರುತಿರುವದಂ ಕಂಡು, ಮಹರ್ಷಿಯು ಬಳಲಿದ್ದ ಒಂದು ಪುತ್ರರಂ ಬೆಳೆಯಂ ಮುರಿದು ಘಟ್ಟಿಯಾಗಿ ನೆಲದಮೇಲೆ ಬೊಂದೆಯ ಮಂತ್ರೋಚ್ಚಾರಣೆ ಮಾಡಲಾರಂಭಿಸಿದನು. ಕೆಂಬೆ ಒಂದಕ್ಕೆ ೫೦೦ ಇರುವಂತೆ ಆಗಲೇ ಯಿಷ್ಟು ಕೆಂಬೆಗಳನ್ನು ಮುರಿದು ಮಂತ್ರೋಚ್ಚಾರಣಪೂರ್ವಕ ಬೊಂದೆಯುತಬಂದನೋ, ಅಷ್ಟು ಪ್ರಜೆಗಳು ಶೀಘ್ರವಾಗುತ ಬಂದರು. ಚಕ್ರವರ್ತಿಯವರು ಇವನ್ನಡಿರು ವಿಶೇಷ ಸೈನ್ಯವನ್ನು ಜಮಾಯಿಸಿ ಕಳುಹಿಸಿದರು. ಯದ್ಯಪಿ ಚಕ್ರವರ್ತಿಯವರ ಸೈನ್ಯವು ಅಧಿಕವಾಗುತ ಬಂದ ಹಾಗೆಲ್ಲ ಋಷಿಸೈನ್ಯವೂ ವೃದ್ಧಿಯಾಗುತ್ತಿದ್ದುದರಿಂದ ಬಂತು. ರಾಜಸೈನ್ಯವು ಪರಾಜಿತವಾಗಿ ಹೋದದರಿಂದ ಇದು ಈಶ್ವರ ಕೃತವೆಂದು ತಿಳಿದು ಚಕ್ರವರ್ತಿಯವರು ಮನ್ನಾದರು ಬಳಿಕ ಸದರೀ ಋಷಿಗಳಿಗೆ ಈ ಮಕ್ಕಳು ಹೋದಲ್ಲಿ ವಿಹಾರಕಾಲ ಆವದಾದರೂ ಇಷ್ಟವಿಲ್ಲದೆ ಹೋದದರಿಂದ ಸ್ವಾಪಾತ್ಯದಿಂದ ಉತ್ಪನ್ನರಾದ ಸಕಲ ಸೈನ್ಯವನ್ನೂ ತನ್ನ ಭಾಗ್ಯಕೆಕೊಟ್ಟು ಈ ರಾಜ್ಯವಂ ಪಾಲಿಸುತಲಿರುವಂತೆ ಆಜ್ಞಾಪಿಸಿ ಅವಳಂ ಕಳುಹಿಸಿಬಿಟ್ಟನು. ಋಷಿವಂಶದಿಂದದರಿಂದಲೇ ಇವರಿಗೆ ಋಷ್ಯರೆಂಬ ವ್ಯವಹಾರ ಉಂಟಾದಂತೆ ತೋರುತಿದೆ ಋಷ್ಯಾ ಜನಗಳ ಶರೀರ ಕಾಂತಿಯೂ, ಕಪಿಲವರ್ಣವುಳ್ಳದ್ದಾಗಿರುತಿದೆ. ಪೂರ್ವದಲ್ಲಿ ಮಹರ್ಷಿಯಿಂದ ಭೂಮಿಯಮೇಲೆ ಬೊಂದೆ ಇಲ್ಪಟ್ಟ ಕಂಬೆಗಳು ಯಾವ ಕಾಂತಿಯುಳ್ಳವಾದ್ದವೋ ಅದೇವರ್ಣ ಪ್ರಜೆಗಳಿಗೂ ಉಂಟಾದಂತೆ ಈಚೆಗೆ ನೋಡತಕ್ಕೊಬ್ಬನು ಹಾಸ್ಯಿಸಿ ಕಂಡು ಹಿಡಿಯುತ್ತಾನೆ ಮೇಲೆ ಕಂಡ ತಪಸ್ವಿಯು, ಬಸಿಷ್ಠನಿಗೆ ಸನ್ನಿಹಿತ ಬಂಧುವಾಗಿರಬಹುದೆಂದು ಪುನೆ ವೈಭವನೆಂಬ ಪತ್ರಿಕೆ ತಿಳಿಸುತಿದೆಯಲ್ಲದೆ, ಇದಕ್ಕೆ ಉಪಷ್ಟಂಭಕವಾದ ಹಾಗಿ ನಮ್ಮ ದೇಶದಲ್ಲಿ ಶತಪುರುಷನಾಗಿರುವ ಕಾರ್ಯವಾಹನನ ವೃತ್ತಾಂತವನ್ನು ಸಹ ಉದಹರಿಸು

ಕಿದೆ. ಇದನ್ನು ನಾವು ಸಖ್ಯಿಂದ ಹೇಳುವೆವಾದರೆ ಕಾಲೀವಾಹನನ ವೃತ್ತಾಂತಕಹಾ್ನಲಕ ಪತಿಪರಿ ಕ್ಕೆ ಉಪಾ ಸ್ಥಾನಂತರವನ್ನು ಕಂಸುಕ ಬೇಕಾಗು ತದು. ವಸಿಷ್ಠರಿಗೂ, ಯವನ ಮೇಷ್ಠರಿಗೂ ಪ್ರಾಚೀನ ಕಾಲದಲ್ಲಿ ಸಂಬಂಧ ನೆಲಗೊಂಡಿತ್ತೆಂಬೆ ನಮ್ಮ ಪು ರಾಣಗಳಿಂದಲೇ ವ್ಯಕ್ತವಾಗುತಿದೆ. ಯೂರೋಪ್ ಖಂಡದವರಸ್ಥಿತಿ ಪ್ರಾಯೇಣ ಜುಲ್ಲಯೂ, ರಾವು ಅರ್ಯಕಂಕ ಸಂಭೂತರಾದದರಿಂದ ಹಿಂದುಗಳೊ ಡನೆ ಕಮಕೆ ಸಲ್ಲಾಪ, ಸಹವಾಸ, ಸಹಗಮನ, ಸ ಹಯಾನ, ಸಹಭೋಜನಾದಿಗಳಿಗೆ ಪ್ರಾಕಂಪ್ರಿ ವೃಂಚಿಂಬದಾಗಿ ಹೇಳುತ್ತಾರೆ. ಈ ಸೂತ್ರವನ್ನು ಮಾತ್ಮಾಗಿ ವಿಚಾರಮಾಡಿ ನೋಡಿದರೆ ಪುಸ್ತಿಂ ದು ಹೇಳಲಿಕ್ಕಿಲ್ಲವು. ಯಾಕೆಂದರೆ ಯೂ ರೋಪಿಯನ್ನರಿಗೆ ಭಾರತ್ಯ ದೇಶ ಸಂಬಂಧ ವಾಕ ವೇಷ ಭಾಷಾಚಾರಗಳಲ್ಲಿ ಅಭಿಮಾನವೃತ್ತಿ ಯಾಕೆ ಬರುವಂತೆಲ್ಲ ನಮ್ಮವರಿಗೆ ರಾವು ಯೂ ರೋಪಿಯನ್ನರಾಗಬೇಕೆಂತಲೂ, ಅವರ ವೇಷ ಭಾಷಾಚಾರಗಳನ್ನು ಪರಿಗ್ರಹಿಸ ಬೇಕೆಂತಲೂ ಕನ್ಯಾಗಳಲ್ಲಿ ಸಂಬಂಧ ಮಾಡಬೇಕೆಂತಲೂ, ಅ ಭಿಪ್ರಾಯ ವುಂಟಾಗುತೆ ಅದರಂತೆ ಅವರು ನಡೆ ಯಲಾರಂಭಿಸಿದ್ದಾರೆ, ಆದ ಕಾರಣ ಏಜಾತೀಯರ ಗಾದ ಪದಾರ್ಥಗಳಿಗಡಕ್ಕೆ ಯಾವಾಗಲೂ, ಪ ರಸ್ಪರ ಅನುಗ ಸ ಸಂಬಂಧ ವು ಟಾಗುವದು ಅ ಪೇಕ್ಷಿತವಾದದರಿಂದ ಯೂರೋಪಿಯನ್ನರಿಗೂ ನ ಮಗೂ ಹಿಂದೆ ಸಜಾತೀಯ ಸಂಬಂಧ ನೆಲಗೊಂ ಡಿದ್ದಂತೆ ಈಗಿನ ಕಾಲಗವರ ಪರ್ಣನದಿಂದ ನಿರ್ಣ ಯಿಸ ಹೇಳಬೇಕಾಗಿದೆ. ಮುಖ್ಯವಾಗಿ ನಾವಿಲ್ಲಿ ಈಗ ಯಬೇಕಾದ್ದೇನಂದರೆ—ಯೂರೋಪ್ ಖಂಡ ದ ವಿಗರು ನಮ್ಮ ನಮ್ಮವರ ತಿತ್ತ್ವಿಕ ಪ್ರಾಂತ್ಯಗಳ ಸ್ತ್ರೀಗಳನ್ನು ಅಂಗೀಕರಿಸಿದವರಾಗಿದ್ದರೆ ಹೊರ್ ತುಗಿನವರಂತೆ ಭಕ್ತಿಹೀನ ರಾಗಿರಲಿಲ್ಲವು. ಕಾಲ ಸುಸುಣವಾಗಿ ವಿಚಾರಗಳೂ ಅವುಗಳಿಗೆ ಕಿಂಕರರೆ ಅಭಿಪ್ರಾಯಗಳೂ, ಅದರಂತೆ ವರ್ತನಗಳೂ ಪ ರ್ವಡುತ ಬಂದದರಿಂದ ಯಿಲ್ಲವೂ ಬದಲಾಯಿಸಿ ಅದಕ್ಕೆ ಪೋಷಕಗಳಾದ ನೂತನಆಧಾರಗಳು ಕು ದುರುತ ಬರುತಲಿವೆ. ಇನ್ನು ಸ್ವಲ್ಪ ಕಾಲದಲ್ಲಿಯೇ ಈಗ ನಾವು ನೋಡುತಲಿರುವ ಆಚಾರ ವ್ಯವಹಾ ರಗಳೆಲ್ಲವೂ ಅತ್ಯಂತಿಕವಾಗಿ ಬದಲಾಯಿಸಲ್ಪಟ್ಟು ಪರ್ವರಿಗೆ ಏಕರೂಪವಾದ ಆಚಾರ ನೆಲಗೊಳ್ಳು ವದೆಂಬದರೊ ಲೆಸ್ಸು ಕ್ರವೂ ಸಂದೇಹವಿಲ್ಲ ವಾದದಿಲ್ಲವು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್ ಜಾತಿವೃತ್ತಾಂತಗಳು.

Arrival of Her Highness the Maharani of Mysore.—ಮೈಸೂರು ಶ್ರೀಮನ್ಮಹಾರಾಣಿಯವರು ಊಟ್ಟಿಯ ವಾಸವುಬಿಟ್ಟು ಈದಿನಸಾಯಂಕಾಲ ತಮ್ಮ ಮಕ್ಕಳೊವನೆ ಬೆ ಳ್ಳಿಗೆದಯನಾಡಿ ಸ್ವಲ್ಪಕಾಲ ಅಲ್ಲೇಯಿರುವದಾ ಗಿದಾರೆಂದು ಒಳದೇಶದ ಪತ್ರಿಕೆಯೊಂದು ತಿಳಿ ಸುತಿದೆ. ಈ ಸುಂದರ್ಭದಲ್ಲಿ ನಮ್ಮ ಯುವರಾ ಜ ಸಂದರ್ಶನವು ಬಹುಶಃ ಲಭಿಸಬಹುದೆಂದೆಣಿ ಸುತ್ತೇವೆ.

Lecture on widow marriage.—ಈವ್ರೊರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿರುವ ರಾಯಬಹದೂರ್ ಅರ್ಕಾಟ್ ನಾರಾಯಣಸಾಮಿ ಮೊದಲಿಯಾರ್ರವರ ಸ್ಕೂಲ್ ಸೌಧದಲ್ಲಿ, ಗತ ಶನಿ ವಾರದದಿನ ಸಾಯಂಕಾಲ ರೆವರೆಂಡ್ ಮಿ|| ಸ್ಲೇಟರ್‌ಯೆಂಬವರು ಇಂಗ್ಲಿಷ್‌ಭಾಷೆಯಲ್ಲಿ, ವಿಧವಾವಿವಾಹವು ಅವಶ್ಯಕರ್ತವ್ಯವೆಂಬದಂಕುರಿತು ಪ್ರಸಂಗಮಾಡಿದರು. ಆಕಾಲದಲ್ಲಿ ರಾಜಾ ಸರಿ ಟಿ. ಮಾಧವರಾಯರವರು ಪ್ರಸಿಡೆಂಟರಾಗಿದ್ದರು. ಇದುಕೇಳತಕ್ಕಬಗ್ಗೆ ಬಹುಮಂದಿ ನೇಟವ್ ದೊಡ್ಡಮನುಷ್ಯರು ಬಂದಿದ್ದರು.

Double murder.—ಈವಾರದ ಆದಿಭಾಗದಲ್ಲಿ ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಅತಿ ಘೋರವಾದ ಯೆರಡು ಖೂನಿಗಳು ನಡೆದವು. ಅದರ ತಪಸೀಲನ್ನು ಗತವಾರದವೃತ್ತಾಂತ ಬೋಧಿಸಿ ತಿಳಿಸುತಿದೆಹ್ಯಾಗಂದರೆ—"ಗತ ಸೋಮವಾರದ ದಿನ ಬೆಳಿಗ್ಯೆ ೬ ಘಂಟೆಯ ಹೊತ್ತಿನಲ್ಲಿ ಅತಿ ವೇಗವಾದ ಬಂದೂಖ್ ಸುಟ್ಟ ಎರಡು ಶಬ್ದಗಳು ಇಲ್ಲಿನ ೧೨ನೇ ಮದರಾಸ ನೇಟವ್ ಇನ್‌ಫೆಂಟ್ರಿ ಬ್ಯಾರೆಕ್ಸು ಕಟ್ಟಡದಬಳಿಯಿಂದ ಹೊರಪಟ್ಟು ವಿಚಾರಿಸುವಲ್ಲಿ ಅದೇ ರಿಜಿಮೆಂಟಿಗೆ ಸೇರಿದ ಮೇಲ್ಕಂಡ ರಾಮಕೃಷ್ಣಪ್ಪನೆಂಬವನು ಆ ಕಟ್ಟಡದ ಹಿಂದುಗಡೆನಿಂತು ತನ್ನ ಬಂದೂಖನ್ನು ಇನ್‌ಫೆಂಟ್ರಿ ಹಾಸ್ಪತ್ರಿಬಳಿಯಿಂದ ಬರುತಲಿದ್ದ ಟ್ರಿಕ್ ಹವಾಲ್ದಾರ್ ನಾರಾಯಣಸಿಂಗ ಎಂಬವನಮೇಲೆ ಗುರಿಯಿಟ್ಟು ಪ್ರಯೋಗಿಸಲು ಆ ಗೋಲಿಯು ಅತನಿಗೆ ತಗಲಿ ಎಡಗಡೆಯಿಂದ ಶರೀರದಲ್ಲಿ ಪ್ರವೇಶಿಸಿ ಬಲಪಾರ್ಶ್ವದಲ್ಲಿ ಹೊರಟು ಆತನನ್ನ ತತ್ಕ್ಷಣವೇ ಮೃತಪಡಿಸಿ ಗೋಡೆಗೆ ತಗಲಿದಹಾಗೂ, ಸದರೀ ಪ್ರಾಣಕಂಟಕನು ಅಷ್ಟಕ್ಕೆ ತೃಪ್ತಿಗೊಳ್ಳದೆ ಮುಂದೆ ಹೊರಟು ಸದರೀ ಹಾಸ್ಪತ್ರಿಯ ಬಳಿಯಲ್ಲಿ ಬರುತಿದ್ದ ಜಮೇದಾರ್ ಅಡ್ಜಟಂಟ್ ಹುದ್ದೇದಾರನಾದ ರಾಮಸ್ವಾಮಿಯೆಂಬಾತನ ಕಪಾಳವನ್ನ ಬಂದೂಖ್‌ನಿಂದ ಸುಟ್ಟು ಅವನನ್ನೂ ಹತಪಡಿಸಿ ಪ್ರೆಗ್ರೌಂಡ್ ಎಂಬ ಮೈದಾನಕ್ಕೆಬಂದು ಅಲ್ಲಿ ಕವಾಯತಿಗಾಗಿ ಸೇರುತಲಿದ್ದವರಪೈಕಿ ಒಬ್ಬ ಲೆಫ್ಟಿನೆಂಟ್ ಆಫೀಸರ ಮೇಲೆ ತುಪಾಕಿ ಸುಟ್ಟಾಗ್ಯೂ ದೈವವಶದಿಂದ ಅತನು ತಪ್ಪಿಸಿಕೊಂಡಬಳಿಕ ಒಬ್ಬ ಸಿಪಾಯಿಯು ಈ ಕೊಲೆ ಪಾತಕನನ್ನ ಹಿಡಿದು ಆಯುಧವನ್ನ ಕಿತ್ತುಕೊಂಡು ನೆಲಕ್ಕೆ ಕೆಡಹಿ ಇನ್ನೂ ಕೆಲವರ ಸಹಾಯದಿಂದ ಅವನನ್ನ ನಿಗ್ರಹಿಸಿದಹಾಗೆ ಸ್ಪಷ್ಟವಾಯಿತು. ಕೋರ್ಟ್ ಮಾರ್ಷಿಯಲ್ ವಿಚಾರಣೆಯಲ್ಲಿ ತಾನು ಕೆಲವು ಮಾಸಗಳವರೆ ಅಪಸ್ಮಾರವಹಾಗೆ ಇದ್ದಂತೆ ಕೈಬಿಡುತ್ ಕೊಟ್ಟನು" ಎಂಬದು. ಇದಕ್ಕೆಕಾರಣವನ್ನು ವಿಚಾರಿಸಲಾಗಿತನ್ನ ಇಜಾಫೆಯ ವಿಷಯದಲ್ಲಿಮೇಲೆಕಂಡವರು ವಿರೋಧಿಸಿದರೆಂತಲೂ, ಆ ಆಗ್ರಹದಮೇಲೆ ಈರೀತಿ ನಡಿಸಿದನೆಂತಲೂ ತಿಳಿಯಬರುತಿದೆ. ಯದ್ಯಪಿ ಕಾರಣಗಳು ಹ್ಯಾಗಾದರೂ ಇರಲಿ, ಮನುಷ್ಯನಿಗೆ ಮಾತ್ಸರ್ಯವೂ, ಅಸಹನೆಯೂ ಪ್ರಬಲವಾದರೆ ಅವರು ತನ್ನ ಪರಿಣಾಮವನ್ನು ಸ್ವಲ್ಪವೂ ಚಿಂತಿಸಲಾರನು. ಆದ್ದರಿಂದ "ತಾಳ್ದವನು ಧರಣಿಯಾಳುವನು, ತಿಮ್ಮಿಳಸುವವನು ತಿಕ್ಕಲಾಗುವನು" ಎಂಬ ಲೋಕೋಕ್ತಿಯೆಂದಿಗೂ ಸುಳ್ಳಾಗಲಾರದು.

The weather.—ಗತವಾರದವೊದಲು ಸೂರ್ಯರಶ್ಮಿಯಿಲ್ಲದೆ ಅನವರತ ಮೋಡ ಮುಸುಕುತಲೂ, ಕದಾಚಿತ್ ತುಂತುರು ಹನಿಗಳು ಒಂದೆರಡು ಬೀಳುತಲೂ, ಛಳಿ ಅಧಿಕವಾಗುತಲೂ, ಇರುವದರಿಂದ ದುರ್ದಿನಗಳೆಂದೆಣಿಸಬೇಕಾಗಿದೆ. ಪಟ್ಟಣದಲ್ಲಿ ಉಷ್ಣಜ್ವರಲಾಭ ರೋಗಗಳು ಶುದ್ಧಾಂಗ ನಿವೃತ್ತಿಯಾದಂತೆ ಕಾಣಿಸಲಿಲ್ಲವು. ಗತ ಶುಕ್ರವಾರದದಿನಸಹ ಕೋಮಟಿಪೇಟೆಯಲ್ಲಿಇದೇರೋಗದಿಂದ ಒಬ್ಬನು ಮೃತಪಟ್ಟಂತೆ ತಿಳಿಯಬರುತಿದೆ. ಇನ್ನೂ ಅಲ್ಲಿಯಲ್ಲಿಒಬ್ಬಿಬ್ಬರು ಹೋಗುತಲಿದಾರೆ. ಗ್ರಾಮದೇವತೆಯ ಶಾಂತಿಯಿಂದ ಜನಗಳೂ ದಣಿದರು. ಡಿಸ್ಟ್ರಿಕ್ಟ ಜಾತ್ರಿ ಪ್ರೋರ್ಟುಗಳನ್ನು ನೋಡಲಾಗಿ ಕೋಲಾರ್, ತುಮಕೂರು, ಮೈಸೂರು, ಕಡೂರು, ಈ ಡಿಸ್ಟ್ರಿಕ್ಟುಗಳುವಿನಾ ಮಿಕ್ಕ ಕಡೆಗಳಲ್ಲಿ ಇದ್ದಮಟ್ಟಿಗೆ ಯಥೋಚಿತ ಮಳೆ ಆಗಿರುವಂತೆ ತಿಳಿಯಬರುತಿದೆ. ಸದರೀ ಡಿಸ್ಟ್ರಿಕ್ಟುಗಳಲ್ಲಿಮಾತ್ರ ಮಳೆ ಸರಾಸರಿ ಅರ್ಧ ಅಂಗುಲಕ್ಕಿಂತಲೂ ಅಧಿಕವಾಗಿ ಬೀಳಲಿಲ್ಲವು. ಶಿವಮೊಗ್ಗ ಪ್ರಾಂತದಲ್ಲಿ ತರೀ ಪೈರುಗಳು ವರ್ಷಾಭಾವದಿಂದ ಕೆಡುತಲಿವೆ. ಮಲಾನಾದಿನಲ್ಲಿಯೂ,ಮೈದಾನ ತಾಲ್ಲೂಕುಗಳಲ್ಲಿಯೂ ಪೈರುಗಳಸ್ಥಿತಿ ತೃಪ್ತಿಕರವಾಗಿಲ್ಲವು. ಜನಗಳಿಗೂ ಪಶುಗಳಿಗೂ ಸರ್ವತ್ರ ಸುಖವಿಲ್ಲವು. ವೈಷೂಚಿರೋಗ, ಜ್ವರ, ಕಣ್ಣೋವು, ಸಿಡುಬು, ಇವುಗಳಲ್ಲಿ ಯಾವದಾದರೊಂದು ಇಲ್ಲದೇಇರುವ ಪ್ರದೇಶವೇ ಕಾಣಿಸಲಿಲ್ಲವು. ದನಗಳಿಗೆ ಸುಖ ಕಡಮೆಯೆಂತ ಹೇಳಬೇಕಾಗಿದೆ. ರೂಪಾಯಿ ೧ಕ್ಕೆ ಅಕ್ಕಿ ಸರಾಸರಿ ೧೧ ಸೇರುಗಳಂತೆಯೂ ರಾಗಿ ೨೮ ಸೇರುಗಳ ಪ್ರಕಾರವೂ ಮಾರಲ್ಪಡುತಲಿವೆ. ಇತರ ಪದಾರ್ಥಗಳ ನಿರಖ್ ಏಕರೂಪವಾಗಿದೆ. ಶಹರಿನಲ್ಲಿರತಕ್ಕವರಿಗೆ ಕಾಷ್ಠ ದೌರ್ಲಭ್ಯವು ಬಹಳವಾಗಿದೆ. ಒಂದೊಂದು ಸಂದರ್ಭದಲ್ಲಿ ಜಾಸ್ತಿ ಕ್ರಯ ಕೊಟ್ಟಾಗ್ಯೂ ಕಟ್ಟಿಗೆ ಗಾಡಿಗಳೇ ದೊರೆಯುವದಿಲ್ಲವು ಇದಕ್ಕೆ ಈಗ ದಳ್ಳಾಳಿಯವರಿಗೆ ಪ್ರತ್ಯಾಮ್ನಾಯರಾಗಿ ಏರ್ಪಟ್ಟಿರುವ ಕಟ್ಟಿಗೆ ಅಂಗಡಿಯವರ ಲಾಭಚಿಂತೆಯೇ ಕಾರಣವೆಂದು ತೋರುತಿದೆ.

ಈ ತಿಂಗಳ ೨೨ನೇ ತಾರೀಖುಲಗಾಯತು ಆಗಸ್ಟು ೨೩ನೇ ತಾರೀಖುವರಿವಿಗೆ ಅಂದರೆ, ಪ್ರಸ್ಯಮಿ ಅಶ್ಲೇಷ ಶುಖ ೨ನೇ ಪಾದದವರಿವಿಗೆ ಕುಜ ಶನಿಗಳಿಗೆ ಏಕರಾಶಿಯೋಗವೂ, ಗುರು ಶನಿ ಕುಜರಿಗೆ ತೃತೀಯೈಕಾದಶಯೋಗವೂ ಕುಜ ಗುರುಗಳಿಗೆ ಮಧ್ಯೆ ಬುಧಸಂಚಾರವೂ ಇರುವದರಿಂದ ಈತಿಂಗಳು ಕ್ರೂರವಾಗಿರುವದು. ಇದರಫಲ—ತುಷಾರವೃಷ್ಟಿ, ಖಂಡವೃಷ್ಟಿ, ದವಸಕ್ಕೆ ದಾರಣೆಯು ಹೆಚ್ಚುತಬರುವದು, ಕೆಲವುಕಡೆ ಅನಾವೃಷ್ಟಿ, ಪ್ರಜೆಗಳಿಗೆ ಅನಾರೋಗ್ಯ, ಕೆಲವುಕಡೆ ಉತ್ಪಾತ ಸಂಭವ, ಈ ಮೇರೆ ಶುಭಾಶುಭ ರೂಪವಾಗಿರುವದು ಶುಕ್ರನು ಮಘಾದಿ ಪಂಚಕದಲ್ಲಿ ಷಷ್ಟಿಮದಲ್ಲಿರುವಕಾರಣ ಅನಾವೃಷ್ಟಿಯೆಂದು ಗ್ರಂಥವಿದೆ. ಆದ್ದರಿಂದ ಕೆಲವುಕಡೆ ತುಷಾರವೃಷ್ಟಿಯೂ, ಕೆಲವು ಕಡೆ ಅನಾವೃಷ್ಟಿಯೂಅನ್ಯತ್ರಖಂಡವೃಷ್ಟಿಯು ಸಹ ವುಂಟಾಗುವದು. ಆಗಸ್ಟ ೨೩ನೇ ತಾರೀಖು ಮೊದಲು ಅಲ್ಲಿಯಲ್ಲಿ ಸ್ವಲ್ಪ ಮಳೆಯಾಗುವದೆಂದು ಬ್ರಹ್ಮಶ್ರೀ ಹುಲಿಕಲ್ಲು ಲಕ್ಷ್ಮೀರಮಣ ಜೋಯಿಸರು ತಿಳಿಸಿರುತ್ತಾರೆ.

Cheating.—ಈವರಿದು ದೊಡ್ಡಪೇಟೆಯಲ್ಲಿ ಜವಳೀಅಂಗಡಿ ಇಟ್ಟುಕೊಂಡಿರುವ ಮೊಹಿದೀನ್ ಸಾಬರ ಅಂಗಡಿಯಲ್ಲಿ ಇಪೇನ್ವೂರು ವಾಸಸ್ಥನಾದ ಒಬ್ಬ ಶ್ರೀವೈಷ್ಣವನು, ತಾನೊಬ್ಬ ದೊಡ್ಡ ಮನುಷ್ಯನ ಮನೆಯೊಳರುತಲಿರುವಂತೆಯೂ ಅವರಿಗೆ ಕೆಲವು ಜವಳೀಬೇಕಾಗಿರುವಂತೆಯೂಹೇಳಿ ಸುಮಾರ್ ೨೦ ರೂಪಾಯಿಗಳು ಬಾಳುವ ಜವಳಿಯನ್ನು ಖರೀದಿಮಾಡಿ ತೆಗದುಕೊಂಡು ತನ್ನಸಂಗಡ ಒಬ್ಬ ಆಳನ್ನು ಕಳುಹಿಸಿದರೆ ಖರೀದಿಮೊಬಲಗನ್ನು ಕೊಡುವಂತೆಹೇಳಿ, ಆಳಿನಸಂಗಡ ಬೊಳಸೀತೋಟಕ್ಕೆಹೋಗಿ ಸದರೀ ಆಳನ್ನು ಬಾಗಲಿನಲ್ಲೇ ಕುಳ್ಳರಿಸಿ ತಾನು ಒಳಗೆ ಹೋಗಿ ಬೇರೊಂದುಮಾರ್ಗವಾಗಿ ಹೊರಗೆ ಹೊರಟುಹೋದನೆಂತಲೂ, ಆಳು ಬಹಳಹೊತ್ತು ಅಲ್ಲಿಯೇಕಾದಿದ್ದು ಆಸಾಮಿ ಬಾರದೆ ತಪ್ಪಿಸಿಕೊಂಡುಹೋದ ಅಂಶವನ್ನು ತನ್ನ ಯೆಜಮಾನನಿಗೆಬಂದು ತಿಳಿಸಿ ಅತನೊಡನೆ ತಾನೂ ತನ್ನ ತಲೆಯಮೇಲೆಕ್ಕೈಇಟ್ಟುಕೊಂಡು ಕುಳಿತುಕೊಂಡನೆಂತಲೂ, ಬಳಿಕ ಸದರೀ ವರ್ತಕನು ಮಾಜಿಸ್ಟ್ರೇಟಕೋರ್ಟಿನಲ್ಲಿ ಫಿರ್ಯಾದ್‌ಮಾಡಿದ್ದರಮೇಲೆ ಅವನ ದಸ್ತಗಿರಿಬಗ್ಯೆ ಈಗ ವಾರಂಟು ಕೊಡಲ್ಪಟ್ಟಿರುವಂತೆಯೂ ತಿಳಿಯಬರುತಿದೆ. ಶ್ರೀವೈಷ್ಣವನು ಹಿಂದೆ ಕೆಲವುಸಾಮಿಗಳ ಕೆಲಸ ಮಾಡಿದ್ದನೆಂತಲೂ, ತನ್ನ ಬಹುಕಾಲಿನ ದೆಸೆಯಿಂದ ಅಡುಕೆಳೆದುಕೊಂಡು ಈರೀತಿ ದಗಾಬೋರ್ ವಿದ್ಯೆಯಲ್ಲಿ ಕಾಲಹರಣ ಮಾಡುತಲಿದ್ದಾನೆಂತಲೂ ತಿಳಿಯಬರುತಿದೆ. ವರ್ತಕರು ಬಿಡಿಲಾಭಸಂಪಾದಿಸಲಿಕ್ಕೂ ಒಂದೊಂದುಸಲ ಈರೀತಿ ಮೋಸಹೋಗುವದಕ್ಕೂ ಸರಿಯಾಗುತಿದೆ.

Murder.—ದೊಡ್ಡಬಳ್ಳಾಪುರ ತಾಲ್ಲೂಕು ಗುಂಡಿಂಗೆರೆಯೆಂಬ ಗ್ರಾಮದಲ್ಲಿರುವ ಅಂಜನಿಯೆಂಬೊಬ್ಬ ರೈತನು ಮತ್ತೊಬ್ಬನ ಹೆಂಡತಿಯನ್ನು ರಖಾವ್‌ಮಾಡಿಕೊಂಡು ಅವಳನ್ನು ಗಂಡನ ಮನೆಯಿಂದ ಪರಸ್ಥಳಕ್ಕೆ ಸಾಗಿಸಿಕೊಂಡು ಹೋಗಿ ಅಲ್ಲಿ ಅವಳೊಡನೆ ಮೂರುನಾಲ್ಕು ತಿಂಗಳತನಕ ವಾಸವಾಗಿದ್ದನೆಂತಲೂ, ಈ ಅಂಶ ಸದರೀ ಹೆಂಗಸಿನ ಗಂಡನಿಗೆ ತಿಳಿಯಬಂದು ಅದರಮೇಲೆ ಅವನು ತನ್ನ ಹೆಂಡತಿ ವ್ಯಭಿಚಾರವಾಗಿದಿದರೂ ಚಿಂತೆಇಲ್ಲವೆಂದೆಣಿಸಿ ಅವಳು ಹ್ಯಾಗಾದರೂ ತನ್ನೊಡನೆ ಇದ್ದರೆ ಸಾಕೆಂದು ಅವಳನ್ನು ಮಧ್ಯಸ್ಥರಮೂಲಕ ತನ್ನಬಳಿಗೆ ಕರೆಯಿಸಿಕೊಂಡನೆಂತಲೂ, ಅವಳು ತನ್ನ ಮಿಂಡನನ್ನಗಲಿ ಗಂಡನೊಡನೆ ಹದಿನೈದು ದಿನಗಳತನಕ ಮರಳಿ ವಾಸಮಾಡುತಲಿದ್ದಳೆಂತಲೂ, ಮಿಂಡನು ತನ್ನಬಳಿ ಇರುವಾಗ್ಯೆ ಆ ಹೆಂಗಸಿಗೆ ಉಪಭೋಗಾರ್ಥ ಕೊಟ್ಟಿದ್ದ ಕೆಲವು ಆಭರಣಗಳನ್ನು ವಾಪಸ್ ಕೊಡಬೇಕೆಂದು ಅವನು ಅವಳನ್ನು ಬಲಾತ್ಕರಿಸಿ ಕೇಳಿದ್ದಕ್ಕೆ ಅವಳು, ತನ್ನಮೂಲಕ ಅವನಿಗೆ ವುಂಟಾದ ಸಂತೋಷಕ್ಕೆ ಈಗ ಕೊಟ್ಟಿರುವದು ಕೇವಲ ಅಲ್ಪವಾದ್ದಾಗಿರುವದಲ್ಲದೆ ತನ್ನಬಳಿ ಇರುವದನ್ನು ವಾಪಸ್ ಕೊಡುವದಿಲ್ಲವೆಂದು ನಿರಾಕರಿಸಿದಳೆಂತಲೂ; ಅದರಮೇಲೆ ಅವನಿಗೆ ಆಗ್ರಹವುಂಟಾಗಿ ಕಾಲಿನಿಂದ ಅವಳ ಯೆದೆಯಮೇಲೆ ಒದೆಯಲು ಅವಳು ಕೂಡಲೇ ಮೂರ್ಛಿತಳಾಗಿ ಅದೇಕಾರಣದಿಂದ ಮಾರನೆಯದಿನ ಅಂದರೆ ಈಗ್ಯೆ ಸುಮಾರ್ ೪ದಿನಗಳಹಿಂದೆ ಮೃತಪಟ್ಟಳೆಂತಲೂ, ಈ ಅಂಶ ಬಳಿಕ ಪೋಲೀಸ್‌ನವರಿಗೆ ರಿಪೋರ್ಟಾಗಿ ಅವರು ಮೊಕದ್ದಮೆಗೆ ಬೇಕಾದ ಅಂಶಗಳನ್ನು ಯೇರ್ಪಡಿಸಿ ಮ್ಯಾಜಿಸ್ಟ್ರೇಟರವರಮುಂದೆ ಅವನನ್ನು ಹಾಜರ್ಮಾಡಿದರೆಂತಲೂ ಅಲ್ಲಿ ಈ ಮೊಕದ್ದಮೆ ವಿಚಾರಣೆಯಾಗಿ ಸೆಷನಿಗೆ ಕಮ್ಮಿಟಾಗಿರುವಂತೆಯೂ ತಿಳಿಯಬರುತಿದೆ. ಈ ಮೊಕದ್ದಮೆಯಲ್ಲಿ; ಫಿರ್ಯಾದಿಯಾಗಿಯೂ ಮುಖ್ಯ ಸಾಕ್ಷಿಯಾಗಿಯೂ ಇರುವ ಮೃತಪಟ್ಟವಳ ಗಂಡನು ತನ್ನ ಭಾರ್ಯೆಯ ಜಾರತ್ವವನ್ನುಸಹ ಪರಿಗಣಿಸದೆ ಅವಳು ತನ್ನಲ್ಲಿದ್ದರೆ ಸಾಕೆಂದು ಆಶಿಸಿದ್ದಕ್ಕೆ ಇಷ್ಟಾರ್ಥಪ್ರಾಪ್ತಿಯಾಗದೆ ಅವಳ ಮರಣಕ್ಕೆ ತಾನೆ ಪರಂಪರೆಯಾ ಕಾರಣಭೂತನಾದನು.

CORRESPONDENCE

A REPLY.

ಪರಾಶರ ಧರ್ಮಶಾಸ್ತ್ರ.

ರ ಜ ರಾಜ ಮಾನ್ಯ ರಾಜಶ್ರೀಯವರಾದ ಕರ್ಣಾಟಕ ಪ್ರಕಾಶಿಕಾ ಕಾರರವರಿಗೆ ವಿಜ್ಞಾಪನೆ.

ಪತ್ರಿಕೆಯ ವಿಷಯಗಳನ್ನು ಸಾವಧಾನ ಮನಸ್ಸಿನಿಂದಾಗಿ ನೋಡಲು ಬಂದಿನಪ್ರಕಾರ ಪ್ರತಿನಿಸುತ್ತೇನೆ. ಸನ್ನಿಂದ ಶಾಸ್ತ್ರಾರ್ಥ ಮಾಡಲ್ಪಟ್ಟು ಮುದ್ರಿಸಲ್ಪಟ್ಟ ಕಮ್ಮಲ್ಲಿ ಶ್ರೀ ಪರಶಾರ ವಚನ ಮಾಧವೀಯದ ಪ್ರಕಾರ ಸಂಚಿಕೆಯನ್ನು ಗೌಪ್ಯ ಕಮ್ಮ ಮನೋಸಂಧಾನದಿಂದ ಮ ಧ್ಯಮಾರ್ಥ ಕ ರವಾರದ ಪತ್ರಿಕೆ ನೋಡ ಬೋಧಕಗಳನ್ನು ಹೊರಪಡಿಸಲು ಪ್ರಯುಕ್ತಿಸಿದ್ದಕ್ಕಾಗಿ ನಾನು ಬಹಳ ಕೃತಜ್ಞನಾಗಿದ್ದೇನು.

೧. ಆದರೆ ನಾವು ನನ್ನ ಆದ್ಯ ಮಂಗಳ ಪದ್ಯದಲ್ಲಿ 'ಸ್ವಸ್ಥಾಂತರ ವಾದ ಜೀರ್ಣ ಶೀರ್ಣ ಶಬ್ದಗಳು ಪ್ರಯೋಗಿಸಲ್ಪಟ್ಟಿರುವದರಿಂದ ಇಳು ಕೃತ್ರಿಮತ್ವಯುಂಟಾಗಿರುವದಕಾರಣ, 'ಶಸ್ತ್ರ ಕರ್ಮಣೋಸ್ತಿ' ಎಂಬ ಸೂತ್ರದಿಂದ ನಿತರಂ ಕೃಪ ನೂ ಪಿ ಬಳಿಗೆ ಬದಲಾಗಿ ನಿಕರಸ್ಥ ಕೃದಂಚಸ್ಯ ಎಂದು ಪಕ್ಷ ಅಪ್ರಯೋಗತೇ ಆಗಬೇಕಾಗಿರುತ್ತಿದೆ" ಎಂಬದಾಗಿ ವ್ಯಾಕರಣ ವಿರೋಧವನ್ನ ಅಂಕಿಸಿದ್ದೀರಿ. ಇಲ್ಲಿ (ಕರ್ತ್ಯರ್ಥ ಮರ್ಣಾಸ್ತಿ) ಎಂಬ ಸೂತ್ರವು ಸಾಮಾನ್ಯತಃ ಕೃತ್ ಪ್ರತ್ಯಯದಲ್ಲಿ ಷಷ್ಠೀಪ್ರಯೋಗವನ್ನು ವಿಧಿಸಿದ್ದಕ್ಕೆ ಅಪವಾದ ಮಾಡವಾಗಿ (ನಲೋಕಾವ್ಯಯ ನಿಷ್ಠಾಖಲರ್ಥತೃನಾಮ್.) ಎಂಬ ೨—೩—೬೯ನೇ ಸೂತ್ರದಿಂದ ಪಾಣಿನಿ ಮುನಿಗಳು ಕೃಷ್ಣಂತ ಪ್ರಯೋಗದಲ್ಲಿ ಷಷ್ಠಿಯು ಕೂಡದೆಂದು ಶಾಸ್ತ್ರ

[illegible]

ಇಂತಿ ಪ್ರಾರ್ಥನೆ.

ಪಾರ್ಥಿವ ಆ. ಶು. ದ. } ಚೆಂಬೋಳೀ ವೆಂಕಣ್ಣಾಚಾರ್ಯ
[illegible] } ರೆ ಸಹಿ.

ಬ್ರಹ್ಮಶ್ರೀ ಚೆಂಬೋಳೀ ವೆಂಕಣ್ಣಾಚಾರ್ಯರಿಂದ ಕನ್ನಡದಲ್ಲಿ ಭಾಷಾಂತರ ಮಾಡಲ್ಪಡುತಲಿರುವ ಪರಾಶರ ಧರ್ಮಶಾಸ್ತ್ರವು ಕುರಿತು ಗತ ವಾರದ ಪತ್ರಿಕೆಯಲ್ಲಿ ನಾವು ತಿಳಿಸಿದ ಅಭಿಪ್ರಾಯದಮೇಲೆ ಸದರೀ ಆಚಾರ್ಯರವರು ಖುಷನ ಬರೆಯುವದಕ್ಕೆ ಪ್ರಯತ್ನಪಟ್ಟದಕ್ಕೋಸ್ಕರ ನಾವು ಬಹಳ ಸಂತೋಷಿಸುವೆವು. ನಮ್ಮ ಆಕ್ಷೇಪಗಳಮೇಲೆ ಆಚಾರ್ಯರವರು ತಿಳಿಸಿದ ಯುಕ್ತಿವಾದಗಳನ್ನು ಪಂಡಿತರ ಪರಾಮರ್ಶೆಯಬಗ್ಯೆ ಪ್ರಕಟಿಸಬೇಕಾದ್ದು ಅವಶ್ಯವಾಗಿರುವದರಿಂದ ಕೃಪಾಪೂರ್ವಕ ನಮಗೆ ಕಳುಹಿಸಿದ ಅವರ ಲೇಖನವನ್ನು ಮೇಲೆ ಪ್ರಕಟಿಸಿರುತ್ತೇವೆ. ಈವಾರದಲ್ಲಿಯೇ ಅದಕ್ಕೆ ಪ್ರತ್ಯುತ್ತರ ಹೇಳುವದಕ್ಕೆ ಪತ್ರಿಕೆಯೊಳು ಅವಕಾಶ ಸಾಲದೆ ಹೋದದರಿಂದ ಅದನ್ನು ಮುಂದಿನವಾರದವರೆಗೆ ನಿಲ್ಲಿಸಿದಬೇಕಾಯಿತು. ಯದ್ಯಪಿ ನಮ್ಮ ಇಬ್ಬರ ಆಕ್ಷೇಪ ಸಮಾಧಾನಗಳಮೇಲೆ ನಿರ್ಣಯಿಸಬೇಕಾದ ಭಾರವನ್ನು ವಹಿಸಲಿಕ್ಕೆ ನಮಗಿಂತಲೂ ಅನೇಕ ಭಾಗದಲ್ಲಿ ಸಮರ್ಥರಾಗಿರುವ ಪಂಡಿತಶ್ರೇಷ್ಠರು ಈ ಮೈಸೂರು ದೇಶದಲ್ಲಿರುವದರಿಂದ ಈ ನಿರ್ಣಯಾಧಿಕಾರವನ್ನು ಅವರಿಗೊಪ್ಪಿಸಿರುವೆವು.—ಎಡಿಟರ್ ಕ ಪ್ರ.

TELEGRAPHIC SUMMARY

ತಂತಿ ವೃತ್ತಾಂತವು.

[illegible]

THE MYSORE GAZETTE.

ಮೈಸೂರು ಗೆಜೆಟ.

[illegible]

BANGALORE:—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XII] BANGALORE—MONDAY, AUGUST 3, 1885. [No. 31.

ಸಂಪುಟ ೧೨.] ಬೆಂಗಳೂರು — ಸನ ೧೮೮೫ನೇ ಇಸವಿ ಅಗಸ್ಟ್ ೩ನೇ ತಾರೀಖ್ ಸೋಮವಾರ. [ಸಂಚಿಕೆ ೩೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ ಮತ್ತು ಕನ್ನಡಸಹಿತ [illegible] ವರುಷ ೧ಕ್ಕೆ		[illegible]
ಇಂಗ್ಲಿಷುಭಾಗ [illegible] ವರುಷ ೧ಕ್ಕೆ		೬—೦—೦
ಕನ್ನಡಭಾಗ [illegible] ವರುಷ[illegible]		೬—೦—೦
ಬೆಂಗಳೂರು	೧ಕ್ಕೆ	೧—೮—೦
ಬ೦ಚಿಕೆ	೧ಕ್ಕೆ	೦—೪—೦
[illegible]	೧ಕ್ಕೆ	೦—೫—[illegible]

[illegible]

[illegible]

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—[illegible]

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

ಪ್ರಕಟನೆ.

[illegible]

ನೋಟೀಸ್.

[illegible]—

[illegible]	
[illegible]	೧—೪—೦
[illegible]	೦—೧೨—೦
[illegible] (ಮತ್ತು[illegible])	೦—೩—೦
[illegible]	೦—೫—೦
[illegible]	೦—೪—[illegible]
[illegible]	[illegible]—೧೪—೦
[illegible]	೦—೭—೦
[illegible]	೦—೨—೦
ವೈದ್ಯಸಾರಸಂಗ್ರಹ	೫—೬—೦
[illegible]	
[illegible]	೦—೭—[illegible]
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—[illegible]
[illegible]	೦—೨—[illegible]
[illegible]	೦—೬—೬
[illegible]	೦—೨—೬
[illegible]	೦—೭—೦
[illegible]	೦—೩—೦
[illegible]	೦—೨—[illegible]
[illegible]	೦—೦—[illegible]
[illegible]	೧—೧—[illegible]
[illegible]	೨—೦—೦
[illegible]	೦—[illegible]
[illegible]	೩—೪—೬
[illegible]	೩—೪—೬
[illegible]	
[illegible]	೦—[illegible]—೦
[illegible]	[illegible]—೦
[illegible]	೦—[illegible]—೦
[illegible]	
[illegible]	೦—೩—೦
[illegible]	[illegible]—೫—೦
[illegible]	೦—೨—೬
[illegible]	೦—೨—೬
[illegible]	೦—೦—[illegible]
[illegible]	೦—೩—೬
[illegible]	[illegible]—೧—೦

[illegible]

NOTICE.

VAIDYASARASANGRAHA

Price including Postage, Rs 5-6-0

[illegible]

[illegible]

[illegible]	ರೂ॥ ೫—೦—೦
[illegible]	೦—೬—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.

ಜನರಲ್ ಕಮ್ಮಿಷನ್ ಮರ್ಚಂಟಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,

ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವಿಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಹೃದ್ಯವಾದದ್ದಾಗಿಯೂ ನವರಸ ಪರಿಪೂರ್ಣ ಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೨೦೦ ಪುಟವುಳ್ಳದ್ದು.

ಕ್ರಯ ೧—೮—೦ ರೂ॥, ಪಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ಲಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಬಹಳ ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗದುಕೊಳ್ಳಬೇಕು.

ಬಿ. ವೆಂಕಟಾಚಾರ್,

ಮುನಸಫ್, ಎಡೆಹಳ್ಳಿ,

ಕಡೂರು ಡಿಸ್ಟ್ರಿಕ್ಟ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY AUGUST 3, 1885.

೧೮೮೫ನೇ ಆಗಸ್ಟ್ ೩ನೇತಾ॥ ಸೋಮವಾರ.

[illegible]

HINDU WIDOW MARRIAGE

ಹಿಂದೂ ಸ್ತ್ರೀಯರ ಪುನರ್ವಿವಾಹ ವಿಷಯದಲ್ಲಿ ಈಚೆಗೆ ಕೆಲವು ಸಂವತ್ಸರಗಳವೊದಲು ಮದರಾಸ್ ಮುಂತಾದ ಅನೇಕ ದೊಡ್ಡ ಪಟ್ಟಣಗಳಲ್ಲಿ, ಯೆರಡು ಪಕ್ಷಗಳೇರ್ಪಟ್ಟು, ಅನೇಕ ಸಂದರ್ಭಗಳೊಳು ಉಭಯ ಪಕ್ಷಿಯವರಿಗೂ ಶಾಸ್ತ್ರಾರ್ಥ ವಿಚಾರ ನಡೆದಿದ್ದಾಗ್ಯೂ ಅದ್ಯಾಪಿ ಅದು ಒಂದು ವ್ಯವಸ್ಥೆಗೆ ಬಾರದೆ ಇರುತಲಿದೆ, ವರುತು ಅಲ್ಲಿಯಲ್ಲಿ ಅಂತಾ ಪುನರ್ವಿವಾಹಗಳು ಸಕೃತಿ ನಡೆಯುತಲೂ ಬರುತಲಿವೆ. ಕನ್ಯಾ ಪುನರ್ವಿವಾಹವಾಗಬಹುದೆಂಬ ಪಕ್ಷಿಗೆ ಮುಖ್ಯ ಪ್ರವರ್ತಕರಾದ ದಿವಾನ ಬಹದೂರ ಮೆ॥ ರಘುನಾಥರಾಯರವರು, ಈ ಪೂರಲ್ಲಿರುವ ದೊಡ್ಡ ಮನುಷ್ಯರಾದ ಕೆಲವರ ಪ್ರಾರ್ಥನೆಯಮೇಲೆ ಕಳೆದ ತಿಂಗಳ ೨೮ನೇ ತಾರೀಖಿನಲ್ಲಿ ಇಲ್ಲಿಗೆ ದಯಮಾಡಿ, ೨೫ನೇ ತಾರೀಖಿನಲ್ಲಿ ಸದರೀ ವಿಷಯವನ್ನು ಕುರಿತು ಶಾಸ್ತ್ರವಿಚಾರಮಾಡುವದಕ್ಕಾಗಿ ಒಂದು ಸಭೆಮಾಡಬೇಕೆಂದು ನಿರ್ಣಯಿಸಿರುವಂತೆ ನಮೂದಿಸಿ ಇಲ್ಲಿ ಅಧಿಕಾರ ಪದದೊಳಿರುವ ದೊಡ್ಡಮನುಷ್ಯರಿಗೂ ಬ್ರಾಹ್ಮಣರಲ್ಲಿ ಪ್ರಸಿದ್ಧರಾಗಿರುವ ಪಂಡಿತರುಗಳಿಗೂ ಆಹ್ವಾನಪತ್ರಿಕೆಗಳಂ ಕಳುಹಿಸಿದರು. ೨೬ನೇ ತಾರೀಖಿನ ಸಾಯಂಕಾಲ ೪ ಘಂಟೆಗೆ ಸರಿಯಾಗಿ ಮೆ॥ ರಘುನಾಥರಾಯರವರು ಇಳಿದಿದ್ದ ಮೆ॥ ಬಿ. ಕೃಷ್ಣಯ್ಯಂಗಾರ್ರವರ ನೂತನ ಗೃಹದಲ್ಲಿ ಸಭೆಸೇರಿತು. ಅದಕ್ಕೆ ವೈದಿಕರಲ್ಲಿ ಬ್ರಹ್ಮಶ್ರೀ ಮೈಸೂರು ಗೋಪಾಲಶಾಸ್ತ್ರಿಗಳವರೂ, ಬ್ರಹ್ಮಶ್ರೀ ಹೊಸಕೋಟೆ ವೆಂಕಟ್ರಾಮ ಶಾಸ್ತ್ರಿಗಳವರೂ, ಲೌಕಿಕರಲ್ಲಿ ಈ ಸಂಸ್ಥಾನದ ಸೆಕ್ರೆಟರಿಗಳಾದ ಮೆ॥ ವೆಂಕಟವರದಯ್ಯಂಗಾರ್ರವರು, ಮೆ॥ ಮಾಧವರಾಯರವರು, ಯೆಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಸುಬ್ಬರಾಯರು, ಅಸಿಸ್ಟೆಂಟ್ ಇಂಜನಿಯರ್‌ಗಳಾದ ಮೆ॥ ನಟೇಶ ಶಾಸ್ತ್ರಿಗಳವರು, ಆನಂದತೀರ್ಥರಾಯರವರು, ಬಾಲಕೃಷ್ಣತಿವಾರಿಯವರು, ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಬಿ. ಜಿ. ಕೃಷ್ಣಯ್ಯಂಗಾರ್ರವರು, ಮುನಸಫ್ ಮೆ॥ ಅಣ್ಣಾಜಿರಾಯರವರು, ಮೆ॥ಅಡ್ವೊಕೇಟ್ ರಂಗಾಚಾರ್ಯುಮೊದಲಾದ ಅನೇಕಜನ ದೊಡ್ಡಮನುಷ್ಯರು ಬಂದಿದ್ದರು. ಇಂತಾ ಸಭಾಮಧ್ಯೆ ದಿವಾನ ಬಹದೂರವರು ಪಂಡಿತರನ್ನುದ್ದೇಶಿಸಿ, ಸ್ತ್ರೀ ಪುನರ್ವಿವಾಹ ವಿಷಯದಲ್ಲಿ ತಾವು ಛಾಪಿಸಿರುವ ಗ್ರಂಥವನ್ನು ನೋಡೋಣವಾಯಿತೆ, ಅದರಲ್ಲಿ ಆಕ್ಷೇಪಣೆಗೆ ಅವಕಾಶವೇನಾದರು ಉಂಟೆಯೆಂದು ಪ್ರಶ್ನೆಮಾಡಲು, ಗೋಪಾಲಶಾಸ್ತ್ರಿಗಳು ತಾವು ಸದರೀ ಗ್ರಂಥವನ್ನು ನೋಡಲಿಲ್ಲವೆಂತಲೂ, ಮೇಲಿನ ವಿವಾಹವು ಕೇವಲ ಅಶಾಸ್ತ್ರೀಯವಾದ ಕೃತ್ಯವೆಂತಲೂ, ಅದನ್ನು ತಾವು ಶಾಸ್ತ್ರಾಧಾರಪೂರ್ವಕ ಖಂಡಿಸುವದಾಗಿಯೂ ಹೇಳಿದರು. ರಾಯರವರು ತಮ್ಮಲ್ಲಿದ್ದ ಸದರೀ ಗ್ರಂಥದ ಒಂದು ಪ್ರತಿಯನ್ನು ಶಾಸ್ತ್ರಿಗಳವರಿಗೆ ಕೊಟ್ಟು, ಶ್ರುತಿ, ಸೂತ್ರ, ಸ್ಮೃತಿ ಇತಿಹಾಸ, ಪುರಾಣ, ಆಚಾರ, ಇವು ಪ್ರಮಾಣಗಳಾಗಿ ಅಂಗೀಕಾರಾರ್ಹವಾದವುಗಳೆ, ಪರುತು ಪ್ರಬಲಪ್ರಮಾಣಕ್ಕೆ, ಅಂದರೆ ಶ್ರುತಿಗೆ ವಿರೋಧವಾಗಿ ಸೂತ್ರ ಮೊದಲಾದ ಇತರ ಪ್ರಮಾಣ ಗ್ರಂಥಗಳಲ್ಲಿ ಹೇಳಲ್ಪಡುವ ಅರ್ಥವು ಅಂಗೀಕಾರಾರ್ಹವಲ್ಲವು, ಯೆಂದು ತಿಳಿಸಿ, ಅದಕ್ಕೆ ಉದಾಹರಣ ರೂಪವಾಗಿ, ಹೈಕೋರ್ಟಿನವರ ತೀರ್ಮಾನವು ಅನುಚಿತವಾದದೆಂದು ನಿರೂಪಿಸುವದಕ್ಕೆ ಒಂದು

ಮುನಸಫ್ ಕೋರ್ಟು ಫೈಸಲನ್ನು ಉದಹರಿಸಿ ದಂತೆ ಆಗುವದು, ಆದದರಿಂದ ಯೆಲ್ಲರೂ ಪ್ರಮಾಣಗ್ರಂಥಗಳಗೌರವಾನುಗುಣವಾಗಿ, ಅವನ್ನಂಗೀಕರಿಸಬೇಕಾದ ವಿಷಯದಲ್ಲಿ ಯೆಲ್ಲರೂ ಬದ್ಧರಾಗಿ ಶಾಸ್ತ್ರವಿಚಾರ ಮಾಡಬೇಕೆಂದು ತಿಳಿಸಿದ್ದಕ್ಕೆ ಪ್ರತಿ ಕಕ್ಷಿಯವರು ಒಡಂಬಟ್ಟರು. ತರುವಾಯ ಹಿಂದೂ ಸ್ತ್ರೀ ಪುನರ್ವಿವಾಹ ಸಿದ್ಧಾಂತ ಸಭೆಯೆಂಬ ಹೆಸರಿನಿಂದ ಈ ಪುರದಲ್ಲಿ ಒಂದು ಸಭೆ ಯೇರ್ಪಾಟಾಗಿ, ಅದಕ್ಕೆ ಈಪೇಟೆ ಮತ್ತು ಲಷ್ಕರಿನಲ್ಲಿರತಕ್ಕ ಬ್ರಾಹ್ಮಣ ವೈಶ್ಯರಲ್ಲಿ ಪ್ರಮುಖಸ್ಥರೂ ಸೇರಿ ಮುನ್ನೂರು ನೂರು ಮಂದಿಯವರಿವಿಗೆ ಮೆಂಬರಗಳಾಗಿ ಕೈಬರಹಕೊಟ್ಟರು. ಈ ಪಟ್ಟಿಯಲ್ಲಿ, ಎಸ್. ವೆಂಕಟವರದಯ್ಯಂಗಾರ್‍ರವರು, ವಿ. ಪಿ. ಮಾಧವರಾಯರವರು, ಇಂಜನಿಯರ್ ಸುಬ್ಬರಾಯರವರು, ಆನಂದತೀರ್ಥರಾಯರವರು, ಬಾಲಕೃಷ್ಣ ತಿವಾರಿಯವರು, ಬಿ. ಜಿ. ಕೃಷ್ಣಯ್ಯಂಗಾರ್‍ರವರು, ಮುನಸಫ್ ಅಣ್ಣಾಜಿರಾಯರವರು, ಅಡ್ವೋಕೇಟ್ ಶಿಂಗ್ರಾಚಾರ್ಯರವರು, ಮುಜರಾಬಾದ್ ಅಮಲ್ದಾರರು ನರಸಿಂಹಯ್ಯಂಗಾರ್‍ರವರು ಮೊದಲಾದವರ ಹೆಸರುಗಳು ಸದರೀ ಸಭೆಗೆ ಮೆಂಬರ್‌ಗಳಾಗಿ ದಾಖಲಾಗಿರುತವೆ. ಈರೀತಿ ಏರ್ಪಾಡುಗಳಾದಮೇಲೆ ರಾತ್ರಿ ೯ ಘಂಟೆಗೆ ಸಭೆ ಬರಖಾಸ್ತಾಯಿತು.

೨೭ನೇ ತಾರೀಖ್ ಸಾಯಂಕಾಲ ಮರಳಿ ಸಭೆ ಸೇರಿ ಅದಕ್ಕೆ ಹಿಂದಿನ ದಿವಸದಲ್ಲಿ ಬಂದಿದ್ದ ಲೌಕಿಕರಷ್ಟೆ ಪ್ರಾಯಶಃ ಯೆಲ್ಲರೂ ಬಂದಿದ್ದರಲ್ಲದೆ ಇನ್ನು ಕೆಲವರು ಸಹ ಬಂದಿದ್ದರು. ಮೈಸೂರು ಗೋಪಾಲ ಶಾಸ್ತ್ರಿಗಳವರು, ವಾಸುದೇವ ಶಾಸ್ತ್ರಿಗಳು, ಮುತ್ತ್ಯಾ ಗೋವಿಂದಾಚಾರ್ಯರು, ಮೊದಲಾದ ಪಂಡಿತರುಗಳೊಡನೆ ಬಂದು ಸೇರಿದರು. ಕೂಡಲೇ ಶಾಸ್ತ್ರವಿಚಾರಕ್ಕೆ ಪ್ರಾರಂಭವಾಗಿ, ಗೋಪಾಲಶಾಸ್ತ್ರಿಗಳವರು ತಿಳಿಸಿದ್ದೇನಂದರೆ—ಒಬ್ಬ ಪುರುಷನಿಗೆ ಇಬ್ಬರು ಪತ್ನಿಯರು ಆಗಬಹುದು, ಒಬ್ಬ ಸ್ತ್ರೀಗೆ ಇಬ್ಬರು ಪತಿಗಳಾಗಕೂಡದು, ಎಂಬದಕ್ಕೆ

"ಶ್ರು॥ [illegible] । [illegible] ॥"

ಎಂಬ ಶ್ರುತ್ಯರ್ಥವನ್ನು ಕನ್ನಡದಲ್ಲಿ ಹೇಳಿದರು. ಇದು ಯಜ್ಞವಿಷಯಕವಾಗಿ ಪ್ರವರ್ತಿಸಿದ ಪ್ರಮಾಣವು, ಮತ್ತು ಇದಕ್ಕೆ ಏಕಕಾಲದಲ್ಲಿ ಆಗಕೂಡದೆಂದರ್ಥವೇಹೊರತು ಭಿನ್ನಕಾಲದಲ್ಲಿ ಸಹ ಆಗಬಾರದೆಂಬ ಅರ್ಥದ್ಯೋತಕವಾಗುವದಿಲ್ಲವೆಂದು ರಾಯರವರು, ಋುಗ್ವೇದ, ಐತಿರೀಯಬ್ರಾಹ್ಮಣ, ೩ನೇ ಪಂಚಿಕ, ೨೨ನೇ ಖಂಡದಲ್ಲಿನ,

"ಶ್ರು॥ [illegible] । [illegible] ॥"

ಎಂಬ ಶ್ರುತಿಗೆ ನೀಲಕಂಠರವ್ಯಾಖ್ಯಾನವನ್ನು ತೋರಿಸಿದರು.

ಪುನಃ ೨೮ನೇ ತಾರೀಖ್ ಸಾಯಂಕಾಲ ೫ ಘಂಟೆಗೆ ಸಭೆ ಸೇರಿದರು. ಆದರೆ ವೈದಿಕಪಂಡಿತರು ಸ್ವಲ್ಪ ಕಾಲಾತೀತವಾಗಿ ಬಂದದರಿಂದ ಸಭಿಕರ ಸಂತೋಷಾರ್ಥ ದಿವಾನ್ ಬಹದೂರವರು ಬೇರೇ ವಿಷಯವನ್ನು ಕುರಿತು ಉಪನ್ಯಾಸಮಾಡತೊಡಗಿ ನಡೆಸುತಲಿರಲು ಗೋಪಾಲಶಾಸ್ತ್ರಿಗಳು ಮೊದಲಾದ ಆರೇಳುಮಂದಿ ವಿದ್ವಾಂಸರು ಬಂದು, ಹಿಂದಿನ ದಿವಸದಲ್ಲಿ ಪ್ರತಿಜ್ಞೆ ಮಾಡಿಹೋದಂತೆ ಪ್ರಸಕ್ತ ವಿಷಯವಂಕುರಿತು ವಿಚಾರಮಾಡುವದಕ್ಕೆ ತಾವು ಸನ್ನದ್ಧರಾಗಿರುವಂತೆ ತಿಳಿಸಲು ರಾಯರವರು ತಮ್ಮ ಉಪನ್ಯಾಸವಂ ನಿಲ್ಲಿಸಿ, ಸದರೀ ಪಂಡಿತರನ್ನುದ್ದೇಶಿಸಿ, ಕಳೆದ ಯೆರಡುದಿನಗಳಕಾಲ ನಡೆದ ವಿಚಾರದಿಂದ ಸ್ತ್ರೀಪುನರ್ವಿವಾಹವು ವಿಧಿಚೋದಿತವೆಂದು ಮನಃಪೂರ್ವಕವಾಗಿ ಒಪ್ಪಿಕೊಳ್ಳಬೇಕಾಯಿತೋ ಯೆಂದು ಪ್ರಶ್ನೆಮಾಡಲಾಗಿ, ಅಂತಾ ವಿವಾಹವು ಶಾಸ್ತ್ರಸಮ್ಮತವೆ, ಪರಂತು ಆ ವಿಷಯದಲ್ಲಿ ಪ್ರವರ್ತಿಸಿರುವ ಪ್ರಮಾಣವಚನಗಳು ಈಕಲಿಯುಗಕ್ಕೆ ಅನ್ವಯಿಸುವದಿಲ್ಲವು, ಮತ್ತು ಅದಕ್ಕೆ ನಿಷೇಧವಚನಗಳು ಬಹುವಾಗಿರುತಿವೆ ಯೆಂದು ಹೇಳಿ ಕೆಲವು ಗ್ರಂಥಗಳನ್ನು ತೋರಿಸಿದರು. ಅವು ಯಾವವೆಂದರೆ, "ಯಾವ ಉದ್ದೇಶದೊಡನೆ, ಯೆಂತಾವರಿಂದ ಹೇಳಲ್ಪಟ್ಟವು, ಅವುಗಳ ಅರ್ಥವೇನು, ಎಂಬ ಅಂಶವನ್ನು ಕುರಿತು ಬಹುದೂರ ಚರ್ಚೆ ನಡೆದು ಕಡೆಗೆ ಪಂಡಿತರುಗಳು ಮಾಧವಾಚಾರ್ಯರವರ ವಚನವನ್ನು ಪ್ರಬಲ ಪ್ರಮಾಣವಾಗಿ ಒತ್ತಿ ಹೇಳಿದರು. ಅದಕ್ಕೆ ರಾಯರವರು, ಮಾಧವಾಚಾರ್ಯರು ಹಾಗೆಹೇಳಿರುವದು ಸ್ಮೃತ್ಯರ್ಥವಲ್ಲವು, ಅದು ಅವರ ಸ್ವಾಭಿಪ್ರಾಯವು, ಆದದರಿಂದ ಅದನ್ನಂಗೀಕರಿಸುವದಿಲ್ಲವೆಂದು ಹೇಳಿದರು. ಸ್ಮೃತ್ಯರ್ಥಕ್ಕೆ ವಿರೋಧವಾಗಿ ಕೊಡಲ್ಪಟ್ಟ ಸ್ವಾಭಿಪ್ರಾಯವು ಮೊದಲುಮಾಡಿಕೊಂಡ ನಿಬಂಧನೆಗಳಿಗೆ ವ್ಯತಿರಿಕ್ತವಾಗಿರುವದರಿಂದ ಅದು ಅಂಗೀಕಾರಾರ್ಹವಲ್ಲವೆಂದು ಸಭಿಕರು ನಿರ್ಣಯಿಸಿದರು. ರಾಯರವರು, ರಾಜತರಂಗಿಣಿ ಯೆಂಬ ಗ್ರಂಥದ ಆಧಾರದಮೇಲೆ ಈ ಕಲಿಯುಗದಲ್ಲಿ ಸಹ ಸ್ತ್ರೀ ಪುನರ್ವಿವಾಹ ನಡೆಯುತದೆ ಯೆಂದು ತಿಳಿಸಿ ಅದಕ್ಕೆ ನಿದರ್ಶನರೂಪವಾಗಿ, ದಕ್ಕರಾಯರ ಅನುವಾದದ ಅರ್ಜುನನು ಉಲೂಪಿ ಯೆಂಬುವಳನ್ನು ವಿವಾಹಮಾಡಿಕೊಂಡನೆಂದು ಭಾರತದಲ್ಲಿನ ಸದರೀ ಪ್ರಕರಣವನ್ನು ತೋರಿಸಿದರು. ಅದಕ್ಕೆ ಪಂಡಿತರು— ಅದು ಶಾಸ್ತ್ರಸಮ್ಮತವಾದ ವಿವಾಹವಲ್ಲವೆಂತಲೂ, ಪರಂತು ವ್ಯಭಿಚಾರದಲ್ಲಿ ಸೇರಿದ್ದೆಂತಲೂ ಹೇಳಿದರು. ಅದಕ್ಕೆ ರಾಯರು—ಅದು ಶಾಸ್ತ್ರಸಮ್ಮತವಾದ ವಿವಾಹವೆಂಬದರಲ್ಲಿ ಯೆಷ್ಟುಮಾತ್ರವು ಸಂದೇಹವಿಲ್ಲವು. ಅದು ಕ್ರಮವಾದ ವಿವಾಹವೆಂದು ಹೇಳುವದಕ್ಕೆ ಸದರೀ ಪ್ರಕರಣದಲ್ಲಿ ರಕ್ಷ ಶಬ್ದವಿಲ್ಲದೆ ಹೋದಾಗ್ಯೂ ಸದರೀಯವಳಿಗೆ ಹುಟ್ಟಿದ ಪುತ್ರನು ಔರಸನೆಂಬದಾಗಿ ವೇದವ್ಯಾಸರವರು ಹೇಳಿರುವದರಿಂದಲೂ, ಔರಸಪುತ್ರನೆಂದರೆ ಅಗ್ನಿಸಾಕ್ಷಿಯಾಗಿ ವಿವಾಹಮಾಡಿಕೊಂಡ ಭಾರ್ಯೆಗೆಹುಟ್ಟಿದ ಪುತ್ರನೆಂದು ಧರ್ಮಶಾಸ್ತ್ರದಲ್ಲಿ ಘಂಟಾಘೋಷವಾಗಿ ಹೇಳಲ್ಪಟ್ಟಿರುವದರಿಂದಲೂ, ಅಂತಾ ಪುತ್ರನು ಪಡೆದ ತಾಯಿಯು ಅರ್ಜುನನಿಂದ ಕ್ರಮವಾಗಿ ವಿವಾಹ ಮಾಡಿಕೊಳ್ಳಲ್ಪಟ್ಟವಳೆಂದು ಸ್ಪಷ್ಟವಾಗುತದೆಂದು ಹೇಳಿದರು. ಅಲ್ಲಿಗೆ ಉಭಯಕಕ್ಷಿಯವರ ವಾದವೂ ಪರಿಸಮಾಪ್ತಿಯನ್ನೈದಿತು. ಸಭಿಕರೆಲ್ಲರೂ ಕೋಲಾಹಲದ್ವನಿಯೊಡನೆ ಹೊರಟುಹೋದರು.

ಈ ಸಂದರ್ಭದಲ್ಲಿ, ಉಭಯಕಕ್ಷಿಯವರೂ ತಮ್ಮತವನ್ನು ವಾದಕ್ಕೆ ಆಧಾರವಾಗಿ ಅನೇಕ ಪ್ರಮಾಣ ವಚನಗಳನ್ನು ಹೇಳಿದರು. ಪರಂತು ಅವುಗಳನ್ನೆಲ್ಲ ಇದರಲ್ಲಿ ಉದಹರಿಸಿದರೆ ಗ್ರಂಥಬಾಹುಳ್ಯವಾಗುವದಾಗಿಯೂ, ಸಾಮಾನ್ಯಜನಗಳಿಗೆ ಅರ್ಥವಾಗಲಾರದಾಗಿಯೂ, ಸದರೀ ಸಭೆಯಲ್ಲಿ ನಡೆದ ಶಾಸ್ತ್ರವಿಚಾರದ ಸಾರಾಂಶವನ್ನು ಮಾತ್ರ ಯಥಾವಸ್ಥಿತವಾಗಿ ತಿಳಿಸಿರುತ್ತೇವೆ.

೨೯ನೇ ತಾರೀಖಿನ ರಾತ್ರಿ ದಿವಾನ್‌ಬಹದೂರವರು, ಬ್ರಹ್ಮವಿಚಾರವಂ ಕುರಿತು ಬಹಳಹೊತ್ತು ಉಪನ್ಯಾಸಮಾಡಿ, ಕಡೆಗೆ ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿರುವ ಅರ್ಥವನ್ನು ತಿಳಿದು ಅದರಂತೆ ವರ್ತಿಸುವದು ಶ್ರೇಯಸ್ಕರವೆಂದು ಹೇಳಿ ತಮ್ಮ ಉಪನ್ಯಾಸವಂ ಮುಕ್ತಾಯ ಮಾಡಿದರು ಈ ವಿಚಾರಕ್ಕಾಗಿ ಒಂದು ಸಮಾಜವು ಸಹ ಯೇರ್ಪಾಟ್ಟು ಅದಕ್ಕೆ ಬಹುಮಂದಿ ದೊಡ್ಡಮನುಷ್ಯರು ಮೆಂಬರ್‌ಗಳಾದರು. ೩೦ನೇ ತಾರೀಖಿನ ಪ್ರಾತಃಕಾಲ ದಿವಾನ್‌ಬಹದೂರವರು ರಾಜಾಸರ್. ಟಿ. ಮಾಧವರಾಯರವರೊಡನೆ ಮದರಾಸಿಗೆವಾಪಸ್ ಹೊರಟುಹೋದರು.

ಈ ದೊಡ್ಡಮನುಷ್ಯರು ಮುಂದೆ ಆಗಿಂದಾಗ್ಯೆ ಇಲ್ಲಿಗೆ ಬಂದು ಇಲ್ಲಿನ ಸಂಘದ ಆವಳತವನ್ನು ವಿಚಾರಿಸಿಕೊಂಡು ಹೋಗಬೇಕೆಂದು ಇಲ್ಲಿನ ದೊಡ್ಡಮನುಷ್ಯರನೇಕರು ಪ್ರಾರ್ಥಿಸಿರುವಾತೆ ಕೇಳುತ್ತೇವೆ.

INTERPRETATION

ಗತವಾರದಲ್ಲಿ ನಡೆದ ಪುನರ್ವಿವಾಹ ವಿಷಯಕವಾದ ಸಭೆಯಲ್ಲಿ ಇಲ್ಲಿನ ಪಂಡಿತರು ಮಾಡಿದ ವಾಕ್ಯಾರ್ಥಗಳಿಂದ ಒಂದುಕಪ್ಪಕ್ಕೆ ನಾವು ಇದುವರಿವಿಗೆ ತಿಳಿದಿದ್ದ ಅರ್ಥವು ತಪ್ಪಾದ್ದೆಂದು ಏರ್ಪಟ್ಟದಕ್ಕೋಸ್ಕರ ಎಷ್ಟು ಸಂತೋಷಿಸಿದರೂ ಸಾಲದ್ದಾಗಿದೆ. ಅಲಂಕಾರ ಶಾಸ್ತ್ರರೀತ್ಯಾ ಸ್ವೀಯಾ, ಪರಕೀಯಾ ಸಾಮಾನ್ಯಾಯೆಂಬ ತ್ರಿವಿಧ ನಾಯಕಿಯರಿಗೂ ಅವರ ಪುತ್ರರಿಗೂ ಬಹಳ ತಾರತಮ್ಯವನ್ನು ಪರಿಗಣಿಸಿದ್ದರು. ಇಲ್ಲಿನ ಪಂಡಿತರ ತಾತ್ಪರ್ಯಾನುಗುಣವಾಗಿ ಅಂತಾ ಭೇದವೊಂದೂ ಯಿಲ್ಲವೆಂದು ಯೆಣಿಸಬೇಕಾಗಿದೆ. ಔರಸನೆಂಬ ಶಬ್ದವು [illegible] ಪ್ರಕಾರ ವಿವಾಹವಾದ ಪತ್ನಿಗೆ ಜನಿಸತಕ್ಕವನಿಗೆಮಾತ್ರ ಅನ್ವಯಿಸುವದೇಹೊರತು ಇತರರಿಗೆ ಅನ್ವಯಿಸುವದಿಲ್ಲವು. [illegible] ಇತರರೂ [illegible] ಪುತ್ರರೆಂದು ಕರೆಯಲ್ಪಟ್ಟಿರು [illegible]

[illegible]

ಇವರದಿ ಕುರಿತ ಲೇಖನವನ್ನು ನಮ್ಮ ಸ್ನೇಹಿತರೊಳೊಬ್ಬರು ಪ್ರಕಟನೆಯಬಗ್ಯೆ ನಮ್ಮಬಳಿಗೆ ಕಳುಹಿಸಿದರಾಗಿ ಅದಕ್ಕೆ ಸ್ವಲ್ಪ ಅವಕಾಶ ಕೊಡುವೆವು—

"ಆಸೇತುಹಿಮಾಚಲಪರ್ಯಂತವ್ಯಾಪಿಸಿರತಕ್ಕ ಈ ಇಂಡ್ಯದೇಶದಲ್ಲಿ ಅನೇಕ ಕೋಟಿ ಪ್ರಜೆಗಳು ವಾಸವಾಗಿರುತ್ತಾರೆ. ಇಲ್ಲಿನ ವಾಸದ ದೆಸೆಯಿಂದ ಅವರಿಗೆಲ್ಲ ಹಿಂದೂಗಳೆಂಬ ಸಂಜ್ಞೆಯುಂಟಾಗಿರುತಿದೆ. ಆದರೆ ಈ ವ್ಯವಹಾರವು ಇತರಗಳಿಂದ ದೇಶಕ್ಕೆ ಪ್ರಾಯವೊ ದೇಶದಿಂದ ಪ್ರಜೆಗಳಿಗೆ ಪ್ರಾಯವೋ ಯೆಂದು ಯೋಚಿಸಿದರೆ ದೇಶದಿಂದಲೇ ಪ್ರಜೆಗಳಿಗೆ ಪ್ರಾಪ್ತವಾದಂತೆ ತೋರುತಿದೆ. ಆದರೆ ಹಿಂದೂಗಳ ಪುರಾಣಾದಿಚರಿತ್ರೆಗ್ರಂಥಗಳಲ್ಲಿ ಈ ದ್ವೀಪಕ್ಕೆ ಜಂಬೂದ್ವೀಪವೆಂಬದಾಗಿಯೂ, ಈ ಖಂಡಕ್ಕೆ ಭರತಖಂಡವೆಂಬದಾಗಿಯೂ ಹೆಸರುಂಟಾಗಿದ್ದಂತೆ ತಿಳಿಸಲ್ಪಟ್ಟಿದೆ. ಈಗ ಫಾರೆಸೀಕರಿಂದ ಆಕ್ರಮಿಸಲ್ಪಟ್ಟ ಅವರು ಇರಾನ್‌ಯೆಂದು ಕರೆಯುತಲಿರುವ [illegible] ವಾಸಮಾಡುತಲಿದ್ದವರೆಲ್ಲರೂ ಅಲ್ಲಿನ ವಾಸವಂ ತ್ಯಜಿಸಿ, ಹಿಮವತ್ಪರ್ವತಕ್ಕೂ ವಿಂಧ್ಯಪರ್ವತಕ್ಕೂ ಮಧ್ಯೆಯಿರುವ ಪ್ರದೇಶದೊಳು ಮೊದಲು ಬಂದು ಸೇರಿದ್ದರಿಂದ ಅದಕ್ಕೆ ಸಹ ಆರ್ಯಾವರ್ತವೆಂಬ ಹೆಸರುಂಟಾಯಿತು. ಇವರಿಗೆ ಇಲ್ಲಿನ ವಾಸ ಏರ್ಪಟ್ಟಿರುವ [illegible] ಹೆಸರೇ ಶಾಶ್ವತವಾಗಿ ನೆಲಗೊಂಡಿತು. ಪರಂತು ಈ ಆರ್ಯರಿಂದ ಇತರ ಸಮಾಪ್ತಿಗೆ ಯಾವಯಾವ ಜಾತಿಯವರು ಸೇರಿರುತ್ತಾರೆಯೋ, ಮೊದಲು ಉತ್ತರದೇಶದ ಇಲ್ಲಿಗೆ ಯಾವಯಾವ ಜಾತಿಯವರು ಬಂದರೆಂಬ ಅಂಶ ಸಂದಿಗ್ಧವಾಗಿದೆ. ಯದ್ಯಪಿ ಈ ವಿಚಾರ ಹಾಗಿರಲಿ, ಈಗ ಹಿಂದೂಗಳೆನಿಸಿಕೊಳ್ಳುವವರಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣಗಳೂ, ಅವುಗಳಲ್ಲಿ [illegible] ಅನೇಕ ಭೇದಗಳೂ, ಈ ಇಂಡ್ಯದೇಶದೊಳಗೆ [illegible] ಇದಲ್ಲದೆ ಜನಗಳಿಗೆ ನಾನಾವಿಧ ಜಾತಿಗಳು [illegible] ಆಚಾರ [illegible] 'ತಸ್ಯವೃ [illegible] ಅವರ ಪೇಷ [illegible] ಗಾಗಿರುತಿವೆ—

ಈ ಪ್ರಪಂಚ [illegible] ಕರ್ತನಾಗಿಯೂ [illegible] ನಾಗಿಯೂ, ಅದ್ವಿತೀಯನಾಗಿಯೂ, [illegible] ಇಷ್ಟುವಿಧ [illegible] ಕಾರಣ [illegible] ಅಸಾಧ್ಯವಾಗಿದೆ. [illegible] ಏಕರೂಪವಾಗಿದ್ದರೆ [illegible] ಪ್ರಬಂಧಗಳು [illegible] ಬ್ರಾಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ [illegible] ಅವರವರ ವೃತ್ತಿಯೇ [illegible] ಅಥವಾ ಜನ್ಮದಿಂದ [illegible] ಸದರೀ ವಿಷಯ ಅಧ್ಯಾಯ [illegible] ವಾಗಿರುತಿದೆ. ನಮ್ಮ ಪ್ರಸಕ್ತ [illegible] ಅನುಕೂಲವಾದದ್ದಾಗಿರುತಿದೆ. [illegible] ಜಾತಿತ್ವಕ್ಕೆ ಯೆಲ್ಲರೂ ಸಮಾನ [illegible] ಅದರಲ್ಲಿ ನ್ಯೂನಾಧಿಕ್ಯಗಳೇನೂ ಇರುವದಿಲ್ಲವು. ಅಂದರೆ ಬ್ರಾಹ್ಮಣ್ಯವೆಂಬ [illegible] ಸೇರಿದ [illegible] ಕ್ಷತ್ರಿಯ ವೈಶ್ಯ ಶೂದ್ರರ [illegible] ದ್ದಾಗಿರುತಿದೆ. ಒಂದು ಬ್ರಾಹ್ಮಣ್ಯವೊಳು ಅನೇಕ ಮತಗಳೂ ಆಚಾರಗಳೂ ತುಂಬಿರುವದಕ್ಕೆ ಆಯಾ ಮತ ಪ್ರವರ್ತಕರು [illegible] ಭೇದಗಳಲ್ಲಿ ಪಡೆದಿರುವ ತಾತ್ಪರ್ಯವು ಕಾರಣವೆಂದು ವ್ಯಕ್ತವಾಗುತಿದೆ. ಇಂತಾ ತಾತ್ಪರ್ಯಭೇದ ವುಳ್ಳವರೂ ಪರಸ್ಪರ ಸ್ನೇಹಸಂಬಂಧಗಳನ್ನ ಮಾಡಕೂಡದೆಂಬ ನಿಯಮವು [illegible] ಉಪಯೋಗವಾದ್ದೆಂತಲೂ ನಮಗೆ ತಿಳಿದಮಟ್ಟಿಗೆ ಯಾವ ದಾಖಲೆಗಳಿಂದಲೂ ವ್ಯಕ್ತವಾಗುವದಿಲ್ಲವು. ಇದನ್ನೆಲ್ಲ ಪರ್ಯಾಲೋಚಿಸಿ ನೋಡಲಾಗಿ ಬರುತಬರುತ ಜನಗಳಿಗೆ ಮತ [illegible] ರಾಗದ್ವೇಷಗಳು ಹೆಚ್ಚಿ ತಮ್ಮಂತೆ [illegible] ಕಲ್ಪಿಸಿಕೊಳ್ಳಲ್ಪಟ್ಟ ಒಂದು ಕಟ್ಟುಪಾಡುಗಳೆಂದು ತೋರುತಿದೆ. ಅನಾವಶ್ಯಕಗಳಾಗಿಯೂ, ನಿರಾಧಾರಗಳಾಗಿಯೂ ಇರುವ ಕಟ್ಟುಪಾಡುಗಳಿಂದ ಆಯಾ ಸಮಾಜದವರು ಅನುಭವಿಸುತಲಿರುವ ಸಂಕಟಗಳು ಹೇಳಲಶಕ್ಯವಾಗಿವೆ. ಈಗ ನಮ್ಮ ವಿವಾಹಕ್ರಮದಲ್ಲಿ ಸ್ವಲ್ಪಮಟ್ಟಿಗೆ ವೈಲಕ್ಷಣ್ಯವನ್ನುಂಟುಮಾ

ಹಡೆಕೆಂದು ಗೌರವನ್ವಿತರಾದ ದೂತ್ವಮನುಷ್ಯರ ನೇಕರು ವ್ಯಥೆಯುಳ್ಳ ವುಳ್ಳವರಾಗಿ ಶ್ರಮಿಸಿದು ವರಿದಾರೆ. ಇವರು ತಮ್ಮ ಪ್ರಯತ್ನ ಸಾಫಲ್ಯದೊಳು ದೃಷ್ಟಿಯುಳ್ಳವರಾಗಿದಾರೆಯೇಹೊರ್ತು ಇದನ್ನುತೇ ಜನಗಳಿಗೆ ಪ್ರಯಾಗಿರುವ ಅನುದರ್ಗಗಳನ್ನು ಅವರು ಪರಿಭಾವಿಸಿದುತೆ ಸ್ಪಷ್ಟವಾಗುವದಿಲ್ಲವು. ಈಗ ಸರ್ವದೇಶ ಸರ್ವಾವಸ್ಥೆಯೊಳಗೂ ವೃದ್ಧಬಾಲನೆಂಬ ಮತ್ತು ಪಂಡಿತಾಪಂಡಿತನೆಂಬ ತಾರತಮ್ಯವಿಲ್ಲದೆ ವಿಶುದೂ ವಿವಾಹನೆಂಬವೊಂದು ಪ್ರಜೆಗಳ ವಿಚಾರಕ್ಕೆ ವಿಷಯವಾಗಿದೆ. ಇದಕ್ಕೆ ಬಾಲ್ಯವಿವಾಹವನ್ನೂ ಬಹು ಭಾರ್ಯಾ ಪರಿಗ್ರಹವನ್ನೂ ಕಾರಣತ್ವೇನ ಎಲ್ಲರೂ ಉದಹರಿಸುತ್ತಾರೆ.

ಇವುಗಳಿಗೆ ಕಾರಣವನ್ನು ಅವರ ಬುದ್ಧಿ ಸ್ವಲ್ಪವೂ ಊಹಿಸಲೊಲ್ಲದು ಜನಗಳು ಮೇಲೆಕಂಡ ಯೆರಡುಸಂಗಳಿಗೂ ಕಾರಣವನ್ನೂಹಿಸುವೇಕಾದರೆ ರುದ್ರಪಾಯಿಗಳ ಅರ್ಥಾಂತರತ್ವವನ್ನೇ ಪ್ರಾಧಾನ್ಯೇನ ನಮೂದಿಸುತ್ತಾರೆ. ಇದು ಕೆಲವು ಮಟ್ಟಿಗೆ ನಿಜವಾದದ್ದಾದರೂ ಏತದಪೇಕ್ಷಯಾ ಪ್ರಬಲವಾದ ಕಾರಣಗಳು ಕೆಲವು ಅನಿವಾರ್ಯಗಳಾಗಿ ಏರ್ಪಟ್ಟಿರುವದರಿಂದ ಅವುಗಳಿಗೆ ವಿಶುದೂವಿವಾಹಕ್ಕಿಂತಲೂ ಮುಂಚಿತವಾಗಿ ಗತಿಕಲ್ಪಿಸಬೇಕಾಗಿದೆ ಇದಕ್ಕೆ ಮಾರ್ಗವ ನ್ನುಂಟುಮಾಡದೆ ಪುನರ್ವಿವಾಹಕ್ಕಾಗಿ ಯೆಷ್ಟು ಸೆಣಾಡಿದಾಗ್ಯೂ ಪ್ರಯೋಜನವಿಲ್ಲವು ಮತ್ತು ಬಾಲ್ಯವಿವಾಹ,ಬಹುಭಾರ್ಯಾಪರಿಗ್ರಹ,ಇವುಗಳನ್ನು ಎಷ್ಟುವಿಧದಿಂದ ಖಂಡಿಸಿದಾಗ್ಯೂ ಅವು ನಿಲ್ಲತಕ್ಕದ್ದಲ್ಲವು ನಮ್ಮಲ್ಲಿ ಬಾಲ್ಯವಿವಾಹವೂ ಬಹುಭಾರ್ಯಾ ಪರಿಗ್ರಹವೂ ಹೇರಳವಾಗಲಿಕ್ಕೂ ಇವುಗಳ ಪರಿಣಾಮವಾದ ಬಾಲ್ಯ ವೈಧವ್ಯವು ವೃದ್ಧಿಯಾಗಲಿಕ್ಕೂ ಕಾರಣವೇನೆಂದರೆ,— ನಮ್ಮಲ್ಲಿ ಸಮಾವ್ಯಗಳು ಅಸಂಖ್ಯಾತವಾಗಿ ಏರ್ಪಟ್ಟು ಅವುಗಳಲ್ಲಿ ಜನಗಳು ಅಲ್ಪಸಂಖ್ಯೆಯುಳ್ಳವರಾಗಿರುತ್ತಾರೆ ಇವರಲ್ಲಿಯೇ ಭೋಜನ ಪ್ರತಿಭೋಜನವನ್ನೂ ಸುಬುದವನ್ನೂ ನಡೆಸಬೇಕೆಂಬ ಬಲವತ್ತರವಾದ ನಿರ್ಬಂಧವುಂಟಾಗಿರುವದರಿಂದಲೂ, ಅನ್ಯರು ಯೆಷ್ಟು ಪರಿಶುದ್ಧರಾಗಿ ಸತ್ಕುಲ ಪ್ರಸೂತರಾಗಿದ್ದರೂ ಅವರುಣೋ ಡಿದ್ದನ್ನು ಭುಜಿಸುವದು ಸಹ ಪಾತಕತ್ವೇನ ಪರಿಭಾವಿಸಲ್ಪಡುವದರಿಂದಲೂ, ಸುಬುದನೆಂಬದ್ದ ಪರಿಮಿತಾವಕಾಶದೊಳು ನಡೆಯಬೇಕಾದ್ದಾಗಿ ಏರ್ಪಟ್ಟಿರು. ಇತರರಲ್ಲಿ ಪ್ರಾಯೇಣ ವರನಿದ್ದಕತೆ ವರುವಿಲ್ಲವೆಯೂ, ವದುವಿದ್ದಕತೆ ವರನಿಲ್ಲದೆಯೂ ಇರುತದೆ. ಕದಾಚಿತ್ ಇಬ್ಬರಿಬ್ಬರು ಇದ್ದರೆ ದರಿದ್ರರಾಗಿಯಾದರೂ, ರೋಗಪೀಡಿತರಾಗಿಯಾದರೂ, ಕುರೂಪಿಯಾದವರಾಗಿಯಾದರೂ ದುರ್ಗುಣಗಳುಳ್ಳವರಾಗಿಯಾದರೂ ಇರುತ್ತಾರೆ ವರ ದೌರ್ಲಭ್ಯದಿಂದ ಪ್ರಾಕ್ಸೋಕ್ತ ದೋಷಗಳು ನಮಗೆ ಪ್ರತ್ಯಕ್ಷವಾಗಿ ಕಂಡುಬಂದಾಗ್ಯೂ ಅವುಗಳನ್ನು ಕೇವಲ ಮನೋಜ್ಞತ್ವೇನ ಭಾವಿಸಬೇಕಾಗಿದೆ.

ಮಾನುಷಸ್ವಭಾವವನ್ನು ನಿರೋಧಿಸಲಿಕ್ಕೆ ಅಸಾಧ್ಯವೆಂದುಹೇಳ ವಿತುರುಗಳನ್ನುಸರಿಸುಗಳನ್ನಾಗಿ ಮಾಡಬೇಕೆಂಬವರ ತಾತ್ಪರ್ಯಾನುಸಾರ ದೇಶ ಪ್ರಕೃತಿ ಭೇದಗಳನ್ನನುಸರಿಸಿ, ಹದ್ದಿನೈದು ಸುಮಾರು ಸಂವತ್ಸರಗಳೊಳಗಾಗಿ ಮೈನೆರೆಯತಕ್ಕವರು ಸ್ವಸಂತೋಷಾರ್ಥ ಒಬ್ಬ ಪುರುಷನನ್ನು ಹುಡುಕುವದು ಸಹಜವಾದ್ದರಿಂದ, ವಿವಾಹಕ್ಕಾಗಿ ಮುದುವಾಗುವವರನ್ನು ದೋಷಯುಕ್ತರನ್ನಾಗಿ ಮಾಡುವದಕ್ಕೆ ಅಸಾಧ್ಯವಾದ ಕಾರಣ ನಾವಾಗಿ ಒಬ್ಬನನ್ನು ನೋಡಿ ಕೊಡುವದರೊಳಗಾಗಿ ಪುರುಷಾಕಾಂಕ್ಷಿಣೀಯರಾಗಿಅವರೇ ಮನಸ್ವೀಚ್ಛೆಯಿಂದಲಿ ವರಿಸುವರೆಂಬ ಭೀತಿಯೊಡನೆ ಋತುವಾಗುವದಕ್ಕೆ ಪೂರ್ವದಲ್ಲಿಯೇ ಒಬ್ಬನನ್ನು ವರಿಸಬೇಕಾಗಿದೆ. ಇದರಿಂದ ಅನುರೂಪನಾದ ವರನು ದೊರೆಯದಿದ್ದಾಗ್ಯೂ ಅವನವಯೋಗುಣ ವಿಭವಾದಿಗಳನ್ನು ನಿರೀಕ್ಷಿಸದೆಅವನಿಗೇ ಕೊಟ್ಟು ವಿವಾಹ ಮಾಡಬೇಕಾಗಿದೆ. ಕದಾಚಿತ್ ಅವಿವಾಹಿತನಾದವನು ದೊರೆಯದಿದ್ದರೆ ಯೆರಡುಮೂರನೆಯ ಭಾರ್ಯೆಯಾಗಿಯಾದರೂ ಇರಲೆಂದು ಕೊಟ್ಟು ವಿವಾಹ ನಡಿಸಬೇಕಾಗಿದೆ. ಈ ಕಾರಣದಿಂದ ಭಾರ್ಯಾಪತಿಗಳಿಗೆ ವಯಃಪರಿಮಿತಿಯು ಸರಿಬೀಳದೆ, ಗಂಡನ ಅಕಾಲ ಮರಣವು ಭಾರ್ಯೆಯು ಅಕಾಲ ವೈಧವ್ಯವನ್ನುಂಟುಮಾಡುತಿದೆ ಹೀಗೆಯೇ ವದೂ ದೌರ್ಲಭ್ಯದಿಂದ ನಮ್ಮ ಮಕ್ಕಳಿಗೆ ಸಜಾತೀಯರಲ್ಲಿ ಮುಂದೆ ಹೆಣ್ಣು ದೊರೆಯುವದೊ ಇಲ್ಲವೋ ಯೆಂಬ ಆಲೋಚನೆಯೊಡನೆ ತಾಯಿತಂದೆಗಳು ರಮ್ಮದಾರಿದ್ರ್ಯವನ್ನು ಸಹ ಚಿಂತಿಸದೆ ಸಾಲವನ್ನು ಮಾಡಿಯಾಗಲಿ, ಅಥವಾ ತಮ್ಮ ಭೂವಗಿಯನ್ನು ಮಾರಿಯಾಗಲಿ ಒಂದು ವರುಷದ ಹೆಣ್ಣುಮಗುವನ್ನು ತಮ್ಮದೆಂತ ಮಾಡಿಕೊಳ್ಳಲಿಕ್ಕೆ ಪ್ರಯತ್ನಪಡುತ್ತಾರೆ ಬಾಲಾರಿಷ್ಟಗಳು ಸಹ ಕಳೆಯದಿರುವ ಇಂತಾ ಎಳೇಮಕ್ಕಳನ್ನು ನಂಬಿ ವಿವಾಹ ಮಾಡಿಕ್ಕೊಳ್ಳತಕ್ಕವರ ಆಶೆಯು ಸಗಲವಾಗಿ ಕ್ಷಿಪ್ರದಲ್ಲಿಯೇ ವಿಮುದ್ರವನು, ವರಿಗ ಹಿಸಬೇಕಾದವರಾಗುತ್ತಾರೆ. ಅದನ್ನು ಯೆಲ ಗಲಾಡಿಸಲಿಕ್ಕೆ ತಾಯಿತಂದೆಗಳು ಮತ್ತೊಂದು ಸಲ ಪ್ರಯತ್ನಿಸುತ್ತಾರೆ ಈ ಶ್ರಮವು ಮುಂದಕ್ಕೆ ಒಬ್ಬಳು ವರ ಬದ್ಧವರನ ವೈಧವ್ಯನ ಗುಣವಾಗಿ ನರೆಯುಬರುತಿದೆ. ಅವನ ಬಹುಭಾರ್ಯಾ ಪರಿಗ್ರಹಸ್ತೂ ಅನ್ಯ ಕನ್ಯಾ ಬ ಅವಿದು ತುಗಳು ಏರ್ಪಡಲಿಕ್ಕೂ ಅನಿರ ರವಾಗಿ ಸೆಂಗೊಂಡಿರುವ ಮತ್ತು ಪ್ರತ್ಯೇಕ ಸ್ನೇಹಿತರು ಪ್ಯ ನಿರೆ ಜೀವಕವಾದ ಅಂತರಾಳಕ ವುದ ಪ್ರಸಿದ್ಧಗಳೇ ಮುಖ್ಯಕಾರಣವೆಂದು ಹೇಳಬೇಕಾಗಿದೆ ಈ ವಿಷಯವುಕುರಿತು ವಕ್ತವ್ಯಾಂಶಗಳನ್ನು ಮುಂದಿನವಾರದಲ್ಲಿ ತಿಳಿಸುವೆವು

RE-MARRIAGE IN HYDERABAD.

[illegible] ಹೈದರಾಬಾದ್ ಪಟ್ಟಣ [illegible] ಬ್ರಾಹ್ಮಣರು [illegible] ಶ್ರೀನಿವಾಸ [illegible] ಶಾಸ್ತ್ರಿಗಳು [illegible] ಬರದಿದ್ದರೆ [illegible] ಮಹಾರಾಜರಾದ [illegible] ಪ್ರಸ್ತಾವ [illegible] ಶುಭಕಾರ್ಯವನ್ನು [illegible] ಮೋಕ್ಷಕ್ಕೆ [illegible] ಕುಡಿದಾಗಲೇ ಪ್ರಾಣ [illegible] ಜೊತೆಗೆ [illegible] ವೈದಿಕ [illegible] ತಿಳಿಸಿದರು [illegible] ಖುಲ್ಲಾಗಾಗಿ [illegible] ತಮ್ಮ [illegible]

ಪ್ರಕಟನೆ [illegible] ಶಾಸ್ತ್ರಿಗಳು [illegible] ಕಾಲಕಳೆಯ [illegible] ದನ್ನು ಮೂಢೋಕ್ತವಾಗಿ [illegible] ತೋರಿತು.

Occasional Notes
ನೈಮಿತ್ತಿಕವಿಷಯಸ್ತಾಪ

A treaty signed —ಪ್ರೆಂಚ್‌ಸರ್ಕಾರಕ್ಕೂ ಚೀನಾಸರ್ಕಾರಕ್ಕೂ ನವವದಾನವಾಗಿ ಆಬಗ್ಯೆ ರವಾನಾದುದಕ್ಕೆ ಉಭಯ ಸಂಸ್ಥಾನಾಧಿಪತಿಗಳ ವರನ ಪ್ರತಿನಿಧಿಗಳೂ ಅದಕ್ಕೆ ಕೈಬರವ ಯಿಟ್ಟನೇಲೆ ಪರಸ್ಪರ ಕುಜವಾದನ ಮಾಡಿಕ್ಕೊಂಡು ಆದಿನರಾತ್ರಿ ಇಬ್ಬರು ರಾಯಬಾರಿಗಳೂ ಒಂದೇಸ್ಥಳದಲ್ಲಿ ಭೋಜನಮಾಡಿದರಂತೆ.

A prohibition —ಅಪಘಾನಿಸ್ತಾನ್ ಸರಹದ್ದು ವಿಷಯದಲ್ಲಿರಷಿಯಾ ಗವರ್ನಮೆಂಟಿನವರು ಮುಂದೆ ಮಾಡಲಾಲೋಚಿಸಿರುವ ಕಾರ್ಯಗಳನ್ನುಕುರಿತು ವೃತ್ತಾಂತಪತ್ರಿಕೆಗಳಲ್ಲಿ ಯಾವ ವೃತ್ತಾಂತವೂ ಪ್ರಕಟಿಸಕೂಡದೆಂದು ಮಾಸ್ಕೊದ ವ್ವಚದಲ್ಲಿರುವ ಸದರೀ ಪತ್ರಿಕೆಗಳ ದೇಸಿಟರ್‌ರನು ಸರ್ಕ್ಯೂಲರ್ ಹುಕುಂ ಕೊಟ್ಟಿರುವುತೆ ಪ್ರವಾದ ವುಂಟಾಗಿದೆ.

A prohibition —ಚೀನಾದೇಶಕ್ಕೆ ಸೇರಿದ ಐಗು ಯೆಂಬ ದುಕಡಿಯಲ್ಲಿರುವ ಚಿನ್ನದ ಗಣಿಗಳಲ್ಲಿ ಪ್ರವರ್ತಿಸಕೂಡದೆಂದು ರಷಿಯಾ ಸರ್ಕಾರದವರು ತಮ್ಮ ಪ್ರಜೆಗಳಿಗೆ ಹುಕುಂ ಕೊಡಲು ಚೀನಾ ಸರ್ಕಾರದವರು ಸದರೀ ಸ್ಥಳದಲ್ಲಿ ಕೆಲವು ಸೈನ್ಯವನ್ನು ತಂದಿಟ್ಟು, ತಮ್ಮ ಅಪ್ಪಣೆ ಇಲ್ಲದೆ ತಮ್ಮ ದೇಶದೊಳಗಣ ಚಿನ್ನದ ಗನಿಗಳಲ್ಲಿ ಯಾರು ಪ್ರವರ್ತಿಸಿದಾಗ್ಯೂ ಅಂತವರ ತಲೆಗಳು ಹೊಡೆದು ಹಾಕುತಲಿದಾರಂತೆ.

Lady Dufferins Fund —ಇಂಡ್ಯಾರಾಜ್ಯದ ಪ್ರಕೃತ ವೈಸರಾಯಿಯವರಾದ ಲಾರ್ಡ್ ಡಫರಿನ್ ಸಾಹೇಬರವರ ಭಾರ್ಯೆಯವರು, ಇಂಡ್ಯಾರಾಜ್ಯಕ್ಕೆ ವೈದ್ಯಶಾಸ್ತ್ರಾಭ್ಯಾಸ ಮಾಡಿರುವ ಯುರೋಪಿಯರ್ ಹೆಂಗಸರನ್ನು ಕರೆಯಿಸಿ ಚಿಕಿತ್ಸಾ ಕ್ರಮವನ್ನು ಇಲ್ಲಿನ ಹೆಂಗಸರಿಗೆ ಕಲಿಸಬೇಕೆಂದು ಆಲೋಚಿಸಿ ಆಬಗ್ಯೆ ಯೇರ್ಪಡಿಸಿದ ಫಂಡಿಗೆ ರೆವ್ವಾಂ ಸಂಸ್ಥಾನದ ಅರಸರವರೂ ಅಲ್ವಾರ್ ಸಂಸ್ಥಾನದ ಮಹಾರಾಜರವರೂ ತಮ್ಮತಮ್ಮ ಗೌರವ ಪ್ರಾಶಸ್ತ್ಯಗಳಿಗೆ ಅನುಗುಣವಾಗಿ ಚಂದಾ ಮಾಡಿರುತ್ತಾರೆ.

The Maharaja of Cashmere indisposed ಕಲ್ಕತ್ತಾ ಇಂಗ್ಲಿಷ್‌ಮನ್‌ಪತ್ರಿಕೆಯ ಜಂಬೂ ವಾತಿಹಾರನು ಬರೆಯುತ್ತಾನೇನಂದರೆ,— ಮಹಾರಾಜರವರು ಮರಳ ಕೇವಲ ಅನಾರೋಗ್ಯಸ್ಥಿತಿಯಲ್ಲಿದಾರೆ. ಈ ತಿಂಗಳ ೬ನೇ ತಾರೀಖು ಆಗಾಯಿತು ಜರುಬಿಟ್ಟುಬಿಡದ ಬಹಳ ಸಂಕಟವನ್ನನುಭವಿಸುತಲಿದಾರೆ. ನಾಲ್ಕುಸಂವತ್ಸರಗಳ ಕಾಲದಿಂದಲು ಬಹುಮೂತ್ರ ರೋಗಪೀಡಿತರಾಗಿರುತ ಈಗ ಜ್ವರವೂ ತಗಲಿಯದೆ ಕೇವಲ ದೌರ್ಬಲ್ಯಸ್ಥಿತಿಗೆ ಬಂದಿರುತ್ತಾರೆ. ಅರಮನೆವೈದ್ಯರು ಮಹಾರಾಜರವರಿಗೆ ಆರೋಗ್ಯ ವುಂಟಾಗಬೇಕೆಂದು ಅಕ್ಕರೆಯೊಡನೆ ತಮಗೆ ಸಾಧ್ಯವಾದ ಚಿಕಿತ್ಸೆಗಳನ್ನೆಲ್ಲ ಮಾಡುತಲಿದಾರೆ ರಾಜಕುಮಾರರು ಮೂವರೂ ಮಂತ್ರಿಯವರೂ ಯಾವಾಗಲು ಅರಸರವರ ಸಮೀಪದಲ್ಲೇ ಯಿರುತಲಿದಾರೆ, ಎಂಬದು

The Maharaja of Travancore —ತಿರುವಾಂಕೂರು ಮಹಾರಾಜರವರು ಕೇವಲ ಅನಾರೋಗ್ಯ ಸ್ಥಿತಿಯೊಳಿರುತ್ತಾರೆ. ಈಗ ಅವರಿಗೆ ವಾಂತಿಯಾಗುವ ಚಿಹ್ನೆಗಳು ಕಾಣಬರುತವೆ. ಅವರ ಪ್ರಕೃತ ಸ್ಥಿತಿಯನ್ನು ವಿಚಾರಿಸಿ ನೋಡಲಾಗಿ ರೋಗನಿವೃತ್ತಿಯಾಗುವುದೆಂಬ ಪ್ರತ್ಯಾಶೆಗೆ ಅವಕಾಶ ಕೇವಲ ಸ್ವಲ್ಪವಾಗಿರುತಿದೆ. ಈಗ ಮುಂದಿನ ಚಿಕಿತ್ಸೆಗಳೆಲ್ಲವು ನಿಷ್ಪ್ರಯೋಜನವಾದವೆಂತಲೂ, ತಮಗೆ ಕಾಲ ಆಸನ್ನವಾಗಿರುವುದೆಯೂ ಮಹಾರಾಜರವರು ತಿಳಿದುಕೊಂಡಿರುವದಾಗಿ ಯೆಳುತ್ತಾರೆ. ದಿವಾನರವರು ಒಂದು ನಿಮಿಷವಾದರು ಕೋಟೆಯಿಂದ ಆಚೆ ಹೋಗುವದಿಲ್ಲವು ರಾಜಧಾನಿಯೊಳು ಚಿತ್ತನೋಡಿವಾಗ್ಯೂ ಪ್ರಜೆಗಳು ಖಿನ್ನರಾಗಿರುತ್ತಾರೆ ಮಹಾರಾಜರವರಿಗೆ ಆರೋಗ್ಯವುಂಟಾಗಬೇಕೆಂದು ಮಹಮ್ಮದೀಯರ್ ಜನರು ತಮ್ಮ ದೇವರಿಗೆ ಪ್ರಾರ್ಥನೆಗಳು ಮಾಡುತಲಿದಾರೆ ಈ ಮಹಾರಾಜರವರು ರಾಜ್ಯಭಾರವು ಕೈಗೊಂಡು ಐದುವರುಷಗಳಕಾಲವಾಯಿತು. ಈಗ ಇವರ ವಯಸ್ಸು ನಾಲ್ವತ್ತೆಂಟು ವರುಷಗಳು, ಯೆಂದು ವೆಸ್ಟರ್ನ್ ಸ್ಟಾರ್‌ಯೆಂಬ ಪತ್ರಿಕೆ ಹೇಳುತಿದೆ. ನೇಟಿವ್ ಅರಸುಗಳಲ್ಲಿ ಈ ಮಹಾರಾಜರವರು ವಿಶೇಷವಾದ ವಿದ್ಯಾಬುದ್ಧಿ ವಿವೇಕವುಳ್ಳವರಾಗಿ, ಬ್ರಿಟಿಷ್ ಗವರ್ನಮೆಂಟಿನವರ ಮತ್ತು ಸಾಮಾನ್ಯವಾಗಿ ಯೆಲ್ಲರ ಪ್ರೀತಿ ಗೌರವ ಶ್ಲಾಘನೆಗಳಿಗೆ ವಿಷಯರಾಗಿರುವದರಿಂದ ಇವರಿಗೆ ಈಗ ಪ್ರಾಪ್ತವಾಗಿರುವ ಅನಾರೋಗ್ಯಸ್ಥಿತಿಯು ಕೇವಲ ಹೃದಯ ವ್ಯಥಾಕಾರಿಯಾಗಿರುತಿದೆ. ಮತ್ತು ಕ್ಷಿಪ್ರದಲ್ಲಿ ಶ್ರೀಮನ್ಮಹಾರಾಜರವರಿಗೆ ಆರೋಗ್ಯಭಾಗ್ಯ ವುಂಟಾಗಬೇಕೆಂದು ಪ್ರಾರ್ಥಿಸುವೆವು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Rices —ಕಳೆದ ಗುರುವಾರ [illegible] ದಿವಸಗಳಲ್ಲಿ [illegible] ಕಾಲಾವೇಶದವರಿಗೆ [illegible] ಕೊಡತಕ್ಕ [illegible]

Cholera—ಈ ಪಟ್ಟಣದಲ್ಲಿ ಯೂ ಇದಕ್ಕೆ ಸೇರಿದಂತಿರುವ ಗ್ರಾಮಾಂತರಗಳಲ್ಲಿಯೂ ಅಲ ಪಾಲ್ ಜ್ವರ ರೋಗವು ಮರಳಿ ಪ್ರಬಲಿಸಿದೆ. ಈ ರೋಗವು ಇತರ ರೋಗಗಳಲ್ಲಿ ಒಂದಾಗಿ ಯೋರ್ಪಟ್ಟಿತು

Mr R. Vijiandra Row—ದಿವಾನರವರ ಜನರಲ್ ಸೆಕ್ರೆಟರಿಯಾಗಿದ್ದ ಮ|| ವಿಜಯೇಂದ್ರ ರಾಯರವರು ಕಲೆಕ್ಟರಾದದಿನ ರಜಾಬಂದ ವಾ ಪಸ್ ಬಂದು ತಮ್ಮ ಕೆಲಸದ ಛಾರ್ಜನ್ನು ಮ|| ಮಾಧವರಾಯರವರಿಂದ ತೆಗದುಕೊಂಡು ತಮ್ಮ ರಜಾ ಕಾಲವನ್ನು ಉಪಯೋಗಿಸಿಕೊಳ್ಳದ ಭಾಗ ವನ್ನು ಕ್ಯಾನ್ಸಲ್ ಮಾಡಿಸಿಕೊಂಡರೆಂದು ತಿಳಿ ಯಬರುತ್ತದೆ.

Mr. Mahomed Ali, K B—ಭಾರ್ಗವ ರ್ದಾರ್ ಮ|| ಮಹಮ್ಮದಲ್ಲೀ ಯವರು ಕರ್ನಾಟಕದ ಇನೇ ಗ್ರೇಡು ಸೂಪರಿಂಟೆಂಡರವರ ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜನ್ನು ಮ|| ಪುರ್ಣಯ್ಯನವರಿಂದ ತೆಗೆದುಕೊಂಡರು. ಮ|| ಪುರ್ಣಯ್ಯನವರು ಪೋಲೀಸ್ ಇನ್ ಛಾರ್ಜಿನಲ್ಲಿರುವಂತೆ ತಿಳಿಯಬರುತ್ತದೆ.

Extention.—ಮೈಸೂರು ಪಟ್ಟಣದ ಸ್ಟ್ರೆ ಪ್ತ್ರವನ್ನು ಬದಾಯಿಸಲ್ಪಡುವದೆಂದು ತಿಳಿಯಬರುತ್ತದೆ. ಇದಕ್ಕೆ ಕಾರಣವೇನೆಂದರೆ,—ಒಂದು ರಿಜಿಮೆಂಟ್ ಕಡಿಮೆಯಾದದರಿಂದ ಇತರ ರಿಜಿಮೆಂಟಿಗೆ ಸಾಕಾಗುವಷ್ಟು ಸರ್ಕಾರಿ ಅಧಿಕಾರಿಗಳಿಂದ ಸ್ಟ್ರೆಂತ್ ಬದಾಯಿಸಬೇಕಾಯಿತು ಈ ಸಂದರ್ಭದಲ್ಲಿ ಉಪಯೋಗಿಸಲ್ಪಡುವ ಜಮೀನುಗಳಿಗೆ ಜಾಸ್ತಿ ಕಂದಾಯ ದೊರೆಯುವದೆಂದು ಇದೇ ಹಿನ್ನೆಲೆಗೆ ಕಾರಣವಾಯಿತು

Assault—ಹುಳಿಯಾರು ಕುರುಕೇಷರಲ್ ಪ್ಪಿಟಾನಲ್ಲಿ ಇದ್ದ ಉಪಾಧ್ಯಾಯರೊಬ್ಬರು ಜನಗಳಿಂದ ಅಧರ್ಮಕ್ಕೆ ಬೆಂಗಳೂರು ಡಿ| ಡೆಪ್ಯುಟಿ ಕಮ್ಮಿಷನರವರಲ್ಲಿ ಫಿರ್ಯಾದು ಹಾಕಲು ಮ|| ರೀಟನ್ ಅವರು ಗತ ಘಟನೆಯಾದ ಸನ್ನಿವೇಶ ಮೋಕದ್ದಮೆಯನ್ನು ವಿಚಾರಿಸಿ ಅಪರಾಧಿಗೆ ೩೦ ರೂಪಾಯಿಗಳ ಜುಲ್ಮಾನೆ, ದಿನ ಅಪೀಲು ೨೦ ರೂಪಾಯಿಗಳು ಫಿರ್ಯಾದಿಗೆ ಕಂಪೆನ್ಸೇಷನ್ ಕೊಡಲಿಕ್ಕೆಂದು ವಿಧಿಸಿದರೆಂದು ತಿಳಿಯಬರುತ್ತದೆ.

Execution—ಗತಬುಧವಾರದದಿನ ಬಿಳಿಗೈಯ ಪುಂಡೆಗೆ ನಡೆಯಿತು. ಈ ವೃತ್ತಾಂತವೆಂದರೆ ಪೆಂಟ್ರಲ್ ಜೈಲ್ ನಲ್ಲಿದ್ದ ರಾಮ್ ರಾಮದರ್ನಿವ ಇನ್ ಸ್ಪೆಕ್ಟರ ಶಾಸ್ತ್ರಿಯವರ ಮೇಲೆ ಯ ಕೃಷ್ಣಯ್ಯನೆಂಬವನು ಚಿನ್ನ ನಿಮಿಷದಲ್ಲಿ ಕೊಡಲಿಯಿಂದ ಇವರನ್ನು ಬಂದೂಕಿನಿಂದ ಗುಂಡು ಹಾರಿಸಿ ಕೊಲ್ಲಲು ಪ್ರಯತ್ನಿಸಿದ ಕಲ್ಲಿಗೆ ಹಾಕಲ್ಪಟ್ಟನು. ಕಲ್ಲಿಗೆ ಹಾಕಲ್ಪಡುವದಕ್ಕೆ ಪೂರ್ವ ಜೈಲಿಗೆ ಅವನನ್ನು ವಿಶಿಷ್ಟ ಭಾಗದಲ್ಲಿ ಕೊಂಡೊಯ್ದು ಕುಳ್ಳಿರಿಸಿ ಶಿಕ್ಷೆ ವಿಧಿಸಿದರೆಂದು ತಿಳಿಯಬರುತ್ತದೆ. ಇವನು ಮಾಡಿದ ಕೃತ್ಯವು ಕೂರವಾದದ್ದಾದರೂ ಕ್ರೈಸ್ತ ಸಂಬಂಧದಿಂದ ಅವನು ಗಲ್ಲಿಗೆ ಹಾಕಿ ದಂಡಿಸಲ್ಪಟ್ಟನೆಂದು ಹೇಳಬೇಕಾಗಿದೆ

Petta Municipality—ಇದ್ದಿನ ಪೇಟೆ ಮ್ಯೂನಿಸಿಪಾಲಿಟಿಯವರು, ನಗರ ಪಾರಿಶುದ್ಧ್ಯ ವಿಚಾರಣೆಯಲ್ಲಿ ೧೨೫ ರೂಪಾಯಿಗಳ ಕಲೆಕ್ಷನ್ನಲ್ಲಿ ಇಬ್ಬರು ಶ್ಯಾನಿಟರಿ ಇನ್ಸ್ಪೆಕ್ಟರನ್ನು ನೇಮಕ ಮಾಡಿದರೆಂದು ತಿಳಿಯಬರುತ್ತದೆ. ಗಲಿ ಟ್ ಪಾರ್ಕ್ ಮಾಡಿಕೆಯ ಇವರುಗಳನ್ನು ಮ್ಯೂನಿಸಿಪಲ್ ಮೆಂಬರು ಮೇಲ್ವಿಚಾರಣಾಧಿಕಾರಗಳನ್ನು ನೆಟ್ಟಿದ್ದ ಕಾರಣದಿಂದ ಪ್ರಯೋಜನಕ್ಕೊಳಗಾಗಿ ಕೋರಲ್ಪಟ್ಟಿತು. ಈ ಇದಕ್ಕೆ ಓವರ್ಸಿಯರ್ ಗಳಿಗೆ ಬೇಕಾದ ಸಹಾಯವನ್ನು ಕಲ್ಪಿಸಿದರೆ ಯಾತಕ್ಕೆ ಕೆಲಸ ಜರಗಲಾರದು?

Arrival of Her Highness the Maharanee of Mysore—ಶ್ರೀಮನ್ಮಹಾರಾಣೀಯವರು, ತಮ್ಮ ಪರಿವಾರ ಸಹಿತ ಗತ ಸೋಮವಾರ ದದಿನ ಸಾಯಂಕಾಲ ಸ್ಪೆಷಿಯಲ್ ಟ್ರೇನು ಗಳಲ್ಲಿ ಇಲ್ಲಿಗೆ ದಯಮಾಡಿದರು. ಇವರ ಸವಾರಿಯು ನಂಜನಗೂಡಿನ ಕಡೆಗೆ ಬರುವ ವಿಚಾರವಾಗಿ ಮುಂದಾಗಿ ಮೈಸೂರಿನಿಂದ ತಿಳಿಸಲ್ಪಟ್ಟು, ಮಹಾರಾಜರವರು ಎದುರುಗೊಂಡು ಕರೆದುಕೊಂಡು ಬರುವದಕ್ಕೆ ರೀ ಗೇಲ್ವೇ ಸ್ಟೇಷನ್ನಿಗೆ ದಯಮಾಡಿದ್ದರು. ರೆಸಿಡೆಂಟರವರೂ, ಕೌನ್ಸಿಲರರೂ ಅನೇಕರು ಯೂರೋಪಿಯನ್ ಮತ್ತು ನೇಟಿವ್ ದೊಡ್ಡಮನುಷ್ಯರೂ ಪ್ಲಾಟ್ ಫಾರಂ ಫಾಜುಗಳೊಡನೆ ಸ್ಟೇಷನ್ನಿನಲ್ಲಿ ಕಾದಿದ್ದರು. ಮಹಾರಾಣೀಯವರ ಸವಾರಿಯು ಇಳಿಸ್ಪಟ್ಟದ ಕೂಡಲೆ ಮಾಮೂಲ್ ಪ್ರಕಾರ ಪಡೆ ಸುಲ್ತಾನಾದ ರಾಜನು ಸ್ವದೇಶಗಳ ಪ್ರಜೆಗಳ ಪ್ರತಿ ಪ್ರಕಾರ ಅರಮನೆಗೆ ದಯಮಾಡಿದರು

Suspension of an Amildar—ಬಾಗೇಪಲ್ಲಿ ಚಿತ್ರಾಲ್ಲೂಕು ಅಮಲ್ದಾರ್ ಮ|| ಎಸ್ ಲಿ ಮಲ್ಲಾಚಾರ್ಯರಿಗೆ ಸಸ್ಪೆಂಡ್ ಮಾಡಲ್ಪಟ್ಟರೆಂದೂ, ಬೆಂಗಳೂರು ತಾಲ್ಲೂಕು ಅಮಲ್ದಾರ್ ಮ|| ಶೇಷಾಚಲಮ್ಮ ನವರು ಅಂದಾಜಿನ ಮೇಲೆ ಕೆಲಸ ನೋಡುತ್ತಿದ್ದರೆಂದು ತಿಳಿಯಬರುತ್ತದೆ. ಇವರ ಕಾರಣವನ್ನು ವಿಚಾರಿಸಿದಾಗ ಆ ತಾಲ್ಲೂಕಿನಲ್ಲಿ ವರ್ಷಾಗಲೆ ಕೊಬ್ಬಲ್ ಸೋಗು ಕೆಲವು ಭಾಗ ದಸ್ತಾವೇಜು ತಿಳಿಯಬಂದು ಅದರಮೇಲೆ ಮೇಲಿಕಡಲ್ಲಿಗೆ ರಿಪೋರ್ಟು ಮಾಡಲ್ಪಟ್ಟಿದೆ ತಿಳಿಯಬರುತ್ತದೆ ಈ ತಾಲ್ಲೂಕು ಶಿರಸ್ತೇದಾರರಿಗೂ, ಅಮಲ್ದಾರರಿಗೂ ಸ್ನೇಹ ವಿಲ್ಲದೆ ಪುಂಡಾಡಿಗಳಿದ್ದಲ್ಲದೆ ಇವರ ಅಮಲ್ದಾರಿ ಕ್ಷೇತ್ರದಲ್ಲಿ ಯಾವ ಕೆಲಸವೂ ನಡೆಯಲಿಲ್ಲವೆಂಬ ಅಂಶ ಪ್ರಸಿದ್ಧವಾದ ಕ್ಲಾರ್ಕಿನಿಂದ ಡೆಪ್ಯೂಟಿಕಮ್ಮಿಷನರಿಗೂ ಶಿವೆಲ್ ಡಿವಿಜನ್ ಆಫೀಸರಿಗೂ, ಅಮಲ್ದಾರರಿಗೂ, ಡೆಪ್ಯುಟಿ ಅಮಲ್ದಾರರಿಗೂ ಕಡ್ಡಾಯ ಅಮಲ್ದಾರರಿಗೂ, ಶಿರಸ್ತೇದಾರರಿಗೂ, ಬಳಸ್ಪಾರ್ ಅಮಲ್ದಾರರಿಗೂ ಪೋಲೀಸ್ ಇನ್ಸ್ಪೆಕ್ಟರಿಗೂ ಅಕ್ಕೋನ್ಟೆಂಟ್ ನನ್ನಿ ಕಡೆ ಈ ದೇಶದಲ್ಲಿ ನೆಲೆಗೊಂಡಿರುವದಿಲ್ಲವೆಂಬ ಅಂಶವನ್ನು ಮೆಲ್ಲನೂ ತಿಳಿಸಿದೇ ಇಲ್ಲ ಆದರೆ ಇದಕ್ಕೆ ಕಾರಣವೇನೆಂದರೆ, ಡಿಪಾರ್ಟ್ಮೆಂಟ್ ಗವರ್ನಮೆಂಟಿನವರು ಮೇಲೆ ಬಂದ ದರ್ಖಾಸ್ತು ಅವರಿಗೆ ಅಧಿಕಾರಕ್ಕೆ ಒಂದು ಸ್ಟೇಟ್ಮೆಂಟನ್ನು ಕಳ್ಳಿಸಿ ಕಾಪೀ ದಾರಿಯನ್ನು ಹುಡುಕಿಸಿಕೊಂಡು ಕೆಲಸಕ್ಕೆ ಹಾಕಲ್ಪಟ್ಟ ರಾವ್ ದಿವಾನರವರು ಕೊಟ್ಟ ಬಿಲ ಹಣ ಹುಕುಂ ಆಗದೆ ಮೇಲಿರುವ ಪ್ರಕಾರ ಅವರ ಮೇಲೆ ವಿಚಾರಣೆ ನಡೆದಿರುತ್ತದೆ

Raja Sir T Madhava Row—ಆಶಿ ದಿಂಗಳ ಎಡಿನ್ಬರೋ ಯೂನಿವರ್ಸಿಟಿ ಇದ್ದಿನ ಸಿವಿಲ್ ವಿಭಾಗದ ಸ್ಟೂಡೆಂಟ್ಸ್ ನಲ್ಲಿರುವ ಆ ಕಾಲೇಜ್ ನಾಗಾಯಣರಾವು ಮೊದಲ ಮಾರ್ಕಿನ ಪ್ಯಾಸ್ ಸಾಧಿಸಿದ ಡಿ ಕಾನ್ ರೆ ಮ|| ಸ್ಟೇಟ್ ಯವರು, ಮೊದಲು ಪ್ರಿನ್ಸಿಪಾಲರಾಗಿ ಇದ್ದಾಗ ರಾಜಾ ಬಹದ್ದೂರ ಬಹಳವಾಗಿ ಮಾಡಿದ ಉಪ ನ್ಯಾಸದ ಕಾಲದಲ್ಲಿ ಸರ್ ಟಿ ಮಾಧವರಾವ್ ರವರ ಆರೋಗ್ಯದ ವಿಷಯ ಪ್ರಸ್ತಾಪಿಸಿದ ಸಂದರ್ಭದಲ್ಲಿ ಇಲ್ಲಿಗೆ ಸಂಬಂಧಿಸಿದ ಕೆಲವಂಶವನ್ನು ಪತ್ರಿಕೆಗಳಿಗೆ ತಿಳಿಸಿದ್ದೇನಂದರೆ,—ಇಲ್ಲಿ ಸೇರುತಕ್ಕ ದೊಡ್ಡ ಮನುಷ್ಯರ ಪಂಕ್ತಿಯಲ್ಲಿ ಸೇರಿ ಇರುವದಕ್ಕೆ ಸ್ಟೂಡೆಂಟಾಯಿತು. ಅದರ ಕಾರಣವು ನನಗೆ ಗೊತ್ತಾಗಿಯಿದೆ. ನಾನು ಅನೇಕ ದಿವಸಗಳ ಪರ್ಯಂತ ಸಂಚಾರ ಮಾಡಿದ್ದರಿಂದ ಮದರಾಸಿಗೆ ಬರುವ ಸಮಯ ಮೇಲೆ ಇರುವ, ಈ ಪ್ರತಿಷ್ಠಾರ ನಗರಕ್ಕೆ ನಾನಿದು ವರೆಗೂ ಬರಲಿಲ್ಲವು. ಇಂತಾ ನ್ಯೂನತೆಯನ್ನು ನಿವಾರಿಸಿಕೊಳ್ಳುವದಕ್ಕೆ ಈಗ ಅವಕಾಶ ಒದಗಿ ದೊರಕಿದ ಕಾರಣ ನಾನು ಬಹಳ ಸಂತೋಷಿಸುತ್ತೇನೆ ಮಾನಕ್ಕೆ ತಮ್ಮ ಹಗಳನ್ನು ನಾನು ಇತರ ನೇಟಿವ್ ಸಂಸ್ಥಾನಗಳಲ್ಲಿ ಕೆಲಸಮಾಡ ಬೇಕಾಗಿ ಬಂದ ಪ್ರಸಿದ್ಧ ನೇಟಿವ್ ಸಂಸ್ಥಾನವು ನನಗೆ ಬೇಕಾದ ಉದ್ಯೋಗವನ್ನುಂಟು ಮಾಡಿದ್ದಕ್ಕೆ ತಾವು ಕಾರಣರು. ಆ ರೋಗ್ಯವಿದ್ಯಾಲಯಗಳಿಗೆ ನಾನು ಈ ಸ್ಥಾನದ ಮೂಲಕ ಆರಿಂಗಳವರೆಗೆ ನಾನು ಬಂದೆನು. ನನ್ನ ರೋಗದ ವಿಷಯವು ಇಷ್ಟು ಶೀಘ್ರವಾಗಿ ಅಂದರಲ್ಲಿಯೇ ಸಿದ್ಧಿ ಸಿದ್ಧವಾಗಿ ಬರಲು ಸಂತೋಷಪಡುತ್ತೇನೆ, ಇಲ್ಲಿನ ಡಾಕ್ಟರುಗಳು ನನಗೆ ಒಳ್ಳೆ ಆರೋಗ್ಯವನ್ನುಂಟು ಮಾಡಿಕೊಟ್ಟದ್ದರಿಂದ ನಾನು ನೋಡಿದಂತಹ ಪ ದೇಶಗಳಲ್ಲಿಗೆ ಇಂತಾ ಮನೋಹರವಾದದ್ದು ನನ್ನ ದೃಷ್ಟಿಗೆ ಬೀಳಲಿಲ್ಲವು. ಆಗ ನಾನು ಬೆಂಗಳೂರು ಪಾಲನೆಯ ಕೆಲಸ ಅತ್ಯಪ್ಪ ಯೋಜನೆ ವಿಧಿಸಿದೆನು. ಅದಕ್ಕೆ ನಾನು ಸಂತೋಷದಿಂದ ನಿಮ್ಮನ್ನೆಲ್ಲರನ್ನು ಶೀಘ್ರದಲ್ಲಿ ನೋಡಬೇಕೆಂಬ ಸಂಕಲ್ಪದೊಡನೆ ಹೋಗುವೆನು ಎಂದು ಮುಂದಾಗಿ ಕೆಲವು ಅಂಶಗಳನ್ನು ತಿಳಿಸಿದರು ಈ ಬೆಂಗಳೂರಿನಂತಹಾ ನಗರಯೋಗ್ಯವಾದ ಪ್ರದೇಶವು ದುರ್ಲಭವೆಂಬ ಭಾವವು ಅನೇಕರಿಗೆ ತೋರದಿರಲಿಲ್ಲವು.

A reply—ಗತವಾರದ ಪತ್ರಿಕೆಯಲ್ಲಿ ಪ್ರತಿಪ್ರಕಟಿಸಿದ್ದ (ಬ್ರಾಹ್ಮ್ಯಯ) ವೆಂಕಟಾಚಾರ್ಯರವರ ಲೇಖನಕ್ಕೆ ಈ ವಾರದಲ್ಲಿ ನಮಗೆ ತಿಳಿದು ಬಂದಿದ್ದ ಪ್ರತ್ಯುತ್ತರ ಹೇಗೆಂದರೆ ಮಾಡಿಸಿದ್ದೇವೆ ಆ ಬಗೆ ನಾವು ಕೇಳಿದ್ದಕ್ಕೂ ಸದರೀ ಆಚಾರ್ಯರ ಪ್ರಯೋಜನಕ್ಕೂ ಒಂದು ಭಾಗವನ್ನುಂಟು ಮಾಡಿದರೆ ಸುಲಭ ನಾಸ್ತಿಕರು ಪ್ರಶ್ನೆಸ್ವತಂತ್ರ ಪಡೆಯ ಬೇಕೆಂಬ ಆಕ್ಷೇಪಣೆ ನಮಗಿಲ್ಲವಂತೆ ಯೂ, ಪಕ್ಷಪಾತವಿಲ್ಲದ ವಿಚಾರವನ್ನು ಪರಿಶೀಲನಾಮೂಲಕ ಬಹಿಷ್ಕರಿಸುವದರಿಂದ, ಅವರಿಬ್ಬರ ವಾದಕ್ಕೆ ಪ್ರಯೋಜನವನ್ನು ಹಾಗೆ ಭಂಗಪಡಿಸಿದಂತೆ ಆಗುವದೆಂದೂ, ಇವರಿಬ್ಬರ ಆಚಾರ್ಯರ ಸ್ವಲ್ಪ ಅಕ್ಷೇಪ ಗಳಿಗಾದರೆಂದೂ, ನಮ್ಮ ಉಭಯರಿಗೂ ಅನ್ಯರಿಗೂ ಕೆಲವರ ಮೂಲಕ ತಿಳಿಯಬಂದದರಿಂದ ಆ ಪ್ರತ್ಯುತ್ತರ ಈ ವಿಚಾರವನ್ನು ಕಲ್ಪಿಸುವದು ಯೋಗ್ಯವೆಂದು ಯೋಚಿಸಿ ಇಲ್ಲಿಗೆ ನಿಲ್ಲಿಸಿದೆವು ಆದರೆ ಸಕ್ಕದಂತಹ ಯೋಚನೆಯ ತೋರಬಂದ ಕೆಲವು ಅಭಿಪ್ರಾಯಗಳನ್ನು ತಿಳಿಸಿ ಆಚಾರ್ಯರವರು ಸ್ವತಃ ಅವರ ಅನ್ಯರ ಮೂಲಕವಾಗಲಿ ಅಂತೆಪ್ಪರಗಳಿಗೆ ಮುಂದೆ ತಮ್ಮ ಗ್ರಂಥದಲ್ಲಿ ಅವಕಾಶ ಕೊಡದೆ ಸ್ವತಃ ಯತ್ನವನ್ನು ನಡೆಸುವದಾಗಿ ಕೊನೆಯುಟ್ಟಿ. ಟಿಕೆಂದು ಕೋರುವದಂತೆ ನೇರಿಸಿದ್ದೇವೆ. ಅದರ ಗೆ ಒಂದು ಪ್ರಯೋಜನ ಬಾಯ್ ನಮ್ಮನ್ನುಂಟು ಮಾಡಬೇಕೆಂಬ ಆಕಾಂಕ್ಷೆ ನಮಗೆ ಸರ್ವಥಾ ಇರುವದಲ್ಲವು ಆಚಾರ್ಯರ ಪ್ರತ್ಯುತ್ತರವು ಕಾಲ್ಪನಿಕವಾಗಿರುವದಕ್ಕೆ ಬೇಕಾದ ಸಹಾಯವನ್ನು ನಾವು ಒದಗಿಸಿದರೆ ಪ್ರಜೆಗಳನ್ನು ಬೇರೆಡಿಸಲಿಕ್ಕೂ, ನಮಗೆ ಸಾಧ್ಯವಾದ ಸಹಾಯವನ್ನು ಮಾಡುವದಕ್ಕೂ ನಾವು ಸನ್ನದ್ಧರಾಗಿಡಬೇಕೆಂಬ ಅಂಶವನ್ನೂ, ದೋಷ ತೋರುವದಕ್ಕೆ ಗುಣವು ಅವಶ್ಯವಾಗಿ ದೋಷವೇ ಉಂಟಾಗಿರುವದನ್ನು ಪರಿಶೀಲಿಸಿದ ಪ್ರಯೋಜನಕ್ಕಾಗಿ ಆಚಾರ್ಯರ ಬೇರೆ ದೋಷದ ಕಡೆಗೆ ನಾವು ಬಹಳ ವಿಷಾದಪಡುವೆವು. ದೋಷವಿದ್ದರೆ ಗುಣವನ್ನು ಸ್ವೀಕರಿಸಬೇಕಾದ್ದು ವಿಮರ್ಶಕರ ಕರ್ತವ್ಯವಾದ್ದರಿಂದ ಅದು ನಮ್ಮ ಅಭಿಪ್ರಾಯವನ್ನುಂಟುಮಾಡಿಲ್ಲವು.

TELEGRAPHIC SUMMARY

ತಂತಿ ವರ್ತಮಾನವು.

ಬಿಜಾಪುರ, ೨೯ನೇ ಜುಲೈ—ಶಿವರ್ ಯ ಪಕ್ಷದ ಸ್ವಾರ್ಥ ಹಾಗೆಯೇ ಮೊದಲು ಬರುವ ವಿಚಾರಕ್ಕೆ ಮಾರ್ಗ ಕಂಡುಹಿಡಿಯಬೇಕೆಂದು ವರ್ತಮಾನ ಕಲಕರ್ ಮಿಂಟಿಗೆ ಕಳುಹಿಸಿದರು

ಲಂಡನ್, ೨೯ನೇ ಜುಲೈ—ಜಿಲ್ಲೆಗಳಿಂದ ಬಂದಿರುವ ಸುದ್ದಿಗಳ ಪ್ರಕಾರ ಬಂದಿರುವ ತಮ್ಮ ಸೇನೆಯನ್ನು ರಷಿಯಾ ಸೈನ್ಯಾಧಿಪತಿಯವರು ಪಾವಾನ್ ಕಡೆಯಿಂದ ತಮ್ಮ ಸೈನ್ಯವನ್ನು ಬಿಡಿಸಿಕೊಂಡು ಬರಬೇಕೆಂದು ಲಾರ್ಡ್ ಸಾಲಿಸ್ಬರಿಯವರು ಹೇಳಿದರೆಂದು ತಿಳಿಸಿ, ಹಾಗೆ ಕಾಬೂಲಿನವರು ಹೋಗುವ ಪ್ರಕರಣವನ್ನು ಆಫ್ಘಾನಿಸ್ಥಾನದ ಸರ್ಕಾರಕ್ಕೆ ನಿವೇದಿಸಿಕೊಂಡ ಮೇಲೆ ಅವರು ಒಪ್ಪಿಕೊಂಡರೆ ಅಮೀರ್ ಅವರಿಗೆ ತಮ್ಮ ಸರ್ಕಾರದಲ್ಲಿ ಕಂಡಿರುವ ಪ್ರಾಂತ ಕೊಡುವದಾಗಿ ತಿಳಿಯಬರುತ್ತದೆ.

ಪಾಂಚಾಲ್ ಸ್ಟಾ, ೨೯ನೇ ಜುಲೈ—ಮಹಮ್ಮದೀಯರ ಗುಂಪು ಸಮ್ಮತಿಪಡೆದ ಮೇಲೆ ಅವರ ರಾಜ್ಯಾಧಿಕಾರವನ್ನು ಕ್ವಾಲಿಟಿ ಬಿಟ್ಟುಕೊಡುವದು ಉಚಿತವೆಂದು ಕಾರ್ಯಸ್ಥಾನದ ಒಬ್ಬರವರು ಬಂದು ಅವರಿಗೆ ಗೈರ್ ಹಾಜರ್ ಮಾಡಿದರೆಂದು ಈ ದಿನದ

ವಿಯನಾ, ೨೯ನೇ ಜುಲೈ—ಇಂಗ್ಲಾಂಡಿನ ಪಾರ್ಲಿಮೆಂಟ್ ಸಭೆಯಲ್ಲಿ ರಷ್ಯನ್ನರವರಿಗೆ ಅಧಿಕಾರಿಯವರ ಅಧಿಕಾರಕ್ಕೆ ಬರುತ್ತಿರುವ ಅಂಶಗಳ ಚಾಪುವದಕ್ಕೆ ಮುಂದೆ ರಷಿಯಾದೇಶಕ್ಕೂ ಆಫ್ಘಾನಿಸ್ಥಾನಕ್ಕೂ ಸರಹದ್ದು ಸ್ಥಾಪನೆ ಮಾಡಬೇಕಾಗಿದೆಂದು ಹೇಳಿರುವ ಕಮಿಟಿ ಸಭೆಯ ಸದಸ್ಯರೆಲ್ಲ ಒಪ್ಪಿಕೊಂಡಿರುವರೆಂದು ತಿಳಿಯಬರುತ್ತದೆ.

ಬರ್ಲಿನ್, ೨೯ನೇ ಜುಲೈ—ಪ್ರಷ್ಯ ಸರ್ಕಾರಕ್ಕೆ ಮಿತ್ರನಾದ ಸ್ಪೇನ್ ರವರ ಮರಣಾನಂತರ ಕಾಲಕ್ಕೆ ಪರಿಶೋಧನೆಗೆ ನಿಯಮಿಸಲ್ಪಟ್ಟವರು ಜರ್ಮನ್ ಮಂತ್ರಿಯಾಗುವ ಪ್ರತಿ ಭೇಟಿಯವರು ವಿಶೇಷ ಅಧಿಕಾರದೊಡನೆ ಬರಮಾಡಿಕೊಂಡು ಸ್ಥಳ ಸರ್ವಾಧಿಕಾರವೊಡನೆ ತಮ್ಮವರನ್ನು ಕೊಡುವದನ್ನು ಕಳಪಡಿಸಿಕೊಂಡರು

ಲಂಡನ್, ೨೯ನೇ ಜುಲೈ—ಸಿಲ್ಸ್ ಯೂನಿಯನ್ ಪ್ರಾಂತ್ಯದ ಗಲಭೆ ವಿಚಾರದಲ್ಲಿ, ಅವರ ವಿವಾಹ ಗಳಕ್ಕೆ ಯಾವ ಹೊಂದಾಣಿಕೆಯೂ ಇಲ್ಲದೆ ಲಂಡನ್ ಸೆಕ್ರೆಟರಿಯವರು ಒಂದು ಪತ್ರಕ್ಕೆ ಉತ್ತರ ಕೊಡಲು ತಡವಾದ ಕಾರಣದಿಂದ ಅವರ ಮೇಲೆ ಹಾಕಲ್ಪಟ್ಟ ಕೇಸಿನ ವಿಚಾರಣೆ ಯ ಸಾಕ್ಷಿಗಳು ಸ್ಟೇಟ್ ಸೆಕ್ರೆಟರಿ ಬರಲು ಸ್ಟೇಟ್ ಅವರನ್ನು ಇಂಗ್ಲಿಷ್ ಸರ್ಕಾರದವರು ಪ್ರತ್ಯಕ್ಷವಾಗಿ ತಿಳಿಸಿದರು

ಲಂಡನ್, ೩೦ನೇ ಜುಲೈ—ನಿನ್ನೆಯದಿನ ರಾತ್ರಿ ಹಾಸ್ ಆಫ್ ಕಾಮನ್ಸ್ ಸಭೆಯಲ್ಲಿ ಯುದ್ಧಖಾತೆ ಕಾರ್ಯದರ್ಶಿಗಳು ರಷಿಯದ ಸ್ವೈರ ಸಂಬಂಧವಾದ ಪತ್ರವ್ಯವಹಾರದಲ್ಲಿ ಮೆರ್ವ್, ಹೆರಾತ್, ಸ್ಪಾವಾರಿಸ್ತಾನಿ ಯಿಂದ ಮೆಯೆಮನ ತೀರ್ಮಾನಿಸಿ ಕೊಡಬೇಕೆಂದು ರಷಿಯಾದವರು ಕೇಳಲು ಮುಖ್ಯವಾದದ್ದರಿಂದ ಆಸಕ್ತಿ ಕೋಡಿಸಬಾರದು ಎಂದೇಳಿದ್ದು ಬಾದಶಹರಿಗೆ ಮತ್ತು ಸರ್ಕಾರದವರ ಅಭಿಪ್ರಾಯವೆಂದು ಹೇಳಿದರು

ಲಂಡನ್, ೩೦ನೇ ಜುಲೈ—ಮದರಾಸ್ ಗವರ್ನರ್ ರವರ ಸರ್ ಎಂ. ಇ. ಗ್ರಾಂಟ್ ಡಫ್ ಅವರು ಇಂಡಿಯಾ ಸರಕಾರದ ಇನ್ ಸ್ಪೆಕ್ಟರವರಾಗಿ ನೇಮಿಸಲ್ಪಟ್ಟಿದ್ದಾರೆಂದೂ, ಸರ್ ಡಾನಾಲ್ಡ್ ಸ್ಟುವರ್ಟ್ ಅವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೌನ್ಸಿಲ್ ಮೆಂಬರಾಗಿ ಮಾತ್ರವೇ ಒಪ್ಪಿದ ನಿಯಮಿಸಲ್ಪಟ್ಟರೆಂದೂ ಇದ ಕ್ಕಿಂತ ಸ್ಟೇಟ್ ಕೋರಿದೆ.

ನಿನ್ನೆಯದಿನ ರಾತ್ರಿ ಹೌಸ್ ಆಫ್ ಲಾರ್ಡ್ಸ್ ನಲ್ಲಿ ನಡೆದ ಚರ್ಚೆಯಲ್ಲಿ, ಇಂಗ್ಲಾಂಡ್ ದೇಶೀಯರಿಗೂ ಇತರ ಯೂರೋಪಿಯನ್ ಸಂಸ್ಥಾನಗಳಿಗೂ ಮಿತ್ರತ್ವವನ್ನುಂಟುಮಾಡಬೇಕೆಂದು ರಷಿಯಾದ ಪ್ರಭುತ್ವವನ್ನು ಆ ಕಿರಿದೆ ಯನ್ನು ವೃಕ್ಷವಾರಿ ಇದ್ದು ಅಲ್ಪಕಾಲದೊಳಗಾಗಿಯೇ ಇಂಗ್ಲಾಂಡಿಗೆ ರಷಿಯಾ ಸಭೆಯವರು ಸಹಾಯವಾದೊಡನೆ ಬೆಂಕಿಯಲ್ಲಿ ಹೋಗುವರೆಂದು ಕಾಲ್ ನಿರೀಕ್ಷಿಸುವರಾಗಿ ಲಾರ್ಡ್ ಸಾಲಿಸ್ ಬರಿಯವರು ಹೇಳಿದರು

ಮುಂಬೈ, ೩೧ನೇ ಜುಲೈ—ನಿನ್ನೆಯದಿನ ಪಿಶ್ಚಿ ಮುಂಬೈಯಲ್ಲಿ ಶಿವಾಜಿ ಪಾಲಿರುವ ಮುಂಬೈ ಗ್ರಾಂಟ್ ನ ಬಸ್ ಕಾಲೇಜಿಗೆ ಸೇರಿದ ವಿದ್ಯಾರ್ಥಿಯೊಬ್ಬನು ತನ್ನ ತಾ ಯಿಯವರಿರುವ ಮುದ್ರೆಯನ್ನು ಗೋಳಿಯಿಂದ ಹೊಡೆದು ಹಾಕಿ ಬಿಟ್ಟು ತನ್ನ ಕೊರಳಿಗೆ ಗೋಳಿ ತನ್ನ ಹೊಡೆದುಕೊಂಡನು ಹೊ ಡೆದನು. ಅದನ್ನು ನೋಡುತಿದ್ದ ಬೇರೆಯೊಬ್ಬ ಸಿಪಾಯಿ ಅವನ ಹಾಕಲ್ಲ ಹೊಡೆಯುತ್ತಿದೆಯೆಂದು ಆಕ್ಷೇಪಿಸಲು ಅವನನ್ನು ಕೂಡಲೇ ಗೋಳಿಯಿಂದ ಹೊಡೆದ ಕೊಂದು ಅದರಮೇಲೆ ತನ್ನ ಮದ್ದುಗುಂಡುಗಳಿರುವ ಪೆಟ್ಟಿಗೆಯೊಂದು ಆಯುಧಗಳ ಜೊತೆಗೆ ಬಿದ್ದವನೊಬ್ಬನ ಗೋಳಿಯಿಂದ ಕಾಲುಗಳಿಗೆ ಹೊಡೆದಿದ್ದರು ಅವನು ತನ್ನ ಕೊಲೆಯನ್ನು ಗೋಳಿಯಿಂದ ಹೊಡೆದು ತನ್ನ ಕಾಲಿನ ಹೆಬ್ಬೆರಳಿನಿಂದ ಗುಂಡನ್ನು ಹಾರಿಸಿದನು. ಸಂಸಾರಿಯಾದ ಸಾಧುವಾಗಿದ್ದ ಕೋಳಿ ಪೂರ್ವಚರ ಇದ್ದನು ಅಂತೆ ಇದ್ದ ದರೆ ಗೋಳಿಯಿಂದ ಹೊಡೆ ಯಪಡಿಸುವ ನಿಶ್ಚಿತ ಪ್ರಯತ್ನ ಪಡಲು ಅವನ ಸ್ನೇಹಿತರ ಬಳಿಯಲ್ಲಿ ಪ್ರಯತ್ನಪಟ್ಟರು ಗೋಳಿಯ ಹಾಕಿರುವ ಬೊಟ್ಟು ಕುಶ್ತಿನ ದುಃಖವಾಗಿ ನಿರ್ಣಯಿಸಲು ಕಾರಿರುವರು ಕೇಳಲು ಅನುಚಿತವಾದ ಕಾರ್ಯವೆಂದು ಸ್ಥಳದ ಪತ್ರಿಕೆಗಳಿಂದ ಅಭ್ಯಸಿಸುತ್ತದೆ

ಸರ್ ಡಾನಾಲ್ಡ್ ಸ್ಟುವರ್ಟ್ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವರೆಂದೂ, ಸರ್ ಫ್ರೆಡರಿಕ್ ರಾಬರ್ಟ್ಸ್ ಅವರು ಕಮಾಂಡರ್ ಇನ್ ಚೀಫ್ ಸರ್ ಡಾನಾಲ್ಡ್ ರವರ ಸ್ಥಳದಲ್ಲಿ ನಿಯಮಿಸಲ್ಪಡುವರೆಂದೂ ಮೇ ಲಿನ ಸರಕಾರದಲ್ಲಿ ಕೋರಲ್ಪಟ್ಟಿದೆ.

BANGALORE.—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XII.] BANGALORE—MONDAY, AUGUST 10, 18[illegible] [No. 32.

ಸಂಪುಟ ೧೨.] ಬೆಂಗಳೂರು:—ಸನ್ ೧೮೮೫ನೇ ಇಸವಿ ಆಗಸ್ಟ್ ೧೦ನೇ ತಾರೀಖ್ ಸೋಮವಾರ. [ಸಂಚಿಕೆ ೩೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ವರುಷ [illegible]	...	೧೦—೦—೦
[illegible]	...	೬—೦—೦
[illegible]		೬—೦—೦
[illegible]	೧ಕ್ಕೆ	೦—೮—೦
[illegible]	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

[illegible]

[illegible]

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

ಪ್ರಕಟನೆ.

[illegible]

ನೋಟೀಸ್.

[illegible]

[illegible]	...	೧—೪—೦
[illegible]	...	೦—೧೨—೦
[illegible]	...	೦—೩—೦
[illegible]	...	೦—೫—೦
[illegible]	...	೦—೪—೦
[illegible]	...	೦—೧೪—೦
[illegible]	...	೦—೬—೦
[illegible]	...	೦—೨—೦
ವೈದ್ಯಸಾರಸಂಗ್ರಹ	...	೫—೬—೦
[illegible]		
[illegible]	...	೦—೬—೦
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೬—೬
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	...	೦—೨—೦
[illegible]	...	೦—೦—೯
[illegible]		೧—೦—೦
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
[illegible]	...	೦—೮—೦
[illegible]		೦—೮—೦
[illegible]		೦—೮—೦
[illegible]		
[illegible]	...	೦—೩—೦
[illegible]	...	೦—೫—೦
[illegible]	...	೦—೨—೦
[illegible]	...	೦—೬—೦
[illegible]	...	೦—೦—೦
[illegible]	...	೦—೩—೬
[illegible]	...	೦—೧—೦

[illegible]

NOTICE.

VAIDYASARASANGRAHA.

Price including Postage, Rs 5-6-0

[illegible]

[illegible]	... ರೂ॥	೫—೦—೦
[illegible]		೦—೬—೦

[illegible] ವೆಂಕಟಾಚಾರ್, [illegible], ಬೆಂಗಳೂರು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.
ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತವಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ ಪ್ರಣೇತರಾದ,
ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲೀಷಿನಲ್ಲಿ ಪ್ರಚಾರಗೊಂಡಿರುವ ನಾವಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಪಾಠ್ಯವಾದದ್ದಾಗಿಯೂ ನವರಸ ಪರಿಪೂರ್ಣಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧–೮–೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮೆ॥ ತಿಂಗಯ್ಯ ಅಂಡ್ ಕೋ ಯವರಲ್ಲಾಗಲಿ ದೊರೆಯುವದು.

ಬಿಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸೀಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY AUGUST 10, 1885.

೧೮೮೫ನೇ ಆಗಸ್ಟ್ ೧೦ನೇತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂಸರಸಿನಾಕ್ಷಸಮಂತಾತ್ಪ್ರಸೂತೆ ಪಾಣಿತ್ವದುಪ್ರಿಗಿರೆಸೇರುವಹೋಪ್ರಣಾಮುಷ್ಯತ್ವಾಮ ಮಮಮಹಾನಮಸ್ಕರಾಮಿ ತ್ವಾಮುವನ್ ಮಿಹರ ೞಂಜನವಿತ್ವಮೇಮ॥

THE LATE MAHARAJA OF TRAVANCORE.

ತಿರುವಾಂಕೂರ್ ಮಹಾರಾಜರವರಾದ ಘನವನ್ನೆ ಐದಿವ ಶ್ರೀ ಪದ್ಮನಾಭದಾಸ ವಂಚಿ ಬಲರಾಮವರ್ಮ ಕುಲಶೇಖರ ಕಿರೀಟಪತಿ ಮನ್ನೇ ಸುಲ್ತಾನ್ ಮಹಾರಾಜರಾಜಾ ರಾಮರಾಜಬಹದೂರ್ ಷಂಷೇರ್‌ಜಂಗ್ ಗ್ರಾಂಡ್ ಕಮಾಂಡರ್ ಆಫ್ ದಿ ಮೋಸ್ಟ್ ಎಗ್ಸಾಲ್ಟೆಡ್ ಆರ್ಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾಯವರು ಮಾರ್ಚ್ ಮಹೀನೆ ನಾಲ್ಕನೇ ತಾರೀಖಿನ ದಿನ ಸಾಯಂಕಾಲ ೬॥ ಘಂಟೆಗೆ ನಶ್ವರವಾದ ತಮ್ಮ ಪಾಂಚಭೌತಿಕಶರೀರವಂ ತ್ಯಜಿಸಿ ನಿತ್ಯಾನಂದಮಯವಾದ ಶ್ರೀ ಅನಂತಪದ್ಮನಾಭ ಸ್ವಾಮಿಯವರ ಪಾದಾರವಿಂದವಂ ಸೇರಿದರೆಂಬ ವೃತ್ತಾಂತವಂ ಕೇಳುವದಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಮಹಾರಾಜರವರ ಮರಣ ವೃತ್ತಾಂತ ಶ್ರವಣದಿಂದ ಪರಿಕ್ಷುಬ್ಧವಾದ ನಮ್ಮ ಚಿತ್ತವೃತ್ತಿಯು ಎಂತಿರ್ದಪುದೋ ನಮ್ಮ ಶೋಕಪ್ರಕಾರ ಹಾವಭರನಾದುದೋ ಅದಂ ವಿವರಿಸುವಿಕ್ಕೆ ನಮ್ಮಲೇಖನಿಯು ಅಶಕ್ತವಾದದ್ದಾಗಿದೆ. ಮಹಾರಾಜರವರು ಈಗ್ಯೆ ಕೆಲವುದಿವಸಗಳಿಂದ ಅಪ್ರತೀಕಾರ ರೋಗದಾರ್ಬಲ್ಯದಿಂದ ವಿಧ್ವಸ್ತಸಕಲೇತರ ಪ್ರವೃತ್ತಿಯುಳ್ಳವರಾಗಿದಾರೆಂಬವೃತ್ತಾಂತವಂಕೇಳಿದಾಗಲೆಲ್ಲ ಶ್ರುತಿಷ್ಠರೋನ್ಮಿಷಿತ ವಿಘ್ನಾನಿಷ್ಟ ಶಂಕಾತುರರಾಗಿರುತಲಿದ್ದೆವು ಇಂತಾ ಅಕಾಲಮೃತ್ಯುವು ತನ್ನವಶೀಕರಣ ಶಕ್ತಿಯಿಂದ ಮಹಾರಾಜರ ಸಂತೋಷ,ಆರೋಗ್ಯ ದಾರ್ಢ್ಯಗಳನ್ನೆಲ್ಲ ನಾಶ ಮಾಡಿ,ಅಪ್ರತೀಕಾರ (ಪಾಂಡುರೋಗ) ರೋಗ ರೂಪವಾಗಿ ಸರ್ವಾಂಗದಲ್ಲಿಯೂ ವ್ಯಾಪಿಸಿಕೊಂಡು ಪ್ರತಿಕ್ರಿಯೆಗಳಂ ಸಡ್ಡೆಗೈಯದೆ, ಕ್ರಮಕ್ರಮೇಣ ಅವರ ಶರೀರಸ್ಥಿತಿಯೊಳು ಶೋಚಸೂಚನೆಗಳಿಗೆ ಬಲವಾಗಿ ತದ್ವಿರುದ್ಧ ಚಿನ್ಹೆಗಳನ್ನುಂಟುಮಾಡುತ ಕಡೆಗೆ ಅಪ್ರತಿಹತವಾದ ಸ್ವಶಕ್ತಿಯಂ ವಿನಿಯೋಗಿಸಿ ಸ್ವಾಧೀನಪಡಿಸಿಕೊಂಡಿತು. ಲೋಕದೊಳು ಆಪ್ತಜನ ವಿಯೋಗವು ಸಾಮಾನ್ಯತಃ ಸರ್ವಜನ ಮನೋವ್ಯಥಾಕಾರಿಯಾಗಿರುತಿದೆ. ಅದೇ ಪುನಸ್ಸಂದರ್ಶನ ಪ್ರತ್ಯಾಶಾವಕಾಶ ಶೂನ್ಯವಾಗುವ ಪಕ್ಷದಲ್ಲಿ ಶೋಕಕಾರಣವಾಗುವದರಿಂದ ಅದು ದುಸ್ಸಹವಾಗಿ ಪರಿಣಮಿಸುತಿದೆ. ಅದಂ ಅನುಭವಿಸುವವರ ಹೃದಯಗುಣಾನುಗುಣವಾಗಿಯೂ, ಪ್ರಕೃತ್ಯನುರೂಪವಾಗಿಯೂ, ವಿವೇಕಜ್ಞಾನಾನುಸಾರಿಯಾಗಿಯೂ, ಅವರವರಿಗೆ ಭಿನ್ನಭಿನ್ನಾವಸ್ಥೆಗಳಂ ಹುಟ್ಟಿಸುವದು. ಹ್ಯಾಗುದರೆ, ಕೆಲವರು ಅದರಿಂದ ಪ್ರಬಲಾನಿಷ್ಟವಂ ಪಡೆಯುತ್ತಾರೆ. ಅನ್ಯರು ಯಾವಜ್ಜೀವವೂ ದುಃಖಿಸುತ ತತ್ಪ್ರಯುಕ್ತಗಳಾದ ಶಾರೀರಕರೋಗಗಳಿಂದ ಕ್ಷಯಿಸುವರು. ಮತ್ತು ಕೆಲವರು ಕಾಲಕ್ರಮದಿ ಶೋಕಕ್ಷೈಯವನ್ನೈದುವರು. ಇನ್ನು ಕೆಲವರು ತತ್ಕಾಲದಲ್ಲೇ ಅಂತಾ ದುಃಖೋತ್ಪತ್ತಿ ವಿನಾಶಗಳಂ ಹೊಂದುವರು. ಬೇರೆ ಕೆಲವರು ತಮಗೆ ಅಂತಾ ವಿಷಯಗಳು ಸಂಭವಿಸಿದಾಗ ಕೇವಲ ನಿರ್ವಿಕಾರಪ್ರದಯರಾಗಿರುವರು ಯದ್ಯಪಿ ಈ ಚರ್ಯೆಯು ಲೋಕವಿಲಕ್ಷಣವಾಗಿಯೂ, ಶ್ಲಾಘ್ಯತಮವಾಗಿಯೂ ಇರುತಿದೆ. ಇದು, ಪ್ರಾಪಂಚಿಕ ಸಕಲವಿಷಯಸ್ವರೂಪ ತತ್ವಜ್ಞಾನದ ದೆಸೆಯಿಂದ ನಿರ್ವಿಕಾರ ಚಿತ್ತತೆಯಿಂದು, ಅದರ ಅಜ್ಞಾನದ ದೆಸೆಯಿ ದ ಶುದ್ಧವಾಗಿ ಕಾಷ್ಠ ಪಾಷಾಣ ಸಾಧರ್ಮ್ಯವನ್ನು ವಹಿಸುವಿಕೆ

ಹಿಂದು, ಈಪ್ರಕಾರ ಯೆರಡುಬಗೆಯಾಗಿರುವದ ರಿಂದ, ಇವುಗಳೊಳು ಪ್ರಥಮಪ್ರಕಾರವೇ ಸರ್ವ ಶ್ಲಾಘ್ಯವೇ ಹೊರತು ಯೆರಡನೆಯದನ್ನು ಪಶು ಪಕ್ಷ್ಯಾದಿ ತಿರ್ಯಗ್ಜಂತುಗಳು ಸಹ ಪಡೆಯಲಾರ ವು. ಇಂತಾ ಪ್ರಾಥಮಿಕ ಚರ್ಯೆಯುಳ್ಳವರು ಈ ಲೋಕದಲ್ಲಿ ಪ್ರಾಯಶಃ ಮೃಗ್ಯರಾಗಿರುವದ ರಿಂದ ಅಂತವರ ವಿಷಯವಾದ ಪ್ರಸಂಗವು ನಮ ಗೆ ಆವಶ್ಯಕವಿಲ್ಲವು ಪರಂತು ಸುಖದುಃಖಾದಿ ಕಾರಣೀಭೂತ ವಿಷಯಗಳು ಪ್ರಾಪ್ತವಾದಾಗ ಕ್ಷಣಿಕಗಳಾದ ತತ್ತತ್ಕಾರ್ಯಗಳನ್ನು ಪಡೆಯುವಿ ಕೆಯು ಮನುಷ್ಯಪ್ರಕೃತಿ ಧರ್ಮವೆಂಧು ನಮ್ಮ ಪು ರಾಣೇತಿಹಾಸಾದಿ ಗ್ರಂಥಗಳಿಂದ ತಿಳಿಸಲ್ಪಟ್ಟಿರು ವದಲ್ಲದೆ ನಮ್ಮ ಅನುಭವವೂ ಅದಕ್ಕೆ ಸಾಕ್ಷಿಯಾ ಗಿರುವದರಿಂದ ಸರ್ವವಿಷಯ ಸ್ವರೂಪವನ್ನು ಚ ನ್ನಾಗಿ ಅರಿತವರು ಇದಕ್ಕಾಗಿ ಶೋಕಿಸದಿರಲಾರ ರು. ಮಾನವರೊಳು ಯಾರುಕುರಿತು ಅಭಿಜ್ಞ ರು ದುಃಖಿಸಬೇಕೋ, ಯಾರುಕುರಿತು ಸಂತೋ ಷಿಸಬೇಕೋ ಅದು ಆಲೋಚಿಸಿದರೆ, ತನ್ನ ವ ರ್ಣಾಶ್ರಮೋಚಿತಗಳಾಗಿಯೂ, ಬಾಧುಮಿತ್ರರಿಗೆ ತೃಪ್ತಿಕರಗಳಾಗಿಯೂಇರುವ ಯಾವಕಾರ್ಯಗಳ ನ್ನು ಮಾಡಬೇಕೋ, ಯಾವವನ್ನು ಆರ್ಜಿಸಬೇ ಕೋ, ತ್ಯಾಗ ಇಡಬೇಕೋ, ಯಾವವನ್ನು ಪಡೆ ಯಬೇಕೋ ಅಂತವುಗಳನ್ನು ಮಾಡದೆಯೂ, ಅವುಗಳನ್ನು ಆರ್ಜಿಸದೆಯೂ, ಹಾಗೆ ವರ್ತಿಸ ದೆಯೂ, ಅವನ್ನು ಪಡೆಯದೆಯೂ, ಪ್ರಪಂಚ ದೊಳು ವ್ಯರ್ಥವಾಗ್ರಯಾಗಿ ಗತಿಸಿದವನನ್ನು ಕುರಿತು ದುಃಖಿಸಬೇಕಾಗುತಿದೆ. ಹಾಗಿಲ್ಲದೆ ಸ ಕಲವಿಷಯಗಳೊಳಗೂ ಸಾರ್ಥಕ್ಯವು ಪಡೆ ಸಿ ಯಾತಾಯುಷ್ಯತೊ ತನ್ನ ಗೌರವ ಸುಖ ಸಂತೋಷಾದಿ ಭಾಗ್ಯಕ್ಕೆ ಸ್ವಲ್ಪವೂ ಚ್ಯುತಿಯಿ ಲ್ಲದೆ ಗತಿಸಿದವನಕುರಿತುಚಿಂತಿಸುವದು ಯೋ ಗ್ಯವಲ್ಲವೆಂದು ಈಸಂದರ್ಭದಲ್ಲಿ ಸವಿನಯ ರಾಜ ಕುಶಲನರಿಗೆ ತಿಳಿಸದಿರಲಾರೆವು

ಇಂಡ್ಯದೇಶದ ಸಂಸ್ಥಾನಾಧಿಪತಿಗಳಲ್ಲಿ ಅ ತ್ಯಂತ ಗೌರವ್ಯರಾಗಿಯೂ, ಸೌಲಭ್ಯ, ಸೌಶೀ ಲ್ಯ, ನಯ, ವಿನಯ, ವಿದ್ಯಾ, ಗಾಂಭೀರ್ಯ, ಧರ್ಮನೀತಿ ಪ್ರಭೃತಿ ಗುಣಗಳೊಳು ಪ್ರಾಯೇಣ ಅಸಮಾನರೆನಿಸಿಕೊಂಡಿದ್ದ ಈ ಮಹಾರಾಜರವ ರು,ತಿರುವಾಂಕೂರು ಸಿಂಹಾಸನವನ್ನು ಅಧಿರೋ ಹಿಸಿ ಈಗ್ಯೆ ೫ಸಂವತ್ಸರಗಳು ಒಂದು ತಿಂಗ ಳಕಾಲವಾದರೂ, ಇದರೊಳಗಾಗಿ ತಮ್ಮ ರಾಜ್ಯ ಪಾಲನಾ ಕ್ರಮದಿಂದ ಬ್ರಿಟಿಷ್ ಗವರ್ನಮೆಂಟಿನ ವರ ಪ್ರೀತಿ ಗೌರವ ವಿಶ್ವಾಸಗಳಿಗೆ ಪಾತ್ರರಾಗಿ ದ್ದರಲ್ಲದೆ ತಮ್ಮ ಉತ್ತಮಗುಣಗಳಿಂದ ಸ್ವಪ್ರಜೆ ಗಳಿಗೂ,ಅನ್ಯರಿಗುಸರು ಕೇವಲ ರಂಜಕರಾಗಿ ಅ ವರ ಭಕ್ತಿವಿಶ್ವಾಸಗಳಿಗೆ ಪಾತ್ರರಾಗಿದ್ದರು. ಈ ಮಹಾರಾಜರವರು ತಮ್ಮ ಪಟ್ಟಾಭಿಷೇಕ ಕಾಲ ದಲ್ಲಿ ವ್ಯಕ್ತಪಡಿಸಿದ ಕೆಲವು ಅಂಶಗಳು ಈಗಲೇ ಅವರ ಮುಖದಿಂ ಕೇಳುವಂತಿರುವದರಿಂದ ಅವು ಗಳನ್ನಿಲ್ಲಿ ಅನುವದಿಸುವೆವಾಗಿ ಅದರಿಂದ ಅವರ ಮನೋಗತಭಾವವು ಏತದ್ರೂಪವಾದದ್ದಾಗಿತ್ತೆಂ ದು ವ್ಯಕ್ತವಾಗುತಿದೆ —

[illegible]

[illegible]

ತಿರುವಾಂಕೂರ್‌ರಾಜವಂಶವು ಅನುಸ್ಯೂತವಾಗಿ ಶ್ರೀಪದ್ಮನಾಭಸ್ವಾಮಿಯವರಡಿಸರಿನಲ್ಲಿ ಹಿಂದೂ ಅರಸರಿಂದಲೇ ಪಾಲಿಸಲ್ಪಡುತ ಬರುವದರಿಂದ ಅ ನ್ಯರಾಜರಸಂಬಂಧಕ್ಕೆ ಅಲ್ಲಿಸ್ವಲ್ಪವೂ ಅವಕಾಶವಿ ಲ್ಲದೇಹೋಯಿತು. ಇದರಿಂದ ಅಲ್ಲಿನಕ್ರಮಗಳಿಗೂ ಇತರರಾಜ್ಯಗಳ ಕ್ರಮಗಳಿಗೂ ಬಹಳತಾರತಮ್ಯ ನೆಲಗೊಂಡಿರುತಿವೆ ತಿರುವಾಂಕೂರ್‌ಸಿಂಹಾಸನವು ಶ್ರೀ ರಾಮರಾಜರಿಂದಾರ್ಜಿತವಾದದ್ದಾಗಿರುತಿದೆ. ೫೦೦೦ಸಲ ಮೈಲುಗಳ ವಿಸ್ತೀರ್ಣವುಳ್ಳ ಫಲ ವತ್ತಾದ ಈ ರಾಜ್ಯದಲ್ಲಿ ಸಾಲಿಯಾನಾ ೬೫ ಲಕ್ಷ ರೂಪಾಯಿಗಳು ಹುಟ್ಟುವಳಿಯಾಗುತಿವೆ ಕೇರಳ ದರ್ಮಶಾಸ್ತ್ರವನ್ನನುಸರಿಸಿ ರಾಜ್ಯಾ ಧಿಕಾರವು ಸ್ತ್ರೀ ಸಂತತಿಯಲ್ಲಿ ಜ್ಯೇಷ್ಠ ಪು ತ್ರರಿಗೆ ಸೇರಿದ್ದಾಗಿರುತಿದೆ ಇಂತಾ ಮರಿಮ ಕ್ಕದಾಯ ಸಂಪ್ರದಾಯದಿಂದ, ಔರಸಪುತ್ರರಿ ದ್ದಾಗ್ಯೂ ಅವರು ರಾಜ್ಯಾಧಿಕಾರಿಗಳಾಗುವದ ಲ್ಲವು ಪ್ರಸಕ್ತ ಮಹಾರಾಜರವರ ಅಣ್ಣಂ ದಿರವರು ೧೮೬೦ನೇ ಇಸವಿಯಲ್ಲಿ ಪಟ್ಟಾಭಿಷಿ ಕ್ತರಾದರು. ಇವರು ೧೮೮೦ನೇ ಇಸವಿಯತನಕ ಪ್ರಭುತ್ವ ಮಾಡುತಿದ್ದು ಕಾಲಗತಿಯನ್ನೈದಿ ದಕೂಡಲೇ ಇವರ ತಮ್ಮಂದಿರಾದ ಈಗ ಗತಿಸಿದ ಮಹಾರಾಜರಿಗೆ ಪಟ್ಟಾಭಿಷೇಕವಾಯಿತು. ಜಗ ದ್ವಿಖ್ಯಾತರಾದ ಈ ಮಹಾರಾಜರವರು ಸ ೧೮೩೭ನೇ ಸಂವತ್ಸರದಲ್ಲಿ ಜನಿಸಿ, ಪ್ರಸಿದ್ಧ ರಾದ ರಾಜಾ ಸರ್. ಟಿ. ಮಾಧವರಾಯರವರ ಖ್ಯಾ ಖ್ಯಾತವಾದ ಶಿಕ್ಷಾ ಕ್ರಮದೊಳು, ಇಂಗ್ಲಿಷ್, ತೆಲುಗು, ಸಂಸ್ಕೃತ, ಮಲಯಾಳ, ದ್ರಾವಿಡ, ಹಿಂದುಸ್ತಾನಿ ಮುಂತಾದ ಭಾಷೆಗಳನ್ನು ಸಾಂಗ ವಾಗಿ ಅಭ್ಯಾಸಮಾಡಿ, ಪಟುತರವಾದ ಮೇಧಾ ಶಕ್ತಿಯಿಂದಲೂ, ಚತುರಿಮಗರಿಮಗಭೀರತಾ ದಬುದ್ಧಿವಿಶೇಷದಿಂ ಶೋಭಿಸುತ, ಅಸಾಧಾರಣ ವಾದಪ್ರಜ್ಞಾವೈಶಿಷ್ಟ್ಯದಿ ಪಡೆದು ಗ್ರಂಥಿತಕೀ ರ್ತಿಯಿಂ ಸಮೇತರಾಗಿ, ರಾಜ್ಯತಂತ್ರಜ್ಞರಾಗಿ, ಭಗವದ್ಭಕ್ತರೆನಿಸಿ, ೧೮೮೦ನೇ ಇಸವಿಯಲ್ಲಿ ರಾಜ್ಯಧು ರವನುಪರಿಗ್ರಹಿಸಿ, ಸಕಲರಿಂದಲೂ ಕೊಂಡಾಡಲ್ಪ ಡುತಲಿದ್ದು, ಪ್ರಾಪ್ತನೀಯರಾದ ಸಕಲಭೋಗ ಭಾಗ್ಯಗಳನ್ನೆಲ್ಲ ಅನುಭವಿಸಿ, ಸರ್ವಾತಿಶಾಯಿ ಯಾ ದಸದಿಂದ ೪೮ನೇವರುಷದೊಳುಕಾಲಗತಿ ಯನ್ನೈದಿದ್ದು ಯೆಂತವರಿಗೂ ಮನೋವ್ಯಥೆಯ ನ್ನುಂಟುಮಾಡದೆ ಹೋಗಲಾರದು. ಇವರ ನ ಷ್ಟವು ಅಪ್ರತೀಕಾರವಾದದ್ದಾಗಿ ಸಕಲರ ಹೃದ ಯದೊಳಗೂ ದೃಢತರವಾದಸ್ಥೆಯನ್ನೈದಿದ್ದಾ ಗಿರುತಿದೆ ಈ ಮಹಾರಾಜರವರು ಪಟ್ಟಾಭಿಷಿ ಕ್ತರಾದಮೇಲೆ ಕಾಶಿ ಕಲ್ಕತ್ತೆ ಮುಂತಾದಪ್ರಾಂ ಗಳಿಗೆಲ್ಲ ತಮ್ಮ ದಿವಾನರೊಡನೆ ಹೋಗಿ ತೀರ್ಥ ಯಾತ್ರೆಯಿಂ ಪೂರೈಸಿಕೊಂಡು ಬಂದರು ಇದ ಲ್ಲದೆ ಸರ್ವಪಾಪವಿನಾಶ ನಿಮಿತ್ತಕವಾದ ತುಲಾ ಭಾರದಾನವು ಮಾಡಿದರು. ಇವರು ವರ್ತಮಾನ ಕಾಲದ ವೈಲಕ್ಷಣ್ಯದಿಂ ತಮ್ಮ ಪೂರ್ವ ಸಂಪ್ರದಾ ಯಕ್ಕೆ ಚ್ಯುತಿ ಯುಂಟಾಗದಿರುವತನಕ ಪರಿ ಗ್ರಹಿಸತಕ್ಕವರಾಗಿದ್ದರು ಇವರಿಗೆ ಪ್ರೌಢವಾದ ಇಂಗ್ಲಿಷ್ ವಿದ್ಯಾ ಕೌಶಲ್ಯವು ದೃಢತರವಾದ ಅ ವರ ದೈವಭಕ್ತಿಯನ್ನೂ ಆಚಾರವನ್ನೂ ಕದಲಿಸ ಲಾರದೆ ಹೋಯಿತು. ಬಹುಮಂದಿ ಯೂರೋಪಿ ಯರುಗಳ ಪರಿಚಯ ಸಾಹಚರ್ಯಗಳು ಇವರಿಗೆ ಇದ್ದಾಗ್ಯೂ ಅವರಂತೆ ವರ್ತಿಸಬೇಕೆಂದು ಕೋ ರತಕ್ಕವರಲ್ಲವು

ಶ್ರೀಮನ್ಮಹಾರಾಜರವರು ಅತ್ಯಲ್ಪಕಾಲದಲ್ಲಿ ಯೇ ತಮ್ಮ ರಾಜ್ಯದ ಆಡಳಿತಕ್ರಮದೊಳು ಅ ನೇಕ ಬದಲಾವಣೆಗಳಂ ಮಾಡಿದರು. ಆಪೈಕಿ ಸಿ ಹ್ಮಾಸನಕ್ಕೆ ಬಂದಕೂಡಲೇ ಪೂರ್ವದೊಳಿದ್ದ ದಿ ವಾನರನ್ನು ಬದಲಾಯಿಸಿದ್ದು ಮೊದಲನೆಯದಾಗಿ ಯೂ, ಅಲ್ಲಿನಹೈಕೋರ್ಟು ಚೀಫ್‌ಜಡ್ಜಿ ಕೆಲಸಕ್ಕೆ ಅನ್ಯರೊಬ್ಬರನ್ನು ನೇಮಕರನ್ನಾಗಿ ಮಾಡಿದ್ದು ಎರಡನೆಯ ದಾಗಿಯೂ, ತಮ್ಮ ದೇಶದಲ್ಲಿ ಪೋಲೀಸ್‌ಬಂದೋ ಬಸ್ತಿಯನ್ನು ವೃದ್ಧಿಪಡಿಸಿ ಅದಕ್ಕೆ ಬೇಕಾದ ಜ ವಾನ್‌ಸಿಬ್ಬಂದಿಗಳನ್ನು ಮದರಾಸ್ ಪ್ರಾಂತದಿಂದ ಕರೆಯಿಸಿದ್ದು ಮೂರನೆಯದಾಗಿಯೂ ಇರುತಿದೆ. ಹೊಸದಾಗಿ ರೆವಿನ್ಯೂ ಸರ್ವೆಯನ್ನು ಏರ್ಪಡಿಸಿ ದೇಶದ ಹುಟ್ಟುವಳಿಯನ್ನು ಅಧಿಕಪಡಿಸಿದರು. ಗತ ಐದು ಸಂವತ್ಸರಗಳಕಾಲದಲ್ಲಿ ತಮ್ಮ ರಾಜ್ಯ ದ ಆಡಳಿತದೊಳು ಬಹುಮಂದಿ ಅನ್ಯದೇಶೀ ಯರಿಗೆ ವಿಶೇಷ ಅವಕಾಶವನ್ನುಂಟುಮಾಡಿದ ಪ್ರಸಕ್ತ ಶ್ರೀಮನ್ಮಹಾರಾಜರವರು ಇನ್ನೂ ಚಿರಕಾಲ ಜೀವಿಸಿದ್ದರುವರಾದರೆ ಮುಂದೆ ಬಹು ಮಂದಿ ಅನ್ಯರಿಗೆ ಕೇರಳೀಯರು ಸ್ಥಳವು ಕಲ್ಪಿ ಸಿಕೊಡಬೇಕಾಗುವದಾಗಿರುವದೋ ಅದು ನೋ ಡಬಹುದಾಗಿತ್ತು.

ಮಹಾರಾಜರವರ ಪ್ರಾಣೋತ್ಕ್ರಮಣಾನಂ ತರ ಅವರ ಮರಣಪರಿಮಿತಿಯಿಂ ಸೂಚಿಸುವಂತೆ ೪೮ ತೋಪೆಗಳು ದುಃಖಸೂಚನಾರ್ಥ ಹಾಕ ಲ್ಪಟ್ಟವು. ಮಹಾರಾಜವಿಯೋಗದಿಂದ ಪ್ರಜೆ ಗಳು ಬಹಳಖಿನ್ನರಾಗಿ ಕಳವಳಗೊಂಡಿರುವಂತೆ ತಿಳಿಯಬರುತಿವೆ. ಮಹಾರಾಜರ ಕಳೇಬರವು ರಾಜಾರ್ಹವಾದ ಪಾಲಖಿಯಲ್ಲಿ ದರ್ಶನಾರ್ಥ ಸಕಲ ಮರ್ಯಾದೆಗಳೊಡನೆ ರುದ್ರಭೂಮಿಗೆ ಸಾಗಿಸಲ್ಪ ಟ್ಟಿತು ದುಃಖಸೂಚಕವಾದ ಮಸ್ತಿನೊಡನೆ ನಾಯರ್ ಬ್ರಿಗೇಡ್ ಸೈನ್ಯವು ರುದ್ರಭೂಮಿಯತ ನಕ ಅನುವರ್ತಿಸಿಹೋಯಿತು. ಅಲ್ಲಿ ಪೂರ್ವ ಭಾವಿಯಾಗಿ ಪರಿಕಲ್ಪಿತವಾಗಿದ್ದ ಶ್ರೀಗಂಧದ ಚಿತೆಯಲ್ಲಿ ಮಹಾರಾಜರ ಕಳೇಬರವನ್ನು ಇಟ್ಟ ಕೂಡಲೇ ಅವರ ಭಾಗಿನೇಯರಾದ ಯೆಳೆಯರಾ ಜರವರು ಅಗ್ನಿಪ್ರದಾನಮಾಡಿದರು. ತಿರುವಾ ಯ ಬೇಕಾದಮಟ್ಟಿಗೆ ಅಭ್ಯಾಸಂತಿ ಮಾಡಲ್ಪ ಟ್ಟಿತು. ಮಾರನೆಯದಿನ ಯಥಾವಿಧಿ ಅಸ್ತಿಸಂ ಚಯನಾದಿ ಕ್ರಿಯೆಗಳುನಡೆದು ಅವರ ಅಸ್ತಿಗ ಳು ಕಾಶಿಗೆ ಕಳುಹಿಸಲ್ಪಟ್ಟವು ಹಿಂದೂಜಾತಿ ಮತಸಂಪ್ರದಾಯಗಳನ್ನನುಸರಿಸಿ ಪ್ರೇತಕರ್ಮ ಗಳೆಲ್ಲ ಸಾಂಗವಾಗಿ ನಡೆದವು ಗತ ಬುಧವಾರ ದದಿನ ಗೌರವಾರ್ಥ ಸಂಸ್ಥಾನದ ವಿಶಿಷ್ಟ ಆಫೀ ಸುಗಳಿಗೂ ಸ್ಕೂಲ್ ಮುಂತಾದವುಗಳಿಗೂ ರಜಾ ಕೊಡಲ್ಪಟ್ಟಿತು. ಮುಖ್ಯವಾಗಿ ಪ್ರಕೃತಸ್ಥಿತಿ ಯಲ್ಲಿ ಅಪ್ರತೀಕಾರ ದುಃಖಸಾಮುಲ್ಯದಿಂ ಅನವ ರತ ಸಂತಪಿಸುತಲಿರುವ ರಾಜ ಕುಟುಂಬದವರ ಮತ್ತು ಅವರ ಪ್ರಜೆಗಳಾದ ಕೇರಳೀಯರ ವಿಷಾ ದದೊಳು ನಾವೂ ಭಾಗಭಾಕ್ಕುಗಳಾಗಿರುವೆವು.

ಮುಂದೆ ಎಳೆಯರಾಜರು ಪಟ್ಟಾಭಿಷಿಕ್ತರಾ ಗಲಿಕ್ಕೆ ಸನ್ನದ್ಧರಾಗಿರುತ್ತಾರೆ. ಇವರು ಸಹ ಹಿಂದೆ ಒಂದುಸಲ ಇಲ್ಲಿಗೆ ಬಂದಿದ್ದು ಹೋದ ರಾಗಿ ಅವರನ್ನು ಇಲ್ಲಿನವರೆಲ್ಲರೂ ಪ್ರಾಯಶಃ ನೋಡಿರಬಹುದು. ಪೂರ್ವರಾಜರಂತೆ ಇವರೂ ಬಹಳ ಗುಣಜ್ಞರೆಂದು ಕೇಳುತ್ತೇವಾಗಿ, ಮುಂ ದೆ ಇವರ ಪಾಲನೆಯೊಳು, ಪ್ರಜೆಗಳು ಅಕ್ಷೀಣ ಗಳಾದ ಸುಖ ಸಂತೋಷಗಳನ್ನು ಪಡೆಯುವ ರೆಂದು ನಂಬುತ್ತೇವೆ. ಮುಂದೆ ಮಹಾರಾಜ ಪದವಿಯಲ್ಲಿ ಸುಪ್ರತಿಷ್ಠರಾಗತಕ್ಕ ಎಳೆಯರಾ ಜರವರನ್ನು ಆಯುರಾರೋಗ್ಯೈಶ್ವರ್ಯಾದಿಗಳಿಂದ ಅನುಗ್ರಹಿಸಿ ಪೂರ್ವ ಮಹಾರಾಜರುಗಳ ಧರ್ಮ ಕೀರ್ತಿಗಳನ್ನು ಪೋಷಿಸುವದಕ್ಕೆ ಅವರು ಸ ಮರ್ಥರಾಗುವಂತ ಕೃಪೆಗೈಯ ಬೇಕೆಂದು ಶ್ರೀ ಅನಂತಪದ್ಮನಾಭನು ಪ್ರಾರ್ಥಿಸುವೆವು.

BAGGED AT LAST

ಚಿತ್ರದುರ್ಗ ಸಿವಿ ಡಿವಿಜನ್ ಆಫಿಸರಾದ ಮೆ|| ನಾಮಕಲ್ ರಾಯರವರಮೇಲೆ ತರಲ್ಪಟ್ಟ ಕ್ರಿಮಿ ನಲ್ ಮೊಕದ್ದಮೆಯು ಚೀಫ್‌ಕೋರ್ಟವರ ಹು ಕುಂಪ್ರಕಾರ ಬೆಂಗಳೂರು ಡಿಸ್ಟ್ರಿಕ್ಟ್‌ಮ್ಯಾಜಿ ಸ್ಟ್ರೇಟರಿಂದ ಪುರಳ ವಿರ್ಚಾಪ್ತಿಮಾಡಲ್ಪಡುವ

ದಿತಲ್ಲೂ, ಮ॥ ರಿಕ್ಕೆಟಿಯವರ ನಿರ್ಣಯವು ಪ್ರಕೃತ ಮೊಕದ್ದಮೆಗೆ ಅನುಗುಣವಾದದ್ದಾಗಿರುವದೆಂದು ನಂಬುತ್ತೇವೆಂತಲೂ, ಕಳೆದತಿಂಗಳ ೬ನೇ ತಾರೀಖಿನ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಅದೇಪ್ರಕಾರ ಈಚೆಗೆ ಸದರೀ ಮೊಕದ್ದಮೆಯು ಬರ್ಖಾಸ್ತೀಯಾಗಿ ಅವರಮೇಲೆ ಇದ್ದ ಶಿಕ್ಷೆಗಳು ಅಮಾದನೆಯಾಗಿ ಆಯಾತಕ್ಸೀರುಗಳಸ್ವರೂಪಾನುಗುಣವಾಗಿ ಹಿಟ್ಟುಲಿಂರೂಪಾಯಿಗಳ ಜುರ್ಮಾನೆಹಾಕಲ್ಪಟ್ಟಿತು. ಇವರು ಸಾಬಕ ರೆಸಿಡೆಂಟರಾದ ಸರ್. ಜೇಂಸ್ ಗಾರ್ಡನ್‌ಯವರ ಆಶ್ರಿತರಾಗಿಯೂ, ಸೇಲಂ ಡಿಸ್ಟ್ರಿಕ್ಟ ನಿವಾಸಿಯಾಗಿಯೂ, ಬಳ್ಳಾರಿ ಡಿಸ್ಟ್ರಿಕ್ಟ ಪೋಲೀಸ್ ಇಲಾಖೆಯಲ್ಲಿ ಮೊದಲು ಹೆಡ್ ಕಾನ್ಸ್ಟೇಬಲ್ ಆಗಿ ದಾಖಲಾದವರಾಗಿಯೂ, ಸನ್ ೧೮೭೩ನೇ ಇಸವಿಯಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಪೋಲೀಸ್ ಇನ್ಸ್ಪೆಕ್ಟರಾಗಿ ಮೊಕರರಾಕ್ರಮೆಲ್ಪಟ್ಟು ಕ್ರಮೇಣ ಮುಂದಕ್ಕೆ ಬಂದವರಾಗಿಯೂ ಇರುತ್ತಾರೆ. ಇವರು ಈ ದೇಶವಲ್ಲಿ ಮಾಡಿದ ಪೆಹನ್ನತಿ ಪೋಲೀಸ್ ಇಲಾಖೆಯಲ್ಲಿ ಅಧಿಕವಾದದ್ದಾಗಿದ್ದರೆ, ಮುನ್ನೀ ಐವಳತವಲ್ಲಿ ಬಹಳ ಕಡಮೆಯಾದದ್ದಾಗಿರುತಿವೆ. ಇದಲ್ಲದೆ ಇವರು ಯಾವಾಗಲೂ ದುರಾಗ್ರಹ ಪ್ರಿಯರಾಗಿಯೂ, ದುರಭಿಮಾನ ಪ್ರಿಯರಾಗಿಯೂ ಇರುತ್ತಾರೆಂದು ಪ್ರಜೆಗಳೆಲ್ಲರೂ ಭಾವಿಸುತ್ತಿರುತ್ತಾರೆ. ಲೋಕದೊಳು ಯಾವನೇ ಒಬ್ಬ ತಕ್ಸೀರು ಮಾಡಿದವನು ಅದರಫಲವನ್ನನುಭವಿಸಬೇಕಾದ್ದು ನ್ಯಾಯ್ಯವಾಗಿದ್ದರೂ, ಮಹಾರಾಜರವರ ದೌಲತ್ತಿನಲ್ಲಿ ಒಂದು ಸಬ್‌ಡಿವಿಜನಿಗೆ ಸರ್ವಾಧಿಕಾರಿ ಯೆನಿಸಿಕೊಂಡಿರುವ ನೇಟಿವ್ ಆಫೀಸರೊಬ್ಬರು ಕ್ರಿಮಿನಲ್ ಮೊಕದ್ದಮೆಯಲ್ಲಿ ಸಜಾ ಶಿಕ್ಷಿಸಲ್ಪಟ್ಟರೆಂದು ಪ್ರಸಿದ್ಧಿಗೆ ಬರುವದು ಸಿವಿಲ್ ಸರ್ವಿಸ್ ವಿಚಾರಣಾಕ್ರಮಕ್ಕೂ ನೇಟಿವ್ ಸಮುದಾಯಕ್ಕೂ ಅವಮಾನಕರವಾಗಿರುತಿದೆ. ತತ್ರಾಪಿ ಇವರ ವಿಷಯದಲ್ಲಾದರೋ, ಇಲ್ಲಿನ ಉನ್ನತಾಧಿಕಾರಿಗಳು ಬಹಳ ಅಭಿಮಾನಪ್ರಿಯರಾಗಿದ್ದರೆಂತಲೂ ಇಂಡ್ಯ ಗವರ್ನಮೆಂಟಿನವರಿಂದ ಇವರಿಗೆ ರಾಯಬಹದೂರ್ ಯೆಂಬ ಪ್ರಾಶಸ್ತ್ಯವನ್ನು ಕೊಡಿಸಬೇಕೆಂಬ ಸಂಕಲ್ಪ ಪ್ರಿಯರಾಗಿದ್ದರೆಂತಲೂ ಕೇಳುವದಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಅನುಭವ ಪೂರ್ವಕವಾದ ತಿಳುವಳಿಕೆ ಇಲ್ಲದೆ ಯಾವದೋ ಒಂದು ಅಭಿಮಾನದಮೇಲೆ, ಬೇಕಾದವರನ್ನೆಲ್ಲ ಪುರಸ್ಕರಿಸಲಾರಂಭಿಸತಕ್ಕವರು ಕಡೆಗೆತಾವೇ ಪ್ರಜೆಗಳಲ್ಲಿ ಲಾಘವವನ್ನು ಹೊಂದುವರು. ಇವರ ಅಧಿಕಾರಕ್ರಮದಲ್ಲಿ ಚಿತ್ರದುರ್ಗದ ಪ್ರಜೆಗಳಿಗೆ ಬಹಳ ಅತೃಪ್ತಿಯುಂಟಾಗಿರುವದರಿಂದ ಇನ್ನುಮೇಲೆ ಮ॥ಸಾಮರಾಯರನ್ನು ಸದರೀ ಸಬ್‌ಡಿವಿಜನ್ ಚಾರ್ಜಿನಲ್ಲಿಟ್ಟರೆ ಮುಂದೆ ಅವರಿಗೂ, ಅವರ ಅಧಿಕಾರಕ್ಕೆ ಒಳಪಟ್ಟಿರತಕ್ಕ ಪ್ರಜೆಗಳಿಗೂ ಸುತರಾಂ ಕ್ಷೇಮವುಂಟಾಗಲಾರದು.

A DOUBT REMOVED.

ಮಾಹೇಮದಕೂರ್ ೩ನೇ ತಾರೀಖಿನಲ್ಲಿ, ಡಿಪಾರ್ಟ್ ಬಹದೂರ್ ಮ॥ ರಘುನಾಥರಾಯರವರು ಬರೆಯುತ್ತಾರೇನಂದರೆ:—

"ಕಳೆದತಿಂಗಳ ಉತ್ತರಭಾಗದಲ್ಲಿ ನಾನು ಅಲ್ಲಿಗೆ ಬಂದಿದ್ದಾಗ್ಯೆ ಬೆಂಗಳೂರಲ್ಲಿರುವ ಪಂಡಿತರಿಗೂ ನನಗೂ ನಡೆದ ಶಾಸ್ತ್ರಾರ್ಥ ವಿಚಾರದ ಮಧ್ಯೆ ಬಂದಂಶವನ್ನು ಅವರಿಗೆ ತಿಳಿಸಬೇಕಾದಷ್ಟು ಅವಕಾಶ ಪ್ರಾಪ್ತಾಯಿತೇನಂದರೆ—ಈಗ ಹಿಂದೂಗಳು ನಂಬಿರುವಂತೆ ಈ ಪ್ರಪಂಚದ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣಭೂತನಾದಂತಾ ಪರಮಾತ್ಮನಾದ ಶ್ರೀ ಕೃಷ್ಣನಿಗೆ, ಶ್ರೀಲಕ್ಷ್ಮೀ ಅವತಾರವಾದ ಮತ್ತು ಆತನ ಪಟ್ಟಮಹಿಷಿಯಾದ ರುಕ್ಮಿಣೀದೇವಿಯ ಗರ್ಭದಲ್ಲಿ ಪ್ರದ್ಯುಮ್ನನೆಂಬ ವೊಬ್ಬ ಕುಮಾರನು ಜನಿಸಿದನು. ಆಪುತ್ರನು ಶಂಬರಾಸುರನ ಭಾರ್ಯೆಯನ್ನು ವಿವಾಹಮಾಡಿಕೊಂಡನು. ಸದರೀ ವಿವಾಹ ಕಾಲದಲ್ಲಿ ಅದು ಶಾಸ್ತ್ರೀಯವಾದದ್ದೇಯೆಂದು ಶ್ರೀರುಕ್ಮಿಣೀದೇವಿಯು ತನ್ನ ವಲ್ಲಭನು ಕುರಿತು ಪ್ರಶ್ನೆ ಮಾಡಲು ಆಗ ಯದುನಾಥನೂ ನಾರದರೂಸೇರಿ ಈಕೆ ವಿವಾಹಿತಳಾದರೂ, ಕನ್ಯೆಯಾಗಿ, ಅಂದರೆ ಪತಿಸುಪರ್ಕರಹಿತಳಾಗಿದ್ದದರಿಂದ ಮರಳಿ ಇವಳಿಗೆ ವಿವಾಹಮಾಡುವದು ಚಿತವಲ್ಲದೆ ಆರ್ಷನಿಬಂಧನೆಯಂತೆ ಈ ಪರಿಣಯವು ಶಾಸ್ತ್ರಸಮ್ಮತವಾದದ್ದೆಂದು ತೀರ್ಮಾನಿಸಿದರು. ಹೀಗೆ ವಿವಾಹಿತರಾದ ದಂಪತಿಗಳ ಗರ್ಭದಲ್ಲಿ ಜನಿಸಿದ ಪೌನರ್ಭವನಾದ ಅನಿರುದ್ಧನು ಬ್ರಹ್ಮನೆಂದು ಹೇಳದ್ದಕ್ಕೆ ಇದು ಅನೇಕರು ಸಂದೇಹಿಸಿದರು. ಪರಂತು ಈ ಅಂಶವನ್ನು ಸಪ್ರಮಾಣವಾಗಿ ಪಂಡಿತರಿಗೆ ನಿರೂಪಿಸರಿಕ್ಕೆ ಬೇಕಾದ ಗ್ರಂಥವು ಆಗ್ಯೆ ನನ್ನಬಳಿ ಸಿದ್ಧವಾಗಿ ಇಲ್ಲದೇಹತ್ತು. ಅದನ್ನು ಈಗ ಸಪ್ರಮಾಣವಾಗಿ ಇದರಡಿ ತಿಳಿಸುವೆನಾಗಿ ಸಕಲ ಜನಗಳ ತಿಳುವಳಿಕೆಯಬಗ್ಯೆ ಅದನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಪ್ರಾರ್ಥಿಸುತ್ತೇನೆ.

> ಬ್ರಹ್ಮವೈವರ್ತಪುರಾಣೆ, ಕೃಷ್ಣಜನ್ಮಖಂಡೆ, ಉತ್ತರಾರ್ಧೇ, ಅ. ೬೦ ಶ್ಲೋ॥ ೧.
> ಕೃಷ್ಣಪುತ್ರಶ್ಚ ಪ್ರದ್ಯುಮ್ನೋ ಮಹಾವರದಾತ್ರಮಃ ॥ ತತ್ಪುತ್ರೋಽನಿರುದ್ಧಶ್ಚ ವಿಧಾತುರಂಶಪವಚ॥
>
> ೮॥ ೧೮೨. ಶ್ಲೋ॥ ೧೯.
> ಅನಿರುದ್ಧಸ್ಯ ಯಂ ಬ್ರಹ್ಮಾ ಪ್ರದ್ಯುಮ್ನಃ ಕಾಮುಪವಚ ॥ ಬಲದೇವಸ್ಯ ಯಂ ಶೇಷಃ ಕೃಷ್ಣಶ್ಚ ಪ್ರಕೃತೇಃ ಪರಃ॥

ಆರ್. ರಘುನಾಥರಾವ್.

ಪೂರ್ವೋಕ್ತ ಪುರಾಣವಾಕ್ಯವನ್ನು ಪರ್ಯಾಲೋಚಿಸಿನೋಡಲಾಗಿ ಅನಿರುದ್ಧನುಸಾಕ್ಷಾದ್ಬ್ರಹ್ಮಾವತಾರವೆಂಬ ಅಂಶ ಸ್ಪಷ್ಟವಾಗುತಿದೆ. ಪ್ರದ್ಯುಮ್ನನು ಶಂಬರಾಸುರನ ಭಾರ್ಯೆಯಂ ಪರಿಗ್ರಹಿಸಿದ ಅಂಶ ಪ್ರಸಿದ್ಧವಾಗಿರುವದರಿಂದಲೂ ಅವರ ಪುತ್ರ ಅನಿರುದ್ಧನೆಂಬವರೊಳಕ್ಯುವಾತ್ರವೂ ಸಂಶಯವಿಲ್ಲದೆಇರುವದರಿಂದಲೂ, ಪುರುಷ ಸುಪರ್ಕರಹಿತರಾದ ಬಾಲವಿಧವೆಗಳಿಗೆ ಮರಳಿವಿವಾಹಮಾಡಬಹುದೆಂಬ ವಿಷಯ ಮೇಲೆಕಂಡಾತಾವರಿಗೆಲ್ಲ ಅಭಿಮತವಾಗಿದ್ದು ಅವರವೇಪ್ರಕಾರ ವ್ಯವಹಾರದೊಳು ತಂದಿದ್ದಂತೆ ವ್ಯಕ್ತವಾಗುತಿದೆ. ಪೌನರ್ಭವನಾದ ಅನಿರುದ್ಧನು ಬ್ರಹ್ಮನೆಂದು ಹೇಳುವದರ ವಾಕ್ಯವನ್ನು ಅನುಮಾನಿಸಿದ ಪಂಡಿತರೆಲ್ಲರೂ ಮೇಲೆಕಂಡ ಪ್ರಮಾಣ ವಚನದಿಂದ ತೃಪ್ತರಾಗುವರೆಂದು ನಂಬುತ್ತೇವೆ.

RAILWAY SHEDS.

ಕೆಲವು ರೆಯಿಲ್ವೆ ಸ್ಟೇಷನ್‌ಗಳ ಆವರಣಗಳೊಳು ಸತ್ರಗಳಂ ಕಟ್ಟಿಸಿ ಅವುಗಳಲ್ಲಿ ನೇಟಿವ್ ಪ್ರಯಾಣಸ್ಥರು ಭೋಜನಮಾಡಿಕೊಳ್ಳಂತು ಹೋಗುವದಕ್ಕೆ ವ್ಯವಧಾನವನ್ನುಂಟುಮಾಡಬೇಕೆಂದು ಕಳೆದ ಹನ್ನೆರಡುಸಂವತ್ಸರಕಾಲವಾಗಿ ಮದರಾಸ್ ರೆಯಿಲ್ವೆ ಕಂಪನಿಯ ಅಧಿಕಾರಿಗಳಂ ಪ್ರೇರಿಸುತಲಿದ್ದೆನು. ಈಅಧಿಕಾರಿಗಳು ನನ್ನ ಸ್ನೇಹಿತರಾಗಿಯೂ ನನ್ನ ಉದ್ದೇಶವನ್ನು ಅನುಮೋದಿಸತಕ್ಕವರಾಗಿಯೂ ಇದ್ದಾಗ್ಯೂ, ರೆಯಿಲ್ವೆ ಮುಖ್ಯವಳಯಲ್ಲಿಕೆ ಸೇರಿತಾ ಕೂಲಿ ಭತ್ಯೆ ರೂಪಾಯಿಗಳಿಗಿಂತಲೂ ಅಧಿಕವಾಗಿ ಕೊಡುವದನಗಳಿಗೆ ಅತ್ಯಂತಾವಶ್ಯಕವಾಗಿರುವ ಸದರೀ ಅನುಕೂಲ್ಯತು ಕಲ್ಪಿಸಿಕೊಡುವದು ರೆಯಿಲ್ವೆ ಕಂಪನಿಯವರಿಗೆ ಕರ್ತವ್ಯವಾಗಿರುತಿದೆಯೆಂದು ಅವರನ್ನು ಸಮ್ಮತಿಗೊಳಿಸಲಾರದೆಹೋದೆನು.

ಈಚೆಗೆ ಕೆಲವುದಿನಗಳಹಿಂದೆ ಈವಿಷಯವನ್ನು ಕುರಿತು ಮರಳಿ ವಿಚಾರಮಾಡಿದೆನು. ನೇಟಿವ್‌ಜನಗಳು ಸದರೀ ಅನುಕೂಲ್ಯಗಳನ್ನುಪಯೋಗಿಸಿಕೊಂಡು ಅವುಗಳಲ್ಲಿನ ಶಿಬ್ಬಂದೀ ಖರ್ಚು ಮತ್ತು ಪ್ರಯಾಣಸ್ಥರ ಆಹಾರದ ಖರ್ಚುಗಳನ್ನು ವಹಿಸುವದಾಗಿ ಭರವಸೆಕೊಡುವ ಪಕ್ಷಕ್ಕೆ, ಮೇಲಿನ ಅನುಕೂಲ್ಯಗಳು ಉಂಟುಮಾಡಲ್ಪಡುವವೆಂದು ನಿರೀಕ್ಷಿಸುತ್ತೇನೆ. ನೇಟಿವ್‌ಜನಗಳು ಹಾಗೆ ಮಾಡದಪಕ್ಷಕ್ಕೆ, ಪ್ರಯಾಣಸ್ಥರು, ಅಂತಾ ಅನುಕೂಲ್ಯವನ್ನನುಭವಿಸದೆ ಹೋಗುವದರಮೂಲಕ ರೆಯಿಲ್ವೆ ಕಂಪೆನಿಯವರಿಗೆ ಉಂಟಾಗಬಹುದಾದ ನಷ್ಟವನ್ನು ವಹಿಸಬೇಕಾಗುವದು. ಮದರಾಸ ರೆಯಿಲ್‌ಮಾರ್ಗದ ಪೈಕಿ ರಾಯಚೂರು, ತಿರುಪತಿ, ವೇಲೂರು, ಜೋಲಾರ್‌ಪೇಟೆ, ಈ ನಾಲ್ಕುಸ್ಟೇಷನ್‌ಗಳಲ್ಲೂ ಸತ್ರಗಳಂ ಕಟ್ಟಿಸಬೇಕೆಂದು ನಾನು ಕೇಳಲುದ್ದೇಶಿಸಿದ್ದೇನೆ. ಮೇಲೆ ಹೇಳಿದಂತೆ ಸತ್ರಗಳಂ ಕಟ್ಟಿಸುವ ಮತ್ತು ಅವುಗಳೊಳು ಆಹಾರ ಮೊದಲಾದವುಗಳಂ ತಯಾರ್‌ಮಾಡುವದಕ್ಕಾಗಿ ಮಿತವಾಗಿ ಶಿಬ್ಬಂದಿಗಳನ್ನಿಡುವ ಏರ್ಪಾಡನ್ನು ಸ್ವದೇಶೀಯರಾದವರೆಲ್ಲರು ಒಪ್ಪುವರೆಂದು ನಂಬುತ್ತೇನೆ. ಈಪಕ್ಷಕ್ಕೆ ಹಾಗೆ ಒಪ್ಪತಕ್ಕವರನ್ನು ನಾನು ಕೇಳಿಕೊಳ್ಳುವ ದೇನಂದರೆ,—

(ಎ) ಇದರಲ್ಲಿ ಏನಾದರು ನಷ್ಟವುಂಟಾಗುವಪಕ್ಷಕ್ಕೆ ಅಂತಾ ನಷ್ಟದಲ್ಲಿ ಅವರವರಿಗೆ ಬೀಳುವ ಭಾಗವನ್ನು ಕೊಡುವದಕ್ಕೆ ಇಷ್ಟಪಟ್ಟವರು ಆಬಗ್ಯೆ ಈ ಕಾಗದಕ್ಕೆ ರುಜುಮಾಡಬೇಕು. ಅಂತಾನಷ್ಟ ಪ್ರಾಯಶಃ ಯಾವದೂ ಉಂಟಾಗಲಾರದೆಂದು ತೋರುತಿದೆ.

(ಬಿ.) ರೆಯಿಲ್ವೆ ಚಿನಿಮಾರ್ಗಗಳಲ್ಲಿ ಸತ್ರಗಳಂ ಕಟ್ಟಿಸಿ, ರೆಯಿಲ್ವೆ ಕಂಪೆನಿಯವರಿಗೂ ತಮಗೂ ನಡೆಯಬಹುದಾದ ನಿಬಂಧನೆಗಳಿಗೊಳಪಟ್ಟು ಅವುಗಳನ್ನು ಜನಗಳ ಹೆಸರಿನಲ್ಲಿ ಬಿಡತಕ್ಕವರು ಅಂತಾ ಅಭಿಪ್ರಾಯವನ್ನು ನನಗಾಗಲಿ ರೆಯಿಲ್ವೆ ಏಜಂಟರಿಗಾಗಲಿ ತಿಳಿಸಬಹುದು.

(ಸಿ.) ಸ್ವಂತವಾಗಿ ಸತ್ರಗಳಂ ಕಟ್ಟಿಸುವದಕ್ಕೆ ಅನುಕೂಲವಿಲ್ಲದವರು ತಮ್ಮತಮ್ಮ ಶಕ್ತ್ಯನುಗುಣವಾಗಿ ಸತ್ರಗಳಂ ಕಟ್ಟುವದಕ್ಕೆ ಅರ್ಥಸಹಾಯ ಮಾಡಬಹುದು. ಅಂತವರು ತಮ್ಮವುದ್ದೇಶವನ್ನು ನನಗಾಗಲಿ ರೆಯಿಲ್ವೆ ಏಜಂಟರಿಗಾಗಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಡಿ.) ಎ. ಬಿ. ಸಿ. ಈಮೂರು ಬಾಬ್‌ಗಳಲ್ಲಿ ಯಾವದಕ್ಕೂ ಕೈಬರಹ ಇಡುವದಕ್ಕೆ ಅನುಕೂಲವಿಲ್ಲದೆ, ಪರ ತು ಮೇಲಿನ ಪ್ರಯತ್ನವನ್ನು ಅನುಮೋದಿಸತಕ್ಕವರು ಆಬಗ್ಯೆ ಕೈಬರಹ ಕೊಡಬಹುದು.

೨ನೇ ಜುಲೈ ೧೮೫. ಆರ್. ರಘುನಾಥರಾವ್.

———:0:———

INTERMARRIAGE.
(Communicated.)

[illegible]

[illegible]

Occasional Notes.
ನೈಮಿತ್ತಿಕವಿಷಯನ್ಯಾಸ

H. R. H. the Duke of Connaught.

ಇವರು ಶಮದಮಾದಿ ಶುಭಗುಣಗಳಿಗೆ ಮಹೋದಾಹರಣ ರೂಪರಾಗಿದ್ದರೂ, ಕಳಾಪ್ರಯುಕ್ತವಾದ ವಿಚಾರಪ್ರಾಧಾನ್ಯವಾದಾಗ ಅವು ಅವರನ್ನೇಕಾಂಗಿಯಾಗಿ ಬಿಡುತಲಿದ್ದವು. ಇತರ ಸೌಲಭ್ಯವಿತರ ದುರ್ಲಭವಾದದ್ದಾದರೂ, ಅದು ಸ್ವೀಯರೊಳು ಅತಿ ಪ್ರಾಚುರ್ಯವನ್ನೈದುತಲಿತ್ತು. ಇವರ ವಿದ್ಯಾವೈಮಲ್ಯಗಳು ನಿರುಪಮಗಳಾದವಾದರೂ ಬದ್ಧಾಭಿನಿವೇಶಯುಕ್ತವಾದವಾಗಿದ್ದವು. ಇವರ ಔದಾರ್ಯವಸಾಧಾರಣವಾದದ್ದಾದರೂ ಅದು ನಿಜಜನ ಪರಿಕ್ಲಪ್ತವಾದದ್ದಾಗಿತ್ತು. ಇವರು ಜ್ಞಾನ ವೈರಾಗ್ಯ ನಿಧಿಗಳೆಂದು ವಿಶ್ರುತರಾಗಿದ್ದರೂ, ಪ್ರಕೃತಿ ಸಂಬಂಧಾಭಿಮಾನವು ಅವರಲ್ಲಿ ನಿರೋಧವಾದದ್ದಾಗಿತ್ತು. ಹನ್ನೆರಡು ಚಾತುರ್ಮಾಸ್ಯಗಳನ್ನೇಕರೂಪವಾಗಿ ಮಾಡುತ ಸ್ವಾಶ್ರಮೋಚಿತ ಧರ್ಮಾನುಷ್ಠಾನಪರರೆಂತಲೂ, ತರ್ಕವೇದಾಂತಾದಿ ಸಕಲ ಶಾಸ್ತ್ರ ಸಾರವೇದಿಗಳೆಂತಲೂ, ಸಕಲಜನಗಳಿಂದಲೂ ಅಭಿನಂದಿಸಲ್ಪಡುತಲಿದ್ದರೂ, ಇವರ ಕರ್ತವ್ಯದೊಳಗಣ ಔದಾಸೀನ್ಯಭಾವವು ಅನೇಕರಿಗೆ ಅತೃಪ್ತಿಯನ್ನುಂಟುಮಾಡುತಲಿದ್ದವು. ಇವರ ಶಾಸ್ತ್ರಜ್ಞಾನಕ್ಕಾಗಿ ವಿಶೇಷೀಯರಾದ ಪಂಡಿತರು ಸಹ ಇವರು ವಿಶೇಷತಃ ಪೂಜಿಸುತಲಿದ್ದರು. ಇವರ ಆಶ್ರಮದ ಮಧ್ಯಕಾಲವು ಅಷ್ಟಾಕ್ಷರೀ ಪಂಚಾಕ್ಷರೀ ಅಭೀವರುಜ್ಞಾನಕವೊಳು ತರತಕ್ಕದ್ದಾಗಿತ್ತು. ಮುಖ್ಯವಾಗಿ ಮೇಲ್ಕಂಡ ಸಕಲಸುಗುಣಗಳೊಡನೆ ನಿತ್ಯ ತದೀಯಾರಾಧನೋಭಯ ವೇದಾಂತ ಕಾಲಕ್ಷೇಪಾದಿ ಪುಣ್ಯಕರ್ಮಗಳಿಂದ ಪಾವನಚರಿತರಾಗಿ ವಿಜಯಮಾಡಿದ್ದ ಶ್ರೀಸ್ವಾಮಿಯವರ ಸ್ಮರಣಮಾತ್ರವೇ ನಮ್ಮನ್ನು ಪುನೀತರಮಾಡಲು ಸಮರ್ಥವಾದೀತು. ಇನ್ನು ನಾಮಮಾತ್ರಾವಶಿಷ್ಟರಾದ ಸ್ವಾಮಿಯವರ ಅವತಾರವು ಇಲ್ಲಿಗೆ ಪೂರ್ತಿಯನ್ನೈದಿದದರಿಂದ ಗತಿಸಿದವರುಕುರಿತು ಇನ್ನು ಚಿಂತಿಸಿ ಪ್ರಯೋಜನವಿಲ್ಲವಾಗಿ ಮುಂದಿನಕರ್ತವ್ಯವನ್ನುಕುರಿತು ಆಲೋಚಿಸಬೇಕಾದ್ದು ಆವಶ್ಯಕವಾಗಿರುತಿದೆ.

ಮುಂದೆ ಆಶ್ರಮ ಸ್ವೀಕಾರಮಾಡಿಕೊಂಡು ಪಟ್ಟವನ್ನವಹಿಸಲಿಕ್ಕೆ ಯೋಗ್ಯರಾದವರು ಯಾರಾದರು ತಮ್ಮಂತವರಲ್ಲಿ ಇದಾರೆಯೋ ಯೆಂದು ಆಲೋಚಿಸಿದಲ್ಲಿ ಒಬ್ಬರಿಬ್ಬರು ಆಸ್ಥಾನಕ್ಕೆ ಯೋಗ್ಯರಾದವರು ಇರುವಂತೆ ಕೇಳುತ್ತೇವೆ, ಪರಂತು ಅವರ ಹೆಸರುಗಳನ್ನು ಇಲ್ಲಿ ನಮೂದಿಸಲಿಕ್ಕೆ ಇಷ್ಟವಿಲ್ಲವು. ಆದರೆ ಒಂದಂಶವನ್ನುಮಾತ್ರ ಇಲ್ಲಿ ಅಗತ್ಯವಾಗಿ ತಿಳಿಸುವೆವೆಂತೆನೆ,

ಈಗ ಯೆಲ್ಲರಿಂದಲೂ ಪ್ರಾರ್ಥನೀಯವಾದ ತುರಾಧಿಪತಿತ್ವವು ಸಾಮಾನ್ಯವಾದುದಲ್ಲವು. ಇದಕ್ಕೆ ಬರತಕ್ಕವರಿಗೆ ಭೋಗಾನಿತ್ಯತ್ವ ಜ್ಞಾನಜನ್ಯ ವೈರಾಗ್ಯ ಪ್ರಯುಕ್ತವಿಷಯ ವೈಮುಖ್ಯವೂ, ಕಾಮ್ಯಫಲನಿವೃತ್ತಿ ಜ್ಞಾನವೂ,ಆಶ್ರಮೋಕ್ತ ಧರ್ಮಾಚರಣೆಯೂ ಅತ್ಯವಶ್ಯವಾದದ್ದಾದರೂ ಈಗಿನವರು ಸ್ವಭೋಗಕ್ಕಾಗಿಯೂ, ಇಷ್ಟಬಂಧು ಸಂರಕ್ಷಣಾರ್ಥವಾಗಿಯೂ, ಮೇಲ್ಕಂಡಗುಣಗಳುತಮ್ಮಲ್ಲಿಲ್ಲದಿದ್ದರೂ ಅದನ್ನು ಎಲ್ಲರೂ,ಅಪೇಕ್ಷಿಸುತ್ತಾರೆ.ಈಗಿನಸ್ಥಿತಿಯಲ್ಲಿ ಸನ್ಯಾಸಿಯಾಗಲಿಕ್ಕೆ ಒಡಂಬಡುವರು ತದೀಯವರ್ಗಭಾಗಿರುತ್ತಾರೆ.ಮುಂದೆ ಶ್ರೀಮಠಕ್ಕೆ ನಿರ್ಧರಿಸಬೇಕಾದವರ ಚುನಾವಣೆಯು ಶಿಷ್ಯವರ್ಗದವರಿಗೆ ಸಂಬಂಧಿಸಿದ್ದಾಗಿಯೂ, ಶ್ರೀಮನ್ಮಹಾರಾಜರಿಂದ ಅಂಗೀಕರಿಸಲ್ಪಡತಕ್ಕದ್ದಾಗಿಯೂ ಇರುತ್ತಿದೆ. ಇದುವರಿವಿಗೆ ಶ್ರೀಮಠದಲ್ಲಿ ನಿಶೇಷ ಪ್ರಾಬಲ್ಯವುಳ್ಳವರೆಲ್ಲರೂ ಮುಂದೆ ತಮ್ಮ ಪ್ರಾಬಲ್ಯಕ್ಕೆ ಯೆಲ್ಲಿ ಉಪಹತಿಯುಂಟಾಗುವದೋ ಯೆಂಬಭೀತಿಯೊಡನೆ ಅದಂ ಕಾಪಾಡಿಕೊಳ್ಳತಕ್ಕಬಗ್ಯೆ ತಮಗೆ ಬೇಕಾದವರ ಹೆಸರನ್ನು ಮಹಾರಾಜಸನ್ನಿಧಿಯಲ್ಲ ಆಗಲೇ ಪ್ರಸ್ತಾಪಿಸುತ ತಮ್ಮ ಯಥಾಶಕ್ತಿಯಂ ಸ್ವಾರ್ಥಪರವಾಗಿ ಉಪಯೋಗಿಸಲಿಕ್ಕೆ ಯೆತ್ನಿಸಿದಾರೆಂದು ಕೇಳುವದಕ್ಕೆ ಬಹಳ ವಿಷಾದಿಸುವೆವು. ಈವಿಷಯವು ಒಂದುಮತವನ್ನನುಸರಿಸಿದ್ದಾಗಿಯೂ, ರಹಸ್ಯತಾವಲಂಬಿಗಳ ಅಭಿಮತಾಪೇಕ್ಷಿತವಾದದ್ದಾಗಿಯೂ, ಇರುವದರಿಂದ ಇದಂಕುರಿತು ಏಕದೇಶವಾಗಿ ಮಹಾರಾಜರು ಆಲೋಚಿಸಿ ಪ್ರಯೋಜನವಿಲ್ಲವು. ಈಸಂದರ್ಭದಲ್ಲಿ ಆಲೋಚಿತಗಳಾದ ಮಹಾತ್ಮ್ಯಗಳೂ, ಅನಿರೂಪಕಗಳಾದ ಪಾಂಡಿತ್ಯಗಳೂ, ಅಸಾಧಾರಣಗಳಾದ ಗುಣಪರಂಪರೆಗಳೂ, ಮಹಾರಾಜರವರಿಗೆ ತಿಳಿಸಲ್ಪಡುವವು, ಪರಂತು ನಿಜವಾದಸ್ಥಿತಿಯನ್ನರುಹಿ ಯೋಗ್ಯವಾದ ಸಲಹೆಯಂ ತಿಳಿಸತಕ್ಕ ತಟಸ್ಥರಾದ ಅನುಭವಶಾಲಿಗಳು ಮಹಾರಾಜಾಸ್ಥಾನದೊಳು ವಿರಳರಾಗಿರುವದರಿಂದ ಭವಿಷ್ಯದ್ಗುರು ವಿನಿಯೋಜನವಿಷಯದಲ್ಲಿ, ಮಹಾರಾಜರವರು ಭ್ರಾಮಕವಾದ ಅನ್ಯರ ಸಲಹೆಗಳಿಗೆ ಕಿವಿಕೊಡದೆ ಯೋಗ್ಯರಾಗಿಯೂ, ಉಪಶಾಂತರಾಗಿಯೂ, ವಿದ್ಯಾಮತರಾಗಿಯೂ, ಕಾಮ ಕ್ರೋಧ ವಿವರ್ಜಿತರಾಗಿಯೂ, ವಿನೀತರಾಗಿಯೂ, ವಿರಕ್ತರಾಗಿಯೂ, ನೈಷ್ಠಿಕರಾಗಿಯೂ ಇರುವವರನ್ನು ಚುನಾಯಿಸಬೇಕಾದ್ದು ಕೇವಲ ಅವಶ್ಯಕರ್ತವ್ಯವಾಗಿದೆ. ಸಕಲಾಂಶದಿಂದಲೂ ಅರ್ಹರೆನಿಸಿಕೊಂಡು ಮಹಾರಾಜರವರ ಅವಧಾನಕ್ಕೆ ಪಾತ್ರರಾದವರು ಈಗಶ್ರೀಮಠದಲ್ಲಿಯೇ ಆಸ್ಥಾನಪಂಡಿತರೊಳೊಬ್ಬರು ಇರುವದರಿಂದ ಅವರ ಸಿದ್ಧಾಂತವು ಬಹುಜನಾಂಗೀಕಾರಾರ್ಹವಾದದ್ದಾಗಿರುವದರೊಳೇನೂ ಸಂದೇಹವಿಲ್ಲವು. ಮುಖ್ಯವಾಗಿ ಶ್ರೀಪರಕಾಲಮಠಕ್ಕೆ, ಅಲ್ಲಿ ಪ್ರಬಲಗೊಂಡಿರುವ ಒಬ್ಬರಿಬ್ಬರ ವ್ಯಾಪಕತೆಯಿಂದ ಪ್ರಾಪ್ತವಾದ ಅಪಖ್ಯಾತಿಯನ್ನು ಬಹಿರಂಗವಾಗಿ ಹೊರಪಡಿಸಲಿಕ್ಕೆ ಒಂದೆರಡಾವರ್ತಿ ನಾವೆತ್ನಿಸಿದೆವು. ಆದರೆ ಸ್ವಮಾರಾಭಿಮಾನವೆಂಬುದು ಅದು ತಡೆದು ಇನ್ನು ಕಾಲವನ್ನು ನಿರೀಕ್ಷಿಸುವಂತೆ ಮಾಡಿತು ಅದು ನಾವು ಈ ಪತ್ರಿಕಾಮೂಲಕ ತಿಳಿಸದಿದ್ದರೂ ಅಲ್ಲಿನವರ ವರ್ತನವು ಅದು ಹೊರಪಡಿಸದೆ ಹೋಗಲಿಲ್ಲವು. ಏತನ್ಮಠದ ಕೀರ್ತಿ ಪ್ರಾಶಸ್ತ್ಯಗಳನ್ನು ಚ್ಯುತಿ ಇಲ್ಲದಂತೆ ಕಾಪಾಡುತಲೂ, ದುಷ್ಪ್ರಾಬಲ್ಯವನ್ನು ನಿರೋಧಿಸಿ ಕ್ರಮಪಡಿಸುತಲೂ, ಇದು ಒಳ್ಳೆಯ ಸಂದರ್ಭವಾಗಿರುವದರಿಂದ ಮಹಾರಾಜರವರು ತಮ್ಮ ಸ್ವಾತಂತ್ರ್ಯವಂ ವಿನಿಯೋಗಿಸಿ ಕ್ರಮಪಡಿಸಬೇಕೆಂದು ಪ್ರಾರ್ಥನಾಪೂರ್ವಕ ಒತ್ತಿಹೇಳಬೇಕಾದ್ದು ನಮ್ಮ ಕರ್ತವ್ಯವೆಂದು ಬಾವಿಸಿ ತಿಳಿಸಿದೆವು.

THE ADMINISTRATION OF TRAVANCORE.

ಸಾಬಕ್ ತಿರುವಾಂಕೂರ್ ಮಹಾರಾಜರಾದ ರಾಮವರ್ಮರವರ ಪಾಲನಾಕ್ರಮವನ್ನುಕುರಿತು ಹಿಂದಿನವಾರದಲ್ಲಿ ಪ್ರಕಟಿಸಿದ ಹಿಂದೂಯೆಂಬ ಪತ್ರಿಕೆಗೆ ಪ್ರತ್ಯುತ್ತರರೂಪವಾಗಿ ಮದರಾಸ್ ಸ್ಟ್ಯಾಂಡರ್ಡ್ ಯೆಂಬ ಪತ್ರಿಕೆ ಬರೆದ ಒಂದು ಉಪನ್ಯಾಸದಲ್ಲಿ, ಗತಿಸಿದ ಮಹಾರಾಜರವರು ಸಿಂಹಾಸನದೊಳು ಪ್ರತಿಷ್ಠಿತರಾದ ದಿನಮೊದಲು, ಕೇವಲ ವಿವೇಕ ಪ್ರವರ್ತಕರಾಗಿಯೂ, ನ್ಯಾಯ್ಯವಾಗಿಯೂ, ರಾಜ್ಯವಂ ಪರಿಪಾಲಿಸುತಲಿದ್ದರೆಂದು ತಿಳಿಸಿ ಅದಂ ನಿರೂಪಿಸುವಬಗ್ಯೆ ಅವರ ಆಧಿಪತ್ಯದೊಳು ಅವರು ಮಾಡಿದ ಕೆಲವು ನವೀನ ಏರ್ಪಾಡುಗಳನ್ನೂ ರಾಜ್ಯಕೋಶಗಳ ಸ್ಥಿತಿಯನ್ನೂ ಸದರೀಪತ್ರಿಕೆಯು ವಿವರಿಸುತಿದೆಯೆಂತೆನೆ,

“ಸಾಬಕ್ ಮಹಾರಾಜರವರ ಆಧಿಪತ್ಯಕ್ಕೆ ಪ್ರಾರಂಭವಾದಾಗ ತಿರುವಾಂಕೂರ್‌ಸಂಸ್ಥಾನದ ಖಜಾನೆಯಲ್ಲಿ ೫೪,೪೮,೧೮೦ರೂಪಾಯಿಗಳು ಸಿಲ್ಕುನಿಂತಿದ್ದವು ಐದು ಸಂವತ್ಸರದ ಪಾಲನಾನಂತರ ಕಾಲಗತಿಯನ್ನೈದಿದಾಗ್ಯೆ ಖಜಾನೆಯೊಳು ೪೫೪,೫೮,೬೮೦ರೂಪಾಯಿಗಳುಹಾಜರ್‌ನಲ್ಲಿವೆ. ಸಾಲೀಯಾನಾ ಮಿಗುತಕ್ಕ ದ್ರವ್ಯವೆಲ್ಲವೂ ದೇಶಾಭಿವೃದ್ಧಿಗಾಗಿಯೇ ವ್ಯಯವಾಗುತಲಿತ್ತು. ಸಾಬಕ್ ಮಹಾರಾಜರವರ ಕಾರಕಿರ್ದಿಯಲ್ಲಿ ಅವರು ಮಾಡಿದ ಮುಖ್ಯಾಂಶಗಳಲ್ಲೊಂದು ತಂಬಾಕ್ ತೆರಿಗೆಯನ್ನು ಸೇಕಡಾ ೨೫ ರಪ್ರಕಾರ ಕಡಮೆಮಾಡಿದ್ದು ಮೊದಲನೆಯದಾಗಿರುತಿದೆ. ಇದರದೆಸೆಯಿಂದ ಸರ್ಕಾರಕ್ಕೆ ಒಂದುಲಕ್ಷರೂಪಾಯಿಗಳು ಹುಟ್ಟುವಳಿಯಲ್ಲಿ ತಗ್ಗಿಹೋದವು. ಮಹಾರಾಜರವರು ಈತೆರಿಗೆಯನ್ನು ತಗ್ಗಿಸದಿರುವರಾದರೆ ಸರ್ಕಾರಕ್ಕೆ ಇನ್ನೊಂದುಲಕ್ಷರೂಪಾಯಿಗಳು ಆದಾಯವಾಗುತಲಿತ್ತು. ೧೮೮೫ನೇ ಇಸವಿಯ ಮಾರ್ಚಿತಿಂಗಳಲ್ಲಿ ನಮ್ಮಕ್ ತೆರಿಗೆಯು, ಮಣ ೧ಕ್ಕೆ ೩ ರಿಂದ ೨॥ ರೂಪಾಯಿಗಳಿಗೆ ತಗ್ಗಿಸಲ್ಪಟ್ಟಾಗ, ತನ್ಮೂಲಕ ೨॥ಲಕ್ಷರೂಪಾಯಿಗಳು ಸರ್ಕಾರಕ್ಕೆ ನಷ್ಟವಾದವು. ಇಲ್ಲವಾದರೆ ಸದರೀಮೊಬಲಗು ಸಹ ಸಿಲ್ಕು ದಾಖಲಾಗುತಲಿತ್ತು. ಹಿಂದಿನ ಮಹಾರಾಜರವರ ಅಪರಕ್ರಿಯೆಗಾಗಿಯೂ, ಈಗ ಗತಿಸಿದವರ ತೀರ್ಥಯಾತ್ರಾರ್ಥವಾಗಿಯೂ, ೭॥ ಲಕ್ಷರೂಪಾಯಿಗಳು ವ್ಯಯವಾದವು. ಸಂಸ್ಥಾನಕ್ಕೆ ಸಾಲೀಯಾನಾ ೨೫,೦೦೦ ರೂಪಾಯಿಗಳ ಜಾಸ್ತೀ ಲವಾಜಮೆ ನಿಶೀ ಪೊಲೀಸ್ ಶಿಬ್ಬಂದಿಯು ಸಂಪೂರ್ಣವಾಗಿ ಪುನರ್ವ್ಯವಸ್ಥೆ ಮಾಡಲ್ಪಟ್ಟು, ರೆವಿನ್ಯೂ ಮತ್ತು ಜಾಡಿಷಿಯಲ್ ಕೆಲಸಗಳಂತಪ್ಪಿಸಿ ಪ್ರತ್ಯೇಕ ಪ್ರೊಲೀಸ್ ಆಫೀಸರ್‌ಗಳ ವಿಚಾರಣೆಯೊಳಿಡಲ್ಪಟ್ಟಿರುತಿದೆ. ಈಗ ಸರ್ವಾಂಗದಿಂದಲೂ ಸಮರ್ಥವಾದ ಪೊಲೀಸ್ ಶಿಬ್ಬಂದಿಯಬಗ್ಯೆ ಸರ್ಕಾರಕ್ಕೆ ೧॥ ಲಕ್ಷರೂಪಾಯಿಗಳ ಖರ್ಚು ತಗಲುತಿದೆ. ಇದು ಪ್ರಭುತ್ವದ ಪ್ರಾಶಸ್ತ್ಯದ್ಯೋತಕವಾದದು ಮಾತ್ರವಲ್ಲದೆ ದೇಶಕ್ಕೆ ಮಹತ್ಪ್ರಯೋಜನರೂಪವಾದದ್ದಾಗಿರುತಿದೆ. ಹ್ಯಾಗೆಂದರೆ—ಈ ನೂತನ ವ್ಯವಸ್ಥೆಯಿಂದ ತಕ್ಸೀರ್‌ಗಳು ಬಹಳಮಟ್ಟಿಗೆ ದೇಶದಲ್ಲಿ ಕಡಿಮೆಯಾಗಲಿಕ್ಕೂ ತನ್ಮೂಲಕ ಜನಗಳಿಗೆ ನಿರುಪದ್ರವವೃತ್ತಿ ಪ್ರಾಪ್ತಗೊಳ್ಳಲಿಕ್ಕೂ ಕಾರಣವಾಯಿತು. ಜ್ಯುಡಿಷಿಯಲ್ ಇಲಾಖೆಯ ಏರ್ಪಾಡುಗಳದೆಸೆಯಿಂದ ಸಂಸ್ಥಾನಕ್ಕೆ ೩೦,೦೦೦ ರೂಪಾಯಿಗಳು ಜಾಸ್ತೀಖರ್ಚು ತಗಲಿತು. ಸಿವಿಲ್ ವ ಕ್ರಿಮಿನಲ್ ಕೋರ್ಟುಗಳನ್ನು ಪರಿಷ್ಕರಿಸಿ ಅವುಗಳ ಆಫೀಸರ್‌ಗಳ ತಲಬಗಳನ್ನೂ ಅಧಿಕಾರಗಳನ್ನೂ ಸರ್ಕಾರದವರು ಜಾಸ್ತೀ ಮಾಡಿ ಪೀನಲ್ ಮತ್ತು ಪ್ರೊಸಿಡ್ಯೂರ್ ಕೋಡುಗಳನ್ನು ಜಾರೀಯಲ್ಲಿ ತಂದರು. ಇದಲ್ಲದೆ ಅಲ್ಲಿನ ಹೈಕೋರ್ಟನ್ನು ಬಹಳ ವಿಶೇಷಪ್ರಮುಖವನ್ನಾಗಿ ಏರ್ಪಾಡುಮಾಡಿ,ಬಲಪಡಿಸಿ ಮಹಾರಾಜರವರಲ್ಲಿಬರತಕ್ಕ ಅಪೀಲುಗಳ ವಿಚಾರಣೆ ಮತ್ತು ಫೈಸಲಾತಿಯಬಗ್ಯೆ ಬೇಕಾದಏರ್ಪಾಡು ಮಾಡಲ್ಪಟ್ಟಿರುತಿದೆ. ಸಾಲೀಯಾನಾ ೫೩,೦೦೦ ರೂಪಾಯಿಗಳ ಜಾಸ್ತೀ ಖರ್ಚಿನಿಂದ ಸಂಸ್ಥಾನದ ರೆವಿನ್ಯೂ ಇಲಾಖೆಯು ಪುನರ್ವ್ಯವಸ್ಥೆಗೊಳಿಸಲ್ಪಟ್ಟು [illegible] ಮಾಡಲ್ಪಟ್ಟಿತು ನಕ್ಕರ್ ಮತ್ತು ಸಾಯರ್ ಪಾಡಿಪುರೆ [illegible]ನ್ನು ಅಭಿವೃದ್ಧಿಪಡಿಸುವಬಗ್ಯೆ ವಿಶೇಷ್ಟವಾದ ಇಲಾಖೆ ಶಿಬ್ಬಂದಿಗಳನ್ನೆಲ್ಲ ನೇಮಿಸಿ ಏರ್ಪಡಿಸಿ ಯೋಗ್ಯವಾದ ವಿಚಾರ ಕಾರ್ಯಕಾರಣದಲ್ಲಿ ಸದರೀಇಲಾಖೆಯು ಇಡಲ್ಪಟ್ಟಿತು ಏತನ್ಮೂಲಕ ಗತವರ್ಷದೊಳಗೆ ೧೫,೦೦೦ ರೂಪಾಯಿಗಳು ಜಾಸ್ತೀಖರ್ಚು ಏರ್ಪಡಿಸಿರಲ್ಪಟ್ಟಿತು ೫೦,೦೦೦ ರೂಪಾಯಿಗಳ ಆಗತದಿಂದ ಆಕ್ರಮವಾಗಿದ್ದ ಹಳೆ ಕೆರೆಗಳೆಲ್ಲವು ಮರಳಿ ರಿಪೇರಿಮಾಡಲ್ಪಟ್ಟವು. ಮೂಲದ್ರವ್ಯವು ಜಾಸ್ತಿಯಾಗಿ ಅದರ ಸಂರಕ್ಷಣಾರ್ಥ ೨೦,೯೦೦ ರೂಪಾಯಿಗಳು ಅವಶ್ಯಕವಾಗುತಲಿದೆ. ಸಾಲೀಯಾನಾ ೧೦,೦೦೦ ರೂಪಾಯಿಗಳ ಜಾಸ್ತೀ ವ್ಯಯದಿಂದ ಸರ್ವೇ ಡಿಪಾರ್ಟ್‌ಮೆಂಟ್ ಏರ್ಪಡಿಸಲ್ಪಟ್ಟಿತು ಮತ್ತು ಇನ್ನೊಂದು ೧೦,೦೦೦ ರೂಪಾಯಿಗಳ ವ್ಯಯದಿಂದ ಸ್ಥಳದ ಪ್ರೋತ್ಸಾಹ ಇಲಾಖೆಯನ್ನು ಅಭಿವೃದ್ಧಿಗೊಳಿಸಿ ಉತ್ತಮಸ್ಥಿತಿಗೆ ತಂದಿರುತ್ತಾರೆ. ಸಂಸ್ಥಾನಕ್ಕೆ ಜಾಸ್ತೀ ಲಾಗವನ್ನೇ ತಗಲತಕ್ಕ ಮೇಲ್ಕಂಡ ಅನೇಕ ಚಿಲ್ಲರೆಬಾಬುಗಳಲ್ಲಿ ಮಾಡಲ್ಪಟ್ಟ ಬದಲಾವಣೆಗಳು ಅಂತಿರಲಿ ಅಲ್ಲಿನ ದಿವಾನರವರ ಸ್ವಂತ ಏರ್ಪಾಡಿನಮೇರೆ ಪ್ರಾರಂಭವಾಗಿ ನಡೆಸಲ್ಪಡುತಲಿರುವ ತಿರುವಾಂಕೂರ್ ಸಂಸ್ಥಾನದ ರೆವಿನ್ಯೂ ಸರ್ವೇ ವ ಸೆಟ್ಲ್‌ಮೆಂಟ್ ಯಾವ ಪರರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ಏರ್ಪಾಡುಗಳಂಕುರಿತು ವಿಚಾರಿಸುವಣ ದಿವಾನರವರ ವಾಕ್ಯಪ್ರಕಾರ ಜಮೀನುಸ್ವತ್ವಗಳ ಸುಲಭವಾದ ವಿಚಾರಣೆಗೆ ಸರ್ವೇ ಸೆಟ್ಲ್‌ಮೆಂಟ್ ಕೇವಲ ಆವಶ್ಯಕವಾದದ್ದಾಗಿರುತಿದೆ. ಈ ಕೆಲಸವು ಈಗಉತ್ಸಾಹಯುಕ್ತವಾಗಿ ಜರುಗುತಲಿದೆ. ಸದ್ಯಃ ಇದು ಪರೀಕ್ಷಾರ್ಥ ಯೆರಡುತಾಲ್ಲೂಕುಗಳಲ್ಲಿಮಾತ್ರ ಪ್ರಾರಂಭಿಸಲ್ಪಟ್ಟಿದು. ಅವುಗಳ ಮೂಲಕ ಪ್ರಾಪ್ತವಾಗುವ ಅನುಭವವನ್ನು ದೇಶದ ಇತರಭಾಗದಲ್ಲಿ ಅದನ್ನು ಜಾರಿಯಲ್ಲಿ ತರುವಾಗ್ಯೆ ಉಪಯೋಗಿಸಿಕೊಳ್ಳಬಹುದು. ಪ್ರಕೃತ ಪ್ರಯತ್ನಕ್ಕಾಗಿ ಇದುವರಿವಿಗೇನೇ ಸರ್ಕಾರಕ್ಕೆ ೧॥ ಲಕ್ಷರೂಪಾಯಿಗಳತನಕ ಖರ್ಚಾಗಿರುತಿದೆ. ಸದರೀಕಾರ್ಯವು ಅಭಿವೃದ್ಧಿಯೊಡನೆ ಜರುಗುವದನ್ನು ದಿವಾನರವರು ನಿರೀಕ್ಷಿಸಿಕೊಳ್ಳುತ್ತಾರೆ. ದಿವಾನ್‌ಪೇಷ್ಕರ್ ಮಾತುವಣ, ಕಂದಾಯ ಸರಾಫ್ ಮಾತುವಣ, ಇನಾಂತಿ ಟ್ರಿಬ್ಯುನಲ್‌ಗಳ ರಿಜಿಸ್ಟ್ರೇಷನ್, ಈ ಮುಂತಾದ ಕೆಲಸಗಳೊಳು ಅಧಿಕಾರಿಗಳಿಗೆ ವ್ಯವಸ್ಥಾಪಕರಾಗಿರಲಿಕ್ಕೆ ದಿವಾನರ ಅನುಭವವು ಅವರಿಗೆ ಸಹಾಯಕವಾಗಿದೆ. ಧನವನ್ನಾರ್ಜಿಸಿ ನಿರುಪಯೋಗವಾಗಿ ಕೂಡಿಟ್ಟಿರುವದಕ್ಕಿಂತಲೂ ಮಿಗಲತಕ್ಕ ದ್ರವ್ಯವನ್ನು ಸಂಸ್ಥಾನಗಳ ಪ್ರಯೋಜನಾರ್ಥ ವಿನಿಯೋಗಿಸುವದು ಒಳ್ಳೆಯದೆಂಬದಕ್ಕೆ ಅನೇಕರೊಡಂಬಡುವರು. ಆನರೆಬಲ್ ಮಿಸ್ಟರ್ ರಾಮಯ್ಯಂಗಾರ್ ಸಿ. ಎಸ್. ಐ. ಯವರು ತಂಬಾಕ್ ಮತ್ತು ನಮ್ಮಕ್‌ಮೇಲಣ ತೆರಿಗೆಯನ್ನು ಕಡಮೆಮಾಡುವದಕ್ಕೆತ್ನಿಸಿದ್ದಲ್ಲದೆ ಲ್ಯಾಂಡ್ ರೆವಿನ್ಯೂವಿಷಯದೊಳಿದ್ದ ಅನೇಕಕಠಿನರೂಲ್ಸ್‌ಗಳನ್ನು ಸ್ವಲ್ಪಸಡಲಿಸಿಬಿಟ್ಟದ್ದು ಕಾಲಾಂತರಕ್ಕೆ ಪ್ರಯೋಜನಕರವಾದಾಗ್ಯೂ ಸದ್ಯಃಹುಟ್ಟುವಳಿಯಲ್ಲಿತಗ್ಗಲಿಕ್ಕೆ

ನಿಮಿತ್ತಕವಾಯಿತು. ಪೊಲೀಸ ಸಿವಿಲ ವ ಕ್ರಿಮಿನಲ್‌ಕೋರ್ಟುಗಳು ಮತ್ತು ಪಾಠಶಾಲೆಗಳ ಅಧಿಕಾರಗಳು, ರೆವಿನ್ಯೂ ಸರ್ವೆ ವ ಸೆಟಲ್‌ಮೆಂಟು, ಇವುಗಳ ವ್ಯವಸ್ಥೆಯಬಗ್ಗೆ ತಗಲಿದ ವಿಶೇಷವಾದ ಖರ್ಚಿಗೆ ಅವರು ವಿಷಯರಾದರು. ಇವುಗಳೆಲ್ಲ ಮುಂದೆ ದೇಶದಪ್ರಯೋಜನಕ್ಕೂ, ಪುಷ್ಕಳವಾದ ಅಭಿವೃದ್ಧಿಯನ್ನುಂಟು ಮಾಡುವದಕ್ಕೂ, ಸಹಾಯಕಗಳಾಗಿವೆ. ಏತನ್ಮಧ್ಯೆ ಬೇರೆಂದು ಹೊಸಮಾರ್ಗದಿಂದ ಸಂಸ್ಥಾನಕ್ಕೊಂದು ಆಯತಿಯುಂಟುಮಾಡಿಕೊಳ್ಳಬೇಕಾದುದು ಅವಶ್ಯಕವಾಗಿರುತ್ತದೆ. ಸಾಲೀಂಯನಾ ಯೆರವುಲಕ್ಷ ರೂಪಾಯಿಗಳವರೆಗೆ ಉತ್ಪತ್ತಿಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿರುವ ಸ್ಟಾಂಪು ತೆರಿಗೆಯ ಮೂಲಕ ಇದು ಲಭಿಸಬಹುದು. ಸಂಸ್ಥಾನಕ್ಕೆ ಸೇರಿದ ಇನ್ನೂಕೆಲವು ಇಲಾಖೆಗಳು ಪ್ರಾಸಸ್ತಿಯೊಳಗೆಯಲ್ಲದೆ ಅವುಗಳೆಲ್ಲ ಪುನರ್ವ್ಯವಸ್ಥೆಯನ್ನಪೇಕ್ಷಿಸತಕ್ಕವಾಗಿವೆ. ಈಪ್ರಕಾರ ಹಿಂದನ್ನು ದಿವಾನರವರು ನಡೆಸುವದರದ ತರು, ರಿಪೋರ್ಟಿನ ೧೦೭ನೇ ಪುಟದಲ್ಲಿ ಸಮಾಪ್ತಿಗೊಳಿಸಿದ್ದಾರೆ. ಇದು ಸಹ ಕ್ಷಿಪ್ರದಲ್ಲಿಯೇ, ಈಗ್ಯೆಲ ಲಭ್ಯವರುವಾಗಳಿವೆಲು ಆದಿವರ್ತನದ್ರವ್ಯವು ಮುಖ ಪ್ರಾಶಸ್ತ್ಯವನ್ನೂ, ಸ್ವತಂತ್ರ ತಿರುವಾಂಕೂರು ಸಂಸ್ಥಾನದವರ ಕ್ರಮವ್ಯವಸ್ಥೆಯು ಸ್ಥಿತಿಗೆಬರುವದು" ಎಂಬುದು.

ಇದರಪರಿಣಾಮ ಎರಡುವರೆ ಮಬಾಕು ಮತ್ತು ಸಮ್ಮುಕ ತೀರ್ವೆಯನ್ನು, ತಗ್ಗಿಸಿದ್ದರಿಂದ ೩ ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಆದಾಯವು ಕಮ್ಮಿಯಾದರೂ ಕೂಡ ಪ್ರಜೆಗಳಿಗೆ ಪ್ರಯೋಜನಕಾರಿಯಾಯಿತು. ಪೋಲೀಸ್, ಜ್ಯುಡಿಷಿಯಲ್, ಸರ್ವೇ, ಮುಂತಾದ ಇಲಾಖೆಗಳ ಅಭಿವೃದ್ಧಿ ಬದಲಾವಣೆಯಿಂದ ಲಕ್ಷ ರೂಪಾಯಿಗಳ ಖರ್ಚು ಜಾಸ್ತಿಯಾಗಿ ಅದರ ಕಾರಣವಾಯಿತು. ಇದರಿಂದ ವಿದ್ಯಾಪರವಾದ ಸೌಕರ್ಯಗಳು ಕಲ್ಪಿಸಲ್ಪಟ್ಟವು. ಇದನ್ನು ಶೋಧಿಸುವುದಕ್ಕಾಗಿ ಆಯಾ ಪ್ರಾಂತ್ಯದ ಸ್ವದೇಶೀಯರಾದ ಜಿಲ್ಲಾ ನೌಕರರಿಗೆ ವೇತನವು ಹೆಚ್ಚಿಸಲ್ಪಟ್ಟಿತು. ಸರ್ಕಾರದ ಸ್ವಾಧೀನದಲ್ಲಿದ್ದ ಜಮೀನುಗಳನ್ನು ಬಿಟ್ಟುಕೊಟ್ಟದ್ದರಿಂದ ರೈತರಿಗೆ ನಿರ್ಬಂಧವು ಕಡಿಮೆಯಾಗಿ ಅನುಕೂಲವುಂಟಾಯಿತು. ಇದೆಲ್ಲಾ ಅವರಿಂದಲೇ ಆಯಿತು. ಅಗಲಿದ ಮಹಾರಾಜರವರು ಸ್ವಪ್ರಜಾಹಿತರಕ್ಷಣೆಯಲ್ಲಿ ಹೊಂದಿದ್ದ ಆಸಕ್ತಿಗೆ ಕಾರಣವಾದದ್ದು ಅವರ ದಕ್ಷತೆ. ಇವರ ಉದಾರವಾದ ಕಾರ್ಯಗಳಿಂದ ಇವರು ಅತ್ಯಂತ ಪ್ರಸಿದ್ಧರಾಗಿದ್ದರು. ಇದು ಇಂಗ್ಲೀಷ್ ದೊರೆತನದವರಿಂದ ಮಾನ್ಯರೆನ್ನಿಸಿಕೊಂಡವರ ಮೂಲಕ ಶ್ಲಾಘನೆಗೆ ಪಾತ್ರರಾಗಿದ್ದ ಸಾರ್ವಭೌಮ ಮಹಾರಾಜರ ಆಳ್ವಿಕೆಯ ಬಗ್ಗೆ ನಮ್ಮ ಅಭಿಪ್ರಾಯವನ್ನು ಸೂಚಿಸಿದೆವು.

THE NEW MAHARAJA OF TRAVANCORE

ತಿರುವಾಂಕೂರು ಮಹಾರಾಜರವರು ಶಾಶ್ವತವಾಗಿ ತಿಯನ್ನೈದಿದರೆಂಬ ಶೋಕಕರವಾದ ವೃತ್ತಾಂತವನ್ನು ಹಿಂದಿನಸಾರಿ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸ್ವರ್ಗಸ್ಥ ಮಹಾರಾಜರವರ ಹಿರಿಯ ಸೋದರಳಿಯಂದಿರಾಗಿದ್ದ ಯುವರಾಜರು ಆದ ರಾಮವರ್ಮರವರು ತಿರುವಾಂಕೂರು ಸಂಸ್ಥಾನದ ಆಧಿಪತ್ಯಕ್ಕೆ ಪಟ್ಟವೇರತಕ್ಕದ್ದೆಂದು ನಿಶ್ಚಯಿಸಲ್ಪಟ್ಟದರಿಂದ, ಏತತ್ಪೂರ್ವಾಂಗವಾಗಿ ನಡೆಯತಕ್ಕ ಮಂಗಳಾಚರಣೆ, ಮಂಗಳಸ್ನಾನ, ಪ್ರತಿಷ್ಠೆ, ಶಾಂತಿ ಪೌಷ್ಟಿಕಗಳು, ಹೋಮಗಳು ಮುಂತಾದ ಬಹುವಿಧ ಕರ್ಮಕಲಾಪಗಳು ಮಾಡಲ್ಪಟ್ಟವು. ಆಗಸ್ಟ್ ೧೬ನೇ ತಾರೀಖು ಭಾನುವಾರದದಿನ ಬೆಳಿಗ್ಗೆ ಶ್ರೀ ಅನಂತ ಪದ್ಮನಾಭ ಸ್ವಾಮಿಯವರ ದೇವಸ್ಥಾನದಲ್ಲಿ ಯಥಾವಿಧಿ ನಡೆಸಲ್ಪಟ್ಟವು ಬಳಿಕ ದೇವಸ್ಥಾನದ ಗುರುವಿನಿಂದ ರಾಜದರಿಗ್ರಹೀತವಾದ ಕತ್ತಿಯನ್ನಂಗೀಕರಿಸಿ ತಮ್ಮ ದೈವಿಂದದ ಅಧಿಕಾರ ವಿಷಯವೊಂದು ಭಗವಂತನಿಗೆ ಅಧೀನರಾಗಿರುವೆನೆಂಬ ಅರ್ಥಸೂಚಕವಾಗಿ ಕಾಣಿಕೆಗಳೊಡನೆ ತಮ್ಮವನ್ನು ಸವರೀ ಗುರುವುಗಳಿಗೆ ಸಮರ್ಪಿಸಿದರು. ತಮಗೆ ಲಭಿಸಿದ ಮಹತ್ತ್ವವನ್ನು ಶ್ರೀ ಭಗವಂತನ ದಿವ್ಯಚಿತ್ತಾನುಗುಣವಾಗಿ ನೆರವೇರಿಸುವುದಾಗಿ, ವೈದಿಕ ಕರ್ಮಗಳಮೂಲಕ ಮಹಾರಾಜರು ಪ್ರತಿಜ್ಞೆಯು ಮಾಡಿದರು. ಬಳಿಕ ದೇವಸ್ಥಾನದಿಂದ ಮಹಾರಾಜರವರು ನಿರ್ಗಮಿಸಿ ಪುರಾತನ ಸಭಾಮಂಟಪವನ್ನು ಪ್ರವೇಶಿಸಿ, ಅಲ್ಲಿ ಪ್ರಂಪರ್ಯಾನುವಾಗಿಯಾಗಿಬಂದು ಜಮಾಯಿಸಿದ್ದ ಪ್ರಜೆಗಳ ಮುಂಭಾಗದಲ್ಲಿ ಒಂದು ಅನುಜ್ಞಾ ಪತ್ರಿಕೆಗೆ ದಸ್ತುಖತುಮಾಡಿ, ತಿರುವಾಂಕೂರು ದೇವಸ್ಥಾನಗಳಿಗಾಗಿ ಕೆಲವು ಖರ್ಚುಗಳು ಮಾಡತಕ್ಕದ್ದೆಂದು ಹುಕುಂ ಮಾಡಿದರು. ತರುವಾಯ ಮೇಲ್ಕಂಡ ಹುಕುಮನ್ನು ಬಹಿರಂಗವಾಗಿ ಜಾರೀಯೊಳು ತರಬೇಕೆಂಬದಾಗಿ ದಿವಾನರಿಗೆ ವಿಧಿಸಿದರು. ಬೇಸಿಗೆಕಾಲದಲ್ಲಿ ಜಲದೌರ್ಲಭ್ಯದಿಂದ ವಿಶೇಷವಾದ ಸಂಕಟಪಡತಕ್ಕ ಜನಗಳ ಕ್ಷೇಮಾರ್ಥ ಅಂತಾ ಪ್ರದೇಶಗಳೊಳು ಜಲಪಾತಿಯು ಕಲ್ಪಿಸತಕ್ಕಬಗ್ಗೆ ಮರತಿ ಒಂದುಲಕ್ಷರೂಪಾಯಿಗಳು ವ್ಯಯಮಾಡಲ್ಪಡತಕ್ಕದ್ದೆಂದು ಅಜ್ಞಾಪಿಸಿದರು. ಇಂತಾ ಪ್ರಜಾ ಸುಮನಸ್ಸುಗಳಲ್ಲಿ, ತರುವಾಯ ನೂತನವಾಗಿ ಸಿಂಹಾಸನಾರೋಹಣ ಮಾಡತಕ್ಕ ಹೊಸ ಮಹಾರಾಜರು ಜನೋಪಯುಕ್ತಗಳಾದ ಕೆಲಸಗಳಿಗಾಗಿ ದ್ರವ್ಯ ಮಾಡುವದು ಅನಾದಿವಾಡಿಕೆಯಾಗಿರುತ್ತದೆ. ಗತಿಸಿದ ಮಹಾರಾಜರವರು ಸಿಂಹಾಸನಾರೋಹಣಮಾಡಿದ ಸಮಯದಲ್ಲಿ ಖಿಲವಾಗಿದ್ದ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರಮಾಡುವಂತೆ ಹುಕುಂಮಾಡಿ ಅದರ ಪ್ರಕಾರ ಜರುಗಿಸಿದರು. ಪ್ರಕೃತ ಮಹಾರಾಜರವರು ಪೂರ್ತಿ ರೂಢಿಯಾಗಿ, ಬೇಸಿಗೆಕಾಲದಲ್ಲಿ ತಮ್ಮ ಪ್ರಜೆಗಳಿಗೆ ಒದಗುವ ಕಷ್ಟ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರು. ಇದರಿಂದ ಏನೇನೂ ತಪ್ಪು ಬಾರದಷ್ಟು ನಡೆಯಿತು. ಸಾಬಿಕ ಮಹಾರಾಜರವರು ಮಾಡಿದ ದಸ್ತಾವೇಜು ಈಗಿನವರು ಅನುಸರಿಸಿದ ಪದ್ಧತಿಯು ಬಹುರೂಪವಾದ ಸೈರಣೆಯ ಸುಖನಿಮಿತ್ತವಾದದ್ದಾಗಿರುತ್ತದೆ.

ಸಾಯಂಕಾಲ ಆಗಸ್ಟ್ ೧೬ನೇ ತಾರೀಖು ಬುಧವಾರದದಿನ ದರ್ಬಾರಿನಲ್ಲಿ ಹೊಸ ದರ್ಬಾರಿನವರು, ಎಲ್ಲಾ ಸಂಸ್ಥಾನದವರು, ಬ್ರಿಟಿಷ್ ಗವರ್ನ್‌ಮೆಂಟಿನವರಿಂದ ಅಂಗೀಕರಿಸಲ್ಪಟ್ಟ ಸವರೀ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರಿಂದ ನಿರ್ಮಿತ ರಾಜಮರ್ಯಾದೆಗಳೊಡನೆ ಮಹೋದಾರಣ ಮಾಡಿದರು. ಪಟ್ಟಕಟ್ಟುವ ಕಾಲದಲ್ಲಿ ವಾದ್ಯಗಳಾದ ಪ್ರದೇಶಗಳೆಲ್ಲ ವಿಚಿತ್ರಗಳಾಗಿಯೂ, ಅಭಿರುಚಿಗೆತಕ್ಕಂತೆಯೂ, ಅಲಂಕರಿಸಲ್ಪಟ್ಟಿದ್ದವು. ತತ್ಕಾಲದಲ್ಲಿ ಸಂತೋಷಗಳಾದ ಮಂಗಳ ವಾದ್ಯಗಳೊಡನೆ ಘೋಷಿಸುತ್ತಿದ್ದ ಸಾರ್ವತ್ರಿಕತೆಗಳಾದ ಕೆಲವು ಪ್ರದೇಶಗಳು ಪ್ರಥಮ ಹಾದಿಗಳಾಗಿದ್ದವು. ಪತಾಕೆಗಳೂ, ಪಲ್ಲವಾದಿ ತೋರಣಗಳೂ, ಮಂಟಪ ಪಂಜಿಗಳೂ, ಕದಳೀ ಸ್ತಂಭಗಳೂ, ಕಲ್ಪವೃಕ್ಷದಂತಿದ್ದ ಪ್ರದೀಪಗಳೂ, ಸಕಲ ಜನ ಪ್ರಾಶಸ್ತ್ಯಯುಕ್ತವಾದ ಪ್ರಕೃತ ಮಹೋತ್ಸವದ ವಿಶೇಷಕ್ಕೆ ಅನುಗುಣವಾದ ಸಕಲಾಲಂಕಾರಗಳೂ ಮಾಡಲ್ಪಟ್ಟಿದ್ದವು.

ಸವರೀ ದಿನವೆಂಬ ೧೬ನೇ ತಾರೀಖು ಬುಧವಾರದದಿನ ವಿವಿಧಾಲಂಕಾರಗಳಿಂದ ಶೋಭಾಯಮಾನವಾಗಿದ್ದ ದರ್ಬಾರುಸೌಧಕ್ಕೆ ಮಹಾರಾಜರವರು ದಯಮಾಡಿದರು. ಇದಕ್ಕೆ ಪೂರ್ವದಲ್ಲಿ ನಾಯರ್ ಬ್ರಿಗೇಡ್ ಪಟ್ಟಣ, ಮಹಾರಾಜರವರ ಪಾರಾ ಮತ್ತು ಬ್ರಿಟಿಷ್ ಸೈನ್ಯಗಳೆಲ್ಲವು ಸಾಲಿನಿಂದ ನಿಂತಿದ್ದವು. ಈ ಉತ್ಸವ ಸುದಿನ್ನಕ್ಕಾಗಿ ಸೇರಿದ್ದ ಪ್ರಜಾ ಸಮೂಹದಿಂದ ಸೌಧವು ನಿಬಿಡವಾಗಿತ್ತು. ಮಹಾರಾಜರವರು ಸಭಾಮಂಟಪದವನ್ನು ಪ್ರವೇಶಿಸಿದ ಕೂಡಲೇ ಗೌರವಾರ್ಥವಾಗಿ ಸುತ್ತಮುತ್ತಲ ತೋಪುಗಳು ಧಿಕ್ಕೆಂದು ಗಳವುಮಾಡಿ ಹಾರಿಸಲ್ಪಟ್ಟವು. ಬಳಿಕ ಸೈನ್ಯಗಳೆಲ್ಲ ಫೈರಿಂಗ ಮಾಡಿದವು. ಬ್ರಿಟಿಷ್ ರೆಸಿಡೆಂಟರಾದ ಮೆ॥ ಹಾನಿಂಗ್‌ಟನ್ ಯವರು ದಯಮಾಡಿದಕೂಡಲೇ ಅವರನ್ನು ಯುವರಾಜರೂ, ದಿವಾನರಾದ ಟಿ. ರಾಮಯ್ಯಂಗಾರ್ರವರು ಸಹ ಕಾದಿದ್ದು ಬರಮಾಡಿಕೊಂಡರು. ಅನಂತರ ಸಭೆಗೆ ಕರೆಯಲ್ಪಟ್ಟ ಯೂರೋಪಿಯರ್ ವ ನೇಟಿವ್ ಅಧಿಕಾರಿಗಳೂ ಇತರ ದೊಡ್ಡಮನುಷ್ಯರೂ ನಿಯುಕ್ತರಾಗಿ ಅವರವರ ಆಸನಗಳೊಳು ಕುಳಿತುಕೊಂಡಮೇಲೆ ಬ್ರಿಟಿಷರೆಸಿಡೆಂಟರವರು ಮಹಾರಾಜರಿಗೊಂದು ಅನರ್ಘವಾದ ಉಡುಗೊರೆಯನ್ನು ಒಪ್ಪಿಸಿದರು. ಬಳಿಕ ಪ್ರಸಿದ್ಧಪತ್ರಿಕೆಯು ಕ್ರಮಪ್ರಕಾರ ಓದಲ್ಪಟ್ಟು ತನ್ಮೂಲಕ ಮಹಾರಾಜರವರು, ತಿರುವಾಂಕೂರ್ ಸಂಸ್ಥಾನದ ಮಹಾರಾಜತ್ವೇನ ಬ್ರಿಟಿಷ್ ಗವರ್ನ್‌ಮೆಂಟಿನವರಿಂದ ಅಂಗೀಕರಿಸಲ್ಪಟ್ಟರೆಂಬ ಅಂಶವು ವಿಶಿಷ್ಟ ಪ್ರಜೆಗಳಿಗೂ ತಿಳಿಸಲ್ಪಟ್ಟಿತು. ಅನಂತರ ಬ್ರಿಟಿಷ್ ರೆಸಿಡೆಂಟರವರು ಮದರಾಸ್ ಗವರ್ನರವರಿಂದ ಬಂದಿದ್ದ ಶುಭವಾದನ ಸೂಚಕವಾದ ಕರೀತಾವನ್ನು ಮಹಾರಾಜರಿಗೆ ಒಪ್ಪಿಸಿದರು. ಅದು ಸಹ ಆಗಲೇ ಸಭೆಯಲ್ಲಿ ಓದಲ್ಪಟ್ಟಿತು. ಆಸಮಯದಲ್ಲಿ ಅರಮನೆಯಮುಂದೆ ನಿಂತಿದ್ದ ವಿಶಿಷ್ಟ ಸೈನ್ಯಗಳೂ ಫೈರಿಂಗ ಮಾಡಿದವು. ಮತ್ತೊಂದುಸಲ ಗೌರವಾರ್ಥ ತೋಪುಗಳು ಹಾರಿಸಲ್ಪಟ್ಟವು. ಬಳಿಕ ಶ್ರೀಮನ್ಮಹಾರಾಜರವರು ತಮ್ಮ ಭದ್ರಾಸನದಿಂದೆದ್ದು, ಬ್ರಿಟಿಷ್ ರೆಸಿಡೆಂಟರವರನ್ನುದ್ದೇಶಿಸಿ ತಿಳಿಸಿದ ಕೆಲವು ಅಂಶಗಳಲ್ಲಿ ತಮ್ಮ ಸೋದರಮಾವಂದಿರಾದ ಸಾಬಿಕ ಮಹಾರಾಜಾ ರಾಮವರ್ಮರವರ ವಿಯೋಗಜನ್ಯವಾದ ಅವರ ವಿಷಾದವು ಮುಖ್ಯವಾದ್ದಾಗಿತ್ತು. ಸಭಿಕರಿಗೆಲ್ಲ ಪುಷ್ಪತಾಂಬೂಲಾದಿ ಮಾಮೂಲು ಮರ್ಯಾದೆಗಳು ನಡೆದು ಸಂತುಷ್ಟರಾದವರಾಗಿ ಜನಗಳು ಸಭಾ ಮಂಟಪದಿಂದ ಹೊರಟರು. ಬ್ರಾಹ್ಮಣರು ಮುಂತಾದವರೆಲ್ಲರಿಗೂ ಸಮುಚಿತವಾಗಿ ಸಂತರ್ಪಣೆ ನಡೆಯಿತು. ಇಲ್ಲಿಗೆ ಆದಿನದ ಉತ್ಸವದ ವಿಶೇಷವು ಪೂರೈಸಿತು. ಪಾಠಾಂತರದ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರ ಸುದರ್ಶನಕ್ಕಾಗಿ ಸಕಲ ಮರ್ಯಾದೆಗಳೊಡನೆ ಹೋಗಿದ್ದರು. ಬ್ರಿಟಿಷ್ ರೆಸಿಡೆಂಟರು ಮಹಾರಾಜರವರಿಗೆ ಶುಭವಾದನ ಮಾಡಿ ಪುಷ್ಪತಾಂಬೂಲಗಳನ್ನೊಪ್ಪಿಸಿದರು. ಮಹಾರಾಜರೊಡನೆ ರಾಜಪುತ್ರರೂ, ದಿವಾನ್ ಮೆ॥ ರಾಮಯ್ಯಂಗಾರ್‌ರವರೂ ಹೋಗಿದ್ದರು. ಶ್ರೀಮನ್ಮಹಾರಾಜರವರ ಗಮನಾಗಮನಾದಿ ವಿಶೇಷಗಳಿಂದ ಆದಿನವು ಬಹಳವಾಗಿ ಆನಂದದಾಯಕವಾಗಿತ್ತು.

ಈಗ ಪಟ್ಟಾಭಿಷಿಕ್ತರಾದ ಮಹಾರಾಜರವರು ಆಯುರಾರೋಗ್ಯೈಶ್ವರ್ಯ ಸಂತಾನಾದಿ ಸಕಲ ಸೌಭಾಗ್ಯಗಳೊಡನೆ ನಿರವಧಿಕಸುಖ ಸಂತೋಷಗಳನ್ನನುಭವಿಸುತ್ತ ತಮ್ಮ ವಂಶಪರಂಪರಾಗತವಾದ ಕೀರ್ತಿ ಪ್ರತಿಷ್ಠೆಗಳನ್ನು ದೃಢಪಡಿಸಿ, ತಿರುವಾಂಕೂರ್ ರಾಜವಂಶಜರು ದೈವಭಕ್ತಿಯುಳ್ಳವರೆಂಬ ಮತ್ತು ಸದಾಚಾರ ಸಂಪನ್ನರೆಂಬವ ಕೀರ್ತಿಗೆ ವಿಶೇಷತಃ ಪಾತ್ರರಾಗುತ ಸ್ವಾಭಿಮಾನದೊಡನೆ ತಮ್ಮ ಪ್ರಜೆಗಳಾದ ಕೇರಳೀಯರನ್ನು ಪರಿಪಾಲಿಸುತಿರುವಂತೆ ಅವರ ಉಪಾಸ್ಯ ದೈವವಾದ ಶ್ರೀ ಪದ್ಮನಾಭನು ಅನುಗ್ರಹಿಸಬೇಕೆಂತಲೂ, ಈ ಮೂಲಕ ಅಲ್ಲಿನ ಪ್ರಜೆಗಳಿಗೆ, ಅಲ್ಪಾಯುರ್ಯೋಗದಿಂದ ನಷ್ಟವಾದ ಪ್ರಭು ವಿಯೋಗಜನ್ಯವಾದ ದುಃಖವೂ ಅಂತವರ ಆಧಿಪತ್ಯದೊಳು ಕಾರಣಾಂತರಗಳಿಂದ ಏರ್ಪಟ್ಟ ಅನೇಕ ನಿರ್ಬಂಧಗಳೂ ನಿವಾರಣವಾಗಿ ಸಂತೋಷಮಯವಾದ ಸ್ಥಿತಿಯೊಳಿರಬೇಕೆಂತಲೂ ಕೋರುವೆವಲ್ಲದೆ ನೇಟಿವ್ ಅರಸರ ಪ್ರಾಬಲ್ಯಾಭಿವೃದ್ಧಿಯೊಳು ಆತುರವಾದ ಆಕಾಂಕ್ಷೆಯುಳ್ಳ ನಮಗೆ ತಾದೃಶ ವಿಷಯಕ್ಕಿಂತಲೂ ಬೇರೆ ಯಾವದೂ ಪ್ರಿಯವಾಗುವದನ್ನುಂಟುಮಾಡತಕ್ಕದ್ದಲ್ಲವೆಂದು ದೃಢವಾಗಿ ಹೇಳುವೆವು.

ನೋಟಿಸ್.

"ಬೆಂಗಳೂರಲ್ಲಿರುವ ಮುತ್ಯಾ ಗೋವಿಂದಾಚಾರ್ಯರು"—ಸ್ತ್ರೀ ಪುನರ್ವಿವಾಹ ವಿಷಯಕವಾದ ನಿಮ್ಮ ಲೇಖನದಲ್ಲಿ ತಿಳಿಸಲ್ಪಟ್ಟಿರುವ ನಿಶಿಷ್ಟಾಂಶವು ಹಿಂದಿನವಾರದ ಪತ್ರಿಕೆಯಲ್ಲಿ ಅನುವಾದ ಮಾಡಿದ್ದಾಗಿರುತ್ತದೆ. ಅದು ಮರಳಿ ಪ್ರಕಟಿಸುವದು ನಿಷ್ಪ್ರಯೋಜನವಾದರೂ ಈ ವಾರದಲ್ಲಿ ಅವಕಾಶವಿಲ್ಲದೆ ಹೋದದರಿಂದ ಅದು ಮುಂದಿನವಾರದಲ್ಲಿ ಪ್ರಕಟಿಸುವೆವು.

LOCAL AND PROVINCIAL NEWS
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

A prolific family.—ಕುಂಗೇರೀ ವಾಸಸ್ಥನಾದ ಒಬ್ಬ ಮನುಷ್ಯನ ಕುಟುಂಬವು ಗರ್ಭಿಣಿಯಾಗಿದ್ದು ಕೆಲ ದಿನಗಳ ಕೆಳಗೆ ನಾಲ್ಕು ಮಕ್ಕಳನ್ನ ಹೆತ್ತಳಾಗಲೂ, ಆ ಪ್ರಸೂತಿ ಇಬ್ಬರು ಗಂಡುಮಕ್ಕಳಾಗಿಯೂ, ಬೇರಿಬ್ಬರು ಹೆಣ್ಣುಮಕ್ಕಳಾಗಿಯೂ ಇರುತ್ತಾರೆ. ಎರಡು ಶಿಶುಗಳು ಸಾಕ್ಷ್ಯವಾಗಿದಾರೆ.

A Tragical end.—ತುಮಕೂರು ರಸ್ತೆಯಲ್ಲಿರುವ ಬಾಣಾವಾರದಬಳಿ ಒಬ್ಬ ಮನುಷ್ಯನು ಏನೋ ಅಗ್ರಹದಿಂದ ತನ್ನ ಹೆಂಡತಿಯ ಮೂಗನ್ನು ಕಚ್ಚಿ ನುಂಗಿಬಿಟ್ಟನಂತೆ. ಹಾಗೆ ಸ್ಥಳತಪ್ಪಿಸಿ ನುಂಗಿದ ಅವಯವವು ಅವನಿಗೆ ಒದಗಿಬರದೆ ವಾಂತಿ ಭೇದಿಯಿಂದ ಮೃತಪಟ್ಟಂತೆ ತಿಳಿಯಬರುತ್ತದೆ.

Public Holidays.—ಈದಿನ ಅಕ್ಷ್ಮಲಾಯನರಿಗೂ ನಾಳೆಯದಿನ ಅವಸ್ಥಾಂಬರಿಗೂ ಉಪಾಕರ್ಮ ಪ್ರಯುಕ್ತ ಪಿನಿಸ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತ್ತದೆ. ಈ ಕಾಲದಲ್ಲಿ ತಾವು ಅಕ್ಷ್ಮಲಾಯನರೋ ಅವಸ್ಥಾಂಬರೋ ಅದು ಅನೇಕರಿಗೆ ಗೊತ್ತಿಲ್ಲವೆ ಇರುವದರಿಂದ ಗವರ್ನ್‌ಮೆಂಟಿನವರು ಯೆರಡುದಿನಗಳೂ ರ್ವಂದಾ ರಜಾ ಕೊಟ್ಟರುತ್ತಾರೆಂದು ಎಣಿಸಬೇಕಾಗಿದೆ.

Mr D Namakal Row.—ಚಿತ್ರದುರ್ಗದ ಸಬ್‌ಡಿವಿಜನ್ ಅಧಿಕಾರಿಯಾದ ಮೆ॥ ನಾಮಕಲ್‌ರಾಯರಿಗೆ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ವಿಧಿಸಿದ ದಂಡನೆಯಮೇಲೆ ಚೀಫ್‌ಕಮಿಷನರವರು ರಿವಿಜನ್‌ನಲ್ಲಿ ಮರಳಿ ಪರಿಶೀಲನೆಮಾಡಿ ಕೆಲವು ಭಾಗವು ದಂಡನೀಯವಲ್ಲವೆ ಇರುವದರಿಂದಲೂ ಮತ್ತು ಕೆಲವು ಭಾಗವು, ಅತ್ಯಲ್ಪವಾಗಿ ಪರಿಗಣಿಸಲ್ಪಟ್ಟದ್ದಾಗಿರುವದರಿಂದಲೂ, ಜುರ್ಮಾನೆ ವೊಬಲಗಿನ ಗೋಜಿಗೆ ಹೋಗದೆ ಅದು ಕಾಯಂ ಮಾಡಿದಂತೆ ತಿಳಿಯಬರುತ್ತದೆ.

Temporary appointment.—ಬೆಂಗಳೂರು ತಾಲ್ಲೂಕು ಅಮಲ್ದಾರ್ ಮೆ॥ ಶೀತಾರಾಮಯ್ಯನವರು ಹಂಗಾಮಿಯಾಗಿ ಬೌರಿಂಗ್‌ಪೇಟೆ ಮಹಾಮಲೇರಿಯ ಕೆಲಸವನ್ನು ನೋಡುವರಿರುವಂತೆ ತಿಳಿಸಿದ್ದೆವಷ್ಟೆ. ಇವರು ಯಥಾಪ್ರಕಾರ ತಮ್ಮಸ್ವಂತಕೆಲಸಕ್ಕೆ ವಾಪಸ್‌ಬರುವರೆಂತಲೂ, ಇನ್ನುದಿನವಾದರೂ ಅಲ್ಲಿನ ಕಾಯಂ ಅಮಲ್ದಾರರಮೇಲೆ ಜಾರ್ಜು ಯೇರ್ಪಡದಿರುವದರಿಂದ ತಾವದ್ಯಂತ ಅಲ್ಲಿನ ಕೆಲಸವು ನೋಡುತಲಿರತಕ್ಕಬಗ್ಗೆ ಕೋಲಾರ ಡಿಸ್ಟ್ರಿಕ್ಟು ಆಫೀಸ್ ಹೆಡ್‌ಕ್ಲರ್ಕ್ ರಾಜುಮೊದಲಿಯಾರ್ರೆಂಬವರು ಮೊಕರ್ರಾರಿ ಮಾಡಲ್ಪಟ್ಟರೆಂದೂ ತಿಳಿಯಬರುತ್ತದೆ.

His Highness the Maharaja.—ಬರುವ ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರು, ಬ್ರಿಟಿಷ್ ರೆಸಿಡೆಂಟರವರು ದಿವಾನರು, ಇವರ ಸಂಗಡ ಕಡೂರು ಡಿಸ್ಟ್ರಿಕ್ಟಿಗೆ ಹೋಗುವವರಾಗಿರಾರೆಂತಲೂ ಆಬಗ್ಗೆ ಬೇಕಾದ ವೊದಲಾದವೆಲ್ಲ ಮರಸ್ತು ಮಾಡತಕ್ಕದ್ದೆಂದು ಮರಮತ್ತು ಇಲಾಖೆಯವರಿಗೆ ಹುಕುಂ ಕೊಡಲ್ಪಟ್ಟದೆಯೆಂತಲೂ ತಿಳಿಯಬರುತ್ತದೆ. ಕಾಫೀ ಪ್ಲ್ಯಾಂಟರ್ಸ್ ಕತಮೆಯಾಗಿರುವದರಿಂದ ನೇಟಿವ್ ಪ್ಲ್ಯಾಂಟರುಗಳಿಂದಯೇ ಯೂರೋಪಿಯನ್‌ರಗಳಗೂ ನುಕ್ಸಾನ ಬರುತಲಿದೆ. ಆಬಗ್ಗೆ ದಿವಾನರವರ ಹುಕುಂಪ್ರಕಾರ ಸರ್ವೆ ಇಲಾಖೆಯವರಿಂದ ಮಾಡಲ್ಪಟ್ಟ ಗ್ಯಾರಂಟಿ ಮತ್ತು ಟ್ರೈಪಡಿಶೀಟುಗಳು ಕ್ಷಾಮ್ಯವಾಗಿವೆ. ಮಹಾರಾಜರವರು ಖುದ್ದು ಪರಾಂಬರಿಸುವದರಮೂಲಕ ಯೂರೋಪಿಯನ್ನರಂತೆ ನೇಟಿವ್‌ಗಳೂ ಅವರ ದಯೆಗೆ ಪಾತ್ರರಾಗಬಹುದು.

CORRESPONDENCE.

[illegible] ಕರ್ನಾಟಕ ಪ್ರಕಾಶಿಕಾ ಕರ್ತರಿಗೆ ವಿಜ್ಞಾಪನೆ.

ಅಯ್ಯಾ,—೧೮೮೫ನೇ ಇಸವಿ ಜೂಲೈ ೮ ತ್ತೆಯಲ್ಲಿ ಮ॥ ರಾ॥ ದಿವಾನ್‌ಬಹದೂರ್, ಆರ್. ರಘುನಾಥರಾಯರವರು ಈಊರಿಗೆ ದಯಮಾಡಿದ್ದವೇಳೆ ವಿಧವಾವಿವಾಹ ವಿಷಯದಲ್ಲಿ ಇಲ್ಲಿನ ಪಂಡಿತರ ಸಂಗಡ ಶಾಸ್ತ್ರಾರ್ಥ ವಿಚಾರ ನಡಿಸುವಾಗ ತಿಳಿಸಬೇಕಾಗಿದ್ದ ಒಂದಂಶವನ್ನು ಆಗಸ್ಟು ೧ನೇ ತಾರೀಖಿನ ತಮ್ಮ ಪತ್ರಿಕಾಮೂಲಕ ತಿಳಿಸಿರುತ್ತಾರೆ. ಅದು ಯಾವದುಪದೈ—

ಬ್ರಹ್ಮ ವೈವರ್ತಪುರಾಣ, ಶ್ರೀಕೃಷ್ಣಜನ್ಮಖಂಡ, ಉತ್ತರಾರ್ಧ. ಅ. ೬೦ ಶ್ಲೋಕ ೧.

[illegible]

ಈಶ್ಲೋಕವು ಈಅಧ್ಯಾಯದಲ್ಲಿಯೇ ಇಲ್ಲ.

ಬ್ರ. ವೈ. ಪು. ಶ್ರೀಕೃಷ್ಣಜನ್ಮಖಂಡ, ಉತ್ತರಾರ್ಧ, ಅಧ್ಯಾಯ ೧೧೨, ಶ್ಲೋ ೧೮.

[illegible]

ಎಂಬ ಈಯೆರಡುಶ್ಲೋಕಗಳಿಂದ ಮನ್ಮಥಾವತಾರವಾದ ಪ್ರದ್ಯುಮ್ನನಿಗೂ ಮಾಯಾವತಿಗೂ ಪುನರ್ವಿವಾಹ ನಡೆಯಿತೆಂತಲೂ, ಅನಿರುದ್ಧನು ಮಾಯಾದೇವಿಯ ಪುತ್ರನಾದ್ದರಿಂದ ಪೌನರ್ಭವನೆಂತಲೂ, ಈತನು ಬ್ರಹ್ಮಾಂಶವೆಂತಲೂ ಅವರು ಬರೆದಿರುತ್ತಾರೆ. ಮಾಯಾವತಿಗೆ ಅಕ್ಷತಯೋನಿಯೆಂಬ ವಿಶೇಷಣವಾಗಲಿ ಆಕೆಗೆ ವೈಧವ್ಯ ಪ್ರಾಪ್ತವಾಯಿತೆಂತಲಾಗಲಿ ಆ ಗ್ರಂಥದಲ್ಲಿರುವ ಯಾವವಚನಗಳಿಂದಲಾದರೂ ಸ್ಪಷ್ಟವಮನದಿಲ್ಲವಾದ್ದರಿಂದ ಅವರು ಬರೆದಿರುವ ಅಂಶವು ಅಕ್ಷತಯೋನಿಯರಾದ ವಿಧವೆಯರ ಪುನರ್ವಿವಾಹಕ್ಕೆ ಏನೇನೂ ಉಪಯೋಗಿಸಲಾರದು, ಹ್ಯಾಗೆಂದರೆ,

ಬ್ರ. ವೈ. ಪು. ಶ್ರೀಕೃಷ್ಣಜನ್ಮಖಂಡ ಉತ್ತರಾರ್ಧ, ಅ. ೧೧೨, ಶ್ಲೋ॥ ೮.

"[illegible]"॥

ಈ ಶ್ಲೋಕದ ಪ್ರಕಾರ ರತೀದೇವಿಯು ಮಾಯಾವತೀ ಎಂಬ ಹೆಸರುಳ್ಳವಳಾಗಿ ಶಂಬರನ ಗೃಹದಲ್ಲಿ ಇದ್ದುಕೊಂಡು ಛಾಯಾರೂಪವಾದ ಒಂದು ಸ್ತ್ರೀವ್ಯಕ್ತಿಯನ್ನು ಕಲ್ಪಿಸಿ ಶಂಬರನ ಶಯನಕ್ಕೆ ಕಳುಹಿಸಿ ಮೋಹಪಡಿಸುತ್ತಿದ್ದಳಾಗಿ ವ್ಯಕ್ತವಾಗುತ್ತದೆ. ಆದದರಿಂದಲೇ ಆಕೆಯು ಶಂಬರಾಸುರನಿಗೆ ಪಾಣಿಗೃಹೀತಳಾದ ಪತ್ನಿಯೇ ಅಲ್ಲವೆಂಬುವದು ಸ್ಪಷ್ಟವಾಗಿದೆಯಲ್ಲದೆ ಆಕೆಯನ್ನು ಶಂಬರನು ವಿವಾಹ ಮಾಡಿಕೊಂಡನೆಂದು ಯೆಲ್ಲಿಯೂ ಹೇಳಿರುವದಿಲ್ಲ. ಮತ್ತು ಪ್ರದ್ಯುಮ್ನನ ವಿವಾಹವು ಶಾಸ್ತ್ರೀಯವಹುದೊ ಅಲ್ಲವೊ ಯೆಂಬ ರುಕ್ಮಿಣಿಯ ಸಂದೇಹವೂ ಅದಕ್ಕ ನಾರದರ ಸಮಾಧಾನವೂ ಮೇಲ್ಕಂಡ ಶ್ರೀಕೃಷ್ಣಜನ್ಮಖಂಡದಲ್ಲಿ ಯೆಲ್ಲಿಯೂ ಇಲ್ಲ. ಮತ್ತು

ಬ್ರ. ವೈ. ಪು. ಶ್ರೀಕೃಷ್ಣಜನ್ಮಖಂಡ ಉತ್ತರಾರ್ಧ, ಅ. ೧೧೨. ಶ್ಲೋ॥ ೧ರಿಂದಾರಭ್ಯ ೨೫ರವರಿವಿಗೆ.

"[illegible] ॥ [illegible] ॥ [illegible] ॥ [illegible] ॥ [illegible] ॥ [illegible]"॥

ಈ ಶ್ಲೋಕಗಳನ್ನು ಪರ್ಯಾಲೋಚಿಸುವಲ್ಲಿ ಸರಸ್ವತೀದೇವಿಯು ಏಕಾಂತದಲ್ಲಿ ರತಿದೇವಿಯನ್ನು ಕುರಿತು, ನಿನ್ನ ಪತಿ ಪೂರ್ವದಲ್ಲಿ ಶಿವ ಕೋಪಾಗ್ನಿಯಿಂದ ಭಸ್ಮವಾಗಿಹೋದನು. ಅವನೇ ಈ ರುಕ್ಮಿಣೀಪುತ್ರನು. ಅವನನ್ನು ಈರಾಕ್ಷಸನು ರುಕ್ಮಿಣಿಯ ಸೂತಿಕಾಗೃಹದಿಂದ ಮಾಯೋಪಾಯದಿಂದ ಅಪಹರಿಸಿಕೊಂಡು ಬಂದು ನಿನಗೆಕೊಟ್ಟನು. ಅವನು ನಿನ್ನಪತಿಯೇ ಹೊರ್ತು ನಿನಗೆ ಮಗನಲ್ಲ, ಮತ್ತು ಕಾಮನನ್ನು ಕುರಿತು ಈರತಿಯೇ ನಿನ್ನಪತ್ನಿಯು ಈ ಸ್ತ್ರೀಯೊಂದಿಗೆ ನೀನು ಸುಖೋಗವನ್ನು ಮಾಡು. ಎಲೈ ಮನ್ಮಥನೆ, ನೀನು ರುಕ್ಮಿಣೀಪುತ್ರನು ಈದೈತ್ಯನಿಗೆ ನೀನು ಮಗನಲ್ಲವೆಂದು ಹೇಳಿದಳು. ಇದಲ್ಲದೆ ಈ ಶಂಬರಾಸುರನನ್ನು ಸಂಹರಿಸುವದಕ್ಕೆ ಪೂರ್ವದಿಂದಲೂ ಪ್ರದ್ಯುಮ್ನನು ರತಿಯಲ್ಲಿ ಸಂಭೋಗಮಾಡುತಿದ್ದಂತೆಯೂ ಅದನ್ನು ಕಂಡು ಶಂಬರಾಸುರನು ಅವರನ್ನು ಕೊಲ್ಲುವದಕ್ಕೆ ಬಂದಂತೆಯೂ ವ್ಯಕ್ತವಾಗುತ್ತದೆ. ಈ ಸಂದರ್ಭಗಳನ್ನೆಲ್ಲಾ ನೋಡುವಲ್ಲಿ ರತೀದೇವಿ ಶಂಬರಾಸುರನ ಹೆಂಡತಿಯಾದಂತೆಯೂ ಅವನ ಮರಣಾನಂತರ ಆಕೆ ಅಕ್ಷತಯೋನಿಯಾಗಿದ್ದದರಿಂದ ಆಕೆಗೆ ಪುನರ್ವಿವಾಹವಾದಂತೆಯೂ ಎಳ್ಳಷ್ಟುಮಾತ್ರವೂ ತಿಳಿಯಬರುವದಿಲ್ಲ. ಪರಂತು ಸಕಲ ಗ್ರಂಥಗಳಿಂದಲೂ ಮೊದಲಿನಿಂದ ಇವರಿಗೆ ದಾಂಪತ್ಯವು ಉಂಟಾದ ಹಾಗೆಯೂ ವ್ಯಕ್ತವಾಗುತದೆ. ಇದಲ್ಲದೆ ಅನಿರುದ್ಧನು ಬ್ರಹ್ಮಾಂಶವೆಂಬ ವಿಷಯದಲ್ಲಿ ಯಾರೂ ಸಂದೇಹಪಡದೆ ಇದ್ದಾಗ್ಯೂ ಆತನು ರತೀದೇವಿಯಗರ್ಭದಲ್ಲಿ ಉತ್ಪನ್ನನಾದವನೆಂಬುವದನ್ನೂ ಆ ಕಾರಣದಿಂದ ಆತನು ಪೌನರ್ಭವ ನೆಂಬುವದನ್ನೂ ಸುಳ್ಳೆಂದು ಹೇಳತಕ್ಕದ್ದಾಗಿದೆ.

ಶ್ರೀಮದ್ಭಾಗವತ ದಶಮಸ್ಕಂದ ಅ. ೬೧ ಶ್ಲೋಕ ೨೧.

[illegible]॥

ಮತ್ತು ಅಧ್ಯಾಯ ೯೦. ಶ್ಲೋಕ ೩೭—೩೮

[illegible]॥

ಎಂಬ ಶ್ಲೋಕಗಳನ್ನು ಪರಾಂಬರಿಸತಕ್ಕದ್ದು. ಇವುಗಳಿಂದ ಪ್ರದ್ಯುಮ್ನನಿಗೆ ರುಕ್ಮಿಪುತ್ರಿಯಾದ ರುಕ್ಮವತೀಗರ್ಭದಲ್ಲಿ ಅನಿರುದ್ಧನು ಜನ್ಮಿಸಿದ ನೆಂಬುವದು ವ್ಯಕ್ತವಾಗುತ್ತ. ಹೀಗಿರುವಲ್ಲಿ ರುಕ್ಮಿಪುತ್ರನಾದ ಅನಿರುದ್ಧನನ್ನು ಪೌನರ್ಭವನೆಂತಲೂ ಶಂಬರಾಸುರನ ಸಂಗಡ ವಿವಾಹಸಂಬಂಧವೇ ಇಲ್ಲದ ಮಾಯಾದೇವಿಯನ್ನು ವಿಧವೆಯೆಂತಲೂ ಪ್ರದ್ಯುಮ್ನ ಮಾಯಾದೇವಿಯರ ಸಂಬಂಧವು ಪುನರ್ವಿವಾಹ ಸಂಬಂಧವೆಂತಲೂ ಈ ದೃಷ್ಟಾಂತವು ತಾವುಮಾಡಲೆತ್ನಿಸಿರುವ ವಿಧವಾವಿವಾಹ ಸಾಧಕವೆಂತಲೂ ಭಾವಿಸಿದ, ಮ॥ ರಾ॥ ರಘುನಾಥರಾಯರವರ ಸಾಹಸವು ತುಂಬ ಶ್ಲಾಘನೀಯವಾದದ್ದಾಗಿದೆ.

ಈ ಸಂಗತಿಯನ್ನು ಘನವಾದ ತಮ್ಮ ಪತ್ರಿಕೆಯಮೂಲಕ ಮಹಾರಾಜಶ್ರೀಯವರ ಅವಧಾನಕ್ಕೆ ತರಬೇಕೆಂದು ಕೋರುವ,

ಬೆಂಗಳೂರು, ೨೧–೮–೮೫ } ತಮ್ಮ ವಿಧೇಯನಾದ, ಮೈಸೂರು ಗೋಪಾಲಶಾಸ್ತ್ರಿ.

ಅಯ್ಯಾ,—ನಾನೀ ಕೆಳಗೆ ಬರೆಯುವ ಸಂಗತಿಗಳನ್ನು ಪ್ರಮುಖವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈಗ್ಗೆ ಸುಮಾರು ೩—೪ ದಿವಸಗಳ ಕೆಳಗೆ ಒಂದಾನೊಂದು [illegible] ಬಣಜಿಗರನು [illegible] "[illegible]" [illegible] ಪತ್ರಿಕೆಯನ್ನು [illegible] ಅದನ್ನು ನೋಡುವಲ್ಲಿ [illegible] ಕರ್ನಾಟಕ ಪ್ರಕಾಶಿಕೆಯವರಿಗೆ [illegible] ಬ್ರಾಹ್ಮಣರ [illegible] ಬಣಜಿಗರು [illegible] ವೀರಶೈವ ಬ್ರಾಹ್ಮಣರೆಂದು [illegible]

೧. [illegible] ವೀರಶೈವ ಬ್ರಾಹ್ಮಣರೆಂದು ಹೇಳಿಕೊಳ್ಳುವ ಜನರಿಗೆ [illegible] ಬಣಜಿಗರೆಂತಲೂ [illegible] ಬಣಜಿಗರೆಂತಲೂ, [illegible] ಶೆಟ್ಟಿಬಣಜಿಗರೆಂತಲೂ, ಹೆಸರುಬಂದುದಕ್ಕೆ ಕಾರಣವೇನು?

೨. ತಮ್ಮ [illegible] "[illegible]" [illegible] ಮಾಡುವದಕ್ಕೆ [illegible] ಸ್ಥಾನದಲ್ಲಿ ಸೇರಿಸಬಹುದೊ?

೩. ಈ [illegible] ಜಾತಿ ಜನರೂ [illegible] ಮಾಡುವದೊ?

೪. ಇವರ [illegible] ಬ್ರಾಹ್ಮಣರ [illegible] ಬ್ರಾಹ್ಮಣರೆಂದು [illegible] ಪ್ರಸಿದ್ಧವಾಗಿರುತ್ತೆ.

೫. ಸುಮಾರು [illegible] ಅನ್ಯರು [illegible] ಸಂಬಂಧವಾದ [illegible] ವೀರಶೈವ ಬ್ರಾಹ್ಮಣರೆಂದು ಬರೆಯದಿರುವಲ್ಲಿ [illegible] ಬರೆಯದಿರುವರು?

ಮೇಲ್ಕಂಡ ೫ ಅಂಶಗಳೂ ಬ್ರಾಹ್ಮಣರಲ್ಲಿ ಉಂಟೆ? ಇದನ್ನು ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ.

೨೦—೮—೮೫. } ಅರಸೀಕೆರೆ. } AN OBSERVER.

ಈ ಪ್ರಶ್ನೆ ಯೆರಡುಕಗಳಿಗೆ ಈಗ ಮುಖ್ಯವಾಗಿ ಜವಾಬ್‌ಹೇಳಬೇಕಾಗಿದೆ ಏನಂದರೆ,—ಕರ್ನಾಟಕಪ್ರಕಾಶಿಕಾ ಪತ್ರಿಕೆಯಲ್ಲಿ ಹದಿನೆಂಟುಫಣ, ಒಂಭತ್ತು ಫಣಗಳಂ ವಿಂಗಡಿಸಿ ಪ್ರಕಟಿಸಿದ್ದಕ್ಕೆ ಆಧಾರವೇನೆಂದರೆ—ಪೂರ್ವದಲ್ಲಿ ಅಚ್ಯುತರಾಯ್ ಕೃಷ್ಣರಾಯರ ದೌಲತ್ತಿನೊಳು, ಅಂದರೆ,ಈಗ್ಗೆ ಸುಮಾರು ಐನೂರುವರುಷಗಳಹಿಂದೆ, ಈವಿವಾದವೇರ್ಪಟ್ಟು. ಹಿಂದೆ ನಾವು ತಿಳಿಸಿರುವಪ್ರಕಾರ ಫಣಕಟ್ಟುಗಳು ವಿಂಗಡಿಸಲ್ಪಟ್ಟಿರುವದರಿಂದಲೂ, ಈದೇಶದಲ್ಲಿ ಪ್ರಸಿದ್ಧಬಾಲಕರೆನಿಸಿದ್ದ ಸಾಬಕ ಸರ್ ಮಾರ್ಕ್ ಕಬ್ಬನ್‌ಯವರ ಆಡಳಿತದಲ್ಲಿ ಸರ್ಕಾರ್ ಪ್ರಿಂಟಿಂಗ್‌ಆಫೀಸಿನೊಳು ಪ್ರಕಟಿಸಲ್ಪಟ್ಟ ಪ್ರಶ್ನೋತ್ತರರೂಪವಾದ ಒಂದುಗ್ರಂಥದಲ್ಲಿ ಇದೇರೀತಿಯಾಗಿರುವದರಿಂದಲೂ, ಈಗ ಅದರ ಆಕ್ಷೇಪಣೆಗೇನೂ ಅವಕಾಶ ವಿರುವದಿಲ್ಲವು. ವೃಷಭೇಂದ್ರವಿಜಯವೆಂಬ ಗ್ರಂಥವಿರಯವಾಗಲಿ ಅದರಮೇಲೆ ಹಿಂದೆ ದೋಷೋದ್ಘಾಟನಮಾಡಿದ ಮೈಸೂರು ಸ್ಟಾರ್ ಪತ್ರಿಕೆಯ ಪೂರಣೆಯಾಗಲಿ ಈಕಾಗದವನ್ನು ನೋಡುವತನಕ ನಮ್ಮ ಸ್ಮರಣೆಗೆ ಬರಲಿಲ್ಲವು.

ಜಂಗಮರು ಅಜಾತಿಬಿಕ್ಷೆ ಮಾಡುತ್ತಾರೆಂದು ತಿಳಿಸಿದ ಆಕ್ಷೇಪಣೆಗೆ—ಸದರೀ ಸ್ಟಾರ್ ಪತ್ರಿಕೆಯು ಹಿಂದೆ ಒಂದು ಸಂದರ್ಭದಲ್ಲಿ ಪ್ರಕಟಿಸಿದ ಪ್ರಮಾಣವಚನವನ್ನು ತಿಳಿಸುವೆವು ತನ್ನೆ,

[illegible] ॥

ಇಂತಾ ಲಕ್ಷಣ ಲಕ್ಷಿತರಾದ ಜಂಗಮರೆಲ್ಲರೂ ಅವಧೂತ ವೃತ್ತಿಯುಳ್ಳವರಾಗಿ ಇವರಿಗೆ ಜಾತಿ ನಿಯಮವು ಇರುವದಿಲ್ಲವೆಂಬದಾಗಿ ಪಾತುಳಾಗಮದಲ್ಲಿ,

ಶ್ಲೋ॥ [illegible]॥

ಎಂದು ತಿಳಿಸಲ್ಪಟ್ಟದೆ. ಬ್ರಾಹ್ಮಣ್ಯದಿಂದ ಸದರೀ ಜಂಗಮರಿಗೆ ಯಾವವಿಧ ಪ್ರಯೋಜನವೂ ಇರುವದಿಲ್ಲವೆಂಬದಕ್ಕೆ ವಿರಾಗಮದಲ್ಲಿ,

ಶ್ಲೋ॥ [illegible]॥

ಎಂದು ಹೇಳಿರುವದರಿಂದ ಜೀವಿಸಿರುವಾಗಲೂ ಸತ್ತಮೇಲು ಸಹ ಬ್ರಾಹ್ಮಣ್ಯದಿಂದ ಜಂಗಮರಿಗೆ ಪ್ರಯೋಜನವಿಲ್ಲದೆ ಹೋಗುವಲ್ಲಿ ಈ ಒಣ ಬ್ರಾಹ್ಮಣ್ಯಕ್ಕೆ ಅವರು ಯಾತಕ್ಕೆ ಪೇಚಾಡಬೇಕೋ ನಾವರಿಯೆವು.

ವೀರಶೈವ ಬ್ರಾಹ್ಮಣ್ಯವೆಂಬಶಬ್ದವೇ ಅಸಂಗತವಾದದ್ದು. ಶೈವ ವೈಷ್ಣವವೆಂಬವಕ್ಕೆ ಜಾತಿನಿಯಮವಿಲ್ಲವು. ಎಲ್ಲ ಬಗೆಯವರೂ ಅದು ಅಂಗೀಕರಿಸುತವರೊಳೇನೂ ಬಾಧಕ ವಿಲ್ಲವು. ಇದು ಕೇವಲ ಭಕ್ತಿಮಾರ್ಗವನ್ನು ಹಿಡಿದು ಉಪಾಸನಾಕ್ರಮದಮೇಲೆ ಬಂದ ಸಾಂಕೇತಿಕಶಬ್ದವಾಗಿರುತಿದೆ. ಬ್ರಾಹ್ಮಣ್ಯವೆಂಬದು ಬ್ರಹ್ಮವಿಚಾರದಿಂದಲೂ, ಅಂತಾ ವಿಚಾರಕ್ಕೆ ಮೂಲವಾದ ಶ್ರುತಿಸ್ಮೃತಿಗಳಿಂದಲೂ ಪ್ರಾಪ್ತವಾಗತಕ್ಕದ್ದಾಗಿರುತಿದೆ. ಈಗ ನಡವಡಿಕೆಯಲ್ಲಿರುವ ಬಣಜಿಗರಿಗೆ ಬ್ರಾಹ್ಮಣ್ಯವು ಕಲ್ಪಿತವಾದದ್ದೆಂದು ಹೇಳಿದರೂ ನೈಜವಾದ್ದೆಂದು ಹೇಳಿದರೂ ಬಾಧಕವಿಲ್ಲವು. ಪರಂತು ಇವರಿಗೆ ಬಣಜಿಗರೆಂಬ ವ್ಯವಹಾರ ಇರುವತನಕ ಫಣಕಟ್ಟಿನಿಂದ ತಪ್ಪಿಸಿಕೊಳ್ಳಲಿಕ್ಕೆ ಆಗುವದಿಲ್ಲವು. ದೇಶದಶೆಟ್ಟಿ ಶೆಟ್ಟಿಯು ನಾಮಧಾರಿ ನಗರ್ತರಾದರೆ ಈಗ ವೀರಶೈವ ಬ್ರಾಹ್ಮಣರೆಂದುಹೇಳಿಕೊಳ್ಳುವ ಬಣಜಿಗರು ತದ್ವಿರುದ್ಧರಾಗಿ ಯಾತಕ್ಕೆ ಇರಬಾರದು ? ಮುಖ್ಯವಾಗಿ ಮೇಲೆಕಂಡ ಶ್ಲೋಕದಿಂದ ಜಾತಿ ನಿಯಮವು ಲಿಂಗಧಾರಿಗಳಿಗೆ ಇಲ್ಲವೆಂದುತೋರುತಿದೆ. ಇಂತಾಅರ್ಥವಾದಿಕ ಶ್ಲೋಕಗಳು ಶಾಕ್ತೇಯರಲ್ಲಿಯೂ ವೈಷ್ಣವರಲ್ಲಿಯೂ ಅನೇಕವಾಗಿರುತಿವೆ. ತಾತ್ವಿಕರಾಗಿ ಮೋಕ್ಷಸಂಪಾದಕರಾಗತಕ್ಕವರಿಗೆ ಇವುಗಳೊಂದೂಕಾರ್ಯಕಾರಿಗಳಲ್ಲವು.—ಎಡಿಟರ್, ಕ. ಪ್ರ.

Bangalore:—Printed and published for the Proprietor, at the Karnatic Press.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XII] BANGALORE—MONDAY, AUGUST 31, 1885 [No 35.

ಸಂಪುಟ ೧೨. | ಬೆಂಗಳೂರು—ಸನ್ ೧೮೮೫ನೇ ಇಸವಿ ಆಗಸ್ಟ್ ೩೧ನೇ ತಾರೀಖ್ ಸೋಮವಾರ. [ಸಂಚಿಕೆ ೩೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜ್.

[illegible]

NOTICE TO SUBSCRIBERS

[illegible]

ಪ್ರಕಟನೆ.

[illegible]

ನೋಟೀಸ್.

[illegible]

NOTICE.
VAIDYASARASANGRAHA

Price including Postage, Rs 5-6-0

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೊ.
ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತವರಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ಒಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

NOTICE.

ಹೊಸಪುಸ್ತಕ !!!

ದುರ್ಗೇಶನಂದಿನೀ.

ಭಾರತ ಮಹಿಳಾ ಮುಂತಾದ ಗ್ರಂಥಗಳ
ಪ್ರಣೇತರಾದ,
ಬಿ. ವೆಂಕಟಾಚಾರ್ಯರಿಂದ ಪ್ರಣೀತವಾದದ್ದು.

ಈ ಉತ್ಕೃಷ್ಟಗ್ರಂಥವು ಇಂಗ್ಲಿಷಿನಲ್ಲಿ ಪ್ರಚಾರಗೊಂಡಿರುವ ನಾವೆಲ್ (Novel) ಎಂಬ ಉಪನ್ಯಾಸ ಗ್ರಂಥಗಳಿಗನುಸಾರವಾಗಿ ರಚಿಸಲ್ಪಟ್ಟಿದೆ. ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಗ್ರಂಥವಾಗಿ ಸುಬೋಧ್ಯವಾದದ್ದಾಗಿಯೂ ನವರಸ ಪರಿಪೂರ್ಣ ಚಿತ್ತರಂಜನಕಾರಿಯಾದದ್ದಾಗಿಯೂ ಇದೆ. ಈ ಪುಸ್ತಕವು ೩೦೦ ಪುಟವುಳ್ಳದ್ದು.

ಕ್ರಯ ೧-೮-೦ ರೂ॥, ಹಾಸಲ್ ೧ ಆಣೆ.

ಇದು ಗ್ರಂಥಕರ್ತರಾದ ಈ ಕೆಳಗೆ ರುಜು ಮಾಡಿರುವವರಲ್ಲಾಗಲಿ, ಬೆಂಗಳೂರು ಪೇಟೆಯಲ್ಲಿ ಮು॥ ಲಿಂಗಯ್ಯ ಅಂಡ್ ಕೊ ಯವರಲ್ಲಾಗಲಿ ದೊರೆಯುವದು.

ಹೆಚ್ಚು ಸಂಖ್ಯೆ ಪ್ರತಿಗಳು ಇಲ್ಲವಾದದರಿಂದ ಗ್ರಂಥಾಪೇಕ್ಷೆಯುಳ್ಳವರು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು.

ಬಿ. ವೆಂಕಟಾಚಾರ್,
ಮುನಸಫ್, ಎಡೆಹಳ್ಳಿ,
ಕಡೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಸಾಂಖ್ಯಯೋಗ ವೇದಾಂತ ಪ್ರತಿಪಾದಕವಾದ ಯೋಗವಾಸಿಷ್ಠವೆಂಬ ವಾಲ್ಮೀಕಿ ರಾಮಾಯಣವು ಕನ್ನಡ ಭಾಷೆಯಿಂದ ವಚನರೂಪವಾಗಿ ಮುದ್ರಿಸಲ್ಪಡುತ್ತೆ. ಈ ಆಗಸ್ಟ್ ತಿಂಗಳ ಆಖ್ಯರೊಳಗಾಗಿ ಚಂದಾ ಮೊಬಲಗನ್ನು ಕಳುಹಿಸಿಕೊಡಬೇಕು.

ಮುಂಗಡವಾಗಿ ಚಂದಾ ಮಾಡತಕ್ಕವರಿಗೆ
ಪ್ರತಿಯೊಂದು ಸಂಪುಟಕ್ಕೆ ಅಂಚೆಹಾಸಲು ಸೇರಿ ೧ ೦ ೦
ವಾಯಿದೆ ಕಳೆದನಂತರ ತೆಗದುಕೊಳ್ಳುವವರಿಗೆ ೦ ೦
ಅಪೇಕ್ಷೆಯುಳ್ಳವರು ಈ ಕೆಳಗೆ ರುಜುಮಾಡಿರುವವರಬಳಿಗೆ ಮೊಬಲಗು ನಿಶೀ ಬರೆದುಕೊಳ್ಳಬೇಕು.

ತಾ॥ ೯ನೇ ಗಸ್ಟು ೧೮೮೫ ಬೆಂಗಳೂರು. } ಸ. ಚಂದ್ರಶೇಖರಯ್ಯ, ವರ್ನಾಕ್ಯುಲರ್ ಸ್ಟ್ಯಾಂಡರ್ಡ್ ಲೈಬ್ರರಿ ಪ್ರೊಪ್ರೈಟರ್.

TO OUR SUBSCRIBERS

ಇದರಿಂದ ನಮ್ಮ ಚಂದಾದಾರರಿಗೆ ಆಖ್ಯರಾಗಿ ಶ್ರುತಪಡಿಸುವದೇನೆಂದರೆ,

ನಮ್ಮ ಚಂದಾದಾರರಲ್ಲಿ ನಮಗೆ ಬಾಕೀದಾರರಾಗಿರತಕ್ಕವರು ಅವರವರ ಬಾಕೀಗಳನ್ನು ಕಳುಹಿಸಿಕೊಡಬೇಕೆಂದು ಈ ಪತ್ರಿಕೆಯ ಮೂಲಕವಾಗಿಯೂ, ಅಂಚೇದ್ವಾರಾ ಪ್ರತ್ಯೇಕ ಕಾಗದಗಳ ಮೂಲಕವಾಗಿಯೂ, ಅನೇಕದಫಾ ನಾವು ಬಹುವಿಧವಾಗಿ ಕೇಳಿಕೊಂಡಾಗ್ಯೂ ಅಂತಾ ಬಾಕೀದಾರರಲ್ಲಿ ಕೆಲವರು ವಿನಾ ಮಿಕ್ಕವರೆಲ್ಲರೂ ನಮಗೆ ಜವಾಬ ಕೊಡದೆಯೂ ಬಾಕೀಗಳನ್ನು ಕಳುಹಿಸದೆಯೂ ಮೌನವಾಗಿರುತ್ತಾರೆಯಾಗಿ ಅಂತವರೆಲ್ಲರಿಗೂ ಮತ್ತೊಂದು ದಫಾ ಬಾಕೀ ತಪಸೀಲ್ ನಿಶೀ ಈವಾರದಲ್ಲಿ ಕಾಗದಗಳು ಬರೆಯುವೆವು. ಅದರಮೇಲೂ ಬಾಕೀಗಳನ್ನು ಅವರು ಫೈಸಲ್ಮಾಡದ ಪಕ್ಷಕ್ಕೆ ಅಂತವರ ವಿಷಯದಲ್ಲಿ ನಾವು ಮಾಡುವ ಪ್ರಯತ್ನವು ಬಾಕೀದಾರರನ್ನು ಅನಾವಶ್ಯಕವಾದ ನಷ್ಟಕ್ಕೆ ಗುರಿಮಾಡತಕ್ಕದ್ದಾಗಿರುವದು.

೨ನೇ—ಈ ಸಾಲಿಗೆ ಇದುವರಿವಿಗೆ ಚಂದಾ ಮೊಬಲಗನ್ನು ಕಳುಹಿಸದೆ ಇರತಕ್ಕವರು ಈ ನೋಟೀಸನ್ನು ನೋಡಿದ ಕೂಡಲೇ ರವಾನಿಸಬೇಕೆಂದು ಕೋರುತ್ತೇವೆ. ಹಾಗೆ ಮಾಡದೆ ಉಪೇಕ್ಷಿಸತಕ್ಕವರಿಗೆ ಬರುವ ಸೆಪ್ಟಂಬರ್ ತಿಂಗಳಲಾಗಾಯತು ಪತ್ರಿಕೆ ಕಳುಹಿಸಲ್ಪಡಲಾರದು.

೩ನೇ—ಹೊಸದಾಗಿ ಚಂದಾದಾರರಾಗತಕ್ಕವರೆಲ್ಲರು ಚಂದಾವನ್ನು ಅಡ್ವಾನ್ಸ್ ಕಳುಹಿಸಿಕೊಟ್ಟಹೊರತು ಅವರ ದರಖಾಸ್ತುಗಳಿಗೆ ನಿಗೇ ಕೊಡಲ್ಪಡಲಾರದು, ಮತ್ತು ಅಂತಾ ದರಖಾಸ್ತು ಮೂರುತಿಂಗಳಿಗೆ ಕಡಮೆಯಾದರೆ ಅದು ಅಂಗೀಕರಿಸಲ್ಪಡಲಾರದು.

೧೭—೮—೮೫. ಪ್ರೊಪ್ರೈಟರ್, ಕ. ಪ್ರ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY AUGUST 31, 1885.

೧೮೮೫ನೇ ಆಗಸ್ಟ್ ೩೧ನೇ ತಾ॥ ಸೋಮವಾರ.

[illegible]

A REPLY.

ಗತವಾರದಲ್ಲಿ ನಾವು ವಾಗ್ದಾನಮಾಡಿದ್ದ ಪ್ರಕಾರ ಈವೂರಲ್ಲಿರುವ ವೇ॥ ಮುತ್ತ್ಯಾ ಗೋವಿಂದಾಚಾರ್ಯರವರಿಂದ ಬರೆದು ಕಳುಹಿಸಲ್ಪಟ್ಟ ಲೇಖನವನ್ನು ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಸಮಗ್ರವಾಗಿ ಪ್ರಕಟಿಸಿರುತ್ತೇವೆ. ಸದರೀ ಆಚಾರ್ಯರವರಿಂದ ಬರೆಯಲ್ಪಟ್ಟಿರುವ ಯಾವದುಕ್ತ್ಯ, ಸಂದರ್ಭೋಚಿತವಾಗಿ ಸಂಕ್ಷೇಪಿಸಿ ಮಾಹೇ ಮಜಕೂರು ೩ನೇ ತಾರೀಖಿನ ಈಪತ್ರಿಕೆಯಲ್ಲಿ ತಿಳಿಸಲ್ಪಟ್ಟದ್ದಾಗಿರುತಿದೆ. ಪರಂತು ಸದರೀ

ಲೇಖನದಲ್ಲಿ ಕಳೆದ ಜಾತ್ರೈ ತಿಂಗಳ ೨೭-೨೮ನೇ ತಾರೀಖುಗಳಲ್ಲಿ ಸ್ತ್ರೀ ಪುನರ್ವಿವಾಹ ವಿಷಯಕವಾದ ಸಭೆಯಲ್ಲಿ ಪ್ರಸ್ತಾವಿಸಲ್ಪಟ್ಟ ಕೆಲವು ನೂತನಾಂಶಗಳೂ ದಸರೀಸಂಧಿಕರ ಇತರ ಕೆಲವು ಬಿನ್ನರುಚಿಗಳೂ ನಮ್ಮ ದೃಷ್ಟಿಗೆ ಬಿದ್ದುದರಿಂದ ಅವನ್ನಿಲ್ಲಿ ತೋರಿಸಬೇಕಾದವರಾದೆವು

ವೇ. ಗೋವಿಂದಾಚಾರ್ಯರವರಿಗೂ ದಿವಾನ್ ಬಹದೂರ್ ರಘುನಾಥರಾಯರವರಿಗೂ ವಿತದ್ವಿಷಯಕವಾದ ವಾಕ್ಯಾರ್ಥ ನಡೆದಂತೆ ಅವರ ಕಾಗದದ ಮೂಲಕ ದ್ಯೋತಕವಾಗುತಿದೆ. ಈ ಭಾಗವನ್ನು ಸಂಪೂರ್ಣವಾಗಿ ಅಂಗೀಕರಿಸಲಿಕ್ಕೆ ನಮ್ಮ ಮನ ಸ್ವಲ್ಪವೂ ಒಡಂಬಡುವದಿಲ್ಲವು ಯಾತರಿಕ್ಕೆಂದರೆ, ಈ ಆಚಾರ್ಯರವರು ವೇ॥ ಗೋಪಾಲಶಾಸ್ತ್ರಿಗಳಿಗೂ ದಿವಾನ್ ಬಹದೂರ್ ರಘುನಾಥರಾಯರವರಿಗೂ ನಡೆದ ಪ್ರಸಂಗದಲ್ಲಿ ಉಭಯರ ವಾದವನ್ನು ಅನುವಾದ ಮಾಡುತಿದ್ದರು ಈಗ ಇವರು ತಮ್ಮ ಕಾಗದದಲ್ಲಿ ತಮ್ಮನ್ನೇ ಪ್ರಾಧಾನ್ಯೇನ ಉದಹರಿಸಿಕೊಳ್ಳುವದು ಪ್ರಾಸಂಗಿಕರಾಗಿಸದರೀ ಸಭೆಯೊಳಗಿಲ್ಲವು ಮ॥ರಾ॥ರಘುನಾಥರಾಯರವರು ಪುನಃ ಅನುವಾದ ಮಾಡಲಿಲ್ಲವೆಂದು ತಿಳಿಸಿದ ಅಂಶವು ಯಥಾರ್ಥವೇ ಇದುದು. ಅವರು ಆರೀತಿ ತಿಳಿಸಿದ್ದು ಯುಕ್ತವೆಂದು ಹೇಳುವೆವು, ಯಾತಕ್ಕೆಂದರೆ, ಪೂರ್ವದಿನದಲ್ಲಿ ಮೆ॥ ರಘುನಾಥರಾಯರವರು ಪಂಡಿತರನ್ನೆದಿರಿಸಿ, ಸ್ತ್ರೀ ಪುನರ್ವಿವಾಹ ವಿಷಯದಲ್ಲಿ ತಾವು ಬಾಪಿಸಿರುವ ಗ್ರಂಥವನ್ನು ನೀವ್ಯಾರೂ ನೋಡೋಣವಾಯಿತೆ, ಅದರಲ್ಲಿ ತಿಳಿಸಲ್ಪಟ್ಟಿರುವ ಆಧಾರ ವಚನಗಳ ಮೇಲೆ ಆಕ್ಷೇಪಣೆಗೆ ಏನಾದರೂ ಅವಕಾಶ ಉಂಟೇ ಯೆಂದು ಪ್ರಶ್ನೆ ಮಾಡಿದ್ದಕ್ಕೆ ಆಗ ವೇದಮೂರ್ತಿ ಗೋಪಾಲಶಾಸ್ತ್ರಿಗಳು ಸದರೀ ಗ್ರಂಥವನ್ನು ತಾವು ಇದುವರಿಗೆ ನೋಡಿದ್ದಿಲ್ಲವೆಂದಲೂ, ಪ್ರಸಕ್ತ ವಿವಾಹವು ಅಶಾಸ್ತ್ರೀಯವಾದ್ದೆಂದು ತಾವು ಸಮರ್ಥಿಸುತ್ತೇವೆಂತಲೂ ಹೇಳಿದರು. ಅದರಮೇಲೆ ರಾಯರವರು ತಮ್ಮಿಂದ ವಿರಚಿತವಾದ ಒಂದು ಗ್ರಂಥದ ಪ್ರತಿಯಂ ಕೊಟ್ಟು ಶ್ರುತಿಸ್ಮೃತೀತಿಹಾಸಾದಿಗಳಲ್ಲಿ ಪೂರ್ವಪೂರ್ವೋತ್ತರೋತ್ತರಕ್ಕೆ ಬಲೀಯವಾದದ್ದೆಂದು ಹೇಳಿದರು. ಈ ಪ್ರತಿಜ್ಞೆಗೆ ಬದ್ಧರಾಗಿಯೇ ಉಭಯಪಕ್ಷದವರೂ ತಮ್ಮ ವಾದವನ್ನು ನಡೆಸಬೇಕೆಂದು ತೀರ್ಮಾನವಾಗಿದ್ದದನ್ನೂ, ಅದಕ್ಕೆ ತಾವು ಪೂರ್ವದಿನದಲ್ಲಿ ಒಡಂಬಟ್ಟದ್ದನ್ನೂ ಶುದ್ಧಾಂಗವಾಗಿ ಮರೆತು, ಒಂದುದಿನದಲ್ಲಿ ಗ್ರಂಥವನ್ನು ತಮ್ಮಲ್ಲೇ ಇಟ್ಟುಕೊಂಡಿದ್ದು ಮಾರನೆಯದಿನ ಸಭೆಯಲ್ಲಿ ಬಂದು ಕುಳಿತಮೇಲೆ ಮರಳಿ ಅನುವಾದ ಮಾಡಬೇಕೆಂದು ಪ್ರತಿ ಪೇಕ್ಷಕರು ಕೇಳಿದ್ದು ಅನಾವಶ್ಯಕವಾದದ್ದು. ಅದಕ್ಕಿಂತಲೂ ನಾನು ಹೇಳಬೇಕಾದ ಯಾವದಂಶವೂ ನಿಮ್ಮ ಕೈಯಲ್ಲಿರುವ ಗ್ರಂಥದಲ್ಲೇ ಇರುವದರಿಂದ ನಾನು ಮರಳಿ ಪ್ರತ್ಯೇಕ ತಿಳಿಸಬೇಕಾದ್ದಿಲ್ಲವೆಂದು ರಾಯರು ಹೇಳಿದ್ದು ಯುಕ್ತವಾಗಿತೋರಿತು.

"ಯದೇಕಸ್ಮಿನ್ಯೂಪೆ" ಎಂಬ ಶ್ರುತಿವಚನಾನಂತರ ನಿಷೇಧ ಕೋಟಿಯವರು ಉದಹರಿಸಿದ ಮನುಸ್ಮೃತಿ ಶ್ಲೋಕವನ್ನು ಆಚಾರ್ಯರು ಬರೆಯುತ್ತಾರೆ ಈಗ ಇವರು ತಮ್ಮ ಕಾಗದದಲ್ಲಿ ಬರೆದಿರುವ ಪ್ರಕಾರ ಸಭೆಯಲ್ಲಿ ತಿಳಿಸಿದ್ದರೆ ಇವರ ಭಿನ್ನತಂತ್ರವು ಸುಲಭವಾಗಿ ಆಗಲೇ ಹೊರಗಾಗುತಲಿತ್ತು. ಪರಂತು ಹಾಗಲ್ಲವು ಮನುವಚನವೆಂದು ಹೇಳಿ ಆಚಾರ್ಯರವರು ಉದಹರಿಸಿರುವ ಶ್ಲೋಕವನ್ನೂ ಅವರು ಬರೆದಿರುವ ಅರ್ಥವನ್ನೂ ಮೂಲಗ್ರಂಥದಲ್ಲಿ ನೋಡಲಾಗಿ ಸದರೀ ಯವರ ಸಾಹಸವು ವ್ಯಕ್ತವಾದದರಿಂದ ಅದಕ್ಕಾಗಿ ಯೆಷ್ಟು ವಿಧದಿಂ ಆಶ್ಚರ್ಯಪಟ್ಟಾಗ್ಯೂ ಸಾಲದೆ ಇರುತಿವೆ. ಅದೇನೆಂದರೆ,—

ಶ್ಲೋ॥ನತುನಾಮಾಪಿಗೃಣ್ಹೀಯಾತ್ಪತ್ಯೌಪ್ರೇತೇಪರಸ್ಯತು ॥ ನದ್ವಿತೀಯಶ್ಚಸಾಧ್ವೀನಾಂ ಕ್ವಚಿದ್ಭರ್ತೋಪದಿಶ್ಯತೇ॥

ಎಂಬ ಆಚಾರ್ಯಕೃತ ಶ್ಲೋಕವು, ಪ್ರತ್ಯೇಕ ಯೆರಡು ಶ್ಲೋಕಗಳ ಉತ್ತರಾರ್ಧಗಳುಳ್ಳದ್ದಾಗಿರುತಿವೆ. ಅದು ಹ್ಯಾಗೆಂದರೆ,—

ಮನುಸ್ಮೃತಿ ೫ನೇ ಅಧ್ಯಾಯ, ೧೯೮ಪುಟ.

೧೫೭ನೇ ಶ್ಲೋಕ.

ಶ್ಲೋ॥ಕಾಮಂತುಕ್ಷಪಯೇದ್ದೇಹಂಪುಷ್ಪಮೂಲಫಲೈಶ್ಶುಭೈಃ॥ ನತುನಾಮಾಪಿಗೃಣ್ಹೀಯಾತ್ಪತ್ಯೌಪ್ರೇತೇಪರಸ್ಯತು॥

ಮನುಸ್ಮೃತಿ ೫ನೇ ಅಧ್ಯಾಯ. ೧೯೮ನೇ ಪುಟ.

೧೬೨ನೇ ಶ್ಲೋಕ

ಶ್ಲೋ॥ ನಾನ್ಯೋತ್ಪನ್ನಾಪ್ರಜಾಸ್ತೀಹನಚಾಪ್ಯನ್ಯಪರಿಗ್ರಹೇ॥ನದ್ವಿತೀಯಶ್ಚಸಾಧ್ವೀನಾಂಕ್ವಚಿದ್ಭರ್ತೋಪದಿಶ್ಯತೇ

ಮೇಲೆ ಕಂಡ ಯೆರಡು ಶ್ಲೋಕಗಳ ಪೈಕಿ ಮೊದಲನೆಯದರ ಉತ್ತರಾರ್ಧವನ್ನು ಯೆರಡನೆಯದರ ಉತ್ತರಾರ್ಧವನ್ನೂ ಸೇರಿಸಿ ಬರೆದಿರುವ ಶ್ಲೋಕವು ಈಗ ಸಾಧಕತ್ವೇನ ಉದಹರಿಸಲ್ಪಟ್ಟಿದೆ. ಅದರ ನೈಜಾರ್ಥವಾದರೂ ತಿಳಿಸಲ್ಪಟ್ಟದಯೇ ಅದೂ ಕಾಣಿಸಲಿಲ್ಲವು ಸದರೀ ಯೆರಡು ಶ್ಲೋಕಗಳಿಗೂ ಕುಲ್ಲೂಕಭಟ್ಟರವರು ವ್ಯಾಖ್ಯಾನ ಬರೆದಿರುತ್ತಾರೇನೆಂದರೆ—

ವೆ ಕದಲಂಗದಕ್ಕೆ—॥ಕಾಮಂತ್ವಿತಿ॥ಪವಿತ್ರೈಃ ಪುಷ್ಪಮೂಲಫಲೈಃದೇಹಂಕ್ಷಪಯೇದಲ್ಪಾಹಾರೇಣ ಕ್ಷೀಣಂಕುರ್ಯಾತ್, ನಚಪತ್ಯೌಮೃತೇವ್ಯಭಿಚಾರಧಿಯಾ ಪರಪುರುಷಸ್ಯ ನಾಮಾಪ್ಯುಚ್ಚಾರಯೇತ್॥ ಎಂಬದು" ಈ ಪ್ರಕರಣದಲ್ಲಿ ಮನುವು ೧೫೭ನೇ ಶ್ಲೋಕದಿಂದ ಸ್ತ್ರೀ ಧರ್ಮವು ವಿವರಿಸುತ ಸ್ತ್ರೀ ತನ್ನ ಪತಿ ಜೀವಿಸಿರುವವರಕ ಅತನ ಪತಿವ್ರತ್ಯ ನಾಮರಲಿರಬೇಕಲ್ಲದೆ ಅತನ ಮರಣಾನಂತರವೂ ವ್ಯಭಿಚಾರಮಾಡಕೂಡದೆಂದು ಹೇಳುತಾನೆ ೧೬೦ನೇ ಶ್ಲೋಕದವರಿವಿಗೆ ಸುವಾಸಿನೀ ಮತ್ತು ವಿಧವಾ ಧರ್ಮಗಳನ್ನು ಹೇಳುತ ಅವರಲ್ಲಿ ಪುಷ್ಪಮೂಲ ಫಲಾದಿಗಳಿಂದ ದೇಹವು ಕೃಶ್ಯಪಡಿಸಿ, ಪರಪುರುಷ ನಾಮೋಚ್ಚಾರ ಕೂಡ್ಯು ಸದ ಮಾಡದೆ ಅಮರಣಾಂತ ಬ್ರಹ್ಮಚಾರಿಣೀಯಾಗಿ ಇರಬೇಕೆಂದು ಮುಂತಾಗಿ ಕೆಲವು ಧರ್ಮಗಳು ವಿವರಿಸಿರುತ್ತಾನೆ

೧೬೨ನೇದಕ್ಕೆ—ಅತ್ರೈವ ಹೇತುಮಾಹ ನಾನ್ಯೋತ್ಪನ್ನೇತಿ, ಯಸ್ಮಾದ್ಭರ್ತೃವ್ಯತಿರಿಕ್ತೇನ ಪುರುಷೇಣ ಉತ್ಪನ್ನಾ ಸಾಪ್ರಜಾಸ್ಯಾಃ ಶಾಸ್ತ್ರೀಯಾನಭವತಿ, ನಚಾನ್ಯಪತ್ನ್ಯಾಮುತ್ಪಾದಿತೆ ಉತ್ಪಾದಕಸ್ಯ ಪ್ರಜಾಭವತಿ, ಏತಚ್ಚಾನಿಯೋಗೋತ್ಪಾದಿತವಿಷಯಂ, ಬಹುಚಪ್ರಕೇಯನಿತಿ ಬೋಧಕತ್ವಸಿದ್ಧೇರ್ದ್ವಿತೀಯೋಽಭಿಭರ್ತೈವ ತಸ್ಮಾದನ್ಯೋತ್ಪಾದಿತಪ್ರ ಮಸಿದ್ಧಮಿತ್ಯಕುಕ್ತ್ಯಾಹ ನೇತಿ ಲೋಕೇಗ್ರಾಮ್ಯಪ್ರಸಿದ್ಧ್ಯಾಪಿಸಾಧ್ವೀನಾಂಕ್ವಚಿಚ್ಛಾಸ್ತ್ರೇ ದ್ವಿತೀಯೋಭರ್ತಾ ಉಪದಿಶ್ಯತೇ—ವಿನಾಪಿ ಸತಿ ಪುನರ್ವಿವಾಹಮಪಿ ಪ್ರಸಿದ್ಧಂ॥ ಎಂದರೆ—ಪರಪುರುಷನಿಂದ ಜನಿಸಿರತಕ್ಕವು ಆ ಸ್ತ್ರೀಗಾಗಲಿ, ಅವನಿಗಾಗಲಿ ಪ್ರಜೆಗಳಾಗಲಾರವಂತಲೂ ದ್ವಿತೀಯನೆಂದರೆ ಭರ್ತೃವ್ಯತಿರಿಕ್ತನಾದ ಜಾರಪುರುಷನು ಸಾಧ್ವೀಗಳಿಗೆ ಯಾವಾಗಲೂ ಪತಿಯೆನಿಸಿಕೊಳ್ಳಲಾರನೆಂದು ಮನುವು ಮೇಲೆ ಕಂಡ ಶ್ಲೋಕದಿಂದ ತಿಳಿಸಿರುತ್ತಾನೆ ಇದ್ದರಿಂದ ವಿಧವಾ ಧರ್ಮವನ್ನು ನಿರೂಪಿಸುವ ಶ್ಲೋಕದ ಒಂದು ಭಾಗವನ್ನೂ ವ್ಯಭಿಚಾರವನ್ನು ನಿಂದಿಸುವ ಮತ್ತೊಂದು ಶ್ಲೋಕದ ಒಂದುಭಾಗವನ್ನೂ ಸೇರಿಸಿ ಸ್ವಸಿದ್ಧಾಂತಸ್ಥಾಪನಾರ್ಥ ಪ್ರತ್ಯೇಕ ಅರ್ಥವು ಕಲ್ಪಿಸಿ ತಮ್ಮಿಚ್ಛೆ ಪುನರ್ವಿವಾಹವನ್ನು ನಿಷೇಧಿಸುವದಕ್ಕೆ ಪ್ರಯತ್ನಪಟ್ಟ ಅಘಟಿತಘಟನಾ ಸಾಮರ್ಥ್ಯವು ಪ್ರತಿಷೇಧಕರ ಸಾಹಸವು ಮಹದಾಶ್ಚರ್ಯಾವಹವಾಗಿದೆ

ಗೋವಿಂದಾಚಾರ್ಯರು ಯಾವ ಅಂಶಕ್ಕೆ ದಿ॥ಬ॥ ರಘುನಾಥರಾಯರವರು ಸಮಾಧಾನ ಉತ್ತರ ಸರಿಯಾಗಿಹೇಳದೆ ಮನು ಅತ್ರಿರುವಂತೆ ಹೇಳದರೆಂದು ಈಗ ತಿಳಿಸುತ್ತಾರೆಯೋ ಆಭಾಗಕ್ಕೆ ರಾಯರವರು ತೃಪ್ತಿಕರವಾದ ಪ್ರತ್ಯುತ್ತರವನ್ನು ಸಭೆಯಲ್ಲಿಯೇ ಕೊಟ್ಟಿರುತ್ತಾರೆ, ವಯಃಪ್ರಯುಕ್ತವಾದ ವಿಸ್ಮೃತಿ ದೋಷದಿಂದ ಆಚಾರ್ಯರವರಿಗೆ ಒಂದು ವೇಳೆ ಅದು ಮರೆತು ಹೋಗಿದ್ದಾಗ್ಯೂ ಅಲ್ಲಿನಡೆದ ಅಂಶವು ಅನೇಕರ ಜ್ಞಾಪಕದೊಳಿರದಿರಲಾರದಾಗಿ ರಾಯರವರ ವಾಕ್ಯವನ್ನೇ ನಾವು ಇಲ್ಲಿ ಅನುವಾದ ಮಾಡುವೆವು

ಮನುಸ್ಮೃತಿಯ ೯ನೇ ಅಧ್ಯಾಯದ ೬೫—೬೬ನೇ ಶ್ಲೋಕಗಳಿಂದ ವಿಧವಾ ವಿವಾಹಕ್ಕೆ ಉಕ್ತಯುಕ್ತವಾದ ಮಂತ್ರಗಳಿಂದು ಪ್ರತ್ಯೇಕವಾಗಿ ಹೇಳಿರುವದಿಲ್ಲವೆಂಬ ಆಕ್ಷೇಪಣೆಯನ್ನೊಬ್ಬರೂ ನಿಷೇಧಿಸಲಿಲ್ಲವು. ಈಗ ಪುರುಷರಿಗೆ ದ್ವಿತೀಯ ವಿವಾಹ ಪ್ರಕರಣದಲ್ಲಿ ಪ್ರತ್ಯೇಕ ಮಂತ್ರಗಳು ಏರ್ಪಟ್ಟಿರುವದಕ್ಕೆ ಆಗ ಆಕ್ಷೇಪಣೆಯನ್ನು ಅಂಗೀಕರಿಸಬಹುದು ಪುರುಷನು ನಾಲ್ಕೈದು ವಿವಾಹಗಳನ್ನು ಮಾಡಿಕೊಂಡರೂ ಮೊದಲನೆಯ ವಿವಾಹ ಮಂತ್ರವೇ ಯೆಲ್ಲದಕ್ಕೂ ಅನ್ವಯಿಸುವದರಿಂದ ದ್ವಿತೀಯಾದಿಕ್ಕೆ ಪ್ರತ್ಯೇಕ ಮಂತ್ರವು ಆವಶ್ಯಕವಿಲ್ಲವೆಂದು ರಾಯರವರು ಹೇಳಿದರು. ಮತ್ತು ವೇನನ ರಾಜ್ಯದಲ್ಲಿ ನಿಯೋಗವೆಂಬ ನಿಂದ್ಯವಾದ ಅಧರ್ಮವು ನೆಲಗೊಂಡಿದ್ದಂತೆ ತಿಳಿಸಲ್ಪಟ್ಟಿರುವ ಮನುಸ್ಮೃತಿಯ ನವಮೋಧ್ಯಾಯದಲ್ಲಿ, ನಿಯೋಗ ಪ್ರಕರಣದೊಳು "ನಾನ್ಯಸ್ಮಿನ್ವಿಧವಾನಾರಿ" ಎಂಬ ೬೪ನೇ ಶ್ಲೋಕ ಮೊದಲುಗೊಂಡು, "ತಂವಿಗರ್ಹಂತಿಸಾಧವಃ" ಎಂಬುವ ತನಕ ಐದು ಶ್ಲೋಕಗಳು ಪ್ರಕ್ಷಿಪ್ತವೆಂದು ಸ್ವರೂಪತಃ ಯೆಂಥವರಿಗೂ ತೋರದಿರುವದಿಲ್ಲವು ಈ ಶ್ಲೋಕಗಳು ಪೂರ್ವಮನ್ವವಸ್ಥಾನವಾಗಿ ಮನುವು ಹೇಳಿದ ವಾಕ್ಯಕ್ಕೆ ವಿರುದ್ಧವಾಗಿರುತಿವೆ ವೈವಸ್ವತ ಮನುವಿಗೆ ತರುವಾಯ ಐನೂರನೆಯ ಪುರುಷನಾದ ವೇನನೆಂಬವನಿಂದ ನಡೆಸಲ್ಪಡುತಿತ್ತೆಂದು ಹೇಳುವ ಅಧರ್ಮವನ್ನು ಪ್ರಾರ್ಥಮಿಯಾಗಿಯೇ ಭೂತಾರ್ಥ ದ್ಯೋತಕವಾದ ಕ್ರಿಯಾಪದದಿಂದ ತಿಳಿಸುವುದಕ್ಕೆ ಯಾ ಕಾರಣವೂ ಇರುವದಿಲ್ಲವು ಅತಏವ ವಿಧವಾ ವಿವಾಹವು ಶಾಸ್ತ್ರನಿಷಿದ್ಧವೆಂದು ಸಾಧಿಸಲಿಕ್ಕೆ ಯಾರೋ ಇವು ಕಲ್ಪಿಸಿ ಮಧ್ಯೆ ಸೇರಿಸಿದ್ದಾಗಿ ತೋರುತವೆ. ಇವು ಮನುವಿನ ಕಾಲಕ್ಕೆ ಮನುವಿಗೆ ತರುವಾಯ ಐನೂರನೆಯ ಪುರುಷನಾಗಿ ಬಂದ ವೇನನು ರಾಜಿಗೆ ಪ್ರವರ್ತಿ ಸಿದ್ದನು ಎಂದು ಅಧರ್ಮವನ್ನು ಸದರಿ ಶ್ಲೋಕದ ಅರ್ಥವನ್ನು ಹೀಗೆ ಮಾಡಿದ ಇಂದು ಹೇಳುವದು ಶಬ್ದಪ್ರಮಾಣದಂತೆ ಅಪ್ರಸಿದ್ಧವಾಗಿರುತಿವೆ, ಎಂದು ಮೆ॥ ರಘುನಾಥರಾಯರವರು ಪೂರ್ವವೇ ತಿಳಿಸಿರುತ್ತಾರೆ ವೇ॥ ಗೋವಿಂದಾಚಾರ್ಯರವರು ತಮ್ಮ ಕಾಗದದಲ್ಲಿ ತಿಳಿಸಿರುವ ವಾಯು ಪುರಾಣದ ಅಂಶವೇನೆಂದರೆ ಎರಡು ಸಭೆಯೊಳು ಉಚ್ಚರಿಸಲೂ ಪ್ರಸ್ತಾವಿಸಲ್ಪಡಲಿಲ್ಲವು ಹೀಗಿದ್ದಾಗ್ಯೂ ನೂತನಾಂಶವನ್ನು ಸೇರಿಸಿ ಆಚಾರ್ಯರವರು ಬರೆದು ಕಳುಹಿಸಿರುತ್ತಾರೆ ಬ್ರಹ್ಮವರ್ತ ೧೬ನೇ ಶ್ಲೋಕವು, ಔರಸಪುತ್ರನು ತನ್ನ ಸವರ್ಣನಾದ ವಿವಾಹಿತ ಸ್ತ್ರೀಯಲ್ಲಿಯೇ ಹುಟ್ಟಿದವನಾಗಬೇಕೆಂಬ ಆವಶ್ಯಕವಿಲ್ಲವೆಂದು ಹೇಳಿ ಇದಕ್ಕಾಧಾರವಾದ ಶ್ಲೋಕವೊಂದನ್ನು ಉದಹರಿಸಿರುತ್ತಾರೆ ವಾಯುವಿನಿಂದ ಅಂಜನಾದೇವಿಗೂ ವಿವಾಹ ನಡೆಯಲಿಲ್ಲವೆಂಬುದನ್ನು ನಮ್ಮ ಆಚಾರ್ಯರೇ ಅಂಗೀಕರಿಸುತ್ತಿರುವದರಿಂದ ಹನುಮಂತನು ಧರ್ಮಪತ್ನಿಯ ನಿಯೋಗದಿಂದಲಾಗಲಿ, ಅಥವಾ ಬಲಾತ್ಕಾರಪೂರ್ವಕವಾದ ವ್ಯಭಿಚಾರದಿಂದಲಾಗಲಿ ಜನಿಸಿದವನೆಂಬದನ್ನು ಆಚಾರ್ಯರು ಅಂಗೀಕರಿಸಬೇಕಾಗುತದೆ. ನಿಯೋಗವೆಂದು ಹೇಳುವ ಪಕ್ಷಕ್ಕೆ ಕುಂತಿ ಮುಂತಾದವರಿಗೆ ಲಭ್ಯವಾದ ಪತ್ಯನುಜ್ಞೆಯು ಅಂಜನಾದೇವಿಗೂ ಪ್ರಾಪ್ತವಾಗಿದ್ದಿರಬೇಕಷ್ಟೆ ಹಾಗೆ ಅವಳ ಗಂಡನು ಅನುಮತಿಯನ್ನಿತ್ತಂತೆ ಯೆಲ್ಲಿಯೂ ಕಾಣಿಸಲಿಲ್ಲವಾದದರಿಂದ ವ್ಯಭಿಚಾರವೆಂದೇ ನಿರ್ಧರಿಸಬೇಕಾಯಿತು ಔರಸ ಶಬ್ದಕ್ಕೆ ಸಾರ್ಥಕ್ಯವನ್ನು ಕಲ್ಪಿಸುವಬಗ್ಯೆ ಆಚಾರ್ಯರವರು ಪ್ರವರ್ತಿಸಿ, ಸಕಲರಿಗೂ ಈಗ ಉಪಾಸ್ಯದೈವವಾಗಿ ಏರ್ಪಟ್ಟಿರುವ ಅಂಜನೇಯನಿಗೆ ವ್ಯಭಿಚಾರ ಪುತ್ರನೆಂಬ ಪ್ರಾಶಸ್ತ್ಯವನ್ನುಂಟುಮಾಡಿದಂತೆ ಆಯಿತು.

ಶೀಷಂಕೊಪೇನ ಪ್ರಾರೆಯಿತಿ ಎಂಬ ನ್ಯಾಯವಾಗಿ ಸಭೆ ಪೂರೈಸಿತೆಂದು ಆಚಾರ್ಯರವರು ತಿಳಿಸುತ್ತಾರೆ ಇದನ್ನು ನಿಜವೆಂದು ನಾವು ಯೆಷ್ಟುಮಾತ್ರವೂ ಹೇಳಲಾರೆವು ಯಾತಕ್ಕೆಂದರೆ ಸಭೆಯಲ್ಲಿದ್ದ ಕೆಲವರು ವೈದಿಕರ ವರ್ತನವು ಪ್ರತಿಯೊಬ್ಬನಿಗೂ ಆಗ್ರಹವನ್ನುಂಟುಮಾಡತಕ್ಕದ್ದಾಗಿದ್ದರೂ,ಇಂತವರೊಡನೆ ನಡೆದಪ್ರಸಂಗವು ಅವ್ಯವಸ್ಥೆಯಾಗಿ ಪರಿಣಮಿಸಿದರೂ ಅಲ್ಲಿಇರಿಗಿದಮಟ್ಟಿಗೆ ತಾತ್ವಿಕಾರ್ಥವನ್ನು ತಿಳಿದುಕೊಳ್ಳಬೇಕೆಂದು ಬಂದಿದ್ದವರು ತೃಪ್ತರಾಗಿ ಹೊರಟುಹೋದರು

ಸಭೆಯಲ್ಲಿ ಸ್ತ್ರೀ ಪುನರ್ವಿವಾಹ ವಿಷಯಕವಾಗಿ ನಡೆದ ಅಂಶವನ್ನು ತಿಳಿಸುವದರಲ್ಲಿಯೇ ಆಚಾರ್ಯರವರು ದೂರಾಲೋಚನೆಯಂ ಮಾಡದೆ ತಮ್ಮ ಯಾವತ್ಸಾಹಸವನ್ನೂ ವಿವಿಧವಾಗಿ ತೋರಿಸಿರುವಲ್ಲಿ ಏತದ್ವಿಷಯಕವಾದ ಸಾಧಕಗಳನ್ನು ಅವರು ತಿಳಿಸುವದಕ್ಕೆ ಪ್ರವರ್ತಿಸುವಾಗ್ಯೆ ತಮ್ಮ ಶಕ್ತಿಯನ್ನು ಇನ್ನೆಷ್ಟುಬಗೆಯಾಗಿ ತೋರಿಸುವರೋ ಅದು ಮುಂದೆ ನೋಡಿ ಆನಂದಿಸುವೆವು ಮುಖ್ಯವಾಗಿ ಸತ್ಯಾಪಲಾಪಿಗೆ ಸಕಲವಿಧದಿಂದಲೂ ಕೀರ್ತಿಯುಂಟಾಗುವದು. ಅದಿಲ್ಲದೆ ಸ್ವಪಕ್ಷಸಾದನಾಭಿನಿವೇಶದೊಡನೆ ಮಾಡುವ ಕಪಟೋಪಾಯಗಳು ಯಾವಾಗಲಾದರೂ ಹೊರಗಾಗದಿರಲಾರದು.

CHANGES IN THE JURISDICTION AND PERSONNEL OF CIVIL COURTS

ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ವಾಪಸುಕೊಡಲ್ಪಟ್ಟಮೇಲೆ ರಾಜ್ಯಭಾರವು ನಿರ್ವಹಿಸುವದಕ್ಕಾಗಿ ಮಹಾರಾಜಾ ಸರ್ಕಾರದವರಿಂದ ಮಾಡಲ್ಪಟ್ಟ ಬಹುವಿಧ ಬದಲಾವಣೆಗಳ ಪೈಕಿ ಬೆಂಗಳೂರು ಷಹರ್ ಜನಗಳ ಧನ ಮಾನಗಳ ಸಂರಕ್ಷಣೆಯ ಬಗ್ಯೆ ಏರ್ಪಡಿಸಿದ ಸಿವಿಲ್ ಕೋರ್ಟುಗಳ ಮಾರ್ಪಾಟಿಯು ಕೇವಲ ಮುಖ್ಯವಾದದ್ದಾಗಿರುತಿವೆ ಈ ಯೇರ್ಪಾಡು ಸ್ಥಿರಪಡದೆ ತಗಿಂದ ಗ್ಯೆ ಬದಲಾವಣೆಗಳಿಗೆ ಗುರಿಯಾಗುವದರ ಮೂಲಕ ಷಹರ್ ಜನಗಳು ಅನುಭವಿಸುವ ಸುಕಷ್ಟಗಳು ಹೇಳಲಶಕ್ಯವಾಗಿದೆ

ಮಹಾರಾಜರವರಿಗೂ ಬ್ರಿಟಿಷ್ ಗವರ್ನಮೆಂಟಿನವರಿಗೂ ಯೇರ್ಪಟ್ಟ ಕರಾರಿನಲ್ಲಿ ಮಿಲಿಟರಿ ದಳಕ್ಕಾಗಿ ಬ್ರಿಟಿಷಗವರ್ನಮೆಂಟಿನವರಿಗೆ ಬೇಕಾದ ಜಮೀನುಗಳನ್ನು ಮಹಾರಾಜಾ ಸರ್ಕಾರದವರು ತಮ್ಮ ಸಂಪೂರ್ಣ ಅಧಿಕಾರದೊಡನೆ ಬಿಟ್ಟುಬಿಡಬೇಕೆಂದು ನಮೂದಿರುವದರಿಂದ ಬೆಂಗಳೂರು ಕಂಟೋನ್ಮೆಂಟಿಗೆ ಸೇರಿಸಲ್ಪಟ್ಟ ಅನೇಕ ಸ್ಥಳಗಳು ಬೆಂಗಳೂರು ಸಿವಿಲ್‌ಕೋರ್ಟುಗಳ ಅಧಿಕಾರ ಸರಹದ್ದಿನಿಂದ ತಪ್ಪಿಸಲ್ಪಟ್ಟವು. ಬದಸ್ತೂರ್‌ಕಂಟೋನ್ಮೆಂಟ್ ಅಧಿಕಾರಕ್ಕೆ ಸೇರಿದ್ದ ಕೆಲವು ವಿಭಾಗಗಳು ಬೆಂಗಳೂರು ಕೋರ್ಟುಗಳ ಅಧಿಕಾರಕ್ಕೆ ಮಾತ್ರ ಒಳಪಡಿಸಬೇಕಾಯಿತು. ಆದದರಿಂದ, ಸನ್ ೧೮೮೧ನೇ ಇಸವಿ ಮೇ ೬ನೇ ಮಾರ್ಚ್ ೩೧ನೇ ನಂಬರ್ ದಿವಾನರವರ ಇಷ್ತಿಹಾರ ಪ್ರಕಾರ ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರಾಗಿದ್ದ ಮೆ|ಜನ್ನಿಂಗಿಳಿಯವರಿಗೆ ಬೆಂಗಳೂರು ಷಹರ್ ಶಿವಾಯಿ ಇತರ ಸ್ಥಳಗಳಲ್ಲಿ ಚಲಾಯಿಸುತಲಿದ್ದ ಸ್ಮಾಲ್ ಕಾಜ್ ಅಧಿಕಾರವನ್ನು ವಾಪಸ್ ತೆಗೆದುಕೊಂಡು ಷಹರಿಗೆ ಮಾತ್ರ ೩೦೦ ರೂಪಾಯಿಗಳಿಗೆ ಒಳಪಟ್ಟ ದಾವೆಗಳನ್ನು ಸ್ಮಾಲ್‌ಕಾಜ್ ಮೊಕದ್ದಮೆಯಂತೆ ಫೈಸಲ್ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿತು. ಷಹರ್ ಮ್ಯುನಿಸಿಪಲ್ ಸರಹದ್ದಿನೊಳಗಾಗಿ ಒರಿಜನಲ್ ಸಿವಿಲ್ ಅಧಿಕಾರ ಚಲಾಯಿಸುವದಕ್ಕೆ ಒಂದು ಅಡ್ಡಿಷನಲ್ ಮುನಸಫಕೋರ್ಟು ಯೇರ್ಪಾಟಾಗಿ ಅದಕ್ಕೆ ಮೆ ನೈನೆಯಾಪರನ್ನು ಮೊಕರರ್ಮಾಡಿದರು.

ಈ ಸಂದರ್ಭದಲ್ಲಿ, ಹಿಂದೆ, ಬೆಂಗಳೂರಿಗೂ ಕಂಟೋನ್ಮೆಂಟಿಗೂ ಒಂದು ಸ್ಮಾಲ್‌ಕಾಜ್ ಕೋರ್ಟು ಇದ್ದದರಿಂದ ಅದರಲ್ಲಿ ಫೈಸಲಾದ ಮೊಕದ್ದಮೆಗಳೆಲ್ಲವು ಕಂಟೋನ್ಮೆಂಟ್ ಕೋರ್ಟಿಗೆ ವರ್ಗವಾಗಿ ಹೋದವು ಅಮಲ್‌ಜಾರಿಗೋಸ್ಕರ ಸದರೀ ಮೊಕದ್ದಮೆಗಳನ್ನು ಷಹರ್ ಕೋರ್ಟಿಗೆ ವರ್ಗಮಾಡಿಸುವದಕ್ಕೆ ಜಾಸ್ತೀ ಕಿಮ್ಮತ್ತಿನ ಸ್ಟಾಂಪುಗಳು ಉಪಯೋಗಿಸಬೇಕಾಯಿತು. ಅದಕ್ಕಾಗಿ ಷಹರ್ ಜನಗಳು ಹತ್ತುಸಾವಿರ ರೂಪಾಯಿಗಳ ವರಿವಿಗೆ ದಂಡತೆತ್ತರು. ಷಹರ್ ಕೋರ್ಟಿನಲ್ಲಿ ಫೈಸಲಾದ ಮೊಕದ್ದಮೆಗಳು ಕಂಟೋನ್ಮೆಂಟ್ ಸರಹದ್ದಿನಲ್ಲಿ ಅಮಲ್‌ಜಾರೀ ಮಾಡಿಸುವದರಲ್ಲಿ ಪುನಃ ದುಡ್ಡು ತೆರಬೇಕಾಯಿತು. ಈ ಗಲಾಟೆ ತೀರುವದರೊಳಗಾಗಿಯೇ ಬೆಂಗಳೂರು ಸಬ್‌ಕೋರ್ಟು ಮೌಕೂಫ್ ಆಗಿ ಆ ಅಧಿಕಾರ ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಕೋರ್ಟಿಗೂ ಮುನಸಫ ಕೋರ್ಟುಗಳಿಗೂ ಹಂಚಲ್ಪಟ್ಟವು. ಇದನ್ನು ಜನಗಳು ಚನ್ನಾಗಿ ತಿಳಿದುಕೊಳ್ಳುವದರೊಳಗಾಗಿಯೇ ಡಿಸ್ಟ್ರಿಕ್ಟ್ ಕೋರ್ಟ್ ಮೌಕೂಫ್ ಆಗಿ ಅಧಿಕಾರದಲ್ಲಿ ಕೆಲವುಭಾಗ ಚೀಫ್ ಕೋರ್ಟಿಗೂ ಕೆಲವುಭಾಗ ಸಬ್‌ಕೋರ್ಟಿಗೂ ಹಂಚಲ್ಪಟ್ಟು ಮರಳಿ ಸಬ್‌ಕೋರ್ಟ್ ಯೇರ್ಪಾಡಾಯಿತು. ಈ ಯೇರ್ಪಾಡಿನಲ್ಲಿ ಸಬ್‌ಡಿವಿಜನ್ ಮುನಸಫ್ ಕೋರ್ಟಿಗೂ ಅಡ್ಡಿಷನಲ್ ಮುನಸಫರಿಗೂ ಅಧಿಕಾರಗಳು ಬದಲಾಯಿಸಲ್ಪಟ್ಟವು. ಇದು ಜಾರಿಯೊಳು ಬರುವದರೊಳಗಾಗಿ ಅಡ್ಡಿಷನಲ್‌ಮುನಸಫ್ ಕೋರ್ಟು ಮೌ

ಆಗಿ ಸ್ಮಾಲ್‌ಕಾಜ್ ಅಧಿಕಾರ ಸಹ ಕೋರ್ಟು ಗಳು, ಒರಿಜನಲ್ ಅಧಿಕಾರ ಸಬ್‌ಡಿವಿಜನ್ ಮುನಸಫ್ ಕೋರ್ಟುಗಳೂ ವರ್ಗ ಮಾಡಲ್ಪಟ್ಟಿತು. ಸಬ್‌ಡಿವಿಜನ್ ಮುನಸಫ್ ಕೋರ್ಟುಗಳ ಮುನಸಫರು ಬದಲಾಯಿಸಲ್ಪಟ್ಟದ್ದಲ್ಲದೆ ಕೆಲಸಗಳು ಹೆಚ್ಚಿಸಲ್ಪಟ್ಟವು. ಅಮಲ್‌ಜಾರೀ ವಿಷಯದಲ್ಲಿ ಒರಿಜನಲ್ ಡಿಕ್ರಿಗಳು ಯಾವ ಕೋರ್ಟಿನಿಂದ ಬರಬೇಕೋ ಗೊತ್ತಿಲ್ಲವಾಯಿತು. ಹಿಂದೆ ಅಮಲ್‌ಜಾರೀ ಆಗಿದ್ದು ಕಕ್ಷಿಗಾರರ ಜೊತೆಗೆ ಜಪ್ತೀ ಹರಾಜ್ ಮೂಲಕವಾಗಿಯೂ, ಕೆಲವು ಹಿಡಿಯುವದರ ಮೂಲಕವಾಗಿಯೂ ಜಮೇತವ ಡಣ ಕಕ್ಷಿಗಾರರಿಗೆ ಸ್ವಲ್ಪವೆ ಕೊಟ್ಟನಸ್ಥಿಯೂ ಹಾಜರಿಲ್ಲದೆ ಹೋಗಿರುವದಲ್ಲದ ಬಾಬತು ಹಣಕ್ಕೆ ಲೆಕ್ಕವೇ ಇಲ್ಲದೆ ಇವೆ.

ಮುನಸಫ್‌ಕೋರ್ಟು ಹೊಸಮುನಿಸಿ ಪರಾರೀ ಯಾಗಿರುವದರಿಂದ ಅವನ ದಸ್ತಗಿರಿಗೆ ವಾರಂಟು ಸಾದರಾಗಿದೆ. ಇವರ ನೌಕರರು ಮುನಸಫರ ಸುಬಿಕೆಗೆ ದೂರರಾಗಿವಾರೆ. ಕಾಪಿಯಸ್ಟುಗಳು ಸಹ ವಜಾ ಮಾಡಲ್ಪಟ್ಟದಾರೆ ಸಹ ಡಿಸ್ಟ್ರಿಕ್ಟ್ ಕೋರ್ಟು [illegible] ಬಲೋಚಿಸಲಾಗಿ, ವರ್ಗವಾಗಿಬಂದ ಅಡ್ವೊಕೇಟ್ ಮುನಸಫ್ ಕೋರ್ಟು [illegible] ಫ್ಲೀಡರ್‌ಗಳು [illegible] ವಿರುದ್ಧ ಕೇಸುಗಳು ಅವರು ಬರುವದಕ್ಕಿಲ್ಲದೆಯೂ ಅಡ್ವೊಕೇಟುಗಳನ್ನು ನೌಕರರ [illegible] ಅವರಿಗೆ ಕೊಡಬೇಕಾದ [illegible] ದಾವಾ [illegible] ನಡೆಸುವದಕ್ಕೆ [illegible] ವಾಗಿದೆ.

[illegible] ಆದಾರಗಳನ್ನು [illegible] ಬದಲಾಯಿಸುವದರ ಮೂಲಕ ಕಕ್ಷಿಗಾರರಿಗೆ [illegible] ಶರತಿಂದ [illegible] ಕಕ್ಷನಾದ [illegible] ಧಿಕಾರಿಗಳ [illegible] ತುವದಕ್ಕೆ ಕಾರಣವಾಗಿದೆ [illegible] ರ್ಟುಗಳ ಬದಲಾವಣೆ [illegible] ತ್ತೇವೆ.

Occasional Notes
ಪ್ರಸಿತ್ತ ಕವಿಷಯಮ್ಯಾಸ

The defence of Herat ಹಿರಾತ್ ಪಟ್ಟಣ ಸುರಕ್ಷತೆಯ ಬಗ್ಗೆ ಈಗ [illegible] ೬,೦೦೦ ಸೇನೆಯ ಅವಶ್ಯಕತೆಯ್ನು ಕಾಬುಲ್ ಅಮೀರರವರಿಗೆ [illegible] ಪಡಿಸುವರು.

A rod consent — [illegible] ಸರಿಗೆ [illegible] ಸಹಾಯ ಮಾಡುವ [illegible] ಅಸೋಸಿಯೇಷನ್ [illegible] ಮಹಾರಾಜ್ಯಕ್ಕೆ [illegible] ಸಮ್ಮತಿಸಿರುತ್ತಾರೆ.

A Mahomedan converted to Vaishnavism — [illegible] ಒಬ್ಬ ಮುಸಲ್ಮಾನನು [illegible] ಅವನ [illegible] ಗಳನ್ನು [illegible] ತವಾಗಿ [illegible] ಬರುವದಾಗಿ ಒಂದಾನೆ [illegible] ಪತ್ರಿಕೆ ಹೇಳುತದೆ.

The Viceroy's Visit to Agra — ಬರುವ ನವಂಬರ್ ತಿಂಗಳಲ್ಲಿ [illegible] ವೈಸ್ರಾಯಿ [illegible] ಆಗ್ರಾ [illegible] ಬೋರ್ಡ್ ಮಾಡಿ, [illegible] ಮಧ್ಯ ಇಂಡಿಯಾ ದೇಶದ [illegible] ಬರುವರೆಂದು ಕಾಣುವದೆ, ಎಂದು ಇಂಗ್ಲಿಷ್ [illegible] ಪತ್ರಿಕೆ ಹೇಳುತದೆ.

An official [illegible] — ಮೆಸ್ಸರ್ಸ್ [illegible] ಕಂಪನಿಯವರು [illegible] ರು ಕಾಫಿರೆಯವರ [illegible] ಉಪಯೋಗಿಸುವಂತೆ ಒಂದು [illegible] ಟ್ಟಿಸುವದಕ್ಕಾಗಿ ಒಂದು ಲಕ್ಷ ರೂಪಾಯಿಗಳು ಕೊಡುವುದೆಯೂ, ಪರಂತು ಅದು ಪೂರಾದ ಮೇಲೆ ಗವರ್ನಮೆಂಟಿನವರು ಅದು ಕಾಪಾಡುವ ಜವಾಬ್ದಾರಿ ಹಾಗೆ ಮಾಡುವದಾಗಿಯೂ ಗವರ್ನಮೆಂಟಿಗೆ ತಿಳಿಸಲು ಗವರ್ನಮೆಂಟಿನವರು ಅದಕ್ಕೆ ಒಪ್ಪಲಿಲ್ಲವು.

Earthquake in Cashmere — ಕಾಶ್ಮೀರದೇಶದೊಳು ಆಗಿಂದಾಗ್ಗೆ ಭೂಕಂಪವುಂಟಾಗುತಲೇ ಇದೆ. ಮಹಾರಾಜರವರು ಇನ್ನು ದೌಬಾಲ್ಯವೇ [illegible] ರಾಜ್ಯಕಾರ್ಯವ ನೋಡಲು ಶಕ್ತಿಸಾಲದು, ಎಂಬದಾಗಿ ಈ ತಿಂಗಳ ೧೧ನೇ ತಾರೀಖಿನಲ್ಲಿ ಶ್ರೀನಗರದಿಂದ ಒಂದಾನೊಂದು ಪತ್ರಿಕೆಗೆ ಬಂದ ವರ್ತಮಾನದಿಂದ [illegible] ತಿಳಿಯಬರುತದೆ.

The Cuddapah Nellore State Railway — ಕಡಪೆಯಿಂದ ನೆಲ್ಲೂರಿಗೆ ಹಾಕಲ್ಪಡುವದಾಗಿದ್ದ ರೈಲ್ ರಸ್ತೆಯ ಕಾಮಗಾರಿಯು ಸ್ವಲ್ಪ ಕಾಲ [illegible] ಸುಪರಿಂಟೆಂಡೆಂಟ್ [illegible] ಪುಟ್ಟ [illegible] ಅಲುಸರಿಸಿ ಮದ್ರಾಸ್ [illegible] ದರ [illegible] ದಲ್ಲೆಲ್ಲರೂ ಅವರವರ ಮನೆಗೆ [illegible] ತಿಳಿಯಬರುತದೆ.

Cholera in the Bombay Presidency — ಮುಂಬಯಿ ಪ್ರೆಸಿಡೆನ್ಸಿಯಲ್ಲಿ ವಾಂತಿಭೇದಿ ರೋಗದ [illegible] ಈಚೆಗೆ ಸ್ವಲ್ಪ ಕಡಿಮೆ ದೇವರ [illegible] ೧೮ ಡಿಸ್ಟ್ರಿಕ್ಟುಗಳಲ್ಲಿ [illegible] ರೋಗ [illegible] ಪಟ್ಟಣಗಳ [illegible] ಜಿಲ್ಲೆಯ [illegible] ರೋಗ [illegible] ಮಂದಿ ಮೃತರಾದರು [illegible] ರೋಗ ತಗಲಿದವರು [illegible] ಮಂದಿ, ಮೃತರಾದವರು [illegible] ಮಂದಿ. [illegible] ನಗರದಲ್ಲಿ ರೋಗ ತಗಲಿದವರು [illegible] ಮಂದಿ, ಮೃತರಾದವರು [illegible] ಮಂದಿ. [illegible] ಯಲ್ಲಿ ರೋಗ ತಗಲಿದವರು ೧೦೩ ಮಂದಿ, ಮೃತರಾದವರು ೩೨ ಮಂದಿ. ನಾಸಿಕದಲ್ಲಿ ರೋಗ ತಗಲಿದವರು ೧೯೩ ಮಂದಿ, ಮೃತರಾದವರು [illegible] ಮಂದಿ. ಕುಂಡಿಯಲ್ಲಿ ರೋಗ ತಗಲಿದವರು ೧೨೯ ಮಂದಿ, ೬೦ ಮಂದಿ ಮೃತರಾದರು.

ನೋಟಿಸ್.

ಮೈಸೂರು ಬ್ಯಾಂಕ್ ಕಾರ್ಪೊರೇಷನ್ (ಏಸಿ ಹದ) ಷೇರ್ ಹೋಲ್ಡರಿಗೆ.

ಇದರಿಂದ ತಿಳಿಯಪಡಿಸುವದೇನೆಂದರೆ — ಸನ್ ೧೮೮೫ನೇ ಇಸವಿ ಫೆಬ್ರವರಿ ೧೯ನೇ ತಾರೀಖಿನ [illegible] ಪ್ರೊಸೀಡಿಂಗ್ಸ್ ಪ್ರಕಾರ ಮೊಕರರಾದ ಸಬ್‌ಕಮಿಟಿ ಮೆಂಬರುಗಳ ಪೈಕಿ ಕೆಲವರು ಕೆಲಸಬಿಟ್ಟದ್ದರಿಂದ ಇರುವ ಮೆಂಬರುಗಳನ್ನು ಬಿಟ್ಟಿದ್ದನ್ನು ಮನಿವರ್ಕ್ಕ [illegible] ಬ್ಯಾಂಕಿನ ಆಫೀಸ್ [illegible] ಯಲ್ಲಿ ಕ್ಲೋಸ್ ಸುಮಾರು ತಕ್ಕ ಯುಕ್ತವಾದ ಏರ್ಪಾಡು ಮಾಡುವದಕ್ಕಾಗಿ ಸನ್ ಇದೇ ಇಸವಿ ಸೆಪ್ಟೆಂಬರ್ ಒನ್ನತಾರೀಖ್ ಭಾನುವಾರ ಮಧ್ಯಾಹ್ನ ೩ ಘಂಟೆಗೆ ಬ್ಯಾಂಕ್ ಹಾಲ್‌ನಲ್ಲಿ ಜನರಲ್ ಸಭೆ ಸೇರುವದರಿಂದ ಭಾಗಸ್ಥರೆಲ್ಲರೂ ಖುದ್ದಾಗಿ ಅಥವಾ ಮುಖ್ತಾರರ ಮೂಲಕ ದಯಮಾಡಿ ಬರಬೇಕೆಂದು ಪ್ರಾರ್ಥಿಸುವ,

ತಾ|| ೨೯ನೇ ಆಗಸ್ಟ್ } ಮಾನೇಜಿಂಗ್ ಡೈರೆಕ್ಟರ್
೧೮೮೫ನೇ ಇಸವಿ. }

LOCAL AND PROVINCIAL NEWS
ಒಳದೇಶದ ಮತ್ತು ತಾಲ್ಲೂಕಿನ ವರ್ತಮಾನಗಳು.

H. H. the Maharaja's return to Mysore — ಶ್ರೀಮನ್ಮಹಾರಾಜರವರು ಬರುವ ತಿಂಗಳ ಮೊದಲನೆ ವಾರದ ಹೊತ್ತಿಗೆ ಮೈಸೂರು ರಾಜಧಾನಿಗೆ ಹಾದರಿ [illegible] ಕೇಳುತ್ತೇವೆ.

The Assistant British Resident — ಇಲ್ಲಿನ ಅಸಿಸ್ಟೆಂಟ್ ಬ್ರಿಟಿಷ್ ರೆಸಿಡೆಂಟರಾದ ಮೇ। ಮಾರ್ಟಿಂಡೇಲ್ ರವರು ಬರುವ ಅಕ್ಟೋಬರ್ ತಿಂಗಳಲ್ಲಿ ಫರ್ಲೋ ರಜಾ ಮೇಲೆ ಸ್ವದೇಶಕ್ಕೆ ಹೋಗುವರೆಂದು ಕೇಳುತ್ತೇವೆ.

Revision in the Chief Court.— ಇಲ್ಲಿನ ಚೀಫ್ ಕೋರ್ಟು ನೌಕರರ ಪೈಕಿ ಸರ್ವಿಸ್ ಆದವರು ಕೆಲವರಿಗೆ ಪೆನ್ಶನ್ ಕೊಡಲ್ಪಡುವದೆಂತಲೂ, ಅವರಿಗೆ ಬದಲಾಗಿ ಇಸಂಗಳೂ ಕೆಲವು ಜಾಸ್ತಿಯಿಸಂಗಳೂ ಮೊಕರರ್ ಮಾಡಲ್ಪಡುವವೆಂತಲೂ ಕೇಳುತ್ತೇವೆ.

Murder — ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಒಬ್ಬ ಹೆಂಡತಿ ವ್ಯಭಿಚಾರ ಮಾಡುತಲಿದ್ದದ್ದು ಅವಳ ಗಂಡನಿಗೆ ತಿಳಿದು ಅವನು ಹೊಡೆದು ಅವಳನ್ನು ಕೊಂದು ಹಾಕಿಬಿಟ್ಟ ಕೂಡಲೇ ಪೋಲೀಸಿನವರಿಗೆ ಹೋಗಿ ನಡೆದ ಸಂಗತಿಯನ್ನು ರಿಪೋರ್ಟು ಮಾಡಿದನು. ಮೊಕದ್ದಮೆಯು ಇನ್ನು ದರ್ಯಾಪ್ತಿಯೊಳದೆ.

The weather — ಈ ವಾರದಲ್ಲಿ ಮಳೆಯು ದ್ವಿಯಿಲ್ಲವು ದಾರಕೆಗಳು ಜೋರಾಗಿಯೂ ಆಗುತಲೂಯಿವೆ. ಬಿಸಿಲನ್ನು ನೋಡಲಾಗಿ ಇದು ವರ್ಷಾಕಾಲವಲ್ಲವು, ಪರಂತು ಗ್ರೀಷ್ಮಋತುವೆಂದು ಖಚಿತವಾಗಿ ಹೇಳಬಹುದಾಗಿದೆ. ವರ್ಷಾಭಾವಕ್ಕಾಗಿ ಪರ್ಜನ್ಯ ಜಪವನ್ನು ಮುನಿಸಿಪಲ್ ಬೋರ್ಡಿನವರು ಗವೀಪುರದಲ್ಲಿ ಬ್ರಾಹ್ಮಣರಿಂದ ಪರ್ಜನ್ಯಜಪ ನಿನ್ನೆಯದಿನದಿಂದ ಮಾಡಿಸುತಲಿರುವರೆಂದು ಕೇಳುತ್ತೇವೆ.

A correction — ಈ ತಿಂಗಳ ೧೧ನೇ ತಾರೀಖಿನ ಈ ಪತ್ರಿಕೆಯಲ್ಲಿ ಪ್ರಕಟಿಸ ಮಾಡಲ್ಪಟ್ಟಿರುವ ಪಿರ್ಯಾದೆ ಒಂದರಲ್ಲಿ ಲೇಖಕರಾದವರ ರ ಕಾಗದದಲ್ಲಿ, ಅನಿರುದ್ಧನು ಬ್ರಹ್ಮಾಂಶ ಸುಜಾತನೆಂಬದಕ್ಕೆ ನಿದರ್ಶನವಾಗಿ ಕೆಲ ಸ "ಕೃಷ್ಣಪುತ್ರಕ್ಕೆ ಪ್ರದ್ಯುಮ್ನೋ" ಎಂಬ ಬ್ರಹ್ಮ ವೈವರ್ತ ಪುರಾಣ ವಚನವು ಸರಿಯೇ ಗ್ರಂಥದ ೧೧೦ನೇ ಅಧ್ಯಾಯದಲ್ಲಿದೆ ಯೆಂಬದಕ್ಕೆ ಬದಲಾಗಿ ೬೧ನೇ ಅಧ್ಯಾಯವೆಂದು ಕೈತಪ್ಪು ಬಿದ್ದಿರುವದರಿಂದ ಸದರೀ ೧೧೦ನೇ ಅಧ್ಯಾಯವನ್ನು ನೋಡಿ ತಿಳಿದುಕೊಂಡು ತೃಪ್ತಿ ಪಡಬಹುದು.

The bitter bit — ಈಚೆಗೆ ನಾಗ್ಪಾಲ್ ರವರು ಗಳಿಂದ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಒಂದು ಮನೆಗೆ ಒಬ್ಬ ಕಳ್ಳನು ಕನ್ನ ಹಾಕಿ ಮೊದಲು ಕಾಲನ್ನು ಒಳಗಿಟ್ಟಲು ಮನೆಯವನು ಅದು ತಿಳಿದು ಕನ್ನಗಿಂಡಿಯ ಬಳಿ ಆಯುಧವಿದ್ದ ಕಾಲನ್ನು ಕಡಿದು ಹಾಕಿಬಿಟ್ಟನು. ಕೂಡಲೇ ಅವನಸಂಗಡಿಗರು ಇವನ ಕೈಯನ್ನು ಆಳಾಸಿ ಹಿಡಿದು ಹೊರಕ್ಕೆಳೆದ ಮಾಡಲೇಕೆಂಬ ಯೋಚನೆಯಿಂದ ಕಾಲನ್ನು ಹೋಗಲಾಡಿಸಿಕೊಂಡವರನ್ನು ಯತ್ತಿಕೊಂಡು ಓಡಿಹೋದವರು ಅದ್ಯಾಪಿ ಸಿಕ್ಕಲಿಲ್ಲ. ಕತ್ತರಿಸಲ್ಪಟ್ಟ ಕಾಲು ಪೊಲೀಸಿನವರ ವಶದಲ್ಲಿದೆ.

Professional Tax — ಗತ ವರ್ಷದ ಪುರಸಭೆಯ ನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಮ್ಯುನಿಸಿಪಲ್ ಬೋರ್ಡಿನ ಸಬ್ ಕಮಿಟಿಯವರು ಸದರೀ ರಿಪೋರ್ಟು ಕೇಳುತ್ತೇವೆ. ಈ ಕಮಿಟಿಗೆ ಮೇಜರ್ ಮಾಕ್ಬಿಯವರು ಪ್ರೆಸಿಡೆಂಟರಾಗಿಯೂ ಮಿ॥ ಹೀಸ್, ಮಿ॥ ಕೃಷ್ಣಸಿಂಗ್ ಇವರುಗಳು ಮೆಂಬರುಗಳಾಗಿಯೂ ಇರುತ್ತಾರೆ. ಈ ಸಬ್ ಕಮಿಟಿಯವರು ವರ್ತಕರಿಗೆ ಹಾಕಲ್ಪಟ್ಟ ಪ್ರೊಫೆಷನಲ್ ಟ್ಯಾಕ್ಸಿನ ಬಗ್ಗೆ ಕಸಬುದಾರರಿಂದ ಬಹಳ ದೂರುಗಳು ಬಂದಿರುವ ಕಾರಣ ಅಪೀಲುಗಳ ವಿಚಾರಣೆಯನ್ನು ಮಾಡಲು ನೇಮಕ ಮಾಡಲ್ಪಟ್ಟಿರುತ್ತಾರೆ. ಆರಾಮದಲ್ಲಿ ಸುಮಾರು ೩೦೦ ಅರ್ಜಿಗಳು ಬಂದಿವೆಯೆಂದು ಕೇಳುತ್ತೇವೆ. ಅವರ ಪೈಕಿ ಬಹುಮಂದಿ ಹಾಜರಾದ್ದು ನಮ್ಮ ಕೋಮುಟಿಗರು ನಗರದ ಲೇವಾದೇವಿ ನಡೆಸತಕ್ಕ ಸಾಹುಕಾರರುಗಳೂ ಇದ್ದರು. ಕಮಿಟಿಯವರು ಎಲ್ಲವನ್ನೂ ತರಗತಿಯಾಗಿ ಎಲ್ಲವನ್ನು ವಿಚಾರಿಸಿದರು. ಪ್ರಾಯಶಃ ಅಂತವರ ಸಂಖ್ಯೆಯು ಬಹಳ ಕಡಮೆಯಾಗಿರುತದೆ. ವಿಶೇಷ ವ್ಯಾಪಾರ ಮಾಡುವ ಬಹಳ ಲಾಭವುಳ್ಳ ವರ್ತಕರು ಪೈಕಿ ಕೆಲರೂ ತೆರಿಗೆಯು ಕಡಮೆ ಮಾಡಬೇಕೆಂದು ಕೇಳಿಕೊಂಡಿರುವಂತೆ ತಿಳಿಯಬರುತದೆ. ಅಜಮಾಯಿಷಿನ ರೆಕಾರ್ಡನ್ನು ಹಾಜರ್ ಮಾಡಬೇಕೆಂದು ಅವರು ಕೇಳಿದಾಗ ಅದಕ್ಕೆ ಅನೇಕರು ನಿರಾಕರಿಸಿದರು. ಅಂತಹ ಸಂದರ್ಭಗಳಲ್ಲೆಲ್ಲಾ ಕಮಿಟಿಯವರು ಅರ್ಜಿಗಳನ್ನು ನಿರಾಕರಿಸಿಬಿಟ್ಟರಲ್ಲದೆ ಅವರಿಗೆಲ್ಲ ಮುಂದಿನ ಸಂವತ್ಸರದಲ್ಲಿ ತೆರಿಗೆಯನ್ನು ಜಾಸ್ತಿ ಮಾಡಬೇಕೆಂದು ಶಿಫಾರಸ್ ಮಾಡಿರುವಂತೆ ಕೇಳುತ್ತೇವೆ.

"The Amodamodini — "ಧಾರವಾಡದಲ್ಲಿ ಈಗ ನೂತನವಾಗಿ ಪ್ರಕಟಿಸಲ್ಪಡುತಿರುವ ಆನಂದ ಮಂದಿರವೆಂಬ ಹೊಸ ಪತ್ರಿಕೆಯು ಪ್ರಥಮಸಂಚಿಕೆಯು ಈ ವಾರದಲ್ಲಿ ನಮಗೆ ಕಳುಹಿಸಲ್ಪಟ್ಟಿತು. ಇದು ಪ್ರತಿ ತಿಂಗಳಿಗೆ ಒಂದು ಸಲ ಗ್ರಂಥರೂಪವಾಗಿರುತದೆ. ಮೊದಲನೆಯ ಸಂಚಿಕೆಯೊಳಗೆ ವಿಷಯಗಳು ಅದರ ಶಿರೋಭಾಗದಲ್ಲಿ ಯನ್ನೆ ತಿಳಿದ್ದಾಗಿರುತದೆ. ಅವುಗಳ್ಯಾವುವೆಂದರೆ—"ಕನ್ನಡ ಜನರಿಗೆ ವಿಜ್ಞಾಪನೆ ೧, ಸುಭಾಷಿತ ೨, ಅಂತರೆ ಅಭಿನಯಶಾಸ್ತ್ರ, ಸೋಮ್ಯಾನಸೋದೆಗಿರಿ ೩, ಪಾರ್ವತೀಪರಿಣಯ ನಾಟಕ ೪." ಈ ಪತ್ರಿಕೆಯು ಪ್ರಕಟಿಸಲ್ಪಟ್ಟ ಉದ್ದೇಶವು ಸೂಚಿಸಿ ಮುಂದೆ ವಿಚಾರಣೀಯಗಳಾದ ಅಂಶಗಳನ್ನು ಅದರ ಲೇಖಕರು ತಿಳಿಸುತ್ತಾರೆನೆಂದರೆ, "ಇದರಲ್ಲಿ ಇದರ ಹೆಸರಿಗೆ ಒಪ್ಪುವಂಥ ಸುರಸ ವಿಷಯಗಳೇ ಸಂಗ್ರಹಿಸಲ್ಪಡುವವೇ ಬಹು ವಿಹಿತವೆಂದು ನೆನಸುತ್ತೇವೆ! ಅಂದರೆ—ನಾಟಕಗಳೂ ಕಾವ್ಯಗಳೂ ಭಾಣಗಳೂ ಪ್ರಹಸನಗಳೂ ಶೃಂಗಾರ ಕಥೆಗಳೂ ಚಮತ್ಕಾರಿಕ ಸ್ಫುಟ ವಿಷಯಗಳೂ ಚಾತುರ್ಯ ಗೋಷ್ಠಿಗಳೂ ವೇಶ್ಯಾ ಸುರಪಾನ ಗಾನ ನರ್ತನಾದಿಯ ವಿನೋದಗಳೂ ಒಗಟೆಗಳೂ ನಮಯಸೂಚಕ ಭಾಷಣಗಳೂ ಮುಂತಾದವುಗಳನ್ನು ಇದರಲ್ಲಿ ಕ್ರಮೇಣ ಅನುಕೂಲವಾದಂತೆ ಸೇರಿಸುವೆವು! ಸಾರಾಂಶ ಈ ನಮ್ಮ ಆನಂದ ಮಂದಿರವು ನಮ್ಮ ಕನ್ನಡ ಜನರಿಗೆ ರುಚಿಕರವಾಗುವದಕ್ಕೆ ಏನೇನು ಸಾಧನಗಳು ಬೇಕೋ ಅವೆಲ್ಲವನ್ನು ಇದರಲ್ಲಿ ತರುವದಕ್ಕೆ ಬಗೀರಥ ಪ್ರಯತ್ನ ಮಾಡುತ್ತೇವೆ!"

ಈ ಪತ್ರಿಕೆಯಿಂದ ಜನಗಳಿಗೆ ಆಮುಷ್ಮಿಕ ಪ್ರಯೋಜನ ವುಂಟಾಗದಿದ್ದರೂ ಐಹಿಕಕ್ಕೆ ಅಮ ಸಾಧಕವಲ್ಲದೆ ಹೋಗುವದಿಲ್ಲವು. ಶೃಂಗಾರಾದಿಗಳನ್ನು ಈ ಕಾಲದಲ್ಲಿ ಪ್ರಚಾರದೊಳಗಿರುವ ಹೀನ ಇಂಗ್ಲಿಷ್ ವಿದ್ಯಾಭ್ಯಾಸ ಮಾಡತಕ್ಕವರು ಅಂಗೀಕರಿಸದಿದ್ದರೂ ಪೂರ್ವಕಾಲದಿಂದ ತಮ್ಮ ಯಾವದಾಯಸ್ಸನ್ನೂ ಯಾವ ಚಿತ್ತಶಕ್ತಿಯನ್ನೂ ಯಾವ ದ್ರವ್ಯವ್ಯಯವನ್ನೂ ಯಾವ ತ್ರ್ಯಬಿಭವವನ್ನೂ ಅದಕ್ಕಾಗಿಯೇ ವಿನಿಯೋಗಿಸುತಲಿದ್ದು ಗತಿಸಿದ ನಮ್ಮ ಪೂರ್ವಿಕರ ನಡತೆಯನ್ನು ಮರಳಿ ಉಜ್ಜೀವಿಸುವಂತೆ ಮಾಡುವದಕ್ಕೆ ಮೇಲೆ ಕಂಡಂತಹ ಆನಂದಪತ್ರಿಕೆಯೊಂದು ಕೇವಲ ಆವಶ್ಯಕವು. ರತ್ನಾಪಿ ದಾಕ್ಷಿಣಾತ್ಯದೇಶದ ಜನಗಳಿಗೆ ಈ ಪತ್ರಿಕೆಯು ಬಹಳ ಅಪೇಕ್ಷಿತವಾದದ್ದು.

CORRESPONDENCE.

ಸ್ತ್ರೀ ಪುನರ್ವಿವಾಹ ವಿಷಯ.

ಮ॥ ರಾ॥ ಕರ್ನಾಟಕಪ್ರಕಾಶಿಕಾ ಎಡಿಟರವರಿಗೆ,

ವಿಜ್ಞಾಪನೆ.

ಅಯ್ಯಾ—ಈಚೆಗೆ ಏರಿದ ಶ್ರೀ ಪುನರ್ವಿವಾಹ [illegible] ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ [illegible]

೧. [illegible] ಶ್ರೀ ಪುನರ್ವಿವಾಹ ವಿಷಯವಾಗಿ [illegible]

೨. [illegible] ನಡೆದ ವಿಷಯಗಳನ್ನು [illegible]

[illegible]

ಶ್ರೀ॥ [illegible] ||

ಇದರ ಅರ್ಥ—[illegible]

[illegible]

[illegible]

SUMMARY OF NEWS.

ವರ್ತಮಾನ ಸಂಗ್ರಹವು

Railway refreshment rooms for natives [illegible]

National Indian Association.—[illegible]

Native employes in the revenue service.—[illegible]

A mischievous freak.—[illegible]

Torch light dacoity at Hospett.—[illegible]

A tragedy in the Raichur Jail.—[illegible]

[illegible]

Capture of dacoits.—[illegible]

BANGALORE:—Printed and published for the Proprietor, at the KARNATIC PRESS —1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible] ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜಸ್ಯರ್ದ್ವಿಕಾಸುಪರಿ[illegible]

Vol. XII.] BANGALORE—MONDAY, SEPTEMBER 7, 1885. [No. 36.

ಸಂಪುಟ ೧೨.] ಬೆಂಗಳೂರು—ಸರ್ ೧೮೮೫ನೇ ಇಸವಿ ಸೆಪ್ಟಂಬರ್ ೭ನೇ ತಾರೀಖ್ ಸೋಮವಾರ. [ಸಂಚಿಕೆ ೩೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible], ಮುಂಗಡ ೧ಕ್ಕೆ ... ... [illegible]

ಇಂಗ್ಲಿಷ್ [illegible] ಮುಂಗಡ ೧ಕ್ಕೆ ... ... [illegible]

ಕನ್ನಡ [illegible] ಮುಂಗಡ ೧ಕ್ಕೆ. [illegible]

[illegible]	೧ಕ್ಕೆ	[illegible]
[illegible]	೧ಕ್ಕೆ	[illegible]
[illegible]	೧ಕ್ಕೆ	[illegible]

[illegible]

ಪ್ರಕಟನೆಯ ದರ.

[illegible]	೧ಕ್ಕೆ	[illegible]
[illegible]	೧ಕ್ಕೆ	[illegible]

NOTICE TO SUBSCRIBERS.

[illegible]

NOTICE.

VAIDYASARASANGRAHA.

Price including Postage, Rs 5-0-0

[illegible]

ನೋಟೀಸ್.

[illegible]

NOTICE.

ಎಸ್. ರಾಮಸ್ವಾಮಿಯಂಗಾರ್ ಅಂಡ್ ಕೊ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಿಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಮ್ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ವಳ್ಳಾಳ್ ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 7, 1885

೧೮೮೫ನೇ ಸೆಪ್ಟಂಬರ್ ೭ನೇ ರಾ|| ಸೋಮವಾರ.

ಓಂ|| ಸರ್ವಜ್ಞತಾಂ [illegible] ತ್ವಾವೆ [illegible] ಯಂಜನಸ್ಯ [illegible]||

PROGRESS IN NATIVE STATES

ಇಂಡ್ಯದೇಶದ ನೇಟಿವ್ ಸಂಸ್ಥಾನಗಳ ಒಳಗಿರುವ ಪ್ರಜೆಗಳ ನ್ಯೂನತೆಗಳನ್ನು ಹಿಂದೂಯಿಸಿ ಹೊರಪಡಿಸುವದು ಯೋಗ್ಯವಲ್ಲವೆಂಬ ಸಿದ್ಧಾಂತವನ್ನು ಅವಲಂಬಿಸುತ್ತ, ತಾವು ಗುಣದೋಷ ವಿಮರ್ಶಕರಾಗಿದ್ದರೂ ಕೇವಲ ಗುಣವನ್ನು ಮಾತ್ರ ಹೊರಪಡಿಸುತ್ತ ಪ್ರಶಂಸಿಸುತಲಿದ್ದ ಮದರಾಸ್ ಹಿಂದೂ ಪತ್ರಿಕೆಯು ಈಚೆಗೆ ಅವುಗಳ ಯಥಾವಸ್ಥಿತವಾದ ಸ್ಥಿತಿಯಂ ಕುರಿತು ವಿಚಾರ ಮಾಡತೊಡಗಿದಕಾರಣ, ಅನಿರೂಪಕವಾದ ತನ್ನ ಸಿದ್ಧಾಂತವನ್ನು ಬದಲಾಯಿಸಿಕೊಳ್ಳಬೇಕಾಗಿಬಂದದಕ್ಕಾಗಿಯೂ ಬಹಳ ಸಂತೋಷಿಸುತ್ತೇವೆ. ಕಳೆದತಿಂಗಳ ೨೭ನೇ ತಾರೀಖಿನಲ್ಲಿ ನೇಟಿವ್‌ಸಂಸ್ಥಾನಗಳಲ್ಲಿನ ಅಭಿವೃದ್ಧಿ ವಿಷಯವಾಗಿ ಹಿಂದೂ ಪತ್ರಿಕೆಯು ತಿಳಿಸಿದ ಅಂಶವೆಲ್ಲವೂ ಪಸ್ತುಸ್ಥಿತಿಯನ್ನರಿತ ಹಾಗೆ ಸ್ಪಷ್ಟವಾಗಿ ಇರುವದರಿಂದ ಆ ಪತ್ರಿಕೆಯನ್ನು ಓದದವರ ಅರಿತು ಬರುವ ನಿಮಿತ್ತ ಅದನ್ನಿಲ್ಲಿ ಸಂಗ್ರಹವಾಗಿ ತಿಳಿಸುತ್ತೇವೆ:—

ಬ್ರಿಟಿಷ್ ಇಂಡ್ಯಾದೇಶದ ಪ್ರಜೆಗಳು [illegible] ಅಭಿವೃದ್ಧಿಯನ್ನೈದುವರೆ, ವಿದ್ಯಾವಂತರಾಗುವ ಪ್ರಾಯಾರ್ಥರಾಗಿ ರಾಜಕೀಯವಾದ ಅಧಿಕಾರ ಸ್ವಾತಂತ್ರ್ಯಗಳನ್ನು [illegible] ಕ್ಕೆ ವಿಶೇಷ [illegible]ರಾಗುತ್ತಿದ್ದರೂ, ನೇಟಿವ್ ಸಂಸ್ಥಾನಗಳಲ್ಲಿ ಅಂಥಾದ್ದೊಂದೂ ಕಾಣದಿರುವದು ಬಹಳ ವಿಷಾದಕರವಾಗಿರುತ್ತದೆ. ನೇಟಿವ್ ಸಂಸ್ಥಾನಗಳ ಸಾರ್ವಭೌಮ ರಿಪೋರ್ಟುಗಳಲ್ಲಿಯೂ, ಆಗಿಂದಾಗ್ಯೆ ಪ್ರಕಟಿಸಲ್ಪಡುತ್ತಿರುವ ಪೊಲಿಟಿಕಲ್ ಏಜಂಟರುಗಳ ರಿಪೋರ್ಟುಗಳಲ್ಲಿಯೂ ಯಾವಪಾದರೊಂದು ಬಗೆ ಅಭಿವೃದ್ಧಿ ಮಾತ್ರ [illegible]ವುದಿತಿದೆ. ಮತ್ತು ಸದರೀ ಸಂಸ್ಥಾನಗಳ ಮಂತ್ರಿಗಳು ತಮ್ಮ ಉದ್ಯೋಗ ಕಾಲದಲ್ಲಿ ನಡೆಯುತ್ತಿದ್ದ ಅಭಿವೃದ್ಧಿಗೂ ಬದಲಾವಣೆಗಳಿಗೂ ತಾವೇ ಮುಖ್ಯ ಕಾರಣರೆಂದು ಸಂತೋಷ ಪೂರ್ವಕ ಹೇಳಿಕೊಳ್ಳುತ್ತಾರೆ. ಈಗ ಕಟ್ಟಬೇಕಾದ ಸಂಸ್ಥಾನಗಳಲ್ಲಿನ ಪ್ರಜೆಗಳ ಸ್ಥಿತಿಗೂ ಬ್ರಿಟಿಷ್ ರಾಜ್ಯದಲ್ಲಿನ ಪ್ರಜೆಗಳ ಸ್ಥಿತಿಗೂ ಹೋಲಿಸಿದ [illegible]ವರ ಸ್ಥಿತಿ ಶ್ಯಾಗಿದೆಯೆ? ಪ್ರಕೃತ ನೇಟಿವ್ ಸಂಸ್ಥಾನಗಳಲ್ಲಿನ ಪ್ರಜೆಗಳ ಧರ್ಮನೀತಿ ಮುಂತಾದ್ದರ ಅಭಿವೃದ್ಧಿಯು ಬ್ರಿಟಿಷ್‌ರಾಜ್ಯದ ಪ್ರಜೆಗಳ ಅಭಿವೃದ್ಧಿಗೆ ಯಾವಭಾಗದಲ್ಲಿಯೂ ಸ್ವಲ್ಪವಾಗಿಲ್ಲವೆಂಬ ಅಂಶವು ನಿಷ್ಪಕ್ಷಪಾತಿಗಳಾದ ಸತ್ಯ ದರ್ಶಿಗಳನೇಕರಿಂದ ನಿರೂಪಿಸಲ್ಪಟ್ಟಿದೆ. ನೇಟಿವ್ ಸಂಸ್ಥಾನಾಧಿಪತಿಗಳು, ತಮ್ಮ ಅವ್ಯವಸ್ಥಿತವಾದ ನಿರಂಕುಶ ಪ್ರಭುತ್ವದಲ್ಲಿ ಸಹ, ಜನಗಳಿಗೆ ಪ್ರಯೋಜನಕರವಾಗುವಂತೆ ಮಾಡಬೇಕಾದ ಅಂಶಗಳು ಮೇಲೆಕಂಡ ಭಾಗದಲ್ಲಿ ಬರೆಯಲಾಗಿರುತ್ತದೆ. ಪರಂತು ಅವರು ಆರೀತಿ ಮಾಡುವದಿಲ್ಲವು. ಸಾಬಕ್ ತಿರುವಾಂಕೂರ್ ಮಹಾರಾಜರವರು ಒಂದು ಕಾಲವಿಶೇಷದಲ್ಲಿ ಪ್ರನೇಗ ದಯಮಾಡಿದಾಗ್ಯೆ ಅಲ್ಲಿನ ಇಂಡಸ್ಟ್ರಿಯಲ್ ಸ್ಕೂಲ್‌ಗಳ ಗಳನ್ನು ನೋಡಿ ಅವುಗಳಲ್ಲಿ ಕೆಲವು ಕುಶಲ ವಿದ್ಯೆಗಳನ್ನು ತಮ್ಮ ಸಂಸ್ಥಾನದಲ್ಲಿಯೂ ನೆಲೆಗೊಳಿಸಿ ಪ್ರೋತ್ಸಾಹಪಡಿಸಬೇಕೆಂದು ಹೇಳಿದ್ದ ಮಾತು ಎಲ್ಲರಿಗೂ ಕೇವಲ ಪ್ರಶಂಸನೀಯವಾದ ಆಶ್ಚರ್ಯವನ್ನುಂಟುಮಾಡಿದರು. ಪರಂತು ಅವರು ಆರೀತಿ ಒಂದನ್ನೂ ಮಾಡಲಿಲ್ಲವೆಂಬದೂ, ಜನಗಳ ಯೋಗಕ್ಷೇಮವಿಷಯದಲ್ಲಿ ಸಹ ಅವರು ಆಲೋಚಿಸಲಿಲ್ಲವೆಂಬದೂ ಪ್ರಸಿದ್ಧವಾಗಿಯೇಯಿದೆ. ನಾವು ತಿರುವಾಂಕೂರುಸಂಸ್ಥಾನವನ್ನೇ ಪ್ರಾಧಾನ್ಯೇನ ಉದಾಹರಿಸಲಿಕ್ಕೆ ಕಾರಣವೇನೆಂದರೆ—ಇದು, ಇಂಡ್ಯದೇಶದೊಳಗೆಲ್ಲ ಉತ್ತಮಪ್ರಕಾರವಾಗಿ ಏರ್ಪಟ್ಟಿರುವಂತೆ ತಿಳಿಯಲ್ಪಟ್ಟಿದೆಯಲ್ಲದೆ, ನಾಗರಿಕಪ್ರಭುತ್ವದಿಂದ, ಪ್ರಜೆಗಳ ಕ್ಷೇಮಾಭಿವೃದ್ಧಿವಿಷಯದಲ್ಲಿ ಬ್ರಿಟಿಷ್ ರಾಜ್ಯಗಳಿಗೆ ಸನ್ನಿಹಿತ ಸಂಬಂಧವುಳ್ಳದ್ದಾಗಿದೆಯೆಂದು ಹೇಳುವದರಿಂದ ಅದರ ಪ್ರಸ್ತಾವವಿಲ್ಲಿ ಮುಖ್ಯವಾಗಿ ಬೇಕಾಯಿತು. ಯೂರೋಪದೇಶದ ವಿದ್ಯಾಭಿಮಾನಿಯಾದ ಮತ್ತು ನೇಟಿವ್‌ಗಳ ಕುಶಲವಿದ್ಯಾಭಿವೃದ್ಧಿಯ ವಿಷಯದಲ್ಲಿ ಬಲವತ್ತರವಾದ ಅಭಿಲಾಷೆಯುಳ್ಳವರೆಂದು ಬಹಿರಂಗವಾಗಿ ತೋರ್ಪಡಿಸುತಲಿದ್ದ ಪಾಲಕರಿಂದ ಸದರೀ ಸಂಸ್ಥಾನವು ಗತ ಐದುಸಂವತ್ಸರಗಳಕಾಲವಾಗಿ ಪಾಲಿಸಲ್ಪಡುತಲಿತ್ತು. ಇತರ ಕೆಲವು ಸಂಸ್ಥಾನಗಳು ಸಹ ಸಮಾನಾನುಕೂಲ್ಯವುಳ್ಳದ್ದಾಗಿವೆ. ಹೀಗಿದ್ದಾಗ್ಯೂ ತಿರುವಾಂಕೂರಿನಲ್ಲಾಗಲಿ ಅನ್ಯತ್ರವಾಗಲಿ ಇಂತಾ ಮುಖ್ಯಭಾಗದಲ್ಲಿ ಯಾವಪ್ರಯತ್ನವೂ ಮಾಡಲ್ಪಟ್ಟಂತೆ ಯಾವಚಿಹ್ನೆಯೂ ಕಂಡುಬರುವದಿಲ್ಲವು. ನೇಟಿವ್ ಸಂಸ್ಥಾನಾಧಿಪತಿಗಳಿಗೆ ವಿದ್ಯಾ ವಿವೇಕವಂ ಕಲ್ಪಿಸಿ ಅವರು ಪ್ರಾಮಾಣಿಕರಾದ ಪಾಲಕರನ್ನಾಗಿ ಮಾಡುವಬಗ್ಯೆ ಸಕಲವಿಧ ಪ್ರಯತ್ನಗಳೂ ಮಾಡಲ್ಪಡುತಲಿದ್ದಾಗ್ಯೂ ಈಗಿನಕಾಲದ ಅರಸುಗಳು ಪ್ರಜೆಗಳು ನಿರೀಕ್ಷಿಸುತಲಿರುವ ಕೋರಿಕೆಗಳ ಸ್ವಲ್ಪವೂ ಈಡೇರಿಸುತಲಿಲ್ಲವು. ಅನೇಕ ವಿಷಯಗಳಲ್ಲಿ ಇವರು ತಮ್ಮ ಪೂರ್ವಿಕರಿಗಿಂತಲೂ ವ್ಯರ್ಥರಾಗಿರುತ್ತಾರೆ. ಇವರು ಪೂರ್ವದ ಪ್ರಭುಗಳ [illegible] ವಿದ್ಯಾಜಡತೆಯನ್ನೂ ನಿಶ್ಚಿಂತ ಪ್ರವೃತ್ತಿಯನ್ನೂ ಉಳಿಸಿಕೊಂಡಿದ್ದಾಗ್ಯೂ ಸ್ವಪ್ರಜೆಗಳು [illegible] ನ್ನೂ, ತಮ್ಮ ದೇಶದ ಪೂರ್ವಸಂಪ್ರದಾಯಗಳ ಮೇಲಣ ಭಕ್ತಿ ಗೌರವಗಳನ್ನೂ [illegible] ಇವರು [illegible] [illegible] ಯುಳ್ಳ [illegible] ಅನರ್ಹರಾಗಿರುತ್ತಾರೆ. [illegible] ರಿಗೆ [illegible]

ಕ್ರಮದ ಗಂಧವು ನಿರ್ಮೂಲವಾಯಿತಲ್ಲದೆ, ತಮ್ಮ ಪೂರ್ವಿಕರ ಮಾರ್ಗವನ್ನಾತ್ಯಂತಿಕವಾಗಿ ತೊರೆದುಬಿಟ್ಟರು. ಇವರು ಪಾಶ್ಚಿಮಾತ್ಯರ ರಾಜ್ಯತಂತ್ರ ಕ್ರಮವನ್ನು ಪುರಸ್ಕರಿಸುತಲಿದ್ದರು. ಅವು ತಮ್ಮ ದೇಶದಲ್ಲಿ ಉಪಯೋಗಿಸುವ ಬಗೆಯಂ ಕಲಿಯದೆ ಹೋದರು. ಪ್ರಜೆಗಳ ಕ್ಷೇಮಾಭಿವೃದ್ಧಿಯಂಕುರಿತು ಚಿಂತಿಸುವಾಗ್ಯೆ ಅನೇಕ ನೇಟಿವ ಸಂಸ್ಥಾನಾಧಿಪತಿಗಳೂ ಅವರ ದಿವಾನರವರು ಸಹ, ಯೂರೋಪದೇಶೀಯವಾದ ಯಂತ್ರಗಳಮೂಲಕ ತಯಾರಾಗತಕ್ಕ ಪದಾರ್ಥಗಳ ಪ್ರಾಬಲ್ಯದಿಂದ ನೇಟಿವ್‌ಗಳ ಕಸಬದಾರೀ ಕೆಲಸಗಳೆಲ್ಲ ನಾಶವನ್ನೈದಿರುವದನ್ನೂ, ತನ್ಮೂಲಕ ಪ್ರಜೆಗಳು ಕೇವಲ ರಿಕ್ತಸ್ಥಿತಿಗೆ ಬಂದಿರುವವನ್ನೂ ಚನ್ನಾಗಿ ಆಲೋಚಿಸಬೇಕಾಗಿರುತಿದೆ. ಒಳ್ಳೆಯದು, ಈ ಸಂಸ್ಥಾನಾಧಿಪತಿಗಳ್ಯಾರಾಗಲಿ, ಇದುವರಿವಿಗೆ ಸದರೀ ಕುಶಲವಿದ್ಯೆಗಳು ಉಜ್ಜೀವಿಸುವಬಗ್ಯಾಗಲಿ, ಅಥವಾ ಪ್ರಜೆಗಳ ಸದ್ಯಃಸ್ಥಿತಿಗಳಿಗೂ, ಅಪೇಕ್ಷೆಗಳಿಗೂ ಅನುಗುಣವಾದ ನೂತನ ವಿದ್ಯೆಗಳನ್ನ ಜಾರಿಯೊಳು ತರುವವರೊಳಾಗಲಿ ಯಾವ ಏರ್ಪಾಟನ್ನಾದರೂ ಮಾಡಿದಾರೆಯೆ? ಕುಶಲವಿದ್ಯಾ ಸಂಗ್ರಹಾರ್ಥ ಯೂರೋಪಿಯನ್ ದೇಶಗಳಿಗೆ ಹೋಗತಕ್ಕ [illegible]ಗಳಿಗೆ ಅನುಕೂಲ್ಯ ಕಲ್ಪನಕ್ಕಾಗಿ ವಿದ್ಯಾರ್ಥಿ ವೇತನಗಳನ್ನು ಒಂದೆರಡು ಸಂಸ್ಥಾನಾಧಿಪತಿಗಳು ಕಲ್ಪಿಸಿರುವಂತೆ ಈಚೆಗೆ ತಿಳಿಯಲಾದೆವು. ವಿದ್ಯಾರ್ಥಿ ವೇತನವು ಕಲ್ಪಿಸೋಣವು ಸ್ವರೂಪತಃ ಪ್ರಶಂಸಿಸತಕ್ಕದ್ದಾದರೂ ಪ್ರಕೃತ ಉದ್ದೇಶದ ಆವಶ್ಯಕತೆಯನ್ನೂ, ಅದಕ್ಕಾಗಿ ಈಸಂಸ್ಥಾನಗಳ ಹುಟ್ಟುವಳಿಯ ಮೂಲಕ ಮಾಡಬಹುದಾದ ಕೆಲಸಗಳನ್ನೂ ಆಲೋಚಿಸಿನೋಡಲಾಗಿ ಕೇವಲ ವಿದ್ಯಾರ್ಥಿವೇತನವನ್ನೇರ್ಪಡಿಸುವಣವು ಅಲ್ಪವಾದ್ದಾಗಿರುತಿದೆ. ನಮ್ಮ ನೇಟಿವ್ ಸಂಸ್ಥಾನಗಳಪೈಕಿ ಬಹಳ ದೊಡ್ಡದಾಗಿರುವವು, ಯೂರೋಪಖಂಡದಲ್ಲಿನ ಕೆಲವು ಅತ್ಯಲ್ಪರಾಜ್ಯಗಳ ಆಯತಿಗೂ, ಪ್ರಜಾಸಂಖ್ಯೆಗೂ ಸಮಾನವಾದದ್ದಾಗಿರುತಿದೆ. ಹೈದರಾಬಾದ್, ಬರೋಡೆ ಮತ್ತು ಮೈಸೂರು ಸಂಸ್ಥಾನದವರು ಆಯಾದೇಶೀಯವಾದ ಕಸಬದಾರೀಕೆಲಸಗಳನ್ನೂ ಇತರ ಕುಶಲವಿದ್ಯೆಗಳನ್ನು ಸಹ ಅಭಿವೃದ್ಧಿ ಗೊಳಿಸುವಬಗ್ಯೆಲಕ್ಷಾಂತರರೂಪಾಯಿಗಳು ವಿನಿಯೋಗಿಸಲಿಕ್ಕೆ ಶಕ್ತರಾಗಿದಾರೆ. ಈ ವಿಷಯದಲ್ಲಿ ಬ್ರಿಟಿಷ್ ಇಂಡ್ಯ ಗವರ್ನಮೆಂಟಿನವರಿಗಿಂತಲೂ ಮೇಲೆಕಂಡ ಸಂಸ್ಥಾನಾಧಿಪತಿಗಳು ಉತ್ತಮಸ್ಥಿತಿಯೊಳಿರುವಂತೆ ಯೋಚಿಸಬೇಕಾಗಿದೆ. ಇಂಡ್ಯ ಸರ್ಕಾರದವರ್ಗೆ ಬಹಳ ಪ್ರಾಬಲ್ಯವನ್ನೈದಿರುವಂತಾ ರಾಜಕೀಯಕಾರ್ಯಾಭಿನಿವೇಶಗಳಿಂದಲೂ, ಸ್ವಾರ್ಥಪರವಾದ ಅವರ ಪಾಲನೆಯಲ್ಲಿ ಅಗಾಗ್ಯೆ ಏರ್ಪಡುವಂತಾ ಆವಶ್ಯಕಾಂತಗಳಿಂದಲೂ ಸದರೀ ನೇಟಿವ್ ಸಂಸ್ಥಾನಾಧಿಪತಿಗಳೇನೂ ನಿರೋಧಿಸಲ್ಪಡಲಿಲ್ಲವು. ಅವರು ಒಲಿಸಬೇಕಾದ ರಾಜಕೀಯ ಪ್ರಮುಖವಾದ ಕಕ್ಷಿಗಳಾಗಲಿ, ಅವರಂ ಚುನಾಯಿಸತಕ್ಕವರಾಗಲಿ ಅವರು ಸಂತೋಷಪಡಿಸಬೇಕಾದ ವ್ಯಾಪಾರ ಸಂಘದವರಾಗಲಿ ಒಬ್ಬರೂ ಯಿರುವದಿಲ್ಲವು. ಕದಾಚಿತ್ ಅರ್ಥಶಾಸ್ತ್ರ ನಿಯಮಗಳನ್ನು ಪಯೋಗಿಸುವವರಲ್ಲಿ ಆಯಾಪ್ರದೇಶಗಳ ಸ್ಥಿತ್ಯನುಗುಣವಾಗಿ ಆಗಿಂದಾಗ್ಯೆ ಅನೇಕಾಂತಗಳು ಅವ್ಯಭಿನ್ನಿಸಬಹುದಾದ್ದರಿಂದ ಹಾಗೂ ತನ್ನಿಯಮಗಳಿಗೆ ಅವರು ಬದ್ಧರಾಗಬೇಕಾದುದಿಲ್ಲವು. ಕುಶಲ ವಿದ್ಯೆಗಳನ್ನು ಕಲಿಸತಕ್ಕ ಪಾಠಶಾಲೆಗಳನ್ನು ಸ್ಥಾಪಿಸಿ,, ಕಸಬದಾರೀ ಪದಾರ್ಥಗಳ ಕೋಠಿಗಳನ್ನಿಟ್ಟು, ಪ್ರಜೆಗಳ ಏಕದೇಶಿಕವಾದ ಪೃಥಕ್ಪ್ರಯತ್ನಗಳನ್ನು ಅವರು ತಗ್ಗಿಸಿಬಿಡಬಹುದು. ಫ್ರೆಂಚ್ ಸರ್ಕಾರದವರು ಅಲ್ಲಿನ ಸಕ್ಕರೇ ತಯಾರೀಗೆ ತಕ್ಕ ಔದಾರ್ಯವನ್ನೂ ಪ್ರೋತ್ಸಾಹವನ್ನೂ ವ್ಯಕ್ತಪಡಿಸದೆ ಹೋಗಿದ್ದರೆ ಆವ್ಯಾಪಾರವು ಈಗಿನಷ್ಟು ಅಭಿವೃದ್ಧಿಸ್ಥಿತಿಗೆ ಬರುತಿರಲಿಲ್ಲವು. ಬಹುಸ್ಥರ್ ಯೂರೋಪ್‌ಖಂಡದಲ್ಲಿರುವ ಜರ್ಮನೀ ಮುಂತಾದ ಇತರ ಸಂಸ್ಥಾನದವರೆಲ್ಲರೂ ಸ್ವದೇಶೀಯರ ಕೌಶಲ್ಯಕ್ಕೆ ಪ್ರೋತ್ಸಾಹವನ್ನುಂಟುಮಾಡುತಲಿದಾರೆ. ಈಗ್ಯೆ ಒಂದು ಶತಮಾನದ ಹಿಂದೆ ಇಂಗ್ಲಿಷಿನವರೇ ಈ ವಿಷಯದಲ್ಲಿ ಸ್ವತಃ ಏನುಮಾಡುತಲಿದ್ದರು? ಇಂಡ್ಯಾದೇಶದಿಂದ ರಫ್ತಾಗುತಲಿದ್ದ ಸರುಕುಗಳ ಪ್ರಾಬಲ್ಯದಿಂ ಬಹಳಮಟ್ಟಿಗೆ ಕಡಮೆಯಾಗಲಿಕ್ಕೆ ಉಪಕ್ರಮವಾದ ಅಲ್ಲಿನ ಸ್ವಂತ ವ್ಯಾಪಾರವನ್ನು ಕಾಪಾಡಿಕೊಳ್ಳತಕ್ಕಬಗ್ಯೆ ಕಾನೂನು ಏರ್ಪಾಡಿನಿಂದ ಇಂಡ್ಯಾದೇಶದ ಪದಾರ್ಥಗಳಆಮದನ್ನು ಶುದ್ಧಾಂಗವಾಗಿ ಅಡ್ಡಿಪಡಿಸಲಿಲ್ಲವೆ? ಈಗಿನ ಕಾಲದಲ್ಲಿ ಇಂಗ್ಲಿಷಿನವರು ವ್ಯಾಪಾರ ಸಂರಕ್ಷಕ ಮಾರ್ಗಗಳನ್ನು ಅಂಗೀಕರಿಸಲಿಕ್ಕೆ ಅವರಿಗೆ ಆವಶ್ಯಕವಿಲ್ಲವು, ಯಾತಕ್ಕೆಂದರೆ, ಅವರ ವ್ಯಾಪಾರಗಳು ಈಗ ಅಂತಾ ಕ್ರಮವನ್ನಪೇಕ್ಷಿಸುವ ಸ್ಥಿತಿಯೊಳಿಲ್ಲವು. ಇಂಗ್ಲಾಂಡಿಗಿಂತಲೂ ಇತರ ಪಾಶ್ಚ ಯೂರೋಪಿಯನ್ ದೇಶಗಳಂತೆ, ಇಂಡ್ಯದೇಶಕ್ಕೆ ಸಹ ವ್ಯಾಪೃತಮಾರ್ಗವತ್ಯಂತಾಪೇಕ್ಷಿತವಾಗಿದೆ. ನೇಟಿವ್ ಸಂಸ್ಥಾನಾಧಿಪತಿಗಳು ಸಾಕ್ಷಾತ್ತಾಗಿ ನೇಟಿವ್‌ಗಳ ಕುಶಲವಿದ್ಯಾ ಪ್ರೋತ್ಸಾಹಕ್ಕೆ ಎತ್ನಿಸುವರಾದರೆ ಅವರು ಸ್ವಾಭಿಮಾನದೊಡನೆ ರಾಜ್ಯತಂತ್ರಜ್ಞರೋಪಾದಿ ನಡೆಯುವಂತೆಯಾಗುವದು. ಪ್ರಜೆಗಳ ತಾತ್ವಿಕವಾದ ಯೋಗಕ್ಷೇಮಾಭಿವೃದ್ಧಿಯ ವಿಷಯದಲ್ಲಿ ನೇಟಿವ್ ಸಂಸ್ಥಾನಾಧಿಪತಿಗಳು, ಬಹಳ ನಿಂದ್ಯವಾದ ಔದಾಸೀನ್ಯವನ್ನು ತೋರಿಸುತಲಿದಾರೆ. ಪಾಶ್ಚಿಮಾತ್ಯರ ನಾಗರಿಕತೆಯಂ ಪ್ರಾಶನಮಾಡಿದ ನೇಟಿವ್ ಅರಸರು ಅನೇಕ ವಿಷಯಗಳಲ್ಲಿ ದುರ್ನೀತರಾಗಿ ಹೋಗಿದಾರೆಂದು ಹಿಂದೆಯೇ ತಿಳಿಸಿರುತ್ತೇವೆ. ಅವರೆಷ್ಟು ವಿದ್ಯಾವಂತರಾಗಿದ್ದರೂ, ಉಚ್ಛೃಂಖಲಪ್ರವೃತ್ತಿ ಅವರು ಬಿಟ್ಟದ್ದಲ್ಲವು. ಪರಂತು ಅವರ ಪೂರ್ವಿಕರಂತಲ್ಲದೆ, ಅವರ ನಿರಂಕುಶ ಪ್ರವೃತ್ತಿಯು, ಪ್ರಜೆಗಳ ಯೋಗಕ್ಷೇಮಗಳ ಮೇಲಣಪೃಷ್ಟಿಯಿಂದಲೂ, ತಮ್ಮ ಮರಣಾನಂತರ ಈಶ್ವರನಿಗೆಪ್ರತ್ಯುತ್ತರ ಹೇಳಬೇಕಾಗುವದಲ್ಲಾ ಎಂಬ ಭಾವನೆಯಿಂದಲೂ, ಶಾಂತವನ್ನೈದತಕ್ಕದ್ದಾಗಿಲ್ಲವು. ಈಗಿನ ಹದಿನೆಂಟನೇಶತಮಾನದಲ್ಲಿರುವಹಿಂದೂ ಅರಸರಿಗೆ, ಸರ್ಕಾರದ ಕಾರ್ಬಾರೀ ಕೆಲಸಗಳಿಗೂ ನ್ಯಾಯವಿಧಾಯಕ ಕೆಲಸಗಳಿಗೂ ಇರುವ ಪರಸ್ಪರ ತಾರತಮ್ಯಜ್ಞಾನವು ಲೇಶವೂ ಇರುವದಿಲ್ಲ. ಯದ್ಯಪಿ ಅವು ಆಚರಣೆಯೊಳು ಪ್ಯಾಗೆ ತುದಾಗ್ಯೂ ಅದಕ್ಕಾಗಿ ಅವರು ಚಿಂತಿಸತಕ್ಕವರಾಗಿಲ್ಲವು. ಆದಾಗ್ಯೂ ನ್ಯಾಯವಿಷಯದಲ್ಲಿ ಪ್ರಜಾಭಿಪ್ರಾಯದೊಳಿರುವ ಗೌರವವು ಅವರು ಚನ್ನಾಗಿ ತಿಳಿದಿರುತ್ತಾರೆ. ಈಸಂಸ್ಥಾನಾಧಿಪತಿಗಳು ದರ್ಬಾರಿನಲ್ಲಿ ತಮ್ಮ ಪ್ರಮುಖರಿಗೆಲ್ಲ ಸ್ವಾಭಿಪ್ರಾಯಗಳನ್ನು ದಾರಾಳವಾಗಿಯೂ, ಅಕುಟಿಲವಾಗಿಯೂ ತಿಳಿಸಲಿಕ್ಕೆ ಬೇಕಾದ ಅವಕಾಶವಂ ಕಲ್ಪಿಸಿರುತ್ತಾರೆ. ಪರಂತು ಅವರ ಅಭಿಪ್ರಾಯಗಳಿಂದ ಸದರೀ ಪಾಲಕರು ಯೆಷ್ಟುಮಾತ್ರವೂ ಬದ್ಧರಾಗುವದಿಲ್ಲವು. ಕದಾಚಿತ್ ಸದರೀ ಅಭಿಪ್ರಾಯಗಳು ಕೇಳಲ್ಪಟ್ಟಲ್ಲಿ ಅವು, ಸಂಸ್ಥಾನದ ನ್ಯಾಯ ನಿರ್ಮಾಣದೊಳು ವ್ಯಾಪಕವಾದದ್ದಾಗಿರುವದು. ಮಹಾರಾಷ್ಟ್ರರ ಆಧಿಪತ್ಯಕ್ಕೆ ಪ್ರಥಮ ಪ್ರವರ್ತಕರಾಗಿದ್ದವರು ಮಹಾರಾಷ್ಟ್ರ ಸಂಸ್ಥಾನಗಳಿಗಾಗಿ ಲಿಖಿತಮೂಲಕವಾದಕೆಲವುವ್ಯವಸ್ಥೆಗಳನ್ನುಮಾಡಿಟ್ಟುಗತಿಸಿದರಾಗಿ ಅದರಂತೆಸರಿಯಾಗಿ ಅನುಸರಿಸಲ್ಪಟ್ಟ ಪಕ್ಷಕ್ಕೆ ನಾಮತಃ ಮತ್ತು ಸ್ವರೂಪತಃ "ಮಾದಲ್‌ಸ್ಟೇಟ್ಸ್" ಅಂದರೆ ಅಸಾಧಾರಣೋಪಮಾನವುಳ್ಳ ಸಂಸ್ಥಾನಗಳಾಗಿ ಯೆಲ್ಲವೂ ಏರ್ಪಡುವವು.

ರಾಜನೀತಿ ಮತ್ತು ವೇದಾಂತಶಾಸ್ತ್ರ ಮಿಶ್ರವಾದ ಪುರಾತನ ಹಿಂದೂ ರಾಜ್ಯತಂತ್ರ ಕ್ರಮವನ್ನನುಸರಿಸಿ ಅಷ್ಟಪ್ರಧಾನಿಗಳ ಸಹಾಯದೊಡನೆ ಪ್ರಭುತ್ವವು ಮಾಡತಕ್ಕದ್ದೆಂದು ಅರಸನು ವಿಧಿಸಲ್ಪಟ್ಟಿರುತ್ತಾನೆ. ಇಂಡ್ಯಾದೇಶದ ಈಗಿನ ಅರಸರುಗಳು ಅನೇಕ ವಿಷಯಗಳಲ್ಲಿ ನಿಷ್ಪ್ರಯೋಜಕರಾಗಿಯೂ ದುರ್ಬಲರಾಗಿಯೂ ಇರುವಂತೆ, ಪೂರ್ವ ಸಂಪ್ರದಾಯದೊಳು ಬದ್ಧದ್ವೇಷವುಳ್ಳವರಾಗಿದಾರೆ. ಅರಸರು ಈಶ್ವರಾಂಶಸಂಭೂತರೆಂದು ತಿಳಿದಿರುವ ಪ್ರಜೆಗಳ ಭ್ರಾಂತಿಯನ್ನುಮಾತ್ರ ಅವರು ಅನುಮೋದಿಸುವರಲ್ಲದೆ ತಮ್ಮಪ್ರಜೆಗಳ ಹಕ್ಕುದಾರೀಗಳನ್ನೂ ಸ್ವಾತಂತ್ರ್ಯಗಳನ್ನೂ ಅವರು ನೋಡಿ ಸಹಿಸಲಾರರು. ಪ್ರಜೆಗಳುಪಾರ್ಜಿತವಾದ ದ್ರವ್ಯವುಯದಿಂದ ಸ್ವಪ್ರಯೋಜನ್ಯಕ ನಿಮಿತ್ತಕವಾದ ಪಾಲನಾಕ್ರಮವನ್ನು ಅವರು ವಿಶೇಷತಃ ಅಭಿಮಾನಿಸುವರು. ನೇಟಿವ್ ಸಂಸ್ಥಾನಗಳಲ್ಲಿ ಪ್ರಜಾಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಪ್ರೆಸ್ (ಅಂದರೆ ವೃತ್ತಾಂತ ಪತ್ರಿಕಾ) ಸ್ವಾತಂತ್ರ್ಯ ಎಂಬವು ಅದ್ಯಾಪಿ ನೂತನಗಳಾಗಿರುತಿವೆ. ಮ್ಯುನಿಸಿಪಲ್ ಇಲಾಖೆಗಳು ವಿರಳವಾಗಿರುತಿವೆ. ಮತ್ತು ಅವು ಸ್ವತಂತ್ರಾಧಿಕಾರವನ್ನು ಚಲಾಯಿಸುವದಿಲ್ಲವು. ಆಕ್ಷಕೆಯು ವಿಷಯದೊಳು ನಿಶ್ಚಯವಿಂ ದಾರಾಳವಾಗಿ ಮಾಡಲ್ಪಡುವ ಆಕ್ಷೇಪಣೆಗಳೆಲ್ಲವು ಪಾಲಕರ ವಿಶೇಷಾಪಕಾರಕ್ಕೆ ಅಗೌರವ ಪಡಿಸಿದಂತೆ ಭಾವಿಸಲ್ಪಡುತಿವೆ. ಒಂದೆರಡು ಸಂಸ್ಥಾನಗಳಲ್ಲಿ ಅರಸರ ಸಹಾಯಾರ್ಥ ಮಂತ್ರಾಲೋಚಕ ಸಭೆ ಯೇರ್ಪಡಿಸಲ್ಪಟ್ಟಿರುತದೆ. ಈ ಸಭೆಯು ಬರೋಡೆಯಲ್ಲಿಯೂ ಮೈಸೂರಲ್ಲಿಯೂ ನೆಲೆಗೊಳಿಸಲ್ಪಟ್ಟಿರುತಿದೆ. ಮೊದಲನೆಯ ಸಂಸ್ಥಾನದಲ್ಲಿ ಸದರೀ ಸಭೆಯು ಕ್ರಮವಾಗಿ ಇದ್ದವರಿವಿಗೇನೇ ಮೌಕೂಫಾಯಿತೆಂದು ನಂಬುತ್ತೇವೆ. ಎರಡನೆಯದರೊಳು ನಾಮಮಾತ್ರಾವಶಿಷ್ಟವಾಗಿದೆ. ಕೌನ್ಸಿಲ್‌ಗಳು ಏರ್ಪಾಟಾದ ಕಾಲದಲ್ಲಿ ಬಹಳ ಗದ್ದಲ ವುಂಟಾಯಿತು. ವ್ಯವಸ್ಥಿತರಾಜ್ಯತಂತ್ರಕ್ರಮದಲ್ಲಿ ಇದೊಂದು ನಿರ್ಬಂಧರೂಪವಾಗಿರುವದೆಂತಲೂ ಇತರ ನೇಟಿವ್ ಸಂಸ್ಥಾನಗಳಿಗೆ ಸಮಗ್ರವಾದ ದೃಷ್ಟಾಂತರೂಪವಾಗಿರುವದೆಂತಲೂ ಭಾವಿಸಲ್ಪಟ್ಟವು. ಈ ಕೌನ್ಸಿಲ್‌ಗಳು ಬಲವತ್ತರವಾದ ಯಾವ ಉದ್ದೇಶದೊಡನೆ ಪ್ರಥಮತಃ ಸ್ಥಾಪಿಸಲ್ಪಟ್ಟವೋ ಅಂತಾ ತಾತ್ಪರ್ಯದೊಡನೆ ಅವು ಉಳಿಸಿಕೊಂಡು ತನ್ಮೂಲಕ ಕೆಲಸನಡೆಸುತಬಂದರೆ, ಉದ್ದಿಷ್ಟಾಂಶಗಳು ಸಾಫಲ್ಯವನ್ನೈದುವವೆಂಬದರೊಳಿಷ್ಟುಮಾತ್ರವೂ ಸಂದೇಹವಿಲ್ಲವು. ಈಗ ಕೇವಲ ಉದಾಸೀನಸ್ಥಿತಿಯೊಳಿಡಲ್ಪಟ್ಟಿರುವ ಪ್ರಸಕ್ತ ಕೌನ್ಸಿಲ್‌ಗಳು ಇತರ ನೇಟಿವ್ ಸಂಸ್ಥಾನಗಳಲ್ಲಿ ಏತತ್ಸಮಾನವಾದ ಕೌನ್ಸಿಲ್‌ಗಳಏರ್ಪಾಡಿಗೆ ಅಲ್ಲಿನವರು ಪ್ರೇರಿಸುವ ಸ್ಥಿತಿಯಲ್ಲಿವೆಯೆಂದು ಸ್ವಲ್ಪವೂ ಯೋಚಿಸಲಾರೆವು. ಹೈದರಾಬಾದ್ ನಿಜಾಮರವರು ಈಚೆಗೆ ತಮ್ಮ ಸಹಾಯಾರ್ಥ ನ್ಯಾಯ ವಿಧಾಯಕ ಸಭೆಯೊಂದು ಏರ್ಪಾಡು ಮಾಡಿದರೆಂದು ಕೇಳುತ್ತೇವೆ. ಈ ವಿಷಯವು ಸಾಮಾನ್ಯಾ ಕಾರೇಣ ಪ್ರಜೆಗಳ ಕಿವಿಗಳಿಗೆ ಶ್ರಾವ್ಯವಾಗಿದ್ದರೂ ಇಂತಾಯೇರ್ಪಾಡಂ ಮಾಡಲಿಕ್ಕೆ ಪ್ರೇರಕವಾದ ನಿಜಾಮರ ಅಭಿಪ್ರಾಯ ವಿಷಯದೊಳುಮಾತ್ರ ಜನಗಳಿಗೆ ಸ್ವಲ್ಪವೂ ನಂಬಿಕೆ ಇಲ್ಲವು. ನೇಟಿವ್ ಸಂಸ್ಥಾನಗಳಲ್ಲಿ ನೂತನಏರ್ಪಾಡುಗಳನ್ನು ಮಾಡುವದಕ್ಕೆ ಪ್ರತಿಬಂಧಕಗಳಾದ ಸಂಕಟಗಳನೇಕ ವುಂಟೆಂಬದನ್ನು ನಾವು ಮರೆತವರಲ್ಲವು.

ಬ್ರಿಟಿಷರಾಜ್ಯಗಳಿಗಿಂತಲೂ ನೇಟಿವ್ ಸಂಸ್ಥಾನಗಳಿಗೆ ಒಂದು ವಿಶೇಷ ಆನುಕೂಲ್ಯವುಂಟೇನೆಂದರೆ, ಸದರೀ ಸಂಸ್ಥಾನಾಧಿಪತಿಗಳು ತಮ್ಮ ನಿರಂಕುಶಾಧಿಕಾರವನ್ನು ಅವಿರೋಧಿಯಾಗಿ ಚಲಾಯಿಸುತಲೂ, ಸಂಸ್ಥಾನದ ಹುಟ್ಟುವಳಿಯನ್ನೆಲ್ಲ ಸ್ವಾಧೀನದೊಳಿಟ್ಟುಕೊಂಡು ಇಷ್ಟಾನುಸಾರ ವ್ಯಯಮಾಡುತಲೂ ಇರುವದರಿಂದ ಬ್ರಿಟಿಷ್ ಇಂಡ್ಯ ಸರ್ಕಾರದವರಿಗೆ ಸಾಧ್ಯವಲ್ಲದಂತಾ ನಾನಾವಿಧ ಏರ್ಪಾಡುಗಳನ್ನು ವಿಶೇಷ ಕ್ರಮದಿಂದ ಅವರು ಮಾಡಬಹುದು. ಪ್ರಜೆಗಳಿಗೆ ಬಲಾತ್ಕಾರದಿಂ ವಿದ್ಯಾಭ್ಯಾಸ ಮಾಡಿಸುತಲೂ, ಸರ್ಕಾರ ಕೆಲಸಗಳಬಗ್ಯೆ ಅವರು ಸ್ವತಃ ಸಮಾಜ ಸೇರುವದನ್ನು ಪ್ರೋತ್ಸಾಹಗೊಳಿಸುತಲೂ, ಪ್ರತಿನಿಧಿ ಸಮಾಜಗಳನ್ನು ಅಭಿವೃದ್ಧಿ ಗೊಳಿಸುತಲೂ ಬರಬಹುದು. ಅರಸರ ವಿಷಯಕವಾಗಿ ನಾವು ಇದುವರಿವಿಗೆ ತಿಳಿಸಿದ ಅಂಶವೆಲ್ಲವು ಅವರ ಮಂತ್ರಿಗಳ ವಿಷಯದಲ್ಲಿಸಹ ಸಂಪೂರ್ಣವಾಗಿ ಅನ್ವಯಿಸುತಿವೆ. ಅನೇಕ ಕಡೆಗಳಲ್ಲಿ ಈಮಂತ್ರಿಗಳು ವಂಶ ಪಾರಂಪರ್ಯೇಣ ಅಧಿಕಾರವುಳ್ಳವರಾಗಿಯೂ ನಾಗರಿಕತೆ ಇಲ್ಲದವರಾಗಿಯೂ ಅಸಮರ್ಥರಾಗಿಯೂ ಇರುತ್ತಾರೆ. ನಿರಂತರದೊಳು ಸ್ವಪ್ರಭವಾಭಿವೃದ್ಧಿಯಲ್ಲಿ ಆಸಕ್ತರಾಗಿ, ಪ್ರಜೆಗಳ ಅಭಿವೃದ್ಧಿಗೆ ಸಹಾಯಕರಾಗಿರಲಿಕ್ಕೆ ಬದಲು ಕೃತ್ರಿಮಗಳಂ ಮಾಡತಕ್ಕವರಾಗಿದಾರೆ. ಸ್ವತಂತ್ರರಾಗಿಯೂ, ವಿದ್ಯಾವಂತರಾಗಿಯೂ ವಿವೇಕಶಾಲಿಗಳಾಗಿಯೂ ಇರತಕ್ಕವರು ದಿವಾನಗಿರಿಗೆ ಒದಬರುವದು ಬಹಳ ಸಕೃತ್ತಾಗಿರುತಿದೆ. ಏತನ್ಮೂಲಕ ಯೆಷ್ಟುಮಟ್ಟಿಗೆ ತಮ್ಮ ಗೌರವ ಪ್ರಾಶಸ್ತ್ಯಗಳಂ ಕಳೆದುಕೊಳ್ಳಬೇಕಾಗುವದೋ ಆ ಅಂಶವನ್ನು ಅವರು ಚೆನ್ನಾಗಿ ಅರಿತಿರುತ್ತಾರಾದ್ದರಿಂದ ಭಾರೀ "ವೇತನಾಟಕಾರಗಳ ಆಕರ್ಷಣೆಗೆ ಅವರ ಮನ ಒಳಪಡುವದಿಲ್ಲವು. ಕ್ವಚಿತ್ ಮಂತ್ರಿಗಳು ಒಳ್ಳೇ ವಿದ್ಯಾವಂತರಾಗಿಯೂ, ನೀತಿವಂತರಾಗಿಯೂ ಇದ್ದರೂ, ಪ್ರಜೆಗಳ ಸಾಮಾನ್ಯ ವಿದ್ಯಾಭ್ಯಾಸದೊಳು ತಾವು ಅಕ್ಕರೆಯಂ ವಹಿಸಬೇಕಾದ ಕ್ರಮವನ್ನರಿಯಲಾರರು. ಪಾಠಶಾಲೆಗಳು ಕೇವಲ ಅತ್ಯಲ್ಪಸಂಖ್ಯಾಕವಾದವಾಗಿವೆ. ಪರಂತು ಅವುಗಳಲ್ಲಿ ಕಲಿಸಲ್ಪಡುವ ವಿದ್ಯೆಯು ಪ್ರಾಯೇಣ ಶ್ಲಾಘ್ಯವಾದ ರಾಜನೀತಿಗೆ ಸಂಬಂಧಪಟ್ಟದ್ದಾಗಿರುತಿದೆ. ಇದುವರಿವಿಗೂ ನೇಟಿವ್‌ಸಂಸ್ಥಾನಗಳಲ್ಲಿ ನೂತನ ಯೇರ್ಪಾಡುಗಳ ಬಗ್ಯೆ ಮಾಡಲ್ಪಟ್ಟವೆಲ್ಲವೂ ಪ್ರಾಯಶಃ ಬ್ರಿಟಿಷ್ ಇಂಡ್ಯದೇಶದ ಆಳ್ವಿಕೆಯಕ್ರಮವನ್ನು ಆಲೋಚಿಸದೆ ಕೇವಲ ದಾಸತ್ವದೊಡನೆ ಅನುಕರಿಸಲ್ಪಟ್ಟದ್ದಾಗಿರುತಿದೆ. ವರ್ತಮಾನಕಾಲದ ರಾಜ್ಯತಂತ್ರಜ್ಞರೆನ್ನಿಸಿಕೊಂಡಿರುವವರೆಲ್ಲರೂ ಸಾಕಾದ ಪ್ರತಿ ಕಲ್ಪನಾಶಕ್ತಿಯುಳ್ಳವರಾಗಿದಾರೆ. ಪರಂತು ಅವರಿಗೆ ಭಾವ್ಯವಾದ ನವೀನ ಕಲ್ಪನಾಶಕ್ತಿಯು ಕೇವಲ ಅಪೇಕ್ಷಿತವಾದದ್ದಾಗಿರುತಿದೆ," ಎಂಬದು.

ಹಿಂದೂ ಪತ್ರಿಕೆಯು ತಿಳಿಸಿದ ಯಾವದಂಶವೂ ಅನೇಕ ಪ್ರಕರಣಗಳಲ್ಲಿ ನಮ್ಮಿಂದ ವಿತತಿ ವಿಶೇಷವಾಗಿ ನಾನಾವಿಧ ನಿದರ್ಶನಗಳೊಡನೆ ನಿರೂಪಿಸಿ ತಿಳಿಸಲ್ಪಟ್ಟವಾಗಿರುತಿವೆ. ಪರಂತು ಅವೆಲ್ಲವೂ ಪಕ್ಷಪಾತ ಪ್ರೇರಿತವಾದ ಅಭಿಪ್ರಾಯವೆಂದು ಸದರೀ ಹಿಂದೂ ಪತ್ರಿಕಾ ಲೇಖಕರು ಮೊದಲಾದ ಅನೇಕರು ಭಾವಿಸಿದ್ದರು. ಈಗ ಈ ಪತ್ರಿಕೆಯು ನೂತನವಾಗಿ ಇಂಗ್ಲಿಷ್ ಭಾಷೆಯಲ್ಲಿ ಸದರೀ ಅಂಶವನ್ನೇ ಅನುವಾದ ಮಾಡಿದ್ದರಿಂದ ಅದು ಬಹುಮಂದಿಗೆ ಆಶ್ಚರ್ಯಕರವಾಗಿ ತೋರಬಹುದು. ಮುಖ್ಯವಾಗಿ ಈಗ ಇಂಡ್ಯದೇಶದಲ್ಲಿರುವ ನೇಟಿವ್‌ಸಂಸ್ಥಾನಗಳ ಪಾಲನಾಕ್ರಮವು ಪೂರ್ವ ಸಂಪ್ರದಾಯಗಳನ್ನು ಆತ್ಯಂತಿಕವಾಗಿ ತೊರದವಾಗಿಯೂ, ನೂತನವಾದ ಇಂಗ್ಲಿಷ್ ಕ್ರಮಕ್ಕೆ ಸಂಬಂಧಿಸಿದಂತೆ ನಡಸತಕ್ಕದ್ದಾಗಿಯೂ ಇರುತಿದೆ. ಇದಕ್ಕೆ ಅವುಗಳ ಅರಸರಿಗೆ ಪ್ರಭುವಾಗತಕ್ಕ ಅವರ ಮಂತ್ರಿಗಳ ಪ್ರವೃತ್ತಿಯೂ ನಿಶ್ಶಂಕಲವಿಲಕ್ಷಣಜ್ಞಾನವೂ ಮುಖ್ಯ ಕಾರಣ ವಾಗಿರುತಿದೆ.

THE SEASON AND PROSPECTS

ಈಚೆಗೆ ಕಾಲಸ್ಥಿತಿಯನ್ನು ನೋಡಲಾಗಿ ಸಮಾನಾಂಶದಿಂದಲೂ ಅದು ಸಕಲರಿಗೂ ವಿಪರೀತ ಚಿಂತೆಯನ್ನೇ ಪುಂಟುಮಾಡುತಲಿದೆ. ಕೃಷಿಜೀವಿಗಳು ತಮ್ಮಲ್ಲಿದ್ದ ಅಲ್ಪಸ್ವಲ್ಪ ಬೀಜಗಳನ್ನೆಲ್ಲ ನೆಲದಮೇಲೆ ಚೆಲ್ಲಿಬಿಟ್ಟು ಚಾತಕಗಳಂತೆ ಆಕಾಶವು ನೋಡುತ ಅನವರತ ಊರ್ಧ್ವದೃಷ್ಟಿಯುಳ್ಳವರಾಗಿದಾರೆ. ವರ್ತಕರು, ಅನ್ಯದೇಶದ ಜಿನಿಸಿಗಳಿಗೆ ತಾವು ನಿರೀಕ್ಷಿಸುವಷ್ಟು ಗಿರಾಕಿಗಳು ಇನ್ನೂ ಕುದರಲಿಲ್ಲವೆಂದು ಅಂತಃ ಚಿಂತಿಸುತಲಿದಾರೆ. ಸರ್ಕಾರದವರು ಯಾವಾಗಲೂ ನಿರ್ಭರರಾದದರಿಂದ ಅವರಿಗೆ ಯಾವವಿಧ ಚಿಂತೆಯೂಯಿಲ್ಲವು. ಬ್ರಾಹ್ಮಣರು. ಕೆಲವರು ಈಗ್ಯೆ ಒಂದೆರಡುವಾರಗಳಿಂದ ಅಲ್ಲಿಯಲ್ಲಿ ಮಾಡುತಲಿರುವ ಅನಾವೃಷ್ಟಿ ದೋಷ ಪರಿಹಾರಾರ್ಥವಾದ ಜಪಗಳು ಏತಾವತ್ಪರ್ಯಂತ ಪ್ರಯೋಜನಕರವಲ್ಲದೆ ಯಿರುವದರಿಂದ ತಮಗಾಗಿ

ನಿಷ್ಪ್ರಯೋಜನವಾಗಿರುವ ದ್ರವ್ಯಕ್ಕೆ ಯಲ್ಲಿ ವಾಸ್ತಾ ಉಪಯೋಗವಾಗುವದೋ ಎಂಬ ಚಿಂತೆಯೊಡನೆ ಬಡಮಾಲಿಕೆಗಳನ್ನು ಮತ್ತಷ್ಟು ಪೇಗಡೊಡನೆ ತಿರುಗಿ ಹಾಕುತಲಿದಾರೆ. ಯದ್ಯಪಿ ಸದ್ಯಃ ವ ರ್ಷಚಿಹ್ನೆಯು ಅವ್ಯಕ್ತವಾಗಿದೆ. ಕೆರೆಕುಂಟೆಗ ಳಲ್ಲಿ ಕುದ್ಯಾಂಗ ನೀರುಬತ್ತುತಬಂದು. ಶರೀ ಫಸಲಿನ ಪ್ರತ್ಯಾಶೆಯೇಯಿಲ್ಲವಾದರೂ ಬುಷ್ಕೀ ಫಸಲು ಸಹ ಕೈಬಿಟ್ಟುಬಿಡುವ ಸ್ಥಿತಿಗೆ ಬಂದ ರುತಿದೆ. ವಸನಗಳಿಗೆ ಕೆಲವುಕಡೆ ಮೇವೂ ನೀರೂ, ಅನ್ಯತ್ರ ಆರೋಗ್ಯವೂ ಬಹಳ ಕಷ್ಟಮಯವಾಗಿ ವೆ. ಮುಖ್ಯವಾಗಿ ಯೆತ್ತನೋಡಿದರೂ ಕ್ಷಾಮ ಸೂಚನೆಗಳು ತೋರುಬರುತಿವೆ. ಪ್ರಾತಃಕಾಲ ದಲ್ಲಿ ತುಷಾರವೂ ಮಧ್ಯಾಹ್ನದಲ್ಲಿ ಮೇಘಮೂ ಬರವೂ ರಾತ್ರಿವೇಳೆಯಲ್ಲಿ ನಿರ್ಮಲಾಕಾಶವೂ ದುರ್ಭಿಕ್ಷಲಕ್ಷಣಗಳೆಂದು ಪ್ರಸಿದ್ಧವಾಗಿರುವವರಿಂ ದ ಅವೆಲ್ಲ ಈರಾಜ್ಯಕ್ಕೆ ಈಗ ಕುದುರಿರುತಿವೆ. ಈಗ ಸರ್ವಾಂಶದಿಂಲೂ, ಕಾಲಗತಿಯು ಪ್ರತಿ ಕೂಲವಾಗಿರುವಲ್ಲಿ ಮಾಡುವ ಕೆಲಸಗಳೆಲ್ಲವು ನಿಷ್ಪ್ರಯೋಜನವಾದವು. ಅವ್ಯಕ್ತಹೀನರಾ ದವರು ದುರ್ಭಿಕ್ಷಾಕಾಲದಲ್ಲಿ ಮಹದೈಶ್ವರ್ಯವನ್ನು ಅಪೇಕ್ಷಿಸುವಂತೆಯೂ, ವಂಧ್ಯೆಯು ಪುತ್ರನ ನ್ನಪೇಕ್ಷಿಸುವಂತೆಯೂ ಇದುವರಿವಿಗೆ ಮಾಡ ಲ್ಪಡುತಿರುವ ಅನಾವೃಷ್ಟಿ ಪ್ರಯುಕ್ತವಾ ದ ಜನ ತಪಾದಿಗಳೆಲ್ಲವೂ ವಿಸ್ಮಯರುತಿಯಂ ತಿರ್ಪುದು. ಯಾತಕ್ಕೆಂದರೆ—ಈಗ ಅವರು ನೂತನ ಜನಾಂಗಗಳಿಂದ ಹಿಂದುಳೇಳಿ ಯ ಥೋಚಿತ ಮಳೆ ಬಂದಾಗ್ಯೂ ಅದು ಖುದ್ದನ್ನ ಷ್ಟಿಯಾಗಿ ಅಲ್ಪಸ್ವಲ್ಪ ಸ್ಥಳಗಳಲ್ಲಿ ಬೀಳುವದಾದ ಕಾರಣ ಈಗಿನಸ್ಥಿತಿಗೆ ಅದು ವಿಶೇಷ ಪ್ರಯೋ ಜನಕಾರಿಯಾಗಲಾರದು. ಗತ ಅಕ್ಷಯಸಂವತ್ಸರ ಭಾದ್ರಪದ ಶುದ್ಧ ವಾರ್ಣನಿರಾನ ರಾತ್ರಿ ಚಂ ದ್ರೋಪರಾಗ ಕಾಲದಲ್ಲಿ ಸನತ್ರ್ಯಾದ ಮಹಾ ವೃಷ್ಟಿಯಿಂದ ಮುಪೂರ್ವಕಾಲದಲ್ಲಿ ಕೆರೆ ಕುಂ ಟೆಗಳೆಲ್ಲವುಂಬಿ ಕೋಡಿಗಳು ಕಿತ್ತುಹೋಗಿ ಕ ವೆಗೆ ಪ್ರಳಯರೂಪವಾಗಿ ಪರಿಣಮಿಸಿದ ಅಂಶ ವು ಅನೇಕರ ಜ್ಞಾಪಕದೊಳು ಇಬಮದಷ್ಟೆ ಅಂತಾ ವರ್ಷವು ಈಗ ಬಂದಲ್ಲಿ ಅವರ ಪ್ರಾಣ ವನ್ನು ಯೆಷ್ಟು ವಿದಪಿಂದಲಾದರೂ ಕೊಡಿಸಾವ ಬಹುದು. ಪರಂತು ಸದ್ಯಃ ಅವರ ಪ್ರಯತ್ನವು ನಿಷ್ಫಲವಾಗುವದೆಂದು ಗ್ರಹ ಗತಿಗಳಿಂದಲೂ ಕಾ ಲಗತಿಯ ಅನುಚರದಿಂದಲೂ ಹೇಳಬಹುದಾಗಿದೆ ಇಂತಾ ನಮ್ಮ ಅಭಿಪ್ರಾಯವನ್ನು ದೃಢಪಡಿ ಸುವದಕ್ಕೆ ಸಾಧಕವಾಗುವುಡೆ, ಕಾಲಜ್ಞಾನಾದ ಬ್ರಹ್ಮಶ್ರೀ ಹುಲಿಕಲ್ಲು ಲಕ್ಷ್ಮೀರಮಣಸಿದ್ಧಾಂ ತಿಗಳು ತಿಳಿಸಿರುವ ಅಂಶವನ್ನು ಇದರಡಿ ಪ್ರ ಕಟಿಸುವೆವು —ಕುಜ ಶನಿಗಳ ಏಕರಾಶಿಯೋ ಗವೂ ಕುಜ ಶನಿ ಗುರುಗಳ ತೃತೀಯ ಏಕಾ ದಶ ಯೋಗವೂ ಕುಜ ಗುರುಗಳಿಗೆ ಮಧ್ಯೆ ಬುಧ ಸಂಚಾರವೂ ಯಿರುವದರಿಂದ ಜುಲೈ ೨೦ನೇ ತಾರೀಖ್ ಮೊದಲು ಆಗಸ್ಟ್ ೨೫ನೇ ತಾರೀಖ್ ವರಿವಿಗೆ ಬಹಳ ಕ್ರೂರವಾಗಿರುವ ದೆಂದು ತಿಳಿಸಿ, ತರುವಾಯ ಪ್ರಂಟಾಗತಕ್ಕ ಕೆಲವು ಫಲಗಳನ್ನು ಸೂಚಿಸಿದ್ದನ್ನು ನಾವು ಕಳೆದ ಜುಲೈ ತಿಂಗಳ ೨೦ನೇ ತಾರೀಖಿನವ ತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಆಗ್ಯೆ ಅವರು ತಿಳಿಸಿದ ಯಾತನಾಂಶವೂ ಏತಾವತ್ಪರ್ಯಂತ ತ ಪ್ಪದೆ ನಡೆದು ಬುತ್ತಲಿವೆ ಅಲ್ಲಾಪಿ ಅದೇರೀತಿ ಯೊಳಗೆ ಹಿಂದೆ ತಿಳಿಸಲ್ಪಟ್ಟ ಏತ್ಯಪಂಚಕ ದೋಷವು ಮಾರ್ಚಿ ಮಜಕೂರು ೧೯ನೇ ತಾ ರೀವಾದ ಭಾದ್ರಪದ ಶುದ್ಧ ಸಪ್ತಮಿ ಮಂಗ ಳವಾರದ ತನಕ ಇರುತಿದೆ. ಅದಿನ ಸದರೀ ಪ್ರ ಬಲ ದೋಷವು ಬುಧ ವಕ್ರತ್ಯಾಗವೂ ನಿವೃತ್ತಿ ಯಾಗುವದರಿಂದಲೂ, ಏತನ್ಮಧ್ಯೆ ೧೮ನೇ ತ ರೀಖ್ ಶುಕ್ರವಾರ ರಾತ್ರಿ ಸುಮಾರು ೨ ಘಂ ಗೆ, ಸ್ವಾತೀನಕ್ಷತ್ರ ಯೋಗದಲ್ಲಿಯೂ, ಸೂರ್ಯ ಚಂದ್ರಯೋಗದಲ್ಲಿಯೂ, ಕರ್ಕಾಟಕವಾದ ಅತಿ ಜಲ ಲಗ್ನದಲ್ಲಿಯೂ ಉತ್ತರೆ ಮಳೆ ಪ್ರವೇಶವಾ ಗುವದರಿಂದ ಅದು ಮೊದಲು ಒಳ್ಳೆಯಮಳೆಯಾ ಗುವದು. ಆದರೆ ಕುಜ ಗುರುಗಳ ಮಧ್ಯೆ ಬುಧ ಸಂಚಾರ ದೋಷದಿಂದ ಪೂರ್ಣವೃಷ್ಟಿಗೆ ಸ್ವಲ್ಪ ಭಂಗ ಪ್ರಂಟಾಗಬಹುದು ಪರಂತು ಸರ್ವತ್ರ ಸಮವಾಗಿ ಉತ್ತರೆ ಮಳೆ ಅರ್ಧವೃಷ್ಟಿ ಯಾ ಗುವದರೊಳೆಷ್ಟುಮಾತ್ರವೂ ಸಂದೇಹವಿಲ್ಲವು.

ಶ್ಲೋ|| ಕುಜಶನೀ ಏಕರಾಶಿಸ್ಥೌ ... ಶನಿ ಕಟಕ ಚಿಹ್ನೇ ||
ಸ್ಥಿ ಚಾಗ್ನಿಪೀಡಾ ಮೋಘ ... ||

ಶ್ಲೋ|| ... ||

ಎಂಬದಾಗಿ ಅತಿವೃಷ್ಟಿಯೋಗವೂ ತುಷಾ ರವೃಷ್ಟಿಯೋಗವೂ ಇರುವದರಿಂದ ಸರ್ವತ್ರ ಅರ್ಧ ವೃಷ್ಟಿಪ್ರದವೆಂದು ಹೇಳಬಹುದು ಸೆ ಪ್ಟಂಬರ್ ೧೯ನೇ ತಾರೀಖ್ ಮೊದಲು ಅಕ್ಟೋ ಬರ್ ೮ನೇ ತಾರೀಖ್ ವರಿವಿಗೆ ಸ್ವಾತಿಪ್ರಯಿ ದಲ್ಲಿ ಶುಕ್ರ ಸಂಚಾರ ಉಂಟಾಗುವದರಿಂದಸ್ತ ಚಿತ್ತೆ ಮಳೆಯಾಗಿ ಕೆರೆ ಕುಂಟೆಗಳಿಗೆ ಬೇಕಾದ ನೀರು ಬಂದು ಸುಖ ಪ್ರಂಟಾಗುವದು. ಈಗ ಅಲ್ಲಿಯಲ್ಲಿ ಮಾಡುತಲಿರುವ ಅನಾವೃಷ್ಟಿ ಜಪ ಗಳನ್ನು ತಾವತ್ಪರ್ಯಂತ ನಡೆಸುವರಾದರೆ ಜಪ ಫಲವು ಆಗ್ಯೆ ಪ್ರಂಟಾಗಬಹುದು. ವಿತದರ್ಥ ಅಲ್ಲಿಯಲ್ಲಿ ಮಾಡಲ್ಪಡುವ ಜಪಾದಿಗಳು ಮುಂದಿ ನ ವೃಷ್ಟಿಗೆ ಬಹಳ ಸಹಕಾರಿಯಾಗಿರುವದು ಬರುವ ವಿಷಯ ಸಂವತ್ಸರದಲ್ಲಿ ಈದೇಶದೊಳು ಸೂರ್ಯ ಚಂದ್ರೋಪರಾಗಗಳೆಲ್ಲವು ಅನಂತ ಸ್ಥರಾದಿಪತಿಯಾದ ಚಂದ್ರನಿಗೆ ಸಚಿವನ್ನಾವು ಪ್ರಂಟಾಗುವದರಿಂದ ಆಗಿನ ಫಲವು ಮುಂದೆ ತಿಳಿ ಸಲ್ಪಡುವದು, ಎಂಬದು

Occasional Notes
ಪ್ರಾಸಂಗಿಕವಿಷಯನ್ಯಾಸ

Lotteries in Native States—ಸ್ವದೇಶ ಸಂಸ್ಥಾನಗಳಲ್ಲಿ ಲಾಟರಿಯಾಕುವ ವಾಡಿಕೆಯ ನ್ನು ನಿಲ್ಲಿಸಬೇಕಾದ ವಿಷಯದಲ್ಲಿ ಹಿಂದುಕಾನೂ ನನ್ನು ರಚಿಸಬೇಕೆಂದು ಪಂಜಾಬ ಗವರ್ನಮೆಂ ಟಿನವರು ನ್ಯಾಯವಿಧಾಯಕ ಸಭೆಯವರಿಗೆ ತಿಳಿ ಸಿರುವಂತೆ ಹೇಳಿಕೊಳ್ಳುತ್ತಾರೆ.

Earthquake at Kashmir.—ಕಾಶ್ಮೀರ ದೇಶದಲ್ಲಿ ಈಗ ಭೂಕಂಪವು ಕಾಣವಾದಂತ ಕಾ ಣುತಿದೆ ಗತ ಪೂರ್ವತಿಂಗಳ ೩೦ ಪರದೇಶದೇ ಜನ ಬಂದುಗಳಲ್ಲಿ ... ಪ್ರಯುಕ್ತವಾ ದ ಪೀಡೆ ಇದ್ದಿಗೆ ... ಜನಗಳು ತ ಹಬಂದಿಸ್ಥಿತಿಗೆ ಬಂದಿರುವಂತೆ ತಿಳಿಯಬರುತಿದೆ

Subscription to Lady Dufferin's Fund ಹಿಂದೂಸ್ತ್ರೀಯರ ಪ್ರಯೋಜನಾರ್ಥ ಲೇಡೀ ಡಫ್ರಿನ್‌ಯವರಿಂದ ಪರಿಕಲ್ಪಿತವಾಗಿರುವ ಫಂಡಿಗೆ ಉದಯಪುರದ ಮಹಾರಾಜರವರು ೩೧,೦೦೦ ರೂ ಪಾಯಿಗಳೂ, ಬೂಂಡಿಸಂಸ್ಥಾನದ ಜೇಗುಯ ವರು ೧೫೦೦ ರೂಪಾಯಿಗಳೂ, ರಾಂಪುರದ ನ ವಾಬರು ೩೧,೦೦೦ ರೂಪಾಯಿಗಳೂ ಚಂದಾವಾ ದಿದರೆಂದು ತಿಳಿಯಬರುತಿದೆ.

Purchase of horses—ಇಟಲಿಗವರ್ನ್ಮೆಂಟಿ ಯಿಯಾಬಂತಪಿಂದ ದಲ್ಲಾಗಿ ಮದರಾಸಿಗೆಬಂದಿರು ವ ಕುದುರೆಗಳಲ್ಲಿಕೆ ಉತ್ತಮವಾದ ೧೦೦ ರಾಸೆ ಗಳನ್ನು ಮದರಾಸ್ಸೈನ್ಯಕ್ಕಾಗಿ ಹಾಜರಲ್ಲಿರುವ ಬಗ್ಗೆ ಮಸೂರು ರಿಮಾಂಟಿ ಡಿಪಾರ್ಟ್ಮೆಂಟ ಕ ನ್ನಲ ರಾರ್ಗಿನ್‌ಯವರು ಚುನಾಯಿಸಿ ಕ್ರಯ ಕ್ಕೆ ತೆಗೆದಿರುತ್ತಾರೆಂತಲೂ ಇನ್ನು ಕೆಲವುದಿನ ಗಳಲ್ಲಿ ಈ ಕುದುರೆಗಳು ಮಾಲೂರುಮಾರ್ಗವಾ ಗಿ ಮಸೂರಿಗೆ ಕಳುಹಿಸಲ್ಪಡುವವೆಂತಲೂ ತಿಳಿ ಯಬರುತಿವೆ

A rumour.—ನೈಪಾಲ್ಮಹಾರಾಜರವರ ಜ್ಯೇ ಷ್ಠಪುತ್ರರಾಗಿಯೂ ಯುವರಾಜರಾಗಿಯೂ ಇ ರುವ ಪ್ರಿನ್ಸಾಫ್‌ವೇಲ್ಸ್‌ಯವರಿಗೂ ಸ್ವೀಡ ನ್ ಮತ್ತು ನಾರ್ವೇರಾಜ್ಯದ ಅರಸರ ದ್ವಿತೀಯಪು ತ್ರರಾಗಿಯೂ ಸುಪ್ರಸಿದ್ಧಮಾನಿಯಾದೆಂಬ ನಿಕಡಿ ಯ ದ್ಯೂಕರವರಾಗಿಯೂ ಯಿರುವ ಆಸ್ಕರ್ ಯೆಂಬವರಿಗೂ ವಿವಾಹ ನಿಯಮವಾಗಿರುವಂ ತೆ ಪ್ರವಾದವುಂಟಾಗಿದೆ ಈ ರಾಜಪುತ್ರರಿಗೆ ಈಗ ೨೮ ವರ್ಷಗಳವಯಸ್ಸು ಇವರು ಇದುವ ರಿವಿಗೆ ಒಂದುಸಲ ಭೂಪ್ರದಕ್ಷಿಣ ಮಾಡಿಕೆಲ್ಲಾಂ ಡು ಬುದ್ಧಿವಂತರಾಗಿಯೂ ಸಕಲದೇಶಗಳನ್ನೂ ನೋ ಡಿದವರಾಗಿಯೂ ಇರುತ್ತಾರೆ

Flood by the recent rains.—ಈಚೆ ಗೆ ಬೆಂಗಾಲ್ ಪ್ರಸಿಡೆನ್ಸಿಯಲ್ಲಿ ಪ್ರಬಲ ವರ್ಷ ದಿಂದ ಪ್ರಂಟಾದ ಪ್ರವಾಹದ ದೆಸೆಯಿಂದ ಬಕ್ಸಾ ಮತ್ತು ಲಕ್ಕಿಸರ್ಸೈ ಯೆಂಬ ಯೆರಡು ಪ್ರದೇಶಗ ಳಿಗೆ ಮಧ್ಯೆಯಿರುವ ಭಾಗವೆಲ್ಲ ಮುಣಿಗಿ ಅಜಾದ ವಾದ ಜರಾರ್ಣನವದಂತೆ ಕಂಗೊಳಿಸುತಲಿತ್ತು. ಅ ಲ್ಲಿನ ಗ್ರಾಮಗಳೆಲ್ಲವೂ ಅತ್ಯಂತಿಕವಾಗಿ ಕೊ ಚ್ಚಿಲ್ಪಟ್ಟವು. ಅಲ್ಲಿನ ನಿವಾಸಿಗಳಾದ ಪ್ರಜೆ ಗಳೆಲ್ಲರೂ ವೃಕ್ಷಗಳ ಆಸರೆಯೊಳು ಇರುವರೆದ್ದ ರು. ಈಸ್ಟಿಂಡ್ಯರ್ ರೇಲ್ವೆಯಲ್ಲಿ ಆಮದುದಿವ್ಯ ಬಹಳಮಟ್ಟಿಗೆ ನಷ್ಟವನಸ್ನೆದಿತು

A fatal shooting.—ಗತ ಸೋಮವಾರದಿ ದ ವಿಶಾರತ ಕಂಟೋನ್ಮೆಂಟನಲ್ಲಿ ಕುಮಾರ್ ೨ ಘಂಟೆಯವೇಳೆಯಲ್ಲಿ ಮರಮ್ಮತ್ ಇಲಾಖೆಯ ನಾಯಕ್ ನೌಕರನಾದ ಸ್ಮಿತ್‌ಯೆಂಬವನು ಕುಡಿದು ಉನ್ಮತ್ತನಾಗಿ ಬಂದೂಖಿನಿಂದ ೮ಗೋಲಿಗಳ ನ್ನುಉದಾಯಿಸಲು ಅದು ಒಬ್ಬಆಯಾನಿಗೆತಗಲಿ ಅನಳು ಕೂಡಲೇ ಮೃತಳಾದಳೆಂತಲೂ ಇನ್ನು ಒಬ್ಬರಿಗೆ ಪೂರಾಪಡರುಗಾಗಿ ಜನರಲ್ಲಿಯೊಳು ಅ ಪಾಯಸ್ಥಿತಿಯಲ್ಲಿದಾರೆಂತಲೂ ಸದರೀ ಉನ್ಮತ್ತ ನು ತನ್ನ ಕೈಯಲ್ಲಿದ್ದ ಗುಂಡುಗಳನ್ನೆಲ್ಲ ವ್ಯಯ ಮಾಡಿಬಿಟ್ಟು ಕೂಡಲೇ ಹಿಂದುಬಾಡಿಗಗಾಡಿಯ ಲ್ಲಿಕುಳಿತು ಕಂಟೋನ್ಮೆಂಟ ಮ್ಯಾಜಿಸ್ಟ್ರೇಟ್ ಕೋರ್ಟಗೆಹೋಗಿ ತಾನಾಗಿಯೇ ನಿಕ್ಷಂಡಕ್ಕೆ ಒಳಗಾದನೆಂತಲೂ ತಿಳಿಯಬರುತಿದೆ ಈ ಸ್ಮಿತ್‌ನ ತೆವಾಗ್ಯೆ ಪ್ರೋಸೀಜನನವರು ಸವಿಸಾಪದೊಳದ್ದಾ ಗ್ಯೂ ಪೀಡೆಯಿಂದ ಅವನಗೋಜಿಗೆ ಹೋಗದ ದೂರ ಜೋರೆಯೋದರೆಂದು ಕೇಳುತ್ತೇವೆ ಆವತ್ಕಾಲದಲ್ಲಿ ಪೊಲೀಸ್‌ನವರ ಪ್ರಯೋಜನವಿಂ ತಾದ್ದೆ.

Mr. P Ranga Row.—ರಾಜಾ ಸರ್ ಟಿ. ಮಾಧವರಾಯರವರ ಪುತ್ರರಾದ ಮ. ರಂಗರಾ ಯರವರು ಹೈದರಾಬಾದ್ ರೆಸಿಡೆನ್ಸೀ ಇಲಾಖೆ ಯಲ್ಲಿ ಅಸಿಸ್ಟೆಂಟಾಗಿ ಇರುತಿದ್ದರಷ್ಟೆ. ಈ ದೊಡ್ಡಮನುಷ್ಯರು ತಮ್ಮ ರುಜೆಯ ಅನುಜ್ಞೆ ಯ ಪ್ರಕಾರ ಅಲ್ಲಿನ ನೌಕರಿಯಿಂ ನಿವೃತ್ತಿಹೊಂ ದಿಕೊಂಡು ಮದರಾಸ್ ಪ್ರೆಸಿಡೆನ್ಸಿಯಲ್ಲಿ ಹಿಂದು ದೆಪ್ಯುಟೀ ಕಲೆಕ್ಟರ್ ಕೆಲಸವನ್ನು ಅಂಗೀಕರಿಸಿ ಹೈದರಾಬಾದಿನಿಂದ ಮದರಾಸಿಗೆ ವಾಪಸ್ ಬಂದ ರೆಂದು ತಿಳಿಯಬರುತಿದೆ ಸರ್ ಟಿ ಮಾಧವರಾ ಯರವರ ಕುವರಾರರಲ್ಲೊಬ್ಬರು ಮೈಸೂರು ಸಂಸ್ಥಾನದಲ್ಲಿ ಸಮರ್ಥರಾದ ಸಬ್ ಜಡ್ಜ್ ಆಗಿ ಸರ್ಕಾರಿಸಿಕೊಂಡಿರುವರಲ್ಲದೆ ಮತ್ತೊಬ್ಬರು ಬ ರೋಡೆಯಲ್ಲಿಯೂ, ಇನ್ನೊಬ್ಬರು ತಿರುವಾಂಕೂ ರ್ನಲ್ಲೂ ವಿಶೇಷ ಪ್ರಾಶಸ್ತ್ಯದೊಡನೆ ಗೌರವವಾ ದ ಕೆಲಸಗಳಲ್ಲಿರುತಿದಾರೆ. ರಾಜಾ ಸರ್ ಟಿ. ಮಾ ಧವರಾಯರವರು, ಸನ್ಮಾರ್ಗಿಗಳಾಗಿಯೂ ಪುಣ್ಯ ಶಾಲಿಯಾಗಿಯೂ ಇರುವಂತೆಯೇ ತಮಗೆ ಸಮಾ ನರಾದ ಕುಮಾರರನ್ನು ಪಡೆದವರಾಗಿ ಸಂತೋ ಷಿಸುವರು

H E the Governor of Madras.—ನಾಳೆಯದಿನ ಸಾಯಂಕಾಲ ಘನವನ್ನುಳ್ಳೊಂದಿದ ಮದರಾಸಗವರ್ನರವರು ಸ್ಪೆಷಿಯಲ್‌ಟ್ರೈನಿನಲ್ಲಿ ಪೂರಾಗು ಮೆಟ್ಟುಪಾಳೆಯದಿಂದ ಸಿಂಲಾವಿಗೆ ಪ್ರ ಯಾಣವಾಗುತಾರೆ. ೧೧ನೇ ತಾರೀಖ್ ಮಧ್ಯಾ ಹ್ನ ಕರ್ಸಿ ಯೆಂಬ ಪ್ರದೇಶವನ್ನು ತಲಪಿ ೧೩ ನೇ ತಾರೀಖಿನ ಸಾಯಂಕಾಲದವರೆಗೆ ಅಲ್ಲೇ ಮೊಕ್ಕಾಂ ಬಳಿಕ ೧೪—೧೮ ನೇ ತಾ|| ಅನ ಸುಪಾಯಂಬಲ್ಲಿಯೂ, ೧೯—೨೦ನೇ ತಾ|| ಗ ಳಲ್ಲಿ ಜಯಪುರದಲ್ಲಿಯೂ, ೨೩—೨೫ ತಾ|| ಗ ಳಲ್ಲಿ ಆಗ್ರಾವಿನಲ್ಲೂ ೨೬—೨೭ ತಾ|| ಗಳಲ್ಲಿ ಡೆಹಲಿಯಲ್ಲಿಯೂ ರುಗುವರು ೨೮ನೇ ತಾ ರೀಖಿನ ಮಧ್ಯಾಹ್ನ ಅಂಬಾಲಾವಿನಿಗೆಹೋಗಿ ೮ ದೇವಿನ ಸಾಯಂಕಾಲ ಸಿಂಲಾಸೇರುವರು ೨೩ ರ ಮೊದಲು ಅಕ್ಟೋಬರ್ ೩ನೇ ತಾರೀಖುದೆನಕ ೮ ದಿನಗಳು ಸಿಂಲಾವಿನಲ್ಲಿ ಮೊಕ್ಕಾಂಮಾಡಿರುವ ರು. ಅಲ್ಲಿಂದ ಗವರ್ನರವರು ವಾಪಸ್ ಬರುವಾ ಗ್ಯೆ ಕ್ರಮವಾಗಿಪೆವರಿ, ಅಲ್ಲಾಹ್, ಅಜ್ಮೀರ್, ನೀಮುಚ್, ಇಂದೂರ್, ಈ ಪ್ರದೇಶಗಳಿಗೆ ಬಂದು ೨೦ನೇ ತಾರೀಖಿನಲ್ಲಿಮುಂಬೈಗೆಬರುವರು. ಅಲ್ಲಿಂ ದಸಮುದ್ರಮಾರ್ಗವಾಗಿಬೇಪ್ಪೂರಿಗೆ ಬಂದು ೨೦ ನೇ ತಾರೀಖಿನೊಳು ಅಲ್ಲಿ ಜಹಜ್ ಇಳಿಯುವರು. ೨೦ನೇ ತಾರೀಖಿನದಿನ ಅಲ್ಲಿಂದ ಪ್ರಯಾಣವಾಗಿ ಅಕ್ಟೋಬರ್ ೨೦ನೇ ತಾರೀಖಿನಲ್ಲಿ ಮದರಾಸಿ ಗೆ ಬಂದು ಸೇರುವರು

ನೋಟೀಸ್.

ಈ ತಿಂಗಳ ೭ ಮತ್ತು ೩ನೇ ತಾರೀಖುಗಳ ಲ್ಲಿ ಬಾಕೀದಾರರಾದ ಚಂದಾದಾರರಿಗೆ ನಾವು ಅಂ ಚೆಮೂಲಕ ಕೊಟ್ಟ ನೋಟೀಸ್ ಅವರವರಿಗೆ ತಲಪಿ ಅವರಿಂದ ಜವಾಬುಗಳು ಬರುವದಕ್ಕೆ ತ ಕ್ಕಷ್ಟು ಸಾವಕಾಶವಿಲ್ಲವಾಗಿ ಅಂತವರಿಗೆಲ್ಲ ಈ ವಾರ ಕಳುಹಿಸಿ ಅವರಿಗೆ ಅವಕಾಶವು ಕೊಟ್ಟ ರುತ್ತೇವೆ.

LOCAL AND PROVINCIAL NEWS
ಒಳದೇಶಮತ್ತುತಾಲ್ಲೂಕಿನವೃತ್ತಾಂತಗಳು

The Assistant Commissioner—ನಿರ್ಪಡ ದ ಡಿಪ್ಟಿಗೆ ಈದಿನ ಪ್ರಾರಂಭವಾಗಿ ಚೀಫ್‌ಕೋ ರ್ಟು ಮೂರನೇಜಡ್ಜಿಯಾದ ಮಿ|| ಎ ರಾಮ ಚಂದ್ರಯ್ಯರವರು ಅದನ್ನನಡೆಸುವರು ವಿಚಾ ರಕ್ಕೆ ಆಗಬೇಕಾದ ಮೊಕದ್ದಮೆಗಳು ಸ್ವಲ್ಪವಾ ಗಿವೆಯೆಂದುಕೇಳುತ್ತೇವೆ.

Murder.—ಕಾರ್ಲಾದಹಳ್ಳಿ ತಾಲ್ಲೂಕಿಗೆ ಸೇರಿದ ಬಂದುಗ್ರಾಮದಲ್ಲಿ ಒಬ್ಬ ವಿಧವೆಯ ಮನೆ ಯೊಳು ಸಂಬಳಕ್ಕೆ ಯಿದ್ದವನನ್ನು ಯಾರೋ ಖೂನಿಮಾಡಿ ಗ್ರಾಮದಹೊರಯಲ್ಲಿ ಹಾಕಿಬಿಟ್ಟಂ ತೆಯೂ ಖೂನಿಮಾಡಿದವರು ಅದ್ಯಾಪಿ ಪತ್ತೆಯಾ ಗಲಿಲ್ಲವೆಂತಲೂ ತಿಳಿಯಬರುತಿದೆ.

The office of Revenue Commissioner. ಬೆಂಗಳೂರು ಡಿಸ್ಟ್ರಿಕ್ಟ್ ಡೆ|| ಕಮ್ಮಿಷನರಾದ ಮಿ|| ರಿಕ್ಕೆಟ್ಸ್‌ಯವರು, ಈ ಸಂಸ್ಥಾನಕ್ಕೆ ರೆವಿ ನ್ಯೂ ಕಮ್ಮಿಷನರಾಗಿ ಮೊಕರರ್ ಮಾಡಲ್ಪಡುವ ರೆಂದು ವಗ್ಗರೆ ಹಿಂದಿನವಾರದ ಪತ್ರಿಕೆಯಮೂ ಲಕ ತಿಳಿಸಿರುತ್ತೇವೆಯಷ್ಟೆ. ಈಚೆಗೆ ತಿಳಿ ಯಬರುವದರಲ್ಲಿ, ಸಂಸ್ಥಾನದ ಅರ್ಥಾನುವಪತ್ತಿ ಯನ್ನಾಲೋಚಿಸಿ ಮಹಾರಾಜಾ ಸರ್ಕಾರದವರಿಗೆ ಸದ್ಯಃ ಅಂತಾ ಆಲೋಚನೆಇಲ್ಲವೆಂದುಕಾಣುತಿದೆ.

Lecture.—ಗತ ಶುಕ್ರವಾರದ ದಿನ ಸಾಯಂ ಕಾಲ ಈವೂರು ಕಿಲ್ಲೇಕೆಟ್ಟೇಬಳಿಯಿರುವ ಮ್ಯೂ ನಿಸಿಪಲ್ ಸ್ಕೂಲ್ ಕಟ್ಟಡದಲ್ಲಿ ಡೆಪ್ಯುಟಿಕಲೆಕ್ಟರ್ ಮ|| ರಾ|| ಕಂಚಿ ಸುಬ್ಬರಾಯರವರು ವಿಧವಾ ವಿ ವಾಹವು ಅಶಾಸ್ತ್ರೀಯವೆಂಬದು ಕುರಿತು ತಮ ಗೆ ತೋರಿದ ಶಾಸ್ತ್ರವಚನಗಳ ಆದಾರದಿಂದ ನಿ ರೂಪಿಸಿ ಪ್ರಸಂಗಿಸಿದರು. ಇದು ಕೇಳತಕ್ಕಬ ಗ್ಯೆ ಬಹುಮಂದಿ ವೈದಿಕರೂ ಲೌಕಿಕರೂ ಬಂದಿ ದ್ದರು. ಈ ವಿಷಯಗಳಲ್ಲಿ ಅತ ರಮ್ಯರೆ ಆಕ್ಷೇ ಪಿಸತಕ್ಕವರು ಯಾರೂ ಇಲ್ಲದ್ದರಿಂದ ಗದ್ದಲ ವಿಲ್ಲದೆಪೂರೈಸಿತು.

The Maharaja's return to Mysore.—ಕಳೆದ ಶನಿವಾರದದಿನ ಹಗಲು ೧೨೩ ಘಂಟೆಗೆ ಶ್ರೀಮನ್ಮಹಾರಾಜರವರು ತಮ್ಮ ಪರಿಜನರೊಡ ನೆ, ಸ್ಪೆಷಲ್ ಟ್ರೈನಿನಲ್ಲಿ ಮೈಸೂರಿಗೆ ವಾಪಸ್ ದಯಮಾಡಿದರು. ಇವರನ್ನು ಸಾಗುಕಳುಹಿ ಸುವದಕ್ಕಾಗಿ ಪೇಟೆ ರೆಯಿಲ್ ಸ್ಟೇಷನ್ನಿನಲ್ಲಿ ಬಹು ಮಂದಿ ಯೂರೋಪಿಯರ್ ಮತ್ತು ನೇಟಿವ್ ದೊ ಡ್ಡಮನುಷ್ಯರು ಸ್ಟೇರ್ಷ ಪ್ಲಾಟ್ ಫಾರವಿಗೆ ಬಂ ದಿದ್ದರು. ಮಾಮೂಲ್ ಮರ್ಯಾದೆಗಳೆಲ್ಲವು ಸಾಂ ಗವಾಗಿ ನೆರವೇರಿದವು. ಮಹಾರಾಜರವರು ಕ್ಲುಪ್ತಕಾಲಕ್ಕೆ ಸರಿಯಾಗಿ ಗಾಡಿಯಲ್ಲಿ ಬಿಜಮಾ ಡಿ ರಾಜಧಾನಿಗೆ ಪ್ರಯಾಣವಾದರು.

The Pettah Municipal Sanscrit school ಈತಿಂಗಳ ೩ನೇ ತಾರೀಖ್ ಬೃಹಸ್ಪತಿ ವಾರದ ದಿನ ಬೆಳಗ್ಯೆ ಸುಮಾರ್ ೮ ಘಂಟೆಗೆ ಈವೂರು ಪೇಟೇ ಮ್ಯೂನಿಸಿಪಲ್ ಸಂಸ್ಕೃತ ಪಾಠಶಾಲೆ, ಅಂದರೆ, ಸಾಬ್ ಸಂಸ್ಕೃತವಿದ್ಯಾನಿಲಯ ಪಾಠ ಶಾಲೆಗೆ ಈ ಸಂಸ್ಥಾನದ ದಿವಾನರಾದ ಮೆ. ಕೆ. ಶೇಷಾದ್ರಿ ಅಯ್ಯರ್, ಬಿ. ಎ ಬಿ. ಎಲ್. ಯವ ರು, ತಮ್ಮ ಜನರಲ್ ಸೆಕ್ರಿಟೆರಿಯವರೊಡನೆ ದ ಯಮಾಡಿ, ಪಾಠಶಾಲೆಯ ವಿದ್ಯಾಭಿವೃದ್ಧಿ ಮೊದ ಲಾದ ವಿಷಯಗಳನ್ನು ಚೆನ್ನಾಗಿ ವಿಚಾರಿಸಿ, ವಿ ದ್ಯಾರ್ಥಿಗಳಲ್ಲಿಕೆ ಕೆಲವರಿಗೆ ಅವರವರ ಯೋಗ್ಯ ತಾನುಗುಣವಾಗಿ ವಿದ್ಯಾರ್ಥಿ ವೇತನವು ಕಲ್ಪಿಸ ಬೇಕೆಂದು ಅಪ್ಪಣೆ ಕೊಟ್ಟಿದ್ದಲ್ಲದೆ, ಸದರೀಪಾ ಠಶಾಲೆಯ ಪುರೋಭಿವೃದ್ಧಿಯನ್ನನುಸರಿಸಿ ಸರ್ಕಾ ರದಿಂದ ಈಗ ಕೊಡಲ್ಪಡುವ ಸಹಾಯ ಹೆಚ್ಚಿಸ ಲ್ಪಡುವದೆಂದು ಸಹ ಅಪ್ಪಣೆ ಕೊಟ್ಟಂತೆ ಕೇ ಳಿಕ್ಕೆ ಬಹಳ ಸಂತೋಷಿಸುವೆವು.

HINDOO VIRGIN WIDOW MARRIAGE

ಸ್ತ್ರೀ ಪುನರ್ವಿವಾಹ ವಿಷಯ.

ಹಿಂದುಸ್ತ್ರೀ ಪುನರ್ವಿವಾಹವಿಷಯದಲ್ಲಿ ದಿವಾನ್‌ಬಹದೂರ್ ರಘುನಾಥರಾಯರವರು ಕಳೆದ ತಿಂಗಳ ೧೦ನೇ ತಾರೀಖಿನ ಈಪತ್ರಿಕೆಯಮೂಲಕ ಪ್ರಕಟಿಸಿದ ಉಪನ್ಯಾಸಕ್ಕೆ ಬ್ರಹ್ಮಶ್ರೀ ಗೋಪಾಲಶಾಸ್ತ್ರಿಗಳವರು ಕೊಟ್ಟಜವಾಬನ್ನು ಅದೇ ತಿಂಗಳ ೨೪ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಪಡಿಸಿರುತ್ತೇವೆಯಷ್ಟೆ. ಅದಕ್ಕೆ ದಿವಾನ್ ಬಹದೂರರವರು ಕೊಟ್ಟ ಪ್ರತ್ಯುತ್ತರವನ್ನು ಇದರಡಿ ಪ್ರಕಟಿಸುವೆವು.

ದಿವಾನ್ ಬಹದೂರರವರ ಲೇಖನದಲ್ಲಿ ೬೦ನೇ ಅಧ್ಯಾಯ ೧ನೇ ಶ್ಲೋಕವೆಂದು ಕ್ಲಿಷ್ಟತಪ್ಪು ಬಿದ್ದಿರುತ್ತದೆಯಾಗಿ ಅದನ್ನು ೧೧೪ನೇ ಅಧ್ಯಾಯವೆಂದು ತಿಳಿಯತಕ್ಕದ್ದು:—

ಪ್ರಿಯರೆ,—

ಕಳೆದತಿಂಗಳ ೨೪ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಬ್ರಹ್ಮಶ್ರೀ ಗೋಪಾಲಶಾಸ್ತ್ರಿಗಳವರ ಲೇಖನವನ್ನು ಬಹಳ ಕುತೂಹಲದೊಡನೆ ಓದಿದೆನು. ಹಿಂದೂ ಸ್ತ್ರೀ ಪುನರ್ವಿವಾಹವಿಷಯದಲ್ಲಿ ನಾವು ಪಡೆದಿರುವ ಅಭಿಪ್ರಾಯಗಳಿಗೆ ವಿರುದ್ಧವಾಗಿ ಸದರೀ ಶಾಸ್ತ್ರಿಗಳವರು ಪಡೆದಿರುವ ಅಭಿಪ್ರಾಯವು ತುದಾಂತನವಾಳಿಕ ಹೊರಗಾಗುವದಕ್ಕೆ ನಾನೇ ಕಾರಣನಾದದ್ದಕ್ಕೆ ಬಹಳ ಸಂತೋಷಿಸುತ್ತೇನೆ.

ಅವರ ಆಕ್ಷೇಪಣೆಗಳಿಗೆ ಇದರಡಿ ಜವಾಬು ಕೊಡುತ್ತೇನೆ ಹ್ಯಾಗೆಂದರೆ.—ನನ್ನ ಲೇಖನವನ್ನು ಓದಿದಮೇಲೆ ಸದರೀ ಶಾಸ್ತ್ರಿಗಳವರು ಆಕ್ಷೇಪಿಸಿ ಬರೆದಿರುತ್ತಾರೆ. ಅಂತಾ ನನ್ನ ಬರವಣಿಗೆಯಲ್ಲಿ ಶ್ರೀಕೃಷ್ಣನ ಪೌತ್ರನೂ ಪೌನರ್ಭವನೂ ಆದ ಅನಿರುದ್ಧನು ಬ್ರಹ್ಮಾಂಶ ಸಂಭೂತನೆಂದು ನಮೂದಾಗಿರುವ ಅಂಶವನ್ನು ಅನೇಕರು ಅನುಮಾನಿಸುತ್ತಾರಾಗಿ ಅಂತಾ ನನ್ನ ಹೇಳಿಕೆಗೆ ಆಧಾರರೂಪವಾಗಿ ಬ್ರಹ್ಮವೈವರ್ತ ಪುರಾಣವನ್ನು ಉದಹರಿಸುತ್ತೇನೆಂದು ನಮೂದಾಗಿರುತ್ತದೆ.

ಸದರೀ ಶ್ಲೋಕಗಳ ಅರ್ಥವೇನಂದರೆ:—

"ಕೃಷ್ಣಪುತ್ರನಾದ ಪ್ರದ್ಯುಮ್ನನು ಬಹಳ ಶೂರನು. ಆತನಮಗನಾದ ಅನಿರುದ್ಧನು ಸಹ ವೀರನೆ, ಮತ್ತು ಬ್ರಹ್ಮಾಂಶಸಂಭೂತನು."

"ಬ್ರಹ್ಮನೇ ಅನಿರುದ್ಧನು, ಪ್ರದ್ಯುಮ್ನನು ಕಾಮನು, ಶೇಷನೇ ಬಲದೇವನು, ಕೃಷ್ಣನು ಪ್ರಕೃತಿಗಿಂತಲೂ ಶ್ರೇಷ್ಠನು," ಎಂಬದು.

ಅನಿರುದ್ಧನು ಬ್ರಹ್ಮನೆಂಬ ವಿಷಯದಲ್ಲಿ ಯಾರಿಗೂ ಅನುಮಾನವಿಲ್ಲವೆಂದು ಶಾಸ್ತ್ರಿಗಳವರು ತಮ್ಮ ಜವಾಬಿನಲ್ಲಿ ನಮೂದು ಮಾಡುತ್ತಾರೆ. ಶಾಸ್ತ್ರಿಗಳವರಿಗೆ ಆ ವಿಷಯದಲ್ಲಿ ಸಂಶಯವಿಲ್ಲದೆ ಇರಬಹುದು, ಅಥವಾ ಅಂತಾ ಸಂಶಯವನ್ನು ನನಗೆ ತಿಳಿಸದೆಯಿರಬಹುದು, ಪರಂತು ಸದರೀವಿಷಯವನ್ನು ಕುರಿತು ವಿಚಾರಮಾಡಿದಕಾಲದಲ್ಲಿ ಹಾಜರಿದ್ದ ಮಾಧ್ವರನೇಕರು, ತಮಗೆ ಆ ವಿಷಯದಲ್ಲಿ ಸಂಶಯವುಂಟಾಗಿರುವಂತೆ ನನ್ನಲ್ಲಿ ಪ್ರಸ್ತಾಪಿಸಿದ್ದು ಅವರಲ್ಲಿ ಅನೇಕರಿಗೆ ಚೆನ್ನಾಗಿ ತಿಳಿದೇಯಿದೆ. ಪಂಡಿತ ಗೋವಿಂದಾಚಾರ್ಯರೂ, ಹಾಗಲ್ಲವೆಂದು ನನ್ನಸಂಗಡ ವಾದಿಸಿದುತಾ ಇಬ್ಬರು ಮಾಧ್ವ ಲೌಕಿಕರೂ ಅಂತಾ ಸಂಶಯ ತಮಗೆ ವುಂಟಾಗಿದೆಯೆಂದು ತಿಳಿಸಿದ್ದು ಮಾತ್ರವಲ್ಲದೆ ನಾನು ಹಾಗೆ ಹೇಳಿದ್ದು ತಪ್ಪೆಂದು ಸಹ ಸ್ಪಷ್ಟವಾಗಿ ಹೇಳಿದರು.

ಪ್ರದ್ಯುಮ್ನನು ಕೃಷ್ಣನಮಗನೆಂತಲೂ, ಶಂಬರನಭಾರ್ಯೆಯು ಅವನಸಂಗಡ ಅನೇಕಸಂವತ್ಸರಗಳಕಾಲ ವಿದ್ದಾಗ್ಯೂ ಆಕೆ ಕನ್ಯೆಯಾಗಿರುವಲ್ಲಿ ವೈಧವ್ಯ ಪ್ರಾಪ್ತವಾದದರಿಂದ ಆಕೆಯನ್ನು ವಿವಾಹ ಮಾಡಿಕೊಳ್ಳಬಹುದೆಂದು ನಾರದಮಹರ್ಷಿಯವರು ಮಾಡಿದ ನಿರ್ಣಯದಮೇಲೆ ಪ್ರದ್ಯುಮ್ನನು ಆಕೆಯನ್ನು ವಿವಾಹ ಮಾಡಿಕೊಂಡನೆಂದು ಮೇಲಿನ ನನ್ನ ಲೇಖನದಲ್ಲಿ ಪ್ರಸ್ತಾಪವಶ್ಯೇನ ನಮೂದು ಮಾಡಿದ್ದೆನು. ಅದಾಗ್ಯೂ ಅಂತಾ ನನ್ನ ಹೇಳಿಕೆಯನ್ನು ನಿರೂಪಿಸುವದಕ್ಕೆ ಬ್ರಹ್ಮ ವೈವರ್ತ ಪುರಾಣದ ಆಧಾರವನ್ನನುಸರಿಸಿ ಹೇಳಲಿಲ್ಲವು, ಯಾತಕ್ಕೆಂದರೆ, ಅ ಹರಿವಂಶದಿಂದಲೂ (ಇತಿಹಾಸ) ವಿಷ್ಣುಪುರಾಣದಿಂದಲೂ ನಿರೂಪಿಸಲ್ಪಟ್ಟಿವೆ. ಅದಾಗ್ಯೂ ಬ್ರಹ್ಮ ವೈವರ್ತ ಪುರಾಣವು ಇದಕ್ಕೆ ಅನ್ಯಥಾ ಹೇಳುವದಿಲ್ಲವು. ಈಪುರಾಣಗಳಿಗೆ ವಿರುದ್ಧವಾಗಿ ಶ್ರೀ ಭಾಗವತದಲ್ಲಿ ತಿಳಿಸಲ್ಪಟ್ಟಿರುವಂತೆ ಗೋಪಾಲಶಾಸ್ತ್ರಿಗಳವರು ತಿಳಿಸಿರುವಂತೆ ಕಾಣುತಿದೆ. ನಾನು ಹಾಗೆ ಯೆಣಿಸುವದಿಲ್ಲವು. ಒಂದುವೇಳೆ ಹಾಗೆ ಹೇಳಿರುವಂತೆ ಇಟ್ಟುಕೊಂಡಾಗ್ಯೂ ಹರಿವಂಶವೆಂಬದು ಶ್ರೀಕೃಷ್ಣದೇವರ ಮತ್ತು ಅವರ ವಂಶಜರ ಮುಖ್ಯ ಚರಿತ್ರವಾಗಿಯೂ, ಇತಿಹಾಸದ ಪೈಕಿ ಒಂದು ಭಾಗವಾಗಿಯೂ ಇರುವದರಿಂದ ಅದು ಭಾಗವತಕ್ಕಿಂತಲೂ ಪ್ರಬಲತರವಾದದ್ದು.

ಬ್ರಹ್ಮವೈವರ್ತಪುರಾಣವು ನನ್ನ ಅಭಿಪ್ರಾಯಕ್ಕೆ ಪ್ರೋತ್ಸಾಹಕವಾಗಿರುವದಿಲ್ಲವೆಂದು ಶಾಸ್ತ್ರಿಗಳವರು ಯೋಚಿಸುವಂತೆ ಕಾಣುತಿದೆ, ಪರಂತು ಅವರು ಹಾಗೆ ಯೆಣಿಸುವದು ಭ್ರಾಂತಿಕಲ್ಪಿತವಾದದ್ದು.

ಶಾಸ್ತ್ರಿಗಳವರು ನನ್ನ ಅಭಿಪ್ರಾಯಕ್ಕೆ ಪ್ರೋತ್ಸಾಹಕವಾಗಿ ಉದಹರಿಸುವ ಬ್ರಹ್ಮವೈವರ್ತ ಪುರಾಣ, ೧೧೨ನೇ ಅಧ್ಯಾಯ ೪ನೇ ಶ್ಲೋಕದಲ್ಲಿ "ಗೃಹಿಣೀ" ಎಂಬ ಶಬ್ದ ಅಡಗಿರುತ್ತದೆ. ಅದಕ್ಕೆ "ಭಾರ್ಯೆ" ಯೆಂಬರ್ಥವು. ಹಾಗಿದ್ದಾಗ್ಯೂ ಪಂಡಿತ ಗೋಪಾಲಶಾಸ್ತ್ರಿಗಳವರು ಸದರೀ ಶ್ಲೋಕಕ್ಕೆ ಮಾಡಿದ ತರ್ಜುಮೆಯಲ್ಲಿ ಸದರೀ ಶಬ್ದದ ಅರ್ಥವನ್ನು ಹೇಳದೆ ಬಿಟ್ಟುಬಿಟ್ಟರು. ಇದಲ್ಲದೆ ಪಶ್ಲೋಕದ ಪ್ರಯೋಜನದ ಸಾರ್ಥಕವೇನು? ಮಾಯಾವತಿಯು ಆತನ ಭಾರ್ಯೆಯಲ್ಲದ ಪಕ್ಷಕ್ಕೆ ಅವಳಿಗೆ ಬದಲಾಗಿ ಬೇರೆ ಒಬ್ಬಳನ್ನು ಆತನ ಶಯ್ಯಾ ಗೃಹಕ್ಕೆ ಕಳುಹಿಸಬೇಕಾದ ಅವಶ್ಯಕತೆ ಯೇನಿತ್ತು. ಆಕೆಯು ಮಾಡಿದ ಈ ವಿಧವಾದ ಮೋಸವು ಆಕೆಯು ಪ್ರದ್ಯುಮ್ನನನ್ನು ವಿವಾಹಮಾಡಿಕೊಳ್ಳಲು ಆಸ್ಪದವನ್ನುಂಟುಮಾಡಿತು. ನಾರದರು ಹೀಗೆ ಹೇಳಿದಂತೆ ಹರಿವಂಶದಲ್ಲೂ ವಿಷ್ಣುಪುರಾಣದಲ್ಲೂ ಕಾಣುತ್ತವೆ. ಮಾಯಾವತಿಯು ಶಂಬರನ ಯುವತಿಯಲ್ಲವೆಂದು ನಿರೂಪಿಸಲು ಅದೇ ಗ್ರಂಥದಲ್ಲಿ ೧೪ನೇ ಶ್ಲೋಕದಲು ೨೫ನೇ ಶ್ಲೋಕದವರಿವಿಗೆ ಶಾಸ್ತ್ರಿಗಳವರು ಉದಹರಿಸುತ್ತಾರೆ. ಇದೇ ಶ್ಲೋಕಗಳಲ್ಲಿ ಪ್ರದ್ಯುಮ್ನನು "ಮಾತೃಗಾಮಿ" ಯೆಂದಲೂ, ಮಾಯಾವತಿಯು ಮಗನಸಂಗಡ ಸರಸವಾಡಿದಳೆಂತಲೂ ಶಂಬರನು ದೂಷಿಸಿದಂತೆ ನಮೂದಾಗಿರುತ್ತದೆ. ಸದರೀ ಅಧ್ಯಾಯದ ೧೦ ಮತ್ತು ೧೧ನೇ ಶ್ಲೋಕಗಳಲ್ಲಿ ಶಂಬರನು ಅಪುತ್ರನಾಗಿದ್ದುದರಿಂದಲೂ, ಪ್ರದ್ಯುಮ್ನನನ್ನು ತನ್ನ ಮಗನನ್ನಾಗಿ ಮಾಡಿಕೊಳ್ಳಬೇಕೆಂಬ ಕುತೂಹಲದಿಂದ ಅವನನ್ನು ಮಾಯಾವತಿ ಕೈಯಲ್ಲಿ ಒಪ್ಪಿಸಿದಂತೆಯೂ, ಆಕೆಯುಕೂಡ ಸಂತೋಷದೊಡನೆ ಅವನು ಕೈಗೊಂಡಂತೆಯೂ ಬಳಿಕ ಅವನನ್ನು ಆಲೋಚಿಸಲಾಗಿ, ಶಂಬರನೂ ಮಾಯಾವತಿಯೂ ಭರ್ತೃ ಭಾರ್ಯೆಯರಾಗಿದ್ದು ಪ್ರದ್ಯುಮ್ನನನ್ನು ಪುತ್ರನಾಗಿ ಮಾಡಿಕೊಂಡಂತೆ ಸ್ಪಷ್ಟವಾಗಿ ಕಾಣುತಿದೆ.

೧೧೪ನೇ ಅಧ್ಯಾಯ ೨೮ನೇ ಶ್ಲೋಕದಲ್ಲಿ ಅನಿರುದ್ಧನು ತಾನು ರತಿಪುತ್ರನೆಂದು ಹೇಳಿಕೊಳ್ಳುತ್ತಾನೆ. ೪೫ನೇ ಶ್ಲೋಕದಲ್ಲಿ, ಬಾಣನು ಅನಿರುದ್ಧನನ್ನುದ್ದೇಶಿಸಿ ಹೇಳುವದೇನಂದರೆ:— "ನಿನ್ನ ತಂದೆಯು ಶಂಬರನನ್ನು ಸಂಹರಿಸಿ, ಆತನ ಕಾಮಿನಿ, ಅಂದರೆ ಭಾರ್ಯೆಯನ್ನು ತನ್ನವಳ ಮಾಡಿಕೊಂಡವನು, (೭೬ನೇ ಶ್ಲೋಕ) ಮತ್ತು ಅವರಿಗೆ ನೀನು ಜನಿಸಿದವನು," ಎಂಬದು. ೭೭ನೇ ಶ್ಲೋಕದಲ್ಲಿ, ಅನಿರುದ್ಧನು ತನ್ನ ತಾಯಿಯಾದ ರತಿಯು ಪತಿವ್ರತೆಯೆಂದು ಹೇಳುತ್ತಾನೆ. ಇವುಗಳ ದೆಸೆಯಿಂದ ಮಾಯಾವತಿಯು ಅನಿರುದ್ಧನ ತಾಯಿಯೆಂದು ಸ್ಪಷ್ಟವಾಗಿ ಕಾಣುತಿದೆ.

ಪ್ರಬಲ ಪ್ರಮಾಣಗಳಾದ ಇತಿಹಾಸ, ಶ್ರುತಿ, ಸ್ಮೃತಿ ಇವುಗಳನ್ನು ಉಳಿಸುವದಕ್ಕೆ ಅವಕಾಶವಿರುವ ಕಡೆಗಳಲ್ಲಿ ನಾನು ಪುರಾಣವಚನಗಳನ್ನು ಸಾಮಾನ್ಯವಾಗಿ ಉದಹರಿಸುವದಿಲ್ಲವು. ಮೇಲೆ ನಾನು ತಿಳಿಸಿದಂತೆ, ಅನಿರುದ್ಧನು ಬ್ರಹ್ಮನೆಂದು ನಾನು ಹೇಳಿದ್ದು ನನ್ನ ಕಲ್ಪನೆಯಲ್ಲವೆಂದು ನಿರೂಪಿಸುವದಕ್ಕಾಗಿ ಮೇಲಿನ ಪುರಾಣವನ್ನು ನಾನು ಉದಹರಿಸಿದೆನೇ ಹೊರತು ಬೇರಲ್ಲವು. ಈ ಅಂಶವು ಪ್ರಸಕ್ತ ವಿಷಯಕ್ಕೆ ಸುತರಾಂ ಸಂಬಂಧಪಟ್ಟದ್ದಲ್ಲವು. ಮಾಯಾವತಿಯು ಶಂಬರನ ಪತ್ನಿಯೆಂತಲೂ, ಆತನು ಪ್ರದ್ಯುಮ್ನನಿಂದ ಸಂಹರಿಸಲ್ಪಟ್ಟನೆಂತಲೂ, ಪ್ರದ್ಯುಮ್ನನು ಶಂಬರನ ಪತ್ನಿಯಾದ ಮಾಯಾವತಿಯನ್ನು ವಿವಾಹ ಮಾಡಿಕೊಳ್ಳಲಿಕ್ಕೆ ಒಪ್ಪಿದನೆಂತಲೂ, ಮಾಯಾವತಿಯನ್ನು ಪ್ರದ್ಯುಮ್ನನು ವಿವಾಹ ಮಾಡಿಕೊಳ್ಳುವದು ಶಾಸ್ತ್ರಸಮ್ಮತವೇಯೆಂಬ ಜಿಜ್ಞಾಸೆಯುಂಟಾಗಿ, ಶಂಬರನಿಗೂ ಮಾಯಾವತಿಗೂ ಶರೀರಸಂಬಂಧವಿಲ್ಲವಾಗಿ ವಿವಾಹ ಮಾಡಿಕೊಳ್ಳಬಹುದೆಂದು ನಾರದರೂ ಶ್ರೀ ಕೃಷ್ಣನೂ ವ್ಯವಸ್ಥೆ ಮಾಡಿದರೆಂತಲೂ ನಿರೂಪಿಸಲಿಕ್ಕೆ ಬೇಕಾದಷ್ಟು ಪ್ರಮಾಣವಚನಗಳನ್ನು ಮೇಲೆ ಹೇಳಿದಂತೆ ಉದಹರಿಸಿರುತ್ತೇನೆ.

ಮಾಯಾವತಿಯು ಪ್ರದ್ಯುಮ್ನನನ್ನು ವಿವಾಹಮಾಡಿಕೊಂಡಕಾಲದಲ್ಲಿ ಕನ್ಯೆಯಾಗಿರಲಿಲ್ಲವೆಂದು ಶಾಸ್ತ್ರಿಗಳವರು ಸಾಧಿಸಲಿಕ್ಕೆ ಯತ್ನಪಡುವರಾದರೆ, ಬಾಲವಿಧವೆಗೆ ತದ್ವಿಷಯವಾದ ಒಳ್ಳೆಯಲ್ಲಿಬಿಟ್ಟಂತೆಯಾಗುವದು, ಯಾತಕ್ಕೆಂದರೆ, ಈ ವಿವಾಹದ ದೆಸೆಯಿಂದ ಕ್ಷತಯೋನಿಯಾದ ವಿಧವೆಯು ಸಹ ಮರು ಮದುವೆ ಮಾಡಿಕೊಳ್ಳಬಹುದೆಂದು ಬೋಧವಾಗುತದೆ.

ಕಡೆಗೆ ಪಂಡಿತ ಗೋಪಾಲ ಶಾಸ್ತ್ರಿಗಳವರು ನಾನು ಮಾಡಿರುವ ಸಂಸ್ಕೃತ ಗ್ರಂಥವನ್ನು ಇದುವರಿವಿಗೆ ಪ್ರಸಿದ್ಧಿಪಡಿಸದೆ ಇರುವದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ, ಯಾತಕ್ಕೆಂದರೆ, ನನ್ನ ಗ್ರಂಥದ ೭೭ನೇ ಪುಟಕ್ಕೆ ಸೇರಿರುವ ಉಪ ಗ್ರಂಥವನ್ನು ಅವರು ಓದಿದ್ದರಾದರೆ, ಶ್ರೀ ಕೃಷ್ಣನ ಮೊಮ್ಮಗನು ಪೌನರ್ಭವನೆಂದು ನಿರೂಪಿಸಲಿಕ್ಕೆ ನಾನು ಮಾಡಿದ ಪ್ರಯತ್ನವು ಕೇವಲ ಸಾಹಸ ಕೃತ್ಯವೆಂದು ಹೇಳುತಿರಲಾರರು.

ಆರ್. ರಘುನಾಥರಾವ್.

NEWS LETTERS.

ಚಿತ್ರದುರ್ಗ.

[illegible]

[illegible]

[illegible]

[illegible]

[illegible]

THE MYSORE GAZETTE.

ಮೈಸೂರು ಗೆಜೆಟ್.

ನಂ. ೧೧೩, ತಾ॥ ೨೯ನೇ ಆಗಸ್ಟು ೧೮೮೫—[illegible] ಮಾಡಲ್ಪಟ್ಟಿರುತ್ತೆ.

ನಂ. ೧೧೪, ತಾ॥ ೩೧ನೇ ಆಗಸ್ಟು ೧೮೮೫—[illegible] ಅಸಿಸ್ಟೆಂಟ್ [illegible] ಕೊಟ್ಟಿರುತ್ತೆ.

ನಂ. ೧೧೫, ತಾ॥ [illegible] ೧೮೮೫—[illegible] ರಘುನಾಥರಾಯರ [illegible] ಮಾಡಲ್ಪಟ್ಟಿರುತ್ತೆ.

ನಂ. ೧೧೬, ತಾ॥ ೩ನೇ ಸೆಪ್ಟೆಂಬರ್ ೧೮೮೫—[illegible] ದಿವ್ಯವಾಗಿರುತ್ತೆ.

ನಂ. ೧೧೭, ತಾ॥ ೪ನೇ ಸೆಪ್ಟೆಂಬರ್ ೧೮೮೫—[illegible] ಕೊಡಲ್ಪಟ್ಟಿರುತ್ತೆ.

BANGALORE:—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗೆನಾರ್ಥಕರ್ಣಾಟಕಪ್ರಕಾಶಕನವರಾಬಿದಾಪ್ರಥಿತಸಾಹಿತೀಶೋಭಿತಾ ॥ ನೃಗಾಂಕಹಿತವಾಸರನಿಹಿತಮುದ್ರಣಾಸಜ್ಜನಸ್ಪರ್ದ್ಧಿ [illegible] ॥

Vol. XII] BANGALORE—MONDAY, SEPTEMBER 14, 1885. [No. 37.

ಸಂಪುಟ ೧೨.] ಬೆಂಗಳೂರು—ಸನ್ ೧೮೮೫ನೇ ಇಸವಿ ಸೆಪ್ಟಂಬರ್ ೧೪ನೇ ತಾರೀಖ್ ಸೋಮವಾರ. [ಸಂಚಿಕೆ ೩೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತಿಳಿಯುವೋರ್ವರಿಗೆ ವರುಷ ೧ಕ್ಕೆ	..	೧೨—೦—೦
ಇಂಗ್ಲಿಷ್ ಮಾತ್ರ ತಿಳಿಯುವೋರ್ವರಿಗೆ ವರುಷ ೧ಕ್ಕೆ	. .	೬—೦—೦
ಕನ್ನಡ ಮಾತ್ರ ತಿಳಿಯುವೋರ್ವರಿಗೆ [illegible] ಮಾತ್ರ ವರುಷಕ್ಕೆ.		೬—೦—೦
[illegible]	೧ಕ್ಕೆ	೦—೮—೦
[illegible]	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

ಟಿಪ್ಪ.—[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—

NOTICE TO SUBSCRIBERS

[illegible] —

೧. [illegible]

೨. [illegible]

೩. [illegible]

೪. [illegible]

NOTICE.

VAIDYASARASANGRAHA

Price including Postage, Rs 5 6—0

[illegible]

[illegible]	... .. ರೂ॥	೫—೦—೦
[illegible]		೦—[illegible]—೦

[illegible], ಬೆಂಗಳೂರು.

ನೋಟೀಸ್.

[illegible] ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುವುವು.—

[illegible]

[illegible]	..	೧—೪—೦
[illegible]	..	೦—೧೨—೦
[illegible] (ಸಟೀಕ)	..	೦—೩—೦
[illegible]		೦—೫—೦
[illegible]		೦—೪—೦
[illegible]	..	೦—೧೪—೦
[illegible]	.	೦—೬—೦
[illegible]	.	೦—[illegible]—೦
ವೈದ್ಯಸಾರಸಂಗ್ರಹ	.	೫—೦—೦
ಕನ್ನಡ ಗ್ರಂಥಗಳು		
[illegible]	..	೦—೬—೦
[illegible]	.	೦—೪—೦
[illegible]		೦—೩—[illegible]
[illegible]	.. .	೦—೨—[illegible]
[illegible]	.	೦—೪—೦
[illegible]	...	೦—೨—೦
[illegible]	..	೦—೬—೬
[illegible]	..	೦—೨—೬
[illegible]	...	೦—೭—೦
[illegible]	.	೦—೩—೦
[illegible]		೦—೨—೦
[illegible]	.	೦—೦—[illegible]
[illegible]		೧—೦—[illegible]
[illegible]	.	೨—೦—೦
[illegible]	.	೦—೧೨—೦
[illegible]	..	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	..	೦—೮—೦
[illegible] ಸಂಚಿಕೆ		೦—೮—೦
[illegible]	..	೦—೮—೦
ಸಂಸ್ಕೃತ [illegible] ಗ್ರಂಥಗಳು		
[illegible]	..	೦—೩—೦
[illegible]	.	೦—೫—೦
[illegible]	...	೦—೨—೬
[illegible]		೦—೨—೬
[illegible]		೦—೦—[illegible]
[illegible]	...	೦—೧—[illegible]
[illegible]	..	೦—೧—

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಅಂಡ್ ಕೋ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತೆರಗನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತರಹಾ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೦ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ್.

ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲಿ ಮುಖ್ಯವಾದ ಮನಶ್ಶುದ್ಧಿ ಯುಂಟಾಗುವವಕ್ಕಾಗಿ ಭಗವತ್ಸ್ವರೂಪಿಯಾದ ಪತಂಜಲಿ ಮಹರ್ಷಿಯಿಂದ ಪ್ರಣೀತವಾದ ಅಷ್ಟಾಂಗಯೋಗ ಯುಕ್ತವಾದ ಪಾತಂಜಲ ಯೋಗಸೂತ್ರಗಳು ಶ್ರೀಮನ್ಮಹಾರಾಜಾಧಿರಾಜ ಭೋಜರಾಜ ಕೃತವಾದ ರಾಜಮಾರ್ತಾಂಡವೆಂಬ ವ್ಯಾಖ್ಯಾನ, ಪರಮಹಂಸೇತ್ಯಾದಿ ರಾಮಾನಂದ ಸ್ವಾಮಿಗಳಿಂದ ವಿರಚಿಸಲ್ಪಟ್ಟ ಮಣಿಪ್ರಭೆಯೆಂಬ ವ್ಯಾಖ್ಯಾನ, ಈ ಪ್ರಭಯವ್ಯಾಖ್ಯಾಸಹಿತವಾಗಿಯೂ, ಹಠರಾಜಯೋಗಾಭ್ಯಾಸಿಗಳೆಂಮಾಡಿ ಕೃತಕೃತ್ಯರಾಗುವಸಪ್ಪುರುಷರಿಗೆ ಸುಲಭವಾಗಿ ಸಮಸ್ತಯೋಗ ರಹಸ್ಯಗಳಂತಿಳಿಯುವವಕ್ಕಾಗಿ ಪರಮ ಸಿದ್ಧಾಗ್ರೇಸರರಾದಸ್ವಾತ್ಮಾ ರಾಮಯೋಗೀಂದ್ರರಿಂದ ವಿರಚಿತವಾದ ಹಠಯೋಗ ಪ್ರದೀಪಿಕೆ ಯೆಂಬ ಮಹಾ ಪುರಾತನವಾದ ಗ್ರಂಥವು ಪರಮ ಹಂಸೇತ್ಯಾದಿ ಬ್ರಹ್ಮಾನಂದರವರಿಂದ ವಿರಚಿತವಾದ ಜ್ಯೋತ್ಸ್ನ ಎಂಬ ವ್ಯಾಖ್ಯಾನ ಸಮೇತವಾಗಿ ಕನ್ನಡಅಕ್ಷರಗಳಿಂದ ಮೈಸೂರು ಗವರ್ನಮೆಂಟಿ ಪ್ರೆಂಟಿಂಗ್ ಆಫೀಸಿನಲ್ಲಿ ಮುದ್ರಿಸಲ್ಪಟ್ಟಿರುತ್ತಿವೆ.

ಸದರೀ ಪುಸ್ತಕಗಳನ್ನು ಪಡೆಯಲಪೇಕ್ಷೆಯುಳ್ಳವರು ಬೆಂಗಳೂರು ಗವರ್ನಮೆಂಟ್ ಗರ್ಲ್ಸ್ ಸ್ಕೂಲ್ ಹೆಡ್ ಮ್ಯಾಸ್ಟರಾದ ಹಿ. ನರಸಿಂಹಶಾಸ್ತ್ರಿಗಳಿಗೆ ಈ ಕೆಳಗೆ ಕಂಡ ಚಾರ್ಜನ್ನು ಕಳುಹಿಸಿ ಪಡೆಯಬಹುದು.

ಪಾತಂಜಲ ಯೋಗಸೂತ್ರ ಪ್ರತಿ ೧ಕ್ಕೆ	೧—೦—೦
ಹಠಯೋಗಪ್ರದೀಪಿಕೆ ಪ್ರತಿ ೧ಕ್ಕೆ	೧—೪—೦

ಒಟ್ಟಾಗಿ ಪುಸ್ತಕಗಳನ್ನಪೇಕ್ಷಿಸತಕ್ಕವರಿಗೆ ಸೇಕಡಾ ೧೨॥ ರೂಪಾಯಿ ಮೇರಿಗೆ ಕಮಿಷನ್ ಕೊಡಲ್ಪಡುವದು. ಪೋಸ್ಟೇಜ್ ರೇಜಿಸ್ಟರಿಗಳು ಕಳುಹಿಸತಕ್ಕವರು ದೊ॥ ೧ಕ್ಕೆ ೧ ಆಣೆಯಂತೆ ಡಿಸ್ಕೌಂಟ್ ಸೇರಿಸಿ ಕಳುಹಿಸಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 14, 1885

೧೮೮೫ನೇ ಸೆಪ್ಟಂಬರ್ ೧೪ನೇ ತಾ॥ ಸೋಮವಾರ

ಓ॥ ಸರ್ವಜ್ಞತಾಂಶವನಿವಾಕ್ಪಟುತಾಂಪ್ರಸೂತೆ [illegible] [illegible]

WHO IS TO ACCOUNT FOR?

"ದೂರಸ್ಥಾಃಪರ್ವತಾರಮ್ಯಾ ಸಮೀಪಸ್ಥಾಸ್ತುಬರ್ಬರಾಃ ॥" ಎಂಬ ಲೋಕೋಕ್ತಿಯು ಇಂದ್ಯದೇಶದ ನೇಟಿವ್ ಸಂಸ್ಥಾನಗಳ ವಿಷಯದಲ್ಲೀಗ ಪ್ರಾಯಶಃ ಉಪಯೋಗಿಸಲ್ಪಡಬಹುದಾಗಿರುತಿದೆ. ಈ ಸಂಸ್ಥಾನಗಳ ವಿಷಯವಾಗಿ ವೃತ್ತಾಂತಪತ್ರಿಕೆಗಳ ಮೂಲಕವಾಗಿಯೂ, ಸರ್ಕಾರೀ ರಿಪೋರ್ಟುಗಳ ಮೂಲಕವಾಗಿಯೂ ಬರುವ ವೃತ್ತಾಂತಗಳೆಷ್ಟು ಮೋಹಕಗಳಾಗಿರುತಿವೆ ಯೋ ಅವುಗಳ ಆಂತರಾಳಕ ಸ್ಥಿತಿಯಂ ಒಳಹೊಕ್ಕು ನೋಡಿದರೆ ಅಷ್ಟೇ ಸ್ಪಷ್ಟ ಅದು ದುಸ್ಸಹವಾದದ್ದಾಗಿರುತಿದೆ. ನವನಾಗರಿಕರಾದ ನೇಟಿವ್ ಅರಸರ ವಿಲಕ್ಷಣ ರಾಜ್ಯತಂತ್ರಕ್ರಮದಲ್ಲಿ ಈಗ "ಮಾಡಲ್ ನೇಟಿವ್ ಸ್ಟೇಟ್ಸ್"ಗಳೆನ್ನಿಸಿಕೊಂಡಿರುವ, ಮೈಸೂರು, ಹೈದರಾಬಾದ್, ಇಂದೂರ್ ಗ್ವಾಲಿಯರ್, ಬರೋಡಾ, ತಿರುವಾಂಕೂರ್ ವಗೈರೆ ಸಂಸ್ಥಾನಗಳೆಲ್ಲವೂ ಸ್ವಲ್ಪ ಹೆಚ್ಚುಕಡಮೆಯಾಗಿ ಸಮಾನಸ್ಥಿತಿಯೊಳಿರುತವಿವೆ. ಸಾರ್ವತ್ರಿಕವಾದ ಇಂತಾ ಸ್ಥಿತಿಗೆ ಅಲ್ಲಿನ ಪ್ರಭುತ್ವಕ್ರಮ ವಿನಾ ಪ್ರಜೆಗಳ ಸ್ಥಿತಿಯನ್ನಾಗಲಿ, ದೇಶದ ಆದಾಯವ್ರಯವನ್ನಾಗಲಿ, ಕಾರಣತ್ವೇನ ಹೇಳುವದಕ್ಕೆ ನಮ್ಮ ಮನ ಒಪ್ಪುವದಿಲ್ಲವು. ಈಗ ಹೈದರಾಬಾದ್ ಸಂಸ್ಥಾನವು ವಿಸ್ತೀರ್ಣದಲ್ಲಿಯೂ ಪ್ರಜಾ ಸಂಖ್ಯೆಯಲ್ಲಿಯೂ, ಸಂಪತ್ತಿನಲ್ಲಿಯೂ, ಗೌರವದಲ್ಲಿಯೂ, ಇತರ ಸಂಸ್ಥಾನಗಳಲ್ಲೆಲ್ಲ ಮೊದಲನೆಯದಾಗಿರುತಿದೆ. ಇದರ ವಿಷಯದಲ್ಲಿ ಬ್ರಿಟಿಷ್ ಗವರ್ನಮೆಂಟಿನವರಿಗೆ ಸಹ ತಾದೃಶಭಾವವೇ ಉಂಟಾಗಿದೆಯೆಂದು ಹೇಳುವದಕ್ಕೆ ಅವರ ವರ್ತನಗಳೇ ಸಾಕಾದ ದೃಷ್ಟಾಂತಗಳಾಗಿರುತಿವೆ, ಹ್ಯಾಗಂದರೆ, ಮೈಸೂರು ಮತ್ತು ಬರೋಡೆ ಸಂಸ್ಥಾನಗಳ ಆಧಿಪತ್ಯಗಳಂ, ಆಯಾ ಮಹಾರಾಜರಿಗೊಪ್ಪಿಸಲ್ಪಡಬೇಕಾದ ಸಂದರ್ಭ ಪ್ರಾಪ್ತವಾದಾಗ ಅವು ಕ್ರಮಪ್ರಕಾರ ಮದರಾಸ್ ಮತ್ತು ಮುಂಬೈ ಪ್ರಸಿಡೆನ್ಸೀ ಗವರ್ನರ್‌ಗಳಿಂದ ಕೊಡಲ್ಪಟ್ಟವು. ಆದರೆ ಇದರಿಂದ ಸದರೀ ಸಂಸ್ಥಾನಾಧಿಪತಿಗಳ ಪ್ರಾಭವಕ್ಕೆ ನ್ಯೂನತೆಯು ಬಾಡುತೆ ನಾವು ಯಾವಾಗಲೂ ಹೇಳಲಾರೆವು. ಪರಂತು ಈ ಮಹಾರಾಜರುಗಳ ವಿಷಯದೊಳು ಮಾತ್ರ ಪ್ರತ್ಯಾಮ್ನಾಯವಾಗಿ ಬೇರೊಬ್ಬರನ್ನು ಕಳುಹಿಸುವಂತೆ ಪರಿಣಮಿಸಿದ ಅಂಶವು ಕೇವಲ ಸುಲಭವಾಗಿ ಮರೆಯತಕ್ಕದ್ದಲ್ಲವು. ನಿಜಾಮರ ಪಟ್ಟಾಭಿಷೇಕಕ್ಕೆ ವೈಸ್‌ರಾಯರವರು ಸಾಕ್ಷಾತ್ತಾಗಿ ಬಂದು ರಾಜ್ಯಾಧಿಪತ್ಯವ ನೊಪ್ಪಿಸಿದ್ದಕ್ಕೆ ಸಂದರ್ಭೋಚಿತಗಳಾದ ಕಾರಣಗಳು ಅನೇಕ ಕಲ್ಪಿಸಲ್ಪಟ್ಟಾಗ್ಯೂ ಮೇಲೆ ಕಂಡ ಕಾರಣವೂ ಒಂದೆಂದು ಜನಗಳು ಎಣಿಸದಿರಲಾರರು. ಇದೀಗ ನಮಗೆ ವಿವಕ್ಷಿತವಾದ ವಿಷಯವಲ್ಲವಾಗಿ ಇದರ ವಿಚಾರವೀಗ ಅನಾವಶ್ಯಕವಾದದ್ದು. ಆದರೆ ಹೈದರಾಬಾದ್ ಸಂಸ್ಥಾನಕ್ಕೆ ಈಗ ಸಕಲಾಂಶದಲ್ಲಿಯೂ ಉಂಟಾಗಿರುವ ಪ್ರಾಶಸ್ತ್ಯಕ್ಕೆ ಅನುಗುಣವಾದ ಸ್ಥಿತಿಯೊಳದು ಇದೆಯೋ ಇಲ್ಲವೋ ಯೆಂಬ ಅಂಶವೀಗ ತಿಳಿಯಬೇಕಾದ್ದಾಗಿರುತಿದೆ. ಸದರೀ ಸ್ಥಿತಿ ಯೆಂಬದು ಅಲ್ಲಿನ ಪಾಲನಾಕ್ರಮಕ್ಕೆ ಸಂಬಂಧಿಸಿದ್ದಾಗಿರುವದರಿಂದ ಅದು ಹ್ಯಾಗಿದೆಯೆಂದು ವಿಚಾರಿಸಲಾಗಿ, ಕೇವಲ ಅಸಮಾಧಾನದೊಡನೆ ಪ್ರಜೆಗಳು ಚಿಂತಿಸುವ ತಾ ಅಂತಗಳೇ ಅಲ್ಲಿ ತೋರಗಾಗುತಿವೆಯಲ್ಲದೆ ಬಹಳ ವಿರುದ್ಧಾಭಿಪ್ರಾಯಗಳು ಸಹ ವ್ಯಕ್ತವಾಗುತಿವೆ. ಇದಕ್ಕೆ ದೃಷ್ಟಾಂತವಾಗಿ ಏತದ್ವಿಷಯ ಮಕುರಿತು ಹೈದರಾಬಾದಿನಿಂದ ಮದರಾಸಿನ ಸ್ಟಾಂಡರ್ಡ್ ಪತ್ರಿಕೆಗೆ ಬರೆದ ಒಬ್ಬ ದೊಡ್ಡಮನುಷ್ಯರ ಲೇಖನಾಭಿಪ್ರಾಯವನ್ನು ಸಂಗ್ರಹವಾಗಿ ಇದರಡಿ ತಿಳಿಸುವೆವೆಂದರೆ.—

ಇಂಡ್ಯದೇಶದ ನೇಟಿವ್ ರಾಜ್ಯಗಳಲ್ಲಿ ಹೈದರಾಬಾದ್ ಸಂಸ್ಥಾನವು ಉತ್ಪತ್ತಿಯಲ್ಲಿಯೂ, ವಿಸ್ತೀರ್ಣದಲ್ಲಿಯೂ, ಪ್ರಜಾ ಸಂಖ್ಯೆಯಲ್ಲಿಯೂ, ಉತ್ಕೃಷ್ಟವಾದ್ದಾಗಿದೆಯೆಂಬ ಅಂಶದೊಳು ಲೇಶವೂ ಸಂದೇಹವಿಲ್ಲವು. ಪರಂತು ಇತರ ವಿಷಯಗಳೊಳಗೆ ತಿರುವಾಂಕೂರ್, ಭೂಪಾಳ್, ಬರೋಡಾ ಮತ್ತು ಇಂದೂರ್ ಸಂಸ್ಥಾನಗಳಿಗೆ ಸಮಾನವಾಗಿರುವದೆಂದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುವೆವು. ಸದರೀ ಸಂಸ್ಥಾನಗಳೊಳು ಏರ್ಪಟ್ಟಿರುವ, ರಾಜ್ಯತಂತ್ರಜ್ಞರಾಗಿಯೂ, ದೃಢಾಧ್ಯವಸಾಯವುಳ್ಳವರಾಗಿಯೂ ಇರುವ ಪಾಲಕರಿಂದಲೂ, ಸ್ವಲ್ಪ ಹೆಚ್ಚು ಕಡಿಮೆಯಾಗಿ ಬುದ್ಧಿಶಾಲಿಗಳಾಗಿಯೂ, ಪ್ರಸಂಶಕರಾಗಿಯೂ, ಇರುವ ಮಂತ್ರಿಗಳಿಂದಲೂ ಅವು ಅಸಮಾನವಾದ "ಮಾಡೆಲ್ ನೇಟಿವ್ ಸ್ಟೇಟ್ಸ್" ಗಳೆಂಬ ಪ್ರಶಸ್ತ್ಯವನ್ನು ಪಡೆದವು ಋಣಪೀಡಿತವಾದದ್ದಾಗಿಯೂ, ನಿರ್ಧನಕೋಶವುಳ್ಳದ್ದಾಗಿಯೂ ಇರುವ ಮೈಸೂರು ರಾಜ್ಯ ಒಂದನ್ನು ಮಾತ್ರ ಹೈದರಾಬಾದಿಗೆ ಸಮಾನನೆಂದು ನಾವು ಸುಲಭವಾಗಿ ಹೇಳಬಹುದಾಗಿದೆ. ಋಣವಿಷಯದೊಳೊಂದರಲ್ಲಿ ಮಾತ್ರ ಉಪಮೇಯವಾದ ಹೈದರಾಬಾದಿಗೂ ಉಪಮಾನವಾದ ಮೈಸೂರಿಗೂ ಸಂಪೂರ್ಣ ಸಮನ್ವಯವಾಗಬಹುದ್ದರೂ ಇತರಾಂಶಗಳೊಳಗೆ ಅವೆರಡೂ ಭಿನ್ನ ಸ್ವರೂಪವುಳ್ಳವುಗಳಾಗಿರುತ್ತವೆ. ಮೈಸೂರು ಸಂಸ್ಥಾನದಲ್ಲಿ ಅದರ ಆಧಿಪತ್ಯಕ್ಕೊಳಪಟ್ಟ ದೊಡ್ಡ ಅಧಿಕಾರಗಳೆಲ್ಲ ಮದರಾಸ ಪ್ರಾಂತದವರಿಂದಾಕ್ರಮಿಸಿ ಕೊಳ್ಳಲ್ಪಟ್ಟದ್ದಾಗಿರುತ್ತವೆ. ಹೈದರಾಬಾದಿನಲ್ಲಾದರೋ, ಇಲ್ಲಿನ ಸರ್ಕಾರ್ ನೌಕರಿಗಳೆಲ್ಲ ವಿದ್ಯಾಹೀನರಾದಿವಿಲ್ಲದ ಮುಸಲ್ಮಾನರದಾಗಿ ಅಂತವರನ್ನು ಮುಂದಕ್ಕೆ ತರುವವರಲ್ಲಿ ಮೌ|| ಮಹದಲ್ಲೀಖಾನರು ಅಗ್ರಿಮರಾಗಿಯೂ ದೃಢಸಂಕಲ್ಪವುಳ್ಳವರಾಗಿಯೂ ಇರುತ್ತಾರೆ ಸದರೀ ಮಹದಲ್ಲೀ ಖಾನ್ ಸಾಹೇಬರವರು ಹೈದರಾಬಾದಿನಲ್ಲಿರುವ ಒಬ್ಬ ಸಾಮಾನ್ಯರೆಂದು ಯಾರೂ ತಿಳಿಯಲಾಗದು. ಇವರು ನಿಜಾಮರವರ ಮುಖ್ಯಮಂತ್ರಿಯವರಾಗಿಯೂ, ಪ್ರಸಿದ್ಧರಾದ ಸಾಲರ್ ಜಂಗರವರ ಪುತ್ರರಾಗಿಯೂ ಇರುತ್ತಾರೆ ಇದಲ್ಲದೆ ಇವರು ಒಳ್ಳೆಯ ರಾಜ್ಯತಂತ್ರಜ್ಞರೆಂದು ಇಂಡ್ಯಗವರ್ನಮೆಂಟಿನವರಿಂದ ಭಾವಿಸಲ್ಪಟ್ಟಿರುವದೇಯೂ, ಶೀಘ್ರದಲ್ಲಿವರಿಗೆ ಸಿ. ಎಸ್. ಐ ಎಂಬ ಅಲ್ಕಾಬ ಕೊಡಲ್ಪಡುವುದೆಯೂ ಕೇಳುತ್ತೇವೆ. ಹೈದರಾಬಾದ್ ಸಂಸ್ಥಾನದ ಪಕ್ವತರಪಾಲಕರಾದ ನಿಜಾಮರವರೂ ಇವರ ಮಂತ್ರಿಯವರ ವಿಸ್ತಾರವಾದ ಈ ರಾಜ್ಯವನ್ನು ಪಾಲಿಸಲಿಕ್ಕೆ ಸಾಕಾದಷ್ಟು ಸಮರ್ಥರಾಗಿದಾರೆಂದು ತಿಳಿಸಲ್ಪಡಬಹುದು ಪರಂತು ಇವರ ಸಾಮರ್ಥ್ಯವನ್ನು ಕಾರ್ಯತಃ ವ್ಯಕ್ತಪಡಿಸುವಂತಾದ್ದೇನಾದರೂ ಪ್ರಂಟಿಮಂತಲಾಗದೆ, ಇವರ ಸಾಮರ್ಥ್ಯವಿಷಯದಲ್ಲಿ ಘನವಾ ಹೊಂದಿದ ಸಾಬಕ್ ವೈಸ್ರಾಯಿಯವರು ಪಡೆದ ಸದ್ಭಾವಕ್ಕೆ ಇವರು ಅರ್ಹರಾಗಿರುತ್ತಾರೆಯೆಂತಲಾಗಲಿ ಯಾರಾದರೂ ಹೇಳಬಹುದು. ಪರಂತು ಅವರಿಗೆ ಹೇಳಬೇಕಾದ ಪ್ರತ್ಯುತ್ತರವಾತ್ರ ಯೆರಡು ಅಕ್ಷರವುಳ್ಳದ್ದಾಗಿರುತದೆ. ನಿಜಾಮರವರಿಗೆ ಪಟ್ಟಾಭಿಷೇಕವಾದದು ಮೊದಲು ಹೈದರಾಬಾದ್ ಸಂಸ್ಥಾನದ ಆಡಳಿತಗಳನ್ನು ನೋಡಿದಾಗ ವಿವೇಕಾನುಭವ ಪೂರ್ವಕವಾಗಿ ದೇಶವನ್ನಾಳುವವಕ್ಕೆ ಅಸಮರ್ಥರೆನ್ನಿಸಿಕೊಂಡಿರುವವರಾಗಿಯೂ, ತಮ್ಮ ಅವ್ಯವಹಾರದಕೆಯಿಂದ ಅತ್ಯಂತಿಕವಾಗಿ ನಿವೃತ್ತರಾಗವವರಾಗಿಯೂ, ತಮಗೆ ಲಭಿಸಿರುವ ಪ್ರಾಶಸ್ತ್ಯಗಳ ಸ್ವರೂಪಾಕಭಿಜ್ಞರಾಗಿಯೂ ಯಿರುವ ಇಬ್ಬರು ಬಾಲಕರ ಸ್ವಾಧೀನಕ್ಕೆ ವಿಸ್ತಾರವಾದ ಒಂದು ರಾಜ್ಯದ ಆಧಿಪತ್ಯವನ್ನೊಪ್ಪಿಸಿದ್ದಕ್ಕಾಗಿ ಲಾರ್ಡ್ ರಿಪ್ಪನ್‌ಯವರನ್ನು ನಾವೆಷ್ಟುವಿಧದಿಂ ನಿಂದಿಸಿದರೂ ಸಾಲದೆಯಿದೆ. ಮಹೋನ್ನತವಾದ ಮತ್ತು ವಿಶೇಷಜವಾಬ್ದಾರೀ ಯುಳ್ಳ ಅಧಿಕಾರವನ್ನು ಸ್ವಯಂ ವಿವೇಕದೊಡನೆ ನಿರ್ವಹಿಸಲಿಕ್ಕೆ ಇವರಿಬ್ಬರೂ ಸಮರ್ಥರೆಂದು ಕಂಡುಬರುವತನಕ ಇವರನ್ನೊಂದು ನಿರ್ಬಂಧಕ್ಕೊಳಪಡಿಸುವಂತಾ ಯಾವವಿಧ ಏರ್ಪಾಡನ್ನಾದರೂ ರಾಜ್ಯತಂತ್ರಜ್ಞರಾದ ಲಾರ್ಡ್ ರಿಪ್ಪನ್‌ಯವರು ಸುಲಭವಾಗಿ ಮಾಡಬಹುದಾಗಿತ್ತು. ಇಂತಾ ಏರ್ಪಾಡುಯಾವದಾದರೊಂದು ಮಾಡಲ್ಪಟ್ಟದ್ದರೆ ರನಕ್ಕಲಿ ಹೈದರಾಬಾದ್ ಪ್ರಮುಖರಾದವರಿಗೆಲ್ಲ ಬೇಕಾದಷ್ಟು ವ್ಯಾಪಾರಗಳುಂಟಾಗಿ, ಈಗ ಸರ್ವತ್ರ ತಲೆದೋರಿರುವಂತಾ ಕಲಹಗಳೂ ಕಕ್ಷಿಪ್ರಯುಕ್ತವಾದ ರಾಗದ್ವೇಷಗಳೂ ಪ್ರಬಲಿಸಾಗದಿರಲಿಕ್ಕೆ ಕಾರಣವಾಗಿರುವದು, ಅಥವಾ ಇಲ್ಲಿ ಪ್ರಮುಖರಾಗಿರುವವರನ್ನೆಲ್ಲ ಕೌನ್ಸಿಲರ್‌ಗಳನ್ನಾಗಿಯೂ ದೇಶ ಕ್ಷೇಮಾಭಿವರ್ಧಕರನ್ನಾಗಿಯೂ ಮೊಕರರ್ ಮಾಡಿದ್ದರೆ ಅದೊಂದುಬಗೆ ಉತ್ತಮವಾಗಿರುವದು. ಕಡೆಗೆ ಅದಾವುದೂ ಇಲ್ಲದೆಹೋಯಿತು. ಈಗ್ಯೆ ಒಂದುಸಂವತ್ಸರಕ್ಕಿಂತ ಮೇಲ್ಪಟ್ಟು ನಿಜಾಮರವರೂ ಅವರ ಮಂತ್ರಿಯವರು ಸಹ ವಿಶೇಷ ಪರಿಭಾವನೆಯೊಡನೆ ಲಾರ್ಡ್ ರಿಪ್ಪನ್‌ಯವರಿಂದ ಅಧಿಕಾರಪದದೊಳು ನೆಂಗೊಳಿಸಲ್ಪಟ್ಟಿರುತ್ತಾರೆ. ವಿವೇಕಪೂರ್ವಕವಾದ ಒಂದು ಕಾರ್ಯವನ್ನು ಮಾಡಿ ತನ್ಮೂಲಕ ಒಳ್ಳೇ ಪಾಲಕರೆಂಬ ಪ್ರಾಶಸ್ತ್ಯವು ನಿಜಾಮರಿಗಾಗಲಿ ಅವರ ಮಂತ್ರಿಯವರಿಗಾಗಲಿ ಇದುವರಿವಿಗೆ ಪ್ರಾಪ್ತವಾದಂತೆ ನಮ್ಮ ಜ್ಞಾಪಕದೊಳಿಲ್ಲವು ಹಾಗೂ ಏನಾದರೊಂದದ್ದರಲ್ಲಿ ಎಂದರವಕ್ಕಿಂತಹಾಸ್ತೀಯಿಲ್ಲವು ಪೂರ್ವದ ರಿವಿನ್ಯೂಬೋರ್ಡನ್ನು ಮರ್ಕೋಫ಼ ಮಾಡಿ ಅದಕ್ಕೆ ಪ್ರತಿಯಾಗಿ ಸುಬಾಗಳನ್ನೇರ್ಪಡಿಸಿದ್ದು, ನೌಕರಿಯ ಆವಶ್ಯಕತಾಸಾವಶ್ಯಕತೆಯನ್ನು ಸಹ ಚಿಂತಿಸದೆ ಹೈದರಾಬಾದ್ ಸಂಸ್ಥಾನದ ನಷ್ಟಕ್ಕಾಗಿ ಇಲ್ಲಿನ ಮಾಸಮುಷಿರ್ಯರ್‌ಗಳ ಪ್ರಾಬಲ್ಯವನ್ನು ವೃದ್ಧಿಪಡಿಸುತಬಂದದ್ದು, ಸರ್ಕಾರೀ ಮತ್ತು ಇತರವಿಷಯಕವಾದ ಅರ್ಜೀಗಳನ್ನೂ ಕಾಗದಗಳನ್ನೂ ಮಂತ್ರಿಯವರಿಗೆ ಬರೆಯದೆ ಅವರಪ್ರೈವೇಟಸೆಕ್ರಿಟರಿಯವರಿಗೇ ಬರೆಯಬೇಕ್ಕೆಂದು ಸರ್ಕಾರೀ ಗೆಜೆಟಿನಲ್ಲಿ ಘೋಷಿಸಿಮಾಡಿದ್ದು. ಸಂಸ್ಥಾನದಿಂದ ತಮಗೆ ಬರಬೇಕಾದ ಮೊಬಲಗನ್ನು ಕೊಡಬೇಕೆಂದು ಸುಲ್ತಾನ್ ನವಾಸ್ ಜಂಗರವರು ವಿನಯವಿಧವಾಗಿ ಕೇಳಿಕೊಂಡಾಗ್ಯೂ ಅದಕ್ಕೆ ನಿರಾಕರಿಸಿ ಕೊಡದೆ ಅವರಿಗೆ ಮನ್ಸಬ್ ಜಾಗೀರ್ ನೇಮಿಸಿ ಅವರನ್ನು ದೇಶದಿಂದ ಗಡೀಪಾರ್‌ಮಾಡಿದ್ದು, ಇವು ವಿನಾ ಬೇರಿಲ್ಲವು. ಮೇಲೆ ತಿಳಿಸಲ್ಪಟ್ಟ ಒಂದು ಮತೆ ಕೆಲಸವನ್ನು ನೆರವೇರಿಸಿದವರೇ ಮಂತ್ರಿಯವರು ತಮ್ಮಕೆಲಸದಲ್ಲಿ ಸ್ವಲ್ಪಟ್ಟು ಅಕ್ಕರೆಯುಳ್ಳವರಾಗಿ ಹಾರೆಯೋ ಅದು ವ್ಯಕ್ತವಾಗದಿರುವದಿಲ್ಲವು ಮಂತ್ರಿಯವರಿಗೂ ಅವರ ಪ್ರಭುವಿಗೂ ಅಧಿಕಾರಪ್ರಾಪ್ತವಾದದು ಮೊದಲು ರಮ್ಯ ಪಾಲನೆಗೊಳಗಾದ ಡಿಸ್ಟ್ರಿಕ್ಟುಜಾತ ಪ್ರಜೆಗಳಸ್ಥಿತಿ ಹ್ಯಾಗಿದೆಯೆಂದು ತಿಳಿದುಕೊಳ್ಳುವದಕ್ಕೆ ಏತಾವತ್ಪರ್ಯಂತ ಪ್ರಯತ್ನಪಟ್ಟವರಲ್ಲವು. ಬಡಕಾಯಿಗಳಾದ ರೈತರಮೂಲಕ ಪಸೂಲ್‌ಮಾಡಲ್ಪಟ್ಟು ಕೇವಲವಾಗುವಂತಾ ದ್ರವ್ಯಾತಿವ್ಯಯಕ್ಕೆ ದೇಶಸಂಚಾರವು ಉಲ್ಲಾಸಾರ್ಥವೆಂದು ಭಾವಿಸುವರೆಂಬದರೊಳೇನೂ ಸಂದೇಹವಿಲ್ಲವು. ತಮ್ಮ ಆಧಿಪತ್ಯಕ್ಕೊಳಪಟ್ಟಿರುವ ತಾಬೇದಾರಿಉದ್ಯೋಗಸ್ಥರು ಪರಸ್ಥಳಗಳಲ್ಲಿ ತಮ್ಮಅಧಿಕಾರವನ್ನು ಹ್ಯಾಗೆ ಚಲಾಯಿಸುತ್ತಾರೆಯೋ ಅವನ್ನು ಒಂದು ಸಲ ಉಲ್ಲಾಸಾರ್ಥವಾದರೂ ಪಸನಿಷ್ಟು ಕ್ಕೊಂಡುಯೋಗಿನೋಡಿ ಬರುವರೆಂದರೆ ಆಯೋಚನೆ ಸಹ ಉದ್ಭಂಗವಿಲ್ಲವು, ಎಂಬದು.

ಈ ಸಂಸ್ಥಾನದ ವಿಷಯದಲ್ಲಿ ವಿರತ್ಸನಾನವಾದ ಇನ್ನೂ ಅನೇಕ ಅಸಮಾಧಾನಕರಗಳಾದ ವೃತ್ತಾಂತಗಳು ಆಗಿಂದಾಗ್ಯೆ ನಮ್ಮ ಕೇಳ್ವಿಕೆಗೆ ಬರುತಲಿರುತವೆ ಬಹಳ ಗಲಭೆಯಾಗಿದ್ದ ಹೈದರಾಬಾದ್ ಸಂಸ್ಥಾನದ ಆಡಳಿತವನ್ನೆಲ್ಲ ತಹಬಂದಿಗೆತೆಂದು ದುಷ್ಟರ ಪ್ರಾಬಲ್ಯವನ್ನೆಲ್ಲ ಅತ್ಯಂತಿಕವಾಗಿ ಅಡಗಿಸಿ ಸಕಲಾಂಶದಿಂದಲೂ ಜನಗಳು ಕೊಂಡಾಡುವಕ್ರಮದಿ ಪ್ರಭುತ್ವ ಮಾಡುವದಕ್ಕೆ ಪ್ರಖ್ಯಾತ ಮಂತ್ರಿಯವರ ತಂದೆಯಾದ ಸರ್ ಸಾಲಾರ್ ಜಂಗರವರಿಗೆ ಯೆಷ್ಟು ಕಾಲ ಹಿಡಿಯಿತೋ ಸ್ವದೇಶೀಯರ ಮತ್ತು ಬ್ರಿಟಿಷ್ ಗವರ್ನಮೆಂಟಿನವರ ಗೌರವ ವಿಶ್ವಾಸಗಳನ್ನು ಸಂಪಾದಿಸಲಿಕ್ಕೆ ಯೆಷ್ಟುಕಾಲ ಶ್ರಮಪಟ್ಟರೋ ಅಷ್ಟು ತ್ವರೆಯೊಳು ಅಷ್ಟು ಸುಲಭವಾಗಿ ಅವರಕುಮಾರರು ಜನಗಳ ಅಪ್ರೀತಿಗಪಾತ್ರರಾಗುತದೆಂಬಳಿಗಳಿಗೆ ಅವಕಾಶ ಉಂಟುಮಾಡುತ ಮನಸ್ವೀವರ್ತಿಸುತ ಹಿಂದಿನ ಕೀರ್ತಿ ಪ್ರಾಶಸ್ತ್ಯಗಳಿಗೆ ಲೋಪವನ್ನುಂಟುಮಾಡುವವರಾಗಿದಾರೆಂಬ ವೃತ್ತಾಂತವನ್ನು ಕೇಳುವದಕ್ಕೆ ನಾವು ಬಹಳ ಅಸಮಾಧಾನವುಳ್ಳವರಾಗಿದ್ದೇವೆ ನಿಜಾಮರವರುತಮಗೆಪ್ರಾಪ್ತವಾಗಿರುವ ಪದವಿಯ ಸ್ವರೂಪವನ್ನು ಪರಿಭಾವಿಸದೆ ಅನ್ಯರ ಇಷ್ಟಾನುಸಾರ ನಡೆಯುವದು ಅವರಿಗೂ ಕೀರ್ತಿಕರವಲ್ಲವು. ಸ್ವಲ್ಪ ಹೆಚ್ಚುಕಡಿಮೆಯಾಗಿ ಸಂಸ್ಥಾನಾಧಿಪತಿಗಳ ಬಾಲ್ಯದಶೆಯೊಳು ಒಪ್ಪಿಸಲ್ಪಟ್ಟ ರಾಜ್ಯಗಳ ಸ್ಥಿತಿಯೆಲ್ಲವೂ ಪರಿಶೀಲನಾರ್ಹ ಕಲ್ಪಿತವಾದಂತೆ ವಿಶ್ವಷ್ಟವೆ ಇವಕ್ಕೆ ಸ್ವರೂಪ ಕರ್ತವ್ಯಜ್ಞಾನಾಭಾವಿಜ್ಞಾತಿಯೇ ಮುಖ್ಯಕಾರಣವು ಇನ್ನುಮೇಲಾದರು ಜಗನ್ನಿಯಂತನು ನೇಟಿವ್ ಸಂಸ್ಥಾನಗಳ ವಿಷಯದಲ್ಲಿ ಇಂತಾ ಅಸಮ ಸ್ಥಾನ ಕಿರಿಗಳಾದ ಪ್ರಕಾಶಿದ್ದಂಗಾಗು ಪಟ್ಟಪಂತೆ ಅನುಗ್ರಹಿಸಬೇಕೆಂದಲೂ ಇಲ್ಲವಾದರೆ ಅವು ಕೇಳಿ ನ್ಯಡ್ಡ ರದಿರುವಂತೆ ಸಂಪೂರ್ಣ ಬಧಿರ್ಯವನ್ನಾದರೂ ನಮಗೆ ಕೃಪೆ ಮಾಡಬೇಕೆಂದು ಕೋರುವೆವು.

A REPLY TO PUNDIT C. RUNGACHARIAR

ವೇದಮೂರ್ತಿ ಗೋವಿಂದಾಚಾರ್ಯರ ಲೇಖನ ಜಮೇಲೆ ಕಳೆದತಿಂಗಳ ೩೧ನೇ ತಾರೀಖಿನ ಈ ಪತ್ರಿಕೆಯಲ್ಲಿ ನಾವು ತಿಳಿಸಿದ ಕೆಲವು ಪ್ರಶ್ನೆಗಳಿಗೆ ಪ್ರತ್ಯುತ್ತರರೂಪವಾಗಿ ಅವರು ಮರಳಿ ಬರೆದ ಕಾಗದವನ್ನು ಈ ಪತ್ರಿಕೆಯ ಪುರವಣಿ ಭಾಗದಲ್ಲಿ ಪ್ರಕಟಿಸಿರುತ್ತೇವೆ

ಆಚಾರ್ಯರವರು ನಮ್ಮ ಅಭಿಪ್ರಾಯವನ್ನು ಖಂಡಿಸಿ ಪತ್ರಿಕಾಮೂಲಕ ತಿಳಿಸಲೆತ್ನಿಸಿದಕ್ಕಾಗಿ ನಾವು ಬಹಳ ಸಂತೋಷಿಸುವೆವು ಪಕ್ಷಪಾತರಹಿತವಾಗಿಯೂ ಗೌರವ್ಯವಾದ ಬಗ್ಗಂಗಳು ನಮ್ಮ ವಿಚಾರಕ್ಕೆ ಸಿದ್ಧವಾಗಿರುವದರಿಂದ ಈ ವಿಷಯದಲ್ಲಿ ಮುಂದೆ ತಂಟೆ ಬೆಳೆಸುವದಕ್ಕೆ ನಮಗೆ ಸ್ವಲ್ಪವೂ ಇಷ್ಟವಿಲ್ಲವು. ಯದ್ಯಪಿ ನಾವು ಅನ್ಯರಿಗೆ ಸಾಧಕವಾದ ಭಾಗವನ್ನು ಸ್ವಪಕ್ಷ ಸಿದ್ಧಾಂತದಬಗ್ಯೆ ತಪರ್ಥಾನ್ [illegible] ದ ಉಪಯೋಗಿಸಿಕೊಂಡೆನೆಂಬ ಭಾವವು ಆಚಾರ್ಯರ ಲೇಖನಮೂಲಕ ಎನುಮ [illegible] ಬರುದಾಗಿ ತಾವನ್ಯರ್ಥಕ್ಕೆ ನಮ್ಮ ಸಮಾಧಾನ ಮಂತಿಳಸಿ ಪ್ರಕೃತವಿಚಾರವನ್ನಿಳಿಗೆಬಿಡುವೆವು

ವೇ|| ಗೋಪಾಲಶಾಸ್ತ್ರಿಗಳಿಗೂ ದಿವಾನ್‌ಬಹದೂರ್ ರಘುನಾಥರಾಯರವರಿಗೂ ನಡೆದ ಪ್ರಸಂಗದಲ್ಲಿ ಸದರೀ ಶಾಸ್ತ್ರಿಗಳ ಅನುಮತಿಯ ಪ್ರಕಾರ ಮುಂಡನಪ್ರಸಂಗವನ್ನು ತಾವು ನಡಿಸಿರುವದಾಗಿ ಈಗ ಆಚಾರ್ಯರವರು ಪತ್ರಿಕಾಮೂಲಕ ಅನ್ಯರಿಗೆ ತಿಳಿಯಪಡಿಸುವಂತೆ ಪರಿಣಮಿಸಿದ್ದಕ್ಕಾಗಿ ನಾವು ಬಹಳ ವಿಷಾದಿಸುವೆವು.

ನಮುನಾಮಾಪಿಗೃಹ್ಣೀಯಾತ್ ಎಂಬ ಶ್ಲೋಕವು ಸಭೆಯಲ್ಲಿ ಪ್ರಶಾತವಿಸಲ್ಪಡಲೇಯಿಲ್ಲವೆಂದು ನಾವು ತಿಳಿಸಲಿಲ್ಲವು. ಪರಂತು ಈಗ ಆಚಾರ್ಯರವರು ಬರೆದಿರುವಪ್ರಕಾರ ಸಭೆಯಲ್ಲಿ ತಿಳಿಸಿದ್ದರೆ ಭಿನ್ನತಂತ್ರವು ಹೊರಗಾಗಿರುವದೆಂದು ಸೂಚಿಸಿವೆವು. ಸುದರ್ಶನೋಚಿತವಾಗಿ ಯೆರಡು ಶ್ಲೋಕಗಳಲ್ಲಿನ ಉಪಯುಕ್ತವಾದ ಭಾಗಗಳನ್ನು ಮಾತ್ರ ತೆಗೆದುಕೊಂಡು ಒಂದೇಸ್ಥಳದಲ್ಲಿ ಉದಹರಿಸಿದ್ದರಿಂದ ಅವನ್ನು ಸ್ವಕೃತವಾದ ಶ್ಲೋಕವೆಂದು ನಾವು ತಿಳಿದುಕೊಂಡದ್ದು ಆಶ್ಚರ್ಯಕರವೆಂದು ಆಚಾರ್ಯರು ವ್ಯಕ್ತಪಡಿಸುತ್ತಾರೆ ಈ ನಿಯಮವು ಅವರಿಗಾಗದದಲ್ಲಿ ಉದಹರಿಸಲ್ಪಟ್ಟಿರುವ ಇತರ ಯಾವಶ್ಲೋಕಗಳಿಗೂ ಸಂಬಂಧಪಡದೆ, ಭಿನ್ನಶ್ಲೋಕಸ್ಥರಾರ್ಧಗಳುಳ್ಳ ಈ ಒಂದುಶ್ಲೋಕಕ್ಕೆಮಾತ್ರ ಕಲ್ಪಿಸಿ ತಿಳಿಸಿರುವ ಸಮಾಧಾನವನ್ನು ಆಚಾರ್ಯರ ಮೇಲಣ ಗೌರವಾತಿಶಯದಿಂದ ನಾವೊಂದುವೇಳೆ ಅಂಗೀಕರಿಸಿದಾಗ್ಯೂ ತಜ್ಞರು ಅದಂ ಸಕಾರಣತ್ವೇನ ಪರಿಗ್ರಹಿಸುವರೆಂಬ ಅಂಶ ನಮಗೆ ಸಂದಿಗ್ಧವಾಗಿದೆ.

ನಾಸ್ಯೋತ್ಪನ್ನಾ ಪ್ರಜಾಸ್ತ್ರೀಷು ಎಂಬ ಶ್ಲೋಕವೂ ಅದರ ಅರ್ಥವು ಸಹ ತಮಗೆ ಸಾಧಕವಾಗಿರುವಂತೆ ಆಚಾರ್ಯರವರು ಬರೆಯುತ್ತಾರೆ ಸದರೀ ಶ್ಲೋಕಕ್ಕೆ ಗಹವಾರದಲ್ಲಿ ನಾವು ಪ್ರಕಟಿಸಿದ ಕುಲ್ಲೂಕಭಟ್ಟಕೃತ ವ್ಯಾಖ್ಯಾನದಲ್ಲಿ ಸಾಪ್ಯೇನಾಂ ನಕ್ವಚಿಟ್ಟಾಸ್ತ್ರೀ ದ್ವಿತೀಯೋಭರ್ತೋಪದಿಶ್ಯತೆ ಎಂಬುವಕಡೆಯೊಳು ನಮ್ಮ ವರ್ಣಸಂಯೋಜಕರಿಂದ "ಪ" ಕಾರವು ಬಿಟ್ಟುಹೋದಕಾರಣ ಈಗ ಆಚಾರ್ಯರವರು ತಮಗೆ ಸಾಧಕವೆಂದು ಹೇಳುವಂತೆ ಪರಿಣಮಿಸಿತು. ಆದರೆ ವ್ಯಾಖ್ಯಾನಕಾರರು ತಿಳಿಸಿರುವ ಅಭಿಪ್ರಾಯಪ್ರಕಾರ (ಸಾಪ್ಯೇನಾಂ ಕ್ವಚಿಟ್ಟಾಸ್ತ್ರೀ ದ್ವಿತೀಯೋಪತಿರ್ಭೋಪದಿಶ್ಯತೆ) ಎಂಬುವ ವಾಕ್ಯಕ್ಕೆ ಪತಿವ್ರತಾ ಸ್ತ್ರೀಗಳಿಗೆ ಉಭಯತ್ರಾ ಎನ್ನಿಸಿಕೊಳ್ಳುವ ಅನ್ಯಪುರುಷರು ಯಾವಶಾಸ್ತ್ರದಲ್ಲಿಯೂ ಗಂಡನಾಗುವಂತೆ ತಿಳಿಸಲ್ಪಡಲಿಲ್ಲವೆಂಬರ್ಥವು. ಈ ವಾಕ್ಯವೂ ವಾಕ್ಯಾರ್ಥವೂ ಹ್ಯಾಗೆ ನಿಜವಾಗುವದೆಂತಲಾಗಲಿ, ಅದು ಕುಲ್ಲೂಕಭಟ್ಟರ ತಾತ್ಪರ್ಯವಾಗಿರಲಾರದೆಂತಲಾಗಲಿ ಹೇಳುವದಾದರೆ ಮುಂಬಯಿಯಲ್ಲಿ ಛಾಪಿಸಲ್ಪಟ್ಟಿರುವ ಕುಲ್ಲೂಕಭಟ್ಟ ವ್ಯಾಖ್ಯಾನ ಸಹಿತ ಮನುಸ್ಮೃತಿಯ ೧೬೨ನೇ ಪುಟವನ್ನು ನೋಡಿದಲ್ಲಿ ನಮ್ಮ ಮಾತು ನಿಜವೆಂದು ತೋರಬಹುದು ಮತ್ತು ಇದು ಕುಲ್ಲೂಕಭಟ್ಟರ ತಾತ್ಪರ್ಯವಲ್ಲದೆ ಆಚಾರ್ಯರು ತಿಳಿಸುವ ಅರ್ಥವೇ ವ್ಯಾಖ್ಯಾತರಿಗೆ ಗ್ರಾಹ್ಯವೆಂದು ಯೆಣಿಸುವದಾದರೆ ಪ್ರಕರಣವಿರುದ್ಧವಾಗಿಯೂ, ಪೂರ್ವೋತ್ತರಾಸಂಬದ್ಧವಾಗಿಯೂ ಅಭಿಪ್ರಾಯವನ್ನು ವ್ಯಕ್ತಪಡಿಸುವ ನಿರ್ಣಯವಿಲ್ಲದವರ ವಾಕ್ಯ ನಮಗೆ ಹ್ಯಾಗೆ ಗ್ರಾಹ್ಯವಾಗುವದು? ಆದಪಡ ನಾವು ಬರೆದ ವ್ಯಾಖ್ಯಾನವು ಆಚಾರ್ಯರಿಗೆ ಯೆಷ್ಟು ಮಾತ್ರವೂ ಸಾಧಕವಾಗಲಾರದು.

ವಾನನನಿಷಯವಾಗಿ ಸಭೆಯಲ್ಲಿ ಪ್ರಸ್ತಾಪಿಸಲ್ಪಡಲಿಲ್ಲವೆಂದು ಆಚಾರ್ಯರೇ ಈಗ ಹೇಳಿರುವದರಿಂದ ಅದರವಿಚಾರ ನಮಗೆಬೇಡವು. ಆದರೆ ಈ ಅಂಶವನ್ನು ಅಸಭೆಗೆಬಿಟ್ಟವರೇ ನಿರ್ಣಯಿಸಿಕೊಳ್ಳುವರು.

ಔರಸಪುತ್ರನವಿಷಯವಾಗಿ ನಾರಾಯಣಶ್ಲೋಕಾಭಿಪ್ರಾಯವನ್ನು ಹೆತ್ತಿದಸಮಯದಲ್ಲಿ ಸಭೆ ಬರಪಾಸ್ತಾದವರಿಂದ ಅದನ್ನು ಅವಶ್ಯಕವೆಂದು ತಿಳಿದು ತಮ್ಮ ಲೇಖನದಲ್ಲಿ ಉದಹರಿಸಿರುವಂತೆ ಆಚಾರ್ಯರು ಸೂಚಿಸಿದ್ದರಿಂದ ಇದು ಬಳಿಕ ಪ್ರಾಪ್ತವಾದ ವಿಚಾರವೆಂದು ತಿಳಿಸಿದ ನಮ್ಮ ಮಾತನ್ನು ಅವರೇ ಅಂಗೀಕರಿಸಿದಂತೆ ಆಯಿತು. ಆಜನೇಯಾಬಗಳಿಗೆ ವ್ಯಭಿಚಾರದೋಷವನ್ನು ಕಲ್ಪಿಸುವದಕ್ಕೆ ನಮಗೆ ಯೆಷ್ಟುಮಾತ್ರವೂ ಇಷ್ಟವಿಲ್ಲವು. ಆದರೆ ಔರಸ ಶಬ್ದ ಪ್ರಯೋಗವನ್ನು ಪರಿಗ್ರಹಿಸುವಾಗ್ಯೆ ಹಿಂದೆ ನಾವು ತಿಳಿಸಿದ ವಿಪ್ರತಿಪತ್ತಿಗಳಿಗೆ ಕಾರಣವಾಗುತದೆ. ಮುಖ್ಯವಾಗಿ ವೇದ, ಸದ್ವಿ, ಋಷಿಮೂಲಗಳನ್ನು ಹುಡುಕುತ ಅವರನ್ನು ಉದಾಹರಣತ್ವೇನ ಬೇಡಿಯಿಲ್ಲಸೆಳೆಯುವದಕ್ಕೆ ನಮಗೂ ಇಷ್ಟವಿರುವದಿಲ್ಲವು

ನೋಟಿಸ್.

ತುಮಕೂರಲ್ಲಿರುವ ಕರ್ನಾಟಕಬ್ಯಾಂಕ್ (ಲಿಮಿಟೆಡ್) ಆಫೀಸ್, ಸನ್ ೧೮೮೫ನೇ ಇಸವಿ ಆಗಸ್ಟು ತಾರೀಖು ೧೯ ಮತ್ತು ಸೆಪ್ಟಂಬರ್ ತಾರೀಖು ೨ನೇ ಬುಧವಾರದಲ್ಲಿ ನಡೆದ ಬ್ಯಾಂಕಿನ ಷೇರ್ ಹೋಲ್ಡರ್‌ಗಳ ಪ್ರೊಸೀಡಿಂಗ್ಸ್ ಮೇಲೆ ಇಂಡಿಯನ್ ಕಂಪನೀಸ ಆಕ್ಟ್ ೧೮೬೬ನೇ ಸಾಲು ಪ್ರಕಾರ ವೈಂಡಪ್ ಮಾಡಲ್ಪಟ್ಟಿರುತ್ತೆ. ತಾರೀಖು ೩ನೇ ಸೆಪ್ಟಂಬರ್ ೧೮೮೫ನೇ ಇಸವಿ

S. APPAJI ROW,
ಲಿಕ್ವಿಡೇಟರ್.

LOCAL AND PROVINCIAL NEWS
ಬಳವೇಕಮುತ್ತ ತಾಲ್ಲೂಕು ಪ್ರಾಂತ ವೃತ್ತಾಂತಗಳು.

The weather —ಈಗ್ಗೆ ಹಂದೆರಡುದಿನಗಳಿಂದ ಕಾಲಸ್ಥಿತಿ ಬದಲಾಯಿಸಿ ಸಂತೋಷಜನಕವಾಗಿದೆ ಮೊನ್ನೆಯು ಬಿದ್ದ ಮಳೆಯು ಜನಗಳಿಗೆ ಬಹಳಮಟ್ಟಿಗೆ ಪ್ರಾಣಾಧಾರವಾದ್ದಾಗಿದೆ ಮೊದಲೇ ಪ್ರಾರಂಭವಾದ ರೋಗಿಷ್ಠರುಗಳು ಚೇತರಿಸಿಕೊಳ್ಳುವುದಕ್ಕೆ ಬಹಳ ಅನುಕೂಲವಾಯಿತು

The theatre —ಗತ ಶನಿವಾರ ರಾತ್ರಿ ಈ ಪುರದ ರಸಿಕಮಣಿಗಳೊಂದಾಗಿ ಸೇರಿ ನಾಟಕ ಕಂಪನಿಯವರು ಪರಿಚ್ಛೇದ ನಾಟಕವನ್ನು ಆಡಿದರು ಪ್ರಶಂಸನೀಯವಾಗಿದ್ದ ಅತೀತ ವರ್ಷಗಳ ನಡುವೆ ಕುಂಟಾದ ಅನುದಾತೃಯಾದ ಮುಂದೆ ಐದರವರೆಗೆ ಅನುಭವಗಳೆಂದೂ ವಿಧಾಯಿಸಲ್ಲವೆ ಇತ್ತು. ಹಿಂದೆ ಈ ಪುರಿಗೆ ಬಂದು ಅನೇಕಾವರ್ತಿ ನಾಟಕಗಳನ್ನು ಆಡಿ ಜನಗಳನ್ನು ಸಂತೋಷಪಡಿಸಿ ಸಂತೋಷಗೊಳಿಸಿದ ರತ್ನಾವಳೀ ಕಂಪನಿಯವರು ತಮ್ಮ ಕಂಪನಿಯನ್ನು ಮುಕ್ತಾಯ ಮಾಡಿಬಿಟ್ಟರೆಂದು ಹಿಂದೆಯೇ ತಿಳಿಸಿದ್ದೆವಷ್ಟೆ ಸದರೀ ಕಂಪನಿಯ ಮುಖ್ಯಸ್ಥರು ರಂಗಾಚಾರ್ಯರು ಪಟ್ಟಣಕ್ಕೆ ಮಾಡುತ್ತಿದ್ದರು ಈಗ ಅವರೊಡನೆಗೆ ಬಂದು ಸೇರಿ ಬಿಡ್ಡರೆ ನಾಟಕಗಳನ್ನು ಆಡುತ್ತಿರುವರೆ ಜನಾನುರಾಗಕ್ಕೆ ಯಾವುದು ಯಾಕೆ ಬದಲಾಯಿಸುವದೇ ತಿಳಿಯುವುದಕ್ಕೆ ತಕ್ಕುದಲ್ಲವು. ಇದರ ವಿವರವು [illegible] ಮುಂದಕ್ಕೆ [illegible] ಅನ್ಯಥಾ [illegible]

The Jatra —ದ್ವೈಮಾಸಿಕವಾದ ಈ ಜಾತ್ರೆಗೆ [illegible] ಲೂ, ಅಂತಾ [illegible] ಸತ್ಕಾರ್ಯಗಳೂ ನಾಸ್ತಿಕವಾದ್ದಾಗಿಯೂ ಇರುತ್ತಿದೆಯೆಂತಲೂ, ಸಾಮಾನ್ಯವಾಗಿ ಯಲ್ಲರೂ ತಿಳಿದಿದ್ದಾರೆ. ಈ ವಿಷಯಗಳನ್ನು ತಿಳಿಸುವುದಕ್ಕೆ ಗ್ರಂಥವು ವೇದವನ್ನು ಸಿಕ್ಕೊಳ್ಳುತ್ತವ ಅಂತಾ ಪ್ರಸಂಗದಲ್ಲಿ ಪ್ರಾಮಾಣಿಕರಾದವರೊಬ್ಬರು ಅದನ್ನು ತಿಳಿಸಬಿಟ್ಟರುವಂತೆ ಆಚರಿಸುವುದಕ್ಕವರೇ ಪ್ರೇರಕರೆನ್ನಿಸಿಕೊಳ್ಳುವವರು ಅಂತಾ ವ್ಯಾಪಕದಿಂದ ಮಾಡಲ್ಪಡುವ ಕರ್ಮಗಳು ನಿಷ್ಫಲವಾಗಲಾರವೆಂಬುವದಕ್ಕೆ ಇದರಡಿ ಪ್ರಕಟಿಸಲ್ಪಡುವ ಬ್ರಹ್ಮಶ್ರೀ ಪಂಡಿತ ವಾಸುದೇವಶಾಸ್ತ್ರಿಗಳವರ ಲೇಖನವು ಸಂಪೂರ್ಣ ನಿದರ್ಶನವಾಗಿರುತ್ತದೆ

ಅಯ್ಯಾ—ನಾಳೆ ಸೋಮವಾರ ಪ್ರಕಟಿಸಲ್ಪಡುವ ತಮ್ಮ ಪತ್ರಿಕೆಯಲ್ಲಿ ನ ನು ಪ್ರಕಾಶಪಡಿಸುವ ಕೆಲವು ಅಂಶಗಳಿಗೆ ಅವಕಾಶ ಕೊಟ್ಟು ದೇಶಾಸ್ತ್ರ ಪ್ರಮಾಣ್ಯವನ್ನು ಈ ದೇಶದ ಜನಗಳು ಅನ್ಯಥಾ ಬ [illegible] ದೃಢವಾಗಿ ಅಂಗೀಕರಿಸುವಂತೆ ತಾವು ಪ್ರಕಾಶಪಡಿಸುವಿರೆಂದು ಪ್ರಾರ್ಥಿಸುವೆನು

ಈ ದೇಶದಲ್ಲಿ ಅನಾವೃಷ್ಟಿಯಿಂದ ಸಂಭವಿಸಿದ ಮಹದನರ್ಥವನ್ನು ಹೋಗಲಾಡಿಸಲು ನಾವುಗಳು ಶಕ್ತರಾಗದ ಹೋದಾಗ್ಯೂ ವೇದಶಾಸ್ತ್ರಪ್ರಾಮಾಣ್ಯ ಬುದ್ಧಿಯಿಂದ ವೇದೋಕ್ತ ಕರ್ಮಾನುಷ್ಠಾನಪರರಾದ ಈ ಕೆಳಗೆ ನಮೂದಿಸಲ್ಪಡುವ ಯೋಗ್ಯರಾದ ಬ್ರಾಹ್ಮಣರನ್ನು ಸೇರಿಸಿಕೊಂಡು ಪರ್ಯಾಲೋಚಿಸಿ ಕಳೆದ ಅಂಗಳ [illegible] ಮು ಲಾಗಾಯಿತು ಪರಿಶುದ್ಧವಾದ ಗವೀಪುರ ಕ್ಷೇತ್ರದಲ್ಲಿ ಮಿತ್ರಾವರುಣ, ಪರ್ಜನ್ಯಾದ್ಯುಪಾಸ್ತ ಮೊದಲಾದವರುಗಳನ್ನೂ, ಸುಂದರಕಾಂಡ, ವಿರಾಟಪರ್ವ, ಸಪ್ತಶತಿ ಮೊದಲಾದ ಪಾರಾಯಣಗಳನ್ನೂ, ಶ್ರೀ ಪ್ರಸನ್ನಪಾರ್ವತೀ ಸಮೇತ ಗಂಗಾಧರೇಶ್ವರನಿಗೆ ಪ್ರತಿದಿವಸವೂ ಶತರುದ್ರಯಾಮಿ ಷೇಕವನ್ನೂ ಸುಕಲ್ಪಿಸಿ ೧೧ ದಿವಸ ಕ್ರಮಪ್ರಕಾರ ಏಕಭುಕ್ತಾಂತರ ಮೊದಲಾದ ಬ್ರಹ್ಮಚರ್ಯ ವ್ರತಗಳಿಂದ ಗ್ರಾಮಪ್ರವೇಶವಿಲ್ಲದೆ ಅಧ್ಯಯನಾದಿಗಳಿಂದ ಮಿತ್ರಾನುಷ್ಠಾನವು ಮಾಡಿ ೧೩ನೇ ದಿನ ನಿರಶನವಾಗಿ ರಾತ್ರಿ ಹಗಲೂ ಜಾಗರದಿಂದ ಶ್ರೀ ಗಂಗಾಧರೇಶ್ವರನಿಗೆ ಮಹಾ ಸಹಸ್ರ ಕುಂಭಾಭಿಷೇಕವನ್ನು ಮಹನ್ಯಾಸಪೂರ್ವಕವಾಗಿ ಶತರುದ್ರೀಯ ರೂಪವಾಗಿ ಅನುಷ್ಠಿಸಿದ ಮಾರನೆಯ ದಿನ, ಅಂದರೆ ವ್ರತಾರಂಭಕ್ಕೆ ೧೪ನೇ ದಿನವಾದ ನಿನ್ನೆಯ ದಿನ ರಾತ್ರಿ ಉಪಾಸ್ಯದೇವತಾನುಗ್ರಹ ಬಲದಿಂದ ೧॥ ಘಂಟೇ ಲಾಗಾಯಿತು ೪ ಘಂಟೆಯವರಿವಿಗೂ ಮಹತ್ಫಲವಾಗಿ ಪ್ರಾಪ್ತವಾದ ಈ ಸುವೃಷ್ಟಿಯನ್ನು ತಾವು ಕಡಾಂಬರಿಸದೆ ಇರಲಾರಿರಿ. ಇಂತಾ ಕಲಿಕಾಲದಲ್ಲಿಯೂ ಸತ್ಕರ್ಮಾನುಷ್ಠಾನಕ್ಕೆ ಕರಬದರ ಸದೃಶವಾಗಿ ಸಂಭವಿಸಿದ ಮಹತ್ಫಲವನ್ನು ಕುರಿತು ನಾವು ಬಹಳ ಸಂತೋಷಿಸಿದೆವು. ಈ ಪ್ರಾಂತದ ದೊಡ್ಡದೊಡ್ಡ ಉದ್ಯೋಗಸ್ಥರು, ಮಹಾಜನಗಳು, ವರ್ತಕರು ಮೊದಲಾದ ಯೆಲ್ಲಾ ಜನಗಳೂ ನೋಡುತ್ತಿದ್ದ ಈ ಅನುಷ್ಠಾನವನ್ನು ಅದಕ್ಕೆ ಪ್ರಾಪ್ತವಾದ ಈ ವೃಷ್ಟಿಫಲವನ್ನೂ ತಿಳಿದವರಾಗಿದ್ದರೆ ಇವರಂತೆ ಈ ಪ್ರಸೂಚನೆಯು ಎಲ್ಲಾ ಜನಗಳಿಗೂ ವ್ಯಕ್ತವಾಗುವಂತೆ ಘನವಾದ ತಮ್ಮ ಪಾಕ್ಷಿಕ ಪತ್ರಿಕೆಯಲ್ಲಿ ಪ್ರಕಟಿಸುವಿರೆಂದು ಸುಪ್ರಸನ್ನವಾಗಿ ಈ ವಿಷಯವನ್ನು ನಾವು ಸೂಚಿಸಿದ್ದೇವೆ

೮೦ ॥ ೧೩ನೇ [illegible]

ವಾಸುದೇವಶಾಸ್ತ್ರಿ

ಅನುಷ್ಠಾತೃಗಳು

[illegible]

NOTICE TO CORRESPONDENT

"ಒಂದುವೇಳೆ, ಒಬ್ಬ ಸಹಜನ್"—ಕಳೆದ ತಿಂಗಳು ೩೧ನೇ ತಾರೀಖಿನ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಸ್ತ್ರೀ ಪುನರ್ವಿವಾಹವಿಷಯಕವಾದ ನಮ್ಮ ಉಪನ್ಯಾಸವನ್ನು ಕುರಿತು ನೀವು ಬರೆದ ಕಾಗದವು ನೋಡಲಾಗಿ ಅದು ಬಹಳಮಟ್ಟಿಗೆ ವಾಸ್ತವ್ಯಾಂಶವನ್ನು ವ್ಯಕ್ತಪಡಿಸತಕ್ಕದ್ದಾಗಿದ್ದರೂ, ಯುಕ್ತಿಯುಕ್ತ ವಾದ ಬಹುಜನರಿಗೆ ಇದು, ಏಂಬ ಲೋಕೋಕ್ತಿಯಂತೆ ಅದು ಪ್ರಕಟಿಸುವವರ ಮೂಲಕ ಬಹುಮಂದಿಯ ವಿದ್ವೇಷಕ್ಕೆ ವ್ಯರ್ಥವಾಗಿ ನಾವು ಪಾತ್ರರಾಗಬೇಕಾಗಿ ಬರುವ ದಾಪ್ದರಿಂದ ಸದರೀ ಕಾಗದವನ್ನು ಈ ಪತ್ರಿಕೆಯಲ್ಲಿ ಪ್ರಕಟಿಸದೆ ನಿರಾಕರಿಸಿರುತ್ತೇವೆ ಯದ್ಯಪಿ "ಕಲೌ ಪಂಚ ವರ್ಜ್ಯಾನಿ ಅಶ್ವಾಲಂಭಂ ಗವಾಲಂಭಂ ಸಂನ್ಯಾಸಂ ಪಲಪೈತೃಕಂ । ದೇವರೇಣ ಸುತೋತ್ಪತ್ತಿಂ ಕಲೌ ಪಂಚ ವಿವರ್ಜಯೇತ್ ॥" ಯೆಂಬ ನಿಮ್ಮ ಉದಹರಿಸಿದ ಶ್ಲೋಕಾರ್ಥದಂತೆಯೇ ಪ್ರಸಕ್ತ ವಿಚಾರವೇ ಹುಟ್ಟದೆ ಪುನರ್ವಿವಾಹಕ್ಕೆ ಈಗ ಪ್ರತಿಷೇಧಕರ ಪ್ರಾಬಲ್ಯವು ಅತ್ಯಧಿಕವಾದದ್ದಾಗಿದ್ದರೂ, ಈಗ ಸಾಧಾರಣವಾಗಿ ಪುನರ್ವಿವಾಹವು ಅವಶ್ಯಕರ್ತವ್ಯವೆಂದು ಸಾಧಿಸುವವರ ಯುಕ್ತಿ ಪ್ರಮಾಣಗಳು ಸರ್ವಥಾ ಫಲಕಾರಿಯಾಗದೆ ಹೋದಾಗ್ಯೂ ಇನ್ನು ಕ್ವಚಿತ್ಕಾಲದೊಳಾದರೂ ಇದು ಸಾರ್ವಜನೀನವಾದ ಶಿಷ್ಟಾಚಾರವೊಳೊಂದಾಗಿ ಪರಿಣಮಿಸದೆ ಹೋಗಲಾರದೆಂದು ಕೋರುತಿದೆ. ನಾವು ಮೇಲೆ ತಿಳಿಸಿದಂತೆ ಪುನರ್ವಿವಾಹದ ಆವಶ್ಯಕತೆಯು ಜನಗಳಿಗೆ ಅಪ್ರೀತಿವಾಗಿ ಪುಂಟಾಗುತಲಿದೆಯೆಂಬ ಭಾವವನ್ನು ವ್ಯಕ್ತಪಡಿಸತಕ್ಕ ಒಂದು ಲೇಖನವನ್ನು ಯಥಾವಸ್ಥಿತವಾಗಿ ನಾವು ಇದರಡಿ ಪ್ರಕಟಿಸುವೆವು. ಸದರೀ ಕಾಗದದಲ್ಲಿನ ವಿಷಯವು ಕಲ್ಪಿತವೆಂದು ಭಾವಿಸಲ್ಪಡುವುದಾದ್ದಾಗಿದ್ದರೂ ಅದರ ವಿಜ್ಞಪ್ತಿಯಂ ನಾವು ಚೆನ್ನಾಗಿ ಬಲ್ಲವಾದ್ದರಿಂದ ಅದನ್ನಿಲ್ಲಿ ಪ್ರಕಟಿಸಬೇಕಾದವರಾದೆವು ಈ ಕಾಗದವನ್ನು ಓದತಕ್ಕವರೆಲ್ಲರಿಗೂ, ಪ್ರವಾಹರೂಪವಾದ ಕಾಲಗತಿಯ ಸ್ವರೂಪವೂ ಪುನಃ ಆವಶ್ಯಕತಾವಶ್ಯಕತೆಯೂ, ಅದರಲ್ಲಾಧ್ಯಸಾಧ್ಯತ್ವವೂ ತೋರದೆ ಹೋಗಲಾರದಾಗಿ ಬನ್ನು ಮುಂದೆ ಈ ವಿಷಯದಲ್ಲಿ ನಮ್ಮ ತಾತ್ಪರ್ಯವು ಆವಶ್ಯಕವಾಗಿರುವದಿಲ್ಲವು.—ಎಡಿಟರ್, ಕ. ಪ್ರ.

CORRESPONDENCE

ಅಯ್ಯಾ—ಇದರಡಿ ನಾನು ತಿಳಿಸುವ ವಿಷಯವು ಘಾಸ್ಥಿತವಾದ ಪ್ರಕೃತ ನನ್ನ ಸ್ಥಿತಿಯು ವ್ಯಕ್ತಪಡಿಸತಕ್ಕದ್ದಾಗಿರುವದರಿಂದ ಪ್ರವೆಯಪ್ಪಿದಾಕಾರಿಯಾದ ಅದು ತಮಗೆ ತಿಳಿಯಪಡಿಸಿದರೆ ಸ್ವಲ್ಪ ದುಃಖೋಪಶಮನಕ ವಾಗುವದೆಂಬ ಭಾವನೆಯಿಂದ ಕೃಪೆದಪಡಿಸುವೆನೇನೆಂದರೆ—

ಆಸ್ತಿಕ ಮತಾವಲಂಬಿಯಾದ ನನಗೆ ಈಗ ಬಾಲವಿಧವಾದ ಪುತ್ರಿ ಯೊಬ್ಬಳಿರುವಳು ಈಕೆ ೧೮೭೦ನೇ ಇಸವಿ ಆಗಸ್ಟು ತಿಂಗಳಲ್ಲಿ ಜನಿಸಿದಳು. ಇವಳ ಎಂಟನೆಯ ವರುಷದಲ್ಲಿ ಕ್ರಮಪ್ರಕಾರ ಯೋಗ್ಯನಾದ ಒಬ್ಬ ವರನಿಗೆ ಕೊಟ್ಟು ವಿವಾಹ ಮಾಡಿದೆನು. ದುರ್ವಿಧಿವಶನದಿಂದ ಮದುವೆಯಾದ ೬ ತಿಂಗಳಲ್ಲಿಯೇ ಅವಳ ಗಂಡನು ಏಕಾಏಕಿ ಮೃತನಾದನು ಈಗವಳಿಗೆ ಹದಿನೈದನೆಯ ವರುಷ ನಡೆಯುತಲಿದೆ ಈಕೆಗೆ ರಂಗನಾಯಕಿಯೆಂದು ಹೆಸರಿಟ್ಟಿರುವೆವು ಇವಳು ಬಾಲ್ಯದಲ್ಲಿಯೇ ಅಲ್ಲಿನ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ ಅಗಿರುವಾಗ್ಯೆ ಬಹಳ ಗಳನ್ನು ಪಡೆಯುತ ಒಪ್ಪಳ ಸಮರ್ಥಳೆನಿಸಿಕೊಂಡಳು ಇವಳು ಮುಂದೆ ಅನಿವಾರ್ಯವಾದ ನಿರುತರ ದುಃಖ ಭಾಜನಳಾಗಬೇಕಾಗುವದೆಂದು ಈಶ್ವರ ಸಂಕಲ್ಪದಿಂದಲೇನೋ ಇವಳಿಗೆ ವಿದ್ಯಾ ಕೌಶಲ್ಯವು ಬಹಳ ಶೀಘ್ರವಾಗಿ ವೃದ್ಧಿಗತವಾಯಿತು. ಈಗ ಕನ್ನಡವನ್ನು ಚೆನ್ನಾಗಿ ಓದಿ ಬರೆಯುವಷ್ಟು ಯೋಗ್ಯತೆ ಯುಂಟಾಗಿದೆ ಇಷ್ಟರ ಜ್ಞಾನ ಉಂಟಾಗಿರುವದರಿಂದ ಅಲ್ಲಲ್ಲಿ ಕೇಳುವ ಪುನರ್ವಿವಾಹದ ವಿಷಯವಂ ತಿಳಿದುಕೊಂಡು "ಅಲ್ಲಾ ಗಲ್ಲಿಲ್ಲವೋ, ಇಲ್ಲಾಗಲ್ಲಿಲ್ಲವೋ, ನನಗೂ ಯಾಕೆ ಮಾಡಬಾರದು"? ಯೆನ್ನುತ್ತಾಳೆ. ನನಗೂ ನನ್ನ ಹೆಂಡತಿಗೂ ಸದಾ ಈ ಮಾತು ಕಿವಿಯಲ್ಲಿ ಬೀಳುವಾಗ್ಯೆಲ್ಲ ಹೊಟ್ಟೆಯಲ್ಲಿ ಬೆಂಕಿಬಿದ್ದಂತೆಯಾಗುತ್ತಿದೆ ಕಣ್ಣೀರೊಡನೆ ಅವಳ ಮುಖವು ನೋಡಲಾರದೆ "ನಿನ್ನ ಕರ್ಮವೇ ಹಾಗಿದ್ದರೆ ಇದ್ದರೆ ಅದು ನೋಡು ಹೋಗು" ಯೆಂದು ಗದರಿಸಿಕೊಳ್ಳುವೆವು ಇವಳು ಗೊಣಗುಟ್ಟುತ್ತ ನಿರ್ವಿಣ್ಣಳಾಗಿ ಹೊರಟುಹೋಗುವಾಗ್ಯೆ ನಮ್ಮ ಪ್ರಾಣಗಳೇ ಹೋದಂತೆ ಯಾಗುತಿದೆ ಈ ದುಃಖವನ್ನು ಯಾರಲ್ಲಿ ಹೇಳಿಕೊಳ್ಳುವೆನು! ನಾವು ನೋಡುತಿರುವಾಗಲೇ ಹೀಗಾದ್ದರು ಮತ್ತು ಒಬ್ಬರ ಆಚಾರ್ಯರು ನನಗೂ ನನ್ನ ಹೆಂಡತಿಗೂ ಪುನರ್ವಿವಾಹದ ವಿಷಯದಲ್ಲಿ ಅಂತು ಅಭಿಪ್ರಾಯ ಪುಂಟು ಸದರೀ ಹುಡುಗಿಯಾದರೋ ಪಟ್ಟೆ ಪಟ್ಟೆ ತಿಳಿಸುತಲಿವಾಳೆ ನಮ್ಮಲ್ಲಿ ಇವಳಿಗೆ ನಾನು ದೊರೆಯುವುದು ಬಹಳ ಪ್ರಯಾಸವಾಗಿರುತಿದೆ. ಸ್ವಜನರಲ್ಲಿ ವಿನಾ ಅನ್ಯರೊಳು ಸಂಬಂಧ ಮಾಡಲಿಕ್ಕೆ ನಮಗೆ ಸ್ವಲ್ಪವೂ ಇಷ್ಟವಿಲ್ಲ ವು ನಮ್ಮವರೇ ಅಂದರೆ ಆಚಾರ್ಯರುಗಳೇ ಬೇಕಾಗಿದೆ. ಇದಕ್ಕೆ ನಮ್ಮ ಜನಗಳ ಅಭಿಮತವೂ ಕೇವಲ ಆವಶ್ಯಕವಾದ್ದಾಗಿರುತಿದೆ ನಮ್ಮವರಾದರೋ ಕುದ್ರ ಕೃಪಾಪಾತ್ರರಾಗಿರುತ್ತಾರೆ ಇದಲ್ಲದೆ ಇದು ಬಹು ದ್ರವ್ಯಸಹಾಯವೇಕ್ಷಿತವಾದದ್ದಾಗಿಯೂ, ಒಬ್ಬರಿಬ್ಬರಿಂದ ಸಾಧ್ಯವಲ್ಲದ್ದಾಗಿಯೂ ಇರುತಿದೆ. ಮತ್ತು ಇದನ್ನು ರಾಜಾಧಿರಾಜರು ಹಿಡಿದು ಪ್ರೋತ್ಸಹಿಸಿ ಮಾಡಬೇಕಾದ ಕೆಲಸವೇ ಹೊರ್ತು ಬಡವಾಯಿಗಳಿಂದಾಗತಕ್ಕದ್ದಲ್ಲವು ಒಂದುವೇಳೆ ಸ್ವಜನರು ಪರಿತ್ಯಾಗ ಮಾಡಿದರೂ ಲಕ್ಷ್ಯವಿಲ್ಲದೆ ಜೀವಿಸುವಾತಿರಬೇಕು ಇದಕ್ಕೆ ತಾವೇನು ಅಪ್ಪಣೆ ಕೊಡುವಿರೋ ಅದರಂತೆ ಶಿರಸಾವಹಿಸಿ ನಡೆಯಲು ಸಿದ್ಧನಾಗಿದೇನೆ

ನಾನು ಮೇಲೆ ಕಂಡ ಕಾಗದವನ್ನು ಬರೆಯುವಾಗ್ಯೆ ಒಳ್ಳೇ ಮಳೆಯಾಗುತ ಅದ್ಯಾಪಿ ಬಿಡದೆ ಇರುವದರಿಂದ ಇದೇ ಒಂದು ಶುಭ ಸೂಚನೆಯೆಂದು ಹೇಳಬೇಕಾಗಿದೆ.

ಕುಂದಾಪುರ, ೬ ೯ ೩೧ನೇ ಘಾಮವಾರ ಬೆಳಗಿನ ೪ ಘಂಟೆ	ತಮ್ಮ ವಿಧೇಯ, ವೈರಂತರ್ಯ ದುಃಖಪೀಡಿತನಾದ ಷಣಿಕಬ್ರಾಹ್ಮಣಿ.

ಸ್ತ್ರೀ ಪುನರ್ವಿವಾಹ ವಿಷಯ.

ಅಯ್ಯಾ—[illegible]

[illegible]

ಇತ್ತ ದೇಶದ ನೇಟಿವ್ ರಾಜ್ಯಗಳಲ್ಲಿ ಹೈದರಾಬಾದ್ ಸಂಸ್ಥಾನವು ಉತ್ಪತ್ತಿಯಲ್ಲಿಯೂ, ವಿಸ್ತೀರ್ಣದಲ್ಲಿಯೂ, ಪ್ರಜಾ ಸಂಖ್ಯೆಯಲ್ಲಿಯೂ, ಉತ್ತಮವಾದ್ದಾಗಿದೆಯೆಂಬ ಅಂಶದೊಳು ಲೇಶವೂ ಸಂದೇಹವಿಲ್ಲವು. ಪರಂತು ಇತರ ವಿಷಯಗಳೊಳಗೆ ತಿರುವಾಂಕೂರ್, ಭೂಪಾಲ್, ಬರೋಡಾ ಮತ್ತು ಇಂದೂರ್ ಸಂಸ್ಥಾನಗಳಿಗೆ ಸಮಾನವಾಗಲಾರದೆಂದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುವೆವು. ಸದರೀ ಸಂಸ್ಥಾನಗಳೊಳು ಏರ್ಪಟ್ಟಿರುವ, ರಾಜ್ಯತಂತ್ರಜ್ಞರಾಗಿಯೂ, ದೃಢಾಧ್ಯವಸಾಯವುಳ್ಳವರಾಗಿಯೂ ಇರುವ ಪಾಲಕರಿಂದಲೂ, ಸ್ವಲ್ಪ ಹೆಚ್ಚುಕಡಮೆಯಾಗಿ ಬುದ್ಧಿಶಾಲಿಗಳಾಗಿಯೂ, ಪ್ರಾಮಾಣಿಕರಾಗಿಯೂ, ಇರುವ ಮಂತ್ರಿಗಳಿಂದಲೂ ಅವು ಅಸಮಾನವಾದ "ಮಾಡಲ್ ನೇಟಿವ್ ಸ್ಟೇಟ್ಸ್" ಗಳೆಂಬ ಪ್ರಾಶಸ್ತ್ಯವನ್ನೈದಿದವು. ಋಣಪೀಡಿತವಾದದ್ದಾಗಿಯೂ, ನಿರ್ಧನಕೋಶವುಳ್ಳದ್ದಾಗಿಯೂ ಇರುವ ಮೈಸೂರು ರಾಜ್ಯ ಒಂದನ್ನು ಮಾತ್ರ ಹೈದರಾಬಾದಿಗೆ ಸಮಾನತ್ವೇನ ನಾವು ಸುಲಭವಾಗಿ ಹೇಳಬಹುದಾಗಿದೆ. ಋಣ ವಿಷಯದೊಳೊಂದರಲ್ಲಿ ಮಾತ್ರ ಉಪಮೇಯವಾದ ಹೈದರಾಬಾದಿಗೂ ಉಪಮಾನವಾದ ಮೈಸೂರಿಗೂ ಸುಪ್ರಸಿದ್ಧ ಸಮನ್ವಯವಾಗದಿದ್ದರೂ ಇತರಾಂಶಗಳೊಳವರಡೂ ಕ್ರಮೋಪಮಾನವುಳ್ಳದ್ದಾಗಿರುತಿವೆ. ಮೈಸೂರು ಸಂಸ್ಥಾನದಲ್ಲಿ ಅದರ ಅಧಿಪತ್ಯಕ್ಕೊಳಪಟ್ಟ ದೊಡ್ಡ ಅಧಿಕಾರಗಳೆಲ್ಲ ಮದರಾಸ್ ಪ್ರಾಂತವರಿಂದಾಕ್ರಮಿಸಿ ಕೊಳ್ಳಲ್ಪಟ್ಟದ್ದಾಗಿರುತಿವೆ. ಹೈದರಾಬಾದಿನ ಅಲ್ಲದರೋ, ಇಲ್ಲಿನ ಸರ್ಕಾರ್‌ನೌಕರಿಗಳೆಲ್ಲ ವಿದ್ಯಾವೈಶಿಷ್ಟ್ಯವಿಲ್ಲದ ಮುಸಲ್ಮಾನರಪಾಲಾಗಿ ಅಂತವರನ್ನು ಮುಂದಕ್ಕೆ ತರುವವರಲ್ಲಿ ಮೌಲವಿ ಮಹದಲ್ಲೀಖಾನರು ಅಗ್ರಿಮರಾಗಿಯೂ ದೃಢಸಂಕಲ್ಪವುಳ್ಳವರಾಗಿಯೂ ಇರುತ್ತಾರೆ. ಸದರೀ ಮಹಮದಲ್ಲೀ ಖಾನಸಾಹೇಬರನ್ನು ಹೈದರಾಬಾದಿನಲ್ಲಿರುವ ಒಬ್ಬ ಸಾಮಾನ್ಯರೆಂದು ಯಾರೂ ತಿಳಿಯಲಾಗದು. ಇವರು ನಿಜಾಮರವರ ಮುಖ್ಯಮಂತ್ರಿಯವರಾಗಿಯೂ, ಪ್ರಸಿದ್ಧರಾದ ನವಾಬ್ ಸರ್. ಸಾಲಾರ್ ಜಂಗರವರ ಪುತ್ರರಾಗಿಯೂ ಇರುತ್ತಾರೆ. ಇದಲ್ಲದೆ ಇವರು ಒಳ್ಳೆಯ ರಾಜ್ಯತಂತ್ರಜ್ಞರೆಂದು ಇಂಡ್ಯಗವರ್ನಮೆಂಟಿನವರಿಂದ ಭಾವಿಸಲ್ಪಟ್ಟಿರುವುದೆಯೂ, ಶೀಘ್ರದಲ್ಲಿವರಿಗೆ ಸಿ. ಎಸ್. ಐ. ಎಂಬ ಅಲ್ಲಾಕ್ ಕೊಡಲ್ಪಡುವುದೆಯೂ ಕೇಳುತ್ತೇವೆ. ಹೈದರಾಬಾದ್ ಸಂಸ್ಥಾನದ ಪ್ರಕೃತಪಾಲಕರಾದ ನಿಜಾಮರವರೂ ಇವರ ಮಂತ್ರಿಯವರೂ ವಿಸ್ತಾರವಾದ ಈ ರಾಜ್ಯವನ್ನು ಪಾಲಿಸಲಿಕ್ಕೆ ಸಾಕಾದಷ್ಟು ಸಮರ್ಥರಾಗಿದಾರೆಂದು ತಿಳಿಸಲ್ಪಡಬಹುದು. ಪರಂತು ಇವರ ಸಾಮರ್ಥ್ಯವನ್ನು ಕಾರ್ಯತಃ ವ್ಯಕ್ತಪಡಿಸುವಂತಾದ್ದೇನಾದರೂ ಪ್ರಸಂಗವಿಂತಲಾಗಲಿ, ಇವರ ಸಾಮರ್ಥ್ಯವಿಷಯದಲ್ಲಿ ಘನವಾದ ಹೊಂದಿದ ಸಾಹೇಬ್ ವೈಸ್‌ರಾಯರವರು ಪಡೆದ ಸಪ್ಪಾವಕ್ಕೆ ಇವರು ಅರ್ಹರಾಗಿರುತ್ತಾರೆಯೆಂತಲಾಗಲಿ ಯಾರಾದರೂ ಕೇಳಬಹುದು. ಪರಂತು ಅವರಿಗೆ ಹೇಳಬೇಕಾದ ಪ್ರತ್ಯುತ್ತರವು ತ್ರಯಾಕ್ಷರವುಳ್ಳದ್ದಾಗಿರುತಿದೆ. ನಿಜಾಮರವರಿಗೆ ಪಟ್ಟಾಭಿಷೇಕವಾದಮೊದಲು ಹೈದರಾಬಾದ್‌ಸಂಸ್ಥಾನದ ಆಡಳಿತಗಳನ್ನು ನೋಡಲಾಗಿ ವಿವೇಕಾನುಭವ ಪೂರ್ವಕವಾಗಿ ದೇಶವನ್ನಾಳುವದಕ್ಕೆ ಅಸಮರ್ಥರೆನ್ನಿಸಿಕೊಂಡಿರುವವರಾಗಿಯೂ, ತಮ್ಮ ಅನ್ಯವಹಾರದಕ್ಷಿಮೆಯಿಂದ ಆತ್ಯಂತಿಕವಾಗಿ ನಿವೃತ್ತರಾಗದವರಾಗಿಯೂ, ತಮಗೆ ಲಭಿಸಿರುವ ಪ್ರಾಶಸ್ತ್ಯಗಳ ಸ್ವರೂಪಾನಭಿಜ್ಞರಾಗಿಯೂ ಇರುವ ಇಬ್ಬರು ಬಾಲಕರ ಸ್ವಾಧೀನಕ್ಕೆ ವಿಸ್ತಾರವಾದ ಒಂದು ರಾಜ್ಯದ ಆಧಿಪತ್ಯವನ್ನೊಪ್ಪಿಸಿದ್ದಕ್ಕಾಗಿ ಲಾರ್ಡ್ ರಿಪ್ಪನ್‌ಯವರನ್ನು ನಾವೆಷ್ಟುವಿಧದಿಂ ನಿಂದಿಸಿದರೂ ಸಾಲದೆಯಿದೆ. ಮಹೋನ್ನತವಾದ ಮತ್ತು ವಿಶೇಷವಾದ್ದಾದ ಉಚ್ಚ ಅಧಿಕಾರವನ್ನು ಸ್ವಯಂ ವಿವೇಕದೊಡನೆ ನಿರ್ವಹಿಸಲಿಕ್ಕೆ ಇವರಿಬ್ಬರೂ ಸಮರ್ಥರೆಂದು ಕಂಡುಬರುವತನಕ ಇವರಕ್ಕೊಂದು ನಿರ್ಬಂಧಕ್ಕೊಳಪಡಿಸುವಂತಾ ಯಾವವಿಧ ಏರ್ಪಾಡನ್ನಾದರೂ ರಾಜ್ಯತಂತ್ರಜ್ಞರಾದ ಲಾರ್ಡ್ ರಿಪ್ಪನ್‌ಯವರು ಸುಲಭವಾಗಿ ಮಾಡಬಹುದಾಗಿತ್ತು. ಇಂತಾ ಏರ್ಪಾಡುಮಾಡದೆ ಪಡಲೆಂದು ಮಾತಲ್ಪಟ್ಟದ್ದರೆ ರೆಸ್ಸಿಡೆಂಟರ ಹೈದರಾಬಾದ ಪ್ರಮುಖರಾದವರಿಗೆಲ್ಲ ಬೇಕಾದಷ್ಟು ವ್ಯಾಪಾರಗಳುಂಟಾಗಿ, ಈಗ ಸರ್ವತ್ರ ತಲೆದೋರಿರುವಂತಾ ಕಲಹಗಳೂ ಪಕ್ಷಪ್ರಯುಕ್ತವಾದ ರಾಗದ್ವೇಷಗಳೂ ಪ್ರಾಪ್ತವಾಗದಿರಲಿಕ್ಕೆ ಕಾರಣವಾಗಿರುವದು. ಅಥವಾ ಇಲ್ಲಿ ಪ್ರಮುಖರಾಗಿರುವವರನ್ನೆಲ್ಲ ಕೌನ್ಸಿಲರ್‌ಗಳನ್ನಾಗಿಯೂ ದೇಶ ಕ್ಷೇಮಾಭಿವರ್ಧಕರನ್ನಾಗಿಯೂ ಮೊಕರರ್‌ಮಾಡಿದ್ದರೆ ಅದೊಂದುಬಗೆ ಉತ್ತಮವಾಗಿರುವದು. ಕಡೆಗೆ ಅದೂಯಿಲ್ಲದೆ ಹೋಯಿತು. ಈಗ್ಯೆ ಒಂದುಸಂವತ್ಸರಕ್ಕಿಂತ ಮೇಲ್ಪಟ್ಟು ನಿಜಾಮರವರೂ ಅವರ ಮಂತ್ರಿಯವರು ಸಹ ವಿಶೇಷ ಪರಿಜಾಣನೆಯೊಡನೆ ಲಾರ್ಡ್ ರಿಪ್ಪನ್‌ಯವರಿಂದ ಅಧಿಕಾರದಪದದೊಳು ನೆಲೆಗೊಳಿಸಲ್ಪಟ್ಟರುತ್ತಾರೆ. ವಿವೇಕ ಶೂನ್ಯಕರವಾದ ಒಂದು ಕಾರ್ಯವನ್ನು ಮಾಡಿ ತನ್ಮೂಲಕ ಒಳ್ಳೇ ಪಾಲಕರೆಂಬ ಪ್ರಾಶಸ್ತ್ಯವು ನಿಜಾಮರಿಗಾಗಲಿ ಅವರ ಮಂತ್ರಿಯವರಿಗಾಗಲಿ ಇದುವರಿವಿಗೆ ಪ್ರಾಪ್ತವಾದ ನಮ್ಮ ಜ್ಞಾಪಕದೊಳಿಲ್ಲವು. ಹಾಗೂ ಏನಾದರೂ ಇದ್ದಲ್ಲಿ ಇಂದೇರವಕ್ಕಿಂತವಾಸ್ತೀಯಿಲ್ಲವು. ಸ್ವಾರ್ಥದ ರಿವಿಜ್ಯೊಂದಿರ್ನನ್ನು ಮೌಕೂಫುಮಾಡಿ ಅವಕ್ಕೆ ಪ್ರತಿಯಾಗಿ ಸುಬಾಗಳನ್ನೇರ್ಪಡಿಸಿದ್ದು; ನೌಕರಿಯ ಆವಶ್ಯಕತಾನಾವಶ್ಯಕತೆಯನ್ನು ಸಹ ಚಿಂತಿಸದೆ ಹೈದರಾಬಾದ್ ಸಂಸ್ಥಾನದ ನಷ್ಟಕ್ಕಾಗಿ ಇಲ್ಲಿನ ಮಹಮದೀಯರ್‌ಗಳ ಪ್ರಾಬಲ್ಯವನ್ನು ವೃದ್ಧಿಪಡಿಸುವದುದ್ದು; ಸರ್ಕಾರೀ ಮತ್ತು ಇತರವಿಷಯಕವಾದ ಅರ್ಜೀಗಳನ್ನೂ ಕಾಗದಗಳನ್ನೂ ಮಂತ್ರಿಯವರಿಗೆಬರೆಯದೆ ಅನರ್ಥವೇದಿನಕ್ಕೆ ಡಿರಿಯವರಿಗೇಬರೆಯತಕ್ಕದ್ದೆಂದು ಸರ್ಕಾರೀಗೆಜೆಟಿನಲ್ಲಿ ಘೋಷಿಸಮಾಡಿದ್ದು; ಸಂಸ್ಥಾನದಿಂದ ತಮಗೆ ಎರವಲಾದ ಮೊಬಲಗನ್ನು ಕೊಡಬೇಕೆಂದು ಸುಲ್ತಾನ್ ನವಾಬ್‌ಜಂಗರವರನ್ನು ವಿಧವಾಗಿ ಕೇಳಕೊಂಡಾಗ್ಯೂ ಅದಕ್ಕೆ ನಿಜಾಕೊಡದೆ ಅವರಿಗೆ ಮನ್ನಾ ನೆಜಲ್ಮಾ ನೇಹಾಕಿ ಅವರನ್ನು ದೇಶದಿಂದ ಗಡೀಪಾರ್ ಮಾಡಿದ್ದು, ಇವು ವಿನಾ ಬೇರಿಲ್ಲವು. ಮೇಲೆ ತಿಳಿಸಲ್ಪಟ್ಟ ಒಂದನೆ ಕಾರ್ಯವನ್ನು ನಿಜಾಮರವರೇ ಮಂತ್ರಿಯವರು ತಮ್ಮ ಕೆಲಸದಲ್ಲೆಷ್ಟು ಅತ್ಯಕ್ತಿಯುಳ್ಳವರಾಗಿ ದಾರೆಯೋ ಅದು ವ್ಯಕ್ತವಾಗದಿರುವದಿಲ್ಲವು. ಮಂತ್ರಿಯವರಿಗೂ ಅವರ ಪ್ರಭುವಿಗೂ ಅಧಿಕಾರ ಪ್ರಾಪ್ತವಾದದು ಮೊದಲು ತಮ್ಮ ಪಾಲನೆಗೊಳಗಾದ ಡಿಸ್ಟ್ರಿಕ್ಟುಜಾತ ಪ್ರಜೆಗಳಸ್ಥಿತಿ ಹ್ಯಾಗಿದೆಯೆಂದು ತಿಳಿದುಕೊಳ್ಳುವದಕ್ಕೆ ಏನಾದರೂ ಪ್ರಯತ್ನ ಪಟ್ಟವರಲ್ಲವು ಬದಲಾಯಿಗಳಾದ ಕೈಕರಮೂಲಕ ಪಡೆದಮೊದಲ್ಪಟ್ಟು ಕೇಳಲಾಗುವಂತಾ ಪ್ರವೃತ್ತಿಪ್ರಯುಕ್ತ ಲೇಶಸಂಚಾರವು ಉಲ್ಲಾಸಾರ್ಥವೆಂದು ಭಾವಿಸುವವೆಂಬದರೊಳೇನೂ ಸಂದೇಹವಿಲ್ಲವು. ತಮ್ಮ ಆಧಿಪತ್ಯಕ್ಕೊಳಪಟ್ಟಿರುವ ತಾಲೋಕುದಾರರುಗಳದ್ದೋ ಗಸ್ಥರು ಪರಸ್ಥಳಗಳಲ್ಲಿ ತಮ್ಮ ಅಧಿಕಾರವನ್ನು ಹ್ಯಾಗೆ ಚಲಾಯಿಸುತ್ತಾರೆಯೋ ಅದನ್ನು ಒಂದುಸಲ ಉಲ್ಲಾಸಾರ್ಥವೆಂದಾದರೂ ಹೋಗಿಬಿಟ್ಟು ಕೊಂಡುಹೋಗಿನೋಡಿ ಬರುವರುಂಟೇ ಆಯೋಚನೆ ಸಹ ಮೂಡಾಗಲಿಲ್ಲವು, ಎಂಬದು.

ಈ ಸಂಸ್ಥಾನದ ವಿಷಯದಲ್ಲಿ ವಿತಥ್ಯವಾದ ವಾದ ಇನ್ನೂ ಅನೇಕ ಅಸಮಾಧಾನಕರಗಳಾದ ವೃತ್ತಾಂತಗಳು ಆಗಿಂದಾಗ್ಯೆ ನಮ್ಮ ಕೇಳ್ವಿಕೆಗೆ ಬರುತಲಿರುತಿವೆ. ಬಹಳ ಗಲಭೆಯಾಗಿದ್ದ ಹೈದರಾಬಾದ್‌ಸಂಸ್ಥಾನದ ಆಡಳಿತವನ್ನೆಲ್ಲ ತಹಬಂದಿಗೆತಂದು ದುಷ್ಟರ ಪ್ರಾಬಲ್ಯವನ್ನೆಲ್ಲ ಅತ್ಯಂತಿಕವಾಗಿ ಅಡಗಿಸಿ ಸಕಲಾಂಶದಿಂದಲೂ ಜನಗಳು ಕೊಂಡಾಡುವಕ್ರಮದಿಂ ಪ್ರಸಿದ್ಧಿ ಮಾಡುವದಕ್ಕೆ ಪ್ರಕೃತ ಮಂತ್ರಿಯವರ ತಂದೆಯಾದ ಸರ್ ಸಾಲಾರ್ ಜಂಗರವರಿಗೆ ಯೆಷ್ಟು ಕಾಲ ಹಿಡಿಯಿತೋ ಸ್ವದೇಶೀಯರ ಮತ್ತು ಬ್ರಿಟಿಷ್ ಗವರ್ನಮೆಂಟಿನವರ ಗೌರವ ವಿಶ್ವಾಸಗಳನ್ನು ಸಂಪಾದಿಸಲಿಕ್ಕೆ ಯೆಷ್ಟುಕಾಲ ಕ್ರಮಿಸುಪಟ್ಟರೋ ಅಷ್ಟು ತ್ವರಿತದೊಳು ಅಷ್ಟು ಸುಲಭವಾಗಿ ಅವರ ಕುಮಾರರು ಜನಗಳ ಅಪ್ರೀತಿಗೆಪಾತ್ರರಾಗುತಿದಾರೆಂಬ ರೀತಿಗಳಿಗೆ ಅವಕಾಶ ಉಂಟುಮಾಡುತ ಮನಸ್ಸಿನಲ್ಲಿ ತಿರ್ಗಿಸುತ ಹಿಂದಿನ ಕೀರ್ತಿ ಪ್ರಾಶಸ್ತ್ಯಗಳಿಗೆ ಲೋಪವನ್ನುಂಟುಮಾಡುವವರಾಗಿದಾರೆಂಬ ವೃತ್ತಾಂತವನ್ನು ಕೇಳುವದಕ್ಕೆ ನಾವು ಬಹಳ ಅಸಮಾಧಾನವುಳ್ಳವರಾಗಿದೇವೆ. ನಿಜಾಮರವರು ತಮಗೆ ಪ್ರಾಪ್ತವಾಗಿರುವ ಪದವಿಯ ಸ್ವರೂಪವನ್ನು ಪರಿಭಾವಿಸದೆ ಅನ್ಯರ ಇಷ್ಟಾನುಸಾರ ನಡೆಯುವದು ಅವರಿಗೂ ಕೀರ್ತಿಕರವಲ್ಲವು. ಸ್ವಲ್ಪ ಹೆಚ್ಚು ಕಡಮೆಯಾಗಿ ಸಂಸ್ಥಾನಾಧಿಪತಿಗಳ ಬಾಲ್ಯದಶೆಯೊಳು ಒಪ್ಪಿಸಲ್ಪಟ್ಟ ರಾಜ್ಯಗಳ ಸ್ಥಿತಿಯೆಲ್ಲವೂ ಪರಿಶೀಲನಾರ್ಥ ಕಲ್ಪಿಸಬೇಕಾದುದೆಂದು ಸ್ಪಷ್ಟವೆ. ಇದಕ್ಕೆ ಸ್ವರೂಪ ಕರ್ತವ್ಯಜ್ಞಾನಾಭಿಜ್ಞತೆಯೇ ಮುಖ್ಯಕಾರಣವು. ಇನ್ನುಮೇಲಾದರು ಜಗದಂತಯ ನೇಟಿವ್ ಸಂಸ್ಥಾನಗಳ ವಿಷಯದಲ್ಲಿ ಇಂತಾ ಅಸಮಾಧಾನ ಕರಗಳಾದ ವಿದಕುಸ್ಥಿತಿಗಳು ಯುಟ್ಟಿವಂತೆ ಅನುಗ್ರಹಿಸಬೇಕೆಂತಲೂ ಇಲ್ಲವಾದರೆ ಆದು ಕೇಳ ವ್ಯವೆ ಪಡದಿರುವಂತೆ ಸುಪೂರ್ಣ್ಣ ಬಹಿರಕ್ಷವನ್ನಾದರೂ ನಮಗೆ ಕೃಪೆ ಮಾಡಬೇಕೆಂದು ಕೋರುವೆವು.

A REPLY TO PUNDIT G. ………ACHARIAR.

ವೇದಮೂರ್ತಿ ಗೋವಿಂದಾಚಾರ್ಯರ ಲೇಖನದ ಮೇರೆಕಳೆದತಿಂಗಳ ೩೧ನೇ ತಾರೀಖಿನ ಈ ಪತ್ರಿಕೆಯಲ್ಲಿ ನಾವು ತಿಳಿಸಿದ ಕೆಲವು ಆಕ್ಷೇಪಣೆಗಳಿಗೆ ಪ್ರತ್ಯುತ್ತರರೂಪವಾಗಿ ಅವರು ಮರಳಿ ಬರೆದಕಾಗದವನ್ನು ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ.

ಆಚಾರ್ಯರವರು ನಮ್ಮ ಅಭಿಪ್ರಾಯವನ್ನು ಖಂಡಿಸಿ ಪತ್ರಿಕಾಮೂಲಕ ತಿಳಿಸಿರತ್ತಿಸಿದಕ್ಕಾಗಿ ನಾವು ಬಹಳ ಸಂತೋಷಿಸುವೆವು ಶಿಷ್ಟಾಚಾರಯಾವತ್ಪ್ರಯಾ ಗೌರವನ್ನಾದ ಬಸ್ಸಾಂಶಗಳು ನಮ್ಮವಿಚಾರಕ್ಕೆ ಸಿದ್ಧವಾಗಿರುವದರಿಂದ ಈ ವಿಷಯದಲ್ಲಿ ಮುಂದೆ ಕಂಠಶೋಷಣವಾಡುವದಕ್ಕೆ ನಮಗೆ ಸ್ವಲ್ಪವೂ ಇಷ್ಟವಿಲ್ಲವು. ಯದ್ಯಪಿ ನಾವು ಅನ್ಯರಿಗೆ ಸಾಧಕವಾದ ಭಾಗವನ್ನು ಸ್ವಪಕ್ಷ ಸಿದ್ಧಾಂತದಬಗ್ಯೆ ತವರ್ಥಾನಪಿಜ್ಞಾನೆಯೆಂದ ಉಪಯೋಗಿಸಿಕೊಂಡೆವೆಂಬ ಭಾವವು ಆಚಾರ್ಯರ ಲೇಖನಮೂಲಕ ಬಹುಮಂದಿಗೆ ಉಂಟಾಗಬಹುದಾಗಿ ತಾವನ್ನಾಗ್ಯಕ್ಕೆ ನಮ್ಮ ಸಮಾಧಾನ ಮಂತಿಳಿಸಿ ಪ್ರಸಕ್ತವಿಚಾರವನ್ನಿಲ್ಲಿಗೆಬಿಡುವೆವು.

ವೇ॥ ಗೋಪಾಲಶಾಸ್ತ್ರಿಗಳಿಗೂ ಪರ್ವಾಂಶಪದೂರ ರಘುನಾಥರಾಯರವರಿಗೂ ನಡೆದ ಪ್ರಸಂಗದಲ್ಲಿ ಸದರೀ ಶಾಸ್ತ್ರಿಗಳ ಅನುಮತಿಯಪ್ರಕಾರ ಮುಂದಿನಪ್ರಸಂಗವನ್ನು ತಾವು ನಡಿಸಿರುವದಾಗಿ ಈಗ ಆಚಾರ್ಯರವರು ಪತ್ರಿಕಾಮೂಲಕ ಅನ್ಯರಿಗೆ ತಿಳಿಯಪಡಿಸುವಂತೆ ಪರಿಣಮಿಸಿದ್ದಕ್ಕಾಗಿ ನಾವು ಬಹಳ ವಿಷಾದಿಸುವೆವು.

ನಮನಾಮಾಪಿಸ್ಯೆಣ್ಣ್ಯಾತ್ ಎಂಬ ಶ್ಲೋಕವು ಸಭೆಯಲ್ಲಿ ಪ್ರಸ್ತಾವಿಸಲ್ಪಡಲೇಯಿಲ್ಲವೆಂದು ನಾವು ತಿಳಿಸಲಿಲ್ಲವು. ಪರಂತು ಈಗ ಆಚಾರ್ಯರವರು ಬರೆದಿರುವಪ್ರಕಾರ ಸಭೆಯಲ್ಲಿ ತಿಳಿಸಿದ್ದರೆ ಭಿನ್ನತ್ವಪ್ರಮುಖ ಹೊರಗಾಗಿರುವದೆಂದು ಸೂಚಿಸಿದೆವು. ಸುದರ್ಶೋದಾರವಾಗಿ ಯೆರಡು ಶ್ಲೋಕಗಳಲ್ಲಿನ ಉಪಯುಕ್ತವಾದ ಭಾಗಗಳನ್ನುಮಾತ್ರ ತೆಗೆದುಕೊಂಡು ಒಂದೇಸ್ಥಳದಲ್ಲಿ ಉದಹರಿಸಿದ್ದರಿಂದ ಅವನ್ನು ಸ್ವಕೃತವಾದ ಶ್ಲೋಕವೆಂದು ನಾವು ತಿಳಿದುಕೊಂಡದ್ದು ಆಕ್ಷೇಪಕರವೆಂದು ಆಚಾರ್ಯರು ವ್ಯಕ್ತಪಡಿಸುತ್ತಾರೆ. ಈ ನಿಯಮವು ಅವರಿಗಾಗದಲ್ಲಿ ಉದಹರಿಸಲ್ಪಟ್ಟಿರುವ ಇತರ ಯಾವಶ್ಲೋಕಗಳಿಗೂ ಸಂಬಂಧಿಸದೆ, ಭಿನ್ನೋಕ್ತಿಸಾರಾರ್ಥಗಳುಳ್ಳ ಈ ಒಂದು ಶ್ಲೋಕಕ್ಕೆಮಾತ್ರ ಕಲ್ಪಿಸಿ ತಿಳಿಸಿರುವ ಸಮಾಧಾನವನ್ನು ಆಚಾರ್ಯರ ಮೇಲಣ ಗೌರವಾತಿಶಯದಿಂದ ನಾವೊಪ್ಪಿದಾಗ್ಯೂ ಅಂಗೀಕರಿಸಿದಾಗ್ಯೂ ಪಂಡಿತರು ಅದು ಸಕಾರಣತ್ವೇನ ಪರಿಗ್ರಹಿಸುವರೆಂಬ ಅಂಶ ನಮಗೆ ಸಂದಿಗ್ಧವಾಗಿದೆ.

ನಾನ್ಯೋತ್ಪನ್ನಾ ಪ್ರಜಾಸ್ತೀಹ ಎಂಬ ಶ್ಲೋಕವೂ ಅದರ ಅರ್ಥವು ಸಹ ತಮಗೆ ಸಾಧಕವಾಗಿರುವಂತೆ ಆಚಾರ್ಯರವರು ಬರೆಯುತ್ತಾರೆ. ಸದರೀ ಶ್ಲೋಕಕ್ಕೆ ಗತವಾರದಲ್ಲಿ ನಾವು ಪ್ರಕಟಿಸಿದ ಕುಲ್ಲೂಕಭಟ್ಟಕೃತ ವ್ಯಾಖ್ಯಾನದಲ್ಲಿ ನಾಪ್ಯನ್ಯಸ್ಮಿನ್ ಬ್ರಾಹ್ಮಣ್ಯಾದ್ವಿತೀಯೋಭರ್ತಾ ಕ್ವಚಿತೇ ಎಂಬುವದೆಯೊಳು ನಮ್ಮ ವರ್ಣಸಂಯೋಜಕರಿಂದ "ಪ" ಕಾರವು ಬಿಟ್ಟುಹೋದದಾರಣ ಈಗ ಆಚಾರ್ಯರವರು ತಮಗೆ ಸಾಧಕತ್ವೇನ ಹೇಳುವಂತೆ ಪರಿಣಮಿಸಿತು. ಆದರೆ ವ್ಯಾಖ್ಯಾನಕಾರರು ತಿಳಿಸಿದಂತೆ ಅಭಿಪ್ರಾಯಪ್ರಕಾರ (ನಾಪ್ಯನ್ಯಸ್ಮಿನ್ ಬ್ರಾಹ್ಮಣ್ಯಾ ದ್ವಿತೀಯೋಭರ್ತಾ ಕ್ವಚಿತ್ ಉಪದಿಶ್ಯತೇ) ಎಂಬುವ ವಾಕ್ಯಕ್ಕೆ ಪತಿವ್ರತಾಸ್ತ್ರೀಗಳಿಗೆ ಉಪಭರ್ತೃ ಎನ್ನಿಸಿಕೊಳ್ಳುವ ಅನ್ಯಪುರುಷನು ಯಾವಶಾಸ್ತ್ರದಲ್ಲಿಯೂ ಗಂಡನಾಗುವಂತೆ ತಿಳಿಸಲ್ಪಡಲಿಲ್ಲವೆಂಬರ್ಥವು. ಈ ವಾಕ್ಯವೂ ವಾಕ್ಯಾರ್ಥವೂ ಹ್ಯಾಗೆ ನಿಜವಾಗುವವೆಂತಲಾಗಲಿ, ಈದು ಕುಲ್ಲೂಕಭಟ್ಟರ ತಾತ್ಪರ್ಯವಾಗಿರಲಾರದೆಂತಲಾಗಲಿ ಹೇಳುವರಾದರೆ ಮುಂಬೈಯಲ್ಲಿ ಛಾಪಿಸಲ್ಪಟ್ಟಿರುವ ಕುಲ್ಲೂಕಭಟ್ಟ ವ್ಯಾಖ್ಯಾನ ಸಹಿತ ಮನುಸ್ಮೃತಿಯ ೧೬೨ನೇ ಪುಟವನ್ನು ನೋಡಿದಲ್ಲಿ ನಮ್ಮ ಮಾತು ನಿಜವೆಂದು ತೋರಬಹುದು. ಮತ್ತು ಇದು ಕುಲ್ಲೂಕಭಟ್ಟರ ತಾತ್ಪರ್ಯವಲ್ಲವೆ ಆಚಾರ್ಯರು ತಿಳಿಸುವರ್ಥವೇ ವ್ಯಾಖ್ಯಾಕರಿಗೆ ಗ್ರಾಹ್ಯವೆಂದು ಹೇಳಸುವರಾದರೆ ಪ್ರಕರಣವಿರುದ್ಧವಾಗಿಯೂ, ಪ್ರೋಕ್ತೋತ್ತರಾರ್ಥವಿರುದ್ಧವಾಗಿಯೂ ಅಭಿಪ್ರಾಯವನ್ನು ವ್ಯಕ್ತಪಡಿಸುವ ನಿರ್ಣಯವಿಲ್ಲದವರ ವಾಕ್ಯ ನಮಗೆ ಹ್ಯಾಗೆ ಗ್ರಾಹ್ಯವಾಗುವದು? ಆದರಿಂದ ನಾವು ಬರೆದ ವ್ಯಾಖ್ಯಾನವನ್ನು ಆಚಾರ್ಯರಿಗೆ ಯೆಷ್ಟುಮಾತ್ರವೂ ಸಾಧಕವಾಗಲಾರದು.

ವೇದನವಿಷಯವಾಗಿ ಸಭೆಯಲ್ಲಿ ಪ್ರಸ್ತಾವಿಸಲ್ಪಡಲಿಲ್ಲವೆಂದು ಆಚಾರ್ಯರೇ ಈಗ ಹೇಳರುವದರಿಂದ ಅದರವಿಚಾರ ನಮಗಬೇಕಿಲ್ಲವು. ಆದರೆ ಈ ಅಂಶವನ್ನು ಆಸಭೆಗಬಂದವರೇ ನಿರ್ಣಯಿಸಿಕೊಳ್ಳಬಹುದು.

ಬೇರನಪುತ್ರನವಿಷಯವಾಗಿ ನಾರಾಯಣಶ್ಲೋಕಾಭಿಪ್ರಾಯವನ್ನು ಯೆತ್ತಿದನಮಯದಲ್ಲಿ ಸಭೆಬರವಸ್ತಾದವರಿಂದ ಅದನ್ನು ಆವಶ್ಯಕವೆಂದು ತಿಳಿದು ತಮ್ಮ ಲೇಖನದಲ್ಲಿ ಉದಹರಿಸಿರುವಂತೆ ಆಚಾರ್ಯರು ಸೂಚಿಸಿದ್ದರಿಂದ ಇದು ಬಳಿಕ ಪ್ರಾದುರ್ಭಾವ ವಿಚಾರವೆಂದು ತಿಳಿಸಿದ ನಮ್ಮ ಮಾತನ್ನು ಅವರೇ ಅಂಗೀಕರಿಸಿದಂತೆ ಆಯಿತು. ಆಚಾರ್ಯರ ನೇಯಾಯಿಗಳಿಗೆ ವ್ಯಭಿಚಾರದೋಷವನ್ನು ಕಲ್ಪಿಸುವದಕ್ಕೆ ನಮಗೆ ಯೆಷ್ಟುಮಾತ್ರವೂ ಇಷ್ಟವಿಲ್ಲವು. ಆದರೆ ಬೇರನ ಪಟ್ಟ ಪ್ರಯೋಗವನ್ನು ಪರಿಗ್ರಹಿಸುವಲ್ಲಿ ಹಿಂದೆ ನಾವು ತಿಳಿಸಿದ ವಿಪ್ರತಿಪತ್ತಿಗಳಿಗೆ ಕಾರಣವಾಗುತಿವೆ. ಮುಖ್ಯವಾಗಿ ದೇವ, ನವಿ, ಋಷಿಮೂಲಗಳನ್ನು ಹುಡುಕುತ ಅವರನ್ನು ಉದಾಹರಣವೇ ನಡಿದಿಯಲ್ಲಿ ಸೇಳಿಯುವದಕ್ಕೆ ನಮಗೂ ಇಷ್ಟವಿರುವದಿಲ್ಲವು.

ನೋಟಿಸ್.

ಧಮಕೂರಲ್ಲಿರುವ ಕರ್ನಾಟಕಬ್ಯಾಂಕ್ (ಲಿಮಿಟೆಡ್) ಆಫೀಸ್, ನೆಂ॥೧೪ನೇ ಇಸವಿ ಆಗಸ್ಟು ತಾರೀಖ್ ೧೯ ಮತ್ತು ಸೆಪ್ಟೆಂಬರ್ ತಾರೀಖ್ ೨ನೇ ಬುಧವಾರದಲ್ಲಿ ಸಹ ಆ ಬ್ಯಾಂಕುಮಜಕೂರ್ ಷೇರ್ ಹೋಲ್ಡರ್‌ಗಳ ಪ್ರೊಸೀಡಿಂಗ್ಸ್ ಮೇರೆ ಇಂಡಿಯನ್ ಕಂಪೆನೀಸ್ ಆಕ್ಟ್ ೧೮೬೬ನೇ ಸೆಕ್ಷನ್ ಪ್ರಕಾರ ಕ್ಲೋಜು ಮಾಡಲ್ಪಟ್ಟಿರುತ್ತೆ.
ತಾರೀಖ್ ೩ನೇ ಸೆಪ್ಟೆಂಬರ್, ೧೮೮೫ನೇ ಇಸವಿ.

S. APPAJI ROW,
ಲಿಕ್ವಿಡೇಟರ್.

LOCAL AND PROVINCIAL NEWS
ಒಳಸೀಮೆಯ ಮತ್ತು ತಾಲ್ಲೂಕಿನ ವರ್ತಮಾನಗಳು.

The weather—ಈಗ್ಯೆ ಎಂದೆರಡುದಿನಗಳಿಂದ ಕಾಲಸ್ಥಿತಿ ಬದಲಾಯಿಸಿ ಸಂತೋಷಜನಕವಾಗಿದೆ, ಮೊನ್ನೆಯದಿನದ ಮಳೆಯು ಜನಗಳಿಗೆ ಬಹಳಮಟ್ಟಿಗೆ ಪ್ರಾಣಾಧಾರವಾದ್ದಾಗಿದೆ ಮೊಳಕೆಯೊಡೆಯುವ ರಾಗಿ ಪೈರುಗಳು ಚಿಗುರಿಕೊಳ್ಳುವದಕ್ಕೆ ಬಹಳ ಅನುಕೂಲವಾಯಿತು

Theatrical—ಗತ ಶನಿವಾರ ರಾತ್ರಿ ಈ ಊರು ರಸಿಕ ಮನೋಲ್ಲಾಸಿನೀ ನಾಟಕ ಕಂಪನಿಯವರು ಹರಿಶ್ಚಂದ್ರ ನಾಟಕವನ್ನು ಆಡಿದರು ಪ್ರಖ್ಯಾತಿಯುಳ್ಳವಾಗಿದ್ದ ಅದಿನ ನಾಟಕ [illegible] ಅಭಿನಯದ ಮುಂದೆ ಇತರ ವಿಧ ಆಟಗಳೊಂದೂ ವಿಜೃಂಭಿಸಲಿಲ್ಲವೆ ಇತ್ತು. ಹಿಂದೆ ಈ ಊರಿಗೆ ಬಂದು ಅನೇಕಾವರ್ತಿ ನಾಟಕಗಳನ್ನು ಆಡಿ ಜನಗಳನ್ನು ವಿಶೇಷವಾಗಿ ಸಂತೋಷಗೊಳಿಸಿದ ರತ್ನಾವಳೀ ಕಂಪೆನಿಯವರು ತಮ್ಮ ಕಂಪೆನಿಯನ್ನು ಮುಕ್ತಾಯ ಮಾಡಿಬಿಟ್ಟರೆಂದು ಹಿಂದೆಯೇ ತಿಳಿಸಿದ್ದೆವಷ್ಟೆ. ಸದರೀ ಕಂಪೆನಿಯ ಮ್ಯಾನೇಜರ್ ಮ॥ ರಂಗಾಚಾರ್ಯರು ವಗೈರೆ [illegible] ಅನ್ನದ ನಾಟಕಗಳನ್ನೇ ಆಡುತಲಿವೆ. ಯಾವ ಕಾಲಕ್ಕೆ ಯಾವ ಪ್ರಾಗೆ ಬದಲಾಯಿಸುವರೋ ತಿಳಿಯುವದಕ್ಕೆ ಆಗುವದಿಲ್ಲವು. ಅದರೆ [illegible] ಅವಶ್ಯ [illegible]

The literature—ವ್ಯಾಸನವಾದ ಈ ಜಗತ್ತಿಗೆ [illegible] ಇರುತಿದೆಯೆಂದೂ, ಅಂತಾ ಕಾರಣ ಸತ್ಯಾಗಿಯೂ ಶಾಶ್ವತವಾದದ್ದಾಗಿಯೂ ಇರುತಿದೆಯೆಂತಲೂ, ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಈ ವಿಷಯಗಳನ್ನು ತಿಳಿಸತಕ್ಕ ಗ್ರಂಥವು ವೇದವನ್ನು ಸಿಕೊಳ್ಳುತವೆ. ಅಂತಾ ವೇದದಲ್ಲಿ ಪ್ರಾಮಾಣಿಕಜ್ಞಾನದೊಡನೆ ಅವರಲ್ಲಿ ತಿಳಿಸಲ್ಪಟ್ಟಿರುವಂತೆ ಆಚರಿಸತಕ್ಕವರೇ ವೈದಿಕರೆನ್ನಿಸಿಕೊಳ್ಳುವರು ಅಂತಾ ವೈದಿಕರಿಂದ ಮಾಡಲ್ಪಡುವ ಕರ್ಮಗಳು ನಿಷ್ಫಲವಾಗಲಾರವೆಂಬವಕ್ಕೆ ಇದರಡಿ ಪ್ರಕಟಿಸಲ್ಪಡುವ ಬ್ರಹ್ಮಶ್ರೀ ಪಂಡಿತ ವಾಸುದೇವಶಾಸ್ತ್ರಿಗಳವರ ಲೇಖನವು ಸಂಪೂರ್ಣ ನಿದರ್ಶನವಾಗಿರುತಿದೆ.

ಅಯ್ಯಾ—ನಾಳೇ ಸೋಮವಾರ ಪ್ರಕಟಿಸಲ್ಪಡುವ ತಮ್ಮ ಪತ್ರಿಕೆಯಲ್ಲಿ ನ ಮ ಜ್ಞಾಪಕ ಪಡಿಸುವ ಕೆಲವು ಅಂಶಗಳಿಗೆ ಅವಕಾಶಕೊಟ್ಟು ವೇದಶಾಸ್ತ್ರ ಪ್ರಾಮಾಣ್ಯವನ್ನು ಈ ದೇಶದ ಜನಗಳು ಅನ್ಯಥಾ ಭಾವಿಸದ ಹೃದಯವಾಗಿ ಅಂಗೀಕರಿಸುವಂತೆ ತಾವು ಪ್ರಕಾಶ ಪಡಿಸುವಿರೆಂದು ಪ್ರಾರ್ಥಿಸುವೆನು.

ಈ ದೇಶದಲ್ಲಿ ಅನಾವೃಷ್ಟಿಯಿಂದ ಸಂಭವಿಸಿದ ಮಹಾನರ್ಥವನ್ನು ಹೋಗಲಾಡಿಸಲು ನಾವುಗಳು ಶಕ್ತರಾಗದೆ ಹೋದಾಗ್ಯೂ ವೇದಶಾಸ್ತ್ರ ಪ್ರಾಮಾಣ್ಯ ಬುದ್ಧಿಯಿಂದ ಸಮಸ್ತ ಕರ್ಮಾನುಷ್ಠಾನಪರರಾದ ಈ ಕೆಳಗೆ ನಮೂದಿಸಲ್ಪಡುವ ಯೋಗ್ಯರಾದ ಬ್ರಾಹ್ಮಣರನ್ನು ಸೇರಿಸಿಕೊಂಡು ಪರ್ಯಾಲೋಚಿಸಿ ಕಳೆದ ತಿಂಗಳ ೨೯ನೇ ತಾರೀಖು ಲಾಗಾಯತು ಪರಿಶುದ್ಧವಾದ ಗಂಗಾ ಕ್ಷೇತ್ರದಲ್ಲಿ ಮಿತ್ರಾವರುಣ, ಪರ್ಜನ್ಯಾದಿ ಮಂತ್ರಜಪ ಮೊದಲಾದವುಗಳನ್ನೂ, ಸುಂದರಕಾಂಡ, ವಿರಾಟಪರ್ವ, ಸಪ್ತಶತಿ ಮೊದಲಾದ ಪಾರಾಯಣಗಳನ್ನೂ, ಶ್ರೀಪ್ರಸನ್ನ ಪಾರ್ವತೀ ಸಮೇತ ಗಂಗಾಧರೇಶ್ವರನಿಗೆ ಪ್ರತಿದಿನವೂ ಶತರುದ್ರಾಭಿಷೇಕವನ್ನೂ ಸಂಕಲ್ಪಿಸಿ ೧೧ದಿವಸ ಶ್ರಾವಣಕಾತ ಏಕಭುಕ್ತ ಮೊದಲಾದ ಬ್ರಹ್ಮಚರ್ಯವ್ರತಗಳಿಂದ ಗ್ರಾಮ ಪ್ರವೇಶವಿಲ್ಲದೆ ಅಧ್ಯಯನಾದಿಗಳಿಂದ ಪುತ್ರಾನುಷ್ಠಾನವು ಮಾಡಿ ೧೩ನೇ ದಿನ ನಿರಂತರವಾಗಿ ರಾತ್ರೀ ಹಗಲೂ ಜಾಗರದಿಂದ ಶ್ರೀ ಗಂಗಾಧರೇಶ್ವರನಿಗೆ ಮಹಾ ಸಹಸ್ರಕುಂಭಾಭಿಷೇಕವನ್ನು ಮಹಾನ್ಯಾಸಪೂರ್ವಕವಾಗಿ ಶತರುದ್ರೀಯ ರೂಪವಾಗಿ ಅನುಷ್ಠಿಸಿದ ಸೋಮವಾರದಿನ, ಅಂದರೆ ವ್ರತಾರಂಭಕ್ಕೆ ೧೪ನೇ ದಿನವಾದ ನಿನ್ನೆಯದಿನ ರಾತ್ರಿ ಉಪಾಸ್ಯದೇವತಾನುಗ್ರಹ ಬಲದಿಂದ ೧೦ ಘಂಟೇ ಲಾಗಾಯತು ರ ಘಂಟೆಯವರಿವಿಗೂ ಮಹತ್ಫಲವಾಗಿ ಪ್ರಾಪ್ತವಾದ ಈ ಸುವೃಷ್ಟಿಯನ್ನು ತಾವು ಪರಾಂಬರಿಸದೆ ಇರಲಾರಿರಿ. ಇಂತಾ ಕಲಿಕಾಲದಲ್ಲಿಯೂ ಸತ್ಕರ್ಮಾನುಷ್ಠಾನಕ್ಕೆ ಕರಬದರ ಸದೃಶವಾಗಿ ಸುಫಲಿಸಿದ ಮಹತ್ಫಲವನ್ನು ಕುರಿತು ನಾವು ಬಹಳ ಸಂತೋಷಿಸಿದೆವು. ಈ ಪ್ರಾಂತದ ದೊಡ್ಡದೊಡ್ಡ ಉದ್ಯೋಗಸ್ಥರು, ಮಹಾಜನಗಳು, ವರ್ತಕರು ಮೊದಲಾದ ಎಲ್ಲಾ ಜನಗಳೂ ನಾವೂ ಮತ್ತಿದ್ದ ಈ ಅನುಷ್ಠಾನವನ್ನೂ ಅದಕ್ಕೆ ಪ್ರಾಪ್ತವಾದ ಈ ವೃಷ್ಟಿಫಲವನ್ನೂ ತಿಳಿದವರಾಗಿದಾರೆ. ಇದರಂತ ಈ ಮಹಾಸೂರು ಸೀಮೆಯ ಎಲ್ಲಾ ಜನಗಳಿಗೂ ವ್ಯಕ್ತವಾಗುವಂತೆ ಘನವಾದ ತಮ್ಮ ವಾಕ್ಚಾತುರ್ಯದೊಡನೆ ಪತ್ರಿಕೆಯಲ್ಲಿ ಪ್ರಕಟಿಸುವಿರೆಂದು ಸಂಕ್ಷೇಪವಾಗಿ ಈ ವಿಷಯವನ್ನು ಮಾತ್ರ ಸೂಚಿಸಿದ್ದೇನೆ.

ಲಾ ॥ ೧೩ನೇ ಸೆಪ್ಟಂಬರ್ ೧೮೮೫.

ವಾಸುದೇವಶಾಸ್ತ್ರಿ.

ಅನುಷ್ಠಾತೃಗಳು.

[illegible]

NOTICE TO CORRESPONDENT

« ಅರಿಶೀಕೆರೆ, ಒಬ್ಬ ಸವರರ್ "—ಕಳೆದ ತಿಂಗಳ ೩೧ನೇ ತಾರೀಖಿನ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಸ್ತ್ರೀ ಪುನರ್ವಿವಾಹ ವಿಷಯಕವಾದ ನಮ್ಮ ಉಪನ್ಯಾಸವನ್ನು ಕುರಿತು ನೀವು ಬರೆದ ಕಾಗದವು ನೋಡಲಾಗಿ ಅದು ಬಹಳಮಟ್ಟಿಗೆ ವಾಸ್ತವ್ಯಾಂಶವನ್ನು ವ್ಯಕ್ತಪಡಿಸತಕ್ಕದ್ದಾಗಿದ್ದರೂ, ಯಥಾರ್ಥವಾದೀ ಬಹುಜನವಿರೋಧಿ, ಎಂಬ ಲೋಕೋಕ್ತಿಯಂತೆ ಅದು ಪ್ರಕಟಿಸುವದರ ಮೂಲಕ ಬಹುಮಂದಿಯ ವಿದ್ವೇಷಕ್ಕೆ ವ್ಯರ್ಥವಾಗಿ ನಾವು ಪಾತ್ರರಾಗಬೇಕಾಗಿ ಬರುವ ದೋಷದಿಂದ ಸದರೀ ಕಾಗದವನ್ನು ಈ ಪತ್ರಿಕೆಯಲ್ಲಿ ಪ್ರಕಟಿಸದೆ ನಿರಾಕರಿಸಿರುತ್ತೇವೆ. ಯದ್ಯಪಿ « ಕರೀಗುಂವಗ್ರಾಮೆ ಪುರಾಣಾಖ್ಯಾನದೇವುರಾಣವಷ್ಟುಯೋರ್ಯದ್ವ ಮಾಸೀತ್ಕರಾಭ್ಯಾಂ । ತತಃ ಪುಸ್ತಕಾಭ್ಯಾಂ ತದುಪಾದುಕಾಭ್ಯಾಂ ಫಜೇತಿಃ ಫಜೇತಿಃ ಪರಾತಿಃ ಪರಾತಿಃ॥" ಯೆಂದು ನೀವು ಉದಹರಿಸಿದ ಶ್ಲೋಕಾರ್ಥದಂತೆಯೇ ಪ್ರಸಕ್ತ ವಿಚಾರವೇ ಪಟ್ಟಿದೆ ಪುನರ್ವಿವಾಹಕ್ಕೆ ಈಗ ಪ್ರತಿಷೇಧಕರ ಪ್ರಾಬಲ್ಯವು ಅತ್ಯಧಿಕವಾದದ್ದಾಗಿದ್ದರೂ, ಈಗ ಸಾಧಾರಣವಾಗಿ ಪುನರ್ವಿವಾಹವು ಅವಶ್ಯಕರ್ತವ್ಯವೆಂದು ಸಾಧಿಸುವವರ ಯುಕ್ತಿ ಪ್ರಮಾಣಗಳು ಸದ್ಯಃ ಫಲಕಾರಿಯಾಗದೆ ಹೋದಾಗ್ಯೂ ಇನ್ನೂ ಕ್ವಚಿತ್ಕಾಲದೊಳಾದರೂ ಇದು ಸಾರ್ವಜನೀನವಾದ ಶಿಷ್ಟಾಚಾರವೊಳಕೊಂಡಾಗಿ ಏರ್ಪಡದೇ ಹೋಗಲಾರದೆಂದು ತೋರುತಿದೆ. ನಾವು ಮೇಲೆ ತಿಳಿಸಿದಂತೆ ಪುನರ್ವಿವಾಹದ ಆವಶ್ಯಕತೆಯು ಜನಗಳಿಗೆ ಅಪ್ರೇರಿತವಾಗಿ ಪ್ರಬಲವಾಗುತಲಿದೆಯೆಂಬ ಭಾವವನ್ನು ವ್ಯಕ್ತಪಡಿಸತಕ್ಕ ಒಂದು ಲೇಖನವನ್ನು ಯಥಾವಸ್ಥಿತವಾಗಿ ನಾವು ಇದರಡಿ ಪ್ರಕಟಿಸುವೆವು. ಸದರೀ ಕಾಗದದಲ್ಲಿನ ವಿಷಯವು ಕಲ್ಪಿತವೆಂದು ಭಾವಿಸಲ್ಪಡುವದಾದ್ದಾಗಿದ್ದರೂ ಅದರ ವಿಷಯಸ್ಥಿತಿಯಂ ನಾವು ಚನ್ನಾಗಿ ಬಲ್ಲೆವಾದಕಾರಣ ಅದನ್ನಿಲ್ಲಿ ಪ್ರಕಟಿಸಬೇಕಾದವರಾದೆವು. ಈ ಕಾಗದವನ್ನು ಓದತಕ್ಕವರೆಲ್ಲರಿಗೂ, ಪ್ರವಾಹರೂಪವಾದ ಕಾಲಗತಿಯ ಸ್ವರೂಪವೂ ಪ್ರಸಕ್ತ ಆವಶ್ಯಕತಾನಾವಶ್ಯಕತೆಯೂ, ಅದರ ಸಾಧ್ಯಾಸಾಧ್ಯತ್ವವೂ ತೋರದೆ ಹೋಗಲಾರದಾಗಿ ಇನ್ನು ಮುಂದೆ ಈ ವಿಷಯದಲ್ಲಿ ನಮ್ಮ ತಾತ್ಪರ್ಯವು ಆವಶ್ಯಕವಾಗಿರುವದಿಲ್ಲವು.—ಎಡಿಟರ್, ಕ. ಪ್ರ.

CORRESPONDENCE

ಅಯ್ಯಾ,—ಇದರಡಿ ನಾನು ತಿಳಿಸುವ ವಿಷಯವು ಯಥಾವಸ್ಥಿತವಾದ ಪ್ರಕೃತ ನನ್ನ ಸ್ಥಿತಿಯಂ ವ್ಯಕ್ತಪಡಿಸತಕ್ಕದ್ದಾಗಿರುವದರಿಂದ ಹೃದಯವ್ಯಥಾಕಾರಿಯಾದ ಅದಂ ತಮಗೆ ತಿಳಿಯಪಡಿಸಿದರೆ ಸ್ವಲ್ಪ ದುಃಖೋಪಶಾಮಕವಾಗುವದೆಂಬ ಭಾವದೊಡನೆ ಶ್ರುತಪಡಿಸುವೆನೇನೆಂದರೆ.—

ಆಸ್ತಿಕ ಮತಾವಲಂಬಿಯಾದ ನನಗೆ ಈಗ ಬಾಲವಿಧವೆಯಾದ ಪುತ್ರಿ ಯೊಬ್ಬಳಿರುವಳು. ಈಕೆ ೧೮೭೩ನೇ ಇಸವಿ ಆಗಸ್ಟು ತಿಂಗಳಲ್ಲಿ ಜನಿಸಿದಳು. ಇವಳ ಆರನೆಯ ವರುಷದಲ್ಲಿವಳಂ ಕ್ರಮಪ್ರಕಾರ ಯೋಗ್ಯನಾದ ಒಬ್ಬ ವರನಿಗೆ ಕೊಟ್ಟು ವಿವಾಹ ಮಾಡಿದೆನು. ದುರ್ವಿಧಿ ವಿಲಾಸದಿಂದ ಮದುವೆಯಾದ ೩ ತಿಂಗಳಲ್ಲಿಯೇ ಅವಳ ಗಂಡನು ಏಕಾಏಕಿ ಮೃತಪಟ್ಟನು. ಈಗ ಇವಳಿಗೆ ಹನ್ನೊಂದನೆಯ ವರುಷ ನಡೆಯುತಲಿದೆ. ಈಕೆಗೆ ರಂಗನಾಯಕಿಯೆಂದು ಹೆಸರಿಟ್ಟಿರುವೆನು. ಇವಳು ಬಾಲ್ಯದಲ್ಲಿಯೇ ಇಲ್ಲಿನ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ ಆಗಿಂದಾಗ್ಯೆ ಇನಾಮುಗಳನ್ನು ಪಡೆಯುತ ಬಹಳ ಸಮರ್ಥಳೆನಿಸಿಕೊಂಡಳು. ಇವಳು ಮುಂದೆ ಅನಿವಾರ್ಯವಾದ ನಿರಂತರ ದುಃಖ ಭಾಜನಳಾಗಬೇಕಾಗುವದೆಂಬ ಈಶ್ವರ ಸಂಕಲ್ಪದಿಂದಲೇನೋ ಇವಳಿಗೆ ವಿದ್ಯಾ ಕೌಶಲ್ಯವು ಬಹಳ ತೀವ್ರವಾಗಿ ವೃದ್ಧಿಯಾಗುತ ಬಂದು. ಈಗ ಕನ್ನಡವನ್ನು ಚೆನ್ನಾಗಿ ಓದಿ ಬರೆಯುವಷ್ಟು ಯೋಗ್ಯತೆ ಯುಂಟಾಗಿದೆ. ಇಷ್ಟರ ಜ್ಞಾನ ಉಂಟಾಗಿರುವದರಿಂದ ಅಲ್ಲಿಯಲ್ಲಿ ನಡೆಯುವ ಪುನರ್ವಿವಾಹ ವಿಷಯವು ತಿಳಿದುಕೊಂಡು «ಎಲ್ಲಾಗಲಿಲ್ಲವೋ, ಇಲ್ಲಾಗಲಿಲ್ಲವೋ?, ನನಿಗೂ ಯಾತಕ್ಕೆ ಮಾತ ಬಾರದು" ? ಯೆನ್ನುತ್ತಾಳೆ. ನನಿಗೂ ನನ್ನ ಹೆಂಡತಿಗು ಸಹ ಈ ಮಾತು ಕಿವಿಯಲ್ಲಿ ಬೀಳುವಾಗ್ಯೆಲ್ಲ ಹೊಟ್ಟೆಯಲ್ಲಿ ಚುಚ್ಚಿದ್ದಂತೆಯಾಗುತಿದೆ ಕಣ್ಣೀರೊಡನೆ ಅವಳ ಮುಖವು ನೋಡಲಾರದೆ «ನಿನ್ನ ಕೆಲಸವೇನಾದರೂ ಇದ್ದರೆ ಅದು ನೋಡು ಹೋಗು " ಯೆಂದು ಗದರಿಸಿಕೊಳ್ಳುವೆವು ಇವಳು ಗೊಣಗುಟ್ಟುತ ನಿರ್ವಿಣ್ಣಳಾಗಿ ಹೊರಟುಹೋಗುವಾಗ್ಯೆ ನಮ್ಮ ಪ್ರಾಣಗಳೇ ಹೋದಂತೆ ಯಾಗುತಿದೆ. ಈ ದುಃಖವನ್ನು ಯಾರ ಸಂಗತ ಹೇಳಿಕೊಳ್ಳುವಣ ! ನಾವು ಸೋಮಯಾಜಿಯಾಂಧ್ರ ಕುಟುಂಬಸ್ಥರು. ಮತ್ತು ಒಳ್ಳೆಯ ಆಚಾರ್ಯರು. ನನಗೂ ನನ್ನ ಹೆಂಡತಿಗೂ ಪುನರ್ವಿವಾಹ ವಿಷಯದಲ್ಲಿ ಅಂತಃ ಅಭಿಪ್ರಾಯ ವುಂಟು ಸದರೀ ಹುಡುಗಿಯಾದರೋ ಪದೇ ಪದೆ ತಿಳಿಸುತಲಿದ್ದಾಳೆ. ನಮ್ಮಲ್ಲಿ ಇವಳಿಗೆ ವರನು ದೊರೆಯುವದು ಬಹಳ ಪ್ರಯಾಸವಾಗಿರುತಿದೆ. ಸ್ವಜನರಲ್ಲಿ ವಿನಾ ಅನ್ಯರೊಳು ಸಂಬಂಧ ಮಾಡಲಿಕ್ಕೆ ನಮಗೆ ಸ್ವಲ್ಪವೂ ಇಷ್ಟವಿಲ್ಲವು. ನಮ್ಮವರೇ ಅಂದರೆ ಆಚಾರ್ಯರುಗಳೇ ಬೇಕಾಗಿದೆ. ಇದಕ್ಕೆ ನಮ್ಮ ಜನಗಳ ಅಭಿಮತವೂ ಕೇವಲ ಆವಶ್ಯಕವಾದ್ದಾಗಿರುತಿದೆ ನಮ್ಮವರಾದರೋ ಶುದ್ಧ ಶ್ರಾದ್ಧಜಡರಾಗಿರುತ್ತಾರೆ ಇದಲ್ಲದೆ ಇದು ಬಹು ದ್ರವ್ಯಸಹಾಯಾಪೇಕ್ಷಿತವಾದದ್ದಾಗಿಯೂ, ಒಬ್ಬರಿಬ್ಬರಿಂದ ಸಾಧ್ಯವಲ್ಲದ್ದಾಗಿಯೂ ಇರುತಿದೆ. ಮತ್ತು ಇದನ್ನು ರಾಜಾಧಿರಾಜರು ಹಿಡಿದು ಪ್ರೋಟಿಸಿ ಮಾಡಬೇಕಾದ ಕೆಲಸವೇ ಹೊರ್ತು ಬಡಪಾಯಿಗಳಿಂದಾಗತಕ್ಕದ್ದಲ್ಲವು ಒಂದುವೇಳೆ ಸ್ವಜನರು ಪರಿತ್ಯಾಗ ಮಾಡಿದರೂ ಲಕ್ಷ್ಯವಿಲ್ಲದೆ ಜೀವಿಸುವಂತಿರಬೇಕು. ಇದಕ್ಕೆ ತಾವೇನು ಅಪ್ಪಣೆ ಕೊಡುವಿರೋ ಅದರಂತೆ ಶಿರಸಾವಹಿಸಿ ನಡೆಯಲು ಸಿದ್ಧನಾಗಿದೇನೆ

ನಾನು ಮೇಲೆ ಕಂಡ ಕಾಗದವನ್ನು ಬರೆಯುವಾಗ್ಯೆ ಒಳ್ಳೇ ಮಳೆಯಾಗುತ ಅದ್ಯಾಪಿ ಬಿಡದೆ ಇರುವದರಿಂದ ಇದೇ ಒಂದು ಶುಭ ಸೂಚನೆಯೆಂದು ಹೇಳಬೇಕಾಗಿದೆ

ಕುಂದಗ್ರಾಮ, ೬ 9 ಶನಿವಾರ ಹಗಲು ದಿವಿ 4 ಘಂಟೆ.	ತಮ್ಮ ವಿಧೇಯ, ಸ್ವೈರಂತರ್ಯ ದುಃಖಪೀಡಿತನಾದ ಶಾಣಕಜ್ಞಾನಿ,

ಸ್ತ್ರೀ ಪುನರ್ವಿವಾಹ ವಿಷಯಂ.

ಅಯ್ಯಾ,—ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ ನನ್ನ [illegible]

[illegible]

(ಸತ್ಯಸಂಧಾ ಮಹೇಶ್ವರಶಾಸ್ತ್ರಿ) ಮತ್ತು (ಸದ್ವಿಶೇಷ [illegible]) [illegible]

[illegible]

ನಾಸ್ಮೋತ್ಸ್ವಾತ್ಮ ಶಾಸ್ತ್ರೀಯ [illegible]

[illegible]

[illegible]

SUMMARY OF NEWS.

The High Court — [illegible]

Birth of a prince — [illegible]

Horses for the Regent of Kolhapur — [illegible]

The Maharaja of Travancore's Scholarship. — [illegible]

Resignation of an official — [illegible]

The High Court employees — [illegible]

Ripon Memorial — [illegible]

Dacoits. — [illegible]

Adultery — [illegible]

Rum fo Gelwa — [illegible]

The Dewan of Travancore — [illegible]

Cholera — [illegible]

Execution — [illegible]

[illegible]

BANGALORE — Printed and published for the Proprietor, at the KARNATIC PRESS — 1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗನಾರ್ಥ್ಯಕರ್ಣಾಟಕಪ್ರಕಾಶನಪರಾಜಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ನ್ವಿಶಾಸುಪರಿಶೋಧಿತಾದಿಕಶಿಮಾನಸಂಸಂಮುದಂ॥

Vol. XII.] BANGALORE—MONDAY, SEPTEMBER 21, 1885. [No. 38.

ಸಂಪುಟ ೧೨.] ಬೆಂಗಳೂರು:—ಸನ್ ೧೮೮೫ನೇ ಇಸವಿ ಸೆಪ್ಟಂಬರ್ ೨೧ನೇ ತಾರೀಖು ಸೋಮವಾರ. [ಸಂಚಿಕೆ ೩೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷು ಮತ್ತು ಕನ್ನಡ [illegible] ವರುಷ ೧ಕ್ಕೆ		೧೨—೦—೦
ಇಂಗ್ಲೀಷು [illegible] ವರುಷ ೧ಕ್ಕೆ		೬—೦—೦
ಕನ್ನಡ [illegible]		೬—೦—೦
[illegible]	೧ಕ್ಕೆ	೦—೮—೦
[illegible]	೧ಕ್ಕೆ	೦—೪—[illegible]
[illegible]	೧ಕ್ಕೆ	೦—೫—[illegible]

[illegible]

ಪ್ರಕಟನೆಯ ರಿವಾಜು.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—[illegible]

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARASANGRAHA.

Price including Postage, Rs. 5-6 0

[illegible]

[illegible] ... ... ರೂ॥ ೫—೦—೦

[illegible] ೦—೬—೦

[illegible]

ನೋಟೀಸ್.

[illegible]

ಕನ್ನಡ [illegible]

[illegible]	೧—೮—೦
[illegible]	೦—೧೨—೦
[illegible]	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೭—೦
[illegible]	೦—೨—೦
[illegible]	೫—೦—೦

ಕನ್ನಡ ಗ್ರಂಥಗಳು.

[illegible]	೦—೩—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೬—೬
[illegible]	೦—೨—೬
[illegible]	೦—೩—೦
[illegible]	೦—೩—೦
[illegible]	೦—೨—೦
[illegible]	೦—೦—೯
[illegible]	೧—೧—೦
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible] ೧ಕ್ಕೆ [illegible]	೦—೮—೦
[illegible]	೧—೮—೦
[illegible]	೦—೮—೦

ಸಂಸ್ಕೃತ ಗ್ರಂಥಗಳು.

[illegible]	೦—೩—೦
[illegible]	೦—೫—೦
[illegible]	೦—೨—೬
[illegible]	೦—೨—೬
[illegible]	೦—೦—೬
[illegible]	೦—೩—೬
[illegible]	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ್

ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲಿ ಮುಖ್ಯ[illegible]ಸಿದ್ಧಿ ಯುಂಟಾಗುವದಕ್ಕಾಗಿ ಭಗವತ್ಸ್ವರೂಪಿಯಾದ ಪತಂಜಲಿ ಮಹರ್ಷಿಯಿಂದ ಪ್ರಣೀತವಾದ ಅಷ್ಟಾಂಗಯೋಗ ಯುಕ್ತವಾದ ಪಾತಂಜಲ ಯೋಗಸೂತ್ರಗಳು ಶ್ರೀಮನ್ಮಹಾರಾಜಾಧಿರಾಜ ಭೋಜರಾಜ ಕೃತವಾದ ರಾಜಮಾರ್ತಾಂಡವೆಂಬ ವ್ಯಾಖ್ಯಾನ, ಪರಮಹಂಸೇತ್ಯಾದಿ ರಾಮಾನಂದ ಸ್ವಾಮಿಗಳಿಂದ ವಿರಚಿಸಲ್ಪಟ್ಟ ಮಣಿಪ್ರಭೆಯೆಂಬ ವ್ಯಾಖ್ಯಾನ, ಈ ಉಭಯವ್ಯಾಖ್ಯಾಸಹಿತವಾಗಿಯೂ, ಹಠರಾಜಯೋಗಾಭ್ಯಾಸಾದಿಗಳಿಂಮಾಡಿ ಕೃತಕೃತ್ಯರಾಗುವನಪೇಕ್ಷಿಸುವರಿಗೆ ಸುಲಭವಾಗಿ ಸಮಸ್ತಯೋಗರಹಸ್ಯಗಳಂತಿಳಿಯುವದಕ್ಕಾಗಿ ಪರಮ ಸಿದ್ಧಾಗ್ರೇಸರರಾದಸ್ವಾತ್ಮ ರಾಮಯೋಗೀಂದ್ರರಿಂದ ವಿರಚಿತವಾದ ಹಠಯೋಗ ಪ್ರದೀಪಿಕೆ ಯೆಂಬ ಮಹಾ ಪುರಾತನವಾದ ಗ್ರಂಥವು ಪರಮ ಹಂಸೇತ್ಯಾದಿ ಬ್ರಹ್ಮಾನಂದರವರಿಂದ ವಿರಚಿತವಾದ ಜ್ಯೋತ್ಸ್ನ ಎಂಬ ವ್ಯಾಖ್ಯಾನ ಸಮೇತವಾಗಿ ಕನ್ನಡಅಕ್ಷರಗಳಿಂದ ಮೈಸೂರು ಗವರ್ನಮೆಂಟ್ ಪ್ರಿಂಟಿಂಗ್ ಆಫೀಸಿನಲ್ಲಿ ಮುದ್ರಿಸಲ್ಪಟ್ಟಿರುತಿವೆ.

ಸದರೀ ಪುಸ್ತಕಗಳನ್ನು ಪಡೆಯಲಪೇಕ್ಷೆಯುಳ್ಳವರು ಬೆಂಗಳೂರು ಗವರ್ನಮೆಂಟ್ ಗರಲ್ಸ್ ಸ್ಕೂಲ್ ಹೆಡ್ ಮ್ಯಾಸ್ಟರಾದ ಹಿ. ನರಸಿಂಹಶಾಸ್ತ್ರಿಗಳಿಗೆ ಈ ಕೆಳಗೆ ಕಂಡ ಧಾರಣೆನ್ನು ಕಳುಹಿಸಿ ಪಡೆಯಬಹುದು.

ಪಾತಂಜಲ ಯೋಗಸೂತ್ರ ಪ್ರತಿ ೧ಕ್ಕೆ	೧—೦—೦
ಹಠಯೋಗಪ್ರದೀಪಿಕೆ ಪ್ರತಿ ೧ಕ್ಕೆ	೧—೮—೦

ಒಟ್ಟಾಗಿ ಪುಸ್ತಕಗಳನ್ನಪೇಕ್ಷಿಸತಕ್ಕವರಿಗೆ ನೇಕಡಾ ೧೨॥ ರೂಪಾಯಿ ಮೇರಿಗೆ ಕಮ್ಮಿಷನ್ ಕೊಡಲ್ಪಡುವದು. ಪೋಸ್ಟೇಜ್ ಟೇಬಲ್‌ಗಳು ಕಳುಹಿಸತಕ್ಕವರು ರೂ॥ ೧ಕ್ಕೆ ೧ ಆಣೆಯಂತೆ ಡಿಸ್ಕೌಂಟೂ ಮೇಲೆ ಕಂಡ ಪ್ರತಿಗಳ ಧರದ ಎರಡಾಣೆ ಪ್ರಕಾರ ಪೋಸ್ಟೇಜ್ ವ ಪ್ಯಾಕಿಂಗ್‌ಚಾರ್ಜ್ ಸೇರಿಸಿ ಕಳುಹಿಸಲ್ಪಡಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 21, 1885.

೧೮೮೫ನೇ ಸೆಪ್ಟಂಬರ್ ೨೧ನೇ ತಾ॥ ಸೋಮವಾರ

ಶ್ಲೋ॥ ಸರ್ವಜ್ಞತಾಂಸದೇವಾಕ್ಷುತಾಂಪ್ರಸೂತೆ ವಾಣಿತ್ವಯಾಪ್ರಿಯರಾಜಯ[illegible]ಪ್ರಣಾಮ॥ತ್ವಾಮೇವ ಮನಸಾವಮನುಸ್ಮರಾಮಿ ತ್ವಾಮೇವನೌಮಿ ರುಣಂವನಸೇತ್ಯಮಾ॥

INDIAN DELEGATES TO ENGLAND

ಈ ಇಂಡ್ಯದೇಶದ ವಿಷಯವಾಗಿ, ಇಂಗ್ಲಂಡಿನಲ್ಲಿರುವ ಪಾರ್ಲಿಮೆಂಟ್ ಸಮಾಜದ ಮೆಂಬರ್‌ಗಳಿಂದ ಆಗಿಂದಾಗ್ಯೆ ಪ್ರಸ್ತಾವಿಸಲ್ಪಡುವದೂ, ಅದಕ್ಕೆ ಸ್ಟೇಟ್ ಸೆಕ್ರೆಟರಿಯವರು ಪ್ರತ್ಯುತ್ತರಹೇಳುವದೂ ಪ್ರಾಯೇಣ ವೃತ್ತಾಂತಪತ್ರಿಕೆಗಳ ಮೂಲಕ ಹೊರಗಾಗುತ ಅದು ಜನಗಳಸಂತೋಷಕ್ಕೆ ಕಾರಣವಾಗುತಲಿತ್ತಷ್ಟೆ. ಈಚೆಗೆ ತಿಳಿಯಬರುವದರಲ್ಲಿ ತತೋಪ್ಯತಿಶಯಿತವಾದ ಒಂದುವೃತ್ತಾಂತದಿಂದ ಇನ್ನುಮೇಲೆ ಇಂಡ್ಯದೇಶೀಯರು ವಿಶೇಷತಃ ಕ್ಷೇಮಪಡಬಹುದೆಂತಲೂ, ಅವರ ಅಪೇಕ್ಷಿತಾಂಶಗಳೆಲ್ಲವು ಯಥಾವಸ್ಥಿತವಾಗಿ ಮಹಾರಾಜ್ಞೀಯವರ ಸನ್ನಿಧಿಯಲ್ಲಿ ಸ್ವೀಯರಿಂದಲೇ ತಿಳಿಸಲ್ಪಡಬಹುದೆಂತಲೂ ಭಾವಿಸಬಹುದಾಗಿದೆ. ಅದೇನೆಂದರೆ,—ಗ್ರೇಟ್ ಬ್ರಿಟನ್, ಐರ್ಲ್ಯಾಂಡ್ ಮತ್ತು ಸ್ಕಾಟ್ಲಂಡ್ಎಂಬ ಸಂಯುಕ್ತ ರಾಜ್ಯಗಳಿಗೆಸೇರಿದ ಆಯಾತುಕಡಿಯ ಪ್ರಜೆಗಳು ತಮ್ಮ ಪ್ರತಿನಿಧಿತ್ವೇನ ಒಬ್ಬರನ್ನು ಚುನಾಯಿಸಿ ತಮ್ಮ ಅಪೇಕ್ಷಿತಾಂಶಗಳನ್ನು ಪಾರ್ಲಿಮೆಂಟ್‌ಸಮಾಜದಲ್ಲಿ ಅರುಹತಕ್ಕಬಗ್ಯೆ ಕಳುಹಿಸುವದೂ, ಅಲ್ಲಿ ಅವರು ಪಾರ್ಲಿಮೆಂಟ್ ಮೆಂಬರ್‌ಗಳಲ್ಲೊಬ್ಬರಾಗಿ ಪರಿಗ್ರಹಿಸಲ್ಪಡುವದೂ ಪ್ರಸಿದ್ಧವಾಗಿದೆಯಷ್ಟೆ. ಅದೇಪ್ರಕಾರ ಇಂಡ್ಯದೇಶೀಯರ ತರಫ್ ಈಗ ಮುಂದಿ ಪ್ರತಿನಿಧಿತ್ವೇನ ಕಳುಹಿಸಲ್ಪಡತಕ್ಕೆಂದು ಈಚೆಗೆ ವ್ಯವಸ್ಥೆಯಾಗಿ ಬವಸ್ಥೂರ್ ಕೆಲವರು ನೇಟಿವ್ ದೊಡ್ಡಮನುಷ್ಯರು ಇಂಗ್ಲಾಂಡಿಗೆ ಪ್ರತಿನಿಧಿತ್ವೇನ ಮೂರು ಪ್ರಸಿಡೆಂಸಿಗಳಿಂದಲೂ ಕಳುಹಿಸಲ್ಪಡುವವರಾಗಿದಾರೆಂದು ಕೇಳುವದಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಮದರಾಸ ಪ್ರಸಿಡೆನ್ಸಿಯವರ ತರಫ್ ಹೋಗತಕ್ಕವರಂಕುರಿತು ವಿಚಾರಮಾಡುವಾಗ್ಯೆ ಮದರಾಸ್ ಹಿಂದೂಯೆಂಬ ಪತ್ರಿಕೆಯು ವ್ಯಕ್ತಪಡಿಸಿದ ಅಭಿಪ್ರಾಯವು ಶ್ಲಾಘ್ಯವಾದದ್ದಾಗಿಯೂ ಅವಶ್ಯಕರ್ತವ್ಯವಾದದ್ದಾಗಿಯೂ ಇರುತಿದೆಂದು ಪ್ರತಿಯೊಬ್ಬನೂ ತಿಳಿಸದಿರಲಾರನು,ಅದೇನಂದರೆ,—

ಬರುವ ನವಂಬರ್‌ತಿಂಗಳಲ್ಲಿ ಇಂಗ್ಲಾಂಡಿನೊಳು ನೂತನವಾಗಿಸೇರತಕ್ಕ ಪಾರ್ಲಿಮೆಂಟ್ ಸಮಾಜದಲ್ಲಿ ನೇಟಿವ್‌ಗಳ ಅಭಿಪ್ರಾಯವನ್ನೂ ಅವರನ್ಯೂನತೆಗಳನ್ನೂ ವ್ಯಕ್ತಪಡಿಸತಕ್ಕಬಗ್ಯೆ ಇತರ ಪ್ರಸಿಡೆನ್ಸಿಗಳಂತೆ ಇಲ್ಲಿಂದಲೂಒಬ್ಬರಿಬ್ಬರಂ ಕಳುಹಿಸುವದು ಯೋಗ್ಯವಾಗಿರುತಿದೆ. ಆದರೆ ಇಂಗ್ಲಾಂಡಿಗೆ ಹೋಗಿ ಅಲ್ಲಿ ನಮ್ಮ ವಿಷಯಮ ಕುರಿತು ತಿಳಿಸುವದ್ದು, ಮಹತ್ತರವಾದ ಮತ್ತು ಜವಾಬ್ದಾರೀಯುಳ್ಳ ಕಾರ್ಯವನ್ನು ವಹಿಸತಕ್ಕ ದೊಡ್ಡಮನುಷ್ಯರು ಬಹಳ ದುರ್ಲಭರಾಗಿದಾರೆಂಬ ಅಂಶವನ್ನು ನಾವು ಚನ್ನಾಗಿ ಬಲ್ಲೆವು. ಯದ್ಯಪಿ ಯಾರಾದರೊಬ್ಬರು ಈ ಕಾರ್ಯವನ್ನು ವಹಿಸಬೇಕಾದ್ದು ಅವಶ್ಯಕವಾಗಿರುವದರಿಂದ ಅದಕ್ಕೆ ಯಾರು ಯೋಗ್ಯರೆಂದು ನಾವು ಆಲೋಚಿಸಲಾಗಿ, ಸರ್ವಾಂಶದಿಂದಲೂ ಸಮರ್ಥರೆನ್ನಿಸಿಕೊಂಡು ಪ್ರಸಿದ್ಧರಾಗಿರುವ ದೊಡ್ಡಮನುಷ್ಯರ ಹೆಸರು ನಮ್ಮ ಸ್ಫೂರ್ತಿಗೆ ಬಂದದರಿಂದ ಅವರ ಹೆಸರನ್ನಿಲ್ಲಿ ಸೂಚಿಸುವದು ಯೋಗ್ಯವೆಂದೆಣಿಸುವೆವು. ಈ ಪೂರಲ್ಲಿ ಕೆಲವು ದಿನಗಳ ಹಿಂದೆ ನಡೆದ ಒಂದು ದೊಡ್ಡ ಸಭಾಮುಖದಲ್ಲಿ, ಜಾತಿ ಮತ ಪ್ರಯುಕ್ತಗಳಾದ ನಿರ್ಬಂಧಗಳೆಷ್ಟು ಇದ್ದಾಗ್ಯೂ ಅವಂ ಗಣಿಸದೆ, ಆವಶ್ಯಕ ಪ್ರಾಪ್ತವಾಗ ಇಂಗ್ಲಾಂಡಿಗೆ ಪ್ರತಿನಿಧಿತ್ವೇನ

ಹೋಗಲಿಕ್ಕೆ ಸಂಪೂರ್ಣ ಮನಸ್ಸುಳ್ಳವರಾಗಿರುವಂತೆ ಯಾವ ದೊಡ್ಡ ಮನುಷ್ಯರು ಅನೇಕರಿಗೆ ದೃಢತರವಾದ ನಂಬಿಕೆಯನ್ನುಂಟುಮಾಡಿದರೋ, ಯಾರು ಅತಿ ದೀರ್ಘಕಾಲಿಕನಾದ ಸಮುದ್ರಯಾನದಿಂದಲೂ ನಾವಾರೋಹಣಾದಿಗಳಿಂದಲೂ ಪ್ರಾಪ್ತವಾಗತಕ್ಕ ದೋಷ ನಿವಾರಣೆಕ್ಕೆ ಕೆಲವು ಬುದ್ಧಿಗಳ ಗಂಗೋದಕ ಸಾಕಾದ್ದಾಗಿದೆಯೆಂದು ವ್ಯಕ್ತಪಡಿಸಿದರೋ ಅಂಥಾ ದೊಡ್ಡ ಮನುಷ್ಯರ ಹೆಸರನ್ನು ನಾವು ತಿಳಿಸಿದಲ್ಲಿ, ಮುಖ್ಯವಾದ ಪ್ರಸಕ್ತ ಕಾರ್ಯ ನಿರ್ವಹಣಕ್ಕೆ ಬೇಕಾದ ಅವರೊಳಿರುವ ಸುಗುಣಗಳನ್ನೂ ಪ್ರಾಶಸ್ತ್ಯವನ್ನೂ ಸ್ವದೇಶಾಭಿಮಾನವನ್ನೂ ಕುರಿತು ಯಾರೂ ಶಂಕಿಸಲಾರರು. ನಾವು ತಿಳಿಸುವ ಅಂತಾ ದೊಡ್ಡ ಮನುಷ್ಯರು ಪ್ರಸಿದ್ಧರಾದ ದಿವಾನ್ ಬಹದೂರ್ ಆರ್ ರಘುನಾಥರಾಯರವರಾಗಿರುತ್ತಾರೆ. ಇವರು ಮುಂದಿನ ಪಾರ್ಲಿಮೆಂಟಿನ ಸಮಾಜದಲ್ಲಿ ನಮ್ಮ ಪ್ರತಿನಿಧಿತ್ವೇನ ನಿಂತು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವರಾದರೆ ಪ್ರಕೃತ ಸಂದರ್ಭದಲ್ಲಿ ಇವರ ಪರೋಪಕಾರವು ನಮ್ಮ ದೇಶೀಯರಿಗೆ ಪ್ರಯೋಜನವಾಗುವಂತೆ ಮತ್ತಾವರಿಂದಲೂ ಸುತರಾಂ ಉಂಟಾಗಲಾರದೆಂಬ ನಮ್ಮ ಅಭಿಪ್ರಾಯವು ಒಬ್ಬರಿಂದಲೂ ನಿರಾಕರಿಸಲ್ಪಡಲಾರದೆಂದು ನಂಬುತ್ತೇವೆ." ಎಂಬದು.

ಹಿಂದೆ ನಾವು ತಿಳಿಸಿದಂತೆ ಮೇಲೆ ಕಂಡ ಅಭಿಪ್ರಾಯವು ಕೇವಲ ಶ್ಲಾಘ್ಯವಾದದ್ದೆಂದು ಹೇಳುವೆವು. ದಿವಾನ್ ಬಹದೂರರವರ ಸಾಮರ್ಥ್ಯವೂ, ಕೀರ್ತಿಯೂ, ಪ್ರಾಶಸ್ತ್ಯವೂ, ಸ್ವದೇಶಾಭಿಮಾನವೂ ಕೇವಲ ಪರಾರ್ಥವಾದ ಅವರ ಶಾರೀರಮಾನಸಿಕ ಕ್ಲೇಶವೂ ಅಸಾಧಾರಣತ್ವೇನ ಬಾಧಿಸಲ್ಪಟ್ಟು ಜಗದ್ವಿಖ್ಯಾತವಾಗಿರುವದರಿಂದ ಇವರ ಚುನಾವಣೆಯು ಸರ್ವಜನಸಮ್ಮತವಾಗಿರುವದು. ಹಿಂದೂಪತ್ರಿಕೆಯು ತಿಳಿಸುವಂತೆ, ಅವಶ್ಯಕತೆಯುಂಟಾದಾಗ, ಜಾತಿ ಮತ ಪ್ರಯುಕ್ತ ನಿರ್ಬಂಧಗಳೊಂದು ಕಡೆ ಇದ್ದರೂ, ಇಂಗ್ಲಾಂಡಿಗೆ ಹೋಗಿ ಪ್ರತಿನಿಧಿಯಾಗಿದ್ದು ಸಾಧ್ಯವಾದ ಸಹಾಯವು ಮಾಡುವಂತೆ ಈ ದೊಡ್ಡ ಮನುಷ್ಯರು ವಾಗ್ದಾನ ಮಾಡಿದ್ದ ಪಕ್ಷಕ್ಕೆ ಅದನ್ನು ನೆರವೇರಿಸಲಿಕ್ಕೂ ತಮ್ಮ ಶ್ಲಾಘ್ಯವಾದ ಗುಣಗಳನ್ನೆಲ್ಲ ಅನ್ಯರಿಗೆ ಉದಾಹರಣತ್ವೇನ ತೋರಿಸಲಿಕ್ಕೆ, ಅದು ನೋಡಿ ಜನಗಳು ಬದಸ್ತೂರ್ ವರ್ತಿಸಲಿಕ್ಕೂ, ಪ್ರಸಕ್ತ ಸಂದರ್ಭ ವಿನಾ ಬೇರೊಂದೂ ಪ್ರಾಪ್ತವಾಗಲಾರದಾಗಿ, ದಿವಾನ್ ಬಹದೂರವರು, ಪ್ರಸಕ್ತ ಕಾರ್ಯ, ಅಂದರೆ ಪ್ರತಿನಿಧಿತ್ವೇನ ಇಂಗ್ಲಾಂಡಿಗೆ ಹೋಗಿ ಇಲ್ಲಿನಸ್ಥಿತಿಯನ್ನು ಅನುಭವಪೂರ್ವಕ ಅಲ್ಲಿ ತಿಳಿಸಿ ಅದಕ್ಕೆ ತಕ್ಕ ಪ್ರತಿಕ್ರಿಯೆಯಂ ಮಾಡಿಸುವರಾದರೆ ಅದಕ್ಕಿಂತಲೂ ಈ ದೇಶಕ್ಕೆ ಪ್ರಯೋಜನಕರವಾದ ಸಹಾಯ ಬೇರೊಂದಿರಲಾರದು. ಪರಂತು ಜನರ ಅನುಕೂಲ್ಯಗಳು ಹ್ಯಾಗಿರುವದೋ ನಾವರಿಯೆವು.

THE LATE MAHARAJA OF CASHMERE

ಕಾಶ್ಮೀರ ಮಹಾರಾಜರವರ ಆರೋಗ್ಯವಿಷಯವಾಗಿ ತಿಳಿಯಬರುತಲಿದ್ದ ವೃತ್ತಾಂತಗಳನ್ನು ಆಗಿಂದಾಗ್ಯೆ ಈ ಪತ್ರಿಕಾಮೂಲಕ ಪ್ರಕಟಿಸುತಲಿದ್ದೆವಷ್ಟೆ. ಈ ಮಹಾರಾಜರವರ ಆರೋಗ್ಯವಂ ಬಯಸಿ ಇದುವರೆವಿಗೆ ಮಾಡಲ್ಪಟ್ಟ ಶ್ಲಾಘ್ಯವಾದ ಚಿಕಿತ್ಸೆಗಳೆಲ್ಲವೂ ದೈವಯೋಗದಿಂದ ಯೇನೇನೂ ಕಾರ್ಯಕಾರಿಯಾಗದೆ ಹೋಗಿ ಮಾಹೆ ಮುಡರ್ಕೂರ್ ೧೨ನೇ ತಾರೀಖ್ ಸೋಮವಾರದ ದಿನ ಅವರು ಕಾಲಗತಿಯನ್ನೈದಿದರೆಂದು ಕೇಳುವದಕ್ಕೆ ನಾವು ಬಹಳ ವಿಷಾದಿಸುವೆವು. ಇವರು ಪ್ರಸಿದ್ಧರಾದ ರಣಜಿತ್‌ಸಿಂಗರವರ ಸೈನಿಕರಲ್ಲೊಬ್ಬರಾದ ಗುಲಾಬ್‌ಸಿಂಗ್ ಎಂಬವರ ಪುತ್ರರಾಗಿರುತ್ತಾರೆ. ಗುಲಾಬ್ ಸಿಂಗರು ಸ್ವತಃ ಧೀರರಾಗಿಯೂ ಸಮರ್ಥರಾಗಿಯೂ ಇರುತಲಿದ್ದದರಿಂದ, ಅವರಿಗೆ ರಣಜಿತ್‌ಸಿಂಗರವರು ಜಮ್ಮೂ, ಲಡಾಖ್, ಮತ್ತು ಕಾಶ್ಮೀರ, ಇವುಗಳ ಅಧಿಪತ್ಯವನ್ನೊಪ್ಪಿಸಿದರು. ಬ್ರಿಟಿಷರವರು ಸಿಕ್ಕಜನಗಳ ಪ್ರಾಬಲ್ಯವು ಯುದ್ಧಮೂಲಕ ಅಡಗಿಸಿಬಿಟ್ಟ್ಯೆ ಸದರೀ ಮೂರು ಪ್ರದೇಶಗಳೂ ಬ್ರಿಟಿಷರವರ ಸ್ವಾಧೀನವಾದವು. ಪರಂತು ಅದಂ ಸ್ವತಃ ಆಕ್ರಮಿಸಿಕೊಳ್ಳಬೇಕೆಂಬ ತಾತ್ಪರ್ಯವು ಇಂಗ್ಲಿಷರವರಿಗೆ ಇರಲಿಲ್ಲವಾದದರಿಂದ ಗುಲಾಬ್‌ಸಿಂಗರವರನ್ನು ಕಾಶ್ಮೀರ ರಾಜ್ಯದ ಮಹಾರಾಜತ್ವೇನ ಗರಿಗ್ರಹಿಸಿ ಅವರಿಗೆ ಪಟ್ಟಾಭಿಷೇಕ ಮಾಡಿದರು. ೧೮೪೬ನೇ ಇಸವಿಯಲ್ಲಿ ಪ್ರಾಪ್ತವಾದ ಮ್ಯೂಟಿನಿ ಅಂದರೆ, ಕಲಹಕಾಲದೊಳು ಬ್ರಿಟಿಷ್ ಸೈನ್ಯಕ್ಕೆ ಸಹಾಯಕವಾಗಿ ಕೆಲವು ಸೈನ್ಯವನ್ನು ಕಳುಹಿಸಿಕೊಟ್ಟರು. ೧೮೫೭ನೇ ಇಸವಿಯಲ್ಲಿ ಇವರು ಮೃತಪಡಲು ಇವರ ಸ್ವೀಕೃತ ಪುತ್ರರಾದ ರಣವೀರ ಸಿಂಗರವರಿಗೆ ಪಟ್ಟಾಭಿಷೇಕವಾಯಿತು. ೧೮೭೭ನೇ ಇಸವಿಯಲ್ಲಿ ಡೆಹಲೀಪಟ್ಟಣದೊಳು ನಡೆದ ಇಂಪೀರಿಯಲ್ ಅಸ್ಸೆಂಬ್ಲೀ ಜೆಗೆ (ಅಂದರೆ ಶ್ರೀಮನ್ಮಹಾರಾಜ್ಞೀಯವರು ಇಂಡ್ಯ ಚಕ್ರವರ್ತಿನೀ ಯೆಂಬ ಘನತರ ಪ್ರಾಶಸ್ತ್ಯವು ಗರಿಗ್ರಹಿಸಿದ ಬಗ್ಯೆ ನಡೆದ ಸಭೆಗೆ) ಬಂದಿದ್ದರು. ಆಕಾಲದಲ್ಲಿ ಇವರಿಗೆ ಗೌರವಾರ್ಥ "ಜನರಲ್ ಆಫ್ ದಿ ಬ್ರಿಟಿಷ್ ಆರ್ಮೀ" ಅಂದರೆ ಬ್ರಿಟಿಷ್ ಸೇನಾಧ್ಯಕ್ಷರು ಮತ್ತು "ಕೌನ್ಸಿಲರ್ ಆಫ್ ದಿ ಎಂಪೈರ್ ಆಫ್ ಇಂಡ್ಯ" ಅಂದರೆ ಇಂಡ್ಯ ರಾಜ್ಯಾಲೋಚಕರು, ಎಂಬ ಎರಡುವಿಧ ಅಲ್ಕಾಪಿಗಳು ಕೊಡಲ್ಪಟ್ಟವು.

Occasional Notes
ನೈಮಿತ್ತಿಕವಿಷಯನ್ಯಾಸ

The grain merchants of Hyderabad ಹೈದರಾಬಾದ್‌ನಲ್ಲಿ ಕ್ಷಾಮದ ನಿರೀಕ್ಷಣೆಯಿಂದ ಅಲ್ಲಿನ ಧಾನ್ಯವರ್ತಕರು ಅಪರಿಮಿತವಾಗಿ ಆಹಾರ ಧಾನ್ಯಗಳಂ ತರಿಸುತಲಿದ್ದಾರೆಂದು ಅಲ್ಲಿನಯೊಂದು ಪತ್ರಿಕೆ ಹೇಳುತದೆ

The Resident of Hyderabad.—ಹೈದರಾಬಾದ್ ರೆಸಿಡೆಂಟರಾದ ಮಿ॥ ಕಾರ್ಡಿರೇಯವರು ಪ್ರಬಲ ವಾತರೋಗಪೀಡಿತರಾಗಿ ಈಚೆಗೆ ಕೆಲವುದಿನಗಳಿಂದ ಕೆಲಸಮಾಡುವದಕ್ಕೆ ಶಕ್ತಿಯಿಲ್ಲದೆಯಿದ್ದಾರೆಂದು ತಿಳಿಯಬರುತಿದೆ.

Lady Dufferin's Fund.—ಇಂಡ್ಯರಾಜ್ಯದ ವೈಸರಾಯಿಯವರಾದ ಲಾರ್ಡ ಡಫರಿನ್‌ಸಾಹೇಬರವರ ಭಾರ್ಯೆಯವರಿಂದ ಇಂಡ್ಯದೇಶದ ಹೆಂಗಸರಿಗೆ ವೈದ್ಯಶಾಸ್ತ್ರಾಭ್ಯಾಸಮಂ ಮಾಡಿಸುವ ಕಾರ್ಯದ ಖರ್ಚಿನಬಗ್ಯೆ ಏರ್ಪಡಿಸಲ್ಪಟ್ಟಿರುವ ಫಂಡಿಗೆ ಕಾಶ್ಮೀರದ ಮಹಾರಾಜರವರು ಐದುಸಾವಿರ ರೂಪಾಯಿಗಳು ಕೊಟ್ಟಿರುತ್ತಾರೆ

The Bellary Krishna Railway.—ಇಂಡ್ಯರಾಜ್ಯದ ಸರಹದ್ದುಪ್ರಾಂತದಲ್ಲಿ ರಷಿಯಾದೇಶೀಯರಿಂದ ಪ್ರಾಪ್ತಮಾಡಲ್ಪಟ್ಟಿರುವ ಸಂಕಟಗಳಮೂಲಕ ಬಳ್ಳಾರಿಯಿಂದ ಕೃಷ್ಣಾವರೆವಿಗೆ ಹಾಕಲ್ಪಡುತಲಿದ್ದ ರೈಲ್‌ರಸ್ತೆಯ ಕಾಮಗಾರಿಯು ನಿಲ್ಲಿಸಲ್ಪಟ್ಟತಷ್ಟೆ, ಸದರೀ ಕೆಲಸವು ಕ್ಷಿಪ್ರದಲ್ಲಿ ಪ್ರಾರಂಭವಾಗುವಂತಿದೆಯೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

A wholesome order.—ಯೂರೋಪಿಯನ್ ಮತ್ತು ಯುರೇಷಿಯನ್ ಪ್ರಯಾಣಸ್ಥರು ಹೋಗುತ್ತಾ ಬರುವದಕ್ಕಾಗಿ ಪ್ರತಿಯೊಂದು ಟ್ರೇನಿನಲ್ಲೂ ಮೂರನೇ ತರಗತಿ ಗಾಡಿಯೊಂದನ್ನು ಪ್ರತ್ಯೇಕವಾಗಿ ಇಟ್ಟಿರಬೇಕೆಂದು ದಕ್ಷಿಣ ಇಂಡಿಯಾ ರೆಯಿಲ್ವೆ ಏಜೆಂಟ್ ಮತ್ತು ಮ್ಯಾನೇಜರವರು ತಮ್ಮ ಇಲಾಖಾ ಸ್ಟೇಷನ್‌ಮ್ಯಾಸ್ಟರಿಗಳಿಗೆ ಹುಕುಂ ಕೊಟ್ಟಿರುವಂತೆ ತಿಳಿಯಬರುತದೆ

Erection of a new fort.—ಕಾಬೂಲ್ ಅಮೀರರವರಿಗೆ ಬಾಲಾಹಿಸ್ಸಾರ್‌ಯೆಂಬ ಪ್ರದೇಶದ ಮೇಲೆ ಅಭಿರುಚಿತಪ್ಪಿ, ಕಾಬೂಲ್ ಶಹರ್‌ನೊಳಗೆ ಹೊಸದಾಗಿ ಒಂದುಕೋಟೆಯಂ ಕಟ್ಟಿಸಬೇಕೆಂದು ಯೋಚಿಸುತಲಿದಾರೆ. ಈ ಹೊಸಕೋಟೆಯ ಕೆಲಸಕ್ಕೆ ಬೇಕಾದ ಕಲ್ಲು ವೆಗ್ಯರೆ ಸಾಮಗ್ರಿಗಳಬಗ್ಯೆ ಬಾಲಾಹಿಸ್ಸಾರ್‌ಕೋಟೆಯು ಕಿತ್ತು ಹಾಕಲ್ಪಡುವದು

Removal of an arsenal.—ಸಿಕಂದರಾಬಾದ್‌ನಲ್ಲಿರುವ ಆಯುಧಶಾಲೆಯನ್ನು ಬಳ್ಳಾರಿಗೆ ವರ್ಗಮಾಡುವಂತೆ ಇಂಡ್ಯಗವರ್ನಮೆಂಟಿನಿಂದ ಆಖೈರಾಗಿ ಹುಕುಂಬಂದಿರುವಂತೆಯೂ ಪ್ರಾಯಶಃ ಬರುವ ನವಂಬರ್ ತಿಂಗಳ ಆದಿಭಾಗದಲ್ಲಿ ಸದರೀ ಆಯುಧಶಾಲೆಯು ಬಳ್ಳಾರಿಗೆ ಸಾಗಿಸಲ್ಪಡುವದೆಂದಲೂ ಒಂದಾನೊಂದು ಸಿಕಂದರಾಬಾದ್ ಪತ್ರಿಕೆ ಹೇಳುತಿದೆ

A petition disallowed.—ಬಂಗಾಳಾ ಮತ್ತು ಬಿಹಾರ್‌ದೇಶಗಳ ಜಮೀನ್‌ದಾರರ ಕಡೆ ಎಗ್ಸಿಕ್ಯೂಟಿವ್ ಕಮಿಟಿಯವರು, ಬೆಂಗಾಲ್ ಟೆನಾನ್ಸೀಬಿಲ್‌ಯೆಂಬ ಜಮೀನ್‌ದಾರರ ಮತ್ತು ರೈತರವಿಷಯದಲ್ಲಿ ಈವಾಗ ಹುಟ್ಟಿದ ಹೊಸವಿಧಾ ಕಾನೂನನ್ನು ಮುಂದಿನವರ್ಷದವರೆವಿಗೆ ಅಮಲ್‌ನಲ್ಲಿ ತಾರದೆ ಇಡಬೇಕೆಂದು ಪ್ರಾರ್ಥಿಸಿ ಬಂಗಾಳೇ ಗವರ್ನಮೆಂಟಿಗೆ ಕೊಟ್ಟ ಅರ್ಜಿಯನ್ನು ಸದರೀ ಗವರ್ನಮೆಂಟಿನವರು ತಿರಸ್ಕರಿಸಿಬಿಟ್ಟರು

The Commander in Chief of India ಇಂಡ್ಯರಾಜ್ಯದ ಕಮಾಂಡರ್ ಇನ್‌ಚೀಫರವರಾದ ಸರ್ ಡಾನಲ್ಡ್ ಸ್ಟುವರ್ಟ್‌ಯವರು ಬರುವ ಅಕ್ಟೋಬರ್ ೨೮ನೇ ತಾರೀಖಿನಲ್ಲಿ ಸಿಮ್ಲಾನಿಂದ ಹೊರಟು ಕ್ವೆಟಾ ಮತ್ತು ಎನ್ನೆಯೆಂಬಸ್ಥಳಗಳಿಗೆ ಹೋಗುವರು. ಅಲ್ಲಿಂದ ಹೊರಟು ಕಲ್ಕತ್ತೆಗೆ ಹೋಗಿ ಅಲ್ಲಿ ಹದಿನೈದು ದಿವಸ ಮುಂಬಯಿಗೆ ಬಂದು ಅಲ್ಲಿ, ನವಂಬರ್ ೨೩ನೇ ತಾರೀಖ್ ಹುಜೂರಿಗೆ ತಮ್ಮ ಕೆಲಸದ ಚಾರ್ಜನ್ನು ಸರ್ ಫ್ರೆಡರಿಕ್ ರಾಬರ್ಟ್ಸ್‌ಯವರಿಗೆ ಒಪ್ಪಿಸುವರು

Heavy rain on the South India line ದಕ್ಷಿಣ ಇಂಡಿಯಾ ರೆಯಿಲ್ವೆ ಮಾರ್ಗದ ಪೈಕಿ ಪುದುಚ್ಚೇರಿ ಶಾಖೆಗೆ ಸೇರಿದ ವಿಳಪ್ಪುರಂ ಸ್ಟೇಷನ್ ಬಳಿಯಲ್ಲೂ ಅದರ ಆಸುಪಾಸು ಪ್ರದೇಶಗಳಲ್ಲೂ ಈಚೆಗೆ ಅತಿ ಪ್ರಬಲ ವೃಷ್ಟಿಯಾದೆಸೆಯಿಂದ ಗಿಂಜೆ ನದಿಯಲ್ಲಿ ಪೂರ್ಣಪ್ರವಾಹ ಹರಿದು ಒಂದು ಸೇತುವೆ ಕೊಚ್ಚಲ್ಪಟ್ಟು ರೈಲುಗಾಡಿಯ ಸಂಚಾರಕ್ಕೆ ಅಡಚಣೆಯುಂಟಾಗಿ ದೋಣಿಗಳಮೇಲೆ ಸರಕುಗಳ ಆಮದ್ ರಫ್ತುಗಳು ನಡೆಯುತಿವೆ. ವಿಕ್ರವಾಂಡಿಗೂ ವಿಳಪ್ಪುರಕ್ಕೂ ಮಧ್ಯೆ ೮೦ನೇ ಮೈಲಿನ ರಸ್ತೆಯು ಕೊಚ್ಚಿಹೋಗಿದೆ. ಅಂಚೆಗಳು ಸರಿಯಾಗಿ ನಡೆಯುವದಕ್ಕೆ ತೊಂದರೆ ತಕ್ಕ ಯೇರ್ಪಾಡು ಮಾಡುವಂತೆ ಪೋಸ್ಟಾಫೀಸ್ ಸೂಪರಿಂಟೆಂಡೆಂಟರಿಗೂ ಕಡಲೂರು ಪೋಸ್ಟ್‌ಮ್ಯಾಸ್ಟರವರಿಗೂ ಹುಕುಂ ಕೊಡಲ್ಪಟ್ಟಿದೆ.

The native officers.—ಇಂಡ್ಯ ಗವರ್ನಮೆಂಟಿನವರು ನೇಟಿವ್ ಆಫಿಸರ್‌ಗಳಿಗಾಗಿ ಒಂದು ಮಿಲಿಟರಿ ಕಾಲೇಜನ್ನು ಏರ್ಪಡಿಸಬೇಕೆಂದು ಯೋಚಿಸುತಲಿರುವಂತೆ ಪ್ರಕಟಿಸಿದರಮೇಲೆ ಅದಂ ಕುರಿತು ಬೆಂಗಾಲೀಯೆಂಬ ಪತ್ರಿಕೆ ಉಪನ್ಯಾಸಮಾಡುತ ತಿಳಿಸುವದೇನೆಂದರೆ,—ನಾಮಮಾತ್ರದಿಂದಲ್ಲದೆ ಕಾರ್ಯತಃ ಅಂತಾ ಒಂದು ಮಿಲಿಟರೀ ಕಾಲೇಜ್ ಇಂಡ್ಯದೇಶದಲ್ಲಿ ಸ್ಥಾಪಿಸಲ್ಪಡುವದಾದರೆ ಅದಕ್ಕಾಗಿ ನಾವು ಬಹಳ ಸಂತೋಷಿಸುವೆವು. ಅಂತಾ ಕಾಲೇಜಿನ ಏರ್ಪಾಡಿಗೆ ಒಂದು ಭಾಗವಾಗಿ, ನೇಟಿವ್ ಆಫಿಸರ್‌ಗಳ ದರ್ಜೆಯನ್ನೂ ಅಭಿವೃದ್ಧಿಗೆ ತರಬೇಕು. ಅವರ ದರ್ಜೆಯನ್ನು ತಲಬನ್ನೂ ವೃದ್ಧಿಗೊಳಿಸಿ, ಸ್ವತಂತ್ರವಾದ ಮಿಲಿಟರಿ ಅಧಿಕಾರಮಂ ಕೊಟ್ಟರೆ ಅವರು ಸ್ವತಃ ಗೌರವ್ಯರಾಗಿ ಬಹಳ ಸಮರ್ಥರೆನ್ನಿಸಿಕೊಳ್ಳುವರು. ಈ ಪ್ರಪಂಚದಲ್ಲಿ ಉತ್ಕೃಷ್ಟವಾದ ಸೈನ್ಯವು ಕಟ್ಟಬೇಕಾದರೆ ಅದಕ್ಕೆ ಇಂಡ್ಯದೇಶದಲ್ಲಿ ತಕ್ಕ ಸಾಮಗ್ರಿಗಳು ಸಿಕ್ಕುವವು, ಪರಂತು ಅವುಗಳನ್ನು ಉಚಿತವಾಗಿ ಉಪಯೋಗಿಸಿಕೊಳ್ಳುವದು ಅಥವಾ ಬಿಟ್ಟುಬಿಡುವದು, ಗವರ್ನಮೆಂಟಿನವರು ತಮಗೆ ಯುಕ್ತವೆಂದು ತೋರಿ ಆಚರಿಸುವ ರಾಜ್ಯತಂತ್ರಕ್ರಮವನ್ನನುಸರಿಸಿದ್ದಾಗಿದೆ. ನ್ಯಾಯ ಮತ್ತು ಔದಾರ್ಯ, ಇವುಗಳೊಂದಿಗೆ ನಡೆಸಲ್ಪಡುವ ರಾಜ್ಯತಂತ್ರವು ಅಂತಾ ರಾಜ್ಯವನ್ನು ದೃಢತರವನ್ನಾಗಿ ಮಾಡುವದು, ಹಾಗಲ್ಲದೆ ಅನ್ಯಥಾ ಮಾಡಿದರೆ ವಿರುದ್ಧಫಲವುಂಟಾಗುವದು, ಎಂಬದು.

Female suffrage.—ಮ್ಯೂನಿಸಿಪಲ್ ಮೆಂಬರಿಗಳ ಚುನಾವಣೆಯ ವಿಷಯದಲ್ಲಿ ಪುರುಷರಂತೆ ಸ್ತ್ರೀಯರು ಅಭಿಪ್ರಾಯಕೊಡಲು ಅರ್ಹರೇಯೆಂದು ಕಡಪಾಜಿಲ್ಲಾ ಕಲೆಕ್ಟರವರು ಮದರಾಸ್ ಗವರ್ನಮೆಂಟಿನವರನ್ನು ಪ್ರಶ್ನೆಮಾಡಲು ಅಂತಾ ವಿಷಯದಲ್ಲಿ ಅಭಿಪ್ರಾಯ ಕೊಡುವದಕ್ಕೆ ಪುರುಷರಂತೆಯೇ ಸ್ತ್ರೀಯರೂ ಅರ್ಹರೆಂದು ಗವರ್ನಮೆಂಟಿನವರು ಜವಾಬ್ ಕೊಟ್ಟಂತೆ ತಿಳಿಯಬರುತಿದೆ

A fatal result of juvenile frolics—ಈಚೆಗೆ, ಹೈದರಾಬಾದಿಗೆ ಸೇರಿದ ಒಂದು ಸ್ಥಳದಲ್ಲಿ ಕೆಲವರು ಹುಡುಗರು ಸೇರಿ ಆಡುವಲ್ಲಿ, ಅವರ ಪೈಕಿ ಯೊಬ್ಬ ಹುಡುಗನನ್ನು ಕಳ್ಳನನ್ನಾಗಿ ಮಾಡಿ, ಅವನಿಗೆ ಫಾಸೀಸಜಾ ವಿಧಿಸಿ, ಅವನನ್ನು ತಮಾಷೆಗೆ ಗಲ್ಲಿಗೆ ಹಾಕಲು ಅದು ಕಾಲ ವಿಪರ್ಯಯದಿಂದ ಅವನ ಪ್ರಾಣಹಾನಿಗೆ ಕಾರಣವಾಯಿತು. ಈ ಮೊಕದ್ದಮೆಯನ್ನು ನಿಜಾಂ ಸರ್ಕಾರದವರು ದರ್ಯಾಪ್ತೀ ಮಾಡುತಲಿದಾರೆ, ಎಂದು ಇಂದುಪ್ರಕಾಶ ಪತ್ರಿಕೆ ಹೇಳುತಿದೆ.

Fishes in Godavery.—ಆಚೇವಾರದಲ್ಲಿ ಗೋದಾವರೀನದಿಯೊಳು ಪ್ರವಾಹವೆಂಬ ಪ್ರದೇಶದವೊಡಲು ಇಪ್ಪತ್ತುಕೋಸ ಅಂದರೆ ಸುಮಾರ್ ಐವತ್ತು ಮೈಲ್‌ಗಳ ಫಾಸಲೆಯವರೆವಿಗೆ, ನೀರುಸಹ ಕಾಣದಷ್ಟು ಮತ್ಸ್ಯಗಳು ತುಂಬಿದ್ದವು. ಅವುಗಳಪೈಕಿ ಕೆಲವು ಮೂರುನಾಲ್ಕುಮಂದಿಸೇರಿ ಹಿಡಿದು ಸೆಳೆದಾಗ್ಯೂ ಬಾರದಷ್ಟು ದೊಡ್ಡವಾಗಿದ್ದವು. ಕಾಲಪ್ಪವು ಅದು ನೋಡಿ, ಇದೇನೊ ಅನಿಷ್ಟಸೂಚಕವಾಗಿದೆಯೆಂದರು, ಎಂದು ವಗೈರೆ ಇಂದುಪ್ರಕಾಶಪತ್ರಿಕೆ ಹೇಳುತಿದೆ.

Irrigation in Godavery.—ಗೋದಾವರೀ ಜಿಲ್ಲೆಯಲ್ಲಿ ೧೮೮೩—೮೪ ನೇ ಇಸವಿಗಿಂದಲೂ ೧೮೮೪—೮೫ನೇ ಇಸವಿಯಲ್ಲಿ ೨೦,೬೦೦ ಎಕ್ರೇ ಜಮೀನು ಹೆಚ್ಚಾಗಿ ನೀರಾವರಿ ಆದಂತೆ ಇರ್ರಿಗೇಷನ್ ಇಂಜಿನಿಯರವರು ಮದರಾಸ್ ಗವರ್ನಮೆಂಟಿಗೆ ರಿಪೋರ್ಟ್‌ಮಾಡಿರುತ್ತಾರೆ. ಹಾಲೀ ಬೆಳೆಯುವ ಬತ್ತವು ಅನ್ಯದೇಶಗಳ ರಫ್ತಿಗಾಗಿ ಜಮಾಯಿಸಲ್ಪಡುವಾಗ ಜಾಸ್ತೀ ಸಾಗುವಳಿಯಾಗುವ ಬತ್ತವು ಅನ್ಯದೇಶಗಳಿಗಲ್ಲದೆ ಇನ್ಯಾವ ಕೆಲಸಕ್ಕೆ ಉಪಯೋಗಿಸಬೇಕಾಗುವದು

Sorrow in Africa.—ಆಫ್ರಿಕಾಖಂಡದ ಪಶ್ಚಿಮ ಭಾಗದಲ್ಲಿರುವ ಒಂದು ದೇಶದ ಅರಸನು ಅಕಸ್ಮಾತ್ತಾಗಿ ಮೃತಪಡಲು, ಆ ದೇಶದ ಜನರು ತಮ್ಮ ಅರಸನನ್ನು ಇಂಗ್ಲೀಷರವರು ಶೂನ್ಯಮಾಡಿ ಕೊಂದುಹಾಕಿದರೆಂಬ ಸಂಶಯದಮೇಲೆ ಅಲ್ಲಿದ್ದ ಇಂಗ್ಲೀಷರವರನ್ನೆಲ್ಲ ನಿರ್ದಯಾತ್ಮಕರಾಗಿ ಖೂನ್ ಮಾಡಿಬಿಟ್ಟರೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

A four tusked elephant.—ಬರ್ಮಾದೇಶದೊಳು ಚತುರ್ದಂತಿ, ಅಂದರೆ ನಾಲ್ಕು ದಂತಗಳುಳ್ಳ ಆನೆಯೊಂದು ಸಿಕ್ಕಲು ಅದನ್ನು ತರುವದಕ್ಕಾಗಿ ೨೦,೦೦೦ ರೂಪಾಯಿಗಳು ಕೊಟ್ಟು ಅರಸರವರು ತಮ್ಮ ನೌಕರರನ್ನು ಕಳುಹಿಸಿರುತ್ತಾರೆಂದು ತಿಳಿಯಬರುತದೆ. ಸದರೀದೇಶದಲ್ಲಿ ಇರಾವತಿಯೆಂಬ ಹೆಸರಿನಿಂದ ಒಂದು ದೊಡ್ಡನದಿಯಿರುತ ಅದರ ಉಭಯಪಾರ್ಶ್ವದಲ್ಲೂ ಬೆಳದಿರುವ ಕಾಡಿನಲ್ಲಿ ಹುಟ್ಟತಕ್ಕ ಆನೆಗಳಪೈಕಿ ಕೆಲವು ಶ್ವೇತವರ್ಣವುಳ್ಳದ್ದಾಗಿಯೂ ನಾಲ್ಕು ದಂತಗಳುಳ್ಳದ್ದಾಗಿಯೂ ಯಿರುತವೆ. ಅಂತಾ ಆನೆಗಳನ್ನು ಬಾರೀಕ್ರಯಕೊಟ್ಟು ತರಿಸಿ ಬರ್ಮಾದೇಶದ ಅರಸರವರು ತಮ್ಮ ಪಟ್ಟದ ಆನೆಯಾಗಿ ಇಟ್ಟುಕೊಳ್ಳುವದುಂಟು. ಅಂತಾ ಆನೆಗಳಿಗೆ ಐರಾವತವೆಂಬ ಹೆಸರುಸಹ ಅಲ್ಲಿ ವಾಡಿಕೆಯಲ್ಲಿದೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Cholera.—ಚಿತ್ರದುರ್ಗ ಸಬ್‌ಡಿವಿಜನಿಗೆ ಸೇರಿದ ಕೆಲವುಗ್ರಾಮಗಳಲ್ಲಿ ವಾಂತಿಭೇದಿರೋಗ ಹಬ್ಬಿರುವುದಕ್ಕಾಗಿ ವಿಷಾದಿಸುತ್ತೇವೆ

Ananthachaturdasi feast —ಬರುವಬುಧವಾರದದಿನ ಅನಂತಚತುರ್ದಶೀವ್ರತ ವಾದದರಿಂದ ಆಬಗ್ಯೆತವಾಂ ಸರ್ಕಾರ್ ಇಲಾಖೆಗಳಿಗೂ ರಜಾ ಕೊಡಲ್ಪಡುವದು

Furlough.—ಮೈಸೂರು ಸಂಸ್ಥಾನದ್ಕನಮ್ಮ ಕಮಿಷನರ್ ಸೂಪರಿಂಟೆಂಡಿಂಗ್ ಇಂಜನಿಯರಾದ ಕ್ಯಾಪ್ಟನ್ ಕೇರ್‌ಸಿಂಗ್ಲೇರ್‌ಯವರು ಹದಿನೆಂಟುತಿಂಗಳ ಫರ್ಲೋರಜಾಮೇಲೆ ಬರುವತಿಂಗಳ ಗುರ್ಗ್ರೇತಾರೀಖಿನಲ್ಲಿ ಯೂರೋಪ್ ಖಂಡಕ್ಕೆ ಹೊರಡುವ ಪ್ರಯತ್ನದಲ್ಲಿರುವಂತೆ ತಿಳಿಯಬರುತ್ತದೆ

The Kolar Girls School —ಕೋಲಾರದಲ್ಲಿರುವ ಬಾಲಿಕಾಪಾಠಶಾಲೆಯ ವಿದ್ಯಾರ್ಥಿನಿಯರಿಗೆ ಈಚಿನ ಪರೀಕ್ಷೆಗಳು ಕೊಡಲ್ಪಡುವವು ಈಬಗ್ಯೆ ಸೇರುವ ಸಭೆಯಲ್ಲಿ ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಕಮಿಷನರ್ ಮೆ॥ ನಾರಾಯಣರವರು ಅಗ್ರಾಸನವ ವಹಿಸುವರು. ಈ ಕೆಲಸದಬಗ್ಯೆ ಈ ಪಟ್ಟಣದ ಕೆಲವರು ದೊಡ್ಡಮನುಷ್ಯರು ಸಹ ಕೋಲಾರಕ್ಕೆ ಹೋಗಿರುವಂತೆಕೇಳುತ್ತೇವೆ.

Mr O'Connell —ಬೆಂಗಳೂರು ಪೇಟೆ ಪೊಲೀಸ್ ಇನ್ಸ್‌ಪೆಕ್ಟರಾಗಿದ್ದ ಮಿ॥ ಒಕಾನಲ್‌ಯೆಂಬವರು ಈಗ್ಯೆ ಕೆಲವುತಿಂಗಳಕಾಲದಹಿಂದೆ ಬಸ್ಪೆಂಡಾಗಿದ್ದರಷ್ಟೆ. ಅವರುಜವಾನರವರ್ಗ ಮಾಡಿಕೊಂಡರೆಂಬಮೇಲೆ ಈವರೂ ಮೆ॥ ಕಾನಸ್ಟೆಬಲವರು ಮಾಡಿದ ಅಕ್ರಮಗಳನ್ನು ಮನ್ನಿಸಿ ಮುಂದೆ ಈಜೂಪೇಟೆತಾಲ್ಲೂಕು ಇನ್ಸ್‌ಪೆಕ್ಟರ್‌ಕೆಲಸಕ್ಕೆ ನೇಮಕವಾಗಿರುವಂತೆ ದಿವಾನರವರು ಹುಕುಂ ಕೊಟ್ಟಿರುವದಾಗಿ ತಿಳಿದುಬರುತ್ತದೆ. ಪೇಟೆ ಇನ್ಸ್‌ಪೆಕ್ಟರ್‌ಕೆಲಸಕ್ಕೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ವಿ। ಸಿ ಲಾರೆನ್ಸರವರು ವರ್ಗಾವಣೆ ಹೊಂದಿಸಲ್ಪಟ್ಟ ಕೆಲಸ ಹೋಡುದಾದ

Transfer —ಮೈಸೂರು ಸ್ಟೇಟ್‌ರೈಲ್ವೆ ಲೋಕೋಮೋಟಿವ್ ಸೂಪರಿಂಟೆಂಡೆಂಟ್‌ರಾದ ಮಿ॥ ಮಹದೇವನ್ ಸ್ಮಿತ್, ಬಿ. ಎ ಬಿ ಸಿ ಇ ಯವರು ಮೈಸೂರು ಪುರತ್ಮುಕ್ಯಶಾಖೆಗೆ ವರ್ಗಾವಣೆಯಾಗಿ ಚುಮುಕೂರಿಗೆ ನಿಯಮಿಸಲ್ಪಟ್ಟಿರುವಂಯೂ, ಸ್ಟೇಟ್ ರೈಲ್ವೆ ಇಲಾಖೆಯಲ್ಲಿ ಅವರು ಮಾಡುತಿದ್ದ ಕೆಲಸವು ಅದೇ ಇಲಾಖೆಯಲ್ಲಿ ಓ ಯೆಂಜಿನಿಯರಿಗೆ ಸೇರಿಸಿಕೊಡಲ್ಪಟ್ಟ ಅವರಿಂದ ಸರ್ಕಾರಕ್ಕೆ ಮಾಹೆಯಾನಾ ಹತ್ತು ರೂಪಾಯಿಗಳು ಕಡಿಮೆಯಾದರೆ ಉಳಿತೆಂದು ಒಳದೇಶದ ಪತ್ರಿಕೆಯೊಂದು ಹೇಳುತ್ತಿದೆ, ಪರುತು ಅದಕ್ಕೆ ಬೇರೆ ನೌಕರರು ನಿರೀಕ್ಷಿಸಲ್ಪಟ್ಟಿರುವಂತೆಕೇಳುತ್ತೇವೆ.

The weather —ಈತಿಂಗಳ ೧೨ನೇ ತಾರೀಖಿಗೆ ಮೈದಾದ ವಾರದಬಾಬತು ಡಿಸ್ಟ್ರಿಕ್ಟ್ ಜಾತ್ ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ ತಿಳಿಯಬರುವದೇನುದರೆ—

ಬೆಂಗಳೂರು ಡಿಸ್ಟ್ರಿಕ್ಟ್‌ಪೈಕಿ ಚೆನ್ನಪಟ್ಟಣ ಒಂದುವಿನಾ ಇತರ ಯೆಲ್ಲಾ ತಾಲ್ಲೂಕುಗಳಲ್ಲೂ ೧,೨,೩, ಇಂಚುಗಳ ಮಳೆ ಆಗಿದೆ. ಕುಡಿಯುವದಕ್ಕೆ ಸದ್ಯಃ ನೀರು ಸಿಕ್ಕುತದೆ. ದನಗಳಿಗೆ ಮೇವಿಲ್ಲದೆ ಸೊಪ್ಪುಗಳನ್ನು ಹಾಕುತಲಿದಾರೆ ದನಗಳು ಬತಸ್ಸಿತಿಯಲ್ಲಿವೆ. ಸ್ವಲ್ಪ ರೋಗವೂ ತಗಲಿದೆ ಕೋಲಾರ ಡಿಸ್ಟ್ರಿಕ್ಟ್‌ಪೈಕಿ ಗೋರೀಬಿದನೂರು, ದೇವನಹಳ್ಳಿ, ಇವೆರಡುವಿನಾ ಮಿಕ್ಕ ಸ್ಥಳಗಳಲ್ಲಿ ಮಳೆ ಆಗಿದೆ. ದನಗಳು ಬತಸ್ಸಿತಿಯಲ್ಲಿವೆ, ಮೇವಿಲ್ಲವು ತುಮಕೂರು ಡಿಸ್ಟ್ರಿಕ್ಟ್‌ಪೈಕಿ, ತುಮಕೂರು, ಮದ್ದಗಿರಿ, ಇವೆರಡು ಸ್ಥಳಗಳಲ್ಲಿ ಮಾತ್ರ ೧ಇಂಚ್ ಮಳೆ, ಸೀರಾ, ಗುಬ್ಬಿ, ಪಾವುಗಡ, ಹೊಳಲುಕೆರೆ ಐವುಗಳಲ್ಲಿ ಕೆಲವು ಸೆಂಟಿಗಳ ಮಳೆಬಿತ್ತು. ಇತರ ತಾಲ್ಲೂಕುಗಳಲ್ಲೆಲ್ಲಿಯೂ ಮಳೆ ಯಿಲ್ಲವು. ಮೇವಿಲ್ಲದೆ ದನಗಳು ಕೇವಲ ದೈನ್ಯಸ್ಥಿತಿಯಲ್ಲಿವೆ. ಸೊಪ್ಪುಗಳನ್ನು ಉಪಯೋಗಿಸುದಿದಾರೆ. ಸಬ್ ಡಿವಿಜನ್ನಲ್ಲಿ ಕುಡಿಯುವದಕ್ಕೆ ಸುತರಾಂ ನೀರಿಲ್ಲವು. ಮೈಸೂರು ಡಿಸ್ಟ್ರಿಕ್ಟ್‌ಪೈಕಿ, ಮೈಸೂರು, ಚಾಮರಾಜನಗರ, ಶ್ರೀರಂಗಪಟ್ಟಣ, ಹುಣಸೂರು, ನಂಜನಗೂಡು, ನರಸೀಪುರ, ಮಂಡ್ಯ, ಅತ್ತಿಕುಪ್ಪ, ನಾಗಮಂಗಲ ಚೆನ್ನರಾಯಪಟ್ಟಣ, ಈ ಸ್ಥಳಗಳಲ್ಲಿಮಾತ್ರ ಕೆಲವುಕಡೆ ಬಹಳವಾಗಿಯೂ ಇತರೆಡೆ ಅಲ್ಪವಾಗಿಯೂ ಮಳೆಬಿತ್ತು, ಮಿಕ್ಕ ತಾಲ್ಲೂಕುಗಳಲ್ಲಿ ಸುತರಾಂಯಿಲ್ಲವು

ಶಿವಮೊಗ್ಗಾ ಡಿಸ್ಟ್ರಿಕ್ಟ್‌ಪೈಕಿ ಶಿವಮೊಗ್ಗಾ ಟಿಕಾರಿಪುರ, ಚೆನ್ನಗಿರಿ, ಈ ಮೂರು ತಾಲ್ಲೂಕುಗಳುವಿನಾ ಮಿಕ್ಕ ಯೆಲ್ಲಾ ತಾಲ್ಲೂಕುಗಳಲ್ಲೂ ಅಲ್ಪಮಳೆ ಆಯಿತು. ದನಗಳು ರೋಗಪೀಡಿತವಾಗಿವೆ. ದಾವಣಗೆರೆ, ಚೆನ್ನಗಿರಿ, ಹೊನ್ನಾಳಿ, ಈ ತಾಲ್ಲೂಕುಗಳಲ್ಲಿ ಕುಡಿಯುವದಕ್ಕೆ ನೀರಿಲ್ಲವು ಕಡೂರು ಡಿಸ್ಟ್ರಿಕ್ಟ್‌ಪೈಕಿ ಕೊಪ್ಪ, ಅರಕೇಕೆರೆ, ಇವೆರಡರಲ್ಲೂ ಒಂದೆರಡು ಇಂಚ್‌ಗಳ ಮಳೆ ಆಯಿತು. ಇತರ ತಾಲ್ಲೂಕುಗಳಲ್ಲಿ ಸುತರಾಂ ಮಳೆಯಿಲ್ಲವು, ಅಥವಾ ಅಲ್ಪ. ಮಲನಾಡ ಪ್ರಾಂತದಲ್ಲಿ ನೀರು ಮೇವೂ ಸಿಕ್ಕುತವೆ ಇತರ ಪ್ರದೇಶಗಳಲ್ಲಿ ದನಗಳಿಗೆ ಸೊಪ್ಪು ಹಾಕುತಿದಾರೆ—ಎಂಬದು

ಈತಿಂಗಳ ೧೨ನೇ ತಾರೀಖಿನಿಂದೀಚಿಗೆ ಅನೇಕ ಕಡೆಯಲ್ಲಿ ಒಳ್ಳೆಯಮಳೆ ಆದಂತೆ ತಿಳಿಯಬರುವದರಿಂದ ಸರ್ವತ್ರ ದೃಣಜಲ ಸಮೃದ್ಧಿಯುಂಟಾಗಿ ರುವುದೆಂದು ನಂಬುತ್ತೇವೆ

CORRESPONDENCE

ಅದ್ವೈತ ಮತವಿಷಯದಲ್ಲಿ ನನಗೆ ವುಂಟಾಗಿರುವ ಕೆಲವು ಸಂಶಯವನ್ನು ಈ ಪ್ರಾಂತದೊಳಿರುವ ಪಂಡಿತರಾದ ವೇದಾಂತಿಗಳ್ಯಾರಾದರೂ ಹೋಗಲಾಡಿಸಬಹುದೆಂದು ನಂಬಿ ಶ್ರುತಪಡಿಸುವದಾಗಿ ಇದಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಅವಕಾಶಕೊಡಬೇಕೆಂದು ಪ್ರಾರ್ಥಿಸುವೆನು.

ಈ ಪ್ರಪಂಚ ನಿರ್ಮಾಣವಿಷಯವಾಕುರಿತು ಶಂಕಿಸುವಾಗ್ಯೆ ಪ್ರಪಂಚವು ಸಚ್ಚಿದಾನಂದ ಬ್ರಹ್ಮಸ್ವರೂಪವಾಗಿ ಕಾಣ್ಗೊಳಿಸುತಿರುವಲ್ಲಿ ದೇವತೆ ಬೇರೆ ಅಲ್ಲವೆಂದಾಗ ಅನೇಕರು ಬಾವಿಸುತ್ತಾರೆ ಶುಕ್ತಿರಜತಪ್ಪಾಯವುತೆ, ಭ್ರಾಂತಿಕಲ್ಪಿತವೆಂದು ಹೇಳುವಾಗ್ಯೆ ಶುಕ್ತಿಯಲ್ಲಿ ರಜತಭ್ರಾಂತಿಯು, ಶುಕ್ತಿರಜತ ಜ್ಞಾತರನಾದ ಮೂರನೆಯವನಿಗೆ ತೋರುವಂತೆ, ಈ ಸಿದ್ಧಾಂತಾನುಸಾರ ಪರಬ್ರಹ್ಮವೊಂದೇ ಇರುವದಾದ್ದರಿಂದ ಬ್ರಹ್ಮನಲ್ಲಿ ಪ್ರಪಂಚಭ್ರಾಂತಿಯು ಯಾರಿಗೆಯಾದರೂ ವುಂಟಾಗಬೇಕು ? ಬ್ರಹ್ಮನಿಗೆ ಈ ಭ್ರಾಂತಿಯುಂಟಾಗುತಿದೆಯೆಂದು ನೀವು ಹೇಳುವ ಪಕ್ಷಕ್ಕೆ ಜಾಗ್ರದವಸ್ಥೆಯಲ್ಲಿ ತನ್ನನ್ನು ತಾಂಬುದಕ್ಕೆ ಬೇಕಾದವನೂ ಇರಲಾರನಲ್ಲವೆ ? ದೇವದತ್ತನು ತನ್ನನ್ನು ವಿಷ್ಣುದತ್ತನು ಅಥವಾ ಜಗದತ್ತನೆಂದು ತಿಳಿದುಕೊಳ್ಳುವನೆ? ಪರಸ್ಪರ ಭಿನ್ನಗುಣಗಳೇಕತ್ರ ಹ್ಯಾಗೆ ಸೇರಿರುವವು ! ಅದರೆ ಈ ಭ್ರಾಂತಿಯು ಬ್ರಹ್ಮನಿಗೆ ಜಾಗ್ರದವಸ್ಥೆಯೊಳುಂಟಾಗದೆ ಮಾಯಾ ಬದ್ಧನಾದಾಗ ವುಂಟಾಗುವಂತೆ ಹೇಳುವಿರೇನೋ, ಮಾಯಾ ಪರವಶನಾದ ಬ್ರಹ್ಮನಿಗೆ ಸಚ್ಚಿದಾನಂದ ವಿಶೇಷಣವನ್ನು ಹ್ಯಾಗೆ ಆರೋಪಿಸಬಹುದು ? ಅಜ್ಞಾನವೆಂದರೆ ಜ್ಞಾನರಾಹಿತ್ಯವೆಂದರ್ಥವಲ್ಲವೆ ? ಬ್ರಹ್ಮನು ಜ್ಞಾನರೂಪನಾಗಿದಾನೆಂದು ಹೇಳುತ್ತೀರಲ್ಲವೆ ? ಬ್ರಹ್ಮನು ಮಾಯಾಪರವಶನಾಗುವಾಗ್ಯೆ ಅವನ ಪ್ರಥಮಗುಣವಾದ ಸತ್ತೆಂಬದು ನಾಶವನ್ನೈದುವದರಿಂದ ನಾಶರಹಿತನಾದ ನಿತ್ಯನನ್ನು ಸತ್ತೆಂದು ಹ್ಯಾಗೆ ಕರೆಯಬಹುದು ?

ಬ್ರಹ್ಮನು ಮಾಯಾಪರವಶನಾಗುತ್ತಾನೆಂಬದನ್ನು ನೀವು ಅಂಗೀಕರಿಸುವಾಗ್ಯೆ ಆತನ ಯೆರಡನೆಯ ಗುಣವಾದ ಚಿತ್ ಅಂದರೆ ಜ್ಞಾನವೆಂಬದು ಸಹ ಮೂಲೆಗೊತ್ತರಿಸಲ್ಪಡ ಬೇಕಾಗುತಿದೆ. ಯಾತಕ್ಕಂದರೆ, ಜ್ಞಾನವೆಂಬ ಈಗುಣ ಸಹ ನಾಶವನ್ನೈದುತಿದೆ ಆದದರಿಂದ ಯೆಲ್ಲಿ ಅಜ್ಞಾನವು ನೆಲಗೊಂಡಿರುತಿದೆಯೋ ಅಲ್ಲಿ ಅನವರತವೂ ದುಃಖವೆಂಬದು ಶಾಶ್ವತವು. ಯಾವಾಗ ದುಃಖವು ನೆಲಗೊಂಡಿರುವದೋ ಆಗ ಸುಖೋಪಕ್ಕೆ ಅವಕಾಶವಿಲ್ಲದೆಹೋಗುತಿದೆ. ಈರೀತಿ ನೈಜವಾದ ಸಚ್ಚಿದಾನಂದ ವೆಂಬ ಗುಣಗಳು ಬ್ರಹ್ಮನಿಗೆ ಅತ್ಯಂತಿಕವಾಗಿಇಲ್ಲದೆ ನಾಶವನ್ನೈದುತಿವೆ. ಮಾಯೆಯೆಂಬದು ಬ್ರಹ್ಮನಿಗೆ ಬಿನ್ನವೇ ಅಲ್ಲದೆ ಅಬಿನ್ನವೆ ? ಭಿನ್ನವೆಂದು ನೀವುಹೇಳುವಿರಾದರೆ,ಮಾಯೆಯೆಂಬದು ಬ್ರಹ್ಮನಲ್ಲಿ ಸಂಪೂರ್ಣ ಅಜ್ಞಾನರೂಪವಾಗಿ ನೆಲಗೊಂಡಿರಬೇಕಾಗುತಿದೆಯಷ್ಟೆ ಜ್ಞಾನಸ್ವರೂಪನಾದಬ್ರಹ್ಮನಿಗೆ ಅತಿರಿಕ್ತವಾದದ್ದೆಲ್ಲ ಅಜ್ಞಾನವಾದವಾಗಿಯೇ ಯಿರಬೇಕು ಬ್ರಹ್ಮಾತಿರಿಕ್ತವಾದ ಬೇರೊಂದು ಪದಾರ್ಥವು ನಿಜವಾಗಿರುವಂತೆ ತೋರುತಿದೆಂದು ಹೇಳುವಪಕ್ಷಕ್ಕೆ ಬ್ರಹ್ಮನಿಗೆ ಅದ್ವೈತವನ್ನು ಹೇಳಲು ನೀವು ಹ್ಯಾಗೆ ಶಕ್ತರಾಗುವಿರಿ ? ಮಾಯೆಯು ಬ್ರಹ್ಮಾಬಿನ್ನವಾದದ್ದಾಗಿದೆಯೆಂದು ಅಂಗೀಕರಿಸಿದೊಡೆಳಗ ಅದೇ ಅವನರೂಪವೆಂದು ಹೇಳಬೇಕಾಗುತಿದೆಯಲ್ಲವೆ? ಪ್ರಸ್ತುತಸಂದರ್ಭದಲ್ಲಿ ಮಾಯೆಯುಬ್ರಹ್ಮನಿಗೆ ಪ್ರಪಂಚಭ್ರಾಂತಿಯನ್ನುಂಟುಮಾಡುವದಕ್ಕೆ ಹ್ಯಾಗೆಶಕ್ತವಾಗುತದೆ ? ಬ್ರಹ್ಮನುಸ್ವಯಂ ನಿತ್ಯಜ್ಞಾನಸ್ವರೂಪನಾಗಿರುವದರಿಂದಲೂ,ಜ್ಯೋತಿಯಗುಣವು ಪದಾರ್ಥಸ್ವರೂಪವನ್ನು ಪ್ರಕಾಶಗೊಳಿಸುವದಾಗಿರುವದರಿಂದಲೂ ಇದಕ್ಕೇನುಉಪಪತ್ತಿ ಕಲ್ಪಿಸುವಿರಿ ? ಮತ್ತು ಅಂತಾಜ್ಯೋತಿಯು ವಿವಿಧ ಪದಾರ್ಥಗಳನ್ನು ವ್ಯಕ್ತಪಡಿಸಲಿಕ್ಕೆ ಕಾರಣವೇನು ? ಯಾತಕ್ಕಂದರೆ ಬ್ರಹ್ಮನು ಸಚ್ಚಿದಾನಂದರೂಪನಾಗಿಯೂ ಪ್ರಪಂಚವು ಅನಿತ್ಯ, ಜಡ ಮತ್ತು ದುಃಖರೂಪವಾದದ್ದಾಗಿಯೂ ಇರುವದರಿಂದ ಪ್ರಬಲಸಂದೇಹಕ್ಕೆ ಕಾರಣವಾಯಿತು. ಮಾಯೆಯು ಬ್ರಹ್ಮನಿಗೆ ಭಿನ್ನವಾದ್ದೆಂಬದನ್ನು ಅಂಗೀಕರಿಸಿದಲ್ಲಿ ಮತ್ತೊಂದು ಸಂಶಯಕ್ಕೆ ಅವಕಾಶವುಂಟಾಗುತಿದೆ. ಬ್ರಹ್ಮನಂತೆ ಬ್ರಹ್ಮ ಸಾಕ್ಷಾತ್ಕಾರವಾದ ಪದಾರ್ಥಗಳು ಸಹ ನಾಶವನ್ನೈದದೆ ನಿತ್ಯವಾಗಿರಬೇಕಾದ್ದರಿಂದ ಮಾಯೆಗೆ ಯಾವಾಗಲೂ ನಷ್ಟವಿಲ್ಲವಾಯಿತು. ಮಾಯೆಗೆ ನಾಶವಿಲ್ಲದೆ ಇದ್ದರೆ ಅದು ಇರುವವರೆಗೆ ಪ್ರಪಂಚ ಭ್ರಾಂತಿಯು ತಪ್ಪುವದಿಲ್ಲವು. ಈ ಭ್ರಾಂತಿ ಶಾಶ್ವತವಾದವೇಲೆ ವೇದಾಂತ ಶಾಸ್ತ್ರದಲ್ಲಿ ತಿಳಿಸಿರುವ ನಿರ್ವಾಣ ಅಥವಾ ಮೋಕ್ಷವು ಅನುಭವಸಿದ್ಧಹ್ಯಾಗಾಗುವದು ? ಅತ್ಯಂತಿಕ ದುಃಖನಾಶನೂ ಅದ್ವಾತ್ಮಿಕಾನಂದ ಸುಖಾದರನೂ ಮೋಕ್ಷವೆನ್ನಿಸಿಕೊಳ್ಳುವದರಿಂದ ಅಂತಾ ಸ್ಥಿತಿಯನ್ನೈದುವದಕ್ಕೆ ಪ್ರಾಪಂಚಿಕ ಜ್ಞಾನವಿರುವತನಕ ಸಾಧ್ಯವಾಗಲಾರದು ಆದದರಿಂದ ಈ ಸಂಶಯವನ್ನು ವೇದಾಂತಿಗಳು ಹ್ಯಾಗೆ ತಕ್ಕ ಸಮಾಧಾನದಿಂ ನಿವೃತ್ತಿಪಡಿಸುವರೋ ಅದುಕೇಳಿ ತಿಳಿದುಕೊಳ್ಳವ ಕುಂಬ ಕುತೂಹಲವುಳ್ಳ,

ತಮ್ಮವಿಧೇಯನಾದ,
ಸಂಶಯಾತ್ಮ.

ಅಯ್ಯಾ,—ಇದರಿಂ ನಾನು ತಿಳಿಸುವ ಅಂತಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಅವಕಾಶ ಕೊಡಬೇಕೆಂದು ಬೇಡುತ್ತೇನೆ.

ವೇದಮೂರ್ತಿ ಮುತ್ಯಾಗೋವಿಂದಾಚಾರ್ಯರವರು ಕೆಲವು ಶ್ಲೋಕಗಳನ್ನು ಉದಹರಿಸಿ ಅವುಗಳದೆಸೆಯಿಂದ ಈಕಲಿಯುಗದಲ್ಲಿ ಸ್ತ್ರೀ ಪುನರ್ವಿವಾಹ ನಿಷೇಧಿಸಲ್ಪಟ್ಟಿರುವದಾಗಿ ಹೇಳುತ್ತಾರೆ. ಸದರೀ ಶ್ಲೋಕಗಳು ನಿಬಂಧನ ಗ್ರಂಥಗಳದಾಗಿರುತವೆ.

ಪರಂತು ಸ್ತ್ರೀ ಪುನರ್ವಿವಾಹ ಮಾತವೇಕೆಂತಲೂ ವಾಗೆ ಮಾತದ ಹೋದರೆ ಪಾಪ ವುಂಟಾಗುವದೆಂತಲೂ ಇವರೆಡಬಹುದ ಸ್ಮೃತಿವಚನಗಳು ವಿದಿಸುತವೆಯಾಗಿ ಅದಕ್ಕೆ ಪಂಡಿತರು ಯೇನು ಸಮಾಧಾನಹೇಳುವರೋಅದಂತಿಳಿಯಲಪೇಕ್ಷಿಸುತ್ತೇನೆ. ಸದರೀವಚನಗಳುಯಾವವಂದರೆ—

ಪರಾಶರಃ॥ ನಷ್ಟೇಮೃತೇಪ್ರವ್ರಜಿತೇಕ್ಲೀಬೇಚ ಪತಿತೇಪತೌ । ಪಂಚಾಪತ್ಸುಚನಾರೀಣಾಂಪತಿರನ್ಯೋವಿಧೀಯತೇ ॥

ಅತ್ರಿಃ ॥ ಸಪ್ತೇಬಸನ್ಯಾಸಮಾಪನ್ನೇವ್ಯಾಧಿಗ್ರಸ್ತೇಚಪರ್ವತ್ತರಿ । ಪುನಃಸ್ತ್ರೀಣಾಂವಿವಾಹಸ್ಯಾತ್ ಕಲಾವಪಿನಸಂಶಯಃ ॥

ಗೌತಮಃ ॥ ಮರಣಾನಂತರಂಭರ್ತುರ್ಯದ್ಯನಾಹತಸೌಖ್ಯಯಃ । ಸ್ತ್ರೀಯೋವಿವಾಹಮರ್ಹಂತಿ ನಾತ್ರಕಾರ್ಯಾವಿಚಾರಣಾ ॥

ವಿಶ್ವಾಮಿತ್ರಃ ॥ ಅಸ್ಪೃಷ್ಟಲಿಂಗಯೋನೀನಾಮಾವಿಂಶತಿವಯಃಸ್ತ್ರಿಯಾಃ । ಪುನರ್ವಿವಾಹಕರ್ತವ್ಯಂಚತುರ್ವರ್ಣೇಷ್ವಪಿ ॥

ನಾರದಃ ॥ ಉದ್ವಾಹಿತಾಪಿಸಾಕನ್ಯಾನಚೇತ್ಸಂಪ್ರಾಪ್ತಮೈಥುನಾ । ಪುನಸ್ಸಂಸ್ಕಾರಮರ್ಹತಿಯಥಾಕನ್ಯಾತಥೈವಸಾ ॥

ಚ್ಯವನಃ ॥ ಪೂರ್ವಂನಿಷೇಕಾನ್ನಾರೀಣಾಂಮೃತೇಪತ್ಯೌತತಃಪರಂ । ದಶಾದಾತ್ಯಂತರೇಕುರ್ಯಾದ್ವಿವಾಹಂಪುನಃಪಿತಾ ॥

ವೈಶಂಪಾಯನಃ ॥ ಪುರುಷಾಣಾಮಿವಸ್ತ್ರೀಣಾಂ ವಿವಾಹಾಬಹವೋಮತಾಃ । ಭರ್ತೃನಾಶೇಪುನಸ್ತ್ರೀಣಾಂಪುಂಸಾಂಪತ್ನೀಲಯೇಯಥಾ ॥

ಕಾಶ್ಯಪಃ॥ ಅಪೋವತಸುಯೋನಾರ್ಯೋಯದಿತಾಮೃತಭರ್ತೃಕಾಃ । ಪುನರ್ವಿವಾಹಮರ್ಹಂತಿನತತ್ರಾಂಕಯೋಭವೇತ್ ॥

ಜಾಬಾಲಿಃ ॥ ಬ್ರಾಹ್ಮಣಾಃಕ್ಷತ್ರಿಯಾವೈಶ್ಯಾಃ ಶೂದ್ರಾಃಸ್ವಕುಲಯೋಷಿತಾಂ । ಪುನರ್ವಿವಾಹಕುರ್ವೀರನ್ನನ್ಯಥಾಪಾಪಸಂಭವಃ ॥

ಅಗಸ್ತ್ಯಃ ॥ ಚತುರ್ಥಾದಿವಯಃಸ್ತ್ರೀಣಾಂ ಪುನಃಪರಿಣಯೋಮತಃ । ನರತ್ರಾಪಂನಾರೀಣಾಂತದ್ವ್ಯಥಾತದ್ಗತಿರ್ನಹಿ ॥

ವ್ಯಾಘ್ರಪಾತ್ । ಪತ್ನೀನಾಶೇಯಥಾಪುಂಸೋಭರ್ತೃನಾಶೇತಥಾಸ್ತ್ರಿಯಾಃ । ಪುನರ್ವಿವಾಹಕರ್ತವ್ಯಃಕಲಾವಪಿಯುಗೇತಥಾ ॥

ವಸಿಷ್ಠಃ॥ ಭರ್ತೃಸಂಬಂಧಶೂನ್ಯಾನಾಂಭರ್ತೃನಾಶೇತುಯೋಷಿತಾಂ । ಪುನರ್ವಿವಾಹಂಕುರ್ವೀತ ಪಾಪಂಸ್ಯೈವನನಾಗಮ ॥

ಬೃಹಸ್ಪತಿಃ॥ಅಜ್ಞಾತಭರ್ತೃಸಂಬಂಧಾಃಭವಂತಿಯದಿಯೋಷಿತಃ । ಗತಪ್ರಜಾಯದಂತಾಸಾಂ ಪುನಃಪರಿಣಯೋಭವೇತ್ ॥

ವಿವಾಹೆಚ್ಛಾಯದಾಸ್ತ್ರೀಣಾಂಭರ್ತೃನಾಶೇತುಜಾಯತೆ । ಪುನರಕ್ಷತಯೋನೀನಾಂವಿವಾಹಕರಣಂಮತಂ ॥

ವ್ಯಾಸಃ ॥ ನಿಷೇಕಾನಂತರಂಸ್ತ್ರೀಣಾಂಭರ್ತುಭರ್ತೃತ್ವಮುಚ್ಯತೆ । ಪಾಣಿಗ್ರಹಣಮಾತ್ರೇಣಸದಪ್ರಾಪ್ತಸರ್ವಯೋಷಿತಾಂ ॥

ಯಾಜ್ಞವಲ್ಕ್ಯಃ ॥ ಅಗರ್ಭದಾರಣಂಸ್ತ್ರೀಣಾಂ ಪುನಃಪರಿಣಯಃಸ್ಮೃತಃ । ಭರ್ತೃನಾಶೇತುಮಾಂಗಲ್ಯಂಪ್ರಾಪ್ತುಮರ್ಹಂತಿಯೋಷಿತಃ॥

ಶೌನಕಃ॥ ಗರ್ಭಾಧಾನವಿಹೀನಾನಾಂಸ್ತ್ರೀಣಾಂ ಕರ್ಮಾದಿಕಾರಿತಾ ॥ ಭರ್ತೃಣಾಂವಿಷಯೆನ್ಯೆವಮಿತ್ರಯಮಾಹಶೌನಕೋಪಿ ॥

ತಮ್ಮ ವಿಧೇಯನಾದ
ಶಾಸ್ತ್ರಾಭಿಮಾನಿ

ಅಯ್ಯಾ,—ಮುಂಬೈಯಲ್ಲಿ ಪ್ರಕಟಿಸಲ್ಪಡುವ ಕನ್ನಡ ಸುವಾರ್ತೆ ಯೆಂಬ ನ್ಯೂಸ್‌ಪೇಪರ್ ತಮಗೆ ಬರುತ್ತೋ ಇಲ್ಲವೊ ತಿಳಿಯದು ಮಾಹೇ ಮಜಕೂರ್ ೧೧ನೇ ಮರ್ತುಮಿನ ಸದರೀ ನ್ಯೂಸ್‌ಪೇಪರ್‌ನಲ್ಲಿ,ಧಾರವಾಡ ಮೊಕ್ಕಾಂನಿಂದ, ಕಳೆದ ಆಗಸ್ಟು ೩೧ನೇ ತಾರೀಖಿನಲ್ಲಿ ಸುಸ್ಥಾನ ಕಿತ್ತೂರು ಸಂಗಮಾರ್ಯರೆಂಬವರಿಂದ ಕಳುಹಿಸಲ್ಪಟ್ಟ ಒಂದು ಪತ್ರ ಪ್ರಕಟಿಸಲ್ಪಟ್ಟಿದೆ. ಈಹೆಸರಿನವರು ಯಾರೋ ಗೊತ್ತಿಲ್ಲ ಅವರ ತಾತ್ಪರ್ಯವೇನಂದರೆ,—

ಕೆಲವು ದಿನಗಳ ಕೆಳಗೆ ಅನೇಕ ಸ್ವಮತ ಪರಮತಸ್ಥರು, ರಾಜಾಶ್ರಯವಿಲ್ಲದೆ ಮುಸಲ್ಮಾನ ವ್ಯಾಪಾರಿಪ್ರರ ರಾಜ್ಯ ಕ್ರಾಂತಿಯಲ್ಲಿ ಮತಾಂತರದವರ ಅಪಲಾಪಕ್ಕೊಳಗಾಗಿಹಾಳಾಳವನ್ನೈದಿ.

ಈ ಲಿಂಗವಂತರ ಧರ್ಮಸ್ವರೂಪವು ಹ್ಯಾಗುಂಟೋ ತಿಳಿಯಬೇಕೆಂಬ ಕುತೂಹಲ ವುಳ್ಳವರಾಗಲು, ಲೋಕೋಪಕಾರಾರ್ಥವಾಗಿ ಮೈಸೂರ ಸ್ಟ್ಯಾರ್ ಪತ್ರಿಕಾ ಎಡಿಟರವರು, ಈ ಧರ್ಮವನ್ನು ಪ್ರಕಟಿಸುವದಕ್ಕೆ ಉಜ್ಜುಗಿಸಿ, "ಯಾವ ಮತದಲ್ಲಿಯಾವರೂ ಪರಮತ ಖಂಡನೆ ಸ್ವಮತ ಸ್ಥಾಪನವಿಲ್ಲದೇ ಇರುವದಿಲ್ಲ, ಇಂಥಿಂಥ ಮತಗಳಲ್ಲಿ ಹೀಗೆ ಹೀಗೆ ಎಲ್ಲಾ ಮತಗಳ ಖಂಡನೆಯುಂಟು, ಹೀಗೆ ಒಬ್ಬರಿಂದಿನ್ನೊಬ್ಬರು ಪರಸ್ಪರವಾಗಿ ಖಂಡಿಸಲ್ಪಟ್ಟಿದ್ದಾರೆ, ಅದೇಮೇರೆಯೇ ಈ ಲಿಂಗವಂತರ ಮತದಲ್ಲಿಯಾವರೂ ಉಂಟು" ಎಂದು, ಪರಮತ ಖಂಡನೆಯು ಬಂದ ಪಕ್ಷದಲ್ಲಿ ಯಾರಿಗೂ ವಿಷಾದ ಉಂಟಾಗದಂತೆ ಉಭಯ ಖಂಡನೆಗಳನ್ನು ಜೋಡುಜೋಡಾಗಿ ಇಟ್ಟು ಇದು ಅರ್ಥವಾದವು ಇದು ಆಚಾರವಾದವು ಎಂದು ಬರೆದು ಪ್ರಕಟಿಸುತ್ತಾ ಬಂದರು. ಇದನ್ನು ಕೂಡಾ ಸಹಿಸಲಾರದ ಕೆಲ ಅಪ್ರಬುದ್ಧರು ಇವರ ಕಡೆ ಅನೇಕ ಕರಸ್ಪಾಂಡೆನ್ಸುಗಳನ್ನು ಕಳುಹಿಸಿ ವಾದ ವಿವಾದಗಳನ್ನು ಬೆಳಸಿ ಕಲಹವನ್ನೆಬ್ಬಿಸುವದಕ್ಕೆ ಯತ್ನಿಸಿದರು ಆದಾಗ್ಯೂ ಸದರೀ ಎಡಿಟರವರು ಯಾವ ಜಾತಿಯವರಿಗಾದರೂ ಯಾವ ಮತದವರಿಗೂ ವಿಷಾದ ಉಂಟಾಗದಹಾಗೆಯೂ, ವಿದ್ವಜ್ಜನರು ತಲೆದೂಗುವಹಾಗೆಯೂ ಅಂಥವರಿಗೆ ಪ್ರತಿ ಕ್ರಿಯೆಯನ್ನು ಮಾಡುತ್ತಾ ಸಮಂಜಸವಾದ ಉತ್ತರಗಳನ್ನು ಕೊಟ್ಟು ಅವರನ್ನು ಸಮಾಧಾನ ಗೊಳ್ಳಿಸುತ್ತಾ ಬಂದರು. ಇತ್ತಿತ್ತಲಾಗಂತೂ ಆಪತ್ರಿಕೆಯ (ಸ್ಟ್ಯಾರಿನ) ಅವಶ್ಯಕತೆ ಇಲ್ಲದ ಹಾಗೆ ಅನೇಕಗಳಾದ ಮತ ಗ್ರಂಥಗಳೇ ಅವರ ಪ್ರೆಸ್ಸಿನಲ್ಲಿ ಪ್ರಿಂಟಾಗುತ್ತ ಬಂದದ್ದರಿಂದಲೂ, ಹಾಗೆ ಅಚ್ಚು ಮಾಡತಕ್ಕ ಗ್ರಂಥಗಳನ್ನು ಪರಿಶೋಧಿಸುವದು ಮೊದಲಾದ ಹೆಚ್ಚು ಕೆಲಸಗಳ ಭಾರವು ಅವರಿಗೆ ಬಂದಿರುವದರಿಂದಲೂ, ಅವರು ತಮ್ಮ ಪತ್ರಿಕೆಯನ್ನು ಈಗ ಮಾಸಕ್ಕೊಂದು ಸಾರೆ ಹೊರಡಿಸ ಹತ್ತಿದ್ದಾರೆ. ಆದರೆ, ಕರ್ನಾಟಕ ಪ್ರಕಾಶಿಕಾ ಕರ್ತರು ಸದರೀಯವರ ಸ್ಟ್ಯಾರ್ ಪತ್ರಿಕೆಯನ್ನು ಓದುವದಕ್ಕೆ ತಮಗೆ ಬೇಸರಿಕೆ ಯುಂಟಾಗಿದ್ದರೆ ಸುಮ್ಮನೆ ಬಿಟ್ಟುಬಿಡಬೇಕಾಗಿತ್ತು. ಅವರ ಮೇಲೆ ತಮ್ಮದೇನಾದರೂ ಕೋಪ ಯಿದ್ದಹಾಗಿದ್ದರೆ ತಮ್ಮ ಪ್ರಕಾಶಿಕೆಯ ದ್ವಾರದಿಂದ ನಡಿಸಬೇಕಾಗಿತ್ತು, ಅಥವಾ ಲಿಂಗವಂತರು ತಮ್ಮ ಧರ್ಮವನ್ನು ಪ್ರಚಾರ ಮಾಡುತ್ತಲಿದ್ದಾರೆ ಹಾಗೆ ನಮ್ಮ ಧರ್ಮವನ್ನು ಪ್ರಚಾರ ಮಾಡುವವರು ಯಾರೂ ಇಲ್ಲವಲ್ಲಾ ಎಂಬ ಸ್ವಾಭಿಮಾನ ವಿದ್ದದ್ದಾದರೆ, ತಾವೂ ತಮ್ಮ ಪತ್ರಿಕಾದ್ವಾರದಿಂದ ತಮ್ಮ ಧರ್ಮವನ್ನು ಪ್ರಚಾರ ಮಾಡಬಹುದಾಗಿತ್ತು, ಅದನ್ನೆಲ್ಲಾ ಬಿಟ್ಟು ತಮ್ಮಂಥ ಇನ್ನು ಅನೇಕ ದ್ವೇಷಿಗಳನ್ನು ಪ್ರೋತ್ಸಾಹ ಗೊಳ್ಳಿಸಿ ಅವರ ತಲೆಗಳಲ್ಲಿ ಹುಳುಗಳನ್ನು ಕೇರಿಸುತ್ತಾ ಶಿವನಿಂದೆ ಶಿವಭಕ್ತನಿಂದೆ ಜಂಗಮ ನಿಂದೆಗಳಂಥ ಕರ್ನಾಟಕ ದೇಶದ ಲಿಂಗವಂತರನ್ನೆಲ್ಲಾ ಕೆರಳಿಸಹತ್ತಿದ್ದಾರೆ" ಎಂದುವಗ್ಗೈರೆ.

ತಮಗೆ ಅನೇಕ ಜನ ಶಿವಾಚಾರವವರು ವಿಷಿತರಾಗಿಯೂ ಚಂದಾದಾರರಾಗಿಯೂ ಇದಾರೆಯಷ್ಟೆ ಅವರನ್ನು ದೂಷಿಸುವದಕ್ಕೆ ತಮಗೆಷ್ಟು ಮಾತ್ರವೂ ಇಷ್ಟವಿರುವಂತೆ ನನಗೆ ತೋರುವದಿಲ್ಲ ಸರ್ಗ೧೮೮೫ನೇ ಆಗಸ್ಟ್ ೨೦ನೇ ತಾರೀಖಿನಲ್ಲಿ ಅರಶೀಕೆರೆ ಮೊಕ್ಕಾಂನಿಂದ ಲವಿಜರ್‌ವರ್ ಯೆಂಬ ಕರಸ್ಪಾಂಡೆಂಟ ಬರೆದಕಾಗದವನ್ನ ತಾವು ಪ್ರಕಟಿಸಿ ಅದಕ್ಕೆ ಸ್ವಾಭಿಪ್ರಾಯ ಕೊಟ್ಟಿರುತ್ತೀರಿ ಇದು ಆಗಸ್ಟ್ ೨೮ನೇತಾರೀಖಿನ ಪತ್ರಿಕೆಯಲ್ಲಿ ನಮೂದಿದೆ. ಇದರಮೇಲೆ ಚರ್ಚೆ ಹುಟ್ಟಿದೆ ಈ ಸಂಗಮಾರ್ಯನಿಗೆ ಲಿಂಗಾಯತ ಮತದಲ್ಲಿ ಮರಭಿಮಾನವೂ ಸ್ಟ್ಯಾರ್‌ಪೇಪರ್‌ನಲ್ಲಿ ಅಭಿನಿವೇಶವೂ ಇರುವದಾದರೆ ಕರ್ನಾಟಕ ಪ್ರಕಾಶಿಕಾ ಯೆಡಿಟರವರ ಸಂಗಡ ಜಗಳವಾಡಿ ಪ್ರಯೋಜನವಿಲ್ಲವು. ಇದಕ್ಕೆ ಕಂಕಣ ಬದ್ಧರಾಗಿ ಬೆಂಗಳೂರು ಪೇಟೆಯಲ್ಲಿ ಇರುವ ವಿಕ್ಟೋರಿಯಾ ಛಾಪಾಖಾನೆಯಲ್ಲಿ ಅಚ್ಚು ಹಾಕಿಸಿಇರುವ ವಿಶ್ವಕರ್ಮ ಬ್ರಾಹ್ಮಣ ಭಾಸ್ಕರಾಚಾರ್ಯರ ಚಿಕ್ಕ ಬುಕ್ಕನ್ನು ನೋಡಿ ಖಂಡಿಸಿದರೆ ಬಹಳ ಚನ್ನಾಗಿರುತ್ತೆ "ವಿವಾಹಶ್ಚ ವಿವಾದಶ್ಚ ಸಮಯೋರಥಿಶೋಭತೆ" ಎಂಬನ್ಯಾಯ ಸರಿಹೋಗುತ್ತೆ. ದಯಮಾಡಿ ಈ ನನ್ನ ಕಾಗದವನ್ನ ಪ್ರಕಟಿಸಬೇಕು. ಸದರೀಬುಕ್ಕು ಕಳುಹಿಸುವದಕ್ಕೆ ಸಿದ್ಧವಾಗಿ ಇದೇನೆ

ಅಯ್ಯಾ,—ಈ ತಿಂಗಳ ೧೪ನೇ ತಾರೀಖಿನ ಈ ಪತ್ರಿಕೆಯಲ್ಲಿ, ಸ್ತ್ರೀಪುನರ್ವಿವಾಹವಿಷಯವನ್ನು ಕುರಿತು ಹಿಂದೆ ವೇ|| ಮುತ್ಯಾ ಗೋವಿಂದಾಚಾರ್ಯರಿಗೂ ದಿವಾನ್ ಬಹದೂರ್ ರಘುನಾಥರಾಯರವರಿಗೂ ಜರಿಗಿದ ಶಾಸ್ತ್ರವಿಚಾರವಿಷಯದಲ್ಲಿ ನಿಜಸ್ಥಿತಿಯನ್ನೂ, ಕೃತ್ರಿಮ ವಚನಗಳನ್ನೂ ಅವಕ್ಕೆ ಸುದರ್ಶನವನ್ನು ಬಿಟ್ಟು ಅರ್ಥಮಾಡಿರುವ ಬಗೆಯನ್ನೂ ಪ್ರಕಟಿಸಿರುವದು ನೋಡಿ ಇಲ್ಲಿನ ಜನಗಳಿಗೆಲ್ಲ ಬಹಳ ಸಂತೋಷ ಪ್ರಾಪ್ತವಾಯಿತು

ಸದರೀ ಆಚಾರ್ಯರವರು ಕಲಿಯುಗದಲ್ಲಿ ಸ್ತ್ರೀಪುನರ್ವಿವಾಹ ವಾಗಕೂಡದೆಂದು ಬರೆದು ಕಳುಹಿಸಿದ ಅಂಶವನ್ನು ಪ್ರಕಟಿಸಿ ಅದರಕೆಳಗೆ ಇನ್ನುಮೇಲೆ ಈ ವಿಷಯವನ್ನು ನ್ಯೂಸ್‌ಪೇಪರಿನಲ್ಲಿ ಪ್ರಕಟಿಸುವದಿಲ್ಲವೆಂಬ ಭಾವವಾಗಿ ದವಾವ್ ಕೊಡೋಣವಾಗಿದೆ

ವೃಥಾ ಆಚಾರ್ಯರವರಿಗೆ ಜವಾಬ್ ಕೊಡುವದರಮೂಲಕ ಅವರಿಗೆ ಅವಮಾನ ಪ್ರಾಪ್ತವಾಗುವದಲ್ಲದೆ ಇತರ ಮುಖ್ಯ ವಿಷಯಗಳನ್ನು ಪೇಪರ್‌ನಲ್ಲಿ ಪ್ರಕಟಿಸುವದಕ್ಕೆ ಅನವಕಾಶವಾಗುತ್ತೆಂದು ತಮ್ಮ ಅಭಿಪ್ರಾಯವಿದ್ದಹಾಗೆ ಇಲ್ಲಿನ ಹಳ್ಳೀ ಜನಗಳು ಆಚಾರ್ಯರವರ ವಾದವನ್ನು ನೋಡಿ ಪುನರ್ವಿವಾಹ ಮಾಡಕೂಡದೆಂದು ಸಿದ್ಧಾಂತವಾದಹಾಗೆ ಭ್ರಾಂತಿಪಡುತ್ತಾರೆ

ಏನುಚ ಮಾಹೇಮ||೧೧ನೇತಾರೀಖಿನ ಕನ್ನಡ ಸುವಾರ್ತೆ ಯೆಂಬ ಪತ್ರಿಕೆಯಲ್ಲಿಹೇಳಿರುವ ಅಭಿಪ್ರಾಯ ಸರಿಯಾಗಿದೇನುವದೆ "ಮುಸಲ್ಮಾನರುಗಳು ಇಷ್ಟುದಿವಸ ಹಿಂದೂಜನರ ಸಹವಾಸದೊಳಗಿದ್ದರೂ ಅವರ ನಿಜಸ್ವಭಾವಕ್ಕೆ ಇವರು ಏನೇನೂ ಲಕ್ಷ್ಯ ಕೊಡಲಿಲ್ಲವಲ್ಲ ಎಂದು ತಿಳಿಸುವುದೆ ಇವರು ಸ್ವಲ್ಪ ಅವಧಾನ್ಕ್ಕೂ ಅವಿಚಾರಕ್ಕೆ ಒಳಗಾಗಿ ನಡೆಸಿದ ಕೃತ್ಯಗಳ ದೆಸೆಯಿಂದ ಅವರಮೇಲೆ ಕಠಿಣ ಪದಬೇಕಾಗುತ್ತದೆ ಒ ವಿಸ್ತಾರದೆ ಇವರು ತಮ್ಮ ಯಾವತರದ ಸ್ಥಿತಿಯಲ್ಲಾದರೂ ಬದಲು ಮಾಡಿಕೊಳ್ಳುವದು ಹಿಂದೂ ಜನರ ಸ್ವಭಾವಕ್ಕೆ ಕೇವಲ ವಿರುದ್ಧವಾಗಿದೆ ಅವರ ಸ್ಥಿತಿಯಲ್ಲಿ ಯಾವತರದ ಅಂತರವಾಗಬೇಕಾದರೂ ಕ್ರಮೇಣವಾಗಿಯೂ ನಿಧಾನದಿಂದಲೂ ಅಗೋಚರವಾಗಿಯೂ ಆಗಬೇಕು. ಅಲ್ಲದೆ ಸಾವಿರಾರು ಮಿಶಿನರಿಗಳು ಬಂದು ಪ್ರತಿ ಮನೆ ಮನೆಗೆ ತಿರುಗಿ ಪ್ರಯತ್ನ ಮಾಡಿದರೂ ಹಿಂದುಜನರ ಮನಸ್ಸು ಅಲ್ಲಾಡಲಿಕ್ಕಿಲ್ಲ ಹಾಗೆಯೇ ಕಾಲಾನುಸಾರವಾಗಿಯೂ ಅವರಲ್ಲೇ ಅನೇಕರಿಗೆ ಗೋಚರವಾಗದೆಯೂ ಆಗುತ್ತಿರುವ ಸ್ಥಿತ್ಯಂತರವು ಹಿಂದುಜನರು ಎಷ್ಟು ಪ್ರಯತ್ನ ಮಾಡಿದರೂ ನಿಲ್ಲಲಿಕ್ಕಿಲ್ಲ"

ಈಗ ಸ್ತ್ರೀ ಪುನರ್ವಿವಾಹ ವಾಗತಕ್ಕದ್ದು ನ್ಯಾಯವೆಂತ ೧ ಶಾಸ್ತ್ರಸಮ್ಮತವೆ ನಲೂ ಯುಕ್ತವಾಗಿಕೆಂಬುವದೇ ಯೆಲ್ಲರ ತಾತ್ಪರ್ಯವೇ ಹೊರತು ಬಲಮುಖವಾಗಿ ವಿವಾಹಮಾಡಿಸಬೇಕೆಂತಲಾಗಲಿ ವಿವಾಹಮಾಡಿಕೊಳ್ಳುವ ಇಷ್ಟವುಳ್ಳವರಿಗೆ ಅದುತಪ್ಪಿಸಿ ಬೇರೆ ಸ್ಥಿತಿಯನ್ನುಂಟುಮಾಡಬೇಕೆಂತಲಾಗಲಿ ಯಾರಿಗೂ ಅಭಿಪ್ರಾಯವಿಲ್ಲವು ಈಗ ಮುಸಲ್ಮಾನರಲ್ಲಿ ಪುನರ್ವಿವಾಹವು ಶಾಸ್ತ್ರಸಮ್ಮತವಾಗಿದ್ದರು ಅನೇಕರು ಮಾಡಿಕೊಳ್ಳುವದಿಲ್ಲವು ಅದರಿಂದ ಯಾವವಿಧ ಬಾಧಕವೂ ಯಿರುವದಿಲ್ಲವು ಮುಖ್ಯವಾಗಿ ಈವಿಷಯವು ಅವರವರ ಇಷ್ಟ ಮತ್ತು ಅನುಕೂಲ್ಯವನ್ನು ಅನುಸರಿಸಿದ್ದಾಗಿರುತದೆ.

ವೇ ಮುತ್ಯಾ ಗೋವಿಂದಾಚಾರ್ಯರವರು ಈಚೆಗೆ ಉದಹರಿಸಿರುವ ಪ್ರಮಾಣವಚನಗಳು ಹಿಂದಿನ ವಾದಗಳಲ್ಲಿ ಪ್ರಬಲತರ ಪ್ರಮಾಣವಚನಗಳಿಂದ ರದ್ದಾದವಾಗಿರುತಿವೆ. ಅಂತಾವುಗಳನ್ನು ತಮ್ಮ ಕಕ್ಷಿಗೆ ಆಧಾರವೆಂದು ಪ್ರಕಟಿಸುವದು ಪಾಮರಜನಗಳನ್ನು ಮರಳುಮಾಡುವದಕ್ಕಲ್ಲದೆ ಬೇರೆ ಯಾವ ಪ್ರಯೋಜನದಿಂದಲೂ ಅಲ್ಲವೆಂದು ಸ್ಪಷ್ಟವಾಗುತಿದೆ

ತಮ್ಮ ವಿಧೇಯ

ನಿಷ್ಪಕ್ಷಪಾತಿ

ಮೇಲಿನ ಬರವಣಿಗೆಯು ಕೇವಲ ನಿಷ್ಪಕ್ಷಪಾತವಾಗಿರುತಿ ಎ ಕ ಪ್ರ

ಅಯ್ಯಾ, ಈಚಿಗೆ ಹಿಂದೂ ಸ್ತ್ರೀಪುನರ್ವಿವಾಹ ವಿಷಯವನ್ನು ಕುರಿತು ಬೆಂಗಳೂರಲ್ಲಿನ ಪಂಡಿತರುಗಳಿಗೂ ದಿವಾನ್ ಬಹದೂರ್ ರಘುನಾಥರಾಯರವರಿಗೂ ಶಾಸ್ತ್ರವಿಚಾರ ನಡೆದಂತೆಯೂ, ಆಕಾಲದಲ್ಲಿ ಬಂದಿದ್ದ ಪಂಡಿತರುಗಳಲ್ಲಿ ಕೆಲವರು ಬಹಳ ಪ್ರಾಜ್ಞರೆಂದೂ ಕೇಳುತ್ತೇನೆ ಯಾವವಿಷಯವನ್ನಾದರು ಕುರಿತು ನಡೆಸಲ್ಪಡುವ ವಿಚಾರವು ಉಭಯಪಕ್ಷಿಯವರಿಗೂ ತಿಳಿದಿರುವ ಭಾಷೆಯಲ್ಲಿ ನಡೆಸಲ್ಪಡಬೇಕಾದ್ದು ಆವಶ್ಯಕವೆಂಬ ಅಂಶವನ್ನು ಯೆಲ್ಲರೂ ಅಂಗೀಕರಿಸುವರಷ್ಟೆ. ಅದರಂತೆಯೇ, ಹಿಂದೂ ಸ್ತ್ರೀ ಪುನರ್ವಿವಾಹವು ಶಾಸ್ತ್ರಸಮ್ಮತವೆ ಅಥವಾ ಅಲ್ಲವೆಯೆಂಬ ವಿಷಯವನ್ನು ಕುರಿತು ವಿಚಾರಮಾಡುವಲ್ಲಿ ಕಕ್ಷಿದ್ವಯದವರೂ ತಮ್ಮತಮ್ಮ ಪಕ್ಷಗೆ ಪ್ರೋಷಕವಾಗಿ ಉದಹರಿಸುವ ಪ್ರಮಾಣವಚನಗಳಲ್ಲಿ ಇವರಡಿ ಬರುವ ಶಬ್ದಗಳು ಅಗಿಂದ ಗ್ರಂಥಗಳುಬರುವವರಿಂದ ಅವುಗಳ ಅರ್ಥ ದರಿಸಿಯದಲ್ಲಿ ಉಭಯಪಕ್ಷಿಯವರೂ ಏಕಾಭಿಪ್ರಾಯವುಳ್ಳವರಾಗಿರಬೇಕು ಅಂತಾ ಶಬ್ದಗಳ್ಯಾವವೆಂದರೆ—

೧ ಪುನರ್ಭೂ, ೨ ಊಢಾ, ೩ ಕ್ಷತಾ, ೪ ಅಕ್ಷತಾ, ೫ ಗಿರಿಶ, ೬ ದಿಧಿಷೂ, ೭ ದಿಧಿಷೂಪತಿ, ೮ ದೇವರ, ೯ ಸಂಸ್ಕಾರ, ೧೦ ಆದಿಮಸಂಸ್ಕಾರ, ೧೧ ಅಂತಿಮಸಂಸ್ಕಾರ, ೧೨ ನಿಕ್ಷೇಪ, ೧೩ ವಿವಾಹ, ೧೪ ನಷ್ಟ, ೧೫ ನಿಯೋಗ, ೧೬ ಶಾಸ್ತ್ರ

ಮೇಲಿನ ಶಬ್ದಗಳಿಗೆ ಪಂಡಿತರುಗಳು ಮಾಡಿಕೊಂಡಿರುವ ಅರ್ಥವೇನಾದದ್ದು ತಮಗೆ ತಿಳಿದಿದ್ದರೆ ಅದನ್ನು ತಮ್ಮ ಪತ್ರಿಕೆಯ ಮೂಲಕ ತಿಳಿಯ ಬಯಸುತ್ತೇನೆ ಇಲ್ಲವಾದರೆ, ಅಲ್ಲಿ ನಡೆಸಲ್ಪಟ್ಟಿದ್ದ ಪಂಡಿತರುಗಳಾದರೂ ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ

ಮದರಾಸ್. ತಮ್ಮ ವಿಧೇಯನಾದ,

ಸ್ವದೇಶಾಭಿಮಾನಿ

TELECRAPIHCSUMMARY
ತಂತಿವೃತ್ತಾಂತ ಸಂಗ್ರಹವು.

[illegible] ೧೮ನೇ ಸೆಪ್ಟಂಬರ್—[illegible]

ಲಂಡನ್ ೧೮ನೇ ಸೆಪ್ಟಂಬರ್—ಇಂಗ್ಲಿಷರಿಗೂ [illegible]

[illegible]

[illegible] ೧೮ನೇ ಸೆಪ್ಟಂಬರ್—[illegible]

[illegible] ತಾಮ್ರಶೋಧಿತಿಂದ ಭಾವ್ಯ ಕರ್ತ್ತುರೂಡಿತಿಂ[illegible]

[illegible] ೧೮ನೇ ಸೆಪ್ಟಂಬರ್—[illegible]

[illegible] ೧೮ನೇ ಸೆಪ್ಟಂಬರ್—[illegible]

[illegible] ೧೫ನೇ ಸೆಪ್ಟಂಬರ್—[illegible]

ಲಂಡನ್, ೧೬ನೇ ಸೆಪ್ಟಂಬರ್—[illegible]

THE MYSORE GAZETTE
ಮೈಸೂರು ಗೆಜೆಟ್.

ಮೊಕ್ಕಾಂ ನಂ. ೯೩, ತಾ||೧೦ನೇಸೆಪ್ಟಂಬರ್—ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟಂಟ್‌ಕಮ್ಮಿಷನರ್ ಮೆ|| ಡಿ ದೇವರಾಜ ಅರಸಿನವರು, ಅವರು ಉಪಯೋಗಿಸಿಕೊಳ್ಳುವ ತಾ|| ಲಾಗಾಯತು, ಒಂದು ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ ೯೦೩, ತಾ||೧೪ನೇಸೆಪ್ಟಂಬರ್—ದಸರಾ ಹಬ್ಬ ಪ್ರಯುಕ್ತವಾದ ರಜಾಬಗ್ಗೆ ದಸರಾ ೬ನೇ ದಿನವಾದ ಬರುವ ಅಕ್ಟೋಬರ್ ೧೪ನೇ ತಾರೀಖ್ ಮೊದಲು ೨೧ನೇ ತಾರೀಖ್ ವರಿವಿಗೆ ಉಭಯದಿನಗಳೂ ಸೇರಿ, ತಮಾಂಸರ್ಕಾರ್ ಇಲಾಖೆಗಳೂ ಮುಚ್ಚಲ್ಪಡುವವು. ಜರೂರಿಯಾತ್ ಕೆಲಸಗಳು ನಡೆಯತಕ್ಕಬಗ್ಗೆ ಆಯಾ ಇಲಾಖೆಗಳ ಮೊಖ್ತೇಸರರಿಂದ ಯೇರ್ಪಾಡುಗಳು ಮಾಡಲ್ಪಡಬೇಕು.

ಈ ಇಸ್ತಿಹಾರಿನ ಮೂಲಕ ದಸರಾ ಪ್ರಾರಂಭದಿನ ಕೊಡಲ್ಪಡುವ ರಜಾ ರದ್ದಾಗುವದಿಲ್ಲವು

ನಂ ೧೨೬, ೧೫ನೇ ಸೆಪ್ಟಂಬರ್.—ಚೀಲೂರು ತಾಲ್ಲೂಕು ಅಮಲ್ದಾರರು ಬಿ ಕೇಶವಯ್ಯಂಗಾರ್ರಿಗೆ, ಸರ್ ೧೮೮೫ನೇ ಆಗಸ್ಟ್ ೨೮ನೇ ಮುಕ್ಕಾಂ ೧೧೩ನೇ ನಂ|| ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ಪ್ರಿವಿಲೇಜ್‌ರಜಾ ಮತ್ತು ೧೨ ದಿನಗಳಿಗೆ ಹೆಚ್ಚಿಸಲ್ಪಟ್ಟಿದೆ

ಮೊಕ್ಕಾಂ ನಂ ೯೩೩, ೧೬ನೇ ಸೆಪ್ಟಂಬರ್. ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ಕೆ ರಾಮಸ್ವಾಮಯ್ಯಂಗಾರ್ರು ೮೫ನೇ ಸೆಪ್ಟಂಬರ್ ೨೦ನೇ ತಾರೀಖ್ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೮ ದುವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ ಆಫೀಸ ಹೆಡ ರೈಟರು ಎ ವೀರರಾಘವಲನಾಯುಡುಯವರು, ರಾಮಸ್ವಾಮಯ್ಯಂಗಾರ್ರ ರಜಾಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಬದಲೀನೋಡುಮತೆ ಮೊಕರರ.

Bangalore.—Printed and published for the Proprietor, at the Karnatic Press.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರಪಂಚನಗನಾರ್ಯಕರ್ಣಾಟಕಪ್ರಕಾಶನವರಾಭದಾಪ್ರಥಿತಸಾಹಿತೀಕೋಜಿತಾ ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ರಿಶಾಸುವರಿಬೋಧಿತಾದಿಕತಿಮಾನಸಂಸುಮದಂ॥

Vol. XII. } BANGALORE—MONDAY, SEPTEMBER 28, 1885. [No. 39.

ಸಂಪುಟ ೧೨.] ಬೆಂಗಳೂರು—ಸೆ‍ಕ್ ೧೮೮೫ನೇ ಇಸವಿ ಸೆಪ್ಟಂಬರ್ ೨೮ನೇ ತಾರೀಖ್ ಸೋಮವಾರ. [ಸಂಚಿಕೆ ೩೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ ಮತ್ತು ಕನ್ನಡ ಶೀರ್ಷಿಕೆಯುಳ್ಳ ಪತ್ರಿಕೆ. ವರುಷ ೧ಕ್ಕೆ ...		೧೨—೦
ಇಂಗ್ಲಿಷಿನಲ್ಲಿ ಶೀರ್ಷಿಕೆಯುಳ್ಳ ಪತ್ರಿಕೆ ವರುಷ ೧ಕ್ಕೆ ...		೬—೦—೦
ಕನ್ನಡದಲ್ಲಿ ಶೀರ್ಷಿಕೆಯುಳ್ಳ ಪತ್ರಿಕೆ [illegible] ವರುಷಕ್ಕೆ ...		೬—೦—೦
ತಿಂಗಳು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

ಜ್ಞಾ.—[illegible] ಇಂಗ್ಲಿಷ [illegible] ಅಥವಾ, [illegible] ಶೀರ್ಷಿಕೆ [illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

ಇದರ [illegible] ಚಂದಾ [illegible] —

೧. ಕರ್ಣಾಟಕ ಪ್ರಕಾಶಿಕೆಯ ಚಂದಾ [illegible]

೨. [illegible]

೩. [illegible]

೪. [illegible]

NOTICE.

VAIDYASARASANGRAHA.

Price including Postage, Rs 5-6-0

ಈ ಗ್ರಂಥ [illegible]

[illegible]	ರೂ॥	೫—೦—೦
ಅಂಚೆ ಮತ್ತು ಅಂಚೇ ಖಾತೆ		೦—೬—೦

ಎ. ಡಿ. [illegible], ಬೆಂಗಳೂರು.

ನೋಟೀಸ್.

ಇದರ [illegible] ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ.—

ಕನ್ನಡ [illegible] ಗ್ರಂಥಗಳು.

[illegible]	೧—೪—೦
[illegible]	೦—೧೨—೦
[illegible] (ಷಟ್ಪಂಚಾಶತ್)	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೬—೦
[illegible]	೦—೨—೦
ವೈದ್ಯಸಾರಸಂಗ್ರಹ	೫—೧—೦

ಕನ್ನಡ ಗ್ರಂಥಗಳು.

[illegible]	೦—೬—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೬—೬
[illegible]	೦—೨—೬
[illegible]	೦—೬—೦
[illegible]	೦—೩—೦
[illegible]	೦—೨—
[illegible]	೦—೦—೯
ಇಂಗ್ಲಿಷ ಕನ್ನಡ [illegible]	೧—೧—೦
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible] ಸಂಚಿಕೆ.	೦—೮—೦
[illegible] ಸಂಚಿಕೆ.	೧—೮—೦
[illegible]	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	೦—೩—೦
ವಿಷ್ಣುಸಹಸ್ರನಾಮ.	೦—೫—೦
[illegible] ಸಹಸ್ರನಾಮ.	೦—೨—೬
[illegible]	೦—೨—೬
[illegible]	೦—೦—೬
[illegible]	೦—೩—೬
[illegible]	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ್.

ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲಿ ಮುಖ್ಯವಾದ ಮನಶ್ಶುದ್ಧಿ ಯುಂಟಾಗುವದಕ್ಕಾಗಿ ಭಗವತ್ಸ್ವರೂಪಿಯಾದ ಪತಂಜಲಿ ಮಹರ್ಷಿಯಿಂದ ಪ್ರಣೀತವಾದ ಅಷ್ಟಾಂಗಯೋಗ ಯುಕ್ತವಾದ ಪಾತಂಜಲ ಯೋಗಸೂತ್ರಗಳು ಶ್ರೀಮನ್ಮಹಾರಾಜಾಧಿರಾಜ ಭೋಜರಾಜ ಕೃತವಾದ ರಾಜಮಾರ್ತಾಂಡವೆಂಬ ವ್ಯಾಖ್ಯಾನ, ಪರಮಹಂಸೇತ್ಯಾದಿ ರಾಮಾನಂದ ಸ್ವಾಮಿಗಳಿಂದ ವಿರಚಿಸಲ್ಪಟ್ಟ ಮಣಿಪ್ರಭೆಯೆಂಬ ವ್ಯಾಖ್ಯಾನ, ಈ ಉಭಯವ್ಯಾಖ್ಯಾಸಹಿತವಾಗಿಯೂ, ಹಠರಾಜಯೋಗಾಭ್ಯಾಸಾದಿಗಳಂ ಮಾಡಿ ಕೃತಕೃತ್ಯರಾಗುವ ಸತ್ಪುರುಷರಿಗೆ ಸುಲಭವಾಗಿ ಸಮಸ್ತಯೋಗ ರಹಸ್ಯಗಳಂ ತಿಳಿಯುವದಕ್ಕಾಗಿ ಪರಮ ಸಿದ್ಧಾಗ್ರೇಸರರಾದ ಸ್ವಾತ್ಮಾರಾಮಯೋಗೀಂದ್ರರಿಂದ ವಿರಚಿತವಾದ ಹಠಯೋಗ ಪ್ರದೀಪಿಕೆ ಯೆಂಬ ಮಹಾ ಪುರಾತನವಾದ ಗ್ರಂಥವು ಪರಮ ಹಂಸೇತ್ಯಾದಿ ಬ್ರಹ್ಮಾನಂದರವರಿಂದ ವಿರಚಿತವಾದ ಜ್ಯೋತ್ಸ್ನಾ ಎಂಬ ವ್ಯಾಖ್ಯಾನ ಸಮೇತವಾಗಿ ಕನ್ನಡಅಕ್ಷರಗಳಿಂದ ಮೈಸೂರು ಗವರ್ನಮೆಂಟ ಪ್ರಿಂಟಿಂಗ್ ಆಫೀಸಿನಲ್ಲಿ ಮುದ್ರಿಸಲ್ಪಟ್ಟಿರುತಿವೆ.

ಸದರೀ ಪುಸ್ತಕಗಳನ್ನು ಪಡೆಯಲಪೇಕ್ಷೆಯುಳ್ಳವರು ಬೆಂಗಳೂರು ಗವರ್ನಮೆಂಟ ಹೈಸ್ಕೂಲ ಹೆಡ್ ಮ್ಯಾಸ್ಟರಾದ ಹೆಚ್. ನರಸಿಂಹಶಾಸ್ತ್ರಿಗಳಿಗೆ ಈಕೆಳಗೆಕಂಡ ಚಾರ್ಜನ್ನು ಕಳುಹಿಸಿ ಪಡೆಯಬಹುದು.

ಪಾತಂಜಲ ಯೋಗಸೂತ್ರ ಪ್ರತಿ ೧ಕ್ಕೆ	೧—೦—೦
ಹಠಯೋಗಪ್ರದೀಪಿಕೆ ಪ್ರತಿ ೧ಕ್ಕೆ	೧—೪—೦

ಒಟ್ಟಾಗಿ ಪುಸ್ತಕಗಳನ್ನಪೇಕ್ಷಿಸತಕ್ಕವರಿಗೆ ಸೇಕಡಾ ೧೨॥ ರೂಪಾಯಿ ಮೇರಿಗೆ ಕಮಿಷನ್ ಕೊಡಲ್ಪಡುವದು. ಪೋಸ್ಟೇಜ್ ಲೇಬಿಲ್‌ಗಳು ಕಳುಹಿಸತಕ್ಕವರು ರೂ॥ ೧ಕ್ಕೆ ೧ ಆಣೆಯಂತೆ ಡಿಸ್ಕೌಂಟೂ ಮೇಲೆಕಂಡ ಪ್ರತಿಗಳೆರಡಕ್ಕೂ ದರ ಎರಡಾಣೆಪ್ರಕಾರ ಪೋಸ್ಟೇಜ್ ವ ಪ್ಯಾಕಿಂಗ್‌ಚಾರ್ಜ್ ಸೇರಿಸಿ ಕಳುಹಿಸಲ್ಪಡಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 28, 1885.

೧೮೮೫ನೇ ಸೆಪ್ಟಂಬರ್ ೨೮ನೇ ತಾ॥ ಸೋಮವಾರ

ಓಂ॥ ಸರ್ವಜ್ಞತಾಂ [illegible] ವಾಣೀತ್ವ [illegible] ಮನುಸ್ಮರಾಮಿ [illegible] ಜನನೀತ್ವಮಾವ॥

BRAHMINS AND THEIR RIVALS

ಈಚೆಗೆ ಯೊಂದುದಿನ ನಮ್ಮ ಸ್ನೇಹಿತರಲ್ಲೊಬ್ಬನು ಬಂದು ಬ್ರಾಹ್ಮಣ್ಯಕ್ಕೆ ಹಾನಿಯುಂಟಾಯಿತೆಂದು ಹೇಳಲು ಅಂದು ಕೇಳಿ ನಮಗೆ ಬಹಳ ಆಶ್ಚರ್ಯ ವುಂಟಾಗಿ, ಅದಕ್ಕೆ ಕಾರಣವ ವಿಚಾರಿಸಿ ಯೋಚಿಸಲು ಕೆಲವು ಅಂಶಗಳು ತೋರಬಂದವು. ಅವನ್ನು ಹೊರಪಡಿಸುವದಕ್ಕೆ ಪೂರ್ವ ಬ್ರಾಹ್ಮಣ್ಯವೆಂಬದು ಹ್ಯಾಗೆ ಹುಟ್ಟಿತು, ಹ್ಯಾಗೆ ಬೆಳೆಯಿತು, ಈಗ ಅದಕ್ಕೆ ಯಾವಭಾಗದಲ್ಲಿ ಲೋಪ ವುಂಟಾಯಿತು, ಈಗ ಅದಂ ಅಪಹರಿಸಬೇಕೆಂದು ಪ್ರಯತ್ನಪಡತಕ್ಕವರ್ಯಾರು, ಎಂಬ ಅಂಶಗಳ ಕುರಿತು ವಿಚಾರಮಾಡಬೇಕಾಗಿದೆ.

ಬ್ರಾಹ್ಮಣ್ಯವೆಂಬದು ವೇದಶಾಸ್ತ್ರಗಳನ್ನನುಸರಿಸಿದ್ದಾಗಿರುವದರಿಂದ ಅದರಂತೆಯೇ ಇದೂ ಅನಾದಿಯಾಗಿರುತಿದೆ. ಈ ಕಲಿಯುಗದಲ್ಲಿ ಸುಮಾರು ಯೆರಡು ಸಾವಿರ ಸಂವತ್ಸರಗಳ ಹಿಂದೆ, ನಾಸ್ತಿಕ ಬೌದ್ಧ ಮತದವರು ಪ್ರಬಲಿಸಿ, ವೇದೋಕ್ತ ಕರ್ಮಗಳನ್ನು ನಿರ್ಮೂಲಮಾಡ ಲೆತ್ನಿಸಿದರು. ಆಗ ಬ್ರಾಹ್ಮಣಶ್ರೇಷ್ಠರಾದ ಭಾಟ್ಟಪ್ರಾಭಾಕರರೆಂಬವರು ಜಗನ್ನಾಥಪ್ರಾಂತದಲ್ಲಿ ಜನಿಸಿ, ಬೌದ್ಧರನ್ನು ಜೈಸಿ, ವೇದಕ್ಕೆ ಪ್ರಾಮಾಣ್ಯವನ್ನುಂಟುಮಾಡಿ, ತದುಕ್ತ ಕರ್ಮಗಳಂ ಮಾಡಬೇಕೆಂದು ಕಟ್ಟಳೆ ಮಾಡಿದರು. ಆಗ ಬ್ರಾಹ್ಮಣರಲ್ಲಿ ಕರ್ಮಬ್ರಹ್ಮವಾದವು ಪ್ರಬಲಿಸಿತು.

ಕಲಿಯುಗ ಪ್ರಾರಂಭವಾದ ಮೂರು ಸಾವಿರ ಸಂವತ್ಸರಗಳಮೇಲೆ, ಅಂದರೆ, ಈಗ್ಯೆ ೧೯೫೩ ವರುಷಗಳ ಹಿಂದೆ, ಕೇರಳ ದೇಶದಲ್ಲಿ ಶ್ರೀ ಶಂಕರಾಚಾರ್ಯರವರು ಅವತರಿಸಿ, ಅದ್ವೈತ, ಅಂದರೆ ಜೀವಾತ್ಮನೂ ಪರಮಾತ್ಮನೂ ಒಂದೇ ಎಂಬ ಅರ್ಥವನ್ನು ಬೋಧಿಸಿದರು. ಈ ಅರ್ಥವನ್ನು ತಿಳಕೊಂಡು ವೇದೋಕ್ತ ಕರ್ಮಗಳನ್ನು ಮಾಡುತ ಬರುವಂತಾವರು ಸ್ಮಾರ್ತರೆನ್ನಿಸಿಕೊಂಡಿರುತ್ತಾರೆ ಈ ಗುಂಪಿನವರ ಸಂಖ್ಯೆಯು ಹೆಚ್ಚಾಗಿರುತಿದೆ.

ಬಳಿಕ, ಶಾಲೀವಾಹನ ಶಕ ೯೩೯ನೇ ಸಂವತ್ಸರದಲ್ಲಿ, ಮದರಾಸಿಗೆಪಶ್ಚಿಮ ಇಪ್ಪತ್ತೈದು ಮೈಲುಗಳ ಫಾಸಲೆಯೊಳಗಿರುವ ಭೂತಪುರಿ, ಅಥವಾ ಶ್ರೀಪೆರುಂಬೂದೂರ್ ಎಂಬ ಸ್ಥಳದಲ್ಲಿ ಶ್ರೀ ರಾಮಾನುಜಾಚಾರ್ಯರೆಂಬವರವತರಿಸಿ, ಜೀವಾತ್ಮ ಪರಮಾತ್ಮ ಎಂಬದು ಸ್ವರೂಪತಃ ಭೇದವುಳ್ಳವಾಗಿ ಕಂಡುಬಂದರೂ ಯಾವಾಗ್ಯೂ ಯೆಡಬಿಡದೆ ಇರುವದರಿಂದ ಪರತತ್ವವನ್ನು ಶುದ್ಧ ಅದ್ವೈತವೆಂದು ಹೇಳಕೂಡದು, ಪರಂತು ವಿಶಿಷ್ಟಾದ್ವೈತವೆಂದು ತಿಳಿಯತಕ್ಕದ್ದೆಂದು ಬೋಧಿಸಿ ದೇವರನ್ನು ಸಗುಣವಾಗಿ ವಿಷ್ಣುರೂಪೇಣ ಆರಾಧಿಸಬೇಕೆಂದು ಕಟ್ಟಳೆಮಾಡಿದರು. ಈ ಜ್ಞಾನದೊಡನೆ ವೇದೋಕ್ತ ಕರ್ಮಗಳನ್ನು ಆಚರಿಸತಕ್ಕವರು ವೈಷ್ಣವರು ಅಥವಾ ಶ್ರೀ ವೈಷ್ಣವರೆನ್ನಿಸಿಕೊಳ್ಳುತ್ತಾರೆ ಈ ಮತದವರು ಸಂಖ್ಯೆಯಲ್ಲಿ ಸ್ಮಾರ್ತರಿಗಿಂತಲೂ ಕಡಿಮೆಯಾಗಿಯೂ ಇತರಾಪೇಕ್ಷಯಾ ಅಧಿಕರಾಗಿಯೂ ಇರುತ್ತಾರೆ

ಅವರತರುವಾಯ, ಶಾಲೀವಾಹನಶಕ ೧೧೨೦ನೇ ಸಂವತ್ಸರದಲ್ಲಿ, ಕನರಾಜಿಲ್ಲಾ ಉಡುಪಿ ಪ್ರಾಂತದೊಳು, ತುಳುವ ಬ್ರಾಹ್ಮಣರಲ್ಲಿ ಜನಿಸಿದ ಶ್ರೀ ಆನಂದ ತೀರ್ಥಾಚಾರ್ಯರೆಂಬವರು, ಜೀವಾತ್ಮ ಪರಮಾತ್ಮರು ಸ್ವರೂಪದಲ್ಲಿ ಭಿನ್ನರಾಗಿರುವದರಿಂದ ವಿಶಿಷ್ಟಾದ್ವೈತವೆನಬಾರದು, ಪರಂತು ದ್ವೈತವೆಂದು ಹೇಳಬೇಕೆಂದು ಉಪದೇಶಿಸಿದರು.

ಈ ಉಪದೇಶವು ಕ್ರಿಸ್ತಮತ ವೇದೋಕ್ತ ಕರ್ಮಗಳಂ ಮಾಡತಕ್ಕವರು ಮಧ್ವರು ಅಥವಾ ವೈಷ್ಣವರೆನ್ನಿಸಿಕೊಳ್ಳುತ್ತಾರೆ. ಈ ಮತಾವಲಂಬಿಗಳು ಸಂಖ್ಯೆಯಲ್ಲಿ ಮೇಲೆ ಹೇಳಿದ ಯೆರಡು ಮತದವರಿಗೂ ಕಡಮೆಯಾಗಿರುತ್ತಾರೆ. ಮೇಲೆ ತಿಳಿಸಿದ ಮೂರುಮತಗಳೇ ತ್ರಿಮತವೆನ್ನಿಸಿಕೊಳ್ಳುತದೆ. ಇವಲ್ಲದೆ ಇನ್ನು ಒಂದೆರಡು ಮತಗಳುಂಟು, ಪರಂತು ಅವು ಹುಟ್ಟಿದ ಕಾಲಮಾತ್ರ ವ್ಯವಸ್ಥೆಯಾಗಲಿಲ್ಲವು.

ಕೃಷ್ಣಾತೀರ ಬೆಡವಾತಾ ಪ್ರಾಂತದಲ್ಲಿ, ನೀಲಕಂಠ ಶಿವಾಚಾರ್ಯರೆಂಬ ಬ್ರಾಹ್ಮಣರು ಜನಿಸಿ, ವಿಶಿಷ್ಟಾದ್ವೈತ ಮತಾನುಸಾರವಾಗಿ, ಪರತತ್ವ ವಿಷ್ಣುವಲ್ಲವು, ಪರಂತು ಶಿವನು, ಎಂಬ ಅರ್ಥದ್ಯೋತಕವಾದ ಒಂದು ಭಾಷ್ಯವಂ ಮಾಡಿದರು ಅದಕ್ಕೆ ಸ್ಮಾರ್ತರಲ್ಲಿ ಪ್ರಬಲ ಪಂಡಿತರೆನ್ನಿಸಿಕೊಂಡು ಕಾಂಚೀಪುರವಾಸಿಯಾಗಿದ್ದ ಅಪ್ಪಯ್ಯ ದೀಕ್ಷಿತರೆಂಬುವರು ಶಿವಾರ್ಕಮಣಿದೀಪಿಕೆಯೆಂಬ ವ್ಯಾಖ್ಯಾನವಂ ಮಾಡಿದರು ಈ ಮತಾವಲಂಬಿಗಳು ಸ್ಮಾರ್ತರಲ್ಲಿ ಸೇರಿದವರಾಗಿರುತ್ತಾರೆಯೇ ಹೊರತು ಪ್ರತ್ಯೇಕ ಗುಂಪಿನವರಾಗಿ ಕಾಣಲಿಲ್ಲವು. ಸೋಮನಾಥಭಟ್ಟರೆಂಬ ಆರಾಧ್ಯ ಬ್ರಾಹ್ಮಣರೊಬ್ಬರು ವೀರಶೈವ ಸಿದ್ಧಾಂತವನ್ನನುಸರಿಸಿ, ವ್ಯಾಸಸೂತ್ರಗಳಿಗೆ ವ್ಯಾಖ್ಯಾನ ಮಾಡಿರುತ್ತಾರೆ. ಈ ಮತದವರು ಯಜ್ಞೋಪವೀತ ಮತ್ತು ಲಿಂಗಧಾರಣವಂ ಮಾಡಿಕೊಂಡಿರುತ್ತಾರೆ. ಇವರು ವೇದೋಕ್ತಕರ್ಮಗಳಲ್ಲಿ ಕೆಲವನ್ನು ಮಾತ್ರ ನಡೆಸುತಬರುತ್ತಾರೆ ಈ ಗುಂಪಿನವರು ಪ್ರತ್ಯೇಕವಾಗಿ ಕಂಡುಬಂದರೂ ಸಂಖ್ಯೆಯೊಳು ಅತ್ಯಲ್ಪರಾಗಿರುತ್ತಾರೆ.

ಮೇಲೆ ಹೇಳಲ್ಪಟ್ಟವರೆಲ್ಲರೂ ಸರ್ವಸಾಧಾರಣವಾಗಿ ಎಲ್ಲರಿಂದಲೂ ಬ್ರಾಹ್ಮಣರೆಂದು ಹೇಳಿಸಿಕೊಳ್ಳುವವರಿಂದಲೂ, ಬ್ರಾಹ್ಮಣೇತರರು ಅವರನ್ನು ಹಾಗೆಯೇ ಬಾವಿಸಿ ಗೌರವಿಸುತ ಬರುವದರಿಂದಲೂ, ಸರ್ಕಾರದವರು ಸಹ ಸೆನ್ಸಸ್ ಮೊದಲಾದ ಕಾಗದಪತ್ರಗಳಲ್ಲಿ ಹಾಗೆಯೇ ದಾಖಲ್ಮಾಡಿಕೊಂಡಿರುತ್ತಾರೆ. ಹೆಚ್ಚು ಜನಗಳನ್ನು ಬ್ರಾಹ್ಮಣಸಮೂಹದಲ್ಲಿ ಸೇರಿಸದೆ ಬಿಡುವದಕ್ಕೆ ಕಾರಣ ಅವರಿಗೇ ತಿಳಿಯುವದು.

ಜಂಗಮರು ಹೇಳುವ ಭಾಷ್ಯಗಳೂ ಅವನ್ನನುಸರಿಸಿ ನಡೆಯತಕ್ಕ ಬ್ರಾಹ್ಮಣರೂ ಇರಬಹುದು, ಪರಂತು ಬಳಕೆಯಲ್ಲಿಲ್ಲವೆಂಬದನ್ನು ಮೈಸೂರು ಸ್ಟಾರ್ ಪತ್ರಿಕಾಕಾರರು ಯಾವಾಗಲೂ ಅಂಗೀಕರಿಸದೆ ಹೋದಾಗ್ಯೂ ಸೆನ್ಸಸ್ ಇಲಾಖೆಯವರು ತಮ್ಮನ್ನು ಬ್ರಾಹ್ಮಣೇತರರಲ್ಲಿ ಸೇರಿಸಿದ ಬಗ್ಗೆ ಅವರಮೇಲೆ ತಪ್ಪು ಹೊರಿಸಿ ಅಪ್ಪೀಲ್ ಮಾಡಿ ಅಲ್ಲಿ ಜಯಹೊಂದುವವರಿಗಾದರೂ ಅಂಗೀಕರಿಸದೆ ಹೋಗಲಾರರು. ಹಾಗೆಯೇ ವಿಶ್ವಕರ್ಮ ಬ್ರಾಹ್ಮಣರಾದ ಪಾಂಚಾನನರೂ, ದೇವಾಂಗದ ಬ್ರಾಹ್ಮಣರಾದ ನೆಯಿಗೆಯವರೂ ತಪಸ್ಥರಾಗಿರುವರೆಂದು ನಂಬುತ್ತೇವೆ.

ಈಗ ಬ್ರಾಹ್ಮಣ್ಯಕ್ಕೆ ಉಂಟಾದ ವಿಪತ್ತನ್ನು ಕುರಿತು ವಿಚಾರಮಾಡುವೆವು. ಬ್ರಾಹ್ಮಣರಲ್ಲಿ ಕೆಲವರು ತಮ್ಮ ವೇಷ ಭಾಷೆಗಳನ್ನು ಬದಲಾಯಿಸಿಕೊಂಡು, ಯೂರೋಪ್‌ದೇಶದ ತಯಾರೀ ಸಾರಾಯಿ ಮುಂತಾದ ನಿಷಾ ಪದಾರ್ಥಗಳನ್ನು ಉಪಯೋಗಿಸುತ, ಮಾಂಸಭಕ್ಷಣ ಮಾಡುತಲಿದಾರೆಂದು ವಗ್ಗೈರೆ ಮೈಸೂರಲ್ಲಿ ಪ್ರಕಟಿಸಲ್ಪಡುವ ಹಿತಬೋಧಿನೀ ಎಡಿಟರವರು ತಿಳಿಸುವ ಅಂಶವನ್ನು ಸ್ಟಾರ್‌ಪತ್ರಿಕೆ ಎಡಿಟರವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಅದನ್ನು ನಾವು ಓದುತ್ತೇವೆ "ಕಸ್ಯದೋಷಃ ಕುಲೇನಾಸ್ತಿ" ಎಂಬಂತೆ ಯಾವ ಕುಲದಲ್ಲಿ ದೋಷವಿರುವದಿಲ್ಲವು? ಅಗ್ರಜರಾದವರೇ ಇಂತಾ ದುಷ್ಕೃತ್ಯಗಳಿಗೆ ಆಸ್ಪದವಾದಲ್ಲಿ ಮಿಕ್ಕವರ ಸಂಗತಿಯನ್ನು ಕುರಿತು ಹೇಳಬೇಕಾದ್ದೇನಿದೆ. ಕಾಲಗತಿ ಹೀಗಾದ ಬಗ್ಗೆ ಯಲ್ಲರೂ ಚಿಂತಿಸಬೇಕಾದುದೆ.

ಲಾರ್ಡ್ ಡಫರಿನ್ ಸಾಹೇಬರವರು ಬಂಗಾಳೀ ಬ್ರಾಹ್ಮಣರ ವೇಷಭಾಷೆಗಳಂ ನೋಡಿ ಆಕ್ಷೇಪಿಸಿದ್ದನ್ನೂ, ಚಿತ್ಪಾವನ ಬ್ರಾಹ್ಮಣರು ಮದ್ಯಪಾಯಿಗಳೆಂದು ಗೆಜೆಟಿಯರ್‌ನಲ್ಲಿ ಪ್ರಾಯಿಷ್‌ಮಾಡಿರುವದನ್ನೂ ಕುರಿತು ನಾವು ಹೊಸದಾಗಿ ಚಿಂತಿಸಬೇಕಾದ್ದಿಲ್ಲವು.

ಬ್ರಾಹ್ಮಣ್ಯವನ್ನು ಅಪಹರಿಸಲೆತ್ನಿಸತಕ್ಕವರ್‍ಯಾರೆಂಬ ವಿಷಯದಲ್ಲಿ ಜಂಗಮರು, ಅಕ್ಕಸಾಲೆಯವರು, ದೇವಾಂಗದವರು ಎಂದು ನಾವು ವಿಂಗಡಿಸಿ ಹೇಳಬೇಕಾದ್ದಿಲ್ಲವು. ಯಾರಿಗೆ ವಿದ್ಯಾವೈಲಕ್ಷಣ್ಯ ಉಂಟಾಗುತದೆಯೋ ಅವರೆಲ್ಲರೂ ತಮ್ಮ ಪೂರ್ವಿಕರನ್ನು ಉತ್ತಮ ಜಾತಿಯವರಿಂದಲೇ ಹೇಳಿಕೊಳ್ಳುವದು ಸಹಜವಾಗಿ ಏರ್ಪಟ್ಟಿದೆ. ಬ್ರಾಹ್ಮಣರ ಆಧಿಕ್ಯವನ್ನು ಕೆಡಿಸಲೆತ್ನಿಸತಕ್ಕವರು, ತಮಗೆ ಕೀಳ್ಪಟ್ಟ ದರ್ಜೆಯವರು ತಮ್ಮ ಆಧಿಕ್ಯವನ್ನು ಉಳಿಸುವರೆಂದು ಹ್ಯಾಗೆ ನಂಬಬಹುದೋ ನಾವರಿಯೆವು. ಇದು ಹಾಗಿರಲಿ. ಬ್ರಾಹ್ಮಣರಿಗಾಗಿ ಏರ್ಪಟ್ಟಿರುವ ವೇದ ಮೊದಲಾದ ಮತಗ್ರಂಥಗಳಿಗೆ ಯೂರೋಪಿಯನ್ನರು ಮಾಡುವ ಅರ್ಥವನ್ನೂ ಭಾಷ್ಯವನ್ನೂ ಒಪ್ಪಿ ಅದರಂತೆ ಆಚರಿಸಬೇಕಾದಕಾಲ ಪ್ರಾಪ್ತವಾಗಿರುವಲ್ಲಿ ಇತರ ವಿಷಯಗಳನ್ನು ಕುರಿತು ಚಿಂತಿಸಬೇಕಾದ್ದೇನಿದೆ! ಇವೆಲ್ಲವು ಕಾಲವೈಪರೀತ್ಯದಿಂದ ಬ್ರಾಹ್ಮಣರಲ್ಲಿ ಬೆಳೆಯುತಬರುವ ದುರ್ಗುಣಗಳಿಗೆ ಫಲರೂಪವಾಗಿ ಏರ್ಪಟ್ಟದ್ದೆಂದು ತಿಳಿಯಬೇಕಾಗಿದೆ. ಇವನ್ನೆಲ್ಲ ಯೋಚಿಸಲಾಗಿ ನಮ್ಮ ಸ್ನೇಹಿತರು ತಿಳಿಸಿದಂತೆ ಬ್ರಾಹ್ಮಣ್ಯಕ್ಕೆ ಹಾನಿಯುಂಟಾಯಿತೆಂದು ಹೇಳದಾಗ್ಯೂ ಹೇಳಬಹುದು

Occasional Notes
ನೈಮಿತ್ತಿಕವಿಷಯನ್ಯಾಸ

The new Chief Justice of Madras.—ಮದರಾಸ್ ಹೈಕೋರ್ಟಿನ ಚೀಫ್‌ಜಸ್ಟಿಸ್‌ಕೆಲಸಕ್ಕೆ ನೇಮಕರಾದ ಸರ್ ಆರ್ಥರ್ ಕಾಲಿನ್ಸ್ ಯವರು ಬರುವ ತಿಂಗಳ ೨ನೇ ತಾರೀಖಿನಲ್ಲಿ ಲಂಡನ್ ಪಟ್ಟಣದಿಂದ ಸ್ಟಿಮರ್ ಹತ್ತುವರೆಂದು ಹೋಗಿಬರುವದನ್ನಲ್ಲಿ ಮದರಾಸಿಗೆ ಪ್ರಯಾಣವಾಗುತ್ತಾರೆ.

A princely donation.—ಇಂಡ್ಯಾ ದೇಶದಲ್ಲಿ ನೇಟಿವ್‌ಹೆಂಗಸರಿಗೆ ವೈದ್ಯವಿಷಯದಲ್ಲಿ ಸಹಾಯ ಮಾಡುವದಕ್ಕಾಗಿ ಮುಂಚೆ ಗವರ್ನರ್‌ರವರ ಭಾರ್ಯೆಯವರಾದ ಲೇಡೀ ಡಫರಿನ್ ಯೆಂಬವರಿಂದ ಮುಂಚೆ ಯಲ್ಲಿ ಯೇರ್ಪಡಿಸಲ್ಪಟ್ಟಿರುವ ನಿಧಿಗೆ ಕಪುರ್ತಲಾ ಅರಸರವರು ೫೦,೦೦೦ ರೂಪಾಯಿಗಳು ಕೊಡುವದಾಗಿ ವಾಗ್ದಾನಮಾಡಿರುವಂತೆ ತಿಳಿಯಬರುತದೆ.

Return from England.—ಘನವಂತರಾದ ಬರೋಡೇ ಗಾಯಕವಾಡಿಯವರ ಸಹೋದರರಾದ ಸಂಪತ್ತುರಾವ್ ಗಾಯಕವಾಡಿಯವರು ವಿದ್ಯಾಭ್ಯಾಸಕ್ಕಾಗಿ ಇಂಗ್ಲಾಂಡಿಗೆ ಹೋಗಿದ್ದರಷ್ಟೆ. ಸದರೀಯವರು ಈಚೆಗೆ ಕೆಲವುದಿನಗಳ ಹಿಂದೆ ಮುಂಬೈಗೆ ವಾಪಸುಬಂದು ಸೇರಿದರೆಂದು ತಿಳಿಯಬರುತದೆ

The proposed Camp of Exercise.—ಮುಂದೆ ನಡೆಸಬೇಕೆಂದು ಆಲೋಚಿಸಲ್ಪಟ್ಟಿರುವ ಕ್ಯಾಂಪಾಫ್ ಎಗ್ಸರ್‌ಸೈಸ್, (ಅಂದರೆ ಸೇನೆಗಳನ್ನು ಒಂದುಕಡೆ ಜಮಾಯಿಸಿ ಯೆರಡು ಪಕ್ಷಿಯಾಗಿಮಾಡಿ ಸಾಧಕರೂಪವಾಗಿ ಯುದ್ಧಮಾಡಿಸುವಣ)ಮಾಮವಸ್ಥಳ ಅಂಬಾಲಾವಿಗೂ ದೆಹಲಿಗೂ ಮಧ್ಯೆ ಯಮುನಾನದಿಯ ಬಲಭಾಗಕ್ಕೆ ಬದಲಾಯಿಸಲ್ಪಟ್ಟಿದೆ. ಉಭಯಪಕ್ಷಿಯ ಸೈನ್ಯಗಳೂ ಸದರಿಸ್ಥಳದೊಳಕೂ ಅವುಗಳಮಧ್ಯೆ ಯುದ್ಧನಡೆಸಲ್ಪಡುವವು. ಈ ಕ್ಯಾಂಪಾಫ್ ಎಗ್ಸರ್‌ಸೈಸ್‌ಬಗ್ಗೆ ಸರ್ವ ಸನ್ನಾಹಗಳೂ ನಡೆಯುತಲಿವೆ, ಪರಂತು ಇದರ ಆಫೀಸರ್ ವ್ಯವಸ್ಥೆಯು ಸರ್. ಫ್ರೆಡರಿಕ್ ರಾಬರ್ಟಿಸ್‌ಯವರದಾಗಿದೆ.

A question undecided.—ಮದರಾಸ್ ಹೈಕೋರ್ಟಿನಗಾಗಿ ಬೇರೆಯೊಂದು ಕಟ್ಟಡವನ್ನು ಕಟ್ಟಿಸತಕ್ಕದ್ದೆ, ಅಥವಾ ಈಗ ಇರುವ ಹಳೇ ಕಟ್ಟಡವನ್ನು ಬದಲಾಯಿಸತಕ್ಕದ್ದೆ ಎಂಬ ಅಂಶ ಅದ್ಯಾಪಿ ಅನ್ಯನಿಷ್ಕಿತವಾಗಿದೆ. ಅಲ್ಲಿನಕೋಟೆಗೆ ಉತ್ತರಪಾರ್ಶ್ವದಲ್ಲಿರುವ ಪೀಪಲ್ಸ್‌ಪಾರ್ಕ್ ಮೈದಾನ ಜಾಗೆ ಯಾವಭಾಗವನ್ನಾಗಲಿ ಹೈಕೋರ್ಟು ಕಟ್ಟಡಕ್ಕಾಗಿ ಕೊಡುವದಕ್ಕಾಗುವದಿಲ್ಲವೆಂದು ಮಿಲಿಟರಿ ಅಧಿಕಾರಿಗಳು ಹೇಳಬಿಟ್ಟರೆಂಬದೊಂದುಮಾತ್ರ ನಿಷ್ಕೃಷ್ಟವಾದಅಂಶವಾಗಿರುತದೆ.

The floods in the Eastern Bengal Railway.—ಬಂಗಾಳದೇಶದ ಪೂರ್ವಭಾಗದಲ್ಲಿ ಈಚೆಗೆ ಆದ ಅತಿವೃಷ್ಟಿಯದೆಸೆಯಿಂದ ಅಲ್ಲಿನ ಟಾಟ್‌ಕೂರಿ ಯೆಂಬ ಜಲಾದಾರದಕಟ್ಟೆ ಒಡೆದುಹೋಗಿ ಅದರಿಂದ ಉಂಟಾದ ಪ್ರವಾಹವು ಈ ದೇಶದಲ್ಲಿ ಇದುವರೆವಿಗೆ ನಾವು ಯೆಂದೂನೋಡದಂತಾದ್ದಲ್ಲವು. ಈ ವಿಷಯದಲ್ಲಿ ಸ್ಟೇಟ್ಸ್‌ಮನ್ ಪೇಪರ್ ತಿಳಿಸುವದೇನೆಂದರೆ, ದಿನಒಂದಕ್ಕೆ ಎಂಟುಅಂಗುಲದಮೇಲೆ ನೀರುಹೆಚ್ಚುತಬಂದು ಈ ತಿಂಗಳ ೧೯ನೇ ತಾರೀಖಿನಲ್ಲಿ ಜೊಂಗೂರಾ ಎಂಬ ಸ್ಥಳದಬಳಿ ರೈಲ್‌ರಸ್ತೆಕೊಚ್ಚಲ್ಪಟ್ಟು ಅದುಮೊದಲು ಸದರಿಸ್ಥಳಕ್ಕೂ ಕೃಷ್ಣಗಂಜ್‌ಎಂಬಪ್ರದೇಶಕ್ಕೂ ಮಧ್ಯೆ ಮೂರುಕಡೆ ರಸ್ತೆ ಕೊಚ್ಚಲ್ಪಟ್ಟುಹೋದವು ಸದರೀ ಯೆರಡುಸ್ಥಳಕ್ಕೂ ಮಧ್ಯೆ ೨೦ಮೈಲಿ ರಸ್ತೆಯುನೀರಿನಲ್ಲಿ ಮುಣುಗಿಹೋಗಿದೆ. ಆ ಮಟ್ ರಫ್ತುಗಳು ಹುಗಾವಿಯಾಗಿ ದೋಣಿಗಳಮೂಲಕ ನಡೆಯುತಲಿವೆ. ಯಂಗಸರು ಸದರೀ ರಸ್ತೆಯಲ್ಲಿ ಸಂಚಾರಮಾಡತಕೂಡದೆಂದು ಯಚ್ಚರಿಸಲ್ಪಟ್ಟಿದಾರೆ. ಕ್ರಮವಾಗಿ ಆಮದ್ ರಫ್ತುನಡೆಯುವದಕ್ಕೆ ಯಾವಾಗ ರಸ್ತೆ ಲಾಯಖ್ಖಾಗುವದೋ ಆವಿಷಯ ಬಹಳ ಸಂಶಯಗ್ರಸ್ತವಾಗಿದೆ. ಪ್ರಾಯಶಃ ನಾಲ್ಕಾರುವಾರಗಳ ಕಾಲ ಹಿಡಿಯಬಹುದಾಗಿಕಾಣುತಿದೆ, ಎಂದು ವ ಗೈರೆ ಒಂದಾನೊಂದುಪತ್ರಿಕೆ ಹೇಳುತಿದೆ.

The hospital for caste women.—ಮದರಾಸಿನಲ್ಲಿನ ಉತ್ತಮಜಾತಿ ಹೆಂಗಸರಿಗಾಗಿ ಕಟ್ಟಲುದ್ದೇಶಿಸಲ್ಪಟ್ಟಿರುವ ಆಸ್ಪತ್ರಿಗೆ ತಕ್ಕಸ್ಥಳವನ್ನು ಚುನಾಯಿಸುವದಕ್ಕಾಗಿ ಏರ್ಪಾಟಾಗಿರುವ ಕಮಿಟಿಯ ಆನರೆಬಲ್ ಸೆಕ್ರಟರಿ ಯಾದ ಆನರಬಲ್ ಟಿ. ರಾಮರಾಯರವರಲ್ಲಿ, ಸದರೀ ಆಸ್ಪತ್ರಿಗಾಗಿ ಒಂದುಲಕ್ಷರೂಪಾಯಿಗಳು ಸಹಾಯದ್ರವ್ಯ ಬಂದು, ಅದಕ್ಕೆ ಸಾರೀಯಾನಾ ಸೇಕತಾ ಐದುರೂಪಾಯಿಗಳ ಬಡ್ಡಿಮೇಲೆ ಆರ್ಬತ್‌ನಾಟ್ ಕುಂಪೆನಿಯವರ ವಶ ಮಾಡಲ್ಪಟ್ಟಿರುತದೆ. ಇದರ ಕೆಲಸವನ್ನು ಪ್ರಾರಂಭಿಸುವದಕ್ಕೆ ಯಾವದಾದರೊಂದುವಿಧ ಖಂಡಿತವಾಗಿ ಏರ್ಪಾಟಾದಮೇಲೆ ದೊಡ್ಡಮನುಷ್ಯರನೇಕರು ಈ ಕೆಲಸಕ್ಕಾಗಿ ಸಾರೀಯಾನಾ ಮತ್ತು ಮಾಹೇಯಾನಾ ಚಂದಾಕೊಡುವದಾಗಿ ವಾಗ್ದಾನಮಾಡಿರುತ್ತಾರೆ. ಕಟ್ಟಡಕೆಲಸ ನಡೆಯುವಕಾಲದಲ್ಲಿ, ತಾತ್ಕಾಲಿಕವಾಗಿ ಆಸ್ಪತ್ರೇಕೆಲಸವನ್ನು ನಡೆಸತಕ್ಕಬಗ್ಗೆ ಒಂದುಮನೆಯನ್ನು ಚುನಾಯಿಸುವಂತೆ ಒಂದು ಕಮಿಟಿ ಏರ್ಪಾಟಾಯಿತೆಂದು ತಿಳಿಯಬರುತದೆ. ಗಲಾಟೆ ಯಿಲ್ಲದ ಸ್ಥಳದಲ್ಲಿ ಸುಲಭವಾದ ಬಾಡಿಗೆಗೆ ಒಂದುಬಂಗ್ಲೆಯನ್ನು ಗೊತ್ತುಮಾಡುವದಕ್ಕೆ ಏರ್ಪಾಡುಗಳು ನಡೆಯುವಂತೆಯೂ, ಕ್ಷಿಪ್ರದಲ್ಲಿ ಆಸ್ಪತ್ರೆಕೆಲಸಕ್ಕೆ ಪ್ರಾರಂಭವಾಗುವದೆಂತಲೂ ತಿಳಿಯಬರುತದೆ.

The Nizam's trip to England.—ಒಂದಾನೊಂದು ಸಿಕಂದರಾಬಾದ್ ಪತ್ರಿಕೆ ಹೇಳುವದೇನಂದರೆ,—ನಿಜಾಮರವರ ಇಂಗ್ಲಾಂಡ್‌ದೇಶದ ಪ್ರಯಾಣವನ್ನು ಇದಕ್ಕಿಂತ ಅನುಕೂಲವಾದ ಕಾಲದಲ್ಲಿ ಮಾಡಬೇಕೆಂದು ಕಡೆಗೆ ನಿಷ್ಕರ್ಷೆಆಯಿತು. ಈಚೆಗೆ ಕ್ಷಾಮದಭಯ ತಪ್ಪುವದಕ್ಕೆ ಬೇಕಾದಷ್ಟು ಮಳೆಬಿದಾಗ್ಯೂ ಕೆಲವು ಪ್ರದೇಶಗಳೊಳು ಬೆಳೆಗಳು ಬಹಳಮಟ್ಟಿಗೆ ತಪ್ಪಿಹೋಗಿ ತನ್ಮೂಲಕ ಸರ್ಕಾರ್‌ಹುಟ್ಟುವಳಿಯೂ ಬಹಳ ಕಮ್ಮಿಯಾಗುವಂತಿದೆ. ತೆಲಿಂಗಾಣಾ ಮೊದಲಾದಒಂದೆರಡು ಡಿಸ್ಟ್ರಿಕ್ಟುಗಳಲ್ಲಿ ಹಿಂದಿನ ಬೀತಿಗಳು ತಪ್ಪುತಬಂದು ಅನುಕೂಲ್ಯಗಳುಂಟಾದಾಗ್ಯೂ ಬಳ್ಳಾರಿ ಮತ್ತು ಕೃಷ್ಣಾಪ್ರಾಂತದಲ್ಲಿ ಈಗ ಯೆಷ್ಟು ಮಳೆಬಿದ್ದರೂ ಪ್ರಯೋಜನಕಾರಿಯಲ್ಲದೆ ಹೋಯಿತು. ಯಾತಕ್ಕೆಂದರೆ ಅಲ್ಲಿ ಫಸಲ್‌ಗಳು ಇದುವರೆವಿಗೇನೇ ಒಣಗಿಹೋದವು. ಆದದರಿಂದ ಇಷ್ಟು ಕ್ಷಿಪ್ರದಲ್ಲಿ, ಅಂದರೆ, ಬರುವ ಏಪ್ರಿಲ್‌ತಿಂಗಳಲ್ಲಿ ಭಾರೀಖರ್ಚುಹಿಡಿಯುವ ಯೂರೋಪ್‌ದೇಶದ ಪ್ರಯಾಣವನ್ನುಮಾಡುವದು ಅನುಚಿತವೆಂದು ನಿಜಾಮರವರಿಗೆ ತೋರುವದಕ್ಕೆ ತಮ್ಮ ದೇಶದ ಪ್ರಕೃತಸ್ಥಿತಿಯೇ ಕಾರಣವಾಯಿತೆಂಬದು

The late Maharaja of Cashmere.—ಈಚೆಗೆ ಮೃತಪಟ್ಟ ಕಾಶ್ಮೀರದೇಶದ ಮಹಾರಾಜರವಿಷಯವನ್ನು ೫ ೨೨ ಪಂಜಾಬ್ ಗವರ್ನ್‌ಮೆಂಟ್ ಗಜೆಟಿನಲ್ಲಿ ಘೋಷಿಸಲ್ಪಟ್ಟ ಇಸ್ತಿಹಾರನ್ನಲ್ಲಿ ಅಲ್ಲಿನ ಲೆಫ್ಟಿನೆಂಟ್ ಗವರ್ನರವರು ತಿಳಿಸುವದೇನೆಂದರೆ—ಮೃತಪಟ್ಟ ಮಹಾರಾಜರವರು, ಸಾಮಾನ್ಯವಾಗಿ ಪಂಜಾಬದೇಶದೊಳಗೂ ವಿಶೇಷತಃ ತಮ್ಮ ರಾಜ್ಯದೊಳಗೂ ವಿದ್ಯಾಭಿವೃದ್ಧಿಗೆ ಕೇವಲ ಪ್ರೋತ್ಸಾಹಕರಾಗಿದ್ದರು ಬ್ರಿಟಿಷ್ ಗವರ್ನ್‌ಮೆಂಟಿನವರಲ್ಲಿ ತಮಗೆ ಉಂಟಾಗಿದ್ದ ಮಿತ್ರಭಾವವನ್ನು ಬಹುಮುಖವಾಗಿ ವ್ಯಕ್ತಪಡಿಸಿದರು. ಅವರುಮಾಡಿದ ಉತ್ತಮಗಳಾದ ಅನೇಕಕಾರ್ಯಗಳವೈಕಿ, ಕೇವಲ ಬಾಧಕವಾಗಿದ್ದ ತೆರಿಗೆಗಳನ್ನೆಲ್ಲ ವಜಾಮಾಡಿದ್ದು, ತಮ್ಮರಾಜ್ಯಕ್ಕೂ ಮಧ್ಯ ಏಷ್ಯಾದೇಶಕ್ಕೂ ಮಧ್ಯೆ ವ್ಯಾಪಾರಕ್ಕೆ ಪ್ರೋತ್ಸಾಹವನ್ನುಂಟುಮಾಡಿದ್ದು, ಗಿಲ್ಜಿಟ್ ಮತ್ತು ಯಾರ್ಕಾಂಡಿಗೆ ಕಾರ್ಯಾರ್ಥ ಹೋಗುವ ಬ್ರಿಟಿಷ್ ಆಫೀಸರ್‌ಗಳಿಗೆ ಸಹಾಯಕರಾಗಿದ್ದದ್ದು, ಇವೆಲ್ಲವು ಬಹಳ ಮುಖ್ಯವಾದವು. ಅವರು ತೋರಿಸುತ ಬಂದ ರಾಜಾರ್ಹಗಳಾಗಿ ಮರ್‍ಯಾದೆಯನ್ನೂ, ಮಾಡುತಬಂದ ಸತ್ಕಾರವನ್ನೂ ಪಂಜಾಬ್ ಗವರ್ನ್‌ಮೆಂಟ್ ಆಫೀಸರ್‌ಗಳೂ, ಮತ್ತು ಕಳೆದ ಇಪ್ಪತ್ತೆಂಟುವರುಷಗಳಕಾಲವಾಗಿ ಜಮ್ಮು ಪಟ್ಟಣಕ್ಕಾಗಲಿ ಕಾಶ್ಮೀರ ದೇಶಕ್ಕಾಗಲಿ ಹೋಗಿ ಬರುತಲಿದ್ದವರೂ ಬಹುಕಾಲದವರಿವಿಗೆ ಜ್ಞಾಪಕದಲ್ಲಿಟ್ಟಿರುವರು. ಪಂಜಾಬ್ ಲೆಫ್ಟಿನೆಂಟ್ ಗವರ್ನರವರು ಬಹುಕಾಲದ ಮೊದಲು ತಮಗೆ ಕೇವಲ ಮಿತ್ರರಾಗಿದ್ದ ಮಹಾರಾಜರವರನ್ನು ಹೋಗಲಾಡಿಸಿಕೊಂಡಬಗ್ಗೆ ಬಹಳ ವ್ಯಥೆಪಡುತ್ತಾರೆ. ಕೇವಲ ಪ್ರಸಿದ್ಧರಾದ ಸದರೀಯವರ ಮರಣದದೆಸೆಯಿಂದ ಅವರ ಕುಟುಂಬಕ್ಕೂ, ಜಮ್ಮೂ ರಾಜಧಾನಿಯ ಮತ್ತು ಕಾಶ್ಮೀರ ದೇಶದ ಪ್ರಜೆಗಳಿಗೂ ಉಂಟಾದ ನಷ್ಟದಬಗ್ಗೆ ತಾವು ಬಹಳ ವಿಷಾದಿಸುತ್ತಾರೆಂಬದು.

ನೋಟೀಸ್

ಹಿಂದೂ ಸ್ತ್ರೀ ಪುನರ್ವಿವಾಹಸಂಘ.

ಮೇಲಿನ ಸಂಘವನ್ನು ಕುರಿತ ಯಾವ ವಿಷಯವನ್ನಾದರು ತಿಳಿಯಲಪೇಕ್ಷಿಸುವ, ಮತ್ತು ಅದೇ ವಿಷಯದಲ್ಲಿ ಸಂಶಯಾಸ್ಪದವಾದ ಅಥವಾ ವಿವಾದ ಗ್ರಸ್ತವಾದ ಅಂಶಗಳಿಗೆ ಸಮಾಧಾನವನ್ನು ಕೇಳಲಪೇಕ್ಷಿಸುವ ದೊಡ್ಡ ಮನುಷ್ಯರು ಇದರಡಿ ರುಜು ಮಾಡಿರುವವರ ಮೂಲಕ ತಿಳಿದುಕೊಳ್ಳಬಹುದು.

ಇದಕ್ಕೆ ಸಂಬಂಧಪಟ್ಟ ವಾದ ಗ್ರಂಥಗಳು ಸಹ ಸಾಧ್ಯವಾದವರಿಬರಾಯ್ ಮಾಡಲ್ಪಡುವದು.

ಬಿ ನರಸಿಂಗರಾವ್,

ಬೆಂಗಳೂರು ಸಿದ್ದಿಕಟ್ಟೆ ಬೀದಿಯಲ್ಲಿ

೧೬ನೇ ನಂಬರ್ ಮನೆ.

ನೋಟಿಸು.

ಇದರಿಂದ ನಮ್ಮ ಚಂದಾ ಬಾಕೀದಾರರಿಗೆ ನಾವು ಮರಳಿ ವ್ಯಕ್ತಪಡಿಸುವದೇನಂದರೆ:—ಹಿಂದೆ ನಾವು ತಿಳಿಸಿಯಿದ್ದಂತೆ, ಬಾಕೀದಾರರೆಲ್ಲರಿಗೂ ಅವರವರ ಬಾಕೀ ತಪ್ಸೀಲ್ ನಮೂದಿನಿಂದ ಅಂಚೆಯಲ್ಲಿ ಕಾಗದಗಳು ಬರೆದಿದ್ದಾಗ್ಯೂ ಅನೇಕರು ಬಾಕೀಗಳನ್ನು ಕಳುಹಿಸದೆಯೂ ಜವಾಬ್ ಕೊಡದೆಯೂ ಇರುತ್ತಾರಾಗಿ ಅಂತವರೆಲ್ಲರಿಗೂ ಮುಂದಿನ ವಾರದಿಂದ ಪತ್ರಿಕೆ ಮನ್ನಾ ಮಾಡಲ್ಪಡುವದಲ್ಲದೆ ಬಾಕೀಗಳ ವಸೂಲೀ ವಿಷಯದಲ್ಲಿ ಉಚಿತವಾದ ಪ್ರಯತ್ನಗಳು ನಡೆಸಲ್ಪಡುವವು.

೨೪—೯—೮೫ ಪ್ರೊ—ಕ—ಪ್ರ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

Transfer of Amildars.—ನಂಜನಗೂಡು ಅಮಲ್ದಾರರು ಲಕ್ಷ್ಮಣರಾಯರು ಮೈಸೂರಿಗೂ, ಹೆಗ್ಗಡದೇವನ ಕೋಟೆ ಅಮಲ್ದಾರ್ ರಘುನಾಥರಾಯರು ನಂಜನಗೂಡಿಗೂ ಋಗಾಮಿಯಾಗಿ ವರ್ಗಮಾಡಲ್ಪಟ್ಟಿರುತ್ತಾರೆ.

Monthly Sessions.—ಇಲ್ಲಿನ ಚೀಫ್‌ಕೋರ್ಟ್ ಮಾಹೆವಾರ್ ಸೆಷನ್ ದರ್ಯಾಪ್ತುಯು ಬರುವ ತಿಂಗಳ ೫ನೇ ತಾರೀಖ್ ಸೋಮವಾರದದಿನ ಪ್ರಾರಂಭವಾಗುವದು. ಈಸಲ ಸೆಷನ್ ಮೊಕದ್ದಮೆಗಳು ಸ್ವಲ್ಪ ಬಲವಾಗಿರುವಂತೆ ತಿಳಿಯಬರುತಿದೆ

The British Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ. ಸಿ. ಇ. ಅಪ್. ಗನ್ಡಿಸ್ಟರ್‌ಯವರು ತಮ್ಮ ಅಸಿಸ್ಟೆಂಟರ ಸಂಗಡ ದಸರಾ ಉತ್ಸವದಬಗ್ಯೆ, ಮುಂದಿನ ತಿಂಗಳ ೭ ಗುರುವಾರದಲ್ಲಿ ಮೈಸೂರಿಗೆ ಪ್ರಯಾಣೋನ್ಮುಖರಾಗಿರುವಂತೆ ಕೇಳುತ್ತೇವೆ.

Arrival of the Dewan.—ಈ ಸಂಸ್ಥಾನದ ದಿವಾನರಾದ ಮೆ. ಕೆ. ಶೇಷಾದ್ರಿಅಯ್ಯರ್ ಬಿ. ಎ. ಬಿ. ಎಲ್. ಯವರು ತಮ್ಮ ಜನರಲ್ ಸೆಕ್ರಿಟರಿಯವರೊಡನೆ ಕಳೆದ ಬೃಹಸ್ಪತಿ ವಾರದದಿನ ಸಾಯಂಕಾಲ ಪ್ರಯಾಣಸ್ಥರಗಾಡಿಯಲ್ಲಿ ಮೈಸೂರಿಂದ ಇಲ್ಲಿಗೆ ವಾಪಸಿಯುಮಾಡಿದರು. ಆ ಕಾಲಕ್ಕೆ ಸರಿಯಾಗಿ ರೈಲುಸ್ಟೇಷನ್‌ಬಳಿ ಈ ಸಂಸ್ಥಾನದ ನೇಟಿವ್ ಆಫಿಸರುಗಳು ಕೆಲವರು ಹಾಜರಿದ್ದು ದಿವಾನರವರನ್ನು ಬರಮಾಡಿಕೊಂಡರು.

Changes in the Bangalore District Office.—ಬೆಂಗಳೂರು ಡಿ|| ಆಫೀಸ್ ಹೆಡ್‌ರೈಟರ್ ಮೆ ಥಾಂಸನ್‌ಯವರು ಮೃತಪಟ್ಟದರಿಂದ ಸದರೀ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರು ಇವರಬರುವಂತೆ ಏರ್ಪಾಡುಮಾಡಿ ದಿವಾನರವರ ಮಂಜೂರಾತಿಗೆ ಕಳುಹಿಸಿರುವದಾಗಿ ತಿಳಿಯಬರುತಿದೆ ಮೆ ಡೇಸಿಯವರು ಮೃತರಾದ ಥಾಂಸನ್‌ಯವರ ಕೆಲಸಕ್ಕೆ, ಮೆ|| ಸ್ಟೀಲ್‌ಯವರು ಮೆ. ಡೇಸಿಯವರ ಕೆಲಸಕ್ಕೆ, ಪೋಲೀಸ್‌ಚೀಫ್‌ಕಾನ್ಸ್ಟೇಬಲ್ ಮೆ. ಅಂಬ್ರೋಸ್‌ಯವರು ಮೆ. ಸ್ಟೀಲ್‌ಯವರಕೆಲಸಕ್ಕೆ, ಈ ಮೇರೆ ಬಡ್ತೀಗಳು ಮಾಡಿ ಕಡೇಕೆಲಸವನ್ನು ನರಹರಿರಾವ್ ಯೆಂಬವರಿಗೆ ಕೊಟ್ಟರೆಂದು ತಿಳಿಯಬರುತಿದೆ.

The Chief Court.—ಇಲ್ಲಿನ ಚೀಫ್‌ಕೋರ್ಟ್ ಮೂರನೇಜಡ್ಜಿಯವರಾದ ಮೆ|| ರಾಮಚಂದ್ರಯ್ಯರವರು ಶೀಘ್ರದಲ್ಲಿ ಮೂರುತಿಂಗಳರಜಾಮೇಲೆ ಹೋಗುವರೆಂತಲೂ, ಅವರಕೆಲಸವನ್ನು ಬೆಂಗಳೂರು ಡಿ|| ಡೆಪ್ಯುಟಿಕಮಿಷನರಾದ ಮೆ|| ರಿಕ್ಕೆಟ್ಸಿಯವರು ಬದಲೀನೋಡುವರೆಂತಲೂ ಇವರಕೆಲಸವನ್ನು ತುಮಕೂರು ಡೆಪ್ಯುಟಿಕಮಿಷನರವರೂ, ಅವರಕೆಲಸವನ್ನು ಹಾಸನ ಸಬ್‌ಡಿವಿಜನ್ ಆಫಿಸರಾದ ಮೆ|| ಆನಂದರಾಯರವರೂ ನೋಡುವರೆಂತಲೂ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತಿದೆ. ಈ ಏರ್ಪಾಡು ಒಂದುವೇಳೆ ನಿಜವಾಗಿರುವಪಕ್ಷಕ್ಕೆ ಚೀಫ್‌ಕೋರ್ಟಿನ ಎರಡು ಮೂರನೇ ಜಡ್ಜಿಗಳು ನೇಟಿವ್‌ಗಳಾಗಿರಬೇಕೆಂಬ ನಿರ್ಬಂಧವಿಲ್ಲವಾಯಿತು.

The Sheristedar of the Resident's Office.—ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರ ಆಫೀಸಿನ ಶಿರಸ್ತೇದಾರರಾದ ಮೆ ಅನಂತಸ್ವಾಮಿರಾವ್ ಬಿ ಎ ಯವರು, ಬರುವ ಜನವರಿತಿಂಗಳಲ್ಲಿ ಮೈಸೂರು ಸಂಸ್ಥಾನದ ನೌಕರಿಯೊಳು ಅಸಿಸ್ಟೆಂಟ್ ಕಮಿಷನರಾಗಿ ಮುಕರರ್ಮಾಡಲ್ಪಡುವರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತಿದೆ

Suspension.—ಬೌರಿಂಗ್‌ಪೇಟೆ ಅಮಲ್ದಾರ್ ತಿರುಮಲಾಚಾರ್ಯರು ಈಗ ಸಸ್ಪೆಂಡ ಮಾಡಲ್ಪಟ್ಟಿರುತ್ತಾರಾಗಿ ಕೋಲಾರ ಡಿ|| ಹೆಡ್‌ಕ್ಲರ್ಕ್ ರಾಜು ಮೊದಲಿಯಾರ್ಯವರನ್ನು ಬೌರಿಂಗ್‌ಪೇಟೆ ಅಮಲಿದಾರೀಕೆಲಸಕ್ಕೂ, ರಾಜಾಮೊದಲಿಯಾರ್ಯಕೆಲಸಕ್ಕೆ ಗವರ್ನಮೆಂಟ್ ಪ್ರಿಂಟಿಂಗ್ ಆಫೀಸು ಹೆಡ್ ಎಗ್ಜಾಮಿನರ್ ಶ್ರೀನಿವಾಸರಾಯರನ್ನೂ ನಿಯಮಿಸಿ, ಡಿ|| ಡೆಪ್ಯುಟಿಕಮಿಷನರವರು ದಿವಾನರವರ ಮಂಜೂರಾತಿಯಬಗ್ಯೆ ಬರೆದಿರುವಂತೆ ತಿಳಿಯಬರುತಿದೆ.

The Dewan's tour.—ದಿವಾನರವರು ತಮ್ಮ ಜನರಲ್ ಸೆಕ್ರಿಟರಿ ವಗೈರೆಯವರೊಡನೆ ಮೊನ್ನೆಯದಿನ ಪ್ರಾತಃಕಾಲ, ರೈಲಿನಲ್ಲಿ ತುಮಕೂರು ಪ್ರಾಂತಕ್ಕೆ ಹೋದರು. ಈ ಪ್ರಯಾಣವು ಮುಖ್ಯವಾಗಿ ತುಮಕೂರು ಡಿಸ್ಟ್ರಿಕ್ಟಿನ ವ್ಯಕ್ತಸ್ಥಿತಿಯನ್ನು ಖುದ್ದು ನೋಡಿ ಅವಶ್ಯಕವಾಗಿ ಕಂಡುಬರುವ ಸ್ಥಳಗಳಲ್ಲೆಲ್ಲ ರಿಲೀಫ್ ಕೆಲಸಗಳು ಅಂದರೆ, ದುರ್ಭಿಕ್ಷದಿಂದ ಕಷ್ಟಪಡುವ ಜನಗಳಿಗೆ ಜೀವನಾಧಾರವು ಕಲ್ಪಿಸುವದಕ್ಕಾಗಿ, ಕಾಮಗಾರೀಗಳು ಮಾಡಿಸುವ ಉದ್ದೇಶದಿಂದ ಇರುವದೆಂದು ನಂಬುತ್ತೇವೆ.

Embezzlement.—ಇಲ್ಲಿನ ಡಿಸ್ಟ್ರಿಕ್ಟ್ ಮುನಸಫ್ ಕೋರ್ಟಿನಲ್ಲಿ ಬಹುಕಾಲದ ಮೊದಲು, ಕಕ್ಷಿಗಾರರಿಂದ ಪ್ರಾಸೆಸ್, ಡಿಕ್ರೀ ವಗೈರೆಬಗ್ಯ ಹಾಜರ್ಮಾಡಲ್ಪಡುವ ಮೊಬಲಗುಗಳು ದುರುಪಯೋಗವಾಗುತ ಬರುತಲಿದ್ದು, ಅದು ಈಗಿನ ಮುನಸಫರವರ ಕಾಲದಲ್ಲಿ ಒಬ್ಬ ಕಕ್ಷಿಗಾರನ ಬ್ರ್ಯಾದ ಮೂಲಕ ಹೊರಗಾಗಿ ದರ್ಯಾಪ್ತಿಗೆ ಬರಲು ಇಂತಾ ದುಷ್ಕೃತ್ಯ ನಡೆಸುತ ಬಂದ ಕೋರ್ಟ್ ಹೆಡ್ ಮುನಷಿಯವರು ಪರಾರೀಯಾದರು. ದರ್ಯಾಪ್ತೀ ನಡೆಯುತಲಿದೆ.

Official changes.—ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮೆ|| ಅಬ್ದುಲ್ ಖಾದರ್, ಖಾನ್‌ಬಹದೂರವರು ಸನ್ ೮೬ನೇ ಜನವರಿ ತಿಂಗಳಲ್ಲಿ ಪೆನ್ಷನ್‌ಮೇಲೆ ನೌಕರಿಯಿಂದ ನಿವೃತ್ತರಾಗುವರೆಂತಲೂ, ಅವರ ಕೆಲಸಕ್ಕೆ ದಿವಾನರವರ ಜನರಲ್ ಸೆಕ್ರೆಟರಿಯಾದ ಮೆ|| ವಿಜಯೇಂದ್ರರಾಯರವರೂ, ಜನರಲ್ ಸೆಕ್ರಿಟರಿ ಕೆಲಸಕ್ಕೆ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಆಫಿಸರಾದ ಮೆ|| ಮಾಧವರಾಯರವರೂ ಮುಕರರ್ಮಾಡಲ್ಪಡುವರೆಂತಲೂ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತಿದೆ. ಈ ಪ್ರವಾದ ಹುಟ್ಟಿ ಒಂದೆರಡು ತಿಂಗಳ ಕಾಲವಾಯಿತು, ಇದಲ್ಲದೆಯೇ ಇನ್ನೂ ಕೆಲವು ಪ್ರವಾದಗಳುಂಟಾಗಿವೆ, ಪರಂತು ಯಾವದು ಯಾವಕಾಲದಲ್ಲಿ ಜಾರೀಯಲ್ಲಿ ಬರುವದೋ ಅದನ್ನು ಖಂಡಿತವಾಗಿ ಹೇಳಲಸಾಧ್ಯವು

A rumour.—ನಿನ್ನೆಯದಿನಮೊದಲು ಈವೂರು ಬಜಾರ್‌ನಲ್ಲಿ ಒಂದುವಿಧ ಪುಕಾರೆಯುಂಟಾಗಿರುತದೆ, ಅದರ ಯಾಥಾರ್ಥ್ಯ ಹ್ಯಾಗೋ ಅದರಿಯೆವು, ಪರಂತು ನಮ್ಮ ಕೇಳ್ವಿಕೆಗೆ ಬಂದಿರುವಂತೆ ಇದರಡಿ ತಿಳಿಸುತ್ತೇವೆ, ಏನಂದರೆ—ಈವೂರು ಕೋಟೆಯಲ್ಲಿರುವ ಮಿಲಿಟರಿ ಸರಂಜಾಮುಬೇರೆಗಳೆಲ್ಲವು ಲಕ್ಕರಿಗೆ ಸಾಗಿಸಲ್ಪಟ್ಟು ಕೋಟೆಯು ಬರುವತಿಂಗಳ ಗುರ್ರೀತಾರೀಖಿನಲ್ಲಿ ಮಹಾರಾಜಾ ಸರಕಾರಕ್ಕೆ ಒಪ್ಪಿಸಲ್ಪಡುವದು. ಅದುಮೊದಲು ಕೋಟೆಯಲ್ಲಿ ಬ್ರಿಟಿಷ್ ಪಹರೆಗೆ ಬದಲಾಗಿ ಮಹಾರಾಜಾ ಸರ್ಕಾರ್ ಪಹರೆ ಇಡಲ್ಪಡುವದು ಎಂಬದು ಹಾಗಾಗುವಪಕ್ಷಕ್ಕೆ ಇದಕ್ಕೆಬದಲಾಗಿ ಇನ್ನ್ಯಾವದಾದರೊಂದು ಮಿಲಿಟರಿಕೆಲಸಕ್ಕಾಗಿ ಬೇಕಾಗುವದು

Mr B. K. Venkatavaradaiengar.—ಕಡೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ಯರು ಈಗ್ಯೆ ಸುಮಾರ್ ಆರುತಿಂಗಳ ಕಾಲದಮೊದಲು ರಜಾಮೇಲಿರುತಲಿದ್ದರಷ್ಟೆ. ಸದರೀಯವರು ತಮ್ಮ ರಜಾ ಪೂರೈಸಿದ ಕೂಡಲೆ ಕೆಲಸದಮೇಲೆ ಹಾಜರಾಗುವದಕ್ಕೆ ತಾವು ಸಿದ್ಧರಾಗಿರುವಂತೆಯೂ, ಪರಂತು ಯಾವ ಡಿಸ್ಟ್ರಿಕ್ಟಿನಲ್ಲಿ ಕೆಲಸನೋಡಬೇಕೋ ಆಬಗ್ಯೆ ಹುಕುಂ ಆಗಬೇಕೆಂತಲೂ ದಿವಾನರವರಿಗೆಬರೆದುಕೊಳ್ಳಲು ಸದ್ಯ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡತಕ್ಕದ್ದೆಂದು ದಿವಾನರವರು ಹುಕುಂ ಕೊಟ್ಟು ಅವರು ಈಗ ಕೆಲಸ ನೋಡುತಲಿದ್ದಾರೆಂದು ಕೇಳುತ್ತೇವೆ.

Suspension.—ಹಿರಿಯೂರು ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರ್ ಸೈಯದ್ ಅಮೀರ್ ಯೆಂಬವರು, ದರೋಡೆಕಳ್ಳರನ್ನು ಪತ್ತೇಮಾಡಿ ಅವರನ್ನೆಲ್ಲ ಶಿಕ್ಷೆಗೆ ಗುರಿಮಾಡುವ ವಿಷಯದಲ್ಲಿ ತೋರಿಸಿದ ಮೆಹನತ್ತನ್ನು ಪರಿಭಾವಿಸಿ ಮೈಸೂರು ಗವರ್ನಮೆಂಟಿನವರು ಆತನಿಗೆ ಒಂದು ಬಹುಮಾನರೂಪವಾಗಿ ಚಿನ್ನದ ಕಡಗವನ್ನು ಕೊಟ್ಟ ಬಡ್ತೀಯನ್ನು ಸಹ ಮಾಡಿದ್ದರಷ್ಟೆ. ಸದರೀ ಇನ್ಸ್‌ಪೆಕ್ಟರವರು, ಹಿರಿಯೂರು ತಾಲ್ಲೂಕು ಕೋಡಿಹಳ್ಳಿಯಲ್ಲಿ ನಡೆದಂತೆ ರಿಪೋರ್ಟಾದ ಒಂದು ಕನ್ನಚೋರೀ ಮೊಕದ್ದಮೆಯ ಪತ್ತೆಯ ವಿಷಯದಲ್ಲಿ ನಡೆಸಿದ ಕೆಲವು ಅಕ್ರಮ ನಡವಳಿಕೆಯಬಗ್ಯೆ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಸಸ್ಪೆಂಡ್ ಮಾಡಲ್ಪಟ್ಟಿರುವಂತೆ ಕೇಳುತ್ತೇವೆ ಈ ಮೊಕದ್ದಮೆಯನ್ನು ಪತ್ತೇಮಾಡುವ ಕಾಲದಲ್ಲಿ ನಿರಪರಾಧಿಗಳಾದ ನಾಲ್ವರಿಗೆ ಹಂಗಾಂ ನಡೆಸಿ ಅಕ್ರಮ ಕ್ಯೆದ್ ಮಾಡಿದ್ದಲ್ಲದೆ ಇನ್ನುಕೆಲವರನ್ನು ಕೆಲವು ದಿನಗಳ ವರಿವಿಗೂ ಅಕ್ರಮ ಕ್ಯೆದ್ ಮಾಡಿದ್ದಂತೆ ಚೀಫ್‌ಕೋರ್ಟಿನಲ್ಲಿ ಫಿರ್ಯಾದಾಗಿ ಅದರ ಮೇಲೆ ವಿಚಾರಣೆಯಬಗ್ಯೆ ತುಮಕೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಹುಕುಂ ಆಗಿರುವಂತೆ ಕೇಳುತ್ತೇವೆ.

Kolar Girls School.—ಹಿಂದಿನ ವಾರದ ಪತ್ರಿಕೆಯಲ್ಲಿ ನಾವು ಸೂಚಿಸಿ ಯಿದ್ದಂತೆ, ಆದಿ ಭಾನುವಾರದದಿನ ಕೋಲಾರ ಹಿಂದೂ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನೀಯರಿಗೆ ಇನಾಮುಗಳು, ಅಂದರೆ ಕೆಲವರಿಗೆ ಪುಸ್ತಕಗಳು, ಕೆಲವರಿಗೆ ಬೊಂಬೆಗಳು, ಕೆಲವರಿಗೆ ಇತರ ಮಕ್ಕಳಿಟ್ಟುಕೊಂಡು ಆಡುವ ಸಾಮಾನುಗಳು ಕೊಡಲ್ಪಟ್ಟವು. ಈಬಗ್ಯೆ ನೇರಿದ್ದ ಸಭೆಯಲ್ಲಿ ಕೋಲಾರ ಡಿಸ್ಟ್ರಿಕ್ಟ್ ಯೆಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಶ್ರೀನಿವಾಸ ರಾಯರವರು ಅಗ್ರಾಸನವ ವಹಿಸಿದ್ದರು. ಈ ಕಾರ್ಯಕ್ಕೆ ಬೆಂಗಳೂರು ಹಿಂದೂ ಅಸೋಸಿಯೇಷನ್ ಪ್ರೆಸಿಡೆಂಟರಾದ ಮೆ. ನಾನಾರಾಯರವರು, ಮತ್ತು ಆರೇಳು ಮೆಂಬರ್‌ಗಳು ಕೋಲಾರಕ್ಕೆ ಹೋಗಿದ್ದರು. ಅಲ್ಲಿನ ಸ್ಕೂಲ್ ಕಮಿಟಿಯ ಸೆಕ್ರಿಟರಿ ಯವರಾದ ಪ್ಲೀಡರ್ ಮೆ. ವೆಂಕಟಾಚಾರ್ಯರು ಸದರೀ ಪಾಠಶಾಲೆಯ ವಿದ್ಯಾಭಿವೃದ್ಧಿಯನ್ನು ಕುರಿತು ಓದಿದ ರಿಪೋರ್ಟ್ ಸಭಿಕರಿಗೆ ಬಹಳ ತೃಪ್ತಿಕರವಾಗಿ ಕಂಡುಬಂತು. ಮುಖ್ಯವಾಗಿ ಈ ಪಾಠಶಾಲಾಭಿವೃದ್ಧಿ ವಿಷಯದಲ್ಲಿ ಕೋಲಾರ್ ಪಟ್ಟಣ ನಿವಾಸಿಗಳು ಪ್ರೋತ್ಸಾಹಕರಾಗಿದಾರೆಂದು ಕೇಳುವದಕ್ಕೆ ಬಹಳ ಸಂತೋಷಿಸುತ್ತೇವೆ. ಈ ಪಾಠಶಾಲೆಯನ್ನು ಮಿಷನರಿಗಳು ತಮ್ಮ ವಶಕ್ಕೆ ಕೊಡಬೇಕೆಂದು ಅಪೇಕ್ಷಿಸುವದಾಗಿ ಕೇಳುತ್ತೇವೆ. ಈ ವಿಷಯದಲ್ಲಿ ಸ್ಕೂಲ್ ಕಮಿಟಿಯವರು ಬಹಳ ಜಾಗರೂಕರಾಗಿರಬೇಕೆಂದು ಯೆಚ್ಚರಿಸುವೆವು.

Illegal and oppressive proceedings of a Police officer.—ಚಿತ್ರದುರ್ಗ ತಾಲ್ಲೂಕು ಜಗಳೂರು ಡಿ|| ಅಮಲ್ದಾರರ ರೇಂಜಿನಲ್ಲಿ ನಡೆದ ಒಂದು ಕನ್ನ ಚೋರೀ ಮೊಕದ್ದಮೆಯನ್ನು ಪತ್ತೇ ಮಾಡುವದಕ್ಕಾಗಿ ಚಿತ್ರದುರ್ಗ ಸಪನ್‌ಪ್ರೋಲೀಸ್ ಜಮೇದಾರ್ ರಾಮಸ್ವಾಮಿಯೆಂಬಾತನು ಕಳುಹಿಸಲ್ಪಡಲು, ಆತನು ಕಣಕಟ್ಟೆ ಗ್ರಾಮದ ಪಟೇಲ್ ಸೂರಯ್ಯನೆಂಬವನು ಸದರೀ ಚೋರೀ ಮೊಕದ್ದಮೆಗೆ ಶರೀಕ್ ಆಗಿದ್ದನೆಂಬ ಕಾರಣವನ್ನುಂಟುಮಾಡಿಕೊಂಡು ಆತನನ್ನು ಹಿಡಿದು ತರಿಸಿ ಅಕ್ರಮ ಕ್ಯೆದ್ ಮಾಡಿ, ಅವನ ಮನೆಯ ನೆಲವನ್ನೆಲ್ಲ ಅಗೆದುಹಾಕಿ ತಪ್ಸೀಲ್ ಕಬೂಲೀಬಗ್ಯೆ ಅವನನ್ನು ಹಿಂಸಿಸಿ, ಅವನಿಂದ ಐವತ್ತು ರೂಪಾಯಿಗಳು ಸುಲಿಗೆ ಮಾಡಿಕೊಳ್ಳಲು, ಸದರೀ ಪಟೇಲನ ಕಡೆಯವರು ಈ ವಿಷಯವನ್ನು ಕುರಿತು ಫಿರ್ಯಾದ್ ಮಾಡುವದಾಗಿ ಪ್ರಕಾರೀ ಮಾಡಿಕಡೊವಲ್ಕೆ, ತನ್ನಮೇಲೆ ಬರುವ ತಪ್ಪಿತದಿಂದ ತಪ್ಪಿಸಿಕೊಳ್ಳುವದಕ್ಕಾಗಿ, ಸದರೀ ಐವತ್ತು ರೂಪಾಯಿಗಳಲ್ಲಿಕಿ ಇಪ್ಪತ್ತೈದು ರೂಪಾಯಿಗಳು ತೆಗೆದುಕೊಂಡು ಹೋಗಿ ಜಗಳೂರು ಡಿ|| ಅಮಲ್ದಾರರಮುಂದೆ ಯಿಟ್ಟು ಸದರೀ ಪಟೇಲನು ತನಗೆ ರುಸುವತ್ತು ಕೊಟ್ಟನೆಂದು ರಿಪೋರ್ಟ್ ಮಾಡಿದನು. ಈ ಮೊಕದ್ದಮೆಯನ್ನು ಚಿತ್ರದುರ್ಗ ಸಬ್‌ಡಿವಿಜನ್ ಆಫಿಸರು ದರ್ಯಾಪ್ತೀಮಾಡಿ ಪಟೇಲನಿಗೆ ಒಂಭತ್ತು ತಿಂಗಳ ಕಠಿಣಸಜಾ ವಿಧಿಸಿದರು. ಅದರಮೇಲೆ ಆತನು ಚೀಫ್‌ಕೋರ್ಟಿಗೆ ಅಪೀಲ್‌ಮಾಡಿಕೊಳ್ಳಲು ಅಲ್ಲಿನ ಜಡ್ಜಿಗಳು ಸಜಾವನ್ನು ಕೂಡಲೇ ನಿಲ್ಲಿಸಿಬಿಡಬೇಕೆಂದು ಹುಕುಂಮಾಡಿ ವಿಚಾರಣೆಯದಿನ ಪಟೇಲನನ್ನು ಖುಲಾಸೇಮಾಡಿ, ಸದರೀ ಜಮೇದಾರನು ಪಟೇಲನನ್ನು ಅಕ್ರಮ ಕ್ಯೆದ್ ಮಾಡಿದಬಗ್ಯೆ ದರ್ಯಾಪ್ತೀ ಮಾಡತಕ್ಕದ್ದೆಂತಲೂ, ಆತನಿಗೆ ಹಿಂದೆ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಸಜಾ ಆದದಕ್ಕೆ ಕಾರಣವನ್ನು ವಿಚಾರಿಸಿ ರಿಪೋರ್ಟ್ ಮಾಡಬೇಕೆಂದು ವಗೈರೆ ತುಮಕೂರು ಡಿ|| ಡೆಪ್ಯುಟಿಕಮಿಷನರವರಿಗೆ ಹುಕುಂ ಮಾಡಿದುದಾಗಿ ಕೇಳುತ್ತೇವೆ. ದರೋಡೆ ಪತ್ತೆಯಬಗ್ಯೆ ಗವರ್ನಮೆಂಟಿನವರಿಂದ ಸನ್ಮಾನವು ಪಡೆದವರಲ್ಲಿ ಕಿಯವರೂ ಒಬ್ಬರಾಗಿದಾರೆ.

Prediction of prospects.—ಬ್ರಹ್ಮಶ್ರೀ ಸುಳಿಕಲ್ಲು ಲಕ್ಷ್ಮೀರಮಣ ಜೋಯಿಸರು ಮರಳಿ ತಿಳಿಸುವದೇನಂದರೆ—ಸ್ವಾತೀತ್ರಯದಲ್ಲಿ ಶುಕ್ರ ಸಂಚಾರದಿಂದ ಉಂಟಾಗಬೇಕಾದ ಅತಿವೃಷ್ಟಿ ಯೋಗಕ್ಕೆ, ಗುರ್ವಂಗಾರಕರ ಮಧ್ಯೆ ಬುಧ ಸಂಚಾರ ದೋಷ ಪ್ರಾಪ್ತವಾಗಿ ಪೂರ್ಣ ವೃಷ್ಟಿಗೆ ಭಂಗ ಪ್ರಾಪ್ತವಾಗುವದೆಂದು ಕಳೆದ ವಾರದ ಪತ್ರಿಕೆಯ ಮೂಲಕ ತಿಳಿಸಿದ್ದರಷ್ಟೆ. ಸದರೀ ದೋಷವು ಈ ತಿಂಗಳ ೨೮ನೇ ತಾರೀಖ್ ಸೋಮವಾರರಾತ್ರಿ ಪರಿಹಾರ ವಾಗುವದರಿಂದಲೂ, ಆದಿನ ರಾತ್ರಿ ೯ ಘಂಟೆಗೆ ಹಸ್ತ ನಕ್ಷತ್ರ ೨ನೇ ಪಾದವು ಜಲಲಗ್ನದಲ್ಲಿ ಪ್ರಾರಂಭವಾಗುವದರಿಂದಲೂ, ಇದು ಮೊದಲು ಸುವೃಷ್ಟಿ ಯುಂಟಾಗುವದು. ಅಕ್ಟೋಬರ್ ೨ನೇ ತಾರೀಖ್ ದಿವಾ ಮೂರುಘಂಟೆಯ ಮೇಲೆ ಪೂರ್ಣ ವೃಷ್ಟಿಯೋಗ, ಅಂದರೆ ಜಲಚಂದ್ರಯೋಗ ಹುಟ್ಟುವದರಿಂದ, ಅದು ಮೊದಲು ಮಿಂಚು ಗುಡುಗುಗಳೊಡನೆ ಕೂಡಿ ಹಸ್ತ ಮಳೆ ಚನ್ನಾಗಿ ಆಗುವದು. ಈಗ ಬುಧ ಶುಕ್ರರು ಉತ್ತರ ದಿಗ್ಗಮನೋನ್ಮುಖರಾಗಿರುವದರಿಂದ ಇಲ್ಲಿಗೆ ವಾಯವ್ಯ ಮತ್ತು ಉತ್ತರ ದಿಕ್ಕುಗಳಲ್ಲೂ ವೃಷ್ಟಿಯುಂಟಾಗಿ ಅಲ್ಲಿನ ಅನಾವೃಷ್ಟಿ

ಭಯವು ಪರಿಹರ ವಾಗುವದು ಅಕ್ಟೋಬರ್ ೧ನೇ ತಾರೀಖ್ ಗುರುವಾರವದಿನ ಕನ್ಯಾ ರಾಶಿಗೆ ಪಂಚಗ್ರಹಯೋಗ ವಾಪಕಾರಣ, ಕೇವಲ ಕ್ರೂರವಾಗಿರುವದು. ಅಂದರೆ ಅಲ್ಲಿಯಲ್ಲಿ ಪ್ರಜೆಗಳಿಗೆ ರೋಗಾದ್ಯುಪದ್ರವಗಳುಂಟಾಗುವದಾಗಿ ತತ್ಪರಿಹಾರಾರ್ಥ ಕ್ರೂರ ಗ್ರಹಗಳಿಗೆ ಶಾಂತಿಯು ಮಾಡುವದರ ಮೂಲಕ ಕ್ಷೇಮ ಪ್ರುಂಟಾಗುವದು, ಎಂಬದು.

—

The weather — ಈ ತಿಂಗಳ ೧೯ನೇ ತಾರೀಖಿಗೆ ಪೈದಾದವಾರದಬಾಬತು ಡಿ|| ಜಾತ್ ಸ ಗ್ಯಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ ತಿಳಿಯಬರುವದೇನುದರೆ—

ಬೆಂಗಳೂರು ಡಿಸ್ಟ್ರಿಕ್ಟ್ ಪೈಕಿ ಬೆಂಗಳೂರು ಕಸಬ, ನೆಲಮಂಗಲ, ಆನೇಕಲ್, ಕುಣಿಗಲ್, ಈನಾಲ್ಕು ಕಸಬೆಗಳಲ್ಲಿ ಮಾತ್ರ ಒಂದಂಗುಲ ಚಿಲ್ಲರೆ ಮಳೆಯೂ, ಉಳಿದ ತಾಲ್ಲೂಕುಗಳಪೈಕಿ ಕೆಲವುಕಡೆ ಕೆಲವು ಸೆಂಟುಗಳ ಮಳೆಯೂ ಆದುದೆ ನಮೂದಿದೆ. ಚೆನ್ನ ಪಟ್ಟಣದಲ್ಲಿ ಒಂದೆರಡು ಸೆಂಟುಗಳು ಸಹ ಯಿಲ್ಲವು ಕೋಲಾರ್ ಡಿಸ್ಟ್ರಿಕ್ಟ್ ಪೈಕಿ ಮುಳುಬಾಗಲ್, ಶಿಡ್ಲಘಟ್ಟ, ಮಾಲೂರು, ಶ್ರೀನಿವಾಸಪುರ, ಈಸ್ಥಳಗಳಲ್ಲಿ ಮಾತ್ರ ಒಂದೆರಡು ಅಂಗುಲಗಳ ಲೆಕ್ಕದಮೇರೆಯೂ ಇತರ ತಾಲ್ಲೂಕುಗಳಲ್ಲಿ ಸೆಂಟುಗಳ ಲೆಕ್ಕದಮೇರೆಯೂ ಮಳೆಯಾಗಿದೆ. ಕೋಲಾರ, ಗೋರಿಬಿದನೂರು, ಗುಡಿಬಂಡೆ, ಈ ಪ್ರಾಂತಗಳಲ್ಲಿ ಸುತರಾಂ ಮಳೆಯಿಲ್ಲವು ತುಮಕೂರು ಡಿಸ್ಟ್ರಿಕ್ಟು ಪೈಕಿ ಕೆಲವು ತಾಲ್ಲೂಕುಗಳಲ್ಲಿ ೨೦–೩೦ ಸೆಂಟುಗಳ ಮಳೆ ಆಗಿದೆ, ಮಿಕ್ಕ ತಾಲ್ಲೂಕುಗಳಲ್ಲಿ ಸುತರಾಂ ಮಳೆ ಯಿಲ್ಲವು ಮೈಸೂರು ಡಿಸ್ಟ್ರಿಕ್ಟುಪೈಕಿ ಹುಣಸೂರಲ್ಲಿ ೧ಅಂಗುಳ, ಮಿಕ್ಕ ತಾಲ್ಲೂಕುಗಳ ಪೈಕಿ ಕೆಲವುಕಡೆ ಸೆಂಟುಗಳ ಮಳೆ, ಕೆಲವುಕಡೆ ಅದು ಸಹ ಇಲ್ಲವು. ಶಿವಮೊಗ್ಗಾ ಡಿಸ್ಟ್ರಿಕ್ಟುಪೈಕಿ ನಗರ ಒಂದರಲ್ಲಿಮಾತ್ರ ೨|| ಅಂಗುಳ ಮಳೆ ಆಯಿತು. ಅನ್ಯತ್ರ ಕೆಲವು ಸೆಂಟುಗಳಾದವು. ಶಿಕಾರಿಪುರ, ಚೆನ್ನಗಿರಿ ಇವೆರಡರಲ್ಲೂ ಅದುಸಹ ಯಿಲ್ಲವು ಕಡೂರು ಡಿಸ್ಟ್ರಿಕ್ಟು ಪೈಕಿ ಯಾವ ತಾಲ್ಲೂಕಿನಲ್ಲೂ ಸೆಂಟು ಲೆಕ್ಕಕ್ಕೆ ಜಾಸ್ತಿಯಾಗಿ ಮಳೆಯಿಲ್ಲವು. ಕೆಲವು ತಾಲ್ಲೂಕುಗಳಲ್ಲಿ ಮಳೆಯ ಸುದ್ದಿಯೇಯಿಲ್ಲವು. ತೃಣ ಜಲಗಳ ವಿಷಯದಲ್ಲಿ ಹಿಂದಿನವಾರದಲ್ಲಿ ತಿಳಿಸಿದ್ದಕ್ಕಿಂತಲೂ ಅತಿಶಯ ವೇನೂಯಿಲ್ಲವು. ಪಶುಗಳು ನೀರೂ ಮೇವೂ ಯಿಲ್ಲದೆ ಸಾಯುತಲಿವೆ. ಜಿನಸಿಗಳ ದಾರಣೆಗಳು ದಿನೇ ದಿನೆ ಹೆಚ್ಚುತ ಬರುತಲಿವೆ ರೋಗಾದ್ಯುಪದ್ರವಗಳು ಅಲ್ಲಿಯಲ್ಲಿ ಯತ್ಕಿಂಚಿತ್ ಇರತೇಯಿರುತಿವೆ. ಸಕಾಲದಲ್ಲಿ ಮಳೆ ಬರುವದೆಂದು ಹೇಳುವದಕ್ಕೆ ಯಾವ ಕಾಲಜ್ಞರೂ ಕಾಣದೆ ಹೋದಾಗ್ಯೂ ಕಾಲಾತೀತವಾಗಿ ಯಾದರೂ ಮಳೆ ಬರುವದೆಂದು ಹೇಳುವದಕ್ಕೆ ಒಬ್ಬರು ಧೈರ್ಯಪ್ಟರು ಪಡದಿಂದ ಅವರ ಹೇಳಿಕೆಯಂತೆ ಈ ವಾರದಲ್ಲಿಬಹ್ವೈಯುಮಳೆ ಬರುವದೆಂದು ನಿರೀಕ್ಷಿಸುತಲಿದೇವೆ.

EXTRACTS

Lord Ripon's appeal to India.— ಇಂಡ್ಯರಾಜ್ಯದ ಸಾಬಿಕ್ ವೈಸರಾಯ್ ಯವರ ವಿಷಯದಲ್ಲಿ ಈ ದೇಶದ ನೇಟಿವ್ ವೃತ್ತಾಂತ ಪತ್ರಿಕೆಗಳ ಅಭಿಪ್ರಾಯಗಳ ಸಾರಾಂಶ.—

ಸಹಚರವೆಂಬ ಪತ್ರಿಕೆ ತಿಳಿಸುವದೇನುದರೆ–ಇಂಡ್ಯರಾಜ್ಯದ ಪ್ರಜೆಗಳು ತೃಪ್ತರಾಗಿದ್ದರೆ ದೇಶಕ್ಕೆ ಯಾವ ಭಯವೂ ಇಲ್ಲವೆಂತಲೂ, ಅವರು ಅತೃಪ್ತರಾಗಿದ್ದರೆ ಇಂಗ್ಲಿಷಿನವರು ಈ ದೇಶವನ್ನು ಕಾಪಾಡಿಕೊಳ್ಳಲಾರರೆಂತಲೂ ಲಾರ್ಡ್ ರಿಪನ್ ಸಾಹೆಬರವರು ಚನ್ನಾಗಿ ಬಲ್ಲರು ತೆರಿಗೆಗಳನ್ನು ಜಾಸ್ತಿಮಾಡಿದರೆ ಅಸಂತುಷ್ಟಿಯುಂಟಾಗುವದೆಂದು ಅವರು ಬಲ್ಲರಾಗಿ, ಅವನ್ನು ಕಮ್ಮಿ ಮಾಡುವ ವಿಷಯದಲ್ಲಿ ಸರ್ವಪ್ರಯತ್ನವನ್ನೂ ಮಾಡಿದರು. ದೀರ್ಘಾಲೋಚನ ಪೂರ್ವಕವಾದ ಈ ರಾಜ್ಯತಂತ್ರಕ್ರಮವನ್ನು ಟೋರಿ ಪಕ್ಷಿಯವರು ತಿಳಿದುಕೊಳ್ಳಲಾರದೆ ಇದಾರೆ, ಎಂಬದು.

ಸಂಗಬಾದ ಪ್ರಭಾಕರವೆಂಬ ಪತ್ರಿಕೆ ಹೇಳುವದೇನಂದರೆ—ಕಾರ್ಯತಃ ಇಂಡ್ಯರಾಜ್ಯದ ಕ್ಷೇಮಚಿಂತಕರಾಗಿರುವ ಲಾರ್ಡ್ ರಿಪನ್‌ಸಾಹೆಬರನ್ನು ಅನಾವಶ್ಯಕವಾಗಿಯೂ ಅಕ್ರಮವಾಗಿಯೂ ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ಯವರು ದೂಷಿಸಿ ಆಕ್ಷೇಪಿಸಿದರು. ಅವರು ದೂಷಿಸಿದ ರೀತಿಯನ್ನು ನೋಡಲಾಗಿ ಪಕ್ಷಪ್ರಯುಕ್ತವಾದ ಅಸೂಯೆಯಿಂದ ಹಾಗೆ ಮಾಡಿದುದಾಗಿ ಕಾಣುತಿದೆ ಇವರ ಅತಳತಕಾಲದಲ್ಲಿ ಇಂಡ್ಯರಾಜ್ಯಕ್ಕೆ ಯಾವ ಸಂಕಟ ಪ್ರಾಪ್ತವಾಗುವದೊ ಅದನ್ನು ಯಾರು ಬಲ್ಲರು? ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ಯವರ ದೂಷಣೆಯು ಲಾರ್ಡ್ ರಿಪನ್‌ಯವರನ್ನು ಸ್ವಲ್ಪವೂ ಬಾಧಿಸಲಾರದು, ಯಾತಕ್ಕಂದರೆ, ಅವರರಾಜ್ಯಾಡಳಿತಕ್ರಮವು ಯೋಗ್ಯವಾದದ್ದೆಂದು ಆಸೇತು ಹಿಮಾಚಲಪರ್ಯಂತ ಶ್ಲಾಘಿಸಲ್ಪಡುತಿದೆ, ಎಂಬದು.

ಭಾರತವಾಸಿ ಯೆಂಬ ಪತ್ರಿಕೆ ಅಭಿಪ್ರಾಯಪಡುವದೇನುದರೆ–ಲಾರ್ಡ್ ರಿಪನ್‌ಸಾಹೆಬರವರು ತಮ್ಮ ವೈಸರಾಯ್ ಕೆಲಸವನ್ನು ಕೇವಲ ಚಿತ್ತಸ್ಥೈರ್ಯದೊಡನೆ ನೆರವೇರಿಸಿದರು. ಇಂಗ್ಲಾಂಡ್ ಮತ್ತು ಇಂಡ್ಯದೇಶೀಯರ ಭಾಗ್ಯವಿಶೇಷದಿಂದಲಿವರು ಈ ದೇಶಕ್ಕೆ ಅಧಿಕಾರಿಯಾಗಿಬಂದರು ಇಂಡ್ಯದೇಶದ ಪ್ರಜೆಗಳು ಸಂಪೂರ್ಣ ರಾಜಭಕ್ತಿಯುಳ್ಳವರು ಅಂತಾ ರಾಜಭಕ್ತಿಯನ್ನು ಲಾರ್ಡ್ ರಿಪನ್‌ಯವರು ದೃಢಪಡಿಸಿದರಾಗಿ ಒಬ್ಬೆ ಇಂಗ್ಲಿಷಿನವರು ಅವರ ವಿಷಯದಲ್ಲಿ ಕೃತಜ್ಞರಾಗಿರಬೇಕು ಪರಂತು ಅದಕ್ಕೆ ಬದಲಾಗಿ ಅವರನ್ನು ನಿಂದಿಸುತ್ತಾರೆ. ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ಯವರು ಹೇಳಿದ್ದನ್ನು ಕನ್ಸರ್ವೆಟಿವ್‌ಪಕ್ಷದವರು ಒಪ್ಪುವರಾದರೆ ಅದು ನಮಗೆ ಚಿಂತೆಯನ್ನುಂಟುಮಾಡತಕ್ಕದ್ದಾಗಿರುವದು ಹೊಸ ಇಂಡ್ಯಸ್ಟೇಟ್ ಸೆಕ್ರಿಟರಿಯವರು ಲಾರ್ಡ್ ರಿಪನ್‌ಯವರನ್ನು ನಿಂದಿಸುವದರಮೂಲಕ ನಮಗೆ ಹೃದಯವ್ಯಥೆಯನ್ನುಂಟುಮಾಡಿದವರಾದರು ಲಾರ್ಡ್ ರಿಪನ್‌ಯವರನ್ನು ಇಂಡ್ಯದೇಶದ ಪ್ರಜೆಗಳು ಒಬ್ಬ ಮಹಾತ್ಮನಂತೆ ಯೆಣಿಸುತ್ತಾರೆ, ಎಂಬದು

ನವವಿಭಾಕರವೆಂಬ ಪತ್ರಿಕೆ ಹೇಳುವದೇನಂದರೆ—ಇಂಡ್ಯರಾಜ್ಯದ ಪ್ರಜೆಗಳು ತೃಪ್ತರಾಗಿರುವರಾದರೆ ರಷ್ಯಾದೇಶೀಯರ ಭೀತಿಗೆ ಅವಕಾಶವಿಲ್ಲವೆಂದು ಲಾರ್ಡ್ ರಿಪನ್‌ಯವರು ತಿಳಿದಿದ್ದರು ಸರಕಾರೀಯವರು ನಿರಂಕುಶಾಧಿಕಾರನಡಸಲಿಲ್ಲವು. ಪರಂತು ಪ್ರಜಾರಂಜಕರಾಗಿ ಕೆಲಸ ನಡಸಿದರು. ಲಾರ್ಡ್ ರಿಪನ್‌ಯವರು ಕೆಡುಕನ್ನುಂಟುಮಾಡಿದರೆಂದು ಲಾರ್ಡ್ ರಾಂಡಾಲ್ಫ್‌ಯವರು ಹೇಳುತ್ತಾರೆ. ವಿವೇಕಶೂನ್ಯವಾದ ಈ ಮಾತನ್ನು ಅವರ ಪಕ್ಷಾವಲಂಬಿಗಳುಮಾತ್ರ ನಂಬುವರು, ಎಂಬದು

—

Retrenchment — ಲವಾಜಮಾ ಪೋಶಾಕಿ ಷಯದಲ್ಲಿ ಸೋಮಪ್ರಕಾಶ್ ಎಂಬ ಪತ್ರಿಕೆ ಹೇಳುವದೇನುದರೆ—ಲವಾಜಮಾ ಕಮ್ಮಿಮಾಡಬೇಕೆಂಬ ಅಭಿಪ್ರಾಯ ಗವರ್ನಮೆಂಟಿನವರಿಗೆ ಉಂಟಾಗಿರುವ ಪಕ್ಷ ಅವರು ಅದನ್ನು ನಿಷ್ಕಳಂಕ ಮನಸ್ಕರಾಗಿ ಮಾಡಲೆತ್ನಿಸಬೇಕು. ಜನಗಳನ್ನು ಕಷ್ಟಕ್ಕೆ ಗುರಿಮಾಡಿ ತನ್ಮೂಲಕ ಲವಾಜಮಾ ಖೋತಾ ಮಾಡುವದು ಉಚಿತವಾಗಿ ಮಾಡಿದಂತೆಯಾಗುವದಿಲ್ಲವು ಮಿಲಿಟೆರಿ ಇಲಾಖೆಯಲ್ಲಿ ಅನಾವಶ್ಯಕವಾದ ಕೆಲಸಗಳು ಅನೇಕವಾಗಿವೆ ಮದರಾಸ್ ಮತ್ತು ಮುಂಬೈ ಕಮಾಂಡರ್ ಇನ್ ಚೀಫ್‌ಗಳಿರಬೇಕಾದ ಆವಶ್ಯಕತೆ ಯೇನು? ಈ ಯೆರಡು ಕೆಲಸಗಳನ್ನೂ ವಜಾ ಮಾಡಿಬಿಟ್ಟರೆ ಅದರಿಂದ ಬಹಳ ಕಡಿತವಲೆಯಾಗುವದು. ಭಾರೀ ತಲಬ್‌ದಾರರಾದ ಸಿವಿಲಿಯನ್ ಉದ್ಯೋಗಸ್ಥರನ್ನು ತೆಗದುಹಾಕಿಬಿಟ್ಟು ಅವರ ಕೆಲಸಗಳಿಗೆಲ್ಲ ಕಡಿಮೆ ತಲಬಿನಲ್ಲಿ ನೇಟಿವ್‌ಗಳನ್ನು ನೇಮಕಮಾಡಿದರೆ ಅದರಿಂದ ಯಾವ ಹಾನಿಯೂ ಉಂಟಾಗಲಾರದು. ಹಾಗೆ ಮಾಡುವದರ ಮೂಲಕ ಗವರ್ನಮೆಂಟಿಗೆ ಬಹಳ ಕೂಡುವಳಿ ಯುಂಟಾಗುವದು. ಲಾರ್ಡ್ ಡಫರಿನ್‌ಸಾಹೆಬರವರು ಕೇವಲ ವಿಚಾರಪರರಾದವರಿಂದ ಈ ವಿಷಯವು ಅವರ ನಿಗೇಗೆ ಬಾರದೆ ಹೋಗಲಾರದೆಂದು ನಂಬುತ್ತೇವೆ, ಎಂಬದು

ಇದೇವಿಷಯವನ್ನು ಕುರಿತು ನವವಿಭಾಕರವೆಂಬ ಪತ್ರಿಕೆ ಹೇಳುವದೇನುದರೆ—ಮರ್ಕಮತ್ ಇಲಾಖೆಯಲ್ಲಿ ಲವಾಜಮಾ ಕಮ್ಮಿ ಮಾಡುವದು ಸುಲಭಸಾಧ್ಯವಾಗಿರುವದು. ಯಾತಕ್ಕಂದರೆ, ಯಾವ ಇಲಾಖೆಯಲ್ಲಿ ಖರ್ಚು ಜಾಸ್ತಿಯೊ ಆ ಇಲಾಖೆಯಲ್ಲಿ ಅದು ಸುಲಭವಾಗಿ ನಡೆಯುವದು. ವಿದ್ಯಾಭ್ಯಾಸದ ಇಲಾಖಾ ಖರ್ಚುಗಳನ್ನು ಕಡಮೆ ಮಾಡುವವರ ಮೂಲಕ ಗವರ್ನಮೆಂಟಿನ ವರುಮಾನಗಳನ್ನು ಕೊಂದಂತೆ ಯಾಗುವದು. ಲವಾಜಮಾ ಕಮ್ಮಿ ಮಾಡಬೇಕೆಂದು ಗವರ್ನಮೆಂಟಿಗೆ ಅಂತರವಾದ ಅಭಿಪ್ರಾಯವಿದ್ದರೆ, ಯೂರೋಪಿಯನ್ ಸೈನ್ಯಕ್ಕಾಗಿ ತಗಲುವ ಅನಾವಶ್ಯಕವಾದ ಮತ್ತು ಭಾರೀಯಾದ ಖರ್ಚುಗಳನ್ನೂ ಭಾರೀತಲಬ್‌ದಾರರಾದ ಸಿವಿಲ್ ಮಿಲಿಟೆರಿ ಆಫಸರ್‌ಗಳು ಅನುಭವಿಸುವ ಪೆನ್ಷನ್‌ಗಳನ್ನೂ ಕಮ್ಮಿ ಮಾಡಬೇಕು ಇಂಡ್ಯರಾಜ್ಯವು ಸದರೀ ಯೆರಡು ಖರ್ಚುಗಳನ್ನೂ ಭರಿಸಲು ಅಶಕ್ತವಾದದ್ದಾಗಿದೆ, ಎಂಬದು

—

Military expenditure — ಮಿಲಿಟೆರಿ ಖರ್ಚಿನ ವಿಷಯವನ್ನು ಕುರಿತು ಸುರಭಿ ಯೆಂಬ ಪತ್ರಿಕೆ ತಿಳಿಸುವದೇನುದರೆ—ಇಂಡ್ಯ ರಾಜ್ಯದ ಬಂದೋಬಸ್ತಿಯ ಬಗ್ಗೆ ಸಾಲಿಯಾನಾ ಖರ್ಚು ಮಾಡಬೇಕೆಂದು ಯೋಚಿಸಲ್ಪಟ್ಟಿರುವ ಯೆರಡು ಕೋಟಿ ರೂಪಾಯಿಗಳನ್ನು ಇಂಡ್ಯ ರಾಜ್ಯದಿಂದ ಕೊಡಿಸುವದು ಕ್ರಮವೆ, ಮತ್ತು ನ್ಯಾಯವೆ? ಹಾಗೆ ಮಾಡಬೇಕಾದ ಖರ್ಚು ಇಂಡ್ಯ ರಾಜ್ಯದ ಪ್ರಯೋಜನಕ್ಕಾಗಿ ಮಾತ್ರವೇ ಅಲ್ಲವು, ಪರಂತು ಇಂಗ್ಲಾಂಡ್ ದೇಶದ ಪ್ರಯೋಜನಕ್ಕೆ ಸಹ ಮಾಡಬೇಕಾದ್ದಾಗಿದೆ. ಇಂಗ್ಲಾಂಡ್ ರಾಜ್ಯದ ಖಜಾನೆ ಭರ್ತಿಯಾಗಿದೆ, ಇಂಡ್ಯರಾಜ್ಯದಲ್ಲಿ ಹಾಗಿಲ್ಲವು ಇಂಗ್ಲಾಂಡ್ ಸರ್ಕಾರದವರು ಸಾಲೀಯಾನಾ ಯೆರಡುಕೋಟಿ ರೂಪಾಯಿಗಳು ಸುಲಭವಾಗಿ ಖರ್ಚುಮಾಡುವದಕ್ಕೆ ಶಕ್ತರಾಗಿದಾರೆ. ಇಂಡ್ಯದೇಶಕ್ಕೆ ಹಾಗೆ ಮಾಡುವದಕ್ಕೆ ಉಪಪತ್ತಿ ಇಲ್ಲವು ಈ ವಿಷಯವನ್ನು ಚೆನ್ನಾಗಿ ಆಲೋಚಿಸಿ ನೋಡಿದರೆ ಇಂಗ್ಲಾಂಡ್ ದೇಶದಿಂದ ಸದರೀ ಮೊಬಲಗನ್ನು ಕೊಡಬೇಕಾಗುತದೆ. ಹಾಗಿದ್ದಾಗ್ಯೂ ಇಂಡ್ಯರಾಜ್ಯದ ಮೇಲೆ ಆ ಭಾರ ಹೊರಿಸಲ್ಪಟ್ಟಿದೆ. ಇಂತಾ ಸಲಹೆಯು ಕೇವಲ ಅಕ್ರಮವಾದದ್ದೆಂದು ದೇಶವೆಲ್ಲ ಒಗ್ಗಟ್ಟಾಗಿ ಆಕ್ಷೇಪಿಸಬೇಕು. ಇದುವರಿವಿಗೆ ಯಾವದೊಂದು ನೇಟಿವ್ ವೃತ್ತಾಂತ ಪತ್ರಿಕೆಯೂ ಈ ವಿಷಯವನ್ನು ಅಕ್ಕರೆಯೊಡನೆ ಚರ್ಚಿಸಲಿಲ್ಲವು. ಈಗಲಾದರೂ ನೇಟಿವ್ ವೃತ್ತಾಂತ ಪತ್ರಿಕೆಗಳು ಈ ವಿಷಯವನ್ನು ಕುರಿತು ಚರ್ಚಿಸುವದಕ್ಕೆ ಪ್ರಾರಂಭಿಸುವರೆಂದು ನಂಬುತ್ತೇವೆ, ಎಂಬದು.

TELEGRAPHIC SUMMARY
ತಂತಿವೃತ್ತಾಂತ ಸಂಗ್ರಹವು

[illegible] ೧೯ನೇ ಸೆಪ್ಟಂಬರ್ — [illegible]

—

[illegible] ೧೯ನೇ ಸೆಪ್ಟಂಬರ್ — [illegible]

—

[illegible] ೧೯ನೇ ಸೆಪ್ಟಂಬರ್ — [illegible]

—

[illegible] ೧೯ನೇ ಸೆಪ್ಟಂಬರ್ — [illegible]

[illegible]

—

[illegible] ೧೯ನೇ ಸೆಪ್ಟಂಬರ್ — [illegible]

—

[illegible] ೨೦ನೇ ಸೆಪ್ಟಂಬರ್ — [illegible]

—

[illegible] ೨೦ನೇ ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

[illegible] ಸೆಪ್ಟಂಬರ್ — [illegible]

—

BANGALORE — Printed and published for the Proprietor, at the KARNATIC PRESS — 1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿದನ್ಯೃಪ್ತ್ಯಸಗಮಾರ್ಥಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ದಿಶಾಸುಪರಿಪೂರ್ಣಿತಾನಿಶಮಿಮಾನಸಂಸುಮುದಂ॥

Vol. XII.] BANGALORE—MONDAY, OCTOBER 5, 1885. [No. 40.

ಸಂಪುಟ ೧೨.] ಬೆಂಗಳೂರು—ಸನ್ ೧೮೮೫ನೇ ಇಸವಿ ಅಕ್ಟೋಬರ್ ೫ನೇ ತಾರೀಖ್ ಸೋಮವಾರ. [ಸಂಚಿಕೆ ೪೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ	...	೧೦—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ	...	೬—೦—೦
ಕನ್ನಡ [illegible]		೬—೦—೦
[illegible]	೧ಕ್ಕೆ	೦—೮—೦
[illegible]	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARASANGRAHA.

Price including Postage, Rs 5-6-0

[illegible]

[illegible]	...	ರೂ॥ ೫—೦—೦
[illegible]		೦—೬—೦

[illegible]

ನೋಟೀಸ್.

[illegible]

[illegible]	...	೧—೪—೦
[illegible]	...	೦—೧೨—೦
[illegible] (ಪತ್ಯಂತರ)	..	೦—೩—೦
[illegible]		೦—೫—೦
[illegible]	...	೦—೪—೦
[illegible]	...	೦—೧೪—೦
[illegible]	...	೦—೭—೦
[illegible]	..	೦—೨—೦
[illegible]	..	೫—೦—೦
[illegible]	...	೦—೭—೦
[illegible]	...	೦—೪—೦
[illegible]		೦—೩—೬
[illegible]	...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೬—೬
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	..	೦—೨—೦
[illegible]	...	೦—೦—೯
[illegible]		೧—೦—೬
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	..	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೩ನೇ ಸಂಚಿಕೆ.		೧—೮—೦
[illegible]	...	೦—೮—೦
[illegible]	...	೦—೩—೦
[illegible]	...	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೧—೬
[illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟಿಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತವಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವ ದು.

ನೋಟಿಸ್.

ಹಿಂದೂ ಸ್ತ್ರೀ ಪುನರ್ವಿವಾಹಸಂಘ.

ಮೇಲಿನ ಸಂಘವನ್ನು ಕುರಿತ ಯಾವ ವಿಷಯವನ್ನಾದರು ತಿಳಿಯಲಪೇಕ್ಷಿಸುವ, ಮತ್ತು ಅದೇ ವಿಷಯದಲ್ಲಿ ಸಂಶಯಾಸ್ಪದವಾದ ಅಥವಾ ವಿವಾದಗ್ರಸ್ತವಾದ ಅಂಶಗಳಿಗೆ ಸಮಾಧಾನವನ್ನು ಕೇಳಲಪೇಕ್ಷಿಸುವ ದೊಡ್ಡ ಮನುಷ್ಯರು ಇದರಡಿ ರುಜು ಮಾಡಿರುವವರ ಮೂಲಕ ತಿಳಿದುಕೊಳ್ಳಬಹುದು.

ಇವಕ್ಕೆ ಸಂಬಂಧಪಟ್ಟವಾದ ಗ್ರಂಥಗಳು ಸಹ ಸಾಧ್ಯವಾದರೆ ಸರಬರಾಯ್ಮಾಡಲ್ಪಡುವದು.

ಬಿ ನರಸಿಂಗರಾವ್,

ಬೆಂಗಳೂರು ಸಿದ್ದಿಕಟ್ಟೆ ಬೀದಿಯಲ್ಲಿ

೧೭ನೇ ನಂಬರ್ ಮನೆ.

ನೋಟಿಸ್.

ಈ ಕೆಳಗೆ ರುಜು ಮಾಡಿದ ಕಾಶೀ ನಾರಾಯಣ ದೀಕ್ಷಿತನಿಂದ ಕೊಡಲ್ಪಡುವ ನೋಟಿಸ್ ಅದಾಗಿ. ನನ್ನ ಮಗ ಸುಬ್ರಹ್ಮಣ್ಯದೀಕ್ಷಿತನು ಈಗ ೪ ವರುಷಗಳಿಂದ ದುರ್ಮಾರ್ಗಿಗಳ ಸಹವಾಸದಿಂದ ದುರ್ವ್ಯಸನಿಯಾಗಿಯೂ ಸ್ವೇಚ್ಛೆಯಾಗಿಯೂ ನಡೆಯುತಿದ್ದು ಯಜಮಾನನಾದ ನನ್ನ ಬುದ್ಧಿವಾದಗಳನ್ನು ಉಲ್ಲಂಘಿಸಿ ತನ್ನ ದುರ್ಮಾರ್ಗವನ್ನು ಬಿಡದೆ ಸಾಲಗಳನ್ನು ಮಾಡುತ್ತಾನಾಗಿಯೂ ನನ್ನ ಸ್ವತ್ತುಗಳಮೇಲಿನ ದೃಷ್ಟಿಯಿಂದ ಜನಗಳು ಸಾಲ ಕೊಡುವದಾಗಿ ತಿಳಿಯಬರುವದರಿಂದಲೂ ಸದರೀ ನನ್ನ ಮಗನಿಗೆ ಯಾರೂ ಸಾಲ ಕೊಡಕೂಡದು. ಕೊಟ್ಟರೆ ದುರ್ಮಾರ್ಗಕ್ಕೋಸ್ಕರ ಮಾಡಲ್ಪಡುವ ಆ ಸಾಲವು ನಮ್ಮ ಕುಟುಂಬದ ಸ್ವತ್ತುಗಳಿಗೆ ಬಾಧಿಸುವಂತಾದ್ದಲ್ಲವೆಂದು ಯೆಲ್ಲಾ ಜನಗಳಿಗೂ ಇದರಿಂದ ಖುಲಾಸೆವಾಗಿ ತಿಳಿಸಿದ್ದೇನೆ. ತಾ॥ ೨೧ನೇ ಸೆಪ್ಟಂಬರ್ ಸನ್ ೧೮೮೫.

(ರುಜು) ಕಾಶೀ ನಾರಾಯಣದೀಕ್ಷಿತ.

ತೀರ್ಥಹಳ್ಳಿತಾ॥ದೊಮ್ಮರಸಮ್ಮತ ಅಗ್ರಹಾರ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 5, 1895

೧೮೮೫ನೇ ಅಕ್ಟೋಬರ್ ೫ನೇ ತಾ॥ ಸೋಮವಾರ

ಓ॥ ಸರ್ವಜ್ಞತಾಂಪದೇವಾಕ್ಪಟುತಾಂಪ್ರಸೂತೇ ವಾಣಿತ್ವದಂಘ್ರಿಸರಸೀರುಹಸೇವಪ್ರಣಾಮ ತ್ವಾಮ ವದೇವಿಮನಸಾಹಮನುಸ್ಮರಾಮಿ ತ್ವಾಮುಪಾಸ್ಮಹೇಪರ ಣಂಜನನೀತ್ವಮೇವ॥

THE BRITISH RESIDENT.

ಈ ಸಂಸ್ಥಾನದ ಆಫಿಷಿಯೇಟಿಂಗ್ ಬ್ರಿಟಿಷ್ ರೆಸಿಡೆಂಟರಾದ ಮ॥ಗರ್ಡಿಲೆಸ್ಟನ್ಯವರು, ಕಳೆದ ತಿಂಗಳ ೩೦ನೇ ತಾರೀಖ್ ಬುಧವಾರದದಿನ ಕೋಲಾರದಿಂದ ಬೆಂಗಳೂರಿಗೆ ಬರುವಾಗ್ಯೆ ಮಾರ್ಗದೊಳಿರುವ ಸ್ಟೇಷನ್‌ಗಳೆಲ್ಲವೂ ಪುಷ್ಪತೋರಣ ಕದಳೀ ಸ್ತಂಭಾದಿಗಳಿಂದ ಬಹಳ ಮನೋಜ್ಞವಾಗಿ ಅಲಂಕರಿಸಲ್ಪಟ್ಟದ್ದಂತೆಯೂ, ಮಾಲೂರುಸ್ಟೇಷನನ್ನು ವಿಶೇಷತಃ ಅಲಂಕರಿಸಿ ಬ್ರಿಟಿಷ್ ರೆಸಿಡೆಂಟರ ಆಗಮನವ ನಿರೀಕ್ಷಿಸಿಕೊಂಡು ಬಾಜಾ ಬಜಂತ್ರಿಗಳೊಡನೆ ಕಾದಿದ್ದ ಕೆಲವರು ದೊಡ್ಡಮನುಷ್ಯರು ರೆಸಿಡೆಂಟರವರ ಸವಾರಿ ಬಂದಕೂಡಲೇ ಅವರು ಪುಷ್ಪಫಲಾದಿಗಳಿಂದ ಸತ್ಕರಿಸಿ ತಮ್ಮನ್ನು ಪ್ರತಿನಿಧಿತ್ವೇನ ಕಳುಹಿಸಿದ ಆಸಾಮಿ ಗ್ರಾಮಸ್ಥರ ಅಪೇಕ್ಷೆಯನ್ನು ಸಂಗ್ರಹವಾಗಿ ತಿಳಿಸಿ,ಅದನ್ನು ಈಡೇರಿಸಬೇಕೆಂದು ಬಹಳವಾಗಿ ಪ್ರಾರ್ಥಿಸಿದರಂತಲೂ, ಹಿಂದೆ ಮಾಲೂರಲ್ಲಿದ್ದ ತಾಲ್ಲೂಕು ಕಚ್ಚೇರಿಯನ್ನು ಯಥಾಪ್ರಕಾರ ಬವರಿಂಗಪೇಟೆಯಿಂದ ಮಾಲೂರಿಗೆವರ್ಗ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟ ಅಂಶವನ್ನು ಮ॥ ರಿಕ್ಕೆಟ್ಸ್ಯವರು ವಿವರವಾಗಿ ರೆಸಿಡೆಂಟರಿಗೆ ತಿಳಿಸಲು, ಅದಕ್ಕೆ ಅವರು, ಈ ವಿಷಯವು ತಮಗೆ ಸಂಬಂಧಿಸಿದ್ದಲ್ಲವಾದ್ದರಿಂದ ಇದನ್ನು ದಿವಾನರವರಿಗೆ ತಿಳಿಸಬೇಕಲ್ಲದೆ, ತಾವು ಹೆಡ್ಕ್ವಾರ್ಟರಿಗೆ ಹೋದಮೇಲೆ ಸದರೀ ವಿಷಯವನ್ನು ಕುರಿತು ಜನಗಳು ತಮಗೆ ಅರ್ಜಿ ಬರೆದುಕೊಂಡರೆ, ಅದರಮೇಲೆ ತಾವು ಮೈಸೂರು ಸರ್ಕಾರಕ್ಕೆ ಸಿಫಾರಸ್ಸು ಮಾಡುವದಾಗಿಹೇಳಿ, ಬಂದವರನ್ನು ಸಮಾಧಾನ ಪೂರ್ವಕ ಕಳುಹಿಸಿದರುತೆಯೂ ತಿಳಿಯಲಾದೆವು. ಸಾಬಕ್ ದಿವಾನ್ ಮ॥ ರಂಗಾಚಾರ್ಯರವರು ಸದರೀ ತಾಲ್ಲೂಕನ್ನು ಒಡೆದು ಅಲ್ಲಿ ಯೊಬ್ಬ ಡೆಪ್ಯುಟಿ ಅಮಲ್ದಾರ್ ಕಚ್ಚೇರಿಯನ್ನೇರ್ಪಡಿಸಿ, ಅವರಿಗೆ ಖಜಾನೆ ಸಂಬಂಧವಿಲ್ಲದಂತೆ ಮಾಡಿ, ಕಂದಾಯದಬಾಬತು ಒಂದು ರೂಪಾಯಿಯನ್ನಾದರೂ ಕೋಲಾರಿಗೆ ತೆಗದುಕೊಂಡು ಹೋಗುವಷ್ಟು ನಿರ್ಬಂಧವನ್ನು ಜನಗಳಿಗೆ ಪ್ರಾಪ್ತಮಾಡಿದ ಅಂಶವು ಅವರ ಹೃದಯಗಳಲ್ಲಿ ನೂತನ ವಾಗಿರುವದೆಂಬದಕ್ಕೆ ಮೇಲೆಕಂಡ ಅಂಶವೇ ಸಾಕಾದ ದೃಷ್ಟಾಂತವಾಗಿರುತಿದೆ ಮ॥ರಂಗಾಚಾರ್ಯರವರು ಜೀವಿಸಿದ್ದಕಾಲದಲ್ಲಿಯೇ ಸದರೀ ತಾಲ್ಲೂಕು ವರ್ತಕರು ಮುಂತಾದ ಕೆಲವರು ದೊಡ್ಡ ಮನುಷ್ಯರು ತಾಲ್ಲೂಕ್ ಕಚ್ಚೇರಿಯನ್ನು ವರ್ಗ ಮಾಡಿದ್ದರಿಂದ ವ್ಯಾಪಾರಕ್ಕೆವುಂಟಾದ ಹ್ರಾಸವನ್ನೂ ಪ್ರಜೆಗಳಿಗೆ ವುಂಟಾದ ಅನಾವಶ್ಯಕಶ್ರಮವನ್ನೂ ರೂಬರೂ ತಿಳಿಸಿ ದಿವಾನರಮೂಲಕ ಯಾವದಾದರೊಂದುಬಗೆ ಪ್ರತಿಕ್ರಿಯೆಯಂ ಮಾಡಿಸಿಕೊಳ್ಳಬೇಕೆಂಬ ಚಾಪಲ್ಯದೊಡನೆ ಇಲ್ಲಿಗೆಬಂದು ಒಂದೆರಡುವಾರಗಳತನಕ ಕಾದಿದ್ದಾಗ್ಯೂ ಕಡೆಗೆ ಅವರಿಗೆ ದಿವಾನರ ಸಂದರ್ಶನವೆಂಬದು ಮನಸ್ಸಿನಿಂದ ಸಹ ಸ್ಮರಿಸಕೂಡದ್ದಾಗಿ ಏರ್ಪಟ್ಟಿತು. ಕಡೆಗೆ ವಿಶೇಷ ಸಾಹಸದೊಡನೆ ಅವರು ದಿವಾನರ ಬಂಗ್ಲೇಗೆ ಭೇಟಿಯಬಗ್ಗೆ ಹೋದಾಗ ಅವರಿಗೆ ಅಲ್ಲಿನ ಪ್ರವೇಶಸಹ ದೊರೆಯದೆಹೋಯಿತು ತರುವಾಯ ಇದರಪ್ರಸ್ತಾವವನ್ನೇ ಜನಗಳು ಅತ್ಯಂತಿಕವಾಗಿಬಿಟ್ಟರು. ಆದಾಗ್ಯೂ ಈಗ್ಯೆ ಮೂರು ವರುಷಗಳಿಂದ ಸದರೀಜನಗಳು ಅನುಭವಿಸುವಶ್ರಮವುಅವರಂ ಸುಮ್ಮನಿರಗೊಳಿಸಲಾರದಾಗಿ ಈಗ ಬ್ರಿಟಿಷ್ ರೆಸಿಡೆಂಟರವರಿಗೆ ತಿಳಿಸಿದಂತೆ ಕಾಣುತಿದೆ. ಯದ್ಯಪಿ ತಾಲ್ಲೂಕು ಹೆಡ್ಕ್ವಾರ್ಟರು ದೂರಪ್ರದೇಶದಲ್ಲಿರುವದರಿಂದಲೂ, ಕಂದಾಯದಹಣಕ್ಕೆ ಡೆಪ್ಯುಟಿಅಮಲ್ದಾರರು ಸಂಬಂಧವಿಲ್ಲದವರಾಗಿರುವದರಿಂದಲೂ, ಸರ್ಕಾರ್ ಇರಸಾಲ್ ಸರ್ಕಾರದವರ ಪಾಲಾದರೂ ಆಗಬಹುದು. ಕದಾಚಿತ್ ಕಳ್ಳರಪಾಲಾದರೂ ಆಗಬಹು

ದು. ಇದಲ್ಲದೆ ಆಗಾಗ್ಗೆ ಸ್ವಲ್ಪ ಕೆಲಸಗಳಿಗೆ ಲ್ಲ ಬಹುದೂರ ಹೋಗಬೇಕಾಗುವದು ವ್ಯರ್ಥಶ್ರಮವಲ್ಲದೆ ಬೇರಿಲ್ಲವು. ಈ ವಿಷಯವು ಈಗ್ಯೆ ಎರಡುಮೂರವರುಷಗಳಿಂದ ಊರ್ಜಿತವಾಗಿ ನಡೆದು ಬಂದದರಿಂದ, ಇದು ಮುಂದೆ ಹ್ಯಾಗೆ ಬದಲಾಯಿಸಲ್ಪಟ್ಟ ಜನಗಳಕೋರಿಕೆ ಈಡೇರುವದೋ ನಾವರಿಯೆವು. ಆದರೆ ದಿವಾನರವರು ಪ್ರಸಕ್ತ ವಿಷಯಕ್ಕೆ ನಿಗಾಕೊಟ್ಟು ಪೂರ್ವಪದ್ಧತಿಯನ್ನು ನೆಲಗೊಳಿಸಿದರೆ ಬಹಳ ಚೆನ್ನಾಗಿರುವದು

LOCAL AND PROVINCIAL NEWS
ಒಳದೇಶಮತ್ತುತಾಲ್ಲೂಕಿನವೃತ್ತಾಂತಗಳು

———— ೦ ————

Anche offices.—ದಿವಾನರವರ ಹುಕುಂ ಅನುಸರಿಸಿ ಈಕೆಳಗೆಕಂಡ ಸ್ಥಳಗಳೊಳಗೆಯೋ ಬ್ರಾಂಚ್ ಅಂಚೆ ಆಫೀಸುಗಳು ಸ್ಥಾಪಿಸಲ್ಪಟ್ಟಿರುವಂತೆ ತಿಳಿಯಬರುತಿದೆ ತುರುವೇಕೆರೆತಾ॥, ಹುಲಿಯೂರು, ತುಮಕೂರು ತಾ॥, ಹೊನ್ನುಡಿಕೆ, ಪೂರತಗೆರೆ, ಕೋಲಾಳ

An offer.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ನಿವಾಸಿಯಾದ ಒಬ್ಬ ನೇಟಿವ್ ದೊಡ್ಡಮನುಷ್ಯನು ಯಾರಾದರೊಬ್ಬ ಹಿಂದುವು ಇದರಡಿ ಕಂಡ ವಿಷಯವುಕುರಿತು ಇಂಗ್ಲೀಷ್ ಬಾಷೆಯಲ್ಲಿ ಉತ್ತಮವಾದ ಒಂದು ಉಪನ್ಯಾಸವು ಬರೆದರೆ, ಅಂತವರಿಗೆ, ಪ್ರತಿಸ್ತುರೂಪವಾಗಿ ಒಂದು ಸ್ವರ್ಣಮುದ್ರೆಯು ಕೊಡುವಂತೆ ವಾಗ್ದಾನಮಾಡಿ ಪ್ರಕಟಿಸಿದ್ದಾರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ ಸದರೀ ವಿಷಯವ್ಯಾವದೆಂದರೆ,—ನೇಟಿವ್‌ಗಳು ಸ್ವದೇಶ ಪಾಲನಾರ್ಹರಾಗಿದಾರೆಯೆ; ಅವರು ಅನರ್ಹರಾದಲ್ಲಿ ಅವರು ಸಮರ್ಥರನ್ನಾಗಿ ಮಾಡುವದಕ್ಕೆ ಯಾವ ಕ್ರಮಗಳನ್ನನುಸರಿಸಬೇಕು, ಎಂಬದು, ವಿಷಯ ಗೌರವವನ್ನೂ ಬಹುಮಂದಿನೇಟಿವ್‌ಗಳ ಕ್ಲಿಷ್ಟತರವಾದ ಇಂಗ್ಲೀಷುಬಾಷಾಕೌಶಲ್ಯವನ್ನೂ ಯೋಚಿಸಿದರೆ ಇದಕ್ಕೆ ಪ್ರೋತ್ಸಾಹಪೋಟಿಯಾಗಿ ಬಹು ಮಂದಿ ಬರಬಹುದೆಂದು ತೋರುತಿದೆ

Assistant to the Resident.—ಇಲ್ಲಿನ ಅಸಿಸ್ಟೆಂಟ್ ರೆಸಿಡೆಂಟರಾದ ಮೆ॥ ಮಾರ್ಟಿನ್‌ಡೇಲ್ ಯವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಆಕ್ಟಿಂಗ್ ತರೀಕಾಗಿ ಅವರ ಕೆಲಸವನ್ನು ನೋಡತಕ್ಕಬಗ್ಯೆ ಒಂದನೇಕ್ಲಾಸ್ ಪೊಲಿಟಿಕಲ್ ಏಜಂಟರಾಗಿಯೂ, ಹಿಂದೆ ಹೈದರಾಬಾದಿನಲ್ಲಿನ ಬ್ರಿಟಿಷ್ ರೆಸಿಡೆಂಟರಿಗೆ ೧ನೇ ಅಸಿಸ್ಟೆಂಟರಾಗಿ ಕೆಲಸ ನೋಡಿದವನಾಗಿಯೂ ಯಿರುವ ಮೇಜರ್ ವಿಲಿಯಂ ಪೋರ್ಟರ್ ನ್ಯಾಯವೆಯೆಂಬುವರು ನೇಮಕರ ಮಾಡಲ್ಪಡುವರೆಂದು ತಿಳಿಯಬರುತಿದೆ ನಾವು ಕೇಳುವವಲ್ಲಿ ಈ ದೊಡ್ಡಮನುಷ್ಯರು ಬೆಂಗಾಲ್ ಸಿವಿಲ್‌ಸರ್‌ವಿಸ್ಸಿಗೆ ಸೇರಿದವರೆಂದು ತಿಳಿಯಬರುವದರಿಂದ ಅದೊಂದುವೇಳೆ ನಿಜವಾಗಿರುವದಹಕ್ಕೆ ಅವರು ಪ್ರಾಯಶಃ ಬಹಳ ಉಪಶಾಂತರಾಗಿಯೂ ಪ್ರಜಾನುರಾಗ ಪ್ರವೃತ್ತರಾಗಿಯೂ ಇರಬಹುದೆಂದು ನಂಬುತ್ತೇವೆ

Charity.—ಈನ್ವೂರು ಲಷ್ಕರ್‌ನಲ್ಲಿ ಪ್ರಸಿದ್ಧ ಕೋಟೀಶ್ವರರಾಗಿರುವ ಮುಂಬೈ ಸಾಹುಕಾರರಾದ ಬನ್ಸಿಲಾಲ್ ಅಬಿಯರ್ ಚಂದ್ ರಾಯಬಹದೂರವರು, ಆಗಿಂದಾಗ್ಯೆ ಈ ಪೇಟೆ ಮತ್ತು ಲಷ್ಕರಿಗೆಸೇರಿದ ಹಲಸೂರುಪ್ರಾಂತದ ತ್ರಿಮತಸ್ಥರಾದ ಬ್ರಾಹ್ಮಣರಿಗೆ ಸಂತರ್ಪಣೆಮಾಡಿಸುವದು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದ ಅಂಶವಾಗಿರುತಿದೆಯಷ್ಟೆ. ಸದರೀ ಸಾಹುಕಾರರು, ಬರುವ ಬೃಹಸ್ಪತಿವಾರದದಿನ ಸ್ಮಾರ್ತ ಸಾಮಾನ್ಯಕ್ಕೆ ಹಲಸೂರು ಸೋಮೇಶ್ವರ ದೇವಸ್ಥಾನದಲ್ಲೂ, ಶ್ರೀವೈಷ್ಣವರಿಗೆ ಇಲ್ಲಿನ ತುಲಸೀತೋಟದಲ್ಲೂ ಮಾಧ್ವರಿಗೆ ಇಲ್ಲಿನ ಪೂರ್ಣಯ್ಯನವರ ಸತ್ರದಲ್ಲೂ ಸಂತರ್ಪಣೆ ಮಾಡಿಸಬೇಕೆಂದು ಯೋಚಿಸಿ ಅದಕ್ಕೆ ಬೇಕಾದ ಸಂವಿಧಾನಗಳನ್ನು ತಕ್ಕಜನಗಳಮೂಲಕ ನಡೆಸುತಲಿರುವಂತೆ ಕೇಳುವದಕ್ಕೆ ಬಹಳ ಸಂತೋಷಿಸುತ್ತೇವೆ. ಹಿಂದೆ ಹಲಸೂರಲ್ಲಿ ಇದೇಸಾಹುಕಾರರಿಂದ ನಡೆಸಲ್ಪಟ್ಟ ಸಂತರ್ಪಣೆಯಲ್ಲಿ ಮೇಲ್ವಿಚಾರಣಕರ್ತರಾಗಿದ್ದವರ ಅಜಾಗರೂಕತೆಯಿಂದಲೂ ದಾಂಧಳೆಯಿಂದಲೂ ನಡೆದ ಅವ್ಯವಸ್ಥೆಗಳಿಗೆ ಈಸಲ ಸಂತರಾಂ ಅವಕಾಶವಿಲ್ಲದೆ ಇರಬೇಕೆಂದು ಈಸಂದರ್ಭದಲ್ಲಿ ಸೂಚಿಸಬೇಕಾಗಿದೆ

Arrangements.—ಮೈಸೂರು ಗವರ್ನಮೆಂಟ್ ಪ್ರೆಸ್ಸಿನಲ್ಲಿ ಹೆಡ್ ಯೆಗ್ಸಾಮಿನರಾಗಿದ್ದ ಮೆ॥ ಬೇಲಿ ಶ್ರೀನಿವಾಸರಾಯರವರಿಗೆ ಹಂಗಾಮಿಯಾಗಿ ಕೋಲಾರ್ ಡಿಸ್ಟ್ರಿಕ್ಟು ಹೆಡ್ ರೈಟರ್ ಕೆಲಸ ಮಾಡುತೆ ಗತವಾರದಲ್ಲಿ ತಿಳಿಸಿದ್ದೆವಷ್ಟೆ ಸದರೀ ಹೆಡ್ ಎಗ್ಸಾಮಿನರ್ ಕೆಲಸಕ್ಕೆ ಗೊತ್ತಾಗಿದ್ದ ೩೦ ರೂಪಾಯಿಗಳೂ, ಸದರೀಯಿಲಾಖೆಯಲ್ಲಿ ಇರುವ ಸ್ಕೇಲ್ ೧—೩ ರೂಪಾಯಿಗಳ ಪ್ರಕಾರ ಹೆಚ್ಚಾಗುತ್ತಲೂ ಇದರಿಂದ ಫಲಾನೆ ಕೆಲಸಕ್ಕೆ ಇಷ್ಟರತಲವ ಇರಬೇಕೆಂಬ ಹಿಂದಿನ ನಿಯಮವು ತಪ್ಪಿಹೋದಂತೆಯೂ, ಫಲಾನೆ ಯವರು ಫಲಾನೆ ಕೆಲಸಕ್ಕೆ ಅರ್ಹರಾದವರಿಂದ ಅವರು ಅದನ್ನು ವಿಚಾರಿಸೋಣವನ್ನು ಮಾಡಕೂಡದೆಂಬ ನಿಯಮ ವಿಲ್ಲವೆ ಎಂದೂಯೂ, ತಿಳಿಯಬರುತಿದೆ ಈಗಿನ ಏರ್ಪಾಡಿನಲ್ಲಿ ರೀಡರುಟ್ರಾನ್ಸ್ಲೇಟರಾಗಿಯೂ, ಟ್ರಾನ್ಸ್ಲೇಟರು ಪ್ರೂಫ್ ಯೆಗ್ಸಾಮಿನರಾಗಿಯೂ, ಕಂಪಾಜಿಟರ್ ರೀಡರಾಗಿಯೂ ನೇಮಕರಾದದ್ದು ಯಂತವರಿಗೂ ಆಶ್ಚರ್ಯವನ್ನುಂಟುಮಾಡದೆ ಇರಲಾರದು ವಿಚಾರಣಾಧಿಕಾರಿಯ ಸೌಲಭ್ಯವದಿಕ ವಾದರೆ ಅಲ್ಲಿನ ಆವಳತರು ಅಧಿಕಾರಿಯವಾಗುವದಾಶ್ಚರ್ಯವಲ್ಲವು ಈಸಂದರ್ಭದಲ್ಲಿ ಲವವವ ಉಪೇಕ್ಷೆಯೂ, ಸಾರ್ವಿಸ್ಸು ಸ್ಯುಬರ್ಡಿನೇಟಿಂದ ಎರವರಿಗೆ ತಿಳಿಸಲ್ಪಟ್ಟಂತೆ ಕಾಣುತಿದೆಯೇಹೊರತು ಹೆಡ ಎಗ್ಸಾಮಿನರ್ ಏನಿಸಿ ಕೊಳ್ಳುವವನಿಗೆ ಯಿರುವ ಶ್ರಮವನ್ನೂ, ಜವಾಬ್ದಾರಿಯನ್ನೂ ಜಾಗರೂಕತೆಯನ್ನೂ, ಇವುಗಳ ಲಬಾವದಿಂದುಂಟಾಗುವ ಅನರ್ಥಗಳನ್ನೂ ಅವರೊವನ ಯಾರೂ ಪ್ರಸ್ತಾಪಿಸಿದಂತೆ ತೋರಲಿಲ್ಲವು.

NEWS LETTERS
SEASON AND PROSPECTS
ಡಿಸ್ಟ್ರಿಕ್ಟ್ ಬಾತ್‌ಮಿಪ್ರೋಗ್ರೆಸ್

ಪಾವುಗಡ—ತಾಲ್ಲೂಕು ಸಮ್ಮತಿ ನಿಡುಗಲ್ಲ ರಾಚೆರ್ಲ ವಗ್ಯೆರೆ ಯೇಳು ಹೋಬಳಿಗಳಲ್ಲಿ ಮಳೆ ಆಯಿತು. ಧಾರಣೆಗಳು ಯೆಕರೀತಿಯಾಗಿವೆ

ಚೆನ್ನಗಿರಿ—ಕಳೆದತಿಂಗಳ ೨೬—೨೭—೨೮ನೇ ತಾರೀಖುಗಳಲ್ಲಿ ಬಲವಾದ ಮಳೆಆಗಿ ಕ್ಷಾಮದ ಬೀತಿ ತಪ್ಪಿತು.

ಸಾಗರ—ಕಳೆದತಿಂಗಳ ೨೬ ರ ಲಾಗಾಯತು ಮಹಾನೋಮಿಅಮಾವಾಸ್ಯೆ ರ ವರಿವಿಗೆ ತಾಲ್ಲೂಕು ಯೆಲ್ಲಕಡೆಯಲ್ಲೂ ಒಳ್ಳೆಯಮಳೆಆಗಿ ಪೈರುಗಳು ಚೆನ್ನಾಗಿರುತಿವೆ

ಪರಿಪಿದ—ಕಳೆದತಿಂಗಳ ೨೬ರ ಲಾಗಾಯತು ೩೦ರ ವರಿಗೆ ಸಮೃದ್ಧಿಯಾಗಿ ಮಳೆಬಿತ್ತು ಧಾರಣೆಗಳು ಮಾತ್ರ ಏಕರೂಪವಾಗಿವ

ಹುಳಿಯಾರ—ಕಳೆದತಿಂಗಳ ೩೦ನೇ ತಾರೀಖಿನಲ್ಲಿ ಈ ತಾಲ್ಲೂಕು ಯಲ್ಲಕಡೆಯಲ್ಲೂ ಬಲವಾದಮಳೆ ಆಗಿ ಕೆರೆಗಳೆಲ್ಲವು ತುಂಬಿದವು ಹುಳಿಯಾರ ಕೆರೆಗೆಮಾತ್ರ ಮೂರುತಿಂಗಳನೀರುಬಂದಿದೆ

ಹರಿಹರಪುರ—ಕಳೆದತಿಂಗಳ ೨೫ನೇ ತಾರೀಖಿನಲ್ಲಿ ಇದ್ದಮಟ್ಟಿಗೆ ಇಲ್ಲಿ ಮಳೆಯಾಗಿ ಜನದನಗಳಿಗೆ ಆರೋಗ್ಯವುಂಟಾಗಿದೆ ಧಾರಣೆವಾಸಿ ಸುಧಾರಣೆವಾಗಿದೆ.

ಪಾವಗಡ—ಕಳೆದತಿಂಗಳ ೨೬ನೇ ತಾರೀಖು ಶನಿವಾರರಾತ್ರಿ ಒಂದುಹದಮಳೆಬಂದು. ಇತರ ಗ್ರಾಮಗಳಲ್ಲಿ ವಿಶೇಷವಿಲ್ಲವು ಧಾರಣೆವಾಸಿ ಪೂರ್ವದಂತೆಯೆಯಿದೆ. ಜನಾರೋಗ್ಯವುಂಟು

ಹಿರಿಯೂರು—ಮಾಹೆ, ಮಡಕೂರು ೨ನೇ ತಾರೀಖಿನ ರಾತ್ರಿ ೧೦ ಘಂಟೆಗೆ ಸರಿಯಾಗಿ ಇಲ್ಲಿ ಒಂದು ಹದ ಮಳೆಯಾಯಿತು. ಮೊನ್ನೆಯ ದಿನ ಅಕಲಾಫೆ ಗ್ರಾಮಗಳಲ್ಲಿ ಸಹ ಸರಾಸರಿ ಒಂದು ಹದಕ್ಕೆ ಕಡಮೆ ಇಲ್ಲದಂತೆ ಮಳೆಯಾಯಿತು.

ಸೊರಬ—ಕಳೆದ ತಿಂಗಳ ೨೮ರ ಲಾಗಾಯತು ೨೮ರ ವರಿವಿಗೆ ಯೆಲ್ಲಕಡೆಗಳಲ್ಲೂ ಸಮೃದ್ಧಿಯಾಗಿ ಮಳೆಬಿದ್ದು ಕೆರೆಕುಂಟೆಗಳಿಗೆ ನೀರುಬಂತು. ಅಕ್ಕಿ ರೂ॥ ೧ಕ್ಕೆ ೧೮—೧೫, ರಾಗಿ ೩೮ ೩೫—ಹುರಳಿ ೧೫—೧೬ ಈಮೇರೆ ಯಿದೆ

ತುಮಕೂರು—ಕಳೆದತಿಂಗಳ ೨೩ರ ಲಾಗಾಯತು ಈ ತಿಂಗಳ ೩ನೇ ತಾರೀಖು ವರಿವಿಗೆ ಪೂರಾ ಹದಗಟ್ಟಲೆ ಮಳೆಯಾಗಿ ರಾಗಿಪೈರಿಗೆಬಹಳ ಅನುಕೂಲ್ಯವುಂಟಾಯಿತು. ಮುಂದೆಯೂ ಮಳೆಯಾದರೆ ಬತ್ತದಪೈರುವೈಕಿ ಉಳಿದಿರುವದು ಮಟ್ಟಿಗೆ ಚೆನ್ನಾಗಿ ಆಗಬಹುದು ಧಾರಣೆ ಏಕರೀತಿಯಾಗಿದೆ

ತರೀಕೆರೆ—ಕಳೆದತಿಂಗಳ ೨೬ರ ಲಾಗಾಯತು ೩೦ರವರಿವಿಗೆತಾಲ್ಲೂಕಾಮುಳೆ ಹದಗಟ್ಟಲೆ ಮಳೆಯಾಗಿ ರಾಗಿಪೈರು ಉತ್ತಮಸ್ಥಿತಿಗೂ, ಭತ್ತದಪೈರುಮಧ್ಯಮಸ್ಥಿತಿಗೂಬಂದಿದೆ ಕೆರೆಗಳಿಗೆ ೬ ರ ತಿಂಗಳ ನೀರುಬಂದಿದೆ. ಈಹದಕ್ಕೇನೆ ರಾಗೀಪೈರು ಪೂರೈಸುವದೆಂದು ಹೇಳುತ್ತಾರೆ.

ಹೊಳಲುಕೆರೆ—ಕಳೆದ ೨೩ ೨೮—೨೯, ಈ ತಾರೀಖ್‌ಗಳಲ್ಲಿ ಮಳೆಆಗಿ ದೊಡ್ಡ ಕೆರೆಗಳು ಅರ್ಧ ಮುಕ್ಕಾಲುವಾಸಿ ತುಂಬಿ ಸಣ್ಣ ಕೆರೆಗಳು ಕೋಡಿ ಹೋಗುತಿವೆ. ರಾಗಿ ಅದಾವಸಲ್ ಆಗಬಹುದು. ಧಾರಣೆಗಳು ಒಂದೇವಿಧವಾಗಿವೆ ಮಾಳ್ಯ, ಹೊಸದುರ್ಗ, ರಾಂಗಿರಿ, ಜಕ್ಕನಾಯಕನದುರ್ಗ, ಈಪ್ರಾಂತಗಳಲ್ಲಿ ಮೇಲಿನಂತೆಯೇ ಒಳ್ಳೆಯ ಮಳೆಯಾಯಿತು

ಚಿತ್ರದುರ್ಗ—ಕಳೆದತಿಂಗಳ ೨೫ನೇ ತಾರೀಖ್ ಮೊದಲು ಇಲ್ಲಿ ಪ್ರಾತಃಕಾಲದೊಳು ಬಿಸಿಲು ಕಾಯುತ, ರಾತ್ರಿವೇಳೆ ಮಳೆ ಬರುತಲಿರುವದರಿಂದ ಜನಗಳಿಗೆ ಅನಾನುಕೂಲವಿಲ್ಲದಿಯೆ, ಕೆರೆಕುಂಟೆಗಳೆಲ್ಲವೂ ಅರ್ಧ ಮುಕ್ಕಾಲುವಾಸಿ ತುಂಬಿರುತಿವೆ ಧಾರಣೆವಾಸಿ ಏಕರೂಪವಾಗಿದೆ

ತೀರ್ಥಹಳ್ಳಿ—ಈಗ್ಯೆ ಹದಿನೈದುದಿನಗಳಿಂದ ಇಲ್ಲಿ ಸುತರಾಂ ಮಳೆಯಿಲ್ಲವು. ಈಗ ಯಥೋಚಿತ ಮಳೆಬಂದರೆ ಪೈರುಗಳು ಬೆಳೆಯತ್ತಬಹುದು ಇಲ್ಲವಾದರೆ ಅವು ಕೆಡುವದರೊಳಗೇನೂ ಸಂದೇಹವಿಲ್ಲವು ದನಗಳಿಗೆ ಸ್ವಲ್ಪನೀರೂ ಮೇವೂ ದೊರೆಯುತಿವೆ

ಹರಿಹರ—ಈಗ್ಯೆ ಮೂರುನಾಲ್ಕುದಿವಸಗಳ ಮೊದಲು ತಾಲ್ಲೂಕಾಮುಳೆ ಮಳೆ ಆಗುತಲಿರುವಂತೆ ತಿಳಿಯಬರುತಿವೆ. ಹರಿಹರ ಕಸಬೆಯಲ್ಲಿ ನಿನ್ನೆಯದಿನ ಸ್ವಲ್ಪ ಮಳೆಯಾಯಿತು ಧಾರಣೆವಾಸಿ ಚೆತಾವಾಗಿವೆ, ದನ ಕರುಗಳಿಗೆ ಜಲತೃಣ ಪೌಷ್ಕಲ್ಯ ವುಂಟಾಗಿದೆ.

ಮೂಡಿಗೆರೆ,—ಈ ತಾಲ್ಲೂಕಿನಲ್ಲಿ ಸರ್ವತ್ರ ಸ್ವಲ್ಪಮಟ್ಟಿಗೆ ಮಳೆಯಾಗಿ ಸಧ್ಯಕ್ಕೆ ಕುಡಿಯಲಿಕ್ಕೆ ನೀರು ಬಂದಿರುತಿದೆ ಧಾರಣಿವಾಸಿ ಏಕರೀತಿಯಾಗಿವೆ, ಆವಾಪ ಗ್ರಾಮಗಳಲ್ಲಿರುವ ದನಕರುಗಳಿಗೆ ರೋಗ ರಗತಿರುವದರಿಂದ ತಾಲ್ಲದೆಗಳಿಗೆ ಸುಖವಿಲ್ಲವು.

ಶಿರಾ—ಕಳೆದತಿಂಗಳ ೧೫—೨೦—೨೧ರಲ್ಲು ಒಳ್ಳೆಯಮಳೆಯಾಗಿ ಈಪ್ರಾಂತದ ಕೆರೆಕುಂಟೆಗಳಿಗೆ ೨—೩ ತಿಂಗಳ ನೀರು ಬಂದಿರುತಿವೆ. ಚಳ್ಳಕೆರೆ ಪ್ರಾಂತದಲ್ಲಿ ೨೫—೨೬ನೇ ತಾರೀಖ್ ಗಳೊಳು ಒಳ್ಳೆಯಮಳೆಯಾಗಿ ಕೆಲವು ಕೆರೆಕುಂಟೆಗಳಿಗೆ ಒಂದೆರಡುತಿಂಗಳ ನೀರು ಬಂದಿರುತಿದೆ.

ದಾವಣಗೆರೆ, ಮಲೇಬೆನ್ನೂರು, ಹರಳಹಳ್ಳಿ, ಗೊರವಾತ, ಕಾಬನೂರು, ಆನಗೋಡು, ನರಿಗನಹಳ್ಳಿ ವಗ್ಯೆರೇ ಪ್ರಾಂತಗಳಲ್ಲಿ ಪೂರಾ ಮಳೆ ಆಯಿತು. ದಾವಣಗೆರೆ, ಹರಿಹರ, ಅಣಜಿ, ಬಿಳಿಚೋಡು ವಗ್ಯೆರೇ ಆಸಪಾಸು ೨೦ರ ಮೈಲ್‌ಗಳ ಫಾಸಲೆಯ ವರವಿಗೆ ಪೂರಾ ಮಳೆಯಾದಂತೆ ವರ್ತಮಾನ ಬಂದಿದ ಸಂತೆಗಳಲ್ಲಿ ಧಾರಣೆಗಳು ಕಮ್ಮಿ ಆದವು.

ಮೂಡುಗೆರೆ—ಕಳೆದತಿಂಗಳ ೨೬ರ ಲಾಗಾಯತು ೩೦ರವರಿವಿಗೆ ಈ ತಾಲ್ಲೂಕಿನಲ್ಲಿ ಸುಮಾರು ಸೋನೇ ಮಳೆ ಆಯಿತು. ಅಕ್ಕಿ ರೂ॥ ೧ಕ್ಕೆ ೧೮, ರಾಗಿ ೧೮, ಹುರಳಿ ೧೬, ತೊಗರಿ ೮, ಕಡಲೆ, ಉದ್ದು, ಹೆಸರು, ಅವರೆ, ಇವು ರೂ॥ ೧ಕ್ಕೆ ೧೧ ಶೇರಿನಂತೆ ಧಾರಣೆಯಿದೆ ಯಾಲಕ್ಕಿ ಮಣ ೧ಕ್ಕೆ ೩೦ ರೂಪಾಯಿ, ಕಾಫಿ ಮಣ ೬ ರೂಪಾಯಿ ಅಡಿಕೆ ೮ ರೂಪಾಯಿ ಈ ಮೇರೆಯಿದೆ

ಚಳ್ಳಕೆರೆ—ಈ ಕಸಬೆಯಲ್ಲಿ ೨೫ನೇ ತಾರೀಖ್ ಲಾಗಾಯತು ೩೦ರ ವರಿವಿಗೆ ಪ್ರತಿದಿನವೂ ಅರ್ಧ, ಮುಕ್ಕಾಲು, ಒಂದುಹದ, ಈಮೇರೆ ಮಳೆಆಗಿ ಕೆರೆಕುಂಟೆಗಳಿಗೆ ಸ್ವಲ್ಪ ನೀರು ಬಂದಿರುತವೆ. ಜೋಳ ರೂಪಾಯಿ ೧ಕ್ಕೆ ೨೮ರಿಂದ ೨೩ ಶೇರಿಗೆ ಹೆಚ್ಚಿತು, ಅಕ್ಕಿ ೧೧—೧೨ಶೇರಿನಂತೆ ಮಾರುತಿದೆ. ಮೊಳಕಾಲ್ಮುರುವಿನಲ್ಲಿ ತಕ್ಕಮಟ್ಟಿಗೆ ಮಳೆಆಗಿ ಕ್ಷಾಮಭಯ ತಪ್ಪಿತು.

ಸಾಗರ—ಈ ತಾಲ್ಲೂಕಿನಲ್ಲಿ ಸರ್ವತ್ರ ಪೈರುಗಳು ಚೆನ್ನಾಗಿವೆ. ದನಗಳಿಗೆ ಹುಲ್ಲೂ ನೀರೂ ಸಮೃದ್ಧಿಯಾಗಿ ದೊರೆಯುವದರಿಂದ ಅವು ಬಹಳ ಚೆನ್ನಾಗಿವೆ ಈಗ್ಯೆ ಹದಿನೈದು ದಿನಗಳಮೊದಲು ಮಳೆಯಿಲ್ಲದೆಯಿತ್ತು. ಅಕ್ಕಿ ರೂ॥ ೧ಕ್ಕೆ ೧೦ ಶೇರುಪ್ರಕಾರವೂ ರಾಗಿ ೨೦ ಶೇರುಗಳಂತೆಯೂ ಮಾರಲ್ಪಡುತಿವೆ.

ಚಿಕ್ಕಮಗಳೂರು—ಕಳೆದತಿಂಗಳ ೨೫ನೇ ತಾರೀಖು ಶುಕ್ರವಾರ ಸಾಯಂಕಾಲ ೪ ಘಂಟೆಯವೇಳೆಯಲ್ಲಿ ಮುಕ್ಕಾಲುಹದ ಮಳೆಯಾಯಿತಲ್ಲದೆ ಮರಳಿ ೭ ಘಂಟೆಯಮೊದಲು ೧೧ ಘಂಟೆಯತನಕ ಯೆಡೆಬಿಡದೆ ಪೂರಾ ಮಳೆಬಂತು. ಆದಾಗ್ಯೂ ಕೆರೆ ಕುಂಟೆಗಳಿಗೆ ಸ್ವಲ್ಪವೂನೀರು ಬರಲಿಲ್ಲವು, ಇಲ್ಲಿ ಧಾರಣೆವಾಸಿ ಒಂದೇವಿಧವಾಗಿ ಚೆತಾವಾಗಿರುತಿವೆ

ಜಂಕೇಶ್ವರ,—ಕಳೆದತಿಂಗಳ ೨೦ ರಲಾಗಾಯತು ೨೮ರ ವರಿವಿಗೆ ಶುದ್ಧಾಂಗ ಮಳೆಯಿಲ್ಲವು. ೨೫ನೇ ತಾರೀಖ್ ಸಾಯಂಕಾಲ ಯದೋಚಿತವಾಗಿ ಬಂದ ಮಳೆಯ ದೆಸೆಯಿಂದ ರಾಗೀಫಸಲಿಗೆ ಬಹಳ ಅನುಕೂಲವಾಯಿತು ಕೆಲವು ಗ್ರಾಮಗಳಲ್ಲಿ ಜಲವಸತಿಯು ಕಡಮೆಯಾಗಿ ಅದರಿಂದ ಜನಗಳಿಗೂ ಕಾಲ್ನಡೆಗಳಿಗೂ ತೊಂದರೆಯುಂಟಾಗಿದೆ.

ಆಯನೂರು—ಮಾಹೇಮಜಕೂರು ೨೬ನೇ ತಾರೀಖಿನಲ್ಲಿ ಈಪೂರಲ್ಲಿಯೂ ಇದಕ್ಕೆ ಸೇರಿದ ಗ್ರಾಮಾಂತರಗಳಲ್ಲಿಯೂ, ಸ್ವಲ್ಪ ಮಟ್ಟಿಗೆ ಮಳೆಯಾಯಿತು. ನವರಾತ್ರಿಯೊಳಗಾಗಿ ಇನ್ನೂ ಒಂದೆರಡಾವರ್ತಿ ಮಳೆಯಾದರೆ ಫಸಲಿನ ಸ್ಥಿತಿ ಚೆನ್ನಾಗಿರುವದು ದನಗಳಿಗೆ ಮೇವು ವಿಶೇಷವಾಗಿಲ್ಲವು. ಜಲವಸತಿಯು ಕಡಮೆಯಾಗಿದೆ, ರಾಗಿ ರೂಪಾಯಿ ೧ಕ್ಕೆ ೨೮ ಶೇರುಗಳಂತೆಯೂ ಅಕ್ಕಿ ೧೪—೧೫ ಶೇರುಗಳ ಪ್ರಕಾರವೂ ಮಾರಲ್ಪಡುತಿದೆ.

ಹುಳಿಯಾರ—ಕಳೆದತಿಂಗಳ ೨೫—೨೩ನೇ ತಾರೀಖ್‌ಗಳಲ್ಲಿ ಬಂದ ಯಥೋಚಿತ ಮಳೆಯಿಂದ ಕೆರೆ ಕುಂಟೆಗಳಿಗೆ ೨೦ ೨೫ ದಿನಗಳ ನೀರು ಬಂದಿರುತಿದೆ. ಇನ್ನೂ ಕೆಲವು ಕೆರೆಗಳಿಗೆ ಇದ್ಯಾಪಿ ಏನು ಬರಲಿಲ್ಲವು. ಇದುವರಿವಿಗೆ ಕೆಟ್ಟುಹೋದ ಪೈರುಗಳು ಹೋಗಲಾಗಿ ನಿಂತಿರುವ ಫಸಲ್‌ಗಳಾದರೂ ಮುಂದಿನ ಮಳೆಯಿಂದ ಅಭಿವೃದ್ಧಿಯಾದರೆ ಕಾಲುವಾಸಿ ಫಲವಾಗಬಹುದೆಂದು ತೋರುತಿದೆ. ಇಲ್ಲಿನ ಸ್ಥಿತಿಯನ್ನು ಖುದ್ದು ನೋಡಿ ತಿಳಿದುಕೊಳ್ಳುವಬಗ್ಯೆ ದಿವಾನರವರು ಡಿ॥ ಡೆಪ್ಯುಟಿ ಕಮಿಷನರೊಡನೆ ಹಿರಿಯೂರು ಮಾರ್ಗವಾಗಿ ಇಲ್ಲಿಗೆ ಬಂದಿದ್ದರು.

ಹಿರಿಯೂರು—ಕಳೆದತಿಂಗಳ ೨೮ನೇ ತಾರೀಖಿನಲ್ಲಿ ದಿವಾನರವರು ಸೀರಾದಿಂದ ಇಲ್ಲಿಗೆ ದಯಮಾಡಿದ್ದರು. ಈ ಡಿವಿಜನ್ನ ನಾಲ್ಕು ತಾಲ್ಲೂಕು ಅಮಲ್‌ದಾರರೂ ಇತರ ಕೆಲವು ಆಫಿಸರು ಸಹ ಮಾರಿ ಕಣಿವೆಗೆ ಹೋಗಿ ಅಲ್ಲಿರುವ ಕಣಿವೆ ಮಾರಮ್ಮ ಗುಡ್ಡ ವಗ್ಯೆರೆ ಕೆರೆಗಳನ್ನು ಕಟ್ಟಿಸುವದಕ್ಕಾಗಿ ಅಳತೆಮಾಡಿ ಬಂದಂತೆ ತಿಳಿಯಬರುತಿದೆ ದಿವಾನರವರು ೨೮ನೇ ತಾರೀಖ್ ಬೆಳಿಗ್ಯೆ ಮೂರು ಘಂಟೆಗೆ ಮಾರಿ ಕಣಿವೆಯಿಂದ ಹಿರಿಯೂರಿಗೆಬಂದು ಹುಳಿಯಾರಕ್ಕೆ ಹೊರಟುಹೋದರು. ಮೂರು ತಾ॥ ಅಮಲ್‌ದಾರರೂ ಒಬ್ಬ ಡೆಪ್ಯುಟೀ ಅಮಲ್‌ದಾರರು ಸಹ ರುಕ್ಸತ್ತು ಪಡೆದಂತೆ ತಿಳಿಯಬರುತಿದೆ. ೨೩ನೇ ತಾರೀಖ್ ಮೊದಲು ಪ್ರತಿನಿತ್ಯವೂ ಮಳೆ ಬೀಳುತಲಿದೆ.

ತರೀಕೆರೆ—ಈ ತಾಲ್ಲೂಕು ಪೈಕಿ ಲಕ್ಕವಳ್ಳೀ ಪ್ರಾಂತದ ಕೆರೆಗಳಿಗೆ ಯಥೋಚಿತ ನೀರು ಬಂದಿರುತಿದೆಯಲ್ಲದೆ ತೃಣಜಲ ಸಮೃದ್ಧಿಯುಂಟಾಗಿ ಆರೋಗ್ಯಕರವಾಗಿದೆ. ಪೈರುಗಳ ಸ್ಥಿತಿ ಉತ್ತಮವಾಗಿದೆ. ಜನಾರೋಗ್ಯಕ್ಕೆ ಕೊರತೆ ಇಲ್ಲವು ಈ ಪೂರಿಗೆ ಪೂರ್ವೋತ್ತರ ದಕ್ಷಿಣ ಪ್ರದೇಶಗಳಲ್ಲಿ ಮಳೆಯಿಲ್ಲದೆ ಪೈರುಗಳು ಮಧ್ಯಮಾಧಮ ಸ್ಥಿತಿಯಲ್ಲಿವೆಯಲ್ಲದೆ, ದನಗಳಿಗೆ ಮೇವು ದೊರೆಯುವದು ಪ್ರಯಾಸವಾಗಿದೆ. ಜಲದೌರ್ಲಭ್ಯವಧಿಕವಾಗಿದೆ. ಇಲ್ಲಿ ರಾಗಿ ರೂಪಾ

ಮು ೧ಕ್ಕೆ ೨೮ ಸೇರು, ಅಕ್ಕಿ ೧೨—೧೦೪ ಸೇರು ಪ್ರಕಾರ ಮಾರಲ್ಪಡುತಿವೆ.

ಶಿವಮೊಗ್ಗ—ಕಳೆದ ತಿಂಗಳ ೨೫—೨೬ನೇ ತಾರೀಖುಗಳಲ್ಲಿ ಒಂದುಹದ ಮಳೆಯಾಯಿತು, ಪರಂತು ಕೆರೆಕುಂಟೆಗಳಿಗೆ ನೀರು ಬರಲಿಲ್ಲವು. ತೀರ್ಥಹಳ್ಳಿ ಸಾಗರ ವಗೈರೆ ಸ್ಥಳಗಳಲ್ಲಿ ಮಳೆ ಸಮೃದ್ಧಿಯಾಗಿಬಿದ್ದು ಅಲ್ಲಿನ ಪೈರುಗಳು ಚೆನ್ನಾಗಿರುವುದಾಗಿ ತಿಳಿಯಬರುತಿದೆ. ಇನ್ನುಮುಂದೆ ಮಳೆ ಹಿಡಿದಿರುವದೆ ಹ್ಯಾಗೆ ಬಂದಲ್ಲಿ ರಾಗಿ ಅರ್ಧಬೆಳೆಯೂ, ಕೆಲವುಕಡೆ ರೆಲೀ ಅರ್ಧಫಲವೂ ಆಗಬಹುದು. ದನ ಕರುಗಳಿಗೆ ಯಥೋಚಿತ ಮೇವು ದೊರೆಯುತಲಿವೆ. ಇನ್ನುಮೇಲೆ ಮಳೆ ಬಂದರೆ ಬೇಕಾದಂತೆ ಹುಲ್ಲು ಬೆಳೆಬಹುದು. ಅಕ್ಕಿ ರೂಪಾಯಿ ೧ಕ್ಕೆ ೧೩—೧೩, ರಾಗಿ ೨೮—೨೬, ಹುರಳಿ ೨೦—೨೩, ಹೆಸರು ಕಾಳು ೧೩ಸೇರು, ತುಪ್ಪ ಮಣ ೧ಕ್ಕೆ ೧೨ರೂಪಾಯಿ, ಈ ಮೇರೆ ಬೆಲೆಯಾಗುತಿವೆ.

ಚನ್ನಪಟ್ಟಣ—ಕಳೆದ ತಿಂಗಳ ೨೫ನೇ ತಾರೀಖು ಶುಕ್ರವಾರದಿನ ಮುಳೂರು ಶ್ರೀ ಅಪ್ರಮೇಯಸ್ವಾಮಿಯವರಿಗೆ ಚಂದನಾಭಿಷೇಕವೂ ಮಾರನೇದಿನ ಕುಂಭಾಭಿಷೇಕವೂ, ಅದೇದಿನ ರಾತ್ರಿ ಶೇಷವಾಹನೋತ್ಸವವೂ ಅತಿ ವಿಜೃಂಭಣೆಯೊಡನೆ ನಡೆದವು. ದೇವರ ಉತ್ಸವವು ಗೋಪುರದ್ವಾರದೊಳು ಪ್ರವೇಶಿಸುವವರೊಳಗಾಗಿಯೇ ವರ್ಷಕ್ಕೆ ಪ್ರಾರಂಭವಾಗಿ ಯಿದಮ ಘುಂಟಿಯ ಕಾಲ ಯಿದ್ದವದ ಪ್ರಬಲ ವರ್ಷಬಿದ್ದು ಮರುದಿನ ಪ್ರಾತಃಕಾಲ ಇಲ್ಲಿನ ಕಣ್ವನದಿಯಲ್ಲಿ ಪೂರ್ಣಪ್ರವಾಹ ಹರಿಯಿತು. ಎಂದುಮೊದಲು ಈ ತಾರೀಖು ವರಿವಿಗೆ ಪ್ರತಿದಿನದಲ್ಲೂ ವರ್ಷ ಬರುತ ಕೆರೆ ಕುಂಟೆಗಳೆಲ್ಲ ಅಲ್ಪ ಮುಕ್ಕಾಲುವಾಸಿ ತುಂಬಿದವು. ರಾಗಿ ವಗೈರೆ ಫಸಲುಗಳು ಚೆನ್ನಾಗಿವೆ. ವರ್ಷಾಭಾವದಿಂದ ಹಾಳಾಗಿಬಿಟ್ಟ ಮೇಲಿನ ದೇವತಾರಾಧನೆಗೆ ಮುಖ್ಯ ಪ್ರವರ್ತಕರಾಗಿದ್ದ ವಿಶ್ವನಾಥ ಉಮೇದುವಾರ್ ಮಹಾರಾಜಶ್ರೀ ರಾಘವೇಂದ್ರರಾಯರವರ ಪ್ರಯತ್ನಭಕ್ತಿಗಳು ನೈಜಮೆಂಬುದಕ್ಕೆ ಬೇರೆ ನಿದರ್ಶನ ಅವಶ್ಯಕವಾಗಿರುವದಿಲ್ಲವು.

ಅರಸೀಕೆರೆ—ನಕ್ಕರೆ ಬೆಂಕಿಯೆ ಹೊದಲಾದವುಗಳಿಂದ ಸಮಾಧಾನಗೊಳಿಸಲಸಾಧ್ಯವಾದ ಮಕ್ಕಳು "ನೀರು" ಎಂಬ ಶಬ್ದವನ್ನು ಕೇಳಿದಕೂಡಲೇ ಸಮಾಧಾನಸ್ಥಿತಿಗೆ ಬರುವ ಕಾಲಪ್ರಾಪ್ತವಾಗಿತ್ತು. ಈ ನೀರಿನ ದೆಸೆಯಿಂದ ನೆರೆಹೊರೆಯ ರುಕ್ಕಾಂತ, ಪರಸ್ಪರ, ಶತ್ರುಭಾವನನ್ನು ವಹಿಸುವ ಕಾಲಬಂದಿತ್ತು. ಜನಗಳ ಧಾರಣೆಗಳು ಯೇರಿ ಏಕ್ರಮಿಸಿದ್ದವು. ಜನಗಳಲ್ಲಿ ಹಾಹಾಕಾರ ಪ್ರಾರಂಭವಾಗಿತ್ತು. ಹೀಗಿದ್ದಾಗ್ಯೂ ದೈವಸುಕೃಪೆ ಬೇರೇ ಯಿತ್ತು. ಅದರ ಇಚ್ಛೆಯೇ ನಿಯಾಮಕ, ಅನ್ಯಥಾ ಇಲ್ಲ. ನಮ್ಮ ಜವಾನಿ ಬೆಟ್ಟದನಾರತದು ಜೋರಿನ ಮುಡೂರ್ ಒಳ್ಳೇದು, ಅವರ ಮನಸ್ಸೂ ಒಳ್ಳೇದು. ಗತಸೆಪ್ಟೆಂಬರ್ ೨೫ನೇ ತಾರೀಖಿನ ಲಗಾಯತು ಅಕ್ಟೋಬರ್ ೧ರ ವರಿವಿಗೆ, ಪ್ರತಿ ತಾರೀಖಿನಲ್ಲಿಯೂ, ಮಳೆ ಹಾಕುತು. ೨೮ ಮತ್ತು ೩೦ನೇ ತಾ|| ನ ಮಳೆಗಳು ದೊಡ್ಡವು. ಅದರ ೨೯ನೇ ಮಂಗಳವಾರ ರಾತ್ರಿ ೧೦ ಘುಂಟೆಯು ಲಗಾಯತು ಮುಮ್ಮಾನ್ ೨ರ ವರಿವಿಗೆ (೨ಘುಂಟೆಯುಕಾಲ) ಆದ ಮಳೆ ಆಗದಿದ್ದರೆ ಈ ಸಂವತ್ಸರಕ್ಕೆ ಕ್ಷಾಮ ಆಗಬಹುದಾಗಿತ್ತು. ಈ ಮಳೆಯನ್ನು ಕುರಿತು ಹೆಚ್ಚು ಬರೆಯಲಾರೆ; ಇಂತಾ ಮಳೆಗಳಿಗೆ ಹೆಸರು ತಿಳಿಯದು. ಇದರ ದೆಸೆಯಿಂದ ಕೆಲವು ಮನೆಗಳು ಬಿದ್ದುಹೋದವು ಕೆಲವು ಜಖಾಯಾದವು. ಬೀದಿಯಲ್ಲಿ ಮನೂರು ಎದೆಮಟ್ಟಕ್ಕೆ ಕಮ್ಮಿಯಿಲ್ಲದೆ ನೀರುನಿಂತು ಹರಿಯಿತು. ಮ|| ರಾ|| ನಮ್ಮ ಅಮಲ್ದಾರರವರು ಜಮಾಬಂದೀ ಉದ್ದೇಶ ಕಾರನಹಳ್ಳಿಯಲ್ಲಿದ್ದರು. ಇಲ್ಲಿ ಅಸಿಸ್ಟೆಂಟ್ ಇಂಜನಿಯರ್ ಮ|| ರಾ|| ರಂಗರಾಯರವರು, ಓವರಸಿಯರ್ ಮ|| ರಾ|| ಶಂಕರರಾಯರವರು ಮತ್ತು ಮ|| ರಾ|| ಶಿರಸ್ತೇದಾರ್ ಮಾಧವರಾಯರವರು ಈ ದೊಡ್ಡಮನುಷ್ಯರುಗಳೆಲ್ಲರೂ ಬೆಳ್ಳನೆ ಬೆಳಗೂ, ಲಾಂದರಿಗಳ ಸಹಾಯದಿಂದ ಜನಗಳ ಯೋಗಕ್ಷೇಮಗಳನ್ನು ವಿಚಾರಿಸುತ್ತಾ ಅವರುಗಳಿಗೆ ಧೈರ್ಯಹೇಳುತ್ತಾ ಬೇಕಾದ ಕುಮ್ಮಕ್ಕುಗಳನ್ನು ಮಾಡುತ್ತಾ ಕಾಲಾ ಕಳೆದರು. ಮತ್ತು ೩ಘುಮಾರ್ ೩ಘುಂಟೆ ಸಮಯದಲ್ಲಿ ಮ|| ರಾ|| ಅಮಲ್ದಾರರವರಿಗೆ ಎಕ್ಸ್‌ಪ್ರೆಸ್ ಬಿಟ್ಟರು. ಅವರೂ ಪ್ರಾತಃಕಾಲ ೬ ಘುಂಟೆಯೊಳಗೇನೇ ಬಂದು ತಲಪಿದರು. ಬಳಿಕ ಮಾಡಬೇಕಾದ ಏರ್ಪಾಡುಗಳನ್ನೆಲ್ಲ ಖುದ್ದು ನಿಂತು ಮಾಡಿಸಿದರು. ಭಗವದನುಗ್ರಹದಿಂದ ಪ್ರಾಣಹಾನಿಯೇನೂ ಇಲ್ಲವು. ಬಹುಶಃ ಈ ತಾಲ್ಲೂಕಿನಲ್ಲಿ ಸರ್ವತ್ರ ಸ್ವಲ್ಪಹೆಚ್ಚು ಕಡಮೆ ಈಪ್ರಕಾರವೇ ಮಳೆಯಾಗಿರುವುದಾಗಿ ತಿಳಿಯಬರುತಿದೆ. ಕೆಲವು ಕೆರೆಗಳು ತುಂಬಿದಂತೆಯೂ, ಹಿರೇಕೆರೆ ತುಂಬಿ ಹರಿದಂತೆಯೂ ಸಹ ತಿಳಿಯಬರುತಿದೆ. ಈಪ್ರಾಂತ ಸುತ್ತು ಮುತ್ತು ಪೈರು ಬಹಳ ಚೆನ್ನಾಗಿದೆ. ನಮ್ಮ ಸಬ್‌ಡಿವಿಜನ್ ಆಫಿಸರರಾದ ಮ|| ರಾ|| ಆನಂದರಾಯರವರು ಈದಿನ ಮಧ್ಯಾಹ್ನ ಇಲ್ಲಿಗೆ ದಯಮಾಡಿಸಿದಾರೆ. ನಾಳೆ ಪ್ರಾತಃಕಾಲ ಟೌನ್ ಇನ್ಸ್‌ಪೆಕ್ಷನ್ ಬಗ್ಯೆ ದಯಮಾಡಿಸುವರೆಂದು ಹೇಳಿಕೊಳ್ಳುತ್ತಾರೆ. ಮನೆಗಳ ಮೂಲಕ ನಷ್ಟಪಟ್ಟ ಜನಗಳಿಗೆ ಯಥೋಚಿತ ಸಹಾಯ ಮಾಡಿಸಬೇಕೆಂಬ ಅಭಿಪ್ರಾಯ ನಮ್ಮ ಅಮಲ್ದಾರರವರಿಗೆ ಇರುವಂತೆ ಕೇಳುತ್ತೇನೆ. ಇದು ಯಥಾರ್ಥವಾಗಿದ್ದರೆ ಇದಕ್ಕಿಂತಲೂ ಶ್ಲಾಘ್ಯಕರವಾದ ಕೆಲಸ ಸದ್ಯಃ ಯಾವದೂ ಕಾಣಿಸಲಿಲ್ಲವು. ಕ್ಷಾಮವೆಂಬ "ಗುಮ್ಮ" ನೆ ಅಂಜಿಕೆ ನಿವಾರಣೆಯಾಯಿತು ದೈವ ಕೃಪೆಯಾದದರಿಂದೆ ಮ್ಮಟ್ಟ ಬಾಧಕವೋ ತೋಚದೆ ಕೃಪಾಧಿಕ್ಯದಿಂದಲೂ ಅಷ್ಟೇ ಬಾಧಕನೆಂದು ಕೋರುತಿದೆ.

ಈ ವರುಷ ಎಪ್ರಿಲ್‌ದಿಂದ ೧೫ನೇ ಪರಿವಿಗೂ ಬಹು ಗ್ರಾಮಗಳಲ್ಲಿ ಸುಕಾಂಚುಳಿ ಇಲ್ಲದ್ದರಿಂದ ಎಲ್ಲರೂ ಅಪ್ಪಹೂಸುವತ್ಸರವನ್ನು ಸ್ಮರಿಸಿಕೊಳ್ಳುತ್ತಾ ಬಹಳ ಭೀತಿಗೊಂಡಿದ್ದರು. ಈ ತಿಂಗಳ ೨೫ನೇ ತಾರೀಖ್ ಶುಕ್ರವಾರವು ಇಲ್ಲಿನ ಸಂತೇದಿವಸವಾದದರಿಂದ, ಆದಿನ ಏಕಾ ಏಕಿ ಅಕ್ಕಿ, ರಾಗಿ, ಹುರಳಿ ವಗೈರೆ ಜಿನಿಸಿಗಳ ಧಾರಣೆ ಬಹಳ ಜಾಸ್ತಿಯಾಗಿ ಸಂತೆಗೆ ಬಂದಿದ್ದ ಜನಗಳೆಲ್ಲರು ಬಹಳ ಭಯಪಟ್ಟರು. ಅದರೆ ಹೀಗೆ ಧಾರಣೆ ಜಾಸ್ತಿಯಾದ ಅಂತವ್ಯ ದವಸ ದಾಸ್ತಾನ್ ಇಟ್ಟಿರುವವರಿಗೆಲ್ಲ ಬಹಳ ಸಂತೋಷವನ್ನುಂಟು ಮಾಡಿತು. ನಿರ್ಗತಿಕರಾದ ಜನಗಳ ಹೃದಯವಲ್ಲಿದ್ದು ಮಹತ್ತರವಾದ ವ್ಯಥೆಯನ್ನುಂಟುಮಾಡದಿರಲಿಲ್ಲವು. ಇಷ್ಟರಲ್ಲೇ ಬಗವತ್ಕೃಪೆಯಿಂದ ಆದಿನ ಮನೂರ್ ಮೂರುಘುಂಟೆಗೆ ಒಂದು ಹದ ಮಳೆ ಬಂದದ್ದಲ್ಲದೆ ಆದಿನರಾತ್ರಿ, ಅಕ್ಷಯಸಂವತ್ಸರ ಭಾದ್ರಪದವಹುದ್ದ ೫ದಿವಸ ಬಂದು ಸರ್ವತ್ರ ಸಮೃದ್ಧಿಯಾಗಿ ಮಳೆ ಬಂತು. ಮಾರನೆಯದಿನ ವೆಳಗ್ಗೆ ಯೆತ್ತನೋಡಿದರೂ ಜಲಾರ್ಣವ ವಾಗಿದ್ದುದು ಕಂಡು ಜನಗಳು ಆನಂದಭರಿತರಾದರು. ದವಸ ದಾಸ್ತಾನ್ ಇಟ್ಟಿರುವವರೆಲ್ಲರು ಬಹಳ ಸಂಕಟ ಪಡುತಲಿದಾರೆ. ಸರ್ವಜಗದ್ರಕ್ಷಕನಾದ ಭಗವಂತನೊಬ್ಬನು ಪ್ರತ್ಯೇಕ ಇರುವಾಗ್ಯೆ ಮಾನುಷ ಪ್ರಯತ್ನಗಳೇನೂ ಕಾರ್ಯಕಾರಿ ಯಾಗಲಾರವು. ಈಚೆಗೆ ಈ ಪ್ರಾಂತದಲ್ಲ ಪ್ರತಿಎನಾ ಒಳ್ಳೆಯ ಮಳೆಯಾಗುತ ಕೆರೆ ಕುಂಟೆಗಳೆಲ್ಲ ತುಂಬಿದವಲ್ಲದೆ, ಕೆಲವು ಕೆರೆಗಳು ಕೋಡಿಬಿದ್ದವು. ಚಿತ್ತ ಸ್ವಾತಿ ಮಳೆಗಳಲ್ಲಿ ಒಂದೊಂದು ಹದ ಮಳೆ ಬಂದರೆ ಈ ವರುಷವಲ್ಲಿ ಪಲವು ಸಂಪೂರ್ಣವಾಗಿ ಯಾಗಬಹುದೆಂದು ತೋರುತಿದೆ.

ಈ ಗ್ರಾಮದಲ್ಲಿ ಲೇಟ್ ದಿವಾನ್ ಮ|| ರಂಗಾಚಾರ್ಯರವರ ಹೆಸರಿನೊಳು ಇಲ್ಲಿನ ಅಮಲ್ದಾರ್ ಮ|| ರಾಮಸ್ವಾಮಯ್ಯನವರು, ಪ್ರಜೆಗಳಿಂದ ಚಂದಾ ವಸೂಲ್ಮಾಡಿ, ಅದರಿಂದ ಕಟ್ಟಿಸಿದ ಛತ್ರದ ಕಾಮಗಾರಿ ಯೆಲ್ಲವೂ ಪೂರೈಸುತಬಂತು. ಇದುವರಿವಿಗೆ ಇದಕ್ಕಾಗಿ ಆರುಸಾವಿರ ರೂಪಾಯಿಗಳು ಖರ್ಚಾಗಿರುತಿವೆ. ಇಷ್ಟರಲ್ಲಿಯೇ ಅದರಲ್ಲಿ ಸಂತರ್ಪಣೆಯು ನಡೆಯಬಹುದು.

ಈ ಗ್ರಾಮದಲ್ಲಿ ಮುಸಾಫರ್ ಜನಗಳಿಗೆ ಇದುವರಿವಿಗೂ ಉಂಟಾಗಿದ್ದ ಅನಾನುಕೂಲ್ಯವು ತಪ್ಪಿ ವಿಶೇಷ ಸೌಖ್ಯ ಪ್ರಾಪ್ತವಾಗಿರುವುದಕ್ಕೆ ಕಾರಣವಾಯಿತು. ಈ ಅಮಲ್ದಾರರು ಇಲ್ಲಿಗೆಬಂದು ಚಾರ್ಜ ತೆಗೆದುಕೊಂಡದ್ದು ಮೊದಲು ಜನಗಳಿಗೆ ಹಿತಕರವಾದ ಅಂಶಗಳನ್ನೇ ಯೋಚಿಸಿ ಮಾಡುತ್ತಿದ್ದಾರೆ. ಇಲ್ಲಿಗೆ ಒಂದೂವರೆ ಮೈಲಿ ಫಾಸಲೆಯೊಳಗಿರುವ ಅಮರಗಿರಿ ತಿರುಪತಿ ಯೆಂಬ ಮಹಾಕ್ಷೇತ್ರದಲ್ಲಿ ಬೆಟ್ಟದಮೇಲಿರುವ ದೇವರ ಪೀಠವು ಬಹು ದಿವಸಗಳಿಂದ ಸದಲಿದ್ದದು ಐನೂರು ರೂಪಾಯಿಗಳ ತನಕ ವ್ಯಯಮಾಡಿ ಜೀರ್ಣೋದ್ಧಾರ ಮಾಡಿಸಿದರು. ಕೆಳ ತಿರುಪತಿಯಲ್ಲಿನ ದೇವಸ್ಥಾನದಲ್ಲಿ ಶಿಕಸ್ತಾಗಿದ್ದವನ್ನೆಲ್ಲ ೩೦೦ ರೂಪಾಯಿಗಳ ತನಕ ವ್ಯಯಮಾಡಿ ರಿಪೇರ್ ಮಾಡಿಸಿದರು. ಇವರು ಇಲ್ಲಿಗೆ ಬಂದದ್ದುಮೊದಲು ಪ್ರತಿವರ್ಷದಲ್ಲಿಯೂ ನಡೆಯುವ ರಥೋತ್ಸವವು ಬಹಳ ಸಂಭ್ರಮವಾಗಿ ನಡೆಯುತಿವೆ. ಸತ್ಪುರುಷರಿರುವ ಕಡೆಗಳಲ್ಲೆಲ್ಲ ಸತ್ಕಾರ್ಯಗಳು ನಿಹಿತವಾಗಿಯೇ ಜರುಗುವವೆಂಬ ಹಿರಿಯರಾಡಿದ್ದ ಬೊದ್ಧವರವಾತು ಅನುಭವ ಸಿದ್ಧವಾಗಿದೆ.

ಈ ಅರಸೀಕೆರೆಯು ಪರಸ್ಥಳದವರಿಗೆ ಮಧ್ಯಪ್ರದೇಶವಾಗಿರುವದರಿಂದ ಇಲ್ಲಿಗೆ ಬಹುಜನ ಆಗಂತುಕರು ಬರುತಲಿರುತ್ತಾರೆ. ಪರಸ್ಥಳದವರಿಗೆ, ದತ್ರಾಪಿ ಬ್ರಾಹ್ಮಣರಿಗೆ ಅನ್ನೋದಕಗಳಿಗೆ ಬಹಳ ಅನಾನುಕೂಲ ವಾಗಿರುವದರಿಂದ ಇಲ್ಲೊಂದು ಅನ್ನಸತ್ರವನ್ನು ಇಡಿಸುವದಾಗಿ ದಿವಾನ್ ಮ|| ಶೇಷಾದ್ರಿ ಅಯ್ಯರವರು, ೧೫ನೇ ತಾರೀಖಿನಲ್ಲಿ ಇಲ್ಲಿಗೆ ದಯಮಾಡಿದ್ದಾಗ್ಯೆ ವಾಗ್ದಾನ ಮಾಡಿದರು. ಈಗ ಬಾಹಾರಾದಲ್ಲಿರುವ ಅನ್ನಸತ್ರವು ಮುಚ್ಚೋಘಾಗಿರುವದರಿಂದ ಅದನ್ನಿಲ್ಲಿಟ್ಟರೆ ಬಹಳ ಅನುಕೂಲವಾಗಿರುವದು. ಈ ವಿಷಯದಲ್ಲಿ ದಿವಾನರವರು ತಕ್ಕ ಹುಕುಂ ಕೊಡಬಹುದೆಂದು ನಂಬುತ್ತೇನೆ.

NOTICE TO CORRESPONDENTS.

ಶ್ರೀಗಿರಿ ವಾಸಿಗೆ ಕಾಗದ ಬರೆದವರು ಕನ್ನಡ ಬ್ರಾಹ್ಮಣಪ್ರತಿ ೫ ಇತಿಗ್ರಂಥಗಳಿಗೆ ನಾವು ಖಂಡಿತ ಬರೆಯಲಾರೆವು. "ಸೂರ್ಯ" ಎಂದಾತ ಕೊಟ್ಟ ಉತ್ತರ ಕುರಿತು ಪತ್ರಿಕೆಯಲ್ಲಿ ಪ್ರಕಟಿಸಲಾರೆವು. ಪ್ರಕಟಿಸುವ ಕ್ರಮವಿಲ್ಲ.—ಎಡಿಟ್ ಕ. ಪ್ರ.

CORRESPONDENCE.

ಮ|| ರಾ|| ದಿವಾನ್ ಬಹದೂರ್ ರಘುನಾಥ ರಾಯರವರು ಹಿಂದೂ ಸ್ತ್ರೀ ಪುನರ್ವಿವಾಹ ವಿಷಯದಲ್ಲಿ ಕಳೆದ ಆಗಸ್ಟು ೧೦ನೇ ತಾರೀಖಿನ ತಮ್ಮ ಪತ್ರಿಕಾ ಮೂಲಕ ತಿಳಿಸಿದ ಕೆಲವು ಅಂಶಗಳಿಗೆ ಅದೇ ತಿಂಗಳ ೨೪ನೇ ತಾರೀಖಿನ ತಮ್ಮ ಪತ್ರಿಕಾ ಮೂಲಕ ನಾನು ಕೆಲವು ಅಕ್ಷೇಪಣೆಗಳನ್ನು ತಿಳಿಸಿದ್ದರ ಮೇಲೆ ಸದರೀ ರಾಯರವರು ನಮ್ಮ ಆಕ್ಷೇಪಣೆಗಳಿಗೆ ಸಮಾಧಾನ ರೂಪವಾಗಿ ಕೆಲವು ಸಂಗತಿಗಳನ್ನು ಇದೇ ತಿಂಗಳ ೭ನೇ ತಾರೀಖಿನ ತಮ್ಮ ಪತ್ರಿಕೆಯದ್ವಾರಾ ಪ್ರಕಟಿಸಿರುತ್ತಾರೆ. ಇದರ ವಿಷಯಕವಾಗಿ ನಾನು ಈ ಕೆಳಗೆ ತಿಳಿಸುವ ಅಂಶಗಳನ್ನು ಘನವಾದ ತಮ್ಮ ಪತ್ರಿಕಾಮೂಲಕ ಪ್ರಕಟಿಸುವದರಿಂದ ಸರ್ವರಿಗೂ ತಿಳಿಸ ಬೇಕೆಂದು ಕೋರುತ್ತೇನೆ.

ಹಿಂದೂ ಸ್ತ್ರೀ ಪುನರ್ವಿವಾಹ ವಿಷಯದೊಳು ನಡೆಯುವ ವಿಚಾರವು ದೇಶದ ಮೂಲಕ ನಡೆಯುವದೇ ನನಗೂ ಅಭಿಮತ ವಾಗಿರುವದರಿಂದ ಇಂತಾ ವಿಷಯಕ್ಕೆ ಪ್ರಸಿದ್ಧವಾದ ತಮ್ಮ ಪತ್ರಿಕೆಯಲ್ಲಿ ಅವಕಾಶದೊರೆದದ್ದಕ್ಕಾಗಿ ನಾನು ಬಹು ಸಂತೋಷಿಸುತ್ತೇನೆ.

ಮ|| ರಾ|| ರಘುನಾಥ ರಾಯರವರು ಆಗಸ್ಟು ೧೦ನೇ ತಾರೀಖಿನ ಈ ಪತ್ರಿಕೆಯಲ್ಲಿ ಬರೆದ ಉಪನ್ಯಾಸದಲ್ಲಿ ಮಾಯಾವತಿಯು ಶಂಬರನ ಪತ್ನಿಯಾಗಿದ್ದು ಆ ಶಂಬರನ ಮರಣದಿಂದ ಆಕೆಯು ವೈಧವ್ಯವನ್ನು ಹೊಂದಿದ್ದಾಗ್ಯೂ ಅಕ್ಷತಯೋನಿ ಯಾಗಿದ್ದ ಪ್ರಯುಕ್ತ ಆಕೆಯ ವಿವಾಹವು ಶಾಸ್ತ್ರೀಯವೆಂದು ನಾರದ ಮಹರ್ಷಿ ಯವರು ಹೇಳಿದಂತೆಯೂ, ಬ್ರಹ್ಮಾಂಶ ಸಂಭೂತನಾದ ಅನಿರುದ್ಧನು ಮಾಯಾವತೀ ಪುತ್ರನಾದ್ದರಿಂದ ಪೌನರ್ಭವನೆಂತಲೂ ಬರೆದು ತತ್ಸಾಧಕತ್ವೇನ ಬ್ರಹ್ಮವೈವರ್ತ ಪುರಾಣದಲ್ಲಿ ೨ಶ್ಲೋಕಗಳನ್ನು ಬರೆದಿದ್ದರು. ಮಾಯಾವತಿಯು ಶಂಬರನ ಪತ್ನಿಯಾಅಲ್ಲ, ಪ್ರದ್ಯುಮ್ನನು ಮಾಯಾವತಿಯರಿಗೆ ನವೆದದ್ದು ದ್ವಿತೀಯ್ಯ ವಿವಾಹವೂ ಅಲ್ಲ, ಅನಿರುದ್ಧನು ಮಾಯಾವತಿಯ ಪುತ್ರನೂ ಅಲ್ಲವೆಂದು ಬ್ರಹ್ಮ ವೈವರ್ತ ಮತ್ತು ಶ್ರೀಮದ್ಭಾಗವತದಲ್ಲಿನ ಪ್ರಮಾಣ ವಚನಗಳೊಡನೆ ನಾನು ಪ್ರತ್ಯುತ್ತರ ಕೊಟ್ಟದ್ದಕ್ಕೆ ರಾಯರವರು, ಇದೇ ತಿಂಗಳ ೭ನೇ ತಾರೀಖಿನ ಪತ್ರಿಕೆಯಲ್ಲಿ ಬ್ರಹ್ಮವೈವರ್ತ ಪುರಾಣದ ೭ ವಚನಗಳನ್ನು, ಅನಿರುದ್ಧನು ಬ್ರಹ್ಮಾಂಶ ಸಂಭೂತ ನೆಂಬುವದಕ್ಕೆ ಮಾತ್ರ ಸಾಧಕವಾಗಿ ಬರೆಸಿರುವಂತೆಯೂ, ಮಾಯಾವತಿಯು ಪುನರ್ಭೂ, ಪ್ರದ್ಯುಮ್ನನು ಪೌನರ್ಭವನು ಎಂಬುವವನ್ನು ಪ್ರಸ್ತಾಪತ್ವೇನ ತಿಳಿಸಿದಂತೆಯೂ, ಇಂತಾ ತಮ್ಮ ಬರವಣಿಗೆಯನ್ನು ನಿರೂಪಿಸುವದಕ್ಕೆ ಬ್ರಹ್ಮ ವೈವರ್ತ ಪುರಾಣದ ಆಧಾರವನ್ನನುಸರಿಸಿ ಹೇಳಲಿಲ್ಲವೆಂತಲೂ, ಇತಿಹಾಸವಾದ ಹರಿವಂಶದಿಂದಲೂ, ವಿಷ್ಣು ಪುರಾಣದಿಂದಲೂ ನಿರೂಪಿಸುವದಾಗಿಯೂ, ಬ್ರಹ್ಮ ವೈವರ್ತ ಪುರಾಣ ತಮ್ಮ ಬರವಣಿಗೆಗೆ ವಿರೋಧವಾಗಿ ಹೇಳುವದಿಲ್ಲವೆಂತಲೂ ಬರೆದಿರುತ್ತಾರೆ. ಅದರೆ ಒಂದು ಗ್ರಂಥಕ್ಕೆ ಕ್ವಚಿತ ಪ್ರಾಮಾಣಿಕತೆಯನ್ನೂ ಕ್ವಚಿತ ಪ್ರಾಮಾಣಿಕತೆಯನ್ನೂ ಹೇಳುವದು ಯಾವತರ ಮತವು ಹ್ಯಾಗಾದೀತು?

ಪ್ರದ್ಯುಮ್ನನು ಮಾಯಾವತೀ ಪುತ್ರನಲ್ಲವೆಂಬುವದಕ್ಕೆ ಪ್ರಮಾಣತ್ವೇನ ನಾನು ಉದಹರಿಸಿದ ಭಾಗವತ ಶ್ಲೋಕಗಳಮೇಲೆ, ಭಾಗವತವು ರಾಯರ ಹೇಳಿಕೆಗೆ ವಿರೋಧವಾಗಿರುವಂತೆ ನಾನು ಮಾತ್ರ ಭಾವಿಸಿರುವದಾಗಿಯೂ ತಾವು ಆರೀತಿ ಭಾವಿಸುವದಿಲ್ಲ ವೆಂಬದಾಗಿಯೂ, ಸ್ವಯಂ ಪಾಂಡಿತ್ಯವನ್ನೂ ಅನೇಕ ಪಂಡಿತರ ಸಹಾಯವನ್ನೂ ಪಡೆದಿರುವ ಶ್ರೀ ರಾಯರವರು ಬರೆಯುವದು ನೋಡಿದರೆ ಪರಮಾಶ್ಚರ್ಯವಾಗುತ್ತೆ.

ಮತ್ತು ಕೃಷ್ಣನಮಹವ ಚರಿತ್ರವಾಗಿಯೂ ಇತಿಹಾಸವಾಗಿಯೂ ಇರುವ ಹರಿವಂಶವು ಭಾಗವತಾಭಿಪ್ರಾಯಕ್ಕೆ ವಿರೋಧವಾಗಿಯೂ ಸ್ವಮತ ಪೋಷಕವಾಗಿಯೂ ಇರುತ್ತೆಂದು ಭಾವಿಸಿ ಹರಿವಂಶದ ಮುಂದೆ ಭಾಗವತ ಪ್ರಮಾಣವಲ್ಲವೆಂದು ರಾಯರವರು ಬರೆಯುತ್ತಾರೆ. ಆ ಹರಿವಂಶವೂ ಇವರ ಮತಕ್ಕೆ ಪೋಷಕವಾಗಿಲ್ಲವು, ಪ್ರತ್ಯುತ ಬಾಧಕವಾಗಿಯೇ ಇದೆ ಹ್ಯಾಗೆಂದರೆ—

ಹರಿವಂಶ, ವಿಷ್ಣುಪರ್ವ, ೧೦೭ನೇ ಅಧ್ಯಾಯ ೩೩ನೇ ಶ್ಲೋಕ.

"ಪ್ರದ್ಯುಮ್ನಸ್ಯಸುತೋಜಜ್ಞೇವೈದರ್ಭ್ಯಾಂ ರಾಜಸತ್ತಮ || ಅನಿರುದ್ಧೋರಣೆಯೋದ್ಧಾ ದಿದ್ಮಿಸಮ್ಯಗಕೇತನಃ" ಅಂದರೆ ಪ್ರದ್ಯುಮ್ನನಿಗೆ ಯುದ್ಧದಲ್ಲಿ ಶೂರನಾದಂತಾ ಮೃಗಕೇತನನಾದ ಅನಿರುದ್ಧನು ರುಕ್ಮಿ ಪುತ್ರಿಯಾದ ರುಕ್ಮವತಿಯಲ್ಲಿ ಜನಿಸಿದನು. ಎನಬುವದು.

ವಿಷ್ಣುಪುರಾಣ, ಪಂಚಮಾಂಶ ೨೮ನೇ ಅಧ್ಯಾಯ—೬—೭ನೇ ಶ್ಲೋಕ.

ಪ್ರದ್ಯುಮ್ನೋಪಿಮಹಾವೀರ್ಯೋರುಕ್ಮಿಣಸ್ತನಯಾಂಶುಭಾಂ || ಸ್ವಯಂವರೇತಾಂಜಗ್ರಾಹಸಾ ಚತಂತನಯಂಹರೇಃ || ೬ || ತಸ್ಯಾಮಸ್ಯಾಭವತ್ಪುತ್ರೋಮಹಾಬಲಪರಾಕ್ರಮಃ || ಅನಿರುದ್ಧೋ ರಣೇರುದ್ಧೋವೀರ್ಯೋದಧಿರರಿಂದಮಃ || ೭ ||

ಅಂದರೆ ಮಹಾ ಪರಾಕ್ರಮಶಾಲಿಯಾದ ಪ್ರದ್ಯುಮ್ನನು ರುಕ್ಮಿಣಿನ ಪುತ್ರಿಯಾದ ರುಕ್ಮವತಿಯನ್ನು ಸ್ವಯಂವರದಲ್ಲಿ ಗ್ರಹಿಸಿದನು. ಅಕೆಯೂ ಕೃಷ್ಣಪುತ್ರನನ್ನು ವರಿಸಿದಳು.

ಆ ಪ್ರದ್ಯುಮ್ನನಿಗೆ ರುಕ್ಮವತಿಯಲ್ಲಿ ಮಹಾಬಲ ಪರಾಕ್ರಮ ಶಾಲಿಯಾದ, ಯುದ್ಧದಲ್ಲಿ ತಡೆಯಕೂಡದಂತಾ, ಪರಾಕ್ರಮದ ಕಡಲಿನಂತಿರುವ

ಮುಕ್ತ ಶತ್ರುನಾಶಕನಾದ ಅನಿರುದ್ಧನು ಪುತ್ರನಾಗಿ ಜನಿಸಿದನು, ಎಂಬುವವು

ಇದಕಾರಣ ಮ ॥ ರಾ ॥ ರಾಯರಿಂದ ಪ್ರಬಲ ಪ್ರಮಾಣಗಳಾಗಿ ಅಂಗೀಕರಿಸಲ್ಪಟ್ಟ ಈ ೬ ಗ್ರಂಥಗಳು ಕೂಡ ಅನಿರುದ್ಧನು ಮಾಯಾ ಪುತ್ರನೆಂಬುವದಕ್ಕೆ ಸಾಧಕಗಳಾಗಲಿಲ್ಲವು.

ಇದಲ್ಲದೆ ಮಾಯಾವತಿಯು ಪುನರ್ಭೂ ಅಲ್ಲವೆಂಬುವ ವಿಷಯದಲ್ಲಿ—

ಹರಿವಂಶ, ವಿಷ್ಣುಪರ್ವ, ೧೬೭ನೇ ಅ॥

"ಕೃಷ್ಣಾಂಮಾಯಾವತೀಂಚೈವ ದೃಷ್ಟ್ವಾಚ ತಾಜನಾರ್ದನಃ । ಸೋಬ್ರವೀತ್ಪ್ರಹಸಾದೇವೀಂ ರುಕ್ಮಿಣೀಂದೇವತಾಮಿವ ॥ ೩೦ ॥ ಅಯಂಸದೇವಿಸಂಪ್ರಾಪ್ತಃಪುತ್ರಶ್ಚಪ್ರಥಮಸ್ತವ । ಅನೇನಶಂಬರಂಹತ್ವಾಮಾಯಾಯುದ್ಧವಿಶಾರದಂ ॥೩೧॥ ಹೃತಾಮಾಯಾಶ್ಚತಾಸ್ಸರ್ವಾಯಾಬಿರ್ದೇವಾನಬಾಧತ। ಸತೀಚೆಯಂಶುಭಾಸಾಧ್ವೀ ಭಾರ್ಯಾಪಿತ್ರಚಯುಸ್ಯಕೆ ॥ ೩೨ ॥ ಮಾಯಾವತೀತಿವಿಖ್ಯಾತಾಶಂಬರಸ್ಯಗೃಹೋಷಿತಾ । ಮಾಚೆಕೆಶಂಬರಸ್ಯೇಯಂಪತ್ನೀತಿಭವತುವ್ಯಥಾ ॥ ೩೫ ॥ ಮನ್ಮಥೆತುಗತೆನಾಶಂಗತೆಬಾನಂಗತಾಂಪುರಾ । ಕಾಮಪತ್ನೀನಕಾಂತ್ಯೆಷಾಶಂಬರಸ್ಯರತಿಃಪ್ರಿಯಾ ೩೬ ॥ ಮಾಯಾರೂಪೇಣತಂದೈತ್ಯಂಮೋಹಯಂತ್ಯಸಕೃಚ್ಛುಭಾ । ನಚೈಷಾತಸ್ಯಕೌಮಾರೇವ ಶತಿಪ್ರತಿಶೋಭನಾ ಆತ್ಮಮಾಯಾಮಯಂಕೃತ್ವಾ ರೂಪಂಶಂಬರಮಾವಿಶತ್ । ಪತ್ನ್ಯೈಷಾಮಮಪುತ್ರಸ್ಯಸ್ನುಷಾತವವರಾಂಗನಾ ॥ ೩೮ ॥ ಲೋಕಕಾಂತಸ್ಯಸಾಹಾಯ್ಯಂಕರಿಷ್ಯತಿಮನೆ ಮಯಂ।ಪ್ರವೇಶ್ಯೈನಾಂಭವನಂಶ್ರೂಜ್ಯಾಜ್ಯೈಷ್ಯಾಸ್ನುಷಾಮಮ ॥ ೩೯

ಈ ಶ್ಲೋಕಗಳ ಅರ್ಥವನ್ನು ನೋಡುವಲ್ಲಿ ಮಾಯಾವತಿಯು ಶಂಬರನ ಪತ್ನಿಯಲ್ಲವೆಂದು ಭಗವದ್ವಾಕ್ಯದಿಂದಲೇ ಸ್ಪಷ್ಟವಾಗುತವೆ

ಶ್ರೀ ವಿಷ್ಣು ಪುರಾಣ, ಪಂಚಮಾಂಶ,

೨೭ನೇ ಅಧ್ಯಾಯ.

"ತಸ್ಯಮಾಯಾವತೀನಾಮ ಪತ್ನೀಸರ್ವಗೃಹೇಶ್ವರೀ । ಕಾರಯಾಮಾಸಸೂದಾನಾ ಮಾಧಿಪತ್ಯಮನೇತದಾ"॥ಇವಕ್ಕೆಶ್ರೀಧರಿಯ್ಯವ್ಯಾಖ್ಯೆ, ತಸ್ಯೆತಿ, ಮಾಯಾವತೀನಾಮಪತ್ನಿ, ಮಾಯಾಮಾಸ್ಥಿತಸ್ಯ ತಸ್ಯ ಮೋಹ. ತ್ಪಾದನತಃ ತಸ್ಯ ಪತ್ನೀತಿವ್ಯವಾಹರಃ. ಯದ್ವಾ, ನಾಮಪತ್ನೀ. ನಾಮಮಾತ್ರೇಣ ಪತ್ನೀತ್ಯುಚ್ಯತೆ, ವಸ್ತುತಸ್ತ್ವನಿಂದಿತಾ, ಪತಿವ್ರತಾತ್ವಾನ್ನಾಸ್ಯಭಾರ್ಯೆತ್ಯರ್ಥಃ. ಏತಚ್ಚಾಗ್ರೆಸ್ಫುಟೀಭವಿಷ್ಯತೀತಿ ಮತ್ತು ಅದೆ ಅಧ್ಯಾಯ ಶ್ಲೋಕ ೨೩—೨೯ರವರಿಗೆ.

"ಶ್ರೀ ಪರಾಶರಃ. ಏತಸ್ಮಿನ್ನಂತರೆಪ್ರಾಪ್ತಸ್ಸಹಕೃಷ್ಣೇನನಾರದಃ ॥ ೨೩ ॥ ಅಂತಃಪುರಚರಾಂದೇವೀಂರುಕ್ಮಿಣೀಂಪ್ರಾಹಹರ್ಷಯನ್ । ಏಷತೆತನಯಸ್ಸುಭ್ರೂರ್ಹತ್ವಾಶಂಬರಮಾಗತಃ ॥೨೫ ಹೃತೋಯೆನಾಭವದ್ಬಾಲೋಭವತ್ಯಾಸೂತಿಕಾಗೃಹಾತ್ । ಇಯಂಮಾಯಾವತೀಭಾರ್ಯಾ ತನಯಸ್ಯಾಸ್ಯತೆಸತೀ ॥ ೨೬ ॥ ಶಂಬರಸ್ಯನಭಾರ್ಯೆಯಂ ಶ್ರೂಯತಾಮತ್ರಕಾರಣಂ । ಮನ್ಮಥೆತುಗತೆನಾಶಂ ತದುದ್ಭವಪರಾಯಣಾ ॥೨೭॥ ಶಂಬರಂಮೋಹಯಾಮಾಸಮಾಯಾರೂಪೇಣರೂಪಿಣೀ । ವಿವಾಹಾದ್ಯುಪಭೋಗೆಷು ರೂಪಂಮಾಯಾಮಯಂಶುಭಂ ॥೨೮॥ ದರ್ಶಯಾಮಾಸದೈತ್ಯಸ್ಯತಸ್ಯೆಯಂಮದಿರೇಕ್ಷಣಾ । ಕಾಮೋವತೀರ್ಣಃಪುತ್ರಸ್ತೆತಸ್ಯೆಯಂದಯಿತಾರತಿಃ॥೨೯॥ ವಿಶಂಕಾನಾತ್ರಕರ್ತವ್ಯಾಸ್ನುಷೆಯಂತವಶೋಭನೆ" ॥ ಈ ಮೂಲ ಶ್ಲೋಕಗಳ ಮತ್ತು ಶ್ರೀಧರಾಚಾರ್ಯರ ವ್ಯಾಖ್ಯಾನಾರ್ಥ ಪರ್ಯಾಲೋಚನೆ ಯಿಂದಲೂ ಮಾಯಾವತಿಯು ಶಂಬರನ ಪತ್ನಿಯಲ್ಲವೆಂದು ವ್ಯಕ್ತವಾಗುತದೆ.

ಅಗ್ನಿಪುರಾಣ ೧೨ನೆ ಅ.

ಮಾಯಾವತೀಮತ್ಸ್ಯಮಧ್ಯೆ ದೃಷ್ಟ್ವಾಬಸ್ವಂಪತಿಮಾದರಾತ್। ಪುಪೋಷಪಾಕಂಚೋವಾಚ ರತಿಸ್ತೆಹಂಪತಿರ್ಮಮ । ಕಾಮಸ್ತ್ವಂಶಂಭುನಾನುಗಃಕೃತೋಹಂಶಂಬರೇಣಚ। ಹೃತಾನತಸ್ಯಪತ್ನೀತ್ವಂಮಾಯಾಜ್ಞಶ್ಶಂಬರಂಜಹಿ॥

ಮತ್ಸ್ಯ ಪುರಾಣ, ೧೩೪. ಅ.

(ಕಾಮಸ್ಯದಯಿತಾಂಭಾರ್ಯಾಂ ರತಿಂಮಾಂವಿದ್ಧಿಸುವ್ರತ) ಕಾಮದಹನಾನಂತರ ರತಿಯು ಶಿವನಿಂದ ವರವನ್ನು ಪಡೆಕೊಂಡು ಕಾಮೋತ್ಪತ್ತಿಯನ್ನು ನಿರೀಕ್ಷಿಸುತ್ತ ಹಿಮಾಲಯದಲ್ಲಿರುವಾಗ ಹಿಮವಂತನನ್ನು ಕುರಿತು ಹೇಳಿದಮಾತು.

ಸ್ಕಂದಪುರಾಣ ೧೧೬. ಅ.

ರುದತೀಂಹಿಮವತ್ಪೃಷ್ಠೆ ಕಾಮಾತ್ಮಾಮುಪ್ರಿಯಾಂರತಿಂ । ಶಂಬರೋಬ್ರಹ್ಮಣಾಶಪ್ತ್ಯಾಂಜಹಾರಬಲವಾಂಸ್ತದಾ ॥ ೯೩ ॥ ಸಾಚಮಾಯಾವತೀತ್ರಸ್ಯಮೋಹಯಂತೀಮನೋಮುಹುಃ॥ಮಾಯಯಾಸ್ವಾಂಪ್ರತಿಕೃತಿಂದರ್ಶಯಂತ್ಯವತಿಷ್ಠತಾ ॥೯೪॥ ಸೂದಕರ್ಮನಿಯುಕ್ತಾಚ ಶಂಬರಸ್ಯೆವಮಂದಿರೆ॥ ಉಪಾಸಕತ್ಯರ್ಜನಸು ಕಾಂಕ್ಷಂತೀದಾನವಸುತಾಂ ।೧೫ ॥ ಗೃಹಿಣೀಂವಶಗಾಂಮೆನೆ ನೈವಲೆಭೆಚಸಂಗಮಂ)

ಭಾರತತಾತ್ಪರ್ಯನಿರ್ಣ್ಣಯ- ೧೩. ಅ

(ವಿಷ್ಣ್ವಮತ್ಸ್ಯಕೋದರಂಸಶಂಬರಃಕುಮಾರಕಂ ॥ ನ್ಯವೆದಯನ್ಮನೋಭವಪ್ರಿಯಾಕರೆಸವಾಪಿಣಂ । ೧೯೬ ॥ ಅನುಗತಾಮುಬಾಗತೆಪುರಾಹರೇಣಸೋಂಗಜೆ ॥ ವಶಂವಿರಿಂಚಕಾವತೋಜಗಾಮಶಂಬಸ್ಯಹಿ ॥ ೧೯೭ ॥ ಪುರಾಹಿಪಂಚಪರ್ವಕಾನಿಕಮ್ಯಕಂ ಚಚೋದಿತಾಂ ॥ ಜಹಾಸಪಾರ್ವದಾತ್ಮಜಾಂಶಶಾಪತಾಂತತಸ್ತ್ವಜಃ ॥ ೧೯೮ ॥ ಭವಾಸುರೇಣಮೋಷಿತತಿಸಾತತೋತಿಮಾಯಯಾ। ವಿವಾಹಕಾಂ ನಿಜಾಂತಶೂಂಜಗಾಮ ಸಾನ್ಯದಾಸುರಂ ॥ ಗೃಹಪಿಸಾಸುರೆಪಿತಾನಿಜಸ್ವರೂಪತೋಸುರಂ । ನಗಚ್ಛತಿಸ್ಮಸಾಪತಿಂನಿಜಂಸನಿಷ್ಪತ್ತ್ಯರತಿಃ ತಾ॥೧೯೯॥ ರಸಾಯನೈಃಕುಮಾರಕಂವ್ಯವರ್ಧಯದ್ರತಿಃಪತಿಂ । ಸಪ್ರಾಪ್ತಯೌವನೋಭವಚ್ಛತುರ್ಭಿರೇವವತ್ಸರೈಃ ॥

ಈ ಪ್ರಮಾಣಗಳನ್ನೆಲ್ಲಾ ನೋಡುವಲ್ಲಿ (ಇತಿಹಾಸ) ಹರಿವಂಶಕ್ಕೆ ಅವಿರೋಧವಾಗಿ ಬ್ರಹ್ಮವೈವರ್ತಪುರಾಣ, ವಿಷ್ಣುಪುರಾಣ, ಮತ್ಸ್ಯಪುರಾಣ, ಅಗ್ನಿಪುರಾಣ, ಸ್ಕಂದಪುರಾಣ, ಶ್ರೀ ಮಧ್ವಾಚಾರ್ಯಕೃತ ಮಹಾಭಾರತ ತಾತ್ಪರ್ಯನಿರ್ಣಯ ಮುಂತಾದವುಗಳೆಲ್ಲಾ ಮಾಯಾವತಿಯು ಶಂಬರನಪತ್ನಿಯೇ ಅಲ್ಲವೆಂದು ಏಕಕಂಠ್ಯವಾಗಿಯೂ, ಹೇಳುತ್ತಿವೆ. ಮತ್ತು ಸ್ವಪಕ್ಷಸಾಧಕವೆಂದು ಶ್ರೀರಾಯರವರು ಉದಹರಿಸುವ ಇತಿಹಾಸವಾದ ಹರಿವಂಶವು ಸಹ ಮಾಯೆಯು ಶಂಬರನ ಪತ್ನಿಯಲ್ಲವೆಂತಲೂ, ಅನಿರುದ್ಧನು ರುಕ್ಮವತಿಪುತ್ರನೆಂತಲೂ ಪಾಠಾಳವಾಗಿಹೇಳುತ್ತಿದೆ ಹೀಗಿರುವಲ್ಲಿ ಮೇಲೆಹೇಳಿದ ಪುರಾಣಗಳಗೂ ಇತಿಹಾಸಕ್ಕೂ ಅವಿರೋಧವಾಗಿ ಹೇಳುವ ಸರ್ವರಿಂದಲೂ ಪ್ರಮಾಣತ್ವೇನ ಅಂಗೀಕರಿಸಲ್ಪಟ್ಟ ವ್ಯಾಸಪ್ರೋಕ್ತವಾದ ಶ್ರೀಮದ್ಭಾಗವತವು ನಮ್ಮ ರಾಯರವರಿಗೆ ಯೇನು ಅಪಚಾರ ಮಾಡಿತೊ ತಿಳಿಯಲಿಲ್ಲವು. ತಟಸ್ಥರಾದವರು ಈ ಪೂರ್ವೋತ್ತರ ಸಂದರ್ಭಗಳನ್ನು ಸರಳಸ್ವಭಾವದಿಂದ ಯೋಚಿಸಿ, ಬ್ರಹ್ಮ ವೈವರ್ತಪುರಾಣವು ರಾಯರವರ ಅಭಿಪ್ರಾಯಕ್ಕೆ ವಿರೋಧವಾಗಿದೆಯೆಂದು ಯೋಚಿಸಿದ್ದು ನನ್ನ ಭ್ರಾಂತಿಯೋ ಶ್ರೀ ರಾಯರವರ ಭ್ರಾಂತಿಯೋ ತಿಳಿದುಕೊಳ್ಳಬೇಕು. ಮತ್ತು ಸ್ವಾಭಿಪ್ರಾಯಪ್ರೋಷಕವಾಗಿ ಉದಹರಿಸಿದ ಬ್ರ೦ ವೈ. ಪುರಾಣದ ೧೧೨ನೇ ಅ. ೯ನೇಶ್ಲೋಕದಲ್ಲಿನ (ಗೃಹಿಣೀ) ಎಂಬಶಬ್ದಕ್ಕೆ (ಸಂಕೇತೆನಾಸುರಸ್ಯಚ)ಎಂಬ ವಾಕ್ಯದಿಂದಲೇ ಮಾಯೆಯಿಂದ ಪತ್ನೀತ್ವೇನ ವ್ಯವಹ್ರಿಯ್ಯಮಾಣಳೆಂಬರ್ಥವು ಸಾರ್ವಜನೀನವಾಗಿ ತೋರುವಲ್ಲಿ ರಾಯರವರಿಗೆ ಮಾತ್ರ ಹಾಗೆ ತೋರದಿರುವದಕ್ಕೆ ಕಾರಣವೇನೋ ನಾನರಿಯೆನು

ಮಾಯಾವತಿಯು ಶಂಬರನ ಭಾರ್ಯೆಯಲ್ಲದಿದ್ದರೆ ಆತನ ಶಯನಕ್ಕೆ ಮಾಯೆಯು ಮತ್ತೊಬ್ಬ ಸ್ತ್ರೀಯನ್ನು ನಿರ್ಮಿಸಿ ಕಳುಹಿಸಬೇಕಾದ ಆವಶ್ಯಕತೆ ಯೇನು ಇತ್ತೆಂದು ರಾಯರವರು ಯೋಚಿಸುವದಕ್ಕೆ ಬದಲಾಗಿ ಮಾಯೆಯು ಶಂಬರನಿಗೆ ವಾಸ್ತವ ಪತ್ನಿಯೇ ಆಗಿದ್ದಲ್ಲಿ ಆತನ ಶಯನಕ್ಕೆ ತಾನೇ ಸಾಕ್ಷಾತ್ತಾಗಿ ಯಾತಕ್ಕೆ ಹೋಗಬಾರದೆಂದು ಯೋಚಿಸಿದ್ದರೆ ನಮ್ಮುಭಯತ್ರರಿಗೂ ಇಷ್ಟು ವ್ಯರ್ಥವಾದ ಬರವಣಿಗೆಗೆ ಅವಕಾಶವಿಲ್ಲದೆ ಇರುತಿತ್ತು.

ಮಾಯಾವತಿಯು ಈ ರೂಪಕವಾಗಿ ಮಾಡಿದ ಮೋಸವು ಪ್ರದ್ಯುಮ್ನನನ್ನ ಮದುವೆ ಮಾಡಿಕೊಳ್ಳಲು ಅರ್ಹತೆಯನ್ನುಂಟುಮಾಡಿತೆಂಬ ರಾಯರ ಬರವಣಿಗೆಯಿಂದಲೇ ಆಕೆಯು ಶಂಬರನ ಭಾರ್ಯೆಯಲ್ಲವೆಂತಲೂ ತನ್ನ ಪತಿಯಾದ ಮನ್ಮಥನ ಆಗಮನವನ್ನು ನಿರೀಕ್ಷಿಸುತ ಪಾತಿವ್ರತ್ಯವನ್ನು ಕಾಪಾಡಿಕೊಂಡಳೆಂತಲೂ ವ್ಯಕ್ತವಾಗುತ್ತೆ ಹಾಗಿಲ್ಲದೆ ರಾಯರ ಅಭಿಪ್ರಾಯದಂತೆ ಯೋಚಿಸಿದರೆ ಶಂಬರನ ಮರಣಾತ್ಪೂರ್ವವೇ ಆತನ ಮರಣಾನಂತರ ತಾನು ಮತ್ತೊಬ್ಬನನ್ನು ಮದುವೆ ಮಾಡಿಕೊಳ್ಳಲು ಅಕ್ಷತಯೋನಿಯಾಗಿರಬೇಕೆಂದು ಮಾಯಾವತಿಯು ಯೋಚಿಸಿದ್ದಂತೆ ಹೇಳಬೇಕಾಗುತ್ತೆ. ಲೋಕದಲ್ಲಿ ಇದಕ್ಕಿಂತಲೂ ಅಸಂಗತ ವುಂಟೆ?

ಇದಲ್ಲದೆ ಮಾಯಾವತಿಯು ಶಂಬರನ ಭಾರ್ಯೆಯಲ್ಲವೆಂಬುವದನ್ನು ನಿರೂಪಿಸಲು ನಾನು ಉದಹರಿಸಿದ ಬ್ರ೦ ವೈ. ಪುರಾಣದ ೧೧೨ ಮೊದಲು ೧೫ರ ವರಿಗಿನ ಶ್ಲೋಕಗಳಲ್ಲಿ ಪ್ರದ್ಯುಮ್ನನನ್ನು ಮಾತೃಗಾಮಿ ಯೆಂತಲೂ, ಮಾಯಾವತಿಯನ್ನು ಪುತ್ರಗಾಮಿನೀಯೆಂತಲೂ ಶಂಬರನು ದೂಷಿಸಿರುವದೇ ಶಂಬರ ಮಾಯೆಯರ ಪತಿಪತ್ನಿತ್ವ ಸಾಧಕವೆಂದು ರಾಯರವರು ಭಾವಿಸುತ್ತಾರೆ ಹಾಗಾದರೆ ಮೇಲೆ ಉದಹರಿಸಿರುವ ಪ್ರಮಾಣ ವಚನಗಳಿಗೆಲ್ಲ ವೈಯರ್ಥ್ಯವನ್ನು ಹೇಳಬೇಕಾಗುತ್ತೆ. ಹೀಗೆ ವೇದವ್ಯಾಸ ಪರಾಶರ ಮುಂತಾದ ಮಹರ್ಷಿಗಳ ವಚನಗಳಿಗೆ ವೈಯರ್ಥ್ಯವನ್ನು ಹೇಳುವದಕ್ಕಿಂತಲೂ ಆಸುರಸ್ವಭಾವನುಳ್ಳ ಶಂಬರನ ತಿಳುವಳಿಕೆಗೆ ವೈಯರ್ಥ್ಯಕಲ್ಪನೆ ಮಾಡುವದು ಯುಕ್ತವೆಂದು ಮಹಾರಾಜಶ್ರೀಯವರಿಗೆ ಸೂಚಿಸುತ್ತೇನೆ

೧೧೪ನೇ ಅಧ್ಯಾಯ, ೭೦–೫೯–೩೦–೩೯ನೇ ಶ್ಲೋಕಗಳು ತಮ್ಮ ಅಭಿಪ್ರಾಯಕ್ಕೆ ಸಾಧಕಗಳಾಗಿವೆಯೆಂದು ರಾಯರವರು ಶ್ಲೋಕಗಳನ್ನು ಬರಿಯದೆ ಸುಮ್ಮನೆ ತಿಳಿಸಿರುತ್ತಾರೆ. ಆಶ್ಲೋಕಗಳನ್ನು ನಾನು ನೋಡುವಲ್ಲಿ ಅವರ ಅಭಿಪ್ರಾಯಕ್ಕೆ ಅವು ಯತ್ಕಿಂಚಿತ್ತಾದರೂ ಸಾಧಕವಾಗಲಾರವೆಂದು ನನಿಗೆ ತೋರುತ್ತೆ. ಶ್ಲೋಕಗಳನ್ನು ನೋಡುವವರೆಲ್ಲರಿಗೂ ಹಾಗೆಯೇ ತೋರಬಹುದು

ಮತ್ತು ಮಾಯಾವತಿಯು ಶಂಬರನ ಭಾರ್ಯೆಯೆಂತಲೂ, ಪ್ರದ್ಯುಮ್ನನು ಆತನನ್ನು ಸಂಹರಿಸಿ ಮಾಯಾವತಿಯನ್ನು ವಿವಾಹ ಮಾಡಿಕೊಂಡನೆಂತಲೂ, ಈಕೆಯು ಪುರುಷಸಂಸರ್ಗ ವಿಲ್ಲದವಳಾದ್ದರಿಂದ ಈ ವಿವಾಹವು ಶಾಸ್ತ್ರೀಯವಾದದ್ದೆಂದು ಶ್ರೀ ಕೃಷ್ಣ ನಾರದರು ವ್ಯವಸ್ಥಾಪಿಸಿದುತೆಯೂ, ಅನಿರುದ್ಧನು ಮಾಯಾವತೀ ಪುತ್ರನೆಂತಲೂ, ನಿರೂಪಿಸಲು ಬೇಕಾದಷ್ಟು ಪ್ರಮಾಣ ವಚನಗಳನ್ನು ಉದಹರಿಸಿರುವಂತೆ ರಾಯರು ಬರೆಯುತ್ತಾರಲ್ಲದೆ ಯೆಲ್ಲಿ ಉದಹರಿಸಿರುತ್ತಾರೆಂಬುದು ಮಾತ್ರ ಗೊತ್ತಾಗುವದಿಲ್ಲ.

ಕಿಂಚ,ವಿವಾಹಸಾಮಾನ್ಯವಿವಾಹವನ್ನೇನಿಷೇಧಿಸುವವರಿಗೆ ಮಾಯಾವತಿಅಕ್ಷತಯೋನಿ ಯಲ್ಲವೆಂದು ಸಾಧಿಸುವದರಿಂದ (ಬಾಂಡ್ಲಿ ಕಟಿಗೆ ತಾಳಲಾರದೆ ಒಲೆಯಲ್ಲಿ ಬಿದ್ದಂತೆ) ಆಗುವದಿಲ್ಲ. ಕ್ಷತಯೋನಿಯನ್ನು ಅಕ್ಷತಯೋನಿಯೆಂದು ಹೇಳಲು ಧ್ಯಮಿಸಿದ ರಾಯರಿಗೆ ಪ್ರತಿಜ್ಞಾ ಭಂಗವೆಂಬ ನಿಗ್ರಹಸ್ಥಾನವು ದುಷ್ಪರಿಹಾರ್ಯವಾಗಿದೆ.

ಇದಲ್ಲದೆ ರಾಯರುತಾವು ಮಾಡಿರುವಗ್ರಂಥವನ್ನು ನಾನು ಸಂಪೂರ್ಣವಾಗಿ ನೋಡಲಿಲ್ಲವೆಂದು ನ್ನೂ ಆ ಗ್ರಂಥದ ೨೬ನೇ ಪುಟವನ್ನು ನೋಡಿದಲ್ಲಿ ಮಾಯಾವತಿ ಪುನರ್ಭೂವೆಂತಲೂ ಅನಿರುದ್ಧನು ಪೌನರ್ಭವ ನೆಂದೂ ರಾಯರವರ ಸಾಧಿಸುವದಕ್ಕೆ ಪ್ರಯತ್ನಿಸಿದ್ದು ಸಾಹಸಕೃತ್ಯವೆಂದು ನಾನು ಹೇಳುತ್ತಿರಲಿಲ್ಲವೆಂದು ಪಶ್ಚಾತ್ತಾಪ ಪಡುತ್ತಾರೆ. ಆದರೆ ನಾನು ನೋಡಿದ ಅವರ ಗ್ರಂಥದ ೨೬ನೇ ಪುಟದಲ್ಲಿ ಅವರ ಮತಕ್ಕೆ ಸಾಧಕವಾದ ವಚನವು ಒಂದಾದರೂ ಕಾಣಲಿಲ್ಲವು. ಪರಂತು ಅವರ ಗ್ರಂಥವು ಉಪಗ್ರಂಥದಿಂದ ದಿನೇದಿನೆ ಗರ್ಭಿತವಾಗುತಿದೆ. ಪೂರ್ವೆಸ್ಥಿ ತೆರಿಗೆ ನಿಂತಮೇಲೆ ಸಮಂಜಸವಾಗಿ ತೋರಿದರೆ ನೋಡಬಹುದು.

ಮೈಸೂರು ಗೋಪಾಲಶಾಸ್ತ್ರಿ

TELEGRAPIHCSUMMARY:-

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೯ನೇ ಸೆಪ್ಟಂಬರ್ —ಬಲ್ಗೆರಿಯಾ ದೇಶದ ಪ್ರಸಕ್ತ ವಿಷಯಗಳನ್ನು ಕುರಿತು ಚರ್ಚಿಸುವದಕ್ಕೋಸ್ಕರ ಸಂಸ್ಥಾನಾಧಿಪತಿ [illegible] ಕಾನ್‌ಸ್ಟಾಂಟಿನೋಪಲ್ ನಿಂದ ತುರ್ಕಿ ದೇಶದ ರಾಜಧಾನಿಯಲ್ಲಿ ಕೂಡಲೇ ಸಭೆ ಸೇರಬೇಕೆಂದು ನಿಶ್ಚಯಿಸಲಾಗಿದೆ

ಬಲ್ಗೇರಿಯಾ ಮತ್ತು ರೂಮಿಲಿಯಾ ದೇಶಗಳನ್ನು ಒಂದುಗೂಡಿಸುವ [illegible] ಅಂಗೀಕರಿಸಲ್ಪಡುವ ಪಕ್ಷದಲ್ಲಿ ಗ್ರೀಸ್ ಮತ್ತು ಸರ್ವಿಯಾ ಸಂಸ್ಥಾನಗಳು ಅಬಸ್ಸಿ [illegible] ಕೊಡಬೇಕೆಂದು ಕೇಳುತ್ತಾರೆ.

ಕಾನ್‌ಸ್ಟಾಂಟಿನೋಪಲ್, ೨೯ನೇ ಸೆಪ್ಟಂಬರ್.—ತುರ್ಕಿ ಸುಲ್ತಾನರವರು ಸರ್ ಡ್ರಮ್ಮಂಡ್ ವೂಲ್ಫ್ ರವರ ಕೂಡ [illegible] ನಡಿಸಲು [illegible] ಈಜಿಪ್ಟ್ ರಾಜ್ಯಕ್ಕೆ [illegible] ಸಮ್ಮತಿ ಕೊಡಲ್ಪಟ್ಟಿದೆ.

[illegible] ರಾಜ್ಯಕ್ಕೆ [illegible] ಮತ್ತು [illegible] ಕೂಡಿ ತುರ್ಕಿ ಸೇನೆ [illegible] ಕಾಣುತ್ತದೆ.

ಫಿಲಿಪ್ಪೊಪೊಲಿಸ್, ೨೯ನೇ ಸೆಪ್ಟಂಬರ್.—[illegible] ಪ್ರಿನ್ಸ್ [illegible] ಯನ್ನು ಪಡುಕಳಿದಾನೆ.

ಫಿಲಿಪ್ಪೊಪೊಲಿಸ್, ೩೦ನೇ ಸೆಪ್ಟಂಬರ್.—ರೂಮಿಲಿಯಾ [illegible] ಪ್ರಿನ್ಸ್ [illegible] ನಿರ್ಧಾರ ಮಾಡಿರುತ್ತಾರೆ

ಲಂಡನ್, ೧ನೇ ಅಕ್ಟೋಬರ್.—ಸರ್ ಮೈಕೇಲ್ ಹಿಕ್ಸ್ ಬೀಚ್ ರವರು, [illegible] ಚರ್ಚಿಲ್ [illegible] ಇತರ ಸಂಸ್ಥಾನಾಧಿಪತಿಗಳ [illegible] ರೂಮಿಲಿಯಾ [illegible] ರಾಜ್ಯ [illegible] ಕೇಳಿದರು

[illegible] ಗ್ರೀಸ್ [illegible] ಕೊಡಬೇಕೆಂದು ಕಾಣುತ್ತದೆ

ಬಲ್ಗೇರಿಯಾ [illegible] ಗ್ರೀಸ್, ಬಲ್ಗೇರಿಯಾ [illegible] ಯುದ್ಧಸನ್ನಾಹ [illegible] ನಡೆಯುತ್ತದೆ

ತುರ್ಕಿಯವರು [illegible] ಸೇರಿಸುತ್ತಾರೆ

[illegible] ೩ನೇ ಅಕ್ಟೋಬರ್ —ಪ್ರಿನ್ಸ್ ಅಲೆಗ್ಸಾಂಡರ್ [illegible] ಬಲ್ಗೇರಿಯಾ [illegible] ಕೊಂಡಿದ್ದಾರೆ

[illegible], ೩ನೇ ಅಕ್ಟೋಬರ್,—[illegible] ಬಲ್ಗೇರಿಯಾ [illegible] ಕಳುಹಿಸಿದ್ದರು.

ಕಾನ್‌ಸ್ಟಾಂಟಿನೋಪಲ್, ೩ನೇ ಅಕ್ಟೋಬರ್,—ತುರ್ಕಿ ಸೇನೆಯು [illegible] ತುರ್ಕಿ ದೇಶದ ಯುದ್ಧಸನ್ನಾಹ [illegible] ಅಗಿದೆ.

BANGALORE —Printed and published for the Proprietor, at the KARNATIC PRESS —1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಶಾ ಮವಿವಿದಪ್ರಪ್ರಪೃಪಗನಾರ್ಪ್ಪಕರ್ಣಾಟಕಪ್ರಕಾಶಿಕನವರಾಭಿದಾಪ್ರಥಿತಾಹಿತಿಶೋಭಿತಾ ‖ ಮೃಗಾಂಕಹಿತವಾಸರೇನಿಹಿರಮುದ್ರಣಾಸಜ್ಜನೈರ್ದ್ವಿಶಾಸುಪರಿಶೋಭಿತಾದಿಶತಿಮಾನಸುಸುಮುದಂ

Vol XII.] BANGALORE—MONDAY, OCTOBER 12, 1885. [No. 41.

ಸಂಪುಟ ೧೨.] ಬೆಂಗಳೂರು—ಸನ್ ೧೮೮೫ನೇ ಇಸವಿ ಅಕ್ಟೋಬರ್ ೧೨ನೇ ತಾರೀಖ್ ಸೋಮವಾರ. [ಸಂಚಿಕೆ ೪೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ... ... ೧೨—೦—೦

ಇಂಗ್ಲಿಷ್ [illegible] ... ... ೬—೦—೦

ಕನ್ನಡ [illegible] ... ೬—೦—೦

[illegible] ೦—೮—೦

[illegible] ೦—೪—೦

[illegible] ೦—೫—೦

[illegible]

ಪ್ರಕಟನೆಯ ರಿವಾಜ್.

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARASANGRAHA

Price including Postage, Rs 5-0-0

[illegible]

ನೋಟೀಸ್.

[illegible] ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ [illegible] ವಿಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

[illegible]	೧—೪—೦
[illegible]	೦—೧೨—೦
[illegible] (ಪಟ್ಟಾಂಕಿತ)	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೭—೦
[illegible]	೦—೨—೦
[illegible]	೫—೦—೦

ಕನ್ನಡ ಗ್ರಂಥಗಳು.

[illegible]	೦—೭—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೬—೬
[illegible]	೦—೨—೬
[illegible]	೦—೭—೦
[illegible]	೦—೩—೦
[illegible]	೦—೨—೦
[illegible]	೦—೦—೯
ಇಂಗ್ಲಿಷ್ ಕನ್ನಡ [illegible]	೧—೦—೬
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬

[illegible]

[illegible]	೦—೮—೦
[illegible]	೦—೮—೦
[illegible]	

ಸಂಸ್ಕೃತ ಮೂಲಗ್ರಂಥಗಳು

[illegible]	೦—೩—೦
[illegible]	೦—೫—೦
[illegible]	೦—೬—೦
[illegible]	೦—೬—೦
[illegible]	೦—೬—೦
[illegible]	೦—೩—೬
[illegible]	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತರಹಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ನೋಟಿಸ್.

ಹಿಂದೂ ಸ್ತ್ರೀ ಪುನರ್ವಿವಾಹಸಂಘ.

ಮೇಲಿನ ಸಂಘವನ್ನು ಕುರಿತ ಯಾವ ವಿಷಯವನ್ನಾದರು ತಿಳಿಯಲಪೇಕ್ಷಿಸುವ, ಮತ್ತು ಅದೇ ವಿಷಯದಲ್ಲಿ ಸಂಶಯಾಸ್ಪದವಾದ ಅಥವಾ ವಿವಾದಗ್ರಸ್ತವಾದ ಅಂಶಗಳಿಗೆ ಸಮಾಧಾನವನ್ನು ಕೇಳಲಪೇಕ್ಷಿಸುವ ದೊಡ್ಡ ಮನುಷ್ಯರು ಇವರಡಿ ರುಜು ಮಾಡಿರುವವರ ಮೂಲಕ ತಿಳಿದುಕೊಳ್ಳಬಹುದು.

ಇದಕ್ಕೆ ಸಂಬಂಧಪಟ್ಟ ವಾದ ಗ್ರಂಥಗಳು ಸಹ ಸಾಧ್ಯವಾದರೆ ಸರಬರಾಯಿಮಾಡಲ್ಪಡುವದು.

ಬಿ ನರಸಿಂಗರಾವ್,

ಬೆಂಗಳೂರು ಸಿದ್ದೀಕಟ್ಟೆ ಬೀದಿಯಲ್ಲಿ

೧೬ನೇ ನಂಬರ್ ಮನೆ.

ನೋಟಿಸ್.

ಈ ಕೆಳಗೆ ರುಜು ಮಾಡಿದ ಕಾಶೀ ನಾರಾಯಣ ದೀಕ್ಷಿತನಿಂದ ಕೊಡಲ್ಪಡುವ ನೋಟಿಸು ಏನಾಗಿ. ನನ್ನ ಮಗ ಸುಬ್ರಹ್ಮಣ್ಯದೀಕ್ಷಿತನು ಈಗ ೪ ವರುಷಗಳಿಂದ ದುರ್ಮಾರ್ಗಿಗಳ ಸಹವಾಸದಿಂದ ದುರ್ವ್ಯಸನಿಯಾಗಿಯೂ ಸ್ವೇಚ್ಛೆಯಾಗಿಯೂ ನಡೆಯುತಿದ್ದು ಯಜಮಾನನಾದ ನನ್ನ ಬುದ್ಧಿವಾದಗಳನ್ನು ಉಲ್ಲಂಘಿಸಿ ತನ್ನ ದುರ್ಮಾರ್ಗವನ್ನು ಬಿಡದೆ ಸಾಲಗಳನ್ನು ಮಾಡುತ್ತಾನಾಗಿಯೂ ನನ್ನ ಸ್ವತ್ತುಗಳಮೇಲಿನ ದೃಷ್ಟಿಯಿಂದ ಜನಗಳು ಸಾಲಕೊಡುವದಾಗಿ ತಿಳಿಯಬರುವದರಿಂದಲೂ ಸದರೀ ನನ್ನ ಮಗನಿಗೆ ಇದುವರಿವಿಗೆಯಾರಾದರೂ ಸಾಲಕೊಟ್ಟಿದ್ದರೂ ಅಥವಾ ಮುಂದೆ ಕೊಟ್ಟರೂ ದುರ್ಮಾರ್ಗಕ್ಕೆ ಪುರಸ್ಕರ ಮಾಡಲ್ಪಡುವ ಆ ಸಾಲವು ನಮ್ಮ ಕುಟುಂಬದ ಸ್ವತ್ತುಗಳಿಗೆ ಬಾಧಿಸುವದಾದ್ದಲ್ಲವೆಂದುಯೆಲ್ಲಾ ಜನಗಳಿಗೂ ಇದರಿಂದ ಖಂಡಿತವಾಗಿ ತಿಳಿಸಿದ್ದೇನೆ.

ತಾ॥ ೨೧ನೇ ಸೆಪ್ಟಂಬರ್ ಸನ್ ೧೮೮೫.

(ರುಜು) ಕಾಶೀ ನಾರಾಯಣದೀಕ್ಷಿತ.

ತೀರ್ಥಹಳ್ಳಿ ತಾ॥ ದೊಮ್ಮರಸಯ್ಯನ ಅಗ್ರಹಾರ

ಬೆಂಗಳೂರು ಟೌನ್ ಮ್ಯುನಿಸಿಪಲ್ ಬೋರ್ಡ್ ಆಫೀಸ್.

ಪ್ರಕಟನೆ.

೧. ಈಗ ಶಹರಿನ ಅನೇಕ ವಾಸಗೃಹಗಳಲ್ಲಿರುವ ಕೇವಲ ಆಳವಾದ ಪಾಯಖಾನೆಗಳಲ್ಲಿ ಬಹಳವಾಗಿ ಅಮೇಧ್ಯವನ್ನು ಜಮಾಯಿಸಿಡುವದು, ಪ್ರಜೆಗಳ ಆರೋಗ್ಯ ವಿಧಾನವನ್ನೂ ಗೃಹಸುಖವನ್ನೂ ಪರ್ಯಾಲೋಚಿಸಲಾಗಿ, ಕೇವಲ ಆಕ್ಷೇಪಣೀಯವಾದ್ದಾಗಿರುತಿದೆ. ಇವು ಭಾವಿಯ ನೀರಿನ ಪರಿಶುದ್ಧ್ಯವು ಹೋಗಲಾಡಿಸುವದಕ್ಕೂ ಜನಗಳ ಉಚ್ಛ್ವಾಸವಾಯುವನ್ನು ಅಪಾಯಕರವಾಗುವಂತೆ ಕಡಿಸಲಿಕ್ಕೂ ಮುಖ್ಯ ಕಾರಣವಾಗಿರುತಿವೆ. ಪ್ರತಿ ದಿನವಲ್ಲಿಯೂ ಸಾಫ್ ಮಾಡುವ ಪದ್ಧತಿಯನ್ನು ಜಾರಿಯಲ್ಲಿ ತರುವ ವಿಷಯದೊಳು ಆಗಿಂದಾಗ್ಯೆ ಮ್ಯುನಿಸಿಪಲ್ ಬೋರ್ಡಿನವರಿಂದ ಮಾಡಲ್ಪಡುವ ಪ್ರಯತ್ನವನ್ನು ನವೀನ ಕಲ್ಪಿತವಾದದ್ದೆಂತಲೂ ಪೂರ್ವ ಪದ್ಧತಿಗೆ ವಿರುದ್ಧವಾದದ್ದೆಂತಲೂ ಭಾವಿಸಿ ಅದನ್ನು ನಿರೋಧಿಸಲಿಕ್ಕೆ ಜನಗಳು ಪಡೇಪದೆ ಪ್ರಯತ್ನ ಪಡುತ್ತಾರೆ. ಪರಂತು ಅಮೇಧ್ಯ ಮೊದಲಾದ ಕಲ್ಮಲ ಪದಾರ್ಥಗಳನ್ನು ಜಮಾಯಿಸಿಡುವದರಿಂದ ವಿಶೇಷತಃ ವರ್ಷಋತುವಿನಲ್ಲಿ ಅಸಹ್ಯವಾದ ದುರ್ಗಂಧ ಪ್ರಾಪ್ತವಾಗುತಿದೆಂಬದನ್ನೊಬ್ಬರೂ ಒಪ್ಪದೆ ಹೋಗುವದಿಲ್ಲವು. ನಾನು ಮನೆಗಳ ಅಜಮಾಯಿಷೀಬಗ್ಯೆ ಹೋಗಿದ್ದ ವೇಳೆಯಲ್ಲಿ ಪ್ರಕೃತ ಸ್ಥಿತಿಯಂ ಅನೇಕತಡವೆ ನೋಡಿ ತನ್ಮೂಲಕ ಪ್ರಾಪ್ತವಾಗುವ ಕೇಡನ್ನು ಕೂಡಲೇ ಮನೆಯವರಿಗೆ ತಿಳಿಸಿದೆನು.

೨. ಇಂತಾದುಷ್ಪದ್ಧತಿಯಂ ಹೋಗಲಾಡಿಸಿ ಯೋಗ್ಯವಾದ ಪ್ರತಿಕ್ರಿಯೆಯಂ ಮಾಡುವದರ ಮೂಲಕ ವೈಲಕ್ಷಣ್ಯವನ್ನೂ ಆರೋಗ್ಯವನ್ನೂ ಕಲ್ಪಿಸಲಿಕ್ಕೆ, ಮ್ಯುನಿಸಿಪಲ್ ರೆಗ್ಯುಲೇಷನಿನ ೧೮ನೇ ಸೆಕ್ಷನಿನ ನಿಯಮವನ್ನು ಜಾರಿಯಲ್ಲಿ ತರಬೇಕಾದ್ದೊಂದುವಿನಾ ಮತ್ತಾವ ಮಾರ್ಗವೂ ಇರುವದಿಲ್ಲವು. ಪ್ರತಿಯೊಂದುಮನೆಯ ಯಜಮಾನನಾಗಲಿ, ಅನುಭವದಾರನಾಗಲಿ ತನ್ನ ಮನೆಯಲ್ಲಿ ೨೪ ಘಂಟೆಗಳಕಾಲಕ್ಕೆ ಮೇಲ್ಪಟ್ಟು ಕಲ್ಮಲ, ನಗಣಿ, ಮಲ, ಅಥವಾ ದುರ್ಗಂಧಕರವಾದ ಗೊಬ್ಬರಗಳನ್ನು ಜಮಾಯಿಸಿಟ್ಟಿದ್ದರೆ ಅವನು ಜುರ್ಮಾನೆಯಮೂಲಕ ದಂಡಿಸಲ್ಪಡತಕ್ಕದ್ದೆಂದು ಸದರೀ ೧೮ನೇ ಸೆಕ್ಷನ್ ವಿಧಿಸುತಿದೆ. ಮ್ಯುನಿಸಿಪಲ್ ಯಾ ಸ್ವಂತ ಹಲಾಲ್‌ಖೋರರಿಂದ ಪ್ರತಿದಿನದಲ್ಲಿಯೂ ಸಾಫ್‌ಮಾಡಿಸಲಿಕ್ಕೆ ಅವಕಾಶವಿಲ್ಲದ ಸ್ಥಳಗಳಲ್ಲಿರುವ ಪಾಯಖಾನೆಗಳ ವಿಷಯದಲ್ಲಿ ೨೨ನೇ ನಂಬರ್ ಬೈಲಾ ಯಾನೆ ಉಪನಿಬಂಧನೆಯು ಜಾರಿಯಲ್ಲಿ ತರಲ್ಪಡುವದು.

೩. ಮೇಲೆಕಂಡ ಕಾನೂನಿನ ನಿಯಮಗಳನ್ನು ಜಾರಿಯಲ್ಲಿ ತರತಕ್ಕಬಗ್ಯೆ ಪ್ರತ್ಯೇಕ ಇಬ್ಬರು ಓವರ್‌ಸಿಯರ್‌ಗಳು ಮೊಕರರ್ಮಾಡಲ್ಪಟ್ಟಿರುತ್ತಾರೆ. ಶಹರಿನಲ್ಲಿರುವ ಪಾಯಖಾನೆಗಳನ್ನೆಲ್ಲ ಅಜಮಾಯಿಷೀಮಾಡಿ, ಮನೆಯ ಸ್ವಂತೆಗಾರನಿಗಾಗಲಿ, ಅನುಭವದಾರನಿಗಾಗಲಿ, ಅವನ್ನು ಕ್ರಮವಾಗಿ ಸಾಫ್‌ಮಾಡಿಸುವಂತೆ ತಿಳಿಸುವದೂ, ಹಾಗೆಮಾಡದೆ ಉಪೇಕ್ಷಿಸಿದರೆ ಕಾನೂನಿನಲ್ಲಿ ವಿಧಿಸಲ್ಪಟ್ಟಿರುವಪ್ರಕಾರ ನಡೆಸುವದೂ ಅವರ ಮುಖ್ಯ ಕರ್ತವ್ಯವಾಗಿರುತಿದೆ.

೪. ಪ್ರತಿಯೊಂದು ಕುಟುಂಬದ ಎಜಮಾನರೂ ಆವಶ್ಯಕವಾದ ಮೇಲ್ಕಂಡ ಏರ್ಪಾಡುಗಳನ್ನು ಜಾರಿಯೊಳುತರುವ ವಿಷಯದಲ್ಲಿ ಓವರ್‌ಸಿಯರ್‌ಗಳಿಗೆ ಸಹಾಯಕರಾಗಿರಬೇಕಲ್ಲದೆ ತನಿಖೀಬಗ್ಯೆ ಅವರು ಮನೆಗಳೊಳಗಾಗಲಿ ಹಿತ್ತಲುಗಳಗಾಗಲಿ ಹೋಗುವದನ್ನು ನಿರೋಧಿಸದೆ ಇರಬೇಕೆಂದು ಇದರಿಂದ ಅಪೇಕ್ಷಿಸಲ್ಪಟ್ಟಿರುತ್ತಾರೆ. ಮ್ಯುನಿಸಿಪಲ್ ರೆಗ್ಯುಲೇಷನಿನ ದೆಸೆಯಿಂದ ಉಂಟುಮಾಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮ್ಯುನಿಸಿಪಲ್ ಕಮ್ಮಿಷನರ್‌ಗಳಗೂ ಅವರ ಆಫಿಸರ್‌ಗಳಗೂ ಅವರಸರವಿದ್ದನೊಳಗಿರತಕ್ಕ ಯಾವತಪ್ಪಿತ ಅಥವಾ ಜಮೀನಿಸಲ್ಲಾಗಲಿ ಪ್ರವೇಶಿಸಿ ಆರೋಗ್ಯನಿಮಿತ್ತದಬಗ್ಯೆ ಸಾಫ್‌ಮಾಡಿಸುವ ಅಧಿಕಾರ ಅವರಿಗೆ ಉಂಟೆಂದು ಜನಗಳ ತಿಳುವಳಿಕೆಯಬಗ್ಯೆ ಇಲ್ಲಿ ಸೂಚಿಸಲ್ಪಟ್ಟಿದೆ.

ಬೆಂಗಳೂರು ಶಹರ್ ಮ್ಯುನಿಸಿಪಲ್ ಕಮ್ಮಿಷನ್ ಆಫೀಸ್,

ತಾ॥ ೨೩ನೇ ಜುಲೈ ೧೮೮೫.

A. Srinivasa Charlu,

Vice President,

City Municipal Commission

ನೋಟೀಸ್

ತುಮುಕೂರು ಕಾರೀಯಿಂಗ್ ಕಂಪೆನಿ (ಲಿಮಿಟೆಡ್) ಸನ್ ೧೮೮೫ನೇ ಇಸವಿ ಸೆಪ್ಟಂಬರ್ ೩೦ನೇ ತಾರೀಖ್ ಮತ್ತು ಅಕ್ಟೋಬರ್ ೪ನೇ ತಾರೀಖ್ ಗಳ ಮೀಟಿಂಗಗಳ ಪ್ರೊಸೀಡಿಂಗ್ಸ್‌ಗಳಪ್ರಕಾರ ಈ ಕಂಪೆನಿಯು ವೈಂಡಪ್ ಮಾಡಲ್ಪಟ್ಟಿರುತ್ತೆ.

ಕರಣೀಕ ಸಲ್ಲಪ್ಪ,
ಲಿಕ್ವಿಡೇಟರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 12, 1885

೧೮೮೫ನೇ ಅಕ್ಟೋಬರ್ ೧೨ನೇ ತಾ॥ ಸೋಮವಾರ

ಶ್ಲೋ॥ ಸರ್ವಜ್ಞತಾಂಸದಸಿವಾಕ್ಪಟುತಾಂಪ್ರಸೂತೆ ಪಾಶಿತ್ವದಂಭ್ರಸರಸೀರುಹಸೋದರಪ್ರಣಾಮಃ॥ತ್ವಾಮೆ ವದೇವಿಮನಸಾಸಮನುಸ್ಮರಾಮಿ ತ್ವಾಮೇವನೌಮಿಶರ ಣಂಜನನೀತ್ವಮೇವ॥

INSTALLATION OF THE NEW GOOROO TO THE MAHARAJAH

ಮೈಸೂರು ರಾಜಗುರುಗಳಾದ ಶ್ರೀ ರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಯವರು ಸ್ವಾಶ್ರಮೋಚಿತ ಧರ್ಮಾನುಷ್ಠಾನ ಪರರಾಗಿದ್ದು ಪರಮಪದವನ್ನೈದಿದರೆಂಬ ವೃತ್ತಾಂತವನ್ನು ಈಗ್ಯೆ ಒಂದುತಿಂಗಳಹಿಂದೆಯೇ ಈಪತ್ರಿಕಾಮೂಲಕ ತಿಳಿಸಿದ್ದೆವಷ್ಟೆ. ಇವರ ಕಾಲಾನಂತರ ಆಶ್ರಮ ಸ್ವೀಕಾರಕ್ಕೆ ಯೋಗ್ಯರಾದವರನ್ನು ಹುಡುಕುವ ನಿಮಿತ್ತದಿಂದಿಷ್ಟುಕಾಲ ಮಠವು ಅನಾಥವಾಗಿತ್ತು. ಈಗ ಸದರೀಪೀಠಕ್ಕೆ ಒಬ್ಬರೇರ್ಪಟ್ಟು ಅವರಿಗೆ ಯಥಾವಿಧಿಯಾಗಿ ಮಾಹೇಮಜಕೂರು ೨ನೇ ತಾರೀಖು ಶುಕ್ರವಾರದದಿನ ಆಶ್ರಮಕೊಡಲ್ಪಟ್ಟಿತೆಂದು ನಮ್ಮ ಮೈಸೂರು ಬಾತಮೀದಾರನಿಂದತಿಳಿವೆವು. ಪರಂತು ಆತನ ಕಾಗದವು ಸ್ವಲ್ಪ ಕಾಲಾತಿಕ್ರಮದಿಂ ನಮಗೆ ತಲಪಿದ್ದರಿಂದ ಈ ವೃತ್ತಾಂತವನ್ನು ಈವಾರದಲ್ಲಿ ನಮ್ಮ ಚಂದಾದಾರರಿಗೆ ತಿಳಿಸಬೇಕಾದವರಾದೆವು. ನಮ್ಮ ಬಾತಮೀದಾರನು ತನ್ನ ಕಾಗದದಲ್ಲಿ, ಪ್ರಕೃತ ಸ್ವಾಮಿಯವರು ಸನ್ಯಾಸಾಶ್ರಮವಂಪರಿಗ್ರಹಿಸಿದಕಾಲದಲ್ಲಿ ವಿಶೇಷ ಸಂರಂಭಗಳಿಗೆ ಅವಕಾಶವಿಲ್ಲದೆಹೋಯಿತೆಂತಿಳಿಸುತ್ತಾನೆ. ಈ ಅಂಶ ನಿಜವಾಗಿರುವಪಕ್ಷಕ್ಕೆ ಇದರಕಾರಣವನ್ನೂಹಿಸಲಿಕ್ಕೆ ನಾವು ಅಶಕ್ತರಾಗಿದೇವೆ. ಈಗ ಪಟ್ಟಾಭಿಷಿಕ್ತರಾದ ಸ್ವಾಮಿಯವರು ಸುಮಾರ್ ಐವತ್ತುವರುಷಗಳಗೊಳಪಟ್ಟವಯಸ್ಸುಳ್ಳವರಾಗಿಯೂ, ವ್ಯಾಕರಣ ಸಾಹಿತ್ಯಗಳಲ್ಲಿ ಒಳ್ಳೆಯ ಜ್ಞಾನವುಳ್ಳವರಾಗಿಯೂ, ದೇಹಪುಷ್ಟಿವುಳ್ಳವರಾಗಿಯೂ ಇರುವಂತೆ ತಿಳಿಯಬರುತಿದೆ. ಈ ಸ್ವಾಮಿಯವರು ಹೊಸದುರ್ಗ ಪ್ರಾಂತದೊಳು ಜನಿಸಿ ಮೈಸೂರಲ್ಲಿ ಶಾಸ್ತ್ರಾಭ್ಯಾಸಮಾಡಿ ಅಲ್ಲಿಂದ ಪನಪರ್ತಿಸಂಸ್ಥಾನಕ್ಕೆಹೋಗಿ ಅಲ್ಲಿನ ಅರಸರವಾತ್ಸಲ್ಯವು ಕ್ರಮೇಣ ಸಂಪಾದಿಸಿಕೊಂಡು ಗೌರವ್ಯವಾಗಿ ಇರುತಲಿದ್ದರು. ಸ್ವಾಮಿಗಳವರು ಈ ಮಠದ ಆಶ್ರಮ ಸ್ವೀಕಾರಾರ್ಹರಾದವರಲ್ಲಿ ಪಂಡಿತರೆನ್ನಿಸಿಕೊಂಡವರಾಗಿಯೂ, ಅವರಗುರುಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರೆನಿಸಿಕೊಂಡವರಾಗಿಯೂಇರುತ್ತಾರೆ.

ಇವರು ಬಾಲಕುಟುಂಬವುಳ್ಳವರಾಗಿಯೂ, ಗಾರ್ಹಸ್ಥ್ಯಾಭಿಮಾನವುಳ್ಳವರಾಗಿಯೂ ಇರುವಂತೆ ಅರಿತೆವು. ಕೆಲವು ವರುಷಗಳಹಿಂದೆ ಇವರಿಗೆದೈವಯೋಗದಿಂದ ಪತ್ನೀವಿಯೋಗವುಂಟಾದದರಿಂದ ಆಶೋಕ ನಿವಾರಣಾರ್ಥ ಮರಳಿ ವಿವಾಹಮಾಡಿಕೊಂಡರೆಂತಲೂ, ಆಕೆಗೆ ಇನ್ನೂ ೨೦ ವರುಷಗಳವಯಸ್ಸುಪೂರ್ತಿಯಾಗಿ ಕಳೆಯಲಿಲ್ಲವೆಂತಲೂ, ಈಗ ಒಂದುಮಗುಸಹ ಇರುವಂತೆಯೂ, ತಿಳಿಯಬರುತಿದೆ. ಇವರುಆಶ್ರಮಸ್ವೀಕಾರಾರ್ಥ ಹೊರಟುಬರುವಕಾಲದಲ್ಲಿ ತಮ್ಮಉದ್ದೇಶ್ಯವನ್ನು ಭಾರ್ಯಾಪುತ್ರರೊಬ್ಬರಿಗೂ ತಿಳಿಸಲಿಲ್ಲವೆಂತಲೂ ಕಾರಣಾಂತರಗಳಿಂದ ಅನರನ್ನೊಡಂಬಡಿಸಿ ಜಾಗ್ರತೆಯೊಳು ಮರಳಿ ಹಿಂದಿರಿಗಿಬರುವಂತೆ ವಾಗ್ದಾನಮಾಡಿಬಂದರೆಂತಲೂ ಕೇಳುತ್ತೇವೆ. ಈಕಾರ್ಯ ಕಾರಣಗಳನ್ನೂ ನಮ್ಮ ಬಾತಮೀದಾರನು ತಿಳಿಸಿದ ಮಾತನ್ನೂ ಆಲೋಚಿಸಲಾಗಿ ವಿಭ್ರಾಂತ ಶಂಕೆಯಿಂದ ಅರೀತಿ ನಡಿಸಿದಂತೆ ಎಣಿಸಬೇಕಾಗಿದೆ. ಈಸನ್ಯಾಸಾಶ್ರಮವನ್ನು ಪರಿಗ್ರಹಿಸಬೇಕೆಂದು ಹಿಂದೆ ನಾವು ಸೂಚಿಸಿದ್ದ ಶ್ರೀಮಾನ್ ವೆಂಕಟಕೃಷ್ಣ ಮಾಚಾರ್ಯರುಅಪೇಕ್ಷಿಸಲ್ಪಟ್ಟಕಾಲದಲ್ಲಿ ತಾವು ಆಶ್ರಮವನ್ನಂಗೀಕರಿಸಲಿಕ್ಕೆ ತಮ್ಮ ಭಾರ್ಯೆಯ ಅನುಮತಿಯು ಪ್ರಧಾನ್ಯವಾಗಿರುವದರಿಂದ ಅದು ಸದ್ಯಃ ದುರ್ಲಭವಾದಕಾರಣ ತಮಗೆ ಆಶ್ರಮಆವಶ್ಯಕವಿಲ್ಲವೆಂದು ಅನೇಕಕಾರಣಗಳಲ್ಲಿ ಇದನ್ನೇಮುಖ್ಯವಾಗಿ ತಮಗೆ ಆಪ್ತರಾದವರೊಡನೆ ತಿಳಿಸಿದಂತೆ ನಮ್ಮ ಕೇಳ್ವಿಕೆಗೆ ಬಂದಿರುತಿವೆ. ಏಮಿಟಿ ೨ನೇ ತಾ॥ ಶುಕ್ರವಾರದದಿನ ಆಶ್ರಮಸ್ವೀಕಾರವೂ, ಮಾರನೆಯದಿನ ಪಟ್ಟಾಭಿಷೇಕೋತ್ಸವವೂಸುದರ್ಶೋಚಿತವಾಗಿಜರಿಗಿದವು. ಪಟ್ಟಾಭಿಷೇಕದ ದಿನ ಮಹಾರಾಜರವರೂ ರಾಜಬಂಧುಗಳೂ ಅಹಲ್ಕಾರರೂ ಇತರರುಸಹ ಬಂದಿದ್ದರು. ಶ್ರೀಸ್ವಾಮಿಗಳವರು ವಿಶಿಷ್ಟರಾಜಮರ್ಯಾದೆಗಳೊಡನೆಯೂ,ಬಾಲ್ ಸವಾರಿಪಾಜಿಗಳೊಡನೆಯೂ,ಕೋಟೆಯಲ್ಲಿರುವ ಶ್ರೀಪ್ರಸನ್ನಕೃಷ್ಣಸ್ವಾಮಿ ದೇವಸ್ಥಾನಕ್ಕೂ ವರಾಹಸ್ವಾಮಿ ದೇವಸ್ಥಾನಕ್ಕೂ ದಯಮಾಡಿದರು. ಆ ಕಾಲದಲ್ಲಿ ಮರ್ಯಾದಾರ್ಥ ಕೋಟೆಯ ಬತೇರಿಯಿಂದ ೨೧ ತೋಫೆಗಳು ಉಡಾಯಿಸಲ್ಪಟ್ಟವು.

ಈ ಮಠವು ಮರಳಿ ವ್ಯವಸ್ಥಾಪಿಸಲ್ಪಟ್ಟ ಕಾಲದಲ್ಲಿ ಇದಕ್ಕೆ ಇರುವ ಸುಮಾರ್ ಲಕ್ಷ ಐವತ್ತುಸಾವಿರ ರೂಪಾಯಿಗಳ ಸಾಲಕ್ಕಾಗಿ ಕೆಲವು ಪಟ್ಟಿಗೆ ಏರ್ಪಾಡುಗಳುಮಾಡಲ್ಪಟ್ಟಂತೆಯೂ, ಮಠದ ಸಾಲವನ್ನು ತೀರಿಸುವದಕ್ಕಾಗಿ ಅರಮನೆಯಿಂದಾಯಿಸಿ ಅಸಿಸ್ಟೆಂಟ್‌ಕಮ್ಮಿಷನರವರು ಮಹಾರಾಜರವರ ಆಜ್ಞೆಯಂತೆ ಮಠಕ್ಕೆ ಸಾಲೀಯಾನಾ ಬರತಕ್ಕ ವಿಶಿಷ್ಟ ಅನುದಾನಿಗಳನ್ನೂ ತೆಗೆದುಕೊಂಡು ಮಾಹೆಯಾನಾ ಸಂತರ್ಪಣೆ ಖರ್ಚಿಗಾಗಿ ನಿಗದೀಮೊಬಲಗ ಕೊಡುವಂತೆಯೂ, ಬಾಕೀಮೊಬಲಗನ್ನು ಸಾಲಗಾರರಿಗೆ ದಾಮಾಷಾಯಿಪ್ರಕಾರ ಕೊಡುವಂತೆಯೂ ಏರ್ಪಾಡುಮಾಡಿದ್ದಾರೆ.

ಇವರ ಭಾರ್ಯಾಪುತ್ರರು ಕೇವಲ ಬಾಲ್ಯದಶೆಯೊಳಿರುವದರಿಂದ ಅವರಿಗೆ ಜೀವನಾರ್ಥ ಮಾಹೆಯಾನಾ ವೇತನ ಏರ್ಪಾಡಾಗಿರುತಿದೆ. ಇದರಿಂದ ಮಠದ ಸಾಲಗಾರರಿಗೆ ಒಂದುಬಗೆ ಏರ್ಪಾಡೂ, ಮಠದ ಶಿಷ್ಯರಿಗೊಂದುಬಗೆ ಪ್ರೋತ್ಸಾಹವೂ, ಅವರ ಕುಟುಂಬದವರಿಗೆ ಒಂದುಬಗೆ ಜೀವನಾಧಾರವೂ, ಕಲ್ಪಿಸಲ್ಪಟ್ಟಂತೆ ಆಯಿತಲ್ಲದೆ ಶ್ರೀಮನ್ಮಹಾರಾಜರವರಿಗೆ ಕೀರ್ತಿಯೂ, ಮಠಕ್ಕೆ ಗೌರವವೂ ಉಂಟಾಯಿತು.

ಶ್ರೀ ಸ್ವಾಮಿಗಳವರ ಭಾರ್ಯೆಯು ಈಗ ಏರ್ಪಾಟಾಗಿರುವ ವೇತನದಿಂದ ತೃಪ್ತಳಾಗಿ ತನ್ನ ಅಭಿಮಾನ ಪಾತ್ರರಾದ ಸ್ವಾಮಿಗಳವರನ್ನೂ ಮಠವನ್ನೂಕಟಸವಿರಲಾರಳೆಂದುನಂಬುತ್ತೇವೆ.ಯಾತಕ್ಕೆಂದರೆ,ಸನ್ಯಾಸಿಯ ಭಾರ್ಯೆಯಾಗಿರುವಣವು ಸ್ತ್ರೀಯರಿಗೆ ಕೇವಲ ದುಃಖಕರವಾದದ್ದು.ತಥಾಪಿ ಪತಿಯಿಂದ ವಂಚಿತಳಾದವಳ ದುಃಖವು ಅಪರಿಹಾರ್ಯವಾದದ್ದು. ಈಕೆಯ ಬಾಲ್ಯದಶೆಯನ್ನಾಲೋಚಿಸಲಾಗಿ ತನ್ನ ಪತಿಯು ಸನ್ಯಾಸವಂ ಪರಿಗ್ರಹಿಸಲಿಕ್ಕೆ ಈಕೆ ಸಮ್ಮತಿಸಲಿಲ್ಲವೆಂಬದು ನ್ಯಾಯವಾಗಿರುತಿದೆ ಭಾರ್ಯೆಯ ಅನುಮತಿಯಂಪಡೆಯದೆ ಆಶ್ರಮ ಸ್ವೀಕಾರಮಾಡಿಕೊಂಡದೋಷವು ಜೀವನಾಂಶದಿಂದ ನಿವೃತ್ತಿಯಾದಂತೆ ಎಣಿಸಬೇಕಾಯಿತು. ಭಾರ್ಯಾಸುತಾದವನ್ನು ಸಹಿಸುತಿಸದೆ ಸ್ವಾಮಿಗಳು ಸನ್ಯಾಸಾಶ್ರಮವಂ ವಹಿಸಿದ್ದು ತಮ್ಮ ಉತ್ತಾರಣಾರ್ಥವಾಗಿಯೇ, ಶಿಷ್ಯಾನುಗ್ರಹಾರ್ಥವಾಗಿಯೇ, ಸ್ವಜನ ಸುರಕ್ಷಣಾರ್ಥವಾಗಿಯೇ, ಸ್ವಕುಟುಂಬ ಸಂರಕ್ಷಣಾಶಕ್ತತೆಯಿಂದಲೇ ಎಂಬ ನಾಲ್ಕು ವಿಧ ವಿಪ್ರತಿಪತ್ತಿಗೆ ಇಲ್ಲಿ ಅವಕಾಶ ವುಂಟಾಗುತಿವೆ. ಸ್ವೋತ್ತಾರಣಾರ್ಥವಂದರೆ ಮಠಾಧಿಪತಿತ್ವವು ಕೇವಲ ಸನ್ಯಾಸವೆನ್ನಿಸಿಕೊಳ್ಳಲಾರದಾದ್ದರಿಂದ ಇದನ್ನು ಶುದ್ಧ ಲೌಕಿಕಾಧಿಪತ್ಯವೆಂದೆಣಿಸಬೇಕಾಗಿದೆ ಎರಡನೆಯದಾದ ಶಿಷ್ಯಾನುಗ್ರಹಾರ್ಥವೆಂಬದು ಪರ್ವತವನ್ನು ವಾತಪ್ರಚಾರದಿಂದ ತಪ್ಪಿಸಲೆತ್ನಿಸುವಂತೆ, ಕೇವಲ ಅಸಾಧ್ಯೋದ್ದೇಶವಾದ್ದಾಗಿರುತಿದೆ. ಮೂರನೆಯದಾದ ಸ್ವಜನ ಸುರಕ್ಷಣಾರ್ಥವೆಂಬದನ್ನು ಕೆಲವುಮಟ್ಟಿಗೆ ಅಂಗೀಕರಿಸಬಹುದು. ಆದಾಗ್ಯೂ ಈಗ ಮಠವು ಋಣಬಾಧಿತವಾಗಿರುವದರಿಂದಲೂ, ಈಕಾಲದ ಲೌಕಿಕರು ಮಠದ ನಿರ್ಬಂಧಗಳಿಗೆ ಸ್ವತಃ ಒಳಗಾಗುವದಕ್ಕೆ ಬದಲಾಗಿ ಮಠಾಧಿಪತಿಗಳನ್ನು ಒಂದು ನಿರ್ಬಂಧಕ್ಕೆ ಒಳಪಡಿಸುವದರಲ್ಲಿ ಸಮರ್ಥರಾಗಿರುವದರಿಂದಲೂ, ಈ ಸ್ಥಿತಿಯಲ್ಲಿ ತಮ್ಮ ಸನ್ಯಾಸದಿಂದ ವಿಶೇಷ ಪ್ರಯೋಜನವಿಲ್ಲವೆಂಬ ಅಂಶವನ್ನು ಪಂಡಿತರಾದ ಈಗಿನ ಸ್ವಾಮಿಯವರು ಅರಿಯದಿರಲಾರರು. ಕುಟುಂಬ ನಿರ್ವಹಣಾಶಕ್ತತೆಯಿಂದೆಂದು ಹೇಳಕೂಡದು. ಈ ಸ್ವಾಮಿಗಳು ಸ್ವಯಂ ಪಂಡಿತರಾಗಿಯೂ, ಉಪಪನ್ನರಾಗಿಯೂ, ಸಂಸ್ಥಾನಾಧಿಪತಿಗಳ ಆಶ್ರಯವುಳ್ಳವರಾಗಿಯೂ ಇದ್ದದರಿಂದ ಅವರ ವಿಷಯದಲ್ಲಿ ಅರ್ಥಾನುಪಪತ್ತಿಯನ್ನೊಬ್ಬರೂ ಶಂಕಿಸಲಾಗದು. ಪರಂತು, ಇವರ ಮಠೀಯಾಶ್ರಮ ಸ್ವೀಕಾರಕ್ಕೆ ಉದ್ದೇಶವೇನಿರಬಹುದೆಂದರೆ, ಶ್ರೀಮಠದಲ್ಲಿ ಆರಾಧಿತರಾಗಿರುವ ಶ್ರೀ ಹಯಗ್ರೀವರು ತಮ್ಮನ್ನೇ ಜೀವನಾಧಾರವನ್ನಾಗಿ ಮಾಡಿಕೊಂಡಿರುವ ಕೆಲವು ಮುದಿ ಭಕ್ತರಸುರಕ್ಷಣಾರ್ಥ, ಮಠಾಧಿಕಾರಿಗಳ ಜಿಹ್ವಾಗ್ರಮೂಲಕ ಮಹಾರಾಜರವರ ಕಾರ್ಬಾರೀ ಅಧಿಕಾರಿಗಳ ಮನದೊಳ್ ಪ್ರವೇಶಿಸಿ ವಿಶೇಷವೊಳಿದ್ದ ಈ ಪಂಡಿತರನ್ನು ತಮ್ಮ ಸನ್ನಿಧಿಗೆ ಆಕರ್ಷಿಸಿಕೊಂಡರೆಂದು ಹೇಳಬೇಕಾಗಿದೆ. ಇಂತಾ ದೈವಸಂಕಲ್ಪಕ್ಕೆ ಮಹಾರಾಜರವರು ಕಾರಣರಾದರು. ಸ್ವಾಮಿಯವರ ಆಶ್ರಮಸ್ವೀಕಾರ ವಿಷಯದಲ್ಲಿ ಯಾರ ವಾದ ಭೇದಗಳೂ ಈಗ ಪ್ರಯೋಜನಕಾರಿಗಳಲ್ಲವು

A GRAND DINNER

ಲೋಕದಲ್ಲಿ ಮಾನವರಿಗೆ ಸರ್ವಾಪೇಕ್ಷ್ಯಯು ಅರ್ಥವೇ ಅತಿಶಯಿತವಾದದ್ದಾಗಿರುತಿದೆ ಅದೊಂದುಂಟಾದಲ್ಲಿ ಭರ್ತೃಹರಿ ತಿಳಿಸುವಂತೆ,

ಜಾತಿರ್ಯಾತುರಸಾತಲಂ ಗುಣಗಣಸ್ತ
ತ್ರಾಪ್ಯಧೋಗಚ್ಛತಾಂ ॥ ಶೀಲಂಶೈಲತಟಾ
ತ್ಪತತ್ವಭಿಜನಸ್ಸಂದಹ್ಯತಾಂವಹ್ನಿನಾ ॥
ಶೌರ್ಯೇವೈರಿಣಿವಜ್ರಮಾಶುನಿಪತತ್ವರ್ಥೋ
ಸ್ತುನಃಕೇವಲಂ ॥ ಏನ್ಯೇಕೇನವಿನಾಗುಣಾ
ಸ್ತೃಣಲವಪ್ರಾಯಾಸ್ಸಮಸ್ತಾ ಇಮೇ॥

ಸಕಲವೂ ಅನಾವಶ್ಯಕತ್ವೇನ ತೋರುತಿದೆ. ಅಂತಾ ಧನವದಿಕವಾದರೆ ರಜಸ್ತಮ ಪ್ರಾಚುರ್ಯದಿಂದ ಹೃದಯವು ಲೋಭಾಕ್ರಾಂತಿ ದುರಾದಿ ದೋಷದುಷ್ಟವಾಗಿ, ಧರ್ಮ್ಮಜಿಸಧ್ಯ್ರಯ ಬುದ್ಧಿ ಇಲ್ಲದೆ ಹೋಗುತಿದೆ. ಅಗಲಾದರೋ,

ಚತ್ವಾರೋವಿತ್ತದಾಯಾದಾಃದರ್ಮ್ಮಾಗ್ನಿ
ನೃಪತಸ್ಕರಾಃ । ಜ್ಯೇಷ್ಠಪುತ್ರಾಪಮಾನೆ
ನತ್ರಯಃಕುಪ್ಯಂತಿಸೋದರಾಃ, ಎಂಬದಾಗಿ

ದಾನಧರ್ಮಾದ್ಯನುಪಯುಕ್ತವಾದ ಧನವು ಅಗ್ನಿ ರಾಜ ಚೋರರ ಪಾಲಾಗುವದು. ಶತ್ರುಬಾಹುಳ್ಯದಿಂದ ಅರ್ಥವು ನಶಿಸಲುಅದೇ ಪ್ರಾಣವಿಯೋಗರೂಪವಾಗಿ ಪರಿಣಮಿಸುತಿದೆ. ಆದದರಿಂದಆರ್ಜಿತದ್ರವ್ಯವನ್ನು ಮಮತಾನಿವೃತ್ತಿಯಿಂದ ದಾನದಲ್ಲಿಯೂ, ಇಷ್ಟಾಪೂರ್ತಾದ್ಯಾದಿ ಕರ್ಮ್ಮಗಳಲ್ಲಿಯೂ ವಿನಿಯೋಗಿಸುವವನಿಗೆ ಪಾಪನಿವೃತ್ತಿಯೂ, ಭಗವತ್ಪ್ರೀಣನವೂ, ಸಕಲಜನ ಹೃದಯಾವರ್ಜನಾದಿ ಸಾಧಕವೂ ವುಂಟಾಗುತಿದೆ. ಆಶ್ಚರ್ಯಕಾತ್ಕಾರಕವಾದ ಇಂತಾ ಜ್ಞಾನವು ಸಾಮಾನ್ಯವಾಗಿ ಯೆಲ್ಲರಿಗೂ ಉಂಟಾಗಲರಿಯದು. ಈ ಸತ್ವಗುಣ ಪ್ರಕರ್ಷದಿಂ ಕ್ರಮೇಣ ನಿರತಿಶಯ ಭಗವದ್ಭಕ್ತನಾಗಿ ಸಿದ್ಧನೆನಿಸಿಕೊಳ್ಳುವವನು ಕೋಟಿಯಲ್ಲೊಬ್ಬನಿರುವದು ಸಹ ಸಂದೇಹಾಸ್ಪದವಾಗಿರುತಿದೆ. ಅಂತಾ ಜ್ಞಾನವೃದ್ಧನು ಯಾವಜಾತಿ ಮತದವನಾದರೂ ನಮಗೆ ಪೂಜ್ಯನಾಗದೆ ಹೋಗಲಾರನು. ಏತದ್ಗುಣವಿಶಿಷ್ಟರಾದವರು ಈಗಲೂ ಅಲ್ಲಿಯಲ್ಲಿ ಒಬ್ಬರಿಬ್ಬರು ಇಲ್ಲದೆ ಹೋಗಲಿಲ್ಲವು. ಅಂತವರು ಅಜ್ಞಾತವಾದ ದೇಶದಲ್ಲಿ ಬಹಳ ಗೋಪ್ಯವಾಗಿದ್ದರೂ ಅವರ ಸತ್ಕ್ರಿಯೆಗಳೆಂಬವು ಅವರನ್ನು ಹೊರಪಡಿಸಿ ಜನಗಳ ಪ್ರಶಂಸೆಗೆ ಪಾತ್ರರನ್ನಾಗಿ ಮಾಡುತಿವೆ. ಹೀಗಿರುವಲ್ಲಿ ಪ್ರಸಿದ್ಧರಾಗಿಯೂ ಗುಣಜ್ಞರಾಗಿಯೂ ಇರುವವರ ವಿಷಯವನ್ನು ಕುರಿತು ತಿಳಿಸಬೇಕಾದ್ದೇ ಇಲ್ಲವು. ಇಂತವರಲ್ಲೊಬ್ಬರಾದ ಅಪರಿಮಿತೈಶ್ವರ್ಯವುಳ್ಳ ಚಿಕ್‌ಸಲಾಪ್ ರಾಮರತ್ನ ರಾಯಬಹದೂರವರು ಆಗಿಂದಾಗ್ಯೆ ಬ್ರಾಹ್ಮಣ ಸಂತರ್ಪಣೆಯ ಮೂಲಕ ಮಾಡುವ ಈಶ್ವರ ಪ್ರೀಣನವು ಅವರಿಗೆ ದಿನೇದಿನೆ ಮಹತ್ಪದವಿಯನ್ನೂ ಐಶ್ವರ್ಯಾಯುರಾರೋಗ್ಯಗಳನ್ನೂ ವೃದ್ಧಿಗೊಳಿಸುತ ಬರುತಿವೆ ಇವರು ಹಿಂದೆ ಅನೇಕಾವರ್ತಿ ಇಲ್ಲಿ ಮಾಡಿಸಿದಂತೆ ಗತ ಗುರುವಾರದದಿನ ಈಪೂರಲ್ಲಿರುವ ತ್ರಿಮತಸ್ಥರಾದ ಬ್ರಾಹ್ಮಣರೆಲ್ಲರಿಗೆ ಭಕ್ಷ್ಯಭೋಜ್ಯಾದಿಗಳೊಡನೆ ಸಂತರ್ಪಣೆಮಾಡಿಸಿ ಘೀಷ(?)ಸಂ ಒಂದು ರೂಪಾಯಿ ಪ್ರಕಾರ ದಕ್ಷಿಣೆಯನ್ನಿತ್ತರು.ಸ್ಮಾರ್ತರಿಗೆ ಕಂಟೋನ್ಮೆಂಟಿನಲ್ಲಿಯೂ ಮಾಧ್ವರಿಗೆ ಪೂರ್ಣಯ್ಯನವರ ಛತ್ರದಲ್ಲಿಯೂ, ಶ್ರೀವೈಷ್ಣವರಿಗೆ ತುಳಸೀ ತೋಟದಲ್ಲಿಯೂ, ಪ್ರತ್ಯೇಕವಾಗಿಯೇ ಸಂತರ್ಪಣೆ ನಡೆಯಿತು.ಸ್ಮಾರ್ತರು ನಾಲ್ಕೈದು ಸಾವಿರ ಜನವೂ ಮಾಧ್ವರು ಮೂರುಸಾವಿರ ಮಂದಿಯೂ ಶ್ರೀವೈಷ್ಣವರು ೮೦೦ ಮಂದಿಯೂ ಭೋಜನಾರ್ಥ ಬಂದಿದ್ದರು. ಮಧ್ಯೆ ಉಂಟಾದ ವರ್ಷ ಪ್ರಯುಕ್ತವಾದ ವಿಘಾತ ವಿಲ್ಲದಿದ್ದರೆ ಬಹಳ ಚನ್ನಾಗಿ ನಡೆದಿರುವದು. ಆದಾಗ್ಯೂ ಸದರೀ ಸಾಹುಕಾರರ ಶ್ರದ್ಧಾ ಭಕ್ತಿಯು ಅಸಾಧಾರಣವಾದದರಿಂದ ಜಾಗ್ರತೆಯಾಗಿಯೇ ಅದೂ ಪರಿಹರವಾಯಿತು ಈ ಸಾಹುಕಾರರಿಗೆ ಇಲ್ಲಿನಂತೆಯೇ ವ್ಯಾಪಾರ ಕೋಠಿಗಳುಳ್ಳ ಪ್ರಸಿದ್ಧಗಳಾದ ದೊಡ್ಡ ಪಟ್ಟಣಗಳಲ್ಲಿ ಇದೇದಿನ ಬ್ರಾಹ್ಮಣ ಸಂತರ್ಪಣೆ ನಡೆದು ಒಟ್ಟು ನಾಲ್ಕೈದುಲಕ್ಷ ರೂಪಾಯಿಗಳು ಖರ್ಚಾದಂತೆಕೇಳುತ್ತೇವೆ.

ಮ್ಯೂನಿಸಿಪಲ್ ವೈಸ್ ಪ್ರಸಿಡೆಂಟ ಮಿಸ್ಟರ್ ಶ್ರೀನಿವಾಸಾಚಾರ್ಯರವರ, ಅಮಲ್‌ದಾರ್‌ಮ॥ಶೀತಾರಾಮಯ್ಯನವರ ಮತ್ತು ಸತ್ರದ ದಾರೋಗಾ ಶ್ರೀನಿವಾಸರಾಯರ ಉತ್ಸಾಹ ಶ್ರದ್ಧೆ ಜಾಗರೂಕತೆಗಳೆಂಬವು ವಿಶೇಷ ಕ್ರಮಕ್ಕೆ ಕಾರಣವಾಗಿದ್ದವಲ್ಲದೆ ಪದಾರ್ಥ ವಿಭಜನದೊಳು ಜನಗಳಿಗೆ ಪಕ್ಷಪಾತ ತೋರಿಸಲ್ಪಡದಂತೆ ಯೆಲ್ಲರೂ ಸಂತೋಷದೊಡನೆ ಹೋಗುವಂತೆ ಮಾಡಿದವು. ಇದಕ್ಕೆ ಹೊಗಸನುಸಾವಿರಾರುಮಂದಿಬಂದಿದ್ದರು ಪರಂತು ಅವರಿಗೆ ದಕ್ಷಿಣೆಮಾತ್ರ ಕೊಡಲ್ಪಡಲಿಲ್ಲವು. ಈಗಲಾಟೆಯೆಲ್ಲ ತೀರಲಿಕ್ಕೆರಾತ್ರಿ ೧೧ಘಂಟೆಯಾಯಿತು. ಇಂತಾಕಾರ್ಯವು ಸಂಸ್ಥಾನಾಧಿಪತಿಯಿಂದಲೂ ಸಾಧ್ಯವಲ್ಲದ್ದರಿಂದ ಇದನ್ನು ಜನಗಳು ಎಷ್ಟುವಿಧವಾಗಿ ಕೊಂಡಾಡಿದರೂ ಅಲ್ಪವಾಗಿರುತಿದೆ. ಈ ಸಾಹುಕಾರರಿಗೆ ಇಂತಾ ಸುಗುಣಗಳೇ ಉತ್ತರೋತ್ತರಾಭಿ ವೃದ್ಧಿಯಾಗುತ ಇವರು ನಿತ್ಯಭೋಗ ಭಾಗ್ಯಗಳನ್ನು ಅನುಭವಿಸುತಲಿರಬೇಕೆಂಬ ಅನೇಕ ಸಹಸ್ರ ಬ್ರಾಹ್ಮಣಾಶೀರ್ವಾದವು ವ್ಯರ್ಥವಾಗಲಾರದಾಗಿಅದು ಶೀಘ್ರದಲ್ಲಿಯೇನಿರೂಪಣೆಗೆ ಬರಬೇಕೆಂದುಕೋರುವೆವು.

MAHARAJA'S VISIT TO THE MYSORE SANSCRIT COLLEGE.

ಮಾಹೇಮಜಕೂರ ನಾಲ್ಕನೇ ತಾ॥ ಭಾನುವಾರದದಿನ ಶ್ರೀಮನ್ಮಹಾರಾಜರವರು ಮೈಸೂ

ಬ್ರಹ್ಮಣ್ಯ ರಾಜೆ ಅರಸಿನವರೊಡನೆ ಮೈಸೂರು ಸಂಸ್ಕೃತ ಪಾಠಶಾಲೆಗೆದಯಮಾಡಿದ್ದಂತೆ ತಿಳಯಬರುತಿದೆ. ಇದು ಸಾಂವತ್ಸರಿಕ ಪರೀಕ್ಷಾಕಾಲವಾದ್ದರಿಂದ ತಮ್ಮತಮ್ಮಯೋಗ್ಯತಾಪ್ರದರ್ಶನಾರ್ಥ ತರ್ಕ ವ್ಯಾಕರಣಾಲಂಕಾರಾದಿಗಳಲ್ಲಿ ಸಮರ್ಥರೆನಿಸಿಕೊಂಡಿರುವ ಬಹುಮಂದಿ ಪಂಡಿತರು ಮೈಸೂರಿಗೆ ಹೋಗಿರುವಂತೆ ಕೇಳುತ್ತೇವೆ. ಈ ಪಾಠಶಾಲೆಯಲ್ಲಿ ಲಭಿಸುವಸನ್ಮಾನಕ್ಕಿಂತಲೂ ಇದರ ಕೀರ್ತಿ ಪ್ರಶಸ್ತ್ಯಗಳು ದೊಡ್ಡದಾಗಿರುವದರಿಂದಪರಸ್ಥಳದ್ಜನಗಳಿಗಿದುಆಕರ್ಷಕವಾಗಿದೆ ಈಪಾಠಶಾಲಾಭಿವೃದ್ಧಿಗಾಗಿ ಶ್ರೀಮನ್ಮಹಾರಾಜರವರು ಸಾಲೀಯಾನಾ ೨೫,೦೦೦ ರೂಪಾಯಿಗಳತನಕ ದ್ರವ್ಯಸಹಾಯಮಾಡುತ್ತಾರೆ. ಆದಾಗ್ಯೂಇದನ್ನು ಉದ್ದಿಷ್ಟಸ್ಥಿತಿಗೆ ತರುವದಕ್ಕೆ ಸದರೀ ಮೊಬಲಗು ಸಾಲದೆ ಇರುತಿದೆ ಶ್ರೀಮನ್ಮಹಾರಾಜರವರ ಸವಾರಿಯು ಪಾಠಶಾಲೆಗೆಚಿತ್ತೈಸಿದಾಗ್ಯೆ ಅಲ್ಲಿ ಸುಮಾರ್ ೫೦ಮಂದಿಗೆ ಮೇಲ್ಪಟ್ಟು ಪಂಡಿತರೂ ವಿದ್ವಾಂಸರೂ ಹಾಜರಿದ್ದರು. ಆಕಾಲದಲ್ಲಿ ನಡೆದ ಪರೀಕ್ಷಾಕ್ರಮವು ಪೂರ್ಣವಾದ್ದಾಗಿಯೂ ಖುದಿರವಾದ್ದಾಗಿಯೂ ದ್ದುದ್ದಂತೆ ತಿಳಿಯಬರುತಿದೆ ಆಕಾಲದಲ್ಲಿ ನಡೆಯುತಲಿದ್ದ ದರ್ಕಾಲಂಕಾರಗಳ ಪರೀಕ್ಷಾಕ್ರಮವನ್ನೂ ವೇದಾಧ್ಯಯನ ಪರೀಕ್ಷೆಯನ್ನೂ ಶ್ರೀಮನ್ ಮಹಾರಾಜರವರು ಬಹಳ ಉತ್ಸಾಹದಿಂದ ನೋಡುತಲಿದ್ದರು. ಪಂಡಿತರು ಆಯಾ ಪರೀಕ್ಷೆಗಳಲ್ಲಿ ನುಡಿದ ವಾಕ್ಯಾರ್ಥವನ್ನು ಮಹಾರಾಜರವರು ಸುಲಭವಾಗಿ ತಿಳಿದುಕೊಳ್ಳುವಂತೆ ಸುಲಭಶಬ್ದಗಳಿಂದಅವರಿಗೆತಿಳಿಸುತಬಂದರು ಗೀರ್ವಾಣಭಾಷಾ ಪ್ರಾಬಲ್ಯನಿಸುದದಲ್ಲಿ ಮಹಾರಾಜರವರು ವ್ಯಕ್ತಪಡಿಸುತಲಿರುವ ಅಕ್ಕರೆಯು ಜಗದ್ವಿನುತನೀಯವಾಗಿರುವದರಿಂದ ಪರದೇಶಗಳಲ್ಲಿರುವ ಪಂಡಿತ ಮಂಡಲಿಯನ್ನು ಸಹ ಆಕರ್ಷಿಸುತಲಿದೆ ಅವಿನಾಶ್ಯಜನಕೂನ್ಯವಾದ ಗೀರ್ವಾಣಭಾಷೆಯನ್ನು ಮೊದಲಿನಂತೆ ಸುಸ್ಥಿತಿನಾಧಿಪತಿಗಳೆಲ್ಲರೂ ಅಭಿಮಾನಿಸಿ ಪ್ರೋತ್ಸಾಹಗೊಳಿಸುತಬಂದರೆ ಅದು ವಿಶೇಷತಃ ಪ್ರಾಚುರ್ಯವನ್ನು ಹೊಂದದಿರಲಾರದು

MUNICIPAL TAX

ಮುಂಬೈ ಮ್ಯೂನಿಸಿಪಲ್ ತೆರಿಗೆಯವಿಷಯದಲ್ಲಿ ಇಂದೂ ಪ್ರಕಾಶ್ ಯೆಂಬ ಪತ್ರಿಕೆ ಪಡುವ ಅಭಿಪ್ರಾಯವನ್ನು ಸಾಮಾನ್ಯವಾಗಿ ಯೆಲ್ಲರೂ ತಿಳದಿರಬೇಕಾಗಿರುತದೆ ಷಹರ್ ಪೇಟಿವಳಗಿ ಕಸಬೇ ವರಿವಿಗೂ ಪ್ರತಿ ಸ್ಥಳದಲ್ಲೂ ಮ್ಯೂನಿಸಿಪಾಲಿಟಿ ಯೇರ್ಪಟ್ಟಿರುವದರಿಂದಲೂ, ಸರ್ವರ ಸುಖದುಃಖಗಳಿಗೂ ಅದು ಕಾರಣ ವಾಗಿರುವದರಿಂದಲೂ, ಅದನ್ನುಕುರಿತು ಇಲ್ಲಿ ಸ್ವಲ್ಪ ವಿಚಾರ ಮಾಡಬೇಕಾಗಿದೇನುಂದರೆ, ಮುಂಬೈ ಮ್ಯೂನಿಸಿ ಪಾಲಿಟಿಯಲ್ಲಿ ಒಂದು ವಾರಕ್ಕೆ ಮನೆ ತೆರಿಗೆಯಿಂದ ರೂ॥ ೨೬,೦೮೩, ಹೊಗೇಸೊಪ್ಪಿನ ಸುಂಕದಿಂದ ರೂ॥ ೬,೭೬೩, ನೌಕರ್ನಾನೇರ ಕಸವ ತೆರಿಗೆಯಿಂದ ರೂ॥ ೨,೩೭೯, ಹಲಾಲ್ ಖೋರರ ಖರ್ಚಿನಬಗ್ಗೆ ವಸೂಲಾಗತಕ್ಕದ್ದು ರೂ॥ ೩,೨೦೦, ಜಾವರ್ಗನೇ ಮೂಲಕ ವಸೂಲಾಗುವದು ರೂ॥ ೪೨೬, ಜುಮ್ಲಾ ೩೧,೬೪೯ ರೂಪಾಯಿಗಳು ಆಗುತವೆ ಇದೇ ದಾಮಾಷಾಯಿ ಪ್ರಕಾರ ಸಾಲೀಯಾನಾ ಇಪ್ಪತ್ತುಲಕ್ಷ ರೂಪಾಯಿಗಳಿಗೆ ಜಾಸ್ತಿಯಾಗಿಯೇ ವಸೂಲಾಗುತದೆಂಬದಕ್ಕೆ ಸಂದೇಹ ವಿಲ್ಲವು ಇಂತಾ ದೊಡ್ಡ ಷಹರಿಗೆ ಕೇವಲ ಮುಖ್ಯವಾದ ಜಲಸತಿಯು ಕಮ್ಮಿಯಾಗಿರುವದರಿಂದಲೂ, ಅದನ್ನು ಚಾಲತೀ ಪುಷ್ಕಳಯಿಂದ ಕಲ್ಪಿಸುವದು ಅಸಾಧ್ಯ ವಾಗಿರುವದರಿಂದಲೂ, ಹೊಸ ತೆರಿಗೆ ಯೇರ್ಪಾಡು ಮಾಡಬೇಕಾದ್ದು ನ್ಯಾಯ್ಯವಾಗಿರುವದರಿಂದಲೂ, ಮ್ಯೂನಿಸಿ ಪಾಲಿಟಿಯವರು ಹೊಸ ತೆರಿಗೆಗ್ಗೆಯಾವ ಜನಿಸಿಯನ್ನು ಗುರಿಮಾಡಬೇಕೆಂದು ಬಹುಕಾಲದ ಮೊದಲು ಆಲೋಚಿಸುತ ಬಂದು ಕಡೆಗೆ ಕೆರೋಸಿನ್ ಯೆಣ್ಣೆ, ತುಪ್ಪ, ಶಕ್ಕರೆ, ಧಾನ್ಯ, ಇವುಗಳಮೇಲೆ ಜಕಾಯತಿ ಯೆಂಬ ಸುಂಕವನ್ನು ಕರಾರ್ ಮಾಡಬೇಕೆಂದು ನಿಶ್ಚಯಿಸಿರುತ್ತಾರೆ, ಎಂಬದು. ಮ್ಯೂನಿಸಿಪಲ್ ತೆರಿಗೆ ಯೆಂಬದು ಯಾವ ಕ್ರಮವನ್ನನುಸರಿಸಿ ಮೊಕರರಾಗತಕ್ಕದ್ದು, ಷಹರ್ ನಿವಾಸಿಗಳಲ್ಲಿ ಯಾರೇ ಆಗಲಿ ಮ್ಯೂನಿಸಿಪಲ್ ತೆರಗೆಗೆ ಗುರಿಯಾಗದೆ ಇರಕೂಡದೆಂಬದೆ? ಐಶ್ವರ್ಯವಂತರಾದವರು ಸ್ವಜನವನ್ನು ಕಾಪಾಡಬೇಕಾದ್ದು ಅವರಿಗೆ ಧರ್ಮವಾಗಿರುವದರಿಂದಲೂ ಅಂತವರು ಉಪಯೋಗಿಸುವ ಪದಾರ್ಥಗಳಮೇಲೆ ತೆರಿಗೆ ವಸೂಲ್ಮಾಡಬೇಕಾದ್ದೆ? ಯೆಂಬ ಅಂಶಗಳು ವಿಚಾರಣೀಯಗಳಾಗಿರುತವೆ.

೧ನೇ ಅಂಶಕ್ಕೆ—ಸಾಮಾನ್ಯವಾಗಿ ಯೆಲ್ಲರು ಉಪಯೋಗಿಸಿಕೊಳ್ಳುವ ಅಕ್ಕಿ, ಜೋಳ, ದೀಪದೆಣ್ಣೆ, ಹೋರಾಬಟ್ಟೆ, ಇವುಗಳಮೇಲೆ ತೆರಿಗೆ ಹಾಕಿದರೆ ಬಡಜನಗಳೆಲ್ಲರೂ ಅದಂ ಕೊಡ್ಬೇಕಾಗುತದೆ ಇದರಿಂದ ಬಡಜನಗಳು ಊರುಬಿಟ್ಟು ಹೋಗಬೇಕಾಗುತದೆ, ಹಾಗೆ ಮಾಡುವರಾದರೆ ಅನ್ಯತ್ರಜೀವನೋಪಾಯ ಅಸಾಧ್ಯ; ಷಹರ್ ನಿವಾಸವು ಸುತರಾಂ ಅಸಾಧ್ಯವಾದದ್ದು ಇದರಿಂದ ಈ ಪದ್ಧತಿಯು ಅಕ್ರಮವಾದದ್ದು

ಎರಡನೆಯ ಅಂಶಕ್ಕೆ—ಯಾವ ಜನಿಸಿ ಹೆಚ್ಚುಬೆಲೆಯುಳ್ಳದ್ದು, ಯಾವದು ಉಪಯೋಗಿಸದ ಇದ್ದರೆ ಮನುಷ್ಯಪ್ರಾಣಿಯು ಜೀವಿಸುವದಕ್ಕೆ ಬಾಧಕವಾಗಿರುವದಿಲ್ಲವೊ, ಅಂತಾದ್ದರಮೇಲೆ ಸುಂಕ ವಸೂಲ್ಮಾಡುವದು ನ್ಯಾಯವಾಗಿರುವದು ಇದರಿಂದ ವಸ್ತು ದೌರ್ಲಭ್ಯ ವುಂಟಾಗಲಾರದು, ಧನಿಕರು ಬೆಲೆಹೆಚ್ಚುವದು ಅವಶ್ಯಕತೆಯೂ ಉಪಪತ್ತಿಯೂ ವುಳ್ಳವರು ಎಷ್ಟಾದರೂಕೊಟ್ಟು ತೆಗದುಕೊಳ್ಳುವರು. ಈಮೂಲಕವಾಗಿ ವಸೂಲಾಗುವ ಹಣವನ್ನು ಪ್ರಾಣಸಂರಕ್ಷಣೆಗೆ ಮುಖ್ಯಾಧಾರವಾಗಿರುವ ಜಲಸರಬರಿಗೆ ಉಪಯೋಗಿಸಿದರ ಸರ್ವರಿಗೂ ಕ್ಷೇಮ ವುಂಟಾಗುವದು. ಈ ಕ್ರಮವನ್ನನುಸರಿಸಿ ಮುಂಬೈಯಲ್ಲಿ ಹೊಸದಾಗಿ ತೆರಿಗೆ ಮೊಕರರ್ಮಾಡಿದ ಜನಿಸಿಗಳ ಪೈಕಿ ಶಕ್ಕರೆ ಒಂದೇ ಲಾಯಖಾದದ್ದೆಂದು ಮುಂಬೈ ಇಂದುಪ್ರಕಾಶ ಪತ್ರಿಕೆ ಪಡುವ ಅಭಿಪ್ರಾಯವನ್ನು ನಾವು ಸಂಪೂರ್ಣವಾಗಿ ಒಪ್ಪುವದಿಲ್ಲವೆ, ಕೆರೋಸಿನ್ ಯೆಣ್ಣೆಗೆ ಬದಲಾಗಿ ಮ್ಯಾಣದ ಬತ್ತಿಗಳಮೇಲೂ, ತುಪ್ಪಕ್ಕೆ ಬದಲಾಗಿ ಒಪ್ಪಂದಿ ಮೊದಲಾದ ಡೋಬೀ ಪದಾರ್ಥಗಳ ಮೇಲೂ, ಧಾನ್ಯಕ್ಕೆ ಬದಲಾಗಿ ಮಾಂಸಗಳ ಮೇಲೂ, ಯಾತಕ್ಕೆ ತೆರಿಗೆ ಮೊಕರರ್ಮಾಡಕೂಡದು? ಹಾಗೆ ಮಾಡುವದು ಉಚಿತವೆಂದು ಹೇಳುವಪ್ರಸಂಗ ಮಸಲಾ ಬೆಂಗಳೂರಲ್ಲಿ ಒಂಟೆತ್ತಿನಗಾಡಿಗೂ ಜಟ್ಕಾ ಗಾಡಿಗೂ ಹಾಕಲ್ಪಟ್ಟಿರುವ ಕಂದಾಯವನ್ನು ನಾಲ್ಕುಚಕ್ರದ ಕುದುರೇಗಾಡಿಗಳಿಗೆ ಯಾತಕ್ಕೆ ವರ್ಗಮಾಡಬಾರದು? ಮುಂಬೈ ಷಹರನಲ್ಲಿ ಹಲಾಲ್‌ಖೋರರ ಖರ್ಚಿಗಾಗಿ ಜೀರೆ ಕಂದಾಯ ವಸೂಲಾಗುತಲಿರುವಂತೆ ತಿಳಯಬರುತಿದೆ ಈ ಷಹರ್‌ನಲ್ಲಿರುವ ಪಾಯಖಾನೇಗಳನ್ನು ಡಾಕ್‌ಮಾಮಲ ವಿಷಯದೊಳು ಪುಕಾರೆ ಬಹಳ ವುಂಟಾಗಿ ಆಬಗ್ಗೆ ಖುದಿತವಾದ ಹುಕುಂಗಳು ಕೊಡಲ್ಪಟ್ಟಾಗ್ಯೂ ಅದನ್ನು ಜಾರೀಯೊಳು ತರುವದು ಅಸಾಧ್ಯವಾಗಿದೆ ಪಾಯಖಾನಗಳ ಪ್ರಕೃತಸ್ಥಿತಿಯನ್ನು ಬದಲಾಯಿಸದೆ, ಮ್ಯೂನಿಸಿಪಾಲಿಟಿಯವರು ತಮ್ಮಕಡೆ ಹಲಾಲ್ ಖೋರರಿಂದ ಪಾಕಿಮಾಡಿಸ್ಯಿ ಅದರ ಲಾಗವವನ್ನು ಯಾತಕ್ಕೆ ವಸೂಲ್ಮಾಡಬಾರದು? ಆದದರಿಂದ ಮೇಲೆ ಕಂಡ ಕ್ರಮವನ್ನನುಸರಿಸಿ ನಡೆಸಬೇಕೆಂದು ಪ್ರಜೆಗಳು ಕೇಳಿಕೊಳ್ಳಬೇಕಾದ್ದೂ, ಮ್ಯೂನಿಸಿಪಾಲಿಟಿಯವರು ಅವರ ಅಪೇಕ್ಷೆಯಂ ನೆರವೇರಿಸಬೇಕಾದ್ದೂ ನ್ಯಾಯ್ಯವಾಗಿರುವದು.

PRIZE DAY IN GOVERNMENT GIRLS SCHOOL PETTAH

ಮಾಹೇ ಮಜಕೂರ್ ೧೦ನೇ ತಾರೀಖ್ ಶನಿವಾರದದಿನ ಪ್ರಾತಃಕಾಲ ಈನಗರದ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಗಳಿಗೆ ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಮೆ॥ ಗರ್ಡ್ನರ್ಸ್ಟರ್ಯವರ ಭಾರ್ಯೆಯವರಿಂದ ಇನಾಂಗಳು ಕೊಡಲ್ಪಟ್ಟವು ಏತದರ್ಥ ಸದರೀ ಸ್ಕೂಲಿನಾದದಲ್ಲಿ ಕೆಲವು ವಿಶೇಷ ಏರ್ಪಾಟುಗಳು ಮಾಡಲ್ಪಟ್ಟಿದ್ದವು. ಬೆಳಗ್ಯೆ ಎಂಟುಘಂಟೆಗೆ ಸರಿಯಾಗಿ ಮಿಸ್ಟ್ರೆಸ್ ಗರ್ಡಿಲೆಸ್ಟರ್ಯವರು ದಯಮಾಡಲು ಅವರನ್ನು ಮೆಸ್ಟರ್ ರಿಕ್ಕೆಟ್ಸ್ ಮತ್ತು ಮೆ॥ ಶ್ರೀನಿವಾಸಾಚಾರ್ಯರು ವಗೈರೆ ದೊಡ್ಡಮನುಷ್ಯರು ಗೌರವದೊಡನೆ ಬರಮಾಡಿಕೊಂಡರು ತರುವಾಯ ದೊರೆಸಾನಿಯವರು ಪಾಠಶಾಲಾ ಸೌಧವಂ ಪ್ರವೇಶಿಸಿದ ಕೂಡಲೇ ವಿದ್ಯಾರ್ಥಿನೀಗಳೆಲ್ಲರೂ ಸ್ವಾಗತಪೂರ್ವಕ ವಂದನಗೈದರು. ಅನಂತರ ಮಿಸ್ಟ್ರೆಸ್ ಗರ್ಡಿಲೆಸ್ಟರ್ಯವರು ಅಗ್ರಾಸನವಂ ವಹಿಸಿದಕೂಡಲೇ ಪೂರ್ವಭಾವಿಯಾಗಿ ಬಂದಿದ್ದ ಮೆ॥ ರೈಸ್, ಮೆಸ್ಟರ್ ರಿಕ್ಕೆಟ್ಸ್, ವಗೈರೆ ಯೂರೋಪಿಯನ್ ದೊಡ್ಡಮನುಷ್ಯರೂಅವರ ಲೇಡಿಗಳು ಸಹ ತಮ್ಮ ತಮ್ಮ ಆಸನಗಳಂ ಪರಿಗ್ರಹಿಸಿದರು ಮೆ॥ ಶ್ರೀನಿವಾಸಾಚಾರ್ಯರು, ಮೆ॥ಮರಿಗಂಗಯ್ಯನವರು, ಮೆ॥ ಶಾಮರಾಯರವರು, ಮೆ॥ ನಾರಾಯಣರಾಯರವರು, ಮೆ॥ ಸೀತಾರಾಮಯ್ಯನವರು, ಮೆ॥ ಏಕಾಂಬರ ಸಾಹುಜೆಯವರು ಮೊದಲಾದ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡ ಬಳಿಕ ಡೆ। ಇನ್ಸ್‌ಪೆಕ್ಟರ್ ಮೆ॥ ಗ್ರೀವ್ಸರ್ಯವದು ಪಾಠಶಾಲಾಭಿವೃದ್ಧಿಯಂ ಕುರಿತು ಸಂಗ್ರಹವಾಗಿ ಒಂದು ಇಂಗ್ಲಿಷ್‌ರಿಪೋರ್ಟನ್ನು ಓದಿದರು ತರುವಾಯ ಅಗ್ರಾಸನಾಧಿಪತಿಯವರ ಅನುಮತಿಯಮೇಲೆ ಸದರೀ ಪಾಠಶಾಲೆಯ ಪ್ರಥಮೋಪಾಧ್ಯಾಯರಾದ ಮೆ। ನರಸಿಂಹಶಾಸ್ತ್ರಿಗಳವರು ಸಾಂವತ್ಸರಿಕ ಕನ್ನಡ ರಿಪೋರ್ಟನ್ನು ಓದಿದರು. ಅದನ್ನು ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆಯಾಗಿ ಅದರಿಂದ ಈ ಪಾಠಶಾಲೆಯ ತಾತ್ಕಾಲಿಕಾಭಿವೃದ್ಧಿ ಸ್ಥಿತಿಯು ವ್ಯಕ್ತವಾಗಬಹುದು. ಪಾಠಶಾಲಾ ವಿದ್ಯಾರ್ಥಿನೀಯರಲ್ಲೊಬ್ಬಳಾದ ಭಾಷ್ಯಂ ಶಿಂಗಾರಮ್ಮನು ಸಭಿಕರನ್ನುದ್ದೇಶಿಸಿ ಬರೆದುತಂದ ಒಂದು ವಿಜ್ಞಾಪನೆ ಪತ್ರಿಕೆಯನ್ನೋದಿದಳು. ಸದರೀ ಪತ್ರಿಕೆಯಲ್ಲಿ ತಿಳಿಸಲ್ಪಟ್ಟ ವಿಷಯಗಳಿಗಾಗಿಯೂ, ಶ್ರಾವ್ಯವಾದ ಆಕೆಯ ವಾಕ್ಪಟುತ್ವಕ್ಕಾಗಿಯೂ, ಮಿಸ್ಟ್ರೆಸ್ ಗರ್ಡಿಲೆಸ್ಟರ್ಯವರು ಮೊದಲಾದ ಸಭಿಕರೆಲ್ಲರೂ ಬಹಳ ಸಂತೋಷಿಸಿದರು ಅನಂತರ ಕೆಲವು ವಿದ್ಯಾರ್ಥಿನೀಯರು ತಮ್ಮ ಗಾನವಿದ್ಯಾ ಕೌಶಲ್ಯವನ್ನು ವ್ಯಕ್ತಪಡಿಸುವಬಗ್ಗೆ ಕೆಲವು ಹಾಡುಗಳನ್ನು ಮನೋಹರವಾಗಿರುವಂತೆ ಹಾಡಿದರು ಇದಕ್ಕೆ ಸಭಿಕರು ಬಹಳ ಸಂತೋಷಿಸಿದರು. ಇನಾಂಗಳನ್ನೆಲ್ಲ ಕ್ರಮವಾಗಿ ಒಬ್ಬೊಬ್ಬರು ಕರೆಯಿಸಿ ಅಗ್ರಾಸನಾಧಿಪತಿಯವರು ಕೊಟ್ಟರು ಮೇಲೆ ತಿಳಿಸಿದ ಶಿಂಗಾರಮ್ಮನಿಗೆ ಪೇಟೆ ಮ್ಯೂನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮೆಸ್ಟರ್ ಶ್ರೀನಿವಾಸಾಚಾರ್ಯರಿಂದಸ್ಪೆಷಲ್ ಪ್ರೈಜ್ ಸಹ ಕೊಡಲ್ಪಟ್ಟಿತು. ಮೆಸ್ಟರ್ ಗರ್ಡಿಲೆಸ್ಟರ್ಯವರು ವಿದ್ಯಾರ್ಥಿನೀಯರಂ ಕುರಿತು ತಿಳಿಸಿದ ಅಂಶವನ್ನು ಮೆ॥ ಶ್ರೀನಿವಾಸಾ ಚಾರ್ಯರವರು ಕನ್ನಡಭಾಷೆಯಲ್ಲಿ ತಿಳಿಸಿದರೇನುವದೆ, ಈಗ ಓದಲ್ಪಟ್ಟ ಅತ್ರೆಯಿಂದ ಕ್ಷಿಪ್ರದಲ್ಲಿ ಕೆಲವುಮಂದಿ ವಿದ್ಯಾರ್ಥಿನೀಯರುಪಾಠಶಾಲೆಯನ್ನುಬಿಡುವದಾಗಿರುವಂತೆ ತಿಳಿಯಬರುವದರಿಂದ ಅವರೆಲ್ಲರೂ ಈ ಪಾಠಶಾಲಾಮೂಲಕ ತಾವು ಪಡೆದ ವಿದ್ಯಾಪ್ರಯೋಜನವನ್ನು ತಮ್ಮ ದೇಶಬಾಂಧವರಾದ ಸಹೋದರಿಯರಿಗೆ ತಿಳಿಸಿ ಅವರು ಪ್ರೋತ್ಸಾಹ ಗೊಳಿಸಬೇಕೆಂಬದು. ಬಳಿಕ ಮಿಸ್ಟ್ರೆಸ್ ಗರ್ಡಿಲೆಸ್ಟರ್ಯವರು ಅಗ್ರಾಸನವಂ ವಹಿಸಿದ್ದಕ್ಕಾಗಿ ಮೆಸ್ಟರ್ ಮರಿಗಂಗಯ್ಯನವರು ನೇಟಿವ್‌ಗಳ ತರಫ್ ಅವರಿಗೆ ವಂದನ ಮಾಡಿದರು ಅನಂತರ ಕೋಲಾಹಲಧ್ವನಿಯೊಡನೆ ಸಭೆ ಬರಖಾಸ್ತಾಯಿತು ಪಾಠಶಾಲೆಯ ಅಭಿವೃದ್ಧಿಯ ವಿಷಯದಲ್ಲಿ ಅದರ ಹೆಡ್‌ಮ್ಯಾಸ್ಟರ್ ಮುಂತಾದವರು ಮಾಡಿದ ಶ್ಲಾಘ್ಯತಮವಾದ ಪ್ರಯತ್ನವನ್ನು ನೋಡಿ ಮೆ॥ ರೈಸಿಯವರು ಬಹಳ ಸಂತೋಷಿಸಿದರು

ENCOURAGEMENT TO INDIGENOUS TRADE.

ಇಂಡ್ಯದೇಶದ ನೇಟಿವ್ ಕಸಬೆದಾರೀಕೆಲಸಗಳು ಹ್ರಾಸವನ್ನೈದುವದಕ್ಕೆ ಯೂರೋಪುದೇಶದ ತಯಾರೀಪದಾರ್ಥಗಳ ಪ್ರಾಬಲ್ಯವೇ ಮುಖ್ಯಕಾರಣವಾಗಿರುವದರಿಂದ ಅದನ್ನು ತಗ್ಗಿಸಿ ಸ್ವದೇಶ ಪದಾರ್ಥಗಳಿಗೆ ಗಿರಾಕಿ ವುಂಟಾಗುವಂತೆ ಮಾಡಿದ ತನ್ಮೂಲಕ ಕಸಬೆದಾರರೆಲ್ಲರಿಗೂಪ್ರೋತ್ಸಾಹವನ್ನುಂಟುಮಾಡಿ ಅದು ಅಭಿವೃದ್ಧಿಗೆ ತರಬೇಕೆಂಬ ಕೋರಿಕೆಯು ಗವರ್ನಮೆಂಟಿನವರಿಗೆ ವುಂಟಾಗಿ, ಅದಕ್ಕೋಸ್ಕರ ಅವರುನಾನಾವಿಧ ಏರ್ಪಾಡುಗಳನ್ನು ಮಾಡುತಲಿರುವ ಅಂಶ ಪ್ರಸಿದ್ಧವಾಗಿದೆಯಷ್ಟೆ ಹೀಗಿದ್ದಾಗ್ಯೂ ಕೆಲವರು ಕೈಕೆಲಸದವರಿಗೆ, ತತ್ರಾಪಿ ನೆಯಿಗೆಯವರಿಗೆ ವರ್ತಕರಮೂಲಕ ವುಂಟಾಗತಕ್ಕ ಕಿರುಕುಳವನ್ನೂ ತನ್ಮೂಲಕ ಅವರು ಅನುಭವಿಸುವ ಪರಿಭವವನ್ನೂ ನೋಡಲಾಗಿ ಇನ್ನು ಕೆಲವುಕಾಲದಲ್ಲಿಯೇ ಈ ಜಾತಿಯವರು ಆತ್ಯಂತಿಕವಾಗಿ ತಮ್ಮಕಸಬನ್ನುಬಿಟ್ಟು ದೇಶಭ್ರಷ್ಟರಾಗಿ ಹೋಗಬಹುದೆಂದು ತೋರುತಿದೆ. ಈ ಜಾತಿಯವರಿಗೆ ಹಿಂದೆ ಈ ದೇಶದಲ್ಲಿ ವುಂಟಾಗಿದ್ದ ಪ್ರಾಶಸ್ತ್ಯವು ಇಲ್ಲಿನ ವರ್ತಕರಿಂದ ಕಡಮೆಯಾಗಲು ಅವಂ ಕಸಬೇ ದೀನಸ್ಥಿತಿಗೆಬಂದಿರುತಿದೆ. ವರ್ತಕರಮೂಲಕ ವುಂಟಾಗುವ ಸಂಕಟಗಳನ್ನು ನೆಯಿಗೆಯವರು ಇದರಡಿ ಕಂಡಂತೆ ತಿಳಿಸುತ್ತಾರೇನುದರೆ,—

ವ್ಯಾಪಾರದ ವೃದ್ಧಿಗೆ ಪೂರ್ವದಲ್ಲಿ ಇದ್ದ ವರ್ತಕರು ನೆಯಿಗೆಯವರಮೇಲೆ ಕೇವಲ ದಯವುಳ್ಳವರಾಗಿದ್ದರು. ಹ್ಯಾಗಂದರೆ, ರಾತ್ರಿ ಕ್ರಯ ಮಾಡಿದ ಜವಳೀ ಬಾಬತ್ತಿನ ಹಣವನ್ನ ಬೆಳಗ್ಯೆ ೯ಘಂಟೇ ಲಾಗಾಯತು ಸಾಯಂಕಾಲ ೬ಘಂಟೆಯೊಳಗಾಗಿ ಹಣವನ್ನಾಗಲೀ ಕೊಡುವರು, ಅಥವಾ ಜವಳಿಯನ್ನಾಗಲೀ ವಾಪಸ್ ಮಾಡುತಿದ್ದರು. ಈಗ ಇರತಕ್ಕ ವರ್ತಕರಪೈಕಿ ಪೂರ್ವದಂತೆ ಅನುಸರಿಸಿ ನಡೆಯತಕ್ಕವರು ಮರ್ಚೆಂಟ್ರೈಲ್ ಕಂಪನಿ ವೆಂಕಟದಾಯಪ್ಪನವರು, ಅಭಿವೃದ್ಧಿಕಂಪನಿ ರಾಚಪ್ಪನವರು ಮಾತ್ರ ಈ ಉದ್ಯೋಗಸ್ಥರ ಮೇಲೆ ತುಂಬಾ ಅಭಿಮಾನವಿಟ್ಟು ರಾತ್ರಿ ಸನು ಗು ತೆಗದುಕೊಂಡರೆ ಬೆಳಗ್ಯೆ ೯ ಘಂಟೇ ಲಾಗಾಯತು ಸಾಯಂಕಾಲ ೬ ಘಂಟೆಯೊಳಗಾಗಿ ಈಗಿನ ಪದ್ಧತಿ ಅಂದರೆ ನಾಣ್ಯದ ಪಟ್ಟ ಮೊದಲಾದವುಗಳು ಹಿಡಿಯದಂತೆ ಹಣವನ್ನಾಗಲಿ ಅಥವಾ ಜವಳಿಯನ್ನಾಗಲಿ ಕೊಡುತ್ತಾರೆ. ಇವರುವಿನಾ ಇರತಕ್ಕ ಇತರ ವರ್ತಕರು ಖರೀದಿ ಮಾಡತಕ್ಕ ಆಸಾಮಿಗಳು ಬಂದಲ್ಲಿ ಅವರುಗಳಿಗೆ ಖರೀದಿ ಮಾಡಿಕೊಡುವರೀತಿ ಹ್ಯಾಗಂದರೆ—೧೦೦ಕ್ಕೆ ೨—೦॥ ರೂಪಾಯಿ ಪ್ರಕಾರ ಸಕಲ ದೇಶಗಳಲ್ಲಿರುವ ವರ್ತಕರು ಗಿರಾಕೀದಾರರಲ್ಲಿ ದಳ್ಳಾಳಿ ತೆಗದುಕೊಂಡು ಖರೀದಿ ಮಾಡಿಕೊಡುವ ಪ್ರಕಾರ ಇಲ್ಲಿ ಇರತಕ್ಕ ವರ್ತಕರು ಸಹ ಖರೀದಿ ಆಸಾಮಿಗಳಲ್ಲಿ ದಳ್ಳಾಳಿ ತೆಗದುಕೊಳ್ಳುವದಲ್ಲದೆ ನಮ್ಮ ನೆಯ್ಗೆ ಕಸಬೆದಾರರಲ್ಲಿ ತೆಗದುಕೊಳ್ಳುವ ಜವಳಿಗಳಪೈಕಿ ಖರ್ಚಾದ ಬಾಬತಿನ ಹಣವನ್ನು ಬೆಳಗ್ಯೆ ಹೋಗಿ ಕೇಳದರೆ ಅವರು ಅದಂ ಕೊಡುವದು ಇಲ್ಲ. ಅಥವಾ ತೆಗದುಕೊಂಡ ಜವಳಿ ವಾಪಸ್ ಕೊಡುವದು ಇಲ್ಲ. ಇವರುಗಳಂ ಹೋಗಿ ಕೇಳದರೆ ೪—೬ ದಿವಸಗಳು ಕಳೆದನಂತರ ಒಬ್ಬೊಬ್ಬರು ವಾಪಸ್ ಕೊಡುವರು. ಮತ್ತು ಖರ್ಚಾದ ಜವಳಿ ಬಾಬತಿನ ಹಣಾ ಕೊಡಬೇಕಾದರೆ ೧೦—೧೫ ದಿವಸಗಳಾದಮೇಲೆ ರಾತ್ರಿ ೮ ೧೧ಘಂಟೇಮೇಲೆ ೧೨ ಘಂಟೇವರಿವಿಗೂ ಬಟವಾಡೇ ಮಾಡುವರು. ಇದರಿಂದ ಕೆಲವರು ತಮ್ಮ ಮನೆಗಳಿಗೆ ಹೋಗಿ ಸೇರುವದರೊಳಗಾಗಿ ಕೈಯಲ್ಲಿರುವ ಜವಳಿಯನ್ನೂ, ಹಣವನ್ನೂ ಮೈಮೇಲಿರುವ ಬಟ್ಟೆಯನ್ನು ಸಹ ಕಳೆದುಕೊಳ್ಳುತ್ತಾರೆ ಮತ್ತು ಬಟವಾಡೆ ಮಾಡುವ ರೀತಿ ಹ್ಯಾಗಂದರೆ,—ನಾಣ್ಯದ ಪಟ್ಟ ರೂಪಾಯಿ ಅರ್ಧ ಆಣೆ ಯೆಂತಲೂ, ಸನಿಗಿನಕಾಸು ಅರ್ಧ

ಣೆ ಯೆಂತಲೂ, ಐಯ್ಯನ ಕಾಸು ಯೆಂತಲೂ, ಇದಲ್ಲದೆ ನಮ್ಮಗಳಿಗೆ ಬರತಕ್ಕ ಹಬ್ಬಗಳಪೈಕಿ ಗೌರಿ, ಶಿವರಾತ್ರಿ, ಯುಗಾದಿ ಈ ಮೊದಲಾದ ಹಬ್ಬಗಳಲ್ಲಿ ನಾಣ್ಯದ ವಟ್ಟ, ಸನಿಗಿನಕಾಸು, ಐಯ್ಯನಿಗೆ, ಅಂಗಡಿಲೆಕ್ಕ ಬರೆಯುವ ಗುಮಾಸ್ತನಿಗೆ, ಆಳಿಗೆ ಎಂಬದಾಗಿ ಅವರ ಇಚ್ಛಾನುಸಾರ ದುಡ್ಡುಗಳನ್ನು ಹಿಡಿದುಕೊಂಡು ಉಳಿದ ಹಣವನ್ನು ಕೊಡುವದರಲ್ಲಿ ಅತಿ ದಯಾಪರರಾಗಿರುವದರಿಂದ ಇಲ್ಲಿನ ಕಸುಬುದಾರರಿಗಿರುವ ಸುಖಾವನೆಯು ಬಹಳ ಕಡಮೆಯಾಗಿದೆ"

ಮೇಲೆಕಂಡ ಸಂಕಟಗಳನ್ನೆಲ್ಲ ನಿವೃತ್ತಿಸಿಕೊಳ್ಳುವುಬಗ್ಗೆ ತಮ್ಮೊಳಗೊಂದುಏರ್ಪಾಡುಮಾಡುವದಕ್ಕಾಗಿ ಮಾಹೇಮಹಕೂರ್ ೫ನೇ ತಾರೀಖು ಮೊದಲು ಬೆಂಗಳೂರಲ್ಲಿರುವ ಕೊತ್ತ ಕಿಟ್ಟೆಯ್ಯನ ಛತ್ರದಲ್ಲಿ ಸುಮಾರ್ ಐದಾರು ಸಾವಿರಮಂದಿ ನೆಯಿಗೆಯವರು ಮೀಟಿಂಗ್ ಸೇರಿ ಇನ್ನು ಮುಂದೆ ನೆಯಿಗೆಯವರ್ಯಾರಾದರೂ ಬಿಕರಿಯೋಗ್ಯ ಸರುಕುಗಳನ್ನು ವರ್ತಕರಿಗೆ ಕೊಟ್ಟಲ್ಲಿ ತಾವು ಕೊಡತಕ್ಕ ಜವಳಿಗೆ ಸನುಗಿನಕಾಸು, ನಾಣ್ಯದ ವಟ್ಟ, ಮುಂತಾದವು ಕೊಡುವದಿಲ್ಲವೆಂತಲೂ ವಾಪಸು ಮಾಡತಕ್ಕ ಜವಳೀ ಬೆಳಿಗ್ಯೆ ಕೊಡಬೇಕೆಂತಲೂ ರಾತ್ರಿಕಾಲದಲ್ಲಿ ಹಣ ಬಟವಾಡೇ ಮಾಡಕೂಡದೆಂತಲೂ ತಿಳಿಸಬೇಕೆಂಬದಾಗಿಯೂ ಈ ಯೇರ್ಪಾಡಿಗೆ ವರ್ತಕರು ಪ್ರತಿಕೂಲರಾಗುವಪಕ್ಷಕ್ಕೆ ಬೆಂಗಳೂರಲ್ಲೀಗ ಹಾದರಿರುವ ಮಗ್ಗ ೧೪ ಕ್ಕೆ ೫ ರೂಪಾಯಿಗಳಪ್ರಕಾರ ಫಂಡು ಜಮಾಯಿಸಿ ಇಲ್ಲಿ ಉಪಪನ್ನರಾದವರ ಸಹಾಯದಿಂದ ಒಂದು ಕೋಟಿಯನ್ನು ಸ್ಥಾಪಿಸಿ ತಮ್ಮ ತಮ್ಮ ಮಗ್ಗಗಳಲ್ಲಿ ತಯಾರಾಗತಕ್ಕ ಸನುಗುಗಳನ್ನು ಅದಕ್ಕೇ ಕೊಡಬೇಕಲ್ಲದೆ ಅನ್ಯತ್ರ ಯಾವ ಸಂದರ್ಭದಲ್ಲಿಯೂ ಬಿಕರಿ ಮಾಡಕೂಡದೆಂಬದಾಗಿಯೂ ತಮಗೆ ಕಸಬಿಗೆ ಬೇಕಾದ ನೂಲು ರೇಷ್ಮೆ ಮುಂತಾದ ಸಕಲ ಪದಾರ್ಥಗಳನ್ನು ಸದರೀ ಕೋಠಿಯಲ್ಲಿಯಲ್ಲಿಯೇ ಕೊಂಡುಕೊಳ್ಳತಕ್ಕದ್ದೆಂಬದಾಗಿಯೂ ನಿಷ್ಕರ್ಷಿಸಿಕೊಂಡು ಈ ಪ್ರಯತ್ನಕ್ಕೆ ಸಹಾಯಕರಾದವರನ್ನು ಹುಡುಕುತಲಿರುವಂತೆ ತಿಳಿಯಬರುತಿದೆ.

ಪ್ರಸಕ್ತ ಪ್ರಯತ್ನವು ಮೇಲೆಕಂಡ ವರ್ತಕರ ಮೂಲಕವಾದ ನಿರ್ಬಂಧಗಳನ್ನು ಬಹಳಮಟ್ಟಿಗೆ ಹೋಗಲಾಡಿಸಲಿಕ್ಕೆ ಶಕ್ತವಾಗಿರುವದರಿಂದ ಇದು ಸಫಲವಾದರೆ ರಮ್ನಾಲಕ ನೆಯಿಗೆಯವರು ಅಭಿವೃದ್ಧಿಗೆ ಬರಬಹುದು.

Occasional Notes
ನೈಮಿತ್ತಿಕವಿಷಯನ್ಯಾಸ

The dengue fever again.—ಸನ್ ೧೮೭೨—೭೩ನೇ ಇಸವಿಯಲ್ಲಿ ಕಲ್ಕತ್ತೆಯೊಳು ವ್ಯಾಪಿಸಿ ಅನೇಕ ಸಹಸ್ರ ಪ್ರಜೆಗಳನ್ನು ಬಾಧಿಸಿದ ಡೆಂಗೂ ಫೀವರ್‌ಯೆಂಬಜ್ವರವು ಮರಳಿಈಗ ಅಲ್ಲಿ ತಲೆದೋರಿದೆಯೆಂದು ತಿಳಿಯಬರುತಿದೆ.

The King of Burmah and the Home Authorities.—ಬರ್ಮ್ಮಾದೇಶದ ಅರಸರ ವಿಷಯದಲ್ಲಿ ಬಲವಾದ ಪ್ರಯತ್ನಗಳಂ ಮಾಡಬೇಕೆಂದು ಇಂಡ್ಯಸ್ಟೇಟ್ ಸೆಕ್ರೆಟರಿಯವರೂ, ಲಾರ್ಡ್ ಸಾಲಿಸ್‌ಬರಿಯವರೂ ಅಭಿಪ್ರಾಯಗೊಂಡಿರುವಂತೆ ಇಂಗ್ಲಾಂಡ್ ದೇಶದಿಂದ ಇಂಗ್ಲಿಷ್‌ಮ್ಯಾನ್ ಪತ್ರಿಕೆಗೆ ಅಂತರಂಗದಲ್ಲಿ ವರ್ತಮಾನ ಬಂದಿರುವಂತೆ ವೃತ್ತಾಂತ ಪತ್ರಿಕೆಗಳಲ್ಲಿ ಘೋಷಿಸ ಆಗಿರುತ್ತಿದೆ

The King of Annam.—ಅನ್ನಾಂರಾಜ್ಯದ ಅರಸರನ್ನು ಅವರ ಅಧಿಕಾರ ಪದದಿಂದ ತೆಗೆದುಹಾಕುವದಕ್ಕೆ ಹುಕುಂ ಕೊಡಬೇಕೆಂದು ಅಪೇಕ್ಷಿಸಿದ ಜನರಲ್ ಡೀಕರ್‌ಸಿಯವರ ಅಪೇಕ್ಷಾನುಗುಣವಾಗಿ, ಆವಶ್ಯಕ ಕಂಡುಬಂದರೆ ತೆಗೆದುಬಿಡಬಹುದೆಂದು ಫ್ರೆಂಚ್ ಸರ್ಕಾರದವರು ಅವರಿಗೆ ಹುಕುಂ ಕೊಟ್ಟಿರುತ್ತಾರೆ.

Sir F. Roberts.—ಮುಂಬೈ ಇಂಡ್ಯರಾಜ್ಯದ ಕಮಾಂಡರ್ಇನ್‌ಚೀಫರವರಾಗಿ ಬರುವ ಸರ್‌ಫ್ರೆಡರಿಕ್ ರಾಬರ್ಟ್ಸ್‌ಯವರು ಈಗ ಸ್ವದೇಶಕ್ಕೆ ಹೋಗಿರುತ್ತಾರೆಯಷ್ಟೇ, ಸದರೀ ಯವರು ಬರುವ ನವಂಬರ್ ತಿಂಗಳ ೯ನೇ ತಾರೀಖಿನಲ್ಲಿ ಇಂಡ್ಯದೇಶಕ್ಕೆ ವಾಪಸ್ ಬರುವದಕ್ಕಾಗಿ ಬ್ರಿಂಡಿಸಿ ಯೆಂಬ ಸ್ಥಳದಲ್ಲಿ ಹಡಗು ಹತ್ತುವರು.

LOCAL AND PROVINCIAL NEWS
ಒಳದೇಶವುತ್ತಾಲ್ಲೂಕುವಾರಿವೃತ್ತಾಂತಗಳು

Title deeds.—ಟೈಟಲ್‌ಡೀಡ್, ಅಂದರೆ ಪಟ್ಟೇಗಳನ್ನು ಪಡಕೊಳ್ಳತಕ್ಕವರಿಂದ ಅದರ ಲಾಗುವತುಬಗ್ಗೆ ಒಂದುರೂಪಾಯಿಮೇರೆ ರುಸುಂ ವಸೂಲ್ಮಾಡತಕ್ಕದ್ದೆಂದು ಮೈಸೂರು ಗವರ್ನಮೆಂಟಿನವರು ಹುಕುಂಕೊಟ್ಟಿರುವಂತೆ ತಿಳಿಯಬರುತಿದೆ.

Public holidays.—ಮಹಾಲಯಾಮಾವಾಸ್ಯೆ ಪ್ರಯುಕ್ತವಾಗಿ ಕಳೆದ ಬುಧವಾರದದಿನವೂ ನವರಾತ್ರಿ ಪ್ರಾರಂಭದಬಗ್ಗೆ ಶುಕ್ರವಾರವೂ ಈ ಸಂಸ್ಥಾನದ ತಮಾಂ ಇಲಾಖೆಗಳಿಗೂ ರಜಾ ಕೊಡಲ್ಪಟ್ಟವು. ಪದ್ಧತಿಪ್ರಕಾರ ಈ ತಿಂಗಳ ೧೪ನೇ ತಾರೀಖುಮೊದಲು ೨೧ನೇ ತಾರೀಖುವರಿವಿಗೆ ಶಿವಿಲ್ ಇಲಾಖೆಗಳಿಗೂ ಮರಳಿ ಎಂಟುದಿನಗಳ ರಜಾ ಕೊಡಲ್ಪಡುವವು. ಈ ರಜಾಕ್ಕೆ ನಿರ್ಭಾಗ್ಯರಾದ ತಾಲ್ಲೂಕುಜಾತಿ ನೌಕರರು ಅನರ್ಹರಾದಬಗ್ಗೆ ಬಹಳ ಚಿಂತಿಸುತ್ತೇವೆ.

The Moharum and the Dasara.—ಈಸಲ ಏಕಕಾಲದಲ್ಲಿ, ಅಂದರೆ, ಕಳೆದ ಶುಕ್ರವಾರದದಿನ ಮುಸಲ್ಮಾನರಿಗೆ ಮೊಹರಂಹಬ್ಬವೂ ಹಿಂದೂಗಳಿಗೆ ದಸರಾಹಬ್ಬವೂ ಪ್ರಾರಂಭವಾಗಿರುತದೆ. ಈ ಯೆರಡು ಜಾತಿಯವರಿಗೂ ಪರಸ್ಪರ ವೃಂಟಾಗಿರುವ ಸ್ನೇಹಸಂಬಂಧವಿಂತಾದ್ದೆಂಬದಕ್ಕೆ ಸೇಲ್ಯದಕಲಹವೇ ಸಾಕಾದ ನಿದರ್ಶನವಾಗಿರುತಿದೆ. ಗವರ್ನಮೆಂಟಿನವರು ಇದನ್ನು ಚೆನ್ನಾಗಿಯೋಚಿಸಿ ಈಸ್ಟೇರ್ನ್ ಗ್ಯಾರಿಸನ್ ಸೇನೆಯಪೈಕಿ ಕೆಲವು ಯಾವಕಾಲದಲ್ಲೂ ತಯಾರಾಗಿರುವಂತೆ ಹುಕುಂ ಕೊಟ್ಟಿರುವದಾಗಿ ತಿಳಿಯಬರುತಿದೆ

Suicide of a Police Officer.—ಚಿತ್ರದುರ್ಗ ಸಬ್‌ಡಿವಿಜನ್ನಲ್ಲಿ ಪೋಲೀಸ್ ಇನ್‌ಸ್ಪೆಕ್ಟರಾಗಿದ್ದ ಸೈಯದ್ ಅಮೀರ್ ಯೆಂಬಾತನು ಕೆಲವರು ರೈತರನ್ನು ಹಿಂಸಿಸಿ ಅವರಿಂದ ಸುಲಿಗೆ ಮಾಡಿಕೊಂಡದ್ದಾಗಿ ಚೀಫ್ ಕೋರ್ಟಿನಲ್ಲಿ ಆತನಮೇಲೆ ಫಿರ್ಯಾದಿಬರಲು, ಸದರೀ ಮೊಕದ್ದಮೆಯನ್ನು ದರ್ಯಾಫ್ತೀ ಮಾಡುವಂತೆ ಚೀಫ್ ಕೋರ್ಟಿನವರು ಕೊಟ್ಟ ಹುಕುಂ‌ಅನ್ವಸರಿಸಿ ತುಮುಕೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರರವರು ದರ್ಯಾಫ್ತೀಬಗ್ಗೆ ತಮ್ಮಲ್ಲಿ ಹಾಜರಾಗುವಂತೆ ಆತನಿಗೆ ಹುಕುಂ ಕೊಟ್ಟ ಸಂಗತಿಯನ್ನು ಆತನು ಪರಬಾರೇ ತಿಳಿದುಕೊಂಡು ಮುಂದೆ ಮಾನ ಉಳಿಯಲಾರದೆಂದು ಯೋಚಿಸಿ ತನ್ನ ಕುತ್ತಿಗೆಯನ್ನು ತಾನೇ ಕುಯಿದುಕೊಂಡು ಆತ್ಮಹತ್ಯೆಮಾಡಿಕೊಂಡನು ದರೋಡೆಯನ್ನು ಪತ್ತೇಮಾಡಿದವರೆನ್ನಿಸಿಕೊಂಡು ಮೈಸೂರು ಗವರ್ನಮೆಂಟಿನವರಿಂದ ಬಿರುದುಗಳನ್ನೂ ಬಡ್ತೀಗಳನ್ನೂ ಇನಾಂಗಳನ್ನೂ ಪಡೆದವರ ಪೈಕಿ ಈತನೂ ಒಬ್ಬನಾಗಿರುತ್ತಾನೆಂದು ತಿಳಿಸಲು ನಾಚಿಕೊಳ್ಳುತ್ತೇವೆ.

SEASON AND PROSPECTS
ಡಿಸ್ಟ್ರಿಕ್ಟ್‌ಜಾತಿರಿಪೋರ್ಟ್.

ಹೊಸಕೋಟೆ, ೩ನೇ ಅಕ್ಟೋಬರ್—ಕಳೆದ ತಿಂಗಳ ೨೩ನೇ ತಾರೀಖ್ ಲಾಗಾಯತು ಈತಿಂಗಳ ೩ನೇ ತಾರೀಖ್ ವರಿವಿಗೆ ಪ್ರತಿದಿನದಲ್ಲೂ ಮಳೆ ಆಗುತ ಕೆರೆಕುಂಟೆಗಳಿಗೆ ನೀರುಬಂದಿರುತದೆ. ದನಗಳಿಗೆ ನೀರಿಗೂ ಮೇವಿಗೂ ಕೊರತೆ ಯಿಲ್ಲವು. ಅಕ್ಕಿ ರೂ॥ ೧ಕ್ಕೆ ಸೇ॥ ೧೪, ರಾಗಿ ಸೇ॥ ೪೦.

ಹರಿಹರಪುರ, ೩ನೇ ಅಕ್ಟೋಬರ್—ಈಚೆಗೆ ಆದ ಮಳೆಯ ದೆಸೆಯಿಂದ ಉಳಿದಿರುವ ಫಸಲಿಗೆ ಅನುಕೂಲವಾಯಿತು, ಜಲಕ್ಷಾಮ ತಪ್ಪಿತು. ಅಕ್ಕಿ ರೂ॥೧ಕ್ಕೆ ಸೇ॥೧೨—೧೩, ರಾಗಿ ೨೨ಶೇರು.

ಅರಸೀಕೆರೆ, ೬ನೇ ಅಕ್ಟೋಬರ್—ಈತಾಲ್ಲೂಕಿಗೆ ಸೇರಿದ ಯೆಲ್ಲ ಸ್ಥಳಗಳಲ್ಲೂ ಮಳೆಬಿದ್ದು ಕೆರೆಗಳಿಗೆ ನೀರು ಬಂದಿರುತಿದೆ. ತರೀ ಖುಷ್ಕೀ ಪೈರುಗಳು ಚೆನ್ನಾಗಿವೆ. ಅಕ್ಕಿ ರೂ॥ ೧ಕ್ಕೆ ಸೇ॥ ೧೩—೧೪, ರಾಗಿ ಸೇರು ೩೬—೩೮.

ಮೂಡುಗೆರೆ, ೫ನೇ ಅಕ್ಟೋಬರ್.—ಮಳೆ ಸುಮಾರಾಗಿಬಿದ್ದಿದೆ. ದಾರಕೆನಾಶಿ ಕಳೆದ ವಾರದಂತೆಯೇ ಯಿದೆ

ಚಿಕ್ಕಮಗಳೂರು, ೫ನೇ ಅಕ್ಟೋಬರ್.—ಕಳೆದ ತಿಂಗಳ ೨೩ರ ಲಾಗಾಯತು ಈತಾರೀಖಿನ ವರಿವಿಗೆ ಪ್ರತಿದಿನದಲ್ಲೂ ಮಳೆ ಆಗುತಲೇ ಯಿದೆ. ಸಣ್ಣ ಕೆರೆಗಳೆಲ್ಲವು ತುಂಬಿದವು, ದೊಡ್ಡ ಕೆರೆಗಳಿಗೆ ಅರ್ಧ ಮುಕ್ಕಾಲುವಾಸಿ ನೀರು ಬಂದಿದೆ. ಅಕ್ಕಿ ರೂ॥ ೧ಕ್ಕೆ ೧೩ರ ಲಾಗಾಯತು ೧೭ಶೇರು ವರಿವಿಗೆ ಮಾರುತದೆ. ರಾಗಿ ರೂ॥ ೧ಕ್ಕೆ ೩೮—೪೦ಶೇರು, ಹುರಳಿ ೨೦—೨೧ಸೇ॥ ರುಪ್ಪ ಮಣ೧ಕ್ಕೆ ರೂ॥ ೧೨—೮—೦.

ಚಿತ್ರದುರ್ಗ, ೬ನೇ ಅಕ್ಟೋಬರ್.—ಯೆಂಟು ಹತ್ತು ದಿನಗಳ ಮೊದಲು ಬಲವಾಗಿ ಮಳೆ ಸುರಿಯುತ ಯೆರಡುಮೂರು ಕೆರೆಗಳು ಒಡೆದು ಹೋದವಲ್ಲದೆ ಇನ್ನು ಕೆಲವು ಕೆರೆಗಳು ಮೇಲೆ ಬಿದ್ದು ಒಡೆದು ಹೋಗುವ ಸ್ಥಿತಿಯಲ್ಲಿವೆ. ನೀರಿನಿಂದ ಜನ ಸಂಚಾರಕ್ಕೆ ತೊಂದರೆ ಯುಂಟಾಗಿದೆ ಹಗೇವುಗಳಲ್ಲಿ ನೀರು ಇಳಿದು ದವಸಗಳು ಕೆಟ್ಟುಹೋದವು ರೈತರು ಮಳೆ ಇಲ್ಲದೆ ಕೆಟ್ಟದ್ದಲ್ಲದೆ ಮಳೆ ಬಂದೂ ಕೆಟ್ಟರು.

ತೀರ್ಥಹಳ್ಳಿ, ೬ನೇ ಅಕ್ಟೋಬರ್.—ಈ ಸಂಚಾರದಲ್ಲಿ ಆಗಿಂದಾಗ್ಯೆ ಸ್ವಲ್ಪ ಮಳೆ ಆಗಿ ಅದರಿಂದ ಬತ್ತದ ಪೈರು ಉಳಿಯಿತು, ದಾರಸೆಗಳು ಇಳಿಯಲಿಲ್ಲವು.

ಬೆಂಗಳೂರು ಗವರ್ನಮೆಂಟ್ ಬಾಲಿಕಾಪಾಠಶಾಲಾ ರಿಪೋರ್ಟು.

ತಾ॥ ೧ನೇ ಅಕ್ಟೋಬರ್, ೧೮೮೫ನೇ ಇಸವಿ

ಅಯ್ಯಾ,—ಸ್ಕೂಲ್ ಹಾಜಹೂರಿನಲ್ಲಿ ಈದಿವಸ ನಡೆಯುವಪ್ರೈಜ್ ಡಿಸ್ಟ್ರಿಬ್ಯೂಷನಿಗಾಗಿ ಕೃಪೆಯಿಟ್ಟ ಈ ಸಭೆಗೆ ದೊಡ್ಡಮನುಷ್ಯರೆಲ್ಲರೂ ದಯಮಾಡಿಸಿದ್ದರಿಂದ ಈ ದಿವಸ ಸುದಿವಸವೆಂದು ನಂಬುತ್ತೇನೆ.

ಈಕೆಳಗೆ ಉದಹರಿಸಿರುವ ಕೆಲವು ಅಂಶಗಳನ್ನು ಲಾಲಿಸಿ ಈ ಸ್ಕೂಲ್ ಅಭಿವೃದ್ಧಿಗಾಗಿ ಮುಂದೆ ಆಗತಕ್ಕಾಗಿರುವ ಸಹಾಯಗಳನ್ನು ಅನುಕೂಲಪಡಿಸತಕ್ಕ ವಿಷಯದಲ್ಲಿ ಒಳ್ಳೇ ತಾತ್ಪರ್ಯವನ್ನು ದಯಪಾಲಿಸುವಿರೆಂದು ನಂಬಿ ಅರಿಕೆ ಮಾಡುವನು

ಈ ಪಾಠಶಾಲೆಯು ಸನ್ ೧೮೭೬ನೇ ಇಸವಿಯಲ್ಲಿ ಈ ಪಟ್ಟಣದಲ್ಲಿರುವ ದೊಡ್ಡಮನುಷ್ಯರ ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ಏರ್ಪಾಟಾಗಿ ಆ ಕಾಲದಲ್ಲಿದ್ದ ಮ್ಯಾಸ್ಟರ್‌ಗಳ ಪ್ರಯತ್ನದಿಂದ ಅಭಿವೃದ್ಧಿಯನ್ನೈದಲಾರಂಭಿಸಿತು.

ಈಚೆಗೆ ಅಂದರೆ ಸನ್ ೮೩ನೇ ಇಸವಿಯು ಮೊದಲು ಹೆ॥ ಮಾಸ್ಟರಾಗಿರುವ ನನ್ನಕಾಲದಲ್ಲಿ ಪ್ರೋಗ್ರೆಸ್ ಮತ್ತು ಅಟೆಂಡೆನ್ಸ್ ಸಹ ದಿನೇದಿನೇ ವೃದ್ಧಿಯಲ್ಲಿ ಬಂದ ಅಂಶವು ಪ್ರತಿಸಾಲಿನ ರಿಪೋರ್ಟಿನಿಂದ ಸ್ಪಷ್ಟವಾಗುತಿದೆ.

ಈ ಸಾಲಿನಲ್ಲಿ ಇನ್‌ಸ್ಪೆಕ್ಟರವರ ಎಗ್ಜಾಮಿನೇಷನ್ನೊಳು ೧೨೨ ಮಂದಿ ಬಾಲಕಿಯರು ಹಾಜರಿದ್ದು ಇವರ ಪೈಕಿ ಮೂರರಲ್ಲಿ ಒಂದುಭಾಗದ ಬಾಲಕಿಯರು ಪ್ಯಾಸಾಗಿ ಪ್ರತಿ ತರಗತಿಗಳಂದಲೂ ಅವರಿಗೆ ಮೇಲಿನ ತರಗತಿಗಳಿಗೆ ಪ್ರಮೋಷನ್ ಆಗಿ ಇರುವದಲ್ಲದೆ, ಈಪೈಕಿ ೬ ಮಂದಿ ಬಾಲಕಿಯರು ಮಿಡಲ್ ಕ್ಲಾಸಿನಲ್ಲಿ ಜೇಗನ್ನು ಹೊಂದಿರುವದರಿಂದ ಈ ಭಾಗದಲ್ಲಿ ಇನ್‌ಸ್ಪೆಕ್ಟರ್ ಸಾಹೆಬರವರು ಹೆ॥ಮ್ಯಾಸ್ಟರ್ ನರಸಿಂಹಶಾಸ್ತ್ರಿ, ಅ॥ ಮ್ಯಾಸ್ಟರ್ ಅಪ್ಪಾಜೀರಾವ್, ಪ್ಯಾಪಿಲ್‌ಟೀಚರ್ ಕೃಷ್ಣಶಾಸ್ತ್ರಿ, ಇವರ ವಿಷಯದಲ್ಲಿ ಒಳ್ಳೇ ರಿಪೋರ್ಟು ಮಾಡಿರುತ್ತಾರೆ.

ಇದಕ್ಕೆ ಸೇರಿದ ಓಯಿಸ್ ಬ್ರಾಂಚಿನಲ್ಲಿ ದರೀಕ್ಷಾಕಾಲದೊಳು ೪೦ ಮಂದಿ ಬಾಲಕರು ಹಾಜರಿದ್ದರು. ಇವರಲ್ಲಿ ೧೬ಮಂದಿ ಪ್ಯಾಸಾಗಿರುವದರಿಂದ ಅಲ್ಲಿನ ಅ॥ಮ್ಯಾಸ್ಟರ್ ವೆಂಕಟರಾಮಯ್ಯ ಪ್ಯಾ॥ ಟೀ॥ ಕೃಷ್ಣಪ್ಪ, ಇವರು ಮಾಡಿರತಕ್ಕ ಕೆಲಸದ ವಿಚಾರದಲ್ಲಿ ಇನ್‌ಸ್ಪೆಕ್ಟರವರ ಒಳ್ಳೇ ರಿಪೋರ್ಟೇ ನಿದರ್ಶನವಾಗಿರುತಿದೆ

ಮೇಲೆ ಕಂಡ ವಿದ್ಯಾರ್ಥಿಗಳ ಅಟೆಂಡೆನ್ಸ್ ವಿಚಾರಣೆಯಲ್ಲಿ ಹೆ॥ ಮ್ಯಾಸ್ಟರ ಆಜ್ಞೆಗೆ ಜವಾನರು ಒಳವಟ್ಟು ಮೆಹನತ್ ಮಾಡಿರುವದರಿಂದ ವಿದ್ಯಾರ್ಥಿಗಳ ಸಂಖ್ಯೆಯು ಕಳೆದ ಸಾಲಿಗಿಂತಲೂ ಅಧಿಕವಾಗಿರುತಿದೆ

ಈ ಸ್ಕೂಲಿಗೆ ಬಾಲಕೀಯರು ಬಹಳ ದೂರ ಫಾಸಲೆಯಿಂದ ಬರುವದರಿಂದ ಇವರನ್ನು ಜವಾನರ ಸಹಾಯದಿಂದ ಕರೆಸತಕ್ಕದ್ದರಿಂದ ಪ್ರಕೃತದಲ್ಲಿರುವ ಜವಾನರುಗಳಿಗೆ ಈಗಿನ ವಿದ್ಯಾರ್ಥಿನೀಯರನ್ನು ಕರೆಯಿಸುವದು ತುಂಬಾ ಮೆಹನತಾಗಿರುವಕಾರಣ ಜಾಸ್ತೀ ಜವಾನರನ್ನು ಕೊಡಿಸಬೇಕು. ಮುಖ್ಯವಾಗಿ ಈ ಸ್ಕೂಲಿಗೆ ಜವಾನರ ಸಹಾಯ ಹೆಚ್ಚಿದಹಾಗೆಲ್ಲ ವಿದ್ಯಾರ್ಥಿಗಳು ಹೆಚ್ಚುತಬರುವರು

ಈ ಸ್ಕೂಲಿನ ಇನ್ಫೆಂಟ್ ಕ್ಲಾಸಿನಲ್ಲಿ ೭೦ ಮಂದಿ ಬಾಲಕಿಯರು ಇರುತ್ತಾರಲ್ಲದೆ ಇವರೆಲ್ಲರೂ ಸಣ್ಣವಯಸ್ಸಿನವರಾದದರಿಂದ ಇವರಿಗೆ ಪಾಠ ಹೇಳತಕ್ಕದ್ದಕ್ಕೆ ಒಬ್ಬ ಬೋಧಕನದ್ವಾರಾ ನಡೆಯುವದು ಶ್ರಮವಾಗಿರುವಕಾರಣ ಇನ್ನೊಬ್ಬಬೋಧಕನನ್ನು ಸಹಾಯಕನಾಗಿ ಕೊಡಬೇಕು.

ಈಚೆಗೆ ಶ್ರೀಮನ್ಮಹಾರಾಣಿಯವರ ಬಾಲಿಕಾಪಾಠಶಾಲೆಯಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕಾಗಿ ಮಾಡಿರತಕ್ಕ ಯೇರ್ಪಾಡುಗಳನ್ನು ಕುರಿತು ನಾನೆ ಮ್ಮಟವರ್ಣಿಸಿದಾಗ್ಯೂ ಸಾಲದ್ದಾಗಿರುತದೆ. ಸ್ತ್ರೀವಿದ್ಯಾಭ್ಯಾಸವೆನ್ನುವದು ಈ ದೇಶದಲ್ಲಿ ಪ್ರಾಚುರ್ಯಕ್ಕೆ ಬಾರದೆ ಇದ್ದದಕ್ಕೂ ಈ ವಿದ್ಯೆಯು ಶುಕ್ಲೇಂದುವಿನಂತೆ ಅಭಿವೃದ್ಧಿಯನ್ನೈದುವ ವಿಷಯದಲ್ಲಿ ಪ್ರೋತ್ಸಾಹ ನಡೆಸುತ್ತಿರುವ ಅಭಿಮಾನಕರ್ತರಿಗೆ ನಾನು ವಂದನೆಗೈಯುತ್ತೇನೆ.

ಈ ಪಾಠಶಾಲೆಗೆ ಗವರ್ನಮೆಂಟಿನವರು ತಕ್ಕಮಟ್ಟಿಗೆ ಸಹಾಯಮಾಡಿ ಪೋಷಿಸುತಲಿದ್ದಾರೆ. ಮೇಲೆ ಕಂಡ ಸ್ಕೂಲಿನಹಾಗೆ ಇಲ್ಲಿಯೂ ಗಾನವಿದ್ಯವನ್ನೂ ಕಸೂತೀ ಕೆಲಸವನ್ನು ಸಹ ಕಲಿಸಿಕೊಡತಕ್ಕ ಭಾಗದಲ್ಲಿ ಸಹಾಯದ್ರವ್ಯವನ್ನು ಕೊಟ್ಟಲ್ಲಿ ಈ ಪಾಠಶಾಲೆಯು ಯಾವಸ್ಥಿತಿಯನ್ನೈದುವದೋ ನಾನು ಈಗ ಹೇಳಲಾರೆನು.

ಈಪಾಠಶಾಲೆಯಲ್ಲಿ ಓದುತ್ತಿರುವ ಕೆಲವುಮಂದಿ ಬಾಲಕಿಯರು ಶ್ರೀಮನ್ಮಹಾರಾಣಿಯವರ ಬಾಲಿಕಾಪಾಠಶಾಲೆಗೆ ಹೋಗಿದ್ದಕಾಲದಲ್ಲಿ ಅಲ್ಲಿನ ಪಾಠಗಳಾದ ಗಾನ ವಿದ್ಯವೂ ಕಸೂತಿಕೆಲಸವು ಸಹ ಕೇವಲ ಶ್ಲಾಘ್ಯವಾಗಿರುವದ್ದರಿಂದ ತಮಗೂ ಕಲಿಸಿಕೊಡಬೇಕೆಂದು ಕೇಳಿದ್ದರಿಂದ ಈ ಭಾಗದಲ್ಲಿ ಬೇರೆ ಏರ್ಪಾಡು ಇಲ್ಲದಿದ್ದಾಗ್ಯೂ ನಾನು ತಕ್ಕಪ್ರಯತ್ನದಿಂದ ಮೇಲ್ಕಂಡ ಎರಡುವಿದ್ಯಗಳನ್ನು ಅಭ್ಯಾಸ ಮಾಡಿಸಿದೆನು ಮೇಲ್ಕಂಡ ಭೋಧಕರು ಈಭಾಗದಲ್ಲಿ ಚಿತ್ತದಲ್ಲಿಟ್ಟು ಇದಕ್ಕಾಗಿ ತಕ್ಕಏರ್ಪಾಡು ಮಾಡಿಸೋಣವಾದರೆ ನನ್ನಶ್ರಮವು ಸಫಲವಾಗುವದು.

ಸಾರೀಯಹಾ ಮಕ್ಕಳುಗಳಿಗೆ ಪುಸ್ತಕಗಳು ಮಾತ್ರ ಬಹುಮಾನ ಕೊಡಲ್ಪಡುತ್ತಾಯಿತ್ತು. ಈಗ ೨ ಸುನ ವರಗಳಲಾಗಾಯತು ಇನ್‌ಸ್ಪೆಕ್ಟರ್‌ಸಾಹೆಬರವರು ಕೆಲವು ಬೊಂಬೆಗಳನ್ನು ಬಹುಮಾನವಾಗಿ ಕೊಡುತ್ತಾಯಿದ್ದಾರೆ ಇನ್ನುಮಕ್ಕಳಿಗೆ ಪ್ರಿಯಕರವಾದ ರಮಣೀಯ್ಯವಾದಬೊಂಬೆಗಳನ್ನೂ ಇತರವಿಧವಾದವಿಚಿತ್ರವಾದಸಾಮಾನುಗಳನ್ನೂಕೊಡಿಸಲ್ಪಟ್ಟು ಅವರು ಪ್ರೋತ್ಸಾಹಪಡಿಸಿದರೆ ಇವರಿಂದ ಹುಡುಗಿಯರಿಗೆ ವಿಶೇಷ ವುಲ್ಲಾಸಕ್ಕೆ ಆಕರವಾಗಿ ತಮ್ಮ ಜೊತೆ ಬಾಲಕಿಯರನ್ನು ಈ ಪ್ರೀತಿಯಿಂದ ಸ್ಕೂಲಿಗೆ ಕರತರಲು ಅವಕಾಶವಾಗುತ್ತೆ

ಈ ಸಭೆಯವರು ಮೇಲೆಕಂಡ ಅಂಶಗಳನ್ನು ಪರಿಭಾವಿಸಿ ನಾನು ವಿಜ್ಞಾಪಿಸಿರತಕ್ಕದ್ದು ಯುಕ್ತವೆಂದು ಚಿತ್ತಕ್ಕೆ ತೋರಿದಲ್ಲಿ ಈ ರಿಪೋರ್ಟಿನಮೇಲೆ ಸಾನುಕೂಲವಾದ ಅಭಿಪ್ರಾಯವನ್ನು ಕೊಡಲು ಸಂದೇಹವಿಲ್ಲವೆಂದು ನಂಬಿ ವಿಧೇಯನಾಗಿ ಮುದನುಗೈಯುವ,

ಹಿ. ನರಸಿಂಹಶಾಸ್ತ್ರಿ,
ಹೆ॥ ಮಾ॥ ಗ॥ ಗರಲ್ಸ್‌ಸ್ಕೂಲ್
ಬೆಂಗಳೂರು.

BANGALORE.—Printed and published for the Proprietor, at the KARNATIC PRESS.—1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಸ್ಪ್ರವೃತ್ತ್ಯನಗವಾರ್ತ್ತಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಕೋಭಿತಾ ॥ ಮೃಗಾಂಕಹಿತವಾಸರೇನಿಹಿರಮುದ್ರಣಾಸಜ್ಜನೈಃ ಪ್ರಕಾಶುಪರಿಶೋಭಿತಾಜಿತಶಿಮಾನಸಂಸಂಮುದಂ

Vol. XII.] BANGALORE—MONDAY, OCTOBER 19, 1885 [No. 42.

ಸಂಪುಟ ೧೨.] ಬೆಂಗಳೂರು —ಸರ್ ೧೮೮೫ನೇ ಇಸವಿ ಅಕ್ಟೋಬರ್ ೧೯ನೇ ತಾರೀಖ್ ಸೋಮವಾರ. [ಸಂಚಿಕೆ ೪೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ಮತ್ತು ಕನ್ನಡ [illegible]

[illegible]	೧ಕ್ಕೆ	[illegible] —೦
[illegible]	೧ಕ್ಕೆ	೬—೦—೦
[illegible]		೬—೦—೦
[illegible]	೧ಕ್ಕೆ	[illegible] —೦
ಸಂಚಿಕೆ	೧ಕ್ಕೆ	[illegible] —೦
[illegible]	೧ಕ್ಕೆ	೦—೫—

[illegible]

ಪ್ರಕಟನೆಯ ರಿವಾಜ್

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARASANGRAHA.

Price including Postage, Rs. 5-6-0

[illegible]

[illegible]	... ...	ರೂ॥ ೫—೦—೦
ಅಂಚೆ ಖರ್ಚು ಅಂಚೇ ಹಾಸಲ್		೦—೬—೦

[illegible] ಬೆಂಗಳೂರು.

ನೋಟೀಸ್.

[illegible] ಕರ್ಣಾಟಕ ಪ್ರಕಾಶಿಕಾ [illegible]

ಕನ್ನಡ [illegible] ಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ಮಹ್ಯಂತಾಕ್)	...	೦—೩—೦
[illegible]		೦—೫—೦
[illegible]	...	೬—೪—೦
[illegible]	..	೦—೧೪—೦
[illegible]	..	೦—೭—೦
[illegible]	..	೦—೨—೦
ವೈದ್ಯಸಾರಸಂಗ್ರಹ	..	೫—೬—೦

ಕನ್ನಡ ಗ್ರಂಥಗಳು

[illegible]	...	೦—೭—೧
[illegible]	...	೦—೪—೦
[illegible]	...	೦—೩—೬
[illegible]	... ...	೦—೨—೬
[illegible]	...	೦—೪—೬
[illegible]	..	೦—೨—೦
[illegible]	...	೦—೬—೬
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	.. ...	೦—೨—
[illegible]	..	೦—೦—೯
[illegible]		೧—೦—೬
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
೧ನೇ ಸಂಚಿಕೆ.	...	೦—೮—೦
೨ನೇ ಸಂಚಿಕೆ		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	... ...	೦—೩—೦
[illegible]	.	೦—೫—೦
[illegible]	...	೦—೨—೬
[illegible]	..	೦—೨—೬
[illegible]	...	೦—೦—೬
[illegible]	...	೦—೩—೬
[illegible]	...	೧—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗುಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್

ಹಿಂದೂ ಸ್ತ್ರೀ ಪುನರ್ವಿವಾಹಸಂಘ.

ಮೇಲಿನ ಸಂಘವನ್ನು ಕುರಿತ ಯಾವ ವಿಷಯವನ್ನಾದರು ತಿಳಿಯಬೇಕೆನ್ನಿಸುವ, ಮತ್ತು ಅದೇ ವಿಷಯದಲ್ಲಿ ಸಂಶಯಾಸ್ಪದವಾದ ಅಥವಾ ವಿವಾದಗ್ರಸ್ತವಾದ ಅಂಶಗಳಿಗೆ ಸಮಾಧಾನವನ್ನು ಕೇಳಬೇಕೆನ್ನಿಸುವ ದೊಡ್ಡ ಮನುಷ್ಯರು ಇದರಡಿ ರುಜು ಮಾಡಿರುವವರ ಮೂಲಕ ತಿಳಿದುಕೊಳ್ಳಬಹುದು.

ಇದಕ್ಕೆ ಸಂಬಂಧಪಟ್ಟ ಪಾವ ಗ್ರಂಥಗಳು ಸಹ ಸಾಧ್ಯವಾದರೆ ಸರಬರಾಯಿಮಾಡಲ್ಪಡುವವು.

ಬಿ ನರಸಿಂಗರಾವ್,

ಬೆಂಗಳೂರು ಡಿಸ್ಟ್ರಿಕ್ಟ್ ಪೇಟೆ

೧೬ನೇ ನಂಬರ್ ಮನೆ.

ನೋಟಿಸ್.

ಈ ಕೆಳಗೆ ರುಜು ಮಾಡಿದ ಕಾಶೀ ನಾರಾಯಣ ದೀಕ್ಷಿತನಿಂದ ಕೊಡಲ್ಪಡುವ ನೋಟಿಸ್ ಅದಾಗಿ. ನನ್ನ ಮಗ ಸುಬ್ರಹ್ಮಣ್ಯದೀಕ್ಷಿತನು ಈಗ ೮ ವರುಷಗಳಿಂದ ದುರ್ಮಾರ್ಗಿಗಳ ಸಹವಾಸದಿಂದ ದುರ್ವ್ಯಸನಿಯಾಗಿಯೂ ಸ್ವೇಚ್ಛೆಯಾಗಿಯೂ ನಡೆಯುತಿದ್ದು ಯಜಮಾನನಾದ ನನ್ನ ಬುದ್ಧಿವಾದಗಳನ್ನು ಉಲ್ಲಂಘಿಸಿ ತನ್ನ ದುರ್ಮಾರ್ಗವನ್ನು ಬಿಡದೆ ಸಾಲಗಳನ್ನು ಮಾಡುತ್ತಾನಾಗಿಯೂ ನನ್ನ ಸ್ವತ್ತುಗಳಮೇಲಿನ ದೃಷ್ಟಿಯಿಂದ ಜನಗಳು ಸಾಲಕೊಡುವವಾಗಿ ತಿಳಿಯಬರುವದರಿಂದಲೂ ಸದರೀನನ್ನ ಮಗನಿಗೆ ಇದುವರಿವಿಗೆಯಾರಾದರೂ ಸಾಲಕೊಟ್ಟದ್ದರೂ ಅಥವಾ ಮುಂದೆ ಕೊಟ್ಟರೂ ದುರ್ಮಾರ್ಗಕ್ಕೋಸ್ಕರ ಮಾಡಲ್ಪಡುವ ಆ ಸಾಲವು ನಮ್ಮ ಕುಟುಂಬದ ಸ್ವತ್ತುಗಳಿಗೆ ಬಾಧಿಸುವುದಿಲ್ಲವೆಂದು ಮಹಾಜನಗಳಿಗೂ ಇದರಿಂದ ಖುದ್ದಾಗಿ ತಿಳಿಸಿದ್ದೇನೆ.

ತಾ॥ ೨೦ನೇ ಸೆಪ್ಟೆಂಬರ್ ಸನ ೧೮೮೫.

(ರುಜು) ಕಾಶೀ ನಾರಾಯಣದೀಕ್ಷಿತ

[illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 19, 1885.

೧೮೮೫ನೇ ಅಕ್ಟೋಬರ್ ೧೯ನೇ ತಾ॥ ಸೋಮವಾರ

ಓ॥ ಸರ್ವಜ್ಞತಾಂಶವಿಸಾರ್ಸ್ಯಯುತಾಂಪ್ರಸೂತೆ ವಾಣಿತ್ವರಂಪ್ರಸರಣೋಜ್ಜ್ವಲಹಾಸಪ್ರಸಾದಾ ನಿತ್ಯಾಸು ವಮನುಸುರರಮನುಸ್ಮರಾಮಿ ತ್ವಾಮಾನಸಾಖಿಲ ಜನಸ್ತುತಿಪ್ರಕಾಶಿನೀ

THE MADRAS MAHAJANA SABHA

ರಾಜ್ಯತಂತ್ರವಲ್ಲಾಗದ ಗೃಹತಂತ್ರವಲ್ಲಾಗಲಿ ಕಾಲಾನುಗುಣವಾಗಿ ನಡೆಸುವವರಿಗೆ ಯೆಂದಿಗೂ ಸುಗಮವಿಲ್ಲವು. ಪ್ರಕೃತ ರಾಜರಾದ ಬ್ರಿಟಿಷ ಗವರ್ನಮೆಂಟನವರ ಆಳ್ವಿಕೆಯಲ್ಲಿ ಸರ್ವತ್ರ ವೈಲಕ್ಷಣ್ಯವೂ, ವಿವೇಕ ಪ್ರಾಶಸ್ತ್ಯಕವಾದ ವಿಚಾರಗಳೂ ವ್ಯಾಪಕಗಳಾಗಿರುವ ಈಗಿನ ಕಾಲದಲ್ಲಿ ಆದಕ್ಕೆ ತಕ್ಕಂತೆ ಪ್ರಜೆಗಳು ವರ್ತಿಸದಿದ್ದರೆ ಜನಗಳಿಗೆ ಹಿತಪ್ರಾಪ್ತಿ ಅಹಿತ ನಿರಸನಗಳೆಂಬ ಯೆರಡು ಅಂಶಗಳು ಸಿದ್ಧಿಸದೆ ಹೋಗುತಿವೆ ಇದಕ್ಕೆ ಈಗ ಅತ್ಯಂತಾಪೇಕ್ಷಿತವಾದದ್ದೇನೆಂದರೆ, ಇಂದ್ಯದೇಶದ ಆಯಾ ರಾಜ್ಯದ ಪ್ರಜೆಗಳಿಗೆ ಪ್ರತಿನಿಧಿಗಳಾಗಿ, ಸಮರ್ಥರಾದವರು ಸೇರಿ ಪ್ರಜೆಗಳ ಸುಖಕ್ಕೆ ಆಯಾ ಕಾಲದಲ್ಲಿ ಅಪೇಕ್ಷಿತಗಳಾದ ಅಂಶಗಳಂ ಕುರಿತು, ಅಧಿಕಾರಿಗಳ ಅವಧಾನಕ್ಕೆ ಬರುವಂತೆ ಚರ್ಚಿಸುವದಕ್ಕೆ ಅನುಗುಣವಾದ ಪ್ರಜಾ ಪ್ರತಿನಿಧಿ ಸಮಾಜಗಳಂ ಯೇರ್ಪಡಿಸಬೇಕಾದ್ದು ಆವಶ್ಯಕಗಳಾಗಿರುತಿವೆ. ಇಂಡ್ಯದೇಶದ ಸಾಮಾನ್ಯವಾದ ಆಳ್ವಿಕೆಯ ಕ್ರಮವನ್ನು ಸುಲಭವಡಿಸಿ ಪ್ರಜಾರಂಜಕವನ್ನಾಗಿ ಮಾಡಲಿಕ್ಕೆ ಮೇರೆ ಹೇಳಿದ ಸಮಾಜಗಳು ವಿನಾ ಮತ್ತಾವದೂ ಶಕ್ತವಾಗಲಾರದು. ಮುಖ್ಯವಾಗಿ ಇಂಡ್ಯದೇಶದ ರಾಜ್ಯತಂತ್ರಕ್ರಮದೊಳು ಬದ್ಧಾಂಶಗಳು ಪ್ರಾಮಾದಿಕಗಳಾಗಿ ಕಾಣಬರಲಿಕ್ಕೆ, ರಾಜ್ಯತಂತ್ರಕ್ರಮಗಳಲ್ಲಿ ಪ್ರಜೆಗಳ ತಾತ್ಪರ್ಯವಿಂತಾದ್ದೆಂದು ಪ್ರಾಮಾಣಿಕವಾಗಿ ತಿಳಿಸುವದಕ್ಕೆ ಸುಪ್ರತಿಷ್ಠವನ್ನಾಗಿಯೂ, ನಿರುಪಾಧಿಕವಾಗಿಯೂ ಇರುವ ಸಮಾಜಗಳ ದೌರ್ಲಭ್ಯವೇ ಕಾರಣವಾಗಿರುತಿದೆ ಇಂತಾ ಪ್ರಜಾಭಿಪ್ರಾಯ ದ್ಯೋತಕವಾದ ಸಮಾಜಗಳಿಂದ ಉಂಟಾಗತಕ್ಕ ಪ್ರಯೋಜನವನ್ನೂ, ಸಾದ್ಯಾಂಶಗಳನ್ನೂ ಈಗಿನಕಾಲದ ವಿದ್ಯಾವಂತರಾದ ನೇಟಿವ್ ಸಮುದಾಯದವರು ತಿಳಿದುಕೊಂಡು ಅಬಗ್ಗೆ ಅಸ್ಖಲಿತವಾದ ಪ್ರಯತ್ನಗಳಂ ಮಾಡಲಾರಂಭಿಸುವದರಿಂದ ಮುಂದೆ ಬ್ರಿಟಿಷ್ ಗವರ್ನಮೆಂಟಿನವರಿಗೆ, ತಮ್ಮಿಂದ ಪಾಲಿತರಾದ ಪ್ರಜೆಗಳ ಮೇಲಿನ ಬೇದಗಳು ಫಲಾನೇ ರೂಪವಾದವೆಂತಲೂ, ಅಪೇಕ್ಷಿತಾನಪೇಕ್ಷಿತಾಂಶಗಳು ಏತದ್ರೂಪವಾದವೆಂತಲೂ, ತಿಳಿದುಕೊಳ್ಳುವದಕ್ಕೆ ಅವಕಾಶವುಂಟಾಯಿತು. ಇಂತಾ ಸಮಾಜಗಳು ಈಚೆಗೆ ಅಲ್ಲಲ್ಲಿಯಲ್ಲಿ ತಲೆದೋರಿ ಅವು ರಾಜ್ಯತಂತ್ರಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳನ್ನೂ ವಿಚಾರಿಸಿ ಅವರವರ ಸ್ವಾಭಿಪ್ರಾಯವನ್ನು ಅಧಿಕಾರಿಗಳಿಗೆ ತಿಳಿಯಪಡಿಸುವದು ಶಕ್ತವಾದದ್ದಾಗಿದೆ. ಇವುಗಳಲ್ಲೊಂದು ೧೮೮೪ನೇ ಇಸವಿ ಮೇ ತಿಂಗಳಲ್ಲಿ ಮದರಾಸಿನೊಳು ವ್ಯವಸ್ಥಾಪಿತವಾದ ಮಹಾಜನ ಸಭೆ ಯೆಂಬದು ಈಗ ಸರ್ವಾಂಶದಿಂದಲೂ ಬಲಿಷ್ಠವಾಗಿ ನಿರ್ಧಾರಪೂರ್ವಕವಾದ ಸ್ವತಂತ್ರಾಭಿಪ್ರಾಯವು ನಿಶ್ಶಂಕವಾಗಿ ತಿಳಿಸಿ, ಅದರ ಪ್ರತಿಕ್ರಿಯೆಯಂ ಪಡೆಯುವದು ಶಕ್ತವಾಗಿರುತಿದೆ. ಪ್ರಸಕ್ತ ಸಭೆಯು ಗತ ಸಂವತ್ಸರದ ರಿಪ್ರೋರ್ಟಿನ ಪ್ರತಿಯೊಂದು ಕೃಪಾಪೂರ್ವಕ ನಮಗೆ ಕಳುಹಿಸಲ್ಪಡಲು, ಕೃತಜ್ಞತೆಯೊಡನೆ ಅದಂ ಪರಿಗ್ರಹಿಸಿ ನೋಡಲಾಗಿ ಸಾವ್ಯವಸ್ಥಾಪಿತವಾದ ಒಂದು ವರುಷದೊಳಗೆ ಸದರೀ ಸಮಾಜವು ಗಣನೀಯವಾದಂತಾ ಪ್ರಾಬಲ್ಯಸ್ಥಿತಿಗೆ ಬಂದ ಅಂಶವು ಅರಿತು ಬಹಳ ಸಂತೋಷಿಸಿದೆವು. ಪ್ರಥಮತಃ ಇದು ಸ್ಥಾಪಿಸಲ್ಪಟ್ಟ ಕಾಲದಲ್ಲಿ ೫೦ ಮೆಂಬರಗಳಿದ್ದರು ಗತ ಜೂನ್ ತಿಂಗಳ ಆಖೈರಿನೊಳು ೨೦೦ ಮೆಂಬರ್‌ಗಳು ದಾಖಲಾದರು. ಇದು ಕೇವಲ ಪ್ರಜಾ ಪ್ರಯೋಜನವು ಹಿಡಿದು ವಾದಿಸತಕ್ಕ ಸಮಾಜವಾಗಿರುವದರಿಂದ ೧೮೮೪ನೇ

ಇಸವಿ ಮೇ ತಿಂಗಳ ೧೬ನೇ ತಾರೀಖಿನಲ್ಲಿ ನಡೆದ ಒಂದು ಜನರಲ್ ಮೀಟಿಂಗಲ್ಲದೆ ಪ್ರತ್ಯೇಕ ೬ ಮೀಟಿಂಗ್‍ಗಳು ೧೩ ಸಾಲಿನಲ್ಲಿ ನಡೆದವು. ಕೇವಲ ಶೈಶವ ದಶೆಯೊಳಿರುವ ಈ ಸಭೆಯು, ಪ್ರಾರಂಭಿಸಲ್ಪಟ್ಟ ೧೨ ತಿಂಗಳ ಕಾಲದಲ್ಲಿ ಅದು ನಡೆಸಿದ ಆವಳಿತಗಳು ಬಹಳ ಪ್ರಶಂಸಾರ್ಹವಾಗಿರುತ್ತವೆ. ಗತ ಸಂವತ್ಸರದಲ್ಲಿ ಈ ಸಭೆಯವರು ೩ ಅರ್ಜಿಗಳನ್ನು ತಯಾರ್‌ಮಾಡಿ ಮೂವರಿಗೆ ಕಳುಹಿಸಿದರು. ಅವುಗಳಪೈಕಿ ಸಿವಿಲ್ ಸರ್ವಿಸ್ ಪರೀಕ್ಷೆಗೆ ದಾಖಲಾಗತಕ್ಕ ಹಿಂದೂಗಳ ವಯಃಪರಿಮಿತಿಯನ್ನು ಹೆಚ್ಚಿಸತಕ್ಕಬಗ್ಯೆ ಸ್ಟೇಟ್ ಸೆಕ್ರಟರಿಯವರಿಗೆ ಬರೆದುಕಳುಹಿಸಲ್ಪಟ್ಟ ಅರ್ಜಿ ಮೊದಲನೆಯದಾಗಿರುತ್ತದೆ. ನೀರಾವರಿ ಮತ್ತು ನಾವಿಕ ಸಂಬಂಧವಾದ ಮಸವಿದಾ ಆಕ್ಟುಗಳಮೇಲೆ ಲೋಕಲ್ ಗವರ್ನ್‌ಮೆಂಟಿನವರಿಗೆ ಬರೆಯಲ್ಪಟ್ಟ ಅರ್ಜಿ ಯೆರಡನೆಯದಾಗಿರುತ್ತದೆ. ಲೋಕಲ್ ಗವರ್ನ್‌ಮೆಂಟಿನವರು ಮದರಾಸ್‌ಪ್ರೆಸಿಡೆನ್ಸೀಯಿಂದ ಸಿವಿಲ್ ಸರ್ವೀಸ್ಸಿಗೆ ಚುನಾಯಿಸಿ ನೇಮಕಮಾಡಿದವರ ವಿಷಯವು ಕುರಿತು ಇಂಡ್ಯ ಗವರ್ನ್‌ಮೆಂಟಿನವರಿಗೆ ಬರೆದ ಅರ್ಜಿಯು ಮೂರನೆಯದಾಗಿರುತ್ತದೆ. ಮಾರ್ಕ್ವಿಸ್ ಆಫ್ ರಿಪ್ಪನ್‌ಯವರು ತಮ್ಮ ಕೆಲಸವಬಿಟ್ಟು ಸ್ವದೇಶಕ್ಕೆ ಹೋದ ಸಂದರ್ಭದಲ್ಲಿಯೂ, ಲಾರ್ಡ್ ಡಫ್ರಿನ್‌ಯವರು ಗವರ್ನರ್ ಜನರಲ್ ಕೆಲಸವನ್ನು ವಹಿಸಿದ ಕಾಲದಲ್ಲಿಯೂ, ಯೆರಡು ವಿಜ್ಞಾಪನ ಪತ್ರಿಕೆಗಳನ್ನು ಸದರೀ ಸಭೆಯವರು ಒಪ್ಪಿಸಿದರು. ಮೊದಲನೆಯದು ಸಮಾಜದ ತರಫೆ ಪ್ರತಿನಿಧಿಗಳಿಂದ ಮುಂಬೈಯಲ್ಲಿಯೂ, ಯೆರಡನೆಯದು ಇಂಡಿಯನ್ ಮಿರರ್ ಪತ್ರಿಕೆಯ ಯೆಡಿಟರಾದ ಮೆ|| ಬಾಬೂ ನರೇಂದ್ರನಾಥ ಸೇನ್ ಯವರಮೂಲಕ ಕಲ್ಕತ್ತೆಯಲ್ಲಿಯೂ ಒಪ್ಪಿಸಲ್ಪಟ್ಟವು. ಈ ಇಂಡ್ಯದೇಶದ ಹಿತಚಿಂತಕರಾಗಿದ್ದ ಮತ್ತು ಪಾರ್ಲಿಮೆಂಟ್ ಮೆಂಬರಾಗಿದ್ದ ಮೆ|| ಫಾಸೆಟ್‌ಯವರ ಮರಣ ವೃತ್ತಾಂತದಿಂದ ಇಂಡ್ಯದೇಶದ ಪ್ರಜೆಗಳಿಗೆ, ತತ್ರಾಪಿ ಮದರಾಸ್‌ಪ್ರೆಸಿಡೆನ್ಸಿಯವರಿಗೆ, ಉಂಟಾದ ವ್ಯಾಕುಲವನ್ನು ಸೂಚಿಸಿ ಮೃತಪಟ್ಟವರ ಭಾರ್ಯೆಯವರಿಗೂ ಅವರ ಕುಮಾರ್ತೆಯರಿಗೂ ದುಃಖೋಪಶಾಮಕಗಳಾದ ಪತ್ರಿಕೆಗಳೆರಡು ಬರೆದು ಕಳುಹಿಸಲ್ಪಟ್ಟವು. ಗತ ಸಂವತ್ಸರ ಡಿಸೆಂಬರ್ ೨೮ತ್ಯೆರನಲ್ಲಿ ಪಚ್ಚೆಯಪ್ಪ ಮೊದಲಿಯಾರ್ರವರ ಸ್ಕೂಲ್ ಸೌಧದಲ್ಲಿ ಸಾಂವತ್ಸರಿಕ ಸಭೆ ನಡೆದು ಅದಕ್ಕೆ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಕರೆಯಿಸಲ್ಪಟ್ಟಿದ್ದರು. ಸದರೀ ಸಭೆಯು ಸಕಲ ವಿಧದಿಂದಲೂ ಜನಗಳ ಮನವನ್ನಾಕರ್ಷಿಸತಕ್ಕದ್ದಾಗಿದ್ದದರಿಂದ ಅದರ ಸಂಬಂಧವು ಬಯಸಿ ಬಹುಮಂದಿ ಅದಕ್ಕೆ ನೆರವಾಗುಭವಿಸಿದರು. ಮೇಲೆ ಕಂಡ ಸಭೆಯ ರಿಪೋರ್ಟಿನ ಕಾಪಿಗಳು ವೈಸ್‌ರಾಯಿಯವರಿಗೂ, ಪ್ರೆಸಿಡೆನ್ಸಿ ಗವರ್ನರಿಗೂ ಕಮಾಂಡರ್‌ಚೀಫ್‌ರವರುಗಳಿಗೂ, ಪ್ರಮುಖರಾದ ಇತರ ಯೂರೋಪಿಯನ್ ದೊಡ್ಡ ಮನುಷ್ಯರಿಗೂ ಕಳುಹಿಸಲ್ಪಟ್ಟವು. ಆದರಮೇಲೆ ಅವರೆಲ್ಲರೂ ಸಭೆಯ ಉದ್ದೇಶ ಪ್ರಯತ್ನಗಳನ್ನು ನೋಡಿ ಬಹಳವಾಗಿ ಶ್ಲಾಘಿಸಿದರು. ಕಡೆಗೆ ಈ ಸಭೆಯವರು ಸಮರ್ಥರಾದ ಪ್ರತಿನಿಧಿಗಳನ್ನು ಇಂಗ್ಲಾಂಡಿಗೆ ಕಳುಹಿಸಿ ಅವರು ಇಂಡ್ಯದೇಶದ ಪ್ರಜೆಗಳು ಈಗ ಅನುಭವಿಸುತಲಿರುವ ಸಂಕಟಗಳನ್ನೂ ಅಪೇಕ್ಷಿತಾಂಶಗಳನ್ನೂ ಪಾರ್ಲಿಮೆಂಟ್ ಮೆಂಬರ್‌ಗಳಿಗೆ ತಿಳಿಸುವಂತೆ ಮಾಡಿದರು. ಇದರ ದೆಸೆಯಿಂದ ಇಂಡ್ಯದೇಶದ ಪ್ರಜೆಗಳ ಹಕ್ಕುದಾರಿಯನ್ನು ಕುರಿತು ಯಥಾವಸ್ಥಿತವಾಗಿ ಹೌಸ್‌ಆಫ್ ಕಾಮನ್ಸ್ ಸಮಾಜದಲ್ಲಿ ವಾದಿಸುವಂತಾ ಇಂಡ್ಯದೇಶಾಭಿಮಾನಿಗಳಾದವರು ಚುನಾಯಿಸಲಿಕ್ಕೆ ಕಾರಣವಾಯಿತು. ಈ ಸಂವತ್ಸರದ ಆಕ್ಟೋಬರ್ ಭಾಗದಲ್ಲಿ ಯೆರಡನೆಯ ಸಲದ ಸಾಂವತ್ಸರಿಕ ಮೀಟಿಂಗ್ ನಡೆಯುವದಾಗಿರುವದರಿಂದ ಆ ಕಾಲದಲ್ಲಿ ಚರ್ಚಿಸಬೇಕಾದ ಅಂಶಗಳನ್ನು ಕುರಿತು ಪ್ರಸಿದ್ಧಪತ್ರಿಕೆಯೊಂದು ಸದರೀ ಸಭೆಯವರಿಂದ ನಮಗೆ ಕಳುಹಿಸಲ್ಪಟ್ಟಿರುತ್ತದೆ. ಪ್ರಸಿದ್ಧ ಪತ್ರಿಕೆಯಲ್ಲಿ ತಿಳಿಸಲ್ಪಟ್ಟಿರುವಪ್ರಕಾರ ಮೂರಂಶಗಳು ವಿಚಾರಣೀಯಗಳಾಗಿವೆ, ಅವುಗಳ್ಯಾವುವೆಂದರೆ.

೧ ಫಾರೆಸ್ಟು ಮತ್ತು ನಮ್ಮಕ್‌ವಿಷಯಕವಾದ ಕಾನೂನುಗಳು ಈ ಪ್ರೆಸಿಡೆನ್ಸಿಯಲ್ಲಿ ವ್ಯವಹಾರದೊಳಿರತಕ್ಕ ಕ್ರಮ;

೨. ಪ್ರಾಂತ್ಯಗಳೊಳು ವ್ಯವಸ್ಥಾಪಿತವಾಗಿರುವಂತೆ ಪಂಚಾಯಿತಿ ಕೋರ್ಟ್ ಅಥವಾ ಕೋರ್ಟುಗಳನ್ನು ಯೇರ್ಪಡಿಸುವಣ;

೩. ಈ ಪ್ರೆಸಿಡೆನ್ಸಿಯಲ್ಲಿ ಕೆನವಾರೀ ಕೆಲಸಗಳನ್ನು ಪ್ರೋತ್ಸಾಹಗೊಳಿಸುವಣ;

ಇವುಗಳಾಗಿರುತ್ತವೆ. ಇದಲ್ಲದೆ ಈ ಸಭೆಯವರು ಮೀಟಿಂಗ್‌ಕಾಲದಲ್ಲಿ ಯೆರಡು ಅರ್ಜಿಗಳು ತಯಾರ್ಮಾಡಿ, ಅವುಗಳು ಕುರಿತು ಚರ್ಚಿಸುವರು. ಆ ಪೈಕಿ ಮೊದಲನೆಯದು ಇಂಡ್ಯದೇಶದ ನ್ಯಾಯವಿಧಾಯಕ ಸಭೆಯನ್ನು ಕುರಿತದ್ದಾಗಿಯೂ, ಯೆರಡನೆಯದು, ರೆವಿನ್ಯೂ ಅಧಿಕಾರಿಗಳಿಗೆ ಇರುವ ಮಾಜಿಸ್ಟ್ರೇರಿಯಲ್ ಅಧಿಕಾರವನ್ನು ತಪ್ಪಿಸಬೇಕೆಂಬದನ್ನು ಕುರಿತದ್ದಾಗಿಯೂ ಇರುತ್ತವೆ. ಮುಖ್ಯವಾಗಿ ಈ ಸಂದರ್ಭದಲ್ಲಿ ಇಂಡ್ಯದೇಶೀಯರೆಲ್ಲರಿಗೂ, ತತ್ರಾಪಿ ಮೈಸೂರುದೇಶೀಯರಿಗೂ ನಾವು ಪ್ರಕಟಪಡಿಸುವದೇನಂದರೆ, ಮದರಾಸ್ ಮಹಾಜನ ಸಭೆಯು ಬಹು ಮಹಾಜನ ನಿಬದ್ಧವಾದದ್ದಾಗಿರುವದರಿಂದಲೂ, ಪ್ರಜೆಗಳ ಸಾಮುದಾಯಕಗಳಾದ ಪ್ರಯೋಜನಾಂಶಗಳು ಕುರಿತು ವಿಚಾರ ಮಾಡತಕ್ಕದ್ದಾಗಿಯೂ, ಸ್ವತಂತ್ರರಾದ ನೇಟಿವ್‌ಗಳ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕದ್ದಾಗಿಯೂ ಇರುವದರಿಂದ ಇದಕ್ಕೆ ಯೆಲ್ಲರೂ ಸಾಧ್ಯವಾದ ಸಹಾಯವನ್ನೆಲ್ಲ ಮಾಡಿ ಅಭಿವೃದ್ಧಿಗೆ ತರುವದು ಸ್ವದೇಶಾಭಿಮಾನಕ್ಕೆ ಲಕ್ಷಣವಾಗಿರುತ್ತದೆ.

A REPLY.

ಮಾಹೇ ಮಜಕೂರ್ ೧೪ನೇ ತಾರೀಖಿನಲ್ಲಿ ಛತ್ರಕೆರೆ ನಿವಾಸಿಯೊಬ್ಬನು ಕಳುಹಿಸಿದ, ಮತಾಭಿಮಾನಿವೇಷ ಹಿಡಿದವನಾದ ಮೈಸೂರು ಸ್ಟಾರ್ ಪತ್ರಿಕೆಯ ಲೇಖನವನ್ನು ಸಮಗ್ರವಾಗಿ ನೋಡಿದೆವು. ಬಳ್ಳಹಳ್ಳಿ ಹಾಲಿನಲ್ಲಿಬಿಸ್ಕೆಂಬ ಗಾದೆಯಂತೆ, ಜಗತ್ತಿನಲ್ಲಿರುವ ಅಮೂಲ್ಯವಿಷಯುಗಳಿಗಿಂತಲೂ, ಅನ್ಯಮತ ದೂಷಣೆಯನ್ನೇ ಪ್ರಾಧಾನ್ಯವನ್ನಾಗಿ ಎಣಿಸಿ, ಅಜ್ಞತೆಯಿಂದ ಸ್ವಮತವು ಕೊಂಡಾಡತಕ್ಕವರು ಅಪಹಾಸ್ಯಕ್ಕೆ ಗುರಿಯಾಗದಿರಲಾರರಾಗಿ ಅಂತವರ ಅನ್ಯವಸ್ಥ ಪ್ರಸಂಗಕ್ಕೆಲ್ಲ ಪ್ರತ್ಯುತ್ತರ ಹೇಳಲಾರಂಭಿಸುವೆವಾದರೆ ವಿವೇಕಿಗಳು ನಮ್ಮನ್ನೂ ಭ್ರಾಂತರೆನ್ನುವರು. ಆದರೆ ಸ್ವಮತಾಭಿನಿವೇಶವುಳ್ಳ ಕೆಲವರ ಭ್ರಾಂತಿಯನ್ನು ಅಭಿವೃದ್ಧಿಪಡಿಸುವದಕ್ಕಾಗಿಯೇ ಪ್ರದ್ವಿಷ್ಟವಾಗಿ ಪ್ರಕಟಸಲ್ಪಡುತಲಿರುವ ಪತ್ರಿಕೆಗಳಂಕುರಿತು ನಾವು ಆಕ್ಷೇಪಿಸಲಾವಶ್ಯಕವಿಲ್ಲವು, ಪರಂತು ಲೋಕೋಪಕಾರಾರ್ಥ ತಾವು ಅವತರಿಸಿ ತಮ್ಮ ಕರ್ತವ್ಯವನ್ನು ಮಾಡುತಲಿರುವಂತೆ ಭಾವಗೊಂಡಿರುವ ಸದರೀ ಪತ್ರಿಕಾಲೇಖಕರುಗಳಿಗೆ ಒಂದಂಶವನ್ನು ಆಪ್ತರಾಗಿ ಇದರಿಂ ತಿಳಿಸುವೆವು. ಸರ್ವಶಕ್ತನಾದ ದೇವರ ತತ್ವವು ತಿಳಿಯಬೇಕಾದ್ದು ಸರ್ವರಿಗೂ ಆವಶ್ಯಕವಾಗಿರುತ್ತದೆ. ಇದಕ್ಕೆ ಜಾತಿ ಮತ ಸಂಪ್ರದಾಯಗಳೊಂದೂ ಪ್ರಾಧಾನ್ಯಗಳಲ್ಲವು. ಇದಕ್ಕೋಸ್ಕರ ಲೋಕದೊಳಿರುವ ಸಕಲರೂ ಪ್ರಯತ್ನಪಡದಿರುವದಿಲ್ಲವು. ಪರಂತು ಆವಿಷಯ ಎಲ್ಲರಿಗೂ ವಾಙ್ಮಾತ್ರ ಪರ್ಯವಸಾಯಿಯಾಗಿದೆಯೇ ಹೊರತು ದೇವರುನೋಡಿದವರು ದುರ್ಲಭರು. ಚಕ್ಷುರ್ಗೋಚರವಿಲ್ಲದ ಇಂತಾ ವಿಷಯದೊಳಗೆ ನಂಬಿಕೆಗಿಂತಲೂ ಬೇರೊಂದೂ ಇರುವದಿಲ್ಲವು. ಇಂತಾ ನಂಬಿಕೆ ಒಬ್ಬೊಬ್ಬರಿಗೊಂದೊಂದುಬಗೆಯಾಗಿ ಕುದರಿ ತದನುಗುಣಗಳಾದ ಆಚಾರವ್ಯವಹಾರಗಳನ್ನು ಅವರು ಕಲ್ಪಿಸಿಕೊಂಡು ತದ್ವತ್ ನಡೆಯುತ್ತಾರೆ. ಚಾರ್ವಾಕನೊಬ್ಬನುವಿನಾ, ಜಗತ್ಕಾರಣನಾದ ದೇವರೊಬ್ಬನಿದ್ದಾನೆಂಬ ಮಿಕ್ಕ ಮತವನ್ನವಲಂಬಿಸಿದವರೆಲ್ಲರೂ, ಆಪ್ತವಾಕ್ಯವನ್ನನುಸರಿಸಿ ನಡೆಯಬೇಕಾದವರಾಗಿರುತ್ತಾರೆ. ಯಾವ ಮತ ಪ್ರವಿಷ್ಟರಾಗಲಿ ಮೂಲಕಾರಣನಾದ ಭಗವಂತನು ಕಣ್ಣಿನಿಂದ ಕಂಡವರಲ್ಲವು. ಎಲ್ಲರಿಗೂ, ಅವರವರ ಹೃದಯದಲ್ಲಿ ಹುಟ್ಟುವ ಒಂದುಬಗೆ ದೃಢವಾದ ನಂಬಿಕೆಯಿಂದ ತಮಗೆ ರಕ್ಷಣೆಯುಂಟಾಗುವದೆಂಬ ಧೈರ್ಯವೂ, ಅದರಿಂದ ನಾಲ್ವರಿಗೆ ಅಭಿಮತವಾದ ವರ್ತನವೂ ಉಂಟಾಗುವವೆ. ಇವಕ್ಕಿಂತಲೂ ಯಾವ ಮತಪ್ರವಿಷ್ಟರಿಗೂ ಹೆಚ್ಚಾದ ಪ್ರಯೋಜನವುಂಟಾಗುವಂತೆ ನಮಗೆ ತೋರಲಿಲ್ಲವು. ಹೀಗಿರುವಲ್ಲಿ ಯಾವ ಮತವನ್ನು ನಾವು ಒಳ್ಳೆಯದೆನ್ನಬಹುದು. ಕೇವಲ ತತ್ವವನ್ನರಿತವನಿಗೆ ತಾನು ಯಾವ ಮತದವನಾದರೇನು, ತನ್ನ ವರ್ತನವು ಹ್ಯಾಗಿದ್ದರೇನು, ತನ್ನ ವಿಷಯವಾಗಿ ಅನ್ಯರು ಏನು ಹೇಳಿದರೇನು, ಅವುಗಳೊಂದಕ್ಕೂ ಕಿವಿ ಕೊಡದೆ ಬ್ರಹ್ಮಾನುಸಂಧಾನ ನಿರತನಾಗಿರುವನು. ಅಂತವನು ಯಾವ ಜಾತಿಯವನಾದರೂ, ಯಾವ ಮತದವನಾದರೂ, ಜ್ಞಾನಿ ಯೆನಿಸಿಕೊಳ್ಳುವದರೊಳೇನೂ ಆಕ್ಷೇಪಣೆ ಯಿರುವದಿಲ್ಲವು. ಅವನಿಗೆ ಕಲ್ಪಿತವಾದ ಬ್ರಾಹ್ಮಣ್ಯದಿಂದಾವ ಪ್ರಯೋಜನವೂ ಉಂಟಾಗಲರಿಯದು. ಮತ್ತು ಅವನು ಇಂತವುಗಳಿಗಾಗಿ ಸ್ವಲ್ಪವೂ ಪೇಚಾಡಲಾರನು. ಇದಲ್ಲದೆ ಅವಿಚಾರ ಪೂರ್ವಕವಾದ ಮೂಢ ನಂಬಿಕೆಯೊಡನೆ ಒಂದು ಮತದವರು ಮತ್ತೊಂದನ್ನು ದೂಷಿಸುವದಕ್ಕೆ ತಮ್ಮ ಮತದೊಳು ಸ್ವಾರಸ್ಯವಾದ ಬೇರೇ ವಿಷಯವಿಲ್ಲದೆ ಯಿರುವದೇ ಕಾರಣವೆಂದು ನಿರೂಪಕರೆಲ್ಲರೂ ಭಾವಿಸುವರಲ್ಲದೆ, ಏತದ್ವಿಷಯವನ್ನು ಏರ್ಪಟ್ಟಿರುವ ಪತ್ರಿಕೆಯು ವಿಷಯ ದೌರ್ಬಲ್ಯದಿಂದ ಅನ್ಯರಿಗೆ ಪರಿಗ್ರಾಹ್ಯವಾಗಲಾರದೆಂದು ಸಹ ಹೇಳುವರು. ಮುಖ್ಯವಾಗಿ ಸ್ವರೂಪಾನಭಿಜ್ಞರಾದವರು ತಮ್ಮ ಗೌರವಾಗೌರವಗಳನ್ನು ಸಹ ಚಿಂತಿಸದೆ ದುರಾಗ್ರಹ ಪ್ರೇರಿತರಾಗಿ ಉನ್ಮತ್ತರಂತೆ ತಮ್ಮಷ್ಟಿಗೆ ತಾವೇ ನಾನಾ ತರ ಮಾಡಿಕೊಳ್ಳುವದು ಲೋಕದೊಳು ಸಹಜವಾದದರಿಂದ ಅಂತಾ ವಾದಗಳಿಗೆಲ್ಲ ಎದುರಿಸಿ ಪ್ರತ್ಯುತ್ತರ ಹೇಳುವದು ನಮ್ಮ ಯೋಗ್ಯತೆಗೆ ಬಹಳ ಲೋಪವೆಂದು ಭಾವಿಸಿ ಅದರ ಪ್ರಸ್ತಾವಕ್ಕೆ ಹೋದವರಲ್ಲವು. ಅನ್ಯರನ್ನು ಅನವರತ ಅಪೇಕ್ಷಿತವಾದ ಉಚ್ಚಾಟನೆವಾಗಿ ಬಾಯಿಗೆ ಬಂದಂತೆ ಬಯ್ಯುವದರಿಂದ ಬ್ರಾಹ್ಮಣ್ಯವು ಸ್ಟಾರ್ ಪತ್ರಿಕಾ ಲೇಖಕರಿಗೆ ಸಿದ್ಧಿಸುವದಾಗಿರುವ ಪಕ್ಷಕ್ಕೆ ಅನವರತ ನಡುಬೀದಿಯಲ್ಲಿ ನಿಂತು ಬಯ್ಯುತ ತಮಗೆ ಲಭಿಸಲಾರದ್ದನ್ನು ಸ್ವತಃ ಪಡೆಯುತಲೂ, ತಮಗಿಂತ ನ್ಯಾಯ್ಯರಾದವರಿಗೆ ಅದು ಉಂಟುಮಾಡುತಲೂ ಯಿರುವದರೊಳು ಯಾರ ಬಾಧಕವೂ ಇರಲಾರದು.

Occasional Notes
ನೈಮಿತ್ತಿಕವಿಷಯನ್ಯಾಸ

Prince of Wales' visit to Constantinople ಶ್ರೀಮನ್ಮಹಾರಾಣಿಯವರ ಜ್ಯೇಷ್ಠಪುತ್ರರಾದ ಪ್ರಿನ್ಸ್‌ಆಫ್‌ವೇಲ್ಸರವರು ತುರ್ಕೀ ಸುಲ್ತಾನರವರ ಸಂದರ್ಶನಕ್ಕಾಗಿ ಕಾನ್ಸ್ಟಾಂಟಿನೋಪಿಲಿಗೆ ಹೋಗುವವರಾಗಿದ್ದಾರೆಂದು ವರ್ತಮಾನಬಂದಿರುತ್ತದೆ.

Famine in Bengal—ಬಂಗಾಳೇಪ್ರಾಂತದಲ್ಲಿ ದುರ್ಭಿಕ್ಷವು ಅತಿ ಭಯಂಕರವಾಗಿರುವಂತೆಯೂ, ಈಸಂದರ್ಭದಲ್ಲಿ ಗವರ್ನ್‌ಮೆಂಟಿನವರ ಸಹಾಯವು ಕಡಮೆಯಾದಲ್ಲಿ ತನ್ಮೂಲಕ ಬಹುಮಂದಿ ಪ್ರಾಣಗಳಂ ಕಳೆದುಕೊಳ್ಳುವರೆಂತಲೂ ಉತ್ತರದೇಶದ ಪತ್ರಿಕೆಯೊಂದು ತಿಳಿಸುತ್ತದೆ.

Sir Rivers Thomson.—ಬಂಗಾಳೇ ಲೆಫ್ಟಿನೆಂಟ್ ಗವರ್ನರರಾದ ಸರ್. ರಿವರ್ಸ್ ಥಾಂಸನ್‌ಯವರು ತಮ್ಮ ಆಧಿಪತ್ಯಕ್ಕೆ ಒಳಪಟ್ಟ ಕೆಲವು ಪ್ರದೇಶಗಳೊಳಿರುವ ಅನಾಥರಾದವರ ಸುರಕ್ಷಣೆಯಬಗ್ಯೆ ಸರ್ಕಾರದಿಂದ ಸುಮಾರ್ ೩೦,೦೦೦ ರೂಪಾಯಿಗಳ ತನಕ ಧನಸಹಾಯ ಮಾಡಿದಂತೆ ತಿಳಿಯಲಾದೆವು.

The Chief Justice of Madras.—ಸರ್. ಆರ್ಥರ್ ಕಾಲಿನ್ಸ್‌ಯವರು ಮದರಾಸ್ ಹೈಕೋರ್ಟಿನ ಚೀಫ್ ಜಸ್ಟಿಸಾಗಿ ನೇಮಕಮಾಡಲ್ಪಟ್ಟಿರುತ್ತಾರೆಂಬ ಅಂಶವು ಗತವಾರ ಸರಕಾರೀಗೆಜೆಟಿನಲ್ಲಿ ಷಾಯಿಷಿಮಾಡಲ್ಪಟ್ಟಿರುತ್ತದೆ.

The Maharaja Dhuleepsingh.—ಈಗ ಇಂಗ್ಲಾಂಡಿನಲ್ಲಿರತಕ್ಕ ಮಹಾರಾಜಾ ದಲೀಪ್‌ಸಿಂಗರವರು ಇಂಡ್ಯದೇಶಕ್ಕೆ ವಾಪಸ್ ಬರುವರೆಂದು ನಿರೀಕ್ಷಿಸಲ್ಪಟ್ಟಿತ್ತಷ್ಟೆ. ಈ ಅಂಶವೀಗ ವಾಸ್ತವ್ಯವಾಗಿ ಸದರೀ ಮಹಾರಾಜರವರ ಕುಟುಂಬವೂ ಮಕ್ಕಳು ಸಹ ಬರುವ ನವಂಬರ್ ತಿಂಗಳಲ್ಲಿ ಇಂಡ್ಯದೇಶಕ್ಕೆ ಬರುತಾರೆ ಸ್ಥಿರಪಟ್ಟಿಯಾದಂತೆ ತಿಳಿಯಬರುತ್ತದೆ.

Japanese ladies.—ಜಪಾನ್‌ದೇಶದ ಸ್ತ್ರೀಯರು ಇಂಗ್ಲಿಷ್ ಭಾಷಾಭ್ಯಾಸ ಮಾಡುತ ಬಹಳ ಪ್ರವೀಣರಾಗುತಲಿರುವಂತೆ ತಿಳಿಯಬರುತ್ತದೆ. ಇನ್ನು ಯೆರಡು ಸಂವತ್ಸರಗಳೊಳಗಾಗಿ ಈಗ ಇಂಗ್ಲಿಷ್ ವೈದ್ಯಶಾಸ್ತ್ರಾಭ್ಯಾಸ ಮಾಡುತಲಿರುವ ಕೆಲವರು ಹೆಂಗಸರು ವೈದ್ಯಶಾಸ್ತ್ರ ಪರೀಕ್ಷೆಗಳಪೈಕಿ ಬಹಳ ಘನತರವಾದ ಎಂ. ಡಿ. ಎಂಬ ಪರೀಕ್ಷೆಯನ್ನು ಕೊಡುವದಕ್ಕೆ ಸಮರ್ಥರಾಗುವರೆಂದು ಕೇಳಿದವಕ್ಕೆ ಸಂತೋಷಿಸುವೆವು.

University Examiners.—ಈ ಅಕ್ಟೋಬರ್ ತಿಂಗಳಲ್ಲಿ ಇದುವರೆವಿಗೆ ೧೯ ತಾರೀಖುಗಳಾಗುತ ಬಂದಾಗ್ಯೂ ಅದ್ಯಾಪಿ ಯೂನಿವರ್ಸಿಟಿ ಪರೀಕ್ಷಕರ ನೇಮಕದರಾತಿಯು ಹೊರಗಾಗದೆ ಇದೆ. ಈ ಸಂವತ್ಸರದ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ. ಪರೀಕ್ಷೆಗಳ ಕಾಲವು ಸನ್ನಿಹಿತವಾಗಿ ಇನ್ನೂ ಒಂದೂವರೆ ತಿಂಗಳು ನಿಂತಿದೆಯಾಗಿ ಇಷ್ಟರ ಸಾವಕಾಶಕ್ಕೆ ಕಾರಣವು ಬುದ್ಧಿಸ್ಥವಾಗದಿದೆ.

Sir Fredrick Roberts.—ಮದರಾಸ್ ಕಮಾಂಡರ್ ಚೀಫರವರಾದ ಸರ್. ಫ್ರೆಡರಿಕ್ ರಾಬರ್ಟ್‌ಯವರು ಬರುವತಿಂಗಳ ೯ನೇ ತಾರೀಖಿನಲ್ಲಿ ಮುಂಬೈಗಾಗಿ ಬ್ರಿಂಡಿಸಿಯಲ್ಲಿ ಜಹಜ್‌ಹತ್ತುವರಾಗಿದ್ದಾರೆ. ಸರ್ ಫ್ರೆಡರಿಕ್‌ಯವರಿಗೆ ಈಚೆಗೆ ಬಾಲ್ ಮೋರಲ್‌ನಲ್ಲಿ ಶ್ರೀಮನ್ ಮಹಾರಾಜ್ಞಿಯವರ ಭೇಟಿ ಸಹ ಆಯಿತು. ಇವರಿಗೆ ಬರುವ ಬುಧವಾರದದಿನ ಲಾರ್ಡ್ ಮೇಯರ್‌ಯವರು ಮಾನಿಷನ್ ಹೌಸಿನಲ್ಲಿ ಔತಣ ಮಾಡಿಸುವರೆಂದು ತಿಳಿಯಬರುತ್ತದೆ.

An invention.—ಎಲೆಕ್ಟ್ರಿಸಿಟಿಯೆಂಬ ತಟಿದಾಕರ್ಷಣಶಕ್ತಿಯಮೂಲಕ ನಾಲ್ಕೂವರೆ ನಿಮಿಷದಲ್ಲಿ ಲಕ್ಷ ಎಪ್ಪತ್ತಾರುಸಾವಿರದ ಇನ್ನೂರು ಸೇರುಗಳ ಹಾಲಿನಲ್ಲಿ ಬೆಣ್ಣೆ ತೆಗೆಯಲ್ಪಡುವದೆಂತಲೂ, ಈಗ ಸಾಧಾರಣವಾಗಿ ತೆಗೆಯಲ್ಪಡುವ ಬೆಣ್ಣೆಗೂ, ಇದಕ್ಕೂ ಯಾವಭಾಗದಲ್ಲಿಯೂ ವ್ಯತ್ಯಾಸ ವಿರುವದಿಲ್ಲವೆಂತಲೂ, ಇಂದುಪ್ರಕಾಶ ಪತ್ರಿಕೆ ತಿಳಿಸುತ್ತದೆ. ಎಲೆಕ್ಟ್ರಿಸಿಟಿಯಿಂದ ಆಗದಿರುವ ಅದ್ಭುತಗಳೊಂದೂ ಯಿರುವದಿಲ್ಲವು

Fire.—ಮಾಹೇಮಜಕೂರ್ ೪ನೇ ತಾರೀಖ್ ಗುರುವಾರದದಿನ ಲಂಡನ್ ಪಟ್ಟಣದೊಳು ಬೆಂಕಿ ಬಿದ್ದು ಅದರಿಂದ ೨೮ ಮನೆಗಳೂ ೬ ಅಂಗಡಿಗಳೂ ಸಂಪೂರ್ಣ ದಗ್ಧವಾದಂತೆಯೂ, ಇದರಿಂದ ೩,೬೦,೦೦೦ ರೂಪಾಯಿಗಳ ಮಾಲ್‌ಗಳು ನಷ್ಟವಾದಂತೆಯೂ ತಿಳಿಯಬರುತ್ತದೆ. ಯಂತ್ರ ಕೌಶಲ್ಯಕ್ಕೆ ಮಾತೃಸ್ಥಾನವಾದ ಲಂಡನ್ ಪಟ್ಟಣದಲ್ಲಿಯೇ ಇಂತಾ ಪ್ರಬಲ ಸಂದರ್ಭದಲ್ಲಿ ಜಲಯಂತ್ರಗಳೊಂದೂ ಹಾಜರಿಲ್ಲದೆ ಹೋದವೆ?

Earthquake at Rangoon.— ಮಾಹೇ ಮುಜಕೂರ ೭ನೇ ತಾರೀಖ್ ಬುಧವಾರದದಿನ ರಂಗೂನ್‌ಪಟ್ಟಣದಲ್ಲಿ ಭೂಕಂಪ ವುಂಟಾದಂತೆಯೂ, ಅದರ ದೆಸೆಯಿಂದ ಅಲ್ಲಿ ಕೆಲವುಮಟ್ಟಿಗೆ ನಷ್ಟ ಸಹ ವುಂಟಾದಂತೆಯೂ ತಿಳಿಯಬರುತಿದೆ. ಈ ಪಾರ್ಥಿವ ಸಂವತ್ಸರದಲ್ಲಿ ಅತಿವೃಷ್ಟಿ ಅನಾವೃಷ್ಟಿ, ಭೂಕಂಪ, ರಾಜವಿಪ್ಲವ, ರೋಗಾದ್ಯುಪದ್ರವಗಳು ಮೊದಲಾದ ಸಂಕಟಗಳು ಬಹಳವಾಗಿ ಉಂಟಾದವು.

Lord Ripon.—ಸಾಬಕ್ ಇಂಡ್ಯಾ ವೈಸರಾಯಿಯವರಾಗಿಯೂ ಇಂಡ್ಯದೇಶೀಯರ ಸ್ವತಂತ್ರ್ಯ ಕ್ಷೇಮಾಪೇಕ್ಷಿಯಾಗಿಯೂ, ಬಹುಮಂದಿ ನೇಟಿವ್‌ಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂ ಇರುವ ಲಾರ್ಡ್ ರಿಪ್ಪನ್ನವರು ಸ್ವತಃ ಒಂದು ವೃತ್ತಾಂತಪತ್ರಿಕೆಯನ್ನು ಪ್ರಾರಂಭಿಸಿ ನಡೆಸುವವರಾಗಿದ್ದಾರೆಂದು ಕೇಳುತ್ತೇವೆ. ಸದರೀ ಪತ್ರಿಕೆಯಲ್ಲಿ ಸಾಮಾನ್ಯವಾಗಿ ಇಂಡ್ಯದೇಶದ ಪ್ರಜೆಗಳಸ್ಥಿತಿಯಂ ಕುರಿತು ವಿಚಾರ ಮಾಡಲ್ಪಡುವದಾಗಿ ಅದು ಇಲ್ಲಿನವರಿಗೆ ಬಹಳ ಪ್ರಯೋಜನಕಾರಿಯಾಗುವದು.

Obituary.—ಸಂಸ್ಥಾನಿಕರ ಮಹಾರಾಜ ಅರಸರು ಸಹ ಕಾಲಗತಿಯನ್ನೈದಿದರೆಂದು ಇನ್ನು ಮುಂದೆ ಸದರೀ ಸಂಸ್ಥಾನದ ರಾಜ್ಯಾಡಳಿತಗಳು ಬ್ರಿಟಿಷ್ ಸರಕಾರದವರು ವಹಿಸಿಕೊಳ್ಳುವರೆಂತಲೂ ಮುಖ್ಯವಾಗಿ ಇಲ್ಲಿನವರಿಗೆ ಮರಳಿ ಕೊಟ್ಟು ಅವರನ್ನು ಪೋಷಿಸುವ ತಾತ್ಪರ್ಯ ಸಿದ್ಧವಾಗಿದೆಯೆಂದೂ ಕೇಳುತ್ತೇವೆ. ಪ್ರಕೃತದಲ್ಲಿ ಮೃತರಾದ ಅರಸರ ಸ್ಥಿತಿ ಮುಂಚೆಗಿಂತಲೂ ಉತ್ತಮವಾಗಿದ್ದಿತು. ಅದಾಗ್ಯೂ ಅವರ ಲೋಪವಿದ್ದರೂ ಅವರು ನಾಮ ಮಾತ್ರವವರಾಗಿಯೂ, ಧನಿಕಾಧಿಕಾರ ಶೂನ್ಯರಾಗಿಯೂ ಇರುತ್ತಾರೆ.

Abolition of Presidency Commander-in-chiefships.—ಈಗ ಮೂರು ಪ್ರಸಿಡೆನ್ಸಿಗಳಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿರುವ ಮೂವರು ಕಮಾಂಡರ್ ಇನ್‌ಚೀಫರುಗಳಿಂದ ಪ್ರಯೋಜನವೂ ಕಾಣಬರುವದಿಲ್ಲವೆಂದೂ, ಇವರ ಕೆಲಸಗಳು ವ್ಯರ್ಥವ್ಯಯಕಾರಿಯೆಂತಲೂ, ಇಂಡ್ಯ ಕಮಾಂಡರ್ ಇನ್‌ಚೀಫರವರೊಬ್ಬರೇ ಸಾಕಾಗಿರುವದರಿಂದ ನಿಸ್ಸಂದೇಹವಾಗಿ ಪ್ರಸಿಡೆನ್ಸಿ ಕಮಾಂಡರ್ ಇನ್‌ಚೀಫರುಗಳ ಕೆಲಸಗಳನ್ನು ತೆಗೆದುಹಾಕಬೇಕಾದ್ದು ಅತ್ಯವಶ್ಯಕವಾಗಿದೆ. ಇಂಡ್ಯ ಗವರ್ನಮೆಂಟಿನವರು ಅಲ್ಲಿನ ಅಭಿಪ್ರಾಯವನ್ನು ಸ್ಟೇಟ್ ಸೆಕ್ರೆಟರಿಯವರು ಮುಂತಾದವರಿಗೆ ಕಳುಹಿಸಿದ್ದಾರೆಂದೂ, ಶೀಘ್ರದಲ್ಲಿಯೇ ಸದರಿ ಏರ್ಪಾಡುಗಳು ನಡೆಯುವವೆಂದೂ ಕೇಳುತ್ತೇವೆ.

A civil suit.—ಕಲ್ಕತ್ತೆಯಲ್ಲಿ ಆರುಲಕ್ಷ ರೂಪಾಯಿಗಳ ಪ್ರಯಾಣದ ಒಂದು ತಪ್ಪುಬೀಳಿ ಗೋಸ್ಕರ ವುಂಟಾದ ವ್ಯಾಜ್ಯ ಹೈಕೋರ್ಟಿನ ನಕಲುಪತ್ರ ಪ್ರತಿಯೊಬ್ಬ ಕಕ್ಷಿಗಾರನಿಗೂ ಲಕ್ಷ ರೂಪಾಯಿಗಳಿಗೆ ಕಡಮೆಯಿಲ್ಲದಂತೆ ವ್ಯಯವಾದಂತೆಯೂ, ಆದಾಗ್ಯೂ ಅದು ಪರ್ಯವಸಾನವನ್ನು ಹೊಂದದೆ ಮಹಾರಾಣೀಯವರ ಪ್ರಿವೀ ಕೌನ್ಸಿಲ್‌ನಲ್ಲಿ ಅಪೀಲಾಗುವದಾಗಿರುವಂತೆಯೂ ತಿಳಿಯಬರುತ್ತಿದೆ. ವ್ಯಾಜ್ಯಕ್ಕೆ ಇಷ್ಟರ ಶಕ್ತಿ ಇಲ್ಲದಿದ್ದರೆ ಲಾಯರುಗಳೂ, ತಪ್ಪುಸಾಕ್ಷಿಗಾರರೂ ಜೀವಿಸುವಬಗೆ ಹ್ಯಾಗೆ? ಜನಗಳು ದಿವಾಳಿಯಾಗದಿರುವದು ಹ್ಯಾಗೆ! ಎಲ್ಲವಿಧ ಭ್ರಾಂತಿಗಿಂತಲೂ ಈ ಭ್ರಾಂತಿ ಅಪರಿಹಾರ್ಯವಾದದ್ದು.

Cashmere.—ಕಾಶ್ಮೀರದ ಮಹಾರಾಜರವರು ಕಾಲಗತಿಯನ್ನೈದಿದ ವೃತ್ತಾಂತವನ್ನು ಪೂರ್ವವೇ ಈಪತ್ರಿಕಾಮೂಲಕ ತಿಳಿಸಿರುತ್ತೇವಷ್ಟೆ. ಈಗ ಅವರಸ್ಥಾನದಲ್ಲಿ ಪಟ್ಟಾಭಿಷಿಕ್ತರಾದ ಮಹಾರಾಜಾ ಪ್ರತಾಪಸಿಂಗರವರು ಸ್ವತಂತ್ರವಾಗಿ ತಮ್ಮ ರಾಜ್ಯಾಧಿಪತ್ಯವನ್ನು ನಿರ್ವಹಿಸಲಿಕ್ಕೆ ಶಕ್ತಿಯಿಲ್ಲದವರಾಗಿರುವಂತೆಯೂ, ಈ ಸಂದರ್ಭವನ್ನರಿತು ಬ್ರಿಟಿಷ್ ಗವರ್ನಮೆಂಟಿನವರು ತಮ್ಮ ಸಂಬಂಧವನ್ನಲ್ಲಿ ವುಂಟುಮಾಡಿಕೊಳ್ಳಬೇಕೆಂಬ ತಾತ್ಪರ್ಯದೊಡನೆ ತಮ್ಮತರಫ್ ರೆಸಿಡೆಂಟರವರನ್ನು ಕಾಯವಾಗಿ ಅಲ್ಲಿ ಏರ್ಪಾಡುಮಾಡಿದರೆಂತಲೂ ತಿಳಿಯಬರುತಿದೆ. ಮಹಾರಾಜರವರು, ತಮ್ಮ ಪಟ್ಟಾಭಿಷೇಕಕಾಲದಲ್ಲಿ ಕೊಟ್ಟ ಇಸ್ತಿಹಾರನ್ನು ನೋಡಲಾಗಿ ಬಹ್ವಂಶದಲ್ಲಿ ಉದಾರಿಗಳೆಂತಲೂ, ಪ್ರಜಾನುರಾಗ ವುಳ್ಳವರೆಂತಲೂ, ಈಗಿನ ರಾಜ್ಯತಂತ್ರಕ್ರಮವನ್ನು ಚನ್ನಾಗಿ ಬಲ್ಲವರೆಂತಲೂ ವ್ಯಕ್ತವಾಗುತಿದೆ.

Application of widows to Gaekwar. ಕಳೆದತಿಂಗಳ ೨೯ನೇ ತಾ॥ ನಲ್ಲಿ ಬರೋಡೇ ಮಹಾರಾಜರವರಿಗೆ ಉತ್ತಮ ಜಾತಿಯವರಾದ ೫ ರುಮಂದಿ ವಿತುವೆಗಳು ತಮಗೆ ಪುನರ್ವಿವಾಹಕ್ಕೆ ಅನುಜ್ಞೆಯಂ ಕೊಡಬೇಕೆಂದು ಪ್ರಾರ್ಥಿಸಿ ಒಂದು ಅರ್ಜಿಬರೆದು ಕೊಂಡರೆಂತಲೂ, ಅದಕ್ಕೆ ಅವರು ಸದರೀ ಹೆಂಗಸರು ವಿವಾಹ ಮಾಡಿಕೊಳ್ಳುವವರಲ್ಲಿ ಅವರ ಬಂಧುಗಳಿಗೇನಾದರೂ ಆಕ್ಷೇಪಣೆಯುಂಟೆ ಎಂಬದನ್ನು ಕುರಿತು ವಿಚಾರಿಸುತಲಿದ್ದಾರೆಂತಲೂ ತಿಳಿಯಬರುತಿದೆ. ಜಾತಿಮತ ಪ್ರಯುಕ್ತಗಳಾದ ಇಂಥಾ ವಿಷಯಗಳಲ್ಲಿ ಸಂಸ್ಥಾನಾಧಿಪತಿಗಳು ಸ್ವತಃ ಪ್ರವೇಶಿಸಿ ಯಾವದಾದರೊಂದುವಿಧ ಏರ್ಪಾಡು ಮಾಡಿದರೇನೋ ಪರ್ಯವಸಾನವನ್ನೈದುವದು.

Female Police constables.—ಸ್ತ್ರೀಯರಿಗೆ ವಿದ್ಯಾವಿವೇಕಗಳು ದಿನೇದಿನೆ ಅಧಿಕವಾಗುತಲಿರುವದೂ, ಅವರು ಸ್ವತಂತ್ರರಾಗಿ ದೇಶಾಂತರಗಳಿಗೆ ಹೋಗಿಬರುವದೂ, ಧಾರಾಳವಾಗಿ ಜನರಸಹ ಪರಿಚಯ ಸಾಹಚರ್ಯಗಳನ್ನು ಮಾಡುವದೂ, ಬೇಕಾದ ಉದ್ಯೋಗಗಳಲ್ಲಿ ಪ್ರವೇಶಿಸಿ ನಿರ್ವಹಿಸುವದೂ, ನಿಸ್ಸಹಾಯರಾಗಿ ವ್ಯಾಪಾರವಾಡುವದೂ ಎಲ್ಲರಿಗೂ ತಿಳಿದೇಯಿದೆಯಷ್ಟೆ. ಇದುವರೆವಿಗೂ ಅವರ ಶೌರ್ಯಸೂಚಕವಾದ ವಿಷಯಗಳನ್ನು ಜನಗಳು ಬಹಳವಾಗಿ ಕೇಳಲಿಲ್ಲ. ಈಗ ಸ್ತ್ರೀಯರು ಕ್ಷಾತ್ರವೃತ್ತಿಯಲ್ಲಿ ಪ್ರವೇಶಿಸಲಿಕ್ಕೆಸಹ ಸಮರ್ಥರಾಗಿದ್ದಾರೆಂದು ತಿಳಿಯಬರುತಿದೆ. ಜೆರ್ಮನೀದೇಶದಲ್ಲೀಗ ೩೦ ವರುಷಗಳ ವಯಸ್ಸಿಗೆ ಮೇಲ್ಪಟ್ಟು ೪೫ ವರುಷಗಳ ವಯಸ್ಸಿಗೆ ಒಳಪಟ್ಟ ಹೆಂಗಸರು ಬಹುಮಂದಿ ಪೋಲೀಸ್ ಕಾನ್ಸ್ಟೇಬಲ್ ಕೆಲಸಗಳನ್ನು ಧಾರಾಳವಾಗಿ ಮಾಡುತಲಿದ್ದಾರೆಂದು ತಿಳಿಯಬರುತಿದೆ.

A Hindu lady on female education. ಮಾಹೇ ಮುಜಕೂರ ೧ನೇ ತಾರೀಖ್ ಗುರುವಾರದದಿನ ಸಾಯಂಕಾಲ ಸೇಲಂ ಟೌನ್‌ಹಾಲ್‌ನಲ್ಲಿ ಸೇರಿದ್ದ ಸಭಾಮಧ್ಯದೊಳು, ಶ್ರೀರಂಗಮ್ಮನೆಂಬಾಕೆಯು ಸ್ತ್ರೀ ವಿದ್ಯಾಭ್ಯಾಸ ವಿಷಯವಂ ಕುರಿತು ಆಂಧ್ರ ಭಾಷೆಯೊಳು, ಸಭಿಕರೆಲ್ಲರೂ ಆನುದಿಸುವಂತೆ, ಪ್ರಸಂಗಿಸಿದಳೆಂದು ತಿಳಿಯ ಬರುತಿದೆ. ವಿದ್ಯಾಭ್ಯಾಸದಿಂದುಂಟಾಗತಕ್ಕ ಪ್ರಯೋಜನವನ್ನು ಸ್ತ್ರೀಯರೇ ಸ್ವತಃ ತಿಳಿದುಕೊಳ್ಳಲಿಕ್ಕೆ ಪ್ರಯತ್ನಪಡುತ ಬರುವದರಿಂದ, ಇನ್ನುಮೇಲೆ ಪುರುಷ ಪ್ರಯತ್ನವೂ, ಅವರ ಅಭಿಮತಾನಸಿದ್ಧಿಗಳೂ, ಕಾರ್ಯಕಾರಿಯಾಗಲಾರವು ಪ್ರಥಮತಃ ಲೋಕೋಪಕಾರ ದೃಷ್ಟಿಯುಳ್ಳ ಕೆಲವು ಮಂದಿ ಸ್ತ್ರೀಯರು ಪ್ರಬಲಿಸಿ ಸಮರ್ಥರೆನಿಸಿಕೊಂಡು, ಧೈರ್ಯದೊಡನೆ ಮುಂದೆ ನಿಂತಹೊರತು ಸ್ತ್ರೀ ವಿದ್ಯಾಭ್ಯಾಸವು ನಾವುನಿರೀಕ್ಷಿಸುವಷ್ಟು ಪ್ರಚಾರಕ್ಕೆ ಬರಲಾರದು. ಈಗಿನ ವಿದ್ಯಾಭ್ಯಾಸ ಕ್ರಮವು ಮಹಾನರ್ಥಕಾರಿಯಾಗುವದಲ್ಲದೆ ಉದ್ದಿಷ್ಟ ಪ್ರಯೋಜನವು ಸರ್ವಾತ್ಮನಾ ಕೈಕೂಡಲಾರದು.

Hidden treasure.—ಮುಂಬೈ ಪ್ರಸಿಡೆನ್ಸಿಗೆ ಸೇರಿದ ಚೌಪಡೇ ತಾ॥ ಚಡಾಡಿಯೆಂಬಸ್ಥಳದಲ್ಲಿ ಭೂಸ್ಥಾಪಿತವಾದ ಸುಮಾರ್ ಲಕ್ಷ ಮೂವತ್ತು ಸಾವಿರ ರೂಪಾಯಿಗಳ ನಿಕ್ಷೇಪವು ಈ ಚೆಗೆ ಅಲ್ಲಿನವನೊಬ್ಬನಿಗೆ ದೊರತಂತೆಯೂ, ಅವನು ಅದನ್ನು ಹೊರಪಡಿಸದೆ ಬಹಳ ಗೂಢವಾಗಿಟ್ಟುಕೊಂಡಿದ್ದನೆಂತಲೂ, ಗತ್ಯಾಗತ್ಯಾ ಯಾವದೋ ಒಂದುಕಾರಣದಿಂದ ಸದರೀಅಂಶ ಗವರ್ನಮೆಂಟಿನವರಿಗೆ ತಿಳಿಯಬಂದು ಅವರು ಅದನ್ನೆಲ್ಲ ಜಪ್ತೀಮಾಡಿ ಸರ್ಕಾರಕ್ಕೆ ದಾಖಲ್‌ಮಾಡಿಕೊಂಡರೆಂತಲೂ, ಮೇಲೆಕಂಡ ನಿಕ್ಷೇಪದಲ್ಲಿ ಮೊಹರಾಗಳೂ, ಹಳೇ ರೂಪಾಯಿಗಳೂ ಇದ್ದಂತೆಯೂ ಸರ್ಕಾರಕ್ಕೆ ಈ ಅಂಶವನ್ನು ತಿಳಿಸದೆ ಹೋದ ಬಗ್ಗೆ ಆ ಮನುಷ್ಯನು ಟ್ರೆಜರ್ ಟ್ರೋವ್ ಆಕ್ಟಿನ ಪ್ರಕಾರ ದಸ್ತಗಿರಿಮಾಡಲ್ಪಡುತಲಿದ್ದಾನೆಂತಲೂ ತಿಳಿಯಬರುತಿದೆ. ಇವನು ತನಗೆ ಧನದೊರತದ್ದಂತನ್ನು ಸರ್ಕಾರಕ್ಕೆ ಪೂರ್ವವೇ ತಿಳಿಸಿದ್ದರೆ ಇವನಿಗೆ ನ್ಯಾಯವಾಗಿ ದೊರೆಯಬಹುದಾದ ಭಾಗ ಲಭಿಸುತಲಿತ್ತು. ಮತ್ತು ದನ್ನ ಪ್ರಾಮಾಣಿಕತೆಯನ್ನು ಹೊರಪಡಿಸಿದಂತೆಯಾಗುವದು. ಈಗ ಅವುಗಳೊಂದಕ್ಕೂ ಅವಕಾಶ ವಿಲ್ಲವಾಯಿತು. ಪ್ರಾಯಶಃ ಪೂರ್ವ ಕಾಲದಲ್ಲಿ ಧನವನ್ನು ಹೂಳುವ ಪದ್ಧತಿ ಬಹಳವಾಗಿದ್ದದರಿಂದ ಆದು ಜನಗಳಿಗೆ ಬಹುಕಾಲಾನಂತರ ದೊರೆಯುತಲಿದೆ ಮನುಷ್ಯನ ಅದೃಷ್ಟಕ್ಕೆ ನಿಕ್ಷೇಪವೇ ನಿರೂಪಕವಾಗಿರುತಿದೆ. ಇಂಥಾ ಅದೃಷ್ಟಶಾಲಿಗಳು ಪ್ರಾಯಶಃ ಅಜ್ಞರಾಗಿಯೂ, ಕೃಪಣರಾಗಿಯೂ ಇದ್ದು ಕಳೆದುಕೊಳ್ಳುವದನ್ನು ನಾವು ಕೇಳದಿರುವದಿಲ್ಲವು. ಬುದ್ಧಿಯೂ ಕರ್ತೃತ್ವ ಸಹಕಾರಿಗಳಾಗದ ಪಕ್ಷಕ್ಕೆ ಅದನುಭವಾರ್ಹಗ್ಯಸಾಗುವದರೊಳೇನೂ ಸಂಶಯವಿಲ್ಲವು. ಆದದರಿಂದ ಅದೃಷ್ಟಶಾಲಿಗಳು ದೃಷ್ಟವಿಷಯಕ್ಕೆ ಏಂಬಡುವರೇನವು.

Selection of a bride to the Gaekwar. ಬರೋಡೆ ಮಹಾರಾಜರವರಿಗೆ ನೂತನ ವಿವಾಹಾರ್ಥ ಸಕಲ ರಾಜಲಕ್ಷಣ ಸಮನ್ವಿತೆಯಾದ ಒಂದು ವಧುವಂ ನಿಶ್ಚಯಿಸುವ ಬಗ್ಗೆ ಅವರತರಫ್ ಕೆಲವರು ಪುನೆ ಮುಂತಾದ ಸ್ಥಳಗಳಿಗೆ ಬಂದಿದ್ದಾರೆಂದು ಪೂರ್ವವೇ ಸೂಚಿಸಿದ್ದೆವಷ್ಟೆ. ಈಚೆಗೆ ನಾವು ಕೇಳುವದರಲ್ಲಿ, ತಂಜಾವೂರು ಸಂಸ್ಥಾನದ ಟಕ್ ಶಿವಾಜಿ ಮಹಾರಾಜರವರ ಭಾವಮೈದುನರಾದ ಶ್ರೀ ಜೇಮಾ ಸಾಹೇಬರವರ ಕುಮಾರ್ತೆಯನ್ನು ಕೊಡುವಂತೆ ನಿಶ್ಚಯವಾಗಿರುವಂತೆ ತಿಳಿಯ ಬರುತಿದೆ. ಗಾಯಕವಾಡ ಯವರಿಗೆ ಆವರ ಪ್ರಥಮ ವಿವಾಹಕಾಲದೊಳು ಅನುಕೂಲವಾದ ಭಾರ್ಯೆಯಂ ಸಂಪಾದಿಸುವದಕ್ಕಾಗಿ ಅಗಿನ ದಿವಾನರಾದ ರಾಜಾ ಸರ್. ಟಿ ಮಾಧವರಾಯರವರು ಮಾಡಿದಪ್ರಯತ್ನವೆಲ್ಲಿಯೂ ಪ್ರಯೋಜನಕಾರಿಯಾಗದೆಕಡೆಗೆ ತಂಜಾವೂರ್ ಸಂಸ್ಥಾನದಲ್ಲೇ ಫಲಕಾರಿಯಾಯಿತು. ಮಹಾರಾಜರವರ ಬಾಲ್ಯ ದಶೆಯೊಳು ಅವರ ವಿವಾಹದಿಂದ ನಿರ್ಣೀತರಾದಭಾರ್ಯೆಯು, ಅವರಿಗೆ ಸಕಲಾಂಶದಿಂದಲೂ ಸಮರ್ಪಕವಾಗಿ ಬಹಳ ಸ್ನೇಹಾನುರಾಗವುಳ್ಳವರಾಗಿದ್ದರೆಂಬ ಅಂಶ ಅವರ ಕಾಲಾನಂತರ ಬಹಿರಂಗವಾಗಿ ವ್ಯಕ್ತವಾಯಿತು. ದೈವಯೋಗದಿಂದ ಅಂಥಾ ದಾಂಪತ್ಯಕ್ಕೆ ಅತ್ಯಲ್ಪ ಕಾಲದಲ್ಲಿಯೇ ವಿಚ್ಛಿತ್ತಿಯುಂಟಾದದ್ದು ಎಲ್ಲರಿಗೂ ಹೃದಯ ವ್ಯಥಾಕಾರಿಯಾಗದಿರಲಿಲ್ಲವು. ಮಹಾರಾಜರವರನ್ನು ಮರಳಿ ಸಪತ್ನೀಕರನ್ನಾಗಿ ನೋಡಬೇಕೆಂಬ ಕುತೂಹಲವು ಜನಗಳಿಗೆ ಅಧಿಕವಾಗಿರುವದರಿಂದ ಪ್ರಾಪ್ತ ವಯಸ್ಕರಾದ ಮಹಾರಾಜರವರು ಸ್ವಯಂ ನಿಶ್ಚಯಿಸಿ ಮಾಡಿಕೊಳ್ಳುವ ಈವಿವಾಹವು ತಮ್ಮ ಪದವಿಗೆ ಅನುಗುಣವಾದ ರಾಜವಂಶಕ್ಕೆ ಸಂಬಂಧಿಸಲ್ಪಟ್ಟದ್ದಾಗಿಯೂ, ವಿಶೇಷಲಿತವಾದ ತಂಜಾವೂರು ರಾಜವಂಶವನ್ನು ಸ್ಮರಣೆಗೆ ತರತಕ್ಕದ್ದಾಗಿಯೂ, ಯಿರುವದರಿಂದ ಇದು ಗಾಯಕವಾಡೀ ಯವರಿಗೆ ಹೃದಯಾನಂದ ಸಂಪಾದಕವಾಗಿರಬೇಕೆಂದು ಕೋರುವೆವು.

The Ananthapuram Girl School.—ಮಾಹೇ ಮುಜಕೂರ ೩ನೇ ತಾರೀಖ್ ಶನಿವಾರದದಿನ ಸಾಯಂಕಾಲ ಬಳ್ಳಾರಿ ಡಿಸ್ಟ್ರಿಕ್ಟ್ ಅನಂತಪುರದಲ್ಲಿನ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಥಿನಿಗಳಿಗೆ ಬಹುಮಾನಗಳು ಕೊಡಲ್ಪಟ್ಟವು. ಈ ಅನಂತಪುರವು ಒಂದು ಡಿಸ್ಟ್ರಿಕ್ಟಾಗಿ ಏರ್ಪಟ್ಟದ್ದು ಮೊದಲು ಈ ಪಟ್ಟಣದೊಳಂಥಾ ಉತ್ಸವವು ನಡೆದದ್ದಕ್ಕೆ ಇದೇ ಮೊದಲನೆಯ ಆವರ್ತಿಯಾಗಿರುತಿದೆ. ಪುರನಿವಾಸಿಗಳಾದ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಸದರೀ ಸಭೆಗೆ ಬಂದಿದ್ದರು. ಆಕಾಲದಲ್ಲಿ ಮ॥ ರಾ॥ ರಾವ್ ಬಹದೂರ್ ಸ್ವಾಮಿರಾಯರೆಂಬವರು ಸಭಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಸದರೀ ಪಾಠಶಾಲೆಯ ಇನ್‌ಸ್ಪೆಕ್ಟರಾದ ಮೆ॥ ವಿಜಯರಂಗಂ ಮೊದಲಿಯಾರ್ರವರ ಅನುಮತಿಯಂ ಪಡೆದು ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ॥ ಅಬ್ಬಾಯಿ ನಾಯಡರವರು, ಅನಂತಪುರದಲ್ಲಿ ಬಾಲಿಕಾ ಪಾಠಶಾಲೆ ಏರ್ಪಟ್ಟದ್ದು ಮೊದಲು ಇದುವರೆಗೆ ಪರ್ಯಂತ ಅದಕ್ಕೆ ಪ್ರಾಪ್ತವಾದ ನಾನಾವಿಧ ಅವಸ್ಥೆಗಳನ್ನು ತಿಳಿಸುವಂಥಾ ಒಂದು ರಿಪೋರ್ಟನ್ನೋದಿದರು. ತರುವಾಯ ಬಾಲೆಯರಿಬ್ಬರು ಹಾಡಿದಮೇಲೆ ಕ್ರಮವಾಗಿ ಬಹುಮಾನಗಳು ಕೊಡಲ್ಪಟ್ಟವು. ಅನಂತರ ಪ್ರೌಢೆಯಾದ ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸುವದರಿಂದುಂಟಾಗತಕ್ಕ ಪ್ರಯೋಜನಗಳಂ ಕುರಿತು ಒಂದು ಉಪನ್ಯಾಸ ಒಬ್ಬರಿಂದ ಓದಲ್ಪಟ್ಟಿತು. ಅನಂತರ ಇನ್‌ಸ್ಪೆಕ್ಟರು ಹುಡುಗಿಯರು ಕುರಿತು ಕೆಲವು ಹಿತೋಕ್ತಿಗಳಂ ನುಡಿದ ಕೂಡಲೇ ಅಗ್ರಾಸನಾಧಿಪತಿಯವರು ಹುಡುಗಿಯರು ಪ್ರಾಪ್ತವಯಸ್ಕರಾಗಿ ತಮ್ಮ ಗಂಡಂದಿರ ಮನೆಗೆ ಹೋದಾಗ ಅವರಿಗೆ ವಿಧೇಯರಾಗಿ ಅವರ ಮಾತನ್ನುಲ್ಲಂಘಿಸದೆ ಇರಬೇಕೆಂತಲೂ, ಆ ಹುಡುಗಿಯರೇ ಕೆಲವರಿಗೆ ಅತ್ತೆಗಳಾಗುವ ಕಾಲದಲ್ಲಿ ಈಗಿರವಕ್ಕೆ ಕೆಲವರು ಅತ್ತೆಗಳಂತೆ, ಕ್ರೂರ ಸ್ವಭಾವವುಳ್ಳವರಾಗಿರಕೂಡದೆಂತಲೂ ಉಪದೇಶಿಸಿದರು. ತರುವಾಯ ಕೆಲವು ಹೊತ್ತು ವಾದ್ಯ ವಿನೋದಗಳು ನಡೆದಮೇಲೆ ಸಭೆ ಬರಖಾಸ್ತಾದಂತೆ ತಿಳಿಯಬರುತಿದೆ.

LOCAL AND PROVINCIAL NEWS.

ಸ್ಥಳದೇಶವುತ್ತು ಪ್ರಾಂತೀಯ ವೃತ್ತಾಂತಗಳು.

Exportation of Gold.—ಮೈಸೂರು ದೇಶದಲ್ಲಿ, ತತ್ರಾಪಿ ಕೋಲಾರ ಡಿಸ್ಟ್ರಿಕ್ಟ್ ಉರಿಗಾಂ ಪ್ರಾಂತದೊಳು ಬಂಗಾರ ಸಿಕ್ಕುತದೆಂಬ ವಿಷಯವೂ, ಅಬಗ್ಗೆ ಕಂಪೆನಿಗಳೇರ್ಪಟ್ಟಿರುವಅಂಶವೂ, ಬಹುಧನ ವ್ಯಯದಿಂದ ಅಲ್ಲಿ ಕೆಲಸ ನಡೆಯುತಲಿರುವದೂ, ಕಡೆಗೆ ಬಹುಮಂದಿ ದಿವಾಳಿಯಾಗಿರುವದೂ ಜಗತ್ಪ್ರಸಿದ್ಧವಾಗಿದೆಯಷ್ಟೆ. ಈಚೆಗೆ ೫೦,೦೦೦ ರೂಪಾಯಿಗಳ ಬಂಗಾರವು ಸದರೀ ಉರಿಗಾಂನಲ್ಲಿ ತಯಾರಾಗಿ ಇಂಗ್ಲಾಂಡಿಗೆ ಜಹಜ್ ಮೂಲಕ ಕಳುಹಿಸಲ್ಪಟ್ಟಂತೆ ಕೇಳುತ್ತೇವೆ. ಇದರ ನಿಜಸ್ಥಿತಿಯಂ ವಿಚಾರಿಸುವಲ್ಲಿ ಏರ್ಪಡುವದೇನೆಂದರೆ, ಒಬ್ಬಮನುಷ್ಯನು ಒಂದು ದಿನವೆಲ್ಲ ಶ್ರಮಪಟ್ಟರೆ ಅವನ ಕೂಲಿಯ ಮೊಬಲಗಿನಷ್ಟು ಮಾತ್ರ ಬಂಗಾರದೊರೆತರೆ ದೊರೆಯಬಹುದು. ಆದ್ದರಿಂದ ಸದರೀ ೫೦,೦೦೦ ರೂಪಾಯಿಗಳ ಬಂಗಾರವು ಎಷ್ಟುದಿವಸ ಎಷ್ಟುಮಂದಿಯ ಮೆಹನತ್ತಿನ ಸಫಲರೂಪವಾಗಿರುವದೋ ಅದು ಜನಗಳೇ ಊಹಿಸಿಕೊಳ್ಳಬಹುದು.

Dassara.—ಪ್ರತಿ ಸಂವತ್ಸರದಲ್ಲಿಯೂ ಮೈಸೂರಲ್ಲಿ ನಡೆಯತಕ್ಕ ದಸರಾ ಹಬ್ಬವು ಈ ಆಶ್ವಿಯುಜ ಶುದ್ಧ ಪ್ರತಿಪತ್ತಿನಿಂದ ಪ್ರಾರಂಭವಾಗಿ ವಿಜಯದಶಮಿಯತನಕ ನಡೆದವಲ್ಲದೆ ಈತಿಂಗಳ ೧೩ನೇ ತಾ॥ನಲ್ಲಿ ಪ್ರಜಾ ಪ್ರತಿನಿಧಿ ಸಮಾಜವು ಸೇರುವದು. ದೈವಾತ್ ಈಸಂವತ್ಸರದಲ್ಲಿ ಕಾಲಾತಿಕ್ರಮವಾಗಿ ಬಂದ ಮಳೆಯ ದೆಸೆಯಿಂದ ಜನಗಳು ಬಹಳಮಟ್ಟಿಗೆ ತೃಪ್ತರಾಗಿರುತ್ತಾರೆ. ಈ ಸಲ ಹೊಸದಾಗಿ ಕುದುರೇ ಪರಶೆ ಸಹ ನಡೆಯುವದು. ಮಹಾರಾಜರವರು ಘನವನ್ನು ಹೊಂದಿದ ಇಂಡ್ಯಾ ನಕ್ಷತ್ರವೆಂಬ ಪ್ರಶಸ್ತಿಯಿಂದಲಂಕೃತರಾಗಿದಾರೆ ಈ ವಿಶೇಷವನ್ನು ನೋಡಿ ಆನಂದಿಸುವಬಗ್ಗೆ ಜನಗಳು ವಿಶೇಷವಾಗಿ ಮೈಸೂರಲ್ಲಿ ಜಮಾಯಿಸಿದಾರೆ. ಈ ವರಿನಂತೆ ಮೈಸೂರಲ್ಲಿ ಪರಸ್ಥಳದವರಿಗೆ ಸ್ಥಳ ಜಹಾಸುಕಳ್ಳುಗಳು ಕಷ್ಟವುಯಾಗಿರುವದರಿಂದಲೂ, ನಿರಂತರ

ಷರ್ ವತನದಿಂದಲೂ ಅವರ ಸಸ್ಯವು ಹೇಳಲ ಶಕ್ಯವಾಗಿರುವದು. ಸರ್ಕಾರದವರು ತಕ್ಕ ಸ್ಥಳವಸತಿಯಂ ಕಲ್ಪಿಸದೆ ಹೋದದ್ದು ಕೇವಲ ಕೊರತೆಯಾಗಿದೆ.

Col. Olcott.—ಮದರಾಸ ಥಿಯಸಾಫಿಕಲ್ ಸೊಸೈಟಿಯ ವ್ಯವಸ್ಥಾಪಕರಾಗಿಯೂ ಪ್ರೆಸಿಡೆಂಟರಾಗಿಯೂ ಯಿರುವ ಪ್ರಸಿದ್ಧರಾದ ಕರ್ನಲ್ ಆಲ್‌ಕಾಟಿಯವರು ಈ ತಿಂಗಳ ಉತ್ತರಭಾಗದಲ್ಲಿ ಈ ಪ್ರಾಂತಿಗೆ ಬರುವರೆಂದು ತಿಳಿಯಬರುತ್ತದೆ. ಸದರೀ ಸೊಸೈಟಿಗೆ ಸೇರಿದ ಮೆಂಬರುಗಳು ಕೆಲವರು ಇಲ್ಲಿಇರುವವರಿಂದ ಅವರು ಕರ್ನಲ್ ಆಲ್‌ಕಾಟಿ ಯವರನ್ನು ಉಚಿತ ರೀತಿಯಿಂದ ಬರಮಾಡಿಕೊಳ್ಳುವರೆಂದು ನಂಬುತ್ತೇವೆ. ಅವರಿಗೆ ಈಪ್ರಾಂತ್ಯದಲ್ಲಿ ಒಂದುಬ್ರಾಂಚ್ ಅಸೋಸಿಯೇಷನನ್ನು ನೆಲೆಗೊಳಿಸಬೇಕೆಂಬ ಅಭಿಪ್ರಾಯವಿರುವುದಾಗಿ ನಮ್ಮ ಕೇಳ್ವಿಕೆಗೆ ಬಂದಿರುವದರಿಂದ ಈ ಸುಬಾದಲ್ಲಿ ಅಂತಾ ಅಸೋಸಿಯೇಷನ್ ಒಂದು ಇಲ್ಲಿ ಏರ್ಪಡಬಹುದೆಂದು ನಂಬುತ್ತೇವೆ.

Mr. C. E. R. Girdlestone.—ಮೈಸೂರು ಸೀಮೆಯ ಬ್ರಿಟಿಷ ರೆಸಿಡೆಂಟರಾದ ಮೆ॥ ಸಿ. ಇ. ಆರ್. ಗರ್ಡಲ್‌ಸ್ಟನ್‌ಯವರು, ತಮ್ಮ ಭಾರ್ಯೆಯೊಡನೆ ಗತ ಬುಧವಾರದದಿನ ೧೨॥ ಘಂಟೆಗೆ ದಸರಾ ಹಬ್ಬಕ್ಕಾಗಿ ಮೈಸೂರಿಗೆ ದಯಮಾಡಿದರು. ರೆಸಿಡೆಂಟರವರ ಅಫಿಸಿಯೇಟಿಂಗ ಅಸಿಸ್ಟೆಂಟರವರಾದ ಮೇಜರ್ ನ್ಯೂ ಅಲ್‌ಯವರು ಸುಗತ ಹೋಗಿರುತ್ತಾರೆ ಆ ಕಾಲದಲ್ಲಿ ಮಾಮೂಲ್ ಪ್ರಕಾರ ಸಕಲ ಮರ್ಯಾದೆಗಳೂ ನಡೆದವು. ಮೆ॥ ಗರ್ಡಲ್‌ಸ್ಟನ್‌ಯವರು ಮಾಹೇ ನವಂಬರ್ ೨೮ನೇ ತಾರೀಖಿಗೆ ಸರಿಯಾಗಿ ಮೈಸೂರಿಂದ ಇಲ್ಲಿಗೆ ವಾಪಸ್ ದಯಮಾಡಿ ಬರುವತಿಂಗಳ ಅದಿಭಾಗದಲ್ಲಿ ಕೊಡಗುಪ್ರಾಂತಕ್ಕೆ ಸರ್ಕ್ಯೂಟ ಹೋಗುವರೆಂದು ತಿಳಿಯಲಾದೆವು.

The Courts, C and M, Station.—ಮೈಸೂರು ಬ್ರಿಟಿಷ ರೆಸಿಡೆಂಟರವರ ಕೋರ್ಟಿನ ರಿಜಿಸ್ಟ್ರಾರರವರಾದ ಮೆ॥ ಅನಂತಸ್ವಾಮಿ ರಾಯರವರಿಗೆ ಕೊಡಲ್ಪಟ್ಟಿದ್ದ ಮೂರುತಿಂಗಳ ಪ್ರಿವಿಲೇಜ್ ರಜಾ ಪೂರೈಸಿದ್ದರಿಂದ ಅವರು ತಮ್ಮ ಕೆಲಸದ ಚಾರ್ಜನ್ನು ಮರಳಿ ವಹಿಸಿದರೆಂತಲೂ, ಸದರೀ ಕೆಲಸವನ್ನು ಅಕ್ಟಿಂಗ ತರೀಕ ನೋಡುತಲಿದ್ದ ಸಿವಿಲ್‌ಕೋರ್ಟಿನ ಚೀಫ್ ಕ್ಲರ್ಕ ಮೆ॥ ಅಬ್ದುಲ್ ರಹಿಮಾನ್‌ಯವರು ತಮ್ಮ ಪೂರ್ವದಕೆಲಸಕ್ಕೆ ವಾಪಸ್ ಹೋದರೆಂತಲೂ, ಡಿ ಮ್ಯಾಜಿಸ್ಟ್ರೇಟ ಕೋರ್ಟಿನ ಚೀಫ್ ಕ್ಲರ್ಕ ಮೆ॥ ವರದಣ್ಣನವರು ಮೆ॥ ಅಬ್ದುಲ್ ರಹಿಮಾನರ ಕೆಲಸವನ್ನು ಆಕ್ಟಿಂಗ್ ತರೀಕ ನೋಡುತಲಿದ್ದದರಿಂದ ಅವರು ತಮ್ಮ ಕೆಲಸಕ್ಕೆ ವಾಪಸ್ ಹೋದರೆಂತಲೂ ತಿಳಿಯಬರುತ್ತದೆ.

The Police force.—ಈಪ್ರಾಂತ್ಯ ಪೋಲೀಸ್ ಸ್ಕೂಲ್ ಇಂಚಾರ್ಜಿ ಅಧಿಕಾರಿಗಳಾಗಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ಚೊಕ್ಕಲಿಂಗಂ ಪಿಳ್ಳೆಯವರು ಚಿತ್ರದುರ್ಗ ಸಬ್‌ಡಿವಿಜನಿಗೆ ಸೇರಿದ ಹಿರಿಯೂರು ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುವದರಿಂದ ಅವರ ಕೆಲಸವನ್ನು, ದಿವಾನರ ಆಫೀಸ ಪೋಲೀಸ್ ಇಲಾಖಾ ಕ್ಲರ್ಕ ಮೆ॥ ನಾಗಯ್ಯ ನಾಯಡು ಯೆಂಬವರು ಹುಂಗಾಮೀ ತರೀಕನೋಡುವಂತೆ ಮುಕರರ್ ಮಾಡಲ್ಪಟ್ಟಿದಾರೆಂದು ತಿಳಿಯಬರುತ್ತದೆ ಈ ಕೆಲಸಕ್ಕೆ ಇಷ್ಟು ಭಾರೀ ಸಂಬಳ ಕೊಡುವದು ಕೇವಲ ದುಬಾರೀಯಾಗಿರುತ್ತದೆ ಈ ಕೆಲಸವು ೩೦ ರೂಪಾಯಿಗಳ ಸಂಬಳವುಳ್ಳ ಸಬ್ ಇನ್ಸ್‌ಪೆಕ್ಟರೊಬ್ಬನು ನಿರ್ವಹಿಸತಕ್ಕದ್ದಾಗಿರುತ್ತದೆ. ಪೋಲೀಸಿಗೆ ಜವಾನರನ್ನು ದಾಖಲ್ಮಾಡಿಕೊಳ್ಳುವಾಗ್ಯೆ ಸ್ವಲ್ಪ ತಾರತಮ್ಯವಂ ಪರ್ಯಾಲೋಚಿಸಿದರೆ ಕಡೆಗೆ ಈ ಕೆಲಸವೇ ಅನಾವಶ್ಯಕವೆಂದು ತೋರಬಹುದು.

Obituary.—ಇಲ್ಲಿನ ಚೀಫ್ ಕೋರ್ಟಿನ ಯರಡನೆಯ ಜಡ್ಜಿಯವರಾದ ಮೆ॥ ತುಂಬುಚೆಟ್ಟಿರವರು ಇದುವರಿವಿಗೂ ಸಂಸ್ಕೃತಿ ಕ್ಲೇಶ ಸ್ವರೂಪವನ್ನರಿಯದೆ ಅತ್ಯಂತ ಸುಖಿಯಾಗಿರುತಲಿದ್ದದು ಕಂಡು ನಾವು ಬಹಳ ಸಂತೋಷಿಸುತಲಿದ್ದೆವು, ಪರಂತು ನಮ್ಮ ಸಂತೋಷಕ್ಕೆ ಭಂಗವನ್ನುಂಟು ಮಾಡಬೇಕೆಂಬ ಈಶ್ವರ ಸಂಕಲ್ಪದಿಂದಲೇನೋ, ಅಪರಿಹಾರ್ಯವಾದ ಮಹಾದುಃಖಪ್ರಾಪ್ತಿಯು ಆಬೇಸಾರದಲ್ಲಿ ಅವರಿಗೆ ಪ್ರಾಪ್ತವಾದಂತೆ ಕೇಳುತ್ತೇವೆ. ಇವರೊಳಿಯಂದರು ಮದರಾಸಿನಲ್ಲಿ ಕೆಲವುದಿವಸಗಳಿಂದ ಕಾಹಿಲೆಯಾಗಿದ್ದು ಆಚೇಯುಕ್ತ್ರವಾರದದಿನ ಕಾಲಗತಿಯನ್ನೈದಿದರೆಂದು ತಿಳಿಯ ಬರುತ್ತದೆ. ಇವರು ಪೂರ್ವ ವಯಸ್ಸಿನಲ್ಲಿ ಮೃತಪಟ್ಟಿದ್ದಕ್ಕಾಗಿಯೂ, ಇವರ ಭಾರ್ಯೆಯಾದ ಜಡ್ಜಿಯವರ ಮಗಳು ಅಪ್ರತೀಕಾರವಾದ ವೈಧವ್ಯಕ್ಕೆ ಅತಿ ಬಾಲ್ಯದಲ್ಲಿ ಗುರಿಯಾದದಕ್ಕಾಗಿಯೂ ಬಹಳ ವಿಷಾದಿಸ ಬೇಕಾಗಿದೆ. ಈಗ ಮೃತಪಟ್ಟವರು ೩,೦೦೦ ರೂಪಾಯಿಗಳತನಕ ಲೈಫ್ ಇನ್ಷೂರ್ ಮಾಡಿದ್ದರೆಂತಲೂ ಸದರೀ ಮೊಬಲಗು ಈಗ ಅವರ ಭಾರ್ಯೆಗೆ ಕೊಡಲ್ಪಡುವದೆಂತಲೂ ಕೇಳುತ್ತೇವೆ.

Mohurrum Licenses.—ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿರುವ ಮುಸಲ್ಮಾನರೆಲ್ಲರೂ ಅಲ್ಲಿನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಪ್ರೊಸೀಡಿಂಗಿನ ದೆಸೆಯಿಂದ ಬಹಳ ಅತ್ಯಸ್ತರಾಗಿದಾರೆಂದು ತಿಳಿಯ ಬರುತ್ತದೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರು ಪ್ರಥಮತಃ ಕೆಲವರಿಗೆ ಲೈಸೆನ್ಸುಗಳನ್ನು ಕೊಟ್ಟು, ಬಳಿಕ ಅವುಗಳನ್ನೆಲ್ಲ ವಾಪಸು ತೆಗೆದುಕೊಂಡರಂತೆ. ಪವಿತ್ರವಾದ ಮೊಹರಂ ಹಬ್ಬದ ಉತ್ತರಭಾಗದಲ್ಲಿ ಕೊಡಲಾಗದೆಂದು ನಿರಾಕರಿಸಿ ಬಿಟ್ಟರು. ಈ ಸಂವತ್ಸರ ದಸರಾ ಮತ್ತು ಮೊಹರಂ ಹಬ್ಬಗಳು ಏಕ ಕಾಲದಲ್ಲಿ ಬಂದದರಿಂದ ಮುಸಲ್ಮಾನರಿಗೂ, ಹಿಂದೂಗಳಿಗೂ ಕಲಹ ಪ್ರಾಪ್ತವಾಗುವದೆಂಬ ತಾತ್ಪರ್ಯದಿಂದ ಮೇಲ್ಕಂಡ ರೀತಿ ಮಾಡಲ್ಪಟ್ಟಂತೆ ತೋರುತ್ತದೆ. ಈಬಗ್ಯೆ ಕೆಲವು ವಿಜ್ಞಾಪನೆಗಳು ಸಹ ಮುಂದಾಗಿ ಮಾಡಲ್ಪಟ್ಟಿರುವಂತೆ ತಿಳಿಯಬರುತ್ತದೆ. ಇದು ಕೇವಲ ವಿವೇಕ ಶೂನ್ಯವಾದ ನಿರ್ಣಯವೆಂದು ನಾವು ಹೇಳಲಾರೆವು. ಯಾತಕ್ಕೆಂದರೆ ಅದು ಕಲಹವನ್ನು ಹೋಗಲಾಡಿಸುವಬಗ್ಯೆ ಮಾಡಿದ ಯತ್ನವಾಗಿ ಕಾಣುತ್ತದೆ. ಜಗಳಕ್ಕೆ ಕಾರಣವೇನು, ಒಬ್ಬರ ಜಾತಿ ಮತ ಸಂಪ್ರದಾಯಾನುಸಾರ ನಡೆಸ ಬೇಕಾದ ಕಾರ್ಯಗಳನ್ನು ಮನಬಂದಹಾಗೆ ಅನ್ಯರು ತಿರಸ್ಕಾರಮಾಡುವದು ಮತ್ತು ಅನ್ಯರ ಜಾತಿ ಮತ ಸಂಪ್ರದಾಯಗಳನ್ನು ಕೊರತೆ ಯಿಲ್ಲದಂತೆ ಅವರವರು ನಡಸುವ ವಿಷಯದಲ್ಲಿ ಮಧ್ಯೆ ಯಾವದಾದರೂ ನಿರ್ಬಂಧ ಪ್ರಯೋಗಿಸಿ ಅದನ್ನು ಚಿತರೀತಿಯಿಂದ ತಪ್ಪಿಸಿ ಸಂರಕ್ಷಿಸಬೇಕಾದ್ದು ಗವರ್ನ್‌ಮೆಂಟಿನವರ ಮುಖ್ಯ ಕರ್ತವ್ಯವಾಗಿರುತ್ತದೆ. ಈದಿನ ತಾಬೂತ್‌ಗಳು ಬರುವದೆಂದು ಪ್ರಕಟವಾದ ನಿಬಂಧವು ನಾಳೆಯ ದಿನ ಕಲಹಸಿದ್ಧಿ ತ್ತಕವಾದ ಉತ್ಸವಾದಿಗಳನ್ನು ಹಿಂದೂ ದೇವಾಲಯದಲ್ಲಿ ಮಾಡಕೂಡದೆಂಬ ನಿರ್ಬಂಧವು ಯಾತಕ್ಕೆ ಪ್ರಾಪ್ತಿಯಾಗದಿರುವದು ಆದದರಿಂದ ಹಬ್ಬದಮನಸು ನೋಯಿಸುವದು ಯೋಗ್ಯವಲ್ಲವು. ವಿದ್ಯಾ ನಾಗರಿಕತೆಯು ಅಧಿಕವಾಗುತಲಿರುವ ಈಕಾಲದಲ್ಲಿ ಜನಗಳು ಮತಾಭಿನಿವೇಶದಿಂ ಹೇಚಾದಂತೆ ತನ್ಮೂಲಕ ಗವರ್ನ್‌ಮೆಂಟಿನವರಿಗೆ ಬಂದು ಸಂಕಟವನ್ನುಂಟುಮಾಡುವದೂ, ಭಗವತ್ಸೃಷ್ಟಿಗೊಳಗಾದ ಪ್ರಜೆಗಳೆಲ್ಲರೂ ಸ್ನೇಹಾನುರಾಗ ಪೂರ್ಣರಾಗಿರಲಿಕ್ಕೆ ಬದಲು, ಪರಸ್ಪರ ಕಲಹಿಸುತಲಿರುವದೂ ವಿವೇಕಿಗಳ ದರ್ಶವಲ್ಲವು.

Sanskrit first Book.—ಗೀರ್ವಾಣ ಭಾಷಾ ಜ್ಞಾನ ಸಂಪಾದನಾಭಿಲಾಷಿಗಳಾದ ವಿದ್ಯಾರ್ಥಿಗಳೆಲ್ಲರಿಗೂ ಅತ್ಯಂತೋಪಯುಕ್ತವಾಗಿರುವಂತೆ ಸದ್ವಿದ್ಯಾ ಸಾರ ಸಂಗ್ರಹವೆಂಬ ಸಂಸ್ಕೃತ ಮೊದಲನೇಯ ಪುಸ್ತಕವು, ಮೈಸೂರು ಸದ್ವಿದ್ಯಾ ಶಾಲಾಧ್ಯಕ್ಷರಾದ ಶ್ರೀಮಾನ್ ಪೆರಿಯಸ್ವಾಮಿ ತಿರುಮಲಾಚಾರ್ಯರೆಂಬವರಿಂದ ವಿರಚಿತವಾಗಿ ದೇವನಾಗರಾಕ್ಷರದೊಳು ಮುದ್ರಿಸಲ್ಪಟ್ಟು ಪ್ರಕಟವಾದ ಸಂಚಿಕೆಯನ್ನು ನೋಡಲಾಗಿ ನಮಗೆ ಬಹಳ ಸಂತೋಷ ಪ್ರಾಪ್ತವಾಯಿತು. ಈಗ್ರಂಥವು ಇಂಗ್ಲಿಷ್ ಕ್ರಮವನ್ನನುಸರಿಸಿ ರಚಿಸಲ್ಪಟ್ಟದ್ದಾಗಿಯೂ, ಶಬ್ದ ವಾಕ್ಯ ಸಂಯೋಜನ ಕ್ರಮಗಳನ್ನು ಸುಲಭವಾಗಿ ಬೋಧಿಸ ತಕ್ಕದ್ದಾಗಿಯೂ, ಉದ್ದಿಷ್ಟ ಪ್ರಯೋಜನವನ್ನು ಅತಿ ಕ್ಷಿಪ್ರದಲ್ಲಿ ಘಟಿಯಿಸತಕ್ಕದ್ದಾಗಿಯೂ ಇರುತ್ತದೆಂಬದಕ್ಕೆ ಅದು ಸರ್ವಜನ ಪರಿಗ್ರಹಾರ್ಹವಾಗಿ ಇಷ್ಟುತ್ವರೆಯೊಳು ಯೆರಡನೆಯ ಆವೃತ್ತಿ ೧೦೦೦ ಪ್ರತಿ ಮುದ್ರಿಸಲ್ಪಟ್ಟದ್ದೇ ಸಾಕಾದ ನಿದರ್ಶನವಾಗಿರುತ್ತದೆ ಮೈಸೂರು, ಬೆಂಗಳೂರು, ಮದರಾಸು, ಕುಂಭಕೋಣ ಮೊದಲಾದ ಪ್ರದೇಶಗಳಲ್ಲಿರುವ ಸಂಸ್ಕೃತ ಪಾಠಶಾಲೆಗಳಲ್ಲಿಯೂ, ಕೆಲವು ಇಂಗ್ಲಿಷ್‌ಕಾಲೇಜುಗಳಿಗೆ ಸೇರಿರುವ ಸಂಸ್ಕೃತ ತರಗತಿಗಳಲ್ಲಿಯೂ ಪಠನ ಗ್ರಂಥವಾಗಿರಲ್ಪಟ್ಟಿದೆ ಬಾಲಬೋಧಕವಾಗಿಯೂ, ನೀತಿಪ್ರವರ್ತಕವಾಗಿಯೂ ಇರುವ ಈ ಸಣ್ಣ ಪುಸ್ತಕವು ಪ್ರತಿ ವಿದ್ಯಾರ್ಥಿಯಿಂದಲೂ ಅವಶ್ಯ ಪರಿಗ್ರಹಿಸತಕ್ಕದ್ದಾಗಿರುತ್ತದೆಂದು ದಾರಾಳವಾಗಿ ಹೇಳುವೆವು ಇದಲ್ಲದೆ ಬಾಲಿಕಾ ಪಾಠಶಾಲೆಗಳಿಗೆ ಸಹ ಇದನ್ನು ಪಯೋಗಿಸುವದರೊಳೇನೂ ಆಕ್ಷೇಪಣೆ ಯಿರುವಂತೆ ತೋರಲಿಲ್ಲವು. ಇದರ ಕ್ರಯವು ೨ ಆಣೆ, ಆದದರಿಂದ ಇದನ್ನು ಅಪೇಕ್ಷಿಸುವವರೆಲ್ಲರೂ, ಬಾಕೀ ಪಸೂಲಿಬಗ್ಯೆ ನಾಲ್ಕಾಣೆ ಅಂಚೆ ಸ್ಟಾಂಪಿನ ಸಹಿತಕ್ಕೆ ಗ್ರಂಥಕರ್ತನನ್ನು ಗುರಿಮಾಡದೆ, ಅದ್ವಾನ್ಸ ಮೊಬಲಗಿನಿಂದ ಸದರೀಯವರ ಹೆಸರಿಗಾಗಲಿ, ಅಥವಾ ಬೆಂಗಳೂರು ಸುಲ್ತಾನ್ ಪೇಟೆಯಲ್ಲಿರುವ ನ್ಯಾಷನಲ್ ಶಾಲೆಗಾದರೂ ಬರೆದು ತರಿಸಿಕೊಳ್ಳಬಹುದು. ಜಾಸ್ತೀ ಪುಸ್ತಕಗಳನ್ನು ಸಗಟು ಕ್ರಯಕ್ಕೆ ತೆಗೆದುಕೊಳ್ಳತಕ್ಕವರಿಗೆ ಧಾರಾಳವಾಗಿ ಕಮ್ಮಿಷನ್ ಸಹಕೊಡಲ್ಪಡುವದು.

NEWS LETTER
SEASON AND PROSPECTS.
ಡಿಸ್ಟ್ರಿಕ್ಟ್‌ವಾರ್ ಕಾಲಸ್ಥಿತಿ ರಿಪೋರ್ಟುಗಳು

ತಾ॥ ೧೩ನೇ ಅಕ್ಟೋಬರ್.—ಇಲ್ಲಿನ ಕಾಲಸ್ಥಿತಿಯ ವಿಷಯವಾಗಿ ಹಿಂದಿನ ಕಾಗದದಲ್ಲಿಯೇ ವಿವರವಾಗಿ ತಿಳಿಸಿರುತ್ತೇನೆಯಷ್ಟೆ. ಅದರಿಂದೀಚೆಗೆ ಏತತ್‌ಕ್ಷಣಪರ್ಯಂತ ಒಂದುದಿನವಾದರೂ ವಿರಾಮವಿಲ್ಲದೆ ಮಳೆ ಸುರಿಯುತಲಿದೆ. ೧೨ನೇ ತಾರೀಖಿನ ನಿನ್ನೆಯದಿನ ರಾತ್ರಿ ಸಹ ಒಂದೂವರೆ ಇಂಚ್ ಮಳೆಯಾಯಿತು. ಇನ್ನೆಷ್ಟು ದಿನ ಹೀಗಿರುವದೋಕಾಣೆವೆಂದಿಯೆನು.॥ ಹುಂಭೋ ಪೇರೋಬ ಏನಾಕಂಬರ್ ಕೈಜೋಡೆತಾ ' ಎಂಬಂತೆ ಮೊದಲು ಮಳೆಯಿಲ್ಲದಿದ್ದದಕ್ಕಾಗಿ ಕೆಲವರು ಜಪತಪಗಳನ್ನು ಮಾಡಿದರು. ಮಾಡಿದವರ ತಪಃ ಪ್ರಭಾವದಿಂದ ಮಳೆ ಬರುವದಕ್ಕೆ ಪ್ರಾರಂಭವಾಯಿತು. ಈಗ ಅದು ನಿಲ್ಲುವದಕ್ಕೆ ಯಾವ ಜಪ ಮಾಡಬೇಕೋ ಗೊತ್ತಾಗಲಿಲ್ಲವು. ಸದ್ಯಕ್ಕೆ ಈ ಮಳೆಯಿಂದ ನಮ್ಮ ಮನೆಗಳು ಉಳಿದರೆ ಪರಮ ಲಾಭವಾಗಿರುತ್ತದೆ.

ಅ॥ ಕ॥ ಮೆ॥ ಆನಂದರಾಯರವರು ಈಪ್ರಾಂತ್ಯ ಚನ್ನರಾಯಪಟ್ಟಣ, ತಿಪಟೂರು, ಗಂಡಸಿ, ಹಾಸನ ಪ್ರಾಂತ್ಯ, ಈ ಪ್ರಾಂತಗಳಿಗೆಲ್ಲ ಸರ್ಕ್ಯೂಟ ಹೋಗಿದ್ದು ಹಾಸನಕ್ಕೆ ವಾಪಸು ಬಂದರು. ಈಚೆಗೆ ನಡೆದ ಅಮಲ್ದಾರ್ ಪರೀಕ್ಷೆಯಲ್ಲಿ ಇಲ್ಲಿನ ಅಮಲ್ದಾರರು ಪ್ಯಾಸಾದ ವೃತ್ತಾಂತವು ಕೇಳಿ ಈ ತಾಲ್ಲೂಕ ಪ್ರಜೆಗಳೆಲ್ಲರೂ ಬಹಳ ಸಂತೋಷಿಸಿದರು. ಮೈಸೂರಲ್ಲಿ ನಡೆಯುವ ನವರಾತ್ರಿ ಮಹೋತ್ಸವಾರ್ಥ ನಗರ ಡಿವಿಜನ್ ಸೆಷನ್ಸ್ ಜಡ್ಜಿಯವರಾದ ಎ॥ ನರಹರಿರಾಯರವರೂ, ಅ॥ ಕ॥ ಮೆ॥ ಪಂಚನದ ರಾಯರವರೂ ಇನ್ನೂ ಕೆಲವರು ದೊಡ್ಡ ಮನುಷ್ಯರು ಸಹ ಈಪ್ರಾಂತ್ಯ ಮಾರ್ಗವಾಗಿ ಮೈಸೂರಿಗೆ ಹೊರಟುಹೋದರು. ಇಲ್ಲಿ ಜನಾರೋಗ್ಯ ಸರ್ವತ್ರ ಚೆನ್ನಾಗಿದೆ. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ಧಾರಣವಾಸಿ ಏಕರೂಪವಾಗಿರುತ್ತದೆ.

TELEGRAPHIC SUMMARY
ತಂತಿವೃತ್ತಾಂತ ಸಂಗ್ರಹವು.

ಲಂಡನ್, ೧೦ನೇ ಅಕ್ಟೋಬರ್.—[illegible] ಬರುತ್ತದೆ.

ಲಂಡನ್, ೧೦ನೇ ಅಕ್ಟೋಬರ್.—[illegible] ಲಾಯಿತು.

ಮುಂಬಯಿ, ೧೨ನೇ ಅಕ್ಟೋಬರ್.—[illegible] ಘಾಯಗಳಾದವು.

ಲಂಡನ್, ೧೨ನೇ ಅಕ್ಟೋಬರ್.—[illegible] ಆಶ್ಚರ್ಯವುಂಟಾಗಿದೆ.

[illegible], ೧೧ನೇ ಅಕ್ಟೋಬರ್.—[illegible] ದಾರೆ.

[illegible]

ಆಥೆನ್ಸ್, ೧೩ನೇ ಅಕ್ಟೋಬರ್.—[illegible] ತ್ತಾರೆ.

[illegible], ೧೩ನೇ ಅಕ್ಟೋಬರ್.—[illegible]

ಮುಂಬಯಿ, ೧೪ನೇ ಅಕ್ಟೋಬರ್.—[illegible]

ಬರ್ಮಾ [illegible]

BANGALORE.—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಶ್ರೀಮುವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನಪರಾಭಿಧಾವ್ಯಪತ್ರಸಾಹಿತೀಕೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜ್ವಸ್ಥಿರ್ಸ್ಥಿರಾಸುಪರಿಪೋಷಿತಾವಿಶತಿಮಾನಸಂಸುಮುದಂ

Vol. XII] | BANGALORE—MONDAY OCTOBER 26, 1885. | [No 43.

ಸಂಪುಟ ೧೨. | ಬೆಂಗಳೂರು—ಸನ್ ೧೮೮೫ನೇ ಇಸವಿ ಅಕ್ಟೋಬರ್ ೨೬ನೇ ತಾರೀಖ್ ಸೋಮವಾರ. | ಸಂಚಿಕೆ ೪೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷ್ ಮತ್ತು ಕನ್ನಡ ಶೇರಿಕೊಂಡ್ಯಕಾಗದ ಪತ್ರಿಕೆ, ವರುಷ ೧ಕ್ಕೆ	..	೧೨—೦—೦
ಇಂಗ್ಲೀಷ್ [illegible] ಶೇರಿಕೊಂಡ್ಯಕಾಗದ ಪತ್ರಿಕೆ ವರುಷ ೧ಕ್ಕೆ	..	೬—೦—೦
ಕನ್ನಡದಲ್ಲಿ [illegible] ಪತ್ರಿಕೆ [illegible]	[illegible]	೬—೦—೦
[illegible]	೧ಕ್ಕೆ	[illegible]
[illegible]	೧ಕ್ಕೆ	—೪—
[illegible]	೧ಕ್ಕೆ	೦—೫—

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA.

Price including Postage, Rs 5-6 0

[illegible]

[illegible]	... ... ರೂ॥	೫—೦—೦
[illegible]		೦—[illegible]—

[illegible], ಬೆಂಗಳೂರು

ನೋಟೀಸ್.

ಇದರ ಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿಯೂ [illegible] ಸಲ್ಪಡುತ್ತವೆ, —

ಕನ್ನಡ ಟೀಕೆ [illegible] ಸಂಸ್ಕೃತ ಗ್ರಂಥಗಳು.

[illegible]	..	೧—೪—೦
[illegible]	...	೦—೧೨—೦
[illegible] (ಸತ್ಯಂ[illegible])	...	೬—೩—೦
[illegible]		೧—೫—೦
[illegible]	.	೬—೪—೦
[illegible]	...	೬—೧೪—೦
[illegible]	...	೦—೭—೦
[illegible]	..	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು

[illegible]	...	೬—೭—
[illegible]	..	೦—೪—೦
[illegible]	..	೦—೩—೬
[illegible]	... ...	೦—೨—೬
[illegible]	..	೦—೪—೦
[illegible]	..	೦—೨—೦
[illegible]	...	೦—೬—೬
[illegible]	..	೦—೨—೬
[illegible]	...	೦—೭—೦
[illegible]	..	೦—೩—೦
[illegible]	.. ..	೦—೨—೦
[illegible]	...	೦—೦—೯
[illegible]		೧—೦—೬
[illegible]	... ...	೨—೦—೦
[illegible]	.	೦—೧೨—೬
[illegible]	...	೩—೪—೬
[illegible]	...	೩—೪—೬
[illegible] ಸ್ಟೇಟ್ [illegible]		
೧ನೇ ಸಂಚಿಕೆ.	...	೮—೮—೦
[illegible] ೨ನೇ ಸಂಚಿಕೆ		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	.. ..	೦—೩—೦
[illegible]		೦—೫—೦
[illegible]	...	೦—೨—೬
[illegible]	..	೦—೨—೬
[illegible]	...	೦—೦—೬
[illegible]	...	೦—೩—೬
೧ [illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಸ್ತೂರಿ ತಗದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 26, 1885

೧೮೮೫ನೇ ಅಕ್ಟೋಬರು ೨೬ನೇ ತಾ॥ ಸೋಮವಾರ

ಶ್ಲೋ ॥ ಸರ್ವಜ್ಞತಾಂಸದನವಾಕ್ಯಸುತಾಂಪ್ರಸೂತೆ [illegible] ॥ [illegible]

AN INCONSIDERATE SUGGESTION.

ಮದ್ರಾಸ್ ಮಜಕೂರ್ ೧೯ನೇ ತಾರೀಖಿನ ಏಳೆದೇಶದ ಡಿಮೊಕ್ರಾಟ್ ಪತ್ರಿಕೆಯು, ಮೈಸೂರು ದೇಶದ ತಾತ್ಕಾಲಿಕ ಸ್ಥಿತಿಯನ್ನೂ, ಅದನ್ನು ಕ್ರಮ ಪಡಿಸುವಬಗ್ಗೆ ಗವರ್ನಮೆಂಟಿನವರನುಸರಿಸಬೇಕಾದ ಮಾರ್ಗವನ್ನೂ, ಅದಕ್ಕೆ ಆವಶ್ಯಕಗಳಾದ ಕೆಲವು ಸಲಹೆಗಳನ್ನೂ ತಿಳಿಸಿ, ಅದರಂತೆ ಮಹಾರಾಜಾ ಸರ್ಕಾರದವರು ವರ್ತಿಸದಿದ್ದರೆ ಮುಂದೆ ಈ ದೇಶದ ಸ್ಥಿತಿಯು ಬಹಳ ಶೋಚನೀಯವಾಗಿರುವದೆಂದು ಭವಿಷ್ಯದ್ವಿಷಯವನ್ನು ಸಹ ಈಗಲೇ ಪ್ರಕಟಿಸುತಿದೆ. ಈ ರಾಜ್ಯದ ಪ್ರಕೃತ ಆಡಳಿತ ಕ್ರಮಕ್ಕೆ ಗವರ್ನಮೆಂಟಿನವರನ್ನು ಬಗಿಂದಾಗ್ಯೆ ಎಚ್ಚರಿಸುತಲಿರುವಬಗ್ಗೆ ತ್ರಿಕಾಲಜ್ಞಾನವುಳ್ಳ ಇಂಥಾ ಪತ್ರಿಕೆ ಯೊಂದಿರಬೇಕಾದ್ದು ಅತ್ಯಾವಶ್ಯಕವೆಂದೆಣಿಸುವೆವು. ಈ ಸಂವತ್ಸರದ ಮಳೆ ಬೆಳೆಗಳ ಸ್ಥಿತಿಯನ್ನು ನೋಡಿ, ಮೊದಲುಸಲ ಬಿತ್ತಿದ್ದೂ ಯೆರಡನೆಯ ಸಲ ಬಿತ್ತಿದ್ದು ಸಹ ವರ್ಷಾಭಾವದಿಂದ ನಷ್ಟವನ್ನೈದಿದವಾಗಿ ಈಸಲ ಅಲ್ಪ ಅಥವಾ ಹಾಗೂ ಜೋಳ ಫಲವಾದರೆ ಲಭಿಸಬಹುದಂತಲೂ, ಇದರಿಂದಲೇ ರೈತರು ತಮ್ಮ ಕಂದಾಯವನ್ನು ಕೊಡುವದಕ್ಕೆ ಶಕ್ತರಲ್ಲವೆಂತಲೂ, ಸದರೀಪತ್ರಿಕೆಯು ಅಭಿಪ್ರಾಯಪಡುತಿದೆ. ಫಸಲಿನ ಪರಿಮಿತಿಯನ್ನು ತಿಳಿಸಬೇಕಾದಲ್ಲಿ ಆಯಾ ಜಮೀನಿನ ಗುಣ, ಅದರ ಸಾಗುವಳಿಯ ಕ್ರಮ, ಅದರ ಕಾಲ ಇವುಗಳನ್ನು ಚೆನ್ನಾಗಿ ಆಲೋಚಿಸಬೇಕು. ಒಬ್ಬ ರೈತನು, ಖುಷ್ಕೀ, ತರೀ, ಬಾಗಾಯತ್ ಯೆಂಬ ಮೂರುವಿಧ ಕಂದಾಯಗಳನ್ನು ಕೆರುತ ಅನೇಕ ಗ್ರಾಮಗಳಲ್ಲಿ ನಾನಾವಿಧಪೈರುಗಳನ್ನಿಡುತ್ತಾನೆ. ಖುಷ್ಕೀಫಸಲ್ ಪೈರಿ ಯೆಲ್ಲಾ ಜಾತಿಗೂ ಏಕರೂಪವಾದ ನೀರಿನಸರಬರಾಯಿ ಬೇಕಾಗಿರುವದಿಲ್ಲವು. ಮತ್ತು ಇವುಗಳ ಫಸಲ್‌ಕಾಲ ಸಹ ಪ್ರತ್ಯೇಕವಾದ್ದಾಗಿರುತಿದೆ. ಈ ಕ್ರಮವನ್ನನುಸರಿಸಿ, ಒಬ್ಬ ರೈತನಿಗೆ ಜಾಸ್ತೀ ಬೆಲೆಯುಳ್ಳ ಭಾರೀ ಪೈರುಗಳೆಷ್ಟುಮಟ್ಟಿಗೆ ಕೈಗೆ ಬರುವವೋ ಅದರಮೇಲೆ ಗೊತ್ತುಮಾಡಬೇಕು. ಮೊದಲಾ ಒಂದು ಪೈರು ಚೆನ್ನಾಗಿ ಬೆಳೆಯುವಪಕ್ಷಕ್ಕೆ ಮತ್ತೊಂದು ಪೈರು ಬೆಳೆಯುವದಕ್ಕೆ ತಕ್ಕ ಅವಕಾಶವಿರುವದಿಲ್ಲವು. ಇದನ್ನು ಕಂಡು ರೈತನು ತನ್ನ ಹಿಡುವಳೀ ಜಮೀನಿನಲ್ಲಿ ಮೂರುವಿಧ ಪೈರುಗಳನ್ನಿಡುತ್ತಾನೆ. ಫಸಲ್‌ಕಾಲದಲ್ಲಿಯೇ ಅವನಿಗೆ ಯಾವದೋ ಒಂದು ಫಲ ಕೈಗೆ ಬರುವದಿಲ್ಲವೆಂಬ ಜ್ಞಾನ ವುಂಟಾಗದಿರುವದಿಲ್ಲವು. ಈ ಸಂವತ್ಸರ ಖುಷ್ಕೀ ಫಸಲ್ ಮುಖ್ಯಾಗುವಾಲುಗಿಂತಲೂ ಜಾಸ್ತೀಯಾಗಬಹುದೆಂದು ಸಾಮಾನ್ಯವಾಗಿ ಜನಗಳೀಗ ನಿರೀಕ್ಷಿಸುತಲಿರುವದನ್ನು ನಾವು ನಂಬದಿರಲಿಕ್ಕೆ ತಕ್ಕ ನಿದರ್ಶನಗಳು ತೋರಬರುವದಿಲ್ಲವು.

ತರೀ ಫಸಲಿನ ವಿಷಯದೊಳು ಸದರೀ ಪತ್ರಿಕೆಯು ತಿಳಸುತಿದೇನಂದರೆ.—“ಮೈಸೂರು ದೇಶದೊಳು ಅನೇಕ ಕೆರೆಗಳಿವೆ ಎಂಬ ಅಂಶ ಯೆಷ್ಟು ಮಾತ್ರವೂ ಸುಳ್ಳಲ್ಲವು. ಪರಂತು ಅವುಗಳು ಸಾಮಾನ್ಯವಾಗಿ ಘಾತವಿಲ್ಲದವರಾಗಿರುವದರಿಂದ ಅವುಗಳೊಳು ಬೇಕಾದಷ್ಟು ನೀರು ಒಂದೇಸಲ ನಿಲ್ಲಲಿಕ್ಕೆ ಅವಕಾಶವಿಲ್ಲದೆ ಫಸಲ್ ಕಟುವಾಗುವದರೊಳಗಾಗಿ ಕಾಲವೃಷ್ಟಿಯೊಡನೆ ಮೂರು ನಾಲ್ಕು ದಫಾ ತುಂಬಬೇಕಾದವಾಗಿರುತಿವೆ. ಇದರಿಂದ ಬೆಳದಿಂಗಳಿಗೆ ಕೆರೆ ಬತ್ತುವದೆಂಬ ರೈತರ ಮಾತನ್ನು ನಿಜವೆಂದೆಣಿಸುವೆವು. ದುಫಸಲಾಗತಕ್ಕ ಕೆರೆಗಳು ಕೊಂಚವಾಗಿರುತಿವೆ. ಕಾಲಕಾಲಕ್ಕೆ ತಪ್ಪದೆ ಒಳ್ಳೇ ಮಳೆಯಾಗುತಲಿದ್ದರೇನೇ ಸಾಗುವಳಿಯಾಗುವದೇ ಹೊರ್ತು ಇಲ್ಲವಾದರೆ ಯಾವ ಪ್ರತ್ಯಾಶೆಯೂ ಇರುವದಿಲ್ಲವು. ಕಾಳು ಹಿಡಿಯುವ ಕಾಲದಲ್ಲಿಯೂ ಹಾಲು ತುಂಬುವಾಗ್ಯೂ ಬೇಕಾದಷ್ಟು ಮಳೆ ಬಾರದೆ ಹೋದರೆ ವಿಫಲವಾಗಿ ಪಸಲ್ ಒಣಗಿ ಹೋಗುತಿದೆ. ಈ ದೇಶದೊಳು ಸರ್ವತ್ರ ತರೀ ಬಾಗಾಯತ್ ಕಂದಾಯಗಳು ದುಬಾರೀಯಾಗಿಹಾಕಲ್ಪಟ್ಟಿವೆ ಈಜಮೀನ್ಗಳ ಮೂಲಕ ಸಂಪೂರ್ಣವಾಗಿ ತಾವು ಕೆಟ್ಟಂತೆ ರೈತರೊಂದು ಕಪೆ ಮೊರೆಯಿಡುತ್ತಾರೆ. ಸರ್ವೆ ಸೆಟಲ್‌ಮೆಂಟ್ ಸಹ ಬಹಳ ಬಾಧಕವಾದ್ದಾಗಿ ಏರ್ಪಟ್ಟದೆ ನಾಲ್ಕೈದು ನಂಬರ್‌ಗಳನ್ನು ಸೇರಿಸಿ ಒಂದಾಗಿ ಪೈಮಾಯಿಷೀ ಮಾಡಿರುವದರಿಂದ ಅವುಗಳೆಲ್ಲವನ್ನೂ ಒಬ್ಬನು ಭರಿಸಲಿಕ್ಕೆ ಅಸಾಧ್ಯವಾಗಿಯೂ, ಇಬ್ಬರು ಮೂವರು ಇಟ್ಟುಕೊಳ್ಳಲಿಕ್ಕೆ ಅನಾನುಕೂಲವಾಗಿಯೂ ಇರುವದರಿಂದ ಬಹಳ ಕೆಡುಕಾಗಿ ಪರಿಣಮಿಸಿದೆ. ಆದದರಿಂದ ಮೊದಲು ಈ ಕ್ರಮವನ್ನು ತಪ್ಪಿಸಿ ಫೋಟಿಮಾಡಬೇಕಾದ್ದು ಅತ್ಯಾವಶ್ಯಕವೆಂದು ಹೇಳುವೆವು. ಮತ್ತು ಸದರೀ ಇಲಾಖೆಯ ರೂಲ್ಸ್‌ಗಳು ಸಹ ಬಹಳವಾಗಿ ಬದಲಾಯಿಸಲ್ಪಡಬೇಕಾಗಿವೆ. ರೈತರ ದೌರ್ಭಾಗ್ಯಸ್ಥಿತಿಗೆ ನಾಲ್ಕೈದು ನಂಬರ್‌ಗಳುಳ್ಳ ಜಮೀನ್‌ಗಳನ್ನು ಒಂದಾಗಿ ಸೇರಿಸಿರುವದೂ, ತರೀ ಬಾಗಾಯತ್ ಜಮೀನ್‌ಗಳಿಗೆ ಮನಸ್ವೀ ಕಂದಾಯ ಕರಾರ್ ಮಾಡಿರುವದೂ ಮುಖ್ಯ ಕಾರಣಗಳೆನ್ನಬೇಕು. ಕಡೆಗೆ ಇವರನ್ನು ನಾದಾರ್ಮಾಡಲಿಕ್ಕೆ ಇವೆರಡೇ ಸಾಕಾಗಿರುತಿವೆ. ಎಕ್ರೆ ೧ಕ್ಕೆ ೧೮ ರೂಪಾಯಿ ಬಾಗಾಯತ್ ಕಂದಾಯವೂ, ಎಕ್ರೆ ೧ಕ್ಕೆ ೭ ರಿಂದ ೮ ರೂ॥ ತನಕ ತರೀ ಕಂದಾಯವೂ ಗೊತ್ತುಮಾಡಲ್ಪಟ್ಟಿವೆ. ಅತರಾಫಿನೊಳಿರುವ ಮದರಾಸ್ ಪ್ರೆಸಿಡೆನ್ಸಿಯಲ್ಲಿ ಉತ್ತಮವಾದ ಬಾಗಾಯತ್ ಜಮೀನ್‌ಗಳಿಗೆ ಎಕ್ರೆ ೧ಕ್ಕೆ ನಾಲ್ಕು ರೂಪಾಯಿನಂತೆಯೂ, ತರೀ ಜಮೀನಿಗೆ ೨ ಅಥವಾ ೨½ ರೂಪಾಯಿ ಪ್ರಕಾರವೂ ಕಂದಾಯ ಹಾಕಲ್ಪಟ್ಟಿದೆ. ಇದಲ್ಲದೆ ಪೇಶ್‌ಕುಷ್ಕಿ ಮತ್ತು ಬಂಜರ್‌ಗಳಿಗೆ ಪೂರಾ ಕಂದಾಯ ವಜಾ ಮಾಡಲ್ಪಡುತಿದೆ. ಈ ದೇಶದಲ್ಲಿ ಫಲವೆಂಬದನ್ನು ಕಣ್ಣಿಂದ ನೋಡದಿದ್ದರೂ ಅದ್ದ ಕಂದಾಯ ಮಾಫೆಮಾಡುವಾಗ್ಯೆ ವಿಷ್ಣುಪ್ರಯತ್ನ ವಾಗುತಿದೆ” ಎಂಬದು.

ಮೇಲೆಕಂಡ ಮಾತುಗಳು ಕೇವಲ ಮದರಾಸ್ ಪ್ರೆಸಿಡೆನ್ಸಿಯ ಕೆಲವು ಪ್ರದೇಶಗಳ ಅನುಭವವನ್ನು ಹಿಡಿದು ತಿಳಿಸಿದಂತೆ ತೋರುತಿವೆ. ಅದನ್ನು ಸಾರ್ವತ್ರಿಕವೆಂದು ಹೇಳಲಾಗದು. ತರೀಫಸಲಿನ ವಿಷಯದೊಳು ಒಬ್ಬರನೋಡಿ ಮತ್ತೊಬ್ಬರು, "ಕೆರೆಯಲ್ಲಿ ನೀರಿಲ್ಲ, ಫಸಲಾಗಲಿಲ್ಲ, ಕಂದಾಯತೆರುತಲಿದೇವೆ, ಸರ್ಕಾರದವರು ಅನ್ಯಾಯಮಾಡುತ್ತಾರೆ." ಎಂದು ಹೇಳುತಲಿರುವವಾತಿಕೆ ಜನಗಳಿಗೆ ಅಭ್ಯಾಸವಾಗಿಹೋಗಿದೆ. ಸಾಬಕ್ ದಿವಾನ್ ಮೆ॥ ರಂಗಾಚಾರ್ಯರವರು ತಮಗಿದ್ದ ಮದರಾಸ್ ಪ್ರೆಸಿಡೆನ್ಸಿಯ ಅನುಭವದ ಮೇಲೆ ಅರ್ಧಕಂದಾಯ ರಿಮಿಷನ್ ಮಾಡುವೆವೆಂದು ಕೊಟ್ಟ ಹುಕುಮೇ ಮೇಲೆಕಂಡಂತೆ ಜನಗಳು ನುಡಿಯಲಿಕ್ಕೆ ಅವಕಾಶವನ್ನುಂಟುಮಾಡಿತು. ಆದರೆ ರೆವಿನ್ಯೂಕೆಲಸದೊಳು ಅನುಭವಶಾಲಿಯೆನಿಸಿಕೊಂಡು ದೊಡ್ಡ ಉದ್ಯೋಗಗಳನ್ನು ಮಾಡಿದಂತಾ ಒಬ್ಬ ಪ್ರಸಿದ್ಧ ಆಫಿಸರಿಂದ ಕೊಡಲ್ಪಟ್ಟ ಈ ವಿಧವಾದ ಹುಕುಂ ಬಹುಮಂದಿಗೆ ಪ್ರಯೋಜನಕರವಾಗಿ, ಆಬಗ್ಯೆ ಅವರನ್ನೆಲ್ಲರೂ ಕೊಂಡಾಡುತಲಿರುವಾಗ್ಯೆ ಅವರ ಪರೋಕ್ಷದೊಳು ಅದನ್ನುಕುರಿತು ದೂಷಿಸಬೇಕೆಂಬ ತಾತ್ಪರ್ಯವು ನಮಗಿರುವದಿಲ್ಲವು ಆದರೆ ಮದರಾಸ್ ಪ್ರೆಸಿಡೆನ್ಸಿಯಲ್ಲಿ ತರೀಕಂದಾಯ ಮುನಾಸಬ್ ರಿಮಿಷನ್ ಮಾಡಲ್ಪಡುತಿದೆಯೆಂದು ಇಲ್ಲಿನ ರೈತರು ಪ್ರತಿಸಂವತ್ಸರದಲ್ಲಿಯೂ ಇದನ್ನೇ ಒಂದು ಪ್ರಬಲ ತಕರಾರ್‌ರೂಪವಾಗಿ ಹಾಜರುಪಡಿಸಲಿಕ್ಕೆ ಮೇಲೆಕಂಡ ಹುಕುಂ ಆಧಾರವಾಯಿತು. ಜಮಾಬಂದೀ ಮತ್ತು ಕಂದಾಯಪದ್ಧತಿಯು ಆಯಾಸ್ಥಳದ ರಿವಾಜನ್ನನುಸರಿಸಿದ್ದಾಗಿದೆಯಲ್ಲದೆ, ಒಂದುಸ್ಥಳದ ಕ್ರಮವನ್ನೋಡಿ ಅದರಂತೆ ಮತ್ತೊಂದು ಸ್ಥಳದಲ್ಲಿ ಜಾರಿಯೊಳು ತರಬೇಕೆಂಬ ನಿಯಮಕ್ಕೊಳಪಡತಕ್ಕದ್ದಲ್ಲವು ಮಸಲಾ ಈ ಶೀಮೆಯೊಳೊಂದುಗ್ರಾಮದಲ್ಲಿ ಸರ್ವೆ ಸೆಟಲ್‌ಮೆಂಟಿಗೆ ಪೂರ್ವ ಯಾವದರದಂತೆ ಕಂದಾಯ ಠರಾವಾಗಿತ್ತು? ಈಗ ಸರ್ವೆ ಸೆಟಲ್‌ಮೆಂಟನಲ್ಲಿ ಕ್ಯಾಗೆ ದರ ನಿಷ್ಕರ್ಷೆಯಾಯಿತು? ಪೂರ್ವಕ್ಕಿಂತಲೂ ಈಗ ಕಂದಾಯ ಜಾಸ್ತೀ ಮಾಡಲ್ಪಟ್ಟದೆಯೇ? ಪೂರ್ವದೊಳು ಗ್ರಾಮಗಳು ಆಬಾದಾಗಿದ್ದು ಈಗಲೇನಾದರೂ ಅವು ಬೇಚರಾಖಾಗಿವೆಯೇ? ಒಟ್ಟುಗ್ರಾಮದ, ಗತಸೂವತ್ತುಸಂವತ್ಸರಗಳ ದಹುಟ್ಟುವಳಿಯ ಸರಾಸರಿಗಿಂತ ಈಗ ಜೇರೀಜ್ ಯೇನಾದರೂ ಜಾಸ್ತೀಯಾಗಿದೆಯೇ? ಜಮೀನಿಗೆ ಸಂವತ್ಸರಕ್ಕೂ ಬೇಕಾಗಿರುವನೀರು ಒದಗಿದರೂ ಒದಗದಿದ್ದರೂ ಒಂದೇದರವುಳ್ಳ ಕಂದಾಯವೇನಾದರೂ ಠರಾವಾಗಿದೆಯೇ? ಪ್ರಶ್ನೆಗಳಿಗೆಪ್ರತ್ಯುತ್ತರವು ಆರೀತಿಯಿಲ್ಲವೆಂಬದುವಿನಾ ಬೇರಿಲ್ಲವು. ಇದಲ್ಲದೆ ಕೆಲವು ತರೀಜಮೀನುಗಳಿಗೆ ಖುಷ್ಕೀದರಕ್ಕಿಂತಲೂ ಕಡಿಮ್ಮಾದರವಿದ್ದಿರುತಿವೆ. ತರೀಫಸಲೆಂಬದು ಭತ್ತ ಒಂದೇಯಾದಾಗ್ಯೂ ಅದು ನಾಲ್ವತ್ತುದಿನಗಳಮೊದಲುಎಂಟುತಿಂಗಳವರಿಗೂ ಬೆಳೆಯತಕ್ಕ ಅನೇಕವಿಧಗಳುಳ್ಳದ್ದಾಗಿರುತಿದೆ ನಾನಾಜಾತಿಯುಳ್ಳ ಈಭತ್ತದ ಬಕಾರವನ್ನೋ ಹಲವೇಕ್ಷೆಯುಳ್ಳವರು ಈ ಪೂರು ಮ್ಯೂಜಿಯಮಿಗೆ ಹೋಗಿನೋಡುವರಾದರೆ ಭತ್ತದಪ್ರಭೇದಗಳೆಷ್ಟೆಂದು ವ್ಯಕ್ತವಾಗುವದು. ಡೆಯಿಲೀಪೋಸ್ಟುಪತ್ರಿಕಾಲೇಖಕರು, ಮೇಲೆಕಂಡ ವಿಚಾರವನ್ನು ಬರೆಯುವದಕ್ಕುಪಕ್ರಮಿಸಿದಾಗ್ಯೆ ಅವರು, ಪೂರ್ವಾಭಿಮುಖವಾಗಿ ಕುಳಿತು, ದಗಾಬೋರರಾದ ರೈತರಮಾತನ್ನು ಸ್ಮರಿಸಿಕೊಂಡು, ಮೇಲೆಕಂಡಂತೆ ಮದರಾಸ್ ಪ್ರೆಸಿಡೆನ್ಸಿಯಕ್ರಮವನ್ನಿಲ್ಲಿಜಾರಿಯೊಳು ತರಬೇಕೆಂದು ಸಿಫಾರಸುಮಾಡಿದಂತೆ ತೋರುತಿದೆ. ಹಾಗಿಲ್ಲದಪಕ್ಷಕ್ಕೆ ಸೇಲಂಡಿಸ್ಟ್ರಿಕ್ಟು ಒಂದುಮಾತ್ರ ಅವರದೃಷ್ಟಿಗೆ ಗೋಚರವಾಗಿರಲಾರದು. ಸದರೀ ಪತ್ರಿಕಾಲೇಖಕರು ತಮ್ಮದೃಷ್ಟಿಯನ್ನು ತಿರಿಗಿಸಿ ಹಿಂಭಾಗದಲ್ಲಿರುವದನ್ನು ನೋಡಿರುವರಾದರೆ ಬಳ್ಳಾರಿ, ಧಾರವಾಡ, ಬೆಳಗಾಂ ಮುಂತಾದ ಪಶ್ಚಿಮೋತ್ತರಡಿಸ್ಟ್ರಿಕ್ಟುಗಳಲ್ಲಿನರೆವಿನ್ಯೂಆಡಳಿತಕ್ರಮವುಫಲಾನೇರೂಪವಾಗಿದೆಯೆಂದು ತಿಳಿಯಬರಬಹುದು. ಅಥವಾ ಇಲ್ಲಿನಪೂರ್ವ್ವಪದ್ಧತಿಯನ್ನಾದರೂ ಸ್ಮರಿಸಿಕೊಳ್ಳುವರಾದರೆ ಹಿಂದೆ ಈರೀತಿ ಇತ್ತೆಂದು ತಿಳಿಯಬರಬಹುದು ಮುಖ್ಯವಾಗಿ ಇಂತಾ ವ್ಯರ್ಥವೆ ತಕರಾರುಗಳಿಗೆಲ್ಲ ಈಗಿನ ಆಡಳಿತಕ್ರಮವೇ ಕಾರಣವಾಗಿರುತಿದೆ. ಹ್ಯಾಗಂದರೆ, ಈಗ ಅವಲಂಬಿಸಲ್ಪಟ್ಟಿರುವ ರಾಜ್ಯತಂತ್ರಕ್ರಮದಿಂದ, ಸರ್ಕಾರಕ್ಕಾಗಲಿ, ಕಾರ್ಯತಃ ರೈತರಿಗಾಗಲಿಯಾವ ಪ್ರಯೋಜನವೂ ಉಂಟಾಗುವದಿಲ್ಲವು ಪರಂತು, ದೊಡ್ಡಾದವರು ದಾವ್ಯಾಜ್ಯಗಳನ್ನು ವೃದ್ಧಿಪಡಿಸಿಕೊಂಡು ತಾರತಮ್ಯಜ್ಞಾನವಿಲ್ಲದೆ ಸರ್ಕಾರದವರನ್ನು ಅಲಕ್ಷ್ಯಮಾಡಿ ಮಾತನಾಡಲಿಕ್ಕೂ, ಪ್ರಜಾಭಿಪ್ರಾಯಾನುಗುಣವಾಗಿ ವರ್ತಿಸುತ್ತೇವೆಂಬ ಪ್ರತಿಜ್ಞೆಯನ್ನು ಸರ್ಕಾರದವರು ಅನ್ಯರಿಗೆ ತೋರ್ಪಡಿಸಲಿಕ್ಕೂ ಬಹಳ ಅನುಕೂಲವಾಗಿ ಏರ್ಪಟ್ಟವ ಈ ದೇಶದಲ್ಲಿ ಪ್ರಾಯಶಃ ತರೀಜಮೀನುಗಳು ಬಹಾಯಿಸಾಗುವಳಿಯಲ್ಲಿಯೂ, ಬಾಗಾಯತ್ ಜಮೀನುಗಳು ಉಪಪನ್ನರಾದ ಖುಷ್‌ಬಾಷ್ ಜನಗಳ ಹಿಡುವಳಿಯಲ್ಲಿಯೂ ಇದ್ದದ್ದು ಈಚೆಗೆ ಇವುಗಳನ್ನು ಸರ್ಕಾರದವರು ಅಂತವರಿಗೇ ಸಾಗುವಳಿಗೆ ಕೊಟ್ಟಿರುತ್ತಾರೆ ಅವರು ಸ್ವತಃ ಸಾಗುವಳೀಮಾಡದೆ ಮೇಲೆಕಂಡಂತೆ ತಕರಾರ್ ಮಾಡಲಿಕ್ಕೆ ಉಪಕ್ರಮಿಸಿದರೆ ಯಾರೇನು ಮಾಡಬಹುದು ಈಗ ಪ್ರತಿ ಸಂವತ್ಸರದಲ್ಲಿಯೂ ಮೈಸೂರಲ್ಲಿ ಈ ಕಾಲವೂಳು ಸೇರತಕ್ಕ ಡಂಬರ ರೂಪವಾದ ಪ್ರಜಾ ಪ್ರತಿನಿಧಿ ಸಮಾಜಕ್ಕೆ ತಾಲ್ಲೂಕಿಜಾತಿನಿಂದ ಪ್ರತಿನಿಧಿಗಳು ಹೋಗಿ ತಮ್ಮ ಅಭಿಪ್ರಾಯಗಳನ್ನು ಸಭೆಯಲ್ಲಿ ತಿಳಿಸುವ ಕ್ರಮವೂ, ಅದಂ ಸರ್ಕಾರದವರು ಪುರಸ್ಕರಿಸಿ ಮಾಡುವ ಯೋಗ್ಯದುಗಳೂ, ತನ್ಮೂಲಕ ಪ್ರತಿನಿಧಿಗಳಿಗೆ ಉಂಟಾಗತಕ್ಕ ಪ್ರಯೋಜನಗಳೂ ಜಗತ್ಪ್ರಸಿದ್ಧವಾಗಿರುತಿವೆ. ಆದರೆ ಒಂದು ಪ್ರಾಶಸ್ತ್ಯವನ್ನು ಮಾತ್ರ ಗವರ್ನಮೆಂಟನವರು ವಿಶೇಷ ಶ್ರಮಪಡದೆ ಸಂಪಾದಿಸಿಕೊಂಡರು. ಅದೇನೆಂದರೆ, "ಸರ್ಕಾರದವರು ವ್ಯರ್ಥವಾಗಿ ನಮ್ಮನ್ನು ಕರೆಯಿಸಿ ವಸತಿಯಂ ಸಹ ಕಲ್ಪಿಸದೆ ಉಪೇಕ್ಷಿಸಿ ಅಗೌರವ ಪಡಿಸುತ್ತಾರೆಂಬದು." ಇದರಿಂದ ಪ್ರಜೆಗಳ ವಿಷಯದಲ್ಲಿ ಯಾವಾಗಲೂ ಸರ್ಕಾರದವರು ಹಿತವ ಮಾಡಲಾರರೆಂಬ ಜ್ಞಾನವೀಗ ಜನಗಳಿಗೆ ತಪ್ಪಿ ಅದಕ್ಕೆ ಬದಲಾಗಿ ಪ್ರಜೆಗಳು, ತಾವಾಗಿ ಗವರ್ನಮೆಂಟನವರನ್ನು ಎದರಿಸಿ ವಾದಿಸಿದರೇನೆ ತಮಗೆಯಾವದಾದರೊಂದು ಉಪಕಾರ ಮಾಡುವರೇ ಹೊರ್ತು ಇಲ್ಲವಾದರೆ ತಮ್ಮನ್ನು ವಿಚಾರಿಸಲಾರರೆಂಬ ಭಾವ ಅವರಹೃದಯದಲ್ಲಿ ಊರ್ಜಿತವಾಯಿತು. ಏತೇನ ಈ ಪ್ರಜಾಪ್ರತಿನಿಧಿ ಸಮಾಜದಿಂದವರ ಅಧಿಕಾರವು ಪ್ರಬಲವಾದ್ದೆಂಬ ತಾತ್ಪರ್ಯವನ್ನು ಜನಗಳಿಗೆ ಹೋಗಲಾಡಿಸಿತು.

ಡೆಯಿಲೀ ಪೋಸ್ಟ್ ಪತ್ರಿಕೆಯು, ಗವರ್ನಮೆಂಟನವರು ತಮಗೆ ಉಂಟಾಗಿರುವ ಅರ್ಥಾನುಪಪತ್ತಿಯನ್ನು ನಿವೃತ್ತಿಸಿಕೊಳ್ಳುವದಕ್ಕೆ ಒಂದು ಉಪಾಯವನ್ನು ಹುಡಿಕಿ ತಿಳಿಸುತದೇನೆಂದರೆ — ಗವರ್ನಮೆಂಟನವರು, ತಮ್ಮ ತಗಾದೆಗಳನ್ನು ತೀರಿಸಿಕೊಳ್ಳುವದಕ್ಕೆ, ಅನಾವಶ್ಯಕವೆಂದು ತೋರುವ ಇಲಾಖೆಗಳನ್ನೆಲ್ಲ ಮೊದಲು ಮೌಕೂಫ್ ಮಾಡಬೇಕಾದ್ದು ಆವಶ್ಯಕವಾಗಿರುತಿದೆ ಮೊದಲು ರೆಯಿಲ್ ಇಲಾಖೆಯನ್ನು ಕುರಿತು ಚಿಂತಿಸುವಣ, ಈ ರೈಲ್ ರಸ್ತೆಯ ಸಾಮಗ್ರಿಯಬಾಬ್ತೆ ತೆಗೆಯಲ್ಪಟ್ಟ ಸಾಲಕ್ಕೆ ಈಗ ಸೇಕಡಾ ೫ರ ಪ್ರಕಾರ ಬಡ್ಡಿ ಕೊಡಲ್ಪಡುತಲಿದೆ. ಈ ಮೂಲಕ ಹುಟ್ಟುವಳಿಯು ಸೇಕಡಾ ೨॥ ರೂಪಾಯಿಗಳಿಗಿಂತ ಅಧಿಕವಾಗುವದಿಲ್ಲವು. ಮಿಕ್ಕ ೨॥ ರೂಪಾಯಿಗಳು ಗವರ್ನಮೆಂಟನವರು ತಮ್ಮ ಕೈಯಿಂದ ಭರ್ತಿ ಹಾಕಿ ಕೊಡುತಲಿದಾರೆ. ಈ ರಸ್ತೆ ಮಾರಲ್ಪಡುವದೆಂದು ತಿಳಿಯಬರುತಿದೆ. ಆರೀತಿ ಅದ್ಯಾಪಿ ಮಾಡದಿರಲಿಕ್ಕೇನು ಅಭ್ಯಂತರವೋ ತಿಳಿಯಬರಲಿಲ್ಲವು ಈ ವಿಧದಿಂದ ಸರ್ಕಾರಕ್ಕೆ ಸೇಕಡಾ ೨॥ ರೂಪಾಯಿ ಬಡ್ಡಿಯು ಕಿಫಾಯತ್ತಾಗುವದಲ್ಲದೆ ಮಹಾರಾಜಾ ಸರ್ಕಾರಕ್ಕೆ ಅಸಾಧ್ಯವಾಗಿರುವ ರಸ್ತೆಯನ್ನು ರೆಯಿಲ್ವೇಕಂಪೆನಿಯವರು ಮುಂದಕ್ಕೆ ಬಹಾಯಿಸುವದಾಗಿ ತನ್ಮೂಲಕ ದೇಶದ ಹುಟ್ಟುವಳಿ ಜಾಸ್ತೀಯಾಗಲಿಕ್ಕೆ ಅನುಕೂಲಿಸುವದು. ಈಗ ನೆಲಗೊಂಡಿರುವಷ್ಟು ಬಾರ್ ಸವಾರ್ ಫೌಜುಗಳು ಮುಂದೆ ಆವಶ್ಯಕವಿರುವದಿಲ್ಲವು. ಪರಾಯಿ ಶತ್ರುಗಳ ಭೀತಿಯಾಗಲಿ, ಒಳದೇಶದೊಳು ಕಲಹ ಮುಂತಾದ್ದರ ಭಯವಾಗಲಿ ಈಗ ಶುದ್ಧಾಂಗ ಇಲ್ಲವು. ಅಂತಾದ್ದೇನಾದರೂ ಪ್ರಾಪ್ತವಾದರೆ ಬೆಂಗಳೂರಲ್ಲಿ ಮೊಕ್ಕಾಮಾಗಿರುವ ಬ್ರಿಟಿಷ್ ಸೈನ್ಯವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಏತದರ್ಥವೇ ಮಹಾರಾಜರವರು ಸಾಲೀಯಾನಾ ಬಹುಲಕ್ಷ ರೂಪಾಯಿಗಳ ಸಬಸಿಡಿ ಬ್ರಿಟಿಷ್ ಗವರ್ನಮೆಂಟಗೆ ಕೊಡುತಲಿರುವಲ್ಲಿ ಪ್ರತ್ಯೇಕವಾಗಿ ಮರಳಿ ಅವರು ಖರ್ಚುಮಾಡುವದು ಅನಾವಶ್ಯಕವಾಗಿರುತಿದೆ. ಮಹಾರಾಜರವರು ಶರೀರ ಸಂರಕ್ಷಣಾರ್ಥ ಕೆಲವು ಮಂದಿ ಸಿಲ್ಲೇದಾರರನ್ನು ಮಾತ್ರ ಉಳಿಸಿಕೊಂಡು ಮಿಕ್ಕವರನ್ನೆಲ್ಲ ತೆಗೆದುಹಾಕಬಹುದು. ಪ್ರತ್ಯೇಕ ಅಂಚೇ ಇಲಾಖೆಯು ಈ ಸಂಸ್ಥಾನಕ್ಕೆ ದುಬಾರೀ ಖರ್ಚು ಹಿಡಿಯತಕ್ಕದ್ದಾಗಿರುತಿದೆ ಹಿಂದೆ ನಾವು ಅನೇಕಾವರ್ತಿ ತಿಳಿಸಿರುವಪ್ರಕಾರ ಅಂಚೆಯನ್ನು ಇಂಪೀರಿಯಲ್ ಪೋಸ್ಟಿನೊಡನೆ ಸೇರಿಸಿಬಿಟ್ಟಲ್ಲಿ ಸರ್ವತ್ರ ಒಂದೇ ವಿಧ ಟಪಾಲ್ ಸೆಲೆಗೊಂಡಂತೆ ಯಾಗುವದಲ್ಲದೆ ಈ ಸಂಸ್ಥಾನಕ್ಕೆ ಸಾಲೀಯಾನಾ ಐವತ್ತು ಅರವತ್ತುಸಾವಿರ ರೂಪಾಯಿಗಳು ಕಡಿಮೆಯಾಗುವದು. ಮತ್ತು ಜನಗಳಿಗೆ ಇದುವರಿವಿಗೆ ಲಭಿಸದಿರುವಂತಾ ಮಹತ್ಪ್ರಯೋಜನವನ್ನುಂಟುಮಾಡಿದಂತೆ ಆಗುತಿದೆ ಹೀಗೆಯೇ ಇನ್ನೂ ಅನಾವಶ್ಯಕಗಳಾದ ಇಲಾಖೆಗಳನ್ನೆಲ್ಲ ತೆಗೆದು ಹಾಕಬೇಕೆಂದು ಅಭಿಪ್ರಾಯ ಪಟ್ಟದ್ದು ಮಾತ್ರವಲ್ಲದೆ ಬ್ರಿಟಿಷ್ ರೆಸಿಡೆಂಟರು, ಪ್ರಜಾನುರಾಗವುಳ್ಳವರಾದ್ದರಿಂದ ಜನಗಳ ಪ್ರಯೋಜನಾರ್ಥ ಮಹಾರಾಜಾ ಸರ್ಕಾರದವರು ಖರ್ಚುವೆಚ್ಚಗಳನ್ನು ತಗ್ಗಿಸುವದಾಗಿ ಕಂಡುಬಂದರೆ ಸಬ್‌ಸಿಡಿಯನ್ನು ಕೆಲವುಮಟ್ಟಿಗೆ ಕಡಮೆಮಾಡಬೇಕೆಂದು ಸಿಫಾರಸ್ ಮಾಡಬಹುದೆಂತಲೂ, ಪ್ರಕೃತ ದಿವಾನರವರ ರಾಜ್ಯತಂತ್ರಜ್ಞತೆಯೊಳು ನಮಗೆ ಸಂಪೂರ್ಣ ನಂಬಿಕೆ ಯುಂಟಾಗಿರುವದಲ್ಲದೆ ದಿವಾನರವರು ಈ ದೇಶಕ್ಕೆ ಒಂದು ಘಾತವನ್ನು ಮಾಡಬೇಕೆಂಬ ಸ್ವಭಾವವುಳ್ಳವರಾಗಿರುವದರಿಂದ, ಈ ದೇಶಕ್ಕೆ ಉಂಟಾಗತಕ್ಕ ನಷ್ಟವನ್ನು ಸಹ ಚಿಂತಿಸದೆ ಬರೀ ಜಂಜಕ್ಕಾಗಿ ವ್ಯರ್ಥ ಖರ್ಚುಗಳನ್ನು ಹಾಗೆಯೇ ಇಟ್ಟುಕೊಂಡಿರಬೇಕೆಂದು ಹೇಳತಕ್ಕವರ ಸಲಹೆಗೆ ಅವರು ಕಿವಿ ಕೊಡಲಾರರೆಂತಲೂ ತಿಳಿಸಿ, ಸದರೀ ಪೋಸ್ಟುಪತ್ರಿಕೆಯು ತನ್ನ ಪ್ರಸಂಗವ ಕೊನೆಮುಟ್ಟಿಸಿರುತಿದೆ ಮೇಲೆಕಂಡ ಸಲಹೆಗಳನ್ನೆಲ್ಲಾ ರೈಯಿಲ್ವೆ ಮತ್ತು ಸಬ್‌ಸಿಡಿ ಈ ಯೆರಡು ಬಾಬ್ತುಗಳು ವಿನಾ ಮಿಕ್ಕವೆಲ್ಲವೂ ಸಂಸ್ಥಾನದ ಗೌರವವನ್ನರಿತು ತಿಳಿಸಿದ್ದಾಗಿಲ್ಲವು ಸಂಸ್ಥಾನದ ಆದಾಯವನ್ನು ಕಡಮೆ ಮಾಡಬೇಕೆಂಬದು ಹಿಂದೆ ಅನೇಕಾವರ್ತಿ ತಿಳಿಸಲ್ಪಟ್ಟ ಅಂಶವಾಗಿರುತಿದೆ. ಆರೀತಿ ಮಾಡದೆಯೂ ಇರಲಿಲ್ಲವು ಪರಂತು ಇದುವರಿವಿಗೆ ಮಾಡಲ್ಪಟ್ಟದರೊಳು ಉದ್ದೇಶ ಒಂದು ರೂಪವಾಗಿಯೂ, ವ್ಯವಹಾರ ಮತ್ತೊಂದು ರೂಪವಾಗಿಯೂ, ಇರುವದರಿಂದ ಅವುಗಳೊಂದೂ ಕಾರ್ಯಕಾರಿ ಯಾಗಲಿಲ್ಲವು. ಪರಂತು ಜುಜಬೀ ನೌಕರರ ಸಂಖ್ಯೆಯನ್ನು ತಗ್ಗಿಸಿದಂತೆ ಆಯಿತು ಪೂರ್ವಕ್ಕಿಂತಲೂ ಈಗ ನೌಕರರ ತಲಬ್ ಬಹುಭಾಗ ಅಧಿಕವಾಗಿದ್ದರೂ ಅವರ ಸಂಖ್ಯೆ ಮಾತ್ರ ಅರ್ಧಪಾಲಿಗಿಂತ ತಗ್ಗಿಹೋಯಿತು. ಇವರ ಸಂಖ್ಯೆಯನ್ನು ಕಡಮೆ ಮಾಡಿದಂತೆಲ್ಲ ಬೇಬಂದಿಗೆ ಕಾರಣವಾಯಿತು. ಮುಂದೆಯೂ ಕಡಮೆ ಮಾಡುವದಕ್ಕೆ ಈ ರಾಜ್ಯದ ಕ್ರಮವಾದ ಪಾಲನೆಗೆ ನ್ಯೂನತೆ ಯುಂಟಾಗುವದೆಂದು ಜನಗಳು ಭಾವಿಸಿರಲಾರರು.

ಸ್ಟೇಟ್ ರೈಲ್ವೇಯನ್ನು ಮಾರುವದು ಸಂಸ್ಥಾನಕ್ಕೆ ಕೀರ್ತಿಕರವಲ್ಲವು. ಆದರೆ ಈಗಿನ ಸ್ಥಿತಿಯಲ್ಲಿ ಹಾಗೆ ಮಾಡದೆ ಹೋದರೆ ಗತ್ಯಂತರವಿಲ್ಲದಿದೆ ರೆಯಿಲ್ವೆಯನ್ನು ಬಹಾಯಿಸುವದರ ಮೂಲಕ ದೇಶಕ್ಕೆ ವಿಶೇಷ ಲಾಭ ಉಂಟಾಗುತಿದೆಂದು ಇಲ್ಲಿನ ದಿವಾನರುಗಳು ತಾತ್ಪರ್ಯಪಟ್ಟದ್ದು ಈ ದೇಶದ ಸ್ಥಿತಿಯನ್ನನುಸರಿಸಿ ಕೇವಲ ತಪ್ಪೆಂದು ಹಿಂದೆಯೇ ನಾವು ಅನೇಕಾವರ್ತಿ ತಿಳಿಸಿರುತ್ತೇವೆ. ಇದಕ್ಕಾಗಿ ಸಾಲ ಮಾಡಿರುವ ಮೊಬಲಗನ್ನು ಸಾಗುವಳಿಗೆ ಉಪಯುಕ್ತಗಳಾದ ಕಾಮಗಾರೀಗಳ ಬಗ್ಯೆ ವಿನಿಯೋಗಿಸಿದ್ದರೆ ಹುಟ್ಟುವಳಿಯು ಬಹಳಮಟ್ಟಿಗೆ ಜಾಸ್ತೀಯಾಗಿ ರೈತರವರ್ಗಿಗೆ ಅವಕಾಶ ಉಂಟಾಗುತಲಿತ್ತು. ಹಾಗಿಲ್ಲದೆ ದ್ರವ್ಯವೆಲ್ಲವೂ ಕಬ್ಬಿಣ, ಕಲ್ಲು, ಕಂಟ್ರಾಕ್ಟರ್‌ಗಳು, ಇಂಜನಿಯರ್‌ಗಳು, ಇವರ ಪಾಲಾದವು. ಇದನ್ನು ಮಾರಿಬಿಟ್ಟರೆ ಸದ್ಯಃ ಸರ್ಕಾರಕ್ಕೆ ಸ್ವೈಚ್ಛ್ಯವಾದರೂ ಉಂಟಾಗಬಹುದು.

ಮೈಸೂರು ದೇಶದೊಳಿರುವ ಆಯುಧಶಾಲೆಗಳನ್ನು ನಿರ್ಗತಿಕರನ್ನಾಗಿ ಮಾಡಬೇಕೆಂಬ ಸಂಕಲ್ಪವು ಮಹಾರಾಜಾ ಸರ್ಕಾರದವರಿಗೆ ಇರುವ ಪಕ್ಷಕ್ಕೆ ಪ್ರತ್ಯುಪಕಾರ ರೂಪವಾದ ಪೋಸ್ಟು ಪತ್ರಿಕೆಯ ಅಭಿಪ್ರಾಯವನ್ನು ಅವರು ಕೇಳಬಹುದು ಹಿಂದೆ ಇದ್ದ ಏಳು ರಿಜಿಮೆಂಟುಗಳು ಹೋಗಿ ಈಗ ೩ ರಿಜಮೆಂಟುಗಳಿವೆ ಇದರಲ್ಲಿರುವವರು ಸಹ ಬಹುಕಾಲವಾಗಿ ಬದ್ಧಿಯೆಂಬದನ್ನರಿತವರಲ್ಲವು. ಇವರನ್ನು ಕೂಡಾ ರೆಳ್ಳಿಹಾಕಬೇಕೆಂಬದೂ, ಒಳದೇಶದ ಬಂದೋಬಸ್ತಿಯನ್ನು ಸ್ವತಃ ಮಾಡಿಕೊಂಡು ಅವಶ್ಯಕ ಉಂಟಾದಾಗ ಬ್ರಿಟಿಷ್ ಗವರ್ನಮೆಂಟನವರಿಗೆ ಕುಮ್ಮಕ್ ಮಾಡುವದು ಬಿಟ್ಟು ಕಂದಾಯ ವಸೂಲಿಗೇನಾದರೂ ತೊಂದರೆ ಯುಂಟಾದರೆ ಆವಾಗ ಬ್ರಿಟಿಷ್ ಸೈನ್ಯವನ್ನು ಕರೆಯಿಸಬೇಕೆಂಬದೂ, ಯೋಗ್ಯವಲ್ಲವು. ಇದಲ್ಲದೆ ಈ ದೇಶದಲ್ಲಿ ಒಳ್ಳೇ ಕ್ಷಾತ್ರವುಳ್ಳ ಸೈನ್ಯವನ್ನು ಜಮಾಯಿಸುವ ವಿಷಯದಲ್ಲಿ ನವಾಬ್ ಹೈದರಲ್ಲೀಖಾನ್, ಟೀಪುಸುಲ್ತಾನ್, ಇವರು ಯೆಷ್ಟರಮಟ್ಟಿಗೆ ದ್ರವ್ಯ ವ್ಯಯಮಾಡಿದರೋ, ಯೆಷ್ಟರಪರವೂಪ್ ಮಾಡಿದರೋ ಆ ಅಂಶ ಹಿಂದಿನ ಕಾಗದಪತ್ರಗಳನ್ನು ನೋಡಿದವರಿಗೆ ತಿಳಿಯಬರಬಹುದು ಅದ್ಯಾಪಿ ಸೈನ್ಯದೊಳಿರುವ ಮಹರಾಷ್ಟ್ರರು, ಸಿಕ್ಕರು ಮುಸಲ್ಮಾನರು, ಇವರ ಮನೆತನವ ವಿಚಾರಿಸಿದರೆ ಕೆಲವುಮಟ್ಟಿಗೆ ಗಾವರೂ ವ್ಯಕ್ತವಾಗದೆ ಹೋಗಲಾರದು ಇನ್ನು ಇಲ್ಲಿನ ಅಂಚೇ ಇಲಾಖೆಯನ್ನು ಕುರಿತು ವಿಚಾರಿಸಿದಲ್ಲಿ ಪ್ರತ್ಯೇಕ ರೇಟುಗಳನ್ನು ಹಾಕಿಕೊಳ್ಳಲಿಕ್ಕೆ ಇಂಡ್ಯಗವರ್ನಮೆಂಟನವರು ಸಮ್ಮತಿಸದಿದ್ದರೆ ಅಂಚೇ ಇಲಾಖೆಯನ್ನು ಇಟ್ಟುಕೊಳ್ಳುವದರಿಂದ ಸಂಸ್ಥಾನಕ್ಕೆ ಲಾಭವುಂಟಾಗುವದಿಲ್ಲವು

THE DEWAN OF MYSORE'S DUSSERAH ADDRESS

ಈ ಸಂವತ್ಸರದ ಪ್ರಜಾಪ್ರತಿನಿಧಿ ಸಮಾಜವು ಪೂರ್ವಪದ್ಧತಿಯನ್ನನುಸರಿಸಿ ಕ್ರಮಪ್ರಕಾರ ಮಾಹೆ ಅಕ್ಟೂಬರ್ ೨೨ನೇ ತಾರೀಖು ಗುರುವಾರದದಿನ ಮಧ್ಯಾಹ್ನ ಮೈಸೂರಲ್ಲಿ ನೂತನ ನಿರ್ಮಿತವಾದ ಮೆಮೋರಿಯಲ್‌ಹಾಲ್ ಸೌಧದಲ್ಲಿ ನಡೆಯಿತು ಇದಕ್ಕೆ ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರಾದ ಮೆ॥ ಸಿ ಇ. ಆರ್. ಗರ್ಡಿಲ್‌ಸ್ಟೋನ್‌ಯವರು ಮುಂತಾದ ಯೂರೋಪಿಯನ್ ಮೊತ್ತಮನುಷ್ಯರೂ, ದಿವಾನರವರೂ ಮಹಾರಾಜರವರ ಕೌಂಸಿಲರ್‌ಗಳೂ, ಡಿ॥ ಜಾತಿ ಡೆಪ್ಯುಟಿ ಕಮ್ಮಿಷನರ್‌ಗಳೂ, ಸೆಷನ್‌ಜಡ್ಜಿಗಳೂ ದಿವಾನರವರ ಸೆಕ್ರೆಟರಿಗಳೂ ಇನ್ನು ಬಹುಮಂದಿ ಇತರ ಉದ್ಯೋಗಸ್ಥರೂ, ತಾಲ್ಲೂಕುಜಾತಿ ಪ್ರತಿನಿಧಿಗಳೂ ಬಂದಿದ್ದರು. ಇಂತಾ ಸಭಾಮಧ್ಯದಲ್ಲಿ ದಿವಾನರವರು, ಗತಸಂವತ್ಸರದಸಾಲಿಯಾನೇ ರಿಪೋರ್ಟನ್ನು ಇಂಗ್ಲಿಷ್‌ಭಾಷೆಯಲ್ಲಿಸಭಿಕರನ್ನುದ್ದೇಶಿಸಿ ಒಂದು ಘಂಟೆಯಕಾಲ ಓದಿದರು. ತರುವಾಯ ಅವರಿಂದ ಅನುಜ್ಞಪ್ತರಾದ ಅಂಡರ್

ಸೆಕ್ರೆಟರಿ ಮೊಗ್ರೂರ್ಣಯ್ಯನವರು ಸದರೀರಿಪೋರ್ಟನ್ನು ಕನ್ನಡ ಭಾಷೆಯೊಳು ಓದಿದರು. ಪ್ರತಿನಿಧಿಗಳಿಗೆ, ಸ್ವಾಭಿಪ್ರಾಯದ್ಯೋತನಾರ್ಥ ಸದರೀ ರಿಪೋರ್ಟಿನಪ್ರತಿಗಳು ಕೊಡಲ್ಪಟ್ಟವು. ಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಾಧ್ಯವಾದಲ್ಲಿ ಮತ್ತೊಂದು ಸಂದರ್ಭದೊಳು ತಿಳಿಸುವೆವು. ಏತನ್ಮಧ್ಯೆ ದಿವಾನರವರಿಂದ ಉಪಪಾದಿತವಾದ ರಿಪೋರ್ಟಿನ ಸಾರಾಂಶವನ್ನು ಇದರಡಿ ತಿಳಿಸುವೆವೆಂತನೆ.

ಈ ರಿಪೋರ್ಟಿನಲ್ಲಿ, ಮಹಾರಾಜಾ ಸರ್ಕಾರದವರು ಬ್ರಿಟಿಷ ಗವರ್ನಮೆಂಟಿನವರಿಗೆ ಕೊಡಬೇಕಾದ ಪಾಸ್ತೀ ಸಬಸಿಡಿಯನ್ನು ಕುರಿತು ಪ್ರಾಧಾನ್ಯೇನ ತಿಳಿಸಲ್ಪಟ್ಟದೆ. ಸನ್ ೧೮೮೧ನೇ ಇಸವಿಯಲ್ಲಿ ಬ್ರಿಟಿಷ್ ಗವರ್ನಮೆಂಟಿನವರಿಗೂ, ಮೈಸೂರು ಸಂಸ್ಥಾನದವರಿಗೂ ನಡೆದ ತಹನಾಮೆಯನ್ನನುಸರಿಸಿ ಇದುವರಿವಿಗೂ ಸಾಲೀಯಾನಾ ೨೪ ಲಕ್ಷ ಪ್ಯಾಲೀ ವರಹಾಗಳು ಕೊಡಲ್ಪಡುತಿವೆ. ಇದಲ್ಲದೆ ಸದರೀ ದಹಾನಾಮೆಯ ಷರತ್ತಿನಪ್ರಕಾರ ಇಂಗ್ಲಿಷಿನವರಿಗೆ ತಗಲುವ ಖಾಸ್ತೀಯುದ್ಧ ಖರ್ಚಿಗೆ ಸಹಾಯಕವಾಗಿ ಮೈಸೂರು ಸರ್ಕಾರದವರು ಕುಮ್ಮಕ್ ಮಾಡುವದಕ್ಕೆ ಬದ್ಧರಾಗಿದ್ದರು. ಬಳಿಕ ೧೮೮೨ನೇ ಇಸವಿಯಲ್ಲಿ ನಡೆದ ತಹನಾಮೆಯ ಬದಲಾವಣೆಯನ್ನನುಸರಿಸಿ ಬ್ರಿಟಿಷನವರಿಗೆ ಕೊಡಬೇಕಾದ ಪಾಸ್ತೀಖರ್ಚಿಗೆ ಬದಲಾಗಿ ಅವರ ಕುಮ್ಮಕ್ ಬಗ್ಗೆ ಸಮರ್ಥವಾದ ೪೦೦೦ ಸವಾರ್ ಪಾಗಾವನ್ನು ಇಟ್ಟುಕೊಳ್ಳತಕ್ಕದ್ದೆಂದು ವ್ಯವಸ್ಥೆಯಾಗಿತ್ತು. ೧೮೮೧ನೇ ಇಸವಿಯಲ್ಲಿ ಈ ರಾಜ್ಯವು ಮಹಾರಾಜರವರಿಗೆ ವಾಪಸ ಕೊಡಲ್ಪಟ್ಟ ಕಾಲದಲ್ಲಿ ಏರ್ಪಟ್ಟ ಕರಾರಿನ ಪ್ರಕಾರ ಸದರೀ ಸಂಖ್ಯೆಯು ಒಂದುಸಾವಿರಕ್ಕೆ ತಗ್ಗಿಸಲ್ಪಟ್ಟದು. ಪಾಗಾವಾ ಕಲ್ಪಿಸಲ್ಪಟ್ಟ ಸೈನಿಕರ ಬಿಲ್ಲಿಗೋಸ್ಕರ ಪಾಸ್ತೀಯಾಗಿ ಕೊಡಬೇಕಾದ ಹತ್ತೂವರೆ ಲಕ್ಷ ರೂಪಾಯಿಗಳು ಪೂರ್ವದ ಪೇಷಕಷನೊಡನೆ ಸೇರಿಸಲ್ಪಟ್ಟಿತು. ಪರಂತು ಯಾವಸಿರೀಕ್ಷಣೆಯೊಡನೆ ಇದು ಕೂಡಲು ಪಾಸ್ತೀ ಮಾಡಲ್ಪಟ್ಟಿತೋ ಅದಕ್ಕನುಗುಣವಾಗಿ ಈಗ ದೇಶವು ಉಪಪನ್ನವಾಗಿಲ್ಲವಾದ್ದರಿಂದ ಇಂಡ್ಯಾಗವರ್ನಮೆಂಟಿನವರು ತಾತ್ಕಾಲಿಕ ಸ್ಥಿತಿಯಂ ಪರಿಭಾವಿಸಿ ಪಾಸ್ತೀಯಾಗಿ ತೆಗದುಕೊಳ್ಳಬೇಕಾದ ಹತ್ತೂವರೆ ಲಕ್ಷ ರೂಪಾಯಿಗಳನ್ನು ಇನ್ನೂ ಹತ್ತು ಸಂವತ್ಸರಗಳ ತನಕ ನಿಲ್ಲಿಸಿರುವಬಗ್ಗೆ ಸ್ಟೇಟ ಸೆಕ್ರೆಟರಿಯವರಿಗೆ ಕೃಪಾಪೂರ್ವಕ ಮಾಡಿದ ಸಿಫಾರಸ್ಸಿನ ದೆಸೆಯಿಂದ ಸದ್ಯಃ ದಗಾದಾ ರೂಪವಾಗಿದ್ದ ಒಂದುಬಾಪ ವ್ಯವಸ್ಥೆಯಾಗಿ ಬೇಕಾದ ವ್ಯವಧಾನವು ಪ್ರುಂಟಾಗಿರುವದರಿಂದ ಇವರೊಳಗಾಗಿ ಸಂಸ್ಥಾನಕ್ಕೆ ಇರುವ ದಗಾದೆಯನ್ನು ಸುಲಭವಾಗಿ ತೀರಿಸಿ ಮುಂದೆ ಇದು ಕ್ರಮವಾಗಿ ಕೊಡುವದಕ್ಕೆ ತಾವು ಸಮರ್ಥರಾಗಬಹುದೆಂದು ನಿರೀಕ್ಷಿಸುವುತ ತಿಳಿಸಿದರು.

ಅನಂತರ ದಿವಾನರವರು ಗತಸಂವತ್ಸರದ ಆದಾಯ ವ್ಯಯಗಳನ್ನು ಬಾಬವಾರಾಗಿ ತಿಳಿಸಿ, ಒಟ್ಟು ೧,೦೨,೯೭,೪೫೪ ರೂಪಾಯಿಗಳ ಹುಟ್ಟುವಳಿಯೂ, ೯೯,೩೪,೫೭೬ ರೂ॥ ವ್ಯಯವೂ ಆಗಿರುವದರಿಂದ, ಮುಂದಿನಸಾಲಿನ ಬಜೆಟ್ ಅಂದಾಜನ್ನು ಸೂಚಿಸಿ, ಸ್ಟೇಟರೈಲ್ವೆಯ ವಿಷಯವಾಗಿ ಮಾಡಲುದ್ದೇಶಿಸಿರುವ ಏರ್ಪಾಡನ್ನು ವಿವರಿಸಿದರು. ರೈಲ್ವೆಯಮೂಲಕ ಗತ ಸಾಲಿನೊಳು ೩,೪೧,೭೨೪ ರೂಪಾಯಿಗಳ ಹುಟ್ಟುವಳಿಯೂ, ೨,೦೩,೦೩೩ ರೂಪಾಯಿಗಳ ವ್ಯಯವೂ ಆದವು. ಈ ಸಂವತ್ಸರದಲ್ಲಿ ನೂರಾರು ೨೪ ಲಕ್ಷರೂಪಾಯಿಗಳು ಈಚೆಗೆ ತೆಗದುಕೊಳ್ಳಲ್ಪಟ್ಟ ಏಂಜಿನ್ ಮುಂತಾದವುಗಳಬಗ್ಗೆ ಖರ್ಚಾಗಿರುತಿವೆ. ಮೈಸೂರು ಸ್ಟೇಟರೈಲ್ವೆಯು ೭೩ ಲಕ್ಷರೂಪಾಯಿಗಳಿಗೆ ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರಿಗೆ ಅಡವಾನಮಾಡಿ ಆಮೊಬಲಗನ್ನು ಬ್ರಿಟಿಷ ಗವರ್ನಮೆಂಟಿನವರಿಗೆ ೭೩ ಲಕ್ಷರೂಪಾಯಿಗಳ ಪ್ರಾಮಿಸ್ಸರಿಯುಕ್ತಾದ ಸಾಲಕ್ಕಾಗಿ ಕೊಡುವಂತೆಯೂ, ಮುಂದೆ ಇದನ್ನು ಬಿಡಿಸಿಕೊಳ್ಳುವಂತೆಯೂ, ಸ್ಟೇಟ ಸೆಕ್ರೆಟರಿಯವರಿಗೂ ದಕ್ಷಿಣ ರೈಲ್ವೆ ಕಂಪೆನಿಯವರಿಗೂ ನಡೆದಿರುವ ಷರತ್ತಿನಪ್ರಕಾರವೇ ಇದೂ ಕೊಡಲ್ಪಡುವದೆಂತಲೂ, ಅದರ ಲೆಕ್ಕ ವಗೈರೆಯ ತನಿಖೀ ಅಧಿಕಾರವನ್ನು ಈ ಗವರ್ನಮೆಂಟಿನವರೇ ಉಳಿಸಿಕೊಳ್ಳುವರೆಂತಲೂ, ಹರಿಹರದತನಕ ರಸ್ತೆ ಪೂರೈಸಿ ಆಮದ್ ರಫ್ತು ಅಭ್ಯಂತರವಿಲ್ಲದೆ ನಡೆಯುವದಕ್ಕೆ ಪ್ರಾರಂಭವಾದಮೇಲೆ ಸಂಸ್ಥಾನಕ್ಕೆ ಇದೇಆದಾಯರೂಪವಾಗಿಪರಿಣಮಿಸುವದೆಂತಲೂ, ತಿಳಿಸಿ ಕರ್ನಲ್ ಲಿಮೇಜೂರಿಯರ್‌ರವರು ಈದೇಶದ ನೌಕರಿಯಂಬಿಟ್ಟು ಹೋಗುವದಕ್ಕಾಗಿ ದಿವಾನರವರು ಗವರ್ನಮೆಂಟಿನವರ ತರಫೆ ಬಹಳವಾಗಿ ಅನುತಾಪಪಟ್ಟರು. ತರುವಾಯ ಕಾಲಸ್ಥಿತಿ, ರಿಲೀಫ ಕಾಮಗಾರಿಗಳು, ಇರಿಗೇಷನ್, ಕರೆಗಳ ರಿಪೇರಿ, ಮುಂತಾದ ಕೆಲವು ಸಾಮಾನ್ಯ ವಿಷಯಗಳನ್ನು ಕುರಿತು ದಿವಾನರವರು ವಿಚಾರ ಮಾಡಿ ಬಳಿಕ ತಾವು ಮುಂದೆ ಮಾತುವದಾಗಿರುವ ಕೆಲವು ವಿರ್ಮಾತುಗಳನ್ನುಕುರಿತು ಸೂಚಿಸಿದರೆಂತನ —

ಸಾಬಕ ದಿವಾನ್ ಮಸ್ಟರ್ ರಂಗಾಚಾರ್ಯರವರು ಯಾವದೋ ಒಂದುವಿಧ ಆದಾಯವನ್ನುದ್ದೇಶಿಸಿ ತೆಗದುಹಾಕಿದ ಡಿಸ್ಟ್ರಿಕ್ಟ ವ ತಾಲ್ಲೂಕುಗಳನ್ನು ಯಥಾಪ್ರಕಾರ ಏರ್ಪಡಿಸಬೇಕಾದ ಅವಶ್ಯಕತೆಯು ಪ್ರುಂಟಾಗಿರುತದೆ. ಈಗ ತೆಗದುಹಾಕಲ್ಪಟ್ಟತಾಲ್ಲೂಕುಗಳಿಂದ ಜನಗಳಿಗೆ ಪ್ರುಂಟಾದ ಅನಾನುಕೂಲ್ಯ ಸಿವಾ ಗವರ್ನಮೆಂಟಿನವರಿಗೆ ಏನೂ ಪ್ರಯೋಜನವಿಲ್ಲವು. ಚಿತ್ರದುರ್ಗ ಸಬ್‌ಡಿವಿಜನ್‌ಗೆ ಸೇರಿದ ತಾಲ್ಲೂಕುಗಳೆಲ್ಲವೂ ಸಿರಪಡ್ದ ಪ್ರಾಂತವಾಗಿಯೂ ದರೋಡೆ ಮುಂತಾದ ತಕ್ಸೀರುಗಳಿಗೆ ಉತ್ಪತ್ತಿ ಸ್ಥಾನವಾಗಿಯೂ, ಷಾಮಕ್ಕೆ ಜನ್ಮಭೂಮಿಯಾಗಿಯೂ ಇರುವದರಿಂದ ಅಲ್ಲಿನ ಸ್ಥಳಾದಳತದಬಗ್ಗೆಯೂ ಬಂದೋಬಸ್ತಿಯಬಗ್ಗೆಯೂ ಡಿಸ್ಟ್ರಿಕ್ಟ ಏರ್ಪಾಡು ಮಾಡಬೇಕಾಗಿರುತದೆ. ಹಾಸನ ಜಿ॥ ವಿಷಯಸಹ ಬದಸ್ತೂರ ಮುಂದೆವಿಮರ್ಶಿಸಲ್ಪಡಬೇಕಾದ್ದಾಗಿರುತದೆ. ಇವಲ್ಲದೆ ಮುಳವಳ್ಳಿ, ಅರಕಲಗೂಡು, ಮೂಲೂಡು, ಕಣಕುಪ್ಪ ವಗೈರೆ ತಾಲ್ಲೂಕುಗಳು ಯಥಾಪ್ರಕಾರ ನೆಲಗೊಳಿಸಲ್ಪಡುವವು, ಎಂಬದು. ಕಡೆಗೆ ಲೋಕಲ್‌ಬೋರ್ಡಿನ ರೆಗ್ಯುಲೇಷನ್, ರೆವಿನ್ಯೂ ಕೋಡು ಮಸೂದಿದಾ ಇವುಗಳು ಇಂಡ್ಯಾಗವರ್ನಮೆಂಟಿನವರ ಮಂಜೂರಾತಿಯಬಗ್ಗೆ ಕಳುಹಿಸಲ್ಪಟ್ಟಿರುವಂತೆಯೂ ಫಾರೆಸ್ಟ ವಿಷಯದಲ್ಲಿ ಸ್ಥಳ ಮಾಮೂಲ ಪ್ರಕಾರವೇ ನಡಿಸಲ್ಪಡುವದೆಂತಲೂ, ಸದರೀ ಇಲಾಖೆಯು ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ ಮತ್ತು ಪ್ಲಾಂಟೇಷನ್, ಎಂಬ ಹೆಸರುಳ್ಳ ಒಬ್ಬ ಅಧಿಕಾರಿಯ ಅಧೀನದೊಳಿಡಲ್ಪಟ್ಟು, ಅವರಹುಮ್ಮಕ್‌ಬಗ್ಗೆ ಈಗ ದೆಹರಾಡೂನಿಗೆ ಹೋಗಿರತಕ್ಕ ಮೂವರು ವಿದ್ಯಾರ್ಥಿಗಳು ಅಸಿಸ್ಟೆಂಟ ಕನ್ಸರ್ವೇಟರ್‌ಗಳಾಗಿ ನೌಕರರಾಗ್ಮಿವಲ್ಪಡುವರೆಂತಲೂ, ಷಾಮುಕಾಲದಲ್ಲಿ ಡಿಸ್ಟ್ರಿಕ್ಟ ಅಧಿಕಾರಿಗಳ ನಡವಳಿಕೆಯಬಗ್ಗೆ ಒಂದು ಫ್ಯಾಮಿನ್‌ಕೋಡು ಮಾಡಲ್ಪಡುವದೆಂತಲೂ, ಕಾಲ್ನಡೆಗಳಿಗೆ ಸರ್ಕಾರದಲ್ಲಿಯೂ ಮೇವು ದೊರೆಯತಕ್ಕ ಬಗ್ಗೆ ತಕ್ಕ ಏರ್ಪಾಡು ಮಾಡಲ್ಪಡುವದೆಂತಲೂ ತಿಳಿಸಿ, ಸಂಸ್ಥಾನದ ಅಂಚೇ ಇಲಾಖೆಯನ್ನು ಇಟ್ಟುಕೊಂಡಿರುವದರಿಂದ ಉಂಟಾಗುವನುಕ್ಸಾನನ್ನು ಭಾವಿಸಿದರೆ ಅದನ್ನು ನಿವೃತ್ತಿ ಮಾಡಿಕೊಳ್ಳುವದು ಯೋಗ್ಯವಾಗಿರುತಿದೆಯಾಗಿ ಈವಿಷಯದೊಳು ಪೋಸ್ಟಮಾಸ್ಟರ್ ಡೈರೆಕ್ಟರ್ ಜನರಲ್‌ರವರಿಗೂ ಮೈಸೂರು ಸರ್ಕಾರದವರಿಗೂ ಕಾಗದಪತ್ರಗಳು ನಡೆಯುತಲಿರುವದರಿಂದ ಇದು ವ್ಯವಸ್ಥೆಯಾಗುವದರೊಳಗಾಗಿ ಈ ಮೀಟಿಂಗ್‌ನೊಳು ಮರಳಿ ವಿಚಾರಮಾಡಲ್ಪಡುವದೆಂದುಸೂಚಿಸಿದರು. ಕಡೆಗೆ ಪ್ರತಿನಿಧಿಗಳ ಚುನಾವಣೀ ಸ್ವಾತಂತ್ರ್ಯವನ್ನು ಮುಂದೆ ಏರ್ಪಡತಕ್ಕ ಆಯಾಪ್ರದೇಶದ ಲೋಕಲ್‌ಫಂಡ ಬೋರ್ಡಿನವರಿಗೆ ಪ್ರುಂಟುಮಾಡುವಂತೆ ವಾಗ್ದಾನಮಾಡಿ ಪ್ರತಿನಿಧಿಗಳು ಈಸಭೆಯ ವಿಷಯದಲ್ಲಿ ತೋರಿಸತಕ್ಕ ಶ್ರದ್ಧೆಯು, ಮಹಾರಾಜಾ ಸರ್ಕಾರದವರಿಗೆ ಬಹಳ ಉಲ್ಲಾಸವನ್ನುಂಟುಮಾಡತಕ್ಕವಾಗಿರುವದರಿಂದ ಅದು ಮುಂದಿನ ಅವರ ಪ್ರಯತ್ನಗಳಿಗೆ ಸಹಕಾರಿಯಾಗಿರುವದೆಂದೆಣಿಸಿ ಅವರ ತರಫೆ ತಾವು ಪ್ರತಿನಿಧಿಗಳಿಗೆ ವಂದನಮಾಡುವಂತೆ ವ್ಯಕ್ತಪಡಿಸಿದರು,

ಮೇಲೆಕಂಡ ರಿಪೋರ್ಟನ್ನು ನಾವು ನೋಡಲಾಗಿ ದಿವಾನರವರು ಈ ದೇಶದ ಅಭಿವೃದ್ಧಿಯೊಳು ಸಂಪೂರ್ಣ ಅಕ್ಕರೆ ಯುಳ್ಳವರಾಗಿದಾರೆಂಬ ಅಂಶ ಮೇಲೆಕಂಡ ಇವರವ್ರಸಂಗದಿಂದ ವ್ಯಕ್ತವಾಗದಿರುವದಿಲ್ಲವು.

Occasional Notes
ನೈಮಿತ್ತಿಕವಿಷಯನ್ಯಾಸ

A munificent contribution.—ಹಿಂದ್ಯವೇಶದ ಸಂಸ್ಥಾನಾಧಿಪತಿಗಳ ಮತ್ತು ಪ್ರಮುಖರವಕ್ಕಳ ಅಭಿವೃದ್ಧಿಗಾಗಿ ಪಂಜಾವಕಹರನೊಳು ಈಚಗೆ ಸ್ಥಾಪಿಸಲ್ಪಟ್ಟ ಪ್ರಮುಖರಪಾಠಶಾಲೆಗೆ ಪತಿಯಾಲಾ ಮಹಾರಾಜರವರು ೫೦,೦೦೦ ರೂಪಾಯಿಗಳು ಉಚಿತವಾಗಿಕೊಟ್ಟರು. ಇವಕ್ಕೆ ಕಪುರ್ತಲಾ ಮಹಾರಾಜರವರು ೨೦,೦೦೦ ರೂಪಾಯಿಗಳತನಕ ತಾವು ಸಹಾಯಮಾಡುವಂತೆ ವಾಗ್ದಾನಮಾಡಿದರೆಂದು ತಿಳಿಯಬರುತಿದೆ. ಇದಲ್ಲದೆ ಪಂಜಾಬ್‌ದೇಶದ ಪ್ರಮುಖರೂ ದೊಡ್ಡ ಮನುಷ್ಯರೂ ಏತದರ್ಥ ಧನಸಹಾಯ ಮಾಡಬಹುದೆಂದು ನಿರೀಕ್ಷಿಸಲ್ಪಟ್ಟಿರುವಂತೆ ಕೇಳಲಿಕ್ಕೆ ನಾವು ಬಹಳ ಸಂತೋಷಿಸುವೆವು.

A liberal donation.—ತಾಕಾಸಂಸ್ಥಾನದ ನವಾಬರವರು ಹಿಂದೂ ಸ್ತ್ರೀಯರ ವೈದ್ಯಶಾಸ್ತ್ರಾಭ್ಯಾಸದ ಕುಮ್ಮಕ್‌ಬಗ್ಗೆ ಲಾರ್ಡ ಡಫ್ರಿನ್‌ರ ಧರ್ಮಪತ್ನಿಯವರಿಂದ ಈಗ ಏರ್ಪಡಿಸಲ್ಪಟ್ಟಿರುವ ಫಂಡಿಗೆ ೧೦,೦೦೦ ರೂಪಾಯಿಗಳ ತನಕಸಹಾಯ ಮಾಡುವದಾಗಿದ್ದಾರೆಂತಲೂ, ಬಂಗಾಳೆಯ ಪ್ರವಾಹದಿಂದ ನಷ್ಟಪಟ್ಟವರ ಸಹಾಯಾರ್ಥ ಏರ್ಪಟ್ಟಿರುವ ಫಂಡಿಗೆ ಮೇಲೆಕಂಡಂತೆ ಕುಮ್ಮಕ್ ಮಾಡಿದ ನವಾಬಗಳ ಔದಾರ್ಯಗಳಿಗಾಗಿ ಲೆಫ್ಟಿನೆಂಟ ಗವರ್ನರವರು ಸಂತೋಷಿಸಿ ಅವರಿಗೆ ತಮ್ಮ ವಂದನವನ್ನು ಪತ್ರಿಕಾಮೂಲಕ ತಿಳಿಯಪಡಿಸಿದರೆಂತಲೂ ತಿಳಿಯಬರುತಿದೆ. ಸ್ವಪ್ರತಿಷ್ಠೆಗೋಸ್ಕರವಾದರೂ ಈರೀತಿ ದ್ರವ್ಯ ವ್ಯಯ ಮಾಡತಕ್ಕವರು ಉತ್ತರದೇಶದಲ್ಲಿ ಬಹುಮಂದಿ ಇರುತ್ತಾರೆ

Human sacrifice.—ಈಗ್ಯೆಕೆಲವುದಿನಗಳ ಹಿಂದೆಬಸ್ತಾರ್ ಮಹಾರಾಜರವರಿಗೆ ಪುತ್ರೋತ್ಸವವಾದ ವಿಶೇಷಸಂದರ್ಭಕ್ಕಾಗಿ ಕಳೆದ ದಸರಾಹಬ್ಬದಲ್ಲಿ ದಂತೇಶ್ವರಿಯೆಂಬದೇವತೆಗೆ ನರಬಲಿಕೊಡುವದಕ್ಕಾಗಿ ಮನುಷ್ಯರನ್ನು ಹಿಡದುಕೊಂಡು ಹೋಗುತಲಿದ್ದ ಅಂಶ ವಿಶಾಖಪಟ್ಣ ಡಿಸ್ಟ್ರಿಕ್ಟ ಕಲೆಕ್ಟರವರಿಗೆ ತಿಳಿಯಬರಲು ಅವರು ಸದರೀ ವಿಷಯವನ್ನು ಮದರಾಸ ಗವರ್ನಮೆಂಟಿನವರಿಗೆ ತಿಳಿಸಿದರು. ಗವರ್ನಮೆಂಟಿನವರು, ಅರಸರಬಳಿಗೆ ಹೋಗಿ ಇಂತಾ ದುರ್ವ್ಯಾಡಿಕೆಗೆ ಅವಕಾಶಕೊಡಕೂಡದೆಂದು ತಿಳಿಸುವಂತೆ ಕಲೆಕ್ಟರವರಿಗೆ ಹುಕುಂಮಾಡಿದಾಗ್ಯೂ, ರೋಗಪೀಡಿತರೂ, ಸಂತಾನವಿಲ್ಲದವರೂ, ದೇವತೆಗಳಿಗೆ ಬಲಿಕೊಡುವಂತೆ ಹರಿಕೆಮಾಡಿಕೊಳ್ಳುವದುಸಾಧಾರಣವಾದ್ದಾಗಿರುತಿದೆ. ನರಬಲಿಕೊಡುವದಕ್ಕೆ ಬದಲುಕೋಳಿಕುರಿಗಳನ್ನು ವಿಶೇಷವಾಗಿ ಕೊಲ್ಲುತಲಿದ್ದಾರೆ. ಅನ್ಯಾಯವಾಗಿ ಕೋಳಿ ಕುರಿಗಳನ್ನು ಬಲಿಕೊಡುವದಕ್ಕಿಂತಲೂ ಮತ್ಯಾವನಿಧದಿಂದಲಾದರೂ ಇಷ್ಟದೇವತೆಯನ್ನು ತೃಪ್ತಿಗೊಳಿಸಬಾರದೆ? ಇಂತಾ ಲೋಕಮೌಢ್ಯವು ಅತ್ಯಂತಿಕವಾಗಿ ಹೋಗಲಿಕ್ಕೆ ಇನ್ನೆಷ್ಟುಕಾಲಬೇಕಾಗುವದೋ, ತಿಳಿಯಲಾರೆವು.

Nepotism in the Army.—ಪೂರ್ವದಲ್ಲಿದ್ದ ಅಕ್ಬರ್ ಮೊದಲಾದ ಮೊಗಲಾಯಿ ಸಂಸ್ಥಾನಾಧಿಪತಿಗಳು ಕೆಲವರು ತಮಗೆ ಅನುಭವಿಗಳಾದವರಿಗೆಲ್ಲ ತಮ್ಮ ಸೈನ್ಯದಲ್ಲಿ ಉದ್ಯೋಗಗಳನ್ನು ಕೊಡುತಬಂದರೆ ಮಹದನರ್ಥ ಕಾರಣವೆಂದುಭಾವಿಸಿದ್ದರು. ಇದಕ್ಕೆ ಪ್ರತ್ಯಕ್ಷವಿರುದ್ಧವಾಗಿ ಸದರೀ ಮತಾವಲಂಬಿಗಳಲ್ಲೊಬ್ಬರಾದ ಮತ್ತು ಕಾಬೂಲ್ ಅಮೀರರವರಾದ ಅಬ್ದುಲ್‌ರಹಿಮಾನರವರು ತಮ್ಮ ಬಂಧುಗಳಪೈಕಿ ಅನೇಕರಿಗೆ ಸೈನ್ಯದೊಳು ದೊಡ್ಡ ಉದ್ಯೋಗಗಳನ್ನು ಕೊಟ್ಟದ್ದಾರೆಂದು ತಿಳಿಯಬರುತಿದೆ. ಇದಲ್ಲದೆ ತಮ್ಮಪ್ರಜೆಗಳು ಅವರವರಅಹವಾಲ್‌ಗಳನ್ನು ಅರ್ಜಿಗಳ ಮೂಲಕ ತಮಗೆ ತಿಳಿಯಪಡಿಸತಕ್ಕಬಗ್ಗೆ ಪಿಟೀಷ ಬಾಕ್ಸಯೆಂಬ ಒಂದು ಪೆಟ್ಟಿಗೆಯನ್ನು ತಯಾರ್ಮಾಡಿಸಿ, ಅದರಲ್ಲಿ ಅರ್ಜಿಗಳನ್ನು ಹಾಕತಕ್ಕದ್ದೆಂದು ಹುಕುಂಮಾಡಿರುವಂತೆ ತಿಳಿಯಬರುತಿದೆ. ಇಂತಾಪೆಟ್ಟಿಗೆಗಳು ಮದರಾಸ ರೆವಿನ್ಯೂ ಬೋರ್ಡ ಆಫೀಸ ಬಾಗಿಲಲ್ಲೂ ಗವರ್ನಮೆಂಟ ಆಫೀಸಬಾಗಿಲಲ್ಲೂ ಆಯಾ ಇಲಾಖಾ ಬಾಗಿಲಲ್ಲೂ ಇಡಲ್ಪಟ್ಟಿರುತಿವೆ. ಪರಂತು ಇದರಿಂದಯಾವ ಪ್ರಯೋಜನವೂಕಂಡುಬರುತದಿಲ್ಲವು ಇಂಗ್ಲಿಷನವರ ಪ್ರಭುತ್ವದಲ್ಲಿಯೇ ಈರೀತಿಯಾಗಿದುವಲ್ಲಿ ಅಮೀರರವರ ಪ್ರಭುತ್ವದೊಳು ಇನ್ನು ಹ್ಯಾಗಿರುವದೋ ತಿಳಿಸಬೇಕಾದುದಿಲ್ಲವು. ಸಮಯಬಂದರೆ ಜಾನ್ ಪಿಟರ್ಸ್‌ಕುಜಲಾವಾಲೋ ಎಂದು ಕೇಳಬಹುದೆಂಬದಾಗಿ ಮದರಾಸಆಂಧ್ರಪ್ರಕಾಶಿಕೆಯೆಂಬ ಪತ್ರಿಕೆ ತಿಳಿಸುತಿದೆ. ಜನಗಳ ಫಿರ್ಯಾದ್‌ಗಳಿಗೆ ನಿಗೇಕೊಡಲ್ಪಡದ ರಾಜ್ಯವೆಂದಿಗೂ ತಲೆಬುಡಿಗೆ ಬರಲಾರದು. ರಾಜ್ಯದ ನಾಶನಕ್ಕೆ ಆ ವ್ಯೆರಲ್ಲಿದೂ ಒಂದುಕಾರಣವಾಗಿ ಏರ್ಪಡುತಿದೆ.

The Native Princes of India.—ಈಗ ಇಂಡ್ಯಾದೇಶದಲ್ಲಿರುವ ನೇಟಿವ್ ಸಂಸ್ಥಾನಗಳೊಳು ಪ್ರಸಿದ್ಧವಾದ ತಿರುವಾಂಕೂರು, ಮೈಸೂರು, ಹೈದರಾಬಾದ್, ಬರೋಡಾ, ಕಾಶ್ಮೀರ, ಈ ಸಂಸ್ಥಾನಾಧಿಪತಿಗಳು ಪ್ರೌಢವಯಸ್ಕರಾಗಿರುವಂತೆ ತಮಸ್ಥಿತಿಸಿದ್ಧಕ್ಕಾಗಿ ಬಹಳ ಸಂತೋಷಿಸಬೇಕಾಗಿದೆ. ಸದರೀ ಸಂಸ್ಥಾನಾಧಿಪತಿಗಳು ಲೋಕಾನುಭವವಿಲ್ಲದವರಾಗಿಯೂ, ರಾಜ್ಯನಿರ್ವಹಣದಲ್ಲಿ ಅಸಮರ್ಥರಾಗಿಯೂ ಇದ್ದಾಗ್ಯೂ ಅವರದಿವಾನ್‌ಗಳು ತಿಳುವಳಿಕೆಯುಳ್ಳವರಾಗಿಯೂ, ಅನುಭವಶಾಲಿಗಳಾಗಿಯೂ ಇರುತ್ತಾರೆ. ಹೀಗೆ ಇವರುಗಳು ಇದ್ದಾಗಿರುವದರಿಂದ ಸದರೀ ಸಂಸ್ಥಾನಾಧಿಪತಿಗಳು ತಮ್ಮರಾಜ್ಯವನ್ನವರಸ್ವಾಧೀನಮಾಡಿ ನೃತ್ಯಗೀತ ವಾದ್ಯ ಮೃಗಯಾವಿನೋದಗಳಲ್ಲಿ ಆಸಕ್ತರಾಗಿ ರಾಜ್ಯಕೋಶದ ಚಿಂತೆಯೇಇಲ್ಲದವರಾಗಿರುತ್ತಾರೆ ಸದರೀ ಸಂಸ್ಥಾನಗಳ ದಿವಾನ್‌ಗಳು ಸಮರ್ಥರಾದಾಗ್ಯೂ ತಮ್ಮ ಅರಸರ ಚಿತ್ತವೃತ್ತಿಯನ್ನರಿತುಕೊಂಡು ಅವರಿಗೆ ಅಪೇಕ್ಷಿತಗಳಾದ ವಿಷಯಗಳಿಂದ ಅವರು ತೃಪ್ತಿಗೊಳಿಸುತ ಮಿಕ್ಕವಿಷಯಗಳೊಳು ತಮ್ಮ ಇಷ್ಟಾನುಸಾರ ವರ್ತಿಸತಕ್ಕವರಾಗಿದಾರೆ. ದಿವಾನ್‌ಗಳಿಗೆ ಈ ರೀತಿ ಮನಸ್ವೀ ವರ್ತಿಸುವಂತೆ ಸ್ವಲ್ಪವೂ ಅವಕಾಶ ಕೊಡಕೂಡದು. ಅರಸರಾದವರು ಯಾವಾಗಲು ತಮ್ಮ ದಿವಾನರಮೇಲೆ ದೃಷ್ಟಿ ಇಟ್ಟಿರಬೇಕಾದ್ದು ಅವರ ಕರ್ತವ್ಯವಾಗಿರುತಿದೆ. ಅರಸರು, ಯಾವಕಾರ್ಯವನ್ನಾಗಲಿ ತಮ್ಮ ಅನುಮತಿಯಿಲ್ಲದೆ ದಿವಾನರು ಮಾಡುವದಕ್ಕೆ ಅವಕಾಶವನ್ನುಂಟುಮಾಡಕೂಡದು. ಆದರೆ ಕೇವಲ ಸಾಮಾನ್ಯವಿಷಯದೊಳೆಲ್ಲ ತಾವು ಪ್ರವೇಶಿಸುವದುಚಿತವಲ್ಲವು. ಹಾಗೆಮಾಡಿದರೆ ಅವರ ವಿರಸಕ್ಕೆ ಕಾರಣವಾಗುವದಲ್ಲದೆ ತನ್ಮೂಲಕ ಮಹದನರ್ಥಕ್ಕೆ ಆಸ್ಪದವಾಗುವದು. ಮೇಲೆ ತಿಳಿಸಲ್ಪಟ್ಟ ಸಂಸ್ಥಾನಗಳಪೈಕಿ ಮೈಸೂರುರಾಜ್ಯವು ಒಳ್ಳೆಯಸ್ಥಿತಿಯಲ್ಲಿರುತಿದೆ. ಮತ್ತು ಅದರ ಪಾಲನಾಕ್ರಮವೂ ತೃಪ್ತಿಕರವಾಗಿದೆ ಸದರೀ ಸಂಸ್ಥಾನವು ಗತ ಐವತ್ತುಸಂವತ್ಸರಗಳ

ಕಾಲ ಬ್ರಿಟಿಷರವರ ಅಧೀನದೊಳಿದ್ದದ್ದೇ ಈಗಿನಉತ್ತಮಸ್ಥಿತಿಗೆ ಕಾರಣವೆನ್ನಬಹುದು ಈಗ ಮೆ|| ಶೇಷಾದ್ರಿಅಯ್ಯರವರು ಅಲ್ಲಿನ ದಿವಾನರಾಗಿರುತ್ತಾರೆ. ಹೈದರಾಬಾದ್ ಸಂಸ್ಥಾನವು ಒಳ್ಳೆಯಸ್ಥಿತಿಯೊಳರಲಿಕ್ಕೆ ಗತಿಸಿದ ಸರ್. ಸಾಲಾರ್ ಜಂಗರವರೇ ಕಾರಣಭೂತರಾಗಿರುತ್ತಾರೆ. ಅವರು ಗತಿಸಿದಾಗ್ಯೂ ಅವರ ಕುಮಾರರೇ ತತ್ಸ್ಥಾನಾಪನ್ನರಾಗಿ ಏರ್ಪಟ್ಟಿರುವದರಿಂದ ಯಾವವಿಧ ಬದಲಾವಣೆಗೂ ಅವಕಾಶ ವಿರುವದಿಲ್ಲವು ಈಗ ಸದರೀ ರಾಜ್ಯಕ್ಕೆ ಬಲೀಯ್ಯವಾದ ಒಂದು ಮಂತ್ರಾಲೋಚಕ ಸಭೆ ಯೇರ್ಪಟ್ಟಿರುತಿದೆ. ಇದಕ್ಕೆ ನಿಜಾಮರವರೇ ಅಗ್ರಾಸನಾಧಿಪತಿಯಾಗಿರುತ್ತಾರೆ. ಮೈಸೂರಲ್ಲಿಯೂ ಇಂತಾ ಸಭೆಯೊಂದೇರ್ಪಡಿಸಲ್ಪಟ್ಟಿರುತಿದೆ. ಕಾಶ್ಮೀರ ಮಹಾರಾಜರವರ ದಿವಾನರವರಾದ ಅನಂದರಾಂ ಎಂಬವರ ಶೀಲಸ್ವಭಾವಗಳನ್ನು ನಾವರಿತವರಲ್ಲವಾಗಿ ಅವರ ಆಡಳಿತಕ್ರಮವು ಹ್ಯಾಗಿದೆಯೋ ತಿಳಿಯಲಿಲ್ಲವು. ಅಲ್ಲಿನ ಮಹಾರಾಜರವರಿಗೆ ಈಚೆಗೆ ಪಟ್ಟಾಭಿಷೇಕವಾಯಿತು. ಸದರೀ ಮಹಾರಾಜರವರು ತಮ್ಮ ಪಟ್ಟಾಭಿಷೇಕೋತ್ಸವಕಾಲದಲ್ಲಿ ಪ್ರಜಾಸೌಖ್ಯವನ್ನುದ್ದೇಶಿಸಿ ಯೋಗ್ಯಗಳಾದ ಅನೇಕ ಬದಲಾವಣೆಗಳನ್ನು ಮಾಡುವದಾಗಿರುವುತೆ ತಿಳಿಯಪಡಿಸಿದರು. ಇದರಿಂದ ಮುಂದೆ ಅವರ ಪಾಲನಾಕ್ರಮವು ಸರ್ವಜನ ಸಮ್ಮತವಾಗಿರಬಹುದೆಂದು ನಂಬುತ್ತೇವೆ. ತಿರುವಾಂಕೂರಿನಲ್ಲೀಗ ಆನರೇಬಲ್ ಮೆ|| ರಾಮಯ್ಯಂಗಾರ್ಯರವರು ದಿವಾನರಾಗಿರುತ್ತಾರೆ. ಅವರ ದಿವಾನಗಿರಿಗೊಳಪಟ್ಟರಾಜ್ಯವು ಕ್ಷೇಮವಾಗಿರುವದೆಂಬವರೊಳು ಸಂದೇಹಿಸಬೇಕಾದ ಕಾರಣವಿಲ್ಲವು ಕೇವಲ ದನಾಬಾಧ್ಯರಾದ ಹೋಲ್ಕರ್ ಮಹಾರಾಜರು ಸಹ ಪ್ರಜೆಗಳಿಗೆ ಮೇಲನ್ನುಂಟುಮಾಡುವದಕ್ಕೆ ಕಂಕಣಬದ್ಧರಾಗಿರುವಂತೆ ತಿಳಿಯಬರುತಿದೆ. ನೇಟಿವ್‌ಸಂಸ್ಥಾನಗಳು ಇಂತಾ ಉತ್ತಮಸ್ಥಿತಿಯೊಳಿರುವದು ಬಹಳ ಸಂತೋಷಕರವಾದ ಅಂಶವಾಗಿರುತಿದೆ. ಈಗಿನವರಿಗೆ ಹಿಂದೆ ಬಾಲಕರಾಗಿದ್ದವರು ಸಹ ಅನೇಕಾಂಶಗಳನ್ನು ತಿಳಿಸಿದರು. ಪರಂತು ಅವರು ಆರೀತಿನೆರವೇರಿಸಿದವರಲ್ಲವು ಅವರರಿಂದ ಈಗಿನವರು ತಮ್ಮ ವಾಗ್ದಾನವು ನೆರವೇರಿಸಬೇಕೆಂದು ಕೋರುವೆವು, ಎಂದು ಮುಂತಾಗಿ ಮದರಾಸ್ ಹಿಂದೂಪತ್ರಿಕೆಯು ಸಾಮಾನ್ಯಾತಾರೇಣ ನೇಟಿವ್ ಸಂಸ್ಥಾನಗಳನ್ನೆಲ್ಲ ಪ್ರಶಂಸಿಸುತಿದೆ. ನೇಟಿವ್ ಸಂಸ್ಥಾನಗಳ ಏಳಿಸ್ಥಿತಿಯಂಪರ್ಯಾಲೋಚಿಸತಕ್ಕ ಅನುಭವಶಾಲಿಗಳಾದವರು ಹೇಳಿಕೆಂಡ ಅಭಿಪ್ರಾಯವನ್ನಮ್ಮುಮಟ್ಟಿಗೆ ಅಂಗೀಕರಿಸುವರೋ ನಾವರಿಯೆವು ಈಗಿನ ನೇಟಿವ್ ಸಂಸ್ಥಾನಾಧಿಪತಿಗಳಿಗೆ ವಿಶೇಷ ಕೀರ್ತಿ ಪ್ರಾಪ್ತ್ಯಗಳುಂಟಾಗುವದಕ್ಕೂ, ಪೂರ್ವಿಕರು ಅಸಮರ್ಥರೆಂಬ ಭಾವ ತೋರುವದಕ್ಕೂ, ಇಂಗ್ಲಿಷ್ ವಿದ್ಯಾಭ್ಯಾಸವೇ ಕಾರಣವಾಗಿರುತಿದೆ. ಇಂತಾ ವಿದ್ಯಾಭ್ಯಾಸದಿಂದ ಅವರಿಗೆ ಮತ್ತಾವವಿಧ ಉತ್ತಮ ಪ್ರಯೋಜನಗಳುಂಟಾಗದಿದ್ದರೂ ತತನುಗುಣವಾದ ಅಭಿರುಚಿಗಳುಮಾತ್ರ ಉಂಟಾದವು. ಸದರೀ ಅಭಿರುಚಿಯೆಂಬದು ಆತ್ಮಸಂಬಂಧವಾದ ಸಕಲವಿಷಯಕ್ಕೂ ಸೇರಿದ್ದಾಗಿರುತಿದೆ ಇಂತಾ ವಿಷಯಾಸಕ್ತಿಯೂ, ತತ್ಪ್ರಯುಕ್ತವಾದ ಆನಂದವೂ ಸದರೀ ಸಂಸ್ಥಾನಾಧಿಪತಿಗಳನ್ನಾವರಿಸಿಕೊಂಡಿರುವದರಿಂದ ಅವರಿಗೆ ಇತರವಿಷಯಗಳಾವದೂ ದೃಕ್ಗವಾಗುವದಿಲ್ಲವು ಇಂತಾ ಅನುಕೂಲವಾದ ಸಂದರ್ಭವನ್ನು ಬೇಕಾದಂತೆ ಉಪಯೋಗಿಸಿಕೊಳ್ಳದೆಹೋದರೆ ಮೇಲೆ ತಿಳಿಸಲ್ಪಟ್ಟಂತೆ ದಿವಾನರುಗಳು ಹ್ಯಾಗೆ ಸಮರ್ಥರೆನ್ನಿಸಿಕೊಳ್ಳುವರು ? ಅವರು ತಮಗೆ ಬೇಕಾದ ಒಂದೆರಡುವೃತ್ತಾಂತಪತ್ರಿಕೆಗಳ ಪ್ರಶಂಸೆಗೆ ಹ್ಯಾಗೆ ಪಾತ್ರರಾಗುವರು ? ದೇಹವು ನಶ್ವರವಾದ್ದರಿಂದ ಇಂತಾ ಅನರ್ಘಕಾಲವನ್ನು ವ್ಯರ್ಥಗೊಳಿಸುವದುಚಿತವಲ್ಲವೆಂದು ಭಾವಿಸಿ, ಯಲ್ಲದರಲ್ಲಿಯೂ ಅತ್ಯಾತುರರಾಗಿರುವಂತೆ ಕಾಣುತಿದೆ. ಆದರಿಷ್ಟಾರ್ಥವಾದ ಈ ವಿಷಯವನ್ನುಕುರಿತು ಚಿಂತಿಸಿ ಪ್ರಯೋಜನವಿಲ್ಲವು.

A word of advice — ರಾಜಾ ಸರ್. ಟಿ. ಮಾಧವರಾಯರವರು ಇದರಡಿ ಕಂಡ ಒಂದು ಹಿತೋಕ್ತಿಯನ್ನು ಸ್ವದೇಶೀಯರಿಗೆಲ್ಲ ತಿಳಿಸುತ್ತಾರಾಗಿ ಅದನ್ನಿದರಡಿ ನಾವು ಉತ್ಸಾಹದೊಡನೆ ಪ್ರಕಟಿಸುವೆವು. ಅದೇನಂದರೆ, ಗೌರವ್ಯರಾಗಿರುವ ಮತ್ತು ವಿದ್ಯಾವಂತರಾಗಿರುವ ನೇಟಿವ್‌ಗಳುಸಹ ಕೆಲವು ಸಂದರ್ಭಗಳಲ್ಲಿ ಮತ್ತೊಬ್ಬರೊಡನೆ ದೇಶಭಾಷೆಯೊಳು ಮಾತನಾಡುತಿರುವಾಗ್ಯೆ ಕೇವಲ ಅನುಚಿತಗಳಾದ ಶಬ್ದಗಳನ್ನುಪಯೋಗಿಸುತ್ತಾರೆ ಅಂತಾ ಮಾತುಗಳನ್ನಿಲ್ಲಿ ಅನುವಾದಿಸಲಿಕ್ಕೆ ನನಗೆ ಇಷ್ಟವಿಲ್ಲವು. ಮನುಷ್ಯರನ್ನೂ ಪದಾರ್ಥಗಳನ್ನೂ ದೂಷಿಸಬೇಕಾದಲ್ಲಿ ಅವುಗಳು ಸಾಮಾನ್ಯವಾಗಿ ಉಪಯೋಗಿಸಲ್ಪಡುತಿವೆ ಪದಾರ್ಥಗಳಿಗೆ ಅಕ್ಕತೆಂಗಿಯರಿಲ್ಲದಿದ್ದರೂ ಅವುಗಳಿಗೆ ಸದರೀ ಮಾರುಗಳು ಲಿನ್ನಯಸಲ್ಪಡದಿರಲಿಲ್ಲವು. ಇಂತಾ ಅನುಚಿತ ಶಬ್ದಗಳು ಬಾಲ್ಯಾಭ್ಯಾಸದಿಂದ ಅಪ್ರಯತ್ನ ಪೂರ್ವಕವಾದ ಯಾವದಾದರೊಂದುಬಗೆ ಬಾಷ ಮನದೊಳು ತೋರಿದರೆ ಆಗ ಇವು ಉಪಯೋಗಿಸಲ್ಪಡುತಿವೆ. ದೌರ್ಭಾಗ್ಯವಶಾತ್ ಉಂಟಾದಂತಾ ಈ ದುರಾಚಾರವುಳ್ಳ ನೇಟಿವ್ ದೊಡ್ಡಮನುಷ್ಯರೆಲ್ಲರೂ ಸಾಧ್ಯವಾದ ವ್ವರೆಯೊಳು ಸದರೀ ದುಷ್ಟಪದ್ಧತಿಯನ್ನು ಹೋಗಲಾಡಿಸಿಕೋಳ್ಳಲಿಕ್ಕೆ ಪ್ರಯತ್ನಪಡುವರೆಂದು ನಂಬುತ್ತೇನೆ. ಇಂತಾ ವಾಡಿಕೆಯು ಜನಗಳಿಗೆ ಅಲ್ಪಜನ ಸಹವಾಸದಿಂದುಂಟಾಗತಕ್ಕದ್ದಾಗಿರುತಿದೆ, ಎಂಬದು. ರಾಯರವರ ಬುದ್ಧಿವಾದವು ಅವಶ್ಯ ಅನುಸರಿಸತಕ್ಕದ್ದಾಗಿರುತಿದೆ ಇವರು ತಿಳಿಸುವಂತೆ ಈ ವಿಷಯದೊಳು ಜನಗಳಿಗೆ ಉಂಟಾದ ದುಸ್ಸಂಪ್ರದಾಯವೆಂಬದು ಅವರನ್ನು ಮೈಮರಸಿ ಗೌರವ್ಯರಾದವರೊಡನೆ ಪ್ರಬಲ ವಿಷಯವನ್ನು ಕುರಿತು ಮಾತನಾಡುತಿರುವಾಗ್ಯೆ ಸಹ ತಾನು ಮುಂದಾಳಾಗಿ ಬಂದು ನಿಂತುಕೊಳ್ಳುತಿದೆ ಮಾತನಾಡತಕ್ಕವನು ಕಾಲ ದೇಶ ಸಂದರ್ಭಗಳನ್ನು ತಿಳಿದು ಮಾತನಾಡುವವನಾಗಿದ್ದರೆ ಅಕಸ್ಮಾತ್ತಾಗಿ ತನ್ನ ಬಾಯಿಂದ ಹೊರಡುವ ಶಬ್ದಗಳನ್ನು ಅದಗಿಸಿ ಮಾತನಾಡುತ್ತಾನೆ ಇಲ್ಲದೆ ಹೋದರೆ ಅನಿರೀಕ್ಷಿತವಾಗಿ ಹೊರಡುವ ಕೆಲವು ಮಾತುಗಳಿಗಾಗಿ ಬಳಕ ನಾಚಿಕೊಳ್ಳಬೇಕಾಗುತಿದೆ. ಈ ವಿಷಯವು ಅವರ ಯೋಗಕ್ಷೇಮಕ್ಕೆ ಮಾತ್ರ ಏಳವಟ್ಟದ್ದಲ್ಲವು ಅವರು ಬಹುಕಾಲದಿಂದ ಬಳಿಕೆಯೊಳುಬಂದದ್ದನ್ನು ಬಿಡಲಾರದಿದ್ದರೆ ಹ್ಯಾಗಾದರೂ ತಮ್ಮ ಕಾಂತವನ್ನು ಕಳೆಯಬಹುದು ತಾವು ದೊಡ್ಡವರೆಂದುಭಾವಿಸಿಕೊಂಡು ತಮ್ಮನ್ನು ಅನ್ಯರು ಅನ್ನಕರಿಸಬೇಕೆಂಬ ತಾತ್ಪರ್ಯವುಳ್ಳವರು ತಮ್ಮ ದುಸ್ಸಂಪ್ರದಾಯವನ್ನು ಕ್ರಮಪಡಿಸಿಕೊಳ್ಳದಿದ್ದರೆ ಇತರರಿಗೆ ಅಪ್ರಯತ್ನವಾಗಿ ದುರಭ್ಯಾಸವನ್ನು ಕಲಿಸಿದಂತೆ ಯಾಗುತಿದೆ. ಹ್ಯಾಗಂದರೆ, ತಮ್ಮ ಮಕ್ಕಳು ತಮಗೆ ಅನುಚಿತಕರವಾದ ಕೆಲಸವನ್ನು ಮಾಡುವಾಗಲೂ, ತಾವು ಹೇಳಿದ ಮಾತನ್ನು ಕೇಳದೆ ಹುಡಿಹಿಡಿದು ರೋದನ ಮಾಡುವಾಗ್ಯೂ ಅವರನ್ನು ತಾಯಿತಂದೆಗಳಾದವರು ನೀಚ ಶಬ್ದಗಳಿಂದ ಬಯ್ಯುತ್ತಾರೆ ಇವನ್ನು ಅನವರತ ಕೇಳುತಲಿರತಕ್ಕ ಮಕ್ಕಳು ಔಚಿತ್ಯವನ್ನರಿಯದೆ ಅನ್ಯರನಿಂದೆಯೊಳು ಅದೇಮಾತುಗಳನ್ನೇ ಮರಳಿ ಉಪಯೋಗಿಸುತ್ತಾರೆ. ಅಜ್ಞಾನಾವಮಕ್ಕಳಿಗೆ, ತಮ್ಮ ಹಿರಿಯರು ನುಡಿಯುವ ತುಚ್ಛಮಾತುಗಳು ತಮ್ಮ ಪ್ರಯೋಜನಾರ್ಥವೆಂತಲೂ ಇವು ಅನ್ಯರ ವಿಷಯದೊಳು ತಾವು ಉಪಯೋಗಿಸುವದು ಅಗೌರವವೆಂತಲೂ ಪರಿಭಾವಿಸುವಷ್ಟು ಉಚಿತಜ್ಞತೆಯು ಅವರಿಗೆ ಇರುವದಿಲ್ಲವು ಆದರಿಂದ ಮಕ್ಕಳನ್ನು ಸುರಕ್ಷಿಸುವದು ಸುಲಭವಲ್ಲವಾಗಿ ಅವರಿಗೆ ದೃಷ್ಟಾಂತರೂಪವಾಗಿ ನಮ್ಮ ನಡತೆಯನ್ನೇ ಮೊದಲು ಸರಿಮಾಡಿಕೊಳ್ಳಬೇಕಾಗಿದೆ. ಇದೂ ಜನಗಳ ಅಮಾನಕ್ಕೆ ವಿಷಯವಾಗದೆ ಹೋಗಲಾರದೆಂದು ನಂಬುತ್ತೇವೆ.

LOCAL AND PROVINCIAL NEWS

ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Arrival of the British Resident — ಇಲ್ಲಿನ ಬ್ರಿಟಿಷ್ ರೆಸಿಡೆಂಟರವರಾದ ಮೆ|| ಗರ್ಡಿಲ್‌ಸ್ಟೋಯವರು ಗತ ಶುಕ್ರವಾರದದಿನ ಮೈಸೂರಿಂದ ವಾಪಸು ದಯಮಾಡಿದರು. ಆಕಾಲದಲ್ಲಿ ಮಾಮೂಲಿಪ್ರಕಾರ ನಡೆಯಬೇಕಾದ ಮರ್ಯಾದೆಗಳೆಲ್ಲ ನಡೆದವು.

Col. A. LeMesurier — ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿಯವರಾದ ಕರ್ನಲ್ ಲೀ ಮೆಸೂರಿಯರವರು ಇಲ್ಲಿನತಮ್ಮಕೆಲಸವನುಬಿಟ್ಟು ಸ್ವದೇಶಕ್ಕೆ ಹೋಗುವಂತೆ ವ್ಯವಸ್ಥೆಯಾಗಿರುವಂತೆಯೂ ಇವರ ಕೆಲಸಕ್ಕೆ ಮುಂದೆ ಯಾರೋಶೀನಿಯರ್ ನೇಮಕರಾಗ್ಯಪ್ಪುಡಲಾರರೆಂತಲೂ ತಿಳಿಯಬರುತಿದೆ

The Government Girl School — ಇಲ್ಲಿನ ಗವರ್ನಮೆಂಟ್ ಬಾಲಿಕಾಪಾಠಶಾಲೆಯು ಈಚೆಗೆ ಅದರಕಮಿಟಿಗಳ ಅವದಾನಕ್ಕೆ ವಿಷಯವಾದಂತೆ ತೋರುತಿದೆ. ಇದಕ್ಕೆ ಈಗಷಾಸ್ತೀ ಗ್ರಾಂಟ್ ಕೊಡಲ್ಪಡುವದೆಂತಲೂ, ಅದರ ವಿಚಾರಣಾಧಿಕಾರವನ್ನು ಮ್ಯೂನಿಸಿಪಾಲಿಟಿಯವರು ಸ್ವತಃ ಇಚ್ಛೈಸ್ಕೊಂಡರೆಂತಲೂ, ಅವರು ಇಲ್ಲಿ ಷಪ್ರದೊಳು ಬಹಳ ಏರ್ಪಾಡುಗಳು ಮಾಡುವವರಾಗಿದಾರೆಂತಲೂ ಕೇಳುವದಕ್ಕೆ ನಾವು ಬಹಳ ಸಂತೋಷಿಸುವೆವು. ಇದರ ಏರ್ಪಾಡಿನವಿಷಯದೊಳು ಮ್ಯೂನಿಸಿಪಾಲಿಟಿಯವರು ದೂರದೃಷ್ಟಿಯೊತನೆಯೂ ಉಚಿತಜ್ಞತೆಯೊಡನೆಯೂ, ಮಾಡುವರೆಂಬದರೊಳು ನಾವು ಸ್ವಲ್ಪವೂ ಸಂದೇಹಿಸುವದಿಲ್ಲವು. ಈವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಸಹ ಮುಂದೆ ತಿಳಿಸುವೆವು.

A change — ಈವೂರಲ್ಲಿದ್ದ ಅಡ್ಡಿಷನಲ್‌ಮುನಸಿಪ್‌ಕೋರ್ಟು ಈಗ್ಯೆ ಕೆಲವು ತಿಂಗಳ ಹಿಂದೆ ಮೈಸೂರಿಗೆ ವರ್ಗವಾದಲ್ಪಟ್ಟ ಅಂಶ ಯೆಲ್ಲರ ಜ್ಞಾಪಕದೊಳು ಇರಬಹುದಷ್ಟೇ. ಈ ಯೇರ್ಪಾಡು ಬೆಂಗಳೂರಲ್ಲಿರುವ ಪ್ರಜೆಗಳಿಗೆ ಅನಾನುಕೂಲ್ಯವನ್ನೂ ಮೈಸೂರಲ್ಲಿರುವವರಿಗೆ ನಿರುಪಯುಕ್ತತೆಯನ್ನೂ ಪ್ರಮಿಮಾಡಿದಂತೆ ಯಾದುದೆ. ಹ್ಯಾಗಂದರೆ, ಸದರೀ ಮುನಸಿಪ್‌ಕೋರ್ಟ್ ವರ್ಗವಾದಮೇಲೆ ಮೊಕದ್ದಮೆಗಳು ಸ್ವಲ್ಪವಾಗದೆ ಬಹಳವಾಗಿ ಬಾಕೀ ನಿಂತು, ತನ್ಮೂಲಕ ಕಕ್ಷಿಗಾರರು ಬಹಳ ತೊಂದರೆಗಳನ್ನು ಅಪೇಕ್ಷಿಸು ಅನುಭವಿಸುತಲಿದಾರೆ ಮೈಸೂರಲ್ಲಿ ಮೊಕದ್ದಮೆಗಳಿಲ್ಲದೆ ಸದರೀ ಕೋರ್ಟಿನವರಿಗೆ ಕೆಲಸವಿಲ್ಲದೆ ಇರುವದರಿಂದ ಅಲ್ಲಿನವರಿಗೆ ಅನಾವಶ್ಯಕವಾಗಿದೆ ಇವನ್ನು ಪರ್ಯಾಲೋಚಿಸಿ ಅದನ್ನು ಮರಳಿ ಇಲ್ಲಿಗೆ ತರಬೇಕೆಂಬ ತಜವಿಜು ನಡೆಯುತಲಿರುವಂತೆ ತಿಳಿಯಬರುತಿದೆ. ಇದರಿಂದ ಮುಂದ ಕಕ್ಷಿಗಾರರಿಗೆ ಬಹಳ ಅನುಕೂಲವಾಗಬಹುದು

The rate payers Association — ಈವೂರು ನಿವಾಸಸ್ಥರಾದ ಕೆಲವುಜನ ನೇಟಿವ್ ದೊಡ್ಡಮನುಷ್ಯರು "ಬೆಂಗಳೂರು ಪಹರೆಕಂದಾಯದಾರರಸಂಘ" ವೆಂಬ ಒಂದು ಸಮಾಜವನ್ನೇರ್ಪಡಿಸಿ, ಅಬಗ್ಗೆ ಗತ ಸೋಮವಾರದದಿನ ಇಲ್ಲಿನ ಟೌನ್ ಮ್ಯೂನಿಸಿಪಲ್ ಸ್ಕೂಲಿನಲ್ಲಿ ಒಂದು ಮೀಟಿಂಗ್‌ಮಾಡಿದರು. ಆಕಾಲದಲ್ಲಿಸಾಹುಕಾರ್ ಮತ್ತು ವರ್ತಕನಿ ಜರ್ನಾಜಿಯವರಾದ ಮ|| ರಾ|| ಗರುಡಾಚಾರ್ಯರವರು ಅಗ್ರಾಸನಾಧಿಪತಿಯಾಗಿದ್ದರು. ಈ ಸಮಾಜಕ್ಕೆ ಬಯಾ ವಿಷಯಗಳಲ್ಲಿ ಆಲೋಚಕರಾಗಿಯೂ ಸಹಾಯಕರಾಗಿಯೂ ಇರುವದುಗ್ಯೆ ಕೆಲವರು ದೊಡ್ಡಮನುಷ್ಯರು ಮೊಕರರ್ಮಾಡಲ್ಪಟ್ಟರಲ್ಲದೆ ಇವರ ಕಾರ್ಯನಿರ್ವಹಣೆಯಬಗ್ಗೆ ಒಂದು ಎಗ್ಸಿಕ್ಯೂಟಿವ್ ಕಮ್ಮಿಟಿ ಯೀರ್ಪಾಟಾಯಿತು ಈ ಸಂಘದವರ ಉದ್ದೇಶವೇನಂದರೆ, ಮ್ಯೂನಿಸಿಪಲ್ ಅಧಿಕಾರಿಗಳಿಗೆ ಅವರ ಕಾರ್ಯನಿರ್ವಹಣೆಯೊಳು ಕುಮ್ಮಕ್ ಮಾಡುವದು, ಮ್ಯೂನಿಸಿಪಲ್ ಅಡಳಿತಗಳ ಅವ್ಯವಸ್ಥೆಗಳಂಕುರಿತು ಆಗುದಾಗ್ಯೆ ಬೋರ್ಡಿನವರಿಗೆ ತಿಳಿಸುತಲಿರುವ ಆಗಿಂದಾಗ್ಯೆ ಬೋರ್ಡಿನವರಿಗೆ ತಿಳಿಸುತಲಿರುವದು, ಮ್ಯೂನಿಸಿಪಲ್ ಕಮ್ಮೀಷನರ್‌ಗಳು ತಮ್ಮೊಳಗಳಿಂದ ನಿವೃತ್ತರಾಗುವಾಗ್ಯೆ ಅವರಿಗೆಬದಲು ಸಮರ್ಥರಾದ ವಿದ್ಯಾವಂತರನ್ನು ಚುನಾಯಿಸುವಂತೆ ಗವರ್ನಮೆಂಟಿನವರನ್ನು ಪ್ರೇರಿಸುವದು ಮುಂತಾದವು ಮನೋದಾರ್ಢ್ಯವನ್ನೂ, ಪ್ರಾರಂಭಿಸಿದ್ದನ್ನು ಬಿಡಕೂಡದೆಂಬ ಪ್ರತಿಜ್ಞೆಯನ್ನೂ ಶ್ರದ್ಧೆಯನ್ನೂ ಉಂಟುಮಾಡಿಕೊಳ್ಳತಕ್ಕಬಗ್ಗೆ ಮೊದಲು ಒಂದು ಅಸೋಸಿಯೇಷನನ್ನು ಯೇರ್ಪಡಿಸಿ ಬಳಿಕ ಇದಕ್ಕೆ ಯತ್ನಿಸಿದ್ದರೆ ಚನ್ನಾಗಿರುವದು. ಇದರ ಅಭಿವೃದ್ಧಿಯನ್ನೂ ತನ್ಮೂಲಕ ಪ್ರಜಾಗತಕ್ಕ ಸಾಮುದಾಯಕಪ್ರಯೋಜನವನ್ನೂ ಕೇಳಲಪೇಕ್ಷಿಸುವೆವು.

TELEGRAPIHC SUMMARY

ತಂತಿವೃತ್ತಾಂತ ಸಂಗ್ರಹವು.

ಲಂಡನ್ ೧೭ನೇ ಅಕ್ಟೋಬರ್ — ತುರ್ಕಿಯವರು ದೊಡ್ಡಸಂಸ್ಥಾನಾಧಿಪತಿಗಳ [illegible] ಆಸ್ಟ್ರಿಯಾ, ಜರ್ಮನಿ, ಸಾಕ್ಸ್ [illegible] ಇಂಗ್ಲೆಂಡ್ [illegible] ಮಾಡಲ್ಪಟ್ಟಿದೆ

ಫಿಲಿಪ್ಪೊಪೊಲಿಸ್ ೧೭ನೇ ಅಕ್ಟೋಬರ್ — [illegible]

[illegible]

ಲಂಡನ್ ೧೭ನೇ ಅಕ್ಟೋಬರ್ — [illegible]

[illegible] ೧೮ನೇ ಅಕ್ಟೋಬರ್ — [illegible]

ಲಂಡನ್ ೨೧ನೇ ಅಕ್ಟೋಬರ್ — [illegible]

ಕಾನ್‌ಸ್ಟಾಂಟಿನೋಪಲ್ ೧೯ನೇ ಅಕ್ಟೋಬರ್ — ದೊಡ್ಡಸಂಸ್ಥಾನಾಧಿಪತಿ [illegible]

[illegible] ೨೦ನೇ ಅಕ್ಟೋಬರ್ — [illegible]

[illegible] ೨೩ನೇ ಅಕ್ಟೋಬರ್ — [illegible]

BANGALORE.—Printed and published for the Proprietor, at the KARNATIC PRESS— 1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible] ಕರ್ಣಾಟಕಪ್ರಕಾಶನ [illegible] ‖ [illegible]

Vol. XII.] BANGALORE—MONDAY, NOVEMBER 2, 1885. [No. 44.

ಸಂಪುಟ ೧೨.] ಬೆಂಗಳೂರು:—ಸನ್ ೧೮೮೫ನೇ ಇಸವಿ ನವಂಬರ್ ೨ನೇ ತಾರೀಖ್ ಸೋಮವಾರ. [ಸಂಚಿಕೆ ೪೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ.	...	೧೨—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ	...	೬—೦—೦
ಕನ್ನಡ [illegible] ವರುಷ ೧ಕ್ಕೆ	...	೬—೦—೦
[illegible]	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]:—

೧. [illegible]

೨. [illegible]

೩. [illegible]

೪. [illegible]

NOTICE.
VAIDYASARA SANGRAHA.

Price including Postage, Rs. 5-6-0

[illegible]

[illegible]	... ...	ರೂ॥ ೫—೦—೦
[illegible] ಅಂಚೇ ಹಾಸಲ್		೦—೬—೦

[illegible], ಬೆಂಗಳೂರು.

ನೋಟೀಸ್.

[illegible] ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ [illegible]:—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾವ್ಯಾಮೃತ.	...	೧—೪—೦
[illegible]	...	೦—೧೨—೦
[illegible]	...	೦—೩—೦
ಚಾಣಕ್ಯನೀತಿಯೆಂಬ ಸುಭಾಷಿತ.		೦—೫—೦
ಬಾಲರಾಮಾಯಣ	...	೦—೪—೦
[illegible]	...	೦—೧೪—೦
ಆನಂದಲಹರಿ.	...	೦—೬—೦
[illegible]	...	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು

[illegible]	...	೦—೬—೧
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible] ನಾಟಕ	...	೦—೪—೦
[illegible]	...	೦—೨—೦
ಯಕ್ಷಗಾನ [illegible]	...	೦—೬—೬
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	...	೦—೨—೦
[illegible]	...	೦—೦—೯
ಇಂಗ್ಲಿಷ್ ಕನ್ನಡ [illegible]		೧—೦—೦
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.		೦—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	...	೦—೩—೦
ವಿಷ್ಣುಸಹಸ್ರನಾಮ.	...	೦—೫—೦
ಸೂರ್ಯಸಹಸ್ರನಾಮ.	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
[illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ಪ್ರಸಿದ್ಧ ಪತ್ರಿಕೆ.

ಕಳೆದ ವರ್ಷದಲ್ಲಿ ಆಂಗ್ಲೋ ಕನ್ನಡ ಡೈರಿ ಎಂಬ ದಿನಚರಿ ಪುಸ್ತಕವು ಪ್ರಚುರಪಡಿಸಿರುತ್ತೇವಷ್ಟೆ, ಅನೇಕರು ಅದರ ಆಕಾರವು ಬಹಳ ದೊಡ್ಡದಾಗಲೂ ಆಯಾ ತಾರೀಖ್‌ಗಳ ಮಧ್ಯೆ ಬಿಟ್ಟಿರತಕ್ಕ ಸ್ಥಳ ಬಹಳ ಸಂಕೋಚವಾದ್ದೆಂತಲೂ ತಿಳಿಸಿದ್ದರಿಂದ ಬರುವ ಸನ್ ೧೮೮೬ನೇ ವರ್ಷದ ಡೈರಿಯನ್ನು ಒಂದು ಪುಟಕ್ಕೆ ಒಂದೇ ತಾರೀಖ್ ವುಳ್ಳದ್ದಾಗಿಯೂ, ಜೇಬುಗಳಲ್ಲಿಟ್ಟುಕೊಳ್ಳುವದಕ್ಕೆ ಅನುಕೂಲವಾಗಿಯೂ, ಉಪಯುಕ್ತವಾದ ಮತ್ತು ಆವಶ್ಯಕವಾದ ಅನೇಕ ಸಂಗತಿಗಳನ್ನು ಸಂಗ್ರಹಿಸಿ ಇಂಗ್ಲಿಷ್ ತಾರೀಖ್ ಮತ್ತು ಕನ್ನಡ ತಿಥಿ ವಾರ ನಕ್ಷತ್ರಗಳನ್ನಡಗಿಸಿಕೊಂಡಿರುವದಾಗಿಯೂ ರಚಿಸಲ್ಪಟ್ಟು "ಆಂಗ್ಲೋ ಇಂಡಿಯನ್ ಪಾಕೆಟ್ ಡೈರಿ" ಎಂಬ ಹೆಸರಿನಿಂದ ಮಿತವಾದ ಪ್ರತಿಗಳು ಮುದ್ರಿಸಲ್ಪಟ್ಟು ವಿಕ್ರಯಕ್ಕೆ ತಯಾರಾಗಿರುವದರಿಂದ ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಾಗುವವರ ಬಳಿಗೆ ಮೊಬಲಗು ಕಳುಹಿಸಿ ಬೇಕಾದಷ್ಟು ಪ್ರತಿಗಳನ್ನು ಅತಿ ಶೀಘ್ರವಾಗಿ ತರಿಸಿಕೊಳ್ಳಬಹುದು.

ವಸ್ತ್ರಕಾಗದ ಸಹಿತವಾದ ಪ್ರತಿ ೧ಕ್ಕೆ		೧೦ ಆಣೆ.
ಟಪಾಲ್ ಹಾಸಲ್	...	೧½ ಆಣೆ.
ವಸ್ತ್ರಕಾಗದವಿಲ್ಲದ ಪ್ರತಿ ೧ಕ್ಕೆ		೬½ ಆಣೆ.
ಟಪಾಲ್ ಹಾಸಲ್	...	೧ ಆಣೆ.

ಮತ್ತು ಜ್ಞಾನಯೋಗ ತರಂಗಿಣಿ ಯೆಂಬ ವಾಸಿಷ್ಟ ರಾಮಾಯಣವೆಂಬ ಪುಸ್ತಕಕ್ಕೆ ಕಳೆದ ಆಗಸ್ಟ್ ತಿಂಗಳಲ್ಲಿ ನೋಟೀಸ್ ಕೊಟ್ಟಿರುವದು ಸರಿಯಷ್ಟೆ, ಅದರಂತೆ ಸಂಪುಟ ಪ್ರತಿ ಸುತ ಬಂದವರಿಂದ ಸುದ್ದ್ರಂಥಾಪೇಕ್ಷೆಯುಳ್ಳ ಅಭಿಮಾನಶಾಲಿಗಳು ೧—೧೨—೦ ರೂ॥ ಮೊಬಲಗಿನಿಂದ ಬರೆದು ತರಿಸಿಕೊಳ್ಳಬಹುದು.

೩೦-೧೦-೮೫. ಸತ್ರಂ ಚೆಂಪಕೇಶಯ್ಯ,

[illegible]

ಬೆಂಗಳೂರು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 2, 1885.

೧೮೮೫ನೇ ನವಂಬರ್ ೨ನೇ ತಾ॥ ಸೋಮವಾರ

ಓಂ॥ ಸರ್ವಜ್ಞತಾಂನದಸಿ [illegible] ‖ [illegible]

OURSELVES

ಸಾಬಕ್ ಮಹಾರಾಜಾ ಕೃಷ್ಣರಾಜ ಒಡೆಯರವರಿಂದ ಪರಿಪೋಷಿತವಾಗಿದ್ದ ಈ ಕರ್ಣಾಟಕ ಪ್ರಕಾಶಿಕಾ ಪತ್ರಿಕೆಯು ಮರಳಿ ಪ್ರಕಟಿಸಲ್ಪಡಲಿಕ್ಕೆ ಉಪಕ್ರಮವಾಗಿ ಗತವಾರದೊಡನೆ ೧೨ ಸಂವತ್ಸರಗಳು ಕಳೆದವು. ಲೋಕದಲ್ಲಿ ಅನ್ಯರ ಪ್ರಯೋಜನಕ್ಕಾಗಿ, ಒಬ್ಬನೊಂದು ಕೆಲಸವನ್ನು ಪಕ್ರಮಿಸಿ ನಡೆಸಿ, ಆ ಕೆಲಸದಿಂದ ಅವರ ಉದ್ದೇಶಾನುಗುಣವಾದ ಪ್ರಯೋಜನ ಉಂಟಾದರೆ, ಆ ಕೆಲಸ ನಿರ್ವಿಘ್ನವಾಗಿಯೂ, ಉತ್ತರೋತ್ತರಾಭಿವರ್ಧಕವಾಗಿಯೂ, ನಡೆಯತಕ್ಕಬಗ್ಗೆ ಅವರವರ ಶಕ್ತ್ಯನುಗುಣವಾದ ಸಹಾಯ ಮಾಡಬೇಕಾದ್ದು ಅವರ ಕರ್ತವ್ಯವಾಗಿರುತಿದೆ. ತಮಗೆ ಪ್ರಯೋಜನವಿಲ್ಲದೆ ಇತರರಿಗೆ ಮೇಲುಂಟಾಗತಕ್ಕದ್ದಾಗಿದ್ದಾಗ್ಯೂ ಅದಕ್ಕೆ ತಾವು ಕುಮ್ಮಕ್ ಮಾಡಬೇಕಾದ್ದು ಮುಖ್ಯಧರ್ಮವಾಗಿರುತಿದೆ. ತತ್ಕಾಲದಲ್ಲಿ ತಮಗೆ ಅದರಿಂದ ಫಲವಿಲ್ಲವೆಂದು ತೋರಿದಾಗ್ಯೂ ಮುಂದಿನ ಪ್ರಯೋಜನವನ್ನು ಭಾವಿಸಿ ತಮ್ಮ ಶಕ್ತ್ಯನುಸಾರ ಉತ್ಸಾಹಾಭಿಮಾನಗಳಂ ತೋರೆಯದೆ ಸಹಾಯ ಮಾಡುತ, ಅನುಕೂಲರಾಗಿರುವದು ಅವರಿಗೆ ಭೂಷಣವಾಗಿರುವದು. ಈ ಮೈಸೂರು ರಾಜ್ಯದಲ್ಲಿ ಪ್ರಕಟಿಸಲ್ಪಡುತಲಿರುವ ಈ ಪತ್ರಿಕೆಗೆ ಮೇಲೆಕಂಡ ನೂರು ಅಂಶಗಳೂ ಅಲಭ್ಯವು. ಆದಾಗ್ಯೂ ನಾವು ಇದುವರಿವಿಗೆ ಈ ಪತ್ರಿಕೆಯು, ಸಕಲ ಜನಾಂಗೀಕಾರಾರ್ಹವಾದದ್ದಾಗಿರಬೇಕೆಂಬ ಕೋರಿಕೆಯೊಡನೆ ನಮ್ಮ ಪ್ರಯತ್ನದಲ್ಲಿ ಲೋಪವಿಲ್ಲದೆ ಮಾಡಿದವರಾದೆವು. ಪರಂತು ಈ ಪತ್ರಿಕಾ ನಿರ್ವಹಣಕಾರ್ಯದಲ್ಲಿ ನಮಗೆ ಅವಶ್ಯ ಇರಬೇಕಾದ ಪ್ರೋತ್ಸಾಹದಲ್ಲಿ ಕೊರತೆಯುಂಟಾಗಲಿಕ್ಕೆ ಬೇಕಾದ ಕಾರಣಗಳು ಏರ್ಪಡುತಬಂದವು.

ಸನ್ ೧೮೮೧ನೇ ಆಗಸ್ಟ್ ತಿಂಗಳ ಮೊದಲು ಈ ಪತ್ರಿಕೆಯ ಇಂಗ್ಲಿಷ್ ಕನ್ನಡ ಭಾಗಗಳು ಪ್ರತ್ಯೇಕವಾಗಿ ಪ್ರಕಟಸಲ್ಪಡುತಿವೆ. ಸದರೀ ಯರಡು ಭಾಗಗಳಲ್ಲಿಯೂ ಸಾಮಾನ್ಯವಾಗಿ ಪ್ರಕಟಸಲ್ಪಡುತ ಬರುವ ವಿಷಯಗಳು ಭಿನ್ನಗಳಾದರೂ ತದ್ವಿಚಾರಕ್ರಮ ಮಾತ್ರ ಅಸ್ಖಲಿತ ನಿಯಮ ವುಳ್ಳವಾಗಿರುತಿದೆ. ಇದಲ್ಲದೆ ಈ ಪತ್ರಿಕೆಯು ತನ್ನ ಕರ್ತವ್ಯವನ್ನು ಸ್ವಲ್ಪವೂ ಲೋಪವಿಲ್ಲದಂತೆ ಮಾಡುತಲಿದೆ ಯೆಂಬದಕ್ಕೆ ಆಗಿಂದಾಗ್ಯೆ ಇದರೊಳು ವಿಚಾರ ಮಾಡಲ್ಪಡುವ ವಿಷಯಗಳೇ ಸಾಕಾದ ನಿದರ್ಶನವಾಗಿರುತಿವೆ ಯೆಂಬದನ್ನು ನಾವು ತಿಳಿಸಬೇಕಾದ್ದಿಲ್ಲವು. ಈ ಪತ್ರಿಕೆಗೆ ಬೇಕಾದ ಆನುಕೂಲ್ಯಗಳ ಪೈಕಿ ಒಂದಾದರೂ ಇಲ್ಲದೆ ಹೋದದರಿಂದ ಇದಂ ನಾವು ಮೊದಲುದ್ದೇಶಿಸಿದಂತೆ ಮಾಡುವದಕ್ಕೆ ಅನುಕೂಲಿಸದೆ ಹೋದದ್ದು ಮಾತ್ರವಲ್ಲದೆ ತನ್ಮೂಲಕ ನಾವು ಬಹುವಿಧ ಅನುಪಪತ್ತಿಗಳಿಗೆ ಪಾತ್ರರಾಗಬೇಕಾಯಿತು. ಮುಂದೆ ಈ ಪತ್ರಿಕಾ ವಿಷಯವಾಗಿ ನಾವು ಮಾಡಲುದ್ದೇಶಿಸಿರುವ ಏರ್ಪಾಡುಗಳನ್ನು ಮುಂದಿನವಾರದ ಪತ್ರಿಕೆಯಲ್ಲಿ ತಿಳಿಸುವೆವಾಗಿ ಅದಕ್ಕೆ ಯೆಲ್ಲರೂ ನಿಗೇ ಕೊಡಬೇಕೆಂದು ಕೋರುವೆವು. ಮುಖ್ಯವಾಗಿ ಈ ದೇಶದೊಳು ಇತರ ವೃತ್ತಾಂತಪತ್ರಿಕೆಗಳಿಗೆ ಉಂಟಾಗಿರುವ ಸಹಾಯಸಂಪತ್ತಿಗಳು ಅನೇಕ ಕಾರಣಗಳಿಂದಿದಕ್ಕೆ ಮೃಗ್ಯವಾಗಿರುವದರಿಂದ ಇದರ ಜೀವನವು ಕೇವಲ ದೈವಾಧೀನವಾಗಿದೆ. ಇದರಿಂದ ನಮ್ಮ ಉತ್ಸಾಹ ಪ್ರಯತ್ನಗಳು ಯಾವರೀತಿಯಾಗಿರುವವೋ ಅದು ನಮ್ಮ ಚಂದಾದಾರರೆಲ್ಲರೂ ಊಹಿಸಿಕೊಳ್ಳಬಹುದು. ಅರಸರು ತಮ್ಮ ಪ್ರಜೆಗಳ ಪ್ರಯೋಜನಕ್ಕೋಸ್ಕರ ಮಾಡತಕ್ಕ ಕಾರ್ಯಗಳನ್ನು ಅವರ ಪ್ರಜೆಗಳು ಸಕ್ತಿಯೊಡನೆ ತಿಳದು ತದನುಗುಣವಾದ ಭಾವವನ್ನೈದುವದಕ್ಕೆ ಸಾಧನಭೂತವಾಗಿರುವ ಈ ಪತ್ರಿಕಾ ಪ್ರಾಚುರ್ಯವು ಉತ್ತರೋತ್ತರವು ಬಲವಾಗುವಂತೆ ಸರ್ವರೂ ಇದಕ್ಕೆ ಸಹಾಯಮಾಡಬೇಕೆಂಬದೇ ನಮ್ಮ ಪ್ರಾರ್ಥನೆಯಾಗಿರುತಿವೆ.

SPEECH DELIVERED BY THE

DEWAN OF MYSORE,

before the Representative Assembly at Mysore, on the 21st October 1885

ಕಳೆದ ತಿಂಗಳ ೨೧ನೇ ತಾರೀಖಿನಲ್ಲಿ ಮೈಸೂರಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಮಾಜದಲ್ಲಿ ಈ ಸಂಸ್ಥಾನದ ದಿವಾನರಾದ ಮ|| ರಂಗಾಚಾರ್ಲು, ಅವರು ಮಾಡಿದ ಉಪನ್ಯಾಸದ ಸಾರಾಂಶವನ್ನು ಗತವಾರದಲ್ಲಿ ತಿಳಿಸಿದ್ದೆವಷ್ಟೆ. ತಾವನ್ನು ಕುರಿತ ಸದರೀ ಪ್ರಸಂಗದ ಯಾವದುಕವನ್ನೂ ಜನಗಳಿಗೆ ತಿಳಿಯಬರತಕ್ಕದಾಗಿ ಈ ಪತ್ರಿಕೆ [illegible]ವರ ಅವಗಾಹನೆಯಬಗ್ಗೆ [illegible] ಅನುಗ್ರಹವನ್ನು ಇದರಡಿಸಮಗವಾಗಿ [illegible] ಅವರಿಂದ ಶ್ರೀಮನ್ ಮಹಾರಾಜಾ ಸರ್ಕಾರದವರು ಗತ ಸಂವತ್ಸರದಲ್ಲಿ ಏರ್ಪಡಿಸಿರುವ ಪ್ರಜೆಗಳ ಯೋಗಕ್ಷೇಮವಾದ [illegible] ಮಾಡಿದ ಅದಳಿತಗಳೆಲ್ಲವೂ ವ್ಯಕ್ತವಾಗುತಿದೆಯಾಗಿ ಇದು ಜನಗಳಿಗೆ ಉಲ್ಲಾಸವಾಗಿರುವದೆಂದು ನಂಬುತ್ತೇವೆ.

ಶ್ರೀಮನ್ಮಹಾರಾಜ ರವರ ಸರ್ಕಾರದವರ ಅಪ್ಪಣೆಯನುಸಾರವಾಗಿ ಕಳೆದ ಸಾಲಿನಲ್ಲಿ ನಡೆಸಲ್ಪಟ್ಟ ಆಡಳಿತಗಳ ಮುಖ್ಯಾಂಶಗಳನ್ನು ತಮಗೆ ಈ ದಿವಸ ಸಂಕ್ಷೇಪವಾಗಿ ಪ್ರತಿಪಾದಿಸತಕ್ಕದ್ದು ನನ್ನ ಕೆಲಸವಾಗಿದೆ.

ಮಾಮೂಲಿಮೇರೆ ಜಮಾಖರ್ಚು ಲೆಕ್ಕಗಳನ್ನು ತಮಗೆ ತಿಳಿಯಪಡಿಸುವದಕ್ಕೆ ಮುಂಚಿತವಾಗಿ ಒಂದೆರಡು ವಿಶೇಷವಾದ ಅಂಶಗಳನ್ನು ಹೇಳತಕ್ಕದ್ದಿದೆ. ಅವು ಯಾವದೆಂದರೆ —ಜಾಸ್ತೀ ಪಗದೀ ವಸೂಲ್ ಮಾಡತಕ್ಕದ್ದನ್ನು ಇನ್ನೂ [illegible] ಹತ್ತು ವರುಷಗಳವರಿಗೆ ಮುನ್ನಾ [illegible] ಮಾಡತಕ್ಕದ್ದೆಂದು ಸಕ್ರೆಟರಿ ಆಫ್ ಸ್ಟೇಟವರವರಿಗೆ ಗವರ್ನಮೆಂಟ್ ಆಫ್ ಇಂಡಿಯಾವವರು ದಯವಿಟ್ಟು ಶಿಫಾರಸ್ ಮಾಡಿರುತ್ತಾರೆ. ಈ ಪಗದೀ ವಿಷಯದ ಹಿಂದಿನ ಸಂಗತಿಗಳನ್ನು ಇಲ್ಲಿ ಸಂಕ್ಷೇಪವಾಗಿ ತಮಗೆ ಜ್ಞಾಪಕಪಡಿಸುವೆನು. ಸನ್ ೧೭೯೯ನೇ ಇಸವಿಯ ರಹಾನಾಮೆಯ ಪ್ರಕಾರಗೊತ್ತು ಮಾಡಲ್ಪಟ್ಟು ಇದುವರಿಗೆಸಲ್ಲುತಿರುವ ಪಗದೀ ಮೊಬಲಗು ೨೪ ಲಕ್ಷ ರೂಪಾಯಿಗಳು. ಸದರೀ ರಹಾನಾಮೆ ಪ್ರಕಾರ ಈ ಪಗದೀ ಮೊಬಲಗಲ್ಲದೆ ಯುದ್ಧ ಕಾಲದಲ್ಲಿ ಮೈಸೂರು ಸರ್ಕಾರದವರು ಬ್ರಿಟಿಷ್ ಗವರ್ನಮೆಂಟ್‌ಗೆ ಕೆಲವು ಸಹಾಯಗಳನ್ನು ಮಾಡಬೇಕೆಂಬ ಕರಾರಾಗಿತ್ತು. ಸನ್ ೧೮೮೧ನೇ ಇಸವಿಯ ರಹಾನಾಮೆಯಲ್ಲಿ ಸ್ಪಷ್ಟವಿಲ್ಲದ ಮೇಲೆ ಹೇಳಿದ ಸಹಾಯಗಳಿಗೆ ಬದಲಾಗಿ ಯುದ್ಧಕಾಲದಲ್ಲಿಯೂ ಯುದ್ಧವಿಲ್ಲದ ಕಾಲದಲ್ಲಿಯೂ ಕೂಡ ಲಾಯಖಾದ ೧,೦೦೦ ಸಿಲೇದಾರ್ ಫೌಜನ್ನು ಮೈಸೂರು ಸರ್ಕಾರದವರು ಇಟ್ಟುಕೊಂಡಿರಬೇಕೆಂದೂ, ಸದರಿ ಫೌಜು ಸ್ವಂತ ಬ್ರಿಟಿಷ್ ಗವರ್ನಮೆಂಟಿನವರು ಮೈಸೂರು ಸೀಮೆಯ ಸಂರಕ್ಷಣೆಬಗ್ಗೆ ಸಾಕೆಂದು ಎಣಿಸುವಷ್ಟು ಫೌಜು ಶಿವಾಯಿ ಬಾಕಿ ಎಲ್ಲಾ ಫೌಜನ್ನು ಅವಶ್ಯವಿದ್ದಾಗ ಬ್ರಿಟಿಷ್ ಫೌಜಿನೊಡನೆ ಮೈಸೂರು ಸೀಮೆಯಿಂದ ಹೊರಗೆ ನವಕರಿ ಬಗ್ಗೆ ಹೋಗುವದಕ್ಕೆ ಸಿದ್ಧವಾಗಿರತಕ್ಕದ್ದೆಂತಲೂ ಗೊತ್ತು ಮಾಡಲ್ಪಟ್ಟಿತು. ಶ್ರೀಮನ್ ಮಹಾರಾಜರವರಿಗೆ ಈ ಸೀಮೆಯನ್ನು ಒಪ್ಪಿಸುವ ಕಾಲದಲ್ಲಿ ನಡೆದ ತಹನಾಮೆಯಲ್ಲಿ ಮೇಲ್ಕಂಡಂತೆ ಹೊರಗಣ ನವಕರೀಬಗ್ಗೆ ಸವಾರ್ ಫೌಜನ್ನು ಇಟ್ಟುಕೊಂಡಿರುವದಕ್ಕೆ ಬದಲಾಗಿ ಹತ್ತೂವರೆ ಲಕ್ಷ ರೂಪಾಯಿಗಳು ಜಾಸ್ತೀ ಪಗದೀ ಕೊಡಬೇಕೆಂದು ತೀರ್ಮಾನವಾಯಿತು. ಆದರೆ ಬ್ರಿಟಿಷ್ ಗವರ್ನಮೆಂಟಿನವರು ಶ್ರೀಮನ್ ಮಹಾರಾಜರವರ ಆಳ್ವಿಕೆಯ ಶುರುವಿನಲ್ಲಿಯೇ ಈ ಸೀಮೆಯ ಉತ್ಪತ್ತಿಯಮೇಲೆ ವಿಶೇಷ ಭಾರವನ್ನು ಹೊರಿಸಬಾರದೆಂಬ ನಿಜವಾದ ಅಭಿಲಾಷೆಯಿಂದ ಸೀಮೆ ಸುಪರ್ದು ಆದ ತಾರೀಖು ಲಾಗಾಯತು ೫ ವರುಷಗಳವರಿವಿಗೆ ಮೇಲ್ಕಂಡ ಜಾಸ್ತೀ ಹತ್ತೂವರೆ ಲಕ್ಷ ರೂಪಾಯಿಗಳನ್ನು ಮನ್ನಾ ಮಾಡಿದ್ದರು. ಘನವನ್ನು ಹೊಂದಿದ ಗವರ್ನರ್ ಜನರಲ್ ಇನ್‌ಕೌನ್ಸಿಲ್‌ರವರು ಕಳೆದ ೪ ವರುಷಗಳಿಂದ ಈ ಸೀಮೆಯ ಹುಟ್ಟುವಳಿಯ ಸ್ಥಿತಿಯನ್ನು ಸೂಕ್ಷ್ಮವಾದ ಆಲೋಚನೆಯಲ್ಲಿಟ್ಟು ಪಗದೀಗೆ ಹತ್ತೂವರೆ ಲಕ್ಷ ರೂಪಾಯಿ ಜಾಸ್ತೀ ಮಾಡತಕ್ಕದ್ದೆಂದು ತೀರ್ಮಾನವಾದ ಕಾಲದಲ್ಲಿ ಊಹಿಸಿದ ಮಟ್ಟಿಗೆ ಈ ಸೀಮೆಯ ಹುಟ್ಟುವಳಿಯು ಈಗ ಜಾಸ್ತೀಯಾಗಿರುವದಿಲ್ಲವೆಂಬ ಅಂಶವನ್ನೂ, ಈ ಸೀಮೆಯ ಈಗಿನ ದ್ರವ್ಯ ಸಂಬಂಧವಾದ ಕಷ್ಟದೆಸೆಯನ್ನೂ, ಮತ್ತು ಮುಂದೆ ಸಂಭವಿಸತಕ್ಕ ಖರ್ಚು ಬಾಬುಗಳನ್ನೂ ತಮ್ಮ ಆಲೋಚನೆಗೆ ತಂದು ಮೇಲೆ ಹೇಳಿದಂತೆ ಇನ್ನು ೧೦ ವರುಷಗಳವರಿಗೂ ಜಾಸ್ತೀ ಪಗದೀ ಮೊಬಲಗನ್ನು ವಸೂಲ್ ಮಾಡದ[illegible]ಲ್ಲವೆಂದು ಸಿಕ್ರೇಟರಿ ಆಫ್ ಸ್ಟೇಟವರವರಿಗೆ ಶಿಫಾರಸ್ ಮಾಡಿರುತ್ತಾರೆ. ಬ್ರಿಟಿಷ್ ಗವರ್ನಮೆಂಟಿನವರು ಮೈಸೂರು ಸೀಮೆಗೆ ಯಾವಾಗಲು ಮಾಡಿರತಕ್ಕ ಔದಾರ್ಯಯುಕ್ತ ಉಪಕಾರಗಳಲ್ಲಿ ಇದು ಬಹಳ ವಿಶೇಷವಾದದ್ದು. ಈ ಉಪಕಾರಕ್ಕಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ಬಹಳ ಕೃತಜ್ಞರಾಗಿರುತ್ತಾರೆ. ಹೀಗೆ ನಡೆಸಿದ್ದರಿಂದ ಈ ರಾಜ್ಯದ ಆದಾಯಗಳನ್ನು ಈಗಿನ ಉತ್ತಮ ಸ್ಥಿತಿಯಲ್ಲಿಯೇ ಮುಂದಕ್ಕೂ ಕಾಪಾಡಿಕೊಂಡು ಬರುವದಕ್ಕೆ ಸಾಧ್ಯವಾಗಲಾರದು. ಈ ೧೦ ವರುಷಗಳ ವ್ಯವಧಾನವು ಕಳೆದಷ್ಟರೊಳಗಾಗಿ ಬಂದೊದಗಿದ ವಿಪತ್ತಿನಿಂದ ಚೇತರಿಸಿಕೊಳ್ಳುವದಕ್ಕೆ ಅವಕಾಶ ಕೊಡುತ್ತೆ. ಮತ್ತು ಹೀಗೆ ದಯಾಪೂರ್ವಕವಾಗಿ ಕೊಡಲ್ಪಟ್ಟ ಈ ವ್ಯವಧಾನ ಕಾಲದೊಳಗೆ ರಹಾನಾಮೆಯ ಷರತ್ತಿನ ಪ್ರಕಾರ ನಡೆಯಲು ಸಿದ್ಧರಾಗುವದಕ್ಕೆ ಶ್ರೀಮನ್ಮಹಾರಾಜಾ ಗವರ್ನಮೆಂಟಿನವರು ಸರ್ವಪ್ರಯತ್ನಗಳನ್ನು ಮಾಡುತ್ತಾರೆಂಬುವ ನಂಬಿಕೆಯನ್ನು ನಿಮಗೆ ತಿಳಿಯಪಡಿಸುತ್ತೇನೆ.

ಇಂಡಿಯಾ ಗವರ್ನಮೆಂಟಿನವರಿಂದ ಇನ್ನೊಂದು ಸಂಗತಿ ವ್ಯವಸ್ಥೆ ಮಾಡಲ್ಪಟ್ಟಿದೆ. ಅದೇನೆಂದರೆ, ಬ್ರಿಟಿಷ್ ಸರಕಾರದ ಆಳ್ವಿಕೆಗೆ ಒಳಪಟ್ಟಿರುವ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ [illegible] ಜಾತಾ ನಿರ್ವಹಣೆಲ್ಲಾ ಮೊಬಲಗು ಇಂಪೀರಿಯಲ್ ಅಂದರೆ ಬ್ರಿಟಿಷ್ ಸರಕಾರದ ಲೆಕ್ಕಕ್ಕೇನೆ ಜಮಾ ಖರ್ಚಾಗತಕ್ಕದ್ದೆಂಬದು. ಈ ವ್ಯವಸ್ಥೆಯನ್ನನುಸರಿಸಿಯೇ, ಗತಸಾಲಿನ ಬಾಬತು ಮೈಸೂರು ಸಂಸ್ಥಾನದ ಜಮಾಖರ್ಚಿನ ಲೆಕ್ಕದಲ್ಲಿ ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿಗೆ ಸಂಬಂಧಿಸಿದ ಜಮಾ ಮತ್ತು ಖರ್ಚುಬಾಬುಗಳನ್ನು ವಜಾಮಾಡಬೇಕಾಯಿತು

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ [illegible]	ಮಾಮೂಲಿನಗಟ್ಟೀಯಾದ ಹುಟ್ಟುವಳಿ 1,00,70,97[illegible]
1881—85ನೇ ಇಸವಿ ಬಜೆಟ್	ರೂಪಾಯಿಗಳು ಖರ್ಚು 99,55,516 ರೂಪಾಯಿಗಳು ಆಗಿ ಇರುತ್ತೆ.

ಈರೀತಿ ವಜಾಮಾಡಿದನಂತರ ಈ ಕೆಳಗಿನ ರಕಮುಗಳಲ್ಲಿ ಕಾಣಿಸಿರುವಂತೆ

ಜಮಾ ಬಾಬು.

	1883—84 ರೂಪಾಯಿಗಳು	1884—85 ರೂ
ಲ್ಯಾಂಡ್ ರೆವಿನ್ಯೂಖಾನೆ		
ಜಮಾಬಂದಿಬಾಬು	73 30 811	66,83 886
ಅಬ್ಕಾರಿ	9,[illegible]8,671	11,71,625
ಫಾರೆಸ್ಟು	6,27 283	6,57,561
ಸ್ಟಾಂಪು	4 30,292	4 42 791
ಸಾಯರ್	2 83,426	3 40 699
ಮೊಹತರ್ಫಾ	2,81,412	2 6[illegible],102
ಲಾ ಅಂಡ್ ಜಸ್ಟಿಸ್ ಖಾನೆ		
ಜಾಮೀನುಬಾಬು	59,1[illegible]3	69,490
ಅಂಚೆ	58,61[illegible]	61,607
ರಿಜಿಸ್ಟ್ರೇಷನ್	42 219	44 319
ಅಮೃತಮಹಲ್	31,199	31,124
ವಿದ್ಯಾಭ್ಯಾಸದಇಲಾಖೆ	23,966	32,348
ಉಪ್ಪಿನಕೊಳೆ	26,435	21,161
ಪಬ್ಲಿಕ್‌ವರ್ಕ್ಸ್‌ಖಾನೆ		
ಮರಮ್ಮತ್ ಬಾಬ್	9,366	9,296

	1883—84 ರೂ	1884—85 ರೂ
ಬಿಲಾವಜೆ ತಪ್ಪಿದ ರಸೀದಿ ನಾಣ್ಯಗಳ ಶಿಲ್ಕುತ್	26,128	4,101
ಚಿಲ್ಲರೆಬಾಬುಗಳು	1,27 433	2 32 237
ಜುಮ್ಲಾ	1,03,19723	1,03,70 97[illegible]

ಖರ್ಚು ಬಾಬು

A

ಸಬ್ಸಿಡಿಯರಿ ಪಗದಿ	24 50 000	24 50 000
ಅರಮನೆಖರ್ಚು	10 00 000	10,00,000
ಸರ್ಕಾರಿ ಸಾಲದಬಡ್ಡಿ	4,31,237	5,17,531
ಗ್ಯಾರಂಟಿ ಕಂಪನಿ [illegible] ಮತ್ತು ಪ್ರಾಮಿಸರಿ ನೋಟು [illegible]	1,18 925	1,04 048
ಮಜುಬಿ	7 38,009	7,56 939
ಜುಮ್ಲಾ	48,2[illegible],171	48,28 51[illegible]

B

ಜನರಲ್ ಆಡ್ಮಿನಿಸ್ಟ್ರೇಷನ್	1 86,290	2,0[illegible],097
ನಾಲ್ ಅಂಡ್ [illegible] ಡಿವ (ಜಿಲ್ಲಾ ಮತ್ತು ತಾಲ್ಲೂಕು) ಆಡ್ಮಿನಿಸ್ಟ್ರೇಷನ್	1 37,803	1 3[illegible] 190
ಜಿಲ್ಲೆಯಿಂದ ವಸೂಲು [illegible]		
[illegible]	17 640	[illegible]3 761
[illegible]	3 1[illegible]0,7	[illegible]15 917
ವಿದ್ಯಾಭ್ಯಾಸದಇಲಾಖೆ	2 [illegible]0 111	2,38 918
[illegible]	7,816	7,1[illegible]
[illegible]	2 11,21[illegible]	2,57 731
[illegible]	[illegible]	[illegible]
[illegible]	16,017	18 30[illegible]
[illegible]	2 1[illegible],2[illegible]7	2 18 028
[illegible]	11 311	18,10[illegible]
[illegible]	1[illegible] 271	11 [illegible]
[illegible]	[illegible],693	[illegible]
ಅಮೃತಮಹಲ್ [illegible]	1,1[illegible] 560	12 104
[illegible]	81,2[illegible]	50 15[illegible]
ಜುಮ್ಲಾ	17,59 016	17 11 010

C

ಲಾ ಅಂಡ್ ಜಸ್ಟಿಸ್ ಖಾನೆ ಜಾಮೀನ ಮತ್ತು ಜೈಲುಗಳು	7,10 [illegible]	7 59 8[illegible]
[illegible]	4 7[illegible],617	4 8 665
[illegible]	1 38 0[illegible]	1,1[illegible] 130
[illegible]	2 [illegible]	2 80 [illegible]
[illegible]	1 29 659	1,33 931
ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪು [illegible]	2 1[illegible] 600	2 70 [illegible]
ಪಬ್ಲಿಕ್‌ವರ್ಕ್ಸ್‌ಖಾನೆ ಮರಮ್ಮತ್‌ಬಾಬು	9 30 001	8 13 687
ಅಂಚೆ	1 2[illegible]	1,2[illegible] 660
[illegible]	2[illegible]	2[illegible] 97[illegible]
ಚಿಲ್ಲರೆ [illegible]	17 171	17 666
[illegible]	1 13 621	1[illegible] 621
ಚಿಲ್ಲರೆಬಾಬು	1,56 [illegible]1	1,78 611
ಜುಮ್ಲಾ	[illegible]3 81 536	[illegible]3 66,036
ಒಟ್ಟು ಜುಮ್ಲಾ	99 71,722	99,[illegible] 536

ಈ ಸಾಲಿ ಆಖೈರಿನಲ್ಲಿ ನಿವಳ ಸಿಲ್ಕು ೧,೦೫,೩೭ ರೂಪಾಯಿ ನಿಂತಿತು ೧೮೮೩—೮೪ನೇ ಇಸವಿ ಆಖೈರಿನಲ್ಲಿ ಉಳಿದದ್ದು ಸುಮಾರು ನೂರೂವರೆ ಲಕ್ಷ ರೂಪಾಯಿಗಳ ಸಿಲ್ಕನ್ನು ನೋಡಿದರಾಗಿ ಮೇಲ್ಕಂಡ ಮೊಬಲಗು ಕಮ್ಮಿಯಾಗಿತೋರುತ್ತೆ, ಆದರೆ ಹುಟ್ಟು ಬಿಟ್ಟಿನದೆಸೆಯಿಂದ ಈ ಮೇರೆ ಕಮ್ಮಿ ಆಯಿತೆಂದು ಭಾವಿಸಲಾಗದು. ಹುಟ್ಟುವಳಿಯಲ್ಲಿಯೇ ಕಮ್ಮಿಯಾದ್ದರಿಂದ ಈ ಮೇರೆ ನಿವಳ ಸಿಲ್ಕು ಕಮ್ಮಿ ಆಗಿರುತ್ತೆ. ಜಮಾಬಂದಿಬಾಬಿನ ಹುಟ್ಟುವಳಿಯಲ್ಲಿ ೧೮೮೩—೮೪ನೇ ಇಸವಿಗಿಂತ ಆರೂವರೆ ಲಕ್ಷ ರೂಪಾಯಿಗಳು ಕಮ್ಮಿ ಆಯಿತು. ಯಾತಕ್ಕೆಂದರೆ, ಸೀಮೆಯ ಉತ್ತರ ಮತ್ತು ಈಶಾನ್ಯ ದಿಕ್ಕುಗಳ ತಾಲ್ಲೂಕುಗಳಲ್ಲಿ ಕಳೆದ ಸಂವತ್ಸರದಲ್ಲಿ ಸರಿಯಾಗಿ ಮಳೆ ನಡೆಸಲಿಲ್ಲವಾದಕಾರಣ, ಆ ಪ್ರದೇಶಗಳಲ್ಲಿ ಜಮೀನ್ ಬಾಬಿನ ಕಂದಾಯದ ವಸೂಲಿಬಗ್ಗೆ ಹೆಚ್ಚಾದ ವಾಯಿದೆಗಳನ್ನೂ, ಕೆಲವು ಸಂದರ್ಭಗಳಲ್ಲಿ ಮುಜರೆಯನ್ನೂ, ಕೊಡಬೇಕಾಗಿ ಬಂತು.

ಅಬ್ಕಾರಿ ಬಾಬಿನಲ್ಲಿ ಮಾತ್ರ ಸನ್ ೧೮೮೪—೮೫ನೇ ಇಸವಿಯ ಆರಂಭದಲ್ಲಿ ಕೊಟ್ಟ ಸೇಂದೀ ಮತ್ತು ಶರಾಬಿನ ಹೊಸ ಇಜಾರೆ ಮೊಬಲಗು ಜಾಸ್ತೀ ಆದಕಾರಣ ಸನ್ ೧೮೮೩—೮೪ನೇ ಸಾಲಿಗಿಂತ ೨ ಲಕ್ಷ ರೂಪಾಯಿಗಳು ಜಾಸ್ತೀಯಾಗಿ ಹುಟ್ಟುವಳಿ ಆಯಿತು. ಈ ಇಜಾರೆಗಳು ಪದ್ಧತಿ ಪ್ರಕಾರಕ್ಕೆ ಮೂರು ವರುಷಗಳಿಗೆ ಪೂರೈಸುತ್ತವೆ. ಸಾಯರ್ ಬಾಬಿನಲ್ಲಿ ಸ್ವಲ್ಪವಾಗಿ ಅಂದರೆ ಅರ್ಧಲಕ್ಷ ರೂಪಾಯಿ ಜಾಸ್ತೀ ಆಗಿದೆ. ಫಾರೆಸ್ಟು ಹುಟ್ಟುವಳಿಯಲ್ಲಿ ಶ್ರೀಗಂಧಕ್ಕೆ ಗಿರಾಕಿ ವಿಶೇಷವಾಗಿ ದೊರಕದೆ ಹೋದ ಸಬಬು ಅದರ ವಿಕರಿಯಿಂದ ೩,೦೦,೩೦೮ ರೂಪಾಯಿ ಮಾತ್ರವೇ ಉತ್ಪತ್ತಿ ಆಯಿತು. ಈ ಮೊಬಲಗು ೧೮೮೩—೮೪ನೇ ಸಾಲಿನ [illegible] ೧ಲಕ್ಷ ರೂಪಾಯಿಗಳು ಕಮ್ಮಿ ಆಗಿದೆ. ಈ ಹಿಂದು ಬಾಬಿನ ಹುಟ್ಟುವಳಿಯು ಗತ ಸಾಲಿಗಿಂತ ಕಮ್ಮಿ ಆದಾಗ್ಯೂ, ಸಾಗವಾನಿ ಪ್ರವೋಬು ಜಾಸ್ತೀ ಆದ್ದರಿಂದಲೂ ರೈಲ್ವೆ ಇಲಾಖೆಗೆ ಸ್ಲೀಪರುಗಳನ್ನೂ ಸೌದೆಯನ್ನೂ ಸರಬರಾಯಿ ಮಾಡಿದ್ದರಿಂದಲೂ ಈ ನಷ್ಟವು ಸಂಪೂರ್ಣವಾಗಿ ಜತೆಗೆ ಆದ [illegible] ಸ್ಟಾಂಪು ಹುಟ್ಟುವಳಿಯು ೪,೪೨,೭೯೧ ರೂ ಆಗಿ ೧೮೮೩—೮೪ನೇ ಇಸವಿಗಿಂತ ೧ ಲಕ್ಷ ಜಾಸ್ತೀ ಆಗಿದೆ. ಆದರೆ ಇದೇ ರೀತಿ ಸಾಗವಾನೀ ಮತ್ತು ಸೌದೇ ವಿಕ್ರಯವಾಗಿ ಪ್ರವೋಬು ಆಗುತ್ತೆ ಎಂಬಿರುವದು ಶಾಶ್ವತವೆ [illegible] ಯಾತಕ್ಕೆಂದರೆ —ಎಲ್ಲಾ ಕಾಡುಗಳಿಗೂ, ರಕ್ಷಣೆ ಉಳಿಸಿಕೊಂಡಿರುವ ಸಾಗೇ ಕಾಡುಗಳಿಗೆ ವಿರಾಮವನ್ನು ಕೊಡಬೇಕಾಗುತ್ತೆ. ಮಿಸಲೇನಿಯಸ್ ಖಾನೆ ಚಿಲ್ಲರೆ ರೆವಿನ್ಯೂ ಬಾಬಿನಲ್ಲಿ ಸುಮಾರು ೧ ಲಕ್ಷ ರೂಪಾಯಿಗಳು ಜಾಸ್ತೀ ಆಗಿವೆ. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಈ ಮೈಸೂರು ಸರಕಾರದಲ್ಲಿ ನವಕರಿ ಮಾಡುತ್ತಾ ಇದ್ದ ಬ್ರಿಟಿಷ್ ಆಫೀಸರ ಪೆನ್ಷನ್ ಮತ್ತು ರಜಾ ಅಲೋವನ್ಸಗಳ [illegible] ಲೆಕ್ಕ ಮಾಡುವದರಲ್ಲಿ ಸದರೀ ಆಫೀಸರರು ಈ ಸೀಮೆಯನ್ನು ೧೮೮೧ನೇ ಇಸವಿ ಸೆಪ್ಟೆಂಬರ್ ತಾರೀಖ್ ೩೦ಕ್ಕೆ [illegible] ಮಾಡಿದ ನವಕರಿಯು ಬ್ರಿಟಿಷ್ ಸರ್ವಿಸಿನಂತ ಭಾವಿಸತಕ್ಕದ್ದೆಂದು ಮಾಡಿದ ತೀರ್ಮಾನವು ಇದಕ್ಕೆ ಮುಖ್ಯ ಕಾರಣವಾಯಿತು. ಈ ತೀರ್ಮಾನದ ಆಧಾರದಮೇಲೆ ಬ್ರಿಟಿಷ್ ಗವರ್ನಮೆಂಟಿಗೆ ಮೇಲೆ ನಮೂದಿಸಲ್ಪಟ್ಟ ಬ್ರಿಟಿಷ್ ಆಫೀಸರರ ಪೆನ್ಷನ್ ಮತ್ತು ರಜಾ ಅಲೋವನ್ಸಗಳಗಾಗಿ ಈ ಗವರ್ನಮೆಂಟಿನಿಂದ ಕೊಡಲ್ಪಟ್ಟಿದ್ದಂಥಾ ಮೊಬಲಗು ಈ ಸರಕಾರಕ್ಕೆ ವಾಪಸು ಜಮಾಬಂತು.

ಜಮಾ ಬಾಬಿನಲ್ಲಿ ಅಧಿಕವಾಗಿ ಆರೂವರೆ ಲಕ್ಷ ರೂಪಾಯಿಗಳು ಕಮ್ಮಿಯಾದಾಗ್ಯೂ ಮೇಲ್ಕಂಡ [illegible] ಇತರ ಬಾಬುಗಳಲ್ಲಿ ಹುಟ್ಟುವಳಿ ಜಾಸ್ತಿಯಾದ ಸಬಬು ಬಹಳ ಮಟ್ಟಿಗೆ ಕೂಡಿ ಬಂದು ಹುಟ್ಟುವಳಿಯಲ್ಲಿ ನಿವಳ ಎರಡೂವರೆ ಲಕ್ಷ ರೂಪಾಯಿಗಳು ಮಾತ್ರವೇ ಗತ ೧೮೮೩—೮೪ನೇ ಸಾಲಿಗಿಂತ ಕಮ್ಮಿಯಾಗಿ ಇರುತ್ತೆ. ಖರ್ಚು ಬಾಬಿನಲ್ಲಿ ಯಾವ ವಿಧವಾದ ಭಾರೀ ಬದಲಾವಣೆಗಳು ನಡೆಯಲಿಲ್ಲ. ಕಳೆದ ಸಂವತ್ಸರದಂತೆಯೇ ಒಟ್ಟು ಖರ್ಚು ತೊಂಭತ್ತೊಂಭತ್ತೂವರೆ ಲಕ್ಷ ರೂಪಾಯಿಗಳಿಗೆ ನಿಂತಿತು.

ಪೂರ್ವದಲ್ಲಿ ಸೂಚಿಸಿದಂತೆ ಮೇಲ್ಕಂಡ ಮೊಬಲಗಿನಲ್ಲಿ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಬಾಬತು ಜಮಾ ಖರ್ಚು ಮೊಬಲಗು ಸೇರಿಯಿಲ್ಲ. ಕಳೆದ ಸಂವತ್ಸರದ ಪ್ರಾರಂಭದವರಿಗೂ ಸೀಮೆಯ ಒಟ್ಟು ನಗದಿ ಖಜಾನೆಗೆ ಸೇರುತ್ತಾ ಇದ್ದ

ಮಗಳಿಗೆ ಸ್ಟೇಟ್ ಬಾಬತು ನಿವಳ ಹುಟ್ಟುವಳಿಯು ಅಂದಾಜು ಸುಮಾರು ನಾಲಿಯಾನಾ ಒಂದೆ ಕಡೆ ಲಕ್ಷ ರೂಪಾಯಿಗಳಾಗಬಹುದು.

[illegible] ರಾವಾದ ಬಜೆಟ್ಟಿನ ಪ್ರಕಾರಕ್ಕೆ ೧೮೮೪—೮೫ನೇ ಇ ೧೮೮೫—೮೬ನೇ ಸವಿಯ ಹುಟ್ಟುವಳಿ ಬಜೆಟ್ಟಿನ ಅಂದಾಜ ಮೊ॥ ೧,೦೮,೨೩,೫೦೦ ರೂಪಾಯಿ ಆಗಿದೆ ಜಮೀನ್ ಬಾಬು ಹೊರ್ತು ಮಿಕ್ಕ ವಿಶಿಷ್ಟ ಬಾಬುಗಳ [illegible] ಅಂದಾಜನ್ನು ಗುಜಸ್ತ ಮ [illegible] ನ ಐನ್ ವಸೂಲಿ ಮೊಬಲಗು ಗಳ ಮೇಲೆ ನಿರ್ಧರಿಸಿಯಿದೆ ಜಮೀನ್ ಬಾಬಿನಲ್ಲಿ ೧೮೮೪—೮೫ನೇ ಇಸವಿಯಲ್ಲಿ ಮೇ [illegible] ಕಾರಣಗಳಿಂದ ಐನ್ ವಸೂಲಿ [illegible] ರೂಪಾಯಿಗಳು ಮಾತ್ರವೆ [illegible] ವರ್ಷಕ್ಕೆ ೩೩,೧೧,೦೦೦ರೂ [illegible] ಕಳೆದ [illegible] ಜಮೀನ್ ಬಾಬಿನ ಹುಟ್ಟುವಳಿ [illegible] ಲಕ್ಷ ರೂಪಾಯಿಗಳವರಿಗೆ ಇಳಿದು, ೧೮೭೧—೭೨, ೧೮೭೨—೭೩, ಸಾಲಿಗಳಲ್ಲಿ [illegible] ಷಾಮುಕ್ಕೆ ದಿವಸ್ಸಿ [illegible] ವರ್ಷಗಳ ಹುಟ್ಟುವಳಿ [illegible] ಲಕ್ಷ ರೂಪಾಯಿಗಳಾಗಿ [illegible] ಕಮ್ಮಿಯಾಗಿ ೧೮೭೪—೭೫ನೇ ಇಸವಿಯಲ್ಲಿ ಪುನಃ ೩೩ಲಕ್ಷ ರೂಪಾಯಿಗಳು [illegible] ಕಳೆದ ಸುವ [illegible] ಬದಲಿ ಕ [illegible] ನಿಯಮಿತವಾಗಿ ನಡೆಸದೆ ಇರುವ [illegible] ಮಾಡಲಿಗು ಮಾರಿಕೆಂದ [illegible] ಹೆಚ್ಚಾಗಿಯೇ ಕಾಯ [illegible] ಈ ಕಾರಣಗಳಿಂದ ಸಾ [illegible] ಜಮಾಬಂದಿ [illegible] ಲಕ್ಷ ರೂಪಾಯಿಗಳಿಗಿಂತ [illegible] ಆದರೆ ಕಾಲಕ್ಕೆ [illegible] ಅನುಕೂಲವಾಗಿ ನಡೆಸು [illegible] ತುಜಕೂರಿನ ಐನ್ ಹುಟ್ಟುವ [illegible], ೧೮೮೫—೮೬ನೇ ಇಸವಿ ಬಾಬತು [illegible], ಬಜೆಟ್ಟಿನಲ್ಲಿ ಅಂದಾಜಿನ [illegible] ಸುಮಾರು ೩೦ಲಕ್ಷ ರೂಪಾಯಿಗ [illegible] ತೋರುತ್ತದೆ.

[illegible] ಬಜೆಟ್ಟಿನಲ್ಲಿ ಖರ್ಚುಬಾ [illegible] ೮೦೦ ರೂಪಾಯಿಗಳು ದಾಖಲ್ಮಾ [illegible] ಕಳೆದ ಸಾಲಿನಲ್ಲಿ [illegible] ಗಳಾಗಿದ್ದು. ಮುಂದೆ ಹೇಳುವ [illegible] ಷಿಕ ಪಬ್ಲಿಕ್ ವರ್ಕ್ಸ್‌ಯಾನೆ ಮರ [illegible] ಇಲಾಖೆ ಖರ್ಚನ್ನು [illegible] ಲಕ್ಷದಿಂದ [illegible] ವರಿಗೆ ಜಾಸ್ತಿ ಮಾಡಿದ್ದರಿಂದಲೇ ಮೇಲೆಕಂ [illegible] ಖರ್ಚು ಜಾಸ್ತಿಯಾಗುವದಕ್ಕೆ ಕಾರಣ [illegible] "ಪೋಲೀಸ್", "ಎಡ್ಯುಕೇಷನ್" ([illegible]), ಮತ್ತು "ಮೆಡಿಕಲ್" ([illegible] ಇಲಾಖೆ), ಈ ಬಾಬುಗಳಲ್ಲಿ ಜಾಸ್ತಿ ಖರ್ಚು ದಾಖಲಾಗಿ ಇರುವದಕ್ಕೆ ಕಾರ [illegible] ಪೋಲೀಸ್ ಇಲಾಖೆಯಲ್ಲಿ, ಆ ಇ [illegible] ಗಾಗಿ ಡಿಸ್ಟ್ರಿಕ್ಟ್ ಆಪಸರು [illegible] ಒಳಸಮ್ಮ ಪೋಲೀಸ ಇಲಾಖೆ [illegible] ವಾದ ಭಾರ್ಜನ್ನು ವಹಿಸಿಕೊಂ [illegible] ಪ್ರತ್ಯೇಕ [illegible] ಅಸಿಸ್ಟೆಂಟ್ ಕಮ್ಮಿಷನರ್‌ಗಳನ್ನು ಮೊಕರರುಮಾಡಿದ್ದು ಅವನ್ನು ಕುಮಬುಮು ಆ ಹೋರೆ ಯೋಜನೆ ಮಾಡಿದೆ. ಈಮೇಲೆ ಮಾ ಗೋಣವರಲ್ಲಿ ಅಸಿಸ್ಟೆಂಟ್ ಕಮ್ಮಿಷನರ್‌ಗಳಿಗೋಸ್ಕರ ಹೆಗಲಿನ ಖರ್ಚು ಮೊಬಲಗುಗಳನ್ನು ರೆವಿನ್ಯೂ, ಜುಡಿಷಿಯಲ್ ಮತ್ತು ಪೋಲೀಸ್ ಇಲಾಖೆಗಳಿಗೆ ಹೊಸದಾಗಿ ವಿಭಾಗಿಸಬೇಕಾಗಿ ಬಂತು.

ಸ್ಥಳಿಕ ಮ್ಯುನಿಸಿಪ್ಪಾಲಿಟಿಗಳ ಅಂತಸ್ತನ್ನು ಅಭಿವೃದ್ಧಿ ಪಡಿಸಿದ್ದರಿಂದಲೂ, ಸ್ವಂತ ಶಾಲೆಗಳಿಗೆ ಸರಕಾರದಿಂದ ಕೊಡತಕ್ಕ ದ್ರವ್ಯ ಸಹಾಯದಬಗ್ಗೆ ಹೆಚ್ಚಾದ ಮೊಬಲಗು ದಾಖಲಾಗಿರುವದರಿಂದಲೂ "ಎಡ್ಯುಕೇಷನ್" ಬಾಬಿನಲ್ಲಿ ಸ್ವಲ್ಪ ಜಾಸ್ತಿಯಾಗಿರುತ್ತೆ. ಮತ್ತು "ಮೆಡಿಕಲ್" ಇಲಾಖೆಯಲ್ಲಿ [illegible] ದಗಳ [illegible] ಹೆಚ್ಚಾದ [illegible]

೧೮೮೪—೮೫ನೇ ಇಸವಿ	ಐನ್ ಖರ್ಚು ೧೦೯೫೦೮೫
೧೮೮೫—೮೬ನೇ ಇಸವಿ	ಅಂದಾಜ್ ೧,೬೧೭೫೦
೧೮೮೪—೮೫ನೇ ಇಸವಿ	ಐನ್ ಖರ್ಚು ೧೩೦೫೮
೧೮೮೫—೮೬ನೇ ಇಸವಿ	ಅಂದಾಜ್ ೧,೭೦೦೫

ಬಂಗಲೂರು ದಾಖಲ್ಮಾಡಿರೋಣದರಿಂದಲೂ ಅನಾತಿ ಕರಿಗಳಿಗೆ ಬದಲಾಗಿ ಅಸಿಸ್ಟೆಂಟ್ ಸರ್ಜನ್‌ಗಳನ್ನು ಮೊಕರರ್ ಮಾಡಿದ್ದರಿಂದಲೂ ಸ್ವಲ್ಪಜಾಸ್ತಿಯಾಗಿರುತ್ತೆ.

ಸ್ಟೇಟ್ ರೈಲ್ವೆಗೆ ಸಂಬಂಧವಾದ ಜಮಾ ಮತ್ತು ಖರ್ಚುಗಳ ಸ್ಟೇಟ್‌ಮೆಂಟ್‌ನ್ನು ಈಗ ತಿಳಿಸುತ್ತೇವೆ. ಮೈಸೂರಿಂದ ಗುಬ್ಬಿವರಿಗೆ ೧೦ ಮೈಲಿ ಪ್ರಾಸಿಂಸಿ ಲೈನ್ ಈಗ ನಡೆಯುತ್ತಾ ಇದೆ. ಈ ಲೈನಿನ ಹುಟ್ಟುವಳಿ ಸನ್ ೧೮೮೪—೮೫ನೇ ಇಸವಿ ಅಕ್ಟೋಬರ್‌ವರಿನ್‌ಗಳಿಗೆ ವಿವರಿಸಿ ಇರುವಮೇರೆ ೬೨,೯೪,೧೩೦ ರೂಪಾಯಿ ಆಯಿತು.

Occasional Notes
ನೈಮಿತ್ತಿಕವಿಷಯನ್ಯಾಸ

Stamped receipts.—ಸರ್ಕಾರ್ ನೌಕರರು ಯಥಾರ್ಥವಾಗಿ ಪ್ರಯಾಣದ ಖರ್ಚಿನಬಗ್ಗೆ ಪಡೆಯುವ ಅಲೋವೆನ್ಸಗಳು, ಬಾಕೀಯಲ್ಲಿಲ್ಲದೆ ಹೋದಾಗನ್ಯ ರಜೆ ಅಲೋವೆನ್ಸಗಳು, ಇವುಗಳಿಗೆ ಕೊಡಬೇಕಾದ ರಸೀದಿ ವಿಷಯದಲ್ಲಿ ಹಿಂದಿನ ಹುಕುಮನ್ನು ಬದಲಾಯಿಸಿ, ಇದು ಮೊದಲು ಮುಂದೆ, ಅವುಗಳಿಗೆ ಕೊಡಲ್ಪಡುವ ರಸೀದಿಗಳಿಗೆ ಒಂದಾಣೆ ಸ್ಟಾಂಪು ಹಚ್ಚತಕ್ಕದ್ದೆಂದು ನಿರ್ಣಯಿಸಲ್ಪಟ್ಟಿದೆ

The Nizam's trip to England.—ಹೈದರಾಬಾದ ನಿಜಾಮರವರು ಬರುವವರ್ಷದಲ್ಲಿ ಇಂಗ್ಲಾಂಡ ದೇಶಕ್ಕೆ ಹೋಗಿ ಬರಬೇಕೆಂದು ಹಿಂದೆ ಮಾಡಲ್ಪಟ್ಟಿದ್ದ ಯೋಜನೆಯನ್ನು ಆಚರಣೆಯಲ್ಲಿ ತರಬೇಕೆಂಬ ಆತನಿಗೆ ಬಹಳ ನಿರ್ಬಂಧವುಂಟುಮಾಡಲ್ಪಟ್ಟು ಇರುತಲೂ ಇದೆ ಕಲೋನಿಯಲ್ ಎಕ್ಸಿಬಿಷನ್, ಅಂದರೆ, ಆಯಾ ದೇಶಗಳಲ್ಲಿ ತಯಾರಾಗತಕ್ಕ ವಿವಿಧವಸ್ತು ಪ್ರದರ್ಶನ ಕಾಲದಲ್ಲಿ ನಿಜಾಮರವರು ಲಂಡನ್ ಪಟ್ಟಣಕ್ಕೆ ಬರುವಂತೆ ಅವರು ಪ್ರೋತ್ಸಾಹ ಗೊಳಿಸತಕ್ಕದ್ದೆಂದು ಇಂಡ್ಯಾಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ರವರು ಹೈದರಾಬಾದ ಸಂಸ್ಥಾನದ ಪ್ರಧಾನ ಮಂತ್ರಿಯವರಿಗೆ ಬರೆದಿರುವಂತೆ ಒಂದಾನೊಂದು ಸಿಕಂದರಾಬಾದ ಪತ್ರಿಕೆ ಹೇಳುತಿದೆ

LOCAL AND PROVINCIAL NEWS
ಬಳದೇಶವುಮತ್ತುತಾಲ್ಲೂಕಾವಾರ್ತೆಗಳು.

The Dewan.—ಈಸಂಸ್ಥಾನದ ದಿವಾನರಾದ ಮ. ಕೆ. ಶೇಷಾದ್ರಿ ಅಯ್ಯರ್ ಬಿ ಎ ಬಿ. ಎಲ್. ಯವರು ಈ ತಿಂಗಳ ೧೦ನೇ ತಾರೀಖಿನಲ್ಲಿ ಮೈಸೂರಿಂದ ಇಲ್ಲಿಗೆ ಬರುವರೆಂದು ಕೇಳುತ್ತೇವೆ.

A public holiday.—ಬರುವ ಗುರುವಾರ ದೀಪಾವಳಿ ಹಬ್ಬವಾದದರಿಂದ ಇಲ್ಲಿನ ಸರ್ಕಾರ್ ಇಲಾಖೆಗಳಿಗೂ ಕೋರ್ಟುಗಳಿಗು ಸಹ ರಜಾ ಕೊಡಲ್ಪಡುವದು.

Promotion.—[illegible] ಸಂಸ್ಥಾನದ ದಿವಾನರವರ ಜನರಲ್ ಸೆಕ್ರೆಟರಿಯಾದ ಮ. ವಿಜಯೇಂದ್ರರಾಯರವರು, ಮಾಹೆಯಾನಾ ೧,೫೦೦ ರೂಪಾಯಿಗಳ ಸಂಬಳದ ಮೈಸೂರು ಗವರ್ನಮೆಂಟ್ ಚೀಫ್ ಸೆಕ್ರೆಟರಿಯಾಗಿ ಮೊಕರರ್ಮಾಡಲ್ಪಟ್ಟರೆಂತೆ ಬಳದೇಶದ ಡೆಯಿಲಿಪ್ರೋಗ್ರೆಸ್ ಪತ್ರಿಕೆಯ ಮೂಲಕ ತಿಳಿಯಬರುತಿದೆ.

War in Burmah.—ಬರ್ಮಾದೇಶದ ಅರಸರವರಿಗೂ ಇಂಗ್ಲೀಷಿನವರಿಗೂ ಈಚೆಗೆ ಉಂಟಾದ ಕಲಹದಿಂದ ಅದು ಸಮಾಧಾನದಲ್ಲಿ ವ್ಯವಸ್ಥೆಯಾಗದೆ ಹೋಗಲು ಅವರನ್ನುವಿಧೇಯರನ್ನಾಗಿ ಮಾಡಿಕೊಳ್ಳುವದಕ್ಕೆ ಬೇರೆಯಾವ ಉಪಾಯವೂ ಕಾರ್ಯಕಾರಿ ಯಾಗಲಾರದೆಂದು ಯೋಚಿಸಿ ಯುದ್ಧಸನ್ನಾಹಗಳು ಅಲ್ಲಲ್ಲಿ ನಡೆಯುತ, ಈನೂರಿ [illegible] ಯುದ್ಧಗಳು, ಕುದುರೆಗಳು, ತುಪಾಕಿಗಳು, ದೇಶರಕ್ಷಕರು ಮೊದಲಾದವು ಶೈಶಿಮಾರ್ಗವಾಗಿ ಮದರಾಸಿಗೆ ಹೋಗಿ, ಅಲ್ಲಿಂದ ರಂಗೂನಿಗೆ ಹಡಗು ಹತ್ತುತಲಿವೆ

Chitaldroog District.—ಹಿಂದೆ ಬಹುಕಾಲದ ವರೆವಿಗು ಒಂದು ಡಿಸ್ಟ್ರಿಕ್ಟಾಗಿದ್ದ ಚಿತ್ರದುರ್ಗವು ಈಚೆಗೆ ಕೆಲವು ಸಂವತ್ಸರಗಳ ಮೊದಲು ಒಂದು ಸಬ್‌ಡಿವಿಜನಾಗಿ ಮಾಡಲ್ಪಟ್ಟು, ಅದು ಒಬ್ಬ ಅಸಿಸ್ಟೆಂಟ್ ಕಮ್ಮಿಷನರ ಆಡಳಿತಕ್ಕೆ ವಹಿಸಲ್ಪಟ್ಟಿತ್ತಷ್ಟೇ. ಈಗ ಸದರೀ ಸಬ್‌ಡಿವಿಜನ್ ಹಿಂದಿನಂತೆಯೇ ಒಂದು ಡಿಸ್ಟ್ರಿಕ್ಟಾಗಿ ಮಾಡಲ್ಪಟ್ಟದರಿಂದ ಬೆಂಗಳೂರು ಡೆಪ್ಯುಟಿ ರಿಜಿಸ್ಟ್ರಾರಾದ ಮ॥ ರಾ॥ ಬಾ॥ ಬಸವಪ್ಪನವರು ಅಲ್ಲಿನ ಡೆಪ್ಯುಟಿ ಕಮ್ಮಿಷನರಾಗಿಯೂ, ಅವರ ಕೆಲಸಕ್ಕೆ ಮ॥ ಬಿ. ಕೆ. ವೆಂಕಟವರದಯ್ಯಂಗಾರ್ರವರೂ ಮೊಕರರ್ಮಾಡಲ್ಪಡುವರೆಂದು ಕೇಳುತ್ತೇವೆ

Arrangements.—ಗತ ಶನಿವಾರದ ಮೈಸೂರು ಗೆಜೆಟಿನ ಪುರವಣಿಯಿಂದ ನೂತನವಾಗಿ ಇದರಡಿಯಂದ ಏರ್ಪಾಡುಗಳು ನಡೆದಂತೆ ತಿಳಿಯಬರುತಿದೆ. ಪೋಲೀಸ್ ಇಲಾಖೆಗಾಗಿ ಪ್ರತ್ಯೇಕ ಒಬ್ಬ ಸೆಕ್ರೆಟರಿ ಇದುವರಿವಿಗೆ ಇರುತಲಿದ್ದರಷ್ಟೆ ಸದರೀ ಕೆಲಸವು ಈಗ ಮೌಕೂಫ್ ಮಾಡಲ್ಪಟ್ಟಿತು. ಪರಂತು ಇದರಿಂದ ಗವರ್ನಮೆಂಟಿಗೆ ಉಳಿಯುವದೇನಾಯಿತೆಂದು ಯಾರಾದರು ಭಾವಿಸುವರೇನೋ ಹಾಗಿಲ್ಲವು ಆ ಕೆಲಸವು ನಾಮಾಂತರವನ್ನೈದಿತು. ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್ ಮ॥ ರಿಕೈಡರ್ಸ್‌ರವರು ಮೈಸೂರುದೇಶದ ಪೋಲೀಸ ಇನ್‌ಸ್ಪೆಕ್ಟರ್ ಜನರಲ್ ಅಭಿಧಾನದೊಡನೆ ಪೋಲೀಸ್ ಸೆಕ್ರೆಟರಿ ಕೆಲಸದ ಚಾರ್ಜನ್ನು ಮ॥ ವೆಂಕಟ ವರದಯ್ಯಂಗಾರ್‌ರವರಿಂದ ಗತ ಶುಕ್ರವಾರದದಿನ ತೆಗೆದುಕೊಂಡರು. ಮ॥ ರಿಕೈಡರ್ಸ್‌ಯವರು ಬಹುಕಾಲವಾಗಿ ತಾವು ವಹಿಸಿದ್ದ ಈ ಡಿಸ್ಟ್ರಿಕ್ಟ ಚಾರ್ಜನ್ನು ಕೆಪ್ಟೆನ್ ಮ್ಯಾಕಿಂಟೈರ್ ಯವರಿಗೆ ಅದೇದಿನ ಒಪ್ಪಿಸಿದರು. ೧ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿಯೂ ಪ್ರೊಬೇಷನ್ ಸಬ್‌ಡಿವಿಜನ್ ಆಫೀಸರಾಗಿಯೂ ಇರುವ ಮಿಸ್ಟರ್ ಮಾಧವರಾಯರವರು ಶಿವಮೊಗ್ಗಾ ಡಿಸ್ಟ್ರಿಕ್ಟ ಕಾಯಂ ಡೆಪ್ಯುಟಿ ಕಮ್ಮಿಷನರಾಗಿ ಮೊಕರರ್ಮಾಡಲ್ಪಟ್ಟು ಅವರು ಸದರೀ ಡಿಸ್ಟ್ರಿಕ್ಟ ಚಾರ್ಜನ್ನು ಕೆಪ್ಟೆನ್ ಮ್ಯಾಕಿಂಟೈರ್ ಯವರಿಂದ ತೆಗೆದುಕೊಂಡರು. ಇದಲ್ಲದೆ ಇನ್ನೂ ಕೆಲವು ಏರ್ಪಾಡುಗಳು ಸಮೀಪದಲ್ಲಿ ನಡೆಯುವವೆಂದು ತಿಳಿಯಬರುತಿದೆ. ಪ್ರೊಬೇಷನ್ ಸಬ್‌ಡಿವಿಜನನ್ನು ಒಡೆದು ಪೂರ್ವದಂತೆ ಕೆಲವು ತಾಲ್ಲೂಕುಗಳು ಹಾಸನ ಡಿಸ್ಟ್ರಿಕ್ಟಿಗೂ ಕೆಲವು ಮೈಸೂರು ಡಿ॥ ಗೂ ಸೇರಿಸಲ್ಪಡುತಿವೆ. ಮೊ॥ರೈಸ್‌ಯವರು ಎಡ್ಯುಕೇಷನ್ ಸೆಕ್ರೆಟರಿ ಕೆಲಸದ ಚಾರ್ಜನ್ನು ಮ॥ ಮೆಕವರದಯ್ಯಂಗಾರ್ರವರಿಗೆ ಕೊಟ್ಟರು. ಇವರು ಶಾಸನಗಳ ಪರೀಕ್ಷಾರ್ಥ ಸ್ವಪರಿ ಹವ್ಯಾಸಿಯಮೇಲೆ ಹೋಗುವರೆಂದು ತಿಳಿಯಬರುತಿದೆ.

NEWS LETTER

ಅಯ್ಯಾ,—ಈವೂರಲ್ಲಿ ದಸರಾ ಮತ್ತು ಮೊಹರಂ ಹಬ್ಬಗಳು ಯೇಕ ಕಾಲದಲ್ಲಿ ಬಂದ್ದರಿಂದ ಇವುಗಳ ವಿಷಯದಲ್ಲಿ ಇಲ್ಲಿ ನಡೆದ ಸಂಗತಿಗಳನ್ನು ತಮ್ಮ ಮನೋಹರವಾದ ಪೇಪರಿನಲ್ಲಿ ಪ್ರಕಟಿಸಲು ಓದುವವರಿಗೆ ಸಂತೋಷವನ್ನುಂಟುಮಾಡಬಹುದಾದದು. ಶ್ರೀಮಂತ ದಿವಾನರವರಿಂದ ವಿಜಯದಶಮೀ ಉತ್ಸವಕ್ಕೆ ಮೈಸೂರಿಗೆ ಬರಬೇಕೆಂದು ಬಂದ ಪತ್ರದಂತೆ ಮ॥ ಕೃಷ್ಣಮೂರ್ತಿಗಳವರು ಮೈಸೂರಿಗೆ ಹೊರಡುವದಕ್ಕಿಂತ ಮುಂಚಿತವಾಗಿ ಇಲ್ಲಿನ ಹಿಂದೂ ಮತ್ತು ಮಹಮ್ಮದೀಯ ಜನಗಳನ್ನು ಕರೆಸಿಕೊಂಡು ಅವರುಗಳ ಇಷ್ಟಾನುಸಾರವಂತೆ ಉತ್ಸವಗಳು ಹೊರಡುವದಕ್ಕೆ ಅವರವರಿಗೆ ತಕ್ಕ ಯೇರ್ಪಾಡನ್ನು ಮಾಡಿ ಇಲ್ಲಿನ ಪೋಲೀಸ್ ಮತ್ತು ಅಸಿಸ್ಟೆಂಟ್ ಕಮ್ಮಿಷನರವರಿಗೆ ತಾವು ಇಲ್ಲದ ಕಾಲದಲ್ಲಿ ಈ ಉತ್ಸವಗಳನ್ನು ಗಲಾಟೆ ಇಲ್ಲದಂತೆ ನಡೆಸಬೇಕೆಂದು ಅಪ್ಪಣೆಮಾಡಿ ಹೊರಟುಹೋದರು. ಮಹರ್‌ನವಮೀ ದಿವಸ ಹಿಂದು ಮತ್ತು ಮಹಮ್ಮದೀಜನಗಳು ಡೆಪ್ಯುಟೀ ಕಮ್ಮಿಷನರ್ ಸಾಹೇಬರವರು ಏರ್ಪಾಡುಮಾಡಿದ ಮಾರ್ಗಗಳು ತಮ್ಮ ತಮ್ಮ ಉತ್ಸವಗಳನ್ನು ಹೊರಡಿಸುವದಕ್ಕೆ ಅನುಕೂಲವಾಗಿಲ್ಲವೆಂದು ಇಲ್ಲಿನ ಮ್ಯಾಜಿಸ್ಟ್ರೇಟರವರ ಮುಂದೆ ತಕರಾರು ಮಾಡಲು ಅವರು ಈ ಉಭಯತ್ರರ ಇಷ್ಟಾನುಸಾರವಂತೆ ತಕ್ಕ ಬದಲಾವಣೆಗಳನ್ನು ಮಾಡಿ ಇವರ ಕೈಯಿಂದ ಉತ್ಸವಗಳು ಹೊರಡುವ ಕಾಲದಲ್ಲಿ ಒಬ್ಬರಿಗೊಬ್ಬರು ಯೇನೂ ತೊಂದರೆ ಮಾಡುವದಿಲ್ಲವೆಂದು ಮುಚ್ಚಳಿಕೆಗಳನ್ನು ಬರೆಸಿಕೊಂಡರು. ವಿಜಯ ದಶಮೀ ದಿವಸ ಮಧ್ಯಾಹ್ನ ಒಂದು ಘಂಟೆಗೆ ಹಿಂದು ದೇವರುಗಳ ಉತ್ಸವಗಳು ಹೊರಡು ಸಾಯಂಕಾಲ ಐದುಘಂಟೇ ಒಳಗಾಗಿ ವಾಪಸ ಬರುವಂತೆ ಡೆಪ್ಯುಟಿ ಕಮ್ಮಿಷನರವರು ಯೇರ್ಪಾಡು ಮಾಡಿದ್ದರು. ಆ ದಿವಸ ೧ ಘಂಟೇ ಸುಮಾರಿಗೆ ಕೆಲವು ಮಹಮ್ಮದೀಯರು ಡೆಪ್ಯುಟಿ ಕಮ್ಮಿಷನರವರ ಏರ್ಪಾಡಿನಂತೆ ಹಿಂದು ಉತ್ಸವಗಳು ಬಂದಲ್ಲಿ ನಮ್ಮ ತಾಬೂತುಗಳಿಗೆ ಅವಮಾನವಾಗುವದರಿಂದ ನಮ್ಮ ತಾಬೂತುಗಳಿಗೆ ಯೆದುರಾಗಿ ಬಾರದೆ ಬೇರೆ ರಸ್ತೆಯಲ್ಲಿ ದೇವರ ಉತ್ಸವಗಳನ್ನ ಬೆಳಸುವಂತೆ ಮಾಡಬೇಕೆಂದು ಮ್ಯಾಜಿಸ್ಟ್ರೇಟರವರಿಗೆ ಅರ್ಜಿಯನ್ನು ಕೊಟ್ಟರು. ಇಷ್ಟರೊಳಗಾಗಿ ಹಿಂದೂ ದೇವರುಗಳ ಉತ್ಸವಗಳೂ ಹೊರಟವು. ತಮ್ಮಲ್ಲಿಗೆ ಬಂದ ಅರ್ಜಿಯನ್ನು ಮ್ಯಾಜಿಸ್ಟ್ರೇಟರವರು ತೆಗೆದುಕೊಂಡು ಕಚೇರಿಗೆ ದಯಮಾಡುವದರೊಳಗಾಗಿ ಕೆಲವು ಮಹಮ್ಮದೀಯರು ಗುಂಪುಕೂಡಿಕೊಂಡು ಅವರ ಸಂಗಡಲೇಬಂದು ಹಿಂದೂ ಉತ್ಸವಗಳನ್ನು ನಡೆಸಿದಲ್ಲಿ ನಾವುಗಳು ಖಂಡಿತವಾಗಿ ತಡೆ ಮಾಡುವದಲ್ಲದೆ ಅದರಿಂದ ಯೇನು ತೊಂದರೆ ಒದಗ್ಯೋ ಹೇತು ತಾಬೂತುಗಳಂಥ ದೇವರುಗಳನ್ನು ಮತ್ತು ಜನಗಳನ್ನು ಹೊಡದು ಅವಮಾನ ಪಡಿಸುತ್ತೇವೆಂದು ಹೇಳಿದರು. ಜನಗಳ ಗಲಾಟೆಯನ್ನು ನೋಡಿ ಮ್ಯಾಜಿಸ್ಟ್ರೇಟರವರು ಹಿಂದೂ ಜನರ ದೇವರುಗಳನ್ನು ಮುಂದಕ್ಕೆ ಬಾರದಂತೆ ಅಪ್ಪಣೆ ಮಾಡಿದರು. ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರವರನ್ನು ಕರೆಸಿ ಈ ಮಹಮ್ಮದೀಯರ ಅರ್ಜಿಯನ್ನು ಮತ್ತು ಸೇರಿರುವ ದೊಡ್ಡ ಗುಂಪುಗಳನ್ನು ತೋರಿಸಿ ಡೆಪ್ಯುಟಿ ಕಮ್ಮಿಷನರವರು ಮಾಡಿದ ಯೇರ್ಪಾಡಿನಂತೆ ಗಲಾಟೆ ಇಲ್ಲದೆ ಉತ್ಸವಗಳನ್ನು ನಡೆಸುವುದಕ್ಕೆ

ಸಾಧ್ಯವೇಯೆಂದು ಕೇಳಲು ಜನಗಳು ಇರುವ ಸ್ಥಿತಿಯನ್ನು ನೋಡಿ ಅವರು ಸಾಧ್ಯವಲ್ಲವೆಂದು ಚೆನ್ನಾಗಿ ಆಲೋಚನೆ ಮಾಡಿ ಹೇಳಿದರು. ಅನಂತರ ಸಾಯಂಕಾಲದವರಿಗೂ ಈ ಸಬಂದವಾದ ವಾಕ್ಕಲಹವೂ ಜನಗಳಿಗೂ ಅವರಿಗೂ ಕೂಡ ನಡೆಯಿತು.

ಹೀಗೆ ಉತ್ಸವ ಭಂಗವಾಗಲು ಹಿಂದೂಜನಗಳೆಲ್ಲರ ಸೇರಿ ಮೈಸೂರಿನಲ್ಲಿದ್ದ ತಮ್ಮ ಡೆಪ್ಯುಟಿ ಕಮ್ಮಿಷನರವರಿಗೆ ತಂತಿ ವರ್ತಮಾನವನ್ನು ಕೊಟ್ಟರು. ಮಾರನೇ ದಿನವೆಲ್ಲ ಯೆಲ್ಲಿನೋಡಿದಾಗ್ಯೂ ಹಿಂದೂ ಜನಗಳೆಲ್ಲರು ಗುಂಪುಕಟ್ಟಿಕೊಂಡು ಉತ್ಸವ ಭಂಗವಾಗಿ ಕೆರೆಯ ಸಮೀಪದ ಬೈಲಿನಲ್ಲಿ ತಮ್ಮ ದೇವರುಗಳು ಇರುವದನ್ನು ಕುರಿತು ಮಾತನಾಡಿಕೊಳ್ಳುತ್ತಾ ಆದಿನ ರಾತ್ರಿ ತಾಬೂತುಗಳು ಸರಗಸ್ತು ತಮ್ಮ ದೇವಸ್ಥಾನಗಳ ಯೆದುರಾಗಿ ಬಾರದಂತೆ ತಮಗೆ ಉತ್ಸವಭಂಗವಾದ್ದರಿಂದ ಮಹಮ್ಮದೀಯರ ಉತ್ಸವಗಳನ್ನು ನಡಿಸಕೂಡದೆಂದು ಮ್ಯಾಜಿಸ್ಟ್ರೇಟರವರಿಗೆ ಅರ್ಜಿಯನ್ನು ಕೊಟ್ಟರು. ಇಷ್ಟರೊಳಗಾಗಿ ಪ್ಯಾಟೆಯಲ್ಲಿ ಕೋಮುವಾರು ಮುಖ್ಯ ಜನಗಳೆಲ್ಲರೂ ಸೇರಿ ಮುಸಲ್ಮಾನರಿಗೆ ಅವರ ಉತ್ಸವಗಳ ನಿಮಿತ್ಯ ಯಾರೇನುಗೆರಿ ಯಾವದೊಂದು ಉಪಾಯವೂ ಮಾಡದಂತೆ ಕಟ್ಟುಮಾಡಿದರು. ಈರೀತಿ ಕಟ್ಟುಮಾಡಿದ್ದರಿಂದಲು ಮತ್ತು ಮ್ಯಾಜಿಸ್ಟ್ರೇಟರವರು ಹಿಂದೂ ದೇವಸ್ಥಾನಗಳ ಮುಂದೆ ತಾಬೂತುಗಳು ಹೋಗ ಕೂಡದೆಂದು ಆಜ್ಞೆಕೊಟ್ಟದ್ದರಿಂದಲೂ ರಾತ್ರಿ ಅವರ ಶಾಸ್ತ್ರಾನುಸಾರವಾಗಿ ತಾಬೂತುಗಳನ್ನು ರಾತ್ರಿ ೧೦ ಘಂಟೆವರಿಗೂ ಬಹಳಗಲಾಟೆ ಮಾಡುತ್ತಿದ್ದ ಮಹಮ್ಮದೀಯರು ಅನಂತರ ಅಗ್ನಿಗುಂಡಗಳಂ ಮುಚ್ಚಿಬಿಟ್ಟು ತಾಬೂತುಗಳಿಗೆ ಪರದೆಗಳು ಯೆಳದು ಯೆಲ್ಲಿಯವರು ಅಲ್ಲಿ ಸ್ವಸ್ಥವಾಗಿದ್ದರು. ಈರೀತಿ ಉಭಯತ್ರರಿಗೂ ಉತ್ಸವ ಭಂಗವಾಗಿ ಮನಸ್ತಾಪಗಳು ಹೆಚ್ಚುತಲಿದ್ದವು. ಅಧಿಕಾರಿಗಳಾದವರು ಯಾವಾಗ್ಯೂ ಇಂತಾ ಸಂದರ್ಭಗಳು ಬರುವದಕ್ಕೆ ಮುಂಚಿತವಾಗಿಯೇ ತಕ್ಕ ಬಂದೋಬಸ್ತುಮಾಡಿ ಯೆಲ್ಲಾ ಮತಸ್ಥರಿಗೂ ಸಂತೋಷವನ್ನುಂಟುಮಾಡಬೇಕು. ಬೊಗಳುವ ನಾಯಿ ಕಚ್ಚುವದಿಲ್ಲವೆಂದು, ಯಾರಾದರೆ ವಿಶೇಷ ಜಂಭ ಕೊಚ್ಚಿಕೊಳ್ಳುತ್ತಾರೊ ಅಂತಾ ಮನುಷ್ಯರು ಸಮಯದಲ್ಲಿ ಧೈರ್ಯವಿಲ್ಲದೆ ಹಿಂದೆಬೀಳುವರೆಂಬುದು ಲೋಕಪ್ರಸಿದ್ಧವಾಗಿರುವದು ಮೇಲೆಹೇಳಿದ ಸಾಮತಿರೀತ್ಯಾ ಒಬ್ಬರಾದರು ಆ ಕಾಲದಲ್ಲಿ ಧೈರ್ಯವಾಗಿ ನಿಲ್ಲದೆ ಯೆಲ್ಲಿನವರು ಅಲ್ಲಿ ನಿಂತುಹೋದರು. ಮಂಗಳವಾರ ರಾತ್ರಿ ಒಂದು ಘಂಟೆ ಸುಮಾರಿಗೆ ಟ್ರಾಲೀಮೇಲೆ ಬೆಂಗಳೂರಿಂದ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಬಂದರು. ಮಾರನೇದಿವಸ ಉಭಯ ಮತಸ್ಥರನ್ನು ಕರೆಸಿಕೊಂಡು ಅದರಲ್ಲಿ ಉತ್ಸವಗಳು ನಡೆಯುವದಕ್ಕೆ ಇರುವ ಅಭ್ಯಂತರಗಳನ್ನು ಚೆನ್ನಾಗಿ ವಿಚಾರಿಸಿ ಉತ್ಸವಗಳು ಹೊರಡುವಂತೆ ಯೇರ್ಪಾಡು ಮಾಡಿದರು. ಮಹಮ್ಮದೀಯರಲ್ಲಿ ತಕರಾರುಮಾಡಿದ ಕೆಲವರನ್ನು ಕ್ರಿಮಿನಲ್ ಪ್ರೊಸೀಡ್ಯೂರ್ ೫೧೮ನೇ ಸೆಕ್ಷನ್‌ಪ್ರಕಾರ ಛಾರ್ಜ್‌ಮಾಡಿದರು. ಹಿಂದೂ ಉತ್ಸವಗಳೆಲ್ಲ ಗಲಾಟೆಯಿಲ್ಲದೆ ನಡೆಯಿತು ಮಹಮ್ಮದೀಯರ ಉತ್ಸವಗಳು ನಡೆಯುವದು ಅವರ ಶಾಸ್ತ್ರಕ್ಕೆ ವಿರೋಧವಾದ್ದರಿಂದ ಸಂದರ್ಭವಿಲ್ಲದೆ ನಿನ್ನೆದಿವಸ ಡೆಪ್ಯುಟಿ ಕಮ್ಮಿಷನರವರ ಹೇಳಿಕೆಮೇಲೆ ಕುದುರೆಗಳಮೇಲೆ ಹುವ್ವಿನ ಹಾರಗಳನ್ನ ಹಾಕಿಕೊಂಡು ಶಾಸ್ತ್ರವನ್ನ ಒದುತ್ತಾ ಉತ್ಸವವನ್ನು ಮಾಡಿಕೊಂಡು ವಾಪಸ್ ಬಂದರು. ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಬುದ್ಧಿವಂತರ ಈರೀತಿ ಉಭಯತ್ರರಿಗೂ ಮನಸ್ತಾಪ ಕಡಿಮ್ಮೆಯಾಗುವಂತೆ ಮಾಡಿ ಇಬ್ಬರ ಉತ್ಸವಗಳನ್ನು ನಡೆಸಿದ್ದು ಅವರಘನತೆಗೆ ಬಹಳಭೂಷಣವಾಗಿದೆ. ತುಮುಕೂರು ತಾ॥ ೨೮—೧೦—೮೫.

TELEGRAPIHC SUMMARY
ತಂತಿವೃತ್ತಾಂತ ಸಂಗ್ರಹವು.

ವ್ಹಿಯೆನ್ನಾ, ೨೮ನೇ ಅಕ್ಟೋಬರ್ —ಸರ್ವಿಯಾ ದೇಶದವರು ಬಲ್ಗೇರಿಯಾ [illegible] ಸೈನ್ಯದೊಡನೆ [illegible] ಬಲ್ಗೇರಿಯಾದವರು ತಮ್ಮ ಸೇನೆಯೊಡನೆ [illegible] ಹೋಗುತಲಿರುತಂತೆ [illegible] ವರ್ತಮಾನಬಂದಿರುತದೆ.

ಬೆಲ್‌ಗ್ರೇಡ್, ೨೯ನೇ ಅಕ್ಟೋಬರ್ —ಸರ್ವಿಯಾ [illegible] ಬಲ್ಗೇರಿಯಾದ [illegible] ಕಸ್ತಂಡಾಪ್, ಅಂದರೆ, [illegible] ಆಫಿಸರ್ [illegible] ಸ್ವಾಧೀನ ಮಾಡಿಕೊಂಡರು.

ಲಂಡನ್, ೨೯ನೇ ಅಕ್ಟೋಬರ್ —[illegible]

[illegible]

ಲಂಡನ್, ೩೦ನೇ ಅಕ್ಟೋಬರ್ —[illegible]

[illegible]

ಬೆಲ್‌ಗ್ರೇಡ್, ೩೦ನೇ ಅಕ್ಟೋಬರ್ —ಸರ್ವಿಯಾ [illegible]

ಕಾನ್‌ಸ್ಟಾಂಟಿನೋಪಲ್, ೩೦ನೇ ಅಕ್ಟೋಬರ್ —[illegible]

ರಂಗೂನ್, ೩೦ನೇ ಅಕ್ಟೋಬರ್ —3,000 [illegible]

ಮಾಂಡಲೇ ಪಟ್ಟಣದಿಂದ [illegible]

[illegible]

ಬ್ರಿಟಿಷರು [illegible]

ಲಂಡನ್, ೩೧ನೇ ಅಕ್ಟೋಬರ್ —ಇಂಡ್ಯಾ ಸೇಟ್ [illegible]

[illegible] ಹೋಗುತ್ತಿದ್ದಾರೆ [illegible]

ಮಾಂಡಲೇ ಪಟ್ಟಣದೊಳು [illegible] ಹೋಗಿರುವರು [illegible]

ಶುಭವಾರದದಿನ [illegible]

ಲಂಡನ್, ೩೧ನೇ ಅಕ್ಟೋಬರ್ —ಇಂಡ್ಯಾ ಸೇಟ್ ಸೆಕ್ರೆಟರಿಯಾದ ಲಾರ್ಡ್ ರಾಂಡಾಲ್ಫ್ ಚರ್ಚಿಲ್ ಯವರು, ನಿನ್ನೆಯದಿನ ಬರ್ಮಿಂಗ್‌ಹ್ಯಾಮ್ ಪಟ್ಟಣದೊಳು [illegible] ಇಂಡ್ಯಾ [illegible] ಇಂಗ್ಲಿಷರು ಇಂಡ್ಯಾರಾಜ್ಯವನ್ನು [illegible] ಎಂತ ತಿಳಿಸಿದರು.

EXTRACT.

PATENT MANURE
ಹೊಸ "ಪೇಟೆಂಟ್" ಗೊಬ್ಬರವು.

ಪುನೆ ಸೈನ್ಸ್ ಕಾಲೀಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಎಸ್ ಕುಕ್‌ರವರು ರೂಚಿಗೆ ಒಂದು ಸೀಗೊಬ್ಬರವನ್ನು ಕಂಡುಹಿಡಿದದು ಬಗ್ಗೆ ಸರಕಾರದವರ ಕಡೆಯಿಂದ ಪೇಟೆಂಟ್ ಅಂದರೆ ಹಕ್ಕುಪತ್ರವನ್ನು ಪಡೆದಿರುತ್ತಾರೆ. ಈಗೊಬ್ಬರವು ನೋಡಲಿಕ್ಕೆ ಬೆಂಮ, ಇಟ್ಟಿಗೆ ಕಲ್ಲುಗಳಂತೆ ಇವೆ ಇದು ಸುಲಭವಾಗಿ ಪುಡಿಕಿ ಮಾಡಬಹುದು ಮತ್ತು ಬೀಜಗಳ ಫಲದಾಯಕಶಕ್ತಿಯನ್ನು ಮರಳಿ ವೃದ್ಧಿಮಾಡಲಿಕ್ಕೆ ಇದುವರಿವಿಗೆ ಕಂಡು ಹಿಡಿಯಲ್ಪಟ್ಟ ಎಲ್ಲ ಕೃತ್ರಿಮ ಗೊಬ್ಬರಕ್ಕೆ ಮೀರಿದ್ದಾಗಿರುತಿದೆ ಇದನ್ನು ಸ್ವತಃ ನೋಡಿ ಪರೀಕ್ಷಿಸಿದ ಒಬ್ಬ ಗೃಹಸ್ಥರು ಟೈಂಸ್ ಆಫ್ ಇಂಡಿಯಾ ಪತ್ರಿಕೆಗೆಬರೆಯುತ್ತಾರೇನೆಂದರೆ—ಈಗೊಬ್ಬರವು ಉಪ್ಪುಭರಿತವಾದ ಬೂದಿ ಬಣ್ಣದ ಒಂದು ಪದಾರ್ಥವಾಗಿವೆ ನೋಡಿದರೆ ಜ್ವಾಲಾಮುಖಿಯಿಂದ ಹೊರಟ ಕಲ್ಲಿನಂತಾ ಪದಾರ್ಥಕ್ಕೆ ಸಮಾನವಾಗುತ್ತದೆ. ಆದರೆ ಇದು ಲದ್ದಿಕ್ಕಿಂತಲೂ ಹುಡಿಯಾಗಿರುತದೆ. ಇದು ಬಹು ಸುಲಭವಾಗಿ ಹುಡಿಯಾಗಿರುವದರಿಂದ ಬೀಜಬಿತ್ತುವಾಗಲೇ ಅದರೊಡನೆ ಭೂಮಿಯೊಳಗೆ ಸೇರಿಸಬಹುದೆಂಬದೇ ಇದರ ವಿಶೇಷ ಗುಣಗಳೊಳಗೊಂದೆಂದು ಇದರ ಶೋಧಕರು ತಿಳಿಸುತ್ತಾರೆ ಕುಕ್‌ದೊರೆಗಳು ತಮ್ಮ ತೋಟದಲ್ಲಿ ಈ ಗೊಬ್ಬರವನ್ನು ಉಪಯೋಗಿಸಿಕೊಂಡು ಅದರಫಲವು ಪ್ರತ್ಯಕ್ಷತಃ ಅನುಭವಿಸಿರುತ್ತಾರೆ. ಅದು ಹ್ಯಾಗಂದರೆ—ಏಕಸಮವಾದ ಐದುಭೂಮಿಯ ತುಂಡುಗಳಲ್ಲಿ ಒಂದೇ ಪ್ರಮಾಣದಿಂದ ರಾಗಿಯನ್ನು ಬಿತ್ತಿದ್ದಾರೆ. ಮೊದಲನೇ ತುಂಡಿನಲ್ಲಿ ಗೊಬ್ಬರವೇ ಹಾಕಲಿಲ್ಲ ಅದರಿಂದ ಅದರಲ್ಲಿ ಕಳೆಗಳೇ ಹೆಚ್ಚಾಗಿ ಪ್ರಬಲವಾಗಿವೆ. ಎರಡನೇತುಂಡಿನಲ್ಲಿ ಕಟ್ಟಿಗೆ ಬೂದಿಯನ್ನು ಹಾಕಿದ್ದರು. ಆದರೆ ಇದರಿಂದ ಹೆಚ್ಚು ಪ್ರಯೋಜನವಾಗಲಿಲ್ಲ ಮೂರನೇತುಂಡಿನಲ್ಲಿ ಹಸಿಸೊಪ್ಪಿನ ಗೊಬ್ಬರಹಾಕಿ ಅಲ್ಲಿ ಕೆಲಸಮಾಡಲಿಕ್ಕೆ ಪ್ರತ್ಯೇಕ ಇಬ್ಬರು ಒಕ್ಕಲಿಗರನ್ನು ಇಟ್ಟಿದ್ದರು ಇಲ್ಲಿನಬೆಳೆಯು ಸಾಧಾರಣ ಬೆಟ್ಟಸ್ಥಳಗಳಲ್ಲಿ ಆಗುವಂತೆ ಆಯಿತು. ನಾಲ್ಕನೇ ತುಂಡಿನಲ್ಲಿ ಕುದುರೇ ಲದ್ದಿಗಳನ್ನು ಅದರ್ನಸುಟ್ಟುಹಾಕಿದ್ದರು. ಇದರ ಪರಿಣಾಮವೇನಾಯಿತೆಂದರೆ—ಈ ಗೊಬ್ಬರದ ಔಷ್ಣ್ಯದಿಂದ ಬಿತ್ತಿದ ಬೀಜಗಳಲ್ಲಿ ಬಹುಭಾಗವು ಸುಟ್ಟುಹೋಗಿ ಕೊಂಚ ಸಸಿಗಳುಮಾತ್ರ ಎದ್ದಿದ್ದವು. ಆದರೆ ಇವು ಬಹಳ ಉತ್ತಮವಾಗಿದ್ದವು. ಐದನೇದರಲ್ಲಿ ಬೀಜಗಳೊಡನೆ ಈ ಪೇಟೆಂಟಗೊಬ್ಬರವು ಹಾಕಲ್ಪಟ್ಟಿತು. ಇದರ ಪರಿಣಾಮವನ್ನು ನೋಡಿ ಯಾರಿಗೂ ಆಶ್ಚರ್ಯವಾಗದೆ ಇರಲಿಲ್ಲವು. ಇತರ ತುಂಡುಗಳಲ್ಲಿಯ ಸಸಿಗಳು ಹದಿನಾಲ್ಕುಯಿಂಚು ಎತ್ತರವಾಗಿ ಬಣ್ಣದಲ್ಲಿ ಬಿಳುಪು ಹಸುರಾಗಿದ್ದವು. ಆದರೆ ಇಲ್ಲಿಯ ಸಸಿಗಳು ಒಳ್ಳೇ ಸೊಕ್ಕಿನಿಂದ ವೃದ್ಧಿಯಾಗಿ ಸುಮಾರು ಎರಡು ಫೀಟ್ ಎತ್ತರವಾಗಿ ಅವುಗಳ ಎಲೆ ಮತ್ತು ದಂಟುಗಳು ಕಡು ಹಸುರುವರ್ಣವಾಗಿದ್ದವು. ಅವುಗಳ ಗೊಂಡೆಗಳಂತು ಬಹು ವಿಸ್ತಾರವಾಗಿದ್ದವು, ಕುಕ್‌ದೊರೆಗಳು ಈ ಗೊಬ್ಬರವನ್ನು ಮಾಡುವ ಒಂದು ದೊಡ್ಡ ಕಾರಖಾನೆಯನ್ನೇರ್ಪಡಿಸುವವರಾಗಿದ್ದಾರೆ. ಅಂದರೆ ಇನ್ನು ಕೆಲವುಕಾಲದಮೇಲೆ ಇತರ ವ್ಯಾಪಾರ ಜಿನಿಸಿಯಂತೆ ಇದೂ ಪೇಟೆಯಲ್ಲಿ ಕ್ರಯಕ್ಕೆ ದೊರೆಯಬಹುದಾಗಿರುತ್ತದೆ. ಇದನ್ನು ತಯಾರ್‌ಮಾಡುವರೀತಿಯು ಬಹಳ ಸುಲಭವಾಗಿದೆ. ಇದಕ್ಕೆ ಮೂರು ಜಿನಸುಗಳು ಬೇಕಾಗಿರುತ್ತವೆ. ಮನೆ ಬೀದಿ ಮುಂತಾದವುಗಳನ್ನು ಗುಡಿಸಿ ಬಸಾಡಿದ ಕಸ, ಸುಣ್ಣ, ಮತ್ತು ಎಲುಬುಗಳು. ಕಸವನ್ನುಸುಟ್ಟು ಬೂದಿಮಾಡಬೇಕು ಮತ್ತು ಎಲುಬುಗಳನ್ನು ಜಜ್ಜಿ ಚಿಕ್ಕಚಿಕ್ಕ ತುಂದು ಅಥವಾ ಹುಡಿಮಾಡಬೇಕು ಅನಂತರ ಒಂದುಹಳ್ಳ ಅಥವಾ ಗಣಿಯನ್ನು ಅಗಿದು ಅದರಲ್ಲಿ ಮೊದಲು ಕಸದ ಬೂದಿಯನ್ನೂ ಅದರಮೇಲೆ ಸುಣ್ಣ ಅದರಮೇಲೆ ಎಲುಬಿನ ಚೂರುಗಳನ್ನುಹಾಸಿ ಮೇಲೆ ನೀರುಹೊಯ್ಯಬೇಕು ಅಂದರೆ ಅದು ತೆಗ್ಗುತದೆ. ಇದರಮೇಲೆ ಪುನಃ ಈ ಮೂರು ಪದಾರ್ಥಗಳನ್ನು ಒಂದರಮೇಲೊಂದು ಹಾಸಿ ಪುನಃ ನೀರು ಹೊಯ್ಯಬೇಕು, ಇದೇಪ್ರಕಾರ ಮಾಡುತ್ತಿರಲು ಒಂದೆರಡುವಾರಗಳಲ್ಲಿ ಉತ್ತಮ ಗೊಬ್ಬರವಾಗುತದೆ

ಇದರಿಂದ ಇನ್ನೊಂದು ದೊಡ್ಡಪ್ರಯೋಜನವುಂಟು ದೊಡ್ಡದೊಡ್ಡಪಟ್ಟಣಗಳಲ್ಲಿ ಪ್ರತಿನಿತ್ಯ ಮನೆಗಳನ್ನೂ ಬೀದಿಗಳನ್ನೂಗುಡಿಸಿಬರುವ ಕಸವನ್ನು ನಿಷ್ಪ್ರಯೋಜಕವೆಂದೆಣಿಸಿ ಮ್ಯುನಿಸಿಪಾಲಿಟಿಯವರು ಪಟ್ಟಣದ ಹೊರಗೆ ಎಲ್ಲಾದರೂ ಒಂದು ಪ್ರತ್ಯೇಕ ಸ್ಥಳದಲ್ಲಿ ಒಗೆಯುತ್ತಾರೆ. ಇದರಿಂದ ತತ್ಕಾಲಕ್ಕೆ ಪಟ್ಟಣದ ಒಳಭಾಗವು ಸ್ವಚ್ಛವಾಗಿ ಕಂಡರೂ ಪ್ರತಿನಿತ್ಯ ಕಸವು ಇದೇರೀತಿ ಜಮಾಯಿಸುತ ದೊಡ್ಡ ರಾಶಿಯಾಗಿ ಮಳೆಗಾಲದಲ್ಲಿ ಕೊಳೆತು ಅದರೊಳಗಿಂದ ಹುಟ್ಟುವ ವಿಷಕಾರಕವಾದ ವಾಯುವು ಹಾಳಿನೊಡನೆ ಪಟ್ಟಣದೊಳಗೆ ಸೇರಿ ನಾನಾ ರೋಗಗಳಿಗೆ ಮೂಲವಾಗಿ, ಜನರನ್ನು ಪೀಡಿಸುತ್ತದೆ ಈ ಪಿಡುಗು ಮುಂಬಯಿ ಮುಂತಾ ಪ್ರಖ್ಯಾತವಾದ ಪಟ್ಟಣಗಳಲ್ಲಂತೂ ಬಹಳವಾಗಿದೆ. ಪ್ರತಿನಿತ್ಯವೂ ಸುಮಾರು ೨೦೦ ಟನ್‌ಗಳಿಗೆ ಕಡಿಮೆಯಾಗದೆ ಸೇರುವ ಕಸವನ್ನು ಈಗ ಯೆಲ್ಲಿ ಹಾಕಬೇಕು? ಇದರ ವಿನಿಯೋಗ ಹ್ಯಾಗೆ ಮಾಡಬೇಕು ಎಂಬದೇ ದೊಡ್ಡ ಶಹರ್‌ಗಳ ಮ್ಯುನಿಸಿಪಾಲಿಗಳಿಗೆ ವಿಶೇಷ ವಿಚಾರಕ್ಕೆ ಕಾರಣವಾಗಿದೆ ಇಂತಾ ಸಮಯದಲ್ಲಿ ಕುಕ್ ದೊರೆಗಳು ಶೋಧಿಸಿದ ಯುಕ್ತಿಯ ಬೆಲೆಯು ಎಷ್ಟೆಂತ ಹೇಳಬೇಕು! ಕುಕ್ ದೊರೆಗಳು ತಮ್ಮ "ಪೇಟೆಂಟ್" ಗೊಬ್ಬರವನ್ನು ತಯಾರ್ಮಾಡುವ ಸಲುವಾಗಿ ಒಂದು ದೊಡ್ಡ ಕಾರ್ಖಾನೆಯನ್ನು ಸ್ಥಾಪಿಸುವವರಾಗಿದಾರೆಂದು ಮೇಲೆ ಹೇಳಿದೆವು. ಇದಕ್ಕೋಸ್ಕರ ಅವರು ಒಂದು ಕಂಪೆನಿಯನ್ನು ಸಹ ಏರ್ಪಡಿಸುವವರಾಗಿದಾರೆಂದು ಕೇಳುತ್ತೇವೆ. ಈ ಕಾರ್ಖಾನೆಯಿಂದ ಕಂಪೆನಿಯವರಿಗೆ ಲಾಭವಾಗುವದಂತೂ ಆಯಿತೆಲ್ಲವೆ, ಮ್ಯುನಿಸಿಪಾಲಿಟಿಯವರಿಗೆ ತಮ್ಮ ಕಸ ಮುಂತಾದ ಹೊಲಸು ಪದಾರ್ಥಗಳ ವಿನಿಯೋಗದಬಗ್ಗೆ ಒಂದು ಸುಲಭ ಉಪಾಯ ಸಿಕ್ಕುವದು. ಸಿಕ್ಕ ಅದರಿಂದ ಒಂದುವೇಳೆ ಉತ್ಪತ್ತಿಯೂ ಅಧಿಕವಾಗಬಹುದು ಮತ್ತು ಜನರಿಗೂ ಇಂತಾ ಪದಾರ್ಥಗಳು ಕೊಳೆಯೋಣದರಿಂದ ಉಂಟಾಗುವ ರೋಗಭಯವು ನಿವಾರಣವಾದೀತು. ಇದೆಲ್ಲ ಮನಃಪೂರ್ವಕವಾಗಿ ಮಾಡಿದ ಉದ್ಯೋಗದ ಫಲವೆಂದು ಹೇಳಬಹುದಾಗಿದೆ.—ಮುಂಬೈ ಕನ್ನಡಸುವಾರ್ತೆ.

BANGALORE.—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶವಿವಿತಪ್ರವೃತ್ತ್ಯುಪಗನಸೌರ್ಕ್ಷ ಕರ್ಣಾಟಕಪ್ರಕಾಶನವರಾವಿದಾಪ್ರಥಿತಸಾಹಿತೀಕೋವಿತಾ ॥ ಮೃಗಾಂಕಹಿರವಾಸರನಿಪಿತಮುದ್ರಣಾಸಜ್ಜಸ್ಸೇರ್ರಿಕಾಸುಕರಿಪೊಟುತಾದಿಕತಿವಾಸಸುಸುಮದಂ

Vol XII] BANGALORE—MONDAY NOVEMBER 9, 1885 [No 45

ಸಂಪುಟ ೧೨] ಬೆಂಗಳೂರು —ಸನ್ ೧೮೮೫ನೇ ಇಸವಿ ನವಂಬರ್ ೯ನೇ ತಾರೀಖು ಸೋಮವಾರ [ಸಂಚಿಕೆ ೪೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರಿಗೆ, ಪಡುಮ ೧ಕ್ಕೆ . . ೧೨—೦—೦

ಇಂಗ್ಲಿಷ್ [illegible] ವರಿಗೆ ವರುಷ ೧ಕ್ಕೆ . ೬—೦—೦

ಕನ್ನಡ [illegible] ವರಿಗೆ ವರುಷ ೧ಕ್ಕೆ . ೬—೦—೦

ತಿಂಗಳ ೧ಕ್ಕೆ ೦—೮—೦

ಸಂಚಿಕೆ ೧ಕ್ಕೆ ೦—೪—೦

[illegible] ೧ಕ್ಕೆ ೨—೫—

[illegible]

ಪ್ರಕಟನೆಗಳ ವಿವರ.

ತಿಂಗಳಕ್ಕೇ ಒಂದಾವರ್ತಿ ೧ಕ್ಕೆ ೦—೬—೦

ವರುಷಕ್ಕೇ ಒಂದಾವರ್ತಿ ೧ಕ್ಕೆ ೦—೧—

NOTICE TO SUBSCRIBERS

[illegible]

NOTICE.

VAIDYASARA SANGRAHA

Price including Postage, Rs 5-6-0

[illegible]

ನೋಟೀಸ್

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಿಗುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ	೧—೪—೦
ಮುಹೂರ್ತದರ್ಪಣ ...	೧—೧೨—೦
ಭಕ್ತಸ್ಮೃ (ಷಟ್ಪಂಚಾಶಿಕ) .	೧—೩—೦
[illegible]	೧—೧—೦
[illegible]	೧—೪—೦
[illegible]	೦—೧—೦
[illegible]	೦—೬—೦
[illegible]	೦—೨—೦
ವೈದ್ಯಸಾರಸಂಗ್ರಹ	೫—೧—೦

ಕನ್ನಡ ಗ್ರಂಥಗಳು

[illegible]	೦—೬—
[illegible]	೦—೪—೦
[illegible]	೦—೩—೦
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೬—೬
[illegible]	೦—೨—೬
[illegible]	೦—೬—೦
[illegible]	೦—೩—೦
[illegible]	೦—೨—
[illegible]	೦—೦—೯
[illegible]	೦—೭—೦
[illegible]	೬—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible]	೦—೦—
[illegible]	೦—೦—೦
[illegible]	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	೦—೩—೦
[illegible]	೦—೫—೦
[illegible]	೦—೦—
[illegible]	೦—೦—
[illegible]	೦—೦—೬
[illegible]	೦—೩—೦
[illegible]	—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗುಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತರಹಾ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇಲೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ಪ್ರಸಿದ್ಧಪತ್ರಿಕೆ.

ಕಳೆದ ವರ್ಷದಲ್ಲಿ ಇಂಗ್ಲೀಷ್ ಕನ್ನಡ ಡೈರಿ ಎಂಬ ದಿನಚರಿ ಪುಸ್ತಕವು ಪ್ರಚುರಪಡಿಸಿರುತ್ತೇವಷ್ಟೆ, ಅನೇಕರು ಅದರ ಉಪಕಾರವು ಬಹಳ ದೊಡ್ಡದೆಂತಲೂ ಆಯಾ ತಾರೀಖುಗಳ ಮಧ್ಯೆ ಬಿಟ್ಟಿರತಕ್ಕ ಸ್ಥಳ ಬಹಳ ಸಂಕೋಚವಾದ್ದರಿಂದಲೂ ತಿಳಿಸಿದ್ದರಿಂದ ಬರುವ ಸನ್ ೧೮೮೬ನೇ ವರ್ಷದ ಡೈರಿಯನ್ನು ಒಂದು ಪುಟಕ್ಕೆ ಒಂದೇ ತಾರೀಖು ಬರುವ ಹಾಗೆ ದೊಡ್ಡದಾಗಿಯೂ, ಜೇಬುಗಳಲ್ಲಿಟ್ಟುಕೊಳ್ಳುವದಕ್ಕೆ ಅನುಕೂಲವಾಗಿಯೂ, ಉಪಯುಕ್ತವಾದ ಮತ್ತು ಅವಶ್ಯಕವಾದ ಅನೇಕ ಸಂಗತಿಗಳನ್ನು ಸಂಗ್ರಹಿಸಿ ಇಂಗ್ಲೀಷ್ ತಾರೀಖು ಮತ್ತು ಕನ್ನಡ ತಿಥಿ ವಾರ ನಕ್ಷತ್ರಗಳನ್ನೂ ತಿಳಿಸಿಕೊಡುವಂತೆ ರಚಿಸಲ್ಪಟ್ಟ "ಇಂಗ್ಲೀಷ್ ಕನ್ನಡ ಪಾಕೆಟ್ ಡೈರಿ" ಎಂಬ ಹೆಸರಿನಿಂದ ಮಿತವಾದ ಪ್ರತಿಗಳು ಮುದ್ರಿಸಲ್ಪಟ್ಟು ವಿಕ್ರಯಕ್ಕೆ ಸಿದ್ಧವಾಗಿರುವದರಿಂದ ಅಪೇಕ್ಷೆಯುಳ್ಳವರು ಈ ಕೆಳಗೆ ಸಹಿ ಮಾಡಿರುವವರ ಬಳಿಗೆ ಮೊಬಲಗು ಕಳುಹಿಸಿ ಬೇಕಾದಷ್ಟು ಪ್ರತಿಗಳನ್ನು ಅತಿ ಶೀಘ್ರವಾಗಿ ತರಿಸಿಕೊಳ್ಳಬಹುದು.

ಪತ್ರಿಕಾಗದ ಸಹಿತವಾದ ಪ್ರತಿ ೧ಕ್ಕೆ ೧೦ ಆಣೆ.

ಟಪಾಲ್ ಹಾಸಲ್ . ೧½ ಆಣೆ.

ಪತ್ರಿಕಾಗದವಿಲ್ಲದ ಪ್ರತಿ ೧ಕ್ಕೆ ೬½ ಆಣೆ.

ಟಪಾಲ್ ಹಾಸಲ್ .. ೧ ಆಣೆ.

ಮತ್ತು ಜ್ಞಾನಯೋಗ ತರಂಗಿಣಿ ಯೆಂಬ ವಾಸಿಷ್ಠ ರಾಮಾಯಣವೆಂಬ ಪುಸ್ತಕಕ್ಕೆ ಕಳೆದ ಆಗಸ್ಟ್ ತಿಂಗಳಲ್ಲಿ ನೋಟೀಸ್ ಕೊಟ್ಟಿರುವದು ಸರಿಯಷ್ಟೆ, ಅದರಂತೆ ಸಂಪೂರ್ಣ ಪ್ರಾರ್ಥಿಸುತ್ತ ಬಂದವರಿಂದ ಸಿದ್ಧಾಂತಾಪೇಕ್ಷೆಯುಳ್ಳ ಅಧಿಪಾಸಾಹಿಗಳು ೧—೧೦—೦ ರೂ ವ ಇಬಲಗಿನಿಂದ ಬರಿಮ ತರಿಸಿಕೊಳ್ಳಬಹುದು.

೩೦—೧೦—೮೫ ಸಿದ್ದಾಂ ಚಂಪಕೇಶಯ್ಯ,

[illegible]

ಬೆಂಗಳೂರು

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 9, 1885

೧೮೮೫ ನವಂಬರ್ ೯ನೆ ತಾ॥ ಸೋಮವಾರ

[illegible]

COUNTESS OF DUFFERIN ASSOCIATION

ಇಂಡ್ಯದೇಶದ ಪ್ರಕೃತ ವೈಸರಾಯಿ ವ ಗವರ್ನರ್ ಜನರಲ್ಲವರಾದ ಲಾರ್ಡ್ ಡಫ್ರಿಯವರ ಭಾರ್ಯೆಯವರು ಏದೇಶೀಯರಾದ ಹಿಂದೂಸ್ತ್ರೀಯರ ಪ್ರಯೋಜನಾಭಿವೃದ್ಧಿಯಂ ಬಯಸಿ ವಹಾ ಉದ್ದೇಶಿಸಿರುವಂತಾ ಒಂದು ಮಹತ್ಕಾರ್ಯಕ್ಕೆ ಇಂಡ್ಯದೇಶದ ನೇಟಿವ್ ಸಂಸ್ಥಾನಾಧಿಪತಿಗಳೆಲ್ಲರೂ ತಮತಮ್ಮ ಯೋಗ್ಯತಾನುಗುಣವಾಗಿಯೂ, ಪ್ರಸಕ್ತ ಪ್ರಯತ್ನಾನುಗುಣವಾಗಿಯೂ, ಏತತ್ಕಾರ್ಯಪ್ರವರ್ತಕರ ಗೌರವಾನುಗುಣವಾಗಿಯೂ ದ್ರವ್ಯಸಹಾಯ ಮಾಡುತ್ತಿರುವ ಅಂಶವನ್ನು ಈ ಪತ್ರಿಕಾಮೂಲಕ ತಿಳಿಸಿಇರುತ್ತೇವೆಯಷ್ಟೆ. ಇಂತಾ ಔದಾರ್ಯ ಪ್ರದರ್ಶಕರೊಳು ನಮ್ಮ ಮಹಾರಾಜರವರ ಹೆಸರುಕಾಣದೆ ನಮ್ಮ ಮನವು ಇದುವರೆವಿಗೆ ಅತೃಪ್ತಿಯನ್ನೈದಿತ್ತು. ಇಂತಾ ನಮ್ಮ ಅತೃಪ್ತಿಗೆ ಕಾರಣವಾದ ವಿಷಯವು ಈಗ ನಿವಾರಣವಾದ ಅಂಶವನ್ನು ಬಳಮೇಡದ ಸ್ಪೆಕ್ಟೇಟರ್ ಪತ್ರಿಕಾಮೂಲಕ ತಿಳಿದು ಪ್ರಸ್ತುತ ಸಂತೋಷವುಳ್ಳವರಾದೆವು. ಅದೇನೆಂದರೆ—ಕಳೆದ ತಿಂಗಳ ೨೮ನೇ ತಾರೀಖಿನಲ್ಲಿ ಮೈಸೂರೊಳು, ನವೀನ ನಿರ್ಮಿತವಾದ ಸಾರ್ ದಿವಾನ್ ಮ॥ ರಂಗಾಚಾರ್ಯರವರ ಮೆಮೋರಿಯಲ್‌ಹಾಲ್‌ನಲ್ಲಿ ಒಂದು ಸಭೆ ಸೇರಿ, ಆಕಾಲದಲ್ಲಿ ಶ್ರೀಮನ್ ಮಹಾರಾಜರವರ ಕೌನ್ಸಿಲರವರಾದ ರಾಯಬಹದೂರ್ ಮ॥ ರಾ॥ ಕೃಷ್ಣರಾಯರವರು ಅಗ್ರಾಸನವ ವಹಿಸಿದ್ದರು. ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರಾದ ಮಿಸ್ಟರ್ ಗಾರ್ಡನ್‌ರವರ ಭಾರ್ಯೆಯವರು, ದಿವಾನರವರು, ಅವರ ಸೆಕ್ರೆಟರಿ ಮಿಸ್ಟರ್ ವಿಜಯೇಂದ್ರರಾಯರವರು, ಸೆಷನ್ಸ್ ಜಡ್ಜಿ ಮ॥ ವಿ. ಎನ್. ನರಸಿಮ್ಮೈಯ್ಯಂಗಾರ್ರವರು, ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಅನಂದರಾಯರವರು, ಕೌನ್ಸಿಲರ್ ಮ॥ ಸಭಾಪತಿಮೊದಲಿಯಾರ್ರವರು ಮುಂತಾದವರು ಸದರೀ ವಿನಾಟಂಗಿಗೆ ದಯಮಾಡಿದ್ದರು. ಹಿಂದೂ ಸ್ತ್ರೀಯರಿಗೆ ಸಜಾತೀಯರಿಂದಲೇ ಚಿಕಿತ್ಸೆಮಾಡಿಸಬೇಕೆಂಬ ಉದ್ದೇಶದಿಂ ಲಾರ್ಡ್ ಡಫ್ರಿಯವರಭಾರ್ಯೆಯವರು ಸಂಕಲ್ಪಿಸಿ ಪ್ರಾರಂಭಿಸಿರುವಕಾರ್ಯವು ಸಕಲ ಜನಾಭಿಮತವಾದದ್ದಾಗಿರುವದರಿಂದ ಇದನ್ನು ಈಸಭಿಕರುಸಹ ಅನುಮೋದಿಸುವರೆಂದು ತಾವುನಂಬುವದಾಗಿ ಮ॥ವಿಜಯೇಂದ್ರರಾಯರವರು ಸೂಚಿಸಿದರು. ಈಸವಾಜದುದ್ದೇಶವನ್ನು ಚಿರವಾಗಿ ನೆರವೇರಿಸುವವಿಷಯದಲ್ಲಿ ಆಲೋಚಿಸತಕ್ಕಬಗ್ಗೆ, ಮೇಲ್ಕಂಡ ಸಮಾಜಕ್ಕೆ ಸೇರಿದಂತೆ ಮೈಸೂರೊಳು ಒಂದು ಉಪಸಮಾಜವನ್ನು ಸ್ಥಾಪಿಸತಕ್ಕಬಗ್ಗೆ ಒಂದುಕಮಿಟಿಯಂ ಏರ್ಪಾಡು ಮಾಡಿ ಅದರ ಅಭಿವೃದ್ಧಿಯಬಗ್ಗೆ ಚಂದಾಮೂಲಕ ದ್ರವ್ಯೋಪಪತ್ತಿಯಂ ಕಲ್ಪಿಸಬೇಕೆಂದು, ಮ॥ ವಿ. ಎನ್ ನರಸಿಮ್ಮೈಯ್ಯಂಗಾರ್ರವರು ಸೂಚಿಸಲು ಸಭಿಕರೆಲ್ಲರೂ ಅನುಮೋದಿಸಿದರು. ತರುವಾಯ ಮ॥ಕೃಷ್ಣರಾಯರವರು ಸದರೀ ವಿನಾಟಂಗಿನ ಉದ್ದೇಶವನ್ನು ಸಮುಚಿತ ಶಬ್ದಗಳಿಂದ ಕನ್ನಡ ಭಾಷೆಯೊಳು ತಿಳಿಸಿದರು. ವಿನಾಟಂಗಿನ ಮುಕ್ತಾಯ ಸಮಯದಲ್ಲಿ ದಿವಾನ್ ಮ॥ ಶೇಷಾದ್ರಿಅಯ್ಯರವರು ಪ್ರಸಕ್ತ ಸಮಾಜಕ್ಕೆ ೭,೫೦೦ ರೂಪಾಯಿಗಳ ವರೆವಿಗೆ ದ್ರವ್ಯಸಹಾಯ ಮಾಡಲಿಕ್ಕೆ ಶ್ರೀಮನ್ಮಹಾರಾಜರವರು ಬಹಳ ಕುತೂಹಲಪ್ರಕಟರಾಗಿದ್ದಾರೆಂದು ತಿಳಿಸಿದರು. ಇಂತಾ ಅತ್ಯೌದಾರ್ಯ ಪ್ರದರ್ಶಕವಾದ ಮಹಾರಾಜರವರ ವರ್ತನವು ದಿವಾನರ ಮೂಲಕ ಅರಿತು ಅಲ್ಲಿದ್ದವರೆಲ್ಲರೂ ಬಹಳ ಸಂತೋಷಿಸಿದರು. ಆಕಾಲದೊಳು ಅಲ್ಲಿದ್ದ ಅನೇಕಮಂದಿ ನೇಟಿವ್ ದೊಡ್ಡಮನುಷ್ಯರು ತಮ್ಮ ಯೋಗ್ಯತಾನುಗುಣವಾಗಿ ಚಂದಾ ಮಾಡಿದರು. ಸದರೀ ವಿನಾಟಂಗಿನಾಲದಲ್ಲಿ ೧೫,೦೦೦ ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಚಂದಾ ಮಾಡಲ್ಪಟ್ಟಿತು. ಪ್ರಸಕ್ತ ಉಪಸಮಾಜೋದ್ದೇಶವನ್ನು ನೆರವೇರಿಸತಕ್ಕಬಗ್ಗೆ

ಪ್ರಬಲ ಕಮಿಟ್ಟಿ ಯೊಂದು ಏರ್ಪಡಿಸಲ್ಪಟ್ಟಿತು. ಹಾಕ್ಟರ್ ಬೆರ್ಸರ್ಗಯವರು ಇದರ ಆನರೆರಿ ಸೆಕ್ರಟರಿಯಾಗಿ ಗೊತ್ತುಮಾಡಲ್ಪಟ್ಟರು. ಇದಕ್ಕೆ ಈ ದೇಶದಲ್ಲಿ ಮುಂದೆ ಬಹಳಮಟ್ಟಿಗೆ ಗವರ್ನಮೆಂಟಿನವರ ಪ್ರೇರಣೆಯಿಂದ ದ್ರವ್ಯಸಹಾಯವಾಗಬಹುದೆಂದು ನಂಬುತ್ತೇವೆ.

ಪ್ರಕೃತ ಪ್ರಯತ್ನವಂ ಸ್ವರೂಪವಂ ಪರ್ಯಾಲೋಚಿಸಿ ನೋಡಲಾಗಿ ಇದು ಕೇವಲ ಸಾಮಾನ್ಯವಾದದ್ದೆಂದು ಭಾವಿಸತಕ್ಕದ್ದಾಗಿದೆ. ಪರಂತು ಇದರ ಫಲಪರ್ಯವಸಾನ ಮಾತ್ರ ಯಾವರೂಪವಾಗಿರುವದೋ ಎಂಬ ಶಂಕೆಯು ಅನೇಕರನ್ನು ಬಾಧಿಸದಿರಲಿಲ್ಲವು. ಯದ್ಯಪಿ ಲೋಕದಲ್ಲಿ ಇತರ ನಾನಾವಿಧ ವೃತ್ತಿಗಳಿಗಿಂತಲೂ ವೈದ್ಯವು ಬಹಳ ಶ್ರೇಷ್ಠವಾದದ್ದು. ಇದು ಸ್ವಪರೋಭಯ ಪ್ರಯೋಜನತನ್ನುಂಟು ಮಾಡತಕ್ಕದ್ದಾಗಿರುತಿದೆ. ಈವಿದ್ಯೆಯನ್ನು ಯುಕ್ತವಾಗಿ ಅಭ್ಯಸಿಸಿ ಚಿಕಿತ್ಸೆ ಮಾಡಿದರೆ ಪ್ರಯೋಜನಕರವೆಂಬದರೊಳೆಳ್ಳಷ್ಟು ಮಾತ್ರವೂ ಸಂಶಯವಿಲ್ಲವು. ಈ ಕಸುಬಿನಲ್ಲಿ ಪ್ರವರ್ತಿಸಬೇಕೆಂಬ ಕೋರಿಕೆ ಯುಳ್ಳವರು ವೈದ್ಯಶಾಸ್ತ್ರವನ್ನು ಸಾಂಗವಾಗಿ ಕಲಿತು ಅನಂತರ ಚಿಕಿತ್ಸೆ ಮಾಡುವರಾದರೆ ಲೋಕಕ್ಕೆ ಮಹದುಪಕಾರವಂ ಮಾಡಿದವರಾಗುವರು. ನಾನಾವಿದ ಕಸುಬುಗಳೆಂಬವು ವಿದ್ಯೆಗಳೇ ಆದದರಿಂದ ಅದರಲ್ಲಿ ಕೌಲಂಕಷ ಜ್ಞಾನವಿಲ್ಲದೆ ಅದು ಫಲಕಾರಿಯಾಗಲಾರದಾಗಿ, ಅಂತಾ ತಿಳುವಳಿಕೆ, ಅವರ ವಿನಿಯೋಗ, ಶ್ರದ್ಧಾಪೂರ್ವಕವಾದ ಶಾರೀರ ಮಾನಸಿಕ ಶ್ರಮ, ಮನೋದಾರ್ಢ್ಯ, ಉತ್ಸಾಹ, ಜಾಗರೂಕತೆ, ಚಿತ್ತಸ್ಥೈರ್ಯ, ನಮ್ರತೆ, ತಾರತಮ್ಯಜ್ಞತೆ, ಸಹನೆ, ಈ ಮುಂತಾದವು ಈ ವೃತ್ತಿಯೊಳು ಪ್ರವರ್ತಿಸತಕ್ಕವರಿಗೆ ಇರಬೇಕಾದ ಆವಶ್ಯಕ ಗುಣಗಳಾಗಿರುತಿವೆ. ಇಂತಾ ಅಪೇಕ್ಷಿತ ಗುಣಗಳು, ಬಹುಕಾಲ ಗುರುಕುಲವಾಸ ಮಾಡಿ ದೇಶಸಂಚಾರಗೈದು ತತ್ತದ್ದೇಶೀಯರ ಪರಿಚಯ ಸಾಹಚರ್ಯಗಳ ಮೂಲಕ ಅವರೊಳು ನೆಲಸಿರುವ ಸುಗುಣಾಂಶಗಳನ್ನು ಪರಿಗ್ರಹಿಸಲೆತ್ನಿಸಿ ಅವರನ್ನನುಕರಿಸಲಿಕ್ಕೆ ಆತುರಗೊಂಡಿರುವ ಪುರುಷರ ಪೈಕಿ ಅನೇಕರಿಗೆ ಅಸಭ್ಯಸ್ತವಾದವಾಗಿವೆ. ಇಂಡ್ಯದೇಶದ ಸ್ತ್ರೀಗಳಾದರೋ, ಸ್ವಕುಟುಂಬ ನಿರ್ವಹಣವೇ ಪರಮಧರ್ಮವಾಗಿ ಭಾವಿಸಿ, ಪತಿ ಹೃದಯಾನುವರ್ತನವೇ ತಮಗೆ ಶ್ರೇಯೋ ಮಾರ್ಗವೆಂದರಿತು ವರ್ತಿಸುತಲಿರುವದರಿಂದ, ಇವರಿಗೆ ಈಗಿನಕಾಲದವರು ಅಪೇಕ್ಷಿಸುವಂತಾ ಸ್ವೈರೃತ್ತಿತೆಯು ಅಲಭ್ಯವಾಯಿತು. ಇವರಿಗೆ ಗೌರವರೂಪವಾಗಿ ಭಾವಿಸಲ್ಪಡುತಿರುವ ನ್ಯೂನತೆಯನ್ನು ಹೋಗಲಾಡಿಸಿ, ಅವರಿಗೆ ವಿಶೇಷ ಸ್ವಾತಂತ್ರ್ಯವನ್ನುಂಟುಮಾಡಬೇಕೆಂಬ ಕೋರಿಕೆಯು ಪುರುಷರಿಗೆ ಅಧಿಕವಾಗುತ ಬಂದಹಾಗೆಲ್ಲ ಸ್ತ್ರೀವಿದ್ಯಾಭ್ಯಾಸವು ತಲೆ ಹಾಕಲೆತ್ನಿಸಿತು. ಅದ್ಯಾಪಿ ಇದು ಅಂಕುರವಾಗಿದೆಯಲ್ಲದೆ ಇನ್ನೂ ಪ್ರವರ್ಧಮಾನಕ್ಕೆ ಬರಲಿಲ್ಲವು. ಪರಂತು ನಿರೀಕ್ಷಿತವಾದ ಗುಣವೈಪರೀತ್ಯವನ್ನು ಮಾತ್ರ ವುಂಟುಮಾಡಲಿಕ್ಕೆ ಇದು ಈಗಲೇ ಸಮರ್ಥವಾಗಿರುತಿದೆ. ಮುಂದೆ ಇದರಫಲವು ಈ ರೂಪವಾಗಿರುವದೆಂದು ಅನುಮೇಯಿಸಲಿಕ್ಕೆ ಈಗಿನ ಬಾಲಕಿಯರ ಸ್ಥಿತಿಯೇ ಸಾಕಾದದ್ದಾಗಿರ್ಪುದು. ಏಕೇನ ನಮ್ಮ ಸ್ತ್ರೀಯರು ಉದ್ದಿಷ್ಟಸ್ಥಿತಿಗೆ ಬರುವದಕ್ಕೆ ಬಹುಕಾಲ ಬೇಕಾಗಿರುವದರಿಂದ ತಾತ್ಕಾಲಿಕಸ್ಥಿತಿಯೊಳು ಅವರಿಗೆ ವೈದ್ಯ ಮುಂತಾದ ಶಾಸ್ತ್ರಗಳನ್ನು ಕಲಿಸುವದು ಪಯಾಸಕರವಾಗದೆ ಹೋಗಲಾರದು. ಇವರಿಗೆ ಚಿಕಿತ್ಸಾವಿಷಯದೊಳು ಸಜಾತೀಯರಿಂದ ಸಹಾಯ ಮಾಡಿಸಬೇಕೆಂಬದು ಸಹ ಸದ್ಯಃ ಅಶಾಧ್ಯವಾಗಿ ತೋರಬರುತಿದೆ. ಯಾತಕ್ಕೆಂದರೆ—ವೈಸರಾಯಿಯವರ ಭಾರ್ಯೆಯವರೂ ಅವರಿಂದು ಪಕ್ರಾಂತವಾದ ಕಾರ್ಯವೂ ನಮಗೆ ಗೌರವ್ಯವೇ ಅಹುದು, ಪರಂತು ಆಳೆಯುವರು ಈ ಭರತಖಂಡಕ್ಕೆ ಹೊಸಬರಾದ್ದರಿಂದಲೂ, ನಾನಾಜಾತಿ ಕುಲಸಂಪ್ರದಾಯಗಳುಳ್ಳ ಇಂಡ್ಯದೇಶೀಯರ ಶೀಲಸ್ವಭಾವಗಳನ್ನು ಸಮರ್ಥವಾಗಿ ಅರಿತವರಲ್ಲವಾದ್ದರಿಂದಲೂ ಕೇವಲ ಪರೋಪಕಾರ ಬುದ್ಧಿಯೊಡನೆ ತಾವುಮಾಡುವ ಕಾರ್ಯದ ಪ್ರಯೋಜನವನ್ನು ಯೆಲ್ಲರೂ ಉತ್ಸಾಹದೊಡನೆ ಅನುಭವಿಸುವರೆಂದು ಪರ್ಯಾಲೋಚಿಸಿರಬಹುದು. ಅಸಾಧಾರಣವಾದ ಈ ಪ್ರಯತ್ನವನ್ನು ಮಾಡುವದಕ್ಕೆ ಮುಂಚಿತವಾಗಿ ಆಳೆಯುವರು ತಮ್ಮ ಪತಿಯಪಾಲನೆಗೊಳಗಾದ ಜನಗಳ ಶೀಲಸ್ವಭಾವಗಳನ್ನು ಅನುಭವಪೂರ್ವಕತಿಳದು ಅ ಇರ ಅಭಿಪ್ರಾಯವನ್ನು ಪರಿಗ್ರಹಿಸಿ ಅದರಮೇಲೆ ಯುಕ್ತವಾದ ಮಾರ್ಗವನ್ನು ಆಲೋಚಿಸಿ ಪ್ರಕೃತ ಕಾರ್ಯವನ್ನು ನಡೆಸಿರುವರಾದರೆಯೆಲ್ಲರಿಗೂ ಬಹಳ ಸಮರ್ಪಕವಾಗಿರುವದು. ವೈದ್ಯ ವಿಷಯದಲ್ಲಿ ಹಿಂದೂ ಸ್ತ್ರೀಯರಿಗೆ ಕುಮ್ಮಕ್ ಮಾತಲಿಕ್ಕೆ ಯೂರೋಪಿಯಗ್ ಲೇಡಿಗಳು ವಿನಾ ಸದ್ಯಃ ಮತ್ತೊಬ್ಬರೂ ಸಮರ್ಥರಲ್ಲವೆಬ ಅಂಶವನ್ನೊಬ್ಬರೂ ನಿರಾಕರಿಸಲಾರರು. ಅವರ ಚಿಕಿತ್ಸಾಕ್ರಮವು ನಮ್ಮವರಿಗೆ, ತತ್ರಾಪಿ ಸ್ತ್ರೀಯರಶೇಕರಿಗೆ ಅಸಮಾಧಾನಕರವಾದ್ದಾಗಿರುವದು ಕದಾಚಿತ್ ಧನವಂತರು ಅಂತಾ ವಿಜಾತೀಯರಸಹಾಯವನ್ನಪೇಕ್ಷಿಸಬಹುದು. ಪರಂತು ಅದು ರಿಕ್ತರಾದವರು ಅಪೇಕ್ಷಿಸಲಾರರು. ಮತ್ತು ಅದು ಅವರಿಗೆ ಅಲಭ್ಯವು. ಆದವರಿಂದ ಈ ವಿಧವಾಗಿಯೂ ಸದ್ಯಃ ಸಾಮುದಾಯಕ ಪ್ರಯೋಜನ ವುಂಟಾಗುವದೆಂದೂಹಿಸತಕ್ಕದ್ದಾಗಿದೆ. ಮುಖ್ಯವಾಗಿ ಇವರ ಪ್ರಯೋಜನಾಪ್ರಯೋಜನಗಳು ಕಾಲಾಂತರದೊಳು ನಿರ್ಧರಿಸಿ ತಿಳಿಯಬೇಕಾದವಾಗಿವೆ. ಈಗ ಶ್ರೀಮನ್ಮಹಾರಾಜ್ಞೀಯವರ ಪ್ರತಿನಿಧಿಯವರ ಭಾರ್ಯೆ ಯಿಂದುಪಕ್ರಾಂತವಾದ ಪ್ರಯತ್ನಕ್ಕೆ ಸಕಲ ವಿಧದಿಂದಲೂ ದ್ರವ್ಯಸಹಾಯ ಮಾಡುವವರಮೂಲಕ ಅವರನ್ನು ಗೌರವಿಸುವದು ನಮ್ಮ ರಾಜಭಕ್ತಿ ವಿಶ್ವಾಸಗಳಿಗೆ ಲಕ್ಷಣವಾಗಿಯೂ, ಸುಸ್ವಾಮಿಪತಿಗಳ ಔದಾರ್ಯ ಪ್ರದರ್ಶನಕ್ಕೆ ಒಳ್ಳೆಯ ಸುದರ್ಶವಾಗಿಯೂ ಇರುವವರಿಂದ ಈ ಮಹತ್ಕಾರ್ಯಕ್ಕೆ ಯೆಲ್ಲರೂ ಸಾಧ್ಯವಾದ ಸಹಾಯವ ಮಾಡಬೇಕೆಂದು ಕೋರುವೆವು.

H. H. THE MAHARAJA'S TOUR.

ಶ್ರೀಮನ್ಮಹಾರಾಜರವರು, ತಮ್ಮ ಆಧಿಪತ್ಯಕ್ಕೊಳಗಾದ ದೇಶದ ಯಥಾವಸ್ಥಿತವಾದ ಸ್ಥಿತಿಯನ್ನು ಸ್ವತಃ ನೋಡಿ ತಿಳದುಕೊಳ್ಳತಕ್ಕಬಗ್ಯೆ ನಿಜಜನ ಪರಿವೃತರಾಗಿ ಮಾಹೇ ಮಜಕೂರು ೨೪ನೇ ತಾರೀಖಿನಲ್ಲಿ ಮೈಸೂರಿಂದ ನಗರಡಿವಿಜನ್ ಪ್ರಾಂತಕ್ಕೆ ದಯಮಾಡುವರೆಂತಲೂ, ಈಬಗ್ಯೆ ಆವಶ್ಯಕಗಳಾದ ಏರ್ಪಾಡುಗಳೆಲ್ಲ ನಡೆಯುತಲಿವೆಯೆಂತಲೂ ಕೇಳುವದಕ್ಕೆ ನಾವು ಬಹಳ ಸಂತೋಷಿಸುವೆವು. ಶ್ರೀಮನ್ಮಹಾರಾಜರವರು, ಈ ರಾಜ್ಯಧುರವು ಸ್ವಯಂ ವಹಿಸಲಿಕ್ಕೆ ಸ್ವಲ್ಪ ಕಾಲದ ಹಿಂದೆ ಇಲ್ಲಿನ ಆಕ್ಟೈರ್ ಚೀಫ್ ಕಮ್ಮಿಷನರಾಗಿಯೂ, ಪ್ರಥಮ ಬ್ರಿಟಿಷ್ ರೆಸಿಡೆಂಟರಾಗಿಯೂ ಇದ್ದ ಸರ್ ಜೇಂಸ್ ಗಾರ್ಡನ್ ಯವರೊಡನೆ ದೇಶಸಂಚಾರ ಮಾಡಿ, ತತ್ತತ್ಪ್ರದೇಶಗಳ ಜನಗಳು ವ್ಯಕ್ತಪಡಿಸಿದ ರಾಜಭಕ್ತಿ ಕೃತಜ್ಞತಾದಿ ಭಾವಗಳಿಗಾಗಿ ಸಂತೋಷಿಸಿ, ಅವರ ಪ್ರಾರ್ಥನೆಗಳಿಗೆಲ್ಲ ಸಮುಚಿತವಾದ ಪ್ರತ್ಯುತ್ತರಗಳಂ ದಯಪಾಲಿಸಿ ಅವರಿಗೆ ಹೃದಯಾನಂದವನ್ನುಂಟು ಮಾಡಿದರು. ಅದರಿಂದೀಚೆಗೆ, ಅಂದರೆ ಆಧಿಪತ್ಯವ ಸ್ವಯಂ ವಹಿಸಿದಮೇಲೆ ಇದುವರಿವಿಗೂ ಮಹಾರಾಜರವರ ಸವಾರಿಯು, ಪರಿಕ್ಲೃಪ್ತಗಳಾದ ಮೈಸೂರು, ಬೆಂಗಳೂರು, ನೀಲಗಿರಿ, ಈ ಮೂರು ಪ್ರದೇಶಗಳು ವಿನಾ ಬೇರೆ ಯಾವ ಸ್ಥಳಕ್ಕೂ ಚಿತ್ತೈಸಿರಲಿಲ್ಲವು. ಇದರಿಂದ ತಮ್ಮ ಆಳ್ವಿಕೆಯಲ್ಲಿ ಪ್ರಜೆಗಳು ಪಡೆದಿರುವ ಮನೋನೈಶ್ಚಿಂತ್ಯವನ್ನೂ ಅವರ ಪ್ರಾಣಮಾನ ಧನಗಳ ವಿಷಯದಲ್ಲಿನ ನಿರಪಾಯತೆಯನ್ನೂ, ತಮ್ಮಿಂದ ನಿಯಮಿತರಾದ ಕಾರ್ಬಾರೀಅಧಿಕಾರಿಗಳು ಅವರ ವಿಷಯದಲ್ಲಿ ನಡೆಸುವ ಕ್ರಮಗಳನ್ನೂ, ಜನಗಳಿಗೆ ಅಪೇಕ್ಷಿತಗಳಾದ ಅಂಶಗಳನ್ನೂ ತಿಳದುಕೊಳ್ಳಲಿಕ್ಕೆ ಅವಕಾಶವೇ ಉಂಟಾಗಿರಲಿಲ್ಲವು. ಈಗ ಮಹಾರಾಜರವರು ಸ್ವತಃ ದಯಮಾಡುವದರಿಂದ ಮೇಲೆ ಕಂಡ ಅಂಶಗಳನ್ನು ತಿಳದುಕೊಳ್ಳಲಿಕ್ಕೆ ಇದು ಒಳ್ಳೆಯ ಸಂದರ್ಭವಾಗಿರುತಿದೆ. ಪ್ರತಿ ಸಂವತ್ಸರದಲ್ಲಿಯೂ ನಡೆಯತಕ್ಕ ಪ್ರಜಾಪ್ರತಿನಿಧಿ ಸಮಾಜದಿಂದಲೇ ದೇಶಾನುಭವವೆಲ್ಲ ಮಹಾರಾಜರವರಿಗಾಗಲಿ, ಅವರ ಪ್ರತಿನಿಧಿಗಳಿಗಾಗಲಿ ವುಂಟಾಗುವದೆಂದು ನಂಬುವದು ಸರ್ವಾತ್ಮನಾ ಯುಕ್ತವಲ್ಲವು. ಇಂತಾ ಅನುಭವಜ್ಞಾನ ಸಂಪಾದನಕ್ಕಾಗಿಯೇ ಗಾಯಕವಾಡಿ ಮಹಾರಾಜರವರು ಸಂವತ್ಸರದಲ್ಲಿ ಬಹುಕಾಲ ಸಂಚಾರದಿಂದಲೇ ಕಳೆಯುತ್ತಾರೆ. ಮೈಸೂರುದೇಶದ ಡಿಸ್ಟ್ರಿಕ್ಟ್ ಜಾತ್ ಪ್ರಜೆಗಳಿಗೆ ಮಹಾರಾಜರವರ ಭೇಟಿಯು ಇದುವರಿವಿಗೆ ದುರ್ಲಭವಾಗಿದ್ದದರಿಂದ ಮಹಾರಾಜ ಸಂದರ್ಶನದೋಳ್ ಉತ್ಕಟೇಚ್ಛೆಯುಳ್ಳ ಗ್ರಾಮವಾಸಿಗಳು ಪಿಪೀಲಿಕಾ ಪಂಕ್ತಿಯಂತೆ ಗುಂಪು ಗುಂಪಾಗಿ ಬಂದು ಅವರ ದರ್ಶನ ಮಾಡಿಕೊಳ್ಳುವರು. ಸರ್ವಪ್ರಕಾರದಿಂದಲೂ ಅದಕ್ಕೆ ಅವರಿಗೆ ಅವಕಾಶವನ್ನುಂಟುಮಾಡಿ ಅವರ ಮನಸ್ಸಂತೋಷ ಪಡಿಸಬೇಕಾದ್ದು ಆವಶ್ಯಕವಾಗಿರುತಿದೆ. ಇಷ್ಟಲ್ಲದೆ ಒಂದುವೇಳೆ ಅವರು ಸ್ವಾತಂತ್ರ್ಯದಿಂದ ಮಹಾರಾಜಸನ್ನಿಧಿಯಲ್ಲಿ ತಮ್ಮ ಮನೋಗತವಾದ ಭಾವಗಳನ್ನೂ, ತಮ್ಮನಿರಂತರ ಸುಖಾಪೇಕ್ಷಿತಗಳಾದ ವಿಷಯಗಳನ್ನೂ ಭಕ್ತಿ ಬಹುಮಾನಪೂರ್ವಕವಾಗಿ ವಿಜ್ಞಾಪಿಸಲೆತ್ನಿಸಿದೊಡೆ, ಅವಂ ಸಮಗ್ರವಾಗಿ ಕೇಳಿ ಅನುಮೋದಿಸಿ, ಪ್ರತ್ಯೇಕವೂ ಪ್ರತ್ಯುತ್ತರವಂ ದಯಪಾಲಿಸಿ ಈ ದೇಶವಲ್ಲಿ ಉತ್ತರೋತ್ತರ ಇನ್ನೂ ವಿಶೇಷ ಸಮಾಧಾನವನ್ನೂ ಯೋಗ್ಯವಾದ ಆಳ್ವಿಕೆಯನ್ನೂ, ನಿರುಪದ್ರವವಾದ ಸ್ಥಿತಿಯನ್ನೂ ನೆಲಗೊಳಿಸುವಬಗ್ಯೆ ಬೇಕಾದ ಪ್ರಯತ್ನಗಳನ್ನೆಲ್ಲ ಮಾಡುತ್ತೇವೆಂದು ಅವರಿಗೆ ಮಹಾರಾಜರವರು ಭರವಸೆಯಂ ಕೊಟ್ಟರೆ ಅವರು ಮತ್ತಷ್ಟು ಸಂತೋಷಿಸುವರು. ಕೃಷಿ ಪ್ರಧಾನವಾದ ಈ ದೇಶದಲ್ಲಿ ತತ್ಸಾಧನ ಜಾತಗಳಾದ ಕೆರೆಕಟ್ಟೆ ನಾಲಾ ಮುಂತಾದವು ಶಿಕಸ್ತಾಗಿ ಅಬಗ್ಯೆ ಇದುವರಿವಿಗೆ ವ್ಯಯವಾದಲ್ಪಟ್ಟ ಅನೇಕಲಕ್ಷ ರೂಪಾಯಿಗಳು ಭಸ್ಮಾಹುತಿಯಂತೆ ನಿರರ್ಥಕವಾಗಿ ದೇಶದ ಹುಟ್ಟುವಳಿಯು ಕಡಮೆಯಾಗುತ ಬರುವದರಿಂದ, ಅವುಗಳಸ್ಥಿತಿ ಸಹ ಮಹಾರಾಜರವರ ಪರಾಮರ್ಶೆಗೆ ವಿಷಯವಾಗದಿರಲಾರದೆಂದು ನಂಬುತ್ತೇವೆ. ಮಹಾರಾಜರವರ ಸ್ವದೇಶಯಾತ್ರೆಯು ಕೆಲವರು ಕಾಫೀ ಪ್ಲ್ಯಾಂಟರ್‌ಗಳ ಪ್ರಯೋಜನವನ್ನುದ್ದೇಶಿಸಿದ್ದಾಗಿರುತ್ತದೆಂದು ತಿಳಿಯಬರುತಿದೆ. ಬಹುಶಃ ಇದು ನಿಜವಾಗಿರಬಹುದು. ಕಾಫೀ ಪ್ಲ್ಯಾಂಟರ್‌ಗಳ ಹಕ್ಕು ಬಾಧ್ಯತೆಗಳನ್ನೂ, ಅವರ ಅಪೇಕ್ಷಿತಾಂಶಗಳನ್ನೂ ಪರ್ಯಾಲೋಚಿಸುವಲ್ಲಿ ಇತರಪ್ರಜೆಗಳ ಪ್ರಯೋಜನಗಳಿಗೆ ಕೊರತೆ ಯುಂಟು ಮಾಡಲ್ಪಡಲಾರದೆಂಬು ನಂಬುತ್ತೇವೆ. ಮುಖ್ಯವಾಗಿ ಮಹಾರಾಜರವರು ಸ್ವದೇಶ ಯಾತ್ರೋದ್ದೇಶವ ಸಫಲಗೊಳಿಸಿ ಜನಗಳಂ ತೃಪ್ತಿಪಡಿಸಿ ಸುಖವಾಗಿ [illegible]ಯಮಾಡಬೇಕೆಂದು ಕೋರುವೆವು.

ಈ ತಿಂಗಳ ೨೪ನೇ ತಾರೀಖು ಮಂಗಳವಾರದಿನ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಪ್ರಯಾಣವಾಗಿ ಇದರಡಿ ಕಾಣಿಸುವ ತಾರೀಖ್‌ಗಳಲ್ಲಿ ಆಯಾ ಷಹರ್‌ಗಳಿಗೆ ದಯಮಾಡುವರು.

೨೭ನೇ ನವಂಬರ್		ಶುಕ್ರವಾರ	ಅರಕಲಗೂಡು.
೨೮	,,	ಶನಿವಾರ	ಸಕಲೇಶಪುರ.
		ಶುಕ್ರವಾರಸುತೀಮಾರ್ಗವಾಗಿ.	
೨೯	,,	ಆದಿತ್ಯವಾರ	ಮೊಕ್ಕಾಂ.
೩೦	,,	ಸೋಮವಾರ	ಮೂಡಿಗರೆ.
೧ನೇ ಡಿಸಂಬರ್		ಮಂಗಳವಾರ	ಕೊಟಗೆಹಾರ.
೨	,,	ಬುಧವಾರ	ಬಾಳೆಹೊನ್ನೂರು
೩	,,	ಗುರುವಾರ	ಕೊಪ್ಪ.
೪	,,	ಶುಕ್ರವಾರ	ಮೊಕ್ಕಾಂ.
೫	,,	ಶನಿವಾರ	ಮೊಕ್ಕಾಂ.
೬	,,	ಆದಿತ್ಯವಾರ	ಆಗುಂಬಿ.
೭	,,	ಸೋಮವಾರ	ತೀರ್ಥಹಳ್ಳಿ.
೮	,,	ಮಂಗಳವಾರ	ಕವಲೇದುರ್ಗ
೯	,,	ಬುಧವಾರ	ಮೊಕ್ಕಾಂ.
೧೦	,,	ಗುರುವಾರ	ಹುಲಿಕಲ್.
೧೧	,,	ಶುಕ್ರವಾರ	ನಗರ
೧೨	,,	ಶನಿವಾರ	ಕೊಡಚಾದ್ರಿ.
೧೩	,,	ಆದಿತ್ಯವಾರ	ಮೊಕ್ಕಾಂ.
೧೪	,,	ಸೋಮವಾರ	ಕಲ್ಲೂರು ಕಟ್ಟೆ.
೧೫	,,	ಮಂಗಳವಾರ	ಸಾಗರ.
೧೬	,,	ಬುಧವಾರ	ಗರಿಸೊಪ್ಪಾ ಫಾಲ್ಸ್.
೧೭	,,	ಗುರುವಾರ	ಸೊರಬ.
೧೮	,,	ಶುಕ್ರವಾರ	ಮೊಕ್ಕಾಂ
೧೯	,,	ಶನಿವಾರ	ಶಿಕಾರಿಪುರ.
೨೦	,,	ಆದಿತ್ಯವಾರ	ಸಾಲುಗ.
೨೧	,,	ಸೋಮವಾರ	ಶಿವಮೊಗ್ಗಾ
೨೨	,,	ಮಂಗಳವಾರ	ಮೊಕ್ಕಾಂ.

ಶಿವಮೊಗ್ಗೆಯಿಂದ ಆಚೆ ಪ್ರಯಾಣ ಮುಂದೆ ಪ್ರಕಟಿಸಲ್ಪಡುವದು.

ಶ್ರೀಮನ್ಮಹಾರಾಜರವರು ತಮ್ಮ ದಿವಾನರು, ಪ್ರೈವೇಟ್ ಸೆಕ್ರೆಟರಿ, ಜನರಲ್ ಮತ್ತು ರೆವಿನ್ಯು ಡಿಪಾರ್ಟ್ಮೆಂಟ ಸೆಕ್ರೆಟರಿ, ಡಾಕ್ಟರ್ ಬೆನ್ಸನ್, ಇವರುಗಳೊಡನೆ ದಯಮಾಡುವರು.

THE DEWAN'S TANK POLICY

ಈ ಸಂಸ್ಥಾನದ ಹುಟ್ಟುವಳಿಯೆಲ್ಲವೂ ಪ್ರಾಯೇಣ ಜಮೀನ್ ಮೂಲಕವಾದ್ದಾಗಿರುವವರಿಂದ ಏತದ್ರೂಪವಾದ ಆಯತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾದ್ದು ಗವರ್ನಮೆಂಟಿನವರಿಗೆ ಮುಖ್ಯಕರ್ತವ್ಯವಾಗಿರುತಿದೆ. ಹಾಗೆಮಾಡುವದರಲ್ಲಿಯೂ, ಪ್ರಜೆಗಳ ಲಾಭನಷ್ಟಗಳಂಕುರಿತು ಅವರು ಕೆಲವುಮಟ್ಟಿಗೆ ಆಲೋಚಿಸಬೇಕಾದ್ದು ಆವಶ್ಯಕವು. ಜಮೀನ್‌ಮೂಲಕವಾದ ಹುಟ್ಟುವಳಿಯು ಅಧಿಕವಾಗಲಿಕ್ಕೆ ಕೆರೆಕುಂಟೆ ನಾಲಾಗಳ ಉತ್ತಮಸ್ಥಿತಿಯೇ ಕಾರಣವಾಗಿರುವದರಿಂದ ಅವಂಬಲಪಡಿಸಿಕೊಳ್ಳುವಣವೇ ಸದ್ಯಃ ಸುಲಭೋಪಾಯವಾಗಿರುತಿದೆ. ಇದನ್ನು ಭಾವಿಸಿಯೇ ಸಾಬಕ್ ದಿವಾನ್ ಪೂರ್ಣಯ್ಯನವರು ಇವುಗಳ ವಿಷಯದಲ್ಲಿ ಸಂಪೂರ್ಣ ನಿಗೇಯಿಟ್ಟು ಅನೇಕಕೆರೆಗಳನ್ನು ಹೊಸವಾಗಿ ನಿರ್ಮಿಸಿದರಲ್ಲದೆ, ಹೈದರಲ್ಲಿಖಾನರ ಕಾಲದಲ್ಲಿಯೂ ಟೀಪೂ ಸುಲ್ತಾನರಕಾಲದಲ್ಲಿಯೂ, ಹೀನಸ್ಥಿತಿಯೊಳದ್ದ ಕೆರೆಗಳನ್ನೆಲ್ಲ ದುರಸ್ತುಮಾಡಿಸಿದರು. ಇವರು ಅಧಿಕಾರಪದದೊಳಿದ್ದ ೧೧ವರುಷಗಳಕಾಲದಲ್ಲಿ ಮೂವತ್ತುಲಕ್ಷರೂಪಾಯಿಗಳಿಗೆ ಜಾಸ್ತಿಯಾಗಿ ವ್ಯವಸಾಯೋಪಯೋಗಿಗಳಾದ ಕಾಮಗಾರಿಗಳಬಗ್ಯೆ ವ್ಯಯಮಾಡಿದರು. ಪರಂತು ಸದರೀ ಮೊಬಲಗೆಲ್ಲವೂ ಏನ್ ಕಾಮಗಾರಿಗಳಿಗಾಗಿ ವಿನಿಯೋಗಿಸಲ್ಪಟ್ಟಿತೇಹೊರತು ಶಿಬ್ಬಂದಿಖರ್ಚುಗಳಿಗಾಗಿ ಈಗಿನಷ್ಟುವ್ಯಯವಾಗಲಿಲ್ಲವು ಈಬಗ್ಯೆ ಇಷ್ಟರಮೊಬಲಗು ವ್ಯಯವಾಯಿತೆಂಬವಕ್ಕೆ ಕೆರೆಕುಂಟೆಗಳಪೂರ್ವಸ್ಥಿತಿಯೇ ನಿದರ್ಶನವಾಗಿತ್ತು. ದಿವಾನ್ ಪೂರ್ಣಯ್ಯನವರಕಾಲಾನಂತರ ಇವುಗಳನ್ನು ನಿಗಾಯೊಡನೆ ನೋಡತಕ್ಕವರಿಲ್ಲದೆಹೋಗಲು ಇವು ಕ್ರಮೇಣ ಪೂರ್ವಸ್ಥಿತಿಯನ್ನೈದಿದವು. ಇದರಿಂದ ಪ್ರತಿಸಂವತ್ಸರದಲ್ಲಿಯೂ ಲಕ್ಷಾಂತರರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗಲಿಕ್ಕೆ ಕಾರಣವಾಯಿತು. ತರುವಾಯ ಈರಾಜ್ಯವು ಬ್ರಿಟಿಷ್‌ನವರ ಪಾಲನೆಗೆ ಒಳಗಾದಬಳಿಕ ನೀರಾವರಿ ಕಾಮಗಾರಿಗಳಬಗ್ಯೆ ಅವರು ಬಹುವಿಧ ಪ್ರಯತ್ನಗಳಂ ಮಾಡದಿರಲಿಲ್ಲವು. ಪರಂತು ಅವರಿಗೆ ರಸ್ತೆಗಳನ್ನೂ ಕಟ್ಟಡಗಳನ್ನೂ ಬಹಾಯಿಸುವದರಲ್ಲಿ ಇದ್ದಷ್ಟು ಅಕ್ಕರೆಯು ಮೇಲ್ಕಂಡವಿಷಯದಲ್ಲಿ ಇಲ್ಲದೆಹೋದದರಿಂದ ಅನೇಕರು ಕೆರೆಗಳು ಶಿಕಸ್ತಾದವು. ಸದರೀ ಕೆರೆಗಳಿಂದ ಸರ್ಕಾರಕ್ಕೆ ವುಂಟಾಗತಕ್ಕ ಪ್ರಯೋಜನಹಾನಿಯನ್ನು ಅವರು ಪರಿಭಾವಿಸಿ ಅವುಗಳ ರಿಪೇರಿ ಮುಂತಾದ ಕೆಲಸಗಳನ್ನು ರೈತರಜಬಾಬ್ದಾರಿಗೆ

ಬಿಡಬೇಕೆಂಬ ಅಭಿಪ್ರಾಯವುಂಟಾಯಿತು. ಆ ಭಾಗ್ಯ ಪೂರ್ವದಂತೆ ಇವರು ಕೊಡಿಗಿ ಇನಾಂ ಮೊದಲಾದವು ಕೊಡದೇಹೋದರೂ, ರೈತರಿಗೆ ಕೆಲವುಭಾಗದಲ್ಲಿ ರಿಯಾಯತಿ ತೋರಿಸುತ್ತೇವೆಂದು ಭರವಸೆಕೊಟ್ಟರು. ಸದರೀ ರಿಯಾಯತಿಗಳ್ಯಾವವೆಂದರೆ—ಚೌಥಾಯಿ ಕ್ರಮವನ್ನನುಸರಿಸಿ ರೈತರಿಗೆ ಸಾಗುವಳಿಗೆ, ಜಮೀನ್ಕೊಡುವಣ, ಕ್ರಯ ಮತ್ತು ಛತ್ತೆ ಮುಚ್ಚಳಿ ರಿವಾಜಿಗೆ ಜಮೀನ್‌ಬಿಡುವಣ, ಮುಂತಾದವು ಈ ರಿಯಾಯತಿಗಳಪ್ಪಿತ ಯಾವದರಿಂದಲೂ ಉದ್ದಿಷ್ಟಪ್ರಯೋಜನವು ಪಾಲ್ಯಪಾಲಕರಿಬ್ಬರಿಗೂ ಕೈಗೂಡದ್ದರಿಂದ ಅನೇಕ ಕೆರೆಗಳು ಪ್ರಕೃತ ಹೀನಸ್ಥಿತಿಗೆ ಬಂದವು. ಈಗ ಮಹಾರಾಜಾ ಸರ್ಕಾರದವರು ಸಾಗುವಳೀ ಉಪಯುಕ್ತಗಳಾದ ಕಾಮಗಾರಿಗಳವಿಷಯದಲ್ಲಿ ತಾವು ನಿಗೇಕೊಡುವಂತೆ ತಿಳಿಸಿದ್ದು ಸಂತೋಷಕರವೇ. ಅಹುದು ಆದರೆ ಅವರು ಮಾಡಬೇಕೆಂಬುದ್ದೇಶಿಸಿರುವ ಏರ್ಪಾಡುಗಳಮೂಲಕ ಉದ್ದಿಷ್ಟಪ್ರಯೋಜನಗಳು ಸಿದ್ಧಿಸುವವೆಂಬ ಅಂಶ ಸಂದಿಗ್ಧವಾಗಿದೆ. ಈ ಸಂಸ್ಥಾನದೊಳಗಿನ ಮೂವತ್ತೆಂಟುಸಾವಿರ ಕೆರೆಗಳಿರುತಿವೆ. ಈಪೈಕಿ ೭೫೦ ಕೆರೆಗಳಮಾತ್ರ ಮರಮ್ಮತ್ತಿಲಾಖೆಯವರಸುಪರ್ದುವಾಗಿರುವವು. ೩೭೨೫೦ ಕೆರೆಗಳನ್ನು ರೈತರು ಇಷ್ಟಪಟ್ಟಲ್ಲಿ ಅವರು ಸ್ವಂತಲಾಗವಿನಿಂದ ರಿಪೇರಿಮಾಡಿಕೊಳ್ಳಬಹುದೆಂತಲೂ, ಹಾಗಿಲ್ಲವೋ ಸದರೀಕೆರೆ ಕಾಮಗಾರಿಗಳನ್ನು ಮುಲ್ಕೀ ಉದ್ಯೋಗಸ್ಥರಮೂಲಕ ಮಾಡಿಸತಕ್ಕದ್ದೆಂತಲೂ, ಗವರ್ನಮೆಂಟಿನವರು ಉದ್ದೇಶಿಸಿರುವುದಾಗಿ ಈ ಸಂವತ್ಸರದ ಪ್ರಜಾಪ್ರತಿನಿಧಿಸಭಾಸದಲ್ಲಿ ದಿವಾನರವರು ಓದಿದ ಸಾರ್ವಜನಿಕ ರಿಪೋರ್ಟಿನಮೂಲಕ ತಿಳಿಯಬರುತಿದೆ. ರೈತರು ಕೆರೆಗಳ ಕಾಮಗಾರಿಗಳನ್ನು ಸ್ವಾಧೀನಪಡಿಸಿಕೊಂಡಲ್ಲಿ ಆಗ [illegible]ಯೋಬಲಗನ್ನನುಸರಿಸಿ ಮುಂ[illegible] ತ್ರೈವಾರ್ಷಿಕ [illegible]ಕಂದಾಯ ಮಾಫ್ [illegible]ವೆಂದು ಸಹ ದಿವಾನರವರು ತಿಳಿಸಿದರು. ಈ ಕ್ರಮಕ್ಕೆ ರೈತರು ಒಡಂಬಡುವರಾದರೆ ದಿವಾನರವರ ಉದ್ದಿಷ್ಟ ಏರ್ಪಾಡು ನಿರಾಕ್ಷೇಪಣೀಯವಾಗಿರುವದು. ಪರಂತು ಅವರು ಇದಕ್ಕೆ ಒಡಂಬಡುವರೆಂಬ ಭರವಸೆ ಮಾತ್ರ ನಮಗೆ ಸುತರಾಂಗ ಇಲ್ಲವು. ಯಾವದಕ್ಕೆಂದರೆ, ಈ ವಿಷಯದಲ್ಲಿ ಬ್ರಿಟಿಷ್ ಗವರ್ನಮೆಂಟಿನವರು ತೋರಿಸುತ್ತಬರುವ ರಿಯಾಯತಿಗಳನ್ನು ನೋಡಲಾಗಿ ಪ್ರಕೃತ ಏರ್ಪಾಡು ರೈತರಿಗೆ ವಿಶೇಷ ಪ್ರಯೋಜನಕರವೆಂದು ಅವರು ಭಾವಿಸಲಾರರು. [illegible]ತ್ತು ಅಂಥಾ ರಿಯಾಯತಿಗಳಿಂದ ತೃಪ್ತರಾಗಿ ಕೆರೆ ಮುಂತಾದವುಗಳನ್ನು ರಿಪೇರಿ ಮಾಡಲಿಕ್ಕೆ ಬಹುದು, ಅವುಗಳು ಪ್ರಕೃತಸ್ಥಿತಿಗೆ ಬರುವಂತೆ ನೋಡುತಲಿದ್ದ ರೈತರು ಕೆಲವು ಸಂವತ್ಸರಗಳ ಕಂದಾಯ ಮಾಫಿಯಿಂದ ಹ್ಯಾಗೆ ತೃಪ್ತರಾಗುವರೋ ನಾವರಿಯೆವು. ಇಲ್ಲಿ ಮತ್ತೊಂದು ಪ್ರಬಲ ಅಸಂದರ್ಭವಿದೆ ಯೇನೆಂದರೆ, ಸಾಮಾನ್ಯವಾಗಿ ರೈತರು ರಿಕ್ತರು. ಕಾಲವೃಷ್ಟಿಯು ಆಗದ ಕೈ ಹಿಮ್ಮೆಟ್ಟುತಲಿರುತಿದೆ. ಕೆರೆಗಳ [illegible] ಆಗತಕ್ಕ ತಕರಾರಿನ ಸಂಬಂಧಕ್ಕೆ ತಿಪ್ಪಂಗ ನಿಲ್ಲುತಬಂದರು. ಈ ಕಾರಣಗಳಿಂದ [illegible] ಪ್ರಸ್ತ್ಯೇಕಸಂಪತ್ತುಯುಳ್ಳವರು ಸಹ [illegible] ವಿಷಯದಲ್ಲಿ ಪ್ರವರ್ತಿಸಲಿಕ್ಕೆ ಹಿಂಜರಿಯುವ[illegible] ಪ್ರತಿ ವರುಷದಲ್ಲಿಯೂ ಕೊಡುವ [illegible]ಯಕ್ಕೆ ಕೊಡಲ್ಪಟ್ಟಿರುವ ಬಿಸ್ತಗೀ ಸಾಲವೆಂದು ಒಂದುಕಡೆ ಅವರು ಮೊರೆಯಿಡುತಲಿದ್ದಾರೆ. ಮುಸಲಾ ಒಂದು ಕೆರೆಯನ್ನು ರಿಪೇರ್ ಮಾಡಬೇಕಾದಲ್ಲಿ ಅದಮುಪತ್ತ ಒಂದೆರಡು ವರುಷಗಳ ಕಂದಾಯವನ್ನು ಮೊಬಲಗು ಆಬಗ್ಗೆ ಬೇಕಾಗಿರುವದು. ಬಿಸ್ತ ಸಾಲವೆಂದು ಮೊರೆಯಿಡತಕ್ಕ ರೈತರು ಮೊತ್ತವಾಗಿ ಅಷ್ಟರ ಮೊಬಲಗನ್ನು ಹ್ಯಾಗೆ ಶೇಖರಿಸಿಕೊಡುವದಕ್ಕೆ ಸಮರ್ಥರಾಗುವರೋ ಯೆಂಬ ಅಂಶ ನಮ್ಮ ಬುದ್ಧಿಸ್ಥವಾಗಲಿಲ್ಲವು. ಇವನ್ನೆಲ್ಲ ಪರಿಭಾವಿಸಿ ನೋಡಲಾಗಿ ಕೆರೆಗಳ ಕಾಮಗಾರಿಯೂ ಅದು ಕಾಪಾಡುವ ಭಾರವೂ ಸರ್ಕಾರದವರನ್ನಂಟಿದ್ದಾಗಿಯೇ ಇರುತಿದೆ. ಪರಂತು ಈ ವಿಷಯದಲ್ಲಿ ರೈತರ ಸಹಾಯ ಸಂಬಂಧಗಳನ್ನು ಆತ್ಯಂತಿಕವಾಗಿ ಪರಿತ್ಯಜಿಸುವದರಿಂದ ಪ್ರಯೋಜನವಿಲ್ಲವು. ಕೆರೆಗಳ ರಿಪೇರಿಗಾಗಿ ಉದ್ದಿಷ್ಟವಾದ ಮೊಬಲಗನ್ನು ಗವರ್ನಮೆಂಟಿನವರು ರೆವಿನ್ಯೂ ಅಧಿಕಾರಿಗಳ ಅಧೀನದೊಳಿಟ್ಟು ಅವರ ಜವಾಬ್ದಾರಿಯ ಮೇಲೆ ರೈತರಮೂಲಕ ಕಾಮಗಾರಿಗಳನ್ನು ಮಾಡಿಸಿದಲ್ಲಿ ಸರ್ಕಾರದವರ ಸಂಬಂಧವೂ, ರೈತರ ಜವಾಬ್ದಾರಿಯೂ, ನೆಲಗೊಂಡಿರಲಿಕ್ಕೆ ಅವಕಾಶವಾಗುವದು. ಮರಮ್ಮತ್ತ್ ಇಲಾಖೆಗೆ ಒಳಪಡದ ತಮಾಂ ಕೆರೆಗಳಕಾಮಗಾರಿಗಳನ್ನು, ಲೋಕಲ್ ಫಂಡ್ ಬೋರ್ಡಿನ ಕ್ರಮವನ್ನನುಸರಿಸಿ ರಿಪೇರಿ ವಿಷಯದಲ್ಲಿ ಅವರನ್ನು ಜವಾಬ್ದಾರರನ್ನಾಗಿ ಮಾಡಿದರೆ ಸುಲಭವಾಗಿ ಕಾಮಗಾರಿ ನಡೆಯಬಹುದು. ಈಗ ರೈತರು ಕೊಡುತಲಿರುವ ದರೀ ಕಂದಾಯದ ರಿವಾಜನ್ನು ನೋಡಲಾಗಿ ಅದು ಮುಚ್ಚಳಿ ರಿವಾಜಿಗಿಂತ ಸರಾಸರಿ ಮೂರು ನಾಲ್ಕರಷ್ಟು ಅಧಿಕವಾಗಿರುತಿದೆ. ರೈತರು ತಮ್ಮ ಫಸಲಿಗೆ ಬೇಕಾಗಿರುವ ನೀರನ್ನು ಸರ್ಕಾರದವರು ಕಾಲಕಾಲಕ್ಕೆ ತಪ್ಪದೆ ಒದಗಿಸುವರೆಂಬ ಭರವಸೆಯಿಂದಲೇ ಅವರಿಗೆ ಇಷ್ಟರ ಜಾಸ್ತೀ ಕಂದಾಯವನ್ನು ಕೊಡುತಲಿದ್ದಾರೆ. ಜಾಸ್ತೀ ಕಂದಾಯವನ್ನು ವಸೂಲ್ಮಾಡುವವರೊಳು ಗವರ್ನಮೆಂಟಿನವರಿಗಿರುವಷ್ಟು ಆಕ್ಕರೆಯು, ರೈತರಿಗೆ ಅಪೇಕ್ಷಿತವಾದ ಜಲವಸತಿಯನ್ನು ಪ್ರಬಂಧಮಾಡುವದರಲ್ಲಿ ಇಲ್ಲದೆಹೋದರೆ ಅದರ ಪರ್ಯವಸಾನವು ಚಿಂತನೀಯವಾಗಿರುವದು. ಅತಏವ ಜಲವಸತಿಯಂ ಕಲ್ಪಿಸಬೇಕಾದ್ದು ಗವರ್ನಮೆಂಟಿನವರಿಗೆ ಮುಖ್ಯ ಕರ್ತವ್ಯವಾಗಿ ಏರ್ಪಟ್ಟಿತು. ಇಂಥಾ ವಸತಿಯನ್ನುಂಟುಮಾಡಲಿಕ್ಕೆ ಸರ್ಕಾರದವರಿಗೆ ಅನುಕೂಲಿಸದೆಹೋದರೆ ತಾವು ರೈತರಿಂದ ತೆಗೆದುಕೊಳ್ಳುವ ಜಾಸ್ತೀ ಕಂದಾಯದಪೈಕಿ ಕೆರೇ ಕಾಮಗಾರಿಗಳಿಗೆ ಬೇಕಾದಷ್ಟು ಮೊಬಲಗನ್ನು ಪ್ರತ್ಯೇಕವಾಗಿಟ್ಟು ಅದರಿಂದ ಕಾಮಗಾರಿ ಮಾಡಿಸಿದಲ್ಲಿ ಸುಲಭವಾಗಿ ನಡೆಯಬಹುದು. ಈ ಮೊಬಲಗನ್ನು ರೈತರ ಜವಾಬ್ದಾರಿಗೆ ಒಳಪಡಿಸಿದಲ್ಲಿ ಅವರಿಗೆ ಶ್ರದ್ಧೆಯು ಅಧಿಕವಾಗಿ ಅವರು ಮತ್ತಷ್ಟು ಶ್ರಮಿಸಲಿಕ್ಕೆ ಕಾರಣವಾಗುವದು. ರೈತರುಮಾಡುವ ಕಾಮಗಾರಿಯನ್ನು ಅವಲೋಕಿಸಿ ಅವುಗಳ ಸ್ವರೂಪಾನುಗುಣವಾಗಿ ಮೊಬಲಗನ್ನುಕೊಟ್ಟು ಅದು ವಿನಿಯೋಗವಾಗುವಂತೆ ರೆವಿನ್ಯೂ ಅಧಿಕಾರಿಗಳು ಮುತವಜ್ಜೆಯೊಡನೆ ತನಿಖೀಮಾಡುತಬಂದರೆ ಕಾಮಗಾರಿಯು ಯೋಗ್ಯವಾಗಿಯೂ, ಸರ್ಕಾರದವರು ಸ್ವತಃ ಮಾಡುವದಕ್ಕಿಂತ ಬಹಳ ಕಮ್ಮಿಖರ್ಚಾಗುವದರಲ್ಲಿಯೂ ನಡೆಯುವದು. ಸ್ಥೂಲದೃಷ್ಟಿಯಿಂದ ನೋಡತಕ್ಕವರು ಈಸಲಹೆಯನ್ನು ನಷ್ಟತ್ವೇನ ಎಣಿಸಬಹುದು. ಸೂಕ್ಷ್ಮದರ್ಶಿಗಳಾದ ದೂರದೃಷ್ಟಿಯುಳ್ಳವರು ಇದನ್ನು ನಷ್ಟವೆಂದು ಹೇಳಲಾರರು, ಯಾತಕ್ಕೆಂದರೆ ಗವರ್ನಮೆಂಟಿನವರು ಸಾಲಿಯಾನಾ ಬಹುದ್ರವ್ಯ ವ್ಯಯಮಾಡುತಲಿರುವದರಿಂದಲೂ, ಮುಂದೆಯೂ ಮಾಡುವದಕ್ಕೆ ಸನ್ನದ್ಧರಾಗಿರುವದರಿಂದಲೂ ಅವರಿಗಿದು ನಷ್ಟರೂಪವಾಗಿರಲಾರದು. ಎಷ್ಟು ಹುಟ್ಟುವಳಿಯಲ್ಲಿ ಕೆಲವುಭಾಗ ಇದಕ್ಕಾಗಿ ವಜಾಮಾಡುವದು ಕಬಾಬತ್ ನಷ್ಟವೆಂದು ಸದ್ಯಃ ತೋರಿದರೂ ಶಿಕಸ್ತಾಗಿರುವ ಕೆರೆಗಳಮೂಲಕ ಸರ್ಕಾರಕ್ಕೆ ಪ್ರಾಪ್ತವಾಗುತಲಿರುವ ನಷ್ಟವನ್ನೂ ಅವುಗಳನ್ನು ದುರಸ್ತುಮಾಡುವದರಿಂದ ಮುಂದೆ ಅವರಿಗೆ ಲಭಿಸಬಹುದಾದ ಪ್ರಯೋಜನವನ್ನೂ ಆಲೋಚಿಸಿದಲ್ಲಿ ಇದಕ್ಕೋಸ್ಕರ ಒಬ್ಬರೂ ಶಂಕಿಸಲಾರರು. ಮುಖ್ಯವಾಗಿ ಈದೇಶದಹುಟ್ಟುವಳಿಯು ಪೂರ್ವಸ್ಥಿತಿಗೆ ಬರಲಿಕ್ಕೆ ಮೇಲೆಕಂಡ ಏರ್ಪಾಡು ಅವಶ್ಯ ಕರ್ತವ್ಯವಾಗಿರುವದರಿಂದ ಇದಕ್ಕೆ ಮಹಾರಾಜಾ ಸರ್ಕಾರದವರು ಸಂಪೂರ್ಣ ಅವಧಾನವು ಕೊಡಬೇಕೆಂದು ಕೋರುವೆವು.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಿನಾಸ್ವೃತ್ತಾಂತಗಳು.

Notice—ಈವಾರದಪತ್ರಿಕೆಯೊಡನೆ ಕಳುಹಿಸಲ್ಪಟ್ಟಿರುವ ನೋಟೀಸಿಗೆ ನಮ್ಮ ಚಂದಾದಾರರೂ ಇತರರು ಸಹ ನಿಗೇಕೊಟ್ಟು ಅದರಲ್ಲಿ ತಿಳಿಸಲ್ಪಟ್ಟಿರುವಂತೆನಡೆಯಬೇಕೆಂದುಕೋರುವೆವು

Middle School Examination.—ಈಸಲದ ಮಿಡಿಲ್‌ಸ್ಕೂಲ್ ಪರೀಕ್ಷೆಯು ನಾಳೆ ಡಿಸೆಂಬರ್ ಗುರ್ಲೀ ತಾರೀಖ್‌ನಲ್ಲಿ ಶುರುವಾಗಿ ಇಲ್ಲಿನ ಸೆಂಟ್ರಲ್ ಕಾಲೇಜ್‌ನಲ್ಲಿ ನಡೆಯುವದು

Removal of an Office—ಇಲ್ಲಿನಬ್ರಿಟಿಷ್‌ರೆಸಿಡೆಂಟರು ಮತ್ತು ಕೊಡಗುಜುಡಿಷಿಯಲ್ ವ ಚೀಫ್ ಕಮಿಶ್ನರವರ ಆಫೀಸುಗಳು ಕಬ್ಬನ್‌ಪಾರ್ಕ್ ಪೋಲೀಸ್ ಸ್ಟೇಷನಿಗೆ ಯೆದುರಾಗಿರುವ ಮತ್ತು ಹಿಂದೆ ಡಿವಿಜನ್ ಕಮಾಂಡಿಂಗ್ ಆಫೀಸರವರು ವಾಸವಾಗಿದ್ದ ಬಂಗ್ಲೆಗೆ ವರ್ಗ ಮಾಡಲ್ಪಡುವದಾಗಿ ತಿಳಿಯಬರುತಿದೆ.

The British Resident—ಈ ಸಂಸ್ಥಾನದ ಬ್ರಿಟಿಷ್‌ರೆಸಿಡೆಂಟರಾದ ಮಿಸ್ಟರ್ ಗರ್ಡಿಲ್‌ಸ್ಟೋನ್ ಯವರು ಗತ ಗುರುವಾರದದಿನ ಪೇಟೆ ಮ್ಯುನಿಸಿಪಲ್ ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟರೊಡನೆ ಈ ಪೂರಾ ಪೇಟೆಯನ್ನೆಲ್ಲ ಬಳಸಿನೋಡಿ ನಗರಶುದ್ಧಿ ವಿಷಯದೊಳು ಮ್ಯುನಿಸಿಪಾಲಿಟಿಯವರಿಂದ ಮಾಡಲ್ಪಟ್ಟಿರುವ ಕೆಲವು ಏರ್ಪಾಡುಗಳನ್ನು ನೋಡಿ ಸಂತೋಷಿಸಿದರೆಂದು ತಿಳಿಯಲಾದೆವು.

The Mahomedan Rioters.—ಈಸಲದ ಮೊಹರಂಹಬ್ಬದಲ್ಲಿ ಸಿವಿಲ್ ವ ಮಿಲಿಟರಿಸ್ಟೇಷನಿನೊಳು ಲೈಸೆನ್ಸ್ ಇಲ್ಲದೆ ವೇಷಗಳನ್ನು ಧರಿಸಿ, ಕಲಹಿಸಿದ್ದಕ್ಕೋಸ್ಕರ ದಸ್ತಗಿರಿ ಮಾಡಲ್ಪಟ್ಟಿದ್ದ ಮಹಮ್ಮದೀಯರು ಕಳೆದ ಸೋಮವಾರದದಿನ ಮ್ಯಾಜಿಸ್ಟ್ರೇಟರಿಂದ ವಿಚಾರಿಸಲ್ಪಟ್ಟು, ಆ ಪೈಕಿ ೫ ಮಂದಿ ತಾವು ತಕ್ಸೀರ್‌ದಾರರಲ್ಲವೆಂತಲೂ ಈಬಗ್ಗೆ ತಾವು ಶಿಕ್ಷಿಸಲ್ಪಡಲು ಕಾರಣವಿಲ್ಲವೆಂತಲೂ ವಾದಿಸಿದ್ದರಿಂದ ಇಸಂಗಕ್ಕೆ ೧೫ ರೂಪಾಯಿಗಳ ಜುರ್ಮಾನೆ ವಿಧಿಸಲ್ಪಟ್ಟಿತಾಗೂ, ಇತರ ಕೆಲವು ಜನಗಳು ತಕ್ಸೀರನ್ನು ಒಪ್ಪಿಕೊಂಡು ವಿನಯವಾಗಿ ಕ್ಷಮಾಪಣೆಯನ್ನು ಕೇಳಿಕೊಂಡದ್ದರಿಂದ ನೆಪಮಾತ್ರಕೆ ಅವರಿಗೆ ೫ ಆಣೆ ಮೇರೆ ಅಪರಾಧ ವಿಧಿಸಲ್ಪಟ್ಟಿತೆಂತಲೂ ತಿಳಿಯಬರುತಿದೆ.

The Havuka Subodha and Kanara Chandrike—ಮಾದ್ಯೆಯಲ್ಲಿ ನವಾಹೀ ಮಹ[illegible]ಕೂರ್ ೩ನೇ ತಾರೀಖಿನವೊದಲು ನೂತನವಾಗಿ ಪ್ರಕಟಿಸಲ್ಪಡುತಲಿರುವ ಹವ್ಯಕ ಸುಬೋಧ ಮತ್ತು ಕಾರವಾರಚಂದ್ರಿಕೆಯೆಂಬ ಕನ್ನಡಪತ್ರಿಕೆಯ ಪ್ರಥಮಸಂಚಿಕೆಯ ಪ್ರತಿಯೊಂದು ನಮಗೆ ಕಳುಹಿಸಲ್ಪಟ್ಟಿತು. ಈ ಪತ್ರಿಕೆಯು, ತನ್ನ ಉದ್ದೇಶಗಳನ್ನು ಸಫಲಗೊಳಿಸಿ ಪ್ರಜೆಗಳಿಗೆ ಹಿತಕರವಾಗಿ ಬಹುಕಾಲ ಜೀವಿಸಿರಬೇಕೆಂದು ಕೋರುವೆವು. ಇದು ಜನಗಳ ಪರಿಗ್ರಹಕ್ಕೆ ಯೋಗ್ಯವಾಗಿರುವದರಿಂದ ಇದನ್ನು ಎಲ್ಲರೂ ಅಂಗೀಕರಿಸಿ ಪತ್ರಿಕಾಧಿಪರಿಗೆ ಪ್ರೋತ್ಸಾಹವುಂಟುಮಾಡುವರೆಂದು ನಂಬುತ್ತೇವೆ.

Serious Accident—ಗತ ಮಂಗಳವಾರದ ದಿನ ಬೆಳಗ್ಗೆ ೭½ ಘಂಟೆಗೆ ಸಿದ್ದೀಕಟ್ಟೆಯಲ್ಲಿರುವ ಮಿಷನ್ ಬಾಲಿಕಾ ಪಾಠಶಾಲೆಗೆ ೮ ವರ್ಷ ವಯಸ್ಸುಳ್ಳ ಒಬ್ಬಬ್ರಾಹ್ಮಣಹುಡಿಗಿಯು ಹೋಗುತಲಿದ್ದಾಗ ಒಂದುಗಾಡಿಯು ಅತಿವೇಗವಾಗಿ ಬರುತಲಿರಲು ಆ ಹುಡಿಗಿಯು ಅದರಕೆಳಗೆಸಿಲುಕಲು ಅವಳಿಗೆ ಪೂರಾ ಜಖಮಾಯಿತು. ಈ ಅಂಶವನ್ನು ಅಲ್ಲಿದ್ದವರು ಮಾರ್ಕೆಟ್ ಪೋಲೀಸ್ ಸ್ಟೇಷನಿಗೆ ಕೂಡಲೇ ತಿಳಿಸಿದಾಗ್ಯೂ ಅವರುಗಳು ಯಾರೂ ಬಾರದೆ ತಕ್ಸೀರುದಾರರನ್ನು ಹಿಡಿಯದೆ ಇದ್ದದರಿಂದ ಅವನು ಗಾಡಿಯನ್ನು ಹೊಡೆದುಕೊಂಡು ಹೊರಟುಹೋದನಾಗಿ ಕಾಣುತ್ತದೆ. ಆ ಹುಡಿಗಿಯಗತಿ ಯೇನಾಯಿತೋ ತಿಳಿಯಲಿಲ್ಲ. ಜಟಕಾ ಗಾಡಿಗಳಿಂದ ಆಗಿಂದಾಗ್ಯೆ ಇಂಥಾ ಅಪಾಯಗಳು ಪ್ರಾಪ್ತವಾಗುತಲಿವೆ. ಚೌಕ ಮುಂತಾದ ಜನಸಂಮರ್ದಪೂರ್ಣ ಪ್ರದೇಶಗಳಲ್ಲಿ ಜಟಕಾಗಾಡಿಯವರು ಹಿಂದುಮುಂದು ನೋಡದೆ ಅತಿ ವೇಗದೊಡನೆ ಗಾಡಿಗಳನ್ನು ಓಡಿಸುವದರಿಂದ ಇಂಥಾ ಅಪಾಯಗಳುಂಟಾಗಿ ಪ್ರಾಣಾಂತವಾದ ಅಪಾಯ ಸಂಭವಿಸುತಿದೆ. ಜನಗಳ ರಾಕ್ತಾ ಬಹಳವಾಗಿರುವಕಡೆಯಲ್ಲಿ ಗಾಡಿಗಳನ್ನು ಜೋರಾಗಿ ಬಿಡಕೂಡದೆಂದು ಗವರ್ನಮೆಂಟಿನವರು ನಿರ್ಬಂಧಪಡಿಸಿ ಅವರಿಗೋಸ್ಕರ ಪ್ರತ್ಯೇಕಸ್ಥಳ ಕಲ್ಪಿಸಿದ್ದರೂ, ಅಲ್ಲಿ ನಿಲ್ಲದೇ ಚೌಕದಲ್ಲಿ ನಿಲ್ಲುವದರಿಂದ ಗಲಾಟೆಗೆ ಕಾರಣವಾಗುತಿವೆ. ಈ ವಿಷಯದಲ್ಲಿ ಗವರ್ನಮೆಂಟಿನವರು ತಕ್ಕ ಬಂದೋಬಸ್ತು ಮಾಡಿದರೆ ಜನಗಳು ಧಾರಾಳವಾಗಿ ಸಂಚರಿಸಬಹುದು.

TELEGRAPHIC SUMMARY

ತಂತಿವೃತ್ತಾಂತ ಸಂಗ್ರಹವು.

[illegible], ೧ನೇ ನವಂಬರ್.—[illegible]

ಕಾನ್‌ಸ್ಟಾಂಟಿನೋಪಲ್, ೩ನೇ ನವಂಬರ್—[illegible]

[illegible], ೩ನೇ ನವಂಬರ್—[illegible]

[illegible]

[illegible], ೩ನೇ ನವಂಬರ್—[illegible]

ಕಾನ್‌ಸ್ಟಾಂಟಿನೋಪಲ್, ೪ನೇ ನವಂಬರ್.—[illegible]

[illegible]

[illegible], ೫ನೇ ನವಂಬರ್—[illegible]

ಕಾನ್‌ಸ್ಟಾಂಟಿನೋಪಲ್, ೫ನೇ ನವಂಬರ್.—[illegible]

ಲಂಡನ್, ೭ನೇ ನವಂಬರ್—[illegible]

[illegible], ೫ನೇ ನವಂಬರ್—[illegible]

SPEECH DELIVERED BY THE DEWAN OF MYSORE,

before the Representative Assembly at Mysore, on the 21st October 1885

(ಕಳೆದವಾರದ ಶೇಷ.)

	ರೂಪಾಯಿಗಳು
ಬೆಂಗಳೂರಿಂದ ಮೈಸೂರುವರೆಗಿನ ೮೫ ಮೈಲುಗಳು, ಟೆಂಪರರಿ ಟ್ರಾಮ್ ವೇ ಸಹಿತವಾಗಿ ಆದ ಖರ್ಚು ..	43,56,690
ಬೆಂಗಳೂರಿಂದ ತುಮಕೂರುವರೆಗಿನ ೪೩ ಮೈಲುಗಳು, ೧೮೮೪ನೇ ಇಸವಿ ಆಗಸ್ಟು ೧೧ನೇ ತಾ॥ ವರೆಗೆ ಆದದ್ದು	16,48,176
ತುಮಕೂರಿಂದ ಗುಬ್ಬಿವರೆಗಿನ ೧೧ ಮೈಲಿಗಳು, ೧೮೮೪ನೇ ಇಸವಿ ಡಿಸಂಬರು ೩೧ನೇ ತಾರೀಖಿನವರೆಗೆ ಖರ್ಚಾದದ್ದು	2,89,001
ಜುಮ್ಲಾ	62,91,170

೧೮೮೪—೮೫ನೇ ಇಸವಿಯಲ್ಲಿ ಒಟ್ಟು ರೈಲ್ವೆ ಹುಟ್ಟುವಳಿಯು ೩,೮೦,೮೭೫ ರೂಪಾಯಿಗಳು, ಒಟ್ಟು ಖರ್ಚು ೨,೨೩,೦೮೭ ರೂ॥ ನಿವಳ ಉತ್ಪತ್ತಿ ೧,೫೩,೫೮೮ ರೂ॥ ಇದಕ್ಕೆ ಮಾಮೂಲು ಹುಟ್ಟುವಳಿ ಬಾಬತಿನ ಸಿಲ್ಕು ೧,೧೫,೩೭೯ ರೂ॥ ಸೇರಿಸಿದಲ್ಲಿ ಹೋದ ಸಂವತ್ಸರದ ಆಖೈರಿಗೆ ಏಕೂನ ಸಿಲ್ಕು ೨,೮೯,೧೬೭ ರೂಪಾಯಿ ಆಗುತ್ತೆ.

ಗತಸಾಲ ಆಖೈರುವರಿಗೂ ರೈಲ್ವೇಗೋಸ್ಕರ ವ್ಯಯವಾಗಿ ಇರುವ ಒಟ್ಟು ಮೂಲದನ ೭೩ ಲಕ್ಷ ರೂಪಾಯಿಗಳಿಗೆ ನಿವಳವಾಯಿದೆ ಮೊಬಲಗನ್ನು ಹಂಚಿದರೆ ಸೇಕಡ ೨,೦೩೪ ರೂಪಾಯಿ ಆಗುತ್ತೆ. ಒಟ್ಟು ೧೪೦ ಮೈಲಿಗಳಲ್ಲಿ ಕೆಲವು ಭಾಗದಲ್ಲಿ ಮಾತ್ರವೇ ಸಂವತ್ಸರ ಪೂರ್ತಿ ಬಂಡಿ ನಡಿಯುತ್ತಾ ಇದ್ದದರಿಂದ ಸರಾಸರಿ ರೈಲು ನಡಿಯುತ್ತಿದ್ದ ಘಾಸರಿ ಲೆಕ್ಕಪ್ರಕಾರಕ್ಕೆ ೧೦೫ ಮೈಲಿಗಳು ಮಾತ್ರವೇ ಆಗುತ್ತೆ. ಈ ದಾಮಾಷಾಯಿ ಅನುಸರಿಸಿ ಲೆಕ್ಕ ಮಾಡಿದರೆ ನಿವಳ ಬಂದಾಯ ಸೇಕಡ ೪೧ ರೂ॥ ಆಗುತ್ತೆ.

೧೮೮೪—೮೫ನೇ ಸಾಲಿನ ಆಖೈರುವರಿಗೂ ವ್ಯಯವಾಗಿರುವ ಮೂಲದನರಿವಾಯಿ ಈಸಾಲಿನ ಖರ್ಚಿಗೆ ೨,೫೧,೦೮೦ ರೂ॥ ಸೇರಿಸಿದೆ, ಈ ಮೊಬಲಗಿನಿಂದ ಆರು ಹೊಸ ಎಂಜಿನ್‌ಗಳನ್ನು ತರಿಸಿ ಇರುವದಲ್ಲದೆ ಇನ್ನು ಕೆಲವು ಬಂಡಿಗಳೂ ತಯಾರಾಗಬೇಕಾಗಿದೆ; ರಸ್ತೆಯನ್ನು ಕೆಲವು ಕಡೆ ಇನ್ನೂ ನೆಟ್ಟಗೆ ಮಾಡಬೇಕಾಗಿದೆ. ಈ ಮೊಬಲಗು ಸೇರಿ ಒಟ್ಟು ಖರ್ಚು ೭೫,೪೫,೨೧೦ ರೂ॥ ಅಂದರೆ ಮೈಲಿ ೧ಕ್ಕೆ ೪೮,೩೫೧ ರೂಪಾಯಿ ಬೀಳುತ್ತೆ. ವರಮಾನವು ಮೂಲಧನದ ಮೇಲೆ ಲೆಕ್ಕ ಮಾಡಲಾಗಿ ಸೇಕಡ ೩ ರೂ॥ ಪ್ರಕಾರ ಬೀಳುತ್ತೆಂತ ಹೇಳಬಹುದು.

ಗುಬ್ಬಿಯಿಂದ ಮುಂದೆ ಹರಿಹರದವರಿಗೂ ಇರತಕ್ಕ ೧೫೩ ಮೈಲಿಗಳು ಬತಾಯಿಸಬೇಕಾಗಿದೆ ಈ ಕೃತಿ ತಿಪಟೂರುವರಿಗೆ ಆಗುವ ೪೨ ಮೈಲಿ ಲೈನಿನ ಸರ್ವೆ ಪ್ಲ್ಯಾನು ಅಂದಾಜು ಸಹ ಸನ್ ೧೮೮೪ನೇ ಜನವರಿ ತಿಂಗಳಲ್ಲಿ ಇಂಡಿಯಾ ಗವರ್ನ್‌ಮೆಂಟಿನಿಂದ ಮಂಜೂರಾಗಿದೆ ತಿಪಟೂರಿಗೂ ಹರಿಹರಕ್ಕೂ ಮಧ್ಯೆ ೧೧೫ ಮೈಲಿಗಳ ಬಾಬತು ಸರ್ವೆ ಮುಂತಾದ ಲೆಕ್ಕಗಳು ಇಂಡಿಯಾಗವರ್ನ್‌ಮೆಂಟಿಗೆ ರವಾನಿಸುವ ಉದ್ದೇಶ್ಯ ರೆಸಿಡೆಂಟ್ ಸಾಹೇಬರವರಲ್ಲಿಗೆ ಸನ್ ೧೮೮೫ನೇ ಜುಲೈ ೧೩ ರಲ್ಲು ಕಳುಹಿಸಲ್ಪಟ್ಟವು.

ಗುಬ್ಬಿಯಿಂದ ಮುಂದಕ್ಕೆ ಹರಿಹರದವರಿಗೂ ೧೫೩ ಮೈಲುಗಳ ರಸ್ತೆಯನ್ನು ಬತಾಯಿಸುವದಕ್ಕೆ ಮೈಲಿ ೧ಕ್ಕೆ ೪೦,೦೦೦ ರೂ॥ ಪ್ರಕಾರಕ್ಕೆ ೬೩,೦೭,೮೩೯ ರೂಪಾಯಿಗಳು ಆಗುತ್ತೆ. ಇದುವರಿಗೆ ನಡದಿರುವ ಕಾಮಗಾರಿಯ ದರಕ್ಕೂ ಮುಂದಕ್ಕೆ ಅಂದಾಜು ಮಾಡಿರುವದಕ್ಕೂ ಮೈಲಿಂಕ್ಕೆ ೬,೩೮೯ ರೂಪಾಯಿಗಳು ಕಮ್ಮಿ ಆಗಿದೆ. ಇದಕ್ಕೆ ಕಾರಣ ವೇನುದರೆ,—ಮೊದಲಿಗಿಂತ ಈಗ್ಯೆ ಸರ್ವೆ ಸುಲಭವಾಗಿ ನಡದಿದೆ. ಸೇತುವೆಗಳು ಕಮ್ಮಿ. ಹಡೆಕ್ಯಾರಿಟರನಲ್ಲಿ ಕಷ್ಟದಗಳು ತಯಾರಾಗಿಯಿದೆ. ಕೆಲವು ಸ್ಥಿಗೆ ಸಾಮಾನು ಸಿದ್ಧವಾಗಿದೆ. ಪ್ರಾರಂಭದಲ್ಲಿ ನದಗಿಸಿಕೊಳ್ಳ ಬೇಕಾದ ಬಂಡಿ ಮುಂತಾದ ಸಾಮುಗ್ರಿಗಳು ಮೊದಲುಗಿಂತ ಕಮ್ಮಿ ಸಿಬ್ಬಂದಿಯಲ್ಲಿ ಸಹ ಖರ್ಚು ಕಮ್ಮಿ.

ಗುಬ್ಬಿಯಿಂದ ಹರಿಹರಕ್ಕೆ ರೈಲ್ ರಸ್ತೆ ಬತಾಯಿಸುವ ವಿಷಯದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಪರಾಯಿ ದೇಶದ ದ್ರವ್ಯದಿಂದ ಈ ಕೆಲಸ ನೆರವೇರಿಸಬೇಕೆಂದು ಈಚೆಗೆ ಒಂದು ಸಲಹೆ ಮಾಡಿದ್ದನ್ನ ಶ್ರೀಮನ್ಮಹಾರಾಜಾ ಸರ್ಕಾರದವರು ಅಂಗೀಕರಿಸಿದಾರೆ. ಈ ಸಂಗತಿಯಲ್ಲಿ ಮೈಸೂರು ಸಂಸ್ಥಾನದ ಪರವಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ದಕ್ಷಿಣ ಮರಾಟಾ ಕಂಪೆನಿಯವರಿಗೂ ಕರಾರಾಗುವದಕ್ಕಾಗಿ ಮಧ್ಯಸ್ತಿಗಳು ನಡಿಯುತ್ತಾ ಇರುವದಾಗಿ ನಂಬಿ ಇದೆ.

ಈ ಕರಾರಿನಮೇರಿಗೆ ಈಗ ಇರುವ ೧೪೦ ಮೈಲಿಗಳ ರೈಲ್ ರಸ್ತೆಯು ಇದಕ್ಕೆ ಹಾಲಿ ರೆಗಲಿ ಇರುವ ಖರ್ಚು ಮೊಬಲಗಿಗೆ ದಕ್ಷಿಣ ಮರಾಟಾ ರೈಲ್ವೆ ಕಂಪನಿಗೆ ಅಸಾರ ಮಾಡಲ್ಪಡುವದು. ಈ ಕಂಪೆನಿಯವರು ರಸ್ತೆಯನ್ನು ಬತಾಯಿಸುವದಕ್ಕೆ ಬೇಕಾಗುವಷ್ಟು ಮೊಬಲಗನ್ನು ಜಮಾಯಿಸಿ ರಸ್ತೆಯನ್ನು ಪೂರೈಸತಕ್ಕದ್ದು. ಈಗ ಪೂರ್ತಿಯಾಗಿರುವ ರೈಲ್ವೆ ಲೈನನ್ನು ಅದಾದ ಮಾಪೋಣದರಿಂದ ಮೈಸೂರು ಸರ್ಕಾರಕ್ಕೆ ಬರುವ ನ ಬಲಗನ್ನು ಕಳೆದ ಷ್ಟಾಂಡರ್ಡಿ ಇಂಡಿಯಾ ಗವರ್ನ್‌ಮೆಂಟಿನವರು ಕೊಟ್ಟ ಸಾಲಕ್ಕಾಗಿ ಬಾಪತೀ ಮಾಡತಕ್ಕದ್ದು. ಈಗ ಬ್ಯಾಂಕದಲ್ಲಿ ಹಾಕುತ್ತಿರುವ ರೈಲ್ವೆ ವಿಷಯದಲ್ಲಿ ಕಂಪೆನಿಯವರಿಗೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ಹುಟ್ಟತಕ್ಕ ಕರಾರಿನ ಷರತ್ತುಗಳಂತೆಯೇ ಈ ಮೈಸೂರು ಸರ್ಕಾರಕ್ಕು ದಕ್ಷಿಣ ಮರಾಟಾ ರೈಲ್ವೆ ಕಂಪೆನಿಯವರಿಗೂ ಷರತ್ತುಗಳಾಗತಕ್ಕದ್ದು. ಈಗ ಇರತಕ್ಕ ಸ್ಟೇಟ್ ರಸ್ತೆಯನ್ನು ಬತಾಯಿಸಿ ಮೈಸೂರು ಸ್ಟೇಟ್ ರೈಲ್ವೆ ವಿಸ್ತರವನ್ನು ಕಂಪೆನಿಯವರು ಮರಳಾಗಿ ಇಟ್ಟುಕೊಂಡು ನಡಿಸತಕ್ಕದ್ದು. ಈ ಏರ್ಪಾಡಿನ ಪ್ರಕಾರ ಮೊದಲು ೫ ವರ್ಷಗಳ ವರೆಗೆ ಕಂಪೆನಿಯವರಿಗೆ ಅವರು ಖರ್ಚುಮಾಡುವ ಮೂಲದ್ರವ್ಯದ ಮೊಬಲಗಿನಮೇಲೆ ಮೈಸೂರು ಗವರ್ನ್‌ಮೆಂಟಿನವರು ಕ್ಲುಪ್ತವಾದ ಬಡ್ಡಿ ಕೊಡಬೇಕಾದ ವಹಿ ಕೊಡತಕ್ಕದ್ದು. ಈ ಕಾಲದಲ್ಲಿ ಹುಟ್ಟತಕ್ಕ ನಿವ್ವಳ ಹುಟ್ಟುವಳಿಯನ್ನು ಮೈಸೂರು ಗವರ್ನ್‌ಮೆಂಟಿನವರೇ ತೆಗೆದುಕೊಳ್ಳತಕ್ಕದ್ದು. ಮೊದಲ ೫ ವರ್ಷಗಳು ಕಳೆದನಂತರ ಸರ್ಕಾರದ ಜಾಮೀನಾಗಿ ಇರುವ ಬಡ್ಡಿ ದರವು ಸೇಕಡಾ ೩½ ರೂಪಾಯಿ ತಗ್ಗತಕ್ಕದ್ದು. ಕಂಪೆನಿಯವರು ರೈಲ್ವೆ ಖರ್ಚು ಕಳೆದು ಸಿಲ್ಲುವ ಹುಟ್ಟುವಳಿ ಸ್ಥಿತಿ ಕಾಲದಲ್ಲಿ ತಾವು ಇಟ್ಟುಕೊಂಡು ಮುಕ್ಕಾಲು ಭಾಗ ನಮ್ಮ ಸರ್ಕಾರಕ್ಕೆ ಕೊಡತಕ್ಕದ್ದು. ಕಂಪೆನಿಯವರ ಲೆಕ್ಕದ ಮತ್ತು ಅವರು ಮಾಡುವ ಖರ್ಚುಬಾಬುಗಳ ಮೇಲ್ವಿಚಾರಣೆಯನ್ನು ಮೈಸೂರು ಗವರ್ನ್‌ಮೆಂಟಿನವರು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಇರುವದಕ್ಕೂ ರೈಲ್ವೆ ಲೈನ್ನಲ್ಲಿ ಮೈಸೂರು ಸರಕಾರದಿಂದ ಬೇಕಾದ ಬಂದೋಬಸ್ತು ವಿಷಯದಲ್ಲಿಯು ಸಹ ತಕ್ಕ ಏರ್ಪಾಡುಗಳು ಮಾಡಲ್ಪಡುತ್ತೆ. ಅದಾರದ ತಾರೀಖ್ ಆಗಾಯದು ೨೫ ವರ್ಷಗಳು ಕಳೆದನಂತರವಾಗಲಿ ಅಥವಾ ೩೫ ವರ್ಷಗಳು ಗತಿಸಿದನಂತರವಾಗಲಿ ಅಥವಾ ತಪ್ಪಿದರೆ ೪೫ ವರ್ಷಗಳ ಅನಂತರದಲ್ಲಿಯಾಗಲಿ ಸದರೀ ಅದಾರವನ್ನು ಬಿಡಿಸಿಕೊಳ್ಳಬಹುದು. ಈ ಷರತ್ತುಗಳು ಮೈಸೂರು ಸರ್ಕಾರಕ್ಕೆ ಪ್ರತಿಕೂಲವಲ್ಲವು.

ಈಗ ನಡೆಯುತ್ತಿರುವ ರೈಲ್ವೆ ಲೈನನ್ನು ಅದಾರ ಮಾಡಿ ಅದರಿಂದ ಬರುವ ೬೫ ಲಕ್ಷ ರೂಪಾಯಿಗಳನ್ನು ಕಳೆದ ಷ್ಟಾಮದ ದೆಸೆಯಿಂದ ಉಂಟಾದ ಸಾಲದಮೈಕಿ ಹಾಲಿ ಬಾಕಿ ಇರುವ ಸುಮಾರು ೭೨½ ಲಕ್ಷ ರೂಪಾಯಿಗಳ ಸಾಲವನ್ನು ತೀರಿಸಲು ಬಹಳಮಟ್ಟಿಗೆ ಉಪಯೋಗಿಸುತ್ತೆ. ಇದರಿಂದ ಈಗ ಸದರೀ ಸಾಲಕ್ಕಾಗಿ ಆಗಾಗ್ಯೆ ಪಾವತಿ ಆಗುವ ಭಾರಿ ಮೊಬಲಗುಗಳು ಘಾಯಿದೆ ಬರತಕ್ಕ ಇತರ ಕೆಲಸಗಳ ಉದ್ದೇಶ್ಯ ಉಪಯೋಗಿಸಲು ಮೈಸೂರು ಗವರ್ನ್‌ಮೆಂಟಿಗೆ ಷ್ಟೇಪ್ರದಲ್ಲಿ ಅನುಕೂಲ ಉಂಟಾಗುತ್ತೆ.

ರಿವಾಯಿ ಇದುವರಿಗೆ ಪೂರ್ತಿಯಾಗಿರುವ ರೈಲ್ವೆ ಲೈನಿನ ಮೂಲಕ ಉತ್ಪತ್ತಿಆಗುವ ಪ್ರಕಾರವೇ ಮುಂದಣ ವೃತ್ಪತ್ತಿಯು ಇದ್ದಲ್ಲಿ ಜಾಮೀನಾಗಿರುವ ಬಡ್ಡಿಬಾಬತು ದೇಣಿಯು ಬಹಳ ಭಾರಿಯಾಗುವದಿಲ್ಲ. ಮುಂದೆ ಕಂಪೆನಿಯಿಂದ ಬತಾಯಿಸಲ್ಪಡತಕ್ಕ ರೈಲ್ ಯು ಮೈಸೂರು ಗವರ್ನ್‌ಮೆಂಟಿನ ಅಂದಾಜನ್ನು ವಿಚಾರವೆ ಪ್ರಯಾಣದಲ್ಲಿ ಸೇಕಡ ೩ರ ಪ್ರಕಾರ ಹುಟ್ಟುವಳಿ ಆಗುವದರಲ್ಲಿ ಮೈಸೂರು ಸರಕಾರಕ್ಕೆ ಬರಬೇಕಾದ ಮುಕ್ಕಾಲುಪಾಲು ಅಂದರೆ ಶೇಕಡ ದರ ೨। ರೂಪಾಯಿನಮೇರೆ ಬರತಕ್ಕ ಸಾಲೀಯಾನ ಮೊಬಲಗಿಗಿಂತ ಜಾಮೀನಾಗಿರತಕ್ಕ ಸೇಕಡ ೩½ ಪ್ರಕಾರಕ್ಕೆ ಆಗುವ ಬಡ್ಡಿಮಾಬಲಗು ೭೮,೦೦೦ ರೂಪಾಯಿ ಜಾಸ್ತಿ ಆಗುತ್ತೆ. ಷ್ಟೇಪ್ರದಲ್ಲಿಯೇ ದೇಶದಲ್ಲಿ ಬರುವ ವಿಸ್ತಾರವಾದ ರೈಲ್ವೆಯನ್ನು ಸರ್ಕಾರಕ್ಕೆ [illegible] ಮತ್ತು ವಾ[illegible] ಅನುಕೂಲವಾದ ಈ ರೈಲ್ವೆಯನ್ನು [illegible] ವ್ಯಾಪಾರವಾದ ಸ್ವಾತಂತ್ರ್ಯವನ್ನು ಪರಿಗಣಿಸಿ [illegible] ದೇಶಕ್ಕೆ [illegible] ಉಂಟಾಗುತ್ತೆ [illegible] [illegible] ದೇಶದ ಉತ್ಪತ್ತಿಯಾಗುವ [illegible] ಕ್ಕೆ ಪ್ರಾರಂಭವಾದ [illegible] [illegible] ಹುಟ್ಟುವಳಿಯಲ್ಲಿ ಸರಕಾರಕ್ಕೆ ಇದು ಒಂದು ಉತ್ಪತ್ತಿಯು ಬಾಬುಗುತ್ತೆ. ಈ ಕಾರಣಗಳಿಂದ ಈಗ ದಕ್ಷಿಣ ಮರಾಟಾ ರೈಲ್ವೆ ಕಂಪೆನಿಯವರಿಗೆ ನೆರವೇರುವ ಕರಾರು [illegible] ಸರ್ಕಾರದಿಂದ [illegible] ಮಾಡತಕ್ಕದ್ದೆಂದು ಭಾವಿಸತಕ್ಕದ್ದು.

[illegible] ಮೈಸೂರು [illegible] [illegible] ಹುಟ್ಟುವಳಿ [illegible] [illegible] ವಿಚಾರಿಸುತ್ತೇನೆ. [illegible] ಮೈಸೂರು [illegible] [illegible] [illegible] [illegible] [illegible] ತಾಯಿಗೆ [illegible] [illegible] ಪ್ರಾಮುಖ್ಯ [illegible] [illegible] [illegible] [illegible] [illegible] ವರ್ತಮಾನಗಳಿಂದ ಮುಖ್ಯವಾಗಿ [illegible] ಇವರು ಗವರ್ನ್‌ಮೆಂಟಿಗೆ [illegible] [illegible] ಸಂಗತಿಗಳಲ್ಲಿಯು ವಿಶೇಷವಾಗಿ [illegible] ದ ಸಲಹೆಯನ್ನು ಕೊಡುತ್ತಿದ್ದರು ಮತ್ತು ಇವರು ಕೆಲಸ ಎಂಜಿನೀರ್‌ಗಳನ್ನ ರೈಲ್ವೆ ಸರ್ವೆ ಸಪರೀರಸ್ತೆ ತಯಾರಿ, ಮುಂತಾದ ಕೆಲಸಗಳಲ್ಲಿ ದಕ್ಷತೆಯುತ್ತು ಮಾಡುವದಕ್ಕೆ ಜರಗಿಸಿದ ಪ್ರಯತ್ನಗಳು ಪೂರ್ತಿಯಾಗಿ ಸಫಲವಾದವು. ಇವರ ಸರವಿಸ್ಸನ್ನು ಇನ್ನು [illegible] ಕೊಳ್ಳಲು ಶ್ರೀಮನ್ಮಹಾರಾಜರ ಗವರ್ನ್‌ಮೆಂಟಿನವರು ಒಪ್ಪಳವಾಗಿ ಪಡದಿದ್ದಾರೆ. ಇದ್ದರಿಂದ ಈ [illegible] ಈ ವರುಷಗಳವಾಲ ಈ ಸರಕಾರಕ್ಕೆ ಮಾಡಿದ ಉತ್ತಮವಾದ ನೌಕರಿಯನ್ನ ಪೂರ್ಣ ರಸುಮಾನಿಸಿದಾರೆಂದು ಶ್ರೀ ಮನ್ಮಹಾರಾಜರವರ ಗವರ್ನ್‌ಮೆಂಟಿನವರು ಹೇಳುವದಕ್ಕೆ ಈ ಅವಕಾಶವನ್ನು ಅವಲಂಬಿಸಿ ಕೊಳ್ಳುತ್ತಾರೆ.

ಕಳೆದಸಂವತ್ಸರದ ಸಭೆ ಸೇರಿದ್ದ ಕಾಲದಲ್ಲಿ ಆಗ್ಯೆಯಿದ್ದ ಸ್ಥಿತಿ ಕಾಲಸ್ಥಿತಿಯನ್ನು ಕುರಿತು ನಾವು ಪ್ರಸಕ್ತಿಮಾಡಿದ್ದೆವು.

ಕಾಲಸ್ಥಿತಿ.

ಅದೃಷ್ಟವಶಾತ್ ಆಭೀತಿಗಳು ನೆಲಗೊಳ್ಳಲಿಲ್ಲವು. ಹಿಂಗಾರುಮಳೆಯು ಅನುಕೂಲವಾಗಿ ನಡಸಿದಾಗ್ಯು ಸಿಂತುಯಿದ್ದ ಬುಷ್ಕಳಬೆಳೆಯು ಕೆಲವುಭಾಗಕ್ಕೆಮಾತ್ರ ಅನುಕೂಲವಾಯಿತೇಹೊರ್ತು ಕೆರೆಗಳು ತುಂಬುವದಕ್ಕಾಗಲಿ ಮಾಮೂಲಾದ ಸಾಗುವಳಿ ಆಗುವದರಲ್ಲಿ ಅರ್ಧಭಾಗಕ್ಕಿಂತ ಹೆಚ್ಚಾಗಿ ರವೀ ಸಾಗುವಳಿ ಆಗುವದಕ್ಕಾಗಲಿ ಅವಕಾಶವಾಗಲಿಲ್ಲ. ತ್ರಿವರ್ ಮತ್ತು ಈನಾಸ್ಟದಿಕ್ಕುಗಳ ತಾಲ್ಲೂಕುಗಳಲ್ಲಿ ಕಾಲುವಾಸಿಹಿಡಿದು ಅರವಾಸಿವರಿಗು ಫಸಲಾಯಿತು. ಏನುಚೆ ಸುಮಾರು ಬೆಳೆ ಕೈಯಿಗೆಬಂದು ಸನ್ನಿಹಿತವಾದ ಕಷ್ಟವನ್ನ ನಿವಾರಿಸುವದಕ್ಕೆ ಸಾಕಾದಷ್ಟಾಯಿತು. ಪುನಃ ಈಸಂವತ್ಸರದಲ್ಲಿಯೂ ೧೮೮೩—೮೪ನೇ ಸಂವತ್ಸರದ ಪೂರ್ವಾರ್ಧದಲ್ಲಿದ್ದಂಥಾ ಪ್ರತಿಕೂಲಸ್ಥಿತಿಯು ವಿಶೇಷ ಪ್ರಬಲರೂಪವಾಗಿಸಂಬವಿಸಿದೆ ಮೇ ತಿಂಗಳಲ್ಲಿ ಮುಂಗಾರು ಚೆನ್ನಾಗಿಯೇ ಪ್ರಾರಂಭವಾಯಿತು. ಆತಿಂಗಳಲ್ಲಿಯು ಸಹ ಕುಚಸೂಚನ ಕೊಡುತ್ತಲೇಬಂತು. ಜಾಸ್ತಿ ತಿಂಗಳಲ್ಲಿ ದೆಸ್ಸೆ ಹೋಗುವ [illegible] ಮತ್ತು ಕಾಲವಿರುತ್ತಾ ಬಂದದ್ದಾಗಲ್ಲಾ ಅನಾವೃಷ್ಟಿ [illegible] ಬಸುತ್ತಾ ಬಂದು ಜಾಸ್ತಿಯಾಗಿಯು ಸೆಪ್ಟಂಬರ್ ಆಖೈರುವರಿಗೂ ಒಳ್ಳೆ ಕೊಂಚ ಮಳೆಯಿಲ್ಲ. ದೀರ್ಘವಾದ ಅನಾವೃಷ್ಟಿಯಿಂದ ಬೆಳೆಯು ಒಣಗುತ್ತಾ ಬಂದು. ಮೊದಲು ಬಿತ್ತೆನೆಗಿದ್ದ ಸ್ಥಳ ಮೈಸೂರು, ಚಿತ್ರದುರ್ಗ, ತುಮಕೂರು ಈ ಡಿಸ್ಟ್ರಿಕ್ಟುಗಳ ಕೆಲವು ಪ್ರದೇಶಗಳಲ್ಲಿ ಸಂಪೂರ್ಣವಾಗಿ ನಷ್ಟವಾಯಿತು. ಕೋಲಾರ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಹಾಸನ ಡಿಸ್ಟ್ರಿಕ್ಟಿನ ಮೈದಾನಪ್ರಾಂತ್ಯಗಳಲ್ಲಿಯೂ ಮುಂಗಾರುಮಳೆ ಬೇರು ಕಮ್ಮಿಯಾಗಿ ಬಿತ್ತನೆಯು ಮಾಮೂಲಿ ನಂತೆ ವಿಸ್ತಾರವಾಗಿ ನಾಗಲಿಲ್ಲ. ಎಲ್ಲೆಲ್ಲಿಯೂ [illegible] ಬಿತ್ತನೆಯಾಗಿದ್ದವೊ [illegible] ಕಾರ್ತೀಕದಾಗುವಳಿ ಆಗಲಿಲ್ಲ ಮಲನಾಡಿನಲ್ಲಿಯು ಸಹ ಚಿತ್ತಾ [illegible] ಮಳೆ ಸಾಕಾಗಲಿಲ್ಲ ಮೈದಾನು ತಾಲ್ಲೂಕುಗಳಲ್ಲಿ ಏರಿನ ಬೆಳೆಗಳು ಬತ್ತಿಹೋದವು [illegible] ಗಿನ ಬಹಳ ಶ್ರಮ ಅನುಭವಿಸಬೇಕಾಯಿತು. ದನಗಳಿಗೆ ಮೇವು ದುರ್ಲಭವಾಯಿತು ಉಳಿ ಕೆಲ್ಲಲ್ಪಟ್ಟಿರುವ ಕಾವಲುಗಳನ್ನು ಸಹ ಚರಾವಿಗಾಗಿ ಗವರ್ನ್‌ಮೆಂಟಿನವರು ಬಿಟ್ಟು ಮಾಡಬೇಕಾಯಿತು. ದಾರಿದ್ರ್ಯವು ಏರುತ್ತಾ ಬಂದು. ಪದಾರ್ಥಗಳ ಬೆಲೆಯು ದಿನೇದಿನ ಹೆಚ್ಚಾಗುತ್ತಾ ಬಂತು ಈ ಪ್ರಕಾರವಾಗಿ ದೇಶವು ಕೇವಲ ಅಪಾಯಸ್ಥಿತಿಯಲ್ಲಿ ಇರುವದರ ನಿದರ್ಶನ ಎಲ್ಲಾಕಡೆಯಲ್ಲಿಯೂ ಕಾಣಿಸಿಕೊಳ್ಳುತ್ತಾ ಬಂದು. ಹೀಗೆ ಅನಾವೃಷ್ಟಿಯು ವಿಳಂಬಿಸಿದರೆ ದುರ್ಭಿಕ್ಷವು ಉಂಟಾಗುತ್ತಿತ್ತೆಂಬದೆ ಹಿಂಗಾರು ಮಳೆಯೂ ತಪ್ಪಿಹೋಗುವ ಸಂದರ್ಭದಲ್ಲಿ ಜಾಗ್ರತೆಯಲ್ಲಿ ಕ್ಷಾಮವಾಗಿ ಪರಿಣಮಿಸುವದೆಂದು ಸ್ಪಷ್ಟವಾಗಿ ತಿಳಿಯಬಂತು. ಈ ಕಾಲಸ್ಥಿತಿಯು ಈ ಪ್ರಕಾರ ಶೋಚಕವಾಗಿರುವಲ್ಲಿ ಸಪ್ಟಂಬರ್ ೨೫ನೇ ತಾರೀಖಿನಲ್ಲು ಅದರ ಈಚಿನ ದಿನಗಳಲ್ಲಿಯೂ ಬಿದ್ದ ಮಳೆಯು ತಾತ್ಕಾಲಿಕವಾದ ಚಿಂತೆಯನ್ನು ಹೋಗಲಾಡಿಸಿತು. ಅದರಿಂದ ಈಚೆಗೆ ಕಾಲಸ್ಥಿತಿಯು ಕೇವಲ ಅನುಕೂಲವಾಗಿದೆ. ಇದೇಪ್ರಕಾರ ಮುಂದೆಯೂ ಇದ್ದಲ್ಲಿ ಎಂದಿಗಿಂತ ಬೆಳೆ ಕೊಂಚ ಕಮ್ಮಿಯಾದಾಗ್ಯೂ ದರೂ ದಕ್ಕಮಟ್ಟಿಗೆ ಸರಿಯಾಗಿ ಆಗೀತೆಂಬ ಭರವಸೆ ಇರಬಹುದು. (ಸಶೇಷ.)

BANGALORE.—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯುಪೇಗವರ್ಣ್ಯ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ನ್ನಿ[illegible]

VOL XII] • BANGALORE—MONDAY, NOVEMBER 16, 1885 [No 46

ಸಂಪುಟ ೧೨.] ಬೆಂಗಳೂರು — ಸನ್ ೧೮೮೫ನೇ ಇಸವಿ ನವಂಬರ್ ೧೬ನೇ ತಾರೀಖ್ ಸೋಮವಾರ. [ಸಂಖ್ಯೆ ೪೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ . ೧೨—೦—೦

ಇಂಗ್ಲಿಷ್ [illegible] ವರುಷ ೧ಕ್ಕೆ . ೬—೦—೦

ಕನ್ನಡದಲ್ಲಿ [illegible] ವರುಷ ೧ಕ್ಕೆ . ೬—೦—೦

[illegible] ೧ಕ್ಕೆ ೦—[illegible]—೦

[illegible] ೧ಕ್ಕೆ [illegible]

[illegible] ೧ಕ್ಕೆ ೦—[illegible]—

[illegible]

ಪ್ರಕಟನೆಯ ರಿವಾಜ್.

[illegible] ೧ಕ್ಕೆ ೦—[illegible]—೦

[illegible] ೧ಕ್ಕೆ ೦—೧—೦

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA

Price including Postage, Rs 5-6-0

[illegible]

[illegible] ರೂ|| ೫—೦—೦

[illegible] ೦—[illegible]—೦

[illegible], ಬೆಂಗಳೂರು

ನೋಟೀಸ್

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಿಕ್ಕುವವು:—

ಕನ್ನಡ [illegible] ಸಂಸ್ಕೃತ ಗ್ರಂಥಗಳು

[illegible]	೧—೪—೦
[illegible]	೦—೧೨—೦
[illegible] (ಪಟ್ಟಾಭಿಷೇಕ)	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೬—೦
[illegible]	೦—[illegible]—೦
[illegible]	೫—೧—೦

ಕನ್ನಡ ಗ್ರಂಥಗಳು

[illegible]	೦—೬—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—[illegible]—೬
[illegible]	೦—೨—೬
[illegible]	೦—೬—೦
[illegible]	೦—೩—೦
[illegible]	೦—೨—೦
[illegible]	೦—೦—[illegible]
ಇಂಗ್ಲಿಷ್ ಕನ್ನಡ [illegible]	೧—೦—[illegible]
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible]	೦—೨—೦
[illegible]	೦—೨—೦
[illegible]	೦—೨—೦

ಸಂಸ್ಕೃತ ಗ್ರಂಥಗಳು

[illegible]	೦—೩—೦
[illegible]	೦—೫—೦
[illegible]	೦—೩—೬
[illegible]	೦—೨—೬
[illegible]	೦—[illegible]—೦
[illegible]	೦—೩—೬
[illegible]	೦—೧—೦

[illegible]

NOTICE.

ಎಸ್ ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟಿಸ್.

ಬೆಂಗಳೂರು ತರಗುಪೇಟೆಯಲ್ಲಿರುವ ಎಸ್ ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಅದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ್.

ಬೆಂಗಳೂರು [illegible]ಮ್ಯುನಿಸಿಪಾಲಿಟಿ.

ಬೆಂಗಳೂರು ಷಹರ್ ಮ್ಯುನಿಸಿಪಲ್ ಆಫೀಸ್,

ತಾರೀಖು ೧೩ನೇ ನವಂಬರ್ ೧೮೮೫

ನಂ ೪೬೯

ಷಹರ್ ಡಿಸ್ಪೆನ್ಸರಿಯಾನೆ ಔಷಧಶಾಲೆ ಮತ್ತು ಆಸ್ಪತ್ರಿಯನ್ನು ಸೆಂಟಮೂಸ್ಥಾ ಎಂಬವರ ಅಸ್ಪತ್ರಿ ಕಟ್ಟಡಕ್ಕೆ ವರ್ಗ ಮಾಡುವದಂ ಕುರಿತು ಆಲೋಚಿಸತಕ್ಕಬಗ್ಗೆ ಬೆಂಗಳೂರ್ ಷಹರ್ ಮ್ಯುನಿಸಿಪಲ್ ಕಮಿಷನರ್‌ಗಳು ಮಾಕೇಮುಜಕೂರ್ ೨೦ನೇ ತಾರೀಖ್ ಶುಕ್ರವಾರದವೇಳೆಗ್ಯೆ ೭ ಘಂಟೆಗೆ, ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್‌ಕಟ್ಟಡದಲ್ಲಿ ರುವತಮ್ಮ ಆಫೀಸಿನಲ್ಲಿ ವಿಶೇಷ ಸಭೆಸೇರುವರು.

A. H. MACINTIRE,
President,
City Municipal Commission

ನೋಟೀಸ್

ಈ ಪತ್ರಿಕೆಯನ್ನು ನಾವು ಮರಳಿ ಪ್ರಕಟಿಸಲು ಪ್ರಾರಂಭಿಸಿ ಕಳೆದ ಅಕ್ಟೋಬರ್ ಆಖೈರಿಗೆ ೧೨ ಸಂವತ್ಸರಗಳು ಪೂರ್ತಿಯಾದವು. ಈ ಹನ್ನೆರಡು ಸಂವತ್ಸರಗಳ ಕಾಲದಲ್ಲಿ ಪ್ರತಿ ಸಾಲಿನಲ್ಲೂ ಚಂದಾ ಬಾಕೀಗಳು ಬಹಳವಾಗಿ ಹೊರಗೆ ನಿಂತುಹೋಗುತ್ತ, ವಸೂಲಿಗೆ ಮಾರ್ಗವಿಲ್ಲದೆ ಅರ್ಥನಿಷ್ಪ್ರಯೋಜಕವಾದ ಅನುಪಪತ್ತಿಗೆ ನಾವು ಗುರಿಯಾಗಬೇಕಾಗಿ ಬಂದದರಿಂದ, ಸನ್ ೧೮೮೬ನೇ ಇಸವಿ ಜನವರಿ ಲಾಗಾಯತು ಚಂದಾ ಮೊಬಲಗನ್ನು ಅಡ್ವಾನ್ಸ್ ಕೊಡತಕ್ಕವರಿಗೆ ಮಾತ್ರ ಈ ಪತ್ರಿಕೆಯನ್ನು ಕಳುಹಿಸತಕ್ಕದ್ದೆಂದು ನಿರ್ಣಯಿಸಿರುತ್ತೇವೆ. ಹಾಗೆ ಅಡ್ವಾನ್ಸ್ ಕಳುಹಿಸುವ ಚಂದಾದಾರರ ಸಂಖ್ಯೆಯೂ ಅವರಿಂದ ವಸೂಲಾಗುವ ಮೊಬಲಗೂ ಈ ಪತ್ರಿಕೆಯನ್ನು ಅರ್ಥನಿಷ್ಪ್ರಯೋಜಕವಾದ ಅನುಪಪತ್ತಿ ಲೇಶವೂ ಇಲ್ಲದೆ ನಡೆಸುತ ಬರುವದಕ್ಕೆ ಸಾಕಾಗಿರುವದೇ ಎಂಬ ಅಂಶವನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಬೇಕಾಗಿರುವದರಿಂದ, ಮೇಲಿನ ನಮ್ಮ ಯೋಚನೆಯನ್ನು ಅನುಮೋದಿಸಿ ಪೋಷಿಸಲು ಅಭಿಮತವುಳ್ಳ ದೊಡ್ಡಮನುಷ್ಯರೆಲ್ಲರು ಈ ತಿಂಗಳ ೯ನೇ ತಾರೀಖ್ ಸೋಮವಾರದ ಪತ್ರಿಕೆಯೊಡನೆ ಕಳುಹಿಸಿರುವ ದರಖಾಸ್ತು ಫಾರಂನಲ್ಲಿ ರುಜುಮಾಡಿ ಈ ತಿಂಗಳ ಆಖೈರೊಳಗಾಗಿ ನಮಗೆ ವಾಪಸ್ ಮಾಡಬೇಕೆಂದು ಕೋರುವೆವು. ಹೀಗೆ ಬರುವ ದರಖಾಸ್ತುಗಳ ಸಂಖ್ಯೆಯು ನಮ್ಮ ಉದ್ದೇಶಾನುಗುಣವಾಗಿ ಕಂಡುಬರುವ ಪಕ್ಷಕ್ಕೆ ನವಂಬರ್ ೩೦ನೇ ತಾರೀಖಿನ ಈ ಪತ್ರಿಕೆಯಲ್ಲಿ ನಾವು ಕೊಡುವ ಎರಡನೇ ನೋಟಿಸ್ ಅನುಸರಿಸಿ ಅವರವರು ತಮ್ಮ ತಮ್ಮ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕು. ಒಂದುವೇಳೆ ಇಂತಾ ದರಖಾಸ್ತುದಾರರ ಸಂಖ್ಯೆಯು ಸಾಲದ್ದಾಗಿ ಕಂಡುಬರುವ ಪಕ್ಷಕ್ಕೆ ಅದರಮೇಲಿನ ನಮ್ಮ ನಿರ್ಣಯವನ್ನು ಡಿಸಂಬರ್ ೭ನೇ ತಾರೀಖಿನ ಪತ್ರಿಕೆಯ ಮೂಲಕ ಪ್ರಕಟಪಡಿಸುವೆವು.

ಬೆಂಗಳೂರು, ೯ನೇ ನವಂಬರ್ ೧೮೮೫ } ಟಿ ಸಿ ಶ್ರೀನಿವಾಸಾಚಾರ್ ಪ್ರೊಪ್ರೈಟರ್

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 16, 1885.

೧೮೮೫ನೇ ನವಂಬರ್ ೧೬ನೇ ತಾ|| ಸೋಮವಾರ

ಶ್ಲೊ|| ಸರ್ವಜ್ಞತಾಂಸದಸಿವಾಕ್ಪಟುತಾಂಪ್ರಸೂತಿ ವಾಣಿತ್ವದಂಘ್ರಿಸರಸೀರುಹಯೋಃಪ್ರಣಾಮಃ ।ತ್ವಾಮೇವದೇವಿಮನಸಾಸಮನುಸ್ಮರಾಮಿ ತ್ವಾಮೇವನೌಮಿಶರಣಂಜನನೀತ್ವಮೇವ॥

RYOTS AND THE REVENUE OFFICIALS

ಮದರಾಸ್ ಪ್ರೆಸಿಡೆನ್ಸಿಯಲ್ಲಿ ಬಹುಕಾಲದಿಂದ ನೌಕರಿಯಲ್ಲಿದ್ದು ಈಚೆಗೆ ತಮ್ಮ ಕೆಲಸದಿಂದ ಪೆನ್ಷನ್‌ಮೇಲೆ ನಿವೃತ್ತರಾದ ಒಬ್ಬ ತಹಸೀಲ್ದಾರರು, ತಮಗಿರುವ ಗತ ೨೦—೨೫ ವರ್ಷಗಳ ಅನುಭವದಮೇಲೆ, ರೆವಿನ್ಯೂ ಅಧಿಕಾರಿಗಳ ಮೂಲಕ ರೈತರಿಗೆ ಉಂಟಾಗತಕ್ಕ ಕಿರುಕುಳವನ್ನು ಮರೆಮಾಚದೆ ಯಥಾವಸ್ಥಿತವಾಗಿ ಮದರಾಸ್ ಮೆಯಿಲ್ ಪತ್ರಿಕೆಗೆ ಪ್ರಕಟನೆಯಬಗ್ಗೆ ಬರೆದುಕಳುಹಿಸಿದಬಿಂದುರೇಖನವನ್ನು ನೋಡಲಾಗಿ ರೈತರ ಶ್ರಮವು ಇಷ್ಟರದೆಂದು ವ್ಯಕ್ತವಾಗದಿರುವದಿಲ್ಲವು. ಸದರೀ ತಹಸೀಲ್ದಾರರು ತಮ್ಮ ಕಾಲದಲ್ಲಿ ನಮೂದಿಸುವ ಅನುಭವಸಿದ್ಧಗಳಾದ ಕೆಲವು ಅಂಶಗಳನ್ನಿದರಡಿ ತಿಳಿಸುವೆವಂತನೆ;— ತಹಸೀಲ್ ಅಥವಾ ಅಮಲ್ದಾರನೆನ್ನಿಸಿಕೊಳ್ಳತಕ್ಕವರು ಗವರ್ನಮೆಂಟಿನವರಿಗೆ ಪ್ರತಿನಿಧಿಯಾಗಿರುತ, ಸುಮಾರು ೮೦೦ ಸಲ ಮೈಲಿಗಳ ವೈಶಾಲ್ಯವುಳ್ಳದ್ದಾಗಿಯೂ, ೨,೫೦,೦೦೦ ಪ್ರಜಾ ಸಂಖ್ಯೆಯುಳ್ಳದ್ದಾಗಿಯೂ ಇರುವ ಒಂದು ತಾಲ್ಲೂಕಿಗೆ ಅಧಿಕಾರಿಯೆನಿಸಿಕೊಂಡು ಅಲ್ಲಿನ ಪ್ರಜೆಗಳನ್ನು ಮುಳುಗಿಸಲಿಕ್ಕಾಗಲಿ, ಅಥವಾ ಅವರು ತೇಲಿಸಿ ಕಾಪಾಡಲಿಕ್ಕಾಗಲಿ ಸಮರ್ಥನಾಗಿ, ನಿರಂಕುಶಾಧಿಕಾರದೊಡನೆವರ್ತಿಸುತಲಿರತಕ್ಕವನಾಗಿರುತ್ತಾನೆ. ಕೆಲವು ತಾಲ್ಲೂಕುಗಳು ರೈಲ್ವೆ ಮುಂತಾದ ಅನುಕೂಲ್ಯಗಳಿಲ್ಲದೆ ಬಹಳ ದೂರಪ್ರಾಂತದೊಳಗಿರುತಿವೆ. ಅಂತಾ ತಾಲ್ಲೂಕುಗಳಿಗೆ ಆಫಿಸರಾದವರು ಸಾಧಾರಣವಾಗಿ ಸಂವತ್ಸರಕ್ಕೆ ಒಂದುಸಲ ಹೋಗುವದು ಸಹ ಬಹಳ ಪ್ರಯಾಸವಾಗಿರುತಿದೆ. ರಾಜ್ಯಪರಿಪಾಲನಾರ್ಥ ಮಾಡಲ್ಪಟ್ಟಿರುವ ನ್ಯಾಯನಿಬಂಧನೆಗಳೆಲ್ಲವೂ ಪ್ರಜೆಗಳ ಕ್ಷೇಮಾರ್ಥವೆಂದು ಅನೇಕರು ಭಾವಿಸಿಕೊಂಡಿರಬಹುದು. ಅಂತಾ ನ್ಯಾಯನಿಬಂಧನೆಗಳನ್ನನುಸರಿಸಿ ನಡೆಸಲ್ಪಡುವ ಅಧಿಕಾರದಿಂದ ಪ್ರಜೆಗಳು ಎಷ್ಟರ ಸೌಖ್ಯವನ್ನು ಅನುಭವಿಸುತಲಿದಾರೆಯೋ ಅದನ್ನಿಲ್ಲಿ ತಿಳಿಸಬೇಕೆಂಬದೇ ನಮ್ಮ ಮುಖ್ಯೋದ್ದೇಶವಾಗಿರುತಿದೆ. ಒಂದು ತಾಲ್ಲೂಕಿನಲ್ಲಿ ಸರಾಸರಿ ೩೦೦ ಮೊದಲು ೫೦೦ ರವರಿವಿಗೆ ಗ್ರಾಮಗಳುಇರುತಿವೆ. ಕೆಲವು ತಾಲ್ಲೂಕುಗಳಲ್ಲಿ ಸಾಲೀಯಾನಾ ಏರಡು ಲಕ್ಷ ರೂಪಾಯಿಗಳೂ ಅನ್ಯತ್ರ ೫—೬—೭ ಲಕ್ಷ ರೂಪಾಯಿಗಳೂ ಸರ್ಕಾರಕ್ಕೆ ಖುಷ್ಕು ಬಾಬ್ತಿನಲ್ಲೂ ಲಾಗಿ ವಸೂಲಾಗುತಿದೆ. ತಹಸೀಲ್ದಾರನು ತನ್ನ ತಾಲ್ಲೂಕಿನಲ್ಲಿ ಮಾಡಬೇಕಾದ ಕಾರ್ಯಗಳ್ಯಾವ

...ದರೆ—ಸರ್ಕಾರಕ್ಕೆ ಬರಬೇಕಾದ ಕಂದಾಯಗಳನ್ನು ರೈತರಿಂದ ವಸೂಲ್ಮಾಡಿಸುವಣ; ಅವರಿಗೆ ಕೆರೆಗೆ ಮುಂತಾದ್ದನ್ನು ಹಾಕುವಣ ; ತಾಲ್ಲೂಕಿನೊಳಗಿರುವ ಜಲಾಧಾರದ ಮೂಲಕ ವ್ಯವಸಾಯ ಕೆಲಸಗಳಿಗೆ ಕ್ರಮವಾಗಿ ನೀರು ಒದಗುವಂತೆ ಮಾಡುವಣ ; ಜಮೀನ್ ಮತ್ತು ಫಸಲ್ ಬಾಬ್‌ಗಳಲ್ಲಿ ಪ್ರಂಬಾಗತಕ್ಕ ತಕರಾರ್‌ಗಳನ್ನೆಲ್ಲ ಫೈಸಲ್ಮಾಡುವಣ ; ಗ್ರಾಮದ ಲೆಕ್ಕಗಳಿಗೆ ಸ್ವತಃ ಜವಾಬ್ದಾರನಾಗಿ ತನಿಖೀಮಾಡುವಣ ; ಗ್ರಾಮಾಧಿಕಾರಿಗಳಿಂದ ವಸೂಲಾಗಿ ಬರುವ ಇರಸಾಲಿಗಳು ಕಾಲಕಾಲಕ್ಕೆ ತಪ್ಪದೆ ಖಜಾನೆಗೆ ಬರುತಿವೆಯೋ ಇಲ್ಲವೆ ಯೆಂಬದನ್ನು ವಿಚಾರಣೆ ಮಾಡುವಣ ; ತಾಲ್ಲೂಕಿನ ಆರೋಗ್ಯಸ್ಥಿತಿಗೆ ಜವಾಬ್ದಾರನಾಗಿರುವಣ ; ಲೋಕಲ್ ಫಂಡ ರೋಡ್‌ಗಳನ್ನು ದುರಸ್ತು ಮಾಡಿಸುವಣ ; ಸಾಲೆಗಿಡಗಳ ಉಸ್ತುವಾರಿ ; ಫಲಕಾಲದಲ್ಲಿ ಫಲವೃಕ್ಷಗಳನ್ನು ಗುತ್ತಿಗೆಗೆ ಕೊಡುವಣ ; ಗ್ರಾಮ ಸಮುದಾಯ ತೋಪುಗಳನ್ನು ಅಭಿವೃದ್ಧಿ ಪಡಿಸುವಣ ; ಬೇಲಿ ಮತ್ತು ಪಾತಕಾಲೆ ಇವುಗಳ ವಿಚಾರಣೆ ; ತನ್ನ ಕೈಕೆಳಗಣ ಉದ್ಯೋಗಸ್ಥರ ಪ್ರಮಾದಾದಿ ದೋಷಗಳಿಗೆ ತಾನು ಜವಾಬ್ದಾರನಾಗಿರುವಣ ; ತನ್ನ ಅಧಿಕಾರಕ್ಕೊಳಗಾದ ಪ್ರದೇಶಗಳಲ್ಲಿ ಸಂಚರಿಸತಕ್ಕ ಪ್ರಯಾಣಿಕರ ಸಾಕರ್ಯಾಸಾಕರ್ಯಗಳ ವಿಷಯದೊಳು ವಿಶೇಷ ಅಕ್ಕರೆಯುಳ್ಳವನಾಗಿರುವಣ ; ಕಲೆಕ್ಟರ್ ಸಬ್‌ಕಲೆಕ್ಟರ್ ಮುಂತಾದ ತನಗೆ ಮೇಲ್ಪಟ್ಟ ಅಧಿಕಾರಿಗಳ ಕ್ಷೇಮಲಾಭದೊಳು ನಿಗೇ ಇಡುವಣ ; ಏವಮಾದಿ ಕಾರ್ಯಗಳೆಲ್ಲರೂ ಆತನಿಗೆ ಸಂಬಂಧಿಸಿದವಾಗಿರುತಿವೆ. ಮೇಲೆ ತಿಳಿಸಲ್ಪಟ್ಟ ಇತರ ಎಲ್ಲಾ ವಿಷಯಗಳಿಗಿಂತಲೂ ಕಡೆಯಲ್ಲಿ ತಿಳಿಸಿದ ಅಂಶಮಾತ್ರ ಕೇವಲ ಮುಖ್ಯವಾದದ್ದಾಗಿರುತಿದೆ. ಯಾತಕ್ಕೆಂದರೆ ಅವರಿಗೆ ಸರಬರಾಯಿ ಮಾಡುವದರಲ್ಲಿ ಹಾಲಿನಲ್ಲಿ ಸ್ವಲ್ಪ ನೀರು ಬೆರೆತಿದ್ದರೂ, ಕೋಳಿ ಬಲಿತದ್ದಾಗಿಲ್ಲದಿದ್ದರೂ, ಕೂಡಲೇ ತಹಸೀಲ್ದಾರನ ಪ್ರಾಣಕ್ಕೇ ಬರುತಿದೆ. ಹ್ಯಾಗೆಂದರೆ, ಅವರ ಕೆಲಸದವರು ಯಾವವಿಷಯದೊಳಾದರೂ ದೋಷವನ್ನು ಕಲ್ಪಿಸಿಕೊಂಡು ಅದು ಅಧಿಪರೊಡನೆ ತಿಳಿಸುತ್ತಾರೆ. ಕೂಡಲೇ ಅವರ ಅಪ್ರೀತಿ ಅಗೌರವಗಳಿಗೆ ತಹಸೀಲ್ದಾರನು ಗುರಿಯಾಗುತ್ತಾನಲ್ಲದೆ ಇದುವರೆಗೆ ಮಾಡಿದ ಸಹಾಯವೆಲ್ಲವು ನಿಷ್ಪ್ರಯೋಜಕಗಳಾಗಿ ಹೋಗುತಿವೆ. ರೆವಿನ್ಯೂಯಿಲಾಖೆಯಲ್ಲಿ ತಹಸೀಲ್ದಾರನ ಕೈಕೆಳಗೆ, ಒಬ್ಬ ಡೆಪ್ಯುಟಿ ತಹಸೀಲ್ದಾರ್, ಒಬ್ಬ ತಾಲ್ಲೂಕು ಶಿರಸ್ತೇದಾರ್, ಮೂರು ನಾಲ್ಕು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ಶೇಕ್‌ದಾರ್, ಏಳೆಂಟು ಬೇರೆ ಗುಮಾಸ್ತೇರು, ಇದಲ್ಲದೆ ಶಾನಭೋಗರು, ಈರೀತಿ ಇರುತ್ತಾರೆ. ಒಬ್ಬ ಶಾನಭೋಗನು ಐದಾರು ಗ್ರಾಮಗಳ ಲೆಕ್ಕಗಳಿಗೆ ಜವಾಬ್ದಾರನಾಗಿರುವನು. ರೆವಿನ್ಯೂ ಕೆಲಸವಲ್ಲದೆ ತಹಸೀಲ್ದಾರನಿಗೆ ಮ್ಯಾಜಿಸ್ಟ್ರೇಟಿ ಅಧಿಕಾರ ಸಹವುಂಟು. ಆ ಅಧಿಕಾರವು ಎಂತಾದ್ದೆಂದರೆ, ೫೦೦ ರೂಪಾಯಿಗಳತನಕ ಜುರ್ಮಾನೆ ವಿಧಿಸುವಣ, ಆರು ತಿಂಗಳಿಗೆ ಮೀರದಂತೆ ಕೈದು ಸಜಾ ವಿಧಿಸುವಣ, ಈತನ ಅಧಿಕಾರದಲ್ಲಿ ೧೦೦ ಜನ ಪೋಲೀಸಿನವರು ಇರುತ್ತಾರೆ. ಸಾಮಾನ್ಯವಾಗಿ ಒಬ್ಬ ಮನುಷ್ಯನು ಮೇಲೆ ಕಂಡ ಕಾರ್ಯಗಳನ್ನೆಲ್ಲ ಯಾವವಿಧ ದೋಷಗಳೂ ಇಲ್ಲದಂತೆ ಮಾಡಲಿಕ್ಕೆ ಶಕ್ತನಾಗುವನೇಯೆಂದರೆ, ಮ್ಯಾಜಿಸ್ಟ್ರೇಟಿ ಅಧಿಕಾರ ಹೊಂದಿರುವದರಿಂದ ಅದರ ಬಲದಿಂದೆಲ್ಲ ಹೊ ನಡೆದುಹೋಗುತಿವೆ. ಮ್ಯಾಜಿಸ್ಟ್ರೇಟಿ ಅಧಿಕಾರವನ್ನು ವಿನಿಯೋಗಿಸುವದರಲ್ಲಿ ತಹಸೀಲ್ದಾರನಿಗೆ ಉಚಿತಜ್ಞತೆಯು ಶೂನ್ಯವು, ಕರುಣೆಯು ಮೃಗ್ಯವು, ಸಹನೆಯು ಶೂನ್ಯವು, ಗೌರವವು ಅನಾದರಣೀಯವು, ಕೀರ್ತಿ ಅವಿವಕ್ಷಿತವು, ಪುಣ್ಯಪಾಪಗಳು ಅಚಿಂತಿತವು, ಈರೀತಿ ಪರಿಣಮಿಸುವದರಿಂದಲೇ ಗ್ರಾಮಾಂತರಗಳಲ್ಲಿನ ಪ್ರಜೆಗಳಿಗೆ ಇಂಗ್ಲಿಷಿನವರ ಪ್ರಭುತ್ವವು ಅತಿ ಘೋರವಾದದ್ದೆಂಬ ಅಭಿಪ್ರಾಯ ಪ್ರಂಬಾಗಲಿಕ್ಕೆ ಕಾರಣವಾಯಿತು. ಇದಲ್ಲದೆ ಜನಗಳು ತಹಸೀಲ್ದಾರನನ್ನು ಮೃತ್ಯುದೇವತೆಯಂತೆ ಭಾವಿಸುತ್ತಾರೆ. ಇತರ ಕೆಲಸಗಳ ಗಲಾಟೆಯಿಂದ ಬೇಸತ್ತು ಸುಸ್ತಿ ವಿಷಯದಲ್ಲಿ ನಿಗೇಕೊಡದೆ ಹೋಗುವದರಿಂದ ಬಾಕಿ ನಿಂತುಹೋದಲ್ಲಿ ಆಗ ಕಲೆಕ್ಟರ ನಾಲಿಷ್ ಮತ್ತು ತಗಾದೆಗಳು ಜೋರಾಗುತಿವೆ. ಆಕ್ಷಣದಲ್ಲಿಯೇ ತಹಸೀಲ್ದಾರನು ಮನುಷ್ಯತ್ವವಂ ಹೋಗಲಾಡಿಸಿಕೊಂಡು ಪ್ರಳಯಕಾಲದ ರುದ್ರನಂತೆ, ಗ್ರಾಮಾಂತರಗಳಿಗೆ ತೆರಳಿ ಮ್ಯಾಜಿಸ್ಟ್ರೇರಿಯಲ್ ಅಧಿಕಾರವೆಂಬ ಕಾಲಾಗ್ನಿಯಿಂದ ಬಾಕೀ ವಸೂಲಿಗಾಗಿ ಗ್ರಾಮಗಳನ್ನೆಲ್ಲ ದಗ್ಧಮಾಡಿಬಿಡುತ್ತಾನೆ. ಅಂತಾ ಸಂದರ್ಭದಲ್ಲಿ ಸಾಧ್ಯಾಸಾಧ್ಯಗಳೂ, ಯುಕ್ತಾಯುಕ್ತಗಳೂ, ಕೃತ್ಯಾಕೃತ್ಯಗಳೂ, ಒಂದು ಭಾವಿಸಲ್ಪಡುವದಿಲ್ಲವು. ರೈತನ ನೇಗಿಲು, ಕಾಲ್ಗಡೆ, ಹೆಂಡತಿಯ ತಾಲಿ, ಅವಳು ಉಟ್ಟಿರುವ ಸೀರೆ, ಮಡಕೆ ಕುಡಿಕೆಗಳು, ತನ್ನ ಲಂಗೋಟಿ, ಕಡೆಗೆ ಅವನ ಶರೀರದೊಡನೆ ಜಪ್ತಿ ಮಾಡಲ್ಪಡುತಿವೆ.

ಇಂತಾ ವಿಪರೀತಗಳಿಗೆಲ್ಲ ಕಲೆಕ್ಟರವರ ಹುಕುಂ ಒಂದೇ ಮುಖ್ಯಕಾರಣವಾಗಿರುತಿದೆ. ಅದು ಹ್ಯಾಗೆಂದರೆ, ಅವರು ಕೊಡುವ ಅವಧಿಯು ಪರಿಮಿತವಾದದ್ದು. ಅದರಲ್ಲಿ ನಿರ್ವಹಿಸಬೇಕಾದ ಕೆಲಸವು ಅಪರಿಮಿತವಾದದರಿಂದ ಮೇಲೆ ಕಂಡ ಅನರ್ಥಗಳಿಗೆ ಅವಕಾಶವುಂಟಾಗುತಿದೆ. ಇಂತಾ ದುಷ್ಕೃತ್ಯಗಳು ನಡೆಯುವದನ್ನು ಅನೇಕ ಕಲೆಕ್ಟರುಗಳು ಅರಿತಿದ್ದರೂ ತಮಗೆ ಸಕಲವಿಧ ಸಹಾಯಕರಾದ ತಹಸೀಲ್ದಾರರ ಮೇಲಣ ಗೌರವಾತಿಶಯದಿಂದ ಮೌನವನ್ನವಲಂಬಿಸಿರುತ್ತಾರೆ. ತಹಸೀಲ್ದಾರನು ಜನರನ್ನು ಸಕಲವಿಧದಲ್ಲೂ ಚಿತ್ರಹಿಂಸೆ ಮಾಡಿ ಪಿಸ್ತು ವಸೂಲ್ ಮಾಡಿ, ಬಾಕೀ ಇಲ್ಲವೆಂದು ರಿಪೋರ್ಟು ಮಾಡಿದರೆ, ಇಂತಾ ಸ್ತೋತ್ರಕೃತ್ಯಗಳನ್ನು ಕೇಳದೆಯಲ್ಲದೆ ಮಾಡಿ ಕೀರ್ತಿ ಪ್ರತಿಷ್ಠೆಗಳನ್ನು ಸಂಪಾದಿಸತಕ್ಕವರಲ್ಲಿ ಉತ್ತಮನೆಂಬವನಾಗಿಯೂ, ಅಗ್ರಗಣ್ಯನೆಂತಲೂ ಕಲೆಕ್ಟರವರು ಅಭಿಪ್ರಾಯಪಡುತ್ತಾರೆ. ಒಬ್ಬ ಅಸಿಸ್ಟೆಂಟ್ ಕಲೆಕ್ಟರವರು ರೋಗಿಷ್ಠೆಯಾಗಿದ್ದ ತನ್ನ ಭಾರ್ಯೆಯನ್ನು ಸಮೀಪದೊಳಿರುವ ಒಂದು ರೈಲ್ವೇ ಸ್ಟೇಷನಿಗೆ ಕಳುಹಿಸತಕ್ಕ ಬಗ್ಗೆ ಒಂದು ಜೊತೆ ಒಳ್ಳೆ ಎತ್ತುಗಳು ಬೇಕೆಂದು ತಹಸೀಲ್ದಾರನೊಡನೆ ತಿಳಿಸಲು ಆತನು ಸನ್ನಿಹಿತವಾದ ಒಂದು ಗ್ರಾಮದಲ್ಲಿ ಮೇಯುತಲಿದ್ದ ಒಬ್ಬ ರೈತನ ಯೆತ್ತುಗಳನ್ನು ಬಲಾತ್ಕಾರದಿಂದ ಹಿಡಿತಂದು ಗಾಡಿಗೆ ಕಟ್ಟಿ ಕಳುಹಿಸಿದನು. ನಾಲೀಕನಂತೆ ತಕರಾರ್ ಮಾಡಿದ್ದವ ಮೇಲೆ ತಹಸೀಲ್ದಾರನಿಗೆ ಆಗ್ರಹವುಂಟಾಗಿ ಕೂಡಲೇ ಅವನ ಮೇಲೆ ಒಂದು ಮೊಕದ್ದಮೆ ತಂದು ಆ ಬಗ್ಗೆ ಅವನಿಗೆ ಜುರ್ಮಾನೆ ವಿಧಿಸಿ ಅದರ ವಸೂಲೀ ಬಗ್ಗೆ ಸದರೀ ಯೆತ್ತುಗಳನ್ನೇ ಹರಾಜ್ ಹಾಕುತಿದ್ದನು. ತಹಸೀಲ್ದಾರನಿಂದ ಉಪಕೃತರಾದ ಅಸಿಸ್ಟೆಂಟ್ ಕಲೆಕ್ಟರಬಳಿ ಮಾಡಲ್ಪಟ್ಟ ರೈತನ ಅಪ್ಪೀಲ್ ಯಾವರೂಪವನ್ನೈದಿರುವದೋ ಅದು ಜನಗಳೇ ಆಲೋಚಿಸಬಹುದು. ಅಸಿಸ್ಟೆಂಟ್ ಕಲೆಕ್ಟರವರು ಕೆಳಗಿನವರು ಮಾಡಿದ ದಂಡನೆಯನ್ನು ಜಾಸ್ತೀ ಮಾಡದೆ ಅಲ್ಲಿಗೇ ಖಾಯಂ ಮಾಡಿದ್ದಕ್ಕಾಗಿ ರೈತನು ಸಂತೋಷಪಡುತ ಹೋಗುವಂತೆಯಾಯಿತು. ಇಗೋ ನೋಡಿ ! ಈಚೆಗೆ ಮತ್ತೊಬ್ಬ ಕಲೆಕ್ಟರು ತನಗೆ ರೈತನು ಒಳ್ಳೇ ಯೆತ್ತನ್ನು ಒದಗಿಸಲಿಲ್ಲವೆಂದು ಅವನು ಜೋಡಿನಿಂದ ಹೊಡೆದು ಅಗೌರವಪಡಿಸಿ ಕಡೆಗೆ ಜುರ್ಮಾನೆ ಸಹ ಹಾಕಲಿಲ್ಲವೆ? ಇಂತಾ ನಿರ್ಬಂಧಗಳು ಅನೇಕವಾಗಿ ಪ್ರಂಟುಮಾಡಲ್ಪಡದಿರಲಿಲ್ಲವು. ರೈತರಿಗೆ ಪ್ರಂಬಾಗತಕ್ಕ ಇಂತಾ ನಿರ್ಬಂಧಗಳಂ ಅವರು ತಡೆಯಲಾರದೆ ಗೋಳಾಡುತ ಐವತ ಸಹವಾಸ ತಪ್ಪುವದೆ ಸಾಕೆಂದುಕೊಂಡು ಜಿಗುಪ್ಸೆಯೊಡನೆ ವ್ಯವಸಾಯ ಕೆಲಸಗಳನ್ನು ಉದಾಸೀನ ಮಾಡುತ್ತಾರೆ ಇದರಿಂದಲೇ ಸರ್ಕಾರದವರಿಗೆ ಪ್ರತಿಸಂವತ್ಸರದಲ್ಲಿಯೂ ದುಬ್ಬುವಳಿ ಕಮಿಯಾಗಲಿಕ್ಕೆ ಕಾರಣವಾಗುತಿದೆ. ಇದಲ್ಲದೆ ರೈತನ ಪ್ರಾಣಕ್ಕೆ ಪುರೋಹಿತರು, ಹಜಾಂ ಮುಂತಾದ ಬಾರಾಬಲೂತಿಯವರೆಲ್ಲರೂ ಗುಟುಬೀಳುತ್ತಾರೆ. ಇಬ್ಬರು ರೈತರಿಗೆ ವ್ಯರ್ಥ ಪಂಚಾಯತ್‌ದಾರರೆನಿಸಿಕೊಂಡು ಒಬ್ಬನು ಇಲ್ಲದ ದುರ್ವ್ಯಾಜ್ಯಗಳನ್ನುಂಟುಮಾಡಿ ಉಭಯ ಕಕ್ಷಿಯವರಿಂದಲೂ ಅರ್ಥಾಕರ್ಷಣ ಮಾಡುತ ಅವರು ಮುಳುಗಿಸದೆತ್ತಿಸುತ್ತಾನೆ. ರೈತನ ಧನವು ಹೀರಿ ಅವನಿಗೆ ಇಲ್ಲದ ಸ್ವಾಧಾನವಸ್ತುಗಳನ್ನುಂಟುಮಾಡಲಿಕ್ಕೆ ಅಸತ್ಯಸ್ವರೂಪಿಯಾದ ಕರಣೀಕನೊಬ್ಬನೇರ್ಪಟ್ಟಿರುತ್ತಾನೆ. ಒಳ್ಳೇ ನೌಕರಿಗಳಂ ಸಂಪಾದಿಸತಕ್ಕ ಬಗ್ಗೆ ತಹಸೀಲ್ದಾರರಿಗೆ ಖುದುವತ್‌ಗಳನ್ನು ಕೊಟ್ಟು ಕೆಲವರು ತಮ್ಮ ಉದ್ದೇಶ್ಯಗಳನ್ನು ಸಫಲಗೊಳಿಸಿಕೊಳ್ಳುತ್ತಾರೆ. ಹಾಗೆ ವ್ಯಯವಾದ ದ್ರವ್ಯವನ್ನು ಮರಳಿ ಸಂಪಾದಿಸಲಿಕ್ಕೆ ರೈತರನಲ್ಲವೇ ಪೀಡಿಸಬೇಕು ಹಾ ! ಇಷ್ಟರೊಡನೆ ಅವನ ಆಪತ್ತುಗಳು ನಿವಾರಣವಾದವೆ? ಅವರ ಪ್ರಾಣವು ಪಡೆಸಲಿಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ಡಿಪ್ಟೀ ತಹಸೀಲ್ದಾರ್‌ಗಳು, ಪೋಲೀಸ್ ಉದ್ಯೋಗಸ್ಥರು ಮುಂತಾದವರು ತಮ್ಮ ತಮ್ಮ ಸದರಿಯ ಪ್ರಕಾರ ಅವರವರ ಯೋಗ್ಯತಾನುಸಾರ ಅಧಿಕಾರಗಳಿಗೆ ತಕ್ಕಂತೆ ರೈತರನ್ನು ಪೀಡಿಸಿ ಅವರಿಂದ ಅರ್ಥಾರ್ಜನೆ ಮಾಡುತ್ತಿರುತ್ತಾರೆ. ಇಲ್ಲಿ ಬೇರೊಂದು ವಿಶೇಷ ಪ್ರಂಬಾನೆಂದರೆ, ಕಲೆಕ್ಟರೆಂಬನೆ ರೈತನು ಮಾತನಾಡಲಿಕ್ಕೆ ಅವಕಾಶವುಂಟುಮಾಡಿದರೆ ತಮ್ಮ ದುರ್ಗುಣಗಳೆಲ್ಲಿ ಹೊರಗಾಗುವವೋ ಯೆಂಬ ಭೀತಿಯೊಡನೆ ತಹಸೀಲ್ದಾರರು ಕಲೆಕ್ಟರನ್ನು ಗ್ರಾಮಕ್ಕೆ ಹೊರಗೆ ಇಳಿಸಿ ಹಾಗೆಯೇ ಹೊರಗೆ ಕಳುಹಿಸಿಬಿಡುತ್ತಾರೆ. ಹೀಗೆ ಇನ್ನೂ ಅನೇಕ ಇತರ ವಿಷಯಗಳಲ್ಲಿ ರೈತರಿಗೆ ಪ್ರಾಪ್ತವಾಗತಕ್ಕ ಸಂಕಟಗಳನ್ನು ಮುಂದಿನವಾರದ ಪತ್ರಿಕೆಯಲ್ಲಿ ವಿವರಿಸುವೆವು.

THE MYSORE SADVIDYASALA

ಮೈಸೂರು ಸದ್ವಿದ್ಯಾಶಾಲಾಧ್ಯಕ್ಷರಿಂದ ಕಳುಹಿಸಲ್ಪಟ್ಟ ಸದರೀ ಸಂಸ್ಕೃತ ಪಾಠಶಾಲೆಯ ಸಾಂವತ್ಸರಿಕ ರಿಪೋರ್ಟಿನ ಮೂಲಕ, ಸಮರ್ಥರಾದ ಅವರ ಘನತರ ಪರಿಶ್ರಮದಿಂದ ಅದು ಸಕಲಾಂಶದಲ್ಲಿಯೂ ಪ್ರಾಪ್ಯವಾದಸ್ಥಿತಿಯನ್ನೈದಿದೆಯೆಂಬುದು ತಿಳಿದು ನಾವು ಬಹಳ ಸಂತೋಷಿಸುತ್ತೇವೆ. ಕಳೆದತಿಂಗಳ ೧೭ನೇ ತಾರೀಖಿನಲ್ಲಿ ನಡೆದ ಸಭೆಯೊಳು ಓದಲ್ಪಟ್ಟ ರಿಪೋರ್ಟನ್ನು ನೋಡಲಾಗಿ ತನ್ಮೂಲಕ ಪಾಠಶಾಲೆಯ ಉತ್ಪತ್ತಿಕ್ರಮ, ಅದರ ವಿಚಾರತಾಕ್ರಮ, ಅದಕ್ಕೆ ಅನ್ಯರ ಮೂಲಕ ಲಭಿಸಿದ ಸಹಾಯ, ಏವರೂಪವಿಷಯಗಳೆಲ್ಲ ತಿಳಿಯಬರುತಿವೆ. ಮತ್ತು ಇದರಿಂದ ಪಾಠಶಾಲೆಯನ್ನು ಪ್ರಕೃತಸ್ಥಿತಿಗೆ ತರುವವಿಷಯದೊಳು ಅದರ ವಿದ್ಯಾಗುರುಗಳು ಪಟ್ಟಶ್ರಮವು ಅಷ್ಟರದೆಂದು ವ್ಯಕ್ತವಾಗುತಿದೆ. ಸದರೀ ರಿಪೋರ್ಟಿನ ಕನ್ನಡ ಭಾಗವನ್ನು ಮಾತ್ರ ಜನಗಳ ತಿಳುವಳಿಕೆಯ ಬಗ್ಗೆ ಇದರಡಿ ಪ್ರಕಟಿಸುವೆವು —

[illegible]

[illegible small print, about 9 lines] ... ಶ್ರೀಯಾಗುತ್ತೇನೆ.

ಅನಂತರ ಮೀಟಿಂಗಿನ ಪ್ರೆಸಿಡೆಂಟರಾಗಿದ್ದ ರಾಯಬಹದೂರ್ ಕೌನ್ಸಿಲರ್ ಮೆ॥ಕೃಷ್ಣರಾಯರವರು ಮಾಡಿದ ಉಪನ್ಯಾಸವು ನಮ್ಮ ಮನೋಗತ ಯಾವದ್ವ್ಯಾಪಾರವನ್ನು ಸೂಚಿಸತಕ್ಕದ್ದಾಗಿರುವದರಿಂದ ಅದನ್ನಿಲ್ಲಿ ಪ್ರಕಟಿಸಿದರೆ ಸಾಕಾಗಿರುತ್ತದೆ. ಮುಖ್ಯವಾಗಿ ಅಜಿಮಾತ್ಯಜನ ಶೂನ್ಯವಾದ ಸಂಸ್ಕೃತಭಾಷೆಯನ್ನು ಪ್ರಚಾರದೊಳು ತರುತ್ತಿರುವುದರಲ್ಲಿ ಯಾರು ಮೆಕ್ಸ್ಯುಸಹಾಯಮಾಡಿದಾಗ್ಯೂ ಎರಡುರ್ಗಳಾದ ಪುಣ್ಯಕೀರ್ತಿಗಳು ಬ ನಿಷಯ್ಯವುಗಳಗೆ ಅವರು ಪಾತ್ರರಾಗದೆ ಹೋಗಲಾರರು

[illegible small print, about 14 lines]

Occasional Notes
ನೈಮಿತ್ತಿಕವಿಷಯನ್ಯಾಸ

Loss of population —ಸನ್ ೧೮೭೬ನೇ ಇಸವಿಯಮೊದಲು ೧೮೭೮ನೇ ಇಸವಿಯತನಕ ಈದೇಶದೊಳು ಎಂಬ ಕ್ಷಾಮಗಳುಂಟಾದವು. ಆಕಾಲದಲ್ಲಿ ೪,೮೭೬,೦೦೦ ಮಂದಿ ಮೃತಪಟ್ಟರು ಮರಳಿ ೧೮೮೦ನೇ ಇಸವಿಯ ಮೊದಲು ೧೮೮೦ನೇ ಇಸವಿಯತನಕ ೫ ಅನಾವೃಷ್ಟ್ಯಾದಿ ಕಾರಣಗಳಿಂದ ೭,೫೭,೪೦೦ ಮಂದಿ ಮೃತಪಟ್ಟರೆಂದು ತಿಳಿಯಬರುತ್ತದೆ

Burmah war —ಸನ್ ೧೮೫೨ನೇ ಇಸವಿಯಲ್ಲಿ ಬರ್ಮಾದೇಶೀಯರಿಗೂ ಇಂಗ್ಲಿಷರವರಿಗೂ ನಡೆದ ಯುದ್ಧಕಾಲದೊಳು ಇಂಗ್ಲೀಷಿನವರು, ೫,೬೭೭ ಮಂದಿ ಸೈನಿಕರನ್ನೂ, ೩೩ ಯುದ್ಧ ಜಹಜುಗಳನ್ನೂ,೧೮೮ ತೋಪೆಗಳನ್ನೂ ಬರ್ಮಾಗೆ ಕಳುಹಿಸಿದ್ದರು. ಆಗಿನ ಯುದ್ಧದಲ್ಲಿ ಮೃತಪಟ್ಟವರು, ಮತ್ತು ಜಖಮಾದವರ ಸಂಖ್ಯೆ ೧೮೮ಮಂದಿ ಈಗ ನಡೆಯುತಲಿರುವ ಯುದ್ಧಸನ್ನಾಹವು ಉಭಯಪಾರ್ಶ್ವದಲ್ಲಿಯೂ ಪ್ರಬಲವಾಗಿರುವದರಿಂದ ಮುಂದೆ ಏನೇನಾದರೂ ಯಾವರೂಪವಾಗಿರುವದೋಯೆಂದು ಚಿಂತಿಸಬೇಕಾಗಿದೆ.

Letters of administration —ಇದುವರಿವಿಗೂ ಗವರ್ನಮೆಂಟಪತ್ರಗಳು ಯಾರಾದರು ಇಟ್ಟುಕೊಂಡಿದ್ದು ಅವರಲ್ಲೊಬ್ಬರು ಮೃತಪಟ್ಟಲ್ಲಿ ಎರಡನೆಯವನು ಮೃತಪಟ್ಟವನಿಗಾಗಿ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ನೆಂಬ ಅಧಿಕಾರಪತ್ರವು ಪಡೆಯದೆಯಾಗಲಿ, ತಕ್ಕಜಾಮೀನ್ ಮುಚ್ಚಳಿಕೆ ಕೊಡದೆಯಾಗಲಿ, ಅಂತಾಪತ್ರದಬಡ್ಡಿಯನ್ನು ವಸೂಲ್ಮಾಡಲಿಕ್ಕೆ ಸಾಧ್ಯವಿಲ್ಲದೆ ಜನಗಳು ಬಹಳ ಸಂಕಟಪಡುತಲಿದ್ದರಷ್ಟೆ. ಈ ಸಂವತ್ಸರ ಗವರ್ನಮೆಂಟನವರು ಮಾಡಿದ ೧೮ನೇ, ನಂಬರ್ ಆಕ್ಟು ಪ್ರಕಾರ ಮೃತಪಟ್ಟವನ ಮರಣವಿಷಯವನ್ನು ನಿರ ...ಪಿಸುವಬಗ್ಯೆ ಜೀವಿಸಿರುವವನು ಮರಣ ಸರ್ಟಿಫಿಕೇಟನ್ನು ಹಾಜರ್ಮಾಡಿದರೆ ಅವನು ಸದರೀಪತ್ರದ ಅಸಲ್ ಮತ್ತು ಬಡ್ಡಿ

ಮೊಬಲಗನ್ನು ನಿರಾತಂಕವಾಗಿ ತೆಗದುಕೊಳ್ಳುವದಕ್ಕೆ ಇನ್ನು ಮುಂದೆ ಸ್ವತಂತ್ರನಾಗಿರುತ್ತಾನೆ.

Magisterial powers to Sub-Registrars ಈಚೆಗೆ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಬ್ ರಿಜಿಸ್ಟ್ರಾರ್‌ಗಳಿಗೆ ಅಲ್ಪ ತಪ್ಪಿತಗಳನ್ನು ವಿಚಾರಿಸಲಿಕ್ಕೆ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿತು ಸದರೀ ಸಬ್ ರಿಜಿಸ್ಟ್ರಾರ್‌ಗಳು ತಮ್ಮ ಕೆಲಸದೊಡನೆ ಇವನ್ನು ಸಹ ತೃಪ್ತಿಕರವಾಗಿ ನಡೆಸುತ್ತ ಬಂದದರಿಂದ ಅದರಂತೆ ಸರ್ವತ್ರ ಸಬ್ ರಿಜಿಸ್ಟ್ರಾರ್‌ಗಳಿಗೆ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಅಧಿಕಾರಕೊಡುವ ಉದ್ದೇಶದೊಡನೆ, ಯಾವಯಾವ ಸಬ್ ರಿಜಿಸ್ಟ್ರಾರ್‌ಗಳಿಗೆ ಅಂತಾ ಅಧಿಕಾರ ಕೊಡಬಹುದೋ ಅದು ಡಿ॥ ಕಲೆಕ್ಟರ್‌ಗಳು ರಿಜಿಸ್ಟ್ರಾರ್ ಜನರಲ್ಲವರಮೂಲಕ ತಿಳಿದುಕೊಂಡು ಗವರ್ನಮೆಂಟಗೆ ರಿಪೋರ್ಟುಮಾಡತಕ್ಕದ್ದೆಂದು ಈಚೆಗೆ ಹುಕುಂಆಗಿರುವಂತೆ ತಿಳಿಯಬರುತ್ತದೆ. ಈ ಏರ್ಪಾಡು ನ್ಯಾಯ್ಯವಾಗಿರುವದರಿಂದ ಇದನ್ನು ಬ್ರಿಟಿಷ್ ಗವರ್ನಮೆಂಟನವರೂ ಅನುಸರಿಸಿ ನಡೆಸಿದರೆ ಬಹಳ ಯೋಗ್ಯವಾಗಿರುವದು.

Suicide —ಗತ ಅಕ್ಟೋಬರ್‌ತಿಂಗಳ ೭ನೇ ತಾರೀಖಿನಲ್ಲಿ ಬರ್ಮಾದೇಶಕ್ಕೆ ಸೇರಿದ ಅಕಯಾಬ್ ಯೆಂಬ ಗ್ರಾಮದಲ್ಲಿ ಮೂವತ್ತೆರಡು ವರುಷಗಳ ವಯಸ್ಸುಳ್ಳ ಪೊಂಗ್ಯೆಯೆಂಬವನು ಬುದ್ಧ ಅಸ್ತಿಶಕಲಗಳಿಟ್ಟಿರುವ ಮಹಾ ಸ್ಥಳದಲ್ಲಿ ತನ್ನ ಪ್ರಾಣವು ತೊರೆದುಕೊಳ್ಳುವ ಸಂಕಲ್ಪದೊಡನೆ ಅಲ್ಲಿಗೆ ಹೋಗಿ ಅಲ್ಲಿಯೊಂದು ಸಣ್ಣ ಹಳ್ಳವು ಅಗೆದು ಅದರಲ್ಲಿ ಒಂದು ಮಡಿಕೆಯನ್ನು ಹೂಳಿ ಅದರ ತುಂಬಾ ಕೆರೋಸಿನ್ ಯೆಣ್ಣೆಯನ್ನು ಹೊಯಿದು ಅದರಮೇಲೆ ಮಣೆ ಹಾಕಿ ಹರಿದ್ರವಸ್ತ್ರದೊಡನೆ ದಾನದರಮೇಲೆ ಕುಳಿತು ಅದೇಯೆಣ್ಣೆಯನ್ನು ತನ್ನ ಮೈಮೇಲೆಲ್ಲ ಹುಯಿದುಕೊಂಡು ಬೆಂಕಿ ಎಬ್ಬಿಸಿಕೊಂಡನು. ಅವನ ಶಿಷ್ಯರು ಮಾರನೆದಿವಸ ಬಂದು ನೋಡುವಾಗ್ಯೆ ಅವನು ಕುಳಿತಿದ್ದ ಪ್ರಕಾರವೇ ಅವನ ದೇಹವು ನಿಂತಿತ್ತು. ಅವನ ಬಟ್ಟೆ ಮತ್ತು ಶರೀರದ ಮೇಲ್ಭಾಗಗಳು ಮಾತ್ರ ದಹನವಾಯಿತಲ್ಲದೆ ಶರೀರದ ಕೆಳಭಾಗವೆಲ್ಲವೂ ಹಾಗೆ ನಿಂತಿತ್ತು. ಅವನ ಪಾದಗಳನ್ನು ಸಾರಾಯಿಯಲ್ಲಿ ಅದ್ದಿ ಜವ್ರವಾಗಿ ಅವರು ಕಾಪಾಡುವರೆಂದು ತಿಳಿಯಬರುತ್ತದೆ. ಬುದ್ಧನಿಗೆ ಜ್ಞಾನ ಭಕ್ತಿ ವೈರಾಗ್ಯಗಳುಂಟಾಗಿ ಬಳಿಕ ಅವರು ತಪ್ಪೋನಿಷ್ಠವನ್ನವಲಂಬಿಸುತ್ತರಾದರೇ ಹೊರ್ತು ಈರೀತಿ ಅವರಾಗಲಿ, ಅವರ ಶಿಷ್ಯರಾಗಲಿ ಮಾಡಿದಂತೆ ಇದುವರಿವಿಗೆ ನಾವುಕೇಳಿದ್ದಿಲ್ಲವು. ಲೋಕ ಮೌಢ್ಯದೊಳು ಇದನ್ನೂ ಒಂದಾಗಿ ಎಣಿಸುವೆವು

LOCAL AND PROVINCIAL NEWS
ಸ್ಥಳೀಕಮತ್ತುತಾಲ್ಲೂಕ್‌ಸಂಬಂಧವೃತ್ತಾಂತಗಳು.

Removal of offices.—ಮೈಸೂರು ಸಂಸ್ಥಾನದ ಬ್ರಿಟಿಷರೆಸಿಡೆಂಟರ ಮತ್ತು ಕೊಡಗು ಚೀಫ್ ಕಮ್ಮಿಷನರ ಆಫೀಸನ್ನು ಬರುವತಿಂಗಳ ಗುರ್ತೀತಾರೀಖ್ ಲಾಗಾಯತು, ಈಗಿರುವಕಟ್ಟಡದಿಂದ, ಮೈಸೂರುಡಿವಿಜನ ಮೇಜರ್ ಜನರಲವರು ಬಹುಕಾಲದಮೊದಲು ವಾಸವಾಗಿದ್ದ ಪಬ್ಮರ್ಫ್ ಎಂಬ ಬಂಗ್ಲೆಗೆ ವರ್ಗ ಮಾಡಬೇಕೆಂದು ನಿರ್ಣಯವಾಗಿರುವಂತೆ ತಿಳಿಯಬರುತ್ತದೆ.

Retirement —ಕೋಲಾರ ಡಿ॥ ಡೆಪ್ಯುಟಿಕಮ್ಮಿಷನರ್ ಮೆ॥ ಸುಬ್ಬರಾಯರವರು ಬರುವ ಜನವರಿ ತಿಂಗಳಲ್ಲಿ ಪೆನ್ಷನ್‌ಮೇಲೆ ಕೆಲಸದಿಂದ ನಿವೃತ್ತರಾಗುವರೆಂತಲೂ ಅವರಕೆಲಸಕ್ಕೆ ಅಂಡರ್ ಸೆಕ್ರೆಟರಿ ಮಿಸ್ಟರ್ ಪಿ. ಎನ್ ಕೃಷ್ಣಯ್ಯನವರು ನಿಯಮಿಸಲ್ಪಡುವರೆಂತಲೂ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ. ಇದು ಯೆಷ್ಟರಮಟ್ಟಿಗೆ ನಿಜವೋ ನಾವರಿಯೆವು

The Nelamangalam rioting case —ಈಚೆಗೆ ನೆಲಮಂಗಲದಲ್ಲಿನಡೆದ ಕಲಹದ ಮೊಕದ್ದಮೆಯು ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಿಸ್ತಾಗುತಲಿದೆ. ಆವಮೊಕದ್ದಮೆಯಲ್ಲಿ ಸುಮಾರು ೩೪ ಮಂದಿ ಅಪರಾಧಿಗಳಿರುತ್ತಾರೆ. ಅವರಕಡೆ ಅಡ್ವೋಕೇಟ್ ಮಿಸ್ಟರ್ ಸಿಸ್ಮಿಸ್ಮಿತ್‌ಯವರು ಮೊಕದ್ದಮೆಯನ್ನು ನಡೆಸುತಲಿದ್ದಾರೆ. ಇದರ ಫಲಿತಾಂಶವನ್ನು ಮುಂದೆ ತಿಳಿಸುವೆವು.

Changes —ಮೈಸೂರು ಗವರ್ನಮೆಂಟ ಪ್ರಿಂಟಿಂಗ್‌ಆಫೀಸ್ ಮ್ಯಾನೇಜರ್ ಮ. ರಂಗಯ್ಯಂಗಾರ್ಯರು ಬರುವ ಜನವರಿತಿಂಗಳಲ್ಲಿ ಪೆನ್ಷನ್‌ಮೇಲೆ ನಿವೃತ್ತರಾಗತಕ್ಕದ್ದೆಂದು ದಿವಾನರವರು ಹುಕುಂ ಮಾಡಿರುವಂತೆಯೂ, ಅವರ ಕೆಲಸ ದಿವಾನರವರ ಆಫೀಸ್ ಅಸಿಸ್ಟೆಂಟ್ ಮ್ಯಾನೇಜರ್ ಮ. ಕೃಷ್ಣಮಾಚಾರ್ಯರಿಗೆ ಕೊಡಲ್ಪಡುವದೆಂತಲೂ ಒಳದೇಶದ ಡೆಯಿಲೀಪ್ರೋಸಿಸ್ ಪತ್ರಿಕೆಯ ಮೂಲಕ ತಿಳಿಯಬರುತ್ತದೆ.

Legislative Department —ಈ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸೆಕ್ರೆಟರಿಯಾದ ಮ. ಎಸ್ ವೆಂಕಟವರದಯ್ಯಂಗಾರ್ಯರು ಈಚೆಗೆ ಮೈಸೂರಿಗೆ ಹೋಗಿರುತ್ತಾರೆಯಷ್ಟೆ. ಸದರೀಯವರು ದಿವಾನರೊಡನೆ ಕಲತು ಮಾತನಾಡಿದ ಕಾಲದಲ್ಲಿ ಸದರೀ ಸಮಾಜದ ವಿಷಯವಬಗ್ಯೆ ಕೆಲವು ಯೇರ್ಪಾಡುಗಳು ನಡೆದಿರುತ್ತವೆ. ಮೆ॥ ವೆಂಕಟವರದಯ್ಯಂಗಾರ್ಯರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ ಕೆಲಸದಲ್ಲಿ ಕಾಯಮಾಗಿ ನಿಯಮಿಸಲ್ಪಟ್ಟರು., ಅವರ ತಲಬ್ ಸಹ ೩೦೦ ರಿಂದ ೪೦೦ ರೂಪಾಯಿಗಳಿಗೆ ಬಡ್ತೀಮಾಡಲ್ಪಟ್ಟಿತು, ಎಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ

Murder —ಇಲ್ಲಿನ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಯೊಂದು ಖೂನೀ ಮೊಕದ್ದಮೆ ದರ್ಯಾಪ್ತಾಗುತಲಿದೆ ಅದರ ತಪ್ಸೀಲ್ ಹ್ಯಾಗಂದರೆ, ಮಾಗಡಿಯಲ್ಲಿರುವ ಒಬ್ಬ ಹೆಂಗಸು ವಿಷಹೂಡಿ ತನ್ನ ಗಂಡನನ್ನು ಕೊಂದುಹಾಕಬೇಕೆಂದು ಮಾಡಿದ ಪ್ರಯತ್ನ ಕೈಗೂಡದೆಹೋಗಲು ಅವನ ಕಣ್ಣುಗಳಿಗೆ ಬಟ್ಟೆಹಾಕಿ ಮುಚ್ಚಿಬಿಟ್ಟು ಜೀರೆ ಕೆಲವರ ಸಹಾಯದಿಂದ ಗಂಡನ ಕುತ್ತಿಗೆಯನ್ನು ಕುಯಿದುಹಾಕಿಬಿಟ್ಟಳು. ಅವಳ ಸ್ವೇಚ್ಛಾ ವಿಹಾರಕ್ಕೆ ಗಂಡನು ಜೀವಿಸಿರುವದು ಬಾಧಕವಾಗಿ ಕಂಡುಬಂದು ಈ ದುಷ್ಕೃತ್ಯಕ್ಕೆಳಸಿದಂತೆ ಕಾಣಬರುತ್ತದೆ.

Revenue Survey —ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್, ಯಾನೆ ಮೋಜಣಿ, ಕ್ಲಾಸಿಫಿಕೇಷನ್,ಯಾನೆ ಪ್ರತಿಬಂದಿ ಮತ್ತು ಸೆಟಲ್‌ಮೆಂಟ ಯಾನೆ ಕರು ಸ್ಯಸಲ್ ಕೆಲಸಗಳು ನಡೆಸಲ್ಪಡುವವು.

ಮೋಜಣಿಯು.

ಕೋಲಾರಡಿ॥,ಕೋಲಾರತಾ॥, ೫ನೇನವುಬರ್೫೮.
ಮೈಸೂರುಡಿ॥,ಗುಂಡ್ಲುಪೇಟೆ, ೧೦ನೇ ಡಿಟೋ.
,, ಮಂಡ್ಯತಾ॥, ,,
,, ಚಿಕ್ಕದೇವರಾಯರನಾಲಾ, ೧ನೇ ಜನವರಿ ೧೮೮೬.

ಪ್ರತಿಬಂಧಿಯು.

ಕೋಲಾರಡಿ॥,ಚಿಂತಾಮಣಿ ೧೫ನೇನವಂಬರ್೮೫
ಮೈಸೂರುಡಿ॥, ಮೈಸೂರು, ನಾಗಮಂಗಲತಾಲ್ಲೂಕುಗಳು ೫ನೇ ನವುಬರ್, ೧೮೮೫.

ತರು ಪೈಸಲ್

ಬೆಂಗಳೂರು ಡಿ॥, ಹೊಸಕೋಟೆ ೧೫-೪-೮೬.
ಮೈಸೂರು ಡಿ॥, ಅತ್ತಿಕುಪ್ಪ ೧೫-೩-೮೬

TELEGRAPHIC SUMMARY
ತಂತಿವೃತ್ತಾಂತ ಸಂಗ್ರಹವು.

ಮುಂಬೈ, ೧೧ನೇ ನವಂಬರ್—[illegible small print, about 11 lines]

[illegible small print, about 25 lines]

THE MYSORE GAZETTE
ಮೈಸೂರು ಗೆಜೆಟು.

ಕ್ಯಾಂಪ್ ನಂ. ೧೩೦೫, ತಾರೀಖ್ ೭ನೇ ನವಂಬರ್—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ವಿ. ಪಿ ಮಾಧವರಾಯರವರು ಪ್ರೆಂಚರಾಕ್ಸ್ ಸಬ್‌ಡಿವಿಜನ್ ಆಫೀಸ್ ಮತ್ತು ಖಜಾನೆ ಚಾರ್ಜನ್ನು ೧೮೮೫ನೇ ಇಸವಿ ನವುಬರ್ ಗುರ್ತೀತಾರೀಖಿನ ಮಧ್ಯಾಹ್ನಾತ್ಪರ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಬಿ. ತಿರುಮಲಾಚಾರ್ಯರವರಿಗೆ ಒಪ್ಪಿಸಿದರುತ್ತಾರೆ.

ಕ್ಯಾಂಪ್ ನಂ. ೧೩೩೧—ಹಾಸನ ಸಬ್‌ಡಿವಿಜನ್ ಇನ್‌ಚಾರ್ಜಿನೊಳಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಟಿ. ಆನಂದರಾವ್ ಬಿ. ಎ. ಯವರಿಗೆ ೧೮೮೫ನೇ ಇಸವಿ ಅಕ್ಟೋಬರ್ ೨೬ನೇ ತಾರೀಖು ಲಾಗಾಯತು ೧೮ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ಕ್ಯಾಂಪ್‌ನಂ ೧೩೩೦, ತಾ॥ ೪ನೇ ನವಂಬರ್ ೧೮೮೫—೧೮೮೫ನೇ ಇಸವಿ ಆಗಸ್ಟ್ ೨೯ನೇ ತಾರೀಖು ಲಾಗಾಯತು ಮೈಸೂರು ಗವರ್ನಮೆಂಟನ ಮೆಡಿಕಲ್ ಇಲಾಖೆಯೊಳು ಮೆ॥ ಜೆ. ಎ. ಕಾಸ್ಟಿಲ್ಲೋಯವರು ೨ನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ನರಾಗಿ ಮೊಕರರ್‌ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. ೧೩೩೮—ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ವೆಂಕಟರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಗಾಯತು ೨ತಿಂಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತ್ತದೆ. ಕಡೂರು ಡೆಪ್ಯುಟಿ ಕಮ್ಮಿಷನರ್ ಆಫೀಸ್ ರೆವಿನ್ಯೂ ಶಿರಸ್ತೇದಾರ್ ವೆಂಕಟವರದಯ್ಯಂಗಾರ್ಯರು ವೆಂಕಟರಾಮಯ್ಯನವರ ಗೈರ್ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

SPEECH DELIVERED BY THE
DEWAN OF MYSORE,
before the Representative Assembly at Mysore, on the 21st October 1885

(ಕಳೆದವಾರದ ಶೇಷ)

ರಿಲೀಫ್ ಯೇರ್ಪಾಡುಗಳು.—ಕೇವಲ ಸಮೀಪವಾಗಿ ಪದಗಿ ಬಂದಿದ್ದಂತೆ ಇದ್ದ ವಿಪತ್ತನ್ನು ಕಳೆಯುವ ಉದ್ದೇಶದಿಂದ ಹಿಂಗಾರು ಬೆಳೆಯು ನಷ್ಟ ಹೊಂದಿದ ಕಾಲದ ಮೊದಲು ಮುಂದಿನ ಬೆಳೆ ಕೈಸೇರುವವರೆಕ್ಕೆ ಬೇಕಾದ ಮಧ್ಯಕಾಲದಲ್ಲಿ ಜೀವಿಸಿ ಕೊನೆಗಾಣಿಸಿ ಹೊಂದುವವರೆಕ್ಕೆ ಆಧಾರ ಪುಂಟು ಮಾಡುವ ರಿಲೀಫ್ ಕಾಮಗಾರಿಗಳು ನಡೆಯುವ ಹಾಗೆ ಯೇರ್ಪಾಡನ್ನು ಗವರ್ನಮೆಂಟಿನವರು ಮಾಡಿದ್ದರೆಂಬ ಸಂಗತಿ ತಿಳಿದುಕೊಳ್ಳಲು ನಿಮ್ಮಗಳಿಗೆ ತೃಪ್ತಿಕರವಾಗಿಯೇ ಇರುವದು ಈ ರಿಲೀಫ್ ಯೇರ್ಪಾಡು ಬ್ರಿಟಿಷ್ ದೇಶದಲ್ಲಿ ವಿಧಿಸಿ ಇರುವದೇ ಹೊರ್ತು ಬೇರೆಅಲ್ಲ. ಆದರೂ ರಿಲೀಫ್ ಯೇರ್ಪಾಡಿನ ವಿಷಯದಲ್ಲಿ ಒಂದು ಸಂಗತಿಮಾತ್ರ ಕೇವಲ ಮುಖ್ಯವಾದ್ದೆಂದು ಮೈಸೂರು ಶ್ರೀಮತ್ ಮಹಾರಾಜರವರ ಗವರ್ನಮೆಂಟಿನವರು ಭಾವಿಸುತ್ತಾರೆ. ಅದು ಯಾವದೆಂದರೆ,—

ಒಂದೇ ಕುಟುಂಬಕ್ಕೆ ಸೇರಿದ ಅನೇಕ ಜನಗಳ ಪೈಕಿ ಒಬ್ಬೊಬ್ಬರು ಪ್ರತ್ಯೇಕ ಪ್ರತ್ಯೇಕವಾಗಿ ಧೂರ ಫಾಸಲೆಯಲ್ಲಿ ನಡೆಯುವ ಕಾಮಗಾರಿಗಳ ಬಳಿಗೆ ಹೋಗೋಣದರಿಂದ ಸಂಭವಿಸುವ ಕುಟುಂಬ ಛಿದ್ರವನ್ನು ತಪ್ಪಿಸತಕ್ಕದ್ದು ನಮ್ಮ ಮುಖ್ಯ ಉದ್ದೇಶ್ಯವಾಗಿರುವದು. ಜನಗಳು ವಾಸವಾಗಿರುವ ಪ್ರತಿ ಗ್ರಾಮದ ಸಮೀಪದಲ್ಲಿಯೂ ಅನುಕೂಲವಾದ ಕಾಮಗಾರಿ ಕೆಲಸಮದರೆ, ಕೆರೆಗಳ ಅಭಿವೃದ್ಧಿ, ಭಾವಿಗಳು, ಗ್ರಾಮದ ರಸ್ತೆಗಳು, ಗ್ರಾಮ ಚಾಕೀಪಾ, ಹೊಂಗಳ ಅಗಿದು ಕಳೆ ತೆಗದು ಹಾಕುವದು, ಸಂಗುವಳಿ ಕಟ್ಟೆಗಳನ್ನು ಕಟ್ಟುವದು ಈ ಮುಂತಾದ ಇದೇ ತರಹಾದ ಇತರ ಕೆಲಸಗಳನ್ನು ಹೊಂದದೆ ಇಲ್ಲದೆ ಏರ್ಪಾಡು ಮಾಡಬಹುದು. ಈ ತರಹಾದ ಕಾಮಗಾರಿಯಮೇಲೆ ಜನರು ಕೆಲಸಮಾಡಲು ಏರ್ಪಾದು ಮಾಡೋಣದರಿಂದ ಅವರು ಪ್ರತಿದಿನದ ಕೆಲಸವು ಪೂರೈಸಿದಕೂಡಲೆ ಅವರವರ ಮನೆಗಳಿಗೆ ವಾಪಸ್ ಹೋಗುವದಕ್ಕೆ ಅನುಕೂಲವಾಗಿ, ಇದರ ದೆಸೆಯಿಂದ ಗ್ರಾಮಗಳಲ್ಲಿ ಪರಸ್ಪರ ಸಹಾಯ ಮಾಡತಕ್ಕ ಏರ್ಪಾಡುಗಳನ್ನು ಪ್ರೋತ್ಸಾಹಿತ ಪಡಿಸುವದಕ್ಕೆ ಸಾಧಕವಾಗಿರುವದು ಶುರುವಿನಲ್ಲಿ ರಿಲೀಫ್ ಕಾಮಗಾರಿಗಳ ಬಳಿಗೆ ಹೋಗುವಬಗ್ಗೆ ಜನಗಳನ್ನು ಪ್ರೇರೇಪಿಸುವದಕ್ಕೆ ಮೇಲ್ಕಂಡ ತರಹೇದ ಕಾಮಗಾರಿಗಳನ್ನು ಜಾಗ್ರತೆಯಾಗಿ ಶುರು ಮಾಡತಕ್ಕದ್ದು ಬಹಳ ಅವಶ್ಯವು. ಕ್ಷಾಮ ಪ್ರಾರಂಭಕಾಲದಲ್ಲಿ ಜನಗಳು ಧೂರ ಫಾಸಲೆಯಲ್ಲಿ ನಡೆಯುವ ಕಾಮಗಾರಿ ಬಳಿಗೆ ಹೋಗಿ ಕೆಲಸಮಾಡುವದಕ್ಕಿಂತ ತಮ್ಮ ಮನೆಗಳಲ್ಲಿಯೇ ಇದ್ದುಕೊಂಡು ಅನಾರೋಗ್ಯಕರವಾದ ಅಲ್ಪ ಆಹಾರದಮೇಲೆ ಜೀವಿಸುವದಕ್ಕೆ ಇಚ್ಛೈಸುತ್ತಾರೆ ಈ ತರಹೇದ ಆಹಾರವೂ ಕೂಡಾ ದೊರಕುವದು ಪ್ರಯಾಸವಾಗಿ ದೇಹವು ಕೃಶವಾಗಲು ಪ್ರಾರಂಭವಾದಮೇಲೆ ಉದ್ಯೋಗ ಅಥವಾ ಆಹಾರಾರ್ಥವಾಗಿ ತಮ್ಮ ಮನೆಗಳ ಬಿಟ್ಟು ಕಳೆದ ಕ್ಷಾಮದಲ್ಲಿ ವಿಶೇಷವಾದ ವಿಪತ್ತಿಗೆ ಕಾರಣವಾದ ಉದ್ದಿಶ್ಯರಹಿತವಾದ ಸಂಚಾರಕ್ಕೆ ಪ್ರವರ್ತಿಸುತ್ತಾರೆ. ಆದಕಾರಣ ಕ್ಷಾಮ ನಿವಾರಣೀಯವಾದ ಕಾಮಗಾರಿಗಳನ್ನು ಏರ್ಪಾಡು ಮಾಡುವವರಲ್ಲಿ ಜನಗಳು ತಮ್ಮ ಮನೆಗಳ ಸಮೀಪದಲ್ಲಿ ಕೆಲಸ ಮಾಡತಕ್ಕದ್ದಕ್ಕೆ ಅನುಕೂಲವಾದ ಕಾಮಗಾರಿಗಳನ್ನು ಚುನಾಯಿಸುವಂತೆ ಏರ್ಪಾಡು ಮಾಡಿರುತ್ತೆ.

ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ವಿಶೇಷವಾಗಿ ಕಷ್ಟ ಸಂಭವಿಸಬಹುದಾದ ಪ್ರದೇಶಗಳಲ್ಲಿ ಅತರಾಫ್ ೩ ಮೈಲಿಗಳೊಳಗೆ ಯಾವ ಗ್ರಾಮಕ್ಕೂ ಬಿಡದಹಾಗೆ ಅನುಕೂಲವಾದ ಕಾಮಗಾರಿಗಳು ಇರುವಂತೆ ಯೇರ್ಪಾಡುವಹಾಗೆ ಪ್ಲಾನ್‌ಗಳನ್ನು ತಯಾರ್ಮಾಡಿಯಿದೆ. ಇದೇರೀತಿಯಾಗಿ ಮಳೆ ಬೆಳೆ ಸರಿಯಾಗಿ ನಡೆಸದೆ ಕಷ್ಟ ಸಂಭವಿಸಬಹುದಾದ ಯೆಲ್ಲಾ ಪ್ರಾಂತ್ಯಗಳಿಗೂ ಯೇರ್ಪಾಡು ಮಾಡಬೇಕೆಂಬ ಆಲೋಚನೆ ಇರುತ್ತೆ.

ಸಿವಿಲ್ ಆಫಿಸರುಗಳ ಮೇಲ್ವಿಚಾರಣೆಗೆ ಒಳಪಟ್ಟು ಕೈಷಿಯಿಂದ ಜೀವನ ಮಾಡತಕ್ಕವರಿಗೆ ಯೋಗ್ಯವಾದ ಮೇಲ್ಕಂಡ ಕಾಮಗಾರಿಗಳ ಶಿವಾಯಿ ಸಾಧಾರಣವಾಗಿ ಯಾವಾಗಲು ಕೂಲಿಯಿಂದಲೇ ಜೀವನ ಮಾಡತಕ್ಕ ಜನಗಳಿಗೋಸ್ಕರ ಪಬ್ಲಿಕ್ ವರ್ಕ್ಸ್ ಇಲಾಖೆ ಆಫಿಸರುಗಳ ವಿಚಾರಣೆಗೆ ಒಳಪಟ್ಟು ಜರುಗತಕ್ಕ ಕಾಮಗಾರಿಗಳನ್ನು ಆವಶ್ಯಕ ಬಿದ್ದಾಗ ಶುರು ಮಾಡುವದಕ್ಕು ಸಹ ಏರ್ಪಾದು ಮಾಡಿತ್ತು. ಈ ಏರ್ಪಾಡಿನ ಖರ್ಚಿನಬಗ್ಗೆ ಮುಂಗಾಮಿಯಾಗಿ ೨ ಲಕ್ಷ ರೂಪಾಯಿಗಳು ಆ ಇಲಾಖೆಗೆ ಜಾಸ್ತಿಯಾಗಿ ಕೊಡಲ್ಪಟ್ಟವು ಈಏರ್ಪಾಡಿನಲ್ಲಿ ಕೂಲಿ ಮತ್ತು ವ್ಯವಸಾಯದ ಜನಗಳು ಕೂಡ ತಮ್ಮ ಮನೆ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಾ ಸುಲಭವಾಗಿ ಹೋಗಿ ಕೆಲಸ ಮಾಡಬಹುದಾದ ಅನೇಕ ಕೆರೆ ಕಾಮಗಾರಿಗಳು ಕೆಲವು ಉಪಯೋಗವಾದ ಹೊಸ ರಸ್ತೆಗಳು ಹಳೇರಸ್ತೆ ಅಭಿವೃದ್ಧಿ ವಗ್ಯೆರೆ ಕೆಲಸಗಳು ಸೇರಿಯಿವೆ ಅನೇಕ ಪ್ರದೇಶಗಳಲ್ಲಿ ವಿಶೇಷವಾದ ಕಷ್ಟ ಸಂಭವಿಸುವ ಪಕ್ಷದಲ್ಲಿ ಮೇಲ್ಕಂಡ ಕಾಮಗಾರಿ ಕೆಲಸಗಳು ಸರ್ವಥಾ ಸಾಕಾಗುತ್ತಿರಲಿಲ್ಲವು ಆದರೆ ಸನ್ ೧೮೭೬ನೇ ಇಸವಿಯಿಂದ ೭೮ನೇ ಇಸವಿಯ ವರಿಗೆ ಪ್ರಾಪ್ತವಾಗಿದ್ದ ಕ್ಷಾಮದಷ್ಟು ಕ್ರೂರವಾದ ವಿಪತ್ತು ಬರುವದೆಂದು ಎಂದಿಗೂ ಯೋಚಿಸಿ ಇರಲಿಲ್ಲವು ಸಂಭವಿಸಬಹುದಾದು ಯೋಚಿಸಿ ಇದ್ದ ಕಷ್ಟನಿವಾರಣೆಗಾಗಿ ಸಿದ್ಧವಾಗಿ ಇಟ್ಟುಕೊಂಡಿದ್ದ ಕಾಮಗಾರಿಗಳು ಸಾಕಾಗಿದ್ದವು ಜಮೀನುಗಳುಳ್ಳ ಜನಗಳಿಗೂ ಮತ್ತು ವ್ಯವಸಾಯದ ಕೂಲಿಗಳಿಗೂ ಬೇಕಾದಷ್ಟು ಕೆಲಸವು ಈ ಕಾಮಗಾರಿಗಳಲ್ಲಿ ದೊರಕುವದಕ್ಕೆ ಮಾರ್ಗವಿತ್ತಲ್ಲದೆ, ವಿಶೇಷ ಖರ್ಚಿಗೆ ಅಸ್ಪದವಿಲ್ಲದೆ ಸರಕಾರಕ್ಕೆ ಲಾಭಯಕರವಾಗಿಯೂ ಇದ್ದವು. ಪ್ರಬಲವಾದ ಕ್ಷಾಮವು ಪುನಃ ಪ್ರಾಪ್ತವಾದಲ್ಲಿ ಎರಳ ದಿವಸಗಳಿಂದ ಚರ್ಚೆಯಲ್ಲಿರುವ ಮಾರಿಕಣಿವೆ ಜಾಲೀತಲಾವು ಮತ್ತು ಅದರ ನಾಲೆಗಳ ಕಾಮಗಾರಿಯನ್ನೂ ರೈಲ್ವೆ ಕಾಮಗಾರಿಯನ್ನೂ ಮರುಮಾಡಿದಹೊರ್ತು ಪಬ್ಲಿಕ್ ವರ್ಕ್ಸ್ ಇಲಾಖೆಮೂಲಕ ನಡೆಸತಕ್ಕ ಇತರ ಬಾರಿ ಕಾಮಗಾರಿಗಳು ಸಿಕ್ಕುವದು ಪ್ರಯಾಸವಾಗಿದೆ ಎದರೆ ಮೇಲೆ ಹೇಳಿರುವ ಪ್ರಕಾರ ಕಾಲಸ್ಥಿತಿಯು ಬಹಳ ಅನುಕೂಲವಾಗುತ್ತಲಿದೆ. ಕೆಲವು ದಿವಸಗಳ ಕೆಳಗೆ ಬಹಳ ಬರಕ್ಕೆ ಕಾರಣವಾಗಿದ್ದ ತಾಲ್ಲೂಕುಗಳಲ್ಲೆಲ್ಲಾ ಈಚೆಗೆ ವಿಶೇಷವಾದ ಮಳೆಯು ಬಿದ್ದು ಕೆರೆಗಳು ಸ್ವಲ್ಪ ತುಂಬಿ ಒಣಗುತ್ತಿದ್ದ ಫಸಲು ಬದುಕಿತು ಅದ್ದರಿಂದ ಕಷ್ಟನಿವಾರಣೀಯಗಳಾದ ಏರ್ಪಾಡುಗಳು ವ್ಯವಸ್ಥೆಪಡಿಸಿದ ಸದ್ಯಕ್ಕೆ ಪುದ್ಧಾಂಗವಾಗಿ ಅವಶ್ಯವಿಲ್ಲದಹಾಗೆ ಅದ್ದಕ್ಕೆ ಸಂತೋಷಿಸಬೇಕಾಗಿದ.

ಸನ್ನಿಹಿತವಾದ ಕ್ಷಾಮದಿಂದ ತಪ್ಪಿಸಿಕೊಂಡದ್ದಕ್ಕಾಗಿ ದೇಶಕ್ಕೇನೆ ಕುಶೋದಯವನ್ನು ಸೂಚಿಸುವ ಕಾಲದಲ್ಲ ಈ ಸಂಕಟವನ್ನು ಕಳೆದುಕೊಳ್ಳುವದಕ್ಕೆ ಮಾಡೋಣವಾದ ಏರ್ಪಾಡುಗಳಲ್ಲಿ ನಮಿಗೆ ವಿಶೇಷವಾದ ಸುಖೆಯೂ ವಸ್ತಾಕೆಯೂ ಬ್ರಿಟಿಷ್ ರೆಸಿಡೆಂಟರಾದ ಮೆ|| ಗರ್ಡನ್‌ಸ್ಟೆನ್ ಸಾಹೇಬರವರಿಂದ ಪ್ರಂಬಾಯಿತೆಂದು ಹೇಳುವದು ನಮ್ಮ ಸುಕೃತವಾಗಿ ಇತ್ತೆಂದು ಹೇಳುವದಕ್ಕೆ ನಾವು ತಪ್ಪಬಾರದು. ರಿಲೀಫ್ ಏರ್ಪಾಡಿನ ವಿಚಾರದಲ್ಲಿ ಅವರು ತೋರಪಡಿಸಿದ ಜಾಗರೂಕವಾದ ಉತ್ಸಾಹವು ನಮಿಗೆ ಬಹಳ ಉಪಕಾರಮಾಡಿದ್ದಲ್ಲದೆ ನಮ್ಮ ಆಫೀಸರುಗಳಿಗೆ ಧೈರ್ಯವನ್ನೂ ಕೊಟ್ಟರು. ಈಗ ತಾನೇ ಕಳೆದುಹೋದ ವಿಶೇಷವಾಗಿ ಆಲೋಚನೆಗೆ ಅವಕಾಶ ಉಂಟುಮಾಡಿದ್ದ ಕಾಲದಲ್ಲಿ ಈ ಸಾಹೇಬ ಮಹಸೂರರಿಂದ ಹೊಂದಿದ ಮನಃಪೂರ್ವಕವಾದ ಸಾಹಾಯ್ಯವನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಈ ಸಮಯವನ್ನು ಅವಲಂಬಿಸುತ್ತೇವೆ ಮತ್ತು ನಮ್ಮ ಡಿಸ್ಟ್ರಿಕ್ಟ್ ಆಫಿಸರರು ದೇಶದ ಸ್ಥಿತಿಯನ್ನು ಜಾಗರೂಕತೆಯಿಂದ ನಿಗೇಯಲ್ಲಿ ಇಟ್ಟುಕೊಂಡು ಜರೂರು ಬಿದ್ದಾಗ ಕಾರ್ಯಗಳನ್ನು ನಡೆಸುವದಕ್ಕೆ ಶ್ಲಾಘಿಸಲು ಅರ್ಹರಾಗಿ ಸಿದ್ಧರಾಗಿದ್ದರು ಶಿವಾಯಿ ನಮ್ಮ ಚೀಫ್ ಸೆಕ್ರೆಟರಿಯವರಾದ ಮೆಸ್ಟರ್ ಆರ್. ವಿಜಯರಂಗರಾಯರವರಿಂದ ರಿಲೀಫ್ ವಿಚಾರದಲ್ಲಿ ನಾವು ಬಹಳ ಉತ್ತಮವಾದ ಸಹಾಯವನ್ನು ಹೊಂದಿದೇವೆ, ಮತ್ತು ಅವರಿಗೆ ಇದ್ದ ಬಹಳ ಅಲ್ಪ ವ್ಯವಧಾನದಲ್ಲಿ ಇಂಜನೀರ್ ಇಲಾಖಾ ಮಾರ್ಫತ್ ನಡೆಯತಕ್ಕ ಕಾಮಗಾರಿಗಳ ಏರ್ಪಾಡನ್ನು ಪಬ್ಲಿಕ್ ವರ್ಕ್ಸ್ ಸೆಕ್ರೆಟರಿ ಮೇಜರ್ ಬರ್ನ ಸಾಹೇಬರು ಪೂರೈಸುವದರ ಮೂಲಕ ನಮಿಗೆ ಬಹಳ ಸಹಾಯವನ್ನು ಮಾಡಿರುತ್ತಾರೆ.

ಸಾಧಾರಣ ಕಾಲಗಳಲ್ಲಿ ದೇಶದ ಕ್ಷೇಮಲಾಭಕ್ಕೆ ಎಷ್ಟು ಅತ್ಯಂತ ಸಂಬಂಧ ಪ್ರಶಸ್ತವಾಗಿದೆಯೋ ತದ್ವತ್ ಯಥಾಕ್ರಮವಾಗಿ ಮಳೆಬಾರದೆ ಹೋದಕಾಲಗಳಲ್ಲಿಯೂ ಉಂಟಾಗುವ ಕೇಡನ್ನು ಹೋಗಲಾಡಿಸುವದಕ್ಕೆ ಹಾಗೆಯೇ ಸಂಬಂಧವುಳ್ಳದ್ದಾಗಿರುವ ಇರ್ರಿಗೇಷನ್‌ಯಾನೆ ನೀರಿನ ಸರಬರಾಯಿಯ ವೃದ್ಧಿಗೆ ಅಗತ್ಯವಾದ ಕಾಮಗಾರಿಗಳ ವಿಷಯವನ್ನು ಇಲ್ಲಿ ಪ್ರಸಕ್ತಿಮಾಡುತ್ತೇವೆ ಕಳೆದ ಪುಷ್ಕಾಮಕ್ಕೆ ಪ್ರಾಕ್ ಮತ್ತು ಅನಂತರ ಕಾಲದಲ್ಲಿರುವ ಕೆರೆಗಳಿಗೂ ಕಾಲ್ವೆಗಳಿಗೂ ಏನು ಕಾಮಗಾರಿಗಳು ಮಾಡಲ್ಪಟ್ಟವೋ ಅವುಗಳನ್ನು ಸಂಕ್ಷೇಪವಾಗಿ ಮೊದಲು ಉದಹರಿಸಿ ನೂತನ ಏರ್ಪಡಿಸತಕ್ಕ ಪದ್ಧತಿಯನ್ನು ಚರ್ಚಿಸುತ್ತೇವೆ

ಇರ್ರಿಗೇಷನ್ ಕಾಮಗಾರಿಗಳು

೧೮೭೦—೭೧ನೇ ಇಸವಿ ಲಾಗಾಯತು ೧೮೭೫—೭೬ನೇ ಇಸವಿ ವರಿಗೂ ಇರ್ರಿಗೇಷನ್ ಗಾಗಿ ಖುಲ್ಲ ಖರ್ಚು ೩,೦೭,೫೪೫ ರೂಪಾಯಿ ಈ ಪೈಕಿ ೧೧,೭೦,೮೬೮ ರೂಪಾಯಿ ಒರಿಜಿನಲ್ ವರ್ಕ್ಸ್ ಯಾನೆ ಹೊಸ ಕಾಮಗಾರಿಗಳು ಅಂದರೆ ಪಾಳುಬಿದ್ದಿದ್ದ ಕೆರೆಗಳನ್ನು ಪುನಃ ಕಟ್ಟೋಣವು ನಾಲೆಗಳನ್ನು ಸಮೂಲವಾಗಿ ಅಭಿವೃದ್ಧಿ ಮಾಡಿ ಬಾಯಿ ಪತ್ರ ಅವುಗಳಿಗೂ ಬಾಕಿ ೮,೫೪,೦೭೭ ರೂ|| ರಿಪೇರಿಗಾಗಿಅಂದರೆ ಛಾಪ್ ಬಸಾಕ್ ಹುಟ್ಟುವಳಿ ಬಗುತ್ತಿರುವವುಗಳನ್ನ ಒಳ್ಳೆಸ್ಥಿತಿಯಲ್ಲಿ ಕಾಪಾಡೋಣ ಇದಕ್ಕೂ ಖರ್ಚಾಯಿತು. ಇದನ್ನ ಲೆಕ್ಕಮಾಡಿದರೆ ಈ ೫ ವರುಷಗಳಲ್ಲಿ ಪ್ರತಿ ೧ ವರುಷಕ್ಕೆ ಈ ಮೆರನುವಿದವಾದ ಕಾಮಗಾರಿಗಳಿಗೂ ಸರಾಸರಿ ಮೊತ್ತವಾಗಿ ೪,೦೦,೦೦೦ ರೂಪಾಯಿಗಳಾಗುತ್ತೆ, ನಾವುಕ್ಷಾಮಕಾಲವೆಂದು ಹೇಳುವ ೧೮೭೬—೭೭, ೧೮೭೭—೭೮, ೧೮೭೮—೭೯ ಈ ವರುಷಗಳಲ್ಲಿ ಏನೇತರಹೇದ ಬಹಳ ಉಪಯೋಗವಾದ ಕಾಮಗಾರಿಗಳು ನಡಿಸಿದ್ದು ಆದರೆ ಈ ಖರ್ಚು ಲೆಕ್ಕ ಮಾಡ್ಯವಾದುದಾದ್ದು ಮತ್ತು ಅವರ ಪ್ರಧಾನೋದ್ದೇಶವು ಜನಗಳ ಸಂಕಟವನ್ನು ಪರಿಹಾರಮಾಡುವದಕ್ಕು ಯತ್ಕಿಂಚಿತ ಈ ಕಾಮಗಾರಿಗಳಿಂದ ಉಂಟಾಗಬಹುದಾದ ಪ್ರಯೋಜನಕ್ಕೂ ಸಹ ಆಗಿಸಿತ್ತು. ಅದ್ದರಿಂದ ಈ ವರುಷಗಳ ಪ್ರಸಕ್ತಿ ಇಲ್ಲಿಗೆ ಬಿಡುತ್ತೇವೆ ೧೮೭೯—೮೦ನೇ ಇಸವಿಯಿಂದ ೧೮೮೪—೮೫ನೇ ಇಸವಿ ವರಿಗೂ ಈ ೬ ಸಂವತ್ಸರಗಳಲ್ಲಿ ಇರ್ರಿಗೇಷನ್‌ಗಾಗಿ ೧೮,೫೬,೬೬೮ ರೂ|| ಖರ್ಚಾಗಿದೆ ಸರಾಸರಿ ಸಾಲ್ ೧ಕ್ಕೆ ಸುಮಾರು ೩ ಲಕ್ಷವಾಗುತ್ತೆ ಇಂಜಿನಿಯರ್‌ಗಳ ದ್ವಾರಾ ನಡೆಯುವ ಕಾಮಗಾರಿಗಳ ಮೇಲ್ಕಂಡ ೬ ವರುಷಗಳಲ್ಲಿ ಆದ ಸರಾಸರಿ ಖರ್ಚು ೧೮೭೦ನೇ ಇಸವಿ ಲಾಗಾಯತು ೫ ವರುಷಗಳಲ್ಲಿ ಆದ ಖರ್ಚಿಗಿಂತ ಕಮ್ಮಿಯಾಗಿದೆ ಇದರಿಂದ ಇರ್ರಿಗೇಷನನ್ನು ಲಂಚರಿ ನೀರಿನ ಸರಬರಾಯಿ ಉದಾಸೀನ ಮಾಡಿತೆಂದು ಯೋಚಿಸಲಾಗದು. ದೇಶವನ್ನು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿಬಿಟ್ಟದ್ದರಿಂದಲೂ ಮತ್ತು ಕ್ಷಾಮದಿಂದ ಉಂಟಾದ ಅನರ್ಥಗಳಿಂದಲೂ ಪೂರ್ವದಲ್ಲಿ ನಾಲೆಕೆರೆಗಳ ಮರಮ್ಮತ್ತಿಗಾಗಿ ಇಟ್ಟಿದ್ದ ಚಾರಿಟಿ ಬ್ಯಾಂಡಿಯನ್ನು ಕೋತಾಮಾಡಿದ್ದರಿಂದಲೂ ಸಹ ಖರ್ಚು ಕಮ್ಮಿಯಾಯಿಗಲ್ಲದೆ ಇದರಿಂದ ಈಚಿನವರುಷಗಳಲ್ಲಿ ಬಹುಶಃ ದೇಶದ ಹುಟ್ಟುವಳಿಪೈಕಿ ಸಿಲ್ಕು ಮೊಬಲಗು ವಿಶಿಷ್ಟವು ವಿವೇಕವಾಗಿ ಶ್ರೇಷ್ಠವಸ್ತುಗಳನ್ನ ತ್ವರ್ಯವಾಗಿ ಪೂರೈಸುವದಕ್ಕೇ ಉಪಯೋಗಿಸಲ್ಪಟ್ಟವು. ಈ ಶ್ರೇಷ್ಠವಸ್ತುಗಳನ್ನು ಮುಂದಕ್ಕೆ ಪೂರೈಸುವಬಾರವು ತ್ವರ್ಯದಲ್ಲೇ ಮೇಲೆ ಸೂಚಿಸಲ್ಪಟ್ಟಂತೆ ಬಹಳ ಅನುಕೂಲವಾದ ಷರತ್ತುಗಳೊಡನೆ ನಮ್ಮ ಕೈಬಿಟ್ಟು ಹೋಗುತ್ತೆ. ಇದರಿಂದ ಆ ಬಾಬಿನ ಖರ್ಚಿಗೆ ದ್ರವ್ಯ ಒದಗಿಸಬೇಕಾದ ಆವಶ್ಯಕವಿರುವದಿಲ್ಲ. ಇದರಿಂದ ಇರ್ರಿಗೇಷನ್ ಕಾಮಗಾರಿಗಳಿಗೆ ಚೆನ್ನಾಗಿ ಗಮನಕೊಡುವದಕ್ಕೂ ಮತ್ತು ಅಧಿಕವಾವ್ಯಯಮಾಡುವದಕ್ಕೂ ಶಕ್ತಿ ಪ್ರಾಪ್ತವಾದಿರೆ ತೋರಿಯಿದೆ.

ಕೆರೆಗಳ ಮರಮ್ಮತ್ತಿನ ಏರ್ಪಾಡು

ಕಳೆದಸಂವತ್ಸರದಲ್ಲಿ ಕೆರೆಗಳ ಮರಮ್ಮತ್ತಿವಿಷಯದಲ್ಲಿ ಆಲೋಚಿಸಿದ್ದ ಕೆರೆಗಳಏರ್ಪಾಡಿನ ಕ್ರಮವನ್ನು ಸಂಕ್ಷೇಪವಾಗಿ ತಿಳಿಸಿ ಇದ್ದೇವಷ್ಟೆ ಆ ಏರ್ಪಾಡಿನ ಪ್ರಕಾರ ೫೦೦ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಾದ ಹುಟ್ಟುವಳಿ ಇರತಕ್ಕ ಎಲ್ಲಾ ಕೆರೆಗಳ ವಿಷಯಕವಾದ ಸಮಸ್ತ ಜವಾಬುದಾರಿಯನ್ನು ಪಬ್ಲಿಕ್‌ವರ್ಕ್ಸ್ ಯಾನೆ ಮರಮ್ಮತ್ ಇಲಾಖೆಗೆ ವಹಿಸಬೇಕೆಂದಿತ್ತು, ಈಗ ಇರತಕ್ಕ ಮರಮ್ಮತ್ ಇಲಾಖೆಯ ಸ್ವಲ್ಪ ಸಿಬ್ಬಂದಿಮೂಲಕ ಈಕೆರೆಗಳ ಮರಮ್ಮತ್ತು ಮತ್ತು ಅಭಿವೃದ್ಧಿಕೆಲಸವು ಸುಲಭವಾಗಿ ನಡಿಸಲ್ಪಡಬಹುದೆಂದೂ ೫೦೦ ರೂ|| ಕಮ್ಮಿ ಹುಟ್ಟುವಳಿ ಆಗತಕ್ಕ ಕೆರೆಗಳ ಮರಮ್ಮತ್ತೂ ರೆವಿನ್ಯೂ ಆಫಿಸರುಗಳ ಮೇಲ್ವಿಚಾರಣೆಗೆ ಒಳಪಟ್ಟು ರೈತರಿಗೆ ಸೇರಿದ್ದೆಂದೂ ಹಾಗೆ ನಾ ಮರಮ್ಮತ್ತಿ ಮಾಡಬೇಕಾದ ಹಳೆ ಕೆರೆಗಳನ್ನು ಸ್ವಂತ ಬಾಗುವಡಿ ಮರಸ್ತುಮಾಡಲು ಜನಗಳಿಗೆ ರಿಯಾಯಿತಿ ತೋರಣದರಮೂಲಕ ಪ್ರೋತ್ಸಾಹಪಡಿಸಬೇಕೆಂದು ನ್ನು ಯೋಚಿಸಿದೆವು ಆದರೆ ಈಏರ್ಪಾಡನ್ನು ಜಾರಿಯಲ್ಲಿ ತರುವದರಲ್ಲಿ ಅನೇಕ ತೊಂದರೆಗಳು ಇರುತ್ತಲ್ಲದೆ ಪಬ್ಲಿಕ್‌ವರ್ಕ್ಸ್ ಇಲಾಖೆಯು ಮತ್ತು ರೈತರ ಪರಸ್ಪರ ಸಂಬಂಧದಲ್ಲಿ ಕ್ಲಿಷ್ಟವಾದ ಹಮ್ಮುಗಳನ್ನು ಗೊತ್ತುಮಾಡಬೇಕಾಗ ವಲ್ಲಿ ಅನುಭವಶಾಲಿಗಳು ಭಿನ್ನಾಭಿಪ್ರಾಯಪಡುತ್ತಾರೆ ಈ ವಿಷಯವು ಯಾವದಾದರೂ ಒಂದು ಮನಿವದಲ್ಲಿ ತೀರ್ಮಾನವಾಗತಕ್ಕದ್ದು ಬಹಳ ಅವಶ್ಯವಾಗಿ ಇರುವದ್ದರಿಂದ ಪ್ರಥಮತಃ ಪ್ರತಿ ಡಿಸ್ಟ್ರಿಕ್ಟಿನಲ್ಲಿಯು ಒಂದೊಂದು ತಾಲ್ಲೂಕಿನಲ್ಲಿ ೫೦೦ ರೂಪಾಯಿಗಳ ಪದ್ಧತಿಯನ್ನು ಜಾರೀಯಲ್ಲಿತರಲು ಸಾಧ್ಯವೋ ಅಥವಾ ಇಲ್ಲವೋ ಎಂಬ ಅಂಶವನ್ನು ಪರೀಕ್ಷಿಸಲು ಮೈಸೂರು ಸರಕಾರದವರು ತೀರ್ಮಾನಿಸಿಇರುತ್ತಾರೆ. ಇಂತಾ ತಾಲ್ಲೂಕುಗಳಲ್ಲಿ ೫೦೦ ರೂಪಾಯಿಗಳಗಿಂತ ಕಮ್ಮಿ ಹುಟ್ಟುವಳಿ ಆಗತಕ್ಕ ಕೆರೆಗಳವಿಷಯದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯವರ ಜವಾಬುದಾರಿಯು ಸಂಪೂರ್ಣವಾಗಿ ತಪ್ಪಿಸಲ್ಪಡುವದು ಆದರೆ ರೈತರಿಂದ ಸಾಧ್ಯವಲ್ಲದ ಪತ್ರದ ಮತ್ತು ಗಟ್ಟಿ ಕಾಮಗಾರಿಗಳಾಗಬೇಕಾದ ರೋಬು ಕೋಡಿ, ಪುದ್ದಿ ವಗ್ಯೆರೆ ಕೆಲಸಗಳಿಗೆ ರೆವಿನ್ಯೂ ಅಧಿಕಾರಸ್ಥರು ಇಂಜನಿಯರುಗಳ ಸಹಾಯವನ್ನು ಅಪೇಕ್ಷಿಸಬಹುದು. ರಿವಾಯಿ ರೈತರಿಗೆ ಅಭ್ಯಾಸವಿಲ್ಲದ ಮತ್ತು ಯಾವಾಗಲು ಪದ್ದರಿಂದಲೇ ಮಾಡಲ್ಪಡುವ ಈ ಕೆರೆಗಳ ಕಲ್ಲು ಕಟ್ಟಡಗಳನ್ನು ರೈತರಿಂದ ಮಾಡಿಸುವದು ಯುಕ್ತವಲ್ಲವಾದ್ದರಿಂದ ಈತರಹೇದ ಕಾಮಗಾರಿಗಳನ್ನು ಮಾಡಿಸುವದಕ್ಕಾಗಿ ಡೆಪ್ಯುಟಿ ಕಮಿಷನರುಗಳಿಗೆ ಬೇಕಾದಷ್ಟು ಹಣವನ್ನು ಸರ್ಕಾರದಿಂದಕೊಡುತ್ತೆ ಈ ಪ್ರಕಾರ ಪರೀಕ್ಷಾರ್ಥವಾಗಿ ಮಾಡೋಣದರಲ್ಲಿ ಮೇಲೆ ಹೇಳಲ್ಪಟ್ಟ ಏರ್ಪಾದು ಸಾಧ್ಯವೋ ಅಥವಾ ಅಸಾಧ್ಯವೋ ಎಂಬ ಅಂಶವು ಸ್ಪಷ್ಟವಾಗಿ ಗೊತ್ತಾಗುತ್ತೆ. ಕೆಲವು ಕಾಲಾನಂತರ ಮೇಲ್ಕಂಡ ಏರ್ಪಾಡಿನಿಂದ ಪ್ರಾಪ್ತವಾಗುವ ಪರಿತಾಪವನ್ನು ತಿಳಿದುಕೊಂಡು ನೂತನವಾದ ಏರ್ಪಾದನ್ನು ಎಷ್ಟರಮಟ್ಟಿಗೆ ಮುಂದೆ ಜಾರೀಗೆ ತರಬೇಕೆಂಬುದನ್ನು ಸರ್ಕಾರದವರು ತೀರ್ಮಾನಿಸುವರು. ಈಗ ಪರೀಕ್ಷಾರ್ಥವಾಗಿ ಜಾರಿಯಲ್ಲಿ ತರಬೇಕೆಂದಿರುವ ಮೇಲ್ಕಂಡ ಏರ್ಪಾದುಮುಲ್ಲೀ ಮತ್ತು ಮರಮ್ಮತ್ ಇಲಾಖಾ ಅಧಿಕಾರಿಗಳು ಸುಧ್ಯಯಡಿಂದ ಒಬ್ಬರಿಗೊಬ್ಬರು ಸಹಾಯಮಾಡುವದರಮೂಲಕ ತೃಪ್ತಿಕರವಾಗಿ ನಡಿಸಿ ಹಾಸ್ಯವಲ್ಲವೋ ಇದೇ ಪ್ರಕಾರಕ್ಕೆ ಎಲ್ಲಾಕಡೆಯಲ್ಲಿಯು ಜಾರಿಯಲ್ಲಿತರುವದಕ್ಕೆ ಗವರ್ನಮೆಂಟಿನವರಿಗೆ ಸಾಧ್ಯವಾದೀತೆಂದು ನಂಬುತ್ತೇವೆ.

BANGALORE —Printed and published for the Proprietor, at the KARNATIC PRESS —188?

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯವನಗನಾರ್ಶ್ವ ಕರ್ನಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದಿಕಾನುಪರಿಶೀಲಿತಾದಿಶತಿಮಾನಸಂಮುದಂ ॥

Vol. XII.] BANGALORE —MONDAY, NOVEMBER 23, 1885. [No. 47.

ಸಂಪುಟ ೧೨.] ಬೆಂಗಳೂರು —ಸನ್ ೧೮೮೫ನೇ ಇಸವಿ ನವಂಬರ್ ೨೩ನೇ ತಾರೀಖ್ ಸೋಮವಾರ. [ಸಂಚಿಕೆ ೪೭.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ಮುಂಗಡ ಒಂದು ವರ್ಷಕ್ಕೆ		೧೦—೦—೦
ಇಂಗ್ಲಿಷ್ [illegible] ಒಂದು ವರ್ಷಕ್ಕೆ		೬—೦—೦
ಕನ್ನಡ [illegible] ಮುಂಗಡ ಒಂದು ವರ್ಷಕ್ಕೆ .		೬—೦—೦
[illegible]	೧ ವರ್ಷ	೦—೮—೦
[illegible]	೧ ವರ್ಷ	೦—೪—೦
[illegible]	೧ ವರ್ಷ	೦—೫—೦

[illegible]

ಪ್ರಕಟನೆಯ ರಿವಾಜ್.

[illegible]	೧ ವರ್ಷ	೦—೨—೦
[illegible]	೧ ವರ್ಷ	೦—೧—೦

NOTICE TO SUBSCRIBERS

[illegible]:—

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5-6-0

[illegible]

[illegible]	ರೂ॥	೫—೦—೦
[illegible]		೦—೬—೦

[illegible], ಬೆಂಗಳೂರು.

ನೋಟೀಸ್

ಇದರ ಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ ಮಾರಲ್ಪಡುವವು.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ಪಟ್ಟಂಡಾಕ್)	...	೦—೩—೦
[illegible]		೦—೫—೦
[illegible]	...	೦—೪—೧
[illegible]	...	೦—೧೪—೦
[illegible]	..	೦—೬—೦
[illegible]	..	೦—೨—೦
ವೈದ್ಯಸಾರಸಂಗ್ರಹ	..	೫—೦—೦

ಕನ್ನಡ ಗ್ರಂಥಗಳು.

[illegible]	...	೦—೬—೦
[illegible]	...	೦—೪—೦
[illegible]	..	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೬—೬
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	... ...	೦—೨—೦
[illegible]	...	೦—೦—೯
ಇಂಗ್ಲಿಷ್ ಕನ್ನಡ [illegible]		೧—೨—೦
[illegible]	... ..	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	..	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	.. ...	೦—೩—೦
ವಿಷ್ಣುಸಹಸ್ರನಾಮ	..	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
[illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ

ಈ ಪತ್ರಿಕೆಯನ್ನು ನಾವು ಮರಳಿ ಪ್ರಕಟಿಸಲು ಪ್ರಾರಂಭಿಸಿ ಕಳೆದ ಅಕ್ಟೋಬರ್ ಆಖೈರಿಗೆ ೧೨ ಸಂವತ್ಸರಗಳು ಪೂರ್ತಿಯಾದವು. ಈ ಹನ್ನೆರಡು ಸಂವತ್ಸರಗಳ ಕಾಲದಲ್ಲಿ ಪ್ರತಿ ಸಾಲಿನಲ್ಲೂ ಚಂದಾ ಬಾಕೀಗಳು ಬಹಳವಾಗಿ ಹೊರಗೆ ನಿಂತುಹೋಗುತ್ತ, ವಸೂಲೀಗೆ ಮಾರ್ಗವಿಲ್ಲದೆ ಅರ್ಥವಿನಿಯುಕವಾದ ಅನುಪಪತ್ತಿಗೆ ನಾವು ಗುರಿಯಾಗಬೇಕಾಗಿ ಬಂದದರಿಂದ, ಸನ್ ೧೮೮೬ನೇ ಇಸವಿ ಜನವರಿ ಲಾಗಾಯತು ಚಂದಾ ಮೊಬಲಗನ್ನು ಅಡ್ವಾನ್ಸ ಕೊಡತಕ್ಕವರಿಗೆ ಮಾತ್ರ ಈ ಪತ್ರಿಕೆಯನ್ನು ಕಳುಹಿಸತಕ್ಕದ್ದೆಂದು ನಿರ್ಣಯಿಸಿರುತ್ತೇವೆ. ಹಾಗೆ ಅಡ್ವಾನ್ಸ ಕಳುಹಿಸುವ ಚಂದಾದಾರರ ಸಂಖ್ಯೆಯೂ ಅವರಿಂದ ವಸೂಲಾಗುವ ಮೊಬಲಗೂ ಈ ಪತ್ರಿಕೆಯನ್ನು ಅರ್ಥವಿನಿಯುಕವಾದ ಅನುಪಪತ್ತಿ ಲೇಶವೂ ಇಲ್ಲದೆ ನಡೆಸುತ ಬರುವದಕ್ಕೆ ಸಾಕಾಗಿರುವದೇ ಎಂಬ ಅಂಶವನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಬೇಕಾಗಿರುವದರಿಂದ, ಮೇಲಿನ ನಮ್ಮ ಯೋಚನೆಯನ್ನು ಅನುಮೋದಿಸಿ ಪೋಷಿಸಲು ಅಭಿಮತವುಳ್ಳ ದೊಡ್ಡಮನುಷ್ಯರೆಲ್ಲರು ಈ ತಿಂಗಳ ೯ನೇ ತಾರೀಖ್ ಸೋಮವಾರದ ಪತ್ರಿಕೆಯೊಡನೆ ಕಳುಹಿಸಿರುವ ದರಖಾಸ್ತು ಫಾರಂನಲ್ಲಿ ರುಜು ಮಾಡಿ ಈ ತಿಂಗಳ ಆಖೈರೊಳಗಾಗಿ ನಮಗೆ ವಾಪಸು ಮಾಡಬೇಕೆಂದು ಕೋರುವೆವು. ಹೀಗೆ ಬರುವ ದರಖಾಸ್ತುಗಳ ಸಂಖ್ಯೆಯು ನಮ್ಮ ಉದ್ದೇಶಾನುಗುಣವಾಗಿ ಕಂಡುಬರುವ ಪಕ್ಷಕ್ಕೆ ನವಂಬರ್ ೩೦ನೇ ತಾರೀಖಿನ ಈ ಪತ್ರಿಕೆಯಲ್ಲಿ ನಾವು ಕೊಡುವ ಬೇರೆ ನೋಟೀಸ್ ಅನುಸರಿಸಿ ಅವರವರು ತಮ್ಮ ತಮ್ಮ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕು. ಒಂದುವೇಳೆ ಇಂತಾ ದರಖಾಸ್ತುದಾರರ ಸಂಖ್ಯೆಯು ಸಾಲದ್ದಾಗಿ ಕಂಡುಬರುವ ಪಕ್ಷಕ್ಕೆ ಅಪರಮೇಲಿನ ನಮ್ಮ ನಿರ್ಣಯವನ್ನು ಡಿಸಂಬರ್ ೭ನೇ ತಾರೀಖಿನ ಪತ್ರಿಕೆಯ ಮೂಲಕ ಪ್ರಕಟಪಡಿಸುವೆವು.

ಬೆಂಗಳೂರು, ೯ನೇ ನವಂಬರ್ ೧೮೮೫. } ಟಿ ಸಿ ಶ್ರೀನಿವಾಸಾಚಾರ್ಯ, ಪ್ರೊಪ್ರೈಟರ್

ನೋಟಿಸ್.

ಬೆಂಗಳೂರು ಶಹರ್ ಮ್ಯೂನಿಸಿಪಾಲಿಟಿ.

ಬೆಂಗಳೂರು, ಶಹರ್ ಮ್ಯೂನಿಸಿಪಲ್ ಆಫೀಸ್,

ತಾರೀಖು ೧೮ನೇ ನವಂಬರ್ ೧೮೮೫

ನಂ ೪೬೯.

ಶಹರ್ ಡಿಸ್ಪೆನ್ಸೆರಿಯಾನ ಔಷಧಶಾಲೆ ಮತ್ತು ಆಸ್ಪತ್ರಿಯನ್ನು ಸುಬಿಮಾರ್ಫಾ ಎಂಬವರ ಆಸ್ಪತ್ರಿ ಕಟ್ಟಡಕ್ಕೆ ವರ್ಗ ಮಾಡುವದಂ ಕುರಿತು ಆಲೋಚಿಸತಕ್ಕಬಗ್ಗೆ ಬೆಂಗಳೂರ್ ಶಹರ್ ಮ್ಯೂನಿಸಿಪಲ್ ಕಮಿಷನರ್‌ಗಳು ಮಾಹೇಮಜಕೂರ್ ೨೦ನೇ ತಾರೀಖ್ ಶುಕ್ರವಾರದವೆಳಗ್ಗೆ ೭½ ಘಂಟೆಗೆ, ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಕಟ್ಟಡದಲ್ಲಿರುವ ತಮ್ಮ ಆಫೀಸನಲ್ಲಿ ನಡೆಸುವದಾಗಿದ್ದ ಸಭೆಯು ೧೮೮೫ನೇ ಇಸವಿ ನವಂಬರ್ ೨೩ನೇ ತಾರೀಖು ಸೋಮವಾರ ಬೆಳಗ್ಗೆ ೭½ ಘಂಟೆಗೆ ನಿಲ್ಲಿಸಲ್ಪಟ್ಟಿತು.

A. SRINIVASACHARLU,
Vice President,
City Municipal Commission

ಪ್ರಕಟನೆ.

ಇದರಿಂದ ಸರ್ವರಿಗೂ ತಿಳಿಸುವದೇನೆಂದರೆ.

ಸನ್ ೧೮೮೬ನೇ ಏಪ್ರಿಲ್ ೧ನೇ ತಾರೀಖ್ ಲಾಗಾಯತು ಸನ್ ೧೮೮೭ ನೇ ಮಾರ್ಚ್ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್‌ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪೋ ಸೂಪರಿಂಟೆಂಡೆಂಟರವರು, ಸನ್ ೧೮೮೫ ನೇ ಇಸವಿ ಡಿಸಂಬರ್ ೧೫ನೇ ಮಂಗಳವಾರ ಮಧ್ಯಾಹ್ನ ೧೨ಗಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನುಕುರಿತ ಜಾಸ್ತೀ ತಪಸೀಲ್ ತಿಳಿಯಬೇಕಾದವರು, ಸನ್ ೧೮೮೫ನೇ ಇಸವಿ ನವಂಬರ್ ೧೫ನೇ ಮತ್ತು ೪೫ನೇ ನಂಬರ್ ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ ೨ನೇಭಾಗ ೧,೫೧೬ನೇ ಪುಟದಲ್ಲಿ ಛಾಯಿಷ್ ಆಗಿರುವ ಪ್ರಕಟನೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ,
ನೆಲ್ಲುಹುಲ್ಲು.
ರಾಗೀಹುಲ್ಲು.
ಹಸೀಹುಲ್ಲು.

A. W. RAWLINS, COL.,
Offg. Supt Remount Dept

ರಿಮೌಂಟ್ ಡಿಪೋ, ಹೊಸೂರು, ೨೦ನೇ ನವಂಬರ್ ೧೮೮೫ }

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 23, 1885.

೧೮೮೫ನೇ ನವಂಬರ್ ೨೩ನೇ ತಾ॥ ಸೋಮವಾರ.

ಓಂ॥ ಸರ್ವಜ್ಞತಾಂಗದಸಿವಾಕ್ಷಟುತ್ತಾಂಪ್ರಮೋತಿ ವಿಪಶ್ಚಿತ್ವದಾಪ್ರಸರಸೋರುಹರೋಚಪ್ರಣಾಮ॥ತ್ವಾಯು ವಾದವಿಮನರಾಸಮನುಸ್ಮರಾಮಿ ತ್ವಾಮುಮಮೌಮಿಕರ ಗಾಜಾನನೀ ತ್ವಮೆವ॥

BURMAH AND THE BRITISH GOVERNMENT.

ಈ ವಾರದಲ್ಲಿ ಬಂದ ತಂತಿವೃತ್ತಾಂತಗಳಮೂಲಕ ಬ್ರಿಟಿಷ್ ಸರ್ಕಾರಕ್ಕೂ ಬರ್ಮಾದೇಶೀಯರಿಗೂ ಯುದ್ಧ ಉಪಕ್ರಮವಾಗಿ ಬ್ರಿಟಿಷಸೈನ್ಯವು ಸರಹದ್ದನ್ನು ದಾಟಾಯಿಸಿ ಹೋಗುತಲಿರುವಂತೆಯೂ, ಇದುವರಿವಿಗೆ ಕೆಲವು ಕಿಲ್ಲೆಗಳುವಾಶಪಡಿಸಲ್ಪಟ್ಟಂತೆಯೂ ತಿಳಿಯಬರುತಿದೆ. ಪ್ರಕೃತಸ್ಥಿತಿಯನ್ನನುಸರಿಸಿ ಭವಿಷ್ಯತ್ಪರ್ಯವಸಾನವನ್ನು ಸಹ ಈಗಲೇ ಅನುಮೇಯಿಸಿ ತಿಳಿಸಬಹುದಾಗಿರುತಿದೆ. ಇದರ ಯುಕ್ತಾಯುಕ್ತತೆಯಂಕುರಿತು ವಿಚಾರಮಾಡಲಿಕ್ಕೆ ಪೂರ್ವ ಇದರ ಆದಿಕಾರಣವನ್ನೂ ಇದು ಪರ್ಯವಸಾನವಾಗಿದ ಕ್ರಮವನ್ನೂ ಈ ಪತ್ರಿಕೆಯನ್ನೋದುವವರ ತಿಳುವಳಿಕೆಯಬಗ್ಗೆ ಸಂಗ್ರಹವಾಗಿ ಇದರಲ್ಲಿ ಅರುಹುವೆವು.

SPEECH DELIVERED BY THE

DEWAN OF MYSORE,

before the Representative Assembly at Mysore, on the 21st October 1885.

(ಕಳೆದವಾರದ ಶೇಷ.)

ರಿಲೀಫ್ ಯೇರ್ಪಾಡುಗಳು.—ಕೇವಲ ಸವಿಶೇಷವಾಗಿ ವದಗಿ ಬಂದಿದ್ದಂತೆ ಇದ್ದ ವಿಪತ್ತನ್ನು ಕಳೆಯುವ ಉದ್ದೇಶದಿಂದ ಹಿಂಗಾರು ಬೆಳೆಯು ನಷ್ಟ ಹೊಂದಿದ ಕಾಲದ ಮೊದಲು ಮುಂದಿನ ಬೆಳೆ ಕೈಸೇರುವದಕ್ಕೆ ಬೇಕಾದ ಮಧ್ಯಕಾಲದಲ್ಲಿ ಜೀವಿಸಿ ತೇಗಡೆ ಹೊಂದುವದಕ್ಕೆ ಆಧಾರ ವುಂಟು ಮಾಡುವ ರಿಲೀಫ್ ಕಾಮಗಾರಿಗಳು ನಡೆಯುವಂತೆ ಯೇರ್ಪಾಡನ್ನು ಗವರ್ನಮೆಂಟಿನವರು ಮಾಡಿದ್ದರೆಂಬ ಸಂಗತಿ ತಿಳಿದುಕೊಳ್ಳಲು ನಿಮ್ಮಗಳಿಗೆ ತೃಪ್ತಿಕರವಾಗಿಯೇ ಇರುವದು. ಈ ರಿಲೀಫ್ ಯೇರ್ಪಾಡು ಬ್ರಿಟಿಷ್ ದೇಶದಲ್ಲಿ ವಿಧಿಸಿ ಇರುವದೇ ಹೊರ್ತು ಬೇರೆಅಲ್ಲ. ಆದರೂ ರಿಲೀಫ್ ಯೇರ್ಪಾಡಿನವಿಷಯದಲ್ಲಿಒಂದು ಸಂಗತಿಮಾತ್ರ ಕೇವಲ ಮುಖ್ಯವಾದ್ದೆಂದು ಮೈಸೂರು ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು ಭಾವಿಸುತ್ತಾರೆ. ಅದು ಯಾವದೆಂದರೆ,—

ಒಂದೇ ಕುಟುಂಬಕ್ಕೆ ಸೇರಿದ ಅನೇಕ ಜನಗಳ ಪೈಕಿ ಒಬ್ಬೊಬ್ಬರು ಪ್ರತ್ಯೇಕ ಪ್ರತ್ಯೇಕವಾಗಿ ಧೂರ ಫಾಸಲೆಯಲ್ಲಿ ನಡೆಯುವ ಕಾಮಗಾರಿಗಳ ಬಳಿಗೆ ಹೋಗೋಣದರಿಂದ ಸಂಭವಿಸುವ ಕುಟುಂಬ ಛಿದ್ರವನ್ನು ತಪ್ಪಿಸತಕ್ಕದ್ದು ನಮ್ಮ ಮುಖ್ಯ ಉದ್ದೇಶ್ಯವಾಗಿರುವದು. ಜನಗಳು ವಾಸವಾಗಿರುವ ಪ್ರತಿ ಗ್ರಾಮದ ಸವಿಸಾಪದಲ್ಲಿಯೂ ಅನುಕೂಲವಾದ ಕಾಮಗಾರಿ ಕೆಲಸವೆಂದರೆ, ಕೆರೆಗಳ ಅಭಿವೃದ್ಧಿ, ಬಾವಿಗಳು, ಗ್ರಾಮದ ರಸ್ತೆಗಳು, ಗ್ರಾಮ ಪಾಕೀಜಾ, ಹೊಲಗಳ ಅಗಿದು ಕಳೆ ತೆಗದು ಹಾಕುವದು, ಸಂಗುವಳಿ ಕಟ್ಟೆಗಳನ್ನು ಕಟ್ಟುವದು ಈ ಮುಂತಾದ ಇದೇ ತರಹಾದ ಇತರ ಕೆಲಸಗಳನ್ನು ತೊಂದರೆ ಇಲ್ಲದೆ ಏರ್ಪಾಡು ಮಾಡಬಹುದು. ಈ ತರಹಾದ ಕಾಮಗಾರಿಯಮೇಲೆ ಜನರು ಕೆಲಸಮಾಡಲು ಏರ್ಪಾಡು ಮಾಡೋಣದರಿಂದ ಅವರು ಪ್ರತಿದಿನದ ಕೆಲಸವು ಪೂರೈಸಿದಕೂಡ್ಲೆ ಅವರವರ ಮನೆಗಳಿಗೆ ವಾಪಸ್ ಹೋಗುವದಕ್ಕೆ ಅನುಕೂಲವಾಗಿ, ಇದರ ದೆಸೆಯಿಂದ ಗ್ರಾಮಗಳಲ್ಲಿ ಪರಸ್ಪರ ಸಹಾಯ ಮಾಡತಕ್ಕ ಏರ್ಪಾಡುಗಳನ್ನು ಪ್ರೋರ್ಜಿತ ಪಡಿಸುವದಕ್ಕೆ ಸಾಧಕವಾಗಿರುವದು. ಮುರುವಿನಲ್ಲಿ ರಿಲೀಫ್ ಕಾಮಗಾರಿಗಳ ಬಳಿಗೆ ಹೋಗುವಬಗ್ಗೆ ಜನಗಳನ್ನು ಪ್ರೇರೇಪಿಸುವದಕ್ಕೆ ಮೇಲ್ಕಂಡ ತರಹೇದ ಕಾಮಗಾರಿಗಳನ್ನು ಜಾಗ್ರತೆಯಾಗಿ ಶುರು ಮಾಡತಕ್ಕದ್ದು ಬಹಳ ಅವಶ್ಯವು. ಕ್ಷಾಮ ಪ್ರಾರಂಭಕಾಲದಲ್ಲಿ ಜನಗಳು ಧೂರ ಫಾಸಲೆಯಲ್ಲಿ ನಡೆಯುವ ಕಾಮಗಾರಿ ಬಳಿಗೆ ಹೋಗಿ ಕೆಲಸಮಾಡುವದಕ್ಕಿಂತ ತಮ್ಮ ಮನೆಗಳಲ್ಲಿಯೇ ಇದ್ದುಕೊಂಡು ಅನಾರೋಗ್ಯಕರವಾದ ಅಲ್ಪ ಆಹಾರದಮೇಲೆ ಜೀವಿಸುವದಕ್ಕೆ ಇಚ್ಛೈಸುತ್ತಾರೆ. ಈ ತರಹೇದ ಆಹಾರವೂ ಕೂಡಾ ದೊರಕುವದು ಪ್ರಯಾಸವಾಗಿ ದೇಹವು ಕೃಶವಾಗಲು ಪ್ರಾರಂಭವಾದಮೇಲೆ ಉದ್ಯೋಗ ಅಥವಾ ಆಹಾರಾರ್ಥವಾಗಿ ತಮ್ಮ ಮನೆಗಳ ಬಿಟ್ಟು ಕಳೆದ ಕ್ಷಾಮದಲ್ಲಿ ವಿಶೇಷವಾದ ವಿಪತ್ತಿಗೆ ಕಾರಣವಾದ ಉದ್ದಿಶ್ಯರಹಿತವಾದ ಸಂಚಾರಕ್ಕೆ ಪ್ರವರ್ತಿಸುತ್ತಾರೆ. ಆದಕಾರಣ ಕ್ಷಾಮ ನಿವಾರಣೀಯವಾದ ಕಾಮಗಾರಿಗಳನ್ನು ಏರ್ಪಾಡು ಮಾಡುವವರಲ್ಲಿ ಜನಗಳು ತಮ್ಮ ಮನೆಗಳ ಸಮೀಪದಲ್ಲಿ ಕೆಲಸ ಮಾಡತಕ್ಕದ್ದಕ್ಕೆ ಅನುಕೂಲವಾದ ಕಾಮಗಾರಿಗಳನ್ನು ಚುನಾಯಿಸುವಂತ ಏರ್ಪಾಡು ಮಾಡಿರುತ್ತೆ.

ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ವಿಶೇಷವಾಗಿ ಕಷ್ಟ ಸಂಭವಿಸಬಹುದಾದ ಪ್ರದೇಶಗಳಲ್ಲಿ ಅತರಾಫ್ ೩ ಮೈಲಿಗಳೊಳಗೆ ಯಾವ ಗ್ರಾಮಕ್ಕೂ ಬಿಡದಹಾಗೆ ಅನುಕೂಲವಾದ ಕಾಮಗಾರಿಗಳು ಇರುವಂತೆ ಯೇರ್ಪಾಡುಮಾಡಿ ಪ್ಲಾನ್‌ಗಳನ್ನು ತಯಾರುಮಾಡಿಯಿದೆ. ಇದೇರೀತಿಯಾಗಿ ಮಳೆ ಬೆಳೆ ಸರಿಯಾಗಿ ನಡೆಸದೆ ಕಷ್ಟ ಸಂಭವಿಸಬಹುದಾದ ಯೆಲ್ಲಾ ಪ್ರಾಂತ್ಯಗಳಿಗೂ ಯೇರ್ಪಾಡು ಮಾಡಬೇಕೆಂಬ ಆಲೋಚನೆ ಇರುತ್ತೆ.

ಸಿವಿಲ್ ಆಫಿಸರ್‌ಗಳ ಮೇಲ್ವಿಚಾರಣೆಗೆ ಒಳಪಟ್ಟು ಕೃಷಿಯಿಂದ ಜೀವನ ಮಾಡತಕ್ಕವರಿಗೆ ಯೋಗ್ಯವಾದ ಮೇಲ್ಕಂಡ ಕಾಮಗಾರಿಗಳ ವಿನಾಯಿ ಸಾಧಾರಣವಾಗಿ ಯಾವಾಗಲು ಕೂಲಿಯಿಂದಲೇ ಜೀವನ ಮಾಡತಕ್ಕ ಜನಗಳಿಗೋಸ್ಕರ ಪಬ್ಲಿಕ್ ವರ್ಕ್ಸ್ ಇಲಾಖೆ ಆಫಿಸರ್‌ಗಳ ವಿಚಾರಣೆಗೆ ಒಳಪಟ್ಟು ಜರಗತಕ್ಕ ಕಾಮಗಾರಿಗಳನ್ನು ಆವಶ್ಯಕ ಬಿದ್ದಾಗ ಶುರು ಮಾಡುವದಕ್ಕು ಸಹ ಏರ್ಪಾಡು ಮಾಡಿತ್ತು. ಈ ಏರ್ಪಾಡಿನ ಖರ್ಚಿನಬಗ್ಗೆ ಹುಂಗಾಮಿಯಾಗಿ ೨೪ ಲಕ್ಷ ರೂಪಾಯಿಗಳು ಆ ಇಲಾಖೆಗೆ ಜಾಸ್ತಿಯಾಗಿ ಕೊಡಲ್ಪಟ್ಟರು. ಈ ಏರ್ಪಾಡಿನಲ್ಲಿ ಕೂಲಿ ಮತ್ತು ವ್ಯವಸಾಯದ ಜನಗಳು ಕೂಡ ತಮ್ಮ ಮನೆ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಾ ಸುಲಭವಾಗಿ ಹೋಗಿ ಕೆಲಸ ಮಾಡಬಹುದಾದ ಅನೇಕ ಕೆರೆ ಕಾಮಗಾರಿಗಳು ಕೆಲವು ಉಪಯೋಗವಾದ ಹೊಸ ರಸ್ತೆಗಳು ಹಳೇರಸ್ತೆ ಅಭಿವೃದ್ಧಿ ವಗೈರೆ ಕೆಲಸಗಳು ಸೇರಿಯವೆ. ಅನೇಕ ಪ್ರದೇಶಗಳಲ್ಲಿ ವಿಶೇಷವಾದ ಕಷ್ಟ ಸಂಭವಿಸುವ ಪಕ್ಷದಲ್ಲಿ ಮೇಲ್ಕಂಡ ಕಾಮಗಾರಿ ಕೆಲಸಗಳು ಸರ್ವಥಾ ಸಾಕಾಗುತ್ತಿರಲಿಲ್ಲವು. ಆದರೆ ಸನ್ ೧೮೭೬ನೇ ಇಸವಿಯಿಂದ ೭೮ನೇ ಇಸವಿಯ ವರಿಗೆ ಪ್ರಾಪ್ತವಾಗಿದ್ದ ಕ್ಷಾಮದಷ್ಟು ಕ್ರೂರವಾದ ವಿಪತ್ತು ಬರುತದೆಂದು ಎಂದಿಗೂ ಯೋಚಿಸಿ ಇರಲಿಲ್ಲವು. ಸಂಭವಿಸಬಹುದೆಂದು ಯೋಚಿಸಿ ಇದ್ದ ಕಷ್ಟನಿವಾರಣೆಗಾಗಿ ಸಿದ್ಧವಾಗಿ ಇಟ್ಟುಕೊಂಡಿದ್ದ ಕಾಮಗಾರಿಗಳು ಸಾಕಾಗಿದ್ದವು. ಜಮೀನುಗಳಿದ್ದ ಜನಗಳಿಗೂ ಮತ್ತು ವ್ಯವಸಾಯದ ಕೂಲಿಗಳಿಗೂ ಬೇಕಾದಷ್ಟು ಕೆಲಸವು ಈ ಕಾಮಗಾರಿಗಳಲ್ಲಿ ದೊರಕುವದಕ್ಕೆ ಸಾಧ್ಯವಿತ್ತಲ್ಲದೆ, ವಿಶೇಷ ಖರ್ಚಿಗೆ ಆಸ್ಪದವಿಲ್ಲದೆ ಸರಕಾರಕ್ಕೆ ಆದಾಯಕರವಾಗಿಯೂ ಇದ್ದವು. ಪ್ರಬಲವಾದ ಕ್ಷಾಮವು ಪುನಃ ಪ್ರಾಪ್ತವಾದಲ್ಲಿ ಬಹಳ ದಿವಸಗಳಿಂದ ಚರ್ಚೆಯಲ್ಲಿರುವ ಮಾರಿಕಣಿವೆ ಭಾರೀ ತಲಾವು ಮತ್ತು ಅದರ ನಾಲೆಗಳ ಕಾಮಗಾರಿಯನ್ನೂ ರೈಲ್ವೆ ಕಾಮಗಾರಿಯನ್ನೂ ಶುರುಮಾಡಿದಹೊರ್ತು ಪಬ್ಲಿಕ್ ವರ್ಕ್ಸ್ ಇಲಾಖೆಮೂಲಕ ನಡೆಸತಕ್ಕ ಇತರ ಭಾರಿ ಕಾಮಗಾರಿಗಳು ಸಿಕ್ಕುವದು ಪ್ರಯಾಸವಾಗಿ ಇದೆ. ಆದರೆ ಮೇಲೆ ಹೇಳಿರುವ ಪ್ರಕಾರ ಕಾಲಸ್ಥಿತಿಯು ಬಹಳ ಅನುಕೂಲವಾಗುತ್ತಲಿದೆ. ಕೆಲವು ದಿವಸಗಳ ಕೆಳಗೆ ಬಹಳ ಬರಕ್ಕೆ ಕಾರಣವಾಗಿದ್ದ ತಾಲ್ಲೂಕುಗಳಲ್ಲೆಲ್ಲಾ ಈಚೆಗೆ ವಿಶೇಷವಾದ ಮಳೆಯು ಬಿದ್ದು ಕೆರೆಗಳು ಸ್ವಲ್ಪ ತುಂಬಿ ಒಣಗುತ್ತಿದ್ದ ಫಸಲು ಬದುಕಿತು. ಆದ್ದರಿಂದ ಕಷ್ಟನಿವಾರಣೀಯಗಳಾದ ಏರ್ಪಾಡುಗಳು ದೈವಕೃಪೆಯಿಂದ ಸದ್ಯಕ್ಕೆ ಬುಧ್ಯಾಂಗವಾಗಿ ಆವಶ್ಯವಿಲ್ಲದಹಾಗೆ ಆದ್ದಕ್ಕೆ ಸಂತೋಷಿಸಬೇಕಾಗಿದೆ.

ಸನ್ನಿಹಿತವಾದ ಕ್ಷಾಮದಿಂದ ತಪ್ಪಿಸಿಕೊಂಡದ್ದಕ್ಕಾಗಿ ದೇಶಕ್ಕೇನ ಶುಭೋದಯವನ್ನು ಸೂಚಿಸುವ ಕಾಲದಲ್ಲಿ ಈ ಸಂಕಟವನ್ನು ಕಳೆದುಕೊಳ್ಳುವದಕ್ಕೆ ಮಾಡೋಣಾದ ಏರ್ಪಾಡುಗಳಲ್ಲಿ ನಮಗೆ ವಿಶೇಷವಾದ ಸಲಹೆಯೂ ಪತ್ಯಾಕೆಯೂ ಬ್ರಿಟಿಷ್ ರೆಸಿಡೆಂಟರಾದ ಮೆ॥ ಗರ್ಡ್‌ಲೆಸ್ಟನ್ ಸಾಹೇಬರವರಿಂದ ದೊರೆತವೆಂದು ಹೇಳುವದು ನಮ್ಮ ಸುಕೃತವಾಗಿ ಇತ್ತೆಂದು ಹೇಳುವದಕ್ಕೆ ನಾವು ತಪ್ಪಬಾರದು. ರಿಲೀಫ್ ಏರ್ಪಾಡಿನ ವಿಚಾರದಲ್ಲಿ ಅವರು ತೋರಪಡಿಸಿದ ಜಾಗರೂಕವಾದ ಉತ್ಸಾಹವು ನಮಗೆ ಬಲವನ್ನು ಉಂಟುಮಾಡಿದ್ದಲ್ಲದೆ ನಮ್ಮ ಆಫೀಸರ್‌ಗಳಿಗೆ ಧೈರ್ಯವನ್ನೂ ಕೊಟ್ಟಿತು. ಈಗ ತಾನೇ ಕಳೆದುಹೋದ ವಿಶೇಷವಾಗಿ ಆಲೋಚನೆಗೆ ಅವಕಾಶ ಉಂಟುಮಾಡಿದ್ದ ಕಾಲದಲ್ಲಿ ಈ ಸಾಹೇಬ ಮಹಶೂರರಿಂದ ಹೊಂದಿದ ಮನಃಪೂರ್ವಕವಾದ ಸಾಹಾಯ್ಯವನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಈ ಸಮಯವನ್ನು ಅವಲಂಬಿಸುತ್ತೇವೆ. ಮತ್ತು ನಮ್ಮ ಡಿಸ್ಟ್ರಿಕ್ಟ್ ಆಫಿಸರರು ದೇಶದ ಸ್ಥಿತಿಯನ್ನು ಜಾಗರೂಕತೆಯಿಂದ ನಿಗೇಯಲ್ಲಿ ಇಟ್ಟುಕೊಂಡು ಜರೂರು ಬಿದ್ದಾಗ ಕಾರ್ಯಗಳನ್ನು ನಡೆಸುವದಕ್ಕೆ ಕ್ಲಾಫುಸಲು ಅರ್ಹರಾಗಿ ಸಿದ್ಧರಾಗಿದ್ದರು. ಶಿವಾಯಿ ನಮ್ಮ ಚೀಫ್ ಸೆಕ್ರೆಟರಿಯವರಾದ ಮಿಸ್ಟರ್ ಆರ್. ವಿಜಯೇಂದ್ರರಾಯರವರಿಂದ ರಿಲೀಫ್ ವಿಚಾರದಲ್ಲಿ ನಾವು ಬಹಳ ಉತ್ತಮವಾದ ಸಹಾಯವನ್ನು ಹೊಂದಿದೇವೆ, ಮತ್ತು ಅವರಿಗೆ ಇದ್ದ ಬಹಳ ಅಲ್ಪ ವ್ಯವಧಾನದಲ್ಲಿ ಇಂಜನೀರ್ ಇಲಾಖಾ ಮಾರ್ಫತ್ ನಡೆಯತಕ್ಕ ಕಾಮಗಾರಿಗಳ ಏರ್ಪಾಡನ್ನು ಪಬ್ಲಿಕ್ ವರ್ಕ್ಸ್ ಸೆಕ್ರೆಟರಿ ಮೇಜರ್ ಬರ್ನ್ ಸಾಹೇಬರು ಪೂರೈಸುವದರ ಮೂಲಕ ನಮಗೆ ಬಹಳ ಸಹಾಯವನ್ನು ಮಾಡಿರುತ್ತಾರೆ.

ಇರ್ರಿಗೇಷನ್ ಕಾಮಗಾರಿಗಳು. ಸಾಧಾರಣ ಕಾಲಗಳಲ್ಲಿ ದೇಶದ ಕ್ಷೇಮಲಾಭಕ್ಕೆ ಎಷ್ಟು ಅತ್ಯಂತ ಸಂಬಂಧಪಟ್ಟದ್ದಾಗಿದೆಯೋ ತದ್ವತ್ ಯಥಾಕ್ರಮವಾಗಿ ಮಳೆಬಾರದೆ ಹೋದಕಾಲಗಳಲ್ಲಿಯೂ ಉಂಟಾಗುವ ಕೇಡನ್ನು ಹೋಗಲಾಡಿಸುವದಕ್ಕೆ ಹಾಗೆಯೇ ಸಂಬಂಧಪಟ್ಟದ್ದಾಗಿರುವ ಇರ್ರಿಗೇಷನ್‌ಯಾನೆ ನೀರಿನ ಸರಬರಾಯಿವು ದ್ವಿತ್ವ ಆಗಬೇಕಾದ ಕಾಮಗಾರಿಗಳ ವಿಷಯವನ್ನು ಇಲ್ಲಿ ಪ್ರಸಕ್ತಿಮಾಡುತ್ತೇವೆ. ಕಳೆದ ಮಹಾಕ್ಷಾಮಕ್ಕೆ ಪೂರ್ವ ಮತ್ತು ಅನಂತರ ಸೀಮೆಯಲ್ಲಿರುವ ಕೆರೆಗಳಿಗೂ ಕಾಲುವೆಗಳಿಗೂ ಏನು ಕಾಮಗಾರಿಗಳು ಮಾಡಲ್ಪಟ್ಟವೋ ಅವುಗಳನ್ನು ಸಂಕ್ಷೇಪವಾಗಿ ಮಾಡಲು ಉದಹರಿಸಿ ನಂತರ ಇತುವರ ಆಚರಿಸತಕ್ಕ ಪದ್ಧತಿಯನ್ನು ಚರ್ಚಿಸುತ್ತೇವೆ.

೧೮೬೨—೬೩ನೇ ಇಸವಿ ಲಾಗಾಯತು ೧೮೭೫—೭೬ನೇ ಇಸವಿ ವರಿಗೂ ಇರ್ರಿಗೇಷನಿಗಾಗಿ ಒಟ್ಟು ಖರ್ಚಾದದ್ದು ೨೦,೬೩,೫೪೪ ರೂಪಾಯಿ ಈ ಪೈಕಿ ೧೧,೩೨,೪೭೫ ರೂಪಾಯಿ ಒರಿಜನಲ್ ವರ್ಕ್ಸ್‌ಯಾನೆ ಹೊಸ ಕಾಮಗಾರಿಗಳು ಅಂದರೆ ಪಾಳುಬಿದ್ದಿದ್ದ ಕೆರೆಗಳನ್ನು ಪುನಃ ಕಟ್ಟೋಣವು ಸಂಗಡ, ಸಮೂಲವಾಗಿ ಅಭಿವೃದ್ಧಿಮಾಡಿ ಬಹಾಲುಮಾಡೋಣ ಇವುಗಳಿಗೂ ಬಾಕಿ ೮,೩೫,೦೬೯ ರೂ॥ ರಿಪೇರಿಗಾಗಿಯಂದರೆ ಗಾಪ್ ಬಹಾಲ್ ಮುಚ್ಚುವ ಆಗುತ್ತಿರುವವುಗಳನ್ನು ಒಳ್ಳೇ ಸ್ಥಿತಿಯಲ್ಲಿ ಕಾಪಾಡೋಣ ಇವಕ್ಕೂ ಖರ್ಚಾಯಿತು. ಇವನ್ನು ಲೆಕ್ಕಮಾಡಿದರೆ ಈ ೫ ವರುಷಗಳಲ್ಲಿ ಪ್ರತಿ ೧ ವರುಷಕ್ಕೆ ಈ ಬಗೆಯ ಕಾಮಗಾರಿಗಳಿಗೂ ಸರಾಸರಿ ಮೊತ್ತಾಗಿ ೪,೦೦,೦೦೦ ರೂಪಾಯಿಗಳಾಗುತ್ತೆ. ನಾವು ಕ್ಷಾಮಕಾಲವೆಂದು ಹೇಳುವ ೧೮೭೬-೭೭, ೧೮೭೭-೭೮, ೧೮೭೮-೭೯ ಈ ವರುಷಗಳಲ್ಲಿ ವಿಶೇಷವಾಗಿ ಬಹಳ ಉಪಯೋಗವಾದ ಕಾಮಗಾರಿಗಳು ನಡೆದವು ಆದರೆ ಈ ಖರ್ಚು ಎಷ್ಟು ಮಾನ್ಯವಾದುದಾದ್ದು ಮತ್ತು ಅದರ ಪ್ರಧಾನೋದ್ದೇಶವು ಜನಗಳ ಸಂಕಟವನ್ನು ಪರಿಹಾರಮಾಡುವದಕ್ಕೂ ಯತ್ಕಿಂಚಿತ ಈ ಕಾಮಗಾರಿಗಳಿಂದ ಉಂಟಾಗಬಹುದಾದ ಪ್ರಯೋಜನಕ್ಕೂ ಸಹ ಆಗಿಯಿತ್ತು. ಆದ್ದರಿಂದ ಈ ವರುಷಗಳ ಪ್ರಸಕ್ತಿ ಇಲ್ಲಿಗೆ ಬಿಡುತ್ತೇವೆ ೧೮೭೯—೮೦ನೇ ಇಸವಿಯಿಂದ ೧೮೮೪—೮೫ನೇ ಇಸವಿ ವರಿಗೂ ಈ ೬ ಸಂವತ್ಸರಗಳಲ್ಲಿ ಇರ್ರಿಗೇಷನ್‌ಗಾಗಿ ೧೮,೫೩,೬೬೮ ರೂ॥ ಖರ್ಚಾಗಿದೆ ಸರಾಸರಿ ಸಾಲ್ ೧ಕ್ಕೆ ಸುಮಾರು ೩ ಲಕ್ಷವಾಗುತ್ತೆ. ಇಂಥಾದಾಗ್ಯೂ ಇಂತಾ ಕಾಮಗಾರಿಗಳಿಗೆ ಮೇಲ್ಕಂಡ ೬ ವರುಷಗಳಲ್ಲಿ ಆದ ಸರಾಸರಿ ಖರ್ಚು ೧೮೬೨ನೇ ಇಸವಿ ಲಾಗಾಯತು ೫ ವರುಷಗಳಲ್ಲಿ ಆದ ಖರ್ಚಿಗಿಂತ ಕಮ್ಮಿಆಗಿದೆ ಇದರಿಂದ ಇರ್ರಿಗೇಷನನ್ನು ಅಂದರೆ ನೀರಿನ ಸರಬರಾಯಿ ಉದಾಸೀನ ಮಾಡಿತೆಂದು ಯೆಣಿಸಲಾಗದು. ದೇಶವನ್ನು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿಬಿಟ್ಟದ್ದರಿಂದಲೂ ಮತ್ತು ಕ್ಷಾಮದಿಂದ ಉಂಟಾದ ಅನರ್ಥಗಳಿಂದಲೂ ಪೂರ್ವದಲ್ಲಿ ಕಾಲ್‌ಕೆರೆಗಳ ಮರಸ್ತಿಗಾಗಿ ಇಟ್ಟಿದ್ದ ಚಾರಿಸಿಬ್ಬಂದಿಯನ್ನು ಕೋತಾಮಾಡಿದ್ದರಿಂದಲೂ ಸಹ ಖರ್ಚು ಕಮ್ಮಿಆಯಿತಲ್ಲದೆ ಇದರಿಂದ ಈಚಿನವರುಷಗಳಲ್ಲಿ ಬಹುಶಃ ದೇಶದ ಹುಟ್ಟುವಳಿಪೈಕಿ ಸಿಲ್ಕು ಮೊಬಲಗು ವಿಶಿಷ್ಟವು ವಿವೇಕವಾಗಿ ರೈಲ್ ರಸ್ತೆಗಳನ್ನು ತ್ವರಿತವಾಗಿ ಪೂರೈಸುವದಕ್ಕೇ ಉಪಯೋಗಿಸಲ್ಪಟ್ಟಿತು. ಈ ರೈಲ್ವೆರಸ್ತೆಗಳನ್ನು ಮುಂದಕ್ಕೆ ಪೂರೈಸುವಬಾಬವು ತ್ವರ್ಯದಲ್ಲೇ ಮೇಲೆ ಸೂಚಿಸಲ್ಪಟ್ಟಂತೆ ಬಹಳ ಅನುಕೂಲವಾದ ಪರತುಗಳೊಡನೆ ನಮ್ಮ ಕೈಬಿಟ್ಟುಹೋಗುತ್ತೆ. ಅದರಿಂದ ಆ ಬಾಬಿನ ಖರ್ಚಿಗೆ ದ್ರವ್ಯ ಒದಗಿಸಬೇಕಾದ ಅವಶ್ಯವಿರುವದಿಲ್ಲ. ಇದರಿಂದ ಇರ್ರಿಗೇಷನ್ ಕಾಮಗಾರಿಗಳಿಗೆ ಚೆನ್ನಾಗಿ ಗಮನಕೊಡುವದಕ್ಕೂ ಮತ್ತು ಅಧಿಕವಾ ವ್ಯಯಮಾಡುವದಕ್ಕೂ ಶಕ್ತಿ ಪ್ರಾಪ್ತವಾದೀತೆಂದು ತೋರಿಯಿದೆ.

ಕೆರೆಗಳಅಂಕ. ಕಳೆದಸಂವತ್ಸರದಲ್ಲಿ ಕೆರೆಗಳ ದುರಸ್ತಿವಿಷಯದಲ್ಲಿ ಆಲೋಚಿಸಿದ್ದ ಏರ್ಪಾಡಿನ ಕ್ರಮವನ್ನು ಸಂಕ್ಷೇಪವಾಗಿ ತಿಳಿಸಿ ಇದ್ದೆವಷ್ಟೆ. ಆ ಏರ್ಪಾಡಿನ ಪ್ರಕಾರ ೫೦೦ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಾದ ಹುಟ್ಟುವಳಿ ಇರತಕ್ಕ ಎಲ್ಲಾ ಕೆರೆಗಳ ವಿಷಯಕವಾದ ಸಂಪೂರ್ಣ ಜವಾಬುದಾರಿಯನ್ನು ಪಬ್ಲಿಕ್‌ವರ್ಕ್ಸ್‌ಯಾನೆ ಮರಮ್ಮತ್ ಇಲಾಖೆಗೆ ವಹಿಸಬೇಕೆಂದೂ, ಈಗ ಇರತಕ್ಕ ಮರಮ್ಮತ್ ಇಲಾಖೆಯು ಸ್ವಲ್ಪ ಸಿಬ್ಬಂದಿಮೂಲಕ ಈಕೆರೆಗಳ ಮರಸ್ತು ಮತ್ತು ಅಭಿವೃದ್ಧಿಕೆಲಸವು ಸುಲಭವಾಗಿ ನಡಿಸಲ್ಪಡಬಹುದೆಂದೂ ೫೦೦ ರೂ॥ ಕಮ್ಮಿ ಹುಟ್ಟುವಳಿ ಆಗತಕ್ಕ ಕೆರೆಗಳ ದುರಸ್ತಿಯು ರೆವಿನ್ಯು ಆಫೀಸರುಗಳ ಮೇಲ್ವಿಚಾರಣೆಗೆ ಒಳಪಟ್ಟು ರೈತರಿಗೆ ಸೇರಿದ್ದೆಂದೂ ಹಾಲಿ ನಾಮರಸ್ತಿಯಲ್ಲಿ ಇರತಕ್ಕ ಹಳೆ ಕೆರೆಗಳನ್ನು ಸ್ವಂತ ಲಾಗುವಡಿಯಿಂದ ದುರಸ್ತುಮಾಡಲು ಜನಗಳಿಗೆ ರಿಯಾಯಿತಿ ತೋರಿಸೋಣದರಮೂಲಕ ಪ್ರೋತ್ಸಾಹಪಡಿಸಬೇಕೆಂದೂ ಯೋಚಿಸಿಯಿತ್ತು. ಆದರೆ ಈ ಏರ್ಪಾಡನ್ನು ಜಾರಿಯಲ್ಲಿ ತರುವದರಲ್ಲಿ ಅನೇಕ ತೊಂದರೆಗಳು ಇರುತ್ತಲ್ಲದೆ ಪಬ್ಲಿಕ್‌ವರ್ಕ್ಸ್ ಇಲಾಖೆಯು ಮತ್ತು ರೈತರ ಪರಾಮರಿಕೆಯ ವಿಷಯದಲ್ಲಿ ಸ್ಪಷ್ಟವಾದ ಭೇದಗಳನ್ನು ಗೊತ್ತುಮಾಡುವದಕ್ಕೆ ಬಾಬ್ತಿನಲ್ಲಿ ಅನುಭವಶಾಲಿಗಳು ಭಿನ್ನಾಭಿಪ್ರಾಯಪಡುತ್ತಾರೆ. ಈ ವಿಷಯವು ಯಾವದಾದರೂ ಒಂದು ಮಾರ್ಗದಲ್ಲಿ ತೀರ್ಮಾನವಾಗತಕ್ಕದ್ದು ಬಹಳ ಅವಶ್ಯವಾಗಿ ಇರುವದರಿಂದ ಪ್ರಥಮತಃ ಪ್ರತಿ ಡಿಸ್ಟ್ರಿಕ್ಟಿನಲ್ಲಿಯು ಒಂದೊಂದು ತಾಲ್ಲೂಕಿನಲ್ಲಿ ೫೦೦ ರೂಪಾಯಿಗಳ ಪದ್ಧನ್ನು ಜಾರೀಮಾಡಿ ನೋಡಲು ಸಾಧ್ಯವೋ ಅಥವಾ ಇಲ್ಲವೋ ಎಂಬ ಅಂಶವನ್ನು ಪರೀಕ್ಷಿಸಲು ಮೈಸೂರು ಸರಕಾರದವರು ತೀರ್ಮಾನಿಸಿರುತ್ತಾರೆ. ಇಂತಾ ತಾಲ್ಲೂಕುಗಳಲ್ಲಿ ೫೦೦ ರೂಪಾಯಿಗಳಗಿಂತ ಕಮ್ಮಿ ಹುಟ್ಟುವಳಿ ಆಗತಕ್ಕ ಕೆರೆಗಳವಿಷಯದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯವರ ಜವಾಬ್ದಾರಿಯು ಸಂಪೂರ್ಣವಾಗಿ ತಪ್ಪಿಸಲ್ಪಡುವದು ಆದರೆ ರೈತರಿಂದ ಸಾಧ್ಯವಲ್ಲದ ಪತ್ತರ ಮತ್ತು ಗಚ್ಚು ಕಾಮಗಾರಿಗಳಾಗಬೇಕಾದ ತೂಬು ಕೋಡಿ, ವೃದ್ಧಿ ವಗೈರೆ ಕೆಲಸಗಳಿಗೆ ರೆವಿನ್ಯೂ ಅಧಿಕಾರಸ್ಥರು ಇಂಜನಿಯರುಗಳ ಸಹಾಯವನ್ನು ಅಪೇಕ್ಷಿಸಬಹುದು. ಶಿವಾಯಿ ರೈತರಿಗೆ ಅಭ್ಯಾಸವಿಲ್ಲದ ಮತ್ತು ಯಾವಾಗಲು ಪದ್ಧತಿಯಿಂದಲೇ ಮಾಡಲ್ಪಡುವ ಈ ಕೆರೆಗಳ ಕಲ್ಲು ಕಟ್ಟಡಗಳನ್ನು ರೈತರಿಂದ ಮಾಡಿಸುವದು ಯುಕ್ತವಲ್ಲವಾದ್ದರಿಂದ ಈತರಹೇದ ಕಾಮಗಾರಿಗಳನ್ನು ಮಾಡಿಸುವದಕ್ಕಾಗಿ ಡೆಪ್ಯುಟಿ ಕಮಿಷನರುಗಳಿಗೆ ಬೇಕಾದಷ್ಟು ಹಣವನ್ನು ಸರ್ಕಾರದಿಂದ ಕೊಡುತ್ತೆ.† ಈಪ್ರಕಾರ ಪರೀಕ್ಷಾರ್ಥವಾಗಿ ಮಾಡೋಣವರಲ್ಲಿ ಮೇಲೆ ಹೇಳಲ್ಪಟ್ಟ ಏರ್ಪಾಡು ಸಾಧ್ಯವೋ ಅಥವಾ ಅಸಾಧ್ಯವೋ ಎಂಬ ಅಂಶವು ಸ್ಪಷ್ಟವಾಗಿ ಗೊತ್ತಾಗುತ್ತೆ. ಕೆಲವು ಕಾಲಾನಂತರ ಮೇಲ್ಕಂಡ ಏರ್ಪಾಡಿನಿಂದ ಉಂಟಾಗುವ ಫಲಿತಾರ್ಥವನ್ನು ತಿಳಿದುಕೊಂಡು ನಂತರ ಯಾವ ಏರ್ಪಾಡನ್ನು ಎಷ್ಟರಮಟ್ಟಿಗೆ ಇನ್ನು ಮುಂದೆ ಜಾರೀಗೆ ತರಬೇಕೆಂಬುವದನ್ನು ಸರ್ಕಾರದವರು ತೀರ್ಮಾನಿಸುವರು. ಈಗ ಪ್ರಥಮವಾಗಿ ಜಾರಿಯಲ್ಲಿ ತರಬೇಕೆಂದಿರುವ ಮೇಲ್ಕಂಡ ಏರ್ಪಾಡುಮುಲ್ಕೀ ಮತ್ತು ಮರಮ್ಮತಿ ಇಲಾಖಾ ಅಧಿಕಾರಿಗಳು ಸುಹೃದಯದಿಂದ ಒಬ್ಬರಿಗೊಬ್ಬರು ಸಹಾಯಮಾಡುವದರಮೂಲಕ ತೃಪ್ತಿಕರವಾಗಿ ನಡೆಸಿ ಪ್ರದೇಶದಲ್ಲೇ ಇದೇ ಪ್ರಕಾರಕ್ಕೆ ಎಲ್ಲಾಕಡೆಯಲ್ಲಿಯು ಜಾರಿಯಲ್ಲಿತರುವದಕ್ಕೆ ಗವರ್ನಮೆಂಟಿನವರಿಗೆ ಸಾಧ್ಯವಾದೀತೆಂದು ನಂಬುತ್ತೇವೆ.

BANGALORE:—Printed and published for the Proprietor, at the KARNATIC PRESS.—1885

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧನ್ಯುವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದಿಶಾಸುಪರಿದೃಷ್ಟಾತಾದಿಶತಿಮಾನಸಂಸಂಮುದಂ ॥

Vol. XII.] BANGALORE—MONDAY, NOVEMBER 23, 1885 [No. 47.

ಸಂಪುಟ ೧೨.] ಬೆಂಗಳೂರು:—ಸನ್ ೧೮೮೫ನೇ ಇಸವಿ ನವಂಬರ್ ೨೩ನೇ ತಾರೀಖ್ ಸೋಮವಾರ. [ಸಂಚಿಕೆ ೪೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷು ಮತ್ತು ಕನ್ನಡ ಶೀರ್ಷಿಕೆಗಳ್ಳುಳ್ಳ [illegible] ವರುಷ ೧ಕ್ಕೆ	.. ..	೧೨—೮—೦
ಇಂಗ್ಲೀಷು ಮಾತ್ರ ಶೀರ್ಷಿಕೆಗಳ್ಳುಳ್ಳ [illegible] ೧ಕ್ಕೆ	.. ...	೬—೦—೦
ಕನ್ನಡ ಮಾತ್ರ ಶೀರ್ಷಿಕೆಗಳ್ಳುಳ್ಳ [illegible] ವರುಷ ೧ಕ್ಕೆ		೬—೦—೦
ಬಿಂಗ್ಲು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

ಷರಾ.—[illegible]

ಪ್ರಕಟನೆಯ ರಿವಾಜ್.

ಮೊದಲನೇದ ಹಾಜರ್	೧ಕ್ಕೆ	೦—೩—೦
ಮರಳ ನೇದ ಹಾಜರ್	೧ಕ್ಕೆ	೦—೧—೭

NOTICE TO SUBSCRIBERS.

[illegible]:—

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5-6-0

[illegible]

[illegible]	... ...	ರೂ॥ ೫—೦—೦
[illegible]		೦—೬—೦

[illegible], ಬೆಂಗಳೂರು.

ನೋಟೀಸ್.

[illegible]

ಕನ್ನಡ [illegible] ಸಂಸ್ಕೃತ ಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ಪ್ರತ್ಯಂತರಸಹಿತ)	...	೦—೩—೦
[illegible]		೦—೫—೦
[illegible]	...	೦—೪—೦
[illegible]	... ...	೦—೧೪—೦
[illegible]	...	೦—೬—೦
[illegible]	..	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible]	...	೦—೬—೦
[illegible]	...	೦—೪—೦
[illegible]	...	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೬—೬
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	... ...	೦—೨—೦
[illegible]	...	೦—೭—೯
ಇಂಗ್ಲೀಷು ಕನ್ನಡ ನಿಘಂಟು [illegible]		೧—೭—೮
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
೧ನೇ ಸಂಚಿಕೆ	...	೦—೮—೦
[illegible] ೩ನೇ ಸಂಚಿಕೆ		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	.. ...	೦—೩—೦
[illegible]	...	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೭—೬
[illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ವಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ್

ಈ ಪತ್ರಿಕೆಯನ್ನು ನಾವು ಮರಳಿ ಪ್ರಕಟಿಸಲು ಪ್ರಾರಂಭಿಸಿ ಕಳೆದ ಅಕ್ಟೋಬರ್ ಆಖೈರಿಗೆ ೧೨ ಸಂವತ್ಸರಗಳು ಪೂರ್ತಿಯಾದವು. ಈ ಹನ್ನೆರಡು ಸಂವತ್ಸರಗಳ ಕಾಲದಲ್ಲಿ ಪ್ರತಿ ಸಾಲಿನಲ್ಲೂ ಚಂದಾ ಬಾಕೀಗಳು ಬಹಳವಾಗಿ ಹೊರಗೆ ನಿಂತುಹೋಗುತ್ತ, ವಸೂಲಿಗೆ ಮಾರ್ಗವಿಲ್ಲದೆ ಅರ್ಥವಿನಿಯುಕ್ತವಾದ ಅನುಪಪತ್ತಿಗೆ ನಾವು ಗುರಿಯಾಗಬೇಕಾಗಿ ಬಂದದರಿಂದ, ಸನ್ ೧೮೮೬ನೇ ಇಸವಿ ಜನವರಿ ಲಾಗಾಯತು ಚಂದಾ ಮೊಬಲಗನ್ನು ಅಡ್ವಾನ್ಸ ಕೊಡತಕ್ಕ [illegible] ಈ ಪತ್ರಿಕೆಯನ್ನು [illegible]ದ್ದೆಂದು ನಿರ್ಣಯಿಸಿರುತ್ತೇವೆ. ಹಾಗೆ ಅಡ್ವಾನ್ಸ ಕಳುಹಿಸುವ ಚಂದಾದಾರರ ಸಂಖ್ಯೆಯೂ ಅವರಿಂದ ವಸೂಲಾಗುವ ಮೊಬಲಗೂ ಈ ಪತ್ರಿಕೆಯನ್ನು ಅರ್ಥವಿನಿಯುಕ್ತವಾದ ಅನುಪಪತ್ತಿ ಲೇಶವೂ ಇಲ್ಲದೆ ನಡೆಸುತ ಬರುವದಕ್ಕೆ ಸಾಕಾಗಿರುವದೇ ಎಂಬ ಅಂಶವನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಬೇಕಾಗಿರುವದರಿಂದ, ಮೇಲಿನ ನಮ್ಮ ಯೋಚನೆಯನ್ನು ಅನುಮೋದಿಸಿ ಪ್ರೋತ್ಸಾಹಿಸಲು ಅಭಿಮತವುಳ್ಳ ದೊಡ್ಡಮನುಷ್ಯರೆಲ್ಲರು ಈ ತಿಂಗಳ ೯ನೇ ತಾರೀಖ್ ಸೋಮವಾರದ ಪತ್ರಿಕೆಯೊಡನೆ ಕಳುಹಿಸಿರುವ ದರಖಾಸ್ತು ಫಾರಂನಲ್ಲಿ ರುಜು ಮಾಡಿ ಈ ತಿಂಗಳ ಆಖೈರೊಳಗಾಗಿ ನಮಗೆ ವಾಪಸು ಮಾಡಬೇಕೆಂದು ಕೋರುವೆವು. ಹೀಗೆ ಬರುವ ದರಖಾಸ್ತುಗಳ ಸಂಖ್ಯೆಯು ನಮ್ಮ ಉದ್ದೇಶಾನುಗುಣವಾಗಿ ಕಂಡುಬರುವ ಪಕ್ಷಕ್ಕೆ ನವಂಬರ್ ೩೦ನೇ ತಾರೀಖಿನ ಈ ಪತ್ರಿಕೆಯಲ್ಲಿ ನಾವು ಕೊಡುವ ಎರಡನೇ ನೋಟೀಸ್ ಅನುಸರಿಸಿ ಅವರವರು ತಮ್ಮ ತಮ್ಮ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕು. ಒಂದುವೇಳೆ ಇಂತಾ ದರಖಾಸ್ತುದಾರರ ಸಂಖ್ಯೆಯು ಸಾಲದ್ದಾಗಿ ಕಂಡುಬರುವ ಪಕ್ಷಕ್ಕೆ ಅದರಮೇಲಿನ ನಮ್ಮ ನಿರ್ಣಯವನ್ನು ಡಿಸಂಬರ್ ೭ನೇ ತಾರೀಖಿನ ಪತ್ರಿಕೆಯ ಮೂಲಕ ಪ್ರಕಟಪಡಿಸುವೆವು.

ಬೆಂಗಳೂರು, ೯ನೇ ನವಂಬರ್ ೧೮೮೫. } ಟಿ. ಶ್ರೀನಿವಾಸಾಚಾರ್ಯ, ಪ್ರೊಪ್ರೈಟರ್

ನೋಟೀಸ್.

ಬೆಂಗಳೂರು ಶಹರ್ ಮ್ಯೂನಿಸಿಪಾಲಿಟಿ.

ಬೆಂಗಳೂರು, ಶಹರ್ ಮ್ಯೂನಿಸಿಪೆಲ್ ಆಫೀಸ್,

ತಾರೀಖು ೧೯ನೇ ನವೆಂಬರ್ ೧೮೮೫.

ನಂ ೪೬೯.

ಶಹರ್ ಡಿಸ್ಪೆನ್ಸೆರಿಯಾನೆ ಔಷಧಶಾಲೆ ಮತ್ತು ಆಸ್ಪತ್ರೆಯನ್ನು ಸೆಂಟಿಮಾರ್ಥಾ ಎಂಬವರ ಆಸ್ಪತ್ರಿ ಕಟ್ಟಡಕ್ಕೆ ವರ್ಗ ಮಾಡುವದಂ ಕುರಿತು ಆಲೋಚಿಸತಕ್ಕಬಗ್ಗೆ ಬೆಂಗಳೂರ್ ಶಹರ್ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ಮಾಹೇಮಜಕೂರ್ ೨೦ನೇ ತಾರೀಖ್ ಶುಕ್ರವಾರದಬೆಳಗ್ಯೆ ೭½ ಘಂಟೆಗೆ, ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್‌ಕಟ್ಟಡದಲ್ಲಿರುವ ತಮ್ಮ ಆಫೀಸ್‌ನಲ್ಲಿ ನಡೆಸುವದಾಗಿದ್ದ ಸಭೆಯು ೧೮೮೫ನೇ ಇಸವಿ ನವಂಬರ್ ೨೩ನೇ ತಾರೀಖು ಸೋಮವಾರ ಬೆಳಗ್ಯೆ ೭½ ಘಂಟೆಗೆ ನಿಲ್ಲಿಸಲ್ಪಟ್ಟಿತು.

A. SRINIVASACHARLU,
Vice President,
City Municipal Commission

ಪ್ರಕಟನೆ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ.

ಸನ್ ೧೮೮೬ನೇ ಏಪ್ರಿಲ್ ೧ನೇ ತಾರೀಖ್ ಲಾಗಾಯತು ಸನ್ ೧೮೮೭ ನೇ ಮಾರ್ಚ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮೌಂಟಿ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್‌ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪೋ ಸೂಪರಿಂಟೆಂಡೆಂಟರವರು, ಸನ್ ೧೮೮೫ ನೇ ಇಸವಿ ಡಿಸಂಬರ್ ೧೭ನೇ ಮಧ್ಯಾಹ್ನ ೧೨ಗಂಟೆಯುವರಿವಿಗೆ ಬರಮಾಡಿಕೊಳ್ಳುವರು.

ಇದನ್ನುಕುರಿತ ಜಾಸ್ತೀ ತಪಸೀಲ್ ತಿಳಿಯಬೇಕಾದವರು, ಸನ್ ೧೮೮೫ನೇ ಇಸವಿ ನವಂಬರ್ ೧೫ನೇ ಮರ್ಕುಂ ೪೫ನೇ ನಂಬರ್ ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ ೨ನೇಭಾಗ ೧,೫೧೬ನೇ ಪುಟದಲ್ಲಿ ಶಾಯಿಷ್ ಆಗಿರುವ ಪ್ರಕಟನೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.

ನೆಲ್ಲುಹುಲ್ಲು.

ರಾಗೀಹುಲ್ಲು.

ಹಸೀಹುಲ್ಲು.

A. W. RAWLINS, COL.,
Offg. Supt. Remount Depot

ರಿಮೌಂಟಿ ಡಿಪೋ,
ಹೊಸೂರು,
೨೦ನೇ ನವಂಬರ್ ೧೮೮೫

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 23, 1885.

೧೮೮೫ನೇ ನವಂಬರ್ ೨೩ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂ ನವನವಾನ್ಯತುತಾಂಪ್ರಸೂತಿ ಮಾತೃತ್ವದಂ ಪ್ರಿಯಕರೋರುಹಯೋಪರಿ ನಾಮತ್ವಾಮು ಪದೇಪಿ ಮನಸಾ ಮಮನುಸ್ಮರಾಮಿ ತ್ವಾಮುಪಸಾಮಿ ಕರ ಣಂ ಜನನೀ ತ್ವಮೇವ॥

BURMAH AND THE BRITISH GOVERNMENT.

ಈ ವಾರದಲ್ಲಿ ಬಂದ ತಂತಿವೃತ್ತಾಂತಗಳಮೂಲಕ ಬ್ರಿಟಿಷ್ ಸರ್ಕಾರಕ್ಕೂ ಬರ್ಮಾದೇಶೀಯರಿಗೂ ಯುದ್ಧ ಉಪಕ್ರಮವಾಗಿ ಬ್ರಿಟಿಷ್ ಸೈನ್ಯವು ಸರಹದ್ದನ್ನು ಕಟಾಯಿಸಿ ಹೋಗುತಲಿರುವಂತೆಯೂ, ಇದುವರಿವಿಗೆ ಕೆಲವು ಕಿಲ್ಲೆಗಳು ಸ್ವಾಧೀನಪಡಿಸಲ್ಪಟ್ಟಂತೆಯೂ ತಿಳಿಯಬರುತಿದೆ. ಪ್ರಕೃತಸ್ಥಿತಿಯನ್ನನುಸರಿಸಿ ಭವಿಷ್ಯತ್ಪರ್ಯವಸಾನವನ್ನು ಸಹ ಈಗಲೇ ಅನುಮೇಯಿಸಿ ತಿಳಿಸಬಹುದಾಗಿರುತಿದೆ. ಇದರ ಯುಕ್ತಾಯುಕ್ತತೆಯಂ ಕುರಿತು ವಿಚಾರಮಾಡಲಿಕ್ಕೆ ಪೂರ್ವ ಇದರ ಆದಿಕಾರಣವನ್ನೂ ಇದು ಪರ್ಯವಸಾನವನ್ನೈದಿದ ಕ್ರಮವನ್ನೂ ಈ ಪತ್ರಿಕೆಯನ್ನೋದುವವರ ತಿಳುವಳಿಕೆಯಬಗ್ಯೆ ಸಂಗ್ರಹವಾಗಿ ಇದರಡಿ ಅರುಹುವೆವು.

ಈಗ್ಯೆ ಸುಮಾರು ಆರು ತಿಂಗಳಹಿಂದೆ ಬರ್ಮ್ಮಸರ್ಕಾರದವರಿಗೂ, ಮುಂಬೈ ಮತ್ತು ಬರ್ಮ್ಮಾವ್ಯಾಪಾರ ಸಂಘದವರಿಗೂ ಕೆಲವು ವಿಷಯಗಳಲ್ಲಿ ತಕರಾರ್ ಉಂಟಾಗಿ ತನ್ಮೂಲಕ ಪರಸ್ಪರವು ವಿವಾದ ಉಂಟಾಗಲಿಕ್ಕೆ ಕಾರಣವಾಯಿತು. ಈ ವ್ಯಾಪಾರ ಸಂಘದವರು ಬರ್ಮ್ಮಾದೇಶದ ಮೇಲ್ಭಾಗದಲ್ಲಿ ವಿಸ್ತಾರವಾದ ಜಮೀನುಗಳನ್ನು ಗುತ್ತಿಗೆಗೆ ತೆಗೆದುಕೊಂಡು ಸದರೀ ಗುತ್ತಿಗೆ ಮೊಬಲಗು ಬೈಕಿ ಆಗಿಂದಾಗ್ಯೆ ಅಲ್ಲಿನ ಅರಸರಿಗೆ ಅಡ್ವಾನ್ಸು ಕೊಡುತಬಂದರು. ಈ ಪದ್ಧತಿಯು ಈಗ್ಯೆ ಕೆಲವು ಕಾಲದಿಂದ ನಿರುಪದ್ರವವಾಗಿ ಜರುಗುತಲಿತ್ತು. ಈಚೆಗೆ ಒಂದು ಸಂದರ್ಭದಲ್ಲಿ ಬರ್ಮ್ಮ ಅರಸರು ಒಂದು ಉತ್ಸವಪ್ರಯುಕ್ತ ಬೇಕಾದ ಧನವು ಕೇಳಿರಿಸಲಿಕ್ಕೆ ಉದ್ಯುಗಿಸಲು ವ್ಯಾಪಾರ ಸಂಘದವರು ಅದಕ್ಕೊಪ್ಪುಬತಲಿಲ್ಲವು. ಕಡೆಗೆ ಈ ತಗಾದೆಯಿಂದ ಉಂಟಾದ ಫಲವೆಂತೆಂದರೆ— ವ್ಯಾಪಾರ ಸಂಘದವರಬಳಿ ನೌಕರಿಯೊಳಿದ್ದ ಕೆಲವರು ಬರ್ಮ್ಮಾದೇಶದ ಫಾರೆಸ್ಟರುಗಳು ಕಂಪೆನಿಯವರಮೇಲೆ, ತಮಗೆಸಲ್ಲತಕ್ಕ ಬಾಕಿ ನಿಂತಿದ್ದ ತೆರಿಗೆಗಳಬಗ್ಯೆ ಅಲ್ಲಿನ ಕೋರ್ಟಿನಲ್ಲಿ ಫಿರ್ಯಾದುಮಾಡಿದರು. ಇವರೊಳು ಬಹುಮಂದಿ ಕಂಪೆನಿಯವರೊಡನೆ ಕರಾರ್‌ಮಾಡಿಕೊಂಡವರಿಂದೀಚೆಗೆ ಅವರು ಮಾಡಿದ್ದ ಪ್ರೊಸೀಡಿಂಗ್ಸುಗಳನ್ನು ಅರಿಯಲಿಲ್ಲವಾಗಿ ಅವರಿಗೆ ಕಂಪೆನಿಯವರಮೇಲೆ ಯಾವ ವಿಧ ಹಕ್ಕೂ ಇಲ್ಲದೆಹೋಯಿತು. ದಾವೆಹಾಕಿದವರಪೈಕಿ ಇನ್ನು ಕೆಲವರು ಕಂಪೆನಿಯ ನೌಕರಿಯಿಂದ ವಜಾ ಮಾಡಲ್ಪಟ್ಟವರಾಗಿರುತ್ತಾರೆ. ಈ ಮೊಕದ್ದಮೆಯ ದರ್ಯಾಪ್ತಿಕಾಲದಲ್ಲಿ ಕಂಪೆನಿಯವರು, ಸರ್ಕಾರಕ್ಕೆ ಸಲ್ಲಿಸಬೇಕಾದ ಕಂದಾಯವನ್ನು ಕೊಡದೆ ೫೬,೧೭೭ ತೇಗಿನಮರಗಳನ್ನು ರಫ್ತುಮಾಡಿದಂತೆ ಬರ್ಮ್ಮ ಸರ್ಕಾರದವರಿಗೆ ತಿಳಿಯಬಂತು. ಈ ಅಂಶವನ್ನು ಈಗ ವ್ಯಾಪಾರಸಂಘದವರು ಅತ್ಯಂತಿಕವಾಗಿ ನಿರಾಕರಿಸುತ್ತಾರೆ. ಈ ದೋಷದಿಂ ನಿವೃತ್ತಿಸಿಕೊಳ್ಳಲಿಕ್ಕೆ ತಕ್ಕ ವ್ಯವಧಾನವು ಕಂಪೆನಿಯವರಿಗೆ ಕೊಡಲ್ಪಡಲಿಲ್ಲವು. ಪರಂತು ಈ ವಿಷಯದಲ್ಲಿ, ತಲಬ್‌ಬಗ್ಯೆ ದಾವೆ ಮಾಡಿದ್ದ ಫಾರೆಸ್ಟರುಗಳಿಗೆ ಅನುಕೂಲವಾಗಿರುವಂತೆ ಪ್ರತ್ಯೇಕ ಒಂದು ಪ್ರೊಸೀಡಿಂಗ್ಸು ಮಾಡಿ ಸುಮಾರು ೨೩,೦೦,೦೦೦ ರೂಪಾಯಿಗಳು ಅರಸರಿಗೆ ಕಂಪೆನಿಯವರು ಕೊಡತಕ್ಕದ್ದೆಂದು ಕೋರ್ಟಿನವರು ತೀರ್ಮ್ಮಾನಮಾಡಿದರು. ಅಲ್ಲಿನ ಸುಪ್ರೀಂಕೋರ್ಟಿನವರ ಈ ತೀರ್ಮ್ಮಾನಕ್ಕೆ ೧೨ ಮಂದಿ ಮಂತ್ರಿಗಳೂ ತಮ್ಮೊಳು ತಾವೇ ಸಭೆಸೇರಿ ಆಲೋಚಿಸಿ ಯೆಲ್ಲರೂ ದಸ್ತಖತಮಾಡಿ ಕಂಪೆನಿಯವರಿಂದ ವಸೂಲಾಗದ ಮೊಬಲಗಿಗೆ ಅನುಗುಣವಾದ ಅವರಸ್ವತ್ತುಗಳನ್ನು ಸರ್ಕಾರ ದಾಖಲ್ ಮಾಡತಕ್ಕದ್ದೆಂದು ಹುಕುಂಮಾಡಿದರು. ತರುವಾಯ ಈ ಅಂಶವನ್ನುಕುರಿತು ವ್ಯಾಪಾರಸಂಘದವರು ಬ್ರಿಟಿಷ್ ಬರ್ಮ್ಮಾ ಚೀಫ್‌ಕಮಿಷನರರವರಿಗೆ ತಿಳಿಸಲು ಅವರು ಕಳೆದ ಆಗಸ್ಟುತಿಂಗಳ ೨೮ನೇ ತಾರೀಖಿನಲ್ಲಿ ಮಾಂಡಲೇಪಟ್ಟಣದೊಳಿರುವ ಅನ್ಯರಾಜ್ಯಸಂಬಂಧ ವಿಷಯಗಳ ವಿಚಾರಣಾಧಿಕಾರಿಗೆ ಒಂದುಕಾಗದಬರೆದರು. ಅದರಲ್ಲಿ ತಿಳಿಸಲ್ಪಟ್ಟಿದ್ದ ಅಂಶವೇನೆಂದರೆ—ಈಗ್ಯೆ ಅನೇಕ ಸಂವತ್ಸರಗಳಿಂದ ಮುಂಬೈ ಬರ್ಮ್ಮಾ ವ್ಯಾಪಾರ ಸಂಘದವರು ಬರ್ಮ್ಮಾ ಅರಸರರಾಜ್ಯದಲ್ಲಿ ಚೌಬೀನೆವ್ಯಾಪಾರವನ್ನು ನಡೆಸುತ ಆಬಗ್ಯೆ ಸಂಸ್ಥಾನದ ಕಾಡುಗಳನ್ನು ಗುತ್ತಿಗೆಗೆ ತೆಗೆದುಕೊಂಡಿರುತ್ತಾರಾಗಿ ಅವರವ್ಯಾಪಾರವು ನಿಂಗ್ಯಾನ್ ಪ್ರದೇಶದೊಳಿರುವ ನಿಮ್ಮ ಸರ್ಕಾರ್ ಉದ್ಯೋಗಸ್ಥರಿಂದ ಈಚೆಗೆ ಅಡ್ಡಿಪಡಿಸಲ್ಪಟ್ಟಿತಾಗಿ ಈ ವಿಷಯವು ಕುರಿತು ಬರ್ಮ್ಮಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಬೇಕೆಂದು ಚೀಫ್‌ಕಮಿಷನರರವರು ತಮ್ಮ ಹಿಂದಿನ ಕಾಗದಮೂಲಕ ಅರಿಕೆಮಾಡಿರುತ್ತಾರೆ. ಚೀಫ್ ಕಮಿಷನರರವರು ವ್ಯಾಪಾರಸಂಘದವರವಿಷಯದೊಳು ತಕ್ಕ ನ್ಯಾಯ ತೋರಿಸಲ್ಪಡುವದೆಂದು ಸಂಪೂರ್ಣ ಭರವಸೆಯುಳ್ಳವರಾಗಿದ್ದಾರೆ. ಕಂಪೆನಿಯವರಮೇಲೆ ಬರ್ಮ್ಮಾಸರ್ಕಾರದವರಿಗೆ ಯಾವಹಾದರೂ ದೋಷಕೋರಬಂದಲ್ಲಿ ಆ ವಿಷಯದೊಳು ಸದರಿಸರ್ಕಾರದವರ ತೃಪ್ತಿಗೊಳಿಸಲಿಕ್ಕೆ ಅವರಿಗೆ ಆವಶ್ಯಕಗಳಾದ ವಿಷಯಗಳನ್ನು ಬ್ರಿಟಿಷ್‌ಫಾರೆಸ್ಟುರಿಕಾರ್ಡುಗಳು ಒದಗಿಸುವದಕ್ಕೆ ಶಕ್ತವಾಗಿರುತಿವೆ. ಹಿಂದೆ ಈ ಸಂಘದವರ ವಿಷಯದಲ್ಲಿ ಬರ್ಮ್ಮಾಸರ್ಕಾರದವರು ಯುಕ್ತವಾದ ಪರಿಭಾವನೆಯೊಡನೆ ನಡೆಸುತಬಂದರು. ಅವರ ಚೌಬೀನೆವ್ಯಾಪಾರವು ಉಭಯದೇಶಗಳಿಗೂ ವಿಶೇಷಪ್ರಯೋಜನಕರವಾಗಿತ್ತು. ನಿಂಗ್ಯಾನ್ ಫಾರೆಸ್ಟು ಗುತ್ತಿಗೆಯಬಗ್ಯೆ ೨೩ ಲಕ್ಷರೂಪಾಯಿಗಳು ಸದರೀಕಂಪೆನಿಯವರುಕೊಡತಕ್ಕದ್ದೆಂದುಬರ್ಮ್ಮಾ ಅರಸರವರು ಹುಕುಂ ಮಾಡಿರುವಂತೆ ತಿಳಿಯಬರುತಿದೆ. ವ್ಯಾಪಾರಸಂಘದವರಿಗೂ ಬರ್ಮ್ಮಾಗವರ್ನ್‌ಮೆಂಟಿನವರಿಗೂ ನಡೆದಿರುವ ಗುತ್ತಿಗೆ ಕರಾರಿನಿಂದಲಾಗಲಿ, ಅವರು ಈಚೆಗೆ ಮಾಡಿದ ಪ್ರೊಸೀಡಿಂಗ್ಸುಗಳಿಂದಲಾಗಲಿ ಅವರು ಸರ್ಕಾರಕ್ಕೆ ನ್ಯಾಯ್ಯವಾಗಿ ಯಾವ ಮೊತ್ತವೂ ಕೊಡಬೇಕಾದ್ದಿರುವದಿಲ್ಲವೆಂದು ವಾದಿಸುತ್ತಾರೆ. ಇಷ್ಟು ಭಾರೀ ಮೊಬಲಗನ್ನು ದಂಡರೂಪವಾಗಿ ತೆರಲಿಕ್ಕೆ ಸದರೀ ಕಂಪೆನಿಯವರು ಬಹಳ ಅಶಕ್ತರಾಗಿರುತ್ತಾರೆ. ಈಗ ಅವರ ಗುತ್ತಿಗೆಯು ರದ್ದುಮಾಡಲ್ಪಟ್ಟು ಕಾಡುಗಳಲ್ಲಿರುವ ಅವರ ಸಾಮಾನುಗಳು ಅನ್ಯರಿಗೆ ಯೆಲ್ಲಿ ಕೊಡಲ್ಪಡುವವೋ ಯೆಂದು ಅವರು ಭಯಪಡುತಲಿದ್ದಾರೆ. ಈ ವಿಷಯಗಳೆಲ್ಲವೂ ಇಂಡ್ಯರಾಜ್ಯದ ಗವರ್ನರ್‌ಜನರಲ್ಲವರಿಗೂ ಇಂಗ್ಲಾಂಡಿನಲ್ಲಿರುವ ಮಹಾರಾಜ್ಞೀ ಸರ್ಕಾರದವರಿಗೂ ತಿಳಿಸಲ್ಪಡದಿರಲಿಲ್ಲವು. ಮುಂಬೈ ಮತ್ತು ಬರ್ಮ್ಮಾವ್ಯಾಪಾರ ಸಂಘಕ್ಕೆ ಸಂಬಂಧಿಸಿದ ಬ್ರಿಟಿಷ್ ಪ್ರಜೆಗಳು ಯುಕ್ತವಾಗಿ ವಿಚಾರಿಸಲ್ಪಟ್ಟು ನ್ಯಾಯ್ಯವಾದ ತೀರ್ಮಾನವನ್ನು ಪಡೆಯುವಂತೆಯೂ, ಅವರು ಬರ್ಮ್ಮಾಸರ್ಕಾರದವರೊಡನೆ ಮಾಡಿಕೊಂಡಿರುವ ಕರಾರು ನಿರ್ಹೇತುಕವಾಗಿಯೂ ಅನಿರೀಕ್ಷಿತವಾಗಿಯೂ ರದ್ದುಮಾಡಲ್ಪಡದಂತೆಯೂ ಅಥವಾ ಅತ್ಯಧಿಕವಾದ ದಂಡದ ದ್ರವ್ಯಮೂಲಕ ಅವರು ನಷ್ಟಕ್ಕೆ ಗುರಿಮಾಡಲ್ಪಡದಂತೆಯೂ ಕಾಪಾಡಲಿಕ್ಕೆ ಬ್ರಿಟಿಷ್ ಸರ್ಕಾರದವರುಮುಖ್ಯಬಾಧ್ಯಸ್ಥರಾಗಿರುತ್ತಾರೆ. ಈ ಕಾರಣಗಳಿಂದ ಮುಂದೆ ಬರ್ಮ್ಮಾ ಸರ್ಕಾರದವರು ಪ್ರಸ್ತಾಪೋಕ್ತ ನಷ್ಟಗಳನ್ನು ವಿಶಾದ್ಯವ್ಯಾಪಾರಸಂಘದವರಿಗ್ಯಾರಿಗಾಗಲಿ ಉಂಟುಮಾಡುವದು ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ಸರ್ವಾತ್ಮನಾ ಅನಭಿಮತವೆಂದು ತಿಳಿಸಲಿಕ್ಕೆ ಚೀಫ್ ಕಮಿಷನರವರು ಆಜ್ಞಾಪ್ತರಾಗಿರುತ್ತಾರೆ. ಈ ವ್ಯಾಪಾರ ಸಂಘದವರು, ಬರ್ಮ್ಮಾ ಸರ್ಕಾರದವರ ವಿಷಯದೊಳು ಪ್ರಾಮಾಣಿಕವಾಗಿ ವರ್ತಿಸಿರುತ್ತಾರಾದ್ದರಿಂದ ಅವರು ಕ್ರಮವಾದ ವಿಚಾರಣೆಯನ್ನಪೇಕ್ಷಿಸುತ ನ್ಯಾಯ್ಯವಾಗಿ ತಾವೇನಾದರೂ ಸರ್ಕಾರಕ್ಕೆ ಜಾಸ್ತಿಕಂದಾಯ ಕೊಡಬೇಕಾಗಿದ್ದಲ್ಲಿ ಅದು ಸಲ್ಲಿಸಲಿಕ್ಕೆ ಸನ್ನದ್ಧರಾಗಿದಾರೆಂದು ತಾವು ನಂಬುವಂತೆ ಬ್ರಿಟಿಷ್ ಸರ್ಕಾರದವರು ತಿಳಿಸಿರುತ್ತಾರೆ. ಬ್ರಿಟಿಷ್ ಮತ್ತು ಬರ್ಮ್ಮಾ, ಈ ಉಭಯ ಸರ್ಕಾರದವರಿಗೂ ನೆಲಗೊಂಡಿರುವ ಮೈತ್ರಿಯನ್ನೂ, ವ್ಯಾಪಾರಾಭಿವೃದ್ಧಿಯಮೂಲಕ ಉಭಯರಿಗೂ ಉಂಟಾಗುವ ಪ್ರಯೋಜನವನ್ನೂ ಪರ್ಯಾಲೋಚಿಸಿ ಬರ್ಮ್ಮಾ ಫಾರೆಸ್ಟ್[illegible]ಯವರಿಗೂ ಕಂಪೆನಿಯವರಿಗೂ ಲೆಕ್ಕ ವಿಷಯದೊಳು ಈಗ ಉಂಟಾಗಿರುವ ತಕರಾರ್ ಫೈಸಲಾಗುವತನಕ ಸದರೀ ಸರ್ಕಾರದವರು ತಾವು ಕೊಟ್ಟಿರುವ ಫೈಸಲನ್ನು ಜಾರಿಯೊಳು ತರದೆ ಗುತ್ತಿಗೆಯನ್ನು ರದ್ದುಪಡಿಸದೆ ಇರುವರೆಂದು ಬ್ರಿಟಿಷ್ ಸರ್ಕಾರದವರು ನಂಬುತ್ತಾರೆ. ಬರ್ಮ್ಮಾ ಸರ್ಕಾರದವರು ಮಧ್ಯಸ್ಥಗಾರನ ಫೈಸಲಾತಿಗೆ ಒಡಂಬಡುವದಾದರೆ ವೈಸರಾಯಿಯವರು ಜುಡಿಷಿಯಲ್ ಅನುಭವವುಳ್ಳ ಒಬ್ಬ ಆಫಿಸರನ್ನು ಈಬಗ್ಯೆ ನಿಯಮಿಸುವರು. ಆದದರಿಂದ ಇದರಡಿಕಂಡ ಮೂರು ಅಂಶಗಳಿಗೆ ಸರಿಯಾದ ಪ್ರತ್ಯುತ್ತರವನ್ನು ಚೀಫ್ ಕಮಿಷನರವರು ಅಪೇಕ್ಷಿಸುತ್ತಾರೇನೆಂದರೆ— ಬ್ರಿಟಿಷ್ ಸರ್ಕಾರದವರ ಅಪೇಕ್ಷೆಯಂ ಗೌರವಿಸಿ ವ್ಯಾಪಾರ ಸಂಘದವರ ವಿಷಯದೊಳು ಕೊಟ್ಟಿರುವ ಫೈಸಲನ್ನು ಸದ್ಯಃ ನಿಲ್ಲಿಸಿಡುವಣ, ವೈಸ್‌ರಾಯಿಯವರು ನಿಯಮಿಸುವ ಒಬ್ಬ ಮಧ್ಯಸ್ಥಗಾರನ ಮೂಲಕ ಈ ವಿವಾದವನ್ನು ನಡೆಸಲಿಕ್ಕೆ ಸಮ್ಮತಿಸುವಣ, ಮಧ್ಯಸ್ಥಗಾರನ ಫೈಸಲಾತಿಯನ್ನು ಅಂಗೀಕರಿಸುವಣ, ಈ ಮೂರಂಶಗಳಾಗಿರುತಿವೆ. ಮೇಲೆಕಂಡ ಚೀಫ್ ಕಮಿಷನರವರ ಕಾಗದಕ್ಕೆ ಪ್ರತ್ಯುತ್ತರವಾಗಿ ಬರ್ಮ್ಮಾ ಸರ್ಕಾರದವರು, ತಾವು ಸ್ವತಂತ್ರ ರಾಜ್ಯಾಧಿಕಾರ ಪ್ರಬಲರಾದದರಿಂದ ತಮ್ಮನ್ನು ಮೋಸಗೊಳಿಸುವ ಯಾವ ಕಂಪೆನಿಯವರ ವಿಷಯದೊಳಾಗಲಿ, ತಮ್ಮ ಇಷ್ಟಾನುಸಾರ ವರ್ತಿಸಲಿಕ್ಕೆ ಅಧಿಕಾರ ಉಳ್ಳವರಾಗಿರುವಂತೆಯೂ, ಬ್ರಿಟಿಷ್ ಸರ್ಕಾರದವರು ತಮ್ಮ ರಾಜ್ಯಕ್ಕೆ ಗೂಢಚಾರರು ಕಳುಹಿಸುವದು ಅಕ್ರಮಬದ್ಧಾಗಿಯೂ ಅರುಹಿದರು. ತರುವಾಗ ಇಂಡ್ಯ ಗವರ್ನ್‌ಮೆಂಟಿನವರು ಇದರಡಿಕಂಡ ಫರ್ಮಾನಾವನ್ನು ಬರ್ಮ್ಮಾ ಅರಸರವರ ಜವಾಬ್‌ಬಗ್ಯೆ ಕಳುಹಿಸಿದರು. ಅದೇನೆಂದರೆ—ಬರ್ಮ್ಮಾ ಅರಸರಾದ ತೀಬಾಯವರು ಮೇಲೆಕಂಡ ತಕರಾರಿನ ಫೈಸಲಾತಿಯಬಗ್ಯೆ ಒಬ್ಬ ಇಂಗ್ಲಿಷ್ ರಾಯಬಾರಿಯನ್ನು ಬರಮಾಡಿಕೊಳ್ಳತಕ್ಕದ್ದು. ಮುಂಬೈ ಮತ್ತು ಬರ್ಮ್ಮಾ ವ್ಯಾಪಾರ ಸಂಘದವರ ವಿಷಯದೊಳು ಕೊಡಲ್ಪಟ್ಟಿರುವ ತೀರ್ಮ್ಮಾನವನ್ನು ನಿಲ್ಲಿಸತಕ್ಕದ್ದು. ಮುಂದೆ ಕ್ರಮವಾದ ಅಧಿಕಾರವು ಪಡೆದವರೊಬ್ಬರನ್ನು ತಕ್ಕ ಸಂರಕ್ಷಣೆಯೊಡನೆ ಬ್ರಿಟಿಷ್‌ತರಫೆ ಏಜಂಟರನ್ನಾಗಿ ಮಾಂಡಲೇ ಪಟ್ಟಣದೊಳು ಅಂಗೀಕರಿಸತಕ್ಕದ್ದು, ಎಂಬದು.

ಇಂಡ್ಯಗವರ್ನ್‌ಮೆಂಟಿನವರು ಬಿಟ್ಟೇರಾಗಿ ಕಳುಹಿಸಿದ, ಮೇಲೆ ಕಂಡ ಫರ್ಮಾನಿಗೆ ಬರ್ಮ್ಮಾಸರ್ಕಾರದವರು ಕೊಟ್ಟ ಪ್ರತ್ಯುತ್ತರವೇ ಪ್ರಸಕ್ತಯುದ್ಧಕ್ಕೆ ಕಾರಣವಾಗಿ ಏರ್ಪಟ್ಟಿತು. ಅವರುತಿಳಿಸಿದ್ದೇನೆಂದರೆ—ವ್ಯಾಪಾರ ಕಂಪೆನಿಯವರು, ತಮ್ಮ ವಿಷಯವಂಕುರಿತು ಬರ್ಮ್ಮಾಸರ್ಕಾರಕ್ಕೆ ಮತ್ತೊಂ ಮೆಅರ್ಜಿಬರೆದುಕೊಂಡರೆ ಅವರಮೇಲೆ ಅನ್ಯದೇಶದ ವರ್ತಕರಿಗೆ ಯಾವವಿಧ ನಿರ್ಬಂಧವೂ ಉಂಟಾಗದಂತೆ ತಾವು ನೋಡಿಕೊಳ್ಳುವವರಾಗಿ ಅರಸರು ಕಂಪೆನಿಯವರಿಗೆ ತಿಳುಹಿಸಿರುವದರಿಂದ, ಈ ವಿಷಯವು ಕುರಿತ ಮುಂದಣವಿಚಾರವು ಅನಾವಶ್ಯಕವಾಗಿರುತಿದೆ. ಪರಂತು ಬರ್ಮ್ಮಾಜನಗಳ ಹಕ್ಕುದಾರಿಯನ್ನು ಪರೀಕ್ಷಿಸಲಿಕ್ಕೆ ಅವರಿಗೆ ಅಭಿಪ್ರಾಯವಿರುವದಿಲ್ಲವು. ಮಾಂಡಲೇಪಟ್ಟಣದೊಳು ಒಬ್ಬ ಬ್ರಿಟಿಷ್ ರೆಸಿಡೆಂಟರನ್ನು ನಿಯಮಿಸುವವಿಷಯದಲ್ಲಿ, ಬ್ರಿಟಿಷ್ ಸರ್ಕಾರದವರು ತಮ್ಮಕಡೆ ರೆಸಿಡೆಂಟರನ್ನು ಕೆಲವುಸಂವತ್ಸರಗಳಹಿಂದೆ ವಾಪಸ್‌ಕರೆಸಿಕೊಂಡರಾಗಿ ಈಗ ಮರಳಿ ಯೊಬ್ಬರಂ ಕಳುಹಿಸಬೇಕಾದರೆ, ಅವರು ಪೂರ್ವನಿಯಮವನ್ನನುಸರಿಸಿ ಬರಮಾಡಿಕೊಳ್ಳಲ್ಪಡುವರು. ಅನ್ಯಸಂಸ್ಥಾನಾಧಿಪತಿಗಳ ಸಂಬಂಧವು ಕುರಿತಾದರೋ, ಫ್ರಾನ್ಸ ಜರ್ಮ್ಮನಿ ಮತ್ತು ಇಟಲೀ, ಈ ಸಂಸ್ಥಾನಾಧಿಪತಿಗಳೊಡನೆ ಈಚೆಗೆ ಬರ್ಮ್ಮಾಸರ್ಕಾರದವರು ಸಂಬಂಧವು ಬೆಳೆಸಿರುವದರಿಂದ ಅವರೊಡನೆ ಆಲೋಚಿಸುವತನಕ ಈ ಅಂಶಕ್ಕೆ ಜವಾಬ್‌ಕೊಡುವದಕ್ಕಾಗುವದಿಲ್ಲವು. ಬರ್ಮ್ಮಾಸರ್ಕಾರದವರು ಯಾವಾಗಲೂ ವ್ಯಾಪಾರಾಭಿವೃದ್ಧಿಯಲ್ಲೇ ದೃಷ್ಟಿಯುಳ್ಳವರಾದದರಿಂದ ವರ್ತಕರೇ ತಮಗೆ ಬೇಕಾದ ಸಹಾಯವನ್ನು ಅಪೇಕ್ಷಿಸಿ ಪಡೆಯಬಹುದೆಂದು ಮುಂತಾಗಿಬರ್ಮ್ಮಾಮಂತ್ರಿಯವರು ತಿಳಿಸಿದರು.

ಬರ್ಮ್ಮಾರಾಜ್ಯದಲ್ಲಿ ಮತ್ತೆ ಒಬ್ಬ ಹಿಂದೂ ಅರಸರ ಸಂಬಂಧವಿರುವದು ಬ್ರಿಟಿಷ್ ಸರ್ಕಾರದವರಿಗೆ ತಿರೋವೇದನೆಯಾಗಿದ್ದದರಿಂದ ಅದು ಯಾವವಿಧದಿಂದಲಾದರೂ ಸ್ವವಶಪಡಿಸಿಕೊಳ್ಳಬೇಕೆಂಬ ಅಭಿಪ್ರಾಯವು ಇದುವರಿಗೆ ಅವರಿಗೆ ಉಂಟಾಗದಿರಲಿಲ್ಲವು. ಯದ್ಯಪಿ ಅವರೂ ಅನುಕೂಲ ಸಮಯವು ನಿರೀಕ್ಷಿಸುತಲಿದ್ದಂತೆ ಕಾಣುತಿದೆ. ತೀಬಾಯವರ ಪ್ರತ್ಯುತ್ತರವು ಸ್ವಭಾವತಃ ಸ್ವಾತಂತ್ರ್ಯಸೂಚಕವಾದ್ದಾಗಿದ್ದರೂ ಅದು ಇಂಡ್ಯ ಗವರ್ನ್‌ಮೆಂಟಿನವರನ್ನು ಯುದ್ಧ ಪ್ರಯತ್ನವು ಮಾಡಿಸದಿರಲಿಲ್ಲವು. ಬರ್ಮ್ಮಾ ರಾಜರನ್ನು ದಂಡೋಪಾಯದಿಂದ ಸ್ವಾಧೀನಪಡಿಸಿಕೊಳ್ಳಬೇಕಾಗಿರುವದರಿಂದ ಬ್ರಿಟಿಷ್ ಸೈನ್ಯಗಳು ಕೂಡಲೆ ಬರ್ಮ್ಮಾದೇಶಕ್ಕೆ ಯುದ್ಧಯಾತ್ರೆಯಬಗ್ಯೆ ಹೊರಡತಕ್ಕದ್ದೆಂದು ವೈಸರಾಯಿಯವರು ಆಜ್ಞಾಪಿಸಿದರು. ಗವರ್ನರ್ ಜನರಲ್ಲವರ ಅನುಜ್ಞೆಯಂ ನಿರೀಕ್ಷಿಸುತ ಕಾದಿದ್ದ ಸೈನ್ಯವು ಕೂಡಲೆ ಮುಂದಕ್ಕೆ ನಡೆಯಿಸಿ ಹೋಗುತ ಆತ್ಮರಕ್ಷಣೆಗೆ ಅನುಗುಣಗಳಾದ ಪ್ರದೇಶಗಳನ್ನೆಲ್ಲ ಸ್ವಾಧೀನಪಡಿಸಿಕೊಂಡು ಅದು ಬಲಪಡಿಸುತಲಿದೆ. ಬರ್ಮ್ಮಾ ಅರಸರವರು, ಬೌದ್ಧಮತಮಸಾಕಪಡಿಸಲೆತ್ನಿಸಿರುವ ಇಂಗ್ಲಿಷ್‌ನವರನ್ನು ಪರಾಜಿತರನ್ನಾಗಿ ಮಾಡುವದಕ್ಕೆ ಸ್ವಮತಾಭಿಮಾನಿಗಳಾದ ಬರ್ಮ್ಮಾದೇಶೀಯರೆಲ್ಲರೂ ಯುದ್ಧ ಸನ್ನದ್ಧರಾಗಿರಬೇಕೆಂದು ಪ್ರಸಿದ್ಧಪತ್ರಿಕಾಮೂಲಕ ತಮ್ಮ ಪ್ರಜೆಗಳಿಗೆಲ್ಲ ಆಜ್ಞಾಪಿಸಿದರು. ತರುವಾಯ ಬರ್ಮ್ಮಾಅರಸರಸೈನ್ಯವು ಮಿನ್‌ಹ್ಲಾಯೆಂಬ ಗ್ರಾಮದಬಳಿ ವ್ಯೂಹ ಕಟ್ಟಿಕೊಂಡು ಶತ್ರುಗಳ ಯುದ್ಧಹಡಗುಗಳು ಇರಾವತಿ ನದಿಯೊಳು ಪ್ರವೇಶಿಸದಂತೆ ಅಟಕಾಯಿಸಿದರು. ಪರಂತು ಇಂಗ್ಲಿಷ್‌ನವರ ಶೌರ್ಯವು ಕೇವಲ ಅಗ್ನಿಮೂಲಕವಾದ್ದರಿಂದ ಅವರು ತಮ್ಮ ತೋಫುಗಳ ಬಲದಿಂದ ಶತ್ರುಗಳನ್ನು ಓಡಿಸಿ ಮಿನ್‌ಹ್ಲಾ ಯೆಂಬ ಪ್ರದೇಶದೊಳಿದ್ದ ಬರ್ಮ್ಮಾ ಅರಸರ ಕೋಟೆಯನ್ನು ಸಂಪೂರ್ಣವಾಗಿ ದಗ್ಧಮಾಡಿಬಿಟ್ಟರು. ಉಭಯಪಕ್ಷದವರೂ ಸೈನಿಕ ಸನ್ನಾಹಗಳನ್ನು ಬಲವಾಗಿ ಮಾಡುತಲಿದ್ದಾರೆ. ಬರ್ಮ್ಮಾ ರಾಜ್ಯದ ಮುಂದಿನ ಸ್ಥಿತಿಯು ಕೇವಲ ಶೋಚನೀಯವಾಗಿದೆ. ಬರ್ಮ್ಮಾರಾಜ್ಯವು ಸ್ವವಶವಾದಮೇಲೆ ಅದನ್ನು ಸ್ವಂತ ರಾಜ್ಯದೊಡನೆ ಸೇರಿಸಬಹುದಕ್ಕದ್ದೆ ಅಥವಾ ತೀಬಾಯವರು ಪದಚ್ಯುತರನ್ನಾಗಿ ಮಾಡಿ ಅವರಿಗೆ ಪ್ರತ್ಯಾಮ್ನಾಯರಾಗಿ ಬೇರೊಬ್ಬರು ಮೊಕರ್ರರ್‌ಮಾಡಿ ಅವರೊಡನೆ ಆವಶ್ಯಕಗಳಾದ ಕರಾರುಗಳನ್ನುಮಾಡಿಕೊಳ್ಳತಕ್ಕದ್ದೆ, ಎಂಬ ಯೆರಡು ಅಂಶಗಳು ಈಗ ಬ್ರಿಟಿಷ್ ಸರ್ಕಾರದವರ ಆಲೋಚನೆಗೆ ವಿಷಯವಾಗಿದೆ. ಸಾಬಕ್ ವೈಸರಾಯ್‌ಯವರಾದ ಲಾರ್ಡ್ ರಿಪ್ಪನ್‌ಯವರು ಒಂದು ಸಂದರ್ಭದಲ್ಲಿ ಗವರ್ನ್‌ಮೆಂಟಿನವರ ರಾಜ್ಯತಂತ್ರವನ್ನು ಕುರಿತು ಮಾತನಾಡುವಾಗ್ಯೆ ಬ್ರಿಟಿಷ್ ಸರ್ಕಾರದವರು, ದೇಶಸಂಪಾದನಾಭಿಲಾಷೆಯೊಡನೆ ತಮ್ಮ ರಾಜ್ಯವು ವೃದ್ಧಿಗೊಳಿಸುತ ಬರುವಂತೆಲ್ಲ ಅದಂ ನಿರಪಾಯವಾಗಿ ಕಾಪಾಡಿಕೊಳ್ಳಲಿಕ್ಕೆ, ಅವರಿಗೆ ಸಾಧ್ಯವಾಗಲಾರದೆಂತಲೂ, ಇದುವರಿಸಿಗೆ ಅವರು ಪೂರ್ವದೇಶದಲ್ಲಿ ಪಡೆದಿರುವದೇ ಸಾಕಾಗಿರುವದರಿಂದ ಅಷ್ಟಕ್ಕೆ ತೃಪ್ತರಾಗಿ ಅವರ ಪ್ರಜೆಗಳನ್ನು ಒಳ್ಳೆಯ ಪಾಲನಾಕ್ರಮದಿಂ ಸಂತೋಷಗೊಳಿಸಿದರೆ ಪೂರ್ವದೇಶದಲ್ಲಿ ಅವರು ಅಬಾಧಿತವಾಗಿ ನೆಲಗೊಂಡಿರಲಿಕ್ಕೆ ಅದೇ ಸಾಕಾಗಿರುತಿದೆಂತಲೂ, ಬರ್ಮ್ಮಾ ರಾಜ್ಯವನ್ನು ಸ್ವದೇಶ್ಯವಶಪಡಿಸಿಕೊಳ್ಳುವದಕ್ಕಿಂತಲೂ ಅದರ ರಾಜತ್ವಕ್ಕೆ ಸಂಬಂಧಿಸಿದ ಬೇರೊಬ್ಬರಂ ಚುನಾಯಿಸಿ ಅವರಿಗೆ ರಾಜ್ಯವನ್ನೊಪ್ಪಿಸುವದು ಬ್ರಿಟಿಷ್ ಸರ್ಕಾರಕ್ಕೆ ಕೀರ್ತಿಕರವಲ್ಲದೆ ಇಂಡ್ಯದೇಶದ ಸಂಸ್ಥಾನಾಧಿಪತಿಗಳಿಗೆ ಈಚೆಗೆ ಉಂಟಾಗುತಲಿರುವ ನಂಬಿಕೆಯನ್ನು ವೃದ್ಧಿಗೊಳಿಸಿದಂತೆ ಯಾಗುವದೆಂತಲೂ, ಸದರೀ ರಾಜ್ಯವನ್ನು ಗವರ್ನ್‌ಮೆಂಟಿನವರು ದಾಖಲ್ಮಾಡಿಕೊಳ್ಳುವದು ನಾನಾವಿಧ ಆಕ್ಷೇಪಣೆಗಳಿಗೂ ಸಂಕಟಗಳಿಗೂ ಕಾರಣವಾಗುವದೆಂದು ತಮಗೆ ತೋರುತಿದೆಯೆಂತಲೂ, ಇಂಗ್ಲಿಷ್‌ನವರು ತಮಗೆ ಸಂಬಂಧಿಸದ ರಾಜ್ಯಗಳನ್ನು ಸೇರಿಸಿಕೊಳ್ಳುವದು ತಮಗೆ ಸುತರಾಂ ಇಷ್ಟವಿಲ್ಲವೆಂತಲೂ ತಿಳಿಸಿದರು. ಲಾರ್ಡ್ ರಿಪ್ಪನ್‌ಯವರು ತಿಳಿಸಿದ ಪ್ರಕಾರ ಬರ್ಮ್ಮಾದೇಶದಲ್ಲಿ ನೇಟಿವ್ ಆಳ್ವಿಕೆಯನ್ನು ಹೋಗಲಾಡಿಸದೆ ಕಾಪಾಡುವದರಿಂದ ಬ್ರಿಟಿಷ್ ಗವರ್ನ್‌ಮೆಂಟಿನವರು ಯಾವಾಗಲೂ ಕೇವಲ ಸ್ವಪ್ರಯೋಜನೈಕ ದೃಷ್ಟಿಯಿಂದ ಇಂತಾ ವಿಷಯಗಳಲ್ಲಿ ಪ್ರವರ್ತಿಸತಕ್ಕವರಲ್ಲವೆಂತಲೂ ತ

ಕುತು ತಮ್ಮ ಸ್ವಂತರಾಜ್ಯಗಳ ಪ್ರಯೋಜನ ಮತ್ತು ನಿರಪಾಯತೆಗೆ ಲೋಪ ಪ್ರಂಟಾಗದಿರುವತನಕ ಸ್ವತಂತ್ರವಾದ ಸಂಸ್ಥಾನಗಳನ್ನು ಅವರು ಕಾಪಾಡಲಿಕ್ಕೆ ಸನ್ನದ್ಧರಾಗಿರುತ್ತಾರೆಂತಲೂ ಜನಗಳು, ತತ್ರಾಪಿ ಹಿಂದೂ ಸಂಸ್ಥಾನಾಧಿಪತಿಗಳು ಭಾವಿಸಲಿಕ್ಕೆ ಕಾರಣವಾಗುತಿದೆ.

ಇದುವರಿವಿಗೇನೇ ಇದರಿಂದ ನಮ್ಮ ಅವಕಾಶ ಬಹಳವಾಗಿ ಆಕ್ರಮಿಸಲ್ಪಟ್ಟತಾದ್ದರಿಂದ ಇದನ್ನು ಕುರಿತು ಮತ್ತೊಂದು ಸಂದರ್ಭದಲ್ಲಿ ವಿಚಾರಮಾಡುವೆವು.

Occasional Notes.
ನೈಮಿತ್ತಿಕವಿಷಯನ್ಯಾಸ

The Governor of Bombay.—ಮುಂಬೈ ಗವರ್ನರವರಾದ ಲಾರ್ಡ್‌ರೀಯವರು ತಮ್ಮ ಬಾಯ್ಕೆಯವರೊದನೆ, ಕ್ರಿಸಮಸ್ ಹಬ್ಬ ಪ್ರಯುಕ್ತವಾದ ರಜಾದಿನಗಳನ್ನು ಉದಕಮಂಡಲದಲ್ಲಿ ಕಳೆಯುವರು.

A life pension.—ಹೋಲ್ಕರ್ ಮಹಾರಾಜರವರು, ಬ್ರಹ್ಮಸಮಾಜಕ್ಕೆ ಮುಖ್ಯಪ್ರವರ್ತಕರಾದ ಮೃತಪಟ್ಟ ಬಾಬೂಕೇಶವ ಚಂದ್ರಸೇನ ಯವರತಾಯಿಗೂ ಭಾರ್ಯೆಗೂ ಜೀವರ ಉಪಜೀವನ ಏರ್ಪಾಡುಮಾಡಿರುತ್ತಾರೆ.

A liberal subscription.—ಬಂಗಾಳೇದೇಶಕ್ಕೆ ಸೇರಿದ ಕಾಸಿಂಬಜಾರ್ ಯೆಂಬ ಸ್ಥಳನಿವಾಸಿಯಾದ ಮಹಾರಾಣೀ ಸುವರ್ಣಮಾಯಿ ಯೆಂಬಾಕೆಯವರು ಲೇಡೀ ಡಫರಿನ್‌ಯವರು ಏರ್ಪಡಿಸಿರುವ ಫಂಡಿಗೆ ೫೦,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ.

The Chief Justice of the Bengal High Court.—ಬಂಗಾಳೇಹೈಕೋರ್ಟಿನ ಚೀಫ್ ಜಸ್ಟಿಸ್‌ಯವರಾದ ಸರ್ ರಿಚರ್ಡ್ ಗಾರ್ತ್‌ಯವರ ಅನಾರೋಗ್ಯಸ್ಥಿತಿಯನ್ನು ಯೋಚಿಸಲಾಗಿ ಮರಳಿ ಅವರು ತಮ್ಮ ಕೆಲಸಕ್ಕೆ ವಾಪಸ್ ಬರುವರೆಂಬ ಪ್ರತ್ಯಾಶೆಗೆ ಅವಕಾಶ ಕಡಮೆಯಾಗಿದೆಯೆಂದು ಪಯೋನಿಯರ್‌ಪತ್ರಿಕೆ ಹೇಳುತಿದೆ.

A rumour.—ಮಹಾರಾಣಿ ಶ್ರೀ ಇಂಡ್ಯಚಕ್ರವರ್ತಿನೀಯವರೂ ಅವರ ಮಂತ್ರಿಸಾಮಾಜಿಕರೂ, ಡ್ಯೂಕ್ ಆಫ್ ಕಾನಾಟ್‌ಯವರನ್ನು ಮುಂಬೈ ಪ್ರಸಿಡೆನ್ಸಿ ಕಮಾಂಡರ್‌ಇನ್‌ಚೀಫ್‌ಕೆಲಸದಲ್ಲಿ ನಿಯಮಿಸುವದಕ್ಕೆ ಸಮ್ಮತಿಸಲಿಲ್ಲವೆಂದು ಮುಂಬೈಯಲ್ಲಿ ಒಂದು ಪ್ರವಾದವುಂಟಾಗಿದೆಯೆಂದು ಅಲ್ಲಿನ ಪತ್ರಿಕೆಯೊಂದರಿಂದ ತಿಳಿಯಬರುತಿದೆ.

A liberal contribution.—ಪಂಜಾಬ್ ದೇಶದಲ್ಲಿ ಅರಸುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಏರ್ಪಡಿಸಲ್ಪಟ್ಟಿರುವ ಪಾಠಶಾಲೆಯ ಸಹಾಯಾರ್ಥವಾಗಿ ಫರೀದ್‌ಕೋಟೆ ಅರಸರವರು ಪಂಜಾಬ್ ಗವರ್ನಮೆಂಟಿನ ಖಜಾನೆಗೆ ೫೦,೦೦೦ ರೂಪಾಯಿಗಳು ಕಳುಹಿಸಿರುತ್ತಾರೆ. ಇದೇಕಾರ್ಯಕ್ಕಾಗಿ ಪತ್ತಿಯಾಲಾ ಮಹಾರಾಜರವರೂ, ಕಪುರ್ತಲಾ ಅರಸರವರೂ ೭೦,೦೦೦ ರೂಪಾಯಿಗಳು ಸಹಾಯದ್ರವ್ಯ ಕೊಡುವದಾಗಿ ವಾಗ್ದಾನಮಾಡಿರುತ್ತಾರೆ.

The Matriculation question paper in Bombay.—ಮುಂಬೈ ಪ್ರೆಸಿಡೆನ್ಸಿಯ ಮೆಟ್ರಿಕ್ಯುಲೇಷನ್‌ಪರೀಕ್ಷೆಯ ಪ್ರಶ್ನೆ ಪತ್ರಗಳು ಪರೀಕ್ಷೆಗೆ ಪೂರ್ವವೇ ಹೊರಗಾಗಿ ಹೋದಸಂಗತಿ ಗವರ್ನಮೆಂಟಿಗೆ ತಿಳಿಯಬರಲು, ಅವರು ಈಗ ನಡೆದ ಪರೀಕ್ಷೆಯನ್ನು ರದ್ದುಮಾಡಿ ಮರಳಿ ಕೂಡಲೇ ಪರೀಕ್ಷೆ ನಡೆಯಬೇಕೆಂದು ಹುಕುಂಮಾಡಿರುವಂತೆ ತಿಳಿಯಬರುತಿದೆ.

Birth of a son.—ಬರ್ಮಾದೇಶದ ಅರಸರಾದ ಥೀಂಗ್ ಥೀಬಾಯವರಿಗೆ, ತಮ್ಮ ಪಟ್ಟಮಹಿಷಿಯ ಸೋದರಿಯಾದ ಯೆರಡನೇ ಭಾರ್ಯೆಯ ಮೂಲಕ ಪುತ್ರೋತ್ಸವವಾಯಿತು. ಇದರಿಂದ ತಮ್ಮ ಜ್ಯೇಷ್ಠಭಾರ್ಯೆಗೆ ಅಸೂಯೆ ಉಂಟಾಗಬಹುದೆಂದು ಆಲೋಚಿಸಿ ಈ ಪುತ್ರನುದ್ಭವಿಸಿದ್ದರಿಂದ ತಮಗೆ ಸುತರಾಂ ಸುಕೋಚವಿಲ್ಲವೆಂತಲೂ ಅವನು ಯಾವಾಗಲಾದರು ತಮಗೆ ಶತ್ರುವಾಗುವನೆಂತಲೂ ಹೇಳಿ ಆಕೆಯನ್ನು ಸಮಾಧಾನಗೊಳಿಸಿದರಂತೆ. ಈ ಪುತ್ರೋತ್ಸವಲಗ್ನಬಲದಿಂದ ಥೀಬಾಯವರಿಗೆ ರಾಜ್ಯವನ್ನೇ ಕಳಕೊಳ್ಳುವ ಕಾಲ ಅತ್ಯಾಸನ್ನವಾಗಿರುವಂತೆ ಕಾಣಬರುತಿದೆ.

Birth of a son commemorated.—ಪತ್ತಾ ಸಂಸ್ಥಾನದ ಮಹಾರಾಜರವರು ಈಚಿಗೆ ತಮಗೆ ಪುತ್ರೋತ್ಸವವಾದ ವಿಶೇಷಸಂದರ್ಭದಲ್ಲಿ ತಮ್ಮ ಸಂಸ್ಥಾನದ ಆಫಿಸರ್‌ಗಳು ಮತ್ತು ಚಿಲ್ಲರೆ ನೌಕರರಿಗೆ ಥೀ ಇಸಂ ಒಂದೊಂದುತಿಂಗಳ ತಲಬ್ ಇನಾಂಕೊಟ್ಟರು. ತಮ್ಮ ದಿವಾನರಿಗಾದರೋ, ೩೦,೦೦೦ ರೂಪಾಯಿಗಳನಗದು, ಅನರ್ಘ್ಯವಾದ ಒಂದು ವಜ್ರದ ಉಂಗುರ, ಸರದಾರರೊಬ್ಬರಿಗೆ ಒಂದು ಚಿನ್ನದ ಗಡಿಯಾರ, ಇವುಗಳೂ, ತಮ್ಮ ಪ್ರೈವೇಟ ಸೆಕ್ರಿಟರಿಯವರಿಗೆ ಭಾರೀ ಶಾಲ್ ಜೋಡಿ, ಒಂದು ಕಲಾಬತ್ತಿನ ಅಂಗಿ, ಒಂದು ತಿಂಗಳ ತಲಬ್ ಇವೂ ಇನಾಂಕೊಟ್ಟರು. ಇದು ಆವಾಯಿ ಸಾಹೇಬ್ ಕೃಷ್ಣದಾಸಪಾಲ್‌ಯವರ ಹೆಸರಿನಲ್ಲಿ ಯೇರ್ಪಡಿಸಿರುವ ಫಂಡಿಗೆ ೧,೦೦೦ ರೂಪಾಯಿ ಕೊಟ್ಟರು.

LOCAL AND PROVINCIAL NEWS.
ಪಳದೇಶಮತ್ತುತಾಲ್ಲೂಕುಜಾತ್ವೃತ್ತಾಂತಗಳು.

The Comptroller.—ಬರುವ ಸರ್ಕ್ಯಾರ್ ಸಾಲ್ ಅಕ್ಟೋಬರ್‌ನಲ್ಲಿ ಈ ಸಂಸ್ಥಾನದ ಕಂಟ್ರೋಲರ್ ಜನರಲವರ ಆಫೀಸ ಮೌಕೂಫ್ ಮಾಡಲ್ಪಡುವದೆಂತಲೂ ಆಗ ಸದರೀ ಇಲಾಖೆಯ ಅಧಿಕಾರಿಯಾದ ಮ|| ಹಸೆಲ್‌ಯವರು ಪೆನ್ಷನ್‌ಮೇಲೆ ತಮ್ಮ ಕೆಲಸದಿಂದ ನಿವೃತ್ತರಾಗುವರೆಂತಲೂ ಒಂದು ಪ್ರವಾದ ವುಂಟಾಗಿದೆ.

A new railway line.—ಹೇಟವೆಂಪಿ ರೆಸ್ಟೇಷನ್ನಿಂದ ಮಹಾರಾಜರವರ ಅರಮನೆಯವರೆಗೂ ಎಲಹಂಕ, ದೊಡ್ಡಬಳ್ಳಾಪುರ, ಗೌರಿಬಿದನೂರು, ಈ ಕಸಬೆಗಳ ಮಾರ್ಗವಾಗಿ ಈಗ ಮದ್ರಾಸು ಗವರ್ನಮೆಂಟವರು ಹಾಕುತಲಿರುವ ಹಿಂದೂಪುರ ರೈಲ್ವೆರಸ್ತೆಗೆ ಸೇರುವಂತೆ ಒಂದು ಹೊಸರೈಲ್ವೆ ರಸ್ತೆಯನ್ನು ಹಾಕುವ ಪ್ರವೇಶದೊದನೆ ಸರ್ವೇಮಾಡುವಂತೆ ಹುಕುಂ ಆಗಿರುವದಾಗಿ ತಿಳಿಯಬರುತದೆ.

The British Resident's tour.—ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಮ|| ಗರ್ಡಿಲ್‌ಸ್ಟೋನ್‌ಯವರು ತಮ್ಮ ಭಾರ್ಯೆಯವರೊದನೆ ಮೈಸೂರು ಮತ್ತು ಕೊಡಗು ದೇಶಗಳ ಸಂಚಾರಾರ್ಥ ಕಳೆದ ಶುಕ್ರವಾರದವಿನ ಬೆಂಗಳೂರಿಂದ ಕುದುರೆ ತಪಾಲ್‌ಗಾಡಿಯಮೇಲೆ ನೆಲಮಂಗಲ ಮಾರ್ಗವಾಗಿ ಪ್ರಯಾಣವಾದರು. ಇವರ ಆಫೀಸ ನೌಕರರು ಕೆಲವರು ಸಹ ಹೋಗುತಲಿದ್ದಾರೆ. ಈ ಸಾಹೇಬರವರು ಯೆರಡುತಿಂಗಳಕಾಲ ಮೈಸೂರು ಮತ್ತು ಕೊಡಗುರಾಜ್ಯ ಸಂಚಾರಮಾಡಿಕೊಂದು ಬರುವ ಫೆಬ್ರವರಿ ೧೯ನೇ ತಾರೀಖ್ ಸುಮಾರಿಗೆ ಬೆಂಗಳೂರಿಗೆ ವಾಪಸ್ ಬಂದು ಫರ್ಲೋರಜಾಮೇಲೆ ಸ್ವದೇಶಕ್ಕೆ ಹೊರಡುವರೆಂತಲೂ, ಆಕಾಲಕ್ಕೆ ಸರಿಯಾಗಿ ಇಲ್ಲಿನ ಕಾಯಂ ರೆಸಿಡೆಂಟರಾದ ಮೆ. ಜೆ. ಬಿ. ಲ್ಯಾಲ್‌ಯವರು ತಮ್ಮ ರಜಾದಿಂದ ವಾಪಸ್ ಬಂದು ತಮ್ಮ ಕೆಲಸದ ಜಾರ್ಜ್ಜಂ ವಹಿಸುವರೆಂತಲೂ ಹೇಳಿಕೊಳ್ಳುತ್ತಾರೆ.

The weather.—ಗತವಾರದಲ್ಲಿ ಮೂರು ನಾಲ್ಕುದಿನಗಳು, ಅಂದರೆ ಆದಿತ್ಯವಾರದಮೊದಲು ಬುಧವಾರದವರೆಗೆ ಸೂರ್ಯರಶ್ಮಿಯಿಲ್ಲದೆ ಜಡಿಹಿಡದು ಬಹಿಸ್ಸಂಚಾರವೇ ಪ್ರಯಾಸಕರವಾಗಿತ್ತು. ಈಗ್ಯೆ ಯೆರಡುಮೂರು ದಿನಗಳಿಂದ ಮರಳಿ ಬಿಸಿಲು ಅಧಿಕವಾಗಿದೆ. ಪರಂತು ಬುಧವರ್ಷಮಾತ್ರ ಕಡಮೆಯಾಗಿಲ್ಲವು. ಚಳಿಯು ಅಧಿಕವಾಗಿದೆ. ಡಿ|| ಜಾತಿ ರಿಪೋರ್ಟನ್ನು ನೋಡಲಾಗಿ ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟುಗಳುವಿನಾ ಅನ್ಯತ್ರ ಯಥೋಚಿತ ಮಳೆಆಗಿರುವಂತೆ ತಿಳಿಯಬರುತಿದೆ. ತುಮಕೂರು, ಮೈಸೂರು, ಶಿವಮೊಗ್ಗಾಪ್ರಾಂತಗಳುವಿನಾ ಮಿಕ್ಕಕಡೆಗಳಲ್ಲೆಲ್ಲ ಜನಾರೋಗ್ಯ ಚನ್ನಾಗಿದೆ. ಮೇಲ್ಕಂಡ ಡಿಸ್ಟ್ರಿಕ್ಟುಗಳಲ್ಲಿ ಜ್ವರ ಆಮಶಂಕೆ ಶೀತಿ ಬಾಧೆಗಳು ವ್ಯಾಪಿಸಿದೆ. ಸರ್ವತ್ರ ಈಗ ಬೆಳೆಯೊಳಿರುವ ಪೈರುಗಳು ನೋಡುವದಕ್ಕೆ ಬಹಳ ಚನ್ನಾಗಿವೆ. ಹಿಂದಿನವಾರಕ್ಕಿಂತಲೂ ಗತವಾರದಲ್ಲಿ ದಾರಣೆಯು ಸ್ವಲ್ಪಇಳಿಯಿತು. ದನಗಳಿಗೆ ಕೆಲವುಕಡೆ ಆರೋಗ್ಯಸಾಲದು.

The Police Reorganisation.—ಈರಾಜ್ಯವನ್ನು ಶ್ರೀಮನ್‌ಮಹಾರಾಜರವರಿಗೆ ಒಪ್ಪಿಸಲಿಕ್ಕೆ ಸರ್ವಾಂಶದಿಂದಲೂ ಅನುಗುಣವಾಗಿಮಾಡಬೇಕೆಂಬ ತಾತ್ಪರ್ಯದೊದನೆ ಆಕ್ಟಿಂಗ್ ಬ್ರಿಟಿಷ್ ಚೀಫ್‌ಕಮ್ಮಿಷನರಾದ ಸರ್ ಜೇಂಸ್ ಗಾರ್ಡನ್‌ಯವರು ಈ ಸಂಸ್ಥಾನಕ್ಕೆ ಸಂಬಂಧಪಟ್ಟ ಇಲಾಖೆಗಳನ್ನೆಲ್ಲ ಪುನರ್ವ್ಯವಸ್ಥೆಮಾಡಿ, ಆ ಪೈಕಿ ಒಂದಾದ ಇಲ್ಲಿನ ಪೋಲೀಸ್ ಇಲಾಖೆಯ ಕೆಲವು ಚಳತಕ್ರಮಗಳಂ ಬದಲಾಯಿಸಿ, ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಇರುತಲಿದ್ದ ಪೋಲೀಸ್ ಅಸಿಸ್ಟೆಂಟುಗಳನ್ನು ತೆಗದುಹಾಕಿ, ಪೋಲೀಸ್ ಇನ್ಸ್‌ಪೆಕ್ಟರ್‌ಗಳ ತಲಬ್‌ಗಳನ್ನು ಕಡಮೆಮಾಡಿ ಅವರನ್ನು ತಾಲ್ಲೂಕು ಅಮಲ್‌ದಾರರುಗಳ ತಾಬೆಗೆ ಒಳಪಡಿಸಿದ ಅಂಶವು ಯಲ್ಲರಿಗೂ ಜ್ಞಾಪಕದೊಳಿರಬಹುದಷ್ಟೆ. ಈ ಕ್ರಮದಿಂದ ವುಂಟಾದ ಅವ್ಯವಸ್ಥೆಗಳಂ ಕುರಿತು ಹಿಂದೆ ಅನೇಕಾವರ್ತಿ ಈ ಪತ್ರಿಕೆಯಲ್ಲಿ ವಿಶದವಿಶೇಷವಾಗಿ ವಿಚಾರಮಾಡಿರುತ್ತೇವೆ. ಪರಂತು ಸದರೀ ವಿಷಯ ಇದುವರಿವಿಗೂ ಒಂದುಬಗೆ ವ್ಯವಸ್ಥೆಯನ್ನೈದದಿತ್ತು. ಈಚೆಗೆ ನಡೆದ ಕೆಲವು ಯೇರ್ಪಾಡುಗಳಿಂದ ಹಿಂದಿನ ಪದ್ಧತಿಯೇ ಮರಳಿ ನೆಲಗೊಳಿಸಲ್ಪಡುವದೆಂದು ತಿಳಿಯಬರುತಿದೆ. ಹಿಂದೆ ವಜಾ ಮಾಡಲ್ಪಟ್ಟ ಪೋಲೀಸ ಅಸಿಸ್ಟೆಂಟ ಕಮ್ಮಿಷನರ್‌ಗಳು ಮರಳಿ ನೌಕರಿಗ್ಮಾದಲ್ಪಟ್ಟರಲ್ಲದೆ ಹಿಂದೆ ಇದ್ದಂತೆ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಯೆಂಬ ಹೆಸರಿನಲ್ಲಿ ಪೋಲೀಸ್ ಆಡಳಿತದ ವಿಚಾರಣೆಯಬಗ್ಯೆ ಒಬ್ಬ ಮುಖ್ಯಾಧಿಕಾರಿಯು ನಿಯಮಿಸಲ್ಪಟ್ಟರು. ಸರ್ ಜೇಂಸ ಗಾರ್ಡನ್‌ಯವರ ಕ್ರಮವನ್ನನುಸರಿಸಿ ಅಮಲ್‌ದಾರರುಗಳ ತಾಬೆಯೊಳಪಲ್ಪಟ್ಟಿದ್ದ ಇನ್ಸ್‌ಪೆಕ್ಟರ್‌ಗಳೆಲ್ಲರಿಗೂ ಜಾಸ್ತೀ ತಲಬ್ ನಿಜೀ ಸ್ವತಂತ್ರಾಧಿಕಾರವು ಮರಳಿ ಕೊಡಲ್ಪಡುವವು. ಹೆಡ್‌ಕ್ವಾರ್ಟರ್ಸ್ ಇನ್ಸ್‌ಪೆಕ್ಟರ್‌ಗಳು ಅನಾವಶ್ಯಕವೆಂದು ತೋರಬಂದದರಿಂದ ಅವರು ವಜಾ ಮಾಡಲ್ಪಡುವರೆಂದು ಕೇಳುತ್ತೇವೆ. ಪರಂತು ಇವರನ್ನು ತೆಗದುಹಾಕುವದರಲ್ಲಿ ಇವರ ತಲಬಿಗೆ ಅನುಗುಣವಾದ ಬೇರೊಂದು ಕೆಲಸ ಕೊಡುವದರ ಮೂಲಕವಾಗಲಿ, ಅವರ ತಲಬ್‌ಗಳನ್ನು ಮುನಾಸಬ್ ಇತರ ಇನ್ಸ್‌ಪೆಕ್ಟರ್‌ಗಳಿಗೆ ಇಜಾಫೆ ಕೊಡುವದರಮೂಲಕವಾಗಲಿ, ಪೋಲೀಸ್ ಬಂದೋಬಸ್ತಿಯಬಗ್ಯೆ ಸರಹದ್ದು ಪ್ರಾಂತಗಳೊಳು ಜಾಸ್ತೀಶಿಬ್ಬಂದಿಯನ್ನು ಇಡುವದರಮೂಲಕವಾಗಲಿ ಏಲೇ ಮಾಡಲ್ಪಡುವದೆಂದು ತಿಳಿಯಬರುತಿದೆ. ಮೇಲ್ಕಂಡ ಮೂರು ಅಂಶಗಳ ಪೈಕಿ ಯಾವದು ಸುಲಭಸಾಧ್ಯವೆಂದು ಇನ್ಸ್‌ಪೆಕ್ಟರ್ ಜನರಲ್ಲವರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್‌ಗಳನ್ನು ಕೇಳಿರುತ್ತಾರೆ. ಅದಮಾಯಿಷಿಬಗ್ಯೆ ಸದರೀ ಯೇರ್ಪಾಡು ಪ್ರಥಮತಃ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಜಾರೀಗೆ ತರಲ್ಪಡುವದೆಂದು ಕೇಳುತ್ತೇವೆ. ಈ ಏರ್ಪಾಡಿನೊಳು, ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್‌ಗಳಗತಿ ಹ್ಯಾಗೆ ಪರ್ಯವಸಾನವನ್ನೈದುವದೋ ಅದು ಸದ್ಯಃ ತಿಳಿಯಕೂಡದಾಗಿದೆ.

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

WAR IN SERVIA.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಲಂಡನ್, ೧೯ನೇ ನವಂಬರ್.— [illegible]

ಲಂಡನ್, ೧೯ನೇ ನವಂಬರು.— [illegible]

[illegible], ೧೯ನೇ ನವಂಬರು.— [illegible]

[illegible], ೨೦ನೇ ನವಂಬರು.— [illegible]

[illegible]

[illegible], ೨೦ನೇ ನವಂಬರು.— [illegible]

SPEECH DELIVERED BY THE

DEWAN OF MYSORE,

before the Representative Assembly at Mysore, on the 21st October 1885

(ಕಳೆದವಾರದ ಶೇಷ.)

ಮಾರೀಕಣಿವೆ ಕೆಲಸವು.

ಹಿರಿಯೂರು ಸಮೀಪದಲ್ಲಿ ಯಿರುವ ಮಾರೀಕಣಿವೇಯೆಂಬ ಪೂರ್ವದಲ್ಲಿ ಪ್ರಸಿದ್ಧವಾಗಿದ್ದ ಕೆರೆಕಾಮಗಾರಿಯನ್ನ ನಾಡಿಸಲು ಪುನಃ ಆಲೋಚನೆಮಾಡುತ್ತಾಯಿದೆ. ಇದು ಸಾಧ್ಯವಾದ ಕೆಲಸವೆಂದು ಪ್ರಥಮತಃ ೧೮೫೫ನೇ ಇಸವಿಯಲ್ಲಿ ಮೆ|| ಡಾಬಸ್‌ಸಾಹೆಬರವರಿಂದ ನಮೂದಿಸಲ್ಪಟ್ಟಿತು. ನಂತರ ಸರ್‌ಮಾರ್ಕ್ ಕಬ್ಬನ್‌ಸಾಹೆಬರವರ ಅಪೇಕ್ಷಾನುಸಾರವಾಗಿ ಕರ್ನಲ್ ಗ್ರೀನ್‌ಯವರಿಂದ ಈ ವಿಷಯವು ಶೋಧಿಸಲ್ಪಟ್ಟಿತು. ೧೮೬೯ನೇ ಇಸವಿಯಲ್ಲಿ ಮೇಜರ್ ಸ್ಯಾಂಕಿಯವರಿಂದ ತಯಾರ್ ಮಾಡಲ್ಪಟ್ಟ ತಖತೀಖು ಇಂಡ್ಯಾ ಗವರ್ನ್‌ಮೆಂಟಿನವರಿಗೆ ಜಾಹಿರ್ಮಾಡಲ್ಪಟ್ಟಿತು. ಆದರೆ ನೀರಿನ ಸರಬರಾಯಿಗೋಸ್ಕರ ತಯಾರಾಗಬೇಕಾಗಿದ್ದ ನಾಲೆಗಳ ಕುಲ್ಲು ಅಂದಾಜು ತೋರಿಸಿರಲಿಲ್ಲವಾಗಿ ಕಾಗದ ಪತ್ರಗಳು ಬಿಟ್ಟವು ವಾಪಸ ಆಯಿತು. ನಂತರ ೧೮೭೩ನೇ ಇಸವಿವರಿಗು ಸರ್ವೆ ಕೆಲಸಗಳು ನಡಿಯಿತು. ಅಷ್ಟಕ್ಕೆ ಹಣವಿಲ್ಲದೆಹೋದ ಸಬಬು ಈ ಕಾಮುಗಾರಿಯನ್ನ ಬಿಟ್ಟುಬಿಟ್ಟದ್ದಾಯಿತು. ಈಸ್ಥಳದಲ್ಲಿ ಅತಿ ವಿಶಾಲವಾದ ಒಂದು ದೊಡ್ಡ ಕೆರೆಯನ್ನು ಕಟ್ಟುವದಕ್ಕೆ ಸ್ವಭಾವಸಿದ್ಧವಾದ ಅನುಕೂಲಗಳು ಬಹಳವಾಗಿಯಿವೆ. ಮಾರೀಕಣಿವೆ ಯೆಂಬ ಎರಡುಗುಡ್ಡೆಗಳ ಮಧ್ಯದಲ್ಲಿರುವ ಸಂಧನ್ನು ಮುಚ್ಚಬಿಡಬಹುದು. ಇದರ ಉತ್ತರಕ್ಕೆ ೧೪ ಮೈಲಿಯಲ್ಲಿ ಮಾದಿಹಳ್ಳಿಬಳಿ ಇರುವ ಗುಡ್ಡದ ನೆತ್ತಿಯಮೇಲೆ ಕೋಡಿಯನ್ನ ಇಡಬಹುದು. ಹೀಗೆ ಮಾಡುವದಕ್ಕೆ ೧೩೦ ಅಡಿ ಎತ್ತರ ಒಂದು ಉನ್ನತವಾದ ಏರಿಯನ್ನು ಕಟ್ಟಬೇಕಾಗುತ್ತೆ ಮತ್ತು ಇದನ್ನ ಪೂರೈಸಬೇಕಾಗಿದ್ದರೆ ಬಹಳವಾಗಿ ಖರ್ಚು ಹಿಡಿಯುತ್ತೆ. ಇದರಲ್ಲಿ ಜಮಾಯಿಸುವ ನೀರನ್ನೆಲ್ಲ ಉಪಯೋಗಿಸುವಹಾಗೆ ಆ ಡಿಸ್ಟ್ರಿಕ್ಟಿನಲ್ಲಿ ಸಾಗುವಳಿ ವಿಸ್ತರಿಸಬೇಕಾದರೆ ಅನೇಕವರುಷಗಳವರಿಗು ಹಿಡಿಯುತ್ತೆ. ಪ್ರಾರಂಭದಲ್ಲಿಯೇ ಏರಿಯನ್ನ ಅಷ್ಟು ಉನ್ನತವಾಗಿ ಪೂರೈಸಬೇಕೆಂಬ ಅಭಿಪ್ರಾಯವಿಲ್ಲ. ಮೈಸೂರು ಸರ್ಕಾರದವರು ಈ ದೊಡ್ಡ ಕಾಮುಗಾರಿಯನ್ನ ಪ್ರಾರಂಭಿಸಿ ದ್ರವ್ಯಾನುಕೂಲವಾದ ಹಾಗೂ ಮತ್ತು ಜಾಸ್ತಿ ನೀರು ಜಮಾಯಿಸಬೇಕೆಂದು ಅನುಭವದಿಂದ ತಿಳಿಯಬಂದಹಾಗೂ ಸಹ ಕ್ರಮೇಣ ಪೂರೈಸಬಹುದೆಂದು ಆಲೋಚಿಸಿರುತ್ತಾರೆ. ಮೊದಲು ಅಸ್ತಿಭಾರದ ತ್ತೊಂದರೆಯು ದೊಡ್ಡದಾಗಿ ಸಂಭವಿಸುತ್ತೆ. ನಂತರ ಸ್ವಲ್ಪ ಸ್ವಲ್ಪವಾಗಿ ಕಾಮುಗಾರಿ ನಡೆಯಬೇಕಾಗಿರುವದರಿಂದ ಕೆಲಸ ಪೂರೈಸಿ ಮಾದಿಹಳ್ಳಿ ಬಳಿಯ ಗುಡ್ಡದ ನೆತ್ತಿಯು ಉಪಯೋಗಕ್ಕೆ ಬರುವವರಿಗು ಪ್ರವಾಹದ ನೀರನ್ನು ಬಿಟ್ಟುಬಿಡುವದಕ್ಕೆ ತಕ್ಕ ಏರ್ಪಾಡು ಮಾಡಬೇಕಾಗುತ್ತೆ. ನೀರಿನ ಸರಬರಾಯಿಯು ೨ನೇ ಸಾಲಿನಲ್ಲಿ ಪ್ರಾರಂಭವಾಗಬಹುದು. ೩ನೇ ಸಾಲಿನಲ್ಲಿ ಏರಿಯನ್ನ ೬೦ ಅಡಿವರಿಗು ಎತ್ತರಿಸಿದರೆ ೭—೮ ಸಾವಿರ ಎಕರೆವರಿಗೂ ಮತ್ತು ೧೦೦ ಅಡಿವರಿಗು ಅದರ ಉನ್ನತವನ್ನು ಹೆಚ್ಚಿಸಿದರೆ ೫೦ ಸಾವಿರ ಎಕರೆ ಜಮೀನುವರಿಗು ವಿಸ್ತರಿಸಬಹುದು. ಏರಿಯ ಇಷ್ಟು ಮಟ್ಟಿನ ಪುರಾವಣೆಯು ಬಹು ವರುಷಗಳ ವರಿಗೂ ಪ್ರಾಯಶಃ ಸಾಕಾಗುತ್ತೆ. ಹಿಂದೆ ಆಗಿರತಕ್ಕ ಖರ್ಚು ಇದಕ್ಕಾಗಿ ಹಾಲಿ ತಗಲುವ ಖರ್ಚು ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಖರ್ಚುಗಳು ಎಲ್ಲಾ ಸೇರಿ ೨೦ಲಕ್ಷ ರೂಪಾಯಿಗಳು ಆಗಬಹುದು. ಹುಟ್ಟುವಳಿಯ ಮೊಬಲಗಿನಲ್ಲಿ ಪ್ರತಿಕ್ಷಯ ಮತ್ತು ವಸೂಲಾತಿ ಖರ್ಚು ವಜಾ ಮಾಡಿ ಬಾಕೀಮೊಬಲಗು ಮೂಲದ್ರವ್ಯದಮೇಲೆ ಸಾಲಿಯಾನಾ ಶೇಕಡ ೭¼ ರೂಪಾಯಿ ಪ್ರಕಾರ ಅಂದಾಜ್ ಆಗುತ್ತೆ. ಈ ಕಾಮುಗಾರಿ ಪೂರೈಸಿದ್ದಾದರೆ ಚಿತ್ರದುರ್ಗದ ಕೆಲವು ಪ್ರದೇಶಗಳಿಗಾಗಿ ಪದೇಪದೆ ಉಂಟಾಗುವ ಚಿಂತೆಯಿಂದ ಬಿಡುಗಡೆಯಾಗಬಹುದು. ಆದ್ದರಿಂದ ಅವಶ್ಯವಾದ ವಿಚಾರವನ್ನು ಮಾಡಿ ಸರ್ವೆ ಪೂರೈಸಿ, ಮುಖ್ಯವಾದ ಕಾಮುಗಾರಿಗು ನೀರನ್ನು ಹಾಯಿಸತಕ್ಕ ಕಾಲ್ವೆಗಳ ಕಾಮುಗಾರಿಗಳಿಗು ಅಂದಾಜನ್ನು ಮಾಡುವಬಗ್ಯೆ ಹಾಗೆಯೇ ಐಯಿಂದ ಹುಟ್ಟುವಳಿ ಆಗಬಹುದಾದ ಮೊಬಲಗು ಕೂಡಾ ನಿಶ್ಕರ್ಷೆ ಮಾಡಲ್ಪಡುವ ಬಗ್ಯೆ ಕ್ಷಿಪ್ರದಲ್ಲಿಯೇ ತಕ್ಕ ಏರ್ಪಾಡು ಮಾಡಲ್ಪಡುತ್ತೆ.

ದೇಶವಿವರಣಾ ಲೆಕ್ಕಗಳ ತಯಾರಿ ಮತ್ತು ತನಿಖೆ.

ಈ ವರುಷ ಪ್ರಾಪ್ತವಾಗುವಂತೆ ಇದ್ದ ಕ್ಷಾಮದ ಸಂದರ್ಭದಲ್ಲಿ ಹಾಲಿ ಜೆರಾಯತ್ ಬಾಬತು ಜನನ ಮರಣ ಬಾಬತು ಮತ್ತು ದೇಶದ ಅಹವಾಲ್ ಬಾಬತಿನ ಲೆಕ್ಕಗಳ ತಯಾರಿ ವೃದ್ಧಿಸ್ಯೆ ಇರುವ ಹಾಲಿ ಏರ್ಪಾಡಿನಲ್ಲಿ ಕೆಲವು ನ್ಯೂನತೆಗಳು ಜಾಹಿರಾತಿಗೆ ಬಂದಿದೆ. ಮೈಸೂರಿನಂಥ ಚಿಕ್ಕದಾದ ದೇಶಕ್ಕೆ ಪ್ರತ್ಯೇಕವಾದ ಅಗ್ರಿಕಲ್‌ಚರಲ್ ಡಿಪಾರ್ಟ್ಮೆಂಟು ಅಂದರೆ—ವ್ಯವಸಾಯದ ತನಿಖೆ ತೆಗದುಕೊಳ್ಳತಕ್ಕ ಇಲಾಖೆ ಅವಶ್ಯವಿಲ್ಲ, ಆದರೆ ಹೆಡ್‌ಕ್ವಾರ್ಟರ್‌ನಲ್ಲಿ ಕಾಲಸ್ಥಿತಿ, ಜೆರಾಯತೀ, ಪ್ರಜೆಗಳ ಕ್ಷೇಮಾದಾಯ, ಇವುಗಳ ಸ್ಥಿತಿಯನ್ನು ತೋರಿಸುವ ಲೆಕ್ಕಗಳನ್ನು ತನಿಖೆ ತೆಗದುಕೊಳ್ಳುವದಕ್ಕಾಗಿ ಅನುಭವವುಳ್ಳ ಮತ್ತು ಹೆಳಬರಾದ ಆಫಿಸರರು ಇರತಕ್ಕದ್ದು ಅತ್ಯವಶ್ಯಕ. ಮತ್ತು ಅದರ ಮೂಲಕ ಫಸಲ್ ನಷ್ಟ ಆಗಬಹುದಾದದ್ದು ನಿಜವಾಗಿಯು ನಷ್ಟ ಆದದ್ದು ಇವೆರೆ ಪ್ರಮಾಣ ಮತ್ತು ಅದರಿಂದ ಉಂಟಾಗತಕ್ಕ ಫಲ ಈ ವಿಷಯದಲ್ಲಿ ಅತಿ ತ್ವರಿತವಾಗಿಯು ನಿಕರವಾಗಿಯು ತಿಳಿದುಕೊಳ್ಳಬಹುದು. ಯಥಾಸ್ಥಿತವಾದ ಕಾಲಗಳಲ್ಲಿ ಈ ಕೆಲಸವಾತ್ರವೆ ಪ್ರತ್ಯೇಕವಾದ ಒಬ್ಬ ಆಫೀಸರಿಗೆ ಸಾಲದು. ಆದ್ದರಿಂದ ಡೈರೆಕ್ಟರ ಆಫ್ ಸ್ಟಾಟಿಸ್ಟಿಕ್ಸ್ ಎಂಬ ಈ ಕೆಲಸವೊಂದಿಗೆ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅಂಡ್ ಆಫ್ ಫಾರೆಸ್ಟ್ ಅಂಡ್ ಪ್ಲಾಂಟೇಷನ್ ಕೆಲಸವನ್ನು ಸೇರಿಸಬೇಕೆಂದು ಯೋಚನೆಯಲ್ಲಿದೆ. ಪ್ರತಿ ಡಿಸ್ಟ್ರಿಕ್ಟಿನ ಹೆಡ್‌ಕ್ವಾರ್ಟರ್‌ನಲ್ಲಿರುವ ಟ್ರಜರಿ ಅಸಿಸ್ಟೆಂಟರಿಗೆ ಈ ಲೆಕ್ಕಗಳನ್ನು ವಹಿಸುತ್ತೆ.

ಹಿಂದಿನ ೩ ಸಾಲಿಗಳ ಅನುಭವದಿಂದ ಹೆಡ್‌ಕ್ವಾರ್ಟರಿಗೆ ಅತಿ ದೂರವಾದ ಮತ್ತು ದೊಡ್ಡ ಸ್ಥಳವಾದ ಚಿತ್ರದುರ್ಗದಲ್ಲಿ ಈಗಿನ ಸಬ್ ಡಿವಿಜನಿಗೆ ಬದಲಾಗಿ ಕ್ರಮವಾಗಿ ಡಿಸ್ಟ್ರಿಕ್ಟನ್ನೇ ಪುನಃ ಸ್ಥಾಪಿಸಬೇಕಾದ ಅವಶ್ಯಕ ತೋರಿಬಂದಿದೆ. ನಿಮಗೆ ತಿಳದಹಾಗೆ ಈ ಪ್ರದೇಶವು ಈ ಸಂಸ್ಥಾನದ ಒಂದು ಕಿನಾರೆಯಲ್ಲಿರತಕ್ಕದ್ದಾಗಿದೆ. ಬಹಳವಾಗಿ ದೂರವಾದ ಸರಹದ್ದು ಜರೆದು ಇರತಕ್ಕದ್ದಾಗಿದೆ. ಕೆಲವು ಕಡೆಗಳಲ್ಲಿ ಬಹಳ ಕಾಡಾಗಿಯೂ ಬೆಟ್ಟಗುಡ್ಡಗಳುಳ್ಳದ್ದಾಗಿಯೂ ಪಕಾಯತೀ ಮಾಡತಕ್ಕವರಿಗೆ ಆಸರೆಯಾಗಿಯುಯಿದೆ. ಮತ್ತು ಅಲ್ಲಿ ಪದೇಪದೆ ಅನಾವೃಷ್ಟಿ ಸಂಭವಿಸುತ್ತಾದ್ದರಿಂದ ಗವರ್ನ್‌ಮೆಂಟಿನವರಿಗೆ ಚಿಂತೆಗೆ ಯಾವಾಗ್ಯೂ ಆಕರವಾಗಿದೆ. ಈ ಸಬ್‌ಡಿವಿಜನ್‌ಗೆ ಬದಲು ಕ್ರಮವಾದ ಡಿಸ್ಟ್ರಿಕ್ಟನ್ನು ಇಟ್ಟ ವಶ್ಯೇ ಮತ್ತು ಪೊಲೀಸ್ ಕೆಲಸಗಳು ನಡೆಯುವದಕ್ಕೆ ಪೂರಾ ಜಬ್ಬೆಂದಿ ಕೊಟ್ಟು ಸ್ಥಾಪಿಸಿದ್ದಾದರೆ, ಸ್ಥಳದಲ್ಲಿಯೇ ಜವಾಬ್ದಾರಿ ವಹಿಸತಕ್ಕವರಿರುತ್ತಾರಲ್ಲದೆ ಕೆಟ್ಟ ಕೃತ್ಯಗಳು ಮೋಕೂಫ್ ಆಗುವದಕ್ಕೆ ಕಾರಣವಾಗುತ್ತೆ ಮತ್ತು ಕ್ಷಾಮಕಾಲದಲ್ಲಿ ರಿಲೀಫ್ ಏರ್ಪಾಡಿಗೆ ಮುಖ್ಯವಾದ ಅನುಕೂಲ ಕೆಲಸವಾಗಿರುತ್ತೆ.

ಈಗಿನ ಮೈಸೂರು ಡಿಸ್ಟ್ರಿಕ್ಟ್ ಬಹಳ ದೊಡ್ಡದಾಗಿ ಇರುತ್ತೆ. ಇದರಿಂದ ಕೆಲಸ ಕಾರ್ಯಗಳು ಕೇವಲ ಸರೀಗಾಗಿ ನಡೆಯುವದಕ್ಕೆ ತೊಂದರೆ ಆಗಿದೆ. ಹಾಸನ ಸಬ್‌ಡಿವಿಜನನ್ನು ತೆಗದು ಪೂರ್ವದಂತೆ ಡಿಸ್ಟ್ರಿಕ್ಟ್ ಸ್ಥಾಪಿಸಿ ಮೈಸೂರು ಡಿಸ್ಟ್ರಿಕ್ಟ್ ವಿಸ್ತೀರ್ಣವನ್ನು ಕಮ್ಮಿಮಾಡಿ ಕೆಲಸಗಳಿಗೆ ಸೌಲಭ್ಯವನ್ನು ಉಂಟುಮಾಡುವದು ಮುಂದೆ ಯೋಚಿಸಬೇಕಾದೀತು. ಆದರೆ ಹಾಸನದಲ್ಲಿ ಡಿಸ್ಟ್ರಿಕ್ಟ್ ಸ್ಥಾಪಿಸತಕ್ಕ ವಿಚಾರ ಚಿತ್ರದುರ್ಗದಷ್ಟು ತುರತ್ತಾದ್ದಲ್ಲ.

ರೆವಿನ್ಯೂ ಆಜಾ ಬಾಜಾ ತಾಲ್ಲೂಕುಗಳನ್ನು ಪೂರ್ವದಂತೆ ಸ್ಥಾಪಿಸುವ ಅಂಶ.

ಸರಹದ್ದಿನಲ್ಲಿರತಕ್ಕ ಮುಖ್ಯವಾದ ಕೆಲವು ತಾಲ್ಲೂಕುಗಳನ್ನು ಒಡೆದು ಪ್ರಾಂತಮಾಡಿದ ಆಜಾ ಬಾಜಾ ತಾಲ್ಲೂಕು ತಾಲ್ಲೂಕುಗಳನ್ನು ಗಳಿಗೆ ಸೇರಿಸಿ ಬಿಟ್ಟದ್ದರಿಂದ ಸ್ಥಳದ ಜನಗಳಿಗೆ ಬಹಳ ಅನಾನುಕೂಲವುಂಟಾಗಿದೆ ಎಂದು ಅನುಭವದಿಂದ ದೃಷ್ಟಾಂತರಕ್ಕೆ ಬಂದಿದೆ. ಈ ಅನಾನುಕೂಲವು ಮಳವಳ್ಳಿ, ಅರಕಲಗೂಡು, ಮಾಲೂರು, ಕಣಕುಪ್ಪೆ ದೇವನಹಳ್ಳಿ, ಈ ಸ್ಥಳಗಳಲ್ಲಿ ವಿಶೇಷವಾಗಿದೆ. ಈತಾಲ್ಲೂಕುಗಳನ್ನು ಪ್ರೋತಮಾಡಿದ ಭಾಗಾಯತು ಅನಾನುಕೂಲವೆಂದು ಫಿರ್ಯಾದುಗಳು ಬರುತ್ತಾ ಇವೆ, ಮತ್ತು ಕೆಲವು ಸಂದರ್ಭಗಳಲ್ಲಿ ನಿಜವಾಗಿಯು ತೊಂದರೆ ವುಂಟಾಗಿದೆ. ಚೆನ್ನಾಗಿ ಅದಮಾಯಿಸಿ ಮಾಡುವವರಿಗು ಹೊಸ ಏರ್ಪಾಡನ್ನು ಬದಲಾಯಿಸಲು ನಮಗೆ ಸಮ್ಮತಿ ಇರಲಿಲ್ಲ ಈಚಿನ ಅನುಭವದಿಂದ ತಿಳಿಯಬರುವದೇನಂದರೆ.—ಪರ್ಯಾಯಕ್ಕೆ ಧಾಯಿದೆ ಅಲ್ಲ, ಗವರ್ನ್‌ಮೆಂಟಿನ ಕೆಲಸಕಾರ್ಯಗಳು ಮೊದಲಿನಷ್ಟು ಉತ್ತಮಸ್ಥಿತಿಯಲ್ಲಿ ಇಲ್ಲ. ರೈತರುಗಳಿಗೂ ಗ್ರಾಮದ ನೌಕರರುಗಳಿಗೂ ಅನಾನುಕೂಲ, ಸ್ಥಳದ ವ್ಯಾಪಾರಕ್ಕೆ ಪ್ರಪ್ರಯುಕ್ತ ಹಾನಿಕರ ಆದ್ದರಿಂದ ಒಡೆದುಹಾಕಿದ ಕೆಲವು ತಾಲ್ಲೂಕುಗಳನ್ನು ಕ್ಷಿಪ್ರದಲ್ಲಿಯೇ ಪುನಃ ಸ್ಥಾಪಿಸಬೇಕೆಂದು ಶ್ರೀಮನ್ಮಹಾರಾಜರವರ ಗವರ್ನ್‌ಮೆಂಟಿನವರು ನಿಶ್ಕರ್ಷೆ ಮಾಡಿದಾರೆ.

ಲೆಜಿಸಲೇಟಿವ್ ಅಂದರೆ.

ಲೆಜಿಸಲೇಟಿವ್ ಇಲಾಖೆಯಲ್ಲಿ ಕಳೆದ ಸಂವತ್ಸರ ಈ ಸಭೆಯಲ್ಲಿ ಚರ್ಚಿಸಿದ್ದ ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಯೆಂಬುವದು ಕಳೆದ ಏಪ್ರಿಲ್ ತಿಂಗಳಲ್ಲಿ ಮಂಜೂರಿಬಗ್ಯೆ ಇಂಡಿಯಾ ಗವರ್ನ್‌ಮೆಂಟಿಗೆ ಕಳುಹಿಸಲ್ಪಟ್ಟಿತು. ರೆವಿನ್ಯೂಕೋಡಿನ ಮಸೂದೆಯು ಆಖ್ಯೆರ್‌ವಳ್ಳೀ ಮೈಸೂರು ಗವರ್ನ್‌ಮೆಂಟಿನವರಿಂದ ತಿದ್ದುಪಾಟು ಮಾಡಲ್ಪಟ್ಟು ಸ್ವಲ್ಪ ಕಾಲದಮುಂಚೆ ಸರಕಾರಿ ಗೆಜೆಟ್ಟಿನಲ್ಲಿ ಛಾಯಿಷ್ ಮಾಡಲ್ಪಟ್ಟಿತು. ಅದು ಈಗ ಇಂಡಿಯಾಗವರ್ನ್‌ಮೆಂಟಿಗೆ ಹೋಗತಕ್ಕದ್ದಾಗಿದೆ.

ಬಹಳ ಮುಖ್ಯವಾದ ಫಾರೆಸ್ಟು ರೆಗ್ಯುಲೇಷನ್ ಇನ್ನು ಚರ್ಚೆಯಲ್ಲಿದೆ. ಈವಿಷಯವು ಅನೇಕ ತೊಂದರೆಗಳಿಂದ ಆವೃತವಾದದ್ದಾಗಿದೆ. ಫಾರೆಸ್ಟು ಸಂಗತಿಗಳಲ್ಲಿ ವಿಶೇಷ ಅನುಭವದಾರನಾದ ಬ್ರಂಡಿಸ್‌ನ್ಯಾಯಾ ಕರ್ತುಗಳೇ ಅವರ ಅಭಿಪ್ರಾಯ ಇತ್ಯರ್ಥವನ್ನು ಇನ್ನು ಮಾಡಿರುವದಿಲ್ಲ. ರೈತರುಗಳ ಕ್ಷೇಮಲಾಭಕ್ಕೆ ಅನಾನುಕೂಲವಾಗಿರುವದಾಗಲಿ ಸಮರ್ಪಕವಲ್ಲವೆಂದು ಭಾವಿಸಿ ಬೊಂಬಾಯಿಯಲ್ಲಿ ತಿದ್ದಲ್ಪಡುತ್ತಾಯಿದೆ. ಮೈಸೂರಿನಲ್ಲಿ ಈವಿಷಯವನ್ನು ಬಹಳ ಜಾಗರೂಕತೆಯಿಂದ ಆಲೋಚಿಸುತ್ತಾಯಿದೆ. ಆದರೆ ಈಗ ಪ್ರದ್ಯೋತಿಸಿರುವ ಫಾರೆಸ್ಟು ರಿಗ್ಯುಲೇಷನ್‌ನಲ್ಲಿ ಆಯಾಯ ಸ್ಥಳದ ಜನಗಳ ಕೋರಿಕೆಗಳು ಸ್ಥಳ ಪದ್ಧತಿಗಳು ಸ್ಥಳದ ಹಿಡುವಳಿ ಸ್ವಭಾವಗಳು ಬದಲಾಯಿಸಕೂಡದೆಂಬ ಮುಖ್ಯ ತತ್ವವನ್ನು ಮೈಸೂರು ಶ್ರೀಮನ್ಮಹಾರಾಜರವರ ಗವರ್ನ್‌ಮೆಂಟಿನವರು ಜಾರಿಯಲ್ಲಿಡರುತ್ತಾರೆ. ಅದರದೇಶದಲ್ಲಿ ಪ್ರಜೆಗಳು ವೃದ್ಧಿಹೊಂದಿ ವ್ಯವಸಾಯ ವಿಸ್ತರಿಸಿದರೆ ಅವರುಗಳ ಕ್ಷೇಮಕ್ಕಾಗಿಯೇ ಜೆಂಗಲುಗಳನ್ನು ನಾಶವಿಡಸದಂತೆ ಅಡ್ಡಿಮಾಡಬೇಕಾಗುತೆಂಬುವದು ಸ್ಪಷ್ಟವಾಗಿ ತಿಳಿಯತಕ್ಕದ್ದು, ಅವರ ಸಹಾಯವನ್ನ ಪಡದುಕೊಳ್ಳಬೇಕಾದದ್ದು ಫಾರೆಸ್ಟು ಆಫಿಸರುಗಳಿಗೆ ಮುಖ್ಯವುದ್ದಿಶ್ಯವಾಗಿರಬೇಕೆಂಬುವದು ಅವರಿಗೆ ಚೆನ್ನಾಗಿ ತಿಳಿಯಪಡಿಸುತ್ತೆ. ಈ ಸಂದರ್ಭದಲ್ಲಿ ಈಇಲಾಖೆಯನ್ನು ಒಬ್ಬ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟು ಅಂಡ್ ಪ್ಲಾಂಟೇಷನ್‌ಯೆಂಬ ಆಫೀಸರ ತಾಬೆಯಲ್ಲಿ ಇಡಬೇಕೆಂದು ಯೋಚಿಸಿದೆ.

BANGALORE:—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಕೋವಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈಃ ಶ್ರಿತಾ ಕುವರಿಶೋಭಿತಾ ದಿಶತಿ ಮಾನಸಂ ಸುಮದಂ ॥

Vol XII] BANGALORE —MONDAY NOVEMBER 30, 1885 [No 48

ಸಂಪುಟ ೧೨.] ಬೆಂಗಳೂರು — ಸರ್ ೧೮೮೫ನೇ ಇಸವಿ ನವಂಬರ್ ೩೦ನೇ ತಾರೀಖ್ ಸೋಮವಾರ. [ಸಂಚಿಕೆ ೪೮.

NOTICE.
VAIDYASARA SANGRAHA

Price including Postage, Rs 5-6-0

ಈ ಗ್ರಂಥಾಕ್ಕೆ ವೈದ್ಯರು ಹೊಂದಿದ ಸ್ವೀಕೃತ ಈ ಶೀಕೆ ಕುಜಾಣಾದಿಕರಿಗೆ ಬರೆದು ಕೊಳ್ಳಬಹುದು ಪುಸ್ತಕ ಸೋಡಬೇಕಾದವರು ಹೊಂದಿರುವ ಶೀಕಾಂಗಳಿಗೆ ... ನಿಗೇ ಕೊಡಲ್ಪಡಲಾಗದು

ಗ್ರಂಥದೊಡನೆ ... ಬರೆಯಬೇಕು

ಕ್ರಯ	ರೂ॥ ೫—೦—೦
ಅಂಚೆ ವೆಚ್ಚ	೦—೬—೦

ಬಿ ವಿ ವೆಂಕಟಾಚಾರ್ಯ, ... ಬೆಂಗಳೂರು

NOTICE.

ಎಸ್ ರಾಮಸ್ವಾಮಯ್ಯಂಗಾರ್ ಕಂಪನಿ.
ಜನರಲ್ ಕಮಿಷನ್ ಮರ್ಚೆಂಟ್

ಬೆಂಗಳೂರು ದರಗನಪೇಟೆಯಲ್ಲಿರುವ ಎಸ್ ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ಸಮಸ್ತ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನಡೆಸಿಕೊಡುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟೀಸ್

ಈ ಪತ್ರಿಕೆಯನ್ನು ನಾವು ಮರಳಿ ಪ್ರಕಟಿಸಲು ಪ್ರಾರಂಭಿಸಿ ಕಳೆದ ಅಕ್ಟೋಬರ್ ಎಪ್ಪತ್ತಿಗೆ ೧೨ ಸಂವತ್ಸರಗಳು ಪೂರ್ತಿಯಾದವು. ಈ ಹನ್ನೆರಡು ಸಂವತ್ಸರಗಳ ಕಾಲದಲ್ಲಿ ಪ್ರತಿ ಸಾಲ ನೆಲ್ಲೂ ಚಂದಾ ಬಾಕೀಗಳು ಬಹಳವಾಗಿ ಹೊರಗ ನಿಂತುಹೋಗುತ್ತ, ವಸೂಲೀಗೆ ಮಾರ್ಗವಿಲ್ಲದೆ ಅರ್ಥನಿಯಮಕವಾದ ಅನುಪಪತ್ತಿಗೆ ಪಾತ್ರರಾಗುರಿಯಾಗಬೇಕಾಗಿ ಬಂದದರಿಂದ, ಸರ್ ೧೮೮೬ನೇ ಇಸವಿ ಜನವರಿ ಲಾಗಾಯತು ಚಂದಾ ಮೊಬಲಗನ್ನು ಅಡ್ವಾನ್ಸ ಕೊಡತಕ್ಕವರಿಗೆ ಮಾತ್ರ ಈ ಪತ್ರಿಕೆಯನ್ನು ಕಳುಹಿಸತಕ್ಕದ್ದೆಂದು ನಿರ್ಣಯಿಸಿರುತ್ತೇವೆ. ಹಾಗೆ ಅಡ್ವಾನ್ಸ ಕಳುಹಿಸುವ ಚಂದಾದಾರರ ಸಂಖ್ಯೆಯೂ ಅವರಿಂದ ವಸೂಲಾಗುವ ಮೊಬಲಗೂ ಈ ಪತ್ರಿಕೆಯನ್ನು ಅರ್ಥನಿಯಮಕವಾದ ಅನುಪಪತ್ತಿ ಲೇಶವೂ ಇಲ್ಲದೆ ನಡೆಸುತ ಬರುವದಕ್ಕೆ ಸಾಕಾಗಿರುವದೇ ಎಂಬ ಅಂಶವನ್ನು ಪೂರ್ವಭಾವಿಯಾಗಿ ತಿಳಿಯಕೊಳ್ಳಬೇಕಾಗಿರುವದರಿಂದ, ಮೇಲಿನ ನಮ್ಮ ಯೋಚನೆಯನ್ನು ಅನುಮೋದಿಸಿ ಪ್ರೋತ್ಸಾಹಿಸಲು ಅಪೇಕ್ಷೆಯುಳ್ಳ ದೊಡ್ಡಮನುಷ್ಯರೆಲ್ಲರು ಈ ತಿಂಗಳ ೯ನೇ ತಾರೀಖ್ ಸೋಮವಾರದ ಪತ್ರಿಕೆಯೊಡನೆ ಕಳುಹಿಸಿರುವ ದರಖಾಸ್ತು ಫಾರಂನಲ್ಲಿ ರುಜು ಹಾಕಿ ಈ ತಿಂಗಳ ಆಖೈರೊಳಗಾಗಿ ನಮಗೆ ವಾಪಸ್ ಮಾಡಬೇಕೆಂದು ಕೋರುವೆವು. ಹೀಗೆ ಬರುವ ದರಖಾಸ್ತುಗಳ ಸಂಖ್ಯೆಯು ನಮ್ಮ ಉದ್ದೇಶಾನುಗುಣವಾಗಿ ಕಂಡುಬರುವ ಪಕ್ಷಕ್ಕೆ ನವಂಬರ್ ೩೦ನೇ ತಾರೀಖಿನ ಈ ಪತ್ರಿಕೆಯಲ್ಲಿ ನಾವು ಕೊಡುವ ಎರಡನೇ ನೋಟೀಸ್ ಅನುಸರಿಸಿ ಅವರವರು ತಮ್ಮ ತಮ್ಮ ಚಂದಾ ಮೊಬಲಗನ್ನು ಕಳುಹಿಸಿ ಕೊಡಬೇಕು. ಒಂದುವೇಳೆ ಇಂಥಾ ದರಖಾಸ್ತುದಾರರ ಸಂಖ್ಯೆಯು ಸಾಲದ್ದಾಗಿ ಕಂಡುಬರುವ ಪಕ್ಷಕ್ಕೆ ಅವರಮೇಲಿನ ನಮ್ಮ ನಿರ್ಣಯವನ್ನು ಡಿಸಂಬರ್ ೭೧ನೇ ತಾರೀಖಿನ ಪತ್ರಿಕೆಯ ಮೂಲಕ ಪ್ರಕಟಪಡಿಸುವೆವು.

ಬೆಂಗಳೂರು, ೯ನೇ ನವಂಬರ್ ೧೮೮೫ } ಟಿ ಪಿ ಶ್ರೀನಿವಾಸಾಚಾರ್, ಪ್ರೊಪ್ರೈಟರು

ಪ್ರಕಟನೆ.

ಇದರಿಂದ ಸರ್ವರಿಗೂ ತಿಳಿಸುವದೇನೆಂದರೆ ಸರ್ ೧೮೮೬ನೇ ಏಪ್ರಿಲ್ ಗುರ್ರೇ ತಾರೀಖ್ ಲಾಗಾಯತು ಸರ್ ೧೮೮೭ ನೇ ಮಾರ್ಚಿ ೩೧ನೇ ತಾರೀಖಿನವರಿವಿಗೆ, ಹೊಸೂರು ರಿಮೌಂಟ್ ಡಿಪಾರ್ಟ್ಮೆಂಟಿಗೆ ಇದರಡಿ ನಮೂದ್ ಮಾಡಲ್ಪಡುವ ಜಿನ್ನಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯಿಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪೋ ಸೂಪರಿಂಟೆಂಡೆಂಟರವರು, ಸರ್ ೧೮೮೫ ನೇ ಇಸವಿ ಡಿಸಂಬರ್ ೧೫ನೇ ಮಧ್ಯಾಹ್ನ ೧೨ ಘಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನುಕುರಿತ ಜಾಸ್ತೀ ತಪಸೀಲ್ ತಿಳಿಯಬೇಕಾದವರು, ಸರ್ ೧೮೮೫ನೇ ಇಸವಿ ನವಂಬರ್ ೧೫ನೇ ಮರ್ಕಂ ೪೫ನೇ ನಂಬರ್ ಸೋರ್ಟ್ ಸೆಂಟ್ ಜಾರ್ಜ್ ಗೆಜೆಟ್ ೭ನೇಭಾಗ ೧,೫೧೬ನೇ ಪುಟದಲ್ಲಿ ಘೋಷಿಸ ಆಗಿರುವ ಪ್ರಕಟನೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ
ನಲ್ಲುಹುಲ್ಲು
ರಾಗೀಹುಲ್ಲು.
ಹಸೀಹುಲ್ಲು

A W RAWLINS COL,
Offg Supt Remount Depot

ರಿಮೌಂಟ್ ಡಿಪೋ,
ಹೊಸೂರು,
೨೦ನೇ ನವಂಬರ್ ೧೮೮೫ }

ನೋಟೀಸ್.

ಮೈಸೂರು ಡಿ॥ ಜಡ್ಜೀರವರ ಕೋರ್ಟಿನಲ್ಲಿ ಸರ್ ೧೮೮೫ನೇ ಇಸವಿ ಜಾರೀನಂಬರ್ ೧೨೩.

ವಾದಿ.	ಪ್ರತಿವಾದಿ.
ವೆಂಕಟಪ್ಪಶೆಟ್ಟಿ.	ರಾಮಸಮುದ್ರದ ಮಲ್ಲಪ್ಪನವರು.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಡಿಟೋಜಾರೀನಂಬರನಲ್ಲಿ ಪ್ರತಿವಾದಿಬಾಬದು ಕೆಳಗೆ ನಮೂದಿಸುವ ಚರಸ್ವತ್ತುಗಳು ಈಕೋರ್ಟು ರೂಬರೂ ಇದೇಇಸವಿಡಿಸಂಬರ್ ೯ನೇತಾರೀಖು ದಿನ ೧೧ ಘಂಟಗೆ ಹರಾಜ್ ಹಾಕಲ್ಪಡುತ್ತೆ, ಖಾಹಿಷಿಇದ್ದವರು ದರಖಾಸ್ತುಮಾಡಿ ತೆಗೆದುಕೊಳ್ಳಬಹುದು

ನಗಗಳ ತಪಸೀಲ್.

ವಜ್ರ ಕೆಂಪುಕೆತ್ತಿದ ರುಮ್ಮಟಬಳೆ ಜೋಡಿ	೧
ವಜ್ರ ಕೆಂಪು ಮುತ್ತುಗಳುಇರುವ ಉತ್ತರಾಜಿ ವಾಲೆ ಜೋಡಿ	೧
ಕೆಂಪು ವಜ್ರ ಕೆತ್ತಿದ ಸೂರ್ಯ ಚಂದ್ರ ವಜ್ರದ ಕರ್ಣಪ್ರಾಂತಿ ಜೋಡಿ	೧
ನಾಗಮುರಿಗೆ ಹಾಕಿದ ವಜ್ರ ಕೆತ್ತಿದ ಚೂಪೆ ಪಿಲ್ಲಿಕೆ ಜೋಡಿ	೧
ಕೆಂಪು ಕೆತ್ತಿದ ಬಳೆಗಳು	೪
ಮುತ್ತಿನ ಮಣಿಗಳು	೪

V N NARASIMHIYANGAR
District Judge,
Mysore District

ನೋಟಿಸ್.

ಬೆಂಗಳೂರು ಶಹರ್ ಮ್ಯೂನಿಸಿ ಪಾಲಿಟಿ.

ಸರ್ ೧೮೮೫ನೇ ಇಸವಿ ನವಂಬರ್ ೩೦ನೇ ತಾರೀಖ್ ಸೋಮವಾರ ಪ್ರಾತಃಕಾಲ ೭½ ಘಂಟಗೆ, ಬೆಂಗಳೂರು ಶಹರ್ ಮ್ಯೂನಿಸಿಪಲ್ ಕಮಿಷನ್ ಸಂಬಂಧವರು, ಡಿ॥ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನೊಳು ಸಾಧಾರಣ ಸಭೆಸೇರುವಲ್ಲಿ ಅವರ ಆಲೋಚನೆಗೆ ದರಲ್ಪಡುವ ವಿಷಯಗಳವಿವರ —

೧ ಚಾಲತಿ ನಗದೀಯಾತ್ ಲೆಕ್ಕ, ನಡೆದ ಕಾಮಗಾರಿಗಳನ್ನುಕುರಿತು ರಿಪೋರ್ಟು, ೧೮೮೫ನೇ ಇಸವಿ ಅಕ್ಟೋಬರ್‌ತಿಂಗಳಬಾಬತು ಮರಣ ಲೆಕ್ಕಗಳು, ಮತ್ತು ಮ್ಯೂನಿಸಿಪಲ್ ಪಾರಕಾರರ ಲೆಕ್ಕಗಳು.

೨. ಸರ್ ೧೮೮೬—೮೭ನೇ ಇಸವಿಯ ಬಜೆಟ್ಟಿಗೆ ಸೇರಿಸಬೇಕಾದ ಹೊಸ ಕಾಮಗಾರಿಗಳಪಟ್ಟಿ.

೩. ಶಹರ್ ಮ್ಯೂನಿಸಿಪಲ್ ಸರಹದ್ದಿನೊಳಗೆ, ಬೀದಿಗಳಲ್ಲಿ ತಿರುಗಾಡುವ ಬೇವಾರಸ್ ನಾಯಿಗಳನ್ನು ಕೊಲ್ಲುವವಿಷಯವನ್ನುಕುರಿತ ೨೩ನೇನಂಬರ್ ಬೈಲಾವೆಂಬ ಉಪನಿಬಂಧನೆಯ ಮಂಜೂರಾತಿಯಬಗ್ಗೆ ಹುಟ್ಟಿದ ಗವರ್ನಮೆಂಟ್ ಡಿಸ್ಪಾಚ್‌ನಾಮೆಯ ಮಲಫ್ರೂಫನಿಶೀ ದಿವಾನರವರ ಅಂಡರ್ ಸೆಕ್ರೆಟರಿಯವರಿಂದ ಬಂದ ೧೮೮೫ನೇ ಇಸವಿ ಅಕ್ಟೋಬರ್ ೩೧ನೇ ಮರ್ಕಂ ೪೨೦೨-೩೨೬ನೇ ನಂಬರ್ ಯಾದಾಸ್ತು.

೪. ಬೆಂಗಳೂರು ಮ್ಯೂನಿಸಿಪಾಲಿಟಿಯಲ್ಲಿ, ತಂಬಾಕ್ ಕಡ್ಡಿಯ ಮೇಲಿನ ಆಕ್ಟ್ರಾಯಿ ಸುಂಕಕ್ಕೆ ಸಂಬಂಧಪಟ್ಟ ಅಸಲ್ ಕಾಗದಪತ್ರಗಳ ಮಲಫ್ರೂಫನಿಶೀ, ಬೆಂಗಳೂರು ಡಿ॥ಡೆಪ್ಯುಟಿಕಮಿಷನರವರಿಂದ ಬಂದ ಸರ್ ೧೮೮೫ನೇ ಇಸವಿ ನವಂಬರ್ ೪ನೇ ಮರ್ಕಂ ೧೮೪೮ನೇ ನಂಬರ್ ತಾಕೀತು.

೫ ಸಿದ್ದೀಕಟ್ಟೆಯಲ್ಲಿರುವ ಬಾಲಿಕಾ ಪಾಠಶಾಲೆಗೆ ಈಗ ಕೊಡಲ್ಪಡುತಲಿರುವ ಗ್ರ್ಯಾಂಟ್ ಯೆಯಿಡ್ ಯೆಂಬ ಸಹಾಯದ್ರವ್ಯವನ್ನು ಜಾಸ್ತೀ ಮಾಡಬೇಕೆಂದು ಅಪೇಕ್ಷಿಸಿ, ವೆಸ್ಲೆಯನ್ ಮಿಷನ್ ಜನರಲ್ ಸೂಪರಿಂಟೆಂಡೆಂಟಾದ ರೆವರೆಂಡ್ ಜೆ. ಹಡ್ಸನ್ನಯವರು, ಕಳೆದತಿಂಗಳ ೩೦ನೇ ತಾರೀಖಿನಲ್ಲಿಬರೆದ ಲೆಟರ್ ಮಲಫ್ರೂಫನಿಶೀ ನವಂಬರ್ ೬ನೇ ತಾರೀಖಿನಲ್ಲಿ ಬೆಂಗಳೂರು ಡಿ॥ಡೆಪ್ಯುಟಿ ಕಮಿಷನರವರಿಂದಬಂದ, ೧೩೫೬ನೇನಂಬರ್ ತಾಕೀತು.

೬. ಬೆಂಗಳೂರು ಶಹರಿಗೆ ನೀರಿನ ಸರಬರಾಯಿ ವಿಷಯದಲ್ಲೂ ಧರ್ಮಾಂಬುದಿಕರೆಗೆ ನೀರು ಬರುವದಕ್ಕೆ ಈಗಬಿರುವ ಕಾಲ್ವೆಗಳನ್ನು ಬಿಡಾಮಿಸುವ ವಿಷಯದಲ್ಲೂ ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ವೆಯರ್‌ರು ಬರೆದ ಸರ್ ೧೮೮೫ನೇ ಇಸವಿ ನವಂಬರ್ ೧೩ನೇ ಮರ್ಕಂ ೧೩೦೧ನೇ ನಂಬರ್ ಲೆಟರ್

೭. ಮೈಸೂರು ಗವರ್ನಮೆಂಟ್ ಮರಮ್ಮತ್ ಇಲಾಖಾಸೆಕ್ರೆಟರಿಯವರು, ಬಿ. ವಸಂತಪ್ಪನೆಂಬವನನ್ನು ೩ನೇ ಗ್ರೇಡ್ ಓವರ್ಸಿಯರ್ ಕೆಲಸಕ್ಕೆ ಬಡ್ತೀಮಾಡಿ ಕೊಟ್ಟ, ಸರ್ ೧೮೮೫ನೇ ಇಸವಿ ನವಂಬರ್ ೧೪ನೇ ಮರ್ಕಂ ಇಸ್ತಿಹಾರ್‌ನಾಮೆಯ ನಕಲನ್ನು ತಿಳುವಳಿಕೆಯಬಗ್ಗೆ ಮಲಫ್ರೂಫ್‌ಮಾಡಿ ಬರೆದ ೧೮೮೫ನೇ ಇಸವಿ ನವಂಬರ್ ೧೪ನೇ ಮರ್ಕಂ ಯಾದಾಸ್ತು

೮ ಅಪರಿಹಾರ್ಯ ರೋಗಪೀಡಿತರಾದಅನಾಥರ ಚಿಕಿತ್ಸೆಯಬಗ್ಗೆ, ಸಿವಿಲ್ ವ ಮಿಲಿಟರಿಸ್ಟೇಷನ್ನಲ್ಲಿ ಸ್ಥಾಪಿಸಲ್ಪಟ್ಟಿರುವ ಒಂದು ಶಾಲೆಯ ಪೋಷಣೆಯಬಗ್ಗೆ ಸಿವಿಲ್ ವ ಮಿಲಿಟರಿಸ್ಟೇಷನ್ ಮ್ಯೂನಿಸಿಪಾಲಿಟಿಯವರು, ೮೫ನೇ ಇಸವಿ ಅಕ್ಟೋಬರ್ ೩೧ನೇ ತಾರೀಖಿನಲ್ಲಿ ಮೀಟಿಂಗ್‌ಸೇರಿ ಮಾಹೇಯಾನಾ ೧೦೦ ರೂಪಾಯಿಗಳು ಅದಕ್ಕೆ ಕೊಡತಕ್ಕದ್ದೆಂದು ಮಂಜೂರ್ಮಾಡಿ ನಡೆಸಿದ ಪ್ರೊಸೀಡಿಂಗ್ಸಿನ ಎಕಸ್ಟ್ರ್ಯಾಕ್ಟ್ ಮಲಫ್ರೂಫನಿಶೀ, ಅ॥ ರೆಸಿಡೆಂಟರಿಂದಬಂದ ೮೫ನೇ ಇಸವಿ ನವಂಬರ್ ೧೬ನೇ ಮರ್ಕಂ ೨೨೮೧—೧೦೬ನೇ ನಂಬರು ಲೆಟರ್.

೯. ಶಹರ್ ವಾಯಖಾನೆ ಗುಣೆಗಳು ಕಳೆದ ಮೂರುತಿಂಗಳಕಾಲದಲ್ಲಿ ಯೆಷ್ಟರಮಟ್ಟಿಗೆ ಮುಚ್ಚಲ್ಪಟ್ಟವೋ ಅದರ ತಪಸೀಲ್‌ಪಟ್ಟಿ.

೧೦. ಪೆಟ್ಟೀಮೇರಿಗೆ, ಚಾಲತೀ ಸಂಸ್ಕಾರ ಸಾಲ್‌ನಲ್ಲಿ ನಡೆಸಬೇಕೆಂದು ಯೋಚಿಸಲ್ಪಟ್ಟಿರುವ ಕಾಮಗಾರೀಗಳು.

೧೧. “ಪ್ರಜಾಸಾಲ್”ಎಂಬ ಕಟ್ಟಡದಮಾರ್ಗವಾಗಿ ಹೋಗುವ ಸಂಪಂಗಿಕೆರೆಯ ಕೋಡಿಯ ಕಾಲ್ವೆಯಪೈಕಿ ಒಂದುಭಾಗವನ್ನು ಮುಚ್ಚಿಬಿಡಬೇಕೆಂದು ಅಪೇಕ್ಷಿಸಿ ಬೆಂಗಳೂರುಬ್ಯಾಂಕು ಏಜಂಟ್ ಮೆ॥ ಎಂ.ಡಬ್ಲ್ಯು ವಾಕರ್‌ಯವರು ಮ್ಯೂನಿಸಿಪಾಲಿಟಿಗೆ ಬರೆದಕಾಗದ, ಸದರೀ ಕಾಮಗಾರಿಗೆ ಹಿಡಿಯುವ ಖರ್ಚಿನ ಅಂದಾಜ್ ಪಟ್ಟಿಯನಿಶೀ ಮ್ಯೂನಿಸಿಪಲ್ ಇಂಜನಿಯರವರು ಬರೆದ ರಿಪೋರ್ಟು.

೧೨. ರೋಡ್ ಫಂಡಿನಿಂದ ಆದ ಕೆಲವು ಖರ್ಚುಗಳನ್ನು ರಿಜರ್ವ್‌ಫಂಡಿಗೆ ವರ್ಗ ಮಾಡಬೇಕೆಂಬ ಅಂಶ, ಮತ್ತು ಚಾಲತೀಸಾಲ್‌ನಲ್ಲಿ ಕೆಲವು ರಸ್ತೆಗಳನ್ನು ರಿಪೇರೀಮಾಡುವದಕ್ಕೆ ಜಾಸ್ತೀಫಂಡು ಬೇಕೆಂದು ಮ್ಯೂನಿಸಿಪಲ್ ಇಂಜನಿಯರವರು ಬರೆದುಕೊಂಡ ಅಪ್ಲಿಕೇಷನ್.

೧೩. ಮುನಿರಡ್ಡಿಪಾಳ್ಯ ಮತ್ತು ಗುಟ್ಟಹಳ್ಳಿಗೆ ಇನ್ನು ಕೆಲವರು ಝಾಡಮಾಲಿಗಳು ಬೇಕೆಂದು ಸಾನಿಟರಿಇನ್ಸ್ಪೆಕ್ಟರವರು ಬರೆದುಕೊಂಡ ಅಪ್ಲಿಕೇಷನ್.

A SRINIVASACHARLU,
Vice President,
City Municipal Commission.

ಪ್ರ ಕ ಟ ನೆ .

ಈವಾರದೊಡನೆ ಈಸಾಲ್‌ನಲ್ಲಿ 11ತಿಂಗಳುಪೂರೈಸಿದ್ದರಿಂದ ಇದುವರಿವಿಗೂ ಈ ಪತ್ರಿಕೆಗೆ ಬಾಕೀದಾರರಾಗಿರುವ ಚಂದಾದಾರರೆಲ್ಲರೂ ತಮ್ಮ ಬಾಕೀ ಮೊಬಲಗನ್ನು ಒರುವತಿಂಗಳ ೧೦ನೇ ತಾರೀಖಿನೊಳಗಾಗಿ ಕಳುಹಿಸಬೇಕೆಂದು ಕೋರುವೆವು. ನಮ್ಮ ಮುಂದಿನ ಏರ್ಪಾಡನ್ನನುಸರಿಸಿ ಬಾಕೀ ವಸೂಲೀಬಗ್ಗೆ ಲೆಕ್ಕಗಳನ್ನು ನಮ್ಮಕರೆಸ್ಪಾಂಡೆಂಟರುಗಳಿಗೆ ಒಪ್ಪಿಸುವವಾದ್ದರಿಂದ ಅವರು ಕೊಡಬಹುದಾದ ನೋಟೀಸ್‌ಗಳಿಗೂ ತತ್ಪ್ರಯುಕ್ತಾಗಬಹುದಾದ ಲುಕ್ಸಾನ್‌ಗಳಿಗೂ ನಾವು ಯಿಮ್ಮವಾತ್ರವೂ ಜವಾಬ್ದಾರರಾಗಲಾರೆವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, NOVEMBER 30, 1885

೧೮೮೫ನೇ ನವಂಬರ್ ೩೦ನೇ ತಾ|| ಸೋಮವಾರ

ಶ್ಲೋ|| ಸರ್ವಜ್ಞತಾಂಸದಸಿವಾಕ್ಪಟುತಾಂಪ್ರಸೂತೆ ವಾಣಿತ್ವದುಪ್ರಸರಣೀರುಹಯೋಃಪ್ರಣಾಮಃ| ತ್ವಾಮಪದೇವಿಮನಸಾಸಮನುಸ್ಮರಾಮಿ ತ್ವಾಮೇವನೌಮಿಶರಣಂಜನನೀತ್ವಮೇವ||

WAR IN BURMAH

ಈಗ ಬ್ರಿಟಿಷ್ ಗವರ್ನ್‌ಮೇಂಟಿನವರಿಗೂ ಬರ್ಮಾಸರ್ಕಾರದವರಿಗೂ ನಡೆಯುತಲಿರುವ ಯುದ್ಧಕಾರಣವನ್ನೂ, ಕಡೆಗೆ ಅದು ಪರ್ಯವಸಾನವಾದ ಬಗೆಯನ್ನೂ, ಈವಿಷಯದೊಳು ರಾಜ್ಯತಂತ್ರಜ್ಞರಾದ ಮಹನೀಯರೆನಿಸಿಕೊಂಡಿರುವ ಸೊಬಗ್ ವೈಸರಾಯಿ ವ ಗವರ್ನರ್ ಜನರಲ್ಲವರಾದ ಲಾರ್ಡ್ ಡಫ್ರಿನ್‌ಯವರ ಅಭಿಪ್ರಾಯವನ್ನೂ, ಈ ಸಂದರ್ಭದೊಳು ಗವರ್ನ್‌ಮೆಂಟಿನವರು ಅನುಸರಿಸಬೇಕಾದ ಮಾರ್ಗವನ್ನೂ ಗರವಾರದೊಳು ಸಾಧ್ಯವಾದಮಟ್ಟಿಗೆ ವಿವರಿಸಿ ಅದರ ಮೇಲೆ ನಮ್ಮ ಅಭಿಪ್ರಾಯವನ್ನು ಮತ್ತೊಂದು ಸಂದರ್ಭದಲ್ಲಿ ತಿಳಿಸುವಂತೆ ಸೂಚಿಸಿದ್ದೆವಷ್ಟೆ ಅಂತಾ ನಮ್ಮ ಪ್ರತಿಜ್ಞೆಯನ್ನೀಗ ನೆರವೇರಿಸುವೆವೆಂತೆನೆ.

ಬ್ರಿಟಿಷನವರಿಗೂ ಬರ್ಮಾದೇಶೀಯರಿಗೂ ನಡೆಯುತಲಿರುವ ಪ್ರಕೃತಯುದ್ಧವು ಮೂರನೆಯ ಆವರ್ತಿಯದಾಗಿರುತಿದೆ. ಹಿಂದಿನ ಎರಡು ಸಂದರ್ಭಗಳಲ್ಲಿಯೂ ಏತತ್ಸಮಾನಗಳಾದ ಕಾರಣಗಳೇ ಏರ್ಪಟ್ಟು ಕಡೆಗೆ ಅವು ಪ್ರಾಣಹಾನಿ, ಧನನಾಶಗಳ ಮೂಲಕ ಪರಿಸಮಾಪ್ತವಾದವು. ನವರೀ ಯುದ್ಧಗಳವಿಷಯವನ್ನೀಗ ಅರಿಯದಿರತಕ್ಕವರು ಪ್ರಾಯಶಃ ಇರಲಾರರು. ಆದಾಗ್ಯೂ ಪ್ರಸಕ್ತ ನಮ್ಮವಿಚಾರಕ್ಕೆ ಸಾಧಕವಾಗಿ ಅವುಗಳವೃತ್ತಾಂತವನ್ನು ಸ್ವಲ್ಪ ಇದರಡಿ ತಿಳಿಸುವೆವು.

ಇಂಡ್ಯದೇಶದ ವೈಸರಾಯಿ ವ ಗವರ್ನರ್ ಜನರಲ್ಲಾಗಿದ್ದ ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ ಯವರು ೧೮೨೩ನೇ ಇಸವಿ ಆಗಸ್ಟ್ ತಿಂಗಳಲ್ಲಿ ತಮ್ಮ ಕೆಲಸವನ್ನು ಬಿಟ್ಟು ಸ್ವದೇಶಕ್ಕೆ ಹೊರಟುಹೋಗಲು ಲಾರ್ಡ್ ಅಂಹರಸ್ಟ್ ಯವರು ಕೂಡಲೇ ನೇಮಕರಾದರು. ಇವರು ಗವರ್ನರ್ ಜನರಲ್ ಕೆಲಸದ ಚಾರ್ಜನ್ನು ತೆಗದುಕೊಂಡ ಕೂಡಲೇ ಇವರ ಅವಧಾನವು ಅನ್ಯರಾಜ್ಯ ವಿಷಯಗಳಮೇಲೆ ವ್ಯಾಪಿಸಿದ್ದರಿಂದ ಅದಕ್ಕೆ ಅನುಗುಣವಾಗಿ ಕೆಲವು ಕಾರ್ಯಕಾರಣಗಳು ಅಲ್ಲಿಯೂ ತಲೆದೋರಿದವು. ಬರ್ಮಾದೇಶೀಯರ ಉಚ್ಛೃಂಖಲ ವರ್ತನೆಯಿಂದಲೂ, ಅವರ ನಿರಂಕುಶ ಪ್ರಭುತ್ವದಿಂದಲೂ, ಬಹಳ ಸಂಕಟಗಳನ್ನನುಭವಿಸಿ ಕಡೆಗೆ ಅದು ತಡೆಯಲಾರದೆ ಆತ್ಮರಕ್ಷಣೆಯಬಗ್ಗೆ ಬ್ರಿಟಿಷನವರ ರಾಜ್ಯಗಳಲ್ಲಿ ಮರೆಹೊಕ್ಕು ಅಲ್ಲಿ ವಾಸವಾಗಿರುತಲಿದ್ದ ಅರಕಾನ್ ಜನಗಳನ್ನು ಹಿಡಿದು ತಮಗೆ ಒಪ್ಪಿಸಬೇಕೆಂದು ಬರ್ಮಾ ಸರ್ಕಾರದವರು ಇಂಗ್ಲಿಷನವರನ್ನು ಬಲಾತ್ಕರಿಸಲು ಅದಕ್ಕೆ ಅವರು ನಿರಾಕರಿಸಿದರು. ತರುವಾಯ ಇಂಗ್ಲಿಷನವರು ಬರ್ಮಾ ಅರಸರನ್ನು ಸಮಾಧಾನಗೊಳಿಸುವಬಗ್ಗೆ ಮಾಡಿದ ನಾನಾವಿಧ ಉಪಾಯಗಳೆಲ್ಲವೂ ವ್ಯರ್ಥಗಳಾದದರಿಂದ ಇಂಗ್ಲಿಷನವರಿಗೆ ೧೮೨೪ನೇ ಇಸವಿಯಲ್ಲಿ ಬರ್ಮಾದವರೊಡನೆ ಪ್ರಥಮ ಯುದ್ಧವು ತಟಸ್ಥಿಸಿತು. ಬರ್ಮಾ ಸೇನಾಧಿಪತಿಯಾದ ಮಹಾಬಾಂಡೂಲಾ ಯೆಂಬಾತನು ಅರಕಾನ್‌ನಲ್ಲಿ ಪ್ರವೇಶಿಸಿ, ರಾಮೂ ಯೆಂಬ ಪ್ರದೇಶದೊಳಿದ್ದ ಇಂಗ್ಲಿಷ್ ಸೈನ್ಯವನ್ನು ಅಲ್ಲಿಂದ ಅಟ್ಟಿಬಿಟ್ಟನು. ಸರ್ ಆರ್ಚಿಬಾಲ್ಡ್ ಕೇಂಬಲ್ ಯೆಂಬವರ ಸೇನಾಧಿಪತ್ಯದೊಳು ಫೋರ್ಟ್ ಕಾರ್ನ್ ವಾಲಿಸ್ ಎಂಬ ಪ್ರದೇಶದಲ್ಲಿ ಜಮಾಯಿಸಿದ್ದ ಬ್ರಿಟಿಷ್ ಸೈನ್ಯವು ಅದೇ ಇಸವಿ ಮೇ ತಿಂಗಳಲ್ಲಿ ರಂಗೂನ್ ಪಟ್ಟಣವನ್ನು ಸ್ವವಶ ಪಡಿಸಿಕೊಂಡಿತು. ವರಂತು ಆ ಕಾಲದಲ್ಲಿ ನವರೀ ಪಟ್ಟಣದ ಪ್ರಜೆಗಳೆಲ್ಲರೂ ಅದಂ ಖಾಲೀಮಾಡಿಬಿಟ್ಟು ಹೋಗಿದ್ದರು. ಮಾರನೆಯ ತಿಂಗಳಲ್ಲಿ (ಜೂನ್) ರಂಗೂನಿಗೆ ಸಮೀಪದೊಳಿರುವ ಕ್ಯಾಮುನ್ಡೈನ್ ಯೆಂಬ ಪ್ರದೇಶವು ಬ್ರಿಟಿಷನವರ ಸ್ವಾಧೀನವಾಯಿತು. ತರುವಾಯ ಇಂಗ್ಲಿಷನವರ ಪ್ರಾಬಲ್ಯವನ್ನು ಅಡ್ಡಿಗೈಯುವಬಗ್ಗೆ ಬರ್ಮಾ ಸಂಸ್ಥಾನಕ್ಕೆ ಸಂಬಂಧಿಸಿದ ತಿರ್ಕ್ಕಯವಾಂಗಿ ಯೆಂಬೊಬ್ಬ ಅಧಿಪನು ತಕ್ಕ ಸೈನ್ಯಗಳೊಡನೆ ರಂಗೂನಿಗೆ ಸಮೀಪದೊಳಿರುವ ಡೇಗನ್‌ಯೆಂಬ ಬುದ್ಧಾಲಯದಬಳಿ ಇಂಗ್ಲಿಷನವರನ್ನು ಎದಿರಿಸಲು ಅವರು ಬರ್ಮಾಸೈನ್ಯವನ್ನು ಹೊಡೆದು ಹಿಡಿಸಿಬಿಟ್ಟರು. ತರುವಾಯ ಸೋಂಬವಾಂಗಿ ಎಂಬ ಮತ್ತೊಬ್ಬ ಅಧಿಪನು ಅದೇಕಾಲದಲ್ಲಿ ಇಂಗ್ಲಿಷನವರನ್ನು ಜೇರೊಂದು ಪ್ರದೇಶದಲ್ಲಿ ಎದಿರಿಸಲು ಆಗ ಇಂಗ್ಲಿಷನವರು ಶತ್ರುಗಳಂ ಜೈಯಿಸಿ ಕ್ರಮೇಣ, ಸಿರಿಯಾಂ, ದಾಲಾ, ಮೊರ್ತಬಾನ್, ತವಾಯಿ, ಮೆರ್ಗಿ, ಈ ಪ್ರದೇಶಗಳೆಲ್ಲವನ್ನೂ ಕರ್ನಲ್ ಗಾಡ್ವಿನ್ ಮತ್ತು ಕರ್ನಲ್ ಮೈಲ್ಸ್ ಯೆಂಬವರು ಸ್ವಾಧೀನ ಪಡಿಸಿಕೊಂಡರು. ಮಹಾಬಾಂಡೂಲಾ ಯೆಂಬವನು ಮತ್ತೊಂದಾವರ್ತಿ ರಂಗೂನ್ ಪಟ್ಟಣದಮೇಲೆ ದಂಡೆತ್ತಿಬರಲು ಆಗಲೂ ಇಂಗ್ಲಿಷನವರಿಗೇನೇ ಸಂಪೂರ್ಣ ಜಯಪ್ರಾಪ್ತವಾಯಿತು. ಈ ಸಂದರ್ಭದಲ್ಲಿ ರಂಗೂನ್ ಪಟ್ಟಣವು ಸಂಪೂರ್ಣವಾಗಿ ದಗ್ಧವಾದಪ್ಪಟ್ಟಿತು. ೧೮೨೫ನೇ ಇಸವಿಯಲ್ಲಿ ಇಂಗ್ಲಿಷನವರು ಪ್ರೋಂ ಮತ್ತು ಅರಕಾನ್ ಯೆಂಬ ಪ್ರದೇಶಗಳನ್ನು ಜೈಯಿಸಿ ಸ್ವಾಧೀನಪಡಿಸಿಕೊಂಡರು. ಈ ಯುದ್ಧವು ಯೆರಡು ವರುಷಗಳ ತರುವಾಯ ನಡೆದು ಕಡೆಗೆ ಬರ್ಮಾ ಅರಸರಿಗೂ, ಇಂಗ್ಲಿಷನವರಿಗೂ ತಹನಾಮೆ ಘಟ್ಟಿತು. ಇದರ ಷರತ್ತುಗಳೇನೆಂದರೆ—ಆಸಾಂ, ಅರಕಾನ್, ಮತ್ತು ಟೆನಾಸೆರಿಂ, ಈ ಪ್ರದೇಶಗಳನ್ನು ಇಂಗ್ಲಿಷನವರಿಗೆ ಬರ್ಮಾ ಸರ್ಕಾರದವರು ಬಿಟ್ಟುಕೊಡತಕ್ಕದ್ದು. ಯುದ್ಧ ಖರ್ಚಿನಬಗ್ಗೆ ಇಂಗ್ಲಿಷನವರಿಗೆ ಕೋಟಿರೂಪಾಯಿಗಳು ಅವರು ಕೊಡತಕ್ಕದ್ದು. ಬರ್ಮಾಸಂಸ್ಥಾನದಲ್ಲಿ ಒಬ್ಬ ಬ್ರಿಟಿಷ ರೆಸಿಡೆಂಟರನ್ನು ನೇಮಕರನ್ನಾದರೆ ಅಲ್ಲಿನ ಅರಸರು ಅಂಗೀಕರಿಸತಕ್ಕದ್ದೆಂಬದು. ಇದೇ ಬರ್ಮಾದವರೊಡನುಂಟಾದ ಪ್ರಥಮಯುದ್ಧಕ್ಕೆ ಮುಖ್ಯಕಾರಣವು.

೧೮೫೨ನೇ ಇಸವಿಯಲ್ಲಿ ಲಾರ್ಡ್ ಡಾಲ್‌ಹೌಸೀಯವರು ಗವರ್ನರ್ ಜನರಲಾಗಿದ್ದ ಕಾಲದೊಳು ಬರ್ಮಾದೇಶೀಯರೊಡನೆ ಯೆರಡನೆಯ ದಫಾ ಇಂಗ್ಲಿಷನವರಿಗೆ ಯುದ್ಧ ಸಂಭವಿಸಿತು. ಅದು ಮತೀ ಪಟ್ಟಣದೊಳಿದ್ದ ಬ್ರಿಟಿಷ್ ರೆಸಿಡೆಂಟರನ್ನು ಅಲ್ಲಿನ ಅರಸರು ಅಗೌರವ ಪಡಿಸುತಲಿದ್ದರಲ್ಲದೆ ರಂಗೂನ್‌ನೊಳಿದ್ದ ಬ್ರಿಟಿಷ ವರ್ತಕರನ್ನು ಅನವರತ ಪೀಡಿಸುತ ಅಕ್ರಮವಾದ ಸುಲಿಗೆಗಳಿಗೂ ಜುರ್ಮಾನೆಗಳಿಗೂ ಅವರು ಗುರಿಪಡಿಸುತಲಿದ್ದರು. ಲಾರ್ಡ್ ಡಲ್‌ಹೌಸೀಯವರು, ಕಾಮಡೋರ್ ಲಾಂಬರ್ಟ ಯವರನ್ನು ಆವಾತೀ ಪಟ್ಟಣಕ್ಕೆ ಕಳುಹಿಸಿ ರಂಗೂನ್ ಗವರ್ನರವರ ಅದಳತಗಳನ್ನು ಅಲ್ಲಿನ ಅರಸರಿಗೆ ತಿಳಿಸಬೇಕೆಂತಲೂ, ಅವರು ತೃಪ್ತಿಕರವಾದ ಪ್ರತ್ಯುತ್ತರಗಳು ಕೊಡದ ಪಕ್ಷಕ್ಕೆ ಬರ್ಮಾ ರೇವುಗಳನ್ನೆಲ್ಲ ಬಲವಡಿಸಿ ಸ್ವಾಧೀನ ಮಾಡಿಕೊಳ್ಳತಕ್ಕದ್ದೆಂತಲೂ ಅವರಿಗೆ ಆಜ್ಞಾಪಿಸಿದರು. ತರುವಾಯ ಬರ್ಮಾ ಅರಸರವರು ಮೊದಲು ವಾಗ್ದಾನ ಮಾಡಿದಂತೆ ನವರೀ ವಿಷಯವಂ ಕುರಿತು ವಿಚಾರಿಸದೆ ಹೋದದರಿಂದಲೂ, ಲಾಂಬರ್ಟ ಯೆಂಬವರು ಕಳುಹಿಸಿದ ಆಫೀಸರನ್ನು ರಂಗೂನ್ ಗವರ್ನರವರು ಅಗೌರವಪಡಿಸಿದ್ದರಿಂದಲೂ, ಯುದ್ಧಮಾಡಬೇಕೆಂದು ನಿಶ್ಚಯವಾಯಿತು. ಜನರಲ್ ಗಾಡ್ವಿನ್‌ಯೆಂಬವರ ಚಾರಣೆಯಲ್ಲಿ ಭೂಮಾರ್ಗವಾಗಿ ಕಳುಹಿಸಲ್ಪಟ್ಟ ಸೇನೆಗಳೂ ಲಾಂಬರ್ಟಯವರ ವಿಚಾರಣೆಯೊಳು ಹೋದ ನಾವಿಕಸೈನ್ಯಗಳೂ, ಧೈರ್ಯವಾಗಿ ಬರ್ಮಾ ದೇಶೀಯರೊಡನೆ ಯುದ್ಧಮಾಡಿ ಮೊರ್ತಬಾನ್, ಕೆಮೆಂಡೈನ್, ರಂಗೂನ್, ಪೆಗೂ, ಮತ್ತು ಪ್ರೋಂ, ಈ ಪ್ರದೇಶಗಳೆಲ್ಲವಂ ಜೈಯಿಸಿದವು. ಇಷ್ಟರಲ್ಲೇ ಬರ್ಮಾ ಅರಸರನ್ನು ಅವರ ಸಹೋದರನು ಪದಭ್ರಷ್ಟರನ್ನಾಗಿ ಮಾಡಿದ್ದರಿಂದ ಇಂಗ್ಲಿಷನವರಿಗೂ ಬರ್ಮಾ ಸರ್ಕಾರದವರಿಗೂ ತಹನಾಮೆ ಯೇನೂ ನಡೆಯದೆಯೇ ಯೆರಡನೆಯಾವರ್ತಿ ಯುದ್ಧವು ಮುಕ್ತಾಯವನ್ನೈದಿತು. ಅದುಮೊದಲು ಇದುವರಿವಿಗೂ, ಅಂದರೆ ೩೦ ಸಂವತ್ಸರಗಳ ಕಾಲ ಬ್ರಿಟಿಷನವರಿಗೂ ಬರ್ಮಾ ದೇಶೀಯರಿಗೂ ಕಲಹಗಳೊಂದೂ ಉಂಟಾಗದೆ ಇಬ್ಬರೂ ಅನ್ಯೋನ್ಯಭಾವದೊಡನೆ ಇರುತಲಿದ್ದರು. ಈ ಉಭಯ ಸರ್ಕಾರದವರ ಸ್ನೇಹವನ್ನು ಭಂಗಪಡಿಸಲಿಕ್ಕೆ ಈ ಸಂದರ್ಭದಲ್ಲಿಯೂ ಪೂರ್ವದಂತೆ ವರ್ತಕರೇ ಕಾರಣಭೂತರಾದರು. ಬ್ರಿಟಿಷ್ ಸೈನ್ಯವು ಬರ್ಮಾ ಸರಹದ್ದನ್ನು ದಾಟ ನಿಶ್ಚಿರೋಧವಾಗಿ ಮುಂದಕ್ಕೆ ಹೋಗುತಲಿದೆ. ಬರ್ಮಾ ಅರಸರು ವಿಶೇಷ ಯುದ್ಧ ಗಲಾಟೆಗೆ ಸಿಕ್ಕಿದಂತೆ ಕಾಣಿಸಲಿಲ್ಲವು. ಈಗಿನ ಸ್ಥಿತಿಯಂ ನೋಡಲಾಗಿ ಇನ್ನೂ ಒಂದೆರಡು ವಾರಗಳಲ್ಲಿಯೇ ಬ್ರಿಟಿಷ ಸೈನ್ಯವು ಮಾಂಡಲೇ ಪಟ್ಟಣಕ್ಕೆ ಮುತ್ತಿಗೆ ಹಾಕುವದರೊಳೆಷ್ಟುಮಾತ್ರವೂ ಸಂಶಯ ತೋರವಿಲ್ಲವು. ಈಗ ಹಿಂದೂ ಅರಸರ ಪಾಲನೆಯೊಳು ಇರುತಲಿರುವ ಬರ್ಮಾದೇಶದ ಮೇಲ್‌ಭಾಗವನ್ನು ಸಹ ಬ್ರಿಟಿಷ ರಾಜ್ಯಕ್ಕೆ ದಾಖಲ್ಮಾಡಿಕೊಳ್ಳಬೇಕೆಂಬ ಸಂಕಲ್ಪವೊಂದನ್ನೆ ಗವರ್ನ್‌ಮೆಂಟಿನವರು ಈಗ ಹಿಂದಲೂ ಬೇಕಾದ ಯೇರ್ಪಾಡುಗಳನ್ನು ನಡಿಸುತಲಿದಾರೆ. ಈಪಕ್ಷದಲ್ಲಿ ಬರ್ಮಾ ದೇಶವೆಲ್ಲವೂ ಬ್ರಿಟಿಷನವರ ಸ್ವಾಧೀನಕ್ಕೆ ಒಳಗಾಗಬಹುದು. ಇದಕ್ಕೆ ತಕ್ಕಂತೆ ಬರ್ಮಾ ದೇಶದ ಪ್ರಜೆಗಳೆಲ್ಲರೂ ಇಂಗ್ಲಿಷ ಪ್ರಭುತ್ವವನ್ನೇ ಅಪೇಕ್ಷಿಸುತ ಅವರು ತಮ್ಮ ರಾಜ್ಯವನ್ನು, ಸ್ವಾಧೀನಪಡಿಸಿಕೊಳ್ಳುವ ಪಕ್ಷಕ್ಕೆ ಅವರಿಗೆ ವಿಧೇಯರಾಗಿ ನಡೆದುಕೊಳ್ಳುವಂತೆ ಅಭಿಪ್ರಾಯ ಪಟ್ಟಿರುತ್ತಾರೆ ಇಂಡ್ಯದೇಶದ ನೇಟಿವ್ ವೃತ್ತಾಂತಪತ್ರಿಕೆಗಳೂ, ಪೂರದೃಷ್ಟಿಯುಳ್ಳ ಮತ್ತು ರಾಜ್ಯತಂತ್ರಜ್ಞರಾದ ಯೂರೋಪಿಯನ್ ಅಧಿಪರುಗಳೂ ಬರ್ಮಾದೇಶದ ಮೇಲ್‌ಭಾಗವನ್ನು ಬ್ರಿಟಿಷನವರು ದಾಖಲ್ ಮಾಡಿಕೊಳ್ಳುವದಕ್ಕೆ ಸಮ್ಮತಿಸಲಿಲ್ಲವು. ಗವರ್ನ್‌ಮೆಂಟಿನವರ ಪ್ರಯತ್ನವು ಸರ್ವರುದಪ್ಪ(?) ಹೋಲಿತವಾದ್ದಾಗಿಯೇ ಇದೆ.

ಬ್ರಿಟಿಷ ಗವರ್ನ್‌ಮೆಂಟಿನವರಿಗೂ ಅನ್ಯಸಂಸ್ಥಾನಾಧಿಪತಿಗಳಿಗೂ ಈಗ ಪ್ರಸ್ತುತವಾಗಿರುವ ರಾಜಕೀಯ ಸಂಬಂಧವನ್ನೂ, ಮಧ್ಯ ಏಷ್ಯಾದಲ್ಲಿ ರಷ್ಯಾಜನಗಳು ಗೂಢವಾಗಿಯೂ ಪ್ರಚ್ಛನ್ನವಾಗಿಯೂ ಮಾಡುತಲಿರುವ ಬಿನ್ನ ತಂತ್ರಗಳನ್ನೂ ಪರಿಭಾವಿಸಿದರೆ ಪ್ರಸ್ತುತಯುದ್ಧವನ್ನು ಒಂದುಬಗೆಯಾಗಿ ಸಮಾಧಾನಪೂರ್ವಕ ಮುಕ್ತಾಯಮಾಡಿ ಬ್ರಿಟಿಷ್‌ಫೌಜನ್ನು ವಾಪಸ್ಸು ಕರೆಯಿಸಿಕೊಳ್ಳುವದು ಗವರ್ನ್‌ಮೆಂಟಿನವರಿಗೆ ಬಹಳಯೋಗ್ಯವೆಂದು ತೋರುತಿದೆ. ಫ್ರೆಂಚ್‌ಜನಗಳ ಸಂಬಂಧವು ಬರ್ಮಾರಾಜ್ಯದಲ್ಲಿ 'ಬಲೀಯವಾಗಿರುವದರಿಂದ ಅವರು ಇಂಗ್ಲಿಷನವರ ಪ್ರಾಬಲ್ಯವನ್ನು ಯೆಷ್ಟರಮಟ್ಟಿಗೆಪುರಸ್ಕರಿಸುವರೋ ನಾವರಿಯೆವು. ಒಂದುವೇಳೆ ಬರ್ಮಾರಾಜ್ಯವು ಈಗ ಇಂಗ್ಲಿಷನವರ ಸ್ವವಶವಾದರೆ ಅಲ್ಲಿ ನಿರುಪದ್ರವವಾದ ಸಂಬಂಧವಾದಾನಗಳನ್ನು ನೆಲಗೊಳಿಸಲಿಕ್ಕೆ ತಕ್ಕ ಸೈನ್ಯವನ್ನು ಅವರು ಮುಂದೆ ಖಾಯಮಾಗಿ ಇಡಬೇಕಾಗುವದು, ತತ್ಕಾಲದೊಳು ಇಂಡ್ಯದೇಶದಲ್ಲಿರುವ ಸೈನ್ಯವನ್ನು ಅನ್ಯತ್ರ ಕಳುಹಿಸುವದು ಯುಕ್ತವಾಗಿ ತೋರಲಿಲ್ಲವು. ಬ್ರಿಟಿಷನವರ ಪ್ರಯೋಜನಕ್ಕೆ ಭಂಗವುಂಟಾಗದಂತೆ ಕಾಪಾಡಿಕೊಳ್ಳಬೇಕಾದ್ದು ಆವಶ್ಯಕವಾಗಿರುವದರಿಂದ, ಅಷ್ಟರವರಿಗಿನ ಅವರ ಪ್ರವೇಶವು ಅನ್ಯರ ಅತೃಪ್ತಿಗೆ ಕಾರಣವಾಗಲಾರದು. ಹಾಗಿಲ್ಲದೆ ಆರಾಜ್ಯವನ್ನು ಸ್ವಾಧೀನಪಡಿಸಿಕೊಂಡರೆ ಅದರಫಲವು ಮುಂದೆ ಶಂಕಿಸತಕ್ಕದ್ದಾಗಿರುವದು ಮುಖ್ಯವಾಗಿ ಇಂಗ್ಲಿಷನವರು ತಿಳಿಸಿದಷರತ್ತುಗಳನ್ನು ತೀಬಾಯವರು ಅಂಗೀಕರಿಸದಪಕ್ಷಕ್ಕೆ ಬೇರೊಬ್ಬರನ್ನು ನೇಮಕರನ್ಮಾಡಿ ಅವರ ಅಧಿಪತ್ಯದೊಳು ರಾಜ್ಯವನ್ನು ಒಬ್ಬರಿಗೂ ಸಂಬಂಧಿಸದಂತೆ ಇಟ್ಟಿರುವದು ನಿರಾಕ್ಷೇಪಣೀಯವಾಗಿರುತಿದೆ. ಇದೇ ಅಂಶವನ್ನು ಲಾರ್ಡ್ ರಿಪನ್‌ಯವರು ತಮ್ಮ ಅನುಭವದಮೇಲೆ ಇಂಗ್ಲಿಷನವರ ಪ್ರಕೃತಸ್ಥಿತಿಯನ್ನು ಚೆನ್ನಾಗಿ ಪರ್ಯಾಲೋಚಿಸಿ ತಿಳಿಸಿರುತ್ತಾರಾದ್ದರಿಂದ ಅವರ ಸಲಹೆಯಂತೆ ಇಂಡ್ಯ ಗವರ್ನ್‌ಮೆಂಟಿನವರು ವರ್ತಿಸಿದರೆ ಯೆಲ್ಲರಿಗೂ ಕ್ಷೇಮಕರವಾಗಿರುವದು.

THE PETTAH HOSPITAL AND DISPENSARY

ಗತ ಸೋಮವಾರದದಿನ ಸೇರಿದ ಮ್ಯೂನಿಸಿಪಲ್ ಮೀಟಿಂಗ್‌ನಲ್ಲಿ ಪುರಾತನವಾದ ಮತ್ತು ಇಲ್ಲಿನ ಪ್ರಜೆಗಳಿಗೆ ಅತ್ಯಂತೋಪಯೋಗಿಯಾಗಿದ್ದ ಪೇಟೆಯ ಆಸ್ಪತ್ರಿ ಮತ್ತು ವೈದ್ಯಶಾಲೆಯನ್ನು ರೋಮನ್ ಕ್ಯಾಥೊಲಿಕ ಮಿಷನಿಗೆ ಸೇರಿದ ಸಾನಿಟೇರಿಯಂ(?) ಯೆಂಬವರ ಹೆಸರಿನಿಂದ ನಿರ್ಮಿತವಾಗಿರುವ ಹೊಸಕಟ್ಟಡಕ್ಕೆ ವರ್ಗಮಾಡಬೇಕಾದ ಅಂಶವಂಕುರಿತು ಬಹಳಮಟ್ಟಿಗೆ ವಿಚಾರನಡೆದು ಅದಕ್ಕೆ ಬಹುಮಂದಿ ಪ್ರತಿಷೇಧಿಸಲು ಅದರ ನಿರ್ಣಯಾಧಿಕಾರವನ್ನು ಈಗ ಏತದರ್ಥ ನಿಯಮಿತರಾದ ಸಬ್‌ಕಮ್ಮಿಟಿಯವರು ವಹಿಸಿರುತ್ತಾರೆಂದು ತಿಳಿಯಬರುತದೆ. ಈಗ್ಯೆ ಬಹುಕಾಲವಾಗಿರುವ ಪೇಟೆಯ ಆಸ್ಪತ್ರಿಯನ್ನು ಪ್ರಕೃತ ಸ್ಥಳದಿಂದ ತಪ್ಪಿಸಿ ಅನ್ಯತ್ರ ವರ್ಗಮಾಡಲಿಕ್ಕೆ ಪರಿಗಣನೀಯವಾದ ಕಾರಣಗಳೊಂದೂ ನಮ್ಮ ಬುದ್ಧಿಸ್ಥವಾಗಲಿಲ್ಲವು. ಇದನ್ನು ವರ್ಗಮಾಡಬೇಕಾದ್ದು ಸ್ಥಳಾನುಕೂಲ್ಯಕ್ಕಾಗಿಯೇ ಅಥವಾ ಅದರ ವಿಚಾರಣಾಕ್ರಮವನ್ನು ಬಲಪಡಿಸುವದಕ್ಕಾಗಿಯೇ? ಈ ಅಭಿಪ್ರಾಯವು ಪ್ರಥಮತಃ ಯಾರಿಗೆ ಪುಟ್ಟಿತೋ ತಿಳಿಯಲಿಲ್ಲವು. ಹಾಗೆ ಯಾರಾದರು ತಾತ್ಪರ್ಯಪಟ್ಟು ತಿಳಿಸಿರುವರಾದರೆ ಅದು ಕೇವಲ ಏಕದೇಶಿಕವಾದ ಸ್ವಾಭಿಪ್ರಾಯವೇ ಹೊರ್ತು ಸಾರ್ವಜನಿಕವಾದ ಕೋರಿಕೆಯಾಗಿರಲಾರದು. ಯಾತಕ್ಕೆಂದರೆ ಅಸ್ಪತ್ರೆ ಮನೋಲ್ಲಾಸವೇ ಸ್ವಾಸ್ಥ್ಯನಿಮಿತ್ತವೆಂದು ಭಾವಿಸಿ ಈ ಅಂಶವು ಸೂಚಿಸಿದವರಿಗಿಂತಲೂ, ಈಆಸ್ಪತ್ರಿಯ ಮತ್ತು ವೈದ್ಯಶಾಲೆಯ ಪ್ರಯೋಜನವನ್ನು ಪೇಟೆಯನಿವಾಸಿಗಳಾದ ಪ್ರಜೆಗಳೆಲ್ಲರೂ ಜಾತಿಮತ ತಾರತಮ್ಯಗಳನ್ನು ಸಹ ಪರಿಗಣಿಸದೆ ಬಹುನಿಪವಾಗಿ ಅನುಭವಿಸುತಲಿರುವದರಿಂದ ಅದನ್ನು ಅನ್ಯತ್ರ ಪಡೆಪಡಿಸಿ ತಮ್ಮ ಸ್ವತ್ವವನ್ನು ಹೋಗಲಾಡಿಸಿಕೊಂಡು ಪರರೋಪಸರ್ಗಣಮಾಡಲಿಕ್ಕೆ ಯೆಷ್ಟುಮಟ್ಟಿಗೂ ಅವರು ಒಡಂಬಡಲಾರರು. ಈ ವಿಷಯವನ್ನು ಮ್ಯೂನಿಸಿಪಲ್ ಕಮ್ಮಿಷನರಿಗಳೆಲ್ಲೈಕಿ ಯಾರಾದರೊಬ್ಬರು ತಿಳಿಸಿರುವರಾದರೆ ಪ್ರಜಾಪ್ರತಿನಿಧಿಗಳಾಗಿ ಜನಗಳಯೋಗಕ್ಷೇಮಾಭಿಲಾಷೆಯೊಡನೆ, ಅಪೇಕ್ಷಿತಾಂಶಗಳನ್ನು ವ್ಯಕ್ತಪಡಿಸುವುದಕ್ಕಾಗಿ ಪ್ರವರ್ತಿಸಿರುವವರ ಕರ್ತವ್ಯದೊಳು ಇದಕ್ಕಿಂತಲೂ ಪ್ರಮಾದಕರವಾದದ್ದು ಬೇರೇನುಂಟು? ಸ್ಥಳಾನುಕೂಲ್ಯವಂ ಕುರಿತು ಚಿಂತಿಸಲಾಗಿ ಈಗಿನ ಪ್ರದೇಶವು ಮಧ್ಯರಂಗವಾಗಿಯೂ ವಿಶಾಲವಾಗಿಯೂ, ಕರಚರಣಾದಿಗಳ ಪಾಟವರಹಿತರಾದ ವೃದ್ಧರು, ದುರ್ಬಲರಾದ ಬಾಲಕರು, ಸಾಧನ ಶೂನ್ಯರಾದ ರೋಗಪೀಡಿತರು, ನಿಸ್ಸಹಾಯಕರಾದ ಸ್ತ್ರೀಯರು, ಅನುಪಪನ್ನರಾದ ದರಿದ್ರರು, ಮುಂತಾದವರೆಲ್ಲರೂ ಅಪೇಕ್ಷಿತಕಾಲದೊಳೆಲ್ಲ ಅಪ್ರಯತ್ನವಾಗಿ ಹೋಗುವದಕ್ಕೆ ಅನುಕೂಲವಾಗಿಯೂ ಇರುತಿದೆ. ಇದನ್ನು ಸೆಂಟ್ ಮಾರ್ಥಾಯವರ ಕಟ್ಟಡಕ್ಕೆ ವರ್ಗಮಾಡಿದಲ್ಲಿ ಮೇಲೆಕಂಡ ಜನಗಳನ್ನು ಅನಾವಶ್ಯಕವಾದ ತೊಂದರೆಗೊಳಪಡಿಸಿ ಇನ್ನಷ್ಟುದೂರ ಅವರಂ ಸೆಳದಂತೆಯಾಗುತಿದೆ. ಮೊದಲೇದುರ್ಬಲರಾದವರು ತಾಪಪಿ ರೋಗಪೀಡಿತರಾದವರು ಮಳೆಗಳ ಶೀತವಾತಗಳಂ ಸಹಿಸುತ ಬಹುದೂರ ಪಾದಚಾರಿಗಳಾಗಿ ಹೋಗುವಾಗ್ಯೆ ಪರಿಭವಪ್ರಾಪ್ತಕವಾದ ಅವರ ನಿಲಾಪಕ್ಕೆ, ಏತನ್ಮೂಲಕ ಪ್ರಾಶಸ್ತ್ಯವಂ ಪಡೆಯಬೇಕೆಂದಿರುವ ಮಿಷನರಿಗಳೂ, ಅದಂ ಅವರಿಗೆ ಪ್ರಯುಕ್ತಮಾಡುವದರೊಳು ದೃಢಾಭಿಪ್ರಾಯವುಳ್ಳವರೂ ಹ್ಯಾಗೆ ಕಾರಣರಾಗದೆ ಹೋಗುವರೋ ನಾವರಿಯೆವು.

ಇನ್ನು ಅದರವಿಚಾರಣಾಕ್ರಮವನ್ನು ಕುರಿತು ಚಿಂತಿಸಿದರೆ, ಪ್ರಸಕ್ತ ಪ್ರಯತ್ನಕ್ಕೆ ಸಾಧಕಗಳಾದ ವಿಶೇಷಾಂಶಗಳೊಂದೂ ನಮಗೆ ಕಂಡುಬರಲಿಲ್ಲವು. ಈಗ ಪೇಟೆಯ ಆಸ್ಪತ್ರಿಗೆ ಚಿಕಿತ್ಸಾರ್ಥ ಪಟ್ಟಣದಿಂದಲೂ ಪರಸ್ಥಳಗಳಿಂದಲೂ ಬಹುಮಂದಿ ಬರುತಲಿರುತ್ತಾರೆ. ಪ್ರಾಯೇಣ ಇವರೆಲ್ಲರೂ ಹಿಂದೂಗಳಲ್ಲದೆ ಅನ್ಯಜಾತಿಯವರೊಬ್ಬರೂ ಇಲ್ಲಿಗೆ ಬರುವದಿಲ್ಲವು. ಇದರಿಂದ ಅನ್ಯಜಾತಿಯವರ ಸಂಪರ್ಕವಿಲ್ಲದೆ ಇರುವಿಕೆ, ಮುಖ್ಯ ಕಾರಣವಾಯಿತು. ಇಲ್ಲಿರತಕ್ಕ ಪರ್ಣ್ಣರ ಸೇಟಿನ್‌ಗಳಾಗಿಯೂ, ಸ್ವಜನಗಳ ರೀತಿ ಸ್ವಭಾವಗಳನ್ನೂ, ಅವರ ತಾರತಮ್ಯವನ್ನೂ ಅರಿತವರಾಗಿಯೂ ಇರುತ್ತಾರೆ ಮತ್ತು ಇವರ ವಿಚಾರಣಕರ್ತರೆಲ್ಲರೂ ಹಿಂದೂಗಳಾಗಿರುವದರಿಂದ ರೋಗಿಗಳ ಜಾತಿಮತ ಸಂಪ್ರದಾಯಗಳ ಸಂರಕ್ಷಣೆಗೂ ತತ್ತತ್ಕಾಲದೊಳು ಅವರಿಗೆ ಅಪೇಕ್ಷಿತಗಳಾದ ಅನ್ನಾಹಾರಾದಿ ಉಪಚಾರಗಳಿಗೂ ಅವಕಾಶವುಂಟಾಗುತಿದೆ. ಇದಲ್ಲದೆ ಈಗ ಗವರ್ನಮೆಂಟಿನವರು ಸಹ, ಜನಗಳು ನಿರಾಕ್ಷೇಪಣೆಯಾದ ಚಿಕಿತ್ಸೆಯನ್ನು ಸ್ತ್ರೀಪುರುಷ ತಾರತಮ್ಯವಿಲ್ಲದೆ ಸ್ವಜಾತೀಯರಿಂದಲೇ ಪಡೆಯುವದಕ್ಕೆ ರತ್ನಸಜಾತಿಯವರನ್ನೇ ದೇಶವಿಚಾರಿಸಬೇಕೆಂಬ ಅಭಿಪ್ರಾಯದಿಂದ ವಿದ್ಯಾಸ್ಥಿತಿಯನ್ನು ಮುಂತಾದ ಪ್ರೋತ್ಸಾಹಗಳನ್ನುಂಟುಮಾಡುತಲಿದ್ದಾರೆ ಮತ್ತು ಹಿಂದೂ ಸ್ತ್ರೀಗಳಿಗೆ ಪ್ರಸೂತದ ಮೂಲಕವಾದ ಚಿಕಿತ್ಸೆ ನಡೆಯುವ ಸಂಬಂಧದಿಂದ ಹಿಂದೂ ಸ್ತ್ರೀಗಳಿಗೆ ಸ್ವಯಂ ಪ್ರಯೋಜನ[illegible]ವಾಗುವದಕ್ಕಾಗಿ ಲಾರ್ಡ್ ಡಫ್ರಿನವರ ಪತ್ನಿ ಮುಂತಾದವರು ಪ್ರಯತ್ನಮಾಡುತಿದ್ದಾರೆ, ಇಂತಾ ಉದ್ದೇಶಗಳಿಂದ[illegible] ಹಿಂದೂಗಳ [illegible] ದಲೇ ಸ್ಥಾಪಿಸಲ್ಪಟ್ಟು ಅವರಿಂದಲೇ ಪರಿಶೋಧಿತವಾಗಿರುವ ಒಂದು ವೈದ್ಯಶಾಲೆಯನ್ನು ಕ್ರಿಶ್ಚಿಯನ್ ಸಂಘಕ್ಕೆ ಒಪ್ಪಿಸಿ ಅವರಿಂದಲೇ ಅವರು ತೀರ್ಮಾನಗಳನ್ನು ಅಂಗೀಕರಿಸಬೇಕೆಂಬದ್ಯಾರ ಕರಮಾಡಿದ ಜ್ಞಾನ ವಿಷ್ಯುವರಿಗೆ ಪ್ರಯಾಗಿರುವಲ್ಲಿ ಸವರೀ ವಿದ್ಯಾಭ್ಯಾಸಕ್ಕಾಗಿ ನಾವು ಕ್ರಮಪಡಲ್ಯಾತಕ್ಕೆ? ಸಂತಿ ಮಹಾರಾಜರವರ ಆಸ್ಪತ್ರಿಯು ಸ್ವಲ್ಪ ಮತಸಂಬಂಧವಾದ್ದಾಗಿರುತಿದೆ. ಇವರ ವಿಚಾರಣಕರ್ತರಂತೆ ಸಮ್ಯಾಸಿನಿಗಳೆಂದು ಬೆಸರಿಸ್ಪಟ್ಟುಕೊಂಡಿರುವ ಹೆಂಗಸರಿರುವದಾದರೆ ಅಧಿಕವಾಗಿರುತಿವೆ. ಇವರೇ ಇಲ್ಲಿ ಮುಖ್ಯಚಿಕಿತ್ಸಕರು. ಇವರೇ ಇಲ್ಲಿಯ ರೋಗಿಗಳನ್ನು ಉಪಚರಿಸತಕ್ಕವರು. ಇಂತವರು ಮಾಡುವ ಚಿಕಿತ್ಸೆಗೆ ಕ್ರಿಶ್ಚಿಯನರಾದ ಇವರುಗಳು ತ್ಯಾಗಿ ಹಿಡಿದು ಹುಡುಗೋ ನಾಪರಿಯುತ್ತದೆ ಆಸ್ಪತ್ರಿಯಲ್ಲಿ ಮರಣಕಾಲ ಮೊದಲಾದ ಸಂದರ್ಭಗಳಲ್ಲಿ ರೋಗಿಗಳಿಗೇನುಗತಿ? ಅನ್ನೋದಕಾದಿ ಕೆಲವು ಉಪಚಾರಗಳನ್ನು ಮಾತ್ರ ಹಿಂದೂ ಜಾತಿಯವರ ಮೂಲಕ ಮಾಡಿಸಿದಾಗ್ಯೂ ವಿಜಾತೀಯರಾದವರ ಸಹವಾಸದಲ್ಲಿಯೂ ಸಾಂಕರ್ಯವಿಲ್ಲವಲ್ಲ. ಅದನ್ನಾದರೂ ಅಂಗೀಕರಿಸಿಬಿಕ್ಕೆ ಅವರು ಪ್ಯಾಸೆಸ್ಟುತಿರುವರು? ಇಂತಾ ವಿಷಯದಲ್ಲಿ ಮಾಡತಕ್ಕ ಬಲಾತ್ಕಾರಗಳು ಐದುಪತ್ಯೇಣ ಅವರು ಜಾತಿಭ್ರಷ್ಟರನ್ನಾಗಿ ಮಾಡಿದಂತ ಯಾಗುತದ್ದವೆ, ಈಬಗ್ಗೆ ಮ್ಯುನಿಸಿಪಲ್‌ಪಂಡಿನಿಂದ ಕೊಡತಕ್ಕ ದ್ರವ್ಯವನ್ನು ಜನಗಳಿಂದ ಬಲಾತ್ಕಾರದಿಂ ವಸೂಲ್ಮಾಡಿ ನಿರುಪಯುಕ್ತವಾಗಿ ವ್ಯಯಮಾಡಿದಂತೆ ಯಾಗುತಿದೆ. ಈ ಆಸ್ಪತ್ರಿಯು ಪ್ರಥಮತಃ ಪೇಟೆ ನಿವಾಸಿಗಳಿಂದಲೇ ಏರ್ಪಡಿಸಲ್ಪಟ್ಟಿದೆ. ತರುವಾಯ ಇದು ಮ್ಯುನಿಸಿಪಲ್ ವಿಚಾರಣಿಗೆ ಬಾಲ್ಮಾಡಲ್ಪಟ್ಟಿತು. ಇದರ ಸಂರಕ್ಷಣೆಯು ಈಗ ಜನಗಳಿಗೆಸೇರಿದ್ದಾಗಿರುತಿದೆ. ಅದದರಿಂದ ಈ ಅಂಶದೊಳು ಕಂದಾಯದಾರರ ಅಭಿಪ್ರಾಯವೇ ಮುಖ್ಯವಾದ್ದಾಗಿರುತಿವೆ. ಅದದರಿಂದ ಇದುಕುರಿತು ಯಾವ ರೀತಿಯಿಂದಲಾದರೂ ವ್ಯವಸ್ಥೆ ಮಾಡಬೇಕಾದಲ್ಲಿ ಪ್ರಥಮತಃ ಜನಗಳ ಅಭಿಪ್ರಾಯವನ್ನು ಅರಿಯತಕ್ಕದ್ದು. ಈಗ ಇರುವ ಮ್ಯುನಿಸಿಪಲ್ ಕಮ್ಮಿಷನರ್‌ಗಳೆಲ್ಲರೂ ಪ್ರಜಾಹಿತಕರಣ ಪ್ರವೃತ್ತಕರೆಂದು ನಾವೆಣಿಸಿದ್ದೇವೆ. ಈ ಭಾವವನ್ನು ಊರ್ಜಿತಪಡಿಸಬೇಕೆಂಬ ತಾತ್ಪರ್ಯವು ಅವರಿಗಿರುವ ಪಕ್ಷದಲ್ಲಿ ತಾವು ಯಾರಿಗೋಸ್ಕರ ನಿಯಮಿತರಾಗಿದಾರೆಯೋ ಅಂತವರ ಪ್ರಯೋಜನವನ್ನು ಪರಿಭಾವಿಸಬೇಕಲ್ಲದೆ ಕೆಲವರು ಯುರೋಪಿಯ[illegible] ಸರಿಯಗೆ ಎಷ್ಟುಮಾತ್ರವೂ ಕಿವಿಕೊಡಲಾಗದು. ಇಂತಾ ಸಂದರ್ಭಗಳಲ್ಲಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು ತರ್ಕ್ಕಯುಕ್ತಿ ನ್ಯಾಯಗಳೊಡನೆ ವಿಚಾರಮಾಡಿ ನಿರ್ಣ್ಣಯಿಸಬೇಕಾದ್ದು ಅವರ ಕರ್ತವ್ಯವಾಗಿರುತಿದೆ. ಪ್ರಸಕ್ತ ಬದಲಾವಣೆಯನ್ನು ಮ್ಯುನಿಸಿಪಲ್ ಕಮಿಷನರ್‌ಗಳೇನಾದರೂ ಅಂಗೀಕರಿಸಿದೊಡೆ ಅವರೆಲ್ಲರೂ ಗವರ್ನ್ಮೆಂಟಿನವರಿಂದ ನೊಕರರಾಗ್ಮದ[illegible] ತಮ್ಮ [illegible] ಬಂದನು ಉಳಿಸಿಕೊಳ್ಳುವಬಗ್ಗೆ ಅವರು ಹೇಳಿದಂತೆ ತಲೆದೂಗುವರೆಂದು ತಿಳಿದಿರುವ ಪ್ರಜೆಗಳನು ಬೆಕೆಯನ್ನೇ ವೃ[illegible] ಯಾಗುವದಲ್ಲದೆ ಜನನ[illegible] ವಿದಬಂದು ಅಪರೀ ಕೆಡಿಸಿದಂತೆ ಯಾಗುತಿದೆ.

ಸಂಟ್ ಮಾರ್ತಾಯವರ ಆಸ್ಪತ್ರಿಗೆ ಮ್ಯುನಿಸಿಪಲ್ ಫಂಡಿನಿಂದ ಮಾಹೆಯಾನಾ ೨೦೦ ರೂಪಾಯಿಗಳು ಕೊಡತಕ್ಕದ್ದೆಂದು ವ್ಯವಸ್ಥೆಯಾಗಿರುವಂತೆ ತಿಳಿಯಬರುತಿದೆ. ಒಬ್ಬ ಕ್ರಿಶ್ಚಿಯನ್ ಆಸ್ಪತ್ರಿಗೆ ಹಿಂದೂಜನಾರ್ಜಿತವಾದ ಇಷ್ಟರ ಹಣವನ್ನು ಕೊಡುವದಕ್ಕೇನು ಕಾರಣವೋ ನಾವರಿಯೆವು. ಇದು ಲಗಸೂರತ್ತೆಯನ್ನು ವಿಜಯಬರನಿಗೆ ದಾನಕೊಟ್ಟಂತಾಯಿತು. ದರ್ಮಸಂಸ್ಥಾಪನಾಭಿಲಾಷಿಗಳಾದ ಮಿಷನರಿಗಳು ತಾವು ಸಾಧಯಿಸ್ಯಬಿಸಿರುವ ಮಹತ್ಕಾರ್ಯಕ್ಕೆ ನಮ್ಮ ಸಹಾಯವನ್ನೇ ನಿರೀಕ್ಷಿಸಿರುವರೆ? ಅವರು ಹಾಗಿರಲಾರರು. ಈ ವಿಷಯದಲ್ಲಿ ಕೆಲವರು, ತಾವು ರೆಸಿಡೆಂಟರಿಂದ ಪರಿಶೋಧಿತರಾದವರುಬದನ್ನು ಸಹ ಚಿಂತಿಸದೆ ತಮ್ಮ ಸ್ವಾಭಾವನ್ನೇ ಏರಿ ಕೋರಿಸಿರಿಕ್ಷೆ ಶ್ರಿಸಾಸಬ್ಬ ಸ್ವಜನ ಮನಾಸಪ್ರಿಶ್ಯರಾಗಿದಾರೆಂದು ಕೇಳಲಿಕ್ಕೆ ನಾವು ಬಹಳ ಆಶ್ಚರ್ಯಪಡುವದು. ಇವರ ಸಂಬಂಧವೇ ಪ್ರಕೃತದೌತ್ಯಕ್ಕೆ ಮುಖ್ಯ ಪ್ರೇರಕವಾದದ್ದಂತಲೂ, ಇವರ ವಾಕ್ಚಾತುರ್ಯಕ್ಕೆ ಅದೇನು ವ್ಯಕಾರಣವೆಂದಲೂ ತಿಳಿಯಬರುತಿದೆ. ಇಂತಾ ಪ್ರತಿಬಂಧಕ ಸಾಮಗ್ರಿಯು ನಿವಾರಣವಾದರೂ ಈ ವಿಷಯವು ಕ್ರಮಪಟ್ಟು ಜನಗಳಿಗೆ ಸುಖಪ್ರಯೋಗವಾದದು.

ಇದೇವಿಷಯವನ್ನುಕುರಿತು ನಿನ್ನೆಯದಿನ ಪ್ರಾದೇಶಿಕ ಸಮಯದ ಸುಮಾರಿಗೆ ಇಲ್ಲಿನ ಮ್ಯುನಿಸಿಪಲ್ ಸ್ಕೂಲ್ ಕಟ್ಟದಲ್ಲಿ ಮ್ಯುನಿಸಿಪಾಲಿಟಿಗೆ ಕಂದಾಯ ಕೊಡತಕ್ಕ ಸರ್ಕಾರ್ ಉದ್ಯೋಗಸ್ಥರು, ಬುದ್ಧಿಮಾನ್ ದೊಡ್ಡಮನುಷ್ಯರು, ವರ್ತಕರು ಮೊದಲಾದವರು ಸಭೆಸೇರಿದ್ದರು. ಈ ಸಭೆಯಲ್ಲಿ ಮ|| ರಾ|| ಅಡ್ವೊಕೇಟ್ ನಾರಾಯಣ ರಾಯರವರು ಅಗ್ರಾಸನವನು ವಹಿಸಿ ಪ್ರಸಕ್ತ ವಿಷಯವಂತುವಿದು ಸಂಗ್ರಹವಾಗಿ ಸಭಿಕರಿಗೆ ತಿಳಿಸಿದರು. ತರುವಾಯ ಸಭಿಕರಲ್ಲಿ ಕೆಲವರು ಇಲ್ಲಿನ ಆಸ್ಪತ್ರಿ ಮತ್ತು ವೈದ್ಯಶಾಲೆಯನ್ನು, ಈಚೆಗೆ ಸೇಂಟ್ ಮಾರ್ತಾಯೆಂಬವರ ಹೆಸರಿನಲ್ಲಿ ಕಟ್ಟಲ್ಪಟ್ಟಿರುವ ಹೊಸ ಆಸ್ಪತ್ರೆಗೆ ವರ್ಗಮಾಡುವ ವಿಷಯದಲ್ಲಿ ಉಂಟಾಗಿರುವ ಬಹುವಿದ ಬಾಧಕಗಳನ್ನು ವಿವರವಾಗಿ ಸಭಿಕರಿಗೆ ತಿಳಿಸಲು ಅದಕ್ಕೆ ಸಭಿಕರಲ್ಲಿ ಒಬ್ಬರಿಬ್ಬರುಹೊರತು ಮಿಕ್ಕವರೆಲ್ಲರು ಏಕಕಂಠ್ಯವಾಗಿ ಅನುಮೋದಿಸಿದರು.

ತರುವಾಯ ಅಡ್ವೊಕೇಟ್ ಮ|| ರಂಗಾಚಾರ್ಯರವರು, ಇಲ್ಲಿನ ಆಸ್ಪತ್ರಿಯನ್ನೂ ವೈದ್ಯಶಾಲೆಯನ್ನೂ ಮೇಲೆ ಹೇಳಿರುವ ಹೊಸ ಆಸ್ಪತ್ರಿಗೆ ವರ್ಗಮಾಡುವದರಲ್ಲಿ ಬಹುವಿದಪ್ರಯೋಜನಗಳುಂಟಾದು ಬಹಳಯೊತ್ತು ತರ್ಕ್ಕಕಾರಣಗಳೊಡನೆ ಉಪನ್ಯಾಸಮಾಡಲು ಅದಕ್ಕೆ ಕೆಲವರು ಅನುಮೋದಿಸಿದರು. ಇದಕ್ಕೆ ಪ್ರೋತ್ಸಾಹಕವಾಗಿ ಯೇ ಮ|| ರಾ|| ಅಡ್ವೊಕೇಟ್ ನರಸಿಮ್ಮಯ್ಯಂಗಾರ್ರವರು ಸಹ ವಾದಿಸಿದರು. ಆಸ್ಪತ್ರಿಯನ್ನು ವರ್ಗಮಾಡಬೇಕೆಂಬ ಪಕ್ಷಾವಲಂಬಿಗಳು ಮೇಲೆಹೇಳಿದ ಇಬ್ಬರೇ ಆಗಿ, ಮಿಕ್ಕವರೆಲ್ಲರು ಏಕಕಂಠ್ಯವಾಗಿ ಕೂಡದೆಂದು ಅಭಿಪ್ರಾಯಪಟ್ಟದರಿಂದ ಅದಕ್ಕೆ ಅನುಗುಣವಾದ ನಿರ್ಣ್ಣಯಗಳು ಮಾಡಲ್ಪಟ್ಟವು. ಸದರೀ ನಿರ್ಣ್ಣಯಗಳನ್ನು ಸ್ಥಳ ಸಂಕೋಚದಿಂದ ಮುಂದಿನವಾರದಪತ್ರಿಕೆಗೆ ನಿಲ್ಲಿಸಿಡಬೇಕಾಗಿ ಬಂದಬಗ್ಗೆ ಚಿಂತಿಸುತ್ತೇವೆ.

LOCAL AND PROVINCIAL NEWS

ಒಳದೇಶಮತ್ತು [illegible]ತಾಲ್ಲೂಕಜಾತವೃತ್ತಾಂತಗಳು.

Departure —ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಕರ್ನಲ್ ಗ್ರಾಂಟೆಯವರು ಗತಗುರುವಾರದದಿನ ಸ್ವಂತಕೆಲಸದಮೇಲೆ ಮದರಾಸಿಗೆ ಹೋದರೆಂತಲೂ ಅವರು ಬಹುಶಃ ನಾಳೆಯ ದಿನ ವಾಪಸ್ ಬರುವರೆಂದಲೂ ತಿಳಿಯಬರುತಿದೆ.

The Maharaja's Tour —ಮೈಸೂರು ಗ[illegible]ಮೆಂಟಿನ ಪಬ್ಲಿಕ್‌ವರ್ಕ್ಸ್ ಇಲಾಖಾ ಸಕ್ರೇಟರಿಯಾದ ಮೇಜರ್ ಬರ್ನೆಯವರಿಗೆ ಶ್ರೀಮಾನರೀ ಕಾಮಗಾರಿಗಳನ್ನು ವ್ಯವಸ್ಥಪಡಿಸುವವಿಷಯದಲ್ಲಿ ತಕ್ಕ ಅಭಿಪ್ರಾಯಗಳನ್ನು ತಿಳಿಸತಕ್ಕಬಗ್ಗೆ ಶ್ರೀಮನ್ಮಹಾರಾಜರವರ ಸವಾರಿಯೊಡನೆ ಬರತಕ್ಕದ್ದೆಂದು ಹುಕುಂ ಆಗಿರುವಂತೆ ತಿಳಿಯಬರುತಿದೆ. ಜನೋಪಯುಕ್ತಗಳಾದ ಕಾಮಗಾರೀಗಳಿಗೆಂದು ಇವರುಕೊಡುವಂಪಿಪ್ರಾಯಗಳು ಅತ್ಯವ್ಯಯಕಾರಿಗಳಾಗಿ ಪರ್ಯವಸಾನವಾಗಬಹುದು.

Special Sristedars —ಮಾಹೆಯಾನಾ ೩೦ ರೂಪಾಯಿಗಳ ಸಂಬಳ ಮತ್ತು ೨೦ ರೂಪಾಯಿಗಳ ಅಲೋವೆನ್ಸ ವೃತ್ತಿ ಇಬ್ಬರು ಶಿರಸ್ತೇದಾರರು ಮೈಸೂರು ಡಿಸ್ಟ್ರಿಕ್ಟಿಗೆ ವಿಶೇಷತಃ ನೊಕರರ್ಮಾಡಲ್ಪಡತಕ್ಕದ್ದೆಂದು ದಿವಾನರವರು ಹುಕುಂಮಾಡಿರುವಂತೆಯೂ, ಸದರೀ ಶಿರಸ್ತೇದಾರರ ಕೆಲಸಗಳನ್ನುಕುರಿತು ಒಂದು ಇಲ್ಲಿನ ಚೀಫ್ ಸೆಕ್ರೆಟರಿಯವರ ನೋಟದ ಅಳಿಯಂದಿರಿಗೂ, ಮತ್ತೊಂದು ಪೋಸನ್ಡೆ ರಿಜಿಸ್ಟರಾರ್ ಮ|| ಲಕ್ಷ್ಮಣರಾಯರವರ ಕುಮಾರರಿಗೂ ಕೊಡಲ್ಪಡುವದೆಂದಲೂ, ಮುಂದೆ ಇವರು ಪರಮರೀಯತಿಕೆಲಸಕ್ಕೆ ಲಾಯಕ್ಕಾಗುವಂತೆ ರೆವಿನ್ಯೂ ಕೆಲಸಗಳ ಪಾಠಹೇಳಿಕೊಡುವುದುಂಟಾಗುವಬಗ್ಗೆ ಇವರು ತಾಲ್ಲೂಕುಗಳಿಗೆ ಕಳುಹಿಸಲ್ಪಡುವರೆಂದಲೂ ಒಳದೇಶದಪತ್ರಿಕೆ ಹೇಳುತಿದೆ. ಇದು ಎಷ್ಟರಮಟ್ಟಿಗೆ ನಿಜವೋ ನಾವರಿಯೆವು.

Removal of offices —ಮೈಸೂರು ಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಮ|| ಗಾರ್ಡಿನ್ ಸ್ಟ್ರೈಯವರು ತಮ್ಮ ಆಫೀಸನ್ನು, ಈಗ ಮೈಸೂರು ಗವರ್ನ್ಮೆಂಟ್ ಕಟ್ಟಡದಲ್ಲಿ ಒಂದುಭಾಗದಲ್ಲಿರುವ ರೆಸಿಡೆನ್ಸೀ ಬಿಲ್ಡಿಂಗ್ ಆಫೀಸನ್ನುಸಹ ನಾಳೆಯದಿನ ಪಬ್ಲಿಕ್ ಆಫೀಸ್ ಬಗ್ಗೆ ಗೊತ್ತುಮಾಡತಕ್ಕದೆಂದು ನಿರ್ಣ್ಣಯವಾದ ಹುಕುಂ ಕೊಟ್ಟರೆಂಬದಾಗಿ ಡೆಯಿಲೀ ಪ್ರೋಸ್ಟ್ ಪತ್ರಿಕೆಯು ತಿಳಿಸುತಿದೆ. ಸದರೀ ಹೊಸಬಂಗ್ಲೆಗೆ ಈಗ ಮಾಹೆಯಾನಾ ೩೦ ರೂಪಾಯಿಗಳು ಬಾಡಿಗೆ ನಿಶ್ಕರ್ಷೆಯಾಗಿರುವಂತೆ ಕೇಳುತ್ತೇವೆ. ಕ್ರಯ ಲಬ್ದವಾದ ಸದರೀ ಕಟ್ಟಡಕ್ಕೆ ಅನುಗುಣವಾದ ಪ್ರಯೋಜನವೇ ಅದರ ಸ್ವಂತಕರ್ತರಿಗೆ ಉಂಟಾದಂತೆ ಹೇಳಬಹುದಾಗಿದೆ.

Reduction of Railway Fares —ರೈಲ್ವೆಯ ಪ್ರಯೋಜನವನ್ನು ಜನಗಳು ನಾನಾ ವಿಧದಿಂದನುಭವಿಸುತಬರುವಂತೆಲ್ಲ ರೈಲ್ವೇ ಕಂಪೆನಿಯವರು ಹೊಸ ಹೊಸದಾದ ಅನುಕೂಲ್ಯಗಳಂ ಕಲ್ಪಿಸುತ ಬರುವದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ. ಈಗ ಮೂರನೇತರಗತಿ ಗಾಡಿಗೆ ಮೈಲೀ ಒಂದಕ್ಕೆ ೩ಕಾಸು ಪ್ರಕಾರ ಚಾರ್ಜು ಕೊಡಲ್ಪಡುತಿದೆಯಷ್ಟೆ. ಇದನ್ನು ಸುಲಭಪಡಿಸಬೇಕೆಂಬ ಉದ್ದೇಶದೊಡನೆ ಬರುವಜನವರಿ ತಿಂಗಳಮೊದಲು ೨ಕಾಸುಗಳಿಗೆ ತಗ್ಗಿಸಬೇಕೆಂಬ ಆಲೋಚನೆಯು ರೈಲ್ವೇ ಕಂಪನಿಯವರಿಗೆ ಉಂಟಾಗಿದುವಂತೆಕೇಳುತ್ತೇವೆ. ಇದಲ್ಲದೆ ಎರಡನೇತರಗತಿ ಗಾಡಿಗಳೊಳು ರಾತ್ರಿಕಾಲದಲ್ಲಿ ಸಂಚಾರ ಮಾಡತಕ್ಕ ಪ್ರಯಾಣಸ್ಥರಿಗೆ ಅನುಕೂಲಿಸುವಂತೆ ಕೆಲವು ವಿಶೇಷವಿದ್ಯಾದುಗಳುಸಹ ಮಾಡಲ್ಪಡುವವು. ಇವೆಲ್ಲವು ಶ್ಲಾಘ್ಯವಾಗಿಯೂ ಕಂಪನಿಯವರಿಗೆ ಲಾಭಕರವಾಗಿಯೂ ಇದುವರೆಬವರೊಳಗನ್ನುಮಾತ್ರವೂ ಸಂಶಯವಿಲ್ಲವು. ಹೀಗೆಯೇ ಮೂರನೇ ತರಗತಿಯವರ ವಿಷಯದಲ್ಲಿಯೂ ಅವಶ್ಯಕಗಳಾದ ಕೆಲವು ಏರ್ಪಾಡುಗಳಂ ಮಾಡುವರಾದರೆ ಬಹಳ ಅನುಕೂಲವಾಗಿರುತದು.

A new appointment —ಮೈಸೂರು ಸರ್ಕಾರದವರ ಔದಾರ್ಯ ಪ್ರದರ್ಶನಕ್ಕೆ ಕಾರಣಭೂತರಾದ ಇಂಡ್ಯಗವರ್ನ್ಮೆಂಟಿನವರ ಪರೋಪಕಾರ ಸೃಷ್ಟಿಯನ್ನು ನಾವಿನ್ನೆಷ್ಟೆಂದುಕೊಂಡಾಡಬಹುದು! ಉದ್ದಿಷ್ಟಗಳಾದ ಪೋಲೀಸ್ ಇಲಾಖಾ ಏರ್ಪಾಡುಗಳಂಕುರಿತು ತಿಳಿಸಲಿಚ್ಛಿಸಿದ ಸಂದರ್ಭದಲ್ಲಿ ಈಗ ಮರಳಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಯೆಂಬ ಹೆಸರಿನಲ್ಲಿ ಮುಖ್ಯಾದಿಕಾರಿಯೊಬ್ಬರು ನೊಕರರ್ಮಾಡಲ್ಪಟ್ಟರೆಂದು ಸೂಚಿಸಿ ಇನ್ನು ಒಂದುವಾರ ಪೂರ್ತಿಯಾಗಿ ಕಳೆಯಲಿಲ್ಲವಷ್ಟೆ. ಈಗ ಮತ್ತೊಂದು ನೊಕರರಾತಿಯು ನಡೆಯುವದಾಗಿದೆಯೆಂದು ಒಳದೇಶದ ಡೆಯಿಲೀಪ್ರೋಸ್ಟು ಪತ್ರಿಕೆಯಮೂಲಕ ತಿಳಿಯಲಾದವು. ಅದೇನುವದರೆ, ಮಾಹೆಯಾನಾ ೧,೦೦೦ ರೂಪಾಯಿಗಳ ಸಂಬಳದಲ್ಲಿ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್‌ಎಂಬ ಹೆಸರಿನಲ್ಲಿ ಮೇಲೆ ಕಂಡವರ ಕುಮ್ಮಕ್ಕಿಬಗ್ಗೆ ಮತ್ತೊಬ್ಬರನ್ನು ನಿಯಮಿಸತಕ್ಕದ್ದೆಂದು ಬಹಳದೂರ ವಿಚಾರಪೂರ್ವಕ ಮೈಸೂರು ಸರ್ಕಾರದವರು ತೀರ್ಮಾನಿಸಿದರೆಂತಲೂ, ಸದರೀ ಕೆಲಸವು ಒಬ್ಬ ಯುರೋಪಿಯನಿಗಲ್ಲದೆ ಬೇರೊಬ್ಬರಿಗೂ ಕೊಡಲ್ಪಡಲಾರದೆಂತಲೂ, ಇದು ನಾಳೆಯಾದರೂ ಆಗಲಿ, ಅಥವಾ ಬರುವ ತಿಂಗಳ [illegible]ಲಾಗಲಿ ಜಾರಿಯಲ್ಲಿ ಬರುವದೆಂತಲೂ ನಂಬತಕ್ಕಮೂಲಕ ತಿಳಿಯಬರುವಂತೆ ಮೇಲೆಕಂಡ ಪತ್ರಿಕೆಯು ಜವಾಬ್ ಕೊಡುತಿದೆ. ಪ್ರಾಯಶಃ ಇದು ನಿಜವಾಗಿಯೇ ಇರಬಹುದೆಂದು ನಂಬುತ್ತೇವೆ. ಈಗ ಇದನ್ನು ಉಂಟುಮಾಡಲಿಕ್ಕೆ ಅವಶ್ಯಕತೆಯೇನು? ಅಂತಾ ಅವಶ್ಯಕತೆ ಕಂಡುಬಂದಲ್ಲಿ ಇದಕ್ಕೆ ಇಲ್ಲಿನ ನೇಟಿವ್‌ಗಳನ್ನುಕುರಿತು ಲಾಯಕ್ಕಾದವರೊಬ್ಬರು ಯಾತಕ್ಕೆ ನೊಕರರ್ಮಾಡಲ್ಪಡತಕೂಡದು? ಸರ್ಕಾರ್ ಕೆಲಸವು ನಿರ್ವಿಘ್ನವಾಗಿ ನಡೆಯುವದಕ್ಕಾಗಿಯೆ? ಅಥವಾ ಯುರೋಪಿಯನ್ ಸಮುದಾಯದವರಿಂದ ಪ್ರಶಂಸಿಸಿಕೊಳ್ಳುವದಕ್ಕಾಗಿಯೆ?

The Canarese Diary—1886 —ಮುಂಬೈ ರಣಾರ್ಪ ಛಾಪಖಾನೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿರುವ ೧೮೮೬ನೇ ಇಸವಿಯ ಕನ್ನಡ ಡೈರಿ ಎಂಬ ದಿನಚರಿ ಪುಸ್ತಕದ ಪ್ರತಿಯೊಂದು ಸದರೀ ಕಾರ್ಖಾನೆಯ ಮ್ಯಾನೇಜರವರಿಂದ ನಮಗೆ ಕಳುಹಿಸಲ್ಪಡಲು ಅದನ್ನು ಬಹಳ ಕೃತಜ್ಞತೆಯೊಡನೆ ಅಂಗೀಕರಿಸಿದೆವು. ಈ ಪುಸ್ತಕವು ಉಪಯುಕ್ತಗಳಾದ ಬಹ್ವಂಶಗಳಿಂದೊಡಗೂಡಿ ಸಾಲಂಕೃತವಾದದ್ದಾಗಿದೆ. ಇದರ ಪ್ರತಿ ಪುಟದ ಮೇಲ್ಭಾಗದಲ್ಲಿ ಇಂಗ್ಲಿಷ್, ಕನ್ನಡ, ಹಿಂದುಸ್ತಾನಿ ಈ ಮೂರುಬಗೆ ತಿಂಗಳು ವಾರ ತಾರೀಖ್‌ಗಳು ಸೇರಿಸಲ್ಪಟ್ಟವೆ. ಮಿಕ್ಕ ಭಾಗವೆಲ್ಲವೂ ಖಾಲಿಯಾಗಿರುವದರಿಂದ ಅದರಲ್ಲಿ ಬೇಕಾದ ವಿಷಯಗಳನ್ನು ಬರೆಯುಕೊಳ್ಳುವದಕ್ಕೆ ಅನುಕೂಲವಾಗಿರುತಿವೆ. ಇದರ ಕಡೇ ಭಾಗದಲ್ಲಿ ನಗದು ಜಮಾಖರ್ಚುಬಗ್ಗೆ ಕೆಲವು ಪುಟಗಳು ಪ್ರತ್ಯೇಕವಾಗಿ ಬಿಡಲ್ಪಟ್ಟವೆ. ಆ ವಿಭಾಗದಲ್ಲಾದರೋ, ಸಾಬಕ್ ವೈಸ್‌ರಾಯಿಯವರಾದ ಲಾರ್ಡ್ ರಿಪ್ಪನ್‌ರವರ ಚಿತ್ರವೊಂದು ಸೇರಿಸಲ್ಪಟ್ಟಿರುತಿದೆ. ಇದಲ್ಲದೆ ಪೋಸ್ಟಲ್, ಟೆಲಿಗ್ರಾಫ್, ಸ್ಟಾಂಪ್ ಕಿಮ್ಮತ್ತು, ರಜಾಪಟ್ಟಿ, ಮುಂತಾದ ಅನೇಕ ವಿಷಯಗಳು ಇದರಲ್ಲಿ ಸುಲಭ ವಾಡಿಕೆಗೆ ಅನುಕೂಲಿಸುವಂತೆ ಅಡಗಿರುತಿವೆ. ಇದು ಜನಗಳ ಪರಿಗ್ರಹಕ್ಕೆ ಸರ್ವ ಪ್ರಕಾರದಿಂದಲೂ ಯೋಗ್ಯವಾಗಿಯೂ, ಅಂಚೆಹಾಸಲ್ ಬೇಲೀಲ್ ಆಳಗಳ ಕ್ರಯಕ್ಕೆ ಮೇಲ್ಪಡದದ್ದಾಗಿಯೂ ಇರುವದರಿಂದ ಇದು ಶೀಘ್ರದಲ್ಲಿಯೇ ಖರ್ಚಾಗಿ ತತ್ಪ್ರವರ್ತಕರ ಉದ್ದೇಶವು ಸಫಲವಾಗುವದೆಂದು ನಂಬುತ್ತೇವೆ. ಕಸಬುದಾರನಾದ ಪ್ರತಿಯೊಬ್ಬ ಮನುಷ್ಯನಿಗೂ ಇಂತಾ ಪುಸ್ತಕವೊಂದು ಇರಬೇಕಾದ್ದು ಅತ್ಯಾವಶ್ಯಕವಾದದರಿಂದ ಅಂತವರೆಲ್ಲರಿಗೂ ಇದನ್ನೇ ನಾವು ವಿಶೇಷತಃ ಶಿಫಾರಸ್ಸು ಮಾಡುವೆವು.

TELEGRAPIHCSUMMARY.
ಟೆಲಿಗ್ರಾಫ್ ವೃತ್ತಾಂತ ಸಂಗ್ರಹವು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

SPEECH DELIVERED BY THE
DEWAN OF MYSORE,
before the Representative Assembly at Mysore, on the 21st October 1885

(ಕಳೆದವಾರದ ಶೇಷಪೂರ್ತಿ.)

ಕೇರಹೋರ್ ಯೆಂಬ ಸ್ಥಳದಲ್ಲಿ ಅಸಿಸ್ಟೆಂಟ್ ಕಾನ್ಸರವೇಟರ್‌ಕೆಲಸಕ್ಕೆ ತರ್ಬೇಯತ್ತಾಗಲು ಆ ಸ್ಕೂಲಿನಲ್ಲಿ ಮೂರುಮಂದಿ ವಿದ್ಯಾರ್ಥಿಗಳು ಓದುತ್ತಾಯಿದ್ದಾರೆ. ಕ್ರಮೇಣ ಹೀಗೆ ಯೋಗ್ಯತೆ ಪಡೆದ ಆಫೀಸರರನ್ನು ಒಂದೊಂದು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬರನ್ನ ನೇಮಿಸಲಾದೀತು.

ಮದರಾಸ್ ಪ್ರೆಸೀಡೆನ್ಸಿಯಲ್ಲಿ ಜಾರಿಯಲ್ಲಿಡತಕ್ಕ ಮತ್ತು ಇಂಡಿಯಾ ಗವರ್ನಮೆಂಟಿನಿಂದ ಫಾಯಿಷ್ ಮಾಡಲ್ಪಟ್ಟ ಫ್ಯಾಮಿನ್‌ಕೋಡನ್ನು ಅನುಸರಿಸಿ ಈದೇಶಕ್ಕೆ ಯೋಗ್ಯವಾದಂತೆ ಸಂಪೂರ್ಣವಾದ ಫ್ಯಾಮಿನ್‌ಕೋಡನ್ನು ಯೇರ್ಪಡಿಸುವ ಆಲೋಚನೆ ಈಗ ನಡಿಯುತ್ತಾ ಇದೆ. ಮತ್ತು ಕ್ಷಾಮಪ್ರಾಪ್ತವಾದಕಾಲದಲ್ಲಿ ರಿಲೀಫ್ ಕಾಮಗಾರಿಗಳು ಏರ್ಪಡಿಸಿ ಅವುಗಳನ್ನ ಜಾರೀಮಾಡತಕ್ಕದಕ್ಕೆ ಈರೂಲ್ಸುನಂತೆ ನಡದುಕೊಳ್ಳತಕ್ಕದ್ದಾಗಿರುತ್ತೆ.

ಹುಲ್ಲುಗಾವಲ್ ಅಂತ — ಹುಲ್ಲುಗಾವಲಿನ ವಿಷಯಕ್ಕೆ ಈಗ ಗವರ್ನಮೆಂಟಿನವರು ಗಮನ ಕೊಡುತ್ತಾಯಿದ್ದಾರೆ. ವಿಸ್ತಾರವಾಗಿ ಸರಕಾರ ದಿಂದಲೂ ಖುಷ್‌ಬಾಷ್ ಜನರಿಂದಲೂ ದನಗಳು ಯಿಟ್ಟಲ್ಪಟ್ಟಿರತಕ್ಕ ಮೈಸೂರಿನಂಥಾ ದೇಶದಲ್ಲಿ ಹುಲ್ಲುಗಾವಲ್ ಜಮೀನ್ ಯೆಂಬುವದು ಬಹಳ ಮುಖ್ಯವಾದ ಸಂಗತಿಯಾಗಿದೆ. ಸರಕಾರದ ದನಗಳಿಗೆ ಉತ್ತಮವಾದ ಕಾವಲು ಜಮೀನನ್ನ ವುಳಸಿಕೊಂಡಿದೆ ಖುಷಬಾಷ್ ಜನಗಳ ದನಗಳಿಗೆ ಸರ್ವೇಯಿಲಾಖೆಯವರು ಪ್ರತಿಗ್ರಾಮದಲ್ಲಿಯೂ ಗೋಮಾಳವನ್ನ ನಿಗದಿಸಿದ್ದಾರೆ. ಮತ್ತು ಇದಕ್ಕೆ ವತ್ತಾಕೆಯಾಗಿ ಸರ್ಕಾರ್ ಬಂಜರ್ ಜಮೀನುಗಳಲ್ಲಿ ಮೇಯಿಸಿಕೊಳ್ಳುವ ಹಕ್ಕನ್ನ ಆಯಾಯ ಗ್ರಾಮದವರಿಗೆ ಸಾರ್ವತ್ರಿಕ ನೀಡಿತ್ತು. ಅನೇಕಸ್ಥಳಗಳಲ್ಲಿ ಯಿಂತಾ ಬಂಜರ್‌ಜಮೀನು ಬಹಳ ವಿಸ್ತಾರವಾಗಿಯಿವೆ. ಒಳ್ಳೇಕಾಲದಲ್ಲಿ ಈ ಮೇವು ಸಾಕಾಗಿರುತ್ತೆಂದು ನಂಬಿದೆ ಮಳೆ ಹೇರಳವಾಗಿ ಬೀಳದೆಯಿರುವ ಸಂವತ್ಸರಗಳಲ್ಲಿ ಮೇವು ಸಾಲದೆಂದು ಸಾಮಾನ್ಯವಾಗಿ ಫಿರ್ಯಾದುಹುಟ್ಟುತ್ತೆ. ಇದು ನಿಷ್ಕಾರಣವಾದ್ದಲ್ಲವೆಂದು ಡಿ|| ಅಸೀಸರರೂ ಅಮಲ್‌ದಾರರು ಸಹ ಹೇಳುತ್ತಾರೆ. ಸಾಲದ್ದಕ್ಕಾಗಿ ಸರಕಾರದವರು ವುಳಸಿಕೊಂಡಿರುವ ಜಂಗಲ್‌ಗಳನ್ನ ಈ ಸಂದರ್ಭದಲ್ಲಿ ಹಂಗಾಮಿಯಾಗಿ ಮೇಯಿಸೋದಕ್ಕೆ ಬಿಟ್ಟುಕೊಡುತ್ತಾರೆ ಈ ಏರ್ಪಾಡು ಸಾಲದು, ಮತ್ತು ನಿರುಪಾಧಿಕವಾದದ್ದಲ್ಲ. ತೋರಿಸಿದ ರಿಯಾತಿಯನ್ನ ಜನಗಳು ದುರುಪಯೋಗ ಪಡಿಸಬಹುದು. ಆದ್ದರಿಂದ ಒಳ್ಳೇಕಾಲದಲ್ಲಿಯೂ ಕೆಟ್ಟಕಾಲದಲ್ಲಿಯೂ ಅವಶ್ಯಕವಾದ್ದಕ್ಕೆ ಕೊಂಚಮಟ್ಟಿಗೆ ಶಾಶ್ವತವಾಗಿ ಏರ್ಪಾಡುಮಾಡಿ ರೈತರನ್ನು ಗವರ್ನಮೆಂಟಿನವರಿಂದ ಉಳಿಸಿಕೊಳ್ಳಲ್ಪಟ್ಟ ಜಂಗಲನ್ನು ಅಪೇಕ್ಷಿಸುವಂತೆ ಮಾಡಬೇಕೆಂದು ಯೋಚಿಸಿದೆ.

ಈಗ ಇರತಕ್ಕ ಅಮೃತಮಹಲ್ ಕಾವಲಗಳು ಸರಕಾರದ ದನಗಳಿಗೆ ಬೇಕಾದ್ದಕ್ಕಿಂತ ಬಹಳ ಜಾಸ್ತಿಯಾಗಿವೆ. ಆದ್ದರಿಂದ ಕೊಂಚಮಟ್ಟಿಗೆ ಕಮ್ಮೀ ಮಾಡತಕ್ಕದ್ದು ಆಲೋಚನೆಯಲ್ಲಿದೆ ಹೀಗೆ ಮಾಡಿದ ನಂತರ ಆವಶ್ಯಕ ಜಾಸ್ತೀಯಾಗಿರುವ ಕೆಲವು ಕಾವಲ್‌ಗಳನ್ನು ಬಿಡಿಸಿಕೊಂಡು ಈಗಿನಂತೆ ಮೇವು ದುರ್ಲಭವಾಗುವಕಾಲಗಳಲ್ಲಿ ಚರಾಯಿಗಾಗಿ ಬಿಡಿಸತಕ್ಕದ್ದಕ್ಕೂ ಸವುದೆಗೆ ಲಾಯಖು ಮರಗಳನ್ನ ಬೆಳಸುವದಕ್ಕೂ ಇಟ್ಟುಕೊಂಡು ಮಿಕ್ಕ ಕಾವಲ್‌ಗಳನ್ನ ಜನಗಳಿಗೆ ಹುಲ್ಲುಗಾವಲಗಾಗಿ ಬಿಡಿಸಿಕೊಟ್ಟು ಮಾಪಕು ದರಖಾಸ್ತು ಮಾಡಿಕೊಡಬೇಕೆಂದು ಯೋಚಿಸಿದೆ ಆದರೆ ಹೀಗೆ ಪಡೆದ ಜಮೀನಿನಲ್ಲಿ ಯಾವನು ಸಾಗುವಳೀ ಮಾಡುತ್ತಾನೋ ಅಂಥಾ ಜಮೀನಿಗ ಜಾಸ್ತೀದರ ಪ್ರಕಾರಕ್ಕೆ ಕಂದಾಯ ಕೊಡಲು ಬದ್ಧನಾಗಿರುತ್ತಾನೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಸೈಲೊ ಅಂದರೆ ಹಸೀ ಹುಲ್ಲನ್ನ ಕೆಡದರೀತಿ ಒಂದು ಕ್ರಮದಿಂದ ಹಳ್ಳಮಾಡಿ ಅದರಲ್ಲಿ ಹಾಕಿ ದೀರ್ಘಕಾಲದ ವರಿಗೂ ದನಗಳು ತಿನ್ನುವದಕ್ಕೆ ಯೋಗ್ಯವಾಗಿ ಇರುವಂತೆ ಉಳಿಸಿಕೊಳ್ಳುವ ಉಪಾಯವು ಈಚೆಗೆ ಇತರ ದೇಶಗಳಲ್ಲಿ ಕೆಲವುಕಡೆ ಯೇರ್ಪಟ್ಟಿದೆ. ಇಂತಾ ಸೈಲೊಗಳನ್ನ ಅಜಮಾಯಿಷೀ ಮಾಡುವದಕ್ಕೆ ಅಪ್ಪಣೆ ಕೊಟ್ಟಿದೆ. ಮಿಲಿಟೆರಿಯವರು ವಿಸ್ತಾರವಾಗಿ ಇದರ ಪರೀಕ್ಷೆ ಮಾಡುತ್ತಾಇದ್ದಾರೆ. ಕ್ಷಿಪ್ರದಲ್ಲಿಯೇ ಈ ವಿಷಯದಲ್ಲಿ ಸುಮುಖವಾದ ರಿಪೋರ್ಟನ್ನು ಮಾಡುವರಾಗಿ ತೋರುತ್ತದೆ. ಅದು ತಲಪಿದ ಕೂಡ್ಲೇ ಗೆಜೆಟನಲ್ಲಿ ಇಂಗ್ಲಿಷಿನಲ್ಲಿಯೂ ಮತ್ತು ಕನ್ನಡದಲ್ಲಿಯೂ ಫಾಯಿಷ್ ಮಾಡಲ್ಪಡುತ್ತೆ.

ಅಂಚೆ — ಈ ಗವರ್ನಮೆಂಟಿನವರ ಆಲೋಚನೆಯಲ್ಲಿರತಕ್ಕ ಮತ್ತೊಂದು ವಿಶೇಷ ಸಂಗತಿಯು ಈದೇಶದ ಅಂಚೇ ವಿಷಯವಾದ್ದಾಗಿದೆ. ಈ ಇಲಾಖೆಯಲ್ಲಿ ಬಹಳವಾಗಿ ಅಭಿವೃದ್ಧಿ ಆಗತಕ್ಕದ್ದು ವುಂಟೆಂಬುವದು ನಿಸ್ಸಂದೇಹ ಇಂಡಿಯನ್ ಪೋಸ್ಟ್‌ಮಾಸ್ಟರ್ ಡೈರೆಕ್ಟರವರು ಎರಡು ಸವಾಲ್ ಮಾಡಿರುತ್ತಾರೆ.

೧ನೇದು ಈ ಶೀಮೆಯಲ್ಲಿ ನಡೆಯುತಕ್ಕ ಪೋಸ್ಟ್ ಅಂದರೆ ಟಪ್ಪಾಲ್ ಏರ್ಪಾಡುಗಳು ವಿಶಿಷ್ಟವನ್ನು ಬ್ರಿಟಿಷ್ ಪೋಸ್ಟ್ ಇಲಾಖೆಗೆ ಒಪ್ಪಿಸಿಬಿಡತಕ್ಕದ್ದು. ಆ ಇಲಾಖೆಯವರು ನಮ್ಮ ಶೀಮೆಯ ಅಂಚೇ ಇಲಾಖೆ ದರೋಬಸ್ತು ಸಿಬ್ಬಂದಿ ತಮ್ಮ ಅಧೀನಕ್ಕೆ ತೆಗದುಕೊಂಡು ಬ್ರಿಟಿಷ್ ಸರಕಾರದಿಂದಲೇ ಅದರ ಖರ್ಚು ಪಾವತಿ ಮಾಡಿಕೊಂಡು ಎಲ್ಲಾ ವಿಧದಲ್ಲಿಯೂ ಮೈಸೂರು ಶೀಮೆಯು ಬ್ರಿಟಿಷ್ ದೇಶದಂತೆಯೇ ಆಚರಿಸತಕ್ಕದ್ದು. ಸರಕಾರಿ ಕವರುಗಳಿಗೆ ಸರಕಾರಿ ಸುಲಭ ರಿವಾಜ್ ಮೇರಿಗೆ ಚಾರ್ಜು ಮಾಡತಕ್ಕದ್ದು ಅದು ಸರ್ವಿಸ್ ಲೇಬಿಲ್‌ಗಳನ್ನ ಅಂಟಿಸುವುದೇ ಚಿಕಟಾಯಿಸತಕ್ಕದ್ದು. ಅನೇಕ ವಿಧವಾಗಿ ಈ ಸವಾಲ್ ನಮಿಗೆ ಫಾಯಿದೆಕರವಾದದ್ದು. ಸಮಸ್ತವಿಧವಾದ ಪೋಸ್ಟಲ್ ಯೇರ್ಪಾಡುಗಳಿಗೂ ಯೆರಡು ಅಂಶಗಳು ಸಾರಜನಿತವಾದಂಥಾದ್ದು. ಅವು ಯಾವುವೆಂದರೆ, ಮೊದಲನೇದು, ಇತರದೇಶದಲ್ಲಿ ಜಾರೀಯಲ್ಲಿರತಕ್ಕ ರೂಲ್ಸಿನಂತೆ ಇಲ್ಲಿಯೂ ರೂಲ್ಸುಗಳು ಜಾರೀಯಲ್ಲಿ ಬರತಕ್ಕದ್ದು.

೨ನೇದು ಒಂದೇ ಅಧಿಕಾರಕ್ಕೆ ಒಳಪಟ್ಟ ಪೂರಾ ತರಬಿಯತಿಯಲ್ಲಿ ಬರತಕ್ಕದ್ದು.

ಈ ಯೆರಡು ಪ್ರಯೋಜನಗಳು ನಮಿಗೆ ವುಂಟಾಗುತ್ತೆ ಇಷ್ಟುಮಾತ್ರವಲ್ಲದೆ ಈ ಯೇರ್ಪಡಿಸಿದ ಪ್ರಕೃತದಲ್ಲಿ ಮೈಸೂರು ಶೀಮೆಯ ಪೋಸ್ಟಿಗೆ ಸಂಬಂಧಪಟ್ಟ ಸಂಗತಿಗಳು ಬ್ರಿಟಿಷ್ ಇಂಡಿಯಾ ದೇಶದಿಂದ ನಿಗದವಾಗಿರುವದರಿಂದ ಜನಗಳಿಗೆ ಯಾವ ಅನಾನುಕೂಲ ವುಂಟಾಗಿದೆಯೋ ಅವರನ್ನ ಹೋಗಲಾಡಿಸುತ್ತೆ. ಮತ್ತು ನಾವು ಎಷ್ಟು ಪ್ರಯತ್ನಪಟ್ಟು ಬ್ರಿಟಿಷ್ ಪದ್ಧತಿಯನ್ನ ಅನುಸರಿಸಿದ್ದಾಗ್ಯೂ ಮೈಸೂರುಶೀಮೆಯು ನಿಂಗದವಾಗಿರೋಣದರಿಂದ ಉತ್ತಮ ಸ್ಥಿತಿಗೆ ಬರಲಾರದಾದ ಈ ಇಲಾಖೆಯ ಖರ್ಚು ನಮ್ಮ ಸರ್ಕಾರಕ್ಕೆ ತಪ್ಪುತ್ತೆ. ಇದರಿಂದ ನಮ್ಮ ರಾಜ್ಯದ ಅಧಿಕಾರಗಳಲ್ಲಿ ಆಗಲಿ, ರಾಜ್ಯದ ತಂತ್ರದಲ್ಲಿ ಆಗಲಿ ಯಾವದೊಂದು ಪ್ರವೇಶ ಮಾಡುವದಕ್ಕೂ ಅವಕಾಶ ವುಂಟಾಗುವದಿಲ್ಲ ಆದರೆ ಟಪ್ಪಾಲ್ ಚೋರಿ ಆಗುವ ಒಂದು ಸಂದರ್ಭದಲ್ಲಿ ಮಾತ್ರ ಇತರ ನೇಟೀವ್ ಸ್ಟೇಟಿಗಳಂತೆ ಈ ಸರಕಾರವು ಈಗಿನಂತೆ ಮುಂದಕ್ಕೂ ಜವಾಬ್ದಾರಿ ವಹಿಸತಕ್ಕದ್ದಾಗಿರುತದೆ. ಮೇಲೆ ಉದಹರಿಸಿದ ಈ ಸವಾಲನ್ನ ತಾವು ಅಂಗೀಕರಿಸಬಹುದು. ಇಲ್ಲದಿದ್ದರೆ ಇಚ್ಛಾನುಸಾರವಾಗಿ ಮುಂದೆ ವಿವರಿಸುವ ಪ್ರಕಾರ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು ಆಲೋಚನೆ ಮಾಡಬಹುದು.

೨ನೇ ಸರತ್ತು—ಮೈಸೂರು ಗವರ್ನಮೆಂಟಿನವರು ಪೋಸ್ಟೇಜ್ ಅಂದರೆ ಟಪಾಲಿನ ಹಾಸಲ್ ಲೇಖಿಯಾನೆ ದರವನ್ನು ಮತ್ತು ಬ್ರಿಟಿಷ್ ರೂಲ್ಸನ್ನೂ ಸಹ ಜಾರಿಯಲ್ಲಿ ತರತಕ್ಕದ್ದು. ಬ್ರಿಟಿಷ್ ಲೇಬಿಲ್‌ನಂತೆ ಲೇಬಿಲ್‌ಚಲಾಯಿಸತಕ್ಕದ್ದು. ಆದರೆ ಈ ಲೇಬಲ್‌ಗಳಮೇಲೆ ಅಚ್ಚುವಾಗಿ ಮೈಸೂರ ಯೆಂಬ ಮಾತು ಛಾಪಿಸಿ ಇರತಕ್ಕದ್ದು. ಈ ಲೇಬಿಲ್‌ಗಳ ಬಾಗವಡನ್ನು ಮಾತ್ರ ತೆಗದುಕೊಂಡು ಲೇಬಿಲ್‌ಗಳನ್ನು ನಮಗೆ ಬ್ರಿಟಿಷ್‌ನವರು ಸರಬರಾಯಿ ಮಾಡತಕ್ಕದ್ದು

೩ನೇ ಸರತ್ತು—ಸರಕಾರಿ ಆಗಲಿ ಅಥವಾ ಸಾವಕಾರಿ ಆಗಲಿ ಒಳದೇಶದ ಬಾಬತು ಇಲ್ಲಿಂದ ಬ್ರಿಟಿಷ್ ದೇಶಕ್ಕೆ ಹೋಗತಕ್ಕದ್ದಾಗಲಿ ಅಲ್ಲಿಂದ ಈ ದೇಶಕ್ಕೆ ಬರತಕ್ಕದ್ದಾಗಲಿ ಯೆರಡನೇದಕಾ ಹಾಸಲ್ ವಸೂಲ್ಮಾಡದೆ ಆಯಾಯ ಪೋಸ್ಟಾಫೀಸಿನಲ್ಲಿ ವಸೂಲಾದ ಹುಟ್ಟುವಳಿ ಮೊಬಲಗು ಮತ್ತು ಬೇರಿಂಗ್ ಅಂದರೆ ನಟಿನ್ಯೆದು ಕವರುಗಳ ಮೇಲೆ ವಸೂಲಾಗತಕ್ಕ ಹಾಸಲ್ ಸಹ ಆಯಾ ಆಫೀಸಿಗೆ ಜಮಾ ದಾಖಲಾಗತಕ್ಕದ್ದು.

೪ನೇ ಸರತ್ತು.—ಈಗ ಬ್ರಿಟಿಷ್ ಇಂಡಿಯಾದಲ್ಲಿ ಜಾರೀಯಲ್ಲಿರುವ ಮನೀಆರ್ಡರ್ ಇನ್ಶೂರೆನ್ಸ್, ಪಾರಸಿಲ್, ಪೋಸ್ಟಲ್ ನೋಟಸ್, ಮತ್ತು ಬ್ರಿಟಿಷ್ ಇಂಡಿಯಾದಲ್ಲಿ ಜಾರೀಯಲ್ಲಿರತಕ್ಕ ಇತರ ಏರ್ಪಾಡುಗಳನ್ನು ಇಲ್ಲಿಯೂ ಜಾರೀಗೆ ತರತಕ್ಕದ್ದು. ಇದಕ್ಕಾಗಿ ವಸೂಲಾಗುವ ಹಾಸಲನ್ನು ನಮ್ಮ ಸರ್ಕಾರಕ್ಕೆ ಜಮೇ ತೆಗದುಕೊಳ್ಳತಕ್ಕದ್ದು.

ಯೆರಡನೆ ಸವಾಲ್ ಪ್ರಕಾರಕ್ಕೆ ಅಂಗೀಕರಿಸಿದ್ದಾದರೆ ನಾವು ಬ್ರಿಟಿಷ್ ಸರ್ಕಾರಕ್ಕೆ ಯಾವರೀತಿ ನಡೆಸಿಕೊಡುತ್ತೇವೋ ಅದೇರೀತಿ ಅವರು ನಮಗೆ ನಡೆಸಿಕೊಡುತ್ತಾರೆಂತ ನಿಮಿಗೆ ಸ್ಪಷ್ಟವಾಗಬಹುದು. ಆದರೆ ಇದರಿಂದ ನಮ್ಮ ಸರ್ಕಾರಕ್ಕೆ ಭಾರಿ ಜವಾಬ್ದಾರಿ ವುಂಟಾಗುತ್ತೆಂಬುವದನ್ನ ಮರೆಯಲಾಗದು ಆಸರಕಾರದಂತೆ ನಾವುನ್ನು ಈ ಇಲಾಖೆಯನ್ನ ಅಭಿವೃದ್ಧಿಗೆ ತರಬೇಕಾದರೆ ಜಾಸ್ತೀಖರ್ಚು ಮಾಡಬೇಕಾಗುತ್ತೆ. ಶ್ರೀಮನ್ ಮಹಾರಾಜರ ಗವರ್ನಮೆಂಟಿನವರು ಈ ವಿಷಯವನ್ನ ಅತಿಜಾಗರೂಕತೆಯಿಂದ ಅದರ ಎಲ್ಲ ಆದಾಯನಷ್ಟಗಳನ್ನು ಆಲೋಚಿಸಿದಾರೆ. ಆದಾಗ್ಯೂ ಆಖೈರ್ ತೀರ್ಮಾನ ಮಾಡುವದಕ್ಕೆ ಮೊದಲು ಈ ಸಭೆಯಲ್ಲಿ ಚರ್ಚಿಸಬೇಕೆಂದು ಅಪೇಕ್ಷಿಸುತ್ತಾರೆ.

ಪ್ರಜೆಗಳ ಪ್ರಾರ್ಥನೆಗಳನ್ನು ಕುರಿತಪಡಿಸುವ ಮತ್ತು ಅವರಸುಸ್ಥಿತಿಯ ಅಭಿವೃದ್ಧಿಗಾಗಿ ಯೋಗ್ಯಗಳಾದ ಯೇರ್ಪಾಡುಗಳನ್ನು ಸೂಚಿಸುವದಕ್ಕಾಗಿಯೂ ಪ್ರತಿ ಸಂವತ್ಸರದಲ್ಲು ಸೇರುವ ಈ ಸಭೆಗೆ ದೇಶದ ಯೆಲ್ಲಾಕಡೆಯ ಪ್ರಜೆಗಳ ಪರವಾಗಿ ನೀವು ಕಳುಹಿಸಲ್ಪಟ್ಟಿರುವದು ಬಹು ಸನ್ಮಾನವಾಗಿ ಭಾವಿಸಲ್ಪಟ್ಟಿದೆ. ಎಂದು ತಿಳದು, ಕೊಳ್ಳುವದಕ್ಕೆ ಶ್ರೀಮನ್ಮಹಾರಾಜರವರು ಸಂತೃಪ್ತರಾಗಿರುವರೆಂದು ನಿಮಿಗೆ ನಿಜವಾಗಿ ತಿಳಯಪಡಿಸುತ್ತೇವೆ. ಈ ಸಭೆಯು ಪ್ರಥಮತಃ ಯೇರ್ಪಾಟಾದಾಗ ಇದಕ್ಕೆ ರಕ್ತ ಸಮಯವಲ್ಲವೆಂದು ಕೆಲವರು ಯೋಚಿಸಿದ್ದರು. ಆದರೆ ಜನಗಳ ಕ್ಷೇಮಚಿಂತನೆಗೆ ಸಂಬಂಧಿಸಿದ ಸಮಸ್ತ ಸಂಗತಿಗಳಲ್ಲಿಯೂ ನೀವು ವ್ಯಕ್ತಪಡಿಸುವ ಪ್ರೋತ್ಸಾಹವನ್ನೂ ಮತ್ತು ಈ ಸಭೆಯಲ್ಲಿ ನೀವು ಜರಿಗಿಸುವ ಅನುಭವಸಿದ್ಧಗಳಾದ ಚರ್ಚೆಗಳನ್ನೂ ಯೋಚಿಸಿದ್ದಾದರೆ ಪ್ರಾರ್ಥ್ಯೋಕ್ತವಾದ ಮತ್ತು ಅನಾದಾರವಾದ ಅಭಿಪ್ರಾಯವನ್ನು ನೀವು ಹೋಗಲಾಡಿಸಿದವರಾಗುತ್ತೀರಿ. ಈ ಸಭೆಯು ಜರಿಗಿದ ರೀತಿಯಿಂದ ಪ್ರಥಮೋದ್ದೇಶವು ಕೈಕೂಡಿತಾದ್ದರಿಂದ ಇತಃಪರ ಜನಗಳ ಪ್ರಾರ್ಥನೆಗಳನ್ನು ಇನ್ನೂ ಕ್ರಮವಾಗಿ ತಿಳಿಯಪಡಿಸುವ ಅವಕಾಶ ಕೊಡುವದಕ್ಕೆ ಧೈರ್ಯ ವುಂಟಾಗುತ್ತೆ. ಈ ಆಲೋಚನೆಯು ಕ್ಷಿಪ್ರದಲ್ಲಿಯೆ ಯೇರ್ಪಡುವ ಲೋಕಲ್ ಬೋರ್ಡ್‌ಯಾನೆ ತಾಲ್ಲೂಕು ಜಾತಿಗಳ ಬೋರ್ಡಿನವರಿಂದ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಈ ಸಭೆಗೆ ಕಳುಹಿಸುತ್ತಾ ಬರಬೇಕೆಂದು ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿರುತ್ತೆ. ಹೀಗೆ ಮಾಡೋಣದರಿಂದ ಪ್ರಜೆಗಳ ಪ್ರಾರ್ಥನೆಗಳನ್ನು ವಿಜ್ಞಾಪಿಸುವದಕ್ಕೆ ಸೇರುವ ಈ ಸಭೆಗೆ ಯೋಗ್ಯವಾದ ಅಧಿಕಾರವೂ ಗೌರವವೂ ಕೊಟ್ಟಂತೆ ಆಗುತ್ತೆ.

BANGALORE.—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XII.] BANGALORE—MONDAY DECEMBER 7, 1885. [No. 49.

ಸಂಪುಟ ೧೨.] ಬೆಂಗಳೂರು—ಸನ್ ೧೮೮೫ನೇ ಇಸವಿ ಡಿಸೆಂಬರ್ ೭ನೇ ತಾರೀಖ್ ಸೋಮವಾರ. [ಸಂಚಿಕೆ ೪೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜ್.

[illegible]

NOTICE TO SUBSCRIBERS.

[illegible]

ನೋಟೀಸ್.

[illegible]

ಪ್ರಕಟನೆ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ.

ಸನ್ ೧೮೮೬ನೇ ಏಪ್ರಿಲ್ ಗುರ್ರೇ ತಾರೀಖ್ ಲಾಗಾಯತು ಸನ್ ೧೮೮೭ ನೇ ಮಾರ್ಚಿ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್‌ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪ್ಪೋ ಸೂಪರಿಂಟೆಂಡೆಂಟರವರು, ಸನ್ ೧೮೮೫ ನೇ ಇಸವಿ ಡಿಸೆಂಬರ್ ೧೭ನೇ ಮಧ್ಯಾಹ್ನ ೧೨ ಘಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನುಕುರಿತ ಜಾಸ್ತೀ ತಪಸೀಲ್ ತಿಳಿಯಬೇಕಾದವರು, ಸನ್ ೧೮೮೫ನೇ ಇಸವಿ ನವಂಬರ್ ೧೫ನೇ ಮರ್ಕ್ಯಂ ೪೫ನೇ ನಂಬರ್ ಫೋರ್ಟ್ ಸೆಂಟ್ ಜಾರ್ಜ್ ಗೆಜಟ್ ೨ನೇಭಾಗ ೧,೫೧೬ನೇ ಪುಟದಲ್ಲಿ ಷಾಯಿಷ್ ಆಗಿರುವ ಪ್ರಕಟನೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗೀಹುಲ್ಲು.
ಹಸೀಹುಲ್ಲು.

A. W Rawlins, Col.,
Offg. Supt. Remount Depot

ರಿಮೌಂಟ್ ಡಿಪ್ಪೊ,
ಹೊಸೂರು,
೨೦ನೇ ನವಂಬರ್ ೧೮೮೫

ನೋಟೀಸ್

ಕ್ರಯಕ್ಕೆ ಸಿದ್ಧವಾಗಿದೆ.

[illegible]

ಉದ್ಯೋಗ ಪರ್ವ.

[illegible]

ಪ್ರಕಟನೆ.

ಈವಾರದೊಡನೆ ಈಸಾಲಿನಲ್ಲಿ 11 ತಿಂಗಳುಪೂರೈಸಿದ್ದರಿಂದ ಇದುವರಿವಿಗೂ ಈ ಪತ್ರಿಕೆಗೆ ಬಾಕೀದಾರರಾಗಿರುವ ಚಂದಾದಾರರೆಲ್ಲರೂ ತಮ್ಮ ಬಾಕೀ ಮೊಬಲಗನ್ನು ಈ ತಿಂಗಳ ೨೦ನೇ ತಾರೀಖಿನೊಳಗಾಗಿ ಕಳುಹಿಸಬೇಕೆಂದು ಕೋರುವೆವು. ನಮ್ಮ ಮುಂದಿನ ಏರ್ಪಾಡನ್ನನುಸರಿಸಿ ಬಾಕೀ ವಸೂಲೀಬಗ್ಯೆ ಲೆಕ್ಕಗಳನ್ನು ನಮ್ಮಕಡೆ ಲಾಯರಿಗೆ ಒಪ್ಪಿಸುವವಾದ್ದರಿಂದ ಅವರು ಕೊಡಬಹುದಾದ ನೋಟೀಸುಗಳಿಗೂ ತತ್ಪ್ರಯುಕ್ತಗಳಾದ ಲುಕ್ಸಾನುಗಳಿಗೂ ನಾವು ಯಮ್ಮಮಾತ್ರವೂ ಜವಾಬ್ದಾರರಾಗಲಾರೆವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 7, 1885.

೧೮೮೫ನೇ ಡಿಸಂಬರ್ ೭ನೇ ತಾ|| ಸೋಮವಾರ

ಓಂ || ಸರ್ವಜ್ಞತಾಂಸದೇವಾಕ್ಯ [illegible]

SUBJUGATION OF BURMAH.

ಬರ್ಮಾದೇಶದ ತಾತ್ಕಾಲಿಕ ಸ್ಥಿತಿಯನ್ನನುಸರಿಸಿ ಗತವಾರದಲ್ಲಿ ನಾವು ಸೂಚಿಸಿದ ಭವಿಷ್ಯತ್ಫಲವು ಇಷ್ಟು ತ್ವರೆಯಲ್ಲಿಯೇ ಅನುಭವಸಿದ್ಧವಾಯಿತು. ಬರ್ಮಾರಾಜ್ಯದ ಪ್ರಧಾನ ನಗರವಾದ ಮಂಡಲ ಪಟ್ಟಣವು ಈಗ ಅನ್ಯರಾಜರ ಹಸ್ತಗತವಾಗಿ ಅದರ ಅರಸರಾದ ಥೀಬಾಯವರು ಅನಿರೀಕ್ಷಿತವಾಗಿ ಸ್ವತಃ ಬ್ರಿಟಿಷಿನವರ ನಿರ್ಬಂಧಕ್ಕೊಳಗಾದರು. ಇನ್ನು ಇವರ ಕ್ರಾಣಮಾನ ಧನಗಳೆಲ್ಲವು ಬ್ರಿಟಿಷಿನವರ ಅಧೀನವಾಯಿತು. ಅಕಟಾ! ಕಾಲಗತಿಯನ್ನೇನೆನ್ನಬಹುದು. ಇವರ ಅತುಲೈಶ್ವರ್ಯವು ಈಗ ಏನಾಯಿತು? ಅಪ್ರತಿಮವಾದ ಕೀರ್ತಿಪ್ರಾಶಸ್ತ್ಯಗಳೀಗ ಎತ್ತಹೋದವು? ಸಾರಭೂತವಾದ ರಾಜ್ಯಕೋಶಗಳೀಗ ಯಾರಪಾಲಾದವು? ಅವಿಮರ್ಶಪೂರ್ವಕ ವಿನಿಯೋಗಿಸಲ್ಪಡುತಲಿದ್ದ ಅಪ್ರತೀಕಾರವಾದ ರಾಜಾಜ್ಞೆಗಳೀಗ ಯೆಲ್ಲಿಲಯವನ್ನೈದಿದವು? ಸಮರಸನ್ನಾಹದೊಳು ಮುಖ್ಯಪ್ರೇರಕವಾಗಿದ್ದ ಮಂತ್ರಿಮಂಡಲವೀಗ ಯೆಷ್ಟರಮಟ್ಟಿಗೆ ಸಹಾಯಕವಾಯಿತು? ತಮ್ಮವಶೀಕರಣ ಶಕ್ತಿಯಿಂದ ಸದರೀ ಪ್ರಭುವಿನಚಿತ್ತವೃತ್ತಿಯನ್ನು ಸ್ವವಶಪಡಿಸಿಕೊಂಡಿದ್ದ ಅಂತಃಪುರಸ್ತ್ರೀಸಮೂಹವೀಗ ಅನನ್ಯಗತಿಕವಾಗಿ ಯೆಲ್ಲಿಹೋಯಿತು? ಪರಿಜನಪರಿಚಾರಕರೀಗ ಯಾರ ಅವಲಂಬವನ್ನು ಪಡೆದವರಾದರು? ಲೋಕದಲ್ಲಿ ಮನುಷ್ಯನಭಾಗ್ಯಕ್ಕೆ ಅದೃಷ್ಟವು ಮುಖ್ಯಕಾರಣವಾಗಿದ್ದಾಗ್ಯೂ ದೃಷ್ಟವೂ ಬಹಳಮಟ್ಟಿಗೆ ಕಾರಣವಾಗುತಿದೆ. ಬರ್ಮಾ ಅರಸರ ವಿಷಯದೊಳು ಗತ ಒಂದೆರಡು ವಾರಗಳಿಂದ ನಮ್ಮ ಹೃದಯದಲ್ಲಿ ಜನಿಸಿದ್ದ ಪ್ರಬಲಾನಿಷ್ಟಶಂಕೆಯು ಉಚಿತ ಕಾರಣಗಳಿಂದ ಅನುದಿನವೂ ವೃದ್ಧಿಯನ್ನೈದುತ ಅಲ್ಪ ದಿನಗಳೊಳಗಾಗಿಯೇ ನಮ್ಮ ಶಂಕೆಯು ವಾಸ್ತವ್ಯವಾಗಿ ಪರಿಣಮಿಸಿತು. ಸತ್ಪುರುಷರಿಗೆ ತ್ಯಾಜ್ಯವಾದ ನಿರುತರ ವಿಷಯಾಸಕ್ತಿಯೂ, ತತ್ಪ್ರಯುಕ್ತಗಳಾದ ಹೇಯ ಕಾರ್ಯ ಪ್ರವೃತ್ತಿಯೂ, ಕುಲ ಧನ ಮಾನಗಳನ್ನು ಹೋಗಲಾಡಿಸಿ ಅವರಂ ನಿರಂತರ ದುಃಖಭಾಜನರನ್ನಾಗಿ ಮಾಡುತಿವೆ. ಮುಖ್ಯವಾಗಿ ಇಂತಾ ದುರ್ವಿಷಯವ್ಯಾಮೋಹವು ಕೆಲವು ಕಾಲದ ಮೊದಲು ಬರ್ಮಾ ಅರಸರವರಿಗೆ ಉನ್ಮತ್ತವಾದದರಿಂದ ಅವರು ತಮ್ಮ ಜಾತಿ ಕುಲಗೋತ್ರಗಳನ್ನು ಸಹ ಸದ್ಯಸ್ಥ್ಯೆಯದೆ ಮನಸ್ಸೀ ವರ್ತಿಸಲಾರಂಭಿಸಿದರು. ಇದರಿಂದ ಪ್ರಭುಗಳು ತಿರಸ್ಕಾರ್ಯರಾದರು. ಗುರುಜನಗಳಲ್ಲಿ ಪ್ರೇಮಯುಕ್ತರಾಗಿ

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪನಿ.
ಜನರಲ್ ಕಮ್ಮಿಷನ್ ಮರ್ಚಂಟಿಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತ್ವರಿತವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ಕಮ್ಮಿಷನ್ ತೆಗೆದುಕೊಳ್ಳಲ್ಪಡುವದು.

NOTICE.

VAIDYASARA SANGRAHA.

Price including Postage, Rs 5-6-0

[illegible]

ವಿದ್ವೇಷವು ಗಣನೀಯವಾಯಿತು. ಸ್ವಭಾವಸಿದ್ಧವಾದ ಪ್ರೌಢತೆಯು ತೊಲಗಿ ಅದಕ್ಕೆ ಬದಲು ದುಡುಕುವ ವುಂಟಾಗುತಬಂತು. ಔದಾರ್ಯವು ಲೋಭಗುಣವಾಗಿ ಪರಿಣಮಿಸಿತು. ವಿಶೇಷ ಹೇಳಲ್ಯಾತಕೆ, ಕ್ಷೇಮಚಿಂತಕರಾದ ಸ್ವಪ್ರಜೆಗಳು ದೀರ್ಘದ್ವೇಷಪಾತ್ರರಾದರು. ಸಹಜಗಳಾದ ಗುಣಗಳೆಲ್ಲವು ಮೂಲೆಗಡಗಿ ದೋಷಗಳು ತಲೆದೋರುತಬಂದದರಿಂದ ಈ ಅರಸರಿಗೆ ಇಂತಾಸ್ಥಿತಿಯು ಪ್ರಾಪ್ತವಾಗಲಿಕ್ಕೆ ಇಷ್ಟು ತ್ವರೆಯೊಳು ಕಾರಣವಾಯಿತು. ಇವರ ಸೌಖ್ಯಭಂಗಕಾರಿಗಳಾದ ಅಸದ್ವಿಷಯಗಳಲ್ಲಿ ಪುರುಷನಿಗೆ ಪ್ರವೃತ್ತಿಯುಂಟಾದರೆ ಯೆಂತವನಾದರೂ, ಸದ್ಗುಣಿಕನಾಗಿ ವೀರ್ಯ ಶೌರ್ಯಗಳು ನಶಿಸಿ, ಯಶಃಕಾಂತೆಯು ಅಂತವನನ್ನು ತನ್ನ ವಿರೋಧಿ ವಶಮಾಡಿ ತೆರಳುವದಾಶ್ಚರ್ಯವಲ್ಲವು. ಅತೀತ ವಿಷಯಮಕುರಿತು ಇನ್ನು ಚಿಂತಿಸಿ ಪ್ರಯೋಜನವಿಲ್ಲವು. ಮುಂದೆಯಾದರೂ ತೀಬಾಯವರು ಉಚಿತವೃತ್ತಿಯನ್ನವಲಂಬಿಸಿ ಸ್ವಕಾರ್ಯಮ ಸಾಧಿಸುವರಾದರೆ ಪ್ರಯೋಜನವುಂಟು. ಪೂರ್ವದೊಳು ಈ ಇಂಡ್ಯದೇಶವಲ್ಲಿ ಹೀಗೆಯೇ ಪ್ರಾಭವ ವೈಭವಗಳಿಂದೊಡಗೂಡಿ ಮಹೋನ್ನತದಶೆಯೊಳಿದ್ದ ಅನೇಕ ನೇಟವ್ ಸಂಸ್ಥಾನಗಳು ಈಗ ನಮ್ಮ ಸ್ಮರಣೆಗೆ ವಿಷಯಗಳಾಗಿರುತಿವೆ. ಕೆಲವು ಸಂಸ್ಥಾನಗಳು ಮಾತ್ರ ಅದ್ಯಾಪಿ ನಾಮಮಾತ್ರಾವಶಿಷ್ಟಗಳಾಗಿವೆ. ಇವೂ ಕ್ರಮವಾಗಿ ಹ್ರಾಸವನ್ನೈದುತಬರುವದಕ್ಕಾಗಿ ನಾವು ಅಮಿತವಾಗಿ ವಿಷಾದಿಸುತ್ತೇವೆ. ಇಂತಾ ಕ್ಷೀಣಗತಿಗೆ, ಕಾಲಮಹಿಮೆಯನ್ನೂ ಭಾವ್ಯತ್ವಮಪ್ರಯೋಜನಗಳಿಗೆ ಸದರೀ ಸಂಸ್ಥಾನಾಧಿಪರನ್ನು ಪಾತ್ರರನ್ನಾಗಿ ಮಾಡದೆಳಿಸಿರ್ಪ ಅವರ ದುರ್ವಿಧಿಯನ್ನೂ, ತತ್ತತ್ಕಾಲಗಳೊಳು ಉಚಿತಕಾರ್ಯಗಳ ಭಂಗಕಾರಿಗಳಾಗಿಯೂ, ಪರಿಣಾಮವಿರಸಗಳಾಗಿಯೂ, ಸರ್ವದಾ ವಿವೇಕಿಜನನಿಂದ್ಯಗಳಾಗಿಯೂ, ಅನಭಿಜ್ಞರ ಹೃದಯಗಳಿಗೆ ಸಾದ್ಯಸ್ಕೋಲ್ಲಾಸಕಾರಿಗಳಾಗಿಯೂ, ಅನಿಷ್ಟ ಪರಂಪರಾ ಸಂಘಟನ ಬೀಭತ್ಸಗಳಾಗಿಯೂ, ಕೃತ್ಯಾಕೃತ್ಯವೇಚನ ಶೂನ್ಯಗಳಾಗಿಯೂ ವಿವಿಧ ದುರ್ವಿಷಯೋಪಲಂಭೋಪಲಾಳನಾದಿಗಳಿಂದ ಪರವಶವಾಗಿಯೂ ಇರುವ ಅವರ ವರ್ತನಗಳನ್ನೂ ಕಾರಣತ್ವೇನ ಭಾವಿಸುವೆವು

ಈಗಆರ್ಜಿತವಾದ ರಾಜ್ಯವಿಷಯದಲ್ಲಿಯೂ ಇ ಸ್ವಾಧೀನಗಾದ ಅರಸರ ವಿಷಯದಲ್ಲಿಯೂ, ಬ್ರಿಟಿಷ್ ಗವರ್ನಮೆಂಟಿನವರು ಮುಂದೆ ಯಾವರೀತಿ ನಡೆಸಬೇಕೆಂದುದ್ದೇಶಿಸಿದಾರೆಯೊ ಅದು ಇನ್ನೂ ಸ್ಪಷ್ಟವಾಗಲಿಲ್ಲವು ತೀಬಾಯವರು ಈಗ ಈರೀತಿ ಒಳಪಟ್ಟದಕ್ಕಿಂತಲೂ ವೈಸರಾಯಿಯವರ ಫರಮಾನಾವಿಗೆ ಸದ್ಯೋವಿನಾಮಕವಾದ ಒಂದು ಪ್ರತ್ಯುತ್ತರವಂಕೊಟ್ಟಿರುವರಾದರೆ ಇಷ್ಟರ ಅನರ್ಥ ಪರಂಪರೆಗಳಿಗೆ ಅವಕಾಶವಿರುತಿರಲಿಲ್ಲವು ವಂಚಕಗಳಾದ ಬರವಸೆಗಳಿಗೂ ಮೋಹಕಗಳಾದ ವಿಭ್ರಮಗಳಿಗೂ, ಕುಟಿಲಗಳಾದ ಸಲಹೆಗಳಿಗೂ ಭ್ರಾಂತಿಪಟ್ಟು ಯುದ್ಧಸನ್ನಾಹವು ಮಾಡಿದರಲ್ಲದೆ ಬ್ರಿಟಿಷರವರೊಡನೆ ಯುದ್ಧಮಾಡಬೇಕೆಂಬ ಅಭಿಪ್ರಾಯವು ಸ್ವತಃ ವುಂಟಾದಂತೆ ತೋರಲಿಲ್ಲವು. ಈಗಲೂ, ಪ್ರಾಣಹಾನಿಗಳಿಗೂ ಅರ್ಥವ್ಯಯಕ್ಕೂ ಶರೀರ ಶ್ರಮಕ್ಕೂ, ಒಬ್ಬರನ್ನೂ ಗುರಿಮಾಡದೆ ತೀಬಾಯವರು ಶರಣಾಗತರಾದದ್ದು ವಿವೇಕವೆಂತಲೇ ಹೇಳುವೆವು ಅರಸರು ತಮ್ಮ ಬಲವನ್ನು ಹದಿನೈದು ದಿನಗಳ ಹಿಂದೆ ಆಲೋಚಿಸಿದ್ದರೆ ಎಷ್ಟು ಚನ್ನಾಗಿರುವದು. ಆದಾಗ್ಯೂ ಇಷ್ಟರೊಳಗೆ ಇವರು ತಮ್ಮ ಪ್ರಾಣವನ್ನು ಕಾಪಾಡಿಕೊಂಡಂತೆಯಾಯಿತು ಇವರು ಆಖೈರತನಕ ಯುದ್ಧಮಾಡಿ ಬಳಿಕ ಪರಾಜಿತರಾಗಿರುವರಾದರೆ ಅದರಫಲವು ಬೇರೆರೂಪವಾಗಿರುವದು. ಇವರ ರಾಜ್ಯ ಕೋಶಗಳೀಗ ಶ್ರೀಮನ್ಮಹಾರಾಜ್ಞೀ ಸರ್ಕಾರಕ್ಕೆ ದಾಖಲಾಗುವವಾಗಿವೆ. ವಿಲ್ಲವಾಯಿತು. ತೀಬಾಯವರನ್ನೇ ಮರಳಿ ನೆಲಗೊಳಿಸಿ ಮಹಾ ಪರಂಪರಾಗತವಾದ ರಾಜ್ಯಮರ್ಯಾದೆಗಳಿಗೆ ಲೋಪವನ್ನುಂಟುಮಾಡದೆ, ಅವರ ಕೀರ್ತಿ ಪ್ರಾಶಸ್ತ್ಯಗಳಿಗೂ ಬ್ರಿಟಿಷರವರ ಪ್ರಾಭವ ಪ್ರಯೋಜನಗಳಿಗೂ ಕೊರತೆಯುಂಟಾಗದಂತಾ ಒಡಂಬಡಿಕೆಗಳನ್ನು ಪರಸ್ಪರ ಮಾಡಿಕೊಂಡು ಉಭಯ ಸರ್ಕಾರದವರೂ ಪೂರ್ವದಂತೆ ಸ್ನೇಹಭಾವದೊಡನೆ ಇದ್ದರೆ ಯೆಲ್ಲರಿಗೂ ಸಂತೋಷಕರವಾಗಿದ್ದಿರುವದು. ಇಂಗ್ಲಿಷರವರಿಗೆ ರಾಜ್ಯ ಸಂಪಾದನಾಭಿಲಾಷೆಯಿಲ್ಲವೆಂಬ ಅಭಿಪ್ರಾಯವನ್ನು ಜನಗಳ ಮನಸ್ಸಿನೊಳು ಊರ್ಜಿತಪಡಿಸಿ ಅವರಿಗೆ ದೃಢತರವಾದ ನಂಬಿಕೆಯನ್ನುಂಟುಮಾಡಿ, ಅವರ ಪ್ರೀತಿ ಗೌರವಗಳನ್ನಾರ್ಜಿಸಬೇಕಾದರೆ ಮೇಲೆತಿಳಿಸಲ್ಪಟ್ಟಂತೆ ಮಾಡುವದು ಯೋಗ್ಯವೆಂದು ಲಾರ್ಡ ಡಫ್ರಿನ್ಯವರು ಈ ಸಂದರ್ಭದಲ್ಲಿ ಭಾವಿಸಬೇಕು ಆದರೆ ಲಾರ್ಡ ಡಫ್ರಿನ್ಯವರಿಗೆ ಸಂಪೂರ್ಣಾಧಿಕಾರವನ್ನು ಮಹಾರಾಣೀ ಸರ್ಕಾರದವರು ಪ್ರಯುಮಾಡಿರುವದರಿಂದಲೂ, ಇವರು ಲಾರ್ಡ ಡೆಲ್‌ಹೌಸೀಯವರ ಮಾರ್ಗಾನುವರ್ತಿಯಾಗಿರುವವರಿಂದಲೂ, ಕಡೆಗೆ ಬರ್ಮಾ ರಾಜ್ಯವನ್ನು ತಮ್ಮ ಆದಿಪತ್ಯಕ್ಕೇ ಸೇರಿಸಿಕೊಳ್ಳತಕ್ಕದ್ದೆಂದು ತೀರ್ಮಾನಮಾಡಿ ಮುಂದೆ ಆ ರಾಜ್ಯದಲ್ಲಿ ನಡೆಸಬೇಕಾದ ಕ್ರಮಗಳನ್ನೆಲ್ಲ ಯೇರ್ಪಡಿಸಿರುತ್ತಾರೆಂತಲೂ, ಅರಸರನ್ನು ಸಕುಟುಂಬವಾಗಿ, ದಸ್ತಗಿರಿಮಾಡಿ ರಕ್ಷಕರವಶಕೆ ಇತ್ತು ಸದ್ಯಃ ಕಲ್ಕತ್ತೆಗೆ ಕಳುಹಿಸುವಂತೆ ಹುಕುಂ ಮಾಡಿದರೆಂತಲೂ ಕೇಳುವದಕ್ಕಿಂತಲೂ ಅಸಮಾಧಾನಕರವಾದ ವಿಷಯವು ಇದ್ಯೆ ದೇಶೀಯರಿಗೆ ಬೇರೊಂದೂ ವುಂಟಾಗಲಾರದು ಬಹುಕಾಲದಿಂದ ಅವಿಚ್ಛಿನ್ನವಾಗನಡೆದು ಬರುತಲಿದ್ದ ಹಿಂದೂ ಸಂಸ್ಥಾನವನ್ನು ಅಳಿಸಿ ಸ್ವಾಧೀನಪಡಿಸಿಕೊಂಡ ಪ್ರಾಶಸ್ತ್ಯಕ್ಕೆ ಪೂರ್ವಿಕರಂತೆ ಲಾರ್ಡ ಡಫ್ರಿನ್ಯವರೂ ಪಾತ್ರರಾದರು. ಹಿಂದಿನ ಯೆರಡು ಯುದ್ಧಗಳಲ್ಲಿ ಪರಿಶೇಷವಾಗಿದ್ದ ಅಲ್ಪಸ್ವಲ್ಪ ಭಾಗಸಹ ಈಗ ಕಳೆದುಕೊಳ್ಳಲ್ಪಟ್ಟು ಇದಿಗೆ ಬರ್ಮಾರಾಜ್ಯದ ಆಳಿಯು ಅವರ ರಾಜವಂಶದವರಿಗೆ ಪುರ್ದಾಂಗ ನಿವಾರಣವಾಯಿತು. ಈ ಸಂದರ್ಭವು ನಮ್ಮ ನೇಟಿವ್ ಸಂಸ್ಥಾನಾಧಿಪತಿಗಳ ಜ್ಞಾಪಕದೊಳಗೂ ಜನಿತವಾಗಿರತಕ್ಕದ್ದಾಗಿರುತಿದೆ

MYSORE SCHOLARS

ಮೈಸೂರು ದೇಶೀಯರ ಯೋಗ್ಯತಾನಭಿಜ್ಞತೆಯಿಂದಲೋ, ನೈಜವಾದ ಅಸೂಯೆಯಿಂದಲೋ, ಯಾವ ಪ್ರಕಾರದಿಂದಲಾದರೂ ಅವರೊಳೊಂದು ನ್ಯೂನತೆಯನ್ನಾರೋಪಿಸಬೇಕೆಂಬ ಸಂಕಲ್ಪದಿಂದಲೋ ಅಸದೂಪಕಗಳಾದ ಕೆಲವು ದೋಷಗಳನ್ನು ಮಹತ್ವೇನ ತಿಳಿಸಿ ತಮ್ಮ ಐಚ್ಛಿಕ ವರ್ತನಕ್ಕೆ ಅವುಗಳೇ ಕಾರಣವೆಂದು ವಾದಿಸತಕ್ಕವರ ಮುಂದೆ ಏತದ್ದೇಶೀಯರು ಅರ್ಥವ್ಯಯವು ಚಿಂತಿಸದೆ ಅನ್ಯದೇಶಗಳಿಗೆಹೋಗಿ, ಶಾರೀರಮಾನಸಿಕ ಶ್ರಮಗಳನ್ನನುಭವಿಸುತ, ಗಹನಗಳಾದ ಶಾಸ್ತ್ರಗಳನ್ನಭ್ಯಸಿಸಿ ಪರೀಕ್ಷೆಗಳೊಳು ಪ್ರಥಮಸ್ಥಾನಾರ್ಹರಾಗುತಬರುವದು, ತಮ್ಮ ವೈರಿಗಳ ವಾಗ್ಬಂಧನಕ್ಕೂ ಸ್ವದೇಶಕ್ಕೆ ಅನುಪಮವಾದ ಕೀರ್ತಿಯನ್ನುಂಟುಮಾಡಲಿಕ್ಕೂ ಕಾರಣವಾಗುತಿದೆ. ಇಂತವರ ಸಂಖ್ಯೆಯು ಅಭಿವೃದ್ಧಿಯಾದುದೆಲ್ಲ ಇವರದೇಶದ ಪ್ರತಿಷ್ಠೆಯು ಅಧಿಕವಾಗುತಬರುವದಾದ್ದರಿಂದ ಅದನ್ನೇ ನಾವು ಅಂತರವಾಗಿ ಅನವರತ ಕೋರುತಲಿರುವೆವು.

ಈಚೆಗೆ ಇಲ್ಲಿನ ಬಾಲಕರು ಕೆಲವರು ಮೈಸೂರು ಸರ್ಕಾರದಿಂದ ವಿದ್ಯಾರ್ಥಿವೇತನಗಳಂ ಪಡೆಯುತ, ಪುನೆ ಪಟ್ಟಣಕ್ಕೆಹೋಗಿ ಪ್ರಸಿದ್ಧವಾದ ಅಲ್ಲಿನ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶಾಸ್ತ್ರಾಭ್ಯಾಸ ಮಾಡುತಲಿದಾರೆಯಷ್ಟೆ ಇವರೆಲ್ಲರೂ ಈಚೆಗೆ ನಡೆದ ಸಿವಿಲ್ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಬಹಳ ತೃಪ್ತಿಕರವಾಗಿ ತೇರ್ಗಡೆಯಾದರೆಂದುಕೇಳಿ ನಾವು ಬಹಳಸಂತೋಷಿಸುತ್ತೇವೆ. ಈ ಪರೀಕ್ಷೆಯು ಪುನೆಯೊಳು ನಡೆಯಲಿಕ್ಕೆ ದೇಶಪ್ರಥಮಾವರ್ತಿ ಯಾದದರಿಂದ ಈಸಲವೇ ಮೊದಲನೆಯ ತರಗತಿಯಲ್ಲಿ ಇಬ್ಬರು ತೇರ್ಗಡೆಯಾದದ್ದು ಕೇವಲ ಸಾಧಾರಣವಲ್ಲವು ಮ॥ಸುಬ್ಬರಾವ್ ಮತ್ತು ರಾಮಣ್ಣನೆಂಬ ಈ ಇಬ್ಬರು ವಿದ್ಯಾರ್ಥಿಗಳೂ ಇಲ್ಲೀ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬಳಿಕ ಪುನೇ ಇಂಜನಿಯರಿಂಗ್ ಕಾಲೀಜ್‌ನಲ್ಲಿ ದಾಖಲಾಗುವಬಗ್ಗೆ ಅಲ್ಲಿಗೆ ಹೊರಟುಹೋದರು. ಇದೇಪ್ರಕಾರ ೨-೩ನೇ ತರಗತಿಗಳಲ್ಲಿಯೂ ಮೈಸೂರುದೇಶದ ವಿದ್ಯಾರ್ಥಿಗಳೇ ಪ್ರಥಮರಾಗಿರುತ್ತಾರೆ. ತತ್ರಾಪಿ ಪ್ರಥಮತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಬ್ಬರೂ ಮೈಸೂರು ದೇಶದವರಾಗಿರುವದು ಬಹಳ ಪ್ರತಿಷ್ಠಾನಹವಾಗಿರುತಿದೆ ಈಗ ಆರುಮಂದಿಗೆ ಇಲ್ಲಿಂದ ಸ್ಕಾಲರ್‌ಷಿಪ್ ಕೊಡಲ್ಪಡುತಿದೆ. ಇವರು ತಮ್ಮ ಆಖೈರ್ ಪರೀಕ್ಷೆಯಂ ಪೂರೈಸಿಕೊಂಡು ಇಲ್ಲಿಗೆ ವಾಪಸ್ ಬಂದಕೂಡಲೇ ಇವರೆಲ್ಲರಿಗೂ ೨೦೦ ರೂಪಾಯಿಗಳಿಗೆ ಕಮ್ಮಿಇಲ್ಲದ ಅಸಿಸ್ಟೆಂಟ್ ಇಂಜಿನಿಯರ್ ಕೆಲಸಗಳನ್ನು ಗವರ್ನಮೆಂಟಿನವರು ಕೊಟ್ಟರೆ ಅವರ ಗೌರವಕೂ, ವಿದ್ಯಾರ್ಥಿಗಳ ಪರಿಶ್ರಮಕ್ಕೂ, ಅನುರೂಪವಾಗಿರುವದು ಅಗ್ರಿಕಲ್ಚರಲ್ ಕಾಲೇಜ್ ವಿದ್ಯಾರ್ಥಿಗಳೆಲ್ಲರೂ ತಮ್ಮ ವಿಷಯದೊಳು ಮೈಸೂರು ಗವರ್ನಮೆಂಟಿನವರು ಮೊದಲು ವಾಗ್ದಾನ ಮಾಡಿದಂತೆ ನೆರವೇರಿಸದೆ ಹೋದರೆಂದು ಬಹಳ ಅತೃಪ್ತರಾಗಿದಾರೆ ಇಂತಾ ಅತೃಪ್ತಿಯು ಅನ್ಯತ್ರ ವ್ಯಾಪಿಸದೆ ಅವಕೊಡನೆಯೇ ಇದು ನಿವಾರಣವನ್ನೈದಬೇಕೆಂದು ಕೋರುವೆವು

THE PETTAH HOSPITAL AND DISPENSARY

ಈಪೂರು ಪೇಟೆಯ ಆಸ್ಪತ್ರಿ ಮತ್ತು ವೈದ್ಯಶಾಲೆಯನ್ನು ಸಿಟಿ ಮಾರ್ಡಾಯವರ ಹೆಸರಿನಲ್ಲಿ ಈಗ ನಿರ್ಮಿತವಾಗಿರುವ ಹೊಸ ಕಟ್ಟಡಕ್ಕೆ ವರ್ಗಮಾಡುವದರ ಔಚಿತ್ಯವನ್ನುಕುರಿತು ಸೂಚಿಸಲ್ಪಟ್ಟ ಅಭಿಪ್ರಾಯಗಳೂ, ಮಾಡಲ್ಪಟ್ಟ ಪ್ರಯತ್ನಗಳೂ, ಬರೆಯಲ್ಪಟ್ಟ ಲೇಖನಗಳೂ ಕಡೆಗೆ ವ್ಯರ್ಥಗಳಾಗಿ ಪರಿಣಮಿಸಿದ್ದಕ್ಕೋಸ್ಕರ ನಾವು ಬಹಳ ವಿಷಾದಿಸುತ್ತೇವೆ. ಈಚೆಗೆ ಒಳದೇಶದ ಡೆಯಿಲಿ ರಿಪೋರ್ಟ್ಸ್ ಪತ್ರಿಕೆ ಈವಿಷಯವು ಕುರಿತು ತಿಳಿಸುತಿದೇನಂದರೆ - ಪ್ರಸಕ್ತ ಬದಲಾವಣೆಯಂಕುರಿತು ವಿಚಾರಮಾಡಿ ಅದರಮೇಲೆ ನಿರ್ಣೀತವಾದ ಅಭಿಪ್ರಾಯವನ್ನು ತಿಳಿಸತಕ್ಕಬಗ್ಗೆ ಸಬ್‌ಕಮಿಟಿಯವರು ಈಚೆಗೆ ಮ್ಯುನಿಸಿಪಲ್ ಆಫೀಸಿನಲ್ಲಿ ಮರಳಿ ಸಭೆ ಸೇರಿದ್ದರು. ಆ ಕಾಲದಲ್ಲಿ ಕೆಪ್ಟನ್ ಮ್ಯಾಕಿಂಟೈರ್ ಅವರು ಅಗ್ರಾಸನ ಮಂಡಿಸಿದ್ದರು. ಮೈಸೂರ್ ಗ್ರಾಂಟ್ ಪಡೆದ ಮಾಸ್ಟರ್ ಶ್ರೀನಿವಾಸಾಚಾರ್ಯರವರು, ಮ್ಯುನಿಸಿಪಲ್ ಕಮಿಷನರ್ ಮೆ॥ ಮರಿಗಂಗಯ್ಯನವರು, ಮೆ॥ ರಾಘವಾಚಾರ್ಯರವರು, ಮೆ॥ ಚೆಂಗಲ್ರಾಯ ಮೊದಲಿಯಾರ್ರವರು, ಮ॥ ರಾ॥ ದೊಡ್ಡ ಮೆಕಂಜಿರ ಮಾಣಿಕ್ಯರು ವಗೈರೆ ಇನ್ನೂ ಅನೇಕರು ಹಾಜರಿದ್ದರು ಈ ಮೀಟಿಂಗ್ ಬೆಳಗ್ಯೆ ೩ ಘಂಟೆಗೆ ಪ್ರಾರಂಭವಾಗಿ ೯ ಘಂಟೆಯತನಕ ನಡೆಯಿತು ಈ ಮಧ್ಯೆ ಯೆರಡು ಘಂಟೆಯಕಾಲ ಪ್ರಾಧಾನ್ಯೇನ ಇದನ್ನು ಕುರಿತೇ ವಿಚಾರ ಮಾಡಲ್ಪಟ್ಟಿತು ಸಬ್‌ಕಮಿಟಿಯ ಮೆಂಬರ್‌ಗಳೂ, ಇತರ ಕಮಿಷನರ್‌ಗಳೂ, ಮಾಮೂಲಿನಲ್ಲಿ ಪ್ರಸ್ತುತ ಆಸ್ಪತ್ರಿ ಮತ್ತು ವೈದ್ಯಶಾಲೆಗಳನ್ನು ಅನ್ಯತ್ರ ವರ್ಗಮಾಡತಕ್ಕದ್ದೆಂದು ತೀರ್ಮಾನಿಸಿದರೆಂದು ತಿಳಿಯಲಾದೆವು. ಇದಲ್ಲದೆ ಅನ್ಯಾಕ್ರಾಂತವಾದ ಆಸ್ಪತ್ರಿಗೆ ಬದಲು ಮ್ಯುನಿಸಿಪಲ್ ಮಾದಿನ ವಿನಿಯೋಗದಬಗ್ಯೆ, ಲ್ಯೂನಾಟಿಕ್ ಅಸ್ಸೈಲಾಯೆಂಬ ಹುಚ್ಚರ ಆಸ್ಪತ್ರಿಯನ್ನು ತಮ್ಮ ವಿಚಾರಣೆಗೆ ತೆಗದುಕೊಳ್ಳಬಹುದೆಂದು ಅಲ್ಲಿದ್ದವರಲ್ಲೊಬ್ಬರು ತಿಳಿಸಿದ ಅಭಿಪ್ರಾಯವು ಯೆಲ್ಲರಿಂದಲೂ ಅಂಗೀಕರಿಸಲ್ಪಟ್ಟು ಬವಸ್ಟೂರ್ ತೀರ್ಮಾನವಾದಂತೆ ಕೇಳಲಾದೆವು ಪ್ರಕೃತಸ್ಥಿತಿಯಲ್ಲಿ ಹುಚ್ಚರ ಆಸ್ಪತ್ರಿಯನ್ನು ಜೋಡಿರ್ನವರು ತಮ್ಮ ವಿಚಾರಣೆಗೆ ತೆಗದುಕೊಳ್ಳಬೇಕಾದ್ದು ಅತ್ಯಾವಶ್ಯಕವಾಗಿರುತಿದೆ. ಯಾತಕ್ಕಂದರೆ, ಪೇಟೆ ನಿವಾಸಿಗಳು ಹುಚ್ಚರಾದ್ದರಿಂದಲೇ ತಮಗೆ ಅತ್ಯಂತೋಪಯೋಗಿಯಾದ ಆಸ್ಪತ್ರಿಯನ್ನು ಅನ್ಯರಿಗೆ ಕೊಟ್ಟಬಿಡುವಂತೆ ಮಾಡಲ್ಪಟ್ಟ ತೀರ್ಮಾನಕ್ಕೊಳಗಾದರು. ಇಂತವರಿಗೆ ಚಿಕಿತ್ಸೆಯು ಆವಶ್ಯಕವಲ್ಲವೆ? ಆದದರಿಂದಲೇ ಇವರಚಿಕಿತ್ಸೆಗಾಗಿ ಸದರೀ ಆಸ್ಪತ್ರಿಯು ಈಗ ಕೇವಲ ಆವಶ್ಯಕತ್ವೇನ ತೋರಿದಂತೆ ಕಾಣುತಿದೆ. ಪ್ರಸಕ್ತ ಯೇರ್ಪಾಡಿನಮೂಲಕ ವುಂಟಾಗತಕ್ಕ ಸಾಧಕ ಬಾಧಕಗಳನ್ನು ಕುರಿತು ವೃತ್ತಾಂತಪತ್ರಿಕೆಗಳೂ, ಪ್ರಜಾ ಸಮೂಹವೂ ಬಹುವಿಧವಾಗಿ ವಿಚಾರ ಮಾಡದಿರಲಿಲ್ಲವು. ಇಂತಾ ಅಭಿಪ್ರಾಯಗಳನ್ನು ಆದರಿಸುವವರು ಇಲ್ಲಿ ದುರ್ಲಭರಾದವರಿಂದ ಅವುಗಳು ಈದೇಶದೊಳು ಕಾರ್ಯಕಾರಿಗಳಲ್ಲವೆಂಬದನ್ನು ಚನ್ನಾಗಿ ನಾವು ತಿಳಿಸಿದ್ದರೂ ಈ ಸಂದರ್ಭದಲ್ಲಿ ಅದು ಜ್ಞಾಪಕಕ್ಕೆ ಬಾರದೆ ಹೋದದಕ್ಕಾಗಿ ಚಿಂತಿಸುವೆವು. ಮುಂದೆ ಈ ಯೇರ್ಪಾಡಿನಮೂಲಕ ಜನಗಳಿಗೆ ಯೆಷ್ಟರಮಟ್ಟಿಗೆ ಸುಖ ವುಂಟಾಗುವದೋ ಅವರ ಜಾತಿ ಮತ ನಿಯಮಗಳು ಯಾವತನಕ ಪುರಸ್ಕರಿಸಲ್ಪಡುವವೋ ಇವುಗಳನ್ನೆಲ್ಲ ಸಹನೆಯೊಡನೆ ನಿರೀಕ್ಷಿಸಿ ನೋಡುವೆವು

WHOLESALE MURDER IN BARODA

ಶ್ರೀಮನ್ಮಹಾರಾಜಾ ಸಯಾಜಿರಾವ್ ಗಾಯಕವಾಡಿಯವರ ವಿವೇಕಪೂರ್ವಕವಾದ ಪ್ರಭುತ್ವದಲ್ಲಿ, ಅವರಪ್ರಜೆಗಳ ಪ್ರಾಣಮಾನಧನಗಳು ನಿರಪಾಯವಾಗಿ ಸುರಕ್ಷಿಸಲ್ಪಡುತಿವೆಯೆಂಬ ಅಂಶವು ಕೇಳಿದಾಗಲೆಲ್ಲ ನಾವು ಅತ್ಯಂತ ಸಂತುಷ್ಟರಾಗಿದ್ದೇವೆ ಆದರೆ ಈಚೆಗೆ ಕೆಲವರು ಪ್ರಬಲಿಸಿ ಮಾಡುವ ದುಷ್ಕೃತ್ಯಗಳು ನಮಗೆ ಅತೃಪ್ತಿಯನ್ನುಂಟುಮಾಡತಕ್ಕವಾಗಿರುತಿವೆ ಬರೋಡೆಯಲ್ಲೀಗ ಖೂನಿಗಳೂ ಕಲಹಗಳೂ ಅಧಿಕವಾಗುತಬರುವದರಿಂದ ಇವುಗಳಲ್ಲಿನ ವಿಚಾರಣಾಕ್ರಮದೊಳಗಣ ಅವ್ಯವಸ್ಥೆಗಳಂ ವ್ಯಕ್ತಪಡಿಸಲಕ್ಕವಾಗಿರುತಿವೆ. ಈಗ್ಯೆ ಒಂದೆರಡು ವಾರಗಳಹಿಂದೆ ಕಹರ್ ನಿವಾಸಿಯಾದ ಅರಬ್ಬಿಜಾತಿಯವನೊಬ್ಬನು ಅನೇಕ ಖೂನಿಗಳನ್ನುಮಾಡಿ ಒಬ್ಬರಿಗೂ ಸಿಕ್ಕದೆ ತಪ್ಪಿಸಿಕೊಂಡುತಿರುಗುತಲಿದ್ದನು. ಇದರ ತಪಸೀಲನ್ನು ವಿಚಾರಿಸಲಾಗಿ ತಿಳಿಯಬರುವದೇನೆಂದರೆ, ಸದರೀ ಅರಬ್ಬಿಯವನು ಅಕಸ್ರೀಣ ಪವನ್ಸ್ಯ ಪ್ರೀತಿಕಾಗಿವಾದಿಯೆಂಬ ಪ್ರದೇಶದೊಳಿರುವ ಅವನ ನಾಯಿಯ ಮನೆಗೆ ಹೋಗಿ, ಅವಳನ್ನು ತನ್ನ ಬಾಕೀಯಲ್ಲಿ ಇದಳೆಂದು ಕೇಳಿದನು. ಅದಕ್ಕೆ ಅವಳು ತಿಳಿಯದೆಂದು ಜವಾಬ್ ಹೇಳಿದಳು ದುರಾಗ್ರಹಿಯಾದ ಸದರೀ ಮನುಷ್ಯನು ಅವಳನ್ನೂ ಯೆರಡು ವರುಷ ವಯಸ್ಸಿನ ಅವಳ ಮಗನನ್ನು ಸಹ ಕೂಡಲೆ [illegible]ಮಾಡಿದನು. ಅರಬ್ಬಿಜಾತಿಯವನಾದ ನೆರಮನೆಯವನು ಇವನ್ನರಿಯುತಕ್ಕಬಗ್ಯೆ ಒಳಗೆ ಪ್ರವೇಶಿಸಲು ಅವನುಸಹ ಕೂಡಲೇ ಕೊಲ್ಲಲ್ಪಟ್ಟನು ಅವನ ಮರ್ದೆಯನ್ನು ತೆಗದುಕೊಂಡು ಬರುವಬಗ್ಯೆ ಬೇರಿಬ್ಬರು ಅಲ್ಲಿಗೆ ಹೋಗಲು ಅವರುಕೂಡ ಹಿಂದಿನವರಗತಿಯನ್ನೈದಿದರು. ಅಲ್ಲಿಗೂ ಉಪಶಾಂತನಾದೆ ತನ್ನ ಕೈಯಲ್ಲಿದ್ದ ಬಂದೂಖಿನಿಂದ ನೆರೆಹೊರೆಯವರಲ್ಲಿ ಮೂವರಿಗೆ ಜಖಂಮಾಡಿದನು. ಸದರೀ ಮನೆಯ ಬೀದಿಯು ಕೇವಲ ಸಂಕುಚಿತವಾದದರಿಂದಲೂ ಅವನಮುಂದೆ ಬರತಕ್ಕವರನ್ನೆಲ್ಲಾ ಗೋಲಿಗಳಿಂದ ಹೊಡೆಯಲಿಕ್ಕೆ ಪ್ರಾರಂಭಿಸಿದ್ದರಿಂದಲೂ ಒಬ್ಬರಿಗೂ ಹೊರಗೆ ಹೊರಡಲಿಕ್ಕೆ ಧೈರ್ಯ ಸಾಲದೆಯಿತ್ತು. ತರುವಾಯ ಪೋಲೀಸಿನವರು ಬೀದಿಯ ಮುಂಭಾಗದಲ್ಲಿ ಬಲವಾದ ಪಹರೆಯನ್ನಿಟ್ಟು ಅವನು ದಸ್ತಗಿರಿ ಮಾಡಲೆತ್ನಿಸಿದರು ಅವನು ಹಿಡಿಯಲಿಕ್ಕೆ ಆಗಲೂ ಸಾಧ್ಯವಾಗದೇಹೋದದರಿಂದ ಅವನನ್ನು ಗೋಲಿಗಳಿಂದ ಹೊಡೆಯಲಾರಂಭಿಸಿದರು ಆಸ್ಮಿಕೆ ಒಂದೂ ತಗಲಲಿಲ್ಲವು. ಸದರೀ ದುರಾತ್ಮನನ್ನು ಯಾವವಿಧದಿಂದಲಾದರೂ ಪ್ರಾಣದೊಡನೆ ದಸ್ತಗಿರಿ ಮಾಡತಕ್ಕದ್ದೆಂದು ಪೋಲೀಸಿನವರಿಗೆ ಹುಕುಮಾಗಿರುವಂತೆಯೂ, ಅವರು ಅದೇ ಪ್ರಯತ್ನದೊಳಿದಾರೆಂತಲೂ ತಿಳಿಯಬರುತಿದೆ. ಏಕಕಾಲದಲ್ಲಿ ನಾ

...ವ್ಯಾದಿಜನಗಳ ಪ್ರಾಣಗಳಂ ವಧಿಸುವಷ್ಟು ಆಗ್ರಹವು ಸದರೀನಿರ್ಭಾಗ್ಯನಿಗೆ ಯಾತಕ್ಕೆಪ್ರಾಪ್ತಿಯಾಯಿತೋ ತಿಳಿಯಲಿಲ್ಲವು ಹಿಗೆಯೆ ಸ್ವಲ್ಪದಿನಗಳ ಹಿಂದೆ ವಡರೆಯವರು ಕೆಲವರು ತಿರಿಗಿಬಿದ್ದು ಯುದ್ಧಳೆ ನಡೆಸಿದುತೆಯೂ, ಅದರಿಂದ ಇಬ್ಬರು ಜವಾನರಿಗೆ ಪ್ರಾಣಹಾನಿಸಹ ಪ್ರಾಪ್ತವಾದಂತೆಯೂ ಕೇಳಿದೆವು ಮಹಾರಾಜರವರು ದೇಶದ ಬಂದೋಬಸ್ತಿನವಿಷಯದಲ್ಲಿಯೂ ತುಂಟರಾದವರನ್ನು ಸ್ವಾಧೀನಪಡಿಸುವ ವಿಷಯದಲ್ಲಿಯೂ ಸಂಪೂರ್ಣ ದೃಷ್ಟಿಯಿಟ್ಟು ನಿರ್ದುಷ್ಟವಾದ ಅವರ ಪ್ರಭುತ್ವಕ್ಕೊಂದು ಮಾಲಿನ್ಯವನ್ನುಂಟುಮಾಡದಕ್ಕಂತಹ ಇಂತಹ ವಿಷಯಗಳು ಮುಂದೆ ನಡೆಯದಂತೆ ತಕ್ಕ ಬಂದೋಬಸ್ತು ಮಾಡಬೇಕೆಂದು ಕೋರುವೆವು.

KANNADA BHARATA

ಅಖಿಲ ಪುರುಷಾರ್ಥಸಾಧಕವಾಗಿಯೂ, ಕಲಿಕಲ್ಮಷ ವಿನಾಶಕವಾಗಿಯೂ, ಪಂಚಮವೇದವಾಗಿಯೂ ಇರುವ ಶ್ರೀ ಭಾರತದ ಕಥಾಸಂದರ್ಭವನ್ನು ಅರಿಯಬೇಕಾದರೆ ಸಾಮಾನ್ಯರಿಗೆ ಯೆಲ್ಲರಿಗೂ ಸಾಧ್ಯವಲ್ಲವು ಏತಾನ್ಮಾತ್ರ ಗೀರ್ವಾಣಭಾಷಾಭಿಜ್ಞರಿಗೆ ಅದನ್ನು ಮನಸಾಪಿ ಸ್ಮರಿಸಲಿಕ್ಕೆ ಸಹ ಅವಕಾಶವಿಲ್ಲವು. ಹೀಗಿರುವಲ್ಲಿ ರಾಜರಾಜನರೇಂದ್ರ ಮಹಾರಾಜರವರು ಆಂಧ್ರದೇಶವನ್ನಾಳುತ್ತಿದ್ದ ಕಾಲದೊಳು ಅವರ ಆಸ್ಥಾನಪಂಡಿತರಾಗಿದ್ದ ಶ್ರೀಮನ್ನನ್ನಯಭಟ್ಟಾರಕರೆಂಬ ಮಹಾಕವೀಶ್ವರರಾಗಿ, ಎರಡೂವರೆ ಪರ್ವ ಪರಿಮಿತವಾದ ಶ್ರೀ ಭಾರತವನ್ನು ಗದ್ಯ ಪದ್ಯಾತ್ಮಕವಾದ ಚಂಪುವಿನಂತೆ ಆಂಧ್ರಭಾಷೆಯಲ್ಲಿ ಸಕಲ ವಿದ್ವಜ್ಜನ ಪರಿಗ್ರಾಹ್ಯವಾಗುವಂತೆ ರಚಿಸಿದರು ಅದರಂತೆ ಸಪಾದಲಕ್ಷ ಗ್ರಂಥವನ್ನು ಪೂರೈಸುವಷ್ಟು ಆಯುಃಪರಿಮಿತಿಯನ್ನು ಶ್ರೀ ಪರಮೇಶ್ವರನು ಅವರಿಗೆ ಕೃಪೆಗೈಯದೇ ಹೋದದರಿಂದ ಅವರು ಕೆಲವು ಭಾಗವನ್ನು ಮಾತ್ರ ಬರೆದರು ಸಮಾನ ವಿದ್ಯಾಗುಣ ಸಂಪನ್ನರಾದ ಮತ್ತು ಉಭಯಕವಿಮಿತ್ರನೆಂಬ ಬಿರುದಾಂಕಿತರಾದ ತಿಕ್ಕನಸೋಮಯಾಜಿಗಳೆಂಬವರು ಬಹುಜನೋಪಯುಕ್ತವಾದ ಇಂತಹ ಮಹತ್ಪ್ರಯತ್ನವು ನಿಷ್ಫಲವಾದದೆಂತು ಎಂದು ಖಿನ್ನರಾಗಿ ಮಿಕ್ಕ ಭಾಗವನ್ನು ಪೂರೈಸಿದರು. ಆಂಧ್ರಭಾರತವು ಪದ್ಯ ಚಮತ್ಕಾರ ಪ್ರಚುರವಾದ್ದಾಗಿಯೂ, ಮೃದು ಮಧುರ ಪದಸಾಲಂಕೃತವಾದದ್ದಾಗಿಯೂ, ಸಂಸ್ಕೃತ ಸಂಪ್ರದಾಯ ಮಿಶ್ರಿತವಾದದ್ದಾಗಿಯೂ, ಇರುವದರಿಂದ ಪ್ರೌಢಗ್ರಂಥವಾದ ಇದು ತದ್ಭಾಷಾಭಿಜ್ಞರಿಗೆ ಅಲ್ಲದೆ ಇತರರಿಗೆ ಸುಲಭವಾಗಿ ಅರ್ಥವಾಗತಕ್ಕದ್ದಾಗಿಲ್ಲವು ಅಚ್ಯುತರಾವ್ ಕೃಷ್ಣರಾಯರವರು ವಿಜಯನಗರ ಸಂಸ್ಥಾನವನ್ನಾಳುತ್ತಿದ್ದಕಾಲದೊಳು ಶ್ರೀ ಭಾರತದಪೈಕಿ ಮೊದಲ ಹತ್ತುಪರ್ವಗಳನ್ನು ಕುಮಾರವ್ಯಾಸನೆಂಬುವನು ಭಾಮಿನೀ ಷಟ್ಪದಿವೃತ್ತದೊಳು ಕರ್ಣಾಟಭಾಷೆಯಲ್ಲಿ ರಚಿಸಿದನು. ಏತನ್ಮಧ್ಯೆ ಆಂಧ್ರಭಾರತದಂತೆ ಇದಕ್ಕೂ ವಿಘ್ನ ಪ್ರಾಪ್ತವಾದದರಿಂದ ಮಿಕ್ಕ ಎಂಟುಪರ್ವಗಳನ್ನು ತಿಮ್ಮಣ್ಣನೆಂಬುವರು ಅದೇಕ್ರಮದಿಂ ಗ್ರಂಥವನ್ನು ಪೂರೈಸಿದರು ಈ ಕನ್ನಡಭಾರತ ಸಹ ಆಂಧ್ರಭಾರತದಂತೆ ಪಂಡಿತರರಿಗೆ ಸಾಮಾನ್ಯೋಪಯೋಗಿಯಾಗಿಲ್ಲವು.

ಏತೇನ ಈ ಇತಿಹಾಸದ ಸಾರಾಂಶವನ್ನು ಪಾಮರರಾದ ಸ್ತ್ರೀ ಶೂದ್ರರು ತಿಳಿದುಕೊಳ್ಳಲಿಕ್ಕೆ ತಕ್ಕ ಸಾಧನ ಸಂಪತ್ತಿಯು ದುರ್ಲಭವಾಗಿತ್ತು. ಇದರ ಅಭಿಪ್ರಾಯವನ್ನು ಸಕಲಜನ ಸಾಧಾರಣ್ಯೇನ ಯೆಲ್ಲರೂ ಅರಿಯಬೇಕೆಂಬ ಕೋರಿಕೆಯೊಡನೆ ಸೌಬಗ್ ಮಹಾರಾಜಾ ಕೃಷ್ಣರಾಜ ಒಡೆಯರವರು ಪುರಾತನವಾದ ಮಹಾಭಾರತ ಪುಸ್ತಕಗಳಂ ತರಿಸಿ ಅದರಂತೆ ಸಮರ್ಥರಾದ ಪಂಡಿತರ ಸಹಾಯದಿಂ ವಾಣೀವಿಲಾಸವೆಂಬ ಹೆಸರಿನಲ್ಲಿ ಕರ್ಣಾಟ ಭಾಷೆಯೊಳು ಲೋಕೋಪಕಾರಾರ್ಥವಾಗಿ ೧೮ ಪರ್ವಗಳನ್ನೂ ರಚಿಸಿ ಶಾಲೀವಾಹನಶಕ ೧೭೪೨ನೇ ವಿಕ್ರಮಸಂವತ್ಸರ ಚೈತ್ರಶುದ್ಧ ೧ ಪ್ರಥಮಾ ಬುಧವಾರದ ದಿನ ಗ್ರಂಥವು ಪೂರೈಸಿದರು. ಈ ಗ್ರಂಥವು ಈಗ್ಯೆ ಬಹುಕಾಲವಾಗಿ ಪ್ರಚಾರದೊಳು ತರಲ್ಪಡದೆ ಇತ್ತು. ಆದರೆ ಇದನ್ನು ಪ್ರಕಟಿಸಬೇಕೆಂಬ ಅಭಿಪ್ರಾಯವು ಸೌಬಗ್ ಮಹಾರಾಜರಿಗೆ ಪ್ರಾಪ್ತವಾಗಿದ್ದದಕ್ಕೆ ಬೇಕಾದ ಅನುಕೂಲ್ಯಗಳಲ್ಲೊಂದೂ ಅವರಿಗೆ ಕೊರತೆಯಾಗಿರಲಿಲ್ಲವು. ಅವರ ಪುತ್ರರಾದ ಪ್ರಕೃತ ಮಹಾರಾಜಾ ಚಾಮರಾಜೇಂದ್ರ ಒಡೆಯರವರು ಸ್ವದೇಶಭಾಷಾಭಿಮಾನಿಯಾಗಿಯೂ ರಸೋತ್ಪ್ರೇಕ್ಷಾಸದೊಳು ಅತ್ಯಂತಾಸಕ್ತರಾಗಿಯೂ ಇರುವದರಿಂದ ತಮ್ಮ ತಂದೆಗಳಿಂದ ವಿರಚಿತವಾದ ಗ್ರಂಥವನ್ನು ಪ್ರಕಟಿಸಬೇಕೆಂಬ ಕೋರಿಕೆಯೊಡನೆ ಮೈಸೂರಲ್ಲಿ ಸ್ಥಾಪಿಸಲ್ಪಟ್ಟಿರುವ ಅರಮನೆ ಇಲಾಯಾ ಜಗನ್ಮೋಹನ ಮುದ್ರಾಕ್ಷರ ಶಾಲೆಯೊಳು ಮುದ್ರಿಸಿ ಪ್ರಕಟಿಸಲಿಕ್ಕೆ ಅನುಜ್ಞೆಯಂ ದಯಪಾಲಿಸಿದರು ಮಹಾರಾಜಾಜ್ಞೆಯಂತೆ ಅರಮನೆ ಪಂಡಿತರು ಇಬ್ಬರು ಈ ಗ್ರಂಥ ಪರಿಷ್ಕರಣೋದ್ಯೋಗವ ವಹಿಸಿ ಇದುವರಿಗೆ ತಕ್ಕಂತೆ ಪರಿಶೋಧಿಸಿ, ಮೊದಲು ಆದಿಪರ್ವವನ್ನು ಪ್ರಕಟಿಸಿದರು. ಅದು ಹೊರಗಾಗಿ ಈಗ್ಯೆ ಒಂದು ಸಂವತ್ಸರಕ್ಕಿಂತ ಅಧಿಕವಾಯಿತು. ಸಭಾಪರ್ವದ ಮೊದಲನೆಯ ಸಂಚಿಕೆಯು ಹೊರಟಿದೆ ಎಂಗಡೆ ಇಷ್ಟರಿಂದಲೇ ಅನೇಕರು ಅನೇಕವಿಧವಾಗಿ ಟೀಕಿಸಲಾರಂಭಿಸಿದರು. ಆದರೆ ನಮಗೆ ವಾಪ್ರ ಇದರಲ್ಲಿ ಸಂಪೂರ್ಣ ನಂಬಿಕೆಯಿಲ್ಲದಿರಲಿಲ್ಲವು ಈಗ ಎರಡನೆಯಸಂಚಿಕೆಯಾದ ಉದ್ಯೋಗಪರ್ವವು ಪ್ರಕಟಿಸಲ್ಪಟ್ಟು ಅದರ ಪ್ರತಿಬಿಂಬವು ನಮಗೆ ಸದರೀ ಕಾರ್ಖಾನೆಯು ಅಧ್ಯಕ್ಷರಿಂದ ಕಳುಹಿಸಲ್ಪಟ್ಟದ್ದು ಅದನ್ನು ನಾವು ಅತ್ಯಂತೋತ್ಸಾಹದೊಡನೆ ಅಂಗೀಕರಿಸಿ ಸಮಗ್ರವಾಗಿ ನೋಡಿದೆವು ಅನೇಕ ಸ್ಥಳದಲ್ಲಿ ವರ್ಣಸ್ಖಾಲಿತ್ಯಗಳು ಕಂಡುಬರುವದರಿಂದ ಅನುಭವಶಾಲಿಗಳಾದ ಪ್ರೂಫ್ ಎಗ್ಸಾಮಿನರ್‌ಗಳು ಸದರೀ ಕಾರ್ಖಾನೆಯೊಳು ಇಲ್ಲದಿರಬಹುದೆಂದು ತೋರುತಿದೆ ಇದನ್ನು ಕ್ರಮಪಡಿಸಿಕೊಳ್ಳದೆ ಹೋದರೆ ಪಂಡಿತರ ಶ್ರಮವು ವ್ಯರ್ಥವಾಗುವದು ಈ ಭಾಗವು ಕೇವಲ ಪಾಂಡಿತ್ಯದಿಂದ ಸಾಧ್ಯವಾಗತಕ್ಕದ್ದಲ್ಲವು. ಇದರ ವಿಷಯಗಳಲ್ಲಿ ಅಂದರೆ ಮುದ್ರಾಂಕನ ಶುದ್ಧತೆಯು ಕೇವಲ ಪ್ರಯೋಜನೀಯವಾಗಿರುತಿದೆ. ಇದು ಅಲ್ಲಿನ ಕಾರ್ಯನಿರ್ವಾಹಕರಾದ ರಾಜಸೇವಾಧುರೀಣ ಕೃಷ್ಣಾ ಜಾಗಿರದಾರರನ್ನು ಪ್ರಿಂಟಿಂಗ್ ವಿಷಯದಲ್ಲಿ ಆತನಿಗೆ ಪ್ರಾಪ್ತವಾಗಿರುವ ಚಿರಾನುಭವವನ್ನು ವ್ಯಕ್ತಪಡಿಸುತಿದೆ ಈತನು ಬೆಂಗಳೂರು ಗವರ್ನಮೆಂಟ್ ಪ್ರೆಸ್‌ನಿಂದ ಏತದರ್ಥವಾಗಿಯೇ ಮೈಸೂರಿಗೆ ಕರೆಯಿಸಿಕೊಳ್ಳಲ್ಪಟ್ಟವನು. ಆದರೆ ಪ್ರಕೃತ ವಿಚಾರಣಾಕ್ರಮದೊಳು ಆತನ ಪರಿಶ್ರಮಕ್ಕೆ ತಕ್ಕ ಪ್ರಯೋಜನವು ಅಲ್ಲಿ ಲಭಿಸುವಂತೆ ತೋರುವದಿಲ್ಲವು. ಮ|| ಲಕ್ಷ್ಮೀನಾರಾಯರವರು ವಿಶೇಷ ಅಕ್ಕರೆಯಂ ವಹಿಸಿ ತ್ವರೆಯೊಳು ಗ್ರಂಥವಂ ಪೂರೈಸುವಬಗ್ಯೆ ಅವಶ್ಯಕಗಳಾದ ಏರ್ಪಾಡುಗಳನ್ನು ಮಾಡಿದರೆ ಅವರಿಗೆ ಬಹಳ ಕೀರ್ತಿಕರವಾಗಿರುವದಲ್ಲದೆ ಮಹಾರಾಜರವರ ಉದ್ದೇಶವು ಕ್ಷಿಪ್ರದಲ್ಲಿ ಸಫಲವಾದಂತೆ ಯಾಗುವದು.

ಪ್ರಸಕ್ತ ಉದ್ಯೋಗಪರ್ವವು ಧರ್ಮಪುತ್ರರ ಸಭೆಯಲ್ಲಿ ಶ್ರೀಕೃಷ್ಣನು ತಿಳಿಸಿದ ವಾಕ್ಯವಮೊದಲು, ಪಾಂಡವರು ಸೈನಿಕ ಸನ್ನಾಹಗಳಂ ಮಾಡಿಕೊಂಡು ಯುದ್ಧಯಾತ್ರಾರ್ಥ ಹೊರಡುವತನಕ ಸಮಗ್ರವಾದ ಕಥಾಸಂದರ್ಭವುಳ್ಳದ್ದಾಗಿಯೂ, ಕರ್ಣಾಟಭಾಷೆಯೊಳು ಸರಳವಾದ ವ್ಯುತ್ಪತ್ತಿಯಂ ಬಯಸತಕ್ಕವರಿಗೆ ಅತ್ಯಂತೋಪಯುಕ್ತವಾದದ್ದಾಗಿಯೂ, ತತ್ರಾಪಿ ಸ್ತ್ರೀಯರಿಗೆ ವಿದ್ಯಾನಾಗರಿಕತೆಗಳನ್ನು ವಿಶೇಷತಃ ಕಲಿಯುತಬರುವದರಿಂದಲೂ, ಅವರು ಜ್ಞಾನವಯೋವೃದ್ಧರಾದ ತಮ್ಮ ಪೂರ್ವಿಕರ ವೃತ್ತಾಂತಗಳನ್ನು ಚೆನ್ನಾಗಿ ಅರಿತು ತದನುಗುಣವಾಗಿ ವರ್ತಿಸಬೇಕಾದ್ದು ಆವಶ್ಯಕವಾದ್ದರಿಂದಲೂ, ಅಂತವರಿಗೆಸಹ ಕೇವಲ ಅಪೇಕ್ಷಿತವಾದದ್ದಾಗಿಯೂ, ನಿರ್ದುಷ್ಟವಾದ ವಾಕ್ಯಶೈಲಿಯನ್ನು ಅರುಹತಕ್ಕದ್ದಾಗಿಯೂ, ಸತ್ಕಾಲಕ್ಷೇಪಕ್ಕೆ ಒಂದು ಸಾಧನರೂಪವಾದದ್ದಾಗಿಯೂ ಇರುತಿದೆ. ಈಗ ಈದೇಶದೊಳು ಸರ್ವತ್ರ ವ್ಯಾಪಿಸಿರತಕ್ಕ ಬಾಲಿಕಾಪಾಠಶಾಲೆಗಳಲ್ಲಿ ಪಠನೀಯಗಳಾಗಿರುವ ಗ್ರಂಥಗಳನ್ನು ನೋಡಲಾಗಿ, ಸ್ತ್ರೀಯರ ಸಾಂಸಾರಿಕವೃತ್ತಿಗೂ ಅವರ ಸನ್ಮಾರ್ಗ ಪ್ರವರ್ತನಕ್ಕೂ ಆವಶ್ಯಕಗಳಾದ ಜ್ಞಾನಸಂಪಾದನೋಪಯುಕ್ತವಾದ ಗ್ರಂಥಗಳಾವವೂ ಇರುವಂತೆ ನಮ್ಮ ದೃಷ್ಟಿಗೆ ಬರುವದಿಲ್ಲವು. ಅಂತವುಗಳಿಗೆ ಬದಲಾಗಿ ಈ ಭಾರತವನ್ನು ಉಪಯೋಗಿಸಿದರೆ ವಿದ್ಯಾರ್ಥಿನಿಯರ ಜ್ಞಾನಾಭಿವೃದ್ಧಿಗೆ ಕಾರಣವಾಗುವದು. ಈ ಗ್ರಂಥ ಪಠನದಿಂದ, ಕಷ್ಟಸುಖಗಳಲ್ಲಿ ಮನುಷ್ಯನು ಸಮಾನಭಾವವುಳ್ಳವನಾಗಿರಬೇಕೆಂಬ ಭಾವವೂ, ಭರ್ತೃ ಭಾರ್ಯೆಗಳ ಸಂಬಂಧವು ಯಾವಾಗಲೂ ಅಪರಿಹಾರ್ಯವೆಂಬ ತಿಳುವಳಿಕೆಯೂ, ಭಗವಾನನುಗ್ರಹ ಪ್ರಾಪ್ತವಾದಲ್ಲಿ ಪ್ರಾಪ್ತವಾಗುವ ಸಂಕಟಗಳೆಲ್ಲವೂ ಸುಲಭವಾಗಿ ನಿವೃತ್ತಿಯಾಗುವವೆಂಬ ನಂಬಿಕೆಯೂ, ವ್ಯಾಸ ವ್ಯಾಸಂಗರೊಳು ಹಿಡಿಯಬೇಕಾದ ಕ್ರಮಗಳೂ, ದುರಾತ್ಮರಾದವರು ಸ್ವಮೂಹಾನುರೂಪಗಳಾದ ಫಲವನ್ನು ಯೆಂದಿಗಾದರೂ ಪಡೆಯದಿರಲಾರರೆಂಬ ನಂಬಿಕೆಯೂ ಪ್ರಾಪ್ತವಾಗದಿರುವದಿಲ್ಲವು. ಪ್ರಸಕ್ತ ಗ್ರಂಥ ಪರಿಷ್ಕರಣದೊಳು ಪ್ರವರ್ತಿಸಿರುವ ಬ್ರಹ್ಮಶ್ರೀ ವೈಯಾಕರಣ ಪೀತಾಂಬರಾಚಾರ್ಯರ ಮತ್ತು ಬ್ರಹ್ಮಶ್ರೀ ಅಯ್ಯಾಶಾಸ್ತ್ರಿಗಳ ಪರಿಶ್ರಮಕ್ಕೆ ಅನುಗುಣವಾದ ಫಲವು ಪ್ರಕಟಪ್ರತಿಷ್ಠೆಯಾದದರಿಂದ ಅವರನ್ನು ಆದರಕ್ಕೆ ತಕ್ಕ ಪ್ರಯತ್ನಗಳನ್ನು ಅವರು ಏತದಪೇಕ್ಷೆಯಾ ಮಹೋದಾರ್ಯದಿಂ ಮಾಡಬೇಕೆಂದು ಕೋರುವೆವು. ಈ ಗ್ರಂಥದ ಕೆಲವು ಪ್ರಕರಣಗಳಲ್ಲಿನ ವಾಕ್ಯಶೈಲಿಗಳಿಗೂ ಶಬ್ದಾಲಂಕಾರಗಳಿಗೂ, ಪ್ರಯೋಗ ಸಾಮ್ಯತೆಗಳಿಗೂ ಸದರೀ ಇಬ್ಬರ ಅವಧಾನವು ಬೇಡುವೆವು.

ಈ ಗ್ರಂಥ ವಿಕ್ರಯ ವಿಷಯದಲ್ಲಿ ಹಿಂದೆ ಮಾಡಲ್ಪಟ್ಟಿದ್ದ ಏರ್ಪಾಡುಗಳೆಲ್ಲವೂ ಹೋಗಿ ಈಗ ಕೇವಲ ನಗದುಪದ್ಧತಿಯೇ ಜಾರಿಯಲ್ಲಿ ತರಲ್ಪಟ್ಟಿರುತಿದೆ ಈ ಗ್ರಂಥದ ಮುದ್ರಾಂಕನವ್ಯಯವು ಸಾಮಾನ್ಯವಲ್ಲವಾದ್ದರಿಂದ ಇದನ್ನು ಎಲ್ಲರೂ ಆದರದೊಡನೆ ಪಡೆದು ಓದುವವರ ಮೂಲಕ ಇದು ನಿಶ್ಶೇಷವಾಗಿ ವಿಕ್ರಯಸಮಾಪ್ತವಾಗಬೇಕೆಂದು ಕೋರುವೆವು

CHITALDROOG SCANDAL

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಈಚೆಗೆ ನಡೆದ ಕೆಲವು ಅಕ್ರಮಗಳನ್ನು ಕುರಿತು ಮಾಹೇ ಮಜಕೂರ್ ೩ನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುವದೇನೆಂದರೆ —ಚಿತ್ರದುರ್ಗದಲ್ಲಿ ನಡೆದ ಒಂದು ಮೊಕದ್ದಮೆಯಲ್ಲಿ ಮೆಮೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮೆ|| ಕೃಷ್ಣಮೂರ್ತಿಯವರು ಕೊಟ್ಟ ಪೈಸಲನ್ನು ನೋಡಲಾಗಿ ಪ್ರಸಿದ್ಧವಾದ ಒಂದು ಮೊಕದ್ದಮೆಯೇ ಬೇರೊಂದುಪರ್ಯಾಯವಾಗಿ ಶ್ರಾಂತಿಯನ್ನೈದಂತೆ ವ್ಯಕ್ತವಾಗುತಿದೆ. ಈ ಮೊಕದ್ದಮೆಯಲ್ಲಿ ಸಾಕ್ಷ್ಯಗಳು ಬಹಳವಾಗಿ ಬನಾವಣೆ ಮಾಡಲ್ಪಟ್ಟಿರುವಂತೆ ಸ್ಪಷ್ಟವಾಗಿ ಕಾಣಬರುತಿದೆಯಲ್ಲದೆ ನ್ಯಾಯ ಸಮಬನಾರ್ಥ ಯೇರ್ಪಟ್ಟಿರುವ ಸಾಧನಗಳೆಲ್ಲವೂ ಅಂತರವಾದ ಮಾತ್ಸರ್ಯವುಳ್ಳರೂಪವಾಗಿ ತೋರಿಸುವವರೊಳು ಉಪಯೋಗಿಸಿಕೊಳ್ಳಲ್ಪಟ್ಟಂತೆ ಸಹ ವ್ಯಕ್ತವಾಗುತಿದೆ ಚಿತ್ರದುರ್ಗದಲ್ಲಿ ನಡೆದದ್ದು ಇದೊಂದೇ ಮೊಕದ್ದಮೆಯಲ್ಲವು. ಈಗ ಫೈಸಲ್ ಮಾಡಲ್ಪಟ್ಟಿರುವ ಫೈಸಲಿನಲ್ಲಿ ಮೆ|| ಕೃಷ್ಣಮೂರ್ತಿಯವರು ಇನ್ನೊಂದು ಮೊಕದ್ದಮೆಯನ್ನು ಅಂದರೆ ಮೆ|| ರಂಗಯ್ಯಂಗಾರ್ರವರ ಮೊಕದ್ದಮೆಯನ್ನು ಸಮೂ ಉದಾಹರಿಸುತ್ತಾನೆ. ಇದರೊಂದಿಗೆ ಮೇಲಿನ ಮೊಕದ್ದಮೆಸಹ ಸಂಬಂಧಪಟ್ಟದ್ದಾಗಿರುತಿದೆ ಈ ಯೆರಡೂ ಅಲ್ಲದೆ ಕನ್ನ ಚೋರಿಯೂ ೭೦೦ ರೂಪಾಯಿಗಳಕ್ರಯ ಬಾಳತಕ್ಕ ಒಡವೆಗಳಕಳವೂ ಆದ ಮೂರನೇ ಮೊಕದ್ದಮೆಯೊಂದು ಪ್ರಾಪ್ತವಾಗಿ ತನ್ಮೂಲಕ ಜೆಡ್ಡು ಸಾಧಿಸಿಕೊಳ್ಳುವ ಪ್ರಯತ್ನಗಳು ನಡೆದವು ಪೊಲೀಸಿನವರು ಕಳವು ಮಾಲಿಗಳಲ್ಲೈಕಿ ಕೆಲವನ್ನು ಪತ್ತೇಮಾಡುವ ನೆಪವನ್ನು ನಡೆಸಿದರು. ಅಪರಾಧಿಗಳಿಗೆ ಸಹಾಯವಾಗುವದಕ್ಕೆ ಯೆಲ್ಲವು ಬಹಳಮಟ್ಟಿಗೆ ಅನುಕೂಲವಾಗಿನೋ ಕಂಡುಬಂತು. ಅದೃಷ್ಟವಶಾತ್ ಅಪರಾಧಿಗಳು ತಮ್ಮ ಮೊಕದ್ದಮೆಯನ್ನು ಬೇರೇ ಕೋರ್ಟಿಗೆ ವರ್ಗ ಮಾಡಿಕೊಳ್ಳಬೇಕೆಂದು ನಡೆಸಿದ ಪ್ರಯತ್ನವು ಅವರಿಗೆ ಕೈಗೂಡಿತು. ಹೀಗೆ ವರ್ಗವಾದದರಿಂದ ಈ ಮೊಕದ್ದಮೆಯಲ್ಲಿ ನಡೆಸಲ್ಪಟ್ಟ ಅಕೃತ್ಯಗಳೆಲ್ಲವೂ ಹೊರಗಾದವು. ಇದಕ್ಕೆ ಮುಖ್ಯಕಾರಣನಾಗಿದ್ದವನು ಆತ್ಮಹತ್ಯೆ ಮಾಡಿಕೊಂಡನು. ಕೋರ್ಟುಸಾಕ್ಷಿಯಾಗಿದ್ದ ಮತ್ತೊಬ್ಬನು ಮೊಕದ್ದಮೆಯ ನಿಜಸ್ಥಿತಿಯನ್ನು ಹೊರಪಡಿಸಿದನು. ಇವೆಲ್ಲ ಕೇವಲಅಸಹ್ಯಕರವಾದವು. ಈ ಮೊಕದ್ದಮೆಯನ್ನು ಕುರಿತು ಹಿಂದಿನ ಪತ್ರಿಕೆಯಲ್ಲಿಯೇ ನಾವು ವಿಚಾರಮಾಡಿರುತ್ತೇವೆ. ಈ ಮೊಕದ್ದಮೆಗೆ ಸೇರಿದ ಜನಗಳನ್ನೆಲ್ಲ ಅವರವರ ಮನೆಗಳು, ನೆಂಟರು, ಇಷ್ಟರು, ಇವರುಗಳಿಂದ ದೂರಪಡಿಸಿದ ಕೂಡಲೇ, ಕನ್ನಚೋರಿ, ವಗೈರೆ ನಡೆದದ್ದಾಗಿ ಮೆ|| ನಾಮಕಲ್‌ರಾಯರವರ ಕೋರ್ಟಿನಲ್ಲಿ ಸಾಕ್ಷ್ಯಹೇಳಿದವರ ಮಾತುಗಳೂ, ಪೈಪಿರ ಕಬೂಲಾತಿಯೂ ಸುಳ್ಳಾಗಿ ಕಂಡುಬಂದು ಅಪರಾಧಿಗಳೆಲ್ಲರೂ ಖುಲಾಸೆ ಮಾಡಲ್ಪಟ್ಟರು. ಇದರ ಹಿಂದೆಯೇ ಮತ್ತೊಂದು ನಡೆದು ಒಂದಕ್ಕೊಂದು ಸಂಬಂಧಪಟ್ಟಿರುವಂತಹ ಈ ಮೊಕದ್ದಮೆಗಳು, ನಾವು ಯೆಂದಿಗೂ ಕೇಳದಂತಹ ವಿಚಿತ್ರವಾದ ಅಕೃತ್ಯ ಪರಂಪರೆಯಾಗಿರುತಿವೆ. ಈ ಅಕೃತ್ಯಗಳು ಉನ್ನತಾಧಿಕಾರಿಗಳ ಅವಧಾನಕ್ಕೆ ಬಂದಿರುವದೆಂತಲೂ, ಈ ದೇಶದ ನ್ಯಾಯನಿಬಂಧನೆಗಳು ಹೇಳನಾಸ್ಪದವಾಗುವದಕ್ಕೆ ಕಾರಣಭೂತರಾದವರನ್ನು ಸದರೀ ಡಿಸ್ಟ್ರಿಕ್ಟಿನಿಂದ ಹೊರಪಡಿಸುವದಕ್ಕೆ ಪ್ರಯತ್ನ ನಡೆಸುವರೆಂತಲೂ ನಂಬುತ್ತೇವೆ, ಎಂಬದು.

Occasional Notes
ನೈಮಿತ್ತಿಕವಿಷಯನ್ಯಾಸ

Sanction accorded.—ಜೋಧಪುರ ಸಂಸ್ಥಾನದ ರೆಯಿಲ್‌ರಸ್ತೆಯನ್ನು ಒತಾಯಿಸುವಂತೆ ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಮಂಜೂರ್ಮಾಡಿ ಕೂಡಲೇ ಕೆಲಸಕ್ಕೆ ಪ್ರಾರಂಭವಾಗುವದಾಗಿದೆ. ಇದರ ಖರ್ಚುಗಳು ಸಂಸ್ಥಾನದ ಚಾಲತೀ ಹುಟ್ಟುವಳಿಯಿಂದ ಒದಗಿಸಲ್ಪಡುವವು.

The late Maharaja of Cashmere.—ಕಾಶ್ಮೀರಸಂಸ್ಥಾನದ ಸೌಬಗ್ ಮಹಾರಾಜರವರ ಅಸ್ಥಿಯನ್ನು ಗಂಗಾನದಿಯಲ್ಲಿ ಸೇರಿಸುವದಕ್ಕಾಗಿ ಕಳೆದತಿಂಗಳ ೨೬ನೇ ತಾರೀಖಿನಲ್ಲಿ ಅದು ರಾಜಧಾನಿಯಿಂದ ವಿಶೇಷ ವಿಭವದೊಡನೆ ಹರಿದ್ವಾರಕ್ಕೆ ಸಾಗಿಸಲ್ಪಟ್ಟಿತೆಂದು ತಿಳಿಯಬರುತಿದೆ.

The Baroda Residency.—ಬರೋಡೇ ಸಂಸ್ಥಾನದಲ್ಲಿ ಈಗಯಿರುವ ಬ್ರಿಟಿಷ್ ರೆಸಿಡೆಂಟರವರು ಹೊರಟುಹೋದಮೇಲೆ ಅದು ದರ್ಜೆಯಲ್ಲಿ ಯೆರಡನೇತರಗತಿಗೆ ತರಲ್ಪಟ್ಟು ಅದರ ತಲಬು ಸಹ ೨,೫೦೦ ರೂಪಾಯಿಗಳಿಗೆ ಕಮ್ಮಿಮಾಡಲ್ಪಡುವದೆಂದು ಪ್ರಸ್ತಾವ ನಡೆಯುತಲಿರುವಂತೆ ಒಂದಾನೊಂದು ಪತ್ರಿಕೆ ಹೇಳುತಿದೆ

A liberal subscription.—ಇಂಡ್ಯಾದೇಶದ ಹೆಂಗಸರಿಗೆ ವೈದ್ಯಶಾಸ್ತ್ರಾಭ್ಯಾಸಮಾಡಿಸಿ ಅವರನ್ನು ಚಿಕಿತ್ಸೆಯವಿಷಯದಲ್ಲಿ ತಯಾರ್ಮಾಡಿಸುವದಕ್ಕಾಗಿ ಲಾರ್ಡ್ ಡಫರಿನ್‌ಸಾಹೇಬರವರ ಭಾರ್ಯೆಯವರು ಏರ್ಪಡಿಸಿರುವ ಫಂಡಿಗೆ ಜೋಧಪುರಸಂಸ್ಥಾನದ ಮಹಾರಾಣೀಯವರು ೫,೦೦೦ ರೂಪಾಯಿಗಳು ಚಂದಾಮಾಡಿರುತ್ತಾರೆ.

Rebellion in Nepal.—ನೇಪಾಳಸಂಸ್ಥಾನದಲ್ಲಿ ಕಲಹ ಪ್ರಾಪ್ತವಾಗಿ ಪ್ರಧಾನಮಂತ್ರಿಯವರು ಕಲಹ ಪ್ರವೃತ್ತರಿಂದ ಖೂನ್ ಮಾಡಲ್ಪಟ್ಟದ್ದಲ್ಲದೆ, ಬಾಲಕರಾದ ಅಲ್ಲಿನ ಅರಸರು ಸಹ ಕಲಹಿಗಳ ಕೈಗೆ ಸಿಕ್ಕಿಕೊಂಡಿರುವಂತೆಯೂ, ಅಲ್ಲಿನ ರೆಸಿಡೆಂಟರವರು ರಾಜಧಾನಿಯಿಂದದೇಶ

ಸಂಚಾರಾರ್ಥ ಹೊರಗೆ ಹೋಗಿರುವದಾಗಿಯೂ ಪಯೋನಿಯರ್‌ಪತ್ರಿಕೆ ಹೇಳುತಿದೆ.

The Madras and Bombay commands. ಮದರಾಸ್‌ಸೇನೆಗೆ ಸರ್ ಹರ್ಬರ್ಟ ಮಕಫರ್ಸನ್ ಯವರೂ, ಮುಂಬೈಸೇನೆಗೆ ಸರ್ ಚಾರಲ್ಸ್ ಅರ್ಬತ್‌ನಾಟಿಯವರೂ, ಕಮಾಂಡರ್ ಇನ್‌ಚೀಫ್ ರವರಾಗಿ ನಿಯಮಿಸಲ್ಪಡುವರೆಂದು ಉಂಟಾಗಿದ್ದ ಪ್ರವಾದವು ಕಾರ್ಯತಃ ನಡೆಯುವದೆಂದು ಪಯೋನಿಯರ್‌ಪತ್ರಿಕೆ ತಿಳಿಸುತದೆ.

Cape diamonds.—ಅಫ್ರಿಕಾದೇಶದ ದಕ್ಷಿಣಭಾಗದಲ್ಲಿರುವ ಕಿಂಬರ್ಲೀಯೆಂಬ ಡಿಸ್ಟ್ರಿಕ್ಟಿನೊಳಗಣ ವಜ್ರದ ಗನಿಗಳು ನಾಲ್ಕರಿಂದ, ಕಳೆದ ಆಗಸ್ಟು ತಿಂಗಳ ೩೧ನೇ ತಾರೀಖಿಗೆ ಪೂರೈಸಿದ ಮೂರುಸಂವತ್ಸರಕಾಲದೊಳು ೬೮,೨೬,೫೨೦ ಕ್ಯಾರೆಟುಗಳ ತೂಕವೂ, ೭೪,೮೫,೩೮೦ ರೂಪಾಯಿಗಳಕ್ರಯವೂಳ್ಳ ವಜ್ರಗಳುಸಿಕ್ಕಿದವು.

Military preparations in Turkey.—ಕಳೆದ ಅಕ್ಟೋಬರ್ ೩೦ನೇ ತಾರೀಖಿನಲ್ಲಿ, ತುರ್ಕೀ ಸಂಸ್ಥಾನದ ಯುದ್ಧ ಇಲಾಖಾ ಅಧಿಕಾರಿಗಳು ತೋಫಖಾನೆಯನ್ನು ಜಮಾಯಿಸುವಂತೆ ಹುಕುಂಕೊಟ್ಟು, ಅವೆಲ್ಲವು ನೆರವೇರಿದಮೇಲೆ ನಾವಿಕಸೇನಾ ಸುವಿಭಾಗಕ್ಕೆ ನಿಗೇ ಕೊಡಲ್ಪಟ್ಟಿತು. ಅಂದರೆ, ಯುದ್ಧನಾವೆಗಳಲ್ಲಿದ್ದ ತೋಫುಗಳಿಗೆ ಬದಲಾಗಿ ಬೇರೇ ಭಾರೀತೋಫುಗಳು ಇಡಲ್ಪಟ್ಟವು. ಆವಶ್ಯಕಗಳಾದ ಇತರ ಪದಾರ್ಥಗಳ ಸರಬರಾಯಿಬಗ್ಗೆ ಜರ್ಮನೀದೇಶದ ಕೋರೀದಾರರೊಡನೆ ಕಂಟ್ರಾಕ್ಟುಮಾಡಿಕೊಂಡಿರುತ್ತಾರೆ.

Sanction accorded.—ಸಿಂಧಿಯಾ ಮಹಾರಾಜರವರಿಗೆ ಬ್ರಿಟಿಷ್ ಸರ್ಕಾರದವರ ಮೇಲಿನ ದೃಢತರವಾದ ರಾಜಭಕ್ತಿಗೆ ಬಹುಮಾನರೂಪವಾಗಿ, ಗ್ವಾಲಿಯರ್ ಕೋಟೆಯನ್ನು ಅವರಿಗೆ ವಾಪಸ್ ಕೊಟ್ಟುಬಿಡಬೇಕೆಂಬ ವಿಷಯವನ್ನು ಇಂಡ್ಯಾಸ್ಟೇಟ ಸೆಕ್ರೆಟರಿಯವರು ಮಂಜೂರ್ಮಾಡಿರುತ್ತಾರೆ. ಇದಕ್ಕೆ ಮಿಲಿಟರಿ ಅಧಿಕಾರಿಗಳು ಸಮ್ಮತಿಸದೆ ಹೋದಾಗ್ಯೂ, ವೈಸರಾಯಿಯವರು ಆಚೇವಾರದಲ್ಲಿ ಅಲ್ಲಿಗೆ ಹೋಗಿದ್ದ ಕಾಲದಲ್ಲಿ ಕೊಟ್ಟುಬಿಟ್ಟರೆಂದು ತಿಳಿಯಬರುತಿದೆ. ಇದೊಂದು ಶುಭವೃತ್ತಾಂತವೆಂದು ಹೇಳಬೇಕಾಗಿದೆ.

The Maharaja of Jeypore.—ಇಂಡ್ಯಾಗವರ್ನಮೆಂಟಿನವರು ಬಾಲಕರಾದ ಜಯಪುರದಮಹಾರಾಜರವರಿಗೆ ರಾಜ್ಯಾದಳಿತ ವಿಷಯದಲ್ಲಿ ಸಂಪೂರ್ಣಾಧಿಕಾರವಂ ಕೊಟ್ಟಿರುವದಾಗಿ ಲಾರ್ಡ ಡಫರಿನ್ ಸಾಹೇಬರವರು ಈಚೆಗೆ ಜಯಪುರದಲ್ಲಿ ಮಾಡಿದ ಒಂದು ಪ್ರಸಂಗ ಸಂದರ್ಭದಲ್ಲಿ ಬಾಹಾಟವಾಗಿ ತಿಳಿಸಿ, ಗವರ್ನಮೆಂಟಿನವರು ಇಂಡ್ಯಾದೇಶದ ಅರಸುಗಳವಿಷಯದಲ್ಲಿ ಅಪರಿಮಿತವಾದ ನಂಬಿಕೆಯಮೂಲಕ ತಮ್ಮ ಆಡಳಿತಗಳಂ ನಡೆಸುತಬರುವರೆಂದು ತಿಳಿಸಿದರು.

Men-of-war for Japan.—ಜಪಾನ್ ಗವರ್ನಮೆಂಟಿನವರು ಇಂಗ್ಲಿಷ್ ತಯಾರಿ ಮೂರು, ಫ್ರೆಂಚ್ ತಯಾರಿಮೂರು, ಈಪ್ರಕಾರ ಆರು ಯುದ್ಧನಾವೆಗಳಂ ಕರಿಸುವಪ್ರಯತ್ನದಲ್ಲಿರುವದಲ್ಲದೆ ನಾವಿಕಸೇನಾಸುವಿಭಾಗದಲ್ಲಿನ ಚಮತ್ಕಾರಗಳಂ ಕಲಿಸುವದಕ್ಕಾಗಿ ಜರ್ಮನೀದೇಶದಿಂದ ಇಬ್ಬರು ಆಫೀಸರುಗಳನ್ನು ಕರೆಯಿಸಬೇಕೆಂದು ಸಹ ಯೋಚಿಸಿಯಿರುತ್ತಾರಂತೆ. ವಿದ್ಯಾಬುದ್ಧಿ ವೈಲಕ್ಷಣ್ಯಗಳಲ್ಲಿ ಇತರರಂತೆ ತಾವೂ ದಿನೇದಿನೆ ಅಭಿವೃದ್ಧಿಯಂ ಹೊಂದತಕ್ಕವರ ಪ್ರಯತ್ನಗಳೆಲ್ಲವು ಮೇಲಿನಂತೆಯೇ ಇರುವದು.

The marriage of the Gaekwar.—ಬರೋಡೇ ಸಂಸ್ಥಾನದ ಗಾಯಕವಾಡಿಯವರಿಗೆ ಈ ತಿಂಗಳ ೨೮ನೇ ತಾರೀಖಿನದಿನ ದ್ವಿತೀಯ ವಿವಾಹ ಮಹೋತ್ಸವವಂ ನಡೆಸಬೇಕೆಂದು ಯೋಚನೆಯಾಗಿರುತಿದೆ. ಮಹಾರಾಜರವರಿಗೆ ನಿಶ್ಚಿತವಾಗಿರುವ ಕನ್ಯೆಯು ನೌಸಾರಿಗೆಬಂದು ಸೇರಿರುವಂತೆಯೂ, ಈದಸ್ತು ಈವಿವಾಹದಬಗ್ಗೆ ವಿಶೇಷ ತಮಾಷೆಗಳು ಯಾವವೂ ನಡೆಸಲ್ಪಡಲಾರವೆಂತಲೂ, ತಿಳಿಯಬರುತಿದೆ. ಈ ಸಂಸ್ಥಾನದ ಪ್ರಕೃತ ದಿವಾನರಾದ ಖಾಜೀ ಷಹಾಬುದ್ದೀನ್, ಸಿ. ಐ. ಇ ಯವರು ಶಾಹಿರೀ ಸಬಬ ದಿವಾನ್‌ಗಿರಿಯಿಂದ ನಿವೃತ್ತರಾಗತಕ್ಕದ್ದೆಂದು ನಿರ್ಣಯವಾಗಿರುವಂತೆ ಒಂದಾನೊಂದು ಪತ್ರಿಕೆ ಹೇಳುತಿದೆ.

Lord Dufferin on Burmah.—ಇಂಡ್ಯಾ ರಾಜ್ಯದ ವೈಸ್‌ರಾಯಿಯವರಾದ ಲಾರ್ಡ್ ಡಫರಿನ್ ಸಾಹೇಬರವರು, ಈಚೆಗೆ ಆಗ್ರಾನಗರ್‌ನಲ್ಲಿ ಮಾಡಿದ ಒಂದು ಪ್ರಸಂಗ ಸಂದರ್ಭದೊಳು, ಈಗ ಬರ್ಮಾ ಅರಸರವರೊಡನೆ ಬ್ರಿಟಿಷ್‌ನವರಿಗೆ ಉಂಟಾಗಿರುವ ಕಲಹದವಿಷಯವನ್ನು ಕುರಿತು ತಿಳಿಸಿದ್ದೇನಂದರೆ, ಸದರೀ ಕಲಹವನ್ನು ಸಮಾಧಾನ ಮಾರ್ಗಪ್ರಯೋಜನಪೂರ್ವಕವಾಗಿಯೂ ಗೌರವಪೂರ್ವಕವಾಗಿಯೂ ತಪ್ಪಿಸುವದು ಸಾಧ್ಯವಾಗಿದ್ದಿರುವವಾದರೆ ಅಂತಾವಿಷಯದಲ್ಲಿ ತನ್ನ ಸಹ ಅಧಿಕಾರಿಗಳಿಗೂ ತನಗೂ ಇರುವಷ್ಟು ಅಕ್ಕರೆ ಅನ್ಯರ್‍ಯಾರಿಗೂ ಇರಲಾರದು. ಪರಂತು ಈಗ ಪ್ರಾಪ್ತವಾಗಿರುವ ಸಂಕಟ ಪರಿಹಾರದಬಗ್ಗೆ ಅನಿವಾರ್ಯವಾಗಿ ತಾವು ಅವಲಂಬಿಸಿರುವ ಕ್ರಮಗಳು, ಯುದ್ಧವು ಅಲ್ಪವಾದದ್ದಾಗಿದ್ದರೂ, ಅದರಿಂದ ತಪ್ಪದೆ ಉಂಟಾಗಬಹುದಾದ ಸಂಕಟಗಳನ್ನು ಕೂಡಿದವು ಪಟ್ಟಿಗೆ ತಪ್ಪಿಸುವದಕ್ಕೆ ಕಾರ್ಯಕಾರಿಯಾಗುವವು, ಎಂಬದು.

Elections.—ಇಂಗ್ಲಂಡ್‌ರಾಜ್ಯದ ಪಾರ್ಲಿಮೆಂಟ ಸಮಾಜದಲ್ಲಿ, ಕನ್ಸರ್ವೇಟಿವ್ಸ್ ಮತ್ತು ಲಿಬರಲ್ಸ್‌ಯೆಂಬ ಪಕ್ಷದ್ವಯದವರು ಸೇರಿರುವರು. ಇವರಪೈಕಿ ಯಾವಪಕ್ಷದವರಸಂಖ್ಯೆ ಅಧಿಕವಾಗುತಿದೆಯೊ ಆಪಕ್ಷದವರು ರಾಜ್ಯಾದಳಿತೆಯನ್ನು ಕೈಗೊಂಡು ನಡೆಸುತ ಬರುವದು ಪ್ರಸಿದ್ಧವಾದ ವಿಷಯವಾಗಿರುತಿದೆಯಷ್ಟೆ. ಕಳೆದ ಆರುತಿಂಗಳ ಹಿಂದಿನವರಿವಿಗೆ ಲಿಬರಲ್‌ಪಕ್ಷದವರು ಅಧಿಕಾರಪದದೊಳಿದ್ದು ಒಂದುಕಾರಣದಮೂಲಕ ಅವರು ಅದಂಬಿಟ್ಟುಬಿಡಲು ಕನ್ಸರ್ವೇಟಿವ್ ಪಕ್ಷದವರು ಕೈಗೊಂಡು ಈಗ ನಡೆಸುತಬರುತಲಿದ್ದಾರೆ. ಪಾರ್ಲಿಮೆಂಟಸಮಾಜದಪೈಕಿ ಹೌಸಾಫ್‌ಕಾಮನ್ಸ ಮೆಂಬರುಗಳನ್ನು ಚುನಾಯಿಸುವಕಾಲಪ್ರಾಪ್ತವಾಗಿ ಈಗನಡೆಯುಬರುವದು, ಅವರಲ್ಲಿ ೨೬೩ಮಂದಿ ಲಿಬರಲ್‌ಪಕ್ಷದವರೂ ೨೧೩ಮಂದಿ ಕನ್ಸರ್ವೇಟಿವ್‌ಮೆಂಬರುಗಳೂ ಇದುವರಿವಿಗೆ ಚುನಾಯಿಸಲ್ಪಟ್ಟಿರುತ್ತಾರೆ ಉಭಯ ಪಕ್ಷದವರೂಸೇರಿ ಒಟ್ಟು ೬೭೦ಮಂದಿ ಚುನಾಯಿಸಲ್ಪಡಬೇಕು ಈ ತಾರೀಖ್‌ವರಿವಿಗೆ ೫೩೦ ಮಂದಿ ಚುನಾಯಿಸಲ್ಪಟ್ಟರು. ಮುಂದೆ ಯಾವ ಪಕ್ಷದವರ ಸಂಖ್ಯೆ ಅಧಿಕವಾಗುತದೆಯೊ ಆ ಪಕ್ಷದವರು ಅಧಿಕಾರ ಪದಕ್ಕೆ ಬರುವರು. ಈ ಸಂದರ್ಭದಿಂದ ಈಗ ಇಂಗ್ಲಂಡ್ ದೇಶದಲ್ಲಿ ಬಹಳ ಗದ್ದಲ ವುಂಟಾಗಿ ಉಭಯ ಪಕ್ಷದವರಿಗೂ ತುಮುಲಗಳು ಏರಿ ಹೋಗಿರುತದೆ

LOCAL AND PROVINCIAL NEWS

ಸ್ಥಳದೇಶಮತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು.

University Examinations.—ಈ ತಿಂಗಳ ೧೪ನೇ ತಾರೀಖಿನಲ್ಲಿ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ ಪರೀಕ್ಷೆಗೆ ಪ್ರಾರಂಭವಾಗಿ ೨೦ನೇ ತಾರೀಖಿನ ವರಿವಿಗೆ ನಡೆಯುವದು. ಅದನ್ನು ಕುರಿತ ವಿಶೇಷಗಳನ್ನು ಮುಂದಿನವಾರದಲ್ಲಿ ತಿಳಿಸುವೆವು.

The sessions.—ಇಲ್ಲಿನ ಚೀಫ್‌ಕೋರ್ಟನಲ್ಲಿ ಈದಿನ ಸೆಷನ್ ದರ್ಯಾಪ್ತಿಗೆ ಪ್ರಾರಂಭವಾಗಿ ಮೆ|| ರಾಮಚಂದ್ರಯ್ಯನವರಿಂದ ನಡೆಸಲ್ಪಡುವದು. ಈಸಲ ಆರು ಮೊಕದ್ದಮೆಗಳು ಕಮ್ಮಿಟ್ ಆಗಿರುತವೆ. ಅವುಗಳಪೈಕಿ ಯೊಂದು ಖೂನಿ, ಮೂರು ಖೂನೀಪ್ರಯತ್ನ, ಒಂದು ವಿಷಹಾಕಿಕೆ, ಮತ್ತೊಂದು ಅಕ್ರಮಸ್ತ್ರೀಸಂಗಮ, ಈರೀತಿ ಇರುತಿವೆ.

A new railway station.—ಈಪೂರಲ್ಲಿರುವ ಶ್ರೀಮನ್ಮಹಾರಾಜರವರ ಅರಮನೆಯಬಳಿ ಹೊಸದಾಗಿ ಯೊಂದು ರೈಲ್‌ಸ್ಟೇಷನ್ ಕಟ್ಟಿಸಬೇಕೆಂದು ನಿರ್ಣಯವಾಗಿ ಅದರ ಕಾಮಗಾರಿಯು ಕೂಡಲೇ ಪ್ರಾರಂಭಿಸಲ್ಪಡುವದಲ್ಲದೆ ಸದರೀಹೊಸಸ್ಟೇಷನ್ ಮೈಸೂರು, ತುಮಕೂರು ಮತ್ತು ಹಿಂದೂಪುರದ ರಸ್ತೆಗೆ ಮಧ್ಯರಂಗ ಸ್ಟೇಷನಾಗಿ ಮಾಡಲ್ಪಡುವದೆಂತಲೂ ಕೇಳುತ್ತೇವೆ.

Murder of a mother.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ತಿರುವೆಂಗಡನೆಂಬ ಲಿಯಾರ್ಕ್ರಿಂಬ ಒಬ್ಬಾತನು ಈಗ್ಗೆ ೬ತಿಂಗಳಹಿಂದೆ ತನ್ನಮನೆಯಲ್ಲೇ ತನ್ನತಾಯಿಯನ್ನು ಖೂನ್ ಮಾಡಿ ಮನೆಯಭೂಮಿಯಲ್ಲಿ ಹಾಕಿದನೆಂಬ ಮೊಕದ್ದಮೆಯು, ಕಳೆದ ಬುಧವಾರದದಿನ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೋರ್ಟನಲ್ಲಿ ಮರಳಿ ದರ್ಯಾಫ್ತಾಗಿ, ಸೆಷನ್ ವಿಚಾರಣೆಯಬಗ್ಗೆ ಕಮ್ಮಿಟ್ ಮಾಡಲ್ಪಟ್ಟನು. ಅಲ್ಲಿ ಇದೇತಿಂಗಳ ೧೫ನೇ ತಾರೀಖಿನಲ್ಲಿ ದರ್ಯಾಪ್ತು ನಡೆಯುವದು.

The Middle School Examination.— ಈ ತಿಂಗಳ ೧ನೇ ತಾರೀಖ್ ಮಂಗಳವಾರದದಿನ ಮಿಡ್ಲಿಸ್ಕೂಲ್ ಪರೀಕ್ಷೆಗೆ ಪ್ರಾರಂಭವಾಗಿ ಶುಕ್ರವಾರದವರಿವಿಗೆ ನಡೆಯಿತು. ಸುಮಾರು ೩೫೦ ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಬಂದಿದ್ದರು. ಈ ಪರೀಕ್ಷೆಗೆ ಈಸಲ ಕೊಡಲ್ಪಟ್ಟಿದ್ದ ಮುದ್ರಿತ ಪ್ರಶ್ನಪತ್ರಗಳು ಕೇವಲ ಕಠಿಣವಾಗಿದ್ದುವಂತೆಯೂ, ಅವು ಮೆಟ್ರಿಕ್ಯುಲೇಷನ್ ಪರೀಕ್ಷೆಗೆಹೋಗತಕ್ಕವರ ಶಕ್ತಿಯನ್ನು ಸಹ ಮೀರಿದ್ದವೆಂದು ಪಂಡಿತರುಗಳು ಅಭಿಪ್ರಾಯ ಪಡುವಂತೆಯೂ ಕೇಳುತ್ತೇವೆ.

Agricultural student.—ಈ ದೇಶದಿಂದ ಮದರಾಸಿಗೆಹೋಗಿ ಅಲ್ಲಿ ಸ್ಥಾಪಿತವಾಗಿರುವ ವ್ಯವಸಾಯಶಾಸ್ತ್ರ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತಲಿದ್ದ ವೆಂಕಟದಾಸಪ್ಪ, ರಾಮರಾವ್, ವೆಂಕಟರಾಮಯ್ಯ, ಮತ್ತು ವೆಂಕೋಬರಾಯರೆಂಬ ನಾಲ್ಕರು ವಿದ್ಯಾರ್ಥಿಗಳು ಅಲ್ಲಿನ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಾಪಸು ಬಂದದರಿಂದ ಅವರಪೈಕಿ ವೆಂಕೋಬರಾಯರೆಂಬವರು ವಿನಾ ಮಿಕ್ಕ ಮೂವರಿಗೂ ಮೂರು ಡಿಸ್ಟ್ರಿಕ್ಟು, ಅಂದರೆ ಬೆಂಗಳೂರು ತುಮಕೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ, ಮಾಹೇಯಾನಾ ಮೂವತ್ತು ರೂಪಾಯಿಗಳ ಸಂಬಳದಮೇಲೆ ಅಗ್ರಿಕಲ್ಚ್ಯುರಲ್ ಇನ್‌ಸ್ಪೆಕ್ಟರಗಳೆಂಬ ಅಭಿಧಾನದೊಡನೆ ನೌಕರಿಯಲ್ಲಿಡಲ್ಪಟ್ಟರೆಂದು ಕೇಳುತ್ತೇವೆ.

Revision of the establishment of the Chief Court.—ಇಲ್ಲಿನಚೀಫ್‌ಕೋರ್ಟನ ಲವಾಜಮೆಯನ್ನು ಪುನರ್ವಿಮರ್ಶೆಮಾಡಿ ದಿವಾನರವರ ಮಂಜೂರಾತಿಯಬಗ್ಗೆ ಕಳುಹಿಸಲ್ಪಟ್ಟ ಹೊಸ ಯೇರ್ಪಾಡು ದಿವಾನರವರಿಂದ ಮಂಜೂರಾಗಿಬಂದು ಅದು ಬರುವ ಜನವರಿ ೧ನೇ ತಾರೀಖಿನಲ್ಲಿ ಜಾರೀಯೊಳು ತರಲ್ಪಡುವದೆಂದು ತಿಳಿಯಬರುತಿದೆ. ಈ ಯೇರ್ಪಾಡಿನಲ್ಲಿ ಡೆಪ್ಯುಟಿ ರಿಜಿಸ್ಟ್ರಾರವರ ೧೫೦ ರೂ|| ತಲಬ್ ದಾಖಲ್ ಮಾಹೇಯಾನಾ ೨,೮೩೦ ರೂಪಾಯಿಗಳ ಲವಾಜಮಾ ಉಳಿಸಲ್ಪಟ್ಟಿತು. ಇಂಟರ್‌ಪ್ರಿಟರ್ ಇಸಮು ಮೌಕೂಫಾಗಿ ಅವರಿಗೆ ಅದೇಕೋರ್ಟನಲ್ಲಿ ಬೇರೇಕೆಲಸ ವಿಲೇಯಾಗಿರುತಿದೆ. ಈ ಸಂದರ್ಭದಲ್ಲಿ ನಾಲ್ವರು ಪೆನ್ಷನ್‌ಮೇಲೂ, ಸಾಕ್ಷ್ಯಮಜನಗ್ರಾಚ್ಯುಯಿಟಿಮೇಲೂ ನಿವೃತ್ತರಾಗಬಹುದೆಂದು ಕಾಣುತಿದೆ. ಅದರ್ ಪೆನ್ಷನಿಗೆ ಲಾಯಖೀಯಿಲ್ಲದವರೆಲ್ಲರು ತೆಗೆಯಲ್ಪಡತಕ್ಕದ್ದೆಂತಲೂ, ಡಿಸ್ಟ್ರಿಕ್ಟು ಏರ್ಪಾಡಿನಲ್ಲಿ ಅವರೆಲ್ಲರಿಗೂ ವಿಲೇ ಮಾಡಲ್ಪಡುವದೆಂತಲೂ ದಿವಾನರವರು ಹುಕುಂ ಕೊಟ್ಟಿರುವಂತೆ ತಿಳಿಯಬರುತಿದೆ

TELEGRAPINC SUMMARY

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೮ನೇ ನವಂಬರ್.—ಸರ್ವಿಯಾದೇಶದ ಅರಸರಾದ ಕಿಂಗ್ ಮಿಲಾನ್‌ರವರು ರಾಜ್ಯಾಧಿಕಾರವಂ ಬಿಟ್ಟುಹೋಗಬೇಕೆಂದು [illegible] ರೆಂತಲೂ ಅವರ [illegible] ವನ್ನು ಆಸ್ಟ್ರಿಯಾ ಸರಕಾರದವರು ಸ್ವಾಧೀನ ಮಾಡಿಕೊಳ್ಳುವರೆಂತಲೂ ಹುಟ್ಟಿದ ವಾರ್ತೆಯಾಗಿರುತ್ತದೆ.

ಬೆಲ್‌ಗ್ರೇಡ್ ೨೮ನೇ ನವಂಬರ್.—ಆಸ್ಟ್ರಿಯಾ ಸರಕಾರದವರ ಮೋಜಣಿ(?) ಯುದ್ಧಸ್ಥಗಿತದಮೂಲಕ ಬಲ್ಗೇರಿಯಾ ಅರಸರಿಗೂ ಸರ್ವಿಯಾ ಅರಸರಿಗೂ ತಾತ್ಕಾಲಿಕವಾಗಿ ಯುದ್ಧವನ್ನು ನಿಲ್ಲಿಸಿ ಇರುವ ವಿಷಯದಲ್ಲಿ ಒಂದು ಕರಾರು ಸ್ಥಿರ [illegible] ಸದರೀ ಕರಾರಿಗೆ ಬಲ್ಗೇರಿಯಾ ಅರಸರು ಒಪ್ಪಂಬಡದೆ ಹೋಗುವಾದರೆ ಆಸ್ಟ್ರಿಯಾ ಸೇನೆಯು ಸರ್ವಿಯಾದೇಶದೊಳು ಪ್ರವೇಶಿಸುವದೆಂದು ಹೆದರಿಸಿದಮೇಲೆ ಅವರು ಒಪ್ಪಿದರು.

ಟೆಹರಾನ್, ೨೭ನೇ ನವಂಬರ್.—ಅಯೂಬ್‌ಖಾನನು ಅಧಿಕಾರಿಗಳಿಗೆ [illegible] ತಪ್ಪಿಸಿಕೊಂಡು ಹೋದದರಿಂದ ಅವನಮೇಲೆ ಇಡಲ್ಪಟ್ಟ ಪಹರೆ ಜನಗಳ ಸಂಖ್ಯೆಯು ಕಮ್ಮೀಮಾಡಲ್ಪಟ್ಟಿತು. ಅವನು ಬ್ರಿಟಿಷ್ ಸರಕಾರದಿಂದ ತನ್ನಾಶನವನ್ನು ಅಪೇಕ್ಷಿಸುತ್ತಾನೆ.

ಲಂಡನ್ ೨೯ನೇ ನವಂಬರ್.—[illegible] ಸರ್ ಚಾರ್ಲ್ಸ್ ಅರ್ಬತ್‌ನಾಟ್ ಯವರು [illegible] ಕಮಾಂಡರ್ ಇನ್‌ಚೀಫರಾಗಿ ನಿಯಮಿಸಲ್ಪಟ್ಟಂತೆ ಲಂಡನ್ ಗೆಜೆಟ್ ಪತ್ರಿಕೆ ಪ್ರಕಟಮಾಡಿರುತದೆ.

ಬೆಲ್‌ಗ್ರೇಡ್ ೩೦ನೇ ನವಂಬರ್.—ಪ್ರಿನ್ಸ್ ಅಲೆಗ್ಸಾಂಡರವರು ಯುದ್ಧಚಲನಬಗ್ಗೆ ಮುಂಚೆ ಕೊಟ್ಟ ಪ್ರಾಂಕ್ (ಫ್ರಾಂಕ್ ೧೦೦ ಆ [illegible]) ಕೊಟ್ಟು, ಮುಂದೆ [illegible] ನಡೆಯದಿರುವ ಕರಾರನ್ನು [illegible] ಶರತ್ತುಗಳನ್ನು ತಮ್ಮ [illegible] ಬೇಕೆಂದು ಕೇಳಿಕೊಳ್ಳುವದರಿಂದಲೂ ಈ ಷರತ್ತುಗಳು ಸರ್ವಿಯಾ [illegible] ಇಷ್ಟವಿಲ್ಲದಾಗಿಯೂ ಈ ಸಮಾಧಾನವು [illegible] ಸಂದೇಹಾಸ್ಪದವಾಗಿದೆ.

ಸೇಂಟ್ ಪೀಟರ್ಸ್‌ಬರ್ಗ್, ೧ನೇ ಡಿಸಂಬರ್.—ಈಚೆಗೆ ನಡೆದ ಯುದ್ಧದಲ್ಲಿ ಬಲ್ಗೇರಿಯಾ ಮತ್ತು ರೋಮಿಲಿಯಾ ಸೇನೆಗಳು ತೋರಿಸಿದ ಶೌರ್ಯ ಸಾಹಸಗಳಬಗ್ಗೆ [illegible] ಆಶ್ಚರ್ಯಪಡುವದಾಗಿ ರಷ್ಯಾ [illegible] ಹೇಳುತ್ತಾರೆ.

ರಂಗೂನ್, ೩ನೇ ಡಿಸಂಬರ್.—ಬರ್ಮಾದೇಶದ ಅರಸರಾದ ಥೀಬಾರವರು ಅವರ ಪರಿಜನರೊಡನೆ ಪ್ರೈವೇಟ್ ಯಾದ [illegible] ಹೋಗೇ ಬಹುಶಃ [illegible] ಸ್ಟೇಷನಿಗೆ ಕರಲ್ಪಟ್ಟರು ಚೀಫ್ ಕಮ್ಮಿಷನರವರು ಕೆಲವರು ಆಫೀಸರುಗಳೊಡನೆ ಮಾಂಡಲೇಪಟ್ಟಣದಲ್ಲಿನ ಕಷ್ಟವನ್ನು ಅಡಗಿಸುವದಕ್ಕಾಗಿ ಅಲ್ಲಿಗೆ ಹೊರಟಿದ್ದಾರೆ.

೨೮ನೇ ತಾರೀಖಿನ ಬ್ರಿಟಿಷ್ ಸೇನೆಯು ಮಾಂಡಲೇ ಪಟ್ಟಣವಂ ಪ್ರವೇಶಿಸಿತು ಕೆಲವು ಸೇನೆಯು ಹಿಂದೆನಿಂತು ಕೆಲವು ಕೋಟೆಗಳನ್ನು ಬಿಡಿಸಿಕೊಂಡು ಒಡೆದು ಹಾಕಿದವು [illegible] ತೋಪುಗಳು [illegible] ಆದವು [illegible] ಯಾವ [illegible] ಬರಲಿಲ್ಲ ಹಗಲು ಒಂದು ಘಂಟೆಗೆ ಸರಿಯಾಗಿ ಬ್ರಿಟಿಷ್ ಸೇನೆಯು ಪಟ್ಟಣವನ್ನು ಅರಮನೆಯನ್ನು ಮುತ್ತಿಗೆಹಾಕಿಕೊಂಡರು ಬರ್ಮಾ ಸಂಸ್ಥಾನದ ಪ್ರಧಾನ ಮಂತ್ರಿಯವರು ಅರ್ಧ ದಾರಿಯಲ್ಲಿ ಬಂದು [illegible] ಯಾರು ಗಾಬರಿ ಯೇನೂ [illegible] ಮಾಡುವದಕ್ಕಾಗಿ ಜನರಲ್ ಪ್ರೆಂಡರ್‌ಗಾಸ್ಟರ [illegible] ನ್ನು ಕರೆದುಕೊಂಡು ಬಾರಬೇಕೆಂದು ಜನರಲ್ ಪ್ರೆಂಡರ್‌ಗ್ಯಾಸ್ಟ ರವರನ್ನು ಕೇಳಿಕೊಂಡರು [illegible] ಮಂತ್ರಿ [illegible] ಸ್ಲೇಡ್ [illegible] ರೊಡನೆ ಎಂದು ಅರಸರವರು ಬ್ರಿಟಿಷ್‌ನವರಿಗೆ ಶರಣಾಗತರಾಗಬೇಕೆಂದು ಕೇಳಿದರು. ಅರಮನೆಯ ಸುತ್ತಲು ಪಹರೆ ಇಡಲ್ಪಟ್ಟಿತು ಜನರಲ್ ಪ್ರೆಂಡರ್‌ಗ್ಯಾಸ್ಟ ಯವರು ಮರುದಿನ ಅರಮನೆಗೆಹೋಗಿ (ತಮ್ಮ)ಅವರ ಆವಶ್ಯಕತೆಯನ್ನು ಅಂಗೀಕರಿಸಬೇಕೆಂದು ಹೇಳಿದ್ದರು [illegible] ೨೯ನೇ ತಾರೀಖಿನಲ್ಲಿ ಜನರಲ್ ಪ್ರೆಂಡರ್‌ಗ್ಯಾಸ್ಟ ಯವರು ಅರಮನೆಯಲ್ಲಿ ಅರಸರನ್ನು [illegible] ನೋಡಿ [illegible] ಅವರಿಬ್ಬರನ್ನು ಕರೆದುಕೊಂಡು ಸಿಂಹಾಸನ ಇಟ್ಟಿರುವ [illegible] ಹೋಗಿ [illegible] ಗಾರ್ಡನ್‌ನಲ್ಲಿ [illegible] ಜತೆಯೊಡನೆ ಹೋಗೇ [illegible] ಕರೆದುಕೊಂಡುಹೋಗಿ ಅದರಲ್ಲಿ ಹತ್ತಿಸಿ [illegible] ರಂಗೂನಿಗೆ [illegible] ಕಟ್ಟಡದ ಕಷ್ಟಂ [illegible] ಕ್ಕಾಗಿ [illegible] ಕೊಡನೆ ಅಲ್ಲೇ ಇರುತಿದ್ದಿತು. ಬ್ರಿಟಿಷ್‌ನವರ ವಿಷಯದಲ್ಲಿ ಬರ್ಮಾದೇಶೀಯರು ಅಘಮಾನ [illegible] ಹೊಂದಿದರೆಂತಲೂ, ಪರಂತು ಲೂಟಿಮಾಡಬೇಕೆಂಬ ಪ್ರಯತ್ನಗಳು ನಡೆದದರಿಂದ ಅ [illegible] ಅತ್ಯಾವಶ್ಯಕವಾದ [illegible] ಗಳು [illegible] ಹಾಕಲ್ಪಡುವರೆಂದು ಹೇಳಿಕೊಳ್ಳುತ್ತಾರೆ.

BANGALORE.—Printed and published for the Proprietor, at the KARNATIC PRESS.—1885.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XII.] BANGALORE —MONDAY, DECEMBER 14, 1885. [No. 50.

ಸಂಪುಟ ೧೨.] ಬೆಂಗಳೂರು:—ಸನ್ ೧೮೮೫ನೇ ಇಸವಿ ಡಿಸೆಂಬರ್ ೧೪ನೇ ತಾರೀಖು ಸೋಮವಾರ. [ಸಂಚಿಕೆ ೫೦

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗದುಕೊಳ್ಳುವವರಿಗೆ, ವರುಷ ೧ಕ್ಕೆ	...	೧೨—೦—೦
ಇಂಗ್ಲಿಷ್ ಮಾತ್ರ ತೆಗದುಕೊಳ್ಳುವವರಿಗೆ ವರುಷ ೧ಕ್ಕೆ	...	೬—೦—೦
ಕನ್ನಡ ಮಾತ್ರ ತೆಗದುಕೊಳ್ಳುವವರಿಗೆ [illegible] ವರುಷಕ್ಕೆ		೬—೦—೦
ತಿಂಗಳು	೧ಕ್ಕೆ	೦—೮—೦
ಸಂಚಿಕೆ	೧ಕ್ಕೆ	೦—೪—೦
[illegible]	೧ಕ್ಕೆ	೦—೫—೦

ಷರಾ.—ಚಂದಾದಾರರು ಇಂಗ್ಲಿಷ್ ಕಾಗದವನ್ನಾಗಲಿ, ಕನ್ನಡ ಕಾಗದವನ್ನಾಗಲಿ ಅಥವಾ, ಎರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸಬೇಕಾದ್ದು.

ಪ್ರಕಟನೆಯ ರಿವಾಜ್.

ಮೊದಲನೇದಫಾ ಪಂಕ್ತಿ	೧ಕ್ಕೆ	೦—೨—೦
ಮರಳನೇದಫಾ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS.

ಇದರ ಕೆಳಗೆ ಬರೆಯಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯ ನಿಗೇ ಕೊಡಬೇಕೆಂದು ಕೋರುತ್ತೇವೆ ಏನೆಂದರೆ:—

೧. ಕರ್ಣಾಟಕ ಪ್ರಕಾಶಿಕಾ ಚಂದಾಹಣವನ್ನಾಗಲಿ [illegible]

೨. [illegible]

೩. [illegible]

೪. [illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟಿಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ನೋಟೀಸ್.

ಇದರ ಕೆಳಗೆ ಬರೆಯಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕಾಸಹಿತ ಸಂಸ್ಕೃತ ಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ಷಟ್ಪಂಚಾಶತ್)	...	೦—೩—೦
[illegible]	...	೦—೫—೦
[illegible]	...	೦—೪—೦
[illegible]	...	೬—೧೪—೦
[illegible]	...	೦—೬—೦
ಬಾಲಗ್ರಹ	...	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible]	...	೦—೬—೦
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	...	೦—೨—೦
[illegible]	...	೦—೦—೯
ಇಂಗ್ಲಿಷ್ ಕನ್ನಡ [illegible]		೧—೦—೦
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ಎಂಬಲ್ಲಿ ೧ನೇ ಸಂಚಿಕೆ.	...	೦—೮—೦
೨ನೇ ಸಂಚಿಕೆ.		೦—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು

ವಿಷ್ಣುಸಹಸ್ರನಾಮ.	...	೦—೫—೦
ಸೂರ್ಯಸಹಸ್ರನಾಮ.	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
೧ ಕಾಂಡ [illegible]	...	೦—೧—೦

[illegible]

NOTICE.

VAIDYASARA SANGRAHA.

Price including Postage, Rs 5-6-0

[illegible]

[illegible]	... ...	ರೂ॥ ೫—೦—೦
[illegible] ಮತ್ತು ಅಂಚೇಹಾಸಲ್		೦—೬—೦

[illegible] ಬೆಂಗಳೂರು

ಪ್ರಕಟನೆ.

ಕ್ರಯಕ್ಕೆ ಸಿದ್ಧವಾಗಿದೆ.

[illegible]

ಉದ್ಯೋಗ ಪರ್ವ.

		ಅಂಚೇಹಾಸಲ್
[illegible]	೧-೧೦-೦	೩½ ಆಣೆ.
[illegible]	೧-೧೫-೦	೪½ ಆಣೆ.
[illegible]	೧-೧೨-೦	೩½ ಆಣೆ.

[illegible]

ಮೈಸೂರು, ೨೦-೧೧-೮೫. } [illegible], [illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 14, 1885

೧೮೮೫ನೇ ಡಿಸೆಂಬರ್ ೧೪ನೇ ತಾ॥ ಸೋಮವಾರ.

ಓ॥ ಸರ್ವಜ್ಞತಾಂ [illegible]

THE PETTAH DISPENSARY

ಬೆಂಗಳೂರು ಪೇಟೆಯ ಆಸ್ಪತ್ರಿ ಮತ್ತು ವೈದ್ಯಶಾಲೆಯ ವಿಷಯದೊಳು ಬೆಳದೇಕದ ಡೆಯಿಲೀ ಪೋಸ್ಟು ಪತ್ರಿಕೆಯು ಮಾಡಿದ ಅಪಲಾಪವು ನಮ್ಮನ್ನು ಸಂಪೂರ್ಣವಾಗಿ ಭ್ರಾಂತಿಗೊಳಿಸಿದ್ದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಇಂತಾ ಭ್ರಾಮಕವಾಕ್ಯಗಳನ್ನು ನುಡಿದ್ದು ನಮ್ಮದೋಷವಾದಾಗ್ಯೂ ಡೆಯಿಲೀ ಪೋಸ್ಟು ಪತ್ರಿಕೆಯು ವಸ್ತುಸ್ಥಿತಿಯನ್ನರಿಯದೆಯಾಗಲಿ, ಅಥವಾ ಅರಿತು ಅದು ಅನ್ಯಥಾ ತಿಳಿಸುವದರ ಮೂಲಕ ಜನಗಳಿಗೆ ಒಂದು ಅಸಮಾಧಾನವನ್ನು ಹುಟ್ಟಿಸಬೇಕೆಂದಾಗಲಿ ಪ್ರವರ್ತಿಸುವದು ಅದಕ್ಕೆ ಸುತರಾಂ ಯೋಗ್ಯವಲ್ಲವು ಸದರೀ ಪತ್ರಿಕೆಯು ಸರ್ಕಾರ್ ವಾಲ್ಲಭ್ಯವುಳ್ಳದ್ದಾಗಿದೆ ಯೆಂಬ ಭಾವದೊಡನೆ ಅವರ ಮಾತುಗಳನ್ನು ಪ್ರಾಯೇಣ ಜನಗಳು ಸುಲಭವಾಗಿ ನಂಬುತ್ತಾರೆ. ಕೆಲವು ಸಂದರ್ಭಗಳಲ್ಲಿ ಇದರಿಂದ ಪ್ರಬಲಾನರ್ಥಗಳು ಪ್ರಾಪ್ತವಾಗುತಿವೆ. ಪ್ರಸಕ್ತ ಆಸ್ಪತ್ರಿಯ ವಿಷಯವಾಗಿ ಗತವಾರದೊಳು ನಾವು ಅನುವಾದ ಮಾಡಿದ ಪೋಸ್ಟ್ ಪತ್ರಿಕೆಯ ವಾಕ್ಯವೆಲ್ಲವೂ ಸುಳ್ಳೆಂಬದಾಗಿಯೂ, ಆಪಿನ ಮೀಟಿಂಗ ನಡೆದಾಗ್ಯೂ ಅದರಲ್ಲೀ ವಿಷಯ ವೊಂದೂ ವ್ಯವಸ್ಥೆಯಾಗಲಿಲ್ಲವೆಂತಲೂ ಈಚೆಗೆ ನಮಗೆ ನಂಬತಕ್ಕ ಮೂಲಕ ತಿಳಿಯಬಂತು. ಇದರ ನಿಜಸ್ಥಿತಿಯನ್ನರಿಯದೆ ಮ್ಯೂನಿಸಿಪಲ್ ಕಮ್ಮಿಷನರಗಳ ಔದಾಸೀನ್ಯವನ್ನು ಕುರಿತು ನಿಷ್ಠುರೋಕ್ತಿಗಳಿಂದ ಆಕ್ಷೇಪಿಸಿದ್ದಕ್ಕಾಗಿ ಚಿಂತಿಸುವೆವು. ಈ ವಿಷಯವು ಕಡೆಗೆ ಪ್ರಜೆಗಳ ಅಭಿಪ್ರಾಯಾನುಗುಣವಾಗಿಯೇ ವ್ಯವಸ್ಥೆಯಾದಂತೆ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಇದರ ಅಭಿಮಾನಶಾಲಿಯಾದ ಲೇಡೀ ಸುಪೀರಿಯರವರು ಮ್ಯೂನಿಸಿಪಲ್ ಫಂಡಿನಿಂದ ಕೊಡುವಂತೆ ನಿಷ್ಕರ್ಷೆಯಾದ ಮೊಬಲಗಿನಿಂದಲೇ ತಾವು ತೃಪ್ತರಾದಂತೆಯೂ, ಮ್ಯೂನಿಸಿಪಾಲಿಟಿಯವರ ಉದಾರ ಭಾವಕ್ಕೆ ತಾವು ಬಹಳ ಕೃತಜ್ಞರಾಗಿರುವಂತೆಯೂ, ಪೂರ್ವದೊಳು ತಾವು ನಿಷ್ಕರ್ಷಿಸಿಕೊಂಡಿದ್ದ ಕ್ರಮದಂತೆಯೇ ನಡೆಸುತ ಆಬಗ್ಯೆ ಸ್ವಲ್ಪಮಟ್ಟಿಗೆ ಸಹಾಯವನ್ನು ಸರ್ಕಾರದಿಂದ ಪಡೆಯಬೇಕೆಂಬ ಸಂಕಲ್ಪವುಳ್ಳವರಾಗಿರುವಂತೆಯೂ ತಿಳಿಸಿದರೆಂದರಿತೆವು. ಸಹಾಯದ್ರವ್ಯದ ಸಂಖ್ಯೆಯ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಹಿಂದಿನವಾರದಲ್ಲಿಯೇ ತಿಳಿಸಿರುತ್ತೇವೆಯಷ್ಟೆ. ಇದನ್ನು ಕುರಿತು ನಾವೀಗ ಮರಳಿಯೇನೂ ಹೇಳಲಾರೆವು. ಆದರೆ ಇದರ ಔಚಿತ್ಯವನ್ನು ಮಾತ್ರ ಮ್ಯೂನಿಸಿಪಲ್ ಕಮ್ಮಿಷನರಗಳು ಪ್ರಸಿಡೆಂಟರೊಡನೆ ಆಲೋಚಿಸದಿರಲಾರರೆಂದು ನಂಬುತ್ತೇವೆ. ಪ್ರಜೆಗಳ ಅಭಿಪ್ರಾಯಗಳನ್ನೂ ವೃತ್ತಾಂತಪತ್ರಿಕೆಗಳ ಸಲಹೆಗಳನ್ನೂ ಈ ಸಂದರ್ಭದಲ್ಲಿ ಮ್ಯೂನಿಸಿಪಾಲಿಟಿಯವರು ಉಪೇಕ್ಷಿಸದೆ ಗೌರವಿಸಿದ್ದು ಅವರ ಗೌರವಕ್ಕೂ, ಪ್ರಜೆಗಳ ನಂಬಿಕೆಗೂ, ರೋಗಿಗಳ ಕ್ಷೇಮಕ್ಕೂ, ಕಾರಣವಾಯಿತು. ಪ್ರಮಾದದೋಷಗಳು ಪ್ರಾಣಿನಿಯತಗಳಾದದರಿಂದ ಅವುಗಳಂ ತಪ್ಪಿನಡೆಯುತ್ತೇವೆಂಬದು ಒಬ್ಬರಿಗೂ ಸಾಧ್ಯವಲ್ಲವು. ಅದದರಿಂದ ಬಹುಜನಗಳಿಗೆ ಸಂಬಂಧಿಸಿದ ವಿಷಯಗಳಲ್ಲೇನಾದರೂ ಅತ್ಯಂತಿಕ ಬದಲಾವಣೆ ಮಾಡಬೇಕಾಗಿದ್ದಲ್ಲಿ ಅಂತಾ ಸಂದರ್ಭಗಳೊಳೆಲ್ಲ ಪ್ರಜಾಭಿಪ್ರಾಯವಂ ಗೌರವಿಸಿ ತದನುಸಾರ ನಡೆಯುವದು ಉಭಯರಿಗೂ ಕ್ಷೇಮಕರವೆಂಬದನ್ನು ಪ್ರತ್ಯೇಕ ನಾವು ತಿಳಿಸಬೇಕಾದ್ದಿಲ್ಲವು.

AGRICULTURAL INSPECTORS.

ಮದರಾಸ್ ಅಗ್ರಿಕಲ್‍ಚ್ಯುರಲ್ ಕಾಲೇಜಿನಲ್ಲಿ ಓದುತಲಿದ್ದು ಈ ಸಂವತ್ಸರದ ಪರೀಕ್ಷೆಯೊಳು ತೇರ್ಗಡೆಯಾದ ಮೈಸೂರುದೇಶದ ವಿದ್ಯಾರ್ಥಿಗಳ ವಿಷಯದೊಳು ದಿವಾನರವರು ಮಾಡಿರುವ ಕಳೆದ ತಿಂಗಳ ೨೭ನೇ ತಾ॥ [illegible]ನೇ ನಂಬರುಳ್ಳ ಪ್ರೊಸೀಡಿಂಗಸನ್ನು ನೋಡಿ ನಾವು ಬಹಳ ಸಂತೋಷಿಸಿದೆವು. ಸದರೀ ಪ್ರೊಸೀಡಿಂಗ್ಸನಲ್ಲಿ ತಿಳಿಸಲ್ಪಟ್ಟಿರುವದೇನಂದರೆ—ಸನ್ ೧೮೮೫ನೇ ಇಸವಿ ಅಕ್ಟೋಬರ್ ೨೭ನೇ ಮರ್ಸ್ಯಂ [illegible]ನೇ ನಂಬರುಳ್ಳ ಪ್ರೊಸೀಡಿಂಗಸಿನ ಮೂಲಕ ಮದರಾಸ್ ಅಗ್ರಿಕಲ್‍ಚ್ಯುರಲ್ ಕಾಲೇಜ್‍ನಿಂದ ತೇರ್ಗಡೆಯಾಗಿ ಬಂದ ನಾಲ್ಕು ಜನ ವಿದ್ಯಾರ್ಥಿಗಳು ಬೆಂಗಳೂರು, ಕೋಲಾರು, ತುಮಕೂರು, ಮತ್ತು ಮೈಸೂರು ಈ ಡಿಸ್ಟ್ರಿಕ್ಟುಗಳಲ್ಲಿ ಅಗ್ರಿಕಲ್‍ಚ್ಯುರಲ್ ಇನ್‍ಸ್ಪೆಕ್ಟರಗಳಾಗಿ ನೇಮಕರಾಗ್ಯಮಾಡಲ್ಪಟ್ಟರು. ಇವರೊಳೊಬ್ಬನಾದ

ತುಮುಕೂರು ಡಿಸ್ಟ್ರಿಕ್ಟ್ ಅಗ್ರಿಕಲ್‌ಚ್ಯುರಲ್ ಇನ್ಸ್ಪೆಕ್ಟರ್ ವೆಂಕಟದಾಸಪ್ಪ ಸಂಬಾಳನು ವೆಟರನರಿ ಸರ್ಜರಿ (ಅಶ್ವಚಿಕಿತ್ಸೆ) ಯಂ ಕಲಿಯತಕ್ಕಬಗ್ಗೆ ಮರಳಿ ಅಗ್ರಿಕಲ್‌ಚ್ಯುರಲ್ ಕಾಲೀಜಿಗೆ ಹೊರಟುಹೋದನು. ಆದದರಿಂದ ಈಗ ತುಮಕೂರು, ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟ್‌ಗಳಲ್ಲಿ ಅಗ್ರಿಕಲ್‌ಚ್ಯುರಲ್ ಇನ್ಸ್ಪೆಕ್ಟರ್‌ಗಳನ್ನು ಮೊಕರರ್ ಮಾಡಬೇಕಾಗಿದೆ.

ಚಿಕ್ಕಬಳ್ಳಾಪುರದ ಎಂ ರಾಮರಾವು ನರಸೀಪುರದ ವೆಂಕಟರಾಮಯ್ಯ. ಕಾನಡ ಎಸ್. ವೆಂಕೋಬರಾವ್.	ಈ ಬಾಜೂನಲ್ಲಿ ಕಂಡ ವಿದ್ಯಾರ್ಥಿಗಳೆಲ್ಲರೂ

ಮದರಾಸ್ ಅಗ್ರಿಕಲ್‌ಚ್ಯುರಲ್ ಕಾಲೀಜಿನಿಂದ ತೇರ್ಗಡೆಯಾಗಿರುವದರಿಂದ ಇವರು ಮಾಹೆಯಾನಾ ೩೦ ರೂಪಾಯಿಗಳ ತಲಬಿನೊಳು ಅಗ್ರಿಕಲ್‌ಚ್ಯುರಲ್ ಇನ್ಸ್ಪೆಕ್ಟರ್‌ಗಳಾಗಿ ಮೊಕರರ್‌ಮಾಡಲ್ಪಟ್ಟಿರುತ್ತಾರೆ. ಫಾರೆಸ್ಟ್ ವ ಪ್ಲಾಂಟೇಶನ್‌ಗಳ ಇನ್ಸ್ಪೆಕ್ಟರ್ ಜನರಲ್ಲವರು, ೧೮೮೪ನೇ ಇಸವಿಯ ಅಕ್ಟೋಬರ್ ೩೧ನೇಮುಂಗ್ಯಂ ಹುಕುಮಿನ ೧ನೇ ಕಲಂನೊಳು ಸೂಚಿಸಿರುವಂತೆ ಮೇಲೆಕಂಡ ಡಿಸ್ಟ್ರಿಕ್ಟ್‌ಗಳಲ್ಲಿ ಸದರೀ ೩ಜನ ವಿದ್ಯಾರ್ಥಿಗಳಿಗೂ ನೌಕರಿ ಕೊಡತಕ್ಕದ್ದೆಂಬದು.

ಈಸರ್ಕಾರದಿಂದ ವಿದ್ಯಾರ್ಥಿವೇತನವಂ ಪಡೆದು ಕಾಲೀಜಿನೊಳು ಓದಿ ತೇರ್ಗಡೆಯಾದವರಲ್ಲಿ ಮೂವರುವಿನಾ ಮಿಕ್ಕವರೆಲ್ಲರಿಗೂ ವಿಲೇಮಾಡಲ್ಪಟ್ಟಿತು. ಇನ್ನೊಬ್ಬನು ಮಾತ್ರ ಕಾಲೀಜಿನಲ್ಲಿ ಅದ್ಯಾಪಿ ಓದುತಲಿದ್ದಾನೆ. ಆತನವಾಯಿದೆಯು ಮುಂದಿನ ಸಾಲ್ ೫ ತಿಂಗಳೊಡನೆ ಪೂರೈಸುವದಾಗಿ, ಆತನು ಪಾಸ್‌ಮಾಡಿ ವಾಪಸ್‌ಬಂದಕೂಡಲೇ ಆತನಿಗೂ ವಿಲೆಯಾಗಬೇಕಾಗಿರುತಿದೆ. ಸಾಬಕ್ ದಿವಾನ್ ಮ|| ರಂಗಾಚಾರ್ಯರವರು ಈ ವಿದ್ಯಾರ್ಥಿಗಳ ವಿಷಯದಲ್ಲಿ ಮಾಡಿದ್ದವಾಗ್ದಾನವನ್ನೂ ಅವರು ಕೊಟ್ಟಿದ್ದ ಭರವಸೆಯನ್ನೂ ನಂಬಿ ಅನೇಕರಿಗೆ ಇದರೊಳು ಪ್ರವೃತ್ತಿಯೂ ಉತ್ಸಾಹವೂ ಹುಟ್ಟಿಯಿತು. ದೌರ್ಭಾಗ್ಯವಶಾತ್ ಸದರೀ ದೊಡ್ಡ ಮನುಷ್ಯರು ಕಾಲಗತಿಯನ್ನೈದಿದಕೂಡಲೇ ಈ ವಿದ್ಯಾರ್ಥಿಗಳ ಕೋರಿಕೆಗಳೆಲ್ಲವು ಭಂಗವನ್ನೈದಿದವು. ಪ್ರಕೃತ ದಿವಾನರವರು ಹಿಂದಿನವರ ವಾಗ್ದಾನವಂ ಗೌರವಿಸಿ, ಅದರಂತೆ ನಡಿಸದೆ ಹೋದಾಗ್ಯೂ ಕೆಲವುಮಟ್ಟಿಗಾದರೂ ಜರಿಗಿಸಿದ್ದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ. ಈ ವಿದ್ಯಾರ್ಥಿಗಳು ದೇಶಾಂತರದಲ್ಲಿ ಪಟ್ಟಶ್ರಮಕ್ಕೆ ಅನುಗುಣವಾದ ಫಲವನ್ನೀಗ ಅನುಭವಿಸಲಿಕ್ಕಿಲ್ಲದೆ ಹೋದದಕ್ಕಾಗಿ ಅವರು ಕೆನಾವೂ ಅಸಮಾಧಾನಪಡುವೆವು. ಈ ಕಾಲೀಜಿನಲ್ಲಿ ಓದಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಹರ್‌ಮೇಜಸ್ಟೀಸ್ ಗವರ್ನಮೆಂಟನಲ್ಲಿ ಉಂಟಾಗಿರುವ ಪ್ರೋತ್ಸಾಹವಂ ಕಂಡು ಇಲ್ಲಿನವರುಸಹ ತಮ್ಮ ಸ್ವದೇಶವಂ ಬಿಟ್ಟು ಅನ್ಯದೇಶದ ನೌಕರಿಯನ್ನಂಗೀಕರಿಸಬೇಕೆಂಬ ಕೋರಿಕೆಯುಳ್ಳವರಾಗಿದಾರೆಂದು ತಿಳಿಯಬರುತಿದೆ. ವಿದ್ಯಾರ್ಥಿಗಳ ಪ್ರಯೋಜನವು ಪರಿಭಾವಿಸಿ ಸದರೀ ತಾತ್ಪರ್ಯವು ಶ್ಲಾಘ್ಯವಾದದ್ದಾದರೂ ಇವರನ್ನನ್ಯತ್ರ ಕಳುಹಿಸುವದು ಈ ಗವರ್ನಮೆಂಟನವರಿಗೆ ಕೀರ್ತಿಕರವೆಂದು ಹೇಳಲಾರೆವು. ಗತಸಂವತ್ಸರದೊಳು ಮೊಕರರಾದ ಒಬ್ಬ ಅಗ್ರಿಕಲ್‌ಚ್ಯುರಲ್ ಇನ್ಸ್ಪೆಕ್ಟರು ಈಚಿಗೆ ನಮಗೆ ಬರೆದ ಒಂದು ಕಾಗದದಲ್ಲಿ ತಿಳಿಸುತ್ತಾನೇನಂದ—ಇಷ್ಟುಕಾಲವಾಗಿ ನಾವು ಪಟ್ಟ ಶ್ರಮವು ಉಚಿತರೀತಿಯಿಂದ ಪುರಸ್ಕರಿಸಲ್ಪಡದೆ ಹೋಯಿತು. ನಮ್ಮ ಗೌರವಾನುಗುಣವಾದ ಸ್ಥಿತಿ ನಮಗೆ ದೊರೆಯಲಿಲ್ಲವು. ಶಾಸ್ತ್ರಜನ್ಯವಾದ ನಮ್ಮ ಜ್ಞಾನವನ್ನುಪಯೋಗಿಸಲಿಕ್ಕೆ ಅವಕಾಶವುಂಟುಮಾಡಲ್ಪಡಲಿಲ್ಲವು. ಪ್ರಾಬಲ್ಯದೊಳಿರುವ ವ್ಯಾವಹಾರಿಕ ಜ್ಞಾನದಮುಂದೆ ಶಾಸ್ತ್ರೀಯವಾದ ನಮ್ಮ ಜ್ಞಾನವು ಕಾರ್ಯಕಾರಿಯಾಗದೆ ಹೋಯಿತು. ಶಾಸ್ತ್ರಾನುಭವಗಳಿಂದ ನಿರ್ಧರಣೀಯಗಳಾದ ಸಿದ್ಧಾಂತಗಳು ನಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ನವೀನಗಳಾಗಿರುವದರಿಂದ ಅವರು ನಮ್ಮ ಅಭಿಪ್ರಾಯಗಳಂ ಗೌರವಿಸುವದಿಲ್ಲವು. ಇಲ್ಲಿ ನಾವು ಕೇವಲ ರೆವಿನ್ಯೂ ಗುಮಾಸ್ತೇ ಕೆಲಸಕ್ಕೂ ನಕಲಗಳು ಬರೆಯಲಿಕ್ಕೂ ಉಪಯುಕ್ತರಾಗಿದ್ದೇವೆ. ನಮ್ಮ ಜ್ಞಾನವು ಈರೀತಿ ಪುರಸ್ಕರಿಸಲ್ಪಡುತಿರುವಲ್ಲಿ ಈಗ ಲಭ್ಯವಾಗಿರುವ ಪ್ರಯೋಜನಕ್ಕಿಂತಲೂ ಅಧಿಕವಾಗಿ ನಮಗೆ ಹ್ಯಾಗೆ ದೊರೆಯುವದು? ನಮ್ಮ ವ್ಯಾಸಂಗವೂ ಶರೀರಶ್ರಮವೂ ಇಂಜನಿಯರಿಂಗ್ ಮತ್ತು ಮೆಡಿಕಲ್‌ಕಾಲೀಜ್‌ಗಳಲ್ಲಿ ಓದತಕ್ಕವರಿಗಿರುವದಕ್ಕಿಂತಲೂ ಕಡಮೆಯಾಗಿಲ್ಲವು. ಪರಂತು ತದನುಗುಣವಾದ ಫಲಾನುಭವಕ್ಕೆ ಮಾತ್ರ ಅವರಂತೆ ನಾವು ಅದೃಷ್ಟಶಾಲಿಗಳಲ್ಲದೆ ಹೋದೆವು. ಫಲವಿಲ್ಲದೆ ಹೋದರೂ ಚಿಂತೆಯಿಲ್ಲವು. ನಾವು ಶ್ರಮಪಟ್ಟು ಕಲಿತ ವಿದ್ಯೆಯನ್ನು ಜನಗಳ ಪ್ರಯೋಜನಾರ್ಥ ವಿನಿಯೋಗಿಸೋಣವೆಂದರೆ ನಮಗೆ ಅದಕ್ಕೂ ಅವಕಾಶವಿಲ್ಲವು" ಎಂಬದು ಪತ್ರಿಕೆ. ಮೇಲೆ ಕಂಡ ಪತ್ರಿವಾಕ್ಯವೂ ನಮಗೆ ಅಮಿತವಾದ ಅಸಮಾಧಾನವನ್ನುಂಟುಮಾಡತಕ್ಕದ್ದಾಗಿರುತಿದೆ. ಈಗ ನಮಗೆ ತಿಳಿಯಬಂದಿರುವಮಟ್ಟಿಗೆ, ಈ ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟಿರುವ ಕೆಲಸವು ಶಾಸ್ತ್ರೀಯವಾದ ಅವರ ಜ್ಞಾನಾನುಭವಗಳನ್ನು ನಾಲ್ಕುಜನಗಳಿಗೆ ಉಪಯೋಗಿಸಬಹುದಾದಂತಾದ್ದಲ್ಲವೆಂದು ವ್ಯಕ್ತವಾಗುತಿದೆ. ಅವರಿಗೆ ರೆವಿನ್ಯೂ ಕೆಲಸಗಳ ಅನುಭವವುಂಟಾಗಿ ಒಂದುವೇಳೆ ಮುಂದೆ ಅವರು ರೆವಿನ್ಯೂ ಅಧಿಕಾರಿಗಳಾದಾಗ್ಯೂ ಶಾಸ್ತ್ರಜನ್ಯಜ್ಞಾನೋಪಯೋಗಕ್ಕೆ ಯೆಷ್ಟುಮಾತ್ರವೂ ಅವಕಾಶವಿರಲಾರದು. ಇದು ಕೇವಲ ಕೃಷಿಪ್ರಧಾನವಾದ ರಾಜ್ಯವಾದ್ದರಿಂದ ತದಭಿವೃದ್ಧಿಗೆ ಆವಶ್ಯಕಗಳಾದ ಅಂಶಗಳು ಇಲ್ಲಿ ಬಹಳವಾಗಿರುತಿವೆ. ಕೃಷಿಯ ವಿಷಯದಲ್ಲಿ ಮೈಸೂರು ದೇಶದ ರೈತರು ಪಡುವ ದೇಹಶ್ರಮವನ್ನೂ ಅದರೊಳು ಅವರಿಗಿರುವ ಜ್ಞಾನವನ್ನೂ ಪರ್ಯಾಲೋಚಿಸಿ ನೋಡಿದರೆ ಅವರಿಗೆ ಧಾನ್ಯ ದೌರ್ಲಭ್ಯವೆಂಬದು ನಿಯತವಾಗಿರಬೇಕಾದ್ದಾಗಿರುತಿದೆ. ಅವರು ಸ್ವತಃ ಸುಖಪಡುವದಿಲ್ಲವು. ಮತ್ತು ಅವರನ್ನು ನಂಬಿದ ಜಮೀನ್ದಾರರನ್ನೂ ಬದುಕಿಸುವದಿಲ್ಲವು. ಇದಕ್ಕೆಲ್ಲ ರೈತರ ಮೌಢ್ಯವೇ ಕಾರಣವು. ಬಾಲ್ಯಯೌವನ ಕೌಮಾರಾದಿ ವಯೋವಸ್ಥಾದಿಗಳಿಂದ ತತ್ತತ್ಕಾಲದೊಳು ಮನುಷ್ಯನ ಸ್ಥಿತಿಯು ಹ್ಯಾಗೆ ಭಿನ್ನಿಸುವದೋ ಬದಸ್ತೂರ್ ಕಾಲಭೇದದಿಂದ ಭೂಮಿಸಹ ನಾನಾವಿಧ ಬದಲಾವಣೆಗೆ ಗುರಿಯಾಗುತಿದೆ. ಈ ಸಂವತ್ಸರದಲ್ಲಿ ಒಳ್ಳೆಯ ಫಲಪ್ರದವಾದದೊಂದು ಭೂಮಿಯು ಮೂರುವರುಷಗಳತರುವಾಯ ನಿಸ್ಸಾರವಾಗಿ ಅಲ್ಪಫಲದಾಯಕವಾಗುತಿದೆ. ಕದಾಚಿತ್ ಅದರಲ್ಲಿ ಒಂದೂ ಬೆಳೆಯದೆಹೋಗುವದುಂಟು. ಇಂತವುಗಳಿಗೆಲ್ಲ ಶಾಸ್ತ್ರೀಯವಾದ ಕಾರಣಗಳೂ, ಪ್ರತಿಕ್ರಿಯೆಗಳೂ ಪ್ರಚ್ಛನ್ನವಾಗಿದ್ದರೂ ನಮ್ಮ ರೈತರು ಇವುಗಳನ್ನು ತಿಳಿದು ತದನುಸಾರ ನಡೆಯುವದಿಲ್ಲವು. ತಮಗೆ ವುಂಟಾಗತಕ್ಕ ನಷ್ಟ ಒಂದುವಿನಾ ಮತ್ತೊಂದೂ ಅವರ ಬುದ್ಧಿಸ್ಥವಾಗುವದಿಲ್ಲವು. ವ್ಯವಸಾಯೋಪಯೋಗಿಗಳಾದ ಉಪಕರಣಗಳನ್ನು ಯಾವರೀತಿ ಇಟ್ಟುಕೊಂಡಿರಬೇಕೋ ಅದು ನಮ್ಮ ರೈತರಿಗೆ ಪೂರ್ಣರೀತಿ ತಿಳಿಯದು. ಮುಖ್ಯವಾಗಿ ಈ ದೇಶದ ಐಶ್ವರ್ಯಾಭಿವೃದ್ಧಿಗೆ ಕೃಷಿ ಆಧಾರವಾಗಿಯೂ, ಅದಕ್ಕೆ ರೈತರ ತಿಳುವಳಿಕೆಯು ಕಾರಣವಾಗಿಯೂ, ಅದಕ್ಕೆ ಶಾಸ್ತ್ರಾನುಭವಗಳು ಅಪೇಕ್ಷಿತಗಳಾಗಿಯೂ, ಅದು ವುಂಟುಮಾಡಲಿಕ್ಕೆ ಪ್ರಸಕ್ತ ವಿದ್ಯಾರ್ಥಿಗಳು ಸಮರ್ಥರಾಗಿಯೂ ಇರುವದರಿಂದ ಗವರ್ನಮೆಂಟನವರು ಸದರೀ ವಿದ್ಯಾರ್ಥಿಗಳಮೂಲಕದೇಶಕ್ಕೆ ವುಂಟುಮಾಡಬೇಕಾದ ಪ್ರಯೋಜನಗಳು ಏತದಪೇಕ್ಷೆಯಾ ಬೇರೆರೂಪವಾಗಿರುತಿದೆ. ಏತೇನ ನಾವಿಲ್ಲಿ ಪ್ರಸನ್ಯೇನ ತಿಳಿಸುವದೇನಂದರೆ, ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಇನ್ಸ್ಪೆಕ್ಟರ್‌ಗಳ ವಿಚಾರಣೆಯಲ್ಲಿ ಒಂದು ಸ್ಕೂಲ್ ಏರ್ಪಾಟುಮಾಡಬೇಕಲ್ಲದೆ ರೈತರಿಗೆ ಗ್ರಂಥಪಠನಾ ಸಾಮರ್ಥ್ಯವು ಸುತರಾಂ ಸಾಲದಾದ್ದರಿಂದ ಅವರಿಗೆ ತಿಳಿಯುವಂತೆ ಶಾಸ್ತ್ರೀಯಗಳಾದ ನಿರೂಪಣೆಗಳೊಡನೆ ವ್ಯವಸಾಯವಿಷಯಗಳನ್ನು ಸುಲಭವಾದ ಕನ್ನಡ ಭಾಷೆಯಲ್ಲಿ ಇನ್ಸ್ಪೆಕ್ಟರ್‌ಗಳು ತಿಳಿಸತಕ್ಕದ್ದು. ಸದ್ಯಃ ಇದನ್ನು ರೈತರು ಅನುಭವಕ್ಕೆ ತಂದುಕೊಳ್ಳದಿದ್ದರೂ ಇದರ ಪ್ರಯೋಜನವನ್ನರಿತಮೇಲೆ ಅವರೇ ಮೇಲೆಬಿದ್ದು ಬರುವರಾದ್ದರಿಂದ ಮುಂದೆ ತನ್ಮೂಲಕ ಲಭಿಸುವ ಪ್ರಯೋಜನ ಸಾರ್ವಜನೀನವಾದ್ದಾಗಿರುವದು. ಗವರ್ನಮೆಂಟನವರು ವಿದ್ಯಾರ್ಥಿಗಳ ಪರಿಶ್ರಮವನ್ನೂ ಯೋಗ್ಯತೆಯನ್ನು ವಿಶೇಷತಃ ಪುರಸ್ಕರಿಸಿ ಮೇಲೆ ತಿಳಿಸಿದಷ್ಟು ಕೆಲಸವನ್ನು ಮಾಡಿದರೆ ಪಾಲ್ಯಪಾಲಕರೀರ್ವರಿಗೂ ಸುಖ ವುಂಟಾಗಬಹುದು.

THE ART OF MUSIC.

ಪೃಥಿವ್ಯಪ್ತೇಜೋವಾಯ್ವಾಕಾಶಾದಿ ಪಂಚಭೂತಗಳಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯಗಳೆಂಬ ಈಶ್ವರನ ಪಂಚಮುಖಗಳು ಕಾರಣಭೂತಗಳಾಗಿರುತಿವೆ. ಪೃಥಿವಿಯಿಂದ ಮೃದಂಗ, ಅಪ್ಪಿನಿಂದ ಶಂಖಾದಿಗಳು ತೇಜಸ್ಸಿನಿಂದ ಕಾಂಸ್ಯಾದಿತಾಳಗಳು, ವಾಯುವಿನಿಂದ ವೀಣೆಮುಂತಾದ ಸಂಗೀತೋಪಕರಣಗಳು, ಆಕಾಶದಿಂ ಸಕಲಸಾಹಿತ್ಯವಿದ್ಯೆಗಳು, ಈರೀತಿ ವುಂಟಾದವು. ಸಂಗೀತ ಸಾಹಿತ್ಯ ರಸಗಳನ್ನು ಗ್ರಹಿಸುವಬಗ್ಗೆ ಚತುರ್ಮುಖನು ಶ್ರೋತ್ರದ್ವಯಮಕಲ್ಪಿಸಿರುತ್ತಾನೆ. ಸಂಗೀತ ಸಾಹಿತ್ಯರಸಗಳನ್ನರಿಯದವನು ಪುಚ್ಛವಿಷಾಣವಿಹೀನವಾದ ಪಶುವೆನ್ನಿಸಿಕೊಳ್ಳುವನು. ಪಶುವೆನ್ನಿಸಿಕೊಂಡಮೇಲೆ ತೃಣವನ್ನಲ್ಲವೇ ಭಕ್ಷಿಸಬೇಕು, ಆರೀತಿ ಯಾತಕ್ಕೆ ಮಾಡುವದಿಲ್ಲವೆಂದು ಯಾರಾದರೂ ಕೇಳಬಹುದು. ಪುಚ್ಛ ವಿಷಾಣಗಳಿರುವ ಪಶುಗಳ ಭಾಗ್ಯವೆನ್ನಬೇಕು, ಯಾತಕ್ಕೆಂದರೆ, ಈ ಮಾನುಷಪಶುಗಳು ತೃಣಭಕ್ಷಣಮಾಡಲಿಕ್ಕೆ ಉಪಕ್ರಮಿಸಿದರೆ ಚತುಷ್ಪಾದ ಪಶುಗಳಿಗೆ ಆಹಾರವಿಲ್ಲದೆ ಅದು ಕ್ಷುತ್ಪೀಡಿತಗಳಾಗಿ ಬಾಧೆಪಡುವವಾದದರಿಂದ ಸಂಗೀತ ಸಾಹಿತ್ಯಾನಭಿಜ್ಞಪಶುಗಳಿಗೆ ಆಹಾರದೊಳು ಮಾತ್ರಭೇದವುಂಟುಮಾಡಲ್ಪಟ್ಟಿರುತಿದೆ. ಮತ್ತು ಗಾಂಧರ್ವ, ಕವಿತ್ವ, ಶೂರತ್ವ, ದಾನಶೀಲತೆಗಳೆಂಬ ನಾಲ್ಕು ಗುಣಗಳೂ ಮನುಷ್ಯನಿಗೆ ಜನ್ಮತಃ ವುಂಟಾಗಬೇಕಾದುದೇ ಹೊರತು ಅಭ್ಯಾಸದಿಂ ಬರಲಾರವು. ಪೂರ್ವಜನ್ಮ ಸುಕೃತದಿಂದಲೇ ಮನುಷ್ಯನಿಗೆ ಸಂಗೀತವಿದ್ಯೆಯಲ್ಲಿ ಜ್ಞಾನವುಂಟಾಗುವದು. ಅಂತಾಜ್ಞಾನಕ್ಕೆ ಸಹಕಾರಿಯಾದ ಭಗವದ್ಭಕ್ತಿಯೆಂಬದು ದುರ್ಲಭವಾದರೆ ಅದು ನಿರರ್ಥಕವಾಗುವದು. ನಾಹಂವಸಾಮಿ ವೈಕುಂಠೇ ಯೋಗಿಹೃದಯೇ ರವೌ ॥ ಮದ್ಭಕ್ತಾ ಯತ್ರಗಾಯಂತಿ ತತ್ರ ತಿಷ್ಠಾಮಿ ನಾರದ॥ ಅಂದರೆ, ವೈಕುಂಠದಲ್ಲಿಯೂ, ಯೋಗಿಗಳಹೃದಯದಲ್ಲಿಯೂ, ಮಿತ್ರಮಂಡಲದಲ್ಲಿಯೂ, ನಾನು ವಸಿಸಲಾರೆನು, ಪರಂತು ನನ್ನಭಕ್ತರೆಲ್ಲಿ ಗಾನಮಾಡುವರೋ ಅಲ್ಲಿ ನಾನು ಯಾವಾಗಲೂ ನೆಲಗೊಂಡಿರುವೆನೆಂಬದಾಗಿ ನಾರದರಂಕುರಿತು ಭಗವಂತನು ನುಡಿದನು. ಆದದರಿಂದಲೇ ಪೂರ್ವದಲ್ಲಿ ಪುರಂದರ ದಾಸರು, ರಾಮದಾಸರು, ಕನಕದಾಸರು ಮುಂತಾದವರೆಲ್ಲರೂ ಭಗವದನುಗ್ರಹ ಪಾತ್ರರಾದರು. ಇವರೆಲ್ಲರು ದೃಢತರವಾದ ಭಕ್ತಿಯೊಡನೆ ವೀಣಾ ವೇಣು ಮೃದಂಗಾದಿ ಸಹಕೃತವಾಗಿಯೂ, ಬಹುವಿಧ ರಾಗ ಲಯ ಶ್ರುತಿಮನೋಹರವಾದ ಸಂಗೀತದೊಡನೆಯೂ, ಸರ್ವಾತಿಶಾಯಿಯಾದ ಭಗವನ್ನಾಮ ಸಂಕೀರ್ತನವಂ ಮಾಡುತ್ತ, ತನ್ಮೂಲಕವಾದ ಆನಂದವು ವಿಶೇಷತಃ ಅನುಭವಿಸುತಲಿದ್ದರಾಗಿ ಇದೇ ಅವರ ಮುಕ್ತಿಗೆ ಕಾರಣವಾಯಿತು. ಇಂತಾ ಮುಕ್ತಿಪ್ರದವಾದ ಗಾನವಿದ್ಯೆಯು ಇತರ ವಿದ್ಯೆಗಳಿಗಿಂತಲೂ ಶ್ರಮಸಾಧ್ಯವಾದದ್ದಾಗಿದ್ದರೂ ಅತ್ಯಂತ ಸುಲಭವಾದದ್ದೆಂದು ಜನಗಳು ಮಾತ್ರ ಭಾವಿಸದಿರುವದಿಲ್ಲವು. ಈ ಸಂಗೀತಶಾಸ್ತ್ರವು ತಮಗೂ ಬರುವದೆಂದು ಭಾವಿಸಿ ನಟಿಸದಿರುವವರೊಬ್ಬರೂ ಇಲ್ಲವು. ಈ ವಿದ್ಯೆಯನ್ನಭ್ಯಸಿಸತಕ್ಕವರು ರಸಜ್ಞರಾಗಿಯೂ, ಹೃದಯ ಸಾರಳ್ಯವುಳ್ಳವರಾಗಿಯೂ ಈರ್ಷ್ಯಾದಿಗಳಿಲ್ಲದವರಾಗಿಯೂ, ಅಹಂಕಾರ ಮಮಕಾರಗಳಿಲ್ಲದವರಾಗಿಯೂ, ಪರಿಶುದ್ಧರಾಗಿಯೂ ಭಗವದ್ಭಕ್ತಿಯುಳ್ಳವರಾಗಿಯೂ ಇರತಕ್ಕದ್ದು. ಪಾಮರರೀ ಕ್ರಮವನ್ನರಿಯದೆ ಏತದ್ವಿರುದ್ಧಮಾರ್ಗದಲ್ಲಿ ಪ್ರವರ್ತಿಸುತ್ತಾರೆ, ಅದು ಹ್ಯಾಗೆಂದರೆ, ಈ ಶಾಸ್ತ್ರದಲ್ಲಿ ಷಡ್ಜ, ರಿಷಭ, ಗಾಂಧಾರ, ಮಧ್ಯಮ ಪಂಚಮ, ಧೈವತ, ನಿಷಾಧಗಳೆಂಬ ಸಪ್ತಸ್ವರಗಳಿರುವದು ಪ್ರಸಿದ್ಧವೇಯಷ್ಟೆ. ಇವುಗಳ ಪೈಕಿ ಸ್ವರಾದಿ ವರ್ಣವಾದ ಸಾ ಎಂದು ಬಾಯಿ ತೆರದಕೂಡಲೆ, "ಅಹ" ಎಂಬುವ ನಾದದ್ಯೋತಕವಾದ ಪ್ರದುಂಗವು ಪೃಥ್ವಿಯಿಂದುತ್ಪತ್ತಿಯಾದದರಿಂದ ಅದರ ನೈಜಗುಣವಾದ ಜಡತೆ ಯೆಂಬದು ಅದರೊಳು ಆವಿರ್ಭವಿಸುವದು. ಹೀಗೆಯೇ ರೀ ಎಂಬದು ರಿಕ್ತತೆಯನ್ನೂ, ಗಾ ಎಂಬದು ಗಣಿಕಾಸಮೂಹವನ್ನೂ, ಮಾ ಎಂಬದು ಮದ್ಯಮಾಂಸಗಳನ್ನೂ, ಪಾ ಎಂಬದು ಪತಿತತ್ವವನ್ನೂ ನೀ ಎಂಬದು ನೀಚತ್ವವನ್ನೂ ವುಂಟುಮಾಡುತಿವೆ. ಇವು ಸಾಮಾನ್ಯಗಳಲ್ಲವು ಇವುಗಳಪ್ರಭಾವಗಳಿಂದ ತದಧಿದೇವತೆಗಳು ಸಂತೋಷದೊಡನೆ ಸ್ವಾಧೀನರಾಗಿ ನೀವು ಸಪ್ತಗುಣೋಪೇತರಾಗುವಿರೆಂದು ಅನುಗ್ರಹಿಸುತ್ತಾರೆ. ಇವುಗಳ ಪುನಸ್ಕಾರಮಾಡುವವರು, ಕದಾಚಿತ್ ಸುಂದರರಾಗಿಯೂಯಿದ್ದಲ್ಲಿ ಸ್ಮರಾನುಗ್ರಹದಿಂ ಸುಶೀಲತೆಯೆಂಬದು ಅವರ ಸಮೀಪದೊಳು ಸಹ ಸುಳಿಯಲಾರದು. ಈ ಸಪ್ತಗುಣೋಪೇತರಿಗೆ ಆವಾಸಸ್ಥಾನವು ಗಣಿಕಾಸದನವು. ವಾರಾಂಗನೆಯರ ವಿದ್ಯಾಭ್ಯಾಸವೇ ಇವರ ಜೀವನೋಪಾಯವು ಪರಸ್ಪರ ಸ್ಪರ್ಧೆಯೇ ಇವರ ದಾವವು, ಆತ್ಮಪ್ರಶಂಸೆ ಪರನಿಂದೆಗಳೇ ಇವರ ಸ್ವಾಭಾವಿಕಗುಣಗಳು. ವಿದ್ವಾಂಸರೆಂಬದೇ ಇವರಿಗೆ ವ್ಯವಹಾರನಾಮವು. ಸಾಹಿತ್ಯ ಸಂಬೋಧನಾರ್ಥ ಬಹುಕಾಲ ಕಷ್ಟಪಡತಕ್ಕವರಿಗೆ ಸಹ ಸುಲಭವಾಗಿ ಲಭಿಸದಂತಾ ದುರ್ಲಭವಾದ ಪ್ರಾಶಸ್ತ್ಯವು ಸ್ವರಾವಳಿಯಲ್ಲಿಯೇ ಲಭಿಸುತಿದೆ. ಇದನ್ನೂ ಸದರೀ ಸ್ವರದೇವತೆಗಳ ಅನುಗ್ರಹವೆಂತಲೇ ಹೇಳಬೇಕು. ಇವರವಿಷಯವು ಹಾಗಿರಲಿ, ಇನ್ನು ರಸಿಕರೆಂದು ಹೆಸರಿಟ್ಟುಕೊಂಡು ಸಂಗೀತವಂ ಕೇಳುವದಕ್ಕೆ ಬಂದು ಕುಳಿತುಕೊಳ್ಳತಕ್ಕವರ ವೃತ್ತಾಂತವು ಮೇಲೆ ಕಂಡದಕ್ಕಿಂತಲೂ ಶ್ಲಾಘ್ಯವಾಗಿರುತಿದೆ. ಹ್ಯಾಗಂದರೆ,—ಶ್ರೋತ್ರಿಯರು ಇತಾರಸಿಕರೆಲ್ಲರೂ ಸಂಗೀತ ಸಾಹಿತ್ಯಾನಭಿಜ್ಞರಾದವರಾಗಿಯೇ ಇರುತ್ತಾರೆ. ಮತ್ತು ಮನುಷ್ಯನ ಗಾನಕ್ಕಿಂತಲೂ ಸೊಳ್ಳೆಯಗಾನವು ಬಹಳಶ್ರಾವ್ಯವೆಂದು ಕದಾಚಿತ್ ನುಡಿಯತಕ್ಕವರಾಗಿರುತ್ತಾರೆ. ಅನ್ಯರ ಬಲಾತ್ಕಾರಕ್ಕಾಗಿಯಾದರೂ ಬರುವವರು ಕೇವಲ ಅಲ್ಪವಾಗಿರುವರು. ಇಂತವರು ಸಭೆಯಲ್ಲಿ ಬಂದುಕುಳಿತುಕೊಂಡ ಒಡನೆ ತಾವು ಕಚ್ಚೇರಿಗಳಲ್ಲಿ ಮಾತುವ ಮೊಹಸ್ಸುಗಳನ್ನು ಕುರಿತಾಗಲಿ, ಕೋರ್ಟುಗಳಲ್ಲಿ ನಡಿಸುವ ವ್ಯವಹಾರಗಳಂ ಕುರಿತಾಗಲಿ, ರಾಜಕೀಯ ವಿಷಯಗಳನ್ನು ಕುರಿತಾಗಲಿ, ತಮ್ಮ ಗೃಹಕೃತ್ಯಕ್ಕೆ ಸಂಬಂಧಿಸಿದ ವಿಷಯವನ್ನು ಕುರಿತಾಗಲಿ ಮಾತನಾಡುವದಕ್ಕೆ ಉಪಕ್ರಮಿಸುವರು. ಈಸಂಭಾಷಣೆಗಳು ಗಾಯಕನು ತನ್ನ ತಂಬುರು ಗೌಸನ್ನು ಬಿಚ್ಚಿದಕೂಡಲೇ ಪ್ರಾರಂಭವಾಗಿ ಮರಳಿ ಅವನು ಅದರಲ್ಲಿ ಹಾಕಿ ಯೆದ್ದುಹೋಗುವತನಕ ನಡೆಯುತಲಿರುವವು. ಒಂದುವೇಳೆ ದೈವವಶಾತ್ ಅವರ ಅವಧಾನವು ಗಾಯಕನಕಡೆ ಬೀಳುವದಾದರೆ ಆಗ ಅವರು, ತಂಬುರು ಶ್ರುತಿಮಾಡಿಕೊಂಡು ಯಾವದಾದರೊಂದು ರಾಗವನ್ನು ಆಲಾಪಿಸುತಲಿರುವ ಗಾಯಕನು ನೋಡಿ ಈ ತಂಬುರಿನಿಂದ ನೀವು ಹಾಡುವ ಸಂಗತಿಯೊಂದೂ ತಿಳಿಯಲಿಲ್ಲವಾಗಿ ಮುಂದೆ ತಂಬುರನ್ನು ನಿಲ್ಲಿಸಿ ಹಾಡಿ ಎನ್ನುವರು. ಅಲ್ಲಿಗೂ ಸುಮ್ಮನಿರದೆ ಗಾಯಕನು ಹಾಡುವ ರಾಗವನ್ನು ಫಲಾನೆದೆಂದರಿಯದೆಯೇ ಅದೇರಾಗದ ಹೆಸರನ್ನು ಹೇಳಿ ಹಾಡು ಯೆನ್ನುವರು. ಅಂದರೆ ಗಾಯಕನು ತೋಡಿರಾಗವನ್ನು ಹಾಡುತಲಿದ್ದರೆ ಏನಯ್ಯಾ ವಿದ್ವಾಂಸರೇ, ಈ ರಾಗ ಚನ್ನಾಗಿಲ್ಲವು, ಸ್ವಲ್ಪ ತೋಡಿ ಆಲಾಪಿ

ಸ್ವರ ಬಹಳ ಚನ್ನಾಗಿರುವದೆನ್ನುವರು. ಇವರು ಮಹಾರಸಿಕರು, ಇನ್ನು ಕೆಲವು ರಸಿಕಶ್ರೇಷ್ಠರೆಂತವರೆಂದರೆ—ರಾಗಾಲಾಪನೆಗೆ ಪ್ರಾರಂಭಿಸಿದಕೂಡಲೇ ನೀವು ಹಾಡುವ ಷಡ್ಜವು ಬಹಳ ಚನ್ನಾಗಿದೆ, ಅದು ಹಾಗಿರಲಿ, ಎಲ್ಲಿ ಒಂದು ಜಾವಳಿ ಎತ್ತಿಹಾಗೆನ್ನಿ ನೋಡುವಣ, ಎನ್ನುವರು. ಆಗಲೇ ಮತ್ತೊಬ್ಬರು, ಪಂಡಿತರೇ ಪದಗಳೇನೋ ಅನವರತ ಕೇಳುವವೇ, ಸ್ವಲ್ಪ ತಂಬೂರಿ ಹಾಡಿದರೆ ಸೊಗಸಾಗಿರುವದೆನ್ನುವರು. ಇನ್ನೊಂದು ಕಡೆಯಿಂದ ಬೇರೆ ಕೆಲವರು ಈ ಅಲ್ಲವೇ ನೂ ನಮಗೆ ತಿಳಿಯದು ಸ್ವಲ್ಪ ಹಿಂದುಸ್ಥಾನಿ ಹಾಡಿದರೆ ಕೇಳುವೆವೆನ್ನುವರು. ಇನ್ನು ಪೂರ್ಣ ರಸಿಕರೆಂತವರೆಂದರೆ-ನಮಗೆ ಮಲಗತಕ್ಕ ಕಾಲವು ಅತಿಕ್ರಮಿಸಿತು, ಇನ್ನು ನಾವು ಬಹಳಹೊತ್ತು ಇರಲಿಕ್ಕಾಗುವದಿಲ್ಲವು ಎಂದು ಮಧ್ಯೆ ಎದ್ದುಹೋಗಿಬಿಡುವರು. ಇದಲ್ಲದೆ ಇನ್ನು ಕೆಲವರು ರಸಿಕರು ತೋಡಿ, ಕಲ್ಯಾಣಿ, ಕಾಂಬೋಜ, ಭೈರವಿ ಎಂದು ಅನೇಕ ರಾಗಗಳ ಹೆಸರುಗಳನ್ನು ಹೇಳುತ ತಲೆ ಅಲ್ಲಾಡಿಸುವದಲ್ಲದೆ ನಮಗೆ ಎಲ್ಲವೂ ಏಕರೂಪವಾಗಿಯೇ ಇರುತಿವೆಂದು ಹೇಳುವರು. ಇಂತಾ ಸಂದರ್ಭಗಳಲ್ಲಿ ಗಾಯಕರ ಮನೋದರ್ಮವು ಹ್ಯಾಗಿರುವದೋ ಇಂತಾ ರಸಿಕರ ಮನಸ್ಸಂತೋಷಪಡಿಸಲಿಕ್ಕೆ ಅವರಿಗೆಷ್ಟು ಉತ್ಸಾಹವಿರುವದೋ ಅದನ್ನು ಬುದ್ಧಿವಂತರಾದವರೇ ಆಲೋಚಿಸಬಹುದು ಇಂತವರಮುಂದೆ ಗಾನವು ಹ್ಯಾಗೆ ಶೋಭಿಸುವದು? ನಿರ್ಭಾಗ್ಯರಾದ ಗಾಯಕರ ಪರೀಕ್ಷೆಗೆ ಇಂತವರು ಬಿಟ್ಟರೆ ಬೇರೆ ಸಿಕ್ಕಿಲ್ಲವಾಯಿತು. ಯಾತಕ್ಕೆಂದರೆ ದೌರ್ಭಾಗ್ಯದೋಷದಿಂ ಅರಸಿಕರನ್ನು ರಸಿಕರನ್ನಾಗಿಯೂ, ಲುಬ್ಧರನ್ನು ಉದಾರಿಗಳನ್ನಾಗಿಯೂ, ಗುಣಹೀನರನ್ನು ಗುಣಜ್ಞರನ್ನಾಗಿಯೂ, ಅಲ್ಪರನ್ನು ದೊಡ್ಡವರನ್ನಾಗಿಯೂ, ತಿರಸ್ಕಾರವನ್ನು ಸತ್ಕಾರವನ್ನಾಗಿಯೂ ಭಾವಿಸಿ ಉಪಸರ್ಪಣೆ ಗೆಯ್ಯಬೇಕಾದ ದುರ್ವಿಧಿಯು ಗಾಯಕರಿಗೆ ಪ್ರಾಪ್ತವಾಗುತ್ತಿದೆ. ಇದಲ್ಲದೆ, ಮಿತವ್ಯಯ ಮಾಡಬೇಕೆಂಬ ಜ್ಞಾನವೂ, ಅನ್ಯರಿಗೆ ಅರ್ಥಸಹಾಯ ಮಾಡುವದರಿಂದ ಅವರ ಸೋಮಾರಿತನಕ್ಕೆ ಸಂಭಾವಕರಾಗುವಂತೆ ಯಾಗುವದೆಂಬ ಭಾವವೂ, ಸಂಗೀತಶ್ರವಣವು ದೊಡ್ಡ ಮನುಷ್ಯತನಕ್ಕೆ ಲೋಪವೆಂಬ ತಿಳುವಳಿಕೆಯೂ ವೃದ್ಧಿಯಾಗುತಬರುತಿವೆ ಇದರಿಂದಲೇ ಶಾಸ್ತ್ರೀಯವಾದ ಗಾನವಿದ್ಯೆಯೂ, ಲಕ್ಷಣಯುಕ್ತವಾದ ಭರತವಿದ್ಯೆಯೂ ಅಭಿವೃದ್ಧಿಯನ್ನೈದದೆಹೋದವು. ಇದಲ್ಲದೆ ಕ್ರಮವಾಗಿ ಗುರುಕುಲವಾಸಮಾಡಿ ಬಹುಕಾಲ ಶ್ರಮಪಟ್ಟು ಶಾಸ್ತ್ರಾಭ್ಯಾಸಮೂಲಕ ಜ್ಞಾನವು ಸಂಪಾದಿಸತಕ್ಕವರಿಗಿಂತಲೂ ಮೂಲಶುದ್ಧಿಯಿಲ್ಲದೆ ಮತ್ತು ಬಹಿಃ ನಟಿಸತಕ್ಕ ಡಾಂಬಿಕರಿಗೆ ಕೀರ್ತಿಪ್ರಾಶಸ್ತ್ಯಗಳು ಸುಲಭವಾಗಿ ಲಭಿಸುವದರಿಂದಲೂ, ಅವರ ಜ್ಞಾನವನ್ನು ಉಚಿತರೀತಿಯಿಂ ಪುರಸ್ಕರಿಸತಕ್ಕವರಿಲ್ಲದೆ ಹೋಗುವವರಿಂದಲೂ ಮೇಲೆಕಂಡ ಜ್ಞಾನವುಳ್ಳವರು ಭಗ್ನೋತ್ಸಾಹಿಗಳಾಗಿ ಬೇರೇವಿಧವಾದ ಜೀವನೋಪಾಯಗಳನ್ನು ಹುಡುಕಲಿಕ್ಕೆ ಉಪಕ್ರಮಿಸಿ ತಾವು ಕಲಿತದ್ದನ್ನು ಸಹ ಮರೆತುಬಿಡುತ್ತಾರೆ. ಈಪ್ರಕಾರವೇ ನಮ್ಮ ಗಾನವಿದ್ಯೆಯು ಅಪ್ರಚುರವಾಗುತಬಂತು ಏತದ್ವಿಷಯಕವಾದ ಕೆಲವರ ಪ್ರಯತ್ನವು ಅನನುರೂಪವಾದದರಿಂದ ಅದು ಮೇಲೆಕಂಡವಕ್ಕೆ ಸಹಾಯಕವಲ್ಲದಿದೆ. ಸಂಗೀತಶಾಸ್ತ್ರಜ್ಞರ ಲಕ್ಷಣವು ಈರೀತಿಯಾಯಿತಷ್ಟೆ. ಇನ್ನು ಭರತಶಾಸ್ತ್ರಜ್ಞರ ವಿಷಯವಂನುರಿತು ವಿಚಾರಿಸಿದರೆ ಅದು ಇದಕ್ಕಿಂತಲೂ ವಿನೋದಕರವಾಗಿರುವದು. ಮೇಲೆ ತಿಳಿಸಲ್ಪಟ್ಟ ವಿಷಯಗಳಲ್ಲೊಂದೂ ಅತಿಶಯೋಕ್ತಿಯಲ್ಲವು. ಇವುಗಳೆಲ್ಲವೂ ಕೇವಲ ಪ್ರತ್ಯಕ್ಷಾನುಭವದಿಂ ತಿಳಿಸಲ್ಪಟ್ಟವಾಗಿರುತಿವೆ. ಇನ್ನೂ ತಿಳಿಸಬೇಕಾದ ಅಂಶಗಳು ಬಹಳವಾಗಿರುವದರಿಂದ ಅವುಮತ್ತೊಂದು ಸಂದರ್ಭದಲ್ಲಿ ಸೂಚಿಸುವೆವು.

Occasional Notes
ನೈಮಿತ್ತಿಕವಿಷಯನ್ಯಾಸ

War preparations in Greece.—ಗ್ರೀಸ್ ಸರ್ಕಾರದವರು ಯುದ್ಧಸನ್ನಾಹಗಳು ಮಾಡುತ್ತ, ಪರರಾಷ್ಟ್ರದಲ್ಲಿರುವ ತಮ್ಮ ಪ್ರಜೆಗಳೆಲ್ಲರು ಯುದ್ಧನೌಕರಿಗೆ ಬರಬೇಕೆಂದು ಹುಕುಂ ಕೊಟ್ಟಿರುತ್ತಾರೆ. ಈ ಹುಕುಂ ಅನ್ಯದೇಶಗಳ ಪಾಠಶಾಲೆಗಳಲ್ಲಿ ಓದುತಲಿರುವ ವಿದ್ಯಾರ್ಥಿಗಳವುಕೆ ಅನೇಕರಿಗೆ ಅನ್ವಯಿಸಿ ಅವರೆಲ್ಲರು ಕೂಡಲೇ ಹೊರಬೀಳಬೇಕಾಗುತದೆ.

The House of Commons.—ಇಂಗ್ಲಾಂಡ್ ಸಂಸ್ಥಾನದ ಪಾರ್ಲಿಮೆಂಟ್ ಸಮಾಜದಲ್ಲಿ, ರಾಜವಂಶಾವಲಂಬಿಗಳೆಂತಲೂ ಪ್ರಜಾ ಪ್ರತಿನಿಧಿಗಳೆಂತಲೂ ಯಾವಾಗಲು ಕಕ್ಷಿದ್ವಯವಿರುತಲಿದೆಯಷ್ಟೆ, ಸದರೀ ಪ್ರಜಾ ಪ್ರತಿನಿಧಿಸಮಾಜಕ್ಕೆ ಈಚೆಗೆ ಹುಟ್ಟಿದ ಹೊಸಚಟ್ಟನ್ನನುಸರಿಸಿ ೬೭೦ ಮೆಂಬರ್‌ಗಳಿರಬೇಕು, ಹ್ಯಾಗೆಂದರೆ, ಇಂಗ್ಲಾಂಡಿನವರ ಕಡೆ ೪೬೫, ಐರ್ಲಾಂಡಿನವರಕಡೆ ೧೦೩, ಸ್ಕಾಟ್ಲಾಂಡಿನವರಕಡೆ ೭೨ ಮತ್ತು ವೇಲ್ಸ್‌ದೇಶದವರಕಡೆ ೩೦, ಒಟ್ಟು ೬೭೦ ಮೆಂಬರ್‌ಗಳು.

Princely donations.—ಕಲ್ಕತ್ತೆಯ ವಾಸ್ತವ್ಯರಾದ ಪ್ರತಾಪ ಚಂದ್ರರಾಯ್ ಯೆಂಬವರು ಮಹಾಭಾರತವನ್ನು ಇಂಗ್ಲಿಷ್ ಭಾಷೆಯಲ್ಲಿ ತರ್ಜುಮೆ ಮಾಡುತಲಿರುವದು ಪ್ರಸಿದ್ಧವಾಗಿದೆಯಷ್ಟೆ ಲಕ್ಷಾಂತರ ರೂಪಾಯಿಗಳ ವ್ಯಯದಿಂ ಸಾಧ್ಯವಾಗತಕ್ಕದ್ದಾಗಿರುವ ಈ ಪ್ರಬಲ ಕಾರ್ಯಕ್ಕೆ ಸಹಾಯಕವಾಗಿ ಬರೋಡೇ ಗಾಯಕವಾಡ ಮಹಾರಾಜರವರು ೧೨೪೦ ರೂಪಾಯಿಗಳೂ ಹೋಲ್ಕರ್ ಮಹಾರಾಜರವರು ೧೦೦೦ ರೂಪಾಯಿಯೂ ಕೊಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

Increase of Military Expenditure.—ಚಾಲತೀ ಫಿನ್ಯಾನ್ಸಿಯಲ್‌ನಲ್ಲಿ, ಇಂಡ್ಯರಾಜ್ಯದಲ್ಲಿ ಮಾತ್ರ ೮ ಜಾಸ್ತೀಬಾಬತು ಮಿಲಿಟರಿ ಖರ್ಚುಗಳು ಪ್ರಾಂತ ಮೊದಲುಗೊಂಡು ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಜಾಸ್ತೀ ಯಾಗಬಹುದೆಂದು ಯೋಚಿಸಲ್ಪಟ್ಟಿದೆ. ಯುದ್ಧಸನ್ನಾಹಗಳ ಬಗ್ಯೆ ಇಂಗ್ಲಾಂಡಿನಲ್ಲಿರುವ ಜಾಸ್ತೀಖರ್ಚು ಎಪ್ಪತ್ತೈದುಲಕ್ಷರೂಪಾಯಿಗಳಿಗೆ ಕಡಿಮೆಯಾಗಿರಲಾರದೆಂದು ಅಂದಾಜಾಗಿದೆ. ಈಕಾರಣಗಳದೆಸೆಯಿಂದ ಈ ಸಂವತ್ಸರದಲ್ಲಿ ಗವರ್ನ್ಮೆಂಟಿಗೆ ಅರ್ಥೋರ್ಜನಪತ್ತಿಯು ಪ್ರೋತ್ಸಾಹಕರವಾಗಿ ಕಾಣಲಿಲ್ಲವು

ನೋಟಿಸ್

ಬೆಂಗಳೂರು ಹಿಂದೂಬ್ಯಾಂಕ್ (ಲಿಮಿಟೆಡ್)
ಅಫಿಷಿಯಲ್ ಲಿಕ್ವಿಡೇಟರ್ ಆಫೀಸಿನಿಂದ

ಬ್ಯಾಂಕ್ ಮಜಕೂರ್ ಕಂಟ್ರಿಬ್ಯೂಟರ್ ಯಾನೆ ಸಹಾಯಕರ್ತರಿಗೆ ಪ್ರಕಟಪಡಿಸುವದೇನಂದರೆ — ಮೈಸೂರುಸೀಮೆಯ ಚೀಫ್ ಕೋರ್ಟಿನವರ ೧೮೮೪ನೇ ಇಸವಿ ಮಿಸಲೇನಿಯಸ್ ೧೫೭ನೇ ನಂಬರ್ ಆರ್ಡರ್‌ಪ್ರಕಾರ ಈ ಬ್ಯಾಂಕ್ ಮಜಕೂರ್‌ನಲ್ಲಿ ಇದುವರಿವಿಗೂ ವಸೂಲಾಗಿರುವ ಮೊಬಲಗು ಅವರವರ ಷೇರ್ ಮೊಬಲಗಿಗೆ ಸೇಕಡಾ ೨೪ ರೂಪಾಯಿ ಪ್ರಕಾರ ಬಟವಾಡೇ ಮಾಡಬೇಕಾಗಿರುವದಲ್ಲದೆ ಬ್ಯಾಂಕಿನ ವಿಶಿಷ್ಟ ಆಸ್ತಿಯು ಹರಾಜ್ ಮಾಡತಕ್ಕ ವಿಷಯದಲ್ಲಿ ಪ್ರತಿ ಷೇರ್‌ದಾರ್ರ ತಾತ್ಪರ್ಯವು ಬರವಣಿಗೆ ಮೂಲಕವಾಗಿ ತಿಳದುರಿಪೋರ್ಟ್ ಮಾಡಬೇಕಾಗಿರುವ ಸಬಬ್ ಈತಿಂಗಳ ೨೦ನೇ ತಾರೀಖ್ ಭಾನುವಾರ ಹಗಲು ೩ ಘಂಟೆ ಮೊದಲುಗೊಂಡು ೫ ಘಂಟೇ ವರಿವಿಗೆ ಕಾಲ ನಿಯಾಮಕ ಮಾಡಿದೆ. ಆದ್ದರಿಂದ ಸಮಸ್ತ ಕಂಟ್ರಿಬ್ಯೂಟರ್‌ಗಳೂ ದಯವಿಟ್ಟು ಆ ಕಾಲಕ್ಕೆ ಸರಿಯಾಗಿ ಬ್ಯಾಂಕ್ ಆಫೀಸಿಗೆ ದಯಮಾಡಿ ಮೇಲೆಕಂಡ ವಿಷಯದಲ್ಲಿ ಅವರವರ ಅಭಿಪ್ರಾಯವನ್ನು ಬರೆದು ಡಿವಿಡೆಂಡ್ ಮೊಬಲಗು ತೆಗೆದುಕೊಂಡು ಹೋಗಬೇಕೆಂದು ಕೋರುತ್ತೇನೆ

೧೪ನೇ ಡಿಸಂಬರ್ ೧೮೮೫. ಬಳ್ಳಾಪುರಪೇಟೆ, ಬೆಂಗಳೂರು.	ಮಲ್ಲಿಕಾರ್ಜುನಯ್ಯ, ಅಫಿಷಿಯಲ್ ಲಿಕ್ವಿಡೇಟರ್, ಹಿಂದೂಬ್ಯಾಂಕ್ ಲಿಮಿಟೆಡ್

LOCAL AND PROVINCIAL NEWS
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Postal Notice.—ಈತಿಂಗಳ ೧೪ನೇ ತಾರೀಖ್‌ಮೊದಲು ಇಲ್ಲಿನ ಜನರಲ್ ಪೋಸ್ಟಾಫೀಸಿನಲ್ಲೂ ಅದಕ್ಕೆ ಸೇರಿದ ಸಬರ್ ಸಬ್ ಆಫೀಸುಗಳಲ್ಲೂ ಮಣಿ ಆರ್ಡರ್ ಮತ್ತು ಸೇವಿಂಗ್ಸ್ ಬ್ಯಾಂಕುಗಳ ಕೆಲಸಗಳು, ಆದಿತ್ಯವಾರ ಮತ್ತು ಪೋಸ್ಟಾಫೀಸ್ ರಜಾ ದಿನಗಳುವಿನಾ, ಪ್ರತಿದಿನವು ಹತ್ತುಘಂಟೆಯಮೊದಲು ಮಧ್ಯಾನ್ನ ಯೆರಡು ಘಂಟೆಯುವರಿವಿಗೆ ನಡೆಸಲ್ಪಡುವದು.

Reinstated.—ಮುಳುಬಾಗಲ್ ತಾಲ್ಲೂಕು ಖಜಾನೆ ಷರಾಫನು ನಡೆಸಿದ ಕೆಲವು ಅಕ್ರಮಗಳಬಗ್ಯೆ ಸದರೀ ತಾಲ್ಲೂಕು ಶಿರಸ್ತೇದಾರರೂ ನಗದೀ ಗುಮಾಸ್ತೆಯೂ ಕೋಲಾರ್ ಡೆಪ್ಯುಟಿ ಕಮಿಷನರಿಂದ ಡಿಸಮಿಸ್ ಮಾಡಲ್ಪಟ್ಟಿದ್ದರಷ್ಟೆ ಸದರೀಯವರು ಅದರಮೇಲೆ ದಿವಾನರವರಿಗೆ ಅಪೀಲ್‌ಮಾಡಿಕೊಳ್ಳಲು ಅವರು ಚನ್ನಾಗಿ ಆಲೋಚಿಸಿ ಆರುತಿಂಗಳಕಾಲ ಸಸ್ಪೆಂಡ್ ಮಾಡಲ್ಪಟ್ಟದ್ದು ಅವು ಕಳೆದಕೂಡಲೆ ಮರಳಿ ಕೆಲಸದಮೇಲೆ ಹೋಗತಕ್ಕದ್ದೆಂದು ಹುಕುಂ ಮಾಡಿದಂತೆ ಕೇಳಲಿಕ್ಕೆ ಸಂತೋಷಿಸುತ್ತೇವೆ.

A Rumour.—ಬೆಂಗಳೂರು ಸಬ್‌ಡಿವಿಷನ್ ಸಬ್ ಮ|| ಅಣ್ಣಾಜೀರಾಯರವರು ಅಸಿಸ್ಟೆಂಟ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟು, ಚಿತ್ರದುರ್ಗ ಡಿಸ್ಟ್ರಿಕ್ಟ್ ಏರ್ಪಟ್ಟ ಕೂಡಲೇ ಸ್ಪೆಷಿಯಲ್ ಅಸಿಸ್ಟೆಂಟ್ ಕಮಿಷನರಾಗಿ ಅಲ್ಲಿಗೆ ವರ್ಗ ಮಾಡಲ್ಪಡುವರೆಂದು ಅಧಿಕಾರಿ ಸಮೂಹದೊಳು ಪ್ರವಾದ ವುಂಟಾಗಿರುವಂತೆ ಒಳದೇಶದ ದೆಮಿಲೇ ಪೋಸ್ಟ್ ಪತ್ರಿಕೆಯು ತಿಳಿಸುತಿದೆ ಈಗ ಮೇಲೆಕಂಡಂತೆ ನಡೆಯುವದೇನೂ ಅಸಾಧ್ಯವಲ್ಲದಿದ್ದರೂ ಪೋಸ್ಟ್ ಪತ್ರಿಕೆಯ ಮಾತಿನೊಳು ಸದ್ಯಕ್ಕೆ ನಮಗೆ ನಂಬಿಕೆ ಸಾಲದಾಗಿದೆ.

Middle School Examination.—ಗತವಾರದಲ್ಲಿ ಪ್ರಾರಂಭಿಸಿದ ಈಸಲದ ಮಿಡಿಲ್‌ಸ್ಕೂಲ್ ಪರೀಕ್ಷೆಗೆ ೪,೦೦೦ ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದರು ಈಸಂಖ್ಯೆಯು ಗತ ಸಾಲಿಗಿಂತಲೂ ಬಹಳ ಜಾಸ್ತೀಯಾಗಿರುತಿದೆ. ವಿದ್ಯಾರ್ಥಿನೀಯರ ಸಂಖ್ಯೆಯೂ ದಿನೇದಿನೇ ಅಭಿವೃದ್ಧಿಯಾಗುತ ಬರುತಿದೆ. ಈಸಲ ಇವರಸಂಖ್ಯೆ ೩೦ ಮಂದಿಗಿಂತ ಮೇಲ್ಪಟ್ಟಿತು. ಇವರಲ್ಲೈಕೆ ನೇಟಿವ್‌ಕ್ರಿಶ್ಚಿಯನ್ ಹುಡಿಗಿಯರ ಸಂಖ್ಯೆಯು ಅಧಿಕವು ಮಿಕ್ಕಜಾತಿಯವರೊಳು ೬ ಜನಹಿಂದೂಗಳು, ೨ ಪಾರಸಿಗಳು.

Agent, Southern Mahratta Railway ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯ ಏಜಂಟರವರು ಕಳೆದ ವಾರದಲ್ಲಿ ಈವೂರಿಗೆ ಬಂದಿದ್ದು ಇಲ್ಲಿನ ಸ್ಟೇಟ್ ರೈಲ್‌ರಸ್ತೆಗಳನ್ನೆಲ್ಲ ನೋಡಿಕೊಂಡು ಕಳೆದ ಶುಕ್ರವಾರದದಿನ ಮದ್ರಾಸಿಗೆ ಹೊರಟುಹೋದರು. ಇಲ್ಲಿನ ರೈಲ್‌ರಸ್ತೆಯ ಸ್ಥಿತಿಯ ವಿಷಯದಲ್ಲಿ ತಮಗೆ ಕಂಡುಬಂದ ಅಂಶಗಳನ್ನೆಲ್ಲ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಡೈರೆಕ್ಟರ್‌ಗಳಿಗೆ ಕೂಡಲೇ ರಿಪೋರ್ಟ್ ಮಾಡುವರು. ಅದರಮೇಲೆ ಇಲ್ಲಿನ ರೈಲ್ ರಸ್ತೆಯನ್ನು ಅವರು ತೆಗೆದುಕೊಳ್ಳುವ ವಿಷಯ ವ್ಯವಸ್ಥೆಯಾಗಬೇಕಾಗಿದೆ.

The late P. B. Gordon.—ಮೈಸೂರು ಬಾರಿಗೆಸೇರಿದ ಅಡ್ವೋಕೇಟ್‌ಗಳಲ್ಲೈಕಿಬ್ಬರಾದ ಮೆ|| ಪಿ. ಬಿ. ಗಾರ್ಡನ್‌ಯೆಂಬವರು ಮಾಹೇ ಮಜಕೂರ್ ೧೦ನೇ ತಾರೀಖಿನ ರಾತ್ರಿ ಕಾಲಗತಿಯನ್ನೈದಿದರೆಂದು ಕೇಳುವದಕ್ಕೆ ನಾವು ವಿಷಾದಿಸುತ್ತೇವೆ ಇವರು ಈ ದೇಶಕ್ಕೆ ಬಹಳ ಹಳಬರಾಗಿಯೂ, ಬಹುಮಂದಿಗೆ ಪರಿಚಿತರಾಗಿಯೂ ನಿರ್ವಂಚನೆಯಾದ ಮೆಡಸತ್ತಿನಮೂಲಕ ತಮ್ಮ ಕಕ್ಷಿಗಾರರ ಪ್ರೀತಿ ಗೌರವಗಳು ಪಡೆದವರಾಗಿಯೂ ಸ್ವಭಾವತಃ ದೊಡ್ಡಮನುಷ್ಯರಾಗಿಯೂ ಇದ್ದರು. ಇಂತವರ ಮರಣವು ಯೆಲ್ಲರಿಗೂ ವಿಷಾದವನ್ನುಂಟುಮಾಡಲು ಶಕ್ತವಾದ್ದಾಗಿರುತಿದೆ.

Mr Swaminatha Iyer B. A. M. B.—ಇಲ್ಲಿನ ಪೇಟೆ ಆಸ್ಪತ್ರಿಯಲ್ಲಿರುವ ಅಸಿಸ್ಟೆಂಟ್ ಸರ್ಜಿಯನ್ ಮೆ|| ಸ್ವಾಮಿನಾಥ ಅಯ್ಯರವರು ತಮ್ಮನ್ನು ಕೋಲಾರಕ್ಕೆ ವರ್ಗಮಾಡಬೇಕೆಂದು ಅಪೇಕ್ಷಿಸಿರುವಂತೆ ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆಗೆ ಒಬ್ಬ ಬಾತ್ಮೀದಾರನು ಬರೆಯುತಾನೆ. ಇದು ಎಷ್ಟರಮಟ್ಟಿಗೆ ನಿಜವೋ ನಾವರಿಯೆವು, ಒಂದುವೇಳೆ ಇದು ನಿಜವಾಗಿ ಆರೀತಿ ನಡೆಯುವಪಕ್ಷಕ್ಕೆ ಹಾಸನದೊಳಿರುವ ಮೆ|| ಅಚ್ಯುತರಾಯರನ್ನು ಇಲ್ಲಿಗೆ ವರ್ಗಮಾಡಿದರೆ ಅನೇಕರಿಗೆ ಸಂತೋಷಕರವಾಗಿರುವದು.

Matriculation Examination ಈಸಂವತ್ಸರದ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ. ಪರೀಕ್ಷೆಗಳು ನಾಳೆಯದಿನ ಉಪಕ್ರಮವಾಗಿ ಮುಂದಿನ ಶನಿವಾರದ ತನಕ ಈವೂರು ಸೆಂಟ್ರಲ್ ಕಾಲೇಜಿನಲ್ಲಿ ನಡೆಯುವವು ಆಯಾ ಸ್ಕೂಲ್ ಪ್ರಿನ್ಸಿಪಲ್‌ಗಳ ಅನುಮತಿಯಮೇಲೆ ಅವರಮೂಲಕ ದರಖಾಸ್ತುಗಳನ್ನು ಕಳುಹಿಸಿರುವದಲ್ಲದೆ ಅನೇಕರು ತಾವಾಗಿಯೇ ಕಳುಹಿಸುತಾರೆಂದು ತಿಳಿಯಬರುತಿದೆ. ಅಂತವರು ದೈವಾನುಗ್ರಹದಿಂದ ತೇರ್ಗಡೆಯಾದರೆ ತತ್ಪ್ರಯುಕ್ತವಾದ ಪ್ರತಿಷ್ಠೆಯನ್ನು ತಮ್ಮ ಪ್ರಿನ್ಸಿಪಲ್‌ಗಳಿಗೆ ಒಪ್ಪಿಸಲಿಕ್ಕೂ, ತಪ್ಪಿಹೋದರೆ ತನ್ಮೂಲಕವಾದ ಮೌಢ್ಯವನ್ನು ಸ್ವತಃವಹಿಸಿಕೊಳ್ಳಲಿಕ್ಕೂ ಸದರೀವಿದ್ಯಾರ್ಥಿಗಳು ಸನ್ನದ್ಧರಾಗಿರುವರೆಂದು ನಂಬುತ್ತೇವೆ

The Hyderabad Lottery.—ಮಾಹೆ ಮಜಕೂರು ೮ನೇ ತಾರೀಖಿನಲ್ಲಿ ಹೈದರಾಬಾದಿಗೆ ಸೇರಿದ ಚಂದ್ರಘಾಟನೊಳು ನಡೆದ ಲಾಟರಿಯ ಫಲಿತಾಂಶವು ಗತ ಶುಕ್ರವಾರದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ಹೊರಗಾಯಿತು ಏತನ್ಮೂಲಕ ಈವರಿಗೊಳು ಸಂತೋಷಿಸಿದ ಪುಣ್ಯವಂತರ್ಯಾರೋ ಅಂತವರ ದರ್ಶನಭಾಗ್ಯ ಸಹ ಸಾಧಾರಣವಾಗಿ ದೊರೆಯಲಿಲ್ಲವು. ಪರಂತು ಭಗ್ನೋತ್ಸಾಹಿಗಳಾದವರು ಮಾತ್ರ ಯೆತ್ತನೋಡಿದರೂ ದೃಷ್ಟಿಗೆ ಬೀಳುತಲಿದಾರೆ. ಇವರಲ್ಲಿ ತಮ್ಮ ತಮ್ಮ ಅದೃಷ್ಟಪರೀಕ್ಷೆಯಲ್ಲಿ ತೃಪ್ತರಾಗಿ ಇಷ್ಟರೆಂದು ನಿರ್ಧರಿಸಿಕೊಂಡವರು ಕೆಲವರೂ, ಮುಂದೆಯಾದರೂ ಅದೃಷ್ಟವು ಯಾತಕ್ಕೆ ಉಂಟಾಗಬಾರದೆಂಬ ಪ್ರತ್ಯಾಶೆಯೊಡನೆ ಇನ್ನೂ ಅಜಮಾಯಿಷೀ ಮಾಡಬೇಕೆಂದಿರುವವರು ಕೆಲವರೂ, ಈ ಪ್ರಕಾರ ಇರುವದರಿಂದ ಇವರಿಗೆ ಸಾಧ್ಯಕಷ್ಟೇನ ೩೦೦ ಟಿಕ್ಕೆಟ್‌ಗಳನ್ನು ಪಡೆದು ಯೆಲ್ಲವನ್ನೂ ಕಳೆದುಕೊಂಡ ಪುಣ್ಯಾತ್ಮನನ್ನು ಉದಹರಿಸುವೆವು. ೩೦,೦೦೦ ರೂಪಾಯಿಗಳುಳ್ಳ ಮೊದಲನೆಯ ಪ್ರೈಜ್ ಗಾಜೀಪೂರ್‌ನೊಳಿರುವ ರಿಕ್ತನಾದ ಒಬ್ಬ ಉಪಾಧ್ಯಾಯಿಗೆ ಬಂತು ೨೦,೦೦೦ ರೂಪಾಯಿಗಳುಳ್ಳ ಯೆರಡನೆಯಪ್ರೈಜ್ ಹೈದರಾಬಾದಿನೊಳಿರುವ ಮಾರವಾಡಿ ವರ್ತಕನೊಬ್ಬನಿಗೆ ಬಂತು. ಇದೇಪ್ರಕಾರ ಅವರವರ ಅದೃಷ್ಟಾನುಸಾರ ಪ್ರೈಜ್‌ಗಳು ಬಂದವು. ಎರಡು ಟಿಕ್ಕೆಟ್‌ಗಳಮೂಲಕ ೩೦,೦೦೦ ರೂಪಾಯಿಗಳಂ ಪಡೆದ ಸದರೀ ಉಪಾಧ್ಯಾಯಿಯ ಅದೃಷ್ಟವನ್ನು ಕೊಂಡಾಡಬೇಕೆ, ಅಲ್ಲದೆ ೩೦೦ ಟಿಕ್ಕೆಟ್‌ಗಳನ್ನು ಹೋಗಲಾಡಿಸಿಕೊಂಡವನ ಅದೃಷ್ಟವು ಪ್ರಶಂಸಿಸಬೇಕೆ?

THE HONARABLE SUBRAMANIAM IYER'S SPEECH.

ಸ್ವದೇಶೀಯರೊಳು ಕೇವಲ [illegible] ಆನರೆಬಲ್ ಮೆ|| ಸುಬ್ರಹ್ಮಣ್ಯಯ್ಯರವರು [illegible] [illegible]

[illegible]

NOTICE TO CORRESPONDENTS.

ಕ್ರಮಕ್ಕೆ ಕಾಗದ ಬರೆಯತಕ್ಕವರು ತಮ್ಮ ಕಾಗದದಲ್ಲಿ [illegible] ಪ್ರಕಟಿಸಲಾರೆವು [illegible] ವಾಪಸ್ ಕಳುಹಿಸಲ್ಪಡಲಾರವು.—ಎಡಿಟರ್ ಕ. ಪ್ರ.

CORRESPONDENCE

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯ ಜಗದ್ಗುರುವತ್ಸ ಚರಣನಳಿನಯುಗಳಂವಿಜಯತೆತಿತರಾಂ ಭುವನತ್ರಯೇಽಪಿ.

ಬ್ರಹ್ಮಶ್ರೀ ಮಹಾರಾಜಶ್ರೀ ವಿರಾಜಮಾನರಾದ ಈ ಭೂಲೋಕಗತರಾದ ಸಕಲಧರ್ಮಿಷ್ಠರಿಗೂ ವಿಜ್ಞಾಪಿಸುವದೇನೆಂದರೆ.

[illegible]

ಕಾಶೀ ಸುಬ್ರಹ್ಮಣ್ಯಶಾಸ್ತ್ರಿಗಳು
ಯಡತೊರೆ ರಾಮಶಾಸ್ತ್ರಿಗಳು
ಶ್ರೀ. ಅಪ್ಪಸ್ವಾಮಿಶಾಸ್ತ್ರಿಗಳು
ನಂಜನಗೂಡು ಕಾಮಣ್ಣಶಾಸ್ತ್ರಿಗಳು
ಕುಂಭಕೋಣದ ಘನಪಾಠಿಗಳು
ಕಣಗಾಲು ಕಾಮಣ್ಣಶಾಸ್ತ್ರಿಗಳು
ಮಹಾರಾಜಶ್ರೀ ವಿರಾಜಮಾನರಾದ ಅಧಿಕಾರಿಗಳು.
[illegible]

[illegible]

ಸಕಲ ಮಹಾಜನಸೇವಕ,

[illegible] ಶಾಸ್ತ್ರಿ

BANGALORE:—Printed and published for the Proprietor, at the KARNATIC PRESS.—1885.

[illegible]

NOTICE TO CORRESPONDENTS

[illegible] ಕಾಗದ ಬರೆದು ಕೊಳ್ಳುವವರು ತಮ್ಮ ಕಾಗದದಲ್ಲಿ [illegible] ಕ್ರಮವಾಗಿ [illegible] ಪ್ರಕಟಿಸಲಾರೆವು ಹಾಗೆ [illegible] ವಾಪಸು [illegible] —ಎಡಿಟರ್.

CORRESPONDENCE

ಶ್ರೀಮಚ್ಛಂಕರ ಜಗದ್ಗುರು ಶಂಕರಾಚಾರ್ಯ ಜಗದ್ಗುರುವರ್ಯ ಚರಣಯುಗಳಂ ವಿಜಯತೇ

ತರಾಂ ಭುವನತ್ರಯೇಪಿ

ಶೃಂಗೇರಿ ಮಹಾರಾಜರು ವಿರಾಜಮಾನರಾದ

ಈ ಭೂಲೋಕಗತರಾದ ಸಕಲಧರ್ಮಜ್ಞರಿಗೆ

ವಿಜ್ಞಾಪಿಸುವದೇನಂದರೆ.

[illegible]

ಶಾಸ್ತ್ರೀಗಳು

ಯಡತೊರೆ ರಾಮಶಾಸ್ತ್ರೀಗಳು

ನಂಜನಗೂಡು [illegible] ಶಾಸ್ತ್ರೀಗಳು

[illegible]

ಮಹಾರಾಜರ ವಿರಾಜಮಾನರಾದ ಅಧಿಕಾರಿಗಳು

[illegible]

[illegible]

ಸಲ ಮಹಾಜನಸೇವಕ.

[illegible]

BANGALORE.—Printed and published for the Proprietor, at the KARNATAKA PRESS.—1885.